ರ ನಂ. ೬ ೧೯೪೭ ವಾ. ಚಂದಾ ೧-೧೩-೦ ಮಾತ್ರ

ಕನ್ನಡಿಗ.

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸವಾವಿಷ್ಟವಾಗಿದೆ.)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ಜೇಷ್ಠ ಶುದ್ಧ ೬ ಶಕೆ ೧೮೪೯ ತಾ|| ೪-೬-೧೯೨೭.
Date 4—6—1927. | ಸಂಚಿಕೆ ೧೦

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕಟ್ಟ್-ಜಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು. ಬಹಳ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.
೪೯೨ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ.

S.C. Narayanacharya & Co.
Choukhamba Benares City

S.U.N & CO. BENARES CITY.

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ ಜರಿಕಣ, ಜರಿಸೀರೆ, ಕಾಶ್ಮೀರಿ ಶಾಲು, ಶರಿವಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲಗಳ ಕ್ಯಾಟಲಾಗ ಕೋರುವವರಿಗೆ ಇನಾಮಾಗಿ ಕಳಿಸಲಾದೀತು

ವಿಳಾಸ-**ಶಿರೋಮಣಿ ನಾರಾಯಣಾಚಾರ್ಯ**
ಕಂಪನಿ ಚೌಕಾಂಬಾ ಕಾಶಿ

ನಪುಂಸಕತ್ವ

ಧಾತು ವಿಕಾರ, ಸ್ವಪ್ನಾವಸ್ಥೆ, ಅಶಕ್ತತೆ ಇತ್ಯಾದಿಗಳಮೇಲೆ ಖಂಡಿತವಾಗಿ ಗುಣಕೊಡುವ ಮತ್ತು ಕಡೆತನಕ ಬಾಳುವ ದಿವ್ಯ ಔಷಧಿ! ಒಂದೇ ಗುಳಿಗೆ!!

ವಿಶೇಷ ಮಾಹಿತಿ ಪತ್ರದ್ವಾರ ತಿಳಿಯಿರಿ.

ವಾದಿರಾಜ ಜಹಾಗೀರದಾರ.
ಮು. ಪೋ. ಇಳಕಲ್ಲ. (ವಿಜಾಪೂರ)

ಸಾಹಿತ್ಯ ಪರಿಚಯ.

ಸ್ವೀಕಾರ

(೧) ಉದಯಭಾರತ:— ಮಂಗಳೂರಿನ ಶ್ರೀ ಶ್ರೀನಿವಾಸ ಪುರುಷೋತ್ತಮ ಭಟ್ಟರ ಸಂಪಾದಕತ್ವದಲ್ಲಿ ಪ್ರಕಟವಾದ ಹೊಸ ಸಚಿತ್ರ ತ್ರೈಮಾಸಿಕವು.

(೨) ಪಂಚಾಚಾರ್ಯಪ್ರಭಾ:— ಮೈಸೂರಿನ ಆಸ್ಥಾನ ವಿದ್ವಾನ್ ವೇ| ಶಿರಸಿ ಗುರುಶಾಂತಶಾಸ್ತ್ರಿಗಳ ಸಂಪಾದಕತ್ವದಲ್ಲಿ ಪ್ರಕಟವಾದ ನವೀನ ವಾರಪತ್ರಿಕೆ.

ಇವುಗಳ ವಿಮರ್ಶೆಯು ಸ್ವಲ್ಪದಿವಗಳಲ್ಲಿ ಪ್ರಕಟವಾಗುವದು.

(೩) ಬಾಗಲಕೋಟೆಯ ಕಮರ್ಶಿಯಲ್ ಬ್ಯಾಂಕಿನ ೧೯೨೬ನೇ ಇಸ್ವಿಯ ಲಾಭ ಹಾನಿ ಪತ್ರಿಕೆ. ಈ ಬ್ಯಾಂಕಿನ ಪ್ರಗತಿಯು ಸಾವಕಾಶವಾಗಿಯಾದರೂ ಚನ್ನಾಗಿ ಸಾಗಿದೆಂಬದು ಈ ಪತ್ರಿಕೆಯಿಂದ ಸಿದ್ಧವಾಗುತ್ತದೆ ಈ ಸಲ ಒಂದು ಪಾಲಿಗೆ ೩ ಆಣೆ ಲಾಭ ಹಂಚಲ್ಪಟ್ಟಿದೆ. ಶ್ರೀ ಗುಳ್ವಾಡಿ ವಿಠ್ಠಲರಾಯರ ಮರಣದ ನಂತರ ಬ್ಯಾಂಕು ನಡೆಯುವದೋ ಇಲ್ಲವೋ ಎಂದು ಜನರು ಚಿಂತಿಸುತ್ತಿದ್ದರು ಆದರೆ, ಈಗ್ಗೆ ಸಹ ಪ್ರಗತಿ ಹೊಂದುತ್ತಲಿದ್ದುದು, ಗುಳ್ವಾಡಿ ಬಂಧುಗಳಿಗೆ ವಿಶೇಷತ: ಶ್ರೀ ನಾರಾಯಣಪ್ಪ ಶಿವರಾಯರಿಗೆ ಭೂಷಣವೇ ಸರಿ.

(೪) ಗ್ರಾಮಾಧಿಕಾರಿ ವಾರ್ಷಿಕ ಚಂದಾ ೨ ರೂ ಹೊಸದಾಗಿ ಹೊರಟಿದೆ ಮುಖಪುಟದ ದೊಡ್ಡಕ್ಷರಗಳು ತಿಳಿಸುವಂತೆ 'ಗ್ರಾಮಾಧಿಕಾರಿಗಳ ಗೌರವ ಸೌಕರ್ಯ ಸಂಪದನುಕೂಲಗಳನ್ನೂ, ಗ್ರಾಮಾಭಿವೃದ್ಧಿಯೋಪಯೋಗದ ಅನೇಕ ಸ್ವಿಷಯಗಳನ್ನೂ, ಪ್ರಕಟಿಸತಕ್ಕ ಸಚಿತ್ರ ಮಾಸಪತ್ರಿಕೆ'- ಎಂದು ಗುರಿಯು ಸ್ಪಷ್ಟವಾಗುತ್ತದೆ ಆದರೆ ಸಾಮಾನ್ಯ ವಾರಪತ್ರಿಕೆಯಂತೆ ಆಕಾರವಲ್ಲವೆ? ಸಚಿತ್ರವೆಲ್ಲಿ? ಮೈಸೂರು ಮಹಾರಾಜರೊಬ್ಬರ ಹೊರತು ಬೇರೆ ಚಿತ್ರವೇ ಇಲ್ಲ! ಮೈಸೂರ ನಾಡಿನಿಂದ 'ಸಚಿತ್ರ'ವೆಂದು ಹೊಗಳಿಕೊಳ್ಳುವ ಮಾಸಪತ್ರಿಕೆಗಳು ಬಂದರೆ 'ವಿಚಿತ್ರ'ವೆನ್ನಬೇಕಾಗಿ ತಾನೇ ಸಿದ್ಧವಾಗುತ್ತದೆಯೊ? ಉಳಿದ ವಿಷಯಗಳಲ್ಲಿ ಪತ್ರಿಕೆಯು ಸರ್ವಾಂಗ-ಸುಂದರವಾಗಿದೆ. ಪಟ್ಟಣಕ್ಕಿಂತ ವಿಶೇಷವೆನ್ನುವ ಮೈಸೂರ ಮಹಾ ಜನರಿಗೆ ಈ ಪತ್ರಿಕೆಯು ಗ್ರಾಮ ಸುಖವನ್ನ ತೋರಿಸಲಿ ಇದಕ್ಕೆ ದೃಷ್ಟಾಂತರೂಪವಾಗಿ ೧ನೆಯ ಸಂಚಿಕೆಯಲ್ಲಿಯೇ ಮೈಸೂರ ಮಹಾರಾಜರವರು ನಿರ್ಮಿಸಿದ 'ಲಲಿತಾದ್ರಿಪುರ'ವೆಂಬ ಆದರ್ಶಗ್ರಾಮದ ವರ್ಣನೆಯು ಬಂದಿದೆ ಉಳಿದ ಲೇಖಗಳೂ ಗ್ರಾಮವಾಚಕವಾಗಿವೆ ಇಂಗ್ಲೀಷ ಲೇಖನಗಳನ್ನು ಕೊಡಿಸುವ ಪದ್ಧತಿಯಿಲ್ಲದೆ, ಪ್ರತಿಯೊಂದು ಕನ್ನಡ ತಲೆಪಟ್ಟಿಗೆ ಇಂಗ್ಲೀಷಿನೊಂದು ಇದ್ದೇ ಇದೆ ಇದರರ್ಥವೇನು? ಇದೇನು ಸ್ವಾತಂತ್ರ್ಯವಾಯಿತೇ? ಅಥವಾ ಇಂಗ್ಲೀಷು ಮರೆಯಬಾರದೆಂದು ಯತ್ನವೆ? ಅದರೆ ಏನು ಕಾರಣವೋ 'ವೇದವಾಕ್ಯಗಳು ಎಂಬ ಲೇಖದ ಬುಡದಲ್ಲಿ ಮೇಲ್ಕಂಡ ಪದ್ಧತಿಯಂತೆ 'Vedic words!' ಎಂದು ಬರೆದೇ ಇಲ್ಲ! ನೋಡಿ. 'ಹಳೆಯ ದಪ್ತರ' ಎಂಬ ಲೇಖದಿಂದ ಈ ಪತ್ರಿಕೆಯು ಶೋಧಕಾರ್ಯವನ್ನು ನಡೆಸಿದೆ. ಹಿಂದಿನ ಕಾಲದ ಪತ್ರಗಳನ್ನು ಹೀಗೆ ಹೊರಡಿಸಿ ಗ್ರಾಮಾಧಿಕಾರಿಗಳಿಗೆ 'ಮೆಜಿಸ್ಟ್ರೇಟ ಅಧಿಕಾರವು ಸಹಾ ಸರ್ವಸಾಧಾರಣವಾಗಿ ಜಾರಿಯಲ್ಲಿದ್ದಿತೆಂದು'—ಪ್ರಕಟಿಸುತ್ತಾರೆ—ಇಂತಹ ಪತ್ರಿಕೆಗೆ ಚಿರಾಯುರಾರೋಗ್ಯವನ್ನು ಕೋರುತ್ತೇವೆ.

ಸ್ವಾತಂತ್ರ್ಯ — ಚಿಕ್ಕಪೇಟೆ ಮಂಗಳೂರು ಸಿಟಿ. ಮದ್ರಾಸ ಪ್ರಾಂತದ ಶ್ರೀ ಪ್ರಚಾರಕ ಸಂಘಗಳ ಆಶ್ರಯದಲ್ಲಿ ಹೊರಡುವ ಸಚಿತ್ರ ಮಾಸಪತ್ರಿಕೆ—ವಾರ್ಷಿಕ ಚಂದಾ ಮ. ಆ. ಕಳಿಸಿದಲ್ಲಿ ಪತ್ರಿಕೆ ಬಳಗೆ. ಕನ್ನಡಿಗರ ೫೦—೬೦ ಪುಟಗಳ ಪಾರದ ಸ್ವಾತಂತ್ರ್ಯ ಮೇಲಿನ ಲೇಖನಗಳು ... ಇವೆ. ಹೀಗೆ ಅಗ್ಗವಾಗಿಯೂ ಕನ್ನಡಿರುವ ಮಾಸಿಕವು ಇನ್ನೂ ನಮ್ಮ ನಾಡಿನಲ್ಲಿ ಹೊರಟಿದ್ದಿಲ್ಲ ಆದರೆ 'ಸಚಿತ್ರ ಮಾಸಪತ್ರಿಕೆ'ಯೆಂದು ಕರೆದು ಚಿತ್ರಗಳ ಕೊರತೆಯನ್ನು ತೋರಿಸುವದು ಸರಿಯಲ್ಲ. ಮುಖಚಿತ್ರ ಹಾಗೂ ಒಂದೆರಡು ಪ್ರಾಣಿ ಚಿತ್ರಗಳನ್ನು ಬಿಟ್ಟರೆ ಮಾಸಿಕ ಗರ್ಭದಲ್ಲಿ ಬೇರೆ ಚಿತ್ರಗಳಿಲ್ಲದ್ದು ವಿಚಿತ್ರವೇ! ಮುಂದಿನ ಸಾರೆ ಸಂಪಾದಕರು ಮಾರ್ಪಡಿಸಬೇಕು ಈ ಪತ್ರಿಕೆಯ ಗುಣವಿಶೇಷವೆಂದರೆ, ಕೃತಿಯಲ್ಲಿ ಬಂದ ಪ್ರಾಣಿದಯೆಯೇ ಈ ಪತ್ರಿಕೆಯ ಮುಖ್ಯವಾಗಿ ಎಚ್ಚರಿಸಲ್ಪಡುತ್ತದೆ. ಈ ವಿಚಾರವಾಗಿ 'ಪ್ರಭವಸಂವತ್ಸರದ ಪ್ರಥಮ ಬೇರಿಯು' 'ಶುಭವಾರ್ತೆಗಳು' ಇವುಗಳನ್ನು ಓದಿ ಪತ್ರಿಕೆಯ ಸಾಹಿತ್ಯವನ್ನು ತಿಳಿಯಬೇಕು ಉಳಿದ ಲೇಖನಗಳಲ್ಲಿ ಪ್ರಾಣಿದಯಾ ಪ್ರವರ್ತಕರಾದ ವಿಚಾರಗಳುಳ್ಳ ಭಾಗಗಳಿವೆ—ಭಾಷೆಯೂ ಭಾವನೆಯೂ ನಿರ್ದುಷ್ಟವಾಗಿವೆ ಈ ಪರವಾಗಿ ಒಂದು ಕಥೆಯೂ ಹಾಡೂ ಇವೆ ಗೋರಕ್ಷಣವು ಈ ಪತ್ರಿಕೆಯ ಹಿರಿಗೆಲಸವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಪಟ್ಟಿಚ್ಚು ಲಕ್ಷಣಗಳು ಇದನ್ನು ಸ್ಪಷ್ಟಪಡಿಸಬೇಕು ನಾವು ಕೊಟ್ಟ ಪರಿಚಯವು ೧ನೆಯ ಸಂಪುಟ ೨ನೆಯ ಸಂಚಿಕೆಯದೆಂದು ಬೇರೆ ಹೇಳಬೇಕಾಗಿದೆ

ಕಣಿಯರ ಪತ್ರಿಕೆ.

ವಾರ್ಷಿಕ ಚಂದಾ ೧೨ ರೂ ಬಿಡಿ ಸಂಚಿಕೆ ೧ ರೂ.

ಕಗದೂರ ರಾಮಚಂದ್ರರಾಯರ ಸಂಪಾದಕತ್ವದಲ್ಲಿ ಪ್ರತಿತಿಂಗಳವೂ ಪ್ರಕಟವಾಗುತ್ತದೆ ಕಣಿಯರ ಜನಾಂಗದವರ ನೈತಿಕ, ಧಾರ್ಮಿಕ, ಆರ್ಥಿಕ, ಸಾಮಾಜಿಕ ಅಭಿವೃದ್ಧಿಯೇ ಇದರ ಗುರಿಯು. ಈ ಪತ್ರಿಕೆಗೆ ಮೈಸೂರ ಸರಕಾರದವರಿಂದ ಅಪ್ಪಣೆಯು ದೊರೆಯದ ಮೂಲಕ, ಇದನ್ನು ಹಸ್ತಲಿಖಿತವಾಗಿಯೇ ಹೊರಡಿಸಲು ನಿಶ್ಚಯಿಸಿದ ಸಂಪಾದಕರ ಹೃದಯ ಶಕ್ತಿಯೂ ಸ್ವಜನಾಭಿಮಾನವೂ ಹೊಗಳತಕ್ಕಂಥವು ಸಕಲರೂ ಈ ಪತ್ರಿಕೆಗೆ ಪ್ರೋತ್ಸಾಹವೀಯಬೇಕಾಗಿ ವಿನಂತಿ ಪತ್ರಿಕೆಯೊಳಗಿನ ಸಂಗತಿಗಳನ್ನು ಇಂತಹ 'ಹೀಸ್ಟ್ರಿ'ಯ ಬರಹದಲ್ಲಿ ಕಾಣುವದು ಕೊಂಚ ದುಷ್ಕರವಾಗಬಹುದು ಇನ್ನು ಮುಂದಾದರೂ ಲೆಕ್ಕಣಿಕೆಯಿಂದ ಸುಸಾಧ್ಯವಾಗಿ ಮಸಿಯಲ್ಲಿ ಬರೆದರೆ ಹಿತವಾಗುವದು

ದೇವಗಿರಿಯ ಶ್ರೀ ಮಾಲತೀಯ ಮಂದಿರದ ೧೦ನೇ ವರದಿಯು ನಮ್ಮ ಕಡೆಗೆ ಬಂದಿರುವದು. ಅದರ ಜೊತೆಗೆ ಶ್ರೀ. ಮ. ರಾ. ಶಿವಪೂಜೆಯವರು ಬರೆದ 'ಭಗವಂತನಲ್ಲಿ ಭಕ್ತನ ಬೇಡಿಕೆ' ಯೆಂಬ ಪದ್ಯಾವಲಿಯನ್ನು ಸೇರಿಸಿರುವರು ಮಂದಿರಕ್ಕೆ ಸಹಾಯ ಮಾಡಿದವರ ಯಾದಿಯಲ್ಲಿ ಎಲ್ಲ ಜಾತಿ ಪಂಗಡದ ಜನರಿರುವರು ಈ ಸಂಸ್ಥೆಯವರು ನಡೆಯಿಸಿದ ಕಾರ್ಯಗಳಲ್ಲಿ ದೇವಪೂಜೆಯೊಂದಲ್ಲದೆ, ವಾಚನಾಲಯ, ಅರವಟ್ಟಿಗೆ ಮೊದಲಾದ ಸಮಾಜ ಹಿತದ ಕಾರ್ಯಗಳ ವರದಿ ಅಡಕವಾಗಿರುವವು ಚಾಲಕರಾದ ಶ್ರೀ ಶಿವಪೂಜೆಯವರು ನೌಕರರಾದರೂ ತಮ್ಮ ಬಿಡುವಿನ ವೇಳೆಯನ್ನು ಈ ರೀತಿಯಿಂದ ಉಪಯೋಗಿಸುವದು ಲೋಕಸೇವೆಯ ವಿಷಯವಾಗಿರುವ ಅವರ ಕಳಕಳಿಯನ್ನು ವ್ಯಕ್ತಪಡಿಸುವದು. ಲೋಕಸೇವೆಯ ಭರದಲ್ಲಿ ಅವರು ಭಾಷಾಸೇವೆಯನ್ನು ಮರೆತಿಲ್ಲ ಅವರು ಬರೆದಿರುವ ಭಕ್ತನ ಬೇಡಿಕೆಯು, ಭಕ್ತಿರಸದಿಂದ ತುಂಬಿ ತುಳುಕುವ ಪದ್ಯಶತಕವಾಗಿದೆ. 'ನೋಯುವ ಸುಮನದ ಭವನ' ಮುಂತಾದ ಅರ್ಥವಿಲ್ಲದ ಅಕ್ಷರಗಳನ್ನು ಜೋಡಿಸಿದಂತಿರುವ ಪ್ರಯೋಗಗಳು ಕಡಿಮೆಯಾಗಿಲ್ಲ. ಆದರೂ ಉತ್ಕಟವಾದ ಭಕ್ತಿಭಾವನೆಯು ಭಾಷೆಯ ದೋಷಗಳನ್ನು ಮರೆಯಿಸುವಂತಿದೆ. ಇದೇ ತರದ ಭಾಷೆಯ ಹಾಗೂ ಸಮಾಜ ಸೇವೆಯನ್ನು ಸತತವಾಗಿ ಸಂಸ್ಥೆಯವರು ನಡೆಯಿಸಲೆಂದು ಆಶಿಸುವೆವು. (ಶ್ಯಾಮ)

ಸ್ವಲ್ಪ ವಿನೋದ.

(೧) "ನಿಮ್ಮ ಮಗಳು "ಮಾಲತಿ"ಯನ್ನು ಲಗ್ನವಾಗಬೇಕೆಂದು ಕೇಳುವೆ, ಆದರೆ ಸರಿಯ ಹೆಸರನ್ನೇಕೆ ಹೇಳಲಿಲ್ಲ?"

(೨) (ನಿಟ್ಟುಸಿರು ಬಿಟ್ಟು) "ಏನೆಂದು ಹೇಳಬೇಕು! ನಮ್ಮ ಮಾನವೇ ಹೋಗುವದು!' ಆ-ಸಾವಳಿಯ "ಮಾಲತಿ"ಯವನು!"

ಕನ್ನಡಿಗ.

ಬಾಗಲಕೋಟೆ ಜ್ಯೇಷ್ಠ ಶುದ್ಧ ೬ ಶಕೆ ೧೮೪೯

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು।
ನಿನ್ನ ಬೆಸನವ ಮಾಡಿದಂಥ ಮುಕ್ಕಳ ದೊಮ್ಮ!
ಚಿನ್ನದಾದರು ಚಿನ್ನ ಮೇಣಬತ್ತಿಯು ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಆಸನಕಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೋ॥

—ಅಂಬಿಕಾತನಯ ದತ್ತ

ಮೈಸೂರಿನ ಕನ್ನಡಿಗರಲ್ಲಿ ಇಂಗ್ಲೀಷ ಶಬ್ದಗಳನ್ನು ಹೆಚ್ಚಾಗಿ ಉಪಯೋಗಿಸುವ, ಇಂಗ್ಲೀಷ ಅಂಕಿಗಳನ್ನೇ ಬರೆಯುವ ಚಟವು ಇದ್ದುದು ಸರ್ವಶ್ರುತವು. ಅದರಂತೆಯೇ ಇಂಗ್ಲೀಷ ಉಡುಪಿನಲ್ಲಿಯೂ ಅವರ ಪ್ರೀತಿ ಬಹಳ. ಮಹಾತ್ಮರು ಈ ಪರದೇಶೀ ಉಡುಪಿನ ಹಾವಳಿಯನ್ನು ಕಂಡು ಬೆರಗಾದರು! ಈ ಪರದೇಶೀ ಶಿಸ್ತಿನ, "ಬೂಟ, ಕಾಲರ, ಟಾಯ, ಸೂಟ" ಮೊದಲಾದವುಗಳೆಲ್ಲ ಪರದೇಶದಬಟ್ಟೆಯಿಂದ ಸಿದ್ಧವಾದವೇ ಹೆಚ್ಚು. ಅವನ್ನೇ ನಮ್ಮ ಮೈಸೂರಿನ ಕನ್ನಡಿಗರು ಬಹು ಪ್ರೀತಿಯಿಂದ ಉಪಯೋಗಿಸುವರು. ಖದ್ದರದ ಬಟ್ಟೆಯನ್ನು ಧರಿಸಲು ಮೈಸೂರ ಸರಕಾರದ ಅಪ್ಪಣೆಯಿಲ್ಲವೆಂದು ಅನೇಕರು ಮಹಾತ್ಮರಿಗೆ ಹೇಳಿದರಂತೆ. ಇದನ್ನರಿತು ಬಹು ಆಶ್ಚರ್ಯಗೊಂಡವರಾದ ಮಹಾತ್ಮರು, ದಿವಾಣ ಸಾಹೇಬರಾದ ಶ್ರೀ ಮಿರ್ಝಾ ಅವರು, ಗಾಂಧಿಯವರ ಭೆಟ್ಟಿಗೆ ಹೋದಾಗ್ಗೆ ಅವರಿಗೆ ಈ ಕುರಿತು ಮಹಾತ್ಮರು ಪ್ರಶ್ನೆ ಮಾಡಿದರು. ಖದ್ದರದ ಉಡುಪನ್ನು ಧರಿಸಬಾರದೆಂದು ಮೈಸೂರ ಸರಕಾರದ ಕಟ್ಟಳೆಯೂ ಇಲ್ಲ; ಹಾಗೆ ಸರಕಾರದವರು ಯಾರಿಗೂ ಆತಂಕವನ್ನೂ ಉಂಟುಮಾಡಿಲ್ಲವೆಂದು ಸ್ಪಷ್ಟವಾಗಿ ಹೇಳಿದರು. ದಿವಾಣರ ಈ ಆಶ್ವಾಸನದಿಂದ ಈಗಲಾದರೂ ನಮ್ಮ ಮೈಸೂರ ಕನ್ನಡಿಗರು ಕೊಂಚ ಕಣ್ತೆರೆದು, ತಮ್ಮ ಮೈಮೇಲೆ ಕೊಲಸಿನಂತೆ ಅಂಟಿಕೊಂಡಿದ್ದ ಪರದೇಶೀ ಉಡುಪನ್ನು ಬಿಸಾಡುವರೆಂದು ನಾವು ಆಶಿಸುತ್ತೇವೆ. ಸ್ವತಃ ಮಹಾರಾಜರು, ಖಾದಿಯ ಪ್ರಿಯರು; ದಿವಾಣರು ಸ್ವತಃ ನೂಲುತ್ತಿರುವರು; ಸಂಸ್ಥಾನದಲ್ಲಿ ಕೈನೆಯ್ಗೆಯ ಬಟ್ಟೆಯ ಪ್ರಚಾರಕ್ಕೆ ಪ್ರಯತ್ನಿಸುತ್ತಿರುವರು; ಖದ್ದರದ ಚಳವಳಿಯ ಮೂಲ ಉತ್ಪಾದಕರಾದ ಮಹಾತ್ಮರನ್ನು ಆದರಿಸಿ ಅತಿಥಿಗಳನ್ನಾಗಿ ಬರಮಾಡಿಕೊಂಡವರು; ಇಂತಹ ಉದಾರ, ಸ್ವದೇಶಪ್ರಿಯ, ಹಾಗೂ ಪ್ರಜಾವಾತ್ಸಲ್ಯಯುಕ್ತರಾದ ಶ್ರೀ ಮನ್ಮಹಾರಾಜರ ಪ್ರಜೆಗಳೂ, ಕೈಕೆಳಗಿನ ಅಮಲದಾರರೂ, ದಿವಾಣರ ಸ್ಪಷ್ಟ ಮತವು ಪ್ರಕಟ[illegible] ಕಷ್ಟ ಖದ್ದರವನ್ನು ಧರಿಸದಿದ್ದರೆ, ಮೈಸೂರಿನ ಕನ್ನಡಿಗರು ಸ್ವದೇಶಪ್ರಿಯರೂ ಅಲ್ಲ, ಮಹಾರಾಜರ ನಿಜವಾದ ಪ್ರಜೆಗಳೂ ಅಲ್ಲವೆಂದು ಡಂಗುರ ಹೊಡೆಯಲು ಆತಂಕವೇನಿದೆ?

ಭಾರತೀಯ ರಾಜಕಾರಣದಲ್ಲಿಯ ಒಳಭೇದಗಳ ಬಡಿದಾಟದಿಂದ ಈಗಾಗಲೇ ಜನಸಾಮಾನ್ಯರು ಬೇಸತ್ತಿರುವರು. ಅಂತೆಯೇ ಜನರು ಕಾಂಗ್ರೆಸ್ಸನ್ನು ಒಲ್ಲರು. ಸತ್ಯಾಗ್ರಹವನ್ನು ಒಲ್ಲರು. ಇಂತಹ ಚಿಂತಾಯುಕ್ತವಾದ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬರು ಒಳಜಗಳವನ್ನು ಮುರಿದು ಹಾಕಲು, ಟೊಂಕ ಕಟ್ಟತಕ್ಕದ್ದು. ಆದರೆ ಅದರ ಬದಲು, ಮತ್ತೆ ಮತ್ತೆ ಹೊಸ ಹೊಸ ಜೊಡೆದಾಟಕ್ಕೆ ಹಿರಿಯರೇ ಹುರುಪಿನಿಂದ ಹಾತೊರೆಯುತ್ತಲಿದ್ದಾರೆ. ಕಾಂಗ್ರೆಸ ಕಾರ್ಯಕಾರಿ ಮಂಡಲದವರು, ಮದ್ರಾಸದ ಸ್ವರಾಜ್ಯವಾದಿಗಳ ಕಾರ್ಯಕ್ರಮಕ್ಕೆ ಸಮ್ಮತಿಸಿದ್ದು, ಗೌಹಾಟೀ ಕಾಂಗ್ರೆಸ್ಸದ ನಿರ್ಣಯಕ್ಕೆ ವಿರೋಧವಾಯಿತೆಂಬ ಮಹಾಕಷ್ಟನ್ನೇ ಹೊರಿಸಿ, ಅವರನ್ನು ದಂಡಿಸಲಿಕ್ಕೆ "ಸ್ಪೆಶಲ್" ಕಾಂಗ್ರೆಸ್ಸನ್ನು ಕೂಡಿಸಬೇಕೆಂದು ಹಲವರು ಸಾಧಿಸುತ್ತಿರುವರು! ವಾರ್ಷಿಕ ಕಾಂಗ್ರೆಸ್ಸಿಗೇ ಮೂಲತಃ ಮೊದಲಿನಂತೆ ಮಹಾಜನರು ಹೋಗುವದಿಲ್ಲ! ಹೀಗಿದ್ದಾಗ್ಯೂ "ಸ್ಪೆಶಲ್" ಕಾಂಗ್ರೆಸ್ಸ ಕರೆಯಬೇಕಂತೆ! ಈಗಿನ ಪರಿಸ್ಥಿತಿಯಲ್ಲಿ ರೇಲ್ವೇ ಊಟದ ಮನೆಗಳಿಗೆ ಪ್ರೋತ್ಸಾಹಿಸಲು ಕಾಂಗ್ರೆಸನ್ನು "ಸ್ಪೆಶಲ್ಲಾಗಿ" ಕರೆಯಬೇಕೆಂದರೆ ಹೆಚ್ಚು ಯೋಗ್ಯವಾಗಬಹುದು. ಇರಲಿ. ರಾಜಕಾರಣದಲ್ಲಿ ಆಗಿಂದಾಗ್ಗೆ ಬದಲಾವಣೆಗಳು ಆಗಿಯೇ ಆಗುತ್ತವೆ. ಹೀಗೆ ಪರಿಸ್ಥಿತಿಯನ್ನನುಲಕ್ಷಿಸಿ, ಕಾಂಗ್ರೆಸ್ಸದ ಕಾರ್ಯಕ್ರಮದಲ್ಲಿ ಹೆಚ್ಚು ಕಡಮೆ ಮಾಡುವ ಅಧಿಕಾರವು ಕಾರ್ಯಕಾರೀ ಮಂಡಲಕ್ಕಿರತಕ್ಕದ್ದು ಯೋಗ್ಯವು. ಅಹಮ್ಮದಾಬಾದ ಕಾಂಗ್ರೆಸ್ಸದಲ್ಲಾದ ಕಾಯದೇ ಭಂಗದ ಕಾರ್ಯಕ್ರಮವು ಬರ್ಡೋಲಿಯಲ್ಲಿ ಕಾರ್ಯಕಾರೀ ಮಂಡಲದಿಂದಲೇ ಬದಲಾಯಿಸಲ್ಪಟ್ಟದ್ದು ಸರ್ವಶ್ರುತವಿದೆ. ಹೀಗಿದ್ದರೂ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ಅಯ್ಯಂಗಾರ ಮೊದಲಾದವರನ್ನು ಹಾರ್ನಿಮನ್, ಪ್ರಕಾಶಮ್ ಮತ್ತು ಮಿತ್ರಮಂಡಲಿಯವರು ಒದೇ ಸಮನೆ ಹಳಿಯುತ್ತಿರುವದು ಸರಿಯಾಗಿ ಕಾಣದು. ಇತ್ತ, ಶ್ರೀ ಶ್ರೀನಿವಾಸ ಅಯ್ಯಂಗಾರರಂತಹ ಜವಾಬ್ದಾರಿಯ ಮುಂದಾಳುಗಳು "ಹಾರ್ನಿಮನ್ ಸಾಹೇಬರಂತಹ ಯುರೋಪಿಯನ್ನರ ಮುಖಂಡತ್ವವು ಭಾರತೀಯರಿಗೆ ಬೇಕಿಲ್ಲ; ನನ್ನಷ್ಟು ಸ್ವಾರ್ಥತ್ಯಾಗ ಮಾಡಿದವರಾರಿದ್ದಾರೆ? ನೀವು ನನ್ನಷ್ಟಾದರೂ ಕಾರ್ಯ ಮಾಡಿ ತೋರಿಸಿರಿ; ನೀಮಗೆ ಬೇಡಾಗಿದ್ದರೆ ನಾನು ಪುನಃ ವಕೀಲಿಗೆ ಹೋಗಿ ಹೇರಳ ಹಣ ಗಳಿಸುವೆ" ಎಂಬದಾಗಿ ಕೂಗಿ ಕೂಗಿ ಹೇಳುವದೂ ಸಮಂಜಸವಲ್ಲ. ಇವುಗಳಿಂದ ಅಂತಃಕಲಹದ ಜ್ವಾಲೆಯು ಪ್ರಜ್ವಲಿಸುವದು ಮಾತ್ರ! ರಾಷ್ಟ್ರದ ನಿಜವಾದ ಕಾರ್ಯವೇನೂ ಆಗದು.

ವೈ. ವಾಸುದೇವಾಚಾರ್ಯ ಕೆರೂರ ಇವರ ಹೆಸರನ್ನು ಕೇಳದ ಕನ್ನಡಿಗನನ್ನು ಕಾಣುವದು ಕಠಿಣ. ಅವರ ಕೀರ್ತಿಯು ಕನ್ನಡ ವಾಙ್ಮಯ ಲೋಕದಲ್ಲಿ ಬಹು ಶುಭ್ರವಾಗಿರುವದು. ತಡವಾದರೂ, ಅವರ ಸ್ಮಾರಕದ ಉಪಕ್ರಮವು ಬಾಗಲಕೋಟೆಯಲ್ಲಿ ಪ್ರಾರಂಭವಾದುದನ್ನು ತಿಳಿದು ಯಾವ ಕನ್ನಡಿಗನಿಗೆ ಆನಂದವಾಗಲಿಕ್ಕಿಲ್ಲ? ಸಧ್ಯದಲ್ಲಿ ವೈ. ವಾಸುದೇವಾಚಾರ್ಯರ ಚಿತ್ರಪಟವನ್ನು ಬಾಗಲಕೋಟೆಯ ಹಾರ್ಡಿಂಜ ವಾಚನಾಲಯದಲ್ಲಿಡಬೇಕೆಂದು ಗೊತ್ತಾಗಿದೆ. ಕನ್ನಡಿಗರು ಈ ಕಲ್ಪನೆಗೆ ಕೈಸಡಿಲಿಸಿ, ಧನಸಹಾಯವನ್ನಿತ್ತರೆ, ಆ ಧನಸಹಾಯದ ಮೂಲದಿಂದ ಒಂದು ನಿಶ್ಚಿತವಾದ ಸ್ಮಾರಕವನ್ನು ಮಾಡಬೇಕಾಗಿ ವಾಸುದೇವಾಚಾರ್ಯರ

ಧಕುತರ ವಿಚಾರವಿದೆ. ಅವರ ಗ್ರಂಥಗಳನ್ನೆಲ್ಲ ಪ್ರಕಟಿಸುವ ಮಹಾಕಾರ್ಯವನ್ನು ಸಹ ಹೊರಬೇಕೆಂದೂ ತರುಣರು ಹಾತೊರೆಯುತ್ತಲಿದ್ದಾರೆ. ಆದರೆ ಮುಖ್ಯವಾಗಿ ಕನ್ನಡಿಗರ ಸಹಾಯವು ಮೊದಲು ಬೇಕು. ಆದುದರಿಂದ ಈ ಬಗ್ಗೆ ಧನಸಹಾಯ ಮಾಡಲು ಇಚ್ಛೆಯುಳ್ಳವರು ತಡಮಾಡದೇ ಮಾಡಬೇಕು. ಪರಸ್ಥಳದಲ್ಲಿಯ ಕನ್ನಡಿಗರು ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಧನವನ್ನು "ಕನ್ನಡಿಗ"ನಿಗೆ ಕಳುಹಿಸಬಹುದು. ಅವರ ಹೆಸರನ್ನೂ ಕೊಟ್ಟ ಕಾಣಿಕೆಯನ್ನೂ 'ಕನ್ನಡಿಗ'ನಲ್ಲಿ ಕ್ರಮವಾಗಿ ಪ್ರಕಟಿಸುವೆವು.

ವಿಜಾಪೂರ ಜಿಲ್ಲೆಯಲ್ಲಿ ಖದ್ದರದ ಹುಟ್ಟುವಳಿಯನ್ನು ಹೆಚ್ಚಿಸಬೇಕೆಂಬ ಸದಿಚ್ಛೆಯಿಂದ ಶ್ರೀ ಟಗ್ಗರಸೀ ಹಾಗೂ ಕಟ್ಟೀಯವರ ಪ್ರಯತ್ನದಿಂದ ಹುನಗುಂದದಲ್ಲಿ ಸದ್ಯಕ್ಕೆ ಒಂದು ನೂಲುವ ಕೂಟವು ಪ್ರಾರಂಭಿಸಲ್ಪಟ್ಟದೆಯಷ್ಟೆ? ಮೊದಲು ಕೇವಲ ಹತ್ತೇ ರಾಟಿಗಳಿದ್ದವು. ಈ ಅಲ್ಪಾವಧಿಯಲ್ಲಿ ೪೫ ರಾಟಿಗಳು ಕೆಲಸ ಮಾಡುತ್ತಲಿವೆ. "ಹಂಜಿಗಳು ನನಗೆ ಬೇಕು; ನನಗೆ ಬೇಕು;" ಎಂಬದಾಗಿ ಬಡ ನೂಲುವವರ ಕೂಗು ಹೆಚ್ಚಾಗಿ ಕೇಳಬರುತ್ತಲಿದೆ. ಆದುದರಿಂದ ಈ ಹುನಗುಂದ ಕೂಟದಲ್ಲಿ ೧೦೦ ರಾಟಿಗಳು ಬೇಗನೇ ಪ್ರಚಾರದಲ್ಲಿ ಬರುವವೆಂದು ಚಾಲಕರ ವಿಶ್ವಾಸವಿದೆ

ಜಾಹೀರ ಸಭೆ.

ವಿಜಾಪೂರ ಜಿಲ್ಲೆಯಲ್ಲಿ ಖದ್ದರು ಹುಟ್ಟುವಳಿಯನ್ನು ದೊಡ್ಡ ಪ್ರಮಾಣದಿಂದ ಹೆಚ್ಚಿಸಬೇಕೆಂಬ ಪ್ರಯತ್ನವು ಈಗ್ಗೆ ನಡೆದದೆಯಷ್ಟೆ? ಇದಕ್ಕೆ ಅವಶ್ಯಕವಿದ್ದ ಕಾರ್ಯಕ್ರಮವನ್ನು ನಿಶ್ಚಯಿಸಲು ಈ ದಿನ (ತಾ|| ೫-೬-೨೭) ಸಂಜೆಯ ೬ ಘಂಟೆಗೆ ಬಾಗಲಕೋಟೆಯ ತಾಲೂಕ ಕಾಂಗ್ರೆಸ ಕಮೀಟಿಯಲ್ಲಿ ಜಾಹೀರ ಸಭೆ ನೆರೆಯುವದು. ಈ ಚಳವಳದಲ್ಲಿ ಸರಕಾರದ ವಿರುದ್ಧವಾದುದೇನೂ ಇಲ್ಲವೆಂಬುದನ್ನು ಲಕ್ಷಿಸಿ, ಎಲ್ಲರೂ ಅಗತ್ಯವಾಗಿ ಸಭೆಗೆ ಬರಬೇಕಾಗಿ ವಿನ್ನಹ.

ಟಗ್ಗರಸೀ ವೆಂಕಟರಾವ
ಕಟ್ಟೀ ತಮ್ಮಣ್ಣಾಚಾರ್ಯ

ಕೇವಲ ಒಂದೆರಡು ತಿಂಗಳ ಅನುಭವದಿಂದ ಓರ್ವ ಸ್ತ್ರೀಯಳು ತಿಂಗಳಿಗೆ ರೂ. ೧-೪-೦ ಗಳಿಸುತ್ತಿರುವಳು. ಇವಳು ತನ್ನ ಮನೆಗೆಲಸವನ್ನೆಲ್ಲ ಮೊದಲಿನಂತೆಯೇ ಮಾಡಿ, ಆಲಸ್ಯದಿಂದ ಕಳೆಯುವ ಕಾಲವನ್ನು ನೂಲುವದಕ್ಕೆ ಹಚ್ಚಿ ೧-೪-೦ ತಿಂಗಳಿಗೆ ಸಂಪಾದಿಸುತ್ತಿರುವಳು! ಹಿಂದುಸ್ಥಾನದಲ್ಲಿ ಓರ್ವ ವ್ಯಕ್ತಿಯ ಸರಾಸರಿ ಉತ್ಪನ್ನವು ೩೦ ರೂ. ಇದೆಯೆಂದು ಗೊತ್ತಾಗಿದೆಯಷ್ಟೆ? ಈ ೩೦ ರೂಪಾಯಿಗಳಿಗೆ ವರ್ಷಕ್ಕೆ ೧೫ ರೂಪಾಯಿಗಳು, ಸೇರಿದರೆ—ಅದೂ ಮನೆಗೆಲಸವೆಲ್ಲ ಸಾಗುವಂತೆ ಸಾಗಿ, ಆಲಸ್ಯವನ್ನು ಹೊಡೆದೋಡಿಸಿ ಸೇರಿದರೆ—ಅದೊಂದು ದೊಡ್ಡ ಕಾರ್ಯವಾದಂತಾಗಲಿಲ್ಲವೇ? ಆಲಸ್ಯವು ಉದ್ಯೋಗರೂಪದಿಂದ ಪರಿಣಮಿಸಿ ೧೫ ರೂಪಾಯಿಗಳನ್ನು, ಅಂದರೆ ಸರಕಾರೀ ರೀತಿಯಿಂದ ನಿರ್ಣಯವಾದ ವರ್ಷದ ಉತ್ಪನ್ನದ ೩೦ ರೂಪಾಯಿಯ ಅರ್ಧ ಭಾಗವನ್ನು, ಭರತಖಂಡದ ಬಡ ಜೋರೇಗೌಡನ ಕೈಯಲ್ಲಿ ಕೊಟ್ಟರೆ, ನಮ್ಮ ದೇಶದ ದಾರಿದ್ರ್ಯವನ್ನು ಹೊಡೆದೋಡಿಸಲಿಕ್ಕೆ ಒಂದು ಉತ್ತಮ ಮಾರ್ಗವು ದೊರೆತಂತಾಗಲಿಲ್ಲವೇ? ಆಲಸ್ಯದಿಂದ, ಒಣ ಜಗಳಾಟದಲ್ಲಿ ಬಿದ್ದು, ಮನೆ ಮಾರುಗಳನ್ನು ಮಾರಿ, ಊರೂರಿಗೆ ಹೊಟ್ಟೆ ಹೊರಕೊಳ್ಳುವದಕ್ಕೆ ಪಿರಿ ಪಿರಿ ತಿರುಗುವವನ್ನು ನಿಲ್ಲಿಸಿದ ಪುಣ್ಯವು ಈ ಮಾರ್ಗದಿಂದ ಲಭಿಸುವದಿಲ್ಲವೇ? ಆದುದರಿಂದ ಪಾಪಭೀರುಗಳಾದ ಭಾರತೀಯರೆಲ್ಲ ಈ ಉದ್ದಿಮೆಗೆ ಉದಾರ ಹಸ್ತದಿಂದಲೂ, [illegible] ಶಕ್ತಿಯಿಂದಲೂ ಸಹಾಯ ಮಾಡಲೇ ಬೇಕು. ವಿಜಾಪೂರ ಜಿಲ್ಲೆಯವರಂತೂ ಈಗ್ಗೆ ಉಪಕ್ರಮವಾದ ಕಾರ್ಯಕ್ಕೆ ಸಂಪೂರ್ಣವಾದ ಬೆಂಬಲವನ್ನೀಯಲೇಬೇಕು. ಯಾಕೆಂದರೆ, 'ಪ್ರತಿ ವರ್ಷವೂ ಕ್ಷಾಮವು ನಮ್ಮನ್ನು ಬೆನ್ನು ಹತ್ತಿ ಬಂದೇ ಬರುತ್ತಿದೆ. ಮೇಲಾಗಿ ಹತ್ತಿಯು ಈ ಜಿಲ್ಲೆಯ ಪ್ರತಿಯೊಂದು ಹಳ್ಳಿಯಲ್ಲಿ ವಿಪುಲವಾಗಿ ಬೆಳೆಯುತ್ತದೆ; ನೂಲುವದರಲ್ಲಿ ಬಡವರು ಮೊದಲಿನಿಂದಲೂ ನಿಷ್ಣಾತರಿದ್ದಾರೆ; ಈಗ್ಗೆಯೂ ಹಳ್ಳಿಗಳಲ್ಲಿ ರಾಟಿಗಳು ದೊರೆಯುತ್ತಲಿವೆ; ನೇಯುವ ಉದ್ದಿಮೆಯು ಜಿಲ್ಲೆಯ ತುಂಬೆಲ್ಲ ಹಬ್ಬಿದೆ; ಹೀಗಾಗಿ ಈ ಖಾದಿಯ ಹುಟ್ಟುವಳಿಗೆ ತಕ್ಕಂತಹ ಎಲ್ಲ ಸೌಕರ್ಯಗಳೂ ಇಲ್ಲಿವೆ. ಆದರೆ ಅದಕ್ಕೆ ತಕ್ಕದ್ದಾದ ಬಲವನ್ನು ಕೊಟ್ಟು ಚೊಕ್ಕಟತನದಿಂದಲೂ, ಉತ್ಕಟ ಅಭಿಮಾನದಿಂದಲೂ ಈ ಉದ್ದಿಮೆಯನ್ನು ವೃದ್ಧಿಗೊಳಿಸುವಂತಹ ಅಚ್ಚುಕಟ್ಟಾದ ಕೂಟವೊಂದು ಬೇಕಾಗಿದೆ. ಇದನ್ನೇ ವಿಚಾರಿಸಿ, ಒಂದು ಕಾಯಮವಾದ ಮಧ್ಯವರ್ತಿ ಸಂಸ್ಥೆಯನ್ನು ವಿಜಾಪೂರ ಜಿಲ್ಲೆಗಾಗಿ ಸ್ಥಾಪಿಸುವ ವಿಚಾರವನ್ನು ಈ ದಿನ ಸಾಯಂಕಾಲದಲ್ಲಿ ಮಾಡಲಿಕ್ಕಿದೆ. ಎಲ್ಲರೂ ಅವಶ್ಯವಾಗಿ ಬರಬೇಕೆಂದ ಚಾಲಕರು ಪ್ರಾರ್ಥಿಸಿದ್ದಕ್ಕೆ ಸಂಪೂರ್ಣವಾದ ಮನ್ನಣೆ ದೊರೆಯುವದಾಗಿ ಆಶಿಸುತ್ತೇವೆ.

ಮುಂಬಯಿ ಸರಕಾರೀ ಗ್ಯಾಝಿಟ್.

ಹಾವೇರಿಯ ಸಬ್ ಜಜ್ಜ ಶ್ರೀ ಹೊನ್ನಾವರರಿಗೆ ಧಾರವಾಡಕ್ಕೆ ವರ್ಗವಾಗಿದೆ.

ಬೆಳಗಾವಿ ಮಾಮಲೇದಾರ ಕಚೇರಿಯ ಶ್ರೀ ?ವರ ಹಾಗೂ ಕಾರವಾರದ ಕಲೆಕ್ಟರ ಕಚೇರಿಯ ಶ್ರೀ ಪಂಡಿತರು ರೆವಿನ್ಯೂ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರು.

ಇಷವೃತ್ತ.

ಇಲ್ಲಿ ಮಳೆಯಿಲ್ಲ. ಗಲಗಲಿ ಬೀಳಗಿ ಭಾಗಕ್ಕೆ ಚನ್ನಾಗಿ ಆಗಿದೆ.

ಶ್ರೀಕೃಷ್ಣ ಸಂಗೀತ ನಾಟಕ ಮಂಡಳದ ಪ್ರಯೋಗಗಳು ನಡೆದಿವೆ. ರಸಿಕರ ಪ್ರೋತ್ಸಾಹವೂ ಚನ್ನಾಗಿ ಈ ನೂತನ ಮಂಡಳಕ್ಕೆ ದೊರೆಯುತ್ತಲಿದೆ

ಡಾ. ಕೊಕಟನೂರರು ಇಲ್ಲಿ ಶಸ್ತ್ರಕ್ರಿಯಾಲಯವನ್ನು ಪ್ರಾರಂಭಿಸಿದ್ದು, ಪ್ರತಿ ತಿಂಗಳ ೧ ಮತ್ತು ೧೫ನೇ ತಾರೀಖುಗಳಿಗೆ ಇಲ್ಲಿಗೆ ಬರುವರು. ಡಾ. ಹುದ್ದಾರರ ದವಾಖಾನೆಯಲ್ಲಿ ಅವರ ಬಗ್ಗೆ ಎಲ್ಲ ಸಂಗತಿಗಳನ್ನು **ತಿಳಿದುಕೊಳ್ಳಬಹುದು.**

ಪಂಚಮಜಾರ್ಜರ ಹುಟ್ಟಿದ ದಿನವು ೩ನೇ ತಾ||ಗೆ ತಾಲೂಕ ಕಚೇರಿಯಲ್ಲಿ ಆಚರಿಸಲ್ಪಟ್ಟಿತು. ಮುಂಜಾನೆ ೬ ಗಂಟೆಗೆ ಸರಿಯಾಗಿ ಬರಬೇಕಾಗಿ ಮಾಮಲೇದಾರರ ಆಮಂತ್ರಣವಿದ್ದಿತಂತೆ! ಆದರೆ ಅವರೇ ೬-೩೦ ಗಂಟೆಗೆ ಬಂದರಂತೆ!

ಪತ್ರವ್ಯವಹಾರ.

ವತ್ಸಲಾ ಹರಣ.

ದತ್ತಾತ್ರೇಯ ನಾಟಕ ಮಂಡಳಿಯವರು ಪ್ರಯೋಗಿಸುವ ವತ್ಸಲಾ ಹರಣ ನಾಟಕವನ್ನು ಕರ್ನಾಟಕದಲ್ಲಿ ಯಾವ ಕಂಪನಿಯವರೂ ಇನ್ನೂ ವರೆಗೆ ಮಾಡಿ ತೋರಿಸಿಲ್ಲವೆಂಬಂತೆ ತೋರುತ್ತದೆ. ನಾಟಕಕರ್ತರ ಲೆಕ್ಕಣಿಕೆಯ ಕುಶಲತೆಯು ಇದರಲ್ಲಿ ಒಳಿತಾಗಿ ಸಾಧಿಸಿದೆ. ಆದರೆ ಪಾತ್ರಗಳು ಮಾತ್ರ ಬಹಳುಂಟು. ಒಬ್ಬೊಬ್ಬರಿಗೆ ಎರಡೆರಡು ಮೂರು ಮೂರು ಪಾತ್ರಗಳು ಗಂಟು ಬಿದ್ದಿವೆ. ಇದೇನು ನಾಟಕಕರ್ತರ ದೋಷವಲ್ಲ. ಯಾಕೆಂದರೆ ಪೌರಾಣಿಕ ನಾಟಕಗಳಲ್ಲಿ, ಪುರಾಣದಲ್ಲಿ ಹೇಳಿದಷ್ಟು ಪಾತ್ರಗಳನ್ನು ತರಲೇ ಬೇಕಾಗುವದು. ಇಲ್ಲದಿದ್ದರೆ ಮೂಲ ಕಥೆಗೆ ಬಾಧೆ ತಗಲುವ ಸಂಭವವುಂಟು. ಆದರೆ ಇತ್ತ ನಮ್ಮ ದೋಷವೂ ಅಲ್ಲ! ಇನ್ನು ಯಾರ ದೋಷವೋ ನಾನರಿಯೆ! ಈ ನಾಟಕದಲ್ಲಿ ಅಭಿಮನ್ಯುವು ಘಟೋತ್ಕಚನ ವನವನ್ನು ಹಾಳು ಮಾಡುವ ಸಮಯದಲ್ಲಿ ಅವರಿಬ್ಬರಲ್ಲಿ ಬಂಧುದ್ವಯರೆಂಬ ಭಾವನೆಯು ಇಲ್ಲದ ಮೂಲಕ ಘಟೋತ್ಕಚನಿಗೂ ಅಭಿಮನ್ಯುವಿಗೂ ಘನಘೋರ ಯುದ್ಧವೆಸಗಿ ಅದರಲ್ಲಿ ಮೊದಲು ಅಭಿಮನ್ಯುವು ಸೋತು ಧರೆಗುರುಳಲು ಅವನ ತಾಯಿಯಾದ ಸುಭದ್ರೆಯು ಪರಿಪರಿಯ ಶೋಕವಂಗೈಯುತ್ತಿರಲು ದೀನವತ್ಸಲನಾದ ಜಗದಾತ್ಮನು ಜಗದಂಬೆಯ ರೂಪವನ್ನು ಪ್ರಕಟಿಸಿ ಆಕೆಗೆ ಪ್ರತ್ಯಕ್ಷನಾಗಿ ಎರಡು ವರಗಳನ್ನು ಕೊಟ್ಟು ಒಂದರಿಂದ ಅಭಿಮನ್ಯುವಿನನ್ನು ಬದುಕಿಸು ಇನ್ನೊಂದು ವರವನ್ನು ನಿನಗೆ ಸಂಕಟವೊದಗಿದಾಗ್ಗೆ ಉಪಯೋಗಿಸುಕೊಳ್ಳು ಎಂದು ಹೇಳಿದ ಕಥೆಯು ಪುರಾಣದಲ್ಲಿ ಪ್ರಸಿದ್ಧಿಯಲ್ಲುಂಟು. ಆದರೆ ಹಾಗೆ ಮಾಡದೆ ನಾಟಕಕರ್ತರು ಮೊದಲೇ ಘಟೋತ್ಕಚನನ್ನು ಯಮಸದನಕ್ಕೆ ಕಳುಹಿಸಿಬಿಟ್ಟಿರುವರು. ಇವೊಂದೇ ಪ್ರವೇಶದಲ್ಲಿ ಎರಡೂ ದೃಶ್ಯಗಳನ್ನು ಒಮ್ಮೆಲೇ ತೋರಿಸಲಿಕ್ಕೆ ಬರುವಹಾಗಿತ್ತು. ಒಂದೇ ಸಮಯದಲ್ಲಿ ಒದಗಿದ ಪ್ರಸಂಗಗಳನ್ನು ಅರ್ಧಮರ್ಧ ಮಾಡುವದರಿಂದ ಇಡೀ ನಾಟಕಕ್ಕೆ ಮತ್ತು ಪೌರಾಣಿಕ ಆಧಾರಕ್ಕೆ ಭಂಗ ಬರುವ ಸಂಭವವುಂಟು. ಆದ್ದರಿಂದ ಈ ನಾಟಕದಲ್ಲಿ ಇದೊಂದು ದೋಷವುಂಟೆಂದು ನಮಗೆ ತೋರುತ್ತದೆ. ಇತ್ತ ಕಡೆಗೆ ಲೇಖಕರು ಗಮನಿಸುವರೋ? ಘಟೋತ್ಕಚನ ಮರಣಾಂತ್ಯಸಮಯದಲ್ಲಿ ಅವನ ತಾಯಿಯಾದ ಹಿಡಿಂಬೆಯು, ಪುತ್ರಶೋಕವನ್ನು ಸಹಿಸಲಾರದೆ. ಅಭಿಮನ್ಯುವು ಕೂಡ ತನ್ನ ಮಗನೆಂಬವನ್ನರಿಯದೆ, ಅವನನ್ನು ಕೊಲ್ಲಲು ಹವಣಿಸಿದ ಕಾಲದಲ್ಲಿ ಸುಭದ್ರೆಯಾಡಿದ ಮಾತುಗಳು ಬಹಳೇ ಬೋಧಪ್ರದವಾಗಿರುವವು. ಘಟೋತ್ಕಚನನ್ನು ಸುಭದ್ರೆಯು ದೇವೀ ವರದಿಂದ ಬದುಕಿಸಿದ ನಂತರದಲ್ಲಿ, ಅವನು, ತನ್ನನ್ನು ಕೊಂದ ವೈರಿಯು ಎಲ್ಲಿಯೋ ಪಲಾಯನ ಹೇಳಿಸಿರುವನು. ಅವನು ಪಾತಾಳದ ವರೆಗೆ ಹೋದರೂ ಬಿಡುವದಿಲ್ಲವೆಂಬ ಅಹಂಭಾವದಿಂದ ಮಸ್ತಕವು ಭ್ರಮಣವಾದಂತಾಗಿ ಒದರಾಡುತ್ತ ನಿಂತಿರುವ ಸಮಯದಲ್ಲಿ, ಶ್ರೀಕೃಷ್ಣ ಪರಮಾತ್ಮನು ಬರುವನು. ಅವರಿಬ್ಬರ ಸಂಭಾಷಣೆಯ ನಡೆದ ಸಂಭಾಷಣಗಳು ಬಹಳೇ ಗಾಂಭೀರ್ಯಯುಕ್ತವಾಗಿರುವವು. ಇಡೀ ನಾಟಕದಲ್ಲಿ ಮೇಲೆ ಹೇಳಿದ ಎರಡು ದೃಶ್ಯಗಳು ಬಹಳೇ ಮನೋರಂಜಕವಾಗಿರುವವು. ಆದ್ದರಿಂದ ಈ ನಾಟಕದ ಬಗ್ಗೆ ಲೇಖಕರನ್ನು ಅಭಿನಂದಿಸುವದು ಅತ್ಯವಶ್ಯ! ಇನ್ನು ಈ ನಾಟಕದಲ್ಲಿ ಪಾತ್ರಗಳಾದರೂ ಉತ್ತಮವಾಗುವವು. ಆದರೆ ರುಕ್ಮಿಣಿ ಮತ್ತು ವಿದ್ಯಾಧರ ಭಟ್ಟರ ಪಾತ್ರಗಳು ಮಾತ್ರ ಕೆಲವು ಮೆಟ್ಟುಗಳನ್ನು ಬಿಟ್ಟಿವೆ. ಪ್ರತ್ಯಕ್ಷ ಲಕ್ಷ್ಮೀ ಅವತಾರವಾದ ರುಕ್ಮಿಣಿಯು ಒನಪು ಒಯ್ಯಾರಗಳನ್ನು ಮಾಡುತ್ತಿದ್ದಳೇ? ಪತಿಯೇ ಪ್ರತ್ಯಕ್ಷ ದೇವರೆಂದು ತಿಳಿಯುವ ಆರ್ಯ ಮಹಿಳೆಯು ಪತಿಯನ್ನು ಹೀಯಾಳಿಸುವದೂ, ಚೇಷ್ಟೆ, ಕುಚೇಷ್ಟೆಗಳನ್ನು ಮಾಡುವದೂ, ಯೋಗ್ಯವೇ? ಬಹಳ ಹೇಳುವದೇನು, ರುಕ್ಮಿಣಿಯ ಪಾತ್ರವೆಂದರೆ ಅಭಿನಯದಲ್ಲಿ ವಿದೂಷಿಯ ಪಾತ್ರದ ಹಾಗೆ ತೋರುವದು! ಅಯ್ಯೋ ಸ್ವಾಮಿ! ಎಂಥ ಪ್ರಮಾದವಿದು! ಮತ್ತು ಇದರಂತೆ ವಿದ್ಯಾಧರಭಟ್ಟರ ಸ್ಥಿತಿಯು ಹಾಸ್ಯ ಪಾರ್ಟು ಮಾಡುವದೆಂದರೆ ಅವರು ಏನೆಂದು ತಿಳಿದಿರುವರೋ ಏನೋ? ಅಶಿಕ್ಷಿತ ಜನರಿಂದ ಮಾಡಲ್ಪಟ್ಟ ಬೈಲಾಟ, ತಮಾಸೆಗಳಿಗಿಂತಲೂ ಅವರ ಅಭಿನಯವು ಒಂದು ಹೆಜ್ಜೆ ಮುಂದೆ! ಜನರು ನಗುವ ಹಾಗೆ ಅಭಿನಯಿಸಿದರೆ ಹಾಸ್ಯ ಪಾರ್ಟು ಮಾಡಿದಂತಾಗುವದೋ? ಜನರು ನಗುವಂತಿದ್ದರೆ ಉಟ್ಟ ವಸ್ತ್ರವನ್ನು ತಲೆಗೆ ಸುತ್ತಿದರೂ ನಗುವರು!

—ರಂಗಭೂಮಿಯ ಸೇವಕ.

ನಾಗಪೂರ ಕ್ರಾಂತಿಕಾರಕ ಅವಾರಿಯವರ ಖಟ್ಲೆ.

ಶ್ರೀ ಮಂಚರಶಹಾ ರುಸ್ತುಮಜೀ ಅವಾರೀಯವರ ಖಟ್ಲೆಯು ನಾಗಪೂರದ ಮುಖ್ಯ ಕೋರ್ಟಿನಲ್ಲಿಯೇ ನಡೆದಿದೆ. ಅವಾರಿಯ ಪರವಾಗಿ ವಕೀಲರು ಯಾರೂ ಇಲ್ಲ. ಕೋರ್ಟಿನ ಯಾವ ಪ್ರಶ್ನೆಗೂ ಉತ್ತರ ಕೊಡುವದಿಲ್ಲ; ಹಾಗೂ ಸಾಕ್ಷಿದಾರರಿಗೆ 'ಕ್ರಾಸ' ಪ್ರಶ್ನೆಗಳನ್ನೂ ಹೇಳುವದಿಲ್ಲ; ಹೇಳತಕ್ಕದ್ದನ್ನೆಲ್ಲ ಮುಂದೆ ಬಾಯಿಂದ ಹೇಳಿ, ಒಂದೇ ಲೇಖೀ ಜವಾಬನ್ನು ಕೋರ್ಟಿಗೆ ಅರ್ಪಿಸುವೆನೆ''ಂದು ಅವಾರಿಯವರು ಹೇಳಿದರು. "ನಹೀ ರಖನಾ, ನಹಿ ರಖನಾ, ಅಂಗ್ರೇಜಿ ಜುಲೀಮ, ನಹಿ ರಖನಾ'' ಎಂಬದಾಗಿ ಅವಾರಿಯವರು ಹಾಡುತ್ತಿರುವ ಹಾಡು ಪ್ರತಿಯೊಬ್ಬ ಬಾಲಕನ ಬಾಯಲ್ಲಿದೆಯೆಂದೂ, ಅನೇಕ ಸ್ವಯಂಸೇವಕರನ್ನು ಅವಾರಿಯವರು ದೊರಕಿಸಿದ್ದರೆಂದೂ, "ಯುದ್ಧದ ಹೊರತೂ ಸ್ವರಾಜವನ್ನು ಯಾರು ದೊರಕಿಸಿದ್ದಾರೆ? ಕ್ರಾಂತಿಯಿಂದ ಸರಕಾರವನ್ನು ಕಿತ್ತಿ ಹಾಕುವದು ನಮ್ಮ ಹಕ್ಕಿನದಾಗಿದೆ; ಇಂಗ್ಲೀಷರೇ ನಮ್ಮ ಜನರನ್ನು ಕೊಲ್ಲುತ್ತಾರೆಂದ ಮೇಲೆ ನಾವೇಕೆ ಇಂಗ್ಲಿಷರನ್ನು ಕೊಲ್ಲಬಾರ''ದೆಂದು ಅವಾರಿಯವರ ಭಾಷಣಗಳಾಗಿವೆಯೆಂದೂ ಸರಕಾರೀ ಪಕ್ಷದಿಂದ ಸಾಕ್ಷಿಗಳಾದವು

ಮಹಾತ್ಮರೂ ಮಹಾರಾಜರೂ.

ಮಹಾತ್ಮಾ ಗಾಂಧಿಯವರನ್ನು ಕಾಣಲು ಮೈಸೂರ ಮಹಾರಾಜರು ನಂದೀ ಬೆಟ್ಟಕ್ಕೆ ಹೋಗಿದ್ದರು. ಅವರಿಬ್ಬರೂ ಬಹಳೇ ಹೊತ್ತಿನವರೆಗೆ ಮಾತನಾಡಿದರಂತೆ! ಮಹಾತ್ಮರು ಬೆಂಗಳೂರಿಗೆ ಬೇಗನೇ ಹೋಗಿ, ಅರಮನೆಯ ಅತಿಥಿಗಳಾಗಿದ್ದಾರೆ.

ಹಿಂದುಸ್ಥಾನ.

ಜೈನರಿಗೆ ಹೆಚ್ಚಾಗಿ ಸನ್ಯಾಸದ ದೀಕ್ಷೆಯನ್ನು ಕ್ಯಾಂಬೇಯಲ್ಲಿ ಕೊಡುತ್ತಲಿರುವದರಿಂದ, ಅನೇಕ ಜೈನರು ಮುನಿದುಕೊಂಡಿದ್ದಾರೆ.

ದೇಶಬಂಧೂ ದಾಸರ ಸ್ಮಾರಕದ ದಿನವು ೧೬ನೇ ಜೂನದಲ್ಲಿ ವಿಜೃಂಭಣೆಯಿಂದ ಪಾಲಿಸಬೇಕೆಂದು ಕಲಕತ್ತೆಯಲ್ಲಿ ಸಿದ್ಧತೆ ನಡೆದಿದೆ.

೨೨೫೦ ವರ್ಷಗಳ ಪೂರ್ವದಲ್ಲಿದ್ದ

ಅಶೋಕ ಮಹಾರಾಯನ ಆಳಿಕೆ.

(ಗೆಳೆಯರ ಗುಂಪಿನಿಂದ)

— ಚತುರ್ಥ ಲೇಖಾಂಕ —

“ ದೇವಪ್ರಿಯನಾದ ಪ್ರಿಯದರ್ಶಿ ರಾಜನು ಎಲ್ಲಾ ಕಡೆಗೆ ಎಲ್ಲಾ ಸಂಪ್ರದಾಯದವರೂ ಧಾರ್ಮಿಕರಾಗಿ ಬಾಳಲೆಂದು ಇಚ್ಛಿಸುವನು. ಅವರು ಎಲ್ಲರೂ ಗಟ್ಟಿ ಮನಸಿನವರೂ ಶುದ್ಧಚಿತ್ತರೂ ಆಗುವುದಕ್ಕೆ ಯತ್ನಿಸಲಿ. ಮನುಷ್ಯರ ಬಯಕೆಗೆಳೂ ಒಲವುಗಳೂ ಭಿನ್ನ ಭಿನ್ನವಾಗಿರುವವು............”

೭ನೇ ಗಿರಿಲಿಪಿ

“ ದೇವಪ್ರಿಯನಾದ ಪ್ರಿಯದರ್ಶಿ ರಾಜನು ಸಕಲ ಸಂಪ್ರದಾಯಗಳ ಸನ್ಯಾಸಿಗಳಿಗೂ, ಗೃಹಸ್ಥರಿಗೂ —ಸಕಲರಿಗೂ— ದಾನ ಮತ್ತು ವಿವಿಧ ಸನ್ಮಾನಗಳಿಂದ ಹೆಚ್ಚಳಪಡಿಸಿರುವನು. ಇಂಥ ದಾನ ಮತ್ತು ಪೂಜೆಯು ಹೊರತು ಬೇರೆ ಪೂಜಾದಾನಗಳನ್ನು ದೇವಪ್ರಿಯನು ಶ್ರೇಷ್ಠವೆಂದು ತಿಳಿಯುವದಿಲ್ಲ. ಸರ್ವ ಸಂಪ್ರದಾಯಗಳ ಸಾರವೃದ್ಧಿಯು ಸಾಧನವೇ ಶ್ರೇಷ್ಠವಾದದ್ದು. ಸರ್ವ ಸಂಪ್ರದಾಯಗಳ ಅಭಿವೃದ್ಧಿಯು ವಿಭಿನ್ನಪ್ರಕಾರದ್ದಾಗಿದೆ. ಆದರೆ ನಾಲಗೆಯನ್ನು ಬಿಗಿ ಹಿಡಿಯುವದು ಎಲ್ಲಕ್ಕೂ ಮೊದಲು ಬೇಕು. ತನ್ನ ಧರ್ಮವನ್ನು ಹೊಗಳಿ ಅನ್ಯ ಧರ್ಮವನ್ನು ಬೊಗಳುವದು ಅಯೋಗ್ಯ. ಕಾರಣಾಂತರದಿಂದ ಪರಧರ್ಮಿಗಳನ್ನು ಪೂಜಿಸುವುದೂ ಕೂಡ ಅಗತ್ಯವಾಗಿದೆ. ಇದರಿಂದ ಸ್ವಧರ್ಮಿಗಳಿಗೆ ಮೇಲ್ಮೆಯಾಗುತ್ತದೆ. ಪರಧರ್ಮಿಗಳಿಗೆ ಉಪಕಾರವಾಗುತ್ತದೆ. ಹೀಗೆ ಮಾಡದಿದ್ದರೆ ಸ್ವಧರ್ಮಿಗಳಿಗೆ ಹಾನಿಯೂ ಪರಧರ್ಮಿಗಳಿಗೆ ಅಪಕಾರವೂ ತಪ್ಪದು. ಯಾರಾದರೂ ಯಾವದೊಂದು ಸಂಪ್ರದಾಯದ ಅನುರಾಗದ ಮೂಲಕವಾಗಿ ಇಲ್ಲವೇ ಸ್ವಧರ್ಮಿಗಳ ಗೌರವವನ್ನು ಹೆಚ್ಚಿಸುವುದಕ್ಕಾಗಿ ಸ್ವಧರ್ಮಿಗಳನ್ನು ಪೂಜಿಸಿ ಪರಧರ್ಮಿಗಳನ್ನು ನಿಂದಿಸಿದರೆ ಇಂಥವರು ವಿಶೇಷವಾಗಿ ಸ್ವಸಂಪ್ರದಾಯದ ಹಾನಿಗೆ ಕಾರಣವಾಗುವರು. ಆದರೆ ಸಮಾನವಾಗಿ ತಿಳಿಯುವುದೇ ಶ್ರೇಯಸ್ಕರ. ಹೇಗೆಂದರೆ —ಸರ್ವರೂ ಪರಸ್ಪರರ ಧರ್ಮತತ್ವಗಳನ್ನು ಕೇಳಬೇಕು. ಇದು ಉತ್ತಮವಾದ ಕರ್ತವ್ಯವೆಂದು ಭಾವಿಸಬೇಕು. **ದೇವಪ್ರಿಯನು ಇಚ್ಛಿಸುವದೇನಂದರೆ:— ಸರ್ವ ಧರ್ಮದವರೂ ಬಹಳವಾಗಿ (ಧರ್ಮಗ್ರಂಥಗಳ) ಅಧ್ಯಯನ (ವ್ಯಾಸಂಗ) ಮಾಡಿ ಕಲ್ಯಾಣಕರವಾದ ನೀತಿಯಿಂದ ನಡೆಯಲಿ.** ಯಾರಾರು ಯಾವಾವ ಧರ್ಮವನ್ನು ಪ್ರೀತಿಸುವರೋ ಅವರಿಗೆಲ್ಲಾ ಹೇಳುವದೇನಂದರೆ —ದೇವಪ್ರಿಯನಿಗೆ ಸರ್ವ ಧರ್ಮಾವಲಂಬಿಗಳ ಸಾರವೃದ್ಧಿಯು ಹೇಗೆ ಮಾನ್ಯವೋ ಹಾಗೆ ದಾನವಾಗಲಿ ಪೂಜೆಯಾಗಲಿ ಮಾನ್ಯವಿಲ್ಲ. ಇದಕ್ಕಾಗಿ ಬೇರೆ ಬೇರೆ ಧರ್ಮಮಹಾಮಂತ್ರಿಗಳನ್ನು ಬೇರೆ ಬೇರೆ ಅಧಿಕಾರಿಗಳನ್ನೂ ನಿಯಮಿಸಲಾಗಿದೆ. ಆಯಾ ಸಂಪ್ರದಾಯಗಳ ಸವೃದ್ಧಿಯೇ ಇದರ ಫಲವು.”

೧೨ನೇ ಗಿರಿಲಿಪಿ.

“ ದೇವಪ್ರಿಯನಾದ ಪ್ರಿಯದರ್ಶಿ ರಾಜನು ಹೇಳುವದೇನಂದರೆ— ಪಟ್ಟಾಭಿಷೇಕದ ಹನ್ನೆರಡನೆಯ ವರ್ಷದಿಂದಲೇ ನಾನು ಸರ್ವ ಲೋಕಹಿತವನ್ನು ಸುಖವನ್ನು ನೆನೆದು ಈ ಧರ್ಮಲಿಪಿಗಳನ್ನು ಬರೆಯಿಸುತ್ತಲಿರುವೆ. ಸರ್ವರೂ ತಮ್ಮ ಪೂರ್ವ ಸಾಪಗಳನ್ನು ಪರಿತ್ಯಜಿಸಿ ಧರ್ಮಾಚರಣೆಯಿಂದ ಮೇಲಾಗಲೆಂಬುದೇ ನನ್ನ ಉದ್ದೇಶ್ಯವು. ಹೀಗೆ ನಾನು ಪ್ರಜೆಗಳ ಹಿತವನ್ನೂ ಸುಖವನ್ನೂ ಚಿಂತಿಸುತ್ತಿರುವೆ. ಅಲ್ಲದೆ ಬಂಧುಬಳಗಕ್ಕೂ, ಸಮೀಪದವರಿಗೂ, ದೂರದವರಿಗೂ ಯಾವ ಯಾವ ಉಪಾಯದಿಂದ ಸುಖಿಗಳನ್ನಾಗಿ ಇರಿಸಲು ಬಂದೀತೆಂಬುದನ್ನೂ ಲಕ್ಷ್ಯದಲ್ಲಿಟ್ಟುಕೊಂಡು ಅದಕ್ಕೆ ತಕ್ಕಂತೆ ಕೆಲಸ ಮಾಡುತ್ತಲೂ ಇರುವೆ. ಈ ರೀತಿಯಾಗಿ ಸರ್ವ ಜೀವಿಗಳ ಕಡೆಗೂ ಸರ್ವ ಸಂಪ್ರದಾಯಗಳ ಕಡೆಗೂ ನನ್ನ ಲಕ್ಷ್ಯವಿದೆ. ಸರ್ವ ಧರ್ಮಿಗಳನ್ನೂ ನಾನು ವಿವಿಧ ಪ್ರಕಾರದ ಪೂಜೆಗಳಿಂದ ಸನ್ಮಾನಿಸಿರುವೆನು. ಆದರೂ ನನ್ನ ಅಭಿಪ್ರಾಯವೇನಂದರೆ — ಸ್ವಧರ್ಮದ ಮೇಲೆ ಅನುರಾಗವಿರುವುದು ಶ್ರೇಯಸ್ಕರವು. ನನ್ನ ಅಭಿಷೇಕದ ಇಪ್ಪತ್ತಾರನೆಯ ವರ್ಷದಲ್ಲಿ ಈ ಧರ್ಮಲಿಪಿಯನ್ನು ಬರೆಯಿಸಿದೆನು.”

೬ನೇ ಸ್ತಂಭಲಿಪಿ.

ಓಂ ! ಎಲ್ಲೆಲ್ಲಿಯೂ “ಅ-ಶೋಕ” ಮಯವಾಗಲಿ !
ಓಂ ಶ್ರೀ ಓಂ

ಕೊಡಗಿನಲ್ಲಿ ಕನ್ನಡಿಗರ ಸಂಖ್ಯೆ.

ಕೊಡಗು ಕರ್ನಾಟಕದ ಒಂದು ಭಾಗವೆಂದ ಮೇಲೆ ನಾಡಿನ ಭಾಷೆಯು ಕನ್ನಡವೆಂದು ಹೇಳುವ ಅಗತ್ಯವಿಲ್ಲ. ಆದರೂ ಕೆಲವರು ಕೊಡಗಿನಲ್ಲಿ ಕನ್ನಡವಿಲ್ಲೆಂದು ತಿಳಿದಿರುವರು. ಆದ್ದರಿಂದ ಕೊಡಗಿನ ಭಾಷೆಯ ವಿಷಯ ಪ್ರತಿಯೊಬ್ಬನೂ ತಿಳಿದುಕೊಳ್ಳತಕ್ಕದ್ದು ಆವಶ್ಯಕವಾಗಿದೆ.

ಕೊಡಗಿನ ಮೂಲವಾಸಿಗಳೆನಿಸಿಕೊಂಡಿರುವ ‘ಕೊಡವ’ರು, ಒಂದು ಮಿಶ್ರ ಭಾಷೆಯನ್ನಾಡುವರು. ಕನ್ನಡ, ಮಲೆಯಾಳ ಮತ್ತು ತುಳು ಮೊದಲಾದ ದ್ರಾವಿಡ ಭಾಷೆಗಳ ಮಿಶ್ರ. ಲಿಪಿ ಇಲ್ಲ; ಸಾಹಿತ್ಯವಿಲ್ಲ. **ಕೊಡವರು ಮಾತ್ರವಲ್ಲ, ಅವರಂತೇ ಆಚಾರವಿಚಾರಗಳುಳ್ಳ ಇನ್ನೂ ಕೆಲವು ಜಾತಿಯವರು ಈ ಭಾಷೆಯನ್ನು** ಮಾತನಾಡುವರು. ಕೇರಳದಿಂದ ಬಂದ ಮಾಪಿಳ್ಳೆ ಜನರು ಮಲೆಯಾಳವನ್ನು ಮಾತನಾಡುವರು. ಪರಭಾಷೆಗಳನ್ನಾಡುವವರು ಕಮ್ಮಿ. ಭಾಷಾನುಸಾರ **ಕೊಡಗಿನ** ಜನರು ಹೀಗಿರುವರು:—

ಭಾಷೆ		ಜನಸಂಖ್ಯೆ	
ಕನ್ನಡ			೧,೪೯,೬೮೦
	ಶುದ್ಧ ಕನ್ನಡ	೬೯,೪೩೧	
	ಯರವ	೧೨,೬೦೬	
	ಕೊಡವ	೪೯,೬೮೧	
	ಕುರುಬ	೩,೭೩೬	
	ತುಳು	೧೨,೫೪೫	
ಮಲೆಯಾಳ			೧೯,೯೦೫
ತಮಿಳು			೨,೦
ತೆಲಗು			೧,೦೮೨
ಇತರ ಭಾಷೆ			೧೦,೦೯೮
			೧,೬೩,೮೩೮

ಮೇಲಿನ ಅಂಕಿಗಳಿಂದ ನಾಡಿನ ಭಾಷೆಯು ಕನ್ನಡವೆಂದು ಹೇಳಬಹುದು. ವಾತಾವರಣವು ಕನ್ನಡ ಮಯವಾಗಿದೆ; ಸಂಪ್ರದಾಯವೂ ಸಂಸ್ಕೃತಿಯೂ ಕರ್ನಾಟಕದ್ದಾಗಿದೆ. ಜನಾಂಗ ದೃಷ್ಟಿಯಿಂದ ಕೊಡಗು ಕನ್ನಡನಾಡಿನ ಒಂದು ಭಾಗವಾಗಿರುವುದಕ್ಕೆ ಯಾವ ಸಂಶಯವೂ ಇಲ್ಲ. (ಮಿತ್ರ ಕರ್ನಾಟಕ)

ನನಗೆ ಹೊಳೆದಂತೆ.

ವಿಜಾಪುರದ "ಮುಂದಾಳು"ವಿನಲ್ಲಿ "ಕನ್ನಡಿಗನಿಗೆ ಎಚ್ಚರಿಕೆ" ಎಂಬ ಅಶುದ್ಧ ಪ್ರಯೋಗಗಳಿಂದ ತುಂಬಿದ ಲೇಖವು ಪ್ರಕಟವಾಗಿದೆ. ಬರೆದವರ ಹೆಸರುಗಳು ಅದಕ್ಕಿಲ್ಲವಾದ್ದರಿಂದ ಸಂಪಾದಕೀಯ ಲೇಖವೆಂದು ತಿಳಿಯಲು ಅತಂಕವಿಲ್ಲ. ಸಂಪಾದಕರ ಈ ಬಗೆಯ ಅಶುದ್ಧ ಪ್ರಯೋಗಗಳನ್ನೂ ಟೀಕಾಶೈಲಿಯನ್ನೂ ಕಂಡು ನನಗೆ ನಗೆಬರುವದು. ಕೇವಲ ಲಿಂಗಾಯತರ ಮರಾಠಿ ಶಾಲೆಗಳ ಬಗ್ಗೆ 'ಕನ್ನಡಿಗ'ನು ಟೀಕಿಸಿರುವನೆಂದು ಅವರ ವಿಧಾನ. ಹಾಗಾದರೆ, ಬಾಗಲಕೋಟೆ ಬ್ಯಾಂಕ ಡಾ. ಜಹಗೀರದಾರ, ಶ್ರೀ ಮಂಗಳವೇಢೆ ಮಾಧ್ವರಾವ ಇವರೆಲ್ಲರೂ ವೀರಶೈವರೋ? ಹೇಳಲಿ "ಮುಂದಾಳು"! ಬಸವೇಶ್ವರ ಹೈಸ್ಕೂಲಿನ ಶಿಕ್ಷಕರೋರ್ವರು ನಿಜಾಮನಗರದ ಕನ್ನಡಿಗರಿದ್ದಲ್ಲ: ಆದರೆ ಆಂಧ್ರರೆಂದರೆ 'ಕನ್ನಡಿಗ'ನು ಸುಮ್ಮನಿರಬೇಕೆ? ಹೇಳಲಿ "ಮುಂದಾಳು" "ಲಾಠೀ ಡ್ರಿಲ್ಲಿ"ನಂತಹ ಅನೇಕ ಪಾರಿಭಾಷಿಕ ಶಬ್ದಗಳನ್ನು ನಾವು ಉಪಯೋಗಿಸಲೇಬೇಕಾಗಿದೆ. ಜನರಲ್ಲಿ ರೂಢವಾಗಿದ್ದ ಶಬ್ದಗಳಿಗೆ ಬೇರೆ ಶಬ್ದಗಳನ್ನು ಯಾವನೊಬ್ಬನು ಮನಬಂದಂತೆ ಕಲ್ಪಿಸುವದು ಯುಕ್ತವಲ್ಲ. ಸಾಹಿತ್ಯ ಪರಿಷತ್ತು; ಸಂಪಾದಕರ ಮಂಡಲಿಗಳಂತಹ ಜವಾಬ್ದಾರಿಯ ಸಂಸ್ಥೆಗಳು ಅವಶ್ಯವಿದ್ದ ಹೊಸ ಹೊಸ ಶಬ್ದಗಳನ್ನು ತಮ್ಮ ಅಧಿಕಾರಯುಕ್ತವಾದ ವಾಣಿಯಿಂದ ಪ್ರಚಾರದಲ್ಲಿ ತರಬೇಕು. ಸ್ಟೇಶನ್, ತಿಕೀಟು, ರೇಲ್ವೆ, ಮ್ಯಾಜಿಸ್ಟ್ರೇಟ, ಕಲೆಕ್ಟರ, 'ಲಾಠೀ ಡ್ರಿಲ್', ಇವೇ ಮೊದಲಾದ ಜನರಲ್ಲಿ ರೂಢವಾದ ಶಬ್ದಗಳನ್ನು ಬದಲಿಸುವದು ಯುಕ್ತವೇ? ಹೇಳಲಿ "ಮುಂದಾಳು"! "ವಿದ್ಯಾರಣ್ಯ ಮುದ್ರಾ ಮಂದಿರಕಾ ಕಾರ್ಯಾಲಯ" ಎಂದು ಹಿಂದೀ ಭಾಷೆಯಲ್ಲಿ ಬಾಲಬೋಧಲಿಪಿಯಿಂದ ಬರೆದುದನ್ನು ತಿಳಿದುಕೊಳ್ಳುವ ಶಕ್ತಿ ಸಹ ಇಲ್ಲದ ಯಾವ ಪೋರನು, "ಮುಂದಾಳು"ವಿಗೆ ಸುದ್ದಿ ತಿಳಿಸಿದನೋ ಏನೋ? ಅದನ್ನು ವಿಚಾರಿಸದೇ, "ಮುಂದಾಳು" ಗಮ್ಮನೇ ಲೇಖ ಪ್ರಕಟಿಸಿತು! ಇನ್ನು ಕನ್ನಡದ ಬಹಳ ಶಾಲೆಗಳಲ್ಲಿ ಮರಾಠಿ ಉಪಯೋಗಿಸುವಾದಾಗ 'ಕನ್ನಡಿಗ'ನ ಮತ ಕನ್ನಡ ನುಡಿಗೆ ಪ್ರಾಧಾನ್ಯ ಕೊಟ್ಟು ಮರಾಠಿಗೇ ಆಗಲಿ, ಕೆಲಗ: ತಮಿಳು ಉರ್ದೂ, ಹಿಂದೀ, ಇಂಗ್ಲೀಷ ಭಾಷೆಗೇ ಆಗಲಿ ಸ್ಥಾನಿಕ ಪರಿಸ್ಥಿತಿಯಂತೆ ಅವಶ್ಯವಾಗಿ ಅವಕಾಶ ಕೊಡಲೇಬೇಕು. ಇವನ್ನೆಲ್ಲ ತಿಳಿದುಕೊಳ್ಳುವಷ್ಟು ಜ್ಞಾನವಿಲ್ಲದೇ ಸುಮ್ಮನೇ, ಟೀಕಿಸುವದು ವ್ಯರ್ಥವಾದುದು. ‡ ‡ ‡ ‡ ‡

ಹಿಂದೂ ಜನರು ಮಾಂಸ ತಿನ್ನಬೇಕೆಂದು ಡಾಕ್ಟರ ಮುಂಜೆಯವರು ಪ್ರತಿಪಾದಿಸುತ್ತಿರುವರು! ಶುದ್ಧಿಸಂಘಟನಗಳ ಮುಂದಾಳುಗಳಂತೆ ಇವರು! ಅಖಿಲ ಭಾರತೀಯ ಹಿಂದೂ ಮಹಾಸಭೆಯ ಅಧ್ಯಕ್ಷರಿವರು! ಇವರಿಗೇ ಇಂತಹ ಮಾಂಸಭಕ್ಷಣದ ಹುಚ್ಚು ಹಿಡಿದ ಮೇಲೆ ಅವರಿಗೆ ಮಹತ್ವ ಕೊಡುವದೇಕೆ? ಅದರೂ ಡಾ. ಕಾನಿಟಕರರ ನವೀನ ಸ್ವಾಸ್ಥ್ಯ ನಿರ್ಮಾಣ ಮಂಡಲದಲ್ಲಿ ಇವರಿಗೆ ಸಭಾಸದತ್ವದ ಬಹುಮಾನ ದೊರೆತಿದೆ! ಹೇಗಿದೆ ಮೌಜು!

—ಓದುಗ

ಸೋಜಿಗದ ಸುದ್ದಿಗಳು.

ಅಮೇರಿಕೆಯ ಕೊಲೊರೆಡೊ ಎಂಬ ಪಟ್ಟಣದಲ್ಲಿ ರಾಕ್ಷಸೀ ಜಾತಿಯ ಹಲ್ಲಿಗಳಿವೆ. ೧೦ ರಿಂದ ೨೦ ಫೂಟು ಉದ್ದವಾಗಿದ್ದು, ಬಹು ತೀಕ್ಷ್ಣವಾದ ಹಲ್ಲುಗಳಿವೆ. ಇವುಗಳು, ಆನೆ ಕುದುರೆಗಳಂತಹ ದೊಡ್ಡ ಪ್ರಾಣಿಗಳನ್ನು ಸಹ ಹೊತ್ತು ನುಂಗುತ್ತವೆ! ಬಾಲದ ಒಂದೇ ಹೊಡತದಿಂದ ಮನುಷ್ಯನು ನೆಲಕ್ಕುರುಳುವನಂತೆ! ಇದು ಹೊಸದಾಗಿ ಶೋಧಿಸಲ್ಪಟ್ಟ ಪ್ರಾಣಿಯು. ಅಮೇರಿಕೆಯ ಪ್ರಾಣಿ ಸಂಗ್ರಹಾಲಯಕ್ಕೆ ಒಂದನ್ನು ಈಗ್ಗೆ ಹಿಡಿದು ತಂದಿದ್ದಾರೆ.

ವಿಲಾಯತಿಯಲ್ಲಿ ಸಾರ್ವಜನಿಕ ಊಟದ ಮನೆಗಳಲ್ಲೆಲ್ಲ ಗಂಟೆಗಳಿರುತ್ತವೆ. ಇವನ್ನು ರಾತ್ರಿ ಬಾರಿಸುವದರಿಂದ ಮಲಗುವವರಿಗೆ ತೊಂದರೆಯಾಗುತ್ತಲಿದ್ದಿತು. ಅದ್ದರಿಂದ ಅವುಗಳ ಬದಲು ಬಣ್ಣದ ದೀಪಗಳನ್ನು ಏರ್ಪಾಡು ಮಾಡಿದ್ದಾರೆ. ಇಂತಹ ಬಣ್ಣದಿಂದ ಇಂತಿಷ್ಟು ಸಂಖ್ಯೆಯಾಯಿತೆಂದು ತಿಳಿದುಕೊಳ್ಳಬೇಕಾಗುವದು. ಕೆಲವರಿಗೆ ಇದರಿಂದ ಮಲಗಲು ಮಾರ್ಗವಿಲ್ಲದಂತಾಗಿದೆ

ಹಿಂದುಸ್ಥಾನದಲ್ಲಿ ಪರದೇಶದ ಯಾತ್ರಿಕರು.

ಕಳೆದ ವರ್ಷ ಹಿಂದುಸ್ಥಾನಕ್ಕೆ ೫೦೦೦ ಪರದೇಶದ ಪ್ರಯಾಣಿಕರು ಬಂದು, ಇಲ್ಲಿಯ ಐತಿಹಾಸಿಕ ಸ್ಥಳಗಳನ್ನು ಸಂದರ್ಶಿಸಿದರು. ರೇಲ್ವೇ ಹಾಗೂ ಊಟದ ಮನೆಗಳಿಗೆ ಇವರಿಂದ ೭೫ ಲಕ್ಷ ರೂ. ಗಳ ಪ್ರಾಪ್ತಿಯಾಗಿದೆ. ಜಿ. ಆಯ್. ಪಿ. ರೇಲ್ವೆಯವರು ೧೪ "ಸ್ಪೆಶಲ್ ಟ್ರೇನು"ಗಳನ್ನು ಹೊರಡಿಸಿದ್ದರು. ಈ ಪ್ರಯಾಣಿಕರೆಲ್ಲ ಹೆಚ್ಚಾಗಿ ಉತ್ತರ ಹಿಂದುಸ್ಥಾನವನ್ನೇ ಸುತ್ತುವರು. ಯಾಕೆಂದರೆ, ಜಿ. ಆಯ್. ಪಿ. ಕಂಪನಿಯವರು ತಮ್ಮ ಹದ್ದಿನಲ್ಲಿದ್ದ ಐತಿಹಾಸಿಕ ಸ್ಥಳಗಳ ಬಗ್ಗೆ ಪರದೇಶಗಳಲ್ಲಿ ಚನ್ನಾಗಿ ಪ್ರಕಟನೆಗಳನ್ನು ಹಂಚಿದ್ದಾರೆ. ದಕ್ಷಿಣ ಹಿಂದುಸ್ಥಾನದ ರೇಲ್ವೇಗಳೂ ವಿಶೇಷತಃ ಮೈಸೂರು ರೇಲ್ವೇಯವರು ಈ ಬಗ್ಗೆ ಪ್ರಯತ್ನಿಸಿದರೆ, ಹೊರನಾಡಿನವರಿಗೆ ಕನ್ನಡ ಐತಿಹಾಸಿಕ ಸ್ಥಾನಗಳನ್ನು ಸಂದರ್ಶಿಸುವ ಸುಪ್ರಸಂಗವೂ ಉಂಟಾಗುವದು; ಕರ್ನಾಟಕದಲ್ಲಿಯ ರೇಲ್ವೇಗಳಿಗೂ ಉತ್ತಮ ಊಟದ ಮನೆಗಳಿಗೂ ಉತ್ಪನ್ನವೂ ಬೆಳೆಯುವದು.

ಬೆಳಗಾವಿ ರೇಲ್ವೇ ಮಂಡಲ.

ಈ ಮಂಡಲದ ಪ್ರಯತ್ನದಿಂದ ಈಗ್ಗೆ ಇಂಟರ ಡಬ್ಬಿಗಳ ಸುಧಾರಣೆಯಾಗಿದೆ. ಹೆಂಗಸರ ಡಬ್ಬಿಗಳಿಗೆ ಹೆಂಗಸಿನ ಚಿತ್ರ ಹಚ್ಚಿದ್ದಾರೆ. (ಆದರೆ ಈ ಚಿತ್ರವು ಗದಗ—ಹುಟಗೀ ಮಾರ್ಗದಲ್ಲಿಲ್ಲ!) ಹಾದಿಯ ದರವು ಹೆಚ್ಚಿಸಲ್ಪಟ್ಟಿದ್ದರೂ, ಪ್ರಯಾಣಿಕರು ಒಯ್ಯುವ ಸಾಮಾನು ೧೫ ಸೇರು ಇರಬೇಕಾಗಿ ಅಪ್ಪಣೆಯಿದೆ. ಆದರೆ ೨೦ ಸೇರು ಒಯ್ಯಲು ಪಾಸಾಗಬೇಕು; ೧—೨ನೇ ವರ್ಗಗಳ ಡಬ್ಬಿಯಲ್ಲಿ ಹಿಂದೀಯರಿಗೆ ಅನುಕೂಲವಾಗುವಂತಹ ಪಾಯಖಾನಿಗಳಿರಬೇಕು; ಕಡಿಮೆ ದರದ ಸವಲತ್ತಿನ ತಿಕೀಟುಗಳಿರಬೇಕು; ಮಿರಜ ಹಾಗೂ ಹುಬ್ಬಳ್ಳಿಗಳಲ್ಲಿ ಹಿಂದೂ ಜನರ ಊಟದ ಮನೆಗಳು ವಿಶಾಲವಾಗಿರಬೇಕು; ಸಾಲಗಾವಿ ಸ್ಟೇಶನ್ನನ್ನು ಬೇಗನೇ ಪ್ರಾರಂಭಿಸಬೇಕು. ಮಿರಜಿಯ ೩ನೇ ವರ್ಗದ 'ವೇಟಿಂಗರೂಮ'ದಲ್ಲಿ ನೀರಿನ ಏರ್ಪಾಡಾಗಬೇಕು; ಊರಿನಿಂದ ದೂರಿರುವ ಎಲ್ಲ ಸ್ಟೇಶನ್ನುಗಳಲ್ಲಿಯೂ ನೀರಿನ ವ್ಯವಸ್ಥೆಯಾಗಬೇಕು. ಎಲ್ಲ ಕಡೆಗೂ ಗಾಡಿಯ ವೇಗವು ಹೆಚ್ಚಾಗಬೇಕು, ಮಿರಜ—ಬೆಳಗಾವಿಗಳಲ್ಲಿ ಒಂದು ಗಾಡಿಯು ಹೆಚ್ಚಾಗಿ ಬೇಕು, ಗದಗ—ಹಟಗಿಗಳಲ್ಲಿ ೩ನೇ ಗಾಡಿಯು ಹೆಚ್ಚಾಗಿ ಬೇಕು, ಎಂಬದಾಗಿ ಮುದ್ರಾಸ ಸದರ್ನ ಮರಾಠಾ ರೇಲ್ವೇ ಕಂಪನಿಗೆ ಈಗ್ಗೆ ಈ ಮಂಡಲದವರು ಬರೆದಿದ್ದಾರೆ. ಈ ಬಗ್ಗೆ ಮಂಡಲದ ಉತ್ಸಾಹೀ ಕಾರ್ಯದರ್ಶಿಗಳಾದ ಶ್ರೀ ಮುರಾಕಿಯವರನ್ನು ಅಭಿನಂದಿಸುತ್ತೇವೆ. ರೇಲ್ವೇ ಪ್ರವಾಸಿಕರ ಮಿತ್ರ ಎಂಬ ಚಿಕ್ಕ ಪುಸ್ತಕವು ಈ ಮಂಡಲದಿಂದ ಕನ್ನಡದಲ್ಲಿ ಪ್ರಕಟವಾಗಿದ್ದು, ಅದರಲ್ಲಿ ಉಪಯುಕ್ತವಾದ ಸಂಗತಿಗಳೆಲ್ಲ ಕೊಡಲ್ಪಟ್ಟಿವೆ. ಇದು ಪುಕ್ಕಟೆಯಾಗಿ ಹಂಚಲ್ಪಡುತ್ತಿದೆ.

ಮಹಾತ್ಮರ ಮೋಟಾರು.

ಮದ್ರಾಸ ಇಲಾಖೆಯಲ್ಲಿ ಮಹಾತ್ಮರು ಸಂಚರಿಸಲಿಕ್ಕೆ ಒಂದು ವಿಶೇಷ ಮಹತ್ವದ ಮೋಟಾರು ಸಿದ್ಧವಾಗುತ್ತಲಿದೆ. ಎಡಕ್ಕೆ ಮಲಗಲು ಪಲಂಗು, ಬಲಕ್ಕೆ ಒಂದು ಆರಾಮ ಖುರ್ಚಿ, ಬರೆಯಲಿಕ್ಕೆ ಮೇಜು ಖುರ್ಚಿ ಮತ್ತು ಎಲ್ಲಕ್ಕೂ ಹಿಂದಿನ ಭಾಗದಲ್ಲಿ ಹಳ್ಳಿಗಳಲ್ಲಿ ಚರಾಟ ಮಾಡಲು ಬೇಕಾಗುವಷ್ಟು ಖಾದೀ ಅರವೆ ಇಡಲು ಸ್ಥಳ, ಹೀಗೆ ಸೌಕರ್ಯಗಳಿದ್ದ ಮೋಟಾರು ಸಿದ್ಧವಾಗುತ್ತಲಿದೆ!!

ತುಮಕೂರು ಸೇವಾಸಂಘದಲ್ಲಿ ೧೯೨೭ನೇ ಇಸವಿ ಜೂನ ೧ ರಿಂದ ೩೦ ರ ವರೆಗೆ ನಡೆಯುವ ಕಾರ್ಯಕ್ರಮಗಳ ವಿವರ.

ತಾ। ೧ ಬು। ಬುದ್ಧಜಯಂತಿ, ಮ। ಟಿ. ಗುರುನಂಜಯ್ಯ, ಬಿ. ಎ., ಬಿ. ಎಲ್.

ತಾ। ೫ ಭಾ। ಲೋಕಸೇವೆ—ಮ। ಕೆ. ಮಲ್ಲರಾಜ ಅರಸಿನವರು, ಬಿ. ಎ. ಅಸಿಸ್ಟಂಟ ಕಮಿಶನರ್

ತಾ। ೧೧ ಶ। ಶ್ರೀಮನ್ಮಹಾರಾಜರವರ ವರ್ಧಂತಿ ಮ। ಕೆ. ಶ್ರೀನಿವಾಸಮೂರ್ತಿ, ಬಿ. ಎ., ಎಲ್. ಎಲ್. ಬಿ., ಮ। ಹೆಚ್. ಎಚ್. ಮಾಧವರಾವ

ತಾ। ೧೨ ಭಾ। ಭಾರತೀಯರ ಬಡತನ—ಮ। ಜಿ. ರುದ್ರಪ್ಪ, ಎಂ. ಎ., ಎಲ್. ಎಲ್. ಬಿ.

ತಾ। ೧೯ ಭಾ। ಸೇವಾಸಂಘದ ವಾರ್ಷಿಕೋತ್ಸವ

ತಾ। ೨೬ ಭಾ। ಪುರಸಿಟಿಜನರ ಜವಾಬ್ದಾರಿ—ಮ। ಜಿ. ರಾಜಗೋಪಾಲಾಚಾರ್ಯ, ಎಂ. ಎ., ಎಲ್. ಎಲ್. ಬಿ.

ವಿ. ಸೂ.—ಮೇಲ್ಕಂಡ ಉಪನ್ಯಾಸಗಳೆಲ್ಲವೂ ಸಾಯಂಕಾಲ ೬ ಘಂಟೆಗೆ ಚಿಕ್ಕಪೇಟೆ ಸೇವಾಸಂಘದ ಹಾಲಿನಲ್ಲಿ ನಡೆಯುವವು,

ತುಮಕೂರು, ೨೫—೫—೨೭ — ಕೆ. ಶ್ರೀನಿವಾಸಮೂರ್ತಿ, ಬಿ. ಎ., ಎಲ್. ಎಲ್. ಬಿ. ಅಡ್ವೋಕೇಟ್ ಜನರಲ್ ಸೆಕ್ರೆಟರಿ.

ಕರ್ನಾಟಕ ಆಯುರ್ವೇದ ಸಮ್ಮೇಲನ, ವಿಜಾಪೂರ.

(ನಮ್ಮ ಸ್ವಂತ ಪ್ರತಿನಿಧಿಯಿಂದ)

ಈ ಸಮ್ಮೇಲನವು ಮೇ ೨೮, ೨೯, ೩೦ ನೇ ತಾರೀಖುಗಳಲ್ಲಿ ಆ. ವೇ. ಭೂ. ಎಂ. ವಿ. ಶಾಸ್ತ್ರಿ ಮಂಗಳೂರ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಮ್ಮೇಲನಕ್ಕೆ ಬಂದ ವೈದ್ಯ ಜನರ ಸಂಖ್ಯೆಯು ಕಡಮೆ ಇದ್ದಿತು. ಸ್ಥಾನಿಕ ಡಾಕ್ಟರರ ಹೊರ್ತು ಪರಸ್ಥಳದಿಂದ ಡಾಕ್ಟರ ಜನರು ಒಬ್ಬಿಬ್ಬರ ಹೊರ್ತು ಯಾರೂ ಬಂದಿರಲಿಲ್ಲ. ಮೊದಲಿಗೆ ದತ್ತಾತ್ರೇಯ ನಾಟಕ ಮಂಡಲದವರು ಸ್ವಾಗತ ಪದಗಳನ್ನು ಹಾಡಿದರು. ಬಳಿಕ ಸ್ವಾಗತ ಸಭೆಯ ಅಧ್ಯಕ್ಷರಾದ ರಾ. ಬ. ಕೆಂಭಾವಿ ರಾಘವೇಂದ್ರರಾಯರು ಅಧ್ಯಕ್ಷರ ಮತ್ತು ಪ್ರತಿನಿಧಿಗಳ ಸ್ವಾಗತ ಮಾಡುವಾಗ್ಗೆ ಎಲ್ಲರೂ ತಿಳಿದುಕೊಳ್ಳುವಂತೆ ಅರ್ಥಗರ್ಭಿತವಾದ ಭಾಷಣ ಮಾಡಿದರು. ಆಯುರ್ವೇದದಿಂದಾಗುವ ಲಾಭ ಅದರಲ್ಲಿ ಭಾರತೀಯರಿಗಿರುವ ವಿಶ್ವಾಸ, ಸದ್ಯದ ಹೀನಸ್ಥಿತಿಗಳನ್ನು ಮಾರ್ಮಿಕವಾಗಿ ಹೇಳಿದರು. ಅಧ್ಯಕ್ಷಸ್ಥಾನವನ್ನಲಂಕರಿಸಿ ಅನಂತರದಲ್ಲಿ ಅಧ್ಯಕ್ಷರು ಆಯುರ್ವೇದದ ಮಹತ್ವ, ಉಪಯುಕ್ತತೆ, ಹ್ರಾಸದ ಕಾರಣ, ಇತ್ಯಾದಿಗಳನ್ನು ಹೇಳಿದರು. ಭಾಷಣವನ್ನು ಸಂಸ್ಕೃತದಲ್ಲಿ ಬರೆದು ತಂದದ್ದು ಓದಿದರು! ಅನೇಕ ಜನರು, ವಿಶೇಷವಾಗಿ ಡಾ। ಜನರು ಕನ್ನಡದಲ್ಲಿ ಹೇಳಬೇಕೆಂದು ಆಗ್ರಹಪಟ್ಟಾಗ್ಯೂ ಅಧ್ಯಕ್ಷರು ತಮ್ಮ ಹಟವನ್ನೇ ಸಾಧಿಸಿದರು, ಅದರಿಂದ ಶ್ರೋತೃಗಳು ಕಡೆಗೆ ಒಬ್ಬೊಬ್ಬರೆ ಹೊರಗೆ ಹೊರಟರು.

ವಿಷಯನಿಯಾಮಕ ಮಂಡಲವು ಏರ್ಪಡಾಗಿ ಅನೇಕ ಠರಾವುಗಳ ಬಗ್ಗೆ ವಾದವಿವಾದವಾಗಿ ಗೊಂದಲವೆದ್ದಿತು. ಅನೇಕ ಠರಾವುಗಳು ಮುಂದೆ ಬಂದವು. ಕರ್ನಾಟಕದಲ್ಲಿ ಆದರ್ಶಭೂತವಾದ ಆಯುರ್ವೇದ ಕಾಲೇಜವನ್ನು ಸ್ಥಾಪಿಸುವದೂ ಆಯುರ್ವೇದ ಉನ್ನತಿಯ ಬಗ್ಗೆ ಪ್ರಯತ್ನಪಡುವದೂ ಅವಶ್ಯವೆಂದು ನಿರ್ಣಯವಾಯಿತು ಅದರೆ ಕೆಲಸ ಮಾಡುವವರು ಯಾರೂ ಮುಂದೆ ಬರಲಿಲ್ಲ! ಡಾ. ಗವಣೂರವರ ಹೊರ್ತು ಕಳಕಳಿಯವರು ಯಾರೂ ಕಾಣಲಿಲ್ಲ ೨ ವರ್ಷಗಳಿಂದ ಕಾರ್ಯವೇನೂ ಆಗಿಲ್ಲವೆಂದೂ ಅವ್ಯವಸ್ಥೆಯಿದೆಂದೂ ಘೋರವಾದ ಆಕ್ಷೇಪವು ಹೊರಟಿತು, ಕಡೆಗೆ ಡಾ। ಗವಣೂರ ಮತ್ತು ಅಧ್ಯಕ್ಷರ ಪ್ರಯತ್ನದಿಂದ ಎಲ್ಲವೂ ಶಾಂತವಾಗಿ ಈ ಸಾರೆ ವಿಶೇಷ ಉತ್ಸಾಹದಿಂದ ಕೆಲಸ ಮಾಡತಕ್ಕದೆಂದು ಗೊತ್ತುವಳಿಗಳಾದವು.

ಸಭೆಗೆ ವಿಶೇಷ ಉತ್ಸಾಹದಿಂದ ಬಂದಿದ್ದ ಡಾಕ್ಟರರು ತ್ರಿದೋಷ ಪರಿಷಯದ ಜ್ಞಾನವನ್ನು ತಮಗೆ ಗೊತ್ತುಮಾಡಿಕೊಡಬೇಕೆಂದು ವಿಶೇಷವಾಗಿ ಕೂತೂಹಲದಿಂದಿದ್ದರೂ ಸಮಾಧಾನ ಮಾಡುವದಕ್ಕಾಗಿ ವೈದ್ಯಮಹಾಶಯರಾರೂ ಮುಂದೆ ಬರಲಿಲ್ಲ! ಇದು ವೈದ್ಯರಿಗೆ, ವೈದ್ಯಕ ಪದವೀಧರರಿಗೆ ಲಾಂಛನಾಸ್ಪದವಾದ ಮಾತು!

ಈ ತರದ ಬೇಜವಾಬದಾರಿ ವೈದ್ಯರಿಂದ ಯಾವದು ತಾನೇ ಸಾಧ್ಯವು? ಸಮ್ಮೇಲನದಲ್ಲಿ ಸಂಸ್ಕಾರ ತ್ರಿದೋಷ ವಿಚಾರ, ಉಪದೇಶ, ಅರೆಂಡಿಕ್ಸ ಇತ್ಯಾದಿ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕಾದದ್ದೆಂದು ಮೊದಲೇ ಸಿದ್ಧವಾಗಿದ್ದರೂ ಆ ಪ್ರಕಾರ ಯಾವದೂ ಕೆಲಸವಾಗಲಿಲ್ಲ! ಅನುಭೂತಯೋಗಗಳನ್ನು ತಿಳಿಯಬೇಕೆಂದೂ ತಮ್ಮ ಸಂಶಯಗಳಿಗೆ ಸಮಾಧಾನವನ್ನು ಹೇಳಬೇಕೆಂದೂ ಅನೇಕ ಡಾ। ಜನರು ಆದರದಿಂದಲೂ ಪ್ರೇಮದಿಂದಲೂ ಪ್ರಾರ್ಥಿಸಿದರೂ ಕೂಡ ಆರ್ಯ ವೈದ್ಯರೆಂದೆನಿಸಿಕೊಳ್ಳುವವರು ಪುನಃ ಮೌನವನ್ನೇ ತಳೆದರು!! ಇದೇ ಕ್ರಮವು ಇನ್ನು ಮುಂದೆ ನಡೆದರೆ ಆಯುರ್ವೇದದ ಉನ್ನತಿಯ ಬದಲು ಅವನತಿಯೇ ಆಗುವದೆಂಬುದರಲ್ಲಿ ಸಂದೇಹವಿಲ್ಲ ನೆರೆದಿದ್ದ ಡಾ। ಜನರಿಗೂ ಸಮ್ಮೇಲನದಿಂದ ಲಾಭ ದೊರೆಯಲಿಲ್ಲವೆಂದೂ ಪರಸ್ಪರ ಪ್ರೀತಿ ವಿಶ್ವಾಸಗಳ ಬೆಳವಣಿಗೆಗೆ ಈ ಸಮ್ಮೇಲನವು ಏನೂ ಆಸ್ಪದ ಕೊಡಲಿಲ್ಲವೆಂದೂ, ಖೇದದಿಂದ ಹೇಳಬೇಕಾಗಿದೆ

ಪ್ರದರ್ಶನಕ್ಕೆ ಸಿದ್ಧ ಔಷಧಿಗಳೂ, ಗಿಡಮೂಲಿಕೆಗಳೂ ತಕ್ಕಮಟ್ಟಿಗೆ ಬಂದಿದ್ದವು. ಆದರೆ, ಅವುಗಳ ಉಪಯೋಗ, ಪರೀಕ್ಷಣ ಗುಣದೋಷ ಇತ್ಯಾದಿಗಳ ಬಗ್ಗೆ ತಿಳಿಸಿ ಹೇಳಿದ್ದರೆ, ಡಾ। ಜನರಿಗೆ ವಿಶೇಷ ಉಪಯೋಗವಾಗಿ ಅವರಿಂದ ಪರದೇಶಕ್ಕೆ ಹೋಗುವ ದ್ರವ್ಯದ ಅಂಶತಃನಾದರೂ ರಕ್ಷಣವಾಗಬಹುದಾಗಿತ್ತು! ಆದರೆ ಆ ವ್ಯವಸ್ಥೆಯೂ ಈ ಸಮ್ಮೇಲನದಿಂದಾಗಲಿಲ್ಲ!

ಕರ್ನಾಟಕ ಪದ್ಧತಿಗನುಸರಿಸಿ ತಿಂಡಿ—ತಿನಸು, ಊಟಗಳು ವ್ಯವಸ್ಥೆಯು ಚನ್ನಾಗಿತ್ತು. ಸಿಹಿಯ ಪದಾರ್ಥಗಳೇ ಹೆಚ್ಚಾಗಿದ್ದು ಹುಳಿ, ಖಾರಗಳ ಭಾವವು ಹೆಚ್ಚಾಗಿಲ್ಲವಲ್ಲ ಎಂದು ಮಂಗಳೂರಿನ ಮಿತ್ರರು ಚೇಷ್ಟೆಯಿಂದ ಹೇಳಿದರು ಸಭೆಯ ಕೆಲಸವು ಪ್ರೇಮದಿಂದಲೂ ನಿರ್ವಿಘ್ನದಿಂದಲೂ ಕೊನೆಗಾಣಿತು.

ಕರ್ನಾಟಕ ಶಾಖೆಯ ಮುಖ್ಯಸ್ಥರಾದ ಶ್ರೀ ನೀರಲಕೇರಿ ಶ್ರೀನಿವಾಸರಾಯರು ತಮ್ಮ ಸ್ವಯಂಸೇವಕರ ಪಥವನ್ನು ಸಿದ್ಧಗೊಳಿಸಿ, ಎಲ್ಲ ಕೆಲಸವನ್ನೂ ಚೊಕ್ಕಟವಾಗಿ ಸಾಗಿಸಿದರು.

ಶ್ರೀ ಬಿ, ಆರ್, ಹರಿದಾಸರವರ ಆಮಂತ್ರಣವನ್ನು ಅಂಗೀಕರಿಸಿ ಮುಂದಿನ ಸಮ್ಮೇಲನವು ಮಂಗಳೂರಿನಲ್ಲಿ ಕೂಡುವದು ಗೊತ್ತಾಯಿತು.

ನಿರ್ಝಾಮ ಕರ್ನಾಟಕದ ಪತ್ರ.

(ನಮ್ಮ ಸ್ವಂತ ಸುದ್ದಿಗಾರರಿಂದ)

ಇಂದೂರು ಸಂಸ್ಥಾನದ ಉಪ ದಿವಾಣರಾದ ಶ್ರೀ। ಸರದಾರ ಕಿಬೆ ಇವರು ಶುಕ್ರವಾರ ೨೮ನೇ ಮೇ ದಿನ ಗುಲಬುರ್ಗೆಯ ನೂತನ ವಿದ್ಯಾಲಯಕ್ಕೆ ಭೆಟ್ಟಿ ಕೊಟ್ಟಿದ್ದರು. ಆದರ ವಾಙ್ಮಯಸೇವೆಯ ಕೀರ್ತಿಯನ್ನು ಕೇಳಿನರೆದ ಜನರೆಲ್ಲರೂ ಅವರು ವ್ಯಾಖ್ಯಾನಕೊಡದೆ ಇದ್ದ ಕಾರಣ ನಿರಾಶೆಯಾಗಿ "ಮನೆಗೆ ನಡಿಯೋ ಮಹಾರಾಯಾ" ಎಂದು ಬಂದ ದಾರಿಯಿಂದ ತಿರುಗಿದರು. ಆದರೆ ಆಭಾರ ಸ್ವೀಕರಿಸುವೆನೆಂಬ ಔಪಚಾರಿಕ ಮಾತಿನಲ್ಲಿಯೇ ಕಲಬುರ್ಗೆಯು ಮಹಾರಾಷ್ಟ್ರವೆಂದು ತಪ್ಪು ವಿಧಾನವನ್ನು ಮಾತ್ರ ಮಾಡಲಿಕ್ಕೆ ಮರೆಯಲಿಲ್ಲ. ದುರಭಿಮಾನ ಪ್ರೇರಿತವಾಗಿ ನೂತನ ವಿದ್ಯಾಲಯವು ಮರಾಠಿಯಲ್ಲಿ ಶಿಕ್ಷಣ ಕೊಡುತ್ತಿರುವ ಕ್ಷಣಕ್ಕೇನೆ ಕಲಬುರ್ಗೆಯು ಮರಾಠಿಯಾಗಬಹುದೇ? ಶರಣ ಬಸಪ್ಪನ ಭವ್ಯಗೋಪುರ ಗುಡಿ ಮತ್ತು ಅದಕ್ಕೂ ಮಿಗಿಲೆನಿಸುವ ಆತನ ವಚನಗಳು ಇಲ್ಲಿಯ ನಾಡಿನ ಜನರ ಕಿವಿಗಡಚಿಕ್ಕುವ ವರೆಗೆ ಕಲಬುರ್ಗೆಯು ಮರಾಠಿಯೆಂದು ಮನಸ್ಸಿನಲ್ಲಿ ಮಂಡಿಗೆ ತಿನ್ನುವದು ವ್ಯರ್ಥವೇ ಸರಿ. ಕಲಬುರ್ಗೆಯ ಜನಸಂಖ್ಯೆಯು ೮। ಲಕ್ಷವಿದ್ದು ಅದರಲ್ಲಿ ಮೊದಲು ೬ ಲಕ್ಷ ಲಿಂಗಾಯತರೇ ಇದ್ದಾರೆ ಅನಂತರ ಹುಟ್ಟು ಕನ್ನಡ ಮಾತಾಡುವವರೇ. ಕಲಬುರ್ಗೆಯನ್ನಾಂಗು ಬಿಟ್ಟು ಉಳಿದ ಕಡೆಯ ಬ್ರಾಹ್ಮಣರೆಲ್ಲರೂ ಕನ್ನಡವನ್ನೇ ಮಾತಾಡುತ್ತಾರೆ ಈ ಜಿಲ್ಲೆಯ ೯೦ ಸಾವಿರ ಮುಸಲ್ಮಾನರ ಹೊರ್ತು ಉಳಿದವರ ಮಾತೃಭಾಷೆಯು ಕನ್ನಡವೇ. ಮಹಮ್ಮದ ಆದಿಲಶಹನ ಕಾಲದಿಂದ ಹಳ್ಳಿಹಳ್ಳಿಗಳಲ್ಲಿ ದಪ್ತರು ಮಾತ್ರ ಮರಾಠಿಯಾಗಿರುತ್ತವೆ; ಬೈಲಾಟ ಮೊದಲಾದವು ಕನ್ನಡದಲ್ಲಿಯೇ ಆಗುತ್ತವೆ ಇವೆಲ್ಲವುಗಳನ್ನು ವಿಚಾರಿಸದೇ ಇಷ್ಟು ಕಲಬುರ್ಗೆಯು ಮರಾಠಿಯೆಂಬ ಭ್ರಾಂತಿಯನ್ನು ಬಿಡದಿರುವದೆಂದರೆ ವಸ್ತುಸ್ಥಿತಿಯ ಕಡೆಗೆ ಕಣ್ಣು ಮುಚ್ಚಿದಂತೆಯೇ ಸರಿ,

ಜಾಹೀರಾತ ಕೊಡತಕ್ಕವರೆ?

ಮೊದಲು "ಕನ್ನಡಿಗ"ನ ವ್ಯವಸ್ಥಾಪಕರಿಗೆ ತಾನಾಗಿಯೇ ಬಂದ ಈ ಪತ್ರವನ್ನು ಓದಿರಿ. ಆ ಮೇಲೆ ಯಾವ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತನ್ನು ಕೊಡತಕ್ಕದೆಂಬುದನ್ನು ನೀವೇ ನಿಶ್ಚಯಿಸರಿ.

ಕುಲಕರ್ಣಿ ಬ್ರದರ್ಸ ಮೋಟಾರ ಡ್ರೈವಿಂಗ ಇನ್ ಸ್ಟಿಟ್ಯೂಶನ್ ೪೯೮ ಶನವಾರ ಪೇಠ ಪುಣೆ ಶಹರ

ತಾರೀಖು ೨೮ ಜುಲೈ

ರಾ ರಾ ವ್ಯವಸ್ಥಾಪಕ 'ಕನ್ನಡಿಗ' ಬಾಗಲಕೋಟೆ ಇವರಿಗೆ—ವಿ ವಿ ನಾನು ನಿಮಗೆ ಮುದ್ದಾಂ ಪತ್ರ ಬರೆಯಲು ಉದ್ಯುಕ್ತನಾಗಿದ್ದೇನೆ ಯಾಕಂದರೆ ನಿಮ್ಮ 'ಕನ್ನಡಿಗ'ನಲ್ಲಿ ಪ್ರಸಿದ್ಧವಾದ ನಮ್ಮ ಜಾಹಿರಾತಿನ ಪರಿಣಾಮ ಒಳ್ಳೇ ಚನ್ನಾಗಿ ಆಗಿದಂಬುದು ನಮಗೆ ಕಂಡು ಬರುತ್ತದೆ ಅದ್ದರಿಂದ ನಮ್ಮ ಮೊದಲಿನ ಸಣ್ಣ ಜಾಹೀರಾತನ್ನು ತೆಗೆದು, ಅದರ ಬದಲಾಗಿ ಈ ಪತ್ರದ ಜೊತೆಯಲ್ಲಿ ಕಳುಹಿಸಿದ ದೊಡ್ಡ ಜಾಹಿರಾತನ್ನು ನಿಮ್ಮ ಪತ್ರದ ಅರ್ಧಪುಟದಲ್ಲಿ ಹಾಕಬೇಕಾಗಿ ಬೇಡಿಕೆ ಅದರ ಬೆಲೆ ಏನಾಗುವದು ಅದನ್ನು ತಿಳಿಸಬೇಕು ಕೊಡುವೆನು

ಜಿ. ಎಚ್. **ಕುಲಕರ್ಣಿ ಮ್ಯಾನೇಜರ,**

"ಕನ್ನಡಿಗ"ದಲ್ಲಿ ನಿಮ್ಮ ಜಾಹೀರಾತನ್ನು ಕೊಟ್ಟು ಗಿರಾಕಿಗಳನ್ನು ಪಡೆದು, ಲಾಭ ಹೊಂದಿರಿ. ತಡಮಾಡದೆ ಈ ದಿನವೇ ಪತ್ರ ಬರೆಯಿರಿ.

—ವ್ಯವಸ್ಥಾಪಕ.

ವರ್ಗೀಕೃತ ಪ್ರಕಟನೆಗಳು

ಇದೊಂದು ಹೊಸವಾದರಿಯನ್ನು ಕನ್ನಡಿಗರಿಗಾಗಿ 'ಕನ್ನಡಿಗ'ನು ಪ್ರಾರಂಭಿಸಿರುವನು ಈ ಪ್ರಕಟನೆಗಳಲ್ಲಿ ಜನರು ತಮಗೆ ಬೇಕಾದ ಯಾವ ವಸ್ತುಗಳ ಬಗ್ಗೆಯೂ ಜಾಹೀರಾತನ್ನು ಕೊಡಬಹುದು. ಉದಾಹರಣಾರ್ಥವಾಗಿ ವಿದ್ಯಾರ್ಥಿಗಳು ಹಳೇ ಗ್ರಂಥಗಳಿಗಾಗಿ; ಸಾಮಾನುಗಳನ್ನು ಕಳೆದುಕೊಂಡವರು ದೊರಕಿಸಿಕೊಳ್ಳುವದಕಾಗಿ; ಹಳೇ ಹೊಸ ಸಾಮಾನವನ್ನು ಮಾರತಕ್ಕವರು ಗಿರಾಕಿಗಳನ್ನು ದೊರಕಿಸಲಿಕ್ಕಾಗಿ; ಗಿರಾಕಿಗಳು ಸಾಮಾನುಗಳ ಒಡೆಯರನ್ನು ಶೋಧಿಸುವದಕ್ಕಾಗಿ; ಭಂಡವಾಲು ಬೇಕಾದವರೂ ಮನೆ ಬಾಡಿಗೆ ಕೊಡತಕ್ಕವರೂ, ಅಥವಾ ಬಾಡಿಗೆಯಿಂದ ತೆಗೆದು ಕೊಳ್ಳುವವರೂ ತಮ್ಮ ಇಷ್ಟಪೂರ್ತಿಗಾಗಿ, ಇತ್ಯಾದಿ; ಇತ್ಯಾದಿ ಈ ಪದ್ಧತಿಯು ಇಂಗ್ಲೀಷ ಪತ್ರಿಕೆಗಳಲ್ಲೆಲ್ಲ ಲೋಕಪ್ರಿಯವಾಗಿದೆ ಕನ್ನಡದಲ್ಲಿ ಯಾದರೂ, ಲೋಕಪ್ರಿಯವಾಗುವದೆಂದು ನಾವು ನಂಬುತ್ತೇವೆ ಈ ಬಗ್ಗೆ ಕೆಳಗೆ ಕಾಣಿಸಿದಂತೆ ನಿಯಮಗಳಿರುತ್ತವೆ

೨೦ ಶಬ್ದಗಳಿಗೆ ೧ ರೂ.

ಮುಂದಿನ ಪ್ರತಿಯೊಂದು ಶಬ್ದಕ್ಕೆ ೧ ಆಣೆ

ಪ್ರಕಟನೆಯೊಂದಿಗೆ ಹಣವು ಮುಂಗಡವಾಗಿ ಬರಬೇಕು.

ಜಾಹೀರಾತದಾರರು ಸಂಪೂರ್ಣ ಹೆಸರು ಮತ್ತು ವಿಳಾಸ ಕಳುಹಿಸಿಕೊಡಬೇಕು. ಅವಶ್ಯವಿದ್ದರೆ ಮಾತ್ರ ಇವು ಪ್ರಕಟಿಸಲ್ಪಡುವವು.

ಹೆಸರು ವಿಳಾಸಗಳನ್ನು ಪ್ರಕಟಿಸಲು ಇಚ್ಛೆ ಇಲ್ಲದವರಿಗೆ ಒಂದು ಸಂಖ್ಯೆಯು ಕೊಡಲ್ಪಡುವದು "ವಿಳಾಸ, ಸಂಖ್ಯೆ...... ಕನ್ನಡಿಗ" ಇದಕ್ಕೆ ಸಹ ಬೆಲೆ ಕೊಡಬೇಕಾಗುವದು.

ಸ್ಥಳೀಕರು ನಮ್ಮ ಕಾರ್ಯಾಲಯಕ್ಕೆ ಬಂದು ಉತ್ತರವನ್ನು ನೋಡಿಕೊಳ್ಳಬೇಕು. ಪರಸ್ಥಳದವರಿಗೆ ಪೋಸ್ಟಿನಿಂದ ಅಂಚೇ ವೆಚ್ಚ ಪ್ರತ್ಯೇಕವಿಲ್ಲದೆ ಉತ್ತರಗಳು ಕಳಿಸಲ್ಪಡುವವು ಆದರೆ ಪತ್ರವ್ಯವಹಾರ ನಡೆದರೆ, ಅಂಚೇವೆಚ್ಚ ಕಳಿಸಬೇಕು ಉತ್ತರಗಳು ಪರಸ್ಥಳದವರಿಗೆ ದೊರೆಯದೇ ಇದ್ದ ಪಕ್ಷದಲ್ಲಿ ನಾವು ಜವಾಬದಾರರಲ್ಲ. ನಾಲ್ಕಾಣೆ 'ಪೋಸ್ಟೇಜ' ಕೊಟ್ಟಲ್ಲಿ ರಜಿಸ್ಟರ ಮೂಲಕ ಕಳಿಸುವೆವು. ಜಾಹೀರಾತಗಳಿಗೆ ಉತ್ತರ ಬರೆಯುವವರು ಸ್ಪಷ್ಟವಾಗಿಯೂ ಶುದ್ಧವಾಗಿಯೂ ಕೆಳಗೆ ಕಾಣಿಸಿದಂತೆ ಬರೆಯಬೇಕು:—"ವಿಳಾಸ ಸಂಖ್ಯೆ...... ಪ್ರಕಟನೆ ಶಾಖಾ, ಕನ್ನಡಿಗನ ಕಾರ್ಯಾಲಯ ಬಾಗಲಕೋಟೆ" ವಿಳಾಸಸಂಖ್ಯೆಗಳನ್ನು ಸ್ಪಷ್ಟವಾಗಿ ಬರೆಯುವದರ ಕಡೆಗೆ ಎಲ್ಲರೂ ಲಕ್ಷ್ಯಪೂರೈಸತಕ್ಕದ್ದು.

ಬೇಕಾಗಿದ್ದಾರೆ.

ಮಂಗಳೂರ ಕಡೆಯ ನುರಿತಂಥ ಮುದ್ರಕರು ಬೇಕಾಗಿದ್ದಾರೆ ಯೋಗ್ಯತೆಯ ಪ್ರಕಾರ ಸಂಬಳ.

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ.

ಚಲುವೆಯಾದ ಬ್ರಾಹ್ಮಣ ಕನ್ಯೆ ಬೇಕಾಗಿದೆ; ಸುಶಿಕ್ಷಿತಳಿರಬೇಕು. ವರನ ವಯಸ್ಸು ೨೪ ಉತ್ಪನ್ನವು ಚನ್ನಾಗಿದೆ

ವಿಳಾಸ ಸಂಖ್ಯೆ ೯ "ಕನ್ನಡಿಗ"

ಕರ್ನಾಟಕದಲ್ಲಿ ಸ್ಥಾಪಿತವಾದ ಹೊಸ ಜಾಯಿಂಟ ಸ್ಟಾಕ ಕಂಪನಿಗೆ ಪಾಲುಗಾರರನ್ನು ಕೂಡಿಸುವವರು ಬೇಕಾಗಿದ್ದಾರೆ ತಿಂಗಳಿಗೆ ೧೦೦ರೂ ಸಂಬಳ ಅಥವಾ ಕಮಿಶನ್ ವಿಳಾಸ ಸಂಖ್ಯೆ ೩ "ಕನ್ನಡಿಗ"

ರಿಷ್ಟವಾಚದ ಹಳೇ ಬಂಗಾರ ನೀರಿನ ಕಡಗ ಮಾರತಕ್ಕದ್ದಿದೆ. ಬೆಲೆ ೩-೮-೦ ವಿಳಾಸ ಸಂಖ್ಯೆ ೫ "ಕನ್ನಡಿಗ"

ಸ್ಟೇಶನ್ನ ಶಹರ, ಹಳ್ಳಿಗಳಲ್ಲಿ ಗ್ರಂಥಗಳನ್ನು ಮಾರಾಟಮಾಡಲು ಉತ್ಸಾಹಿ ಪ್ರಾಮಾಣಿಕ ತರುಣರು ಬೇಕಾಗಿದ್ದಾರೆ. ದಳ್ಳಾಳಿ ದೊರೆಯುವದು ವಿಳಾಸ— "ಸ್ವಧರ್ಮ" ಧಾರವಾಡ

ಡೇರೆ (Tents) ಗಳಿಗೆ ಉಪಯೋಗಿಸುವ ಬಾಜು ಗೋಡೆ (Side walls) ಗಳು ಹಳೇವು ಮಾರತಕ್ಕವಿವೆ

ಸಂಖ್ಯೆ ೭ ವಿಳಾಸ "ಕನ್ನಡಿಗ"

ಮುದ್ರಣದ

ಯಂತ್ರ!

ಸಿಂಗಲ್ ರಾಯಲ್ ಆಕಾರದ ಮುದ್ರಣ ಯಂತ್ರವನ್ನು ಮಾರತಕ್ಕದ್ದಿದೆ. ಯಂತ್ರವು ಉತ್ತಮ ಸ್ಥಿತಿಯಲ್ಲಿದ್ದು, ಕೆಲಸವನ್ನು ಚನ್ನಾಗಿ ಕೊಡುತ್ತದೆ. ಹೆಚ್ಚಿನ ಸಂಗತಿಗಳಿಗಾಗಿ ಬರೆಯಬಹುದು:—

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ.

ಶ್ರೀಕೃಷ್ಣ ಸಂಗೀತ ಕನ್ನಡ ನಾಟಕ ಮಂಡಲವು.

ತಾಜ ನಾಟಕಶಾಲೆಯ ಮನೆ ವೆಂಕಟಪೇಟೆ, ಬಾಗಲಕೋಟೆ

ಗುಳೇದಗುಡ್ಡ ಶ್ರೀಮತಿ ಗಂಗೂಬಾಯಿಯವರ ಈ ಹೊಸ ನಾಟಕ ಕಂಪನಿಯಲ್ಲಿ ಅಭಿನಯಿಸಲು ಸುಸ್ವರೂಪ, ಸುಶೀಲ, ಸುಶಿಕ್ಷಿತ ಹಾಗೂ ಹಾಡು ಬಲ್ಲ ನಾಟ್ಯಕಲಾಭಿಜ್ಞರಾದ ಬಾಲ ಬಾಲಿಕೆಯರೂ, ಸ್ತ್ರೀ-ಪುರುಷರೂ

ಬೇಕಾಗಿದ್ದಾರೆ.

ಅದೇ ಪ್ರಕಾರ ಪೆಟ್ಟಿಗೆ ಹಾಗೂ ತಬಲಾ ಬಾರಿಸುವದರಲ್ಲಿ ನಿಪುಣರಾದವರೂ ಬೇಕಾಗಿದ್ದಾರೆ. ಇಚ್ಛೆಯಿದ್ದವರು ಸಮಕ್ಷಮ ಇಲ್ಲವೆ ಪತ್ರದ್ವಾರದಿಂದ ವಿಚಾರಿಸಿಕೊಳ್ಳಬೇಕು.

—**ವ್ಯವಸ್ಥಾಪಕ**

'ಕನ್ನಡಿಗ'ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ. ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೯೦೦೦ ಯಾರ್ಡ ಕೈನೂಲು
ಪರಸ್ಥಳದವರಿಗೆ	ಮನಿಯಾರ್ಡರದಿಂದ ೧-೧೩-೦ ವಿ. ಪಿ. ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ ಯಾರ್ಡ ಕೈನೂಲು
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ-	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦ ,, ವಿ. ಪಿ ಯಿಂದ ೩-೧-೦
ಸರಕಾರ, ಮುನಸಿ ಪಾಲಿಟಿ, ಲೋಕಲ್ ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ. ಯಿಂದ ೫-೧-೦

ಬಿಡಿ ಸಂಚಿಕೆಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ. —**ವ್ಯವಸ್ಥಾಪಕ**

ಗೃಹಕೃತ್ಯದ ನೋಟೀಸು.

ಗಲಗಲಿ ಪಾಂಡುರಂಗಾಚಾರ್ಯ ಕಟ್ಟಿ ಎಂಬುವರು ಕಳೆದ ಜುಲೈ ೨೮ ನೇ ತಾರೀಖಿನಲ್ಲಿ ವಿಜಾಪೂರದಲ್ಲಿ ಮೃತಪಟ್ಟಿರುತ್ತಾರೆ. ಇವರಿಗೆ ಕೆಳಗೆ ಬರುವ ಕಮಲಾಬಾಯಿ ಆದ ನಾನು ೨ ನೇ ಹೆಂಡತಿ ಆಗಿಯೂ ವೆಂಕುಬಾಯಿ ಎಂಬುವರು ೧ ನೇ ಹೆಂಡತಿ ಆಗಿಯು ಇರುತ್ತೇವೆ ೧ನೇ ಹೆಂಡತಿಯಾದ ವೆಂಕುಬಾಯಿ ಎಂಬುವರು ನಮ್ಮ ಯಜಮಾನರು ತೀರಿಕೊಂಡ ಬಳಿಕ ಯಾವ ವಿಶ್ವಾಸವಿಲ್ಲದವರಾಗಿಯೂ ನನಗೆ ಎಲ್ಲ ಭಾಗದಲ್ಲಿಯೂ ನಮ್ಮ ಯಜಮಾನರ ಆಸ್ತಿ ವಿಷಯದಲ್ಲಿ ನಷ್ಟ ಪಡಿಸಲು ಅನೇಕ ಜನಗಳ ಸಲಹೆಯಿಂದ ನನಗೆ ಮೋಸಪಡಿಸಬೇಕೆಂದಿರುತ್ತಾರೆ. ಅಲ್ಲದೇ ಇವರು ನನ್ನ ಸಮಕ್ಷಮ ವಿಜಾಪೂರದಲ್ಲಿ ನಮ್ಮ ತಂದೆ ಮತ್ತು ಚಿಕ್ಕಪ್ಪನವರು ಇವರ ಸೋದರಮಾವನವರಾದ ಹಣಮಂತಾಚಾರ್ಯರ ಸಮಕ್ಷಮ ಒಬ್ಬ ಹುಡಗನನ್ನು ದತ್ತಕ ಮಾಡಿಕೊಂಡು ನನ್ನನ್ನು ಹಾಳು ಮಾಡುತ್ತೇನೆಂದು ಹೇಳಿರುತ್ತಾರೆ. ೧ ನೇ ಹೆಂಡತಿ ವೆಂಕುಬಾಯಿಯವರು ನನ್ನ ಸಮ್ಮತಿ ಇಲ್ಲದೆ ದತ್ತಕ ತೆಗೆದುಕೊಳ್ಳಕೂಡದು. ಯಜಮಾನರ ಆಸ್ತಿ ಪೈಕಿ (೨) ಜಮೀನುಗಳು ವ್ಯಾಜ್ಯದಲ್ಲಿ ಬಿದ್ದಿದೆ. ಇದೆಲ್ಲ ಹೋಗಲಾಗಿ ೮|೧೦ ವರ್ಷ ಆದ ನಂತರ ತನ್ನ ಭಾಗದ ಆಸ್ತಿಗೆ ದತ್ತಕ ಮಾಡಿಕೊಳ್ಳಬಹುದು. ಶಿವಾಯ ಈಗ ಮಾಡಿಕೊಂಡದ್ದಾಗಲೀ ಅಥವಾ ದತ್ತಕಕ್ಕಾಗಿ ಬಂದದ್ದಾಗಲಿ ಇದು ನಿರ್ಮಿಸುವದಲ್ಲ. ಮುಂದೆ ಸಂಭವಿಸುವ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಾರೆ. ಪಂಡಿತ ತಿಳಿಯುವದು.

ಕಮಲಾಬಾಯಿ.

ಹಳ್ಳಿಯಲ್ಲಿ

ಹಾಯಸ್ಕೂಲ.

ಹಳ್ಳಿಗಳ ಸುಧಾರಣೆಯನ್ನೇ ತನ್ನ ಉದ್ದೇಶವನ್ನಾಗಿ ಮಾಡಿಕೊಂಡ ಐನಾಪೂರದ ಕರ್ನಾಟಕ ರೂರಲ್ ಎಜ್ಯುಕೇಶನ್ ಸೋಸಾಯಿಟಿಯು ಐನಾಪೂರದಲ್ಲಿ ನಡೆಯಿಸಿದ ಇಂಗ್ಲಿಷ ಸಾಲೆಯು ಈ ಜೂನ ತಿಂಗಳಿಂದ ಹಾಯಸ್ಕೂಲವಾಯಿತು. ಮ್ಯಾಟ್ರಿಕ್ ಪರೀಕ್ಷೆಯ ವರೆಗೆ ಉತ್ತಮ ರೀತಿಯಿಂದ ಶಿಕ್ಷಣ ಕೊಡುವ ವ್ಯವಸ್ಥೆಯು ಮಾಡಲ್ಪಟ್ಟಿದೆ. ಐನಾಪೂರವು ಕುಡಚಿ ಸ್ಟೇಶನದಿಂದ ೪ ಮೈಲಿನ ಮೇಲೆ ಕೃಷ್ಣಾ ನದಿಯ ದಂಡೆಗೆ ಇರುತ್ತದೆ. ಅಲ್ಲಿಯ ಹವೆ ಮತ್ತು ನೀರು ಅತ್ಯಂತ ಆರೋಗ್ಯಕರ ಅವೆ. ಲಿಂಗಾಯತ ವಿದ್ಯಾರ್ಥಿಗಳ ಸಲುವಾಗಿ ಬೋರ್ಡಿಂಗ ಇದ್ದು ಅಲ್ಲಿ ಪ್ರತಿ ತಿಂಗಳಿಗೆ ೮ ರೂಪಾಯಿಗಳಿಗಿಂತಲೂ ಕಡಿಮೆ ಖರ್ಚು ಬರುತ್ತದೆ. ಜುಲೈ ತಿಂಗಳಿಂದ ಜೈನ ಬೋರ್ಡಿಂಗ ಸುರುವು ಆಗುವದು. ಬ್ರಾಹ್ಮಣ ಮುಂತಾದ ಉಳಿದ ಜಾತಿಯ ಹುಡುಗರು ಮುಂದಕ್ಕೆ ತಿಳಿಸಿದರೆ ಅವರ ಊಟ ಮುಂತಾದವುಗಳ ಬಗ್ಗೆ ವ್ಯವಸ್ಥೆ ಮಾಡಲ್ಪಡುವದು. ಇಲ್ಲಿಯ ವಾಸವು ಕಡಿಮೆ ಖರ್ಚಿನದೂ ಶಾಂತತಾಮಯವೂ ಇದ್ದುದರಿಂದ ಎಳೇ ವಯಸ್ಸಿನ ಹುಡುಗರಿಗೆ ಮ್ಯಾಟ್ರಿಕ ಪರೀಕ್ಷೆಯ ವರೆಗೆ ಶಿಕ್ಷಣ ಪಡೆಯಲು ಹಳ್ಳಿಯೇ ಯೋಗ್ಯವಾದ ಸ್ಥಳವು. ನಮ್ಮ ಮಾತೃಭೂಮಿಯ ಜೀವವು ಹಳ್ಳಿಗಳಲ್ಲಿಯೇ ಇರುವದರಿಂದ ಬಾಲಕರನ್ನು ಚಿಕ್ಕ ವಯಸ್ಸಿನಲ್ಲಿ "ತಂದೆ"ಗಿಂತ "ತಾಯಿಯ" ಹತ್ತರವೇ ಇಡುವದು ಬೇಕಲ್ಲವೇ? ಹೆಚ್ಚಿಗೆ ಮಾಹಿತಿ ಪತ್ರದಲ್ಲಿ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಬಿ ಎಸ್. ದೇಶಪಾಂಡೆ ಹೆಡ್ ಮಾಸ್ತರು
ಕೆ. ಆರ್. ಇ. ಸೊಸಾಯಿಟಿಯ ಹೈಸ್ಕೂಲ,
ಐನಾಪೂರ (ಬೆಳಗಾಂವ)

ಬೇಕಾಗಿದೆ.

ಉತ್ತಮ ಫೋಟೋಗ್ರಾಫಿ ಕೆಲಸ ಬಲ್ಲಂತಹ, ಪ್ರತಿಯೊಂದು ಕೆಲಸದ ಮಾಹಿತಿಯುಳ್ಳಂತಹ ಮತ್ತೂ ಸ್ಟುಡಿಓದಲ್ಲಿ ಕೆಲಸ ಮಾಡಿದಂತಹ ಅನುಭವಿಕರು ಬೇಕು. ಪಗಾರ ಯೋಗ್ಯತೆಯ ಮೇಲೆ! ಮುಂದೆ ವರ್ಷಕ್ಕೆ ೩ ರು. ಬಡತಿ ಸಿಗುವದು. ಕನ್ನಡಿಗರು ಯಾರಾದರೂ ಇದ್ದರೆ ಸರ್ಟೀಫಿಕೆಟ ಸಹಿತ ಅರ್ಜಿ ಕಳಿಸಬೇಕು.

ಬಿ. ಜಿ. ಚಿಮ್ಮಲಗಿಕರ,
ಫೋಟೋಗ್ರಾಫರ ಪುತ್ಲಿಬಾವಲಿ ಹೈದ್ರಾಬಾದ ದಕ್ಷಿಣ.

ಲೆವರಿನ ಗಡಿಯಾರಗಳು.

ಲೆವರಿನ ಕೈ ಗಡಿಯಾರ ರೂ. ೯.
ಲೆವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅವೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಅದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಬೋ ವಾಚ ಕಂ. (ಇಂಡಿಯಾ.) ಬಾಂಬೆ. ಕೆ ೪.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರ:—ಜಂಬುಲಿಂಗಪ್ಪಾ ಜಾಲವಾದಿ.
ಸ್ಟೇಶನರ್ಸ ಬಾಗಲಕೋಟೆ.
ರಾಜವೈದ್ಯ ನಾರಾಯಣಜಿ ಕೇಶವಜಿ,
೫೭. ಚೀನಾಬಜಾರ್, ಮದ್ರಾಸು.

ಯಾವದೇ {ಆಕಾರದ, ನಕ್ಷೆಯ, ನಂಬರಿನ} ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಬಗ್ಗೆ ನಾವು ಈ ದಾವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ಹೊಸ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂ. ೭

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— ಸ್ವಾನ ಹೌಸ. ಪಿ. ಬಿ. ೫೦೮. ಪಿ. ಟಿ. ಮದ್ರಾಸ

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೋಕೆಟ್ ವೊಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಪಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವೊಚ್ ಗಡಿಯಾರಗಳಿಗೆ ಕೂಡಿ ಒಂದೇ ರೂಪಾಯಿ ೫

ಕಾನ್ಸ್ಟನ್ ವಾಚ್ ಕಂ ಪಿ, ಬಿ. ಮದ್ರಾಸ. ೨೬೫

ಕಿರ್ಲೋಸ್ಕರ

ಕಬ್ಬಿಣ ನೇಗಿಲಗಳು.

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ. ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ. ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗ್ತುವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. } ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ಸ್ಟಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲೆಕ್ಟ್ರಿಕ್ ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇರಿ) ೧ ಪೌಂಡಿಗೆ ರೂ. ೧-೬-೦
೨ ನೇ ,, ,, ,, ರೂ. ೧-೩-೦

ದಿ ಸ್ಟಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ॥ ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಒಡ್ಡಿ ಮುಸ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಪಿ. ಸಿ. ನಂ. ೭೭೩೭ ಸಯ್ಯದ ಅಲ್ಲಿ ಅಸಗರ ಟೆಲ್‌ಗ್ರಾಫ ಸುಪರಿಟೆಂಡೆಂಟ್ ಸಕ್ರೆಟರಿಯೆಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಪ. ಸಿ. ನಂ ೧೯೬೨ ನಾರಾಯಣ ವಿಠ್ಠಲ ಟೋಣಾಕರ. ಕೇರ್ ಆಫ್ ಡಿ. ಈ. ಪುರಾಣಿಕ ೧೧೭ ನಿಹಾಲಪುರ ಇಂದೂರ. ೧೦೦೦

(೩) ಎಲ್ ಪಿ. ಸಿ. ನಂ ೩೯೧ ರಾಮಚಂದ್ರ ಅನಂತ ಶಿರೋಳೆ. ಡಿವಿಜನಲ್ ಫಾರೆಸ್ಟ ಆಫೀಸರ ಧಮತ್ರಿರಾ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೭ ಕೇ. ಜಿ. ಘನಶ್ಯಾಂ ಪೋ ವ್ಯಾಪಾರಸ್ಥ ಬ್ರಾಹ್ಮಣ ಸಿಲೋನ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೭೩೪ ಎಸ್. ಜಿ. ಚವರೆ ಅಶಿಸ್ಟಂಟ ಸ್ಟೇಶನ್ ಮಾಸ್ತರ ತೆಲಗಿ. ಜಿಲ್ಲಾ ವಿಜಾಪುರ. ರೂ ೧೦೦೦

ಬಿ. ಎಸ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ)

ಜೀವ ವಿಮೆಯ ಕಾರ್ಯದಲ್ಲಿ ಅದ್ಭುತವಾದ ಜಯವು !

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ರೂಪಾಯಿ ಲಾಭ ಹಂಚಿದೆ.

ದಿ ಜನರಲ್ ಅಶ್ಯೂರನ್ಸ ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ಸಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉಳಿತಾಯವಾದದ್ದು ರೂ ೧,೮೯,೦೦೦

ಏಜಂಟರು ಬೇಕು! ಧಾರಾಳವಾದ ಕಮೀಶನ್!

ಎಸ್. ಕಬ್ಬೂರ ಜಿ. ಎ. ಎಫ್. ಎಸ್. ಅಜಮೀರ.

Apply to:- H. Ramachandra Rao
Branch Secretary, opposit Minto Hospitle,
Bangalore City.

Agents at Bellary & Hubli.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರ ನಂ. ೩ ೧೯೪೭ ವಾ ಚಂದಾ ೧—೧೩—೦ ಮಾತ್ರ

(ಇದರಲ್ಲಿ ಕನ್ನಡ ನವಜೀವನದ ಸಮಾಚಾರ ಸಂಗ್ರಹವಾಗಿದೆ.)
यद्यत् परवशं दुःखं यद्यदात्मवशं सुखम् ॥ — मनु
ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ } ಬಾಗಲಕೋಟೆ ರವಿವಾರ ಮಿತಿ ಜೇಷ್ಠ ಶುದ್ಧ ೧೨ ಶಕೆ ೧೮೪೯ ಸ. ೧೯೨೭ { ಸಂಚಿಕೆ ೧೧
Date 12 — 6 — 1927.

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು, ಅವುಗಳೊಳಗಿನ ಕಟ್ಟುಜಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ಸಾಕ್ಷಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಯಾವಾಗಲೂ ಉತ್ತೀರ್ಣರಾಗುತ್ತಾರೆ. ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳ ಸುಲಭವಾಗಿದ್ದು, ಮನಸಿಗೆ ಸೊಗಸುಂಟುಮಾಡುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೇಳಿರಿ!

ವಿಳಾಸ— ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಿಂಡೀಕರ ವಾಡೆ ಪುಣೆ ಶಹರ.

S C Narayanacharya & Co
Chaukhamba Benares City

SUNACO.
BENARES Y.

ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ ಜರಿಕಣ, ಜರಿಸೀರೆ, ಕಾಶ್ಮೀರ್ ಶಾಲು, ತಂಬೂರಿ ರುದ್ರಾಕ್ಷಿ, ಕಸ್ತೂರಿ ಲಿಂಗಗಳು, ಸ್ಫಟಿಕಮಣಿ ಮುಂತಾದ ಮಾಲುಗಳ ಕ್ಯಾಟಲಾಗ ಕೇಳಿದವರಿಗೆ ಇನಾಮಾಗಿ ಕಳಿಸಲಾಗುತ್ತದೆ
ವಿಳಾಸ ಶಿ. ಸಿ. ನಾರಾಯಣಾಚಾರ್ಯ
ಕಂಪನಿ ಚೌಖಾಂಬಾ ಕಾಶಿ

ನಪುಂಸಕತ್ವ

ಧಾತು ವಿಕಾರ, ಸ್ವಪ್ನಾವಸ್ಥೆ, ಅಶಕ್ತತೆ ಇತ್ಯಾದಿಗಳಮೇಲೆ ಖಂಡಿತವಾಗಿ ಗುಣಕೊಡುವ ಮತ್ತು ಕಡೆತನಕ ಬಾಳುವ ದಿವ್ಯ ಔಷಧಿ! ಒಂದೇ ಗುಳಿಗೆ!!

ವಿಶೇಷ ಮಾಹಿತಿ ಪತ್ರದ್ವಾರ ತಿಳಿಯಿರಿ.

ವಾದಿರಾಜ ಜಹಾಗೀರದಾರ.
ಮು. ಪೋ. ಇಳಕಲ್ಲ. (ವಿಜಾಪುರ)

ಐತಿಹಾಸಿಕ ದೃಷ್ಟಿಯಿಂದ

ಶ್ರೀ ಟೀಕಾಚಾರ್ಯರ ಚರಿತ್ರೆಯು.

ಶ್ರೀಮನ್ಮಧ್ವಾಚಾರ್ಯರ ಭಾಷ್ಯಗಳಿಗೆ ಟೀಕೆಯನ್ನು ಬರೆದ ಜಗದ್ವಿಖ್ಯಾತರಾದ ಶ್ರೀ ಜಯತೀರ್ಥ ಸ್ವಾಮಿಗಳವರ ಎಂದರೆ ಶ್ರೀಮಟ್ಟೀಕಾಚಾರ್ಯರ ಚರಿತ್ರೆಯನ್ನು ಐತಿಹಾಸಿಕ ದೃಷ್ಟಿಯಿಂದ ಬರೆಯಬೇಕೆಂದು ನಿಶ್ಚಯಿಸಿದ್ದೇನೆ. ಈ ಚರಿತ, ಸಂಶೋಧನಕ್ಕೋಸ್ಕರವಾಗಿಯೇ ಮೊನ್ನೆ ಮಂಗಳವೇಢೆಗೆ ಹೋಗಿದ್ದೆನು ಅಲ್ಲಿ ಉಪಲಬ್ಧವಾಗಿರುವ ಐತಿಹಾಸಿಕ ಸಂಗತಿಗಳಿಂದ ಇವರ ಚರಿತ್ರೆಯ ಮೇಲೆ ಹೇಗೆ ಪ್ರಕಾಶ ಬೀಳುತ್ತದೆಂಬುದನ್ನು ವ್ಯಕ್ತಪಡಿಸುವದೇ ಈ ಲೇಖನದ ಮುಖ್ಯವಾದ ಉದ್ದೇಶವಾಗಿದೆ.

ಶ್ರೀಮನ್ಮಧ್ವಾಚಾರ್ಯರ ನಿರ್ಯಾಣ ಕಾಲವು ಶಾ. ಶಕ. ೧೨೦೧ ಎಂದು ಪ್ರಾಯಶಃ ನಿರ್ವಿವಾದವಾಗಿದೆ ಈ ಕಾಲವನ್ನೇ ಕ್ಷಣಹೊತ್ತು ವಾದಕ್ಕೋಸ್ಕರ ನಿಜವೆಂದು ಇಟ್ಟುಕೊಂಡು ಹೊರಟರೆ, ಉತ್ತರಾದಿ ಪೀಠವನ್ನು,

ಪದ್ಮನಾಭತೀರ್ಥರು ೭ ವರ್ಷ ಆರೋಹಣ ಮಾಡಿದ್ದರು.
ನರಹರಿತೀರ್ಥರು ೯ ,, ,,
ಮಾಧವತೀರ್ಥರು ೧೬ ,, ,,
ಅಕ್ಷೋಭ್ಯತೀರ್ಥರು ೧೫ ,, ,,

ಎಂದು ಶ್ರೀಮಾನ್ ಕಮಲಾಪೂರ ಭೀಮರಾಯರು ತಮ್ಮ "ಕಥಾ" ಎಂಬ ಪುಸ್ತಕದಲ್ಲಿ ಹೇಳಿದ್ದಾರೆ. ಅರ್ಥಾತ್ ಅಕ್ಷೋಭ್ಯತೀರ್ಥರ ನಿರ್ಯಾಣ ಕಾಲವು ಶಾ ಶ ೧೨೮೮ ಎಂದು ನಿಷ್ಪನ್ನವಾಗುತ್ತದೆ. ಶ್ರೀ ಅಕ್ಷೋಭ್ಯತೀರ್ಥರ ನಂತರ ಉತ್ತರಾದಿ ಪೀಠವನ್ನು ಆರೋಹಣ ಮಾಡಿದವರೆಂದರೆ ನಮ್ಮ ಚರಿತ್ರ ನಾಯಕರಾದ ಶ್ರೀಮಟ್ಟೀಕಾಚಾರ್ಯರೇ ಸರಿ ಇವರು ಆರೋಹಣ ಮಾಡಿದ ಕಾಲವೆಂದರೆ, ಶಾ, ಶ. ೧೨೮೮ (ಕ್ರಿ. ಶ. ೧೩೬೬) ಈ ಕಾಲದಲ್ಲಿ ಕರ್ನಾಟಕದ ರಾಜಕೀಯ ಪರಿಸ್ಥಿತಿಯು ಬಹು ವಿಚಿತ್ರವಾಗಿತ್ತು. ಕ್ರಿ. ಶ. ೧೩೧೮ ರಲ್ಲಿ ಅಲ್ಲಾವುದ್ದೀನನ ಸಂಗನಾದ ಮಲಿಕಕಾಫರನು ದೇವಗಿರಿ ಯಾದವ ಅರಸನಾದ ರಾಮಚಂದ್ರರಾಯನ ಅಳಿಯನಾದ ಹರಪಾಲನನ್ನು ಕ್ರೂರತನದಿಂದ ಕೊಲ್ಲಿಸಿ ದೇವಗಿರಿ ಯಾದವ ಸಾಮ್ರಾಜ್ಯವನ್ನು ವಿಧ್ವಂಸಮಾಡಿದ್ದನು (ಆಗ್ಗೆ ಗೋದಾವರಿಯ ತನಕ ಕನ್ನಡ ಭಾಷೆಯು ಪ್ರಚಾರದಲ್ಲಿದ್ದಿತು.) ತುಂಗಭದ್ರಾ-ಗೋದಾವರಿ ಈ ನದಿಗಳ ಮಧ್ಯದಲ್ಲಿರುವ ಈ ಉತ್ತರ ಕರ್ನಾಟಕವು ಅರಾಜಕ ಸ್ಥಿತಿಯಲ್ಲಿತ್ತು. ಈ ಕಾಲಕ್ಕೆ ಶ್ರೀಮಟ್ಟೀಕಾಚಾರ್ಯರು ಉತ್ತರಾದಿ ಪೀಠವನ್ನು ಆರೋಹಣ ಮಾಡಿದರು. ಆ ಕಾಲಕ್ಕೆ ಇವರು ೨೫ ವರ್ಷ ವಯಸ್ಸಿನವರು ಇದ್ದರೆಂದು ಲೋಕವಾರ್ತೆಯಿರುತ್ತದೆ. ಅರ್ಥಾತ್ ಇವರು ಕ್ರಿ ಶ. ೧೩೪೧ ರಲ್ಲಿ ಅವತರಿಸಿದರೆಂದು ವ್ಯಕ್ತವಾಗುತ್ತದೆ ಜನರು ಹೇಳುವ ದಂತಕಥೆಗಳಿಂದ ಇವರ ಜನ್ಮಸ್ಥಳವು ಮಂಗಳವೇಢೆ ಗ್ರಾಮವೆಂದು ನಂಬಿದರೆ ಇವರು ಅಚ್ಚಗನ್ನಡಿಗರೆಂದು ಧಾರಾಳವಾಗಿ ಹೇಳಬೇಕಾಗುತ್ತದೆ. ಯಾಕೆಂದರೆ, ನಾನು ಮೊನ್ನೆ ಮಂಗಳವೇಢೆಗೆ ಹೋದಾಗ್ಗೆ ಸುಪ್ರಸಿದ್ಧ ಮಹಾರಾಷ್ಟ್ರ ಇತಿಹಾಸ ಸಂಶೋಧಕ ಕೈ. ವಾ. ವಿಶ್ವನಾಥ ಕಾಶೀನಾಥ ರಾಜವಾಡೆ ಇವರು ಮಂಗಳವೇಢೆಯ ಪ್ರಾಚೀನ ಕಾಗದ ಪತ್ರಗಳನ್ನು ಪ್ರಸಿದ್ಧ ಮಾಡಿದ್ದನ್ನು ಅಲ್ಲಿಯ ಮಾಮಲೇದಾರ ಸಾಹೇಬ ಶ್ರೀಮಾನ್ ಲಾಗೂ ಇವರು ನನ್ನ ಕೈಯಲ್ಲಿ ಕೊಟ್ಟರು ಅವುಗಳಲ್ಲಿ ಮೊದಲನೆಯ ಲೇಖದಲ್ಲಿ ಹೀಗೆ ಬರೆಯಲ್ಪಟ್ಟಿದೆ:—"ಕಸಬೆ ಮಂಗಳವೇಢೆಯು ಬೇದರ ಸುಭೆಯ ಕೆಳಗೆ ಇದ್ದ ಕಾಲಕ್ಕೆ ಈ ಗ್ರಾಮವು ಉಧ್ವಸ್ತನಾಗಿ ೬೦ ವರ್ಷಗಳ ವರೆಗೆ ಬೇಚಿರಾಖವಾಗಿ ಹೋಗಿತ್ತು ಜನವಸ್ತಿ ಆಜೀಬಾತ ಇದ್ದಿಲ್ಲ. ವಿಠ್ಠಲ ಕಸಗೌಡ ಮತ್ತು ಚಂಡರಸ ಕುಲಕರ್ಣಿ ಇವರೇ ಇಬ್ಬರು ಮಾತ್ರ ಕೃಷ್ಣವೆಂಬ ಕೆರೆಯ ಹತ್ತರ ವಸ್ತಿ ಮಾಡಿಕೊಂಡು ಇರುತ್ತಿದ್ದರು. ಇವರಿಬ್ಬರೂ ಈ ಗ್ರಾಮದ ಉಸ್ತುವಾರಿ ಮಾಡಬೇಕೆಂದು ಬೇದರ ಬಾದಶಹನ ಕಡೆಗೆ ಹೋಗಿ, ಪರವಾನಿಗಿಯನ್ನು ಪಡೆದುಕೊಂಡು ಬಂದು, ಈ ಗ್ರಾಮದಲ್ಲಿ ದೂರ ದೂರ ಗ್ರಾಮಗಳ ಜನರನ್ನು ಕರೆಯಿಸಿ, ನವೀನ ವಸಾಹತನ್ನು ಮಾಡಿದರು"

ಗಂಗೂಬಾಹಮನೀ ರಾಜರು ಕಲಬುರ್ಗೆಯಲ್ಲಿ ಕ್ರಿ. ಶ. ೧೩೪೭-೧೪೨೨ ರ ವರೆಗೆ, ಬೀದರದಲ್ಲಿ ಕ್ರಿ. ಶ. ೧೪೨೨—೧೫೨೬ ರ ವರೆಗೆ ರಾಜ್ಯವಾಳಿದರು. ಕ್ರಿ ಶ. ೧೩೯೬ ರಲ್ಲಿ ದುರ್ಗಾದೇವಿ ದುಷ್ಕಾಳವೆಂಬ ಭಯಂಕರವಾದ ಬರಗಾಲವು ಬಿದ್ದು, ಮಂಗಳವೇಢೆ ಗ್ರಾಮವು ನಿರ್ಜನವಾಯಿತು. ಅಂದರೆ ಬೇಚಿರಾಖವಾಯಿತು ಅಲ್ಲಿಂದ ಮುಂದೆ ೬೦ ವರ್ಷಗಳ ವರೆಗೆ ಎಂದರೆ ಕ್ರಿ ಶ ೧೪೫೬ ರ ವರೆಗೆ ಮಂಗಳವೇಢೆಯು ಬೇಚಿರಾಖವಾಗಿ ಹಾಳು ಬಿದ್ದಿತ್ತು. ಆ ಕಾಲಕ್ಕೆ ವಿಠ್ಠಲ ಕಸಗೌಡ ಮತ್ತು ಚಂಡರಸ ಕುಲಕರ್ಣಿ ಇವರೇ ಇಬ್ಬರ ಮನೆತನಗಳು ಉಳಿದವು. ಇವರಿಬ್ಬರ ಹೆಸರುಗಳೂ ಅಚ್ಚಗನ್ನಡವಾಗಿವೆ ಕ್ರಿ ಶ. ೧೪೫೬ ರಲ್ಲಿಯೇ "ಚಂಡರಸ" ಎಂಬ ಕನ್ನಡ ಹೆಸರು ಮಂಗಳವೇಢೆಯಲ್ಲಿ ಇದ್ದ ಮೇಲೆ ಅದೇ ಗ್ರಾಮದಲ್ಲಿ ಇದಕ್ಕಿಂತ ೧೧೫ ವರ್ಷಗಳ ಪೂರ್ವದಲ್ಲಿ (ಅಂದರೆ ಕ್ರಿ. ಶ. ೧೩೪೧ ರಲ್ಲಿ) ಅವತರಿಸಿದ ಟೀಕಾಚಾರ್ಯರಿಗೆ ಧೊಂಡೋಪಂತನೆಂಬ ಮರಾಠಿ ಹೆಸರು ಇರುವದು ಅಶಕ್ಯವೇ ಸರಿ ಇದೇ ಮೇರೆಗೆ ನಾಡಿಗ ಅಥವಾ ನಾಡಕರಣಿ ಎಂಬ ಕನ್ನಡ ಹೆಸರನ್ನು ಬಿಟ್ಟು, "ದೇಶಪಾಂಡೆ" § ಎಂಬ ಮರಾಠಿ ಅಥ್ವ ಹೆಸರನ್ನು ಇಟ್ಟುಕೊಳ್ಳುವದು ಅಶಕ್ಯವೇ ಸರಿ. (ಕುಲಕರ್ಣಿಗೆ "ಪಾಂಡೆ" ಎಂದು ಮಹಾಡದಲ್ಲಿ ಈಗಲೂ ಕರೆಯುತ್ತಾರೆ.) ಸಾರಾಂಶವೇನಂದರೆ, ಶ್ರೀ ಟೀಕಾಚಾರ್ಯರ ಪೂರ್ವಾಶ್ರಮದ ಹೆಸರು "ಧೊಂಡೋಪಂತ ದೇಶಪಾಂಡೆ" ಎಂದು ಇತ್ತೆಂದು ಹೇಳುವದು ಅನೈತಿಹಾಸಿಕವೂ ಅತಏವ ಅಸತ್ಯವೂ ಆಗಿದೆ.

ಈ ವಿವರಣೆಯ ಫಲಿತಾರ್ಥವೇನಂದರೆ, ಈಗ ಮಂಗಳವೇಢೆಯಲ್ಲಿರುವ ದೇಶಪಾಂಡೆ ಮನೆತನದವರು ಶ್ರೀ ಟೀಕಾಚಾರ್ಯರ ವಂಶಜರಲ್ಲ ಶ್ರೀ ಟೀಕಾಚಾರ್ಯರ ಜನ್ಮಸ್ಥಳವು ಮಂಗಳವೇಢೆಯೆಂದು ಹೇಳುವದಕ್ಕೆ ಈ ಗ್ರಾಮದಲ್ಲಿ ಪ್ರಮಾಣ ಲೇಖಗಳೇನೂ ಇಲ್ಲ. ಕೇವಲ ದಂತ ಕಥೆಗಳೇ ಹೊರತು ಒಂದು ವಾಕ್ಯವಾದರೂ ಲೇಖವಿಲ್ಲ.

ನಾರಾಯಣ ಶ್ರೀನಿವಾಸ ರಾಜಪುರೋಹಿತ
ಪ್ರಚಾರಕ, ಕರ್ನಾಟಕ ಇತಿಹಾಸ ಮಂಡಳ
ಧಾರವಾಡ

§ ದೇಶಪಾಂಡೆ ದೇಸಾಯಿ ಎಂಬ ಅರ್ಥ ಹೆಸರುಗಳು ಕರ್ನಾಟಕದಲ್ಲಿ ಬಾದಶಾಹೀ, ಮರಾಠಾಶಾಹೀ, ಪೇಶ್ವೆಶಾಹೀ ಕಾಲಗಳಿಂದ ಈಚೆಗೆ ಪ್ರಚಾರದಲ್ಲಿ ಬಂದಿರುತ್ತವೆ.

ನಿಝಾಮ ಕರ್ನಾಟಕದ ಪತ್ರ,

(ನಮ್ಮ ಖಾಸಗಿ ಸುದ್ದಿಗಾರರಿಂದ)

ಗುಲಬುರ್ಗಾ:—ಇಲ್ಲಿಯ ಪ್ರಸಿದ್ಧ ವರ್ತಕರಾದ ಶ್ರೀ ಅಣ್ಣಯ್ಯಾ ಜಾಜಿ ಇವರು ಮೊನ್ನಿನ ಗುರುವಾರ ತಮ್ಮ ೬೦ನೇ ವರ್ಷದ ಪ್ರೀತ್ಯರ್ಥ ತುಲಾಭಾರ ತೂಗಿಸಿಕೊಂಡು ಬ್ರಾಹ್ಮಣರಿಗೆ ದಾನ ಮಾಡಿದರು, ಇವರು ವೈಶ್ಯ—ಕೋಮಟಿಗರಿದ್ದು ವೇದ ಬ್ರಾಹ್ಮಣರಲ್ಲಿಯ ಇವರ ಶ್ರದ್ಧೆಯು ಸರ್ವಶ್ರುತವಿರುತ್ತದೆ,

ಹೈದರಾಬಾದ:— ಕಲಬುರ್ಗಿಯಲ್ಲಿ ೪ ವರ್ಷಗಳ ೩೦ರ ಕೂಡಿ ಇಬ್ಬಣವಾಗಿ ಉಪ್ಪಿಲ್ಲದೆ ಕೂತಿದ್ದ ಸತ್ಯಾಜದ ಪರಿಷತ್ತು ಮತ್ತೆ ಹೈದ್ರಾಬಾದಿನಲ್ಲಿ ನೆರೆಯುವದು. ಈ ಸಾರೆ ಸನಾತನೀ ಧರ್ಮೀಯರು ಗೆಲೆಯುವರೋ ಆರ್ಯ ಸಮಾಜದವರು ಪ್ರಬಲರಾಗುವರೋ ನೋಡಬೇಕಾಗಿದೆ.

ಕನ್ನಡಿಗ.

ಬಾಗಲಕೋಟೆ ಜೇಷ್ಠ ಶುದ್ಧ ೧೨ ಶಕೆ ೧೮೪೯.

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು ।
ನಿನ್ನ ಬೆಸನವಮಾಡಿದಂಥ ಮಕ್ಕಳ ದೊಮ್ಮೆ।
ಚಿನ್ನವಾದರು ಚಿನ್ನ ಮೇಣಬತ್ತಿಯು ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ನನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ॥

—ಅಂಬಿಕಾ ತನಯ ದತ್ತ

ಕರ್ನಾಟಕದ ಏಕೀಕರಣವೂ 'ಕನ್ನಡಿಗ'ನೂ ಎಂಬ ಹೆಸರಿನ ಲೇಖವು ೩ನೇ ತಾರೀಖಿನ 'ಕರ್ಮವೀರ'ದಲ್ಲಿ ಪ್ರಕಟವಾಗಿದೆ. ಪ್ರತಿಯೊಬ್ಬ ಮನುಷ್ಯನಿಗೆ ಒಂದೊಂದು ಕಾರ್ಯದಲ್ಲಿ ಅಭಿಲಾಷೆಯಿರುತ್ತದೆ. ಅವನು ಅದೇ ಕಾರ್ಯ ಮಾಡುವದೇನೋ ಅವನಿಗೆ ಭೂಷಣವು. ಅದರಂತೆ ಶ್ರೀ ದೇಶಪಾಂಡೆ ಗಂಗಾಧರರಾಯರು ಖಾದಿಯ ಪ್ರಚಾರದ ಕಾರ್ಯದಲ್ಲಿ ತೊಡಗಿಕೊಂಡಿರಲು, ಅವರು ಕರ್ನಾಟಕ ಏಕೀಕರಣದಲ್ಲಿ ಮನಸ್ಸನ್ನು ಹಾಕದಿರುವದು ಅವರ ತಪ್ಪಲ್ಲ; ಆದುದರಿಂದ ಏಕೀಕರಣ ಕಾರ್ಯದಲ್ಲಿ ಅವರು ಭಾಗ ತೆಗೆದುಕೊಳ್ಳುವದಿಲ್ಲವೆಂದು ಶ್ರೀ ಪುರೋಹಿತರು ಸಾಧಿಸಿದ್ದಾರೆ. ಕರ್ನಾಟಕ ಪ್ರಾಂತಕ್ಕೆ ಪ್ರತ್ಯೇಕವಾಗಿ ಸರಕಾರವು ದೊರೆಯಬೇಕೆಂಬದಾಗಿ ನಡೆದ ಏಕೀಕರಣದಲ್ಲಿ ಶ್ರೀ ಗಂಗಾಧರರಾಯರು ಭಾಗವನ್ನು ಯಾಕೆ ತೆಗೆದುಕೊಂಡಿಲ್ಲವೆಂದು ನಾವು ಆಕ್ಷೇಪಣೆ ತೆಗೆದುಕೊಂಡಿಲ್ಲ; ಆದರೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಅಸ್ತಿತ್ವದಲ್ಲಿ ಒಂದು ಏಳು ವರ್ಷಗಳಾಗುತ ಒಂದರೂ, ಪ್ರಾಂತಿಕ ಕಾಂಗ್ರೆಸ ಕಮಿಟಿಯು ತನ್ನ ಪ್ರಾಂತದ ಎಲ್ಲ ಭಾಗಗಳನ್ನು ತಾನು ದೊರಕಿಸುವ ಕಾರ್ಯದಲ್ಲಿ ಮೊದಲಿನಿಂದ ಮನಸ್ಸನ್ನೇ ಹಾಕಿಲ್ಲವೆಂಬುದಾಗಿ ನಮ್ಮ ಆಕ್ಷೇಪಣೆ. ಶ್ರೀ ಗಂಗಾಧರರಾಯರು ಈ ಕಮಿಟಿಯ ಅಧ್ಯಕ್ಷರಿರುವಾಗ್ಗೆ ಈ ಪ್ರಶ್ನೆಯು ಕಮಿಟಿಯ ಮುಂದೆ ಒಂದಿದ್ದರೂ ಸಹ, ಅವರು ಅದಕ್ಕೆ ಗಮನ ಕೊಡಲಿಲ್ಲ. ಬಳ್ಳಾರಿಯು ಆಂಧ್ರರ ದವಡೆಯೊಳಗಿಂದ ಪಾರಾಗಿ ಒಂದು ಕರ್ನಾಟಕಕ್ಕೆ ಸೇರಿತು. ಅದರಂತೆಯೇ ಸೇಲಂ, ಕೊಯಿಮತ್ತೂರ, ಅನಂತಪೂರ ನೀಲಗಿರಿ ಮೊದಲಾದ ಕರ್ನಾಟಕದ ಭಾಗಗಳನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯು ವಶಕ್ಕೆ ತೆಗೆದುಕೊಳ್ಳುವ ಬಗ್ಗೆ ಪ್ರಯತ್ನವಾಗಬೇಕೆಂಬ ಸೂಚನೆಯು. ಶ್ರೀ ಗಂಗಾಧರರಾಯರು ಪ್ರಾಂತಿಕ ಕಮಿಟಿಯ ಅಧ್ಯಕ್ಷರಿದ್ದಾಗ್ಗೆ ಮುಂದೆ ಬಂದಿದ್ದರೂ ತಮ್ಮ ಆಡಳಿತದಲ್ಲಿ ಅದಕ್ಕೆ ಅವರು ಲಕ್ಷ್ಯ ಕೊಟ್ಟಿಲ್ಲ. ಈಗ್ಗೆಯೂ ಕೊಡುವದಿಲ್ಲವಾದ್ದರಿಂದ ಅವರ ಮೇಲೆ ನಾವು ಭಾರ ಹಾಕಿ ಕುಳಿತುಕೊಳ್ಳುವಹಾಗಿಲ್ಲ. ಆಕಾರಣ ಈಗಿನ ಅಧ್ಯಕ್ಷರಾದ ಶ್ರೀ ಬಾಜಲಗೀಯವರು ಈಗಲಾದರೂ ಇತ್ತ ವಿಶೇಷ ಗಮನ ಕೊಟ್ಟು, ದಕ್ಷಿಣ ಕರ್ನಾಟಕದ ಭಾಗಗಳನ್ನೆಲ್ಲ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಗೆ ಸೇರಿಸಿಕೊಳ್ಳಬೇಕಾಗಿ ಆಗ್ರಹಪಟ್ಟಿರುವೆವು. ಇದರಲ್ಲಿ ಯಾವ ದೋಷವು ಶ್ರೀ ಪುರೋಹಿತರಿಗೆ ಕಾಣಬಂದಿತೋ ನಮಗೆ ತಿಳಿಯದು; "ಕಮಿಟಿಯ ಬಗ್ಗೆಯಂತೂ ಇವರಿಗಿದ್ದ ಅಜ್ಞಾನವು ಅಗಾಧವಾಗಿದೆ" ಎಂದು ಟೀಕಾಕಾರರು ನಮ್ಮನ್ನು ದೂಷಿಸಿದ್ದಾರೆ. ಆದರೆ ಪ್ರಾಂತಿಕ ಕಾಂಗ್ರೆಸ ಕಮಿಟಿಯಲ್ಲಿ, ಅದು ಹುಟ್ಟಿದಾರಭ್ಯ, ಸಭಾಸದರಾಗಿದ್ದ, ಶ್ರೀ ಪುರೋಹಿತರಿಗೆ, ಈ ಬಗ್ಗೆ, ನಿಜವಾಗಿದ್ದ 'ಅಗಾಧ ಅಜ್ಞಾನ'ದ ಬಗ್ಗೆ ನಮಗೆ ಸೋಜಿಗವೆನಿಸುತ್ತದೆ! ಪ್ರಾಂತಿಕ ಕಮಿಟಿಯು ಕರ್ನಾಟಕದ ಭಾಗಗಳನ್ನೆಲ್ಲ, ತನ್ನ ವಶಕ್ಕೆ ತೆಗೆದುಕೊಂಡಿಲ್ಲವೇಕೆ? ಏಳು ವರ್ಷಗಳ ವರೆಗೆ ಅದನ್ನು ದುರ್ಲಕ್ಷಿಸಿದ್ದೇಕೆ? ಎಂಬದಾಗಿ ನಾವು ಕೇಳಿದ್ದು! ಆದರೆ ಆಂಧ್ರ ವಿಶ್ವವಿದ್ಯಾಲಯ–ಬಳ್ಳಾರಿ ಪಕ್ಷಿಗಾಗಿ ಕಮಿಟಿಯವರು ಒಂದು ಸಾವಿರಕ್ಕಿಂತ ಹೆಚ್ಚು ಹಣ ವ್ಯಯ ಮಾಡಿದ್ದು, ನಮಗೆ ಗೊತ್ತಿಲ್ಲವೇನೆಂದು, ಶ್ರೀ ಪುರೋಹಿತರು ಕೇಳಿದ್ದು! ಒಂದಕ್ಕೊಂದು ಸಂಬಂಧವಿಲ್ಲ. ನಾವು ಬರೆದುದನ್ನು ಚನ್ನಾಗಿ ಓದಿ, ಅದನ್ನು ತಿಳಿದುಕೊಳ್ಳದೇ ಟೀಕೆ ಮಾಡಲು ಧಾವಿಸಿ ಬಂದ ಶ್ರೀ ಪುರೋಹಿತರಿಗೆ ಈಗಲಾದರೂ ತಿಳಿಯಲಿ! ಮತ್ತೂ ಇನ್ನು ವೇಳಾದರೂ ಕರ್ನಾಟಕದ ಭಾಗಗಳನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯು ತನ್ನ ವಶಕ್ಕೆ ತೆಗೆದುಕೊಳ್ಳುವದರಲ್ಲಿ, ಯಾವ ದಕ್ಷತೆಯನ್ನು ತೋರಿಸುವದೋ ಜ್ಞಾನಭಾಂಡಾರರೀ ಪುರೋಹಿತರು ಆಶ್ವಾಸನ ಕೊಡಲಿ! ಇಷ್ಟೇ ಪ್ರಾರ್ಥನೆ. ಶ್ರೀ 'ಕರ್ನಾಟಕ ವೃತ್ತ'ವಾದರೂ ನಾವು ಬರೆದದನ್ನು ಚನ್ನಾಗಿ ತಿಳಿದುಕೊಳ್ಳದೇ ಶ್ರೀ ಪುರೋಹಿತರ ಲೇಖವನ್ನು ಮಾತ್ರ ಓದಿ, ನಮ್ಮನ್ನು ಟೀಕಿಸಿದ್ದಾರೆ. ಈ ಮೇಲಿನ ವಿಧಾನಗಳಿಂದ ಎಲ್ಲವೂ ಸ್ಪಷ್ಟವಿರುವದರಿಂದ ವೃತ್ತಕಾರರ ತಪ್ಪು ತಿಳುವಳಿಕೆಯೂ ದೂರಾಗುವದಾಗಿ ನಮ್ಮ ವಿಶ್ವಾಸವಿದೆ. ಇನ್ನು ಶ್ರೀ ಗಂಗಾಧರರಾಯರ ಕೈವಾರಿಯಾಗಿ ಮುಂದೆ ಓಡಿ ಬಂದುದರಿಂದ ಶ್ರೀ ಪುರೋಹಿತರಿಗೆ ನಾವು ಕೆಲವು ಪ್ರಶ್ನೆ ಮಾಡುವೆವು. ಇಷ್ಟವಿದ್ದರೆ-ಅವರು ಉತ್ತರ ಹೇಳಲಿ! ಕನ್ನಡ ಕರ್ನಾಟಕದ ಬಗ್ಗೆ ನಿಜವಾಗಿ ಕಳವಳವುಳ್ಳ ಮನುಷ್ಯನು ಯಾವ ಕಾರ್ಯದಲ್ಲಿದ್ದರೂ, ಜಗತ್ತಿನ ಯಾವ ಮೂಲೆಯಲ್ಲಿದ್ದರೂ ತನ್ನ ಅಭಿಮಾನವನ್ನು ಪ್ರಕಟಿಸಬಲ್ಲನು. ಶ್ರೀ ಗಂಗಾಧರರಾಯರು ಖಾದಿಯ ಕಾರ್ಯದಲ್ಲಿ ತೊಡಗಿರುವದಷ್ಟೇ? ಸರಿಯಾಗಿದೆ, ಅನ್ಯ ಕೆಲಸದ ಭಾರವನ್ನು ಯಾಕೆ ಹೊರಲಿಲ್ಲವೆಂದು ನಾವೂ ಅವರಿಗೆ ಕೇಳುವದಿಲ್ಲ. ಆದರೆ ಅಖಂಡ ಕನ್ನಡನಾಡಿನ ಖಾದಿಯ ಹುಟ್ಟುವಳಿಯ ಹಾಗೂ ಮಾರಾಟದ ಜವಾಬ್ದಾರಿಯು ಅವರ ಮೇಲಿದೆ. ಅಂದ ಮೇಲೆ ಅವರು ಹತ್ತಿ ಬೆಳೆಯುತ್ತಿರುವ ಕರ್ನಾಟಕದ ಎಷ್ಟೆಷ್ಟು ಭಾಗಗಳಿಗೆ ಕೇವಲ ಖಾದಿಯ ಪ್ರಚಾರಕ್ಕಾಗಿ ಸಂದರ್ಶಿಸಿರುವರು? ಸಂದರ್ಶಿಸುವ ಇಚ್ಛೆಯಾದರೂ ಅವರಲ್ಲಿರುವದೇ? ಕೇವಲ ಖಾದಿಯ ಪ್ರಚಾರಕ್ಕೆಂದು ಕರ್ನಾಟಕವನ್ನು ಅವರು ಸುತ್ತಿದರೂ ಕರ್ನಾಟಕತ್ವದ ಭಾವನೆಯು ಅಲ್ಲಲ್ಲಿ ಹೆಚ್ಚಾಗಿ ಹರಡಲು ಅನುಕೂಲವಾಗುವದು. ಶ್ರೀ ಗಂಗಾಧರರಾಯರಿಗೆ ಕನ್ನಡದಲ್ಲಿ ಮಾತನಾಡುವದು ಕಲಿಬೇಕಾಗಿದೆಯೇಕೆ! ಮೊನ್ನೆ ಮೊನ್ನೆ ಶ್ರೀ ರಾಜಗೋಪಾಲಾಚಾರ್ಯ ಮೊದಲಾದವರು ಬೆಳಗಾಂವಿಗೆ ಬಂದಾಗ್ಗೆ ಬೆಳಗಾಂವಿಯಲ್ಲಿ ಸಾರ್ವಜನಿಕ ಸಭೆಯಾಯಿತು! ಆಗ್ಗೆ ಕನ್ನಡ

ದಲ್ಲೇಕೆ ಮಾತನಾಡಲಿಲ್ಲ? ಜನರೆಲ್ಲ ಕನ್ನಡ, ಕನ್ನಡವೆಂದು ಕೂಗಿದರೂ ಕರ್ನಾಟಕದ ಸಿಂಹವು ಮರಾಟಿಯಲ್ಲಿ ಆರ್ಭಟಿಸಿತು! ಯಾಕೆ? ಶ್ರೀ ವೈ. ಕಡಪಾರಾಯರ ಸಂಗಡ ಅವರು ಸಾಯುವವರೆಗೂ ಶ್ರೀ ಗಂಗಾಧರರಾಯರು ಮತಭೇದವುಳ್ಳವರಾಗಿದ್ದರು! ಕಡಪಾರಾಯರು ಮಡಿದ ಮೇಲೆ ಸಹ ಅವರ ಬಗ್ಗೆ ಸಹಾನುಭೂತಿಯಿರಬಾರದೇ? ಬೆಳಗಾಂವಿಯಲ್ಲಿಯೇ ಮಡಿದ ವೈ. ಕಡಪಾರಾಯರ ಬಗ್ಗೆ ಸಭೆ ಏರ್ಪಾಡು ಮಾಡುವದೂ, ರಾಯರ ಸ್ಮಾರಕ ಸಂಚಿಕೆಗೆ ಲೇಖ ಬರೆಯುವದೂ, ಶ್ರೀ ದೇಶಪಾಂಡೆಯವರಿಗೆ ಬೇಡಾಯಿತು! ಇದಕ್ಕೆಲ್ಲ ಕೈವಾರಿಗಳು ಏನೆಂದು ಹೇಳಬಲ್ಲರು?

ಶ್ರೀ ಪುರೋಹಿತರ ಎರಡನೇ ಪ್ರಶ್ನೆಯೊಂದಿದೆ. ಶ್ರೀ ಪಟವರ್ಧನ ಬಾಬೂರಾಯರು ಶ್ರೀ ದಿವಾಕರರೊಂದಿಗೆ ನೀಲಗಿರಿ ಕಡೆಗೆ ಏಕೀಕರಣದ ಪ್ರಚಾರದ ಕಾರ್ಯಕ್ಕೆ ಹೋದಾಗ್ಯೆ, ಅವರಿಗೆ ಆ ತಂಪು ಹವೆಯಿಂದಲಾದರೂ, ಕರ್ನಾಟಕದ ಸೇವೆಯ ಬಗ್ಗೆ ನಿಜವಾದ ಕಳವಳದ ಕಲ್ಪನೆಯು ಹೊಳೆಯಲೆಂದು 'ಓದುಗ'ನು ಟೀಕಿಸಿದ್ದನು. ಇದರಿಂದ ಶ್ರೀ ಬಾಬೂರಾಯರಂಥವರಲ್ಲಿ "ಮತ್ತಿಷ್ಟು ವೈಮನಸು ಉಂಟಾಗುವದೆ"ಂದು ಶ್ರೀ ಪುರೋಹಿತರ ಆಕ್ಷೇಪ. ವೈಮನಸ್ಸಿಗೆ ಮೊದಲು ಕಾರಣವೇ ಇಲ್ಲ. ಆದರೂ "ಮತ್ತಿಷ್ಟು" ಎಂಬದಾಗಿ ಹೇಳಿ ವೈಮನಸ್ಸು ಪ್ರತ್ಯಕ್ಷ ಸೃಷ್ಟಿಯಲ್ಲಿರುವದಾಗಿ ಶ್ರೀ ಪುರೋಹಿತರು ಸಾಕ್ಷಿ ಕೊಟ್ಟಿದ್ದಾರೆ. ಈ ವೈಮನಸ್ಸು ಉತ್ಪನ್ನವಾಗಲು ಕಾರಣವೇನು? ಕರ್ನಾಟಕದಲ್ಲಿದ್ದ ಮರಾಟಿಗರು ಕನ್ನಡವನ್ನೇ ಮಾತನಾಡಬೇಕು; ಕನ್ನಡಿಗರ ಸಂಸ್ಕೃತಿಯಲ್ಲಿ ಬೆರೆತುಕೊಳ್ಳಬೇಕೆಂದು ಕನ್ನಡಿಗರು ಹೇಳಿದರೆ, ಶ್ರೀ ಬಾಬೂ ರಾಯರಂತಹ ಮಹನೀಯರಿಗೆ ಕೋಪವೇಕೆ? ಮಹಾರಾಷ್ಟ್ರದ ಸುಪ್ರಸಿದ್ಧ ಮುಖಂಡರಾದ ಶ್ರೀ ಕೇಳಕರರ ಅಭಿಪ್ರಾಯವು ಈ ವಿಷಯದಲ್ಲಿ ಎಷ್ಟು ಸಮಂಜಸವಾಗಿದೆಂಬುದನ್ನು (ಈ ಬಗ್ಗೆ ಬೇರೆ ಕಡೆಗೆ ಪ್ರಕಟವಾದ ಲೇಖವನ್ನು ವಾಚಕರು ನೋಡಬೇಕು) ಶ್ರೀ ಬಾಬೂರಾಯರು ಅರಿತಿದ್ದರೆ ಶ್ರೀ ಪುರೋಹಿತರು ಹೇಳುವ "ವೈಮನಸ್ಸಿ"ಗೆ ಕಾರಣವೇ ಇಲ್ಲ! ಇರಲಿ. ಕರ್ನಾಟಕದಲ್ಲಿದ್ದ ಮರಾಟಿಗರಲ್ಲಿ ಮೂರು ಬಗೆಯ ಸ್ವಭಾವದ ಜನರಿದ್ದಾರೆ. "ನಾವು, ಕರ್ನಾಟಕದಲ್ಲಿ ವಾಸವಾಗಿದ್ದುದರಿಂದ, ಕರ್ನಾಟಕತ್ವದ ಕಲ್ಪನೆಗೆ ಮನ್ನಣೆಯನ್ನೀಯತಕ್ಕದ್ದು ನಮ್ಮ ಕರ್ತವ್ಯವೆ"ಂದು ತಿಳಿದವರು ಉತ್ತಮ ವರ್ಗದವರು ಇವರಲ್ಲಿ ಶ್ರೀ ಜೋಶೀ ವಿನಾಯಕರಾಯರೂ, ಜೋಶೀ ವಿಠ್ಠಲರಾಯರೂ, ಬೇಂದ್ರೇ ದತ್ತಾತ್ರೆಯರಾಯರೂ ಮೊದಲಾದವರು "ಕರ್ನಾಟಕದಲ್ಲಿ ನಮ್ಮ ವರ್ಚಸ್ಸು ಬಹು ದಿನಗಳಿಂದ ನಡೆದು ಬಂದಿದೆ; ಅದನ್ನು ನಾವು ಇಟ್ಟುಕೊಳ್ಳತಕ್ಕದ್ದು; ಆದರೆ ಸಧ್ಯಕ್ಕೆ ಕನ್ನಡಿಗರು ಈ ಬಗ್ಗೆ ಚೀರಾಟವನ್ನೆಬ್ಬಿಸಿದ್ದರಿಂದ ನಾವು ಸದ್ಯದಲ್ಲಿ ಯಾವದಾದರೊಂದು 'ಧೋರಣ' (Policy) ದಿಂದ, ಅವರಂತೆ ನಟಿಸಿ, ನಮ್ಮ ಕಾರ್ಯವನ್ನು ಸಾಧಿಸಿಕೊಳ್ಳಬೇಕು; ಆದರೆ ಅದೂ ಶಕ್ಯವಾಗದಿದ್ದರೆ ಕಡೆಗೆ ನಿರುಪಾಯವೆಂದು ಕನ್ನಡಿಗರ ಸಂಸ್ಕೃತಿಯಲ್ಲಿ ಸೇರಬಹುದು" ಎಂಬದಾಗಿ ಕಲ್ಪನೆಯುಳ್ಳವರು ೨ನೇ ವರ್ಗದವರು ಕನ್ನಡಿಗರು ಜಾಗೃತರಾಗಿ ಕರ್ನಾಟಕತ್ವದ ಚಳವಳವನ್ನು ನಡಿಸಿದ್ದಕ್ಕೆ, "ಮರಾಟಿಗರ ವಿರುದ್ಧವಾದ ಚಳವಳವಿದು; ಇದನ್ನು ನಾವು ಬಡಿದು ಹಾಕಿ, ಮರಾಟಿಗರ ವರ್ಚಸ್ಸನ್ನು ಹಿಂದಿನಂತೆಯೇ ಸಾಧಿಸಬೇಕು; ಉತ್ತರ ಕರ್ನಾಟಕವ ಬೃಹನ್ ಮಹಾರಾಷ್ಟ್ರದಲ್ಲಿಯೇ ಸೇರಿಸಬೇಕು." ಎಂಬದಾಗಿ ಹೊಂಚುಹಾಕಿ ಕುಳಿತವರು ಮೂರನೇ ಅಂದರೆ ಕನಿಷ್ಟ ವರ್ಗದವರು. ಈ ವಸ್ತುಸ್ಥಿತಿಯಂತೆ 'ಓದುಗ'ನು ಶ್ರೀ ಬಾಬೂರಾಯರನ್ನು ೨ನೇ ವರ್ಗಕ್ಕೆ ಸೇರಿಸಿ, ಟೀಕಿಸಿದ್ದು. ಅದಕ್ಕೆ ಅವರು ಎಚ್ಚರಿಯುವದರ ಬದಲು, ಕರ್ನಾಟಕ ಏಕೀಕರಣದ ತಮ್ಮ ಈಗಿನ ಸಹಾನುಭೂತಿಯನ್ನು ಬಿಟ್ಟು ಕೊಟ್ಟು, ಶ್ರೀ ಪುರೋಹಿತರು ಸೂಚಿಸಿದಂತೆ, "ಏಕೀಕರಣ ಕಾರ್ಯಕ್ಕೆ ಹೆಚ್ಚು ವಿಘ್ನವನ್ನುಂಟು"ಮಾಡುವದಕ್ಕೆ ಪ್ರವೃತ್ತರಾದರೆ, ಅವರನ್ನು ಮತ್ತಾವ ವರ್ಗದಲ್ಲಿ ಸೇರಿಸಬೇಕು? ಇನ್ನು, ಶ್ರೀ ಜೋಶೀ, ಬೇಂದ್ರೇಯವರಂತೆ ಶ್ರೀ ಬಾಬೂರಾಯರಾದರೂ, ಕರ್ನಾಟಕದ ಸೇವೆಯಲ್ಲಿ ಶಿದ್ಧಾಂತಕರಣದಿಂದ ತೊಡಗಿಕೊಂಡು, 'ಓದುಗ'ನ ಮತವು ಸುಳ್ಳಾದುದೆಂದು ತೋರಿಸಿಕೊಟ್ಟರೆ, 'ಕನ್ನಡಿಗ'ನಿಗೆ ಆಗುವಷ್ಟು ಆನಂದವು ಮತ್ತಾರಿಗೂ ಆಗದು.

ಕರ್ನಾಟಕದಲ್ಲಿದ್ದ ಮರಾಟಿಗರು ಹೇಗೆ ಇರಬೇಕೆಂಬ ಬಗ್ಗೆ ಮಹಾರಾಷ್ಟ್ರ ಮುಖಂಡರಲ್ಲಿ ಮೂರು ಅಭಿಪ್ರಾಯಗಳಿವೆಂಬುದು ಬೇರೆ ಕಡೆಗೆ ಪ್ರಕಟವಾದ ಲೇಖದಿಂದ ಗೊತ್ತಾಗುತ್ತದೆ. ಶ್ರೀ ಕೇಳಕರರ ಅಭಿಪ್ರಾಯವು ಹೆಚ್ಚು ಸಮಂಜಸವೂ ರಾಷ್ಟ್ರೀಯ ಭಾವನೆಯುಳ್ಳದ್ದೂ ಇದೆ. ಆದರೆ ಶ್ರೀ ಬಾಬೂರಾವ ಗೋಖಲೆ ಇವರು ತೋರಿಕೆಯಲ್ಲಿ ರಾಷ್ಟ್ರೀಯ ಭಾವನೆಯ ಬಡಿವಾರ ಮಾಡಿ, ಕೊನೆಗೆ ಕ್ಷುದ್ರ ಪ್ರಾಂತಿಕ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ. ಇನ್ನು "ಸಂಸ್ಥಾನೀ ಸ್ವರಾಜ್ಯ"ದ ಸಂಪಾದಕರಾದ ಶ್ರೀ. ಪಟವರ್ಧನರು ಬಾಯಿಯಲ್ಲಿ ಬಹಳ ಮಾತಾಡಿ, ಆಚರಣೆಯಲ್ಲಿ ಹೃದಯ ದೌರ್ಬಲ್ಯವನ್ನು ತೋರ್ಪಡಿಸಿದ್ದಾರೆ.

ಕರ್ನಾಟಕ ಇತಿಹಾಸ ಸಂಶೋಧಕರಾದ ಶ್ರೀ ರಾಜಪುರೋಹಿತರು ಐತಿಹಾಸಿಕ ದೃಷ್ಟಿಯಿಂದ ಶ್ರೀಮಟ್ಟೀಕಾಚಾರ್ಯರ ಚರಿತ್ರೆಯನ್ನು ಬರೆಯಬೇಕೆಂದು ನಿಶ್ಚಯಿಸಿದ್ದು, ಅದಕ್ಕೋಸ್ಕರವಾಗಿಯೇ ಮಂಗಳವೇಡೆಗೆ ಹೋಗಿ ಸಂಶೋಧನ ಮಾಡಿ, ಅಲ್ಲಿ ಉಪಲಬ್ಧವಾದ ಸಂಗತಿಗಳಿಂದ ಒಂದು ಲೇಖವನ್ನು ಬರೆದಿದ್ದಾರೆ. ಅದನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆಗೆ ಮುದ್ರಿಸಿದ್ದೇವೆ. ಶ್ರೀ ಟೀಕಾಚಾರ್ಯರ ಸಾಕ್ಷಾತ್ ಶಿಷ್ಯರಾದ ವ್ಯಾಸತೀರ್ಥರು ವಿರಚಿಸಿದ "ಶ್ರೀ ಜಯತೀರ್ಥ ವಿಜಯ" ಗ್ರಂಥವನ್ನೂ ಶ್ರೀ ಟೀಕಾಚಾರ್ಯರು ವಿರಚಿಸಿದ ಗ್ರಂಥಗಳನ್ನೂ ಐತಿಹಾಸಿಕ ದೃಷ್ಟಿಯಿಂದ ನಿರೀಕ್ಷಿಸಿ ಅವರು ಸಪ್ರಮಾಣವಾಗಿ ಶ್ರೀ ಜಯತೀರ್ಥರ ಚರಿತ್ರೆಯನ್ನು ಬರೆಯತಕ್ಕವರಿದ್ದಾರೆ. ಆದರೆ ಈಗ ಕೇವಲ ದಂತ ಕಥೆಗಳಿಂದ ಛಗಾರಿಯವರ ಜಯತೀರ್ಥವಿಜಯ ಗ್ರಂಥವು ಬರೆಯಲ್ಪಟ್ಟಿರುವದರಿಂದ ಇವರ ಜನ್ಮಸ್ಥಳವು ಮಂಗಳವೇಡೆಯೆನ್ನುವದೂ ಇವರ ಪೂರ್ವಾಶ್ರಮದ ಹೆಸರು "ಧೋಂಡೋಪಂತ ದೇಶಪಾಂಡೆ" ಎನ್ನುವದೂ ಈಗ ದೊರೆತ ಐತಿಹಾಸಿಕ ಪ್ರಮಾಣಗಳಿಂದ ಅಪಸಿದ್ಧಾಂತವೆಂದು ವ್ಯಕ್ತವಾಗುತ್ತದೆ. ಈ ವಿಷಯವಾಗಿ ಖಂಡನಾತ್ಮಕವಾಗಲಿ ಮಂಡನಾತ್ಮಕವಾಗಲಿ ಸಪ್ರಮಾಣವಾಗಿ ಲೇಖಗಳನ್ನು ಬರೆದು ಯಾರಾದರೂ ಕಳಿಸಿದರೆ ನಮ್ಮ ಪತ್ರದಲ್ಲಿ ಪ್ರಸಿದ್ಧಮಾಡುವೆವು.

ಮದ್ರಾಸ ಕರ್ನಾಟಕ

ಹೆರಸನಹಳ್ಳಿಯ ಬೋರ್ಡು ಹೈಸ್ಕೂಲಿನ ಪ್ರಧಾನೋಪಾಧ್ಯಾಯರಾದ ಶ್ರೀಮಾನ ಪಿ ವೆಂಕಟರಾಮಯ್ಯನವರು ೨೮ ವರ್ಷ ದುಡಿದು ಈಗ್ಗೆ ಕೆಲಸದಿಂದ ನಿವೃತ್ತರಾಗಿದ್ದರಿಂದ, ಅವರ ಸನ್ಮಾನಾರ್ಥವಾಗಿ ಕಳೆದ ತಾ|| ೨೫ ರಲ್ಲಿ ಸಭೆ ಜರಗಿತು.

ಪತ್ರವ್ಯವಹಾರ.

!!! ಸಂಗೀತ ಶ್ರೀ ಶರಣಬಸವೇಶ್ವರ ನಾಟಕ !!!

ಇಡೀ ಕನ್ನಡ ನಾಡಿನಲ್ಲಿ ಸುಪ್ರಸಿದ್ಧಿ ಹೊಂದಿದ "ಗದಗ ಶ್ರೀ ದತ್ತಾತ್ರೇಯ ನಾಟಕ ಸಭೆಯವರ ಸಂಗೀತ "ಶ್ರೀ ಶರಣಬಸವೇಶ್ವರ," ನಾಟಕವನ್ನು ನೋಡಿ ನನಗೆ ತೋಳಿದ ಕೊಳಸನ್ನು ಇಲ್ಲಿ ನಿರ್ದಾಕ್ಷಿಣ್ಯದಿಂದ ತಿಳಿಸಿದ್ದಕ್ಕಾಗಿ ಶ್ರೀ ಗರುಡರು ಕೋಪಗೊಳ್ಳಲಿಕ್ಕಿಲ್ಲವೆಂದು ನನ್ನ ನಂಬಿಗೆ; ಗರುಡರ ಉಳಿದ ನಾಟಕಗಳಲ್ಲಿದ್ದಂತೆ ಇದರಲ್ಲಿ ಭಾಷಾ ಸೌಂದರ್ಯವಿಲ್ಲ. ಇರಲಿ

ಅಪರಾವಿಯ ಶ್ರೀಮಂತ ಶೇಟಜಿಯವರು ತಮ್ಮ ಅಂಗಡಿಯಲ್ಲಿ ತಮ್ಮ ಮುತಾಲಿಕನಿಗೆ ಪೇಟೆಯ ಧಾರಣೆ ಕೇಳುವಾಗ್ಗೆ ಅಂದರೆ "ಮುತಾಲಿಕನೇ ಈದಿನ ಮೆಣಸಿನಕಾಯಿ, ಹತ್ತಿ, ಬೆಲ್ಲ ಮುಂತಾದವುಗಳ ಧಾರಣೆ ಹೇಗೆ? " ಎಂದು ಕೇಳಿದ್ದಕ್ಕೆ ಮುತಾಲಿಕನು "ಶೇಟಜೀಯವರೇ! ಮೆಣಸಿನಕಾಯಿ ಒಣ್ಣ ಕೆಂಪು, ಉದ್ದ. ತಿಂದರೆ ಬಾಯಿಗೆ ಖಾರ ಹತ್ತುತ್ತದೆ ಹತ್ತಿ ಬೆಳ್ಳಗೆ ಹಿಂಜಿದರೆ ಕಾಳು ಕಡೆಗಾಗುತ್ತವೆ. ಗಾಳಿಗೆ ಬಿಟ್ಟರೆ ಹಾರುತ್ತದೆ ಬೆಲ್ಲ ಕೆಂಪಗೆ ತಿಂದರೆ ಸಿಹಿ." ಎಂದು ಯದ್ವಾ ತದ್ವಾ ಉತ್ತರ ಕೊಟ್ಟು ಸಮಾಧಾನಗೊಳಿಸುತ್ತಿದ್ದನು. ಇದೇನು ಹಾಸ್ಯವೋ? ಅಪಹಾಸ್ಯವೋ?

ದಾನವಲ್ಲಿ ಕಣ್ಣಿನಂತೆ ಹೆಸರುಗೊಂಡ ಶರಣಬಸಪ್ಪನು ಸೊಲ್ಲಾಪುರದ ಓರ್ವ ಶ್ರೀಮಂತ ಶೆಟ್ಟರ ಮಗಳು ಮಕ್ಕಳಿಲ್ಲದೆ ಬಳಲುತ್ತ ಒಂದು ಬೇಡಿಕೊಂಡಾಗ್ಯೆ ೧೦೦೦ ರೂಪಾಯಿಗಳನ್ನು ಬೇಡಿದನು. ಗರ್ಭ ಶ್ರೀಮಂತರ ಮಗಳು ಕೂಡಲೇ ಕೊಟ್ಟೇಬಿಟ್ಟಳು. ಮುಂಗಡ ತಕ್ಕೊಂಡು ಮರುವರ್ಷದೊಳಗಾಗಿ ಪುತ್ರ ಪ್ರಾಪ್ತವಾಗುವದೆಂದು ಆಶೀರ್ವದಿಸಿ ಕಳಿಸಿದನು. ಆದರೆ ಅವಳ ಬಯಕೆಯು ಕೈಕೂಡಿತೋ ಇಲ್ಲವೋ ತಿಳಿಯದೇ ಹೋಯಿತು!

ಶರಣಬಸಪ್ಪನ ಮಗುವಿಗೆ ತೊಟ್ಟಿಲಲ್ಲಿ ಹಾಕುವಾಗ್ಗೆ ಬಂದ ಹೆಣ್ಣುಮಕ್ಕಳು ಗಂಡಂದಿರ ಹೆಸರುಗಳನ್ನು ಕೇಳುತ್ತ ಗೊಳ್ಳ ಹಾಟಿಯನ್ನು ಕೆಡಿಸುತ್ತ ಅರ್ಧ ತಾಸು ವೇಳೆ ಕಳೆಯುವದಕ್ಕಿಂತ ಆ ಸೊಲ್ಲಾಪುರದ ಸೌಭಾಗ್ಯವತಿಯ ಪುತ್ರಸಂತಾನ ಸುದ್ದಿಯನ್ನು ಆ ನಿವಿಷಗಳಲ್ಲಿ ತಿಳಿಸಬೇಕಾಗಿತ್ತು. ಮಹಾದೇವಿಯು ಹೆಸರಿಗೆ ತಕ್ಕಂತೆ ಆಕಾರದಿಂದ ಚೆನ್ನಾಗಿದ್ದು ಯಾವಾಗಲೂ ಚಿಂತಾಯುಕ್ತ ಮುಖಮುದ್ರೆಯಿಂದ ಪ್ರೇಕ್ಷಕರ ಮನಸ್ಸಿಗೆ ಅಸಮಾಧಾನವನ್ನುಂಟು ಮಾಡುತ್ತಿದ್ದಳು. ಶರೀರ ಭಾರದ ಚಿಂತೆಯೋ? ಸಂಸಾರದ ಚಿಂತೆಯೋ? ತಿಳಿಯದೇ ಹೋಯಿತು. ಬಹುಶಃ ಉಟ್ಟುಕೊಳ್ಳುವ ಒಟ್ಟಿಯ ಚಿಂತೆಯಾಗಿರಬಹುದು. ಯಾಕಂದರೆ ಅವಳು ಗಂಡನೊಂದಿಗೆ ಸಂಸಾರ ಮಾಡಿ "ಗುರುಲಿಂಗ ಜಂಗಮ"ನೆಂಬ ಪುತ್ರನನ್ನು ಹೆತ್ತು ತಾನು ಶಿವಾಧೀನವಾಗುವ ಪರ್ಯಂತರ ಅದೇ ಹಿಂಡು ಒಟ್ಟಿಯೇ ಇತ್ತು! ಶರಣರ ಹೆಂಡರಿಗೆ ಸ್ನಾನದ ಅವಶ್ಯವಿಲ್ಲವೇ?

ಶರಣಬಸಪ್ಪನ ಹಿರಿ ಅತ್ತಿಗೆಯ (ನೀಲಮ್ಮನೇ ಇರಬಹುದು) ಹಾವಭಾವಗಳು ಹಳ್ಳಿಯ ಹುಂಬರ ಮನಸ್ಸನ್ನಾಕರ್ಷಿಸುವವು. ಈ ಕಾಲದಲ್ಲಿ ಇಂಥ ಹೆಣ್ಣುಮಕ್ಕಳದೇ ರಾಜ್ಯ

ಮುಂದಿನ ನಾಟಕದ ಸೂಚನೆಯನ್ನು ವೇಷಧಾರಿಗಳೇ ಬಂದು (ಮುಖಕ್ಕೆ ಒಣ್ಣ ಹಚ್ಚಿಕೊಂಡು) ಸೂಚಿಸುವದಕ್ಕಿಂತ ಬೇರೊಬ್ಬನು ಈ ಕೆಲಸವನ್ನು ವಹಿಸಬೇಕು; ಅಥವಾ ಸುಂದರ ಸೂಚಕ ಅಕ್ಷರಗಳಿಂದ ಬರೆದ ಪಟವನ್ನು ಆಗಾಗ್ಗೆ ತೋರಿಸುತ್ತ ಹೋಗಬೇಕು. ಆದರೆ ಇಷ್ಟೆಲ್ಲ ಸಣ್ಣ ಸಣ್ಣ ಸಂಗತಿಗಳನ್ನು ತಿಳಿಸಿಕೊಟ್ಟಿದ್ದಕ್ಕೆ ಮಾತ್ರ ಸಿಟ್ಟಾಗಬಾರದು.

ತಾ ೨೩-೫-೨೭ } ಅಣ್ಣಾರಾವ ಪಾಟೀಲ,
ವಿಜಾಪೂರ. } ಅಗರಖೇಡ.

ಕರ್ನಾಟಕ ಆಯುರ್ವೇದ ಪರಿಷತ್ತು.

(ಈ ಪರಿಷತ್ತಿನ ಬಗ್ಗೆ ಕಳೆದ ವಾರದ 'ಕನ್ನಡಿಗ'ನಲ್ಲಿ ಪ್ರಕಟವಾದ ಲೇಖವು ಆಕ್ಷೇಪಣಾರ್ಹವಾಗಿದೆಯೆಂದು ನಮಗೆ ಕೆಲವರು ತಿಳಿಸಿದ್ದಾರೆ. ನಾವು ಈ ಬಗ್ಗೆ ನಮ್ಮ ಪ್ರತಿನಿಧಿಗಳಿಗೆ ಕೇಳಿದ್ದೇವೆ. ಅವರಿಂದ ಉತ್ತರ ಬಂದ ಕೂಡಲೇ ಪ್ರಕಟಿಸುವೆವು. ನಮ್ಮ ಕಡೆಗೆ ಬಂದ ಅನೇಕ ಪತ್ರಗಳಲ್ಲಿ ಒಂದು ಪತ್ರದ ಸಾರಾಂಶವನ್ನು ಇಲ್ಲಿ ಕೊಟ್ಟಿರುವೆವು. ಸಂ. ಕ.)

(೧) ಪರಿಷತ್ತಿಗೆ ೪೦ ಜನ ಪ್ರತಿನಿಧಿಗಳಿದ್ದರು. ಆದರೂ ಹೊರಗಿನಿಂದ ಯಾರೂ ಬಂದಿರಲಿಲ್ಲವೆಂಬುದು ಸರಿಯೆ?

(೨) ೨೩ ಜನ ವೈದ್ಯರು ಸಿದ್ಧೌಷಧಿಗಳನ್ನು ತಂದಿದ್ದರು. ಅಜಮಾಸ ೧೦೦ ರಷ್ಟು ಅಪೂರ್ವ ವನಸ್ಪತಿಗಳನ್ನು ವೈದ್ಯರು ತಂದಿದ್ದರು. ಬಹು ಜನರು ಇವನ್ನೆಲ್ಲ ಚಿಕಿತ್ಸೆಯಿಂದ ತಿಳಿದುಕೊಂಡರು. ಕಲೆಕ್ಟರ ನಾಯಕರು ಸಹ ಚಿಕಿತ್ಸೆಯಿಂದ ಅರಿತುಕೊಂಡಿದ್ದರು.

(೩) ಕನ್ನಡದಲ್ಲಿ ಭಾಷಣವನ್ನು ಮಾಡಬೇಕೇ ಎಂದು ಅಧ್ಯಕ್ಷರು ಕೇಳಲು, ಯಾರೂ ಉತ್ತರ ಕೊಡಲಿಲ್ಲ.

(೪) ವಿಷಯ ನಿಯಾಮಕ ಮಂಡಲಿಯಲ್ಲಿ ಚರ್ಚೆಯಾಗುವದೂ, ಮತಭೇದವಾಗುವದೂ, ಕಾಂಗ್ರೆಸ್ಸಿನಲ್ಲಿ ಸಹ ನಡೆಯುವದು, ಅಂದ ಮೇಲೆ ಇಲ್ಲಿ ದೋಷ ಕೊಡುವದೇಕೆ?

(೫) ತ್ರಿದೋಷ ವಿಷಯವನ್ನು ಯಾವ ಡಾಕ್ಟರರೂ ಕೇಳಿಲ್ಲ. ಹೀಗಿದ್ದು ವೈದ್ಯರ ಮೇಲೆ ಹರಿಹಾಯ್ದುದು ಕೇವಲ ಅನ್ಯಾಯವು! ಪರದೇಶೀ ಔಷಧಗಳ ಪ್ರಸಾರಕ್ಕೆ ತಡೆಹಾಕುವದು ಎಷ್ಟು ದಿನಗಳಿಂದ ಚಳವಳ ನಡೆದಿದ್ದರೂ ಸಾಧ್ಯವಾಗಿಲ್ಲ. ಆದರೆ ಒಬ್ಬಿಬ್ಬ ಡಾಕ್ಟರರು ಆಯುರ್ವೇದದಿಂದ ವನಸ್ಪತಿಗಳನ್ನು ಅರಿತುಕೊಂಡ ಮಾತ್ರಕ್ಕೆ ಅದು ಸಾಧ್ಯವೇ?

(೬) ಟೀಕಾಚಾರ್ಯರಾದ ಈ ವೈದ್ಯರು ತಾವೇ ಮುಂದಕ್ಕೆ ಬಂದು ತ್ರಿದೋಷ ಸಂಶಯವನ್ನು ದೂರೇಕೆ ಮಾಡಲಿಲ್ಲ? ಇದು ಅವರಿಗೂ ಲಾಂಛನಾಸ್ಪದವಲ್ಲವೇ?

(೭) ಉಪದಂಶ ಮಲೇರಿಯಾ ಮೊದಲಾದವುಗಳ ಬಗ್ಗೆ ಮೊದಲೇ ಪ್ರಕಟಿಸಿದಂತೆ ನಿಬಂಧಗಳು ಬರಲೇಯಿಲ್ಲ. ಅದ್ದರಿಂದ ಚರ್ಚಿಸುವ ಭಾಗವೇ ಬೀಳಲಿಲ್ಲ. ಕೆಲವು ಕಾರಣಗಳಿಂದ ಯಾವದಾದರೊಂದು ವಿಷಯವು ಸಭೆಯ ಮುಂದೆ ಬಾರದಿದ್ದರೆ, ಅಲ್ಲಿಯೇ ಇದ್ದ ಈ ಟೀಕಾಚಾರ್ಯರೇಕೆ ಆ ವಿಷಯವನ್ನು ಎತ್ತಲಿಲ್ಲ?

—ಸತ್ಯವಾದೀ ವೈದ್ಯ

ಕನ್ನಡಿಗರೂ ಮಹಾರಾಷ್ಟ್ರೀಯರೂ

(ವಸಂತ ವಿರಾಮದಲ್ಲಿ (May vacaton) ನಮ್ಮ ಸ್ನೇಹಿತರೊಬ್ಬರು ಪುಣೇಕ್ಕೆ ಹೋಗಿದ್ದರು. ಅವರು ಅಲ್ಲಿಯ ಕೆಲವು ಪ್ರಸಿದ್ಧ ಮಹಾರಾಷ್ಟ್ರೀಯರಿಗೆ ಭೆಟ್ಟಿಯಾಗಿ ಏಕೀಕರಣದ ವಿಷಯಕ್ಕೆ ಮಾತನಾಡಿದರು. ಅದನ್ನು ಸಂಕ್ಷಿಪ್ತವಾಗಿ ಇಲ್ಲಿ ಕೊಟ್ಟಿದ್ದೇವೆ ಸಂ ಕ.)

ಶ್ರೀ ನ ಚಿಂ. ಕೇಳಕರ:—ಇವರು ಕೇಸರೀ ಪತ್ರದ ಸಂಪಾದಕರು ಪ್ರ:—ಭಾಷಾವಾರ ಪ್ರಾಂತ ರಚನೆಯ ಬಗ್ಗೆ ನಿಮ್ಮ ಮತವೇನು? ಉ:—ಆ ತತ್ವವು ನನಗೆ ಸಂಪೂರ್ಣವಾಗಿ ಮಾನ್ಯವದೆ. ಇನ್ನು ಹಾಗೆ ಪ್ರಾಂತರಚನೆ ಮಾಡುವಾಗ ಗಡಿನಾಡಿನ ಬಗ್ಗೆ ಕೆಲವು ಮತಭೇದಗಳು ಆಗಬಹುದು. ಅವುಗಳನ್ನು ನಾವು ನಿರ್ಣಯಿಸಲಿಕ್ಕೆ ಬೇಕು. ಆದರೆ ಸಧ್ಯಕ್ಕೆ ಜಗಳಾಡುತ್ತ ಕೂಡದೆ ಎಲ್ಲರು ಕೂಡಿ ಸ್ವರಾಜ್ಯ ದೊರಕಿಸಲಿಕ್ಕೆ ಬೇಕು. ಪ್ರ:—ಕರ್ನಾಟಕದಲ್ಲಿರುವ ಮರಾಠಿಗರು ಹೇಗೆ ವರ್ತಿಸಬೇಕು. ಉ:—ಯಾವ ಪ್ರಾಂತದಲ್ಲಿ ಯಾರು ಸ್ಥಿರವಾಗಿರುವದನ್ನು ನಿಶ್ಚಯಿಸುವರೋ ಆ ಪ್ರಾಂತಕ್ಕೆ ಅವರು ತಮ್ಮ ಶಕ್ತಿ, ಯುಕ್ತಿ, ಧನ, ವಿದ್ಯೆ ಮುಂತಾದವುಗಳನ್ನು ಕೊಡಲೇ ಬೇಕು. ಆಯಾ ಪ್ರಾಂತದ ಭಾಷೆಯನ್ನು ಅವರು ಕಲಿಯಲೇ ಬೇಕು ಇದನ್ನು ಪ್ರೋತ್ಸಾಹಿಸಲಿಕ್ಕೆ ಬೇಕು ತಾವು ಮರಳಿ ತಮ್ಮ ಪ್ರಾಂತಕ್ಕೆ ತಿರುಗಿ ಹೋಗುವವರಿದ್ದರೊಂದು ಮಾತು ಬೇರೆ ಇಲ್ಲದಿದ್ದರೆ ಯಾವ ಪ್ರಾಂತದಲ್ಲಿ ಅವರು ವಾಸವಾಗಿರುವರೋ ಅದರ ಗೌರವವನ್ನು ಹೆಚ್ಚಿಸುವದರಲ್ಲಿಯೇ ತಾವು ಬಿಟ್ಟು ಬಂದ ಪ್ರಾಂತದ ಗೌರವವನ್ನು ಬೆಳಿಸಿದಂತಾಗುವದು. ಪ್ರ:—ಸಂಸ್ಥಾನಗಳಲ್ಲಿ ಯಾವ ಭಾಷೆ ನಡೆಯುವದು ಅವಶ್ಯವು? ಉ:—ಆಯಾ ಸಂಸ್ಥಾನದ ಪ್ರಜೆಗಳ ಭಾಷೆಯೇ ನಡೆಯುವದು ಅತ್ಯವಶ್ಯವು. ಇಂದೂರ, ಗಾಯಕವಾಡ, ಗ್ವಾಲೇರ ಮುಂತಾದ ದೊಡ್ಡ ಸಂಸ್ಥಾನಿಕರು ಸಹ ಆಯಾ ಪ್ರಜೆಗಳ ಭಾಷೆಯನ್ನೇ ಮುಂದೆ ಮಾಡುತ್ತಿರುವರು. ಗಾಯಕವಾಡ ಮಹಾರಾಜರು ಗುಜರಾಥೀ ಭಾಷೆಯಲ್ಲಿ ಒಳ್ಳೇ ವಕ್ತೃಗಳಿರುವರು. ಇದೇ ಮೇಲು ಪಂಕ್ತಿಯನ್ನು ಮಿಕ್ಕ ಸಂಸ್ಥಾನಿಕರಾದರೂ ಅನುಸರಿಸಬೇಕು.

ಶ್ರೀ ಬಾಬೂರಾವ ಗೋಖಲೆ.

ಇವರು 'ಮರಾಠಾ' ಪತ್ರದ ಸಂಪಾದಕರು. ಪ್ರ:—ಏಕೀಕರಣದ ಬಗ್ಗೆ ತಮ್ಮ ಮತವೇನು? ಉ:—ಈ ತತ್ವವು ನನಗೆ ಸಂಪೂರ್ಣ ಮಾನ್ಯವಿರುವದು. ಭಾಷಾವಾರ ಪ್ರಾಂತರಚನೆಯಾಗುವದು ಅವಶ್ಯವು. ಪ್ರ:—ಕರ್ನಾಟಕದಲ್ಲಿಯ ಮರಾಠಿಗರು ಹೇಗೆ ವರ್ತಿಸಬೇಕು. ಉ:—ಅವರು ಆ ಪ್ರಾಂತದ ಏಳ್ಗೆಯೂ ಆ ಭಾಷೆಯ ಬಗ್ಗೆಯೂ ಪ್ರಯತ್ನ ಮಾಡಬೇಕು. ಆದರೆ ತಮ್ಮ ಭಾಷೆ ಹಾಗೂ ಸಂಸ್ಕೃತಿ ಇವುಗಳನ್ನು ಬಿಡತಕ್ಕದ್ದಲ್ಲ. ಪ್ರ:—ಪುಣೆಯಲ್ಲಿಯ ಕನ್ನಡಿಗರ ಶಿಕ್ಷಣದ ವ್ಯವಸ್ಥೆ ಏನು? ಉ:—೩೦ ಜನ ಹೆತ್ತವರು (Parents) ಕೂಡಿ ಅರ್ಜಿ ಕೊಟ್ಟರೆ ನಾವು ಮುನಸೀಪಾಲಿಟಿಯವರು ಕನ್ನಡ ಸಾಲೆಯನ್ನು ಕೊಡುತ್ತೇವೆ. ಈಗ ತೆಲುಗರಿಗೆ ಹಾಗೆ ಕೊಟ್ಟಿದ್ದೇವೆ. ಪ್ರ:—ಸಂಸ್ಥಾನಿಕರು ಯಾವ ಭಾಷೆಯನ್ನು ನಡೆಸಬೇಕು? ಉ:—ಅರ್ಥಾತ್ ಪ್ರಜೆಗಳ ಭಾಷೆಯನ್ನೇ. ಇನ್ನು ಆಪೀಲು ಮುಂತಾದವುಗಳನ್ನು ಸಂಸ್ಥಾನಿಕರು ತಮ್ಮ ಭಾಷೆಯಲ್ಲಿಯೇ ನಡೆಸಬಹುದು. ಈಗ ಅವರಿಗೆ ಪ್ರಜೆಗಳ ಭಾಷೆಯನ್ನು ಕಲಿಯಿರೆಂದು ಹೇಳುವದು ಸ್ವಲ್ಪ ಗೌಣ ಪಕ್ಷವು.

ಶ್ರೀ ಪಟವರ್ಧನ.

ಇವರು 'ಸಂಸ್ಥಾನೀ ಸ್ವರಾಜ್ಯ' ಎಂಬ ಮಾಸಪತ್ರಿಕೆಯ ಸಂಪಾದಕರು. ಪ್ರ:—ಸಂಸ್ಥಾನಗಳಲ್ಲಿ ಯಾವ ಭಾಷೆ ನಡೆಯಬೇಕು? ಉ:—ಪ್ರಜೆಗಳ ಭಾಷೆಯೇ ನಡೆಯತಕ್ಕದ್ದು. ಪ್ರ:—ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿ ಕನ್ನಡವೇ ನಡೆಯಬೇಕಲ್ಲವೇ? ಉ:—ಅದು ನನಗೆ ಗೊತ್ತಿಲ್ಲ ಸಾಮಾನ್ಯ ತತ್ವವು ನನಗೆ ಮಾನ್ಯವು ತಪಶೀಲನ್ನು ನೋಡಿ ನಿರ್ಣಯಿಸಬೇಕು.

(ಕರ್ಮವೀರ.)

ಬಂಗಾಲದಲ್ಲಿ ಮಧ್ವಾಚಾರ್ಯರ ಪ್ರವಾಸ.

ದಿ ಇಂಡಿಯನ್ ಹಿಸ್ಟರಿಕಲ್ ಕ್ವಾರ್ಟರ್ಲಿ ಎಂಬ ಪತ್ರಿಕೆಯ ಹೊಸ ಸಂಚಿಕೆಯಲ್ಲಿ ರಾಮೇಶ ಬಸು ಎಂಬವರು ಬರೆಯುವುದೇನಂದರೆ:—

ಮಧ್ವಾಚಾರ್ಯರು ವೀರ ವೈಷ್ಣವ ಸಂಪ್ರದಾಯದ ಕುಲಗುರುಗಳು. ಅವರು ೧೨೩೮ ರಿಂದ ೧೩೧೭ ರ ವರೆಗೆ ಇದ್ದರು. ಅವರ ಮತದ ವರ್ಚಸ್ಸು ವಿಜಯನಗರದ ಮತ್ತು ಬಂಗಾಲದ ಅರಸರ ಮೇಲೆ ವಿಶೇಷವಾಗಿ ಆಯಿತು. ಮಂಗಲ್ಲದ ಕಾಕತೀಯ ರಾಣಿಯು (ಬಹುಶಃ ರುದ್ರಾಂಬೆ ಎಂಬವಳು) ಅವರಿಗೆ ಬಹಳ ಸನ್ಮಾನ ಮಾಡಿದಳು. ಬಂಗಾಲದ ವೈಷ್ಣವ ಮತದ ಮೂಲವು ಶ್ರೀ ಮಧ್ವಾಚಾರ್ಯರ ಗ್ರಂಥಗಳಲ್ಲಿ ಇರುತ್ತದೆ. ಝಿಯಾವುದ್ದೀನ ಬಾರ್ನಿಯ ತರೀಖ-ಪಿರೋಝಶಾಹಿ ಮುಂತಾದ ಮುಸಲ್ಮಾನ ಇತಿಹಾಸಕರ್ತರ ಪುಸ್ತಕಗಳ ಮೇಲಿಂದ ಮಧ್ವಾಚಾರ್ಯರ ಬಂಗಾಲದ ಪ್ರವಾಸದ ವಿಷಯವಾಗಿ ಅನೇಕ ಸಂಗತಿಗಳು ಗೊತ್ತಾಗಬಹುದು. ಮಧ್ವಾಚಾರ್ಯರು ಉತ್ತರಕ್ಕೆ ಎರಡನೇ ಸಾರೆ ಪ್ರವಾಸ ಮಾಡಿದ್ದು ೧೨೭೬ನೆಯ ಇಸ್ವಿಯ ಸುಮಾರಕ್ಕೆ ಆಗಿನ ಕಾಲದಲ್ಲಿ ಗ್ಯಾಸುದ್ದೀನ ಬಲ್ಬನ್‌ನು ದಿಲ್ಲಿಯಲ್ಲಿ ಆಳುತ್ತಿದ್ದನು. ಮಧ್ವಾಚಾರ್ಯರಿಗೂ ಈ ಗ್ಯಾಸುದ್ದೀನನಿಗೂ ಭೆಟ್ಟಿಯಾಗಿತ್ತು. ಮುಂದೆ ಅವರು ಬದರಿಯ ಕಡೆಗೆ ಹೋದರು. ಅವರು ೧೨೮೦-೮೧ರ ಸುಮಾರಕ್ಕೆ ಬದರಿಯಿಂದ ಮರಳಿ ಬಂದರು. ಆಗ ಗ್ಯಾಸುದ್ದೀನನು ಬಂಗಾಲವನ್ನು ಆಳುತ್ತಿದ್ದ ಮುಘೀಸುದ್ದೀನ ತೋಗ್ರುಲಖಾನನ ವಿರುದ್ಧ ಕಾಳಗಕ್ಕೆ ಹೊರಟಿದ್ದನು. ಗ್ಯಾಸುದ್ದೀನನು ಬಂಗಾಲಕ್ಕೆ ಬಂದು ಪೂರ್ವಬಂಗಾಲದಲ್ಲಿ ಸುವರ್ಣಗ್ರಾಮದ ಅರಸನಾದ ಧನೋಜರಾಯರೊಡನೆ ಸ್ನೇಹವನ್ನು ಬೆಳಿಸಿದನು. ಈ ಧನೋಜರಾಯನು ಮಧ್ವಾಚಾರ್ಯರು ಬಂಗಾಲದಲ್ಲಿ ಪ್ರವಾಸ ಮಾಡುವಾಗ ಅವರನ್ನು ಬಹಳವಾಗಿ ಸತ್ಕರಿಸಿದನು ಮಧ್ವಾಚಾರ್ಯರ ಕಾಲದ ಅನೇಕ ಮಹಾ ಪಂಡಿತರು ಬಂಗಾಲದವರಾಗಿರುವರು. ಉದಾ: ಭಕ್ತಿರತ್ನಾವಲಿಯ ಕರ್ತನಾದ ವಿಷ್ಣುಪುರಿಯು, ಮಾಧವೇಂದ್ರಪುರಿ ಎಂಬವರು, ಬಂಗಾಲದವರು ಆದ ಕಾರಣ ಬಂಗಾಲದ ಅನೇಕ ಪುಸ್ತಕಗಳನ್ನು, ಶೋಧಮಾಡಿದರೆ ಮಧ್ವಾಚಾರ್ಯರ ಬಂಗಾಲದ ಪ್ರವಾಸದ ಮೇಲೆ ಹೆಚ್ಚಿಗೆ ಬೆಳಕು ಬೀಳಬಹುದು.

(ಜಯ ಕರ್ನಾಟಕ.)

ನನಗೆ ಹೊಳೆದಂತೆ.

ನಾಗಪೂರದಲ್ಲಿ ಎಮ್. ಎ. ಪರೀಕ್ಷೆ ಪಾಸಾಗಿ ವಕೀಲಿ ಮಾಡುತ್ತಿರುವವರೆಂದರೆ ಶ್ರೀ ಗಾರವಾಡಕರೊಬ್ಬರೇ ಎಂದು 'ಮುಂದಾಳು'ವು ಹೇಳುತ್ತದೆ. ಇದು ನಿಜವೇ ಹೇಗೆಂಬುದನ್ನು ಕೊಂಚಾದರೂ ತಿಳಿಸು ಇಚ್ಛಿಸೊಂದು 'ಮುಂದಾಳು'ವು ಹೇಳಲಿ! ‡ ‡ ‡

ಕಂಠೀರವನಲ್ಲಿ ಯೂನಿಯನ್ ಜಾಕಿರುವದು ಹಿಂದೀಯರಿಗೆ ತಮ್ಮ ಸ್ಥಿತಿಯನ್ನು ತಿಳಿಸುವದಕ್ಕಾಗಿ ಎಂಬದೊಂದು 'ಕೊಡಕು' ಉತ್ತರವು ನನಗೆ ಕೊಡಲ್ಪಟ್ಟಿದೆ. ಇದೇನು ನನಗೆ ಸಮಂಜಸವಾಗಿ ತಾಣದು. ‡ ‡ ‡ ‡ ‡

ಸರ ಪ್ರಫುಲ್ಲಚಂದ್ರರಾಯರು ಖುಲ್ನಾ ಜಿಲ್ಲಾ ಪರಿಷತ್ತಿನ ತಮ್ಮ ಅಧ್ಯಕ್ಷರ ಭಾಷಣದಲ್ಲಿ ಪರದೇಶಗಳಿಗೆ ಹೋಗಿಬಂದ ನಮ್ಮ ಭಾರತೀಯರಿಗೆ ಮಂಗಳಾರತಿಯನ್ನು ಚನ್ನಾಗಿ ಮಾಡಿದರು! ಬ್ಯಾರಿಷ್ಟರರೂ, ವಿಲಾಯತಿಗೆ ಹೋಗಿ ಬಂದ ಇತರ ಹಿಂದೀಯರೂ, ಕೇವಲ ಪರದೇಶಿ ಉಡುಪನ್ನೇ ತೊಡುವರು; ಸ್ವದೇಶೀ ಬಟ್ಟೆ ಮತ್ತು ಸ್ವದೇಶೀ ಪದಾರ್ಥಗಳನ್ನು ಹಳಿಯುವದೇ ತಮ್ಮ ಪುರುಷಾರ್ಥವೆಂದು ತಿಳಿಯುವರು. ಸಿಗರೇಟುಗಳನ್ನು ಯಥೇಷ್ಟವಾಗಿ ಸೇದುವರು. ನಮ್ಮ ಸಂಸ್ಕೃತಿಯನ್ನು ತುಚ್ಛವಾಗಿ ಎಣಿಸುವರು, ಎಂಬದಾಗಿ ಅವರನು ಹಳಿದು, ಅವರು ದೇಶದ್ರೋಹಿಗಳೆಂದು ಸಾರಿದರು! ಇಂತಹ ಮಹನೀಯರಿಗೂ ಅವರ ಸಂಗಡ ವ್ಯವಹಾರ ಮಾಡಿದವರಿಗೂ ಬಹಿಷ್ಕಾರ ಹಾಕಿದರೆ ಶ್ರೀ ಮದುತ್ತರಾಧಿ ಮಠಾಧೀಶರ ತಪ್ಪೇನು? ಅವರೆ, ವಿಲಾಯತಿಯಿಂದ ಬಂದ ಈ ಮಹನೀಯರಂತೆಯೇ ಅಥವಾ ಅವರಿಗಿಂತ ಒಂದು ತೂಕ ಹೆಚ್ಚು ಆಧ್ಯಕ್ಷತೆಯಿಂದ ವಿಲಾಯತಿಯನ್ನು ನಕಲಿಯಲ್ಲಿಯೂ, ಭುಕ್ತಿಯಲ್ಲಿಯೂ ಸಹ ಕಾಣದೇ ಮೆರೆಯುತ್ತಿರುವ ನಮ್ಮ ಬಂಧುಗಳಿಗೂ ಶ್ರೀಗಳವರು ಬಹಿಷ್ಕಾರ ಹಾಕದಿರುವದು ಮಾತ್ರ ತಪ್ಪೆಂದು ನನ್ನ ತಂಗುರವದ! ‡ ‡ ‡ ‡ ‡

—ಓದುಗ

"ನನ್ನ ತುಣುಕು ಪಹಿಯಿಂದ"

ಪ್ಯಾರೀಸ ದೇಶೀಯರು ಶುಭಾಶುಭ ಯಾವ ಕಾರ್ಯಕ್ಕೂ ೧೩ ನೆಯ ಅಂಕಿಯನ್ನು ಉಪಯೋಗಿಸುವದಿಲ್ಲ. ಹಿಂದಿಯರಿಗಿರುವಂತೆ ಅವರಿಗೂ ಅನೇಕ ಮೂಢ ನಂಬಿಕೆಗಳಿರುವವು. ಅವರೆ ಇದು ಎಲ್ಲದಕ್ಕಿಂತ ಬಲವತ್ತರವಾದುದು.

ಶೇಕ್ಸಪಿಯರ ಮಹಾಕವಿಗೆ ಆಂಗ್ಲೇಯ ಭಾಷೆಯಲ್ಲಿ ೧೫,೦೦೦ ಶಬ್ದಗಳು ಗೊತ್ತಿತ್ತು; ಮಿಲ್ಟನ್ನನಿಗೆ ೮೦೦೦ ಮಾತ್ರ ಗೊತ್ತಿತ್ತು. ಸಾಧಾರಣ ವಿದ್ಯಾವಂತನಿಗೆ ಸಾಮಾನ್ಯವಾಗಿ ಮಿಲ್ಟನ್ನನಷ್ಟು ಶಬ್ದಗಳ ಪರಿಚಯವಿರುತ್ತದೆ. ಸಾಧಾರಣ ಮನುಷ್ಯನಿಗೆ (ಆಂಗ್ಲೇಯ ಭಾಷೆಯನ್ನೇ ಮಾತನಾಡತಕ್ಕವನು) ೩—೪ ಸಾವಿರ ಶಬ್ದಗಳ ಪರಿಚಯವಿರುತ್ತದೆ.

ಜೇನರ ಹುಳುವಿನ ಬಲೆಯು ೧೦'೦೦೦ ಎಳೆಗಳನ್ನು ಒಟ್ಟುಗೂಡಿಸಿ, ಮಾನವನ ತಲೆ ಕೂದಲೊಂದಕ್ಕೆ ಹೋಲಿಸಿ ನೋಡಿದ ವಿಜ್ಞಾನ ಶಾಸ್ತ್ರವೇತ್ತನೊಬ್ಬನು ಬಲೆಯು ಎಳೆಯೇ ತೆಳ್ಳನೆಯದೆಂಬ ನಿರ್ಧಾರಕ್ಕೆ ಬಂದಿರುತ್ತಾನೆ.

"ವಿಶ್ವಭಾರತಾ"

ಸ್ವಲ್ಪ ವಿನೋದ.

ಹಾಗೆ ಮಾಡಿದರೆ ಹೇಗೆ? ಹೀಗೆ ಮಾಡಿದರೆ ಹೇಗೆ? ಅಲ್ಲಿ ಹೋದರೆ ಹೇಗೆ? ಇಲ್ಲಿದ್ದರೆ ಹೇಗೆ? ಎಂಬದಾಗಿ ಹೊಸ ವ್ಯವಸಾಯವನ್ನು ಹುಡುಕಲಿಚ್ಛಿಸುತ್ತ, ಕೇವಲ ಹರಟೆಯಿಂದ ಕಾಲ ಕಳೆಯುತ್ತಿರುವವನಿಗೆ ಅವನ ಮಿತ್ರನು ಹೇಳಿದ್ದು—"ನೈಸರ್ಗಿಕ ಸೌಕರ್ಯವು ಬಹು ವಿಶಾಲವಾಗಿದ್ದರಿಂದ, ಹಿಮಾಲಯಕ್ಕೆ ಹೋಗಿ ಅಲ್ಲೊಂದು 'ಬರ್ಫಿನ ಕಾರ್ಖಾನೆ' ತೆರೆ!"

ಸೋಜಿಗದ ಸುದ್ದಿಗಳು.

ಶ್ರೀಮತಿ ವಾಟಸನ್ ಎಂಬವಳಿಗೆ ಒಂದೇ ಕಾಲಕ್ಕೆ ೪ ಹುಡುಗರು ಹುಟ್ಟಿದರು. ೩ ಗಂಡು, ೧ ಹೆಣ್ಣು. ತಂದೆಯು ಮನೆಗೆ ಬಂದೊಡನೆ, ತಾನು ಏಕಾ ಏಕೀ ೬ ಮಕ್ಕಳ—ಮೊದಲಿಗ ಇರ್ದರಿದ್ದರು-

ತಂದೆಯಾದೆನೆಂಬದನ್ನು ತಿಳಿದು, ಆಶ್ಚರ್ಯದಿಂದ ಏನೂ ಮಾತಾಡಲಿಲ್ಲನಂತೆ. ಅವನು ಬಡವನಾಗಿದ್ದುದರಿಂದ ಈ ಆರು ಮಕ್ಕಳ ಹೊಟ್ಟೆಗೆ ಹಾಕುವದು ಹೇಗೋ ತಿಳಿಯದಾಗಿದೆ. ಈ ನಾಲ್ವರ ಬಣ್ಣ ರೂಪಗಳು ಒಂದೇ ಸವನೇ ಇದ್ದದರಿಂದ, ಅವರನ್ನು ಗುರುತಿಸಲು ಅವರ ಮುಂಗೈಯಲ್ಲಿ ಬೇರೆ ಬೇರೆ ಬಣ್ಣದ ಧಾರೆಗಳನು ಕಟ್ಟಿದ್ದಾರೆ!

ಶ್ರೀ ಅವಾರಿಯವರ ಖಟ್ಲೆ.

ಶ್ರೀ ಅವಾರಿಯವರಿಗೆ ೪ ವರ್ಷ ಕಠಿಣ ಶಿಕ್ಷೆಯಾಯಿತು. ಶ್ರೀ ಅವಾರಿಯವರು ಇದನ್ನು ಶಾಂತತನದಿಂದ ಕೇಳಿ "ಇದೇನು ಬಹು ಕಠಿಣ ಶಿಕ್ಷೆಯಲ್ಲವೆಂ"ದು ನುಡಿದರು. ೫೦೦ ಜನರು ಕೋರ್ಟಿನ ಹೊರಗೆ ಈ ತೀರ್ಮಾನವನ್ನು ಕೇಳಲು ನೆರೆದಿದ್ದರು. ಶ್ರೀ ಅವಾರಿಯವರಿಗೆ ಮಾಲೆಯನ್ನು ಹಾಕಿ, ಅವರು ಕೋರ್ಟಿನಲ್ಲಿ ನಡಿಸಿದ ಉಪವಾಸ ವ್ರತವನ್ನು ಬಿಡಬೇಕೆಂದು ಹೇಳಿದರು. ಇದಕ್ಕವರು ಒಪ್ಪಲಿಲ್ಲ. ಈ ಶಸ್ತ್ರ ಕಾಯದೆ ಭಂಗದ ಸತ್ಯಾಗ್ರಹವನ್ನು ನಾಗಪೂರದಲ್ಲಿ ಮುಂದೆ ಸಾಗಿಸಲು ಅಲ್ಲಿಯ ನಗರ ಕಾಂಗ್ರೆಸ ಕಮಿಟಿಯವರು ಮುಂದೊಡೆದಿರುವರು.

ಭರತಖಂಡ.

ಉತ್ತರ ಹಿಂದುಸ್ಥಾನದಲ್ಲಿಯ, ಪ್ರಯಾಗ, ಕಾಶೀ, ಜಬ್ಬಲಪೂರ ಕಲಕತ್ತಾ, ನಾಗಪೂರ ಮೊದಲಾದ ಸ್ಥಳಗಳಲ್ಲಿ ಕಳೆದ ವಾರದಲ್ಲಿ ರಾತ್ರಿ ೧೯—೧೧ ಗಂಟೆಯ ಸಮಾರಕ್ಕೆ ೩ ಮಿನಿಟುಗಳ ವರೆಗೆ ಭೂಕಂಪವಾಗಲು, ಜನರೆಲ್ಲ ಬೆದರಿ ಮನೆಯ ಹೊರಗೆ ಓಡಿ ಬಂದರು! ಕೆಲಗೆಗಳು ಅದರಿದವು ಆದರೆ ಯಾರಿಗೂ ಏನೂ ಗಾಯವಾಗಿಲ್ಲ.

ಬೆಳಗಾಂವ ಜಿಲ್ಹೆಯ ಪತ್ರ.

(ನಮ್ಮ ಸ್ವಂತ ಸುದ್ದಿಗಾರರಿಂದ)

ಬೆಳಗಾಂವಿ:— ಇದೇ ತಿಂಗಳದಿಂದ ಬೆಳಗಾಂವಿಯಿಂದ ಲೋಂಡಾ ತನಕ ಹೊಸದಾಗಿ ಗಾಡಿಯನ್ನು ಪ್ರಾರಂಭ ಮಾಡಿರುತ್ತಾರೆ. ಮುಂಜಾನೆ ಬೆಳಗಾಂವಿಯಿಂದ ೭ ಘಂಟೆಗೆ ಹೊರಡುವದು ಲೋಂಡಾದಿಂದ ಬೆಳಗಾಂವಿಗೆ ೪ ಘಂಟೆಗೆ ಬರುವದು ಮುಂಜಾನೆ ಗಾಡಿಯು ಪ್ರವಾಸಿಕರಿಗೆ ಉಪಯೋಗವಿಲ್ಲದವಾಗಿದೆ ಮಿರಜಿಯಿಂದ ರಾತ್ರಿ ೧ ಘಂಟೆಗೆ ಬೆಳಗಾಂವಿಗೆ ಬರುವ ಗಾಡಿಯು ಲೋಂಡಾ ತನಕ ಹೋದರೆ ನೆಟ್ಟಗೆ ಆಗುವದು ಇಲ್ಲದಿದ್ದರೆ ೧ ಘಂಟೆಗೆ ಗಾಡಿಗೆ ಬಂದ ಪ್ರವಾಸಿಕರು ಬೆಳಗಾಂವಿ ಸ್ಟೇಶನ್ನದ ಮೇಲೆ ಮುಂಜಾನೆ ೭ ಘಂಟೆಯ ತನಕ ಸ್ಟೇಶನ್ನದ ಮೇಲೆ ಬೀಳಬೇಕಾಗುವದು. ಇತ್ತ ಕಡೆಗೆ ರೇಲ್ವೇ ಕಂಪನಿಯವರೂ ರೇಲ್ವೇ ಮಂಡಳದ ನಾಗೇಶರಾವ, ಮರಾಠೆಯವರೂ ಲಕ್ಷ್ಯ ಕೊಡುವರೋ? .

ಸಾಂಗ್ಲಿ ಸಂಸ್ಥಾನದಲ್ಲಿ ಕೃಷ್ಣಾ ನದಿಗೆ ಹೊಸ ಪೂಲು ಕಟ್ಟುವ ಕೆಲಸವು ನಡೆದಿದೆ ಧರೆ ತಗೆಯುವ ಕಾಲಕ್ಕೆ ಒಂದು ವ್ಯಾಘನ ತೋಳಿನ ಮೂರ್ತಿಯು ದೊರಕಿದೆ. ಅದನ್ನು ನದಿ ಹತ್ತಿರ ಪಶುಪತೀಶ್ವರ ಗುಡಿಯಲ್ಲಿ ಇಟ್ಟಿರುತ್ತಾರೆ. ಧರ್ಮ ಅಭಿಮಾನಿ ಲಿಂಗಾಯಿತ ಜನರು ಯೋಗ್ಯ ಸ್ಥಳದಲ್ಲಿ ಮೂರ್ತಿಯನ್ನು ಸ್ಥಾಪನಾ ಮಾಡಬೇಕೆಂದು ವಿಚಾರ ನಡಿಸಿರುತ್ತಾರೆ,

(ಟಿಪ್ಪಣಿ:— ಈ ಸುದ್ದಿಯಲ್ಲಿರುವ ವ್ಯಾಘ ತೋಳಿನದೆನ್ನುವ ಮೂರ್ತಿಯು ನಿಜವಾಗಿ ಮೂರ್ತಿ ಕಲ್ಲು ಆಂದರೆ ಮಾಸ್ತಿ ಕಲ್ಲು. ಕರ್ನಾಟಕದ ಅನೇಕ ಸ್ಥಳಗಳಲ್ಲಿ ಇವು ದೊರೆಯುತ್ತವೆ ಪ್ರಾಚೀನ ಕಾಲದಲ್ಲಿ ಪತಿಯೊಡನೆ ಸತಿಹೋದ ಸ್ತ್ರೀಯರ ಜ್ಞಾಪಕಾರ್ಥವಾಗಿ, ಈ ಕಲ್ಲುಗಳನ್ನು ನಿಲ್ಲಿಸುತ್ತಿದ್ದರು. ಈ ಕಲ್ಲುಗಳಲ್ಲಿ ಸ್ತ್ರೀಯರ ಎಡದ ಅರ್ಧ ಭಾಗವು ಕೆತ್ತಲ್ಪಟ್ಟು, ಬಲ ಕೈ ಮೇಲಕ್ಕೆ ಎತ್ತಲ್ಪಟ್ಟಿರುತ್ತದೆ. ಕೆಳಕ್ಕೆ ಶಿಲಾ ಲೇಖವೂ ಇರುತ್ತದೆ. ಆದ್ದರಿಂದ ಈ ಐತಿಹಾಸಿಕ ದೃಷ್ಟಿಯಿಂದ ಈ ಮೂರ್ತಿಯನ್ನು ಪರೀಕ್ಷಿಸಬೇಕಾಗಿ ಸೂಚನೆ ಇದೆ)

ವಾಙ್ಮಯ ಪರಿಚಯ.

ಹರಿದಾಸ ಕೀರ್ತನ ತರಂಗಿಣಿ

ಶ್ರೀ ಪುರಂದರ ದಾಸರ ಕೃತಿಗಳು ಭಾಗ ೨

ದಾಸರ ಹಾಡುಗಳು ಕನ್ನಡ ನಾಡಿನ ಗುಡಿಗಳಂತಿವೆ. ಕನ್ನಡಕ್ಕೆ ಕಳೆಯುದ್ದದೇ ಅವುಗಳಿಂದ. ಈ ಹಾಡುಗಳನ್ನು ಉಡಿಪಿಯ ವಾಮನ ಜೆ ಗುರುರಾಯರೂ ಬೆಳಗಾಂವಿಯ ಅಬಾಜಿ ರಾಮಚಂದ್ರ ಸಾವಂತ ರವರೂ ಈ ಮೊದಲೇ ಮುದ್ರಿಸಿರುವರು. ಅವುಗಳಲ್ಲಿ ಮಾತ್ರಾ ದೋಷಗಳು ಅನೇಕವಿರುವವು. ಅದುದರಿಂದ ತಾಳಕ್ಕೆ ಸರಿಯಾಗಿ ಅವುಗಳನ್ನು ಹೇಳಲಿಕ್ಕೆ ಎಡಬಾಗುತ್ತಲಿದ್ದಿತು. ಈಗ ಡಿ. ನಾಗೇಶರಾಯರು ಪುರಂದರ ದಾಸರ ಕೃತಿಗಳನ್ನು ಮಾತ್ರ ದೋಷಗಳಿಲ್ಲದಂತೆ ತಾಳಕ್ಕೆ ತಕ್ಕಂತೆ ಪರಿಶೋಧಿಸಿ ಮುದ್ರಿಸಿದ್ದಾರೆ. ಇದಕ್ಕೆ ಕನ್ನಡಿಗರು ಅವರಿಗೆ ಋಣಿಯಾಗಿದ್ದಾರೆ. ಆದರೆ ಕೆಲವು ಹಾಡುಗಳಲ್ಲಿ ಪ್ರಕ್ಷಿಪ್ತತೆಯ ವಾಸನೆ ಕಂಡು ಬರುತ್ತಿದೆ. ತಿಂಡಿ ಮೊದಲಾದ ಶಬ್ದಗಳು ಮೈಸೂರ ಪ್ರಾಂತದವು. ಇಂತಹ ಶಬ್ದಗಳನ್ನು ಪುರಂದರ ದಾಸರು ಉಪಯೋಗ ಮಾಡಿರಬಹುದೇ? ದಾಸರು ಅತ್ಯೋನ್ನತಿಪರರು, ವಿಶ್ವೋನ್ನತಿ ಪ್ರವಣರು. ಇಂಥವರು ತಮ್ಮ ಕುಲದ ಹಿತವನ್ನಷ್ಟೇ ನೆನೆದು

"ಹಿಂದೆ ಬರೆದ ಬರಹ ಹೇಗಾದರಾಗಲಿ,
ಮುಂದೆನ್ನ ವಂಶದಲಿ ಜನಿಸುವರ ಕಾಯೋ"॥ (೫೦) ಎಂದು

ಹಾಡುವುದು ಶಕ್ಯವೇ?

ಯಾಕೆ ಚಿಂತಿಪೆ ಬರಿದೆ ನೀ ವಿಧಿ ಬರೆದ ।
ಪಾಕು ತಪ್ಪದು ಹಣೆಯೊಳು, ಮರುಳೆ ॥
ಹುಟ್ಟಲಿಕೆ ಮೊದಲೆ ತಾಯ, ಮೊಲೆಯೊಳಗೆ ।
ಇಟ್ಟಿದ್ದಿಯೇ ಕ್ಷೀರವ ॥

ಇಂತಹ ವಿಚಾರವೇ ಸ್ವಲ್ಪ ಹೆಚ್ಚು ಕಡಿಮೆ ಇವೇ ಶಬ್ದಗಳಿಂದ ಬೇರೊಂದೆಡೆಯಲ್ಲಿ ವ್ಯಕ್ತವಾಗಿದೆ. ಅವೇ ಅವೇ ವಿಚಾರಗಳನ್ನು ಬೇರೆ ಬೇರೆ ಹಾಡುಗಳಲ್ಲಿ ಹೆಣೆಯಲು ಕಾರಣವೇನು?

ಮಲಗಿ ಪಾಡಿದರೆ ಕುಳಿತು ಕೇಳುವನು ।
ಕುಳಿತು ಪಾಡಿದರೆ ನಿಂತು ಕೇಳುವನು ।
ನಿಂತು ಪಾಡಿದರೆ ನಲಿದು ಕೇಳುವನು ।

ಎಂಬುದನ್ನು

ಮಲಗಿ ಪರವಶಾದರದಿ ಪಾಡಲು ।
ಕುಳಿತು ಕೇಳುವ ಕುಳಿತು ಪಾಡಲು ।
ನಿಲುವ ನಿಂತರೆ ನಲಿವ ನಲಿದರೆ ಒಲಿವ ನಿಮಗೆಂದಾ ॥ ಎಂಬ

ಜಗನ್ನಾಥದಾಸರ ಪದ್ಯದೊಡನೆ ಹೋಲಿಸಿ ನೋಡಿರಿ. ಜಗನ್ನಾಥರಾಯರು ಪ್ರತಿಭಾ ಶಾಲಿಗಳಾದವರು. ಅವರು ಪುರಂದರ ದಾಸರ ಹಾಡನ್ನೇ ಎತ್ತಿ ತಮ್ಮ ಪದ್ಯಗಳಲ್ಲಿ ಸೇರಿಸಿಕೊಂಡಿರಬಹುದೋ? ಅಥವಾ ಉಗಾಭೋಗವನ್ನು ಹಿಂದುಗಡೆ ಯಾರಾದರೂ ಪುರಂದರ ದಾಸರದೆಂದು ಸೇರಿಸಿದರೋ? ಇದನ್ನೆಲ್ಲ ಇಲ್ಲಿ ಬರೆಯಲು ಉದ್ದೇಶವಿದೆ. ವಿಜಯ ದಾಸರ ಹಾಡಿನ ಪುಸ್ತಕದಲ್ಲಿ ಪುರಂದರ ದಾಸರ ಹಾಡುಗಳು ಇವೆ. ಪುರಂದರ ದಾಸರ ಹಾಡಿನ ಪುಸ್ತಕದಲ್ಲಿ ಕನಕದಾಸರ ಪದಗಳು ಇವೆ. ಹೀಗಾಗಿ ಇಂಥ ಹಾಡುಗಳು ಇಂಥವರವೇ ಎಂದು ಹೇಳಲು ಕಠಿಣವಾಗಿವೆ. ಆದುದರಿಂದ ಪರಿಶೋಧಕರು ಇವನ್ನೆಲ್ಲ ವಿಚಾರಿಸಿ ತಾತ್ವಿಕ ರೀತಿಯಿಂದ ವಿಮರ್ಶಿಸಿ ಹಾಡುಗಳನ್ನು ಮುದ್ರಿಸಿದರೆ, ಕನ್ನಡ ವಾಙ್ಮಯಕ್ಕೆ ಅವರಿಂದ ಮತ್ತಷ್ಟು ಉಪಕಾರವಾಗುವುದು.

ಭರತಖಂಡ.

ಆಂಧ್ರ ಇತಿಹಾಸ ಸಂಶೋಧಕ ಮಂಡಲಿಯವರು ಜೂನ್ ೧೬—೧೭ ರಲ್ಲಿ ಕಲಿಂಗ-ದಿನವನ್ನು ಗಂಜಾಂ ಜಿಲ್ಲೆಯ ಮುಖಲಿಂಗದಲ್ಲಿ ಸರ ಎ. ಪಿ ಪೆಟ್ರೋ ಇವರ ಅಧ್ಯಕ್ಷತೆಯಲ್ಲಿ ಜರಗಿಸಬೇಕೆಂದು ನಿಶ್ಚಯಿಸಿದ್ದಾರೆ. ಒಂದು ಐತಿಹಾಸಿಕ ಪ್ರದರ್ಶನವೂ ಆ ಕಾಲದಲ್ಲಿ ಏರ್ಪಡಿಸಲ್ಪಡುವದು. ಕರ್ನಾಟಕ ಇತಿಹಾಸ ಮಂಡಲದವರು ಕನ್ನಡದ ರಾಷ್ಟ್ರ ಪುರುಷ, ರಾಜವಂಶಜರ ದಿನವನ್ನು ಯಾವಾಗ್ಗೆ ಜರಗಿಸುವರು?

ಮೈಸೂರ ಕರ್ನಾಟಕ

ಮಹಾತ್ಮರು ಬೆಂಗಳೂರಲ್ಲಿರುವದರಿಂದ ದಕ್ಷಿಣ ಹಿಂದುಸ್ಥಾನದ ಖಾದೀ ಪ್ರದರ್ಶನವನ್ನೂ ಪರಿಷತ್ತನ್ನೂ ಪ್ರತಿ ತಿಂಗಳ ೩ ರಿಂದ ೮ರ ವರೆಗೆ ಬೆಂಗಳೂರಲ್ಲಿ ಜರಗಿಸಬೇಕೆಂದು ಗೊತ್ತಾಗಿದೆ. ಇದರಲ್ಲಿ ಕರ್ನಾಟಕದ ಸಮಾವೇಶವಾಗುವದೋ ಇಲ್ಲವೋ ತಿಳಿಯದು. ಅಖಂಡ ಕರ್ನಾಟಕದ ಪ್ರವೇಶವಿರದಿದ್ದರೆ ಕೇವಲ ಮೈಸೂರ ಪ್ರಾಂತವು ಅದರಲ್ಲಿ ಸೇರುವದೇಕೆ?

ಇಹವೃತ್ತ.

ಬಾಗಲಕೋಟೆಗೆ ಮಳೆಯಿಲ್ಲ,
ಪಟವರ್ಧನ ಸರ್ಕಸ್ಸು ಬೇಗನೇ ಬರತಕ್ಕದ್ದಿದೆ

ಮನೋಹರ ಸ್ತ್ರೀ ಸಂಗೀತ ನಾಟಕ ಮಂಡಲದವರು ಇಲ್ಲಿಯ ಹೊಸ "ಶಿವಾನಂದ" ನಾಟಕ ಗೃಹದ ಪ್ರಾರಂಭೋತ್ಸವಕ್ಕಾಗಿ ಬರುವರಂತೆ! ಈ ಬಹುಮಾನವನ್ನು ಕನ್ನಡ ನಾಟಕ ಮಂಡಳಿಗಳಿಗೆ ಕೊಡುವದು ಚಾಲಕರ ಮನಸ್ಸಿಗೇಕೆ ಬರಲಿಲ್ಲ? ಕರ್ನಾಟಕ ಕರ್ನಾಟಕವೆಂಬ ಹೆಸರು ಎಲ್ಲ ಕಡೆಗೂ ಕೇಳಬರುವಾಗ್ಗೆ ಚಾಲಕರು ಅದನ್ನು ದುರ್ಲಕ್ಷಿಸಿದ್ದು ಸಮಂಜಸವಾಗಲಿಲ್ಲ.

ಊರಲ್ಲಿ ಲಗ್ನ ಸಮಾರಂಭಗಳು ಜೋಕ್ಕಂದದಿಂದ ನಡೆದಿವೆ. 'ಬ್ಯಾಂಡು' 'ತಾಸೇ'ಗಳಿಗೆ ನಮ್ಮ ಸಮಾಜದಿಂದ ಎಂದು ಅರ್ಧಚಂದ್ರಾಕೃತಿಯು ದೊರೆಯುವದೋ ನೋಡಬೇಕು. ಅದೇ ಪ್ರಕಾರ, ಜನರು ಸಕಾಲದಲ್ಲಿ ಊಟಕ್ಕೆ ಬಾರದಿರುವದು, ಅತಿಥಿಗಳು ಎಲೆಯ ಮೇಲೆ ಕುಳಿತಿದ್ದರೂ ಬೇಗನೆ ನೀಡಕೊಳ್ಳುವದು, ಸಕಾಲದಲ್ಲಿ ಎಲ್ಲ ಸಿದ್ಧತೆಯಾಗದಿರುವದು ಇವೇ ಮೊದಲಾದ ರೂಢಿಗಳು ಬೇಗನೇ ಮಾಯವಾಗುವಂತೆ ಸಮಾಜದವರೆಲ್ಲ ಪ್ರಯತ್ನಿಸುವದು ಅತ್ಯಾವಶ್ಯ. ಈ ಅವ್ಯವಸ್ಥೆಯಿಂದ, ಯಜಮಾನರಿಗೂ, ಅತಿಥಿಗಳಿಗೂ ಬೀಗರಿಗೂ ಕೂಡಿಯೇ ತೊಂದರೆಯಾಗುವದರಿಂದಲೂ ನಮ್ಮ ಸಮಾಜದಲ್ಲಿ ಇದು ಸಾರ್ವತ್ರಿಕವಾಗಿರುವದರಿಂದಲೂ ಸಮಾಜದ ಪ್ರಮುಖರು ಇತ್ತ ಕಡೆಗೆ ಗಮನಿಸತಕ್ಕದ್ದು.

ಪ್ರಸನ್ನ ವೆಂಕಟರಾಯರ ಪುಣ್ಯತಿಥಿಯನ್ನು ಭಾದ್ರಪದದಲ್ಲಿ ಈ ಸಲ ನೆರವೇರಿಸುವಾಗ್ಗೆ, ಅವರ ಚರಿತ್ರೆಯನ್ನೂ ಗ್ರಂಥಗಳನ್ನೂ ಪ್ರಕಟಿಸಬೇಕಾಗಿ ಕೆಲವರ ವಿಚಾರವಿದೆ. ಇದಕ್ಕೆ ಪ್ರಸನ್ನ ವೆಂಕಟರಾಯರ ಶಿಷ್ಯರು ಅವಶ್ಯವಾಗಿ ಸಹಾಯ ಮಾಡಬೇಕು. ಇವರ ರಸವತ್ತಾದ ಹಾಡುಗಳನ್ನು ಕೇಳುವದಕ್ಕೆ ಮೊನ್ನಿನ ಶುಕ್ರವಾರ ದಿನ ಅವರ ಮನೆಯಲ್ಲಿ ಇಲ್ಲಿಯ ಅವರ ಭಕ್ತರ ಒಂದು ಚಿಕ್ಕ ಕಚೇರಿಯಾಯಿತು.

ಶ್ರೀಕೃಷ್ಣ ಸಂಗೀತ ನಾಟಕ ಮಂಡಲದ ನಟರಲ್ಲಿ ಹೆಚ್ಚಿನಷ್ಟು ಸುಧಾರಣೆಯಾಗುತ್ತಲಿದೆ. ಮಂಡಳಿಯು ಈ ಊರಿನ ಬೇಗನೇ ಹೋಗುವದಿದೆ.

ಕರ್ನಾಟಕ ಇತಿಹಾಸ ಮಂಡಳದ ಪ್ರಚಾರಕರಾದ ಶ್ರೀ ರಾಜಪುರೋಹಿತರು ಅಜಂತಾ, ವೇರೂಳಗಳಲ್ಲಿಯ ಲೇಣಬಸ್ತಿಗಳನ್ನೂ ದೌಲತಬಾದದ ಕೋಟೆಯನ್ನೂ ನೋಡಿಕೊಂಡು, ಪಂಢರಪುರ, ಮಂಗಳವೇಢೆ, ಸೊಲ್ಲಾಪೂರಗಳನ್ನು ಐತಿಹಾಸಿಕ ದೃಷ್ಟಿಯಿಂದ ಸಂಶೋಧಿಸಿ ಇಲ್ಲಿಗೆ ಬಂದಿರುತ್ತಾರೆ. ಇಲ್ಲಿ ಇವರು, ಕರ್ನಾಟಕ ಇತಿಹಾಸ ಸಂಶೋಧನದ ವಿಷಯವಾಗಿ ಎರಡು ಉಪನ್ಯಾಸಗಳನ್ನು ಹೇಳುವರು. ಕನ್ನಡಿಗರಿಗೆ ಇತಿಹಾಸವಿಲ್ಲವೆಂದು ಬೀದಿಗಳಲ್ಲಿ ಹರಟೆ ಕೊಚ್ಚಲು ಇಲ್ಲಿಯ ಹಲವು ಮರಾಟಿಗರು ಮರೆಯುತ್ತಿದ್ದಿಲ್ಲ! ಆದರೆ ಇಂತಹ ಸಮಯದಲ್ಲಿ ಸಭೆಗೆ ಬಂದು ಖಂಡನವನ್ನು ಮಾಡುವ ಧೈರ್ಯವಿಲ್ಲ' ಜ್ಞಾನಾರ್ಜನೆಯ ದೃಷ್ಟಿಯಿಂದ ಸಭೆಗೆ ಬರುವಷ್ಟು ಔದಾರ್ಯವು ಇವರಲ್ಲಿಲ್ಲ! ಇವರಿಗನ್ನಬೇಕು ಮಹಾಪಂಡಿತರೆಂದು!

ಜಾಹೀರಾತ ಕೊಡತಕ್ಕವರೆ?

ಮೊದಲು "ಕನ್ನಡಿಗ"ನ ವ್ಯವಸ್ಥಾಪಕರಿಗೆ ತಾನಾಗಿಯೇ ಬಂದ ಈ ಪತ್ರವನ್ನು ಓದಿರಿ. ಆ ಮೇಲೆ ಯಾವ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತನ್ನು ಕೊಡತಕ್ಕದೆಂಬುದನ್ನು ನೀವೇ ನಿಶ್ಚಯಿಸರಿ.

ಕುಲಕರ್ಣಿ ಬ್ರದರ್ಸ ಮೋಟಾರ ಡ್ರೈವ್ಹಿಂಗ ಇನ್ ಸ್ಟಿಟ್ಯೂಶನ್ ೪೯೫ ಶನವಾರ ಪೇಠೆ ಪುಣೆ ಶಹರ

ತಾರೀಖು ೨೮ ಜುಲೈ

ರಾ ರಾ ವ್ಯವಸ್ಥಾಪಕ 'ಕನ್ನಡಿಗ' ಬಾಗಲಕೋಟ ಇವರಿಗೆ— ವಿ ವಿ ನಾನು ನಿಮಗೆ ಮುದ್ದಾಂ ಪತ್ರ ಬರೆಯಲು ಉದ್ಯುಕ್ತನಾಗಿದ್ದೇನೆ ಯಾಕಂದರೆ ನಿಮ್ಮ 'ಕನ್ನಡಿಗ'ನಲ್ಲಿ ಪ್ರಸಿದ್ಧವಾದ ನಮ್ಮ ಜಾಹಿರಾತಿನ ಪರಿಣಾಮ ಒಳ್ಳೇ ಚನ್ನಾಗಿ ಆಗಿದೆಂಬುದು ನನಗೆ ಕಂಡು ಬರುತ್ತದೆ ಆದ್ದರಿಂದ ನಮ್ಮ ಮೊದಲಿನ ಸಣ್ಣ ಜಾಹೀರಾತನ್ನು ತೆಗೆದು, ಅದರ ಬದಲಾಗಿ ಈ ಪತ್ರದ ಜೊತೆಯಲ್ಲಿ ಕಳುಹಿಸಿದ ದೊಡ್ಡ ಜಾಹಿರಾತನ್ನು ನಿಮ್ಮ ಪತ್ರದ ಅರ್ಧಪುಟದಲ್ಲಿ ಹಾಕಬೇಕಾಗಿ ಬೇಡಿಕೆ ಅದರ ಬೆಲೆ ಏನಾಗುವದು ಅದನ್ನು ತಿಳಿಸಬೇಕು ಕೊಡುವೆನು

ಜಿ. ಎಚ್. ಕುಲಕರ್ಣಿ ಮ್ಯಾನೇಜರ,

"ಕನ್ನಡಿಗ" ದಲ್ಲಿ ನಿಮ್ಮ ಜಾಹೀರಾತನ್ನು ಕೊಟ್ಟು ಗಿರಾಕಿಗಳನ್ನು ಪಡೆದು, ಲಾಭ ಹೊಂದಿರಿ. ತಡಬೇಡ ಈ ದಿನವೆ ಪತ್ರಬರೆಯಿರಿ.

—ವ್ಯವಸ್ಥಾಪಕ.

ವರ್ಗೀಕೃತ ಪ್ರಕಟನೆಗಳು

ಇದೊಂದು ಹೊಸಮಾದರಿಯನ್ನು ಕನ್ನಡಿಗರಿಗಾಗಿ 'ಕನ್ನಡಿಗ'ನು ಪ್ರಾರಂಭಿಸಿರುವನು. ಈ ಪ್ರಕಟನೆಗಳಲ್ಲಿ ಜನರು ತಮಗೆ ಬೇಕಾದ ಯಾವ ವಸ್ತುಗಳ ಬಗ್ಗೆಯೂ ಜಾಹೀರಾತವನ್ನು ಕೊಡಬಹುದು. ಉದಾಹರಣಾರ್ಥವಾಗಿ ವಿದ್ಯಾರ್ಥಿಗಳು ಹಳೇ ಗ್ರಂಥಗಳಿಗಾಗಿ; ಸಾಮಾನುಗಳನ್ನು ಕಳೆದುಕೊಂಡವರು ದೊರಕಿಸಿಕೊಳ್ಳುವದಕಾಗಿ; ಹಳೇ ಹೊಸ ಸಾಮಾನನ್ನು ಮಾರತಕ್ಕವರು ಗಿರಾಕಿಗಳನ್ನು ದೊರಕಿಸಲಿಕ್ಕಾಗಿ; ಗಿರಾಕಿಗಳು ಸಾಮಾನುಗಳ ಒಡೆಯರನ್ನು ಶೋಧಿಸುವದಕ್ಕಾಗಿ; ಭಂಡವಾಲು ಬೇಕಾದವರೂ ಮನೆ ಬಾಡಿಗೆಕೊಡತಕ್ಕವರೂ, ಅಥವಾ ಬಾಡಿಗೆಯಿಂದ ತೆಗೆದು ಕೊಳ್ಳುವವರೂ ತಮ್ಮ ಇಷ್ಟಪೂರ್ತಿಗಾಗಿ, ಇತ್ಯಾದಿ; ಇತ್ಯಾದಿ. ಈ ಪದ್ಧತಿಯು ಇಂಗ್ಲೀಷ ಪತ್ರಿಕೆಗಳಲ್ಲೆಲ್ಲ ಲೋಕಪ್ರಿಯವಾಗಿದೆ. ಕನ್ನಡದಲ್ಲಿಯಾದರೂ, ಲೋಕಪ್ರಿಯವಾಗುವದೆಂದು ನಾವು ನಂಬುತ್ತೇವೆ ಈಬಗ್ಗೆ ಕೆಳಗೆ ಕಾಣಿಸಿದಂತೆ ನಿಯಮಗಳಿರುತ್ತವೆ.

೨೦ ಶಬ್ದಗಳಿಗೆ ೧ ರೂ.

ಮುಂದಿನ ಪ್ರತಿಯೊಂದು ಶಬ್ದಕ್ಕೆ ೧ ಆಣೆ

ಪ್ರಕಟನೆಯೊಂದಿಗೆ ಹಣವು ಮುಂಗಡವಾಗಿ ಬರಬೇಕು.

ಜಾಹೀರಾತದಾರರು ಸಂಪೂರ್ಣ ಹೆಸರು ಮತ್ತು ವಿಳಾಸ ಕಳುಹಿಸಿಕೊಡಬೇಕು. ಅವಶ್ಯವಿದ್ದರೆ ಮಾತ್ರ ಇವು ಪ್ರಕಟಿಸಲ್ಪಡುವವು.

ಹೆಸರು ವಿಳಾಸಗಳನ್ನು ಪ್ರಕಟಿಸಲು ಇಚ್ಛೆ ಇಲ್ಲದವರಿಗೆ ಒಂದು ಸಂಖ್ಯೆಯು ಕೊಡಲ್ಪಡುವದು. "ವಿಳಾಸ, ಸಂಖ್ಯೆ...... ಕನ್ನಡಿಗ" ಇದಕ್ಕೆ ಸಹ ಬೆಲೆ ಕೊಡಬೇಕಾಗುವದು.

ಸ್ಥಳೀಕರು ನಮ್ಮ ಕಾರ್ಯಾಲಯಕ್ಕೆ ಬಂದು ಉತ್ತರವನ್ನು ನೋಡಿಕೊಳ್ಳಬೇಕು. ಪರಸ್ಥಳದವರಿಗೆ ಪೋಸ್ಟಿನಿಂದ ಅಂಚೇ ವೆಚ್ಚ ಪ್ರತ್ಯೇಕವಿಲ್ಲದೆ ಉತ್ತರಗಳು ಕಳಿಸಲ್ಪಡುವವು ಅದರ ಪತ್ರವ್ಯವಹಾರ ನಡೆದರೆ, ಅಂಚೇವೆಚ್ಚ ಕಳಿಸಬೇಕು. ಉತ್ತರಗಳು ಪರಸ್ಥಳದವರಿಗೆ ದೊರೆಯದೇ ಇದ್ದ ಪಕ್ಷದಲ್ಲಿ ನಾವು ಜವಾಬದಾರರಲ್ಲ. ನಾಲ್ಕಾಣೆ 'ಪೋಷ್ಟೇಜ' ಕೊಟ್ಟಲ್ಲಿ ರಜಿಷ್ಟರ ಮೂಲಕ ತಿಳಿಸುವೆವು. ಜಾಹೀರಾತಗಳಿಗೆ ಉತ್ತರ ಬರೆಯುವವರು ಸ್ಪಷ್ಟವಾಗಿಯೂ ಶುದ್ಧವಾಗಿಯೂ ಕೆಳಗೆ ಕಾಣಿಸಿದಂತೆ ಬರೆಯಬೇಕು:— "ವಿಳಾಸ ಸಂಖೆ ..... ಪ್ರಕಟನೆ ಶಾಖಾ, ಕನ್ನಡಿಗನ ಕಾರ್ಯಾಲಯ ಬಾಗಲಕೋಟೆ" ವಿಳಾಸಸಂಖ್ಯೆಗಳನ್ನು ಸ್ಪಷ್ಟವಾಗಿ ಬರೆಯುವದರ ಕಡೆಗೆ ಎಲ್ಲರೂ ಲಕ್ಷ್ಯಪೂರೈಸತಕ್ಕದ್ದು.

ಬೇಕಾಗಿದ್ದಾರೆ.

ಮಂಗಳೂರ ಕಡೆಯ ನುರಿತಂಥಹ ಮುದ್ರಕರು ಬೇಕಾಗಿದ್ದಾರೆ. ಯೋಗ್ಯತೆಯ ಪ್ರಕಾರ ಸಂಬಳ.

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ.

ಕರ್ನಾಟಕದಲ್ಲಿ ಸ್ಥಾಪಿತವಾದ ಹೊಸ ಜಾಯಿಂಟ ಸ್ಟಾಕ ಕಂಪನಿಗೆ ಪಾಲುಗಾರರನ್ನು ಕೂಡಿಸುವವರು ಬೇಕಾಗಿದ್ದಾರೆ. ತಿಂಗಳಿಗೆ ೧೦೦ರೂ ಸಂಬಳ ಅಥವಾ ಕಮಿಶನ್ ವಿಳಾಸ. ಸಂಖೆ ೩ "ಕನ್ನಡಿಗ"

ಸ್ಟೇಶನ್ನ ಶಹರ, ಹಳ್ಳಿಗಳಲ್ಲಿ ಗ್ರಂಥಗಳನ್ನು ಮಾರಾಟಮಾಡಲು ಉತ್ಸಾಹಿ ಪ್ರಾಮಾಣಿಕ ತರುಣರು ಬೇಕಾಗಿದ್ದಾರೆ. ದಳ್ಳಿ ದೊರೆಯುವದು. ವಿಳಾಸ— "ಸ್ವಧರ್ಮ" ಧಾರವಾಡ

ಡೇರೆ (Tents) ಗಳಿಗೆ ಉಪಯೋಗಿಸುವ ಬಾಜು ಗೋಡೆ (Side walls) ಗಳು ಹಳೇವು ಮಾರತಕ್ಕವಿವೆ

ಸಂಖೆ ೭ ವಿಳಾಸ "ಕನ್ನಡಿಗ"

ಜಾಹೀರ ನೋಟಿಸು.

ಯಾವತ್ತೂ ಜನರಿಂಗೂ ಈ ನೋಟೀಸಿನಿಂದಾ ತಿಳಿಸುವದೇನಂದರೆ— ಗದಗ ತಾಲ್ಲೂ ಗದಗ ಗ್ರಾಮದಲ್ಲಿ "ದಿ ಅಲಾಯನ್ಸ ಟ್ರೇಡಿಂಗ್ ಕಂಪನಿ ಗದಗ" ಅಂತಾ ನಾಮೇದ ಒಂದು ಅಂಗಡಿ ಇದ್ದು ಸದರ ಅಂಗಡಿಯಲ್ಲಿ ಮಿ|| ಡಿ. ಡಿ. ಪದಮಜಿ ಮತ್ತು ಮಿ|| ರಂಗಿಲದಾಸ ರಾಮದಾಸ ಪುಣೇಕರ ಅಂತಾ ಇಬ್ಬರು ಪಾಲಕಾರರು ಇರುತ್ತಾರೆ. ಮಿ|| ಡಿ. ಡಿ. ಪದಮಜಿ ಇವರು ಸದರ ಅಂಗಡಿಯಲ್ಲಿಯ ತಮ್ಮ ಹಿಶೆಯನ್ನು ತಾ|| ೧-೬-೨೭ ನೇ ಇಸ್ವಿಯಿಂದಾ ತೆಗೆದುಕೊಂಡುಹೋಗಿರುತ್ತಾರೆ. ಸದರ ಮಿ|| ರಂಗಿಲದಾಸ ಇವರು ಸದರ ಅಂಗಡಿಯನ್ನು ಸದರ ನಾಮೇಬಿಂದಾ ನಡಿಸುವರು. ಆದ್ದರಿಂದ ಸದರಿ ತಾರಿಖಿನಿಂದಾ ಮುಂದೆ ಯಾವತ್ತೂ ಕೊಡತಗೊಳ್ಳುವ ವ್ಯವಹಾರವು ವ ಜವಾಬದಾರಿಗಳು ಸದರ ಮಿ|| ರಂಗಿಲದಾಸ ಪುಣೇಕರ ಇವರದೇ ಇರುತ್ತದೆ. ಸದರ ಮಿ|| ಡಿ. ಡಿ. ಪದಮಜಿ ಇವರಿಗೆ ಯಾವ ತರದ ಕೊಡತಗೊಳ್ಳುವ ಜವಾಬದಾರಿಯು ಇರುವದಿಲ್ಲಾ ತಿಳಿಯುವದು.

N. K. Huilgol Pleader.
For D. D. Pudmji.

ಶ್ರೀಕೃಷ್ಣ ಸಂಗೀತ ಕನ್ನಡ ನಾಟಕ ಮಂಡಲವು

ತಾಜ ನಾಟಕಶಾಲೆಯ ಮನೆ ವೆಂಟಪೇಟೆ,
ಬಾಗಲಕೋಟೆ

ಗುಳೇದಗುಡ್ಡ ಶ್ರೀಮತಿ ಗಂಗೂಬಾಯಿಯವರ ಈ ಹೊಸ ನಾಟಕ ಕಂಪನಿಯಲ್ಲಿ ಅಭಿನಯಿಸಲು ಸುಸ್ವರೂಪ, ಸುಶೀಲ, ಸುಶಿಕ್ಷಿತ ಹಾಗೂ ಹಾಡು ಬಲ್ಲ ನಾಟ್ಯಕಲಾಭಿಜ್ಞರಾದ ಬಾಲ ಬಾಲಿಕೆಯರೂ, ಸ್ತ್ರೀ-ಪುರುಷರೂ

ಬೇಕಾಗಿದ್ದಾರೆ.

ಅವೇ ಪ್ರಕಾರ ಪೆಟ್ಟಿಗೆ ಹಾಗೂ ತಬಲಾ ಬಾರಿಸುವದರಲ್ಲಿ ನಿಪುಣರಾದವರೂ ಬೇಕಾಗಿದ್ದಾರೆ. ಇಚ್ಛೆಯಿದ್ದವರು ಸಮಕ್ಷಮ ಇಲ್ಲವೆ ಪತ್ರದ್ವಾರದಿಂದ ವಿಚಾರಿಸಿಕೊಳ್ಳಬೇಕು.

— ವ್ಯವಸ್ಥಾಪಕ

'ಕನ್ನಡಿಗ'ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ. ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆ ಯಾಗದಂಥ ೯೦೦೦ ಯಾರ್ಡ ಕೈಸೂಲು
ಪರಸ್ಥಳದವರಿಗೆ	ಮನಿಯಾರ್ಡರದಿಂದ ೧-೧೪-೦ ವಿ. ಪಿ. ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ ಯಾರ್ಡ ಕೈಸೂಲು
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ—	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೪-೦ ,, ವಿ. ಪಿ. ಯಿಂದ ೩-೧-೦
ಸರಕಾರ, ಮುನಸೀಪಾಲಿಟಿ, ಲೋಕಲ್ ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ. ಯಿಂದ ೫-೧-೦

ಬಿಡಿ ಸಂಚಿಕೆಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ —ವ್ಯವಸ್ಥಾಪಕ

ಗೃಹಕೃತ್ಯದ ನೋಟೀಸು.

ಗಲಗಲಿ ಪಾಂಡುರಂಗಾಚಾರ್ಯ ಕಟ್ಟಿ ಎಂಬುವರು ಕಳೆದ ಜುಲೈ ೨೮ ನೇ ತಾರೀಖಿನಲ್ಲಿ ವಿಜಾಪೂರದಲ್ಲಿ ಮೃತಪಟ್ಟಿರುತ್ತಾರೆ. ಇವರಿಗ ಕಳಗೆ ಬರುವ ಕಮಲಾಬಾಯಿ ಆದ ನಾನು ೨ ನೇ ಹೆಂಡತಿ ಗಿಯೂ ವೆಂಕುಬಾಯಿ ಎಂಬುವರು ೧ ನೇ ಹೆಂಡತಿ ಆಗಿಯು ಇರತ್ತೇವೆ ೧ನೇ ಹೆಂಡತಿಯಾದ ವೆಂಕುಬಾಯಿ ಎಂಬುವರು ನಮ್ಮ ಯಜಮಾನರು ತೀರಿಕೊಂಡ ಲಾಗಾಯತ ವಿಶ್ವಾಸವಿಲ್ಲದವರಾಗಿಯೂ ನನಗೆ ಎಲ್ಲ ಭಾಗದಲ್ಲಿಯೂ ನಮ್ಮ ಯಜಮಾನರ ಆಸ್ತಿ ವಿಷಯದಲ್ಲಿ ನಷ್ಟ ಪಡಿಸಲು ಅನೇಕ ಜನಗಳ ಸಹಾಯದಿಂದ ನನಗೆ ಮೋಸಪಡಿಸಬೇಕೆಂದಿರುತ್ತಾರೆ. ಅಲ್ಲದೇ ಇವರು ನನ್ನ ಸಮಕ್ಷಮ ವಿಜಾಪೂರದಲ್ಲಿ ನಮ್ಮ ತಂದೆ ಮತ್ತು ಚಿಕ್ಕಪ್ಪನವರು ಇವರ ಸೋದರಮಾವನವರಾದ ಹಣಮಂತಾಚಾರ್ಯರ ಸಮಕ್ಷಮ ಒಬ್ಬ ಹುಡಗನನ್ನು ದತ್ತಕ ಮಾಡಿಕೊಂಡು ನಿನ್ನನ್ನು ಹಾಳು ಮಾಡುತ್ತೇನೆಂದು ಹೇಳಿರುತ್ತಾರೆ. ೧ ನೇ ಹೆಂಡತಿ ವೆಂಕುಬಾಯಿಯವರು ನನ್ನ ಸಮ್ಮತಿ ಇಲ್ಲದೆ ದತ್ತಕ ತೆಗೆದುಕೊಳ್ಳಕೂಡದು. ಯಜಮಾನರ ಆಸ್ತಿ ಪೈಕಿ (೨) ಜಮೀನುಗಳು ವ್ಯಾಜ್ಯದಲ್ಲಿ ಬಿದ್ದಿದೆ. ಇದೆಲ್ಲ ಹೋಗಲಾಗಿ ೮|೧೦ ವರ್ಷ ಆದ ನಂತರ ತನ್ನ ಭಾಗದ ಆಸ್ತಿಗೆ ದತ್ತಕ ಮಾಡಿಕೊಳ್ಳಬಹುದು. ಶಿವಾಯ ಈಗ ಮಾಡಿಕೊಂಡದ್ದಾಗಲೀ ಅಥವಾ ದತ್ತಕಕ್ಕಾಗಿ ಬಂದದ್ದಾಗಲಿ ಇದು ನಿರ್ಮಿಸುವದಲ್ಲಿ- ಮುಂದೆ ಸಂಭವಿಸುವ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಾರೆ. ಖಂಡಿತ ತಿಳಿಯುವದು.

ಕಮಲಾಬಾಯಿ.

ಹಳ್ಳಿಯಲ್ಲಿ

ಹಾಯಸ್ಕೂಲ.

ಹಳ್ಳಿಗಳ ಸುಧಾರಣೆಯನ್ನೇ ತನ್ನ ಉದ್ದೇಶವನ್ನಾಗಿ ಮಾಡಿಕೊಂಡ ಐನಾಪೂರದ ಕರ್ನಾಟಕ ರೂರಲ ಎಜ್ಯುಕೇಶನ್ ಸೋಸಾಯಿಟಿಯು ಐನಾಪೂರದಲ್ಲಿ ನಡೆಯಿಸಿದ ಇಂಗ್ಲಿಷ ಸಾಲೆಯು ಈ ಜೂನ ತಿಂಗಳಿಂದ ಹಾಯಸ್ಕೂಲವಾಯಿತು. ಮ್ಯಾಟ್ರಿಕ್ ಪರಿಕ್ಷೆಯ ವರೆಗೆ ಉತ್ತಮ ರೀತಿಯಿಂದ ಶಿಕ್ಷಣ ಕೊಡುವ ವ್ಯವಸ್ಥೆಯು ಮಾಡಲ್ಪಟ್ಟದೆ. ಐನಾಪೂರವು ಕುಡಚಿ ಸ್ಟೇಶನದಿಂದ ೪ ಮೈಲಿನ ಮೇಲೆ ಕೃಷ್ಣಾ ನದಿಯ ದಂಡೆಗೆ ಇರುತ್ತದೆ. ಅಲ್ಲಿಯ ಹವೆ ಮತ್ತು ನೀರು ಅತ್ಯಂತ ಆರೋಗ್ಯಕರ ಇವೆ. ಲಿಂಗಾಯತ ವಿದ್ಯಾರ್ಥಿಗಳ ಸಲುವಾಗಿ ಬೋರ್ಡಿಂಗ ಇದ್ದು ಅಲ್ಲಿ ಪ್ರತಿ ತಿಂಗಳಿಗೆ ೮ ರೂಪಾಯಿಗಳಿಗಿಂತಲೂ ಕಡಿಮೆ ಖರ್ಚ ಬರುತ್ತದೆ. ಜುಲೈ ತಿಂಗಳಿಂದ ಜೈನ ಬೋರ್ಡಿಂಗ ಸುರುವು ಆಗುವದು. ಬ್ರಾಹ್ಮಣ ಮುಂತಾದ ಉಳಿದ ಜಾತಿಯ ಹುಡುಗರು ಮುಂಗಡ ತಿಳಿಸಿದರೆ ಅವರ ಊಟ ಮುಂತಾದವುಗಳ ಬಗ್ಗೆ ವ್ಯವಸ್ಥೆ ಮಾಡಲ್ಪಡುವದು. ಹಳ್ಳಿಯ ವಾಸವು ಕಡಿಮೆ ಖರ್ಚಿನದೂ ಶಾಂತತೆಯುಳ್ಳದ್ದೂ ಇದ್ದದರಿಂದ ಎಳೇ ವಯಸ್ಸಿನ ಹುಡುಗರಿಗೆ ಮ್ಯಾಟ್ರಿಕ ಪರೀಕ್ಷೆಯ ವರೆಗೆ ಶಿಕ್ಷಣ ಪಡೆಯಲು ಹಳ್ಳಿಯೇ ಯೋಗ್ಯವಾದ ಸ್ಥಳವು. ನಮ್ಮ ಮಾತ್ರಭೂಮಿಯ ಜೀವವು ಹಳ್ಳಿಗಳಲ್ಲಿಯೇ ಇರುವದರಿಂದ ಬಾಲಕರನ್ನು ಚಿಕ್ಕ ವಯಸ್ಸಿನಲ್ಲಿ "ತಂದೆ"ಯಂತ "ತಾಯಿಯ" ಹತ್ತರವೇ ಇಡುವದು ಶ್ರೇಯಸ್ಕರವಲ್ಲವೇ? ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಜಿ ಎಸ್. ದೇಶಪಾಂಡೆ ಹೆಡ್‌ಮಾಸ್ತರ;
ಕೆ ಆರ್. ಈ ಸೊಸಾಯಿಟಿಯ ಹೈಸ್ಕೂಲ,
ಐನಾಪೂರ (ಬೆಳಗಾಂವ).

ಮುದ್ರಿಸುವ
ಯಂತ್ರ!

ಸಿಂಗಲ್ ರಾಯಲ್ ಆಕಾರದ ಮುದ್ರಣ ಯಂತ್ರವನ್ನು ಮಾರತಕ್ಕದ್ದಿದೆ. ಯಂತ್ರವು ಉತ್ತಮ ಸ್ಥಿತಿಯಲ್ಲಿದ್ದು, ಕೆಲಸನ್ನು ಚನ್ನಾಗಿ ಕೊಡುತ್ತದೆ. ಹೆಚ್ಚಿನ ಸಂಗತಿಗಳಿಗಾಗಿ ಬರೆಯಬಹುದುಃ—

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ.

ಲೀವರಿನ ಗಡಿಯಾರಗಳು.

ಲೀವರಿನ ಕೈ ಗಡಿಯಾರ ರೂ. ೯.

ಲೀವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಅದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಬೋ ವಾಚ ಕಂ. (ಇಂಡಿಯಾ.) ಬಾಂಬೆ. ಕೆ ೪.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದ ವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ :—

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರುಃ—ಜಂಬುಲಿಂಗಪ್ಪಾ ಜಾಲವಾದಿ. ಸ್ಟೇಶನರ್ಸ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ,

೫೭, ಚೀನಾಬಜಾರ್, ಮದ್ರಾಸು

ಯಾವದೇ { ಆಕಾರದ ನಕ್ಷೆಯ ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಬಗ್ಗೆ ನಾವು ಈ ದಾವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. **ಬೆಲೆ ರೂ. ೭**

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆಃ— ಸ್ವಾನ ಹೌಸ. ಪಿ. ಬಿ. ೫೦೮. ಪಿ. ಟಿ. ಮದ್ರಾಸ

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



" ತಾರಾ " ಲೀವರ್ ರಜಿಸ್ಟರ್ಡ್ ಪೋಕೆಟ್ ವಾಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಚ್ಚಳಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ " ಸಿ " ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು " ತಾರಾ " ಲೀವರ್ ರಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ. ಪಿ, ಬಿ. ಮದ್ರಾಸ. ೨೬೨

ಕಿರ್ಲೋಸ್ಕರ

ಕಬ್ಬಿಣ ನೇಗಿಲಗಳು

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. } ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ಸ್ಟ್ಯಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲೆಕ್ಟ್ರಿಕ್ ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇರಿ) ೧ ಪೌಂಡಿಗೆ ರೂ. ೧-೬-೦

೨ ನೇ ,, ,, ,, ರೂ. ೧-೩-೦

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ

ಚಿಕ್ಕಪೇಟೆ ಬೆಂಗಳೂರು ಸಿಟಿ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ತರಿಗೆ ಬಡ್ಡಿ ಮತ್ತು ಪತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೩೩೬ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರೆಂಟೆಂಡಂಟ್ ಸೆಕ್ರೆಟರಿಯಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ. ಸಿ ನಂ ೧೯೬೨ ನಾರಾಯಣ ವಿಠ್ಠಲ ಲೋಣಕರ. ಕೇರ್ ಆಫ್ ಡಿ. ಈ. ಪುರಾಣಿಕ ೧೮೭ ಸಿಹಾಲಪುರ ಇಂದೂರ. ೧೦೦೦

(೩) ಎಲ್. ಬಿ. ಸಿ. ನಂ ೩೯೧ ರಾಮಚಂದ್ರ ಅನಂತ ಶಿರೋಳ್. ಡಿವಿಜನಲ್ ಫಾರೆಸ್ಟ ಆಫೀಸರ ಧರ್ಮೂರಾ. ಪಶ್ಚಿಮ ಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೭ ಕೇ. ಜಿ. ಫನಾರ್ಂಡೋ ವ್ಯಾಪಾರಸ್ಥ ಬ್ರೌನ್‌ಸಾಯಿಡ ಸಿಲೋನ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜಿ. ಬವರೆ ಅಶಿಸ್ಟಂಟ ಸ್ಟೇಶನ್‌ಮಾಸ್ತರ ಶೆಲಗಿ. ಜಿಲ್ಲಾ ವಿಜಾಪುರ ರೂ ೧೦೦೦

ಬಿ. ಎನ್. ಆರಾಧ್ಯ

ಚೀಫ ಏಜಂಟ ಹುಬ್ಬಳ್ಳಿ, (ಮುಂಬಯಿ ಇಲಾಖಾ.)

ಜೀವ ವಿಮೆಯ ಕಾರ್ಯದಲ್ಲಿ ಅದ್ಭುತವಾದ ಜಯವು !

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ರೂಪಾಯಿ ಲಾಭ ಹಂಚಿದೆ.

ದಿ ಜನರಲ್ ಅಶ್ಯೂರನ್ಸ ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ಸಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!.

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉಕ್ತಾಯವಾದದ್ದು ರೂ ೧,೮೯,೦೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್!

ಎಸ್. ಕಬ್ಬೂರ ಬಿ. ಎ. ಎಫ್. ಎಸ್. ಅಜಮೀರ.

Apply to:- H. Ramachandra Rao

Branch Secretary, opposit Minto Hospitle,

Bengalore City.

or

Agents at Bellary & Hubli.

ಈ ಪತ್ರವು ಮುಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು ದ ಬಾಗಲಕೋಟೆಯಲ್ಲಿನ
ವಿದ್ಯಾಭ್ಯಾಸ ಮುದ್ರಣಾಲಯದಲ್ಲಿ ಮುದ್ರಿಸಿ ಅಲ್ಲಿಯೇ ಪ್ರಸಿದ್ಧಪಡಿಸಿದರು.

ರ.ನಂ. ಬಿ ೧೯೪೭ ವಾ. ಚಂದಾ ೧-೧೩-೦ ಮಾತ್ರ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

यत्र नार्यस्तु पूज्यन्ते रमन्ते तत्र देवताः । — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ಜೇಷ್ಠ ಬಹುಳ ೪ ಶಕೆ ೧೮೪೯ ತಾ|| ೧೯-೬-೧೯೨೭. Date 19 —6 - 1927. | ಸಂಚಿಕೆ ೧೨

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕೆಟ್ಟ-ಜಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸರಾಕ್ತ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ!

ವಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ.

S.U. Narayanacharya & Co.
Chukkambu Be ares City.

S.U.N.&CO. BENARES CITY.

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರಿಸೀರೆ, ಕಾಶ್ಮೀರ ಶಾಲು, ತಂಬಾಕು, ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಪಟಿಕಮಣಿ ಮೊದಲಾದ ಮಾಲುಗಳ ಕ್ಯಾಟಲಾಗ ಕೇಳುವವರಿಗೆ ಇನಾಮಾಗಿ ಕಳಿಸಲಾಗುತ್ತದೆ.
ವಿಳಾಸ-ಶಿರೋಳ ನಾರಾಯಣಾಚಾರ್ಯ ಕಂಪನಿ ಚೌಕಾಂಬಾ ಕಾಶಿ

ಮುದ್ರಿಸುವ ಯಂತ್ರ.

ಸಿಂಗಲ್ ರಾಯಲ್ ಆಕಾರದ ಮುದ್ರಣ ಯಂತ್ರವನ್ನು ಮಾರತಕ್ಕದ್ದಿದೆ. ಯಂತ್ರವು ಉತ್ತಮ ಸ್ಥಿತಿಯಲ್ಲಿದ್ದು, ಕೆಲಸವನ್ನು ಚನ್ನಾಗಿ ಕೊಡುತ್ತದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಬಹುದು—

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ.

ವಾಙ್ಮಯ ಪರಿಚಯ.

(೧) ಪಂಚಾಚಾರ್ಯಪ್ರಭಾ:- ಇದೊಂದು ವೀರಶೈವ ಧರ್ಮವನ್ನು ಉಜ್ವಲಗೊಳಿಸಲು ಹೊರಟ ವಾರಪತ್ರಿಕೆ ಇದಕ್ಕೆ ಅಸ್ಥಾನ ವಿದ್ವಾನರಾದ ವೇ। ಶಿರಸಿ ಗುರುಶಾಂತ ಶಾಸ್ತ್ರಿಗಳು ಸಂಪಾದಕರಿದ್ದಾರೆ. "ಅವಿದ್ಯೆ, ಅಜ್ಞಾನ, ಅನೈಕಮತ್ಯ" ವೆಂಬ ಅಂಧಕಾರದಿಂದ ಆಚ್ಛಾದಿಸಲ್ಪಟ್ಟಿರುವ ವೀರಶೈವರನ್ನು ಮೇಲಕ್ಕೆತ್ತುವುದೇ ಇದರ ಉದ್ದೇಶವು. 'ಇತರ ಮತಾವಲಂಬಿಗಳಿಗೆ ವ್ಯಥೆಯಾಗದಂತೆ ಬರಹಗಳು ಇದರಲ್ಲಿ ಬರುವವು.

(೨) ಸಂಸ್ಕೃತ ಪ್ರವೇಶ:- ವ್ಯವಹಾರಕ್ಕೆ ಉಪಯೋಗವಾಗುವಂತೆ ಈ 'ಸಂಸ್ಕೃತ ಪ್ರವೇಶ'ವನ್ನು ಬರೆದಿರುವೆನೆಂದು ಗ್ರಂಥಕರ್ತರು ಮುನ್ನುಡಿಯಲ್ಲಿ ಹೇಳಿದ್ದಾರೆ. ವ್ಯವಹಾರದಕ್ಷಯ ವಾಕ್ಯಗಳೂ ಶಬ್ದಗಳೂ ಇದರಲ್ಲಿವೆ. ಆದರೂ ಪದ್ಧತಿಯಲ್ಲಿ ದೋಷವಿದೆಯೆಂದು ತೋರುತ್ತದೆ.

(೩) ಚೀನಾ ಸಂಗ್ರಾಮ:- ಚೀನ ದೇಶದ ಸಂಕ್ಷಿಪ್ತ ಚರಿತ್ರೆಯನ್ನು 'ವಿಶ್ವಕರ್ನಾಟಕ' ಕಾರ್ಯಾಲಯದವರು ಇದರಲ್ಲಿ ಕೊಟ್ಟಿದ್ದಾರೆ ಯುರೋಪ್ಯರ ರಾಜ್ಯತಂತ್ರವು ಹೇಗೆ ವಾಣಿಜ್ಯ ಮೂಲವಾದುದೆಂಬುದನ್ನು ಇದರಲ್ಲಿ ಕಾಣಬಹುದು. ಚೀನವು ಎಚ್ಚತ್ತು ತನ್ನ ಸ್ವಾತಂತ್ರ್ಯಕ್ಕಾಗಿ ಹೇಗೆ ಸಿದ್ಧವಾಗಿದೆಂಬುದು ಇದರಿಂದ ತಿಳಿಯುತ್ತದೆ. ಕನ್ನಡ ಭಾಷೆಯಲ್ಲಿ ಪರದೇಶದ ವಿಷಯಕವಾದ ಪುಸ್ತಕಗಳೂ ಕಡಿಮೆ. ಆದುದರಿಂದ ಪರದೇಶದ ಇತಿಹಾಸ, ಭೂಗೋಲ ಮೊದಲಾದ ಪುಸ್ತಕಗಳು ಕನ್ನಡಕ್ಕೆ ಅತ್ಯವಶ್ಯಕವಾಗಿವೆ ಎಂಬುದನ್ನು ನಾವು ಇಲ್ಲಿ ಅರುಹದಿರಲಾರೆವು.

—ರಾಮದಾಸ

(೪) "ಕಾಳೀ ಸ್ವಯಂವರ" ಮತ್ತು "ಗರುಡಗರ್ವಹರಣ":- ಶ್ರೀ ಪ್ರಾಣೇಶ ವಿಠ್ಠಲ ವಿರಚಿತ ಹರಿಕೀರ್ತನ ಮಾಲೆಯ ಪುಷ್ಪಗಳು ಬೆಲೆ ೦—೩—೬; ೦—೪—೦; ಭಕ್ತಾಭಿಮಾನಿಯಾದ ಭಾರತೀ ದೇವಿಯು, ಕಾಶೀರಾಯನ ಮಗಳಾಗಿ ಜನಿಸಿ, ಸ್ವಯಂವರ ಕಾಲಕ್ಕೆ ಸಭೆಯಲ್ಲಿ ಸೇರಿದ ಸಮಸ್ತ ರಾಯರನ್ನು ನಿರಾಕರಿಸಿ, ನಿಜಪತಿಯಾದ ಭೀಮಸೇನದೇವರನ್ನು ವರಿಸಿದ್ದೇ ಕಾಳೀಸ್ವಯಂವರದ ಕಥಾವಿಷಯವು. "ತಾತ್ಪರ್ಯ ನಿರ್ಣಯದ" ೩೦ನೇ ಅಧ್ಯಾಯದ ೧೨—೨೮ ಶ್ಲೋಕಗಳ ಸಾರಾಂಶವು ಪದ್ಯ ರೂಪದಲ್ಲಿ ಕನ್ನಡಿಸಲ್ಪಟ್ಟಿದೆ. ಶ್ರೀಕೃಷ್ಣನು ಹನುಮಂತನಿಂದ ಗರುಡನ ಗರ್ವ ಹರಣ ಮಾಡಿಸಿದ್ದೇ "ಗರುಡ ಗರ್ವಹರಣ"ದ ಕಥಾ ವಿಷಯವು.

ಗೀತೆಗಳಲ್ಲಿ ಸಂಗೀತವಿಲ್ಲದಿದ್ದರೂ ಭಕ್ತಿಯಿದೆ ಗೀತೆಗಳು ಸರಸವಾಗಿವೆಯೆಂದು ಪ್ರಸ್ತಾವನೆಯಲ್ಲಿ ಹೇಳಿದ್ದನ್ನು ನಾವು ಒಪ್ಪಿದೆವು ಯಾಕೆಂದರೆ ಶಬ್ದಗಳ ಜೋಡಣೆಯೂ ತಕ್ಕಂತೆ ಆಗಿಲ್ಲ. ಇಂಪಾದ ಸರಣಿಯೂ ಇಲ್ಲ. ಭಾವನಾಶಕ್ತಿಯೂ ಅಷ್ಟೊಂದು ಒಡಮೂಡಿಲ್ಲ. ಇಷ್ಟೇ ಅಲ್ಲದೆ, ಕೆಲವು ಕಡೆಗಳಲ್ಲಿ ಕಾವ್ಯದ ಗಂಧವೂ ಕೂಡ ಇಲ್ಲ ಉದಾ:— ಉತ್ಸಾಹಾನುಸಾರವಾಗೀ, ಕುಳ್ಳಿರಿಸಿದ ನಂತರಾ ನಾಕುಳ್ಳಾ, ಡೋದಿಲ್ಲ; ಅಂಗ ಪ್ರವೇಶ್ಯದೆನು. ಇಷ್ಟ್ಯಕೊ ಎಂದು ಜೋಡಣೆಯಲ್ಲಿ ವ್ಯಾಕರಣದ ನಿಯಮಗಳನ್ನು ಅನುಸರಿಸಿದಂತೆ ಕಾಣುವದಿಲ್ಲ. ಪ್ರಾಸ ಮತ್ತು ಗಣಗಳನ್ನು ಸಾಧಿಸರಿಕ್ಕೆ ಹ್ರಸ್ವಾಕ್ಷರಗಳಿಗೆ ಬೇಕಾಬೇಕಾದ ಹಾಗೆ ದೀರ್ಘಾಕ್ಷರಗಳ ರೂಪವನ್ನು ಕೊಟ್ಟಿದ್ದಾರೆ! ಉದಾ:— ಪಾಲೀಸಿರೆನ್ನ, ಸಿಕ್ಕೀದಾಳು, ಬಹಾಳ, ನೀರೂಪ, ಸತ್ಯಸಂಕಲ್ಪಾನ, ನೇಗಲೀಯ, ಕಾಣಾದೆ ಮಾತೀಯ ಪಾಕಾಲಿ, ವಿರಲಾಸು ತಾನೇಯೆ ಬಲ್ಲಾನು. ಶೀಳಿ, ಶಿಡಿದು, ಸೀಕ್ಷೆ, ಮಲಿದ:, ಮರಳುವ, ಪ್ರೋಣ, ಅತ್ಯ, ಕ್ಯರಿಯದೆ, ಮಸ್ಯಾತೆ, ಬ್ಯಾಗನೆ, ಭಾರೆಭಾರೆ, ಧಾಳಿ, ಅಂದ, ಉತ್ರದ, ಅಂದಗೀ ಇವ್ಯೇ ಅಶುದ್ಧ ಶಬ್ದಗಳು ಹೇರಳವಾಗಿರುತ್ತವ. ಇವುಗಳನ್ನು ಓದಿದಲ್ಲಿ ಕನ್ನಡ ಭಾಷಾ ಶುದ್ಧೀಕರಣದ ಅವಶ್ಯಕತೆಯು ಎಷ್ಟಿರುತ್ತದೆಂಬುದು ಪ್ರತಿಯೊಬ್ಬನಿಗೂ ಹೊಳೆಯದೆ ಇರದು. "ಭಾರತಿ+ಎಂದು" "ಹಿಂದೆ+ಅವ" ಇವುಗಳ ಸಂಧಿಯನ್ನು "ಭಾರತೆಂದು" "ಹಿಂದಲವ" ವೆಂಬುದಾಗಿ ಹೇಗೆ ಮಾಡಿದರೋ ಅರಿಯೆವು. ಗೀತೆಯೂ ಸಾಹಿತ್ಯದ ಒಂದು ಮುಖ್ಯಾಂಗವಾಗಿದ್ದುದರಿಂದ ಮೇಲೆ ಕಾಣಿಸಿದ ದೋಷಗಳು ಸಲ್ಲವು. ಭಾವನಾಶಕ್ತಿಯಿಂದಲೂ, ರಸಮಾಧುರ್ಯಗಳಿಂದಲೂ ತುಂಬಿ ತುಳುಕುತ್ತಿರುವ [illegible] ಳೇ ಸಾಹಿತ್ಯದಲ್ಲಿ [illegible] ರ್ಣದೆಯಾಗುವವು. ಮಿಕ್ಕ ಗೀ[illegible] ಜೀವರಹಿತವಾದ ದೇಹದಂ[illegible] ನಿಸರ್ಥಕವಾದವುಗಳು ಪ್ರಕಾಶಕರು, ಇತ್ತ ಕಡೆಗೆ ಗಮನ ಕೊಟ್ಟು ಧಾರ್ಮಿಕ ಸೇವೆಯ ಕೂಡ ಸಾಹಿತ್ಯ ಸೇವೆಯನ್ನೂ ಮಾಡಬೇಕೆಂದು ಸೂಚಿಸುತ್ತೇವೆ. ಒಟ್ಟಿನಲ್ಲಿ ಸಾಹಿತ್ಯ ದೃಷ್ಟಿಯಿಂದಲ್ಲದಿದ್ದರೂ, ಕೀ[illegible]ನ ದೃಷ್ಟಿಯಿಂದ ಸಂಗ್ರಹಿಸಿ ಇಟ್ಟುಕೊಳ್ಳಲು ಯೋಗ್ಯವಾದುದು. [illegible] ದಲಂತೂ ಏನೂ ತ್ರಾಸವಾಗುವದಿಲ್ಲ. ಯಾಕೆಂದರೆ ಮಂಗಳೂರ[illegible] ಕಡೆಯ ಬಹು ಮೆಚ್ಚಾದ ಅಚ್ಚಿಂಟು.

ರೀತಿವಂತ.

(೫) ಕಾಣಿಕೆ:— ಉಡಂಗೋಡ್ಲು ಶಂಕರ ಭಟ್ಟರು ಬರೆದುದು ಬಾಲಸಾಹಿತ್ಯ ಮಂಡಳ, ಮಂಗಳೂರು ಇವರಿಂದ ಪ್ರಕಾಶಿಸಲ್ಪಟ್ಟಿದೆ. ಕ್ರಯ ೦—೪—೦ ಇದೊಂದು ಅನೇಕ ವಿಷಯಗಳ ಮೇಲೆ ಬರೆದ ಪದ್ಯ ಸಮುಚ್ಚಯವು. ಕನ್ನಡ ಸಾಹಿತ್ಯ ಮಂದಿರವನ್ನು ತಮ್ಮ ಪ್ರತಿಭೆಯಿಂದ ಬೆಳಗಿಬೆಳಗುತ್ತಿರುವ ಆಧುನಿಕ ಕವಿಗಳಲ್ಲಿ ಪ್ರಸ್ತುತ ಗ್ರಂಥಕಾರರೊಬ್ಬರು. ಇವರ 'ಘೋಷಯಾತ್ರೆ' ಎಂಬ ಖಂಡಕಾವ್ಯವು ಕನ್ನಡಿಗರಿಗೆ ಈ ಮೊದಲೇ ಪರಿಚಿತವಾದುದು. ಗೆಳೆಯರ ಗುಂಪಿನವರ ಕೃತಿಗಳಲ್ಲಿ ಕಂಡು ಬರುವ ವಾಙ್ಮಯ ಪ್ರಪಂಚದಲ್ಲಿಯ ಹೊಸಯುಗದ ಹೆಗ್ಗುರುತುಗಳು ಮೇಲಿನ ಪುಸ್ತಕದಲ್ಲಿಯೂ ಕಂಡುಬರುವವು. ವಿಷಯ ವಿವಿಧತೆ, ರೀತಿಭೇದ ಇವೇ ಅವುಗಳಲ್ಲಿ ಕೆಲವು ಆದರೆ ಗೆಳೆಯರ ಗುಂಪಿನ ಎಷ್ಟೋ ಕಾವ್ಯಗಳ ಹಾಗೆ ಚಿಂತನಪರ ಗೂಢ ಕಾವ್ಯವಿದಲ್ಲ. ಹೆಚ್ಚಾಗಿ ಅಂತಃಕರಣಕ್ಕೂ ರೂಪಕಶಕ್ತಿಗೂ ಬೋಧಿಸುವಂತಹದು,

ಇದೇನು ಪಾಂಡವ ಚಂದ್ರಹಾಸರ ಚರಿತ್ರೆಯೊ? ರಾಮರಾವಣರ ರಣರಂಗ ವರ್ಣನೆಯೊ? ಆದೇನೂ ಕೇಳಬೇಡಿ; 'ಮುಗುಳಂತೆ' 'ದಿನದ ಕೆಲಸ'ವಂತೆ!! 'ನಗೆ'ಯಂತೆ!!! ಇವೇ ಈ ಕಾವ್ಯದ ವಿಷಯಗಳು. ಮತ್ತೆ 'ಮೃಗಶಾವಾಕ್ಷಿ, ಲಲಾಟನ್ಯಸ್ತ ಹಸ್ತಪದ್ಮಾಕ್ಷಿ' ಮುಂತಾದವುಗಳನ್ನು ಹೋಲುವ ಶ್ರೇಷ್ಠ ರೂಪಕಾದಿ ಅಲಂಕಾರಗಳೇ? ಅದೂ ಇಲ್ಲ ನೋಡಿ; 'ಬಾಳೆಂಬ ಬಳ್ಳಿ'ಯಂತೆ! 'ಇರುಳ ಹೂವಳ್ಳಿ'ಯಂತೆ!! 'ಚೆಂಬಿಸಿಲನಣುಕಿಸುತ ನಗುವನಲ್ಲೆ'ಯಂತೆ!!! ಇವೊಳ್ಳೆ ಅಲಂಕಾರಗಳು. ಆದರೆ ಇಂಥ ಕವಿತೆಗಳಿಗೆ ಕಾವ್ಯವೆಂಬಾದರೂ '[illegible] ಕರೆಯಬೇಕಯ್ಯಾ?' ಎಂದು ಹೊಸ ಕೃತಿಗಳನ್ನು ಹೀಯಾಳಿ[illegible] ರಸಿಕರಿಗೊಂದು ಕಿವಿ ಮಾತನ್ನು ಹೇಳುವೆವು.

ನಾವು ದಿನಾಲು ಕಾಣುವ ಸಾಮಾನ್ಯ ಸಂಗತಿಗಳನ್ನು ಕವಿಯು ತನ್ನ ಪ್ರತಿಭೆಯ ದೃಷ್ಟಿಯಿಂದ ನೋಡುವನು. ಅವುಗಳಲ್ಲಿಯೊಂದು ಹೊಸ ಅನುಭವವನ್ನು ಹೊಂದುವನು. ಆ ಉತ್ಪ್ರೇಕ್ಷೆ [illegible] ಭರದಲ್ಲಿಯೇ ಇನಿದಾದ ತಕ್ಕ ಶಬ್ದಗಳಲ್ಲಿ ತನ್ನ ಅನುಭವವನ್ನು ಜನರ ಮುಂದಿಡುವನು ಈ ಬಗೆಯ ಅನುಭವ ಹಾಗೂ ಅದನ್ನು ಹೇಳುವ ಕೌಶಲ್ಯ—ಇವೇ ಕಾವ್ಯದ ಒರೆಗಲ್ಲು. ಇವಿಲ್ಲದ ಕಾವ್ಯವು ದೇವರಿಲ್ಲದ ಗುಡಿಯಂತೆ! 'ಕಾಣಿಕೆ'ಯು ಈ ಒರೆಗೆ ಚೆನ್ನಾಗಿ ಇಳಿಯುವದು. ಇಂಥ ಕಾಣಿಕೆಯಿಂದ 'ಪೂರ್ವಸ್ಮರಣೆ' 'ನಗೆ—'ಸಂದೇಶ' ಮೊದಲಾದವುಗಳನ್ನು ಓದಿ ಹಾಡಿ ಸವಿಯನ್ನು ಕಾಣಬೇಕೆಂದು ನಮ್ಮ ಬಿನ್ನಹ.

—ಶ್ಯಾಮ

ಕನ್ನಡಿಗ.

ಬಾಗಲಕೋಟೆ ಜೇಷ್ಠ ಬಹುಳ ೪ ಶಕೆ ೧೮೪೯.

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೋಹವಾಡಿ ಕಟ್ಟುವೆನಾನು ।
ಇನ್ನ ಬಿಸನವಾಡಿದಂಥ ಮುಳ್ಳಿನ ದೊಪ್ಪು।
ಚಿನ್ನದಾದರು ಚಿನ್ನ ಮೋಹಬಟ್ಟಿಯು ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನುಸಿರಾಟವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯಿ॥

—ಅಂಬಿಕಾತನಯ ದತ್ತ

ಪುಣೆಯ 'ಕೇಸರಿ' ಪತ್ರದ ಕರ್ನಾಟಕದ ಪ್ರತಿನಿಧಿಯು ಪತ್ರದಲ್ಲಿ 'ಕನ್ನಡಿಗ'ನ ಮೇಲೆ ಟೀಕೆ ಬಂದಿದೆ. 'ಕರ' ಪ್ರತ್ಯಯವು ಮರಾಟಿಗರದು. ಕನ್ನಡಿಗರು ಅದನ್ನು ಅನುಸರಿಸುವ ಕಾರಣವಿಲ್ಲವೆಂದು 'ಕನ್ನಡಿಗ'ನು ತಾನು ಹುಟ್ಟಿದಾರಭ್ಯ ಪ್ರತಿಪಾದಿಸುತ್ತಲಿದ್ದಾನೆ. ಆದರೆ ಮೂರು ವರ್ಷಗಳಿಂದ ನಡೆದ ಈ ಸುದ್ದಿಯು 'ಕೇಸರಿ'ಯ ಕರ್ನಾಟಕ ಪ್ರತಿನಿಧಿಗೆ ಗೊತ್ತೇ ಇರಲಿಲ್ಲವಂತೆ! ಈಗೀಗ ಮಾತ್ರ ಗೊತ್ತಾಗಿದೆಯಂತೆ! 'ಕನ್ನಡಿಗ'ನ ಸಂಪಾದಕರು ಸಹ ಈ 'ಕರ' ಪ್ರತ್ಯಯವನ್ನು ತಮ್ಮ ಅಡ್ಡ ಹೆಸರಿನ ಮುಂದೆ ಹಚ್ಚುತ್ತಿರುವರೆಂದು ಈ ಪ್ರತಿನಿಧಿಯು ಬಿಸಿ ಬಿಸಿ ಸುಳ್ಳನ್ನು ಸಾರಿದ್ದಾನೆ. ಆ ಲೇಖ ಬರೆದವನು 'ಓರ್ವ ಹಿತೈಷಿ' ಎಂದು, ಕೆಳಕ್ಕೆ ಸಹಿ ಮಾಡಿದ್ದನ್ನು ಸಹ ನೋಡುವಷ್ಟು ಕನ್ನಡ ಜ್ಞಾನವು ಅವನಿಗಿಲ್ಲ! ಅದರೂ ಇವನು ಕನ್ನಡ ನಾಡಿನ 'ಪ್ರತಿನಿಧಿಯು'! ಅದೂ 'ಕೇಸರಿ'ಯಂತಹ ಜವಾಬ್ದಾರ ಪತ್ರಿಕೆಯ ಪ್ರತಿನಿಧಿಯುವನು! 'ಕರ'ದ ಬಗ್ಗೆ ಲೇಖ ಬರೆದವರ ಹೆಸರು ಗೊತ್ತಿಲ್ಲದೇ, ಅವರು ಸಹ 'ಕರ' ಪ್ರತ್ಯಯವನ್ನು ಹಚ್ಚಿರುವರೆಂದು ಪ್ರತಿನಿಧಿಯು ಸಾರಿದ್ದಾನೆ! ಇವರ ಹೆಸರಿಗೆ 'ಕರ'ದ ಅವಶ್ಯಕತೆಯೇ ಮೂಲತಃ ಇರುವದಿಲ್ಲ. ಆದರೂ ಪ್ರತಿನಿಧಿಯು ಹೀಗೆ ಟೀಕಿಸಿದ್ದು ಆಶ್ಚರ್ಯವೇ ಸರಿ. ಮುಂದೆ ಪ್ರತಿನಿಧಿಯ ಪಾಂಡಿತ್ಯವನ್ನು ನೋಡಿ! 'ದಿವಾಕರ' ಹೆಸರಿನಲ್ಲಿಯ 'ಕರ'ವು ತಮ್ಮ ಮರಾಟಿಯದಂತೆ! ಮೋಜು ಚನ್ನಾಗಿದೆಯಲ್ಲವೇ! ಮರಾಟಿಗರ ಈ 'ಕರ'ದ ಪ್ರತ್ಯಯವು ಕನ್ನಡಿಗರಿಗೇಕೆ? ಎಂಬದಾಗಿ ಕೇಳಿದರೆ ಮರಾಟಿಯ ದ್ವೇಷವಾಯಿತಂತೆ! ಮತ್ತೂ ಕನ್ನಡ ಮರಾಟಿಯ ವಾದವನ್ನು ಏಕೋಪಕ್ಷೆ ನಾವು ಒಯ್ದಂತಾಯಿತಂತೆ! ಕನ್ನಡಿಗರು ಕನ್ನಡತ್ವವನ್ನು ಕಾಯ್ದುಕೊಳ್ಳಬೇಕು ಜಾಗೃತರಾಗಬೇಕೆಂದಾಕ್ಷಣಕ್ಕೆ ವಿರೋಧಭಾವನೇ ಮರಾಟಿಗರಿಗೆ ದೃಗ್ಗೋಚರವಾಗುವದು! "ಕಾವ್ಯಾಯವಾಗಿ ಜಗತ್ತೆಲ್ಲ ಹಳದಿ" ಎಂಬಂತೆ ದ್ವೇಷಭಾವಪೂರಿತರಾದ ಮರಾಟಿಗರಿಗೆಲ್ಲ ವಿರೋಧಭಾವನೇ ಕರ್ನಾಟಕದ ತುಂಬೆಲ್ಲ ಕಾಣುವದು! ಇಂತಹ ಮನುಷ್ಯರನ್ನು 'ಕೇಸರಿ'ಯಂತಹ ಜವಾಬ್ದಾರ ಪತ್ರಿಕೆಯು ತನ್ನ ಸ್ವಂತ ಸುದ್ದಿಗಾರನನ್ನಾಗಿ ಮಾಡಿದ್ದು ಆತ್ಯಾಶ್ಚರ್ಯವು!

ಭಾಷೆಯು ಶುದ್ಧವಾಗಿರಬೇಕೆಂಬುದಕ್ಕೆ ಯಾರೂ ಅಲ್ಲಗಳೆಯುವಂತಿಲ್ಲ. ಪ್ರತಿಯೊಂದು ಭಾಷೆಗೂ ಅವಶ್ಯವಿದ್ದ ಪಾರಿಭಾಷಿಕ ಶಬ್ದಗಳಾದರೂ ಬೇಕೆಂಬುದನ್ನು ಸಹ ಯಾರೂ ಅಲ್ಲಗಳೆಯರು. ಆದರೆ ಅನಾವಶ್ಯಕವಾಗಿ ಕೈಗೆ ತಗಲಿದ, ಕಾಲಿಗೆ ಹತ್ತಿದ ಶಬ್ದಗಳಿಗೆ ಯಾವ ವಾಙ್ಮಯದಲ್ಲಿಯೂ, ಪ್ರವೇಶವಿಲ್ಲ. ಅದೇ ಪ್ರಕಾರವಾಗಿ ಅನಾವಶ್ಯಕವಾದ ಹಾಗೂ ಬೀದಿ ಬೀದಿಗಳಲ್ಲಿ ಬಿದ್ದಿರುವ ಪಾರಿಭಾಷಿಕ ಶಬ್ದಗಳನ್ನು ಕನ್ನಡ ನುಡಿಯಲ್ಲಿ ಮನಬಂದಂತೆ ಸೇರಿಸಿ ನಮ್ಮ ಭಾಷೆಯನ್ನು ಕೆಡಿಸಬಾರದಾಗಿ ನಮ್ಮ ಮತ. ಅದರಂತೆ ಮೈಸೂರ ಮಂಗಳೂರ ಕಡೆಯ, ಕನ್ನಡಿಗರು ಇಂಗ್ಲೀಷ ಶಬ್ದಗಳನ್ನು ಅನಾವಶ್ಯಕವಾಗಿ ಉಪಯೋಗಿಸುವದನ್ನು ನಾವು ಖಂಡಿಸುತ್ತ ಬಂದಿರುವೆವು. ಜನರಲ್ಲಿ ರೂಢವಾಗಿದ್ದ ಸ್ಟೇಶನ್ನ, ರೇಲ್ವೇ, ತಿಕೀಟ, ಮ್ಯಾಜಿಸ್ಟ್ರೇಟ, ಮೊದಲಾದ ಪಾರಿಭಾಷಿಕ ಶಬ್ದಗಳಿಗೆ ಹೊಸ ಕನ್ನಡ ಶಬ್ದಗಳನ್ನು ಹುಡುಕಿ ತೆಗೆಯುವದು ಅವಶ್ಯವಿಲ್ಲ. ಆದರೆ ಕಾರಣವಿಲ್ಲದೇ, "ಶೋವು, ಆಫೀಸಿಯಲ್, ಪನಿಶ್‌ಮೆಂಟು, ಕಮ್ಯುನಿಕೇಶನ್, ಪ್ರಾಸ್ಪೆಕ್ಟಸ್, ಸ್ಟೇಟಮೆಂಟ, ಕಾನ್‌ಫರನ್ಸ, ಇಂಡಿಯಾ ಮೊದಲಾದ ಶಬ್ದಗಳನ್ನು ಕನ್ನಡದಲ್ಲಿ ಯಾಕೆ ಪ್ರಯೋಗಿಸಬೇಕು! ಕನ್ನಡದಲ್ಲಿ ಇವುಗಳಿಗೆ ಶಬ್ದಗಳಿಲ್ಲವೆ? ಇವು ಜನಸಾಮಾನ್ಯರಲ್ಲಿಯೂ ರೂಢವಾಗಿಲ್ಲ; ಕೇವಲ ಲೇಖಕನಿಗೆ ಕನ್ನಡ ಶಬ್ದ ಹೊಳೆಯಲಿಲ್ಲವೆಂದಾಗಲೀ, ಅವೇ ಹಗುರಾಗಿ ಕೈಗೆ ದೊರೆತವೆಂದಾಗಲೀ ಅವನು ಉಪಯೋಗಿಸುವದು ಶುದ್ಧವಾಗಿಯೂ ತಪ್ಪು ಎಂಬದಾಗಿ 'ಕನ್ನಡಿಗ'ನ ಮತ. ಇನ್ನು 'ಸ್ವಧರ್ಮ'ದ ಭಾಷೆಯಂದರೆ ವೀರ-ಅತಿವೀರ-ಮಹಾವೀರ ಸಂಘದ ಕನ್ನಡಿಗರದು. ಭಾಷೆಯ ಶುದ್ಧತೆಗಾಗಿ 'ಸ್ವಧರ್ಮ'ವು ಬಹು ದಕ್ಷತೆಯಿಂದ ಪ್ರಯತ್ನಿಸುತ್ತಲಿದೆ. 'ಸ್ವಧರ್ಮ'ದವರು ತಮ್ಮ ಅಭಿಪ್ರಾಯವನ್ನು ಕನ್ನಡಿಗರ ಮುಂದೆ ಸ್ವತಃ ಮಂಡಿಸಲು ಸರ್ವಥಾ ಶಕ್ತರೇ ಇರುವದರಿಂದ 'ಸ್ವದೇಶಾಭಿಮಾನಿ'ಯ ಪ್ರಶ್ನೆಗೆ ಅವರೇ ಸಮಂಜಸವಾದ ಉತ್ತರ ಕೊಡಬಹುದು. ಆದರೆ 'ಸ್ವದೇಶಾಭಿಮಾನಿ'ಯು ಮರಾಟೀ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರ ಅಭಿಪ್ರಾಯಕ್ಕೆ ಗಮನ ಕೊಟ್ಟಂತೆ, ಡಾ. ಸಾವರಕರರ ಮರಾಟೀ ಭಾಷೆಯ ಶುದ್ಧೀಕರಣವೆಂಬ ಲೇಖಾಂಕಗಳಿಗೂ ಗಮನ ಕೊಟ್ಟರೆ, ಅವರಿಗೆ ಎರಡೂ ಪಕ್ಷಗಳನ್ನು ತಿಳಿದುಕೊಳ್ಳಲು ಅವಕಾಶವಾಗುವದು.

ಧಾರವಾಡದ ಟ್ರೇನಿಂಗ ಕಾಲೇಜನ್ನು ಬಂದು ಮಾಡಬೇಕೆಂದು ಸರಕಾರದವರು ನಿಶ್ಚಯಿಸಿರುವರಂತೆ! ಕರ್ನಾಟಕದ ಸಂಸ್ಥೆಗಳೆಂದರೆ ಮುಂಬೈ ಸರಕಾರಕ್ಕೆ ಕೇವಲ ತುಚ್ಛವಾದವುಗಳೆಂಬುದನ್ನು ನಾವು ಮೇಲಿಂದ ಮೇಲೆ ಹೇಳುತ್ತ ಬಂದಿರುವೆವು. ಕನ್ನಡ ಟ್ರೇನಿಂಗ ಕಾಲೇಜೊಂದು ಇದಕ್ಕೆ ಸಾಕ್ಷಿ. ಮೊದಲು ಮಹಾರಾಷ್ಟ್ರ ಶಿಕ್ಷಣ ಮಂತ್ರಿಯವರ ಕೈಯಲ್ಲಿ ಶಿಕ್ಕು, ಕ್ಷೀಣವಾಯಿತು. ಈಗ್ಗೆ ಗುರ್ಜರ ಶಿಕ್ಷಣ ಮಂತ್ರಿಗಳ ಆಡಳಿತದಲ್ಲಿ ಸಂಪೂರ್ಣವಾಗಿ ಮಾಯವಾಗುವದಾಗಿ ತಿಳಿದು ಬಂದಿದೆ. ನೂರಕ್ಕೆ ೫೦ ರಂತೆ ಪ್ರಾಥಮಿಕ ಶಿಕ್ಷಕರು ದೊರೆಯಹತ್ತಿದರೆ, ಟ್ರೇನಿಂಗ ಕಾಲೇಜನ್ನು ಬಂದು ಮಾಡಬಹುದಾಗಿ ಸರಕಾರದ ಒಂದು

ನಿಯಮವಿದೆ. ಆ ಪ್ರಕಾರ ಕನ್ನಡ ಟ್ರೇನಿಂಗ ಕಾಲೇಜನ್ನು ಒಂದು ಮಾಡಬೇಕಾಗಿ ಸರಕಾರದ ವಿಚಾರವಿದೆ. ಆದರೆ ಗುಜರಾತದ ಟ್ರೇನಿಂಗ ಕಾಲೇಜದಲ್ಲಿ ಈ ನಿಯಮದಂತೆ ನೂರಕ್ಕೆ ೫೦ರ ಸಂಖ್ಯೆಯು ಹೆಚ್ಚಾಗಿದೆ. ಆದಾಗ್ಯೂ ಆ ಕಾಲೇಜನ್ನು ಈ ವರೆಗೆ ಒಂದು ಮಾಡಿಲ್ಲ. ಅದೇಕೆನ್ನುವಿರಿ? ಗುಜರಾತವೆಂದರೆ, ಮುಂಬೈ ಇಲಾಖೆಯಲ್ಲಿ ಪ್ರಮುಖ ಪ್ರಾಂತ. ರಾಜಧಾನಿಯಲ್ಲಿ ಈ ಮರಾಟಿಗರಂತೆ ಅವರ ವರ್ಚಸ್ಸೂ ಇರುವದು. ಆದ್ದರಿಂದ ಅವರ ಕಾಲೇಜಿಗೆ ಕೈ ಹಚ್ಚುವ ಧೈರ್ಯವು ಸರಕಾರಕ್ಕಿಲ್ಲ. ಮಹಾರಾಷ್ಟ್ರರಂತೂ ಮುಂಬೈ ಇಲಾಖೆಯಲ್ಲಿ ಪ್ರಬಲರಿದ್ದಾರೆ. ಅವರನ್ನು ರೇಗಿಸುವಂತಿಲ್ಲ. ಮುಂದೆ ಉಳಿಯಿತು ಕರ್ನಾಟಕವೊಂದು! ಹೂ! ಅನ್ನುವದ; ಅದನ್ನು ಒಂದು ಮಾಡು; ಇದನ್ನು ಒಂದು ಮಾಡು; ಎಂದು ಅಪ್ಪಣೆ ಕೊಡುವದು! ಕರ್ನಾಟಕದಲ್ಲಿ "ಮೆಡಿಕಲ್ ಸ್ಕೂಲ" ತೆಗೆಯಬೇಕೆಂದರೆ, ಬೇಡವೆಂದು ಅಪ್ಪಣೆಯಾಯಿತು; ಫಾರೆಸ್ಟ ಕಾಲೇಜಿಗೆ ಅರ್ಧ ಚಂದ್ರಾಕೃತಿಯು ದೊರೆತಿತು; ಉದ್ಯೋಗಿಕ ಶಾಲೆಯು ವಿಚಾರದಲ್ಲಿಯೇ ಚಿವುಟಿಹಾಕಲ್ಪಟ್ಟಿತು; ಈಗ್ಗೆ ಟ್ರೇನಿಂಗ ಕಾಲೇಜದ ಮೇಲೆ ಗದೆಯೆತ್ತಲ್ಪಟ್ಟಿದೆ. ಕನ್ನಡಿರು ಈಗಲೂ ಎಚ್ಚರಿಯದೇ ಆಲಸ್ಯರಾಗಿ ಕುಳಿತರೆ, ಕರ್ನಾಟಕದಲ್ಲಿಯ ಎಲ್ಲ ಸಂಸ್ಥೆಗಳನ್ನು ಒಂದು ಮಾಡಿ ಸರಕಾರವು ವಾಯವ್ಯ ಪ್ರಾಂತದಂತೆ (ತಮ್ಮ ಖರ್ಚು ಉಳಿಯುವದಕ್ಕಾಗಿ) ಕರ್ನಾಟಕವನ್ನು ಹಿಂದುಳಿದ ಪ್ರಾಂತದಂತೆ ಗಣಿಸುವದಕ್ಕೆ ಹಿಂದೆ ಮುಂದೆ ನೋಡರು. ಕರ್ನಾಟಕ ಏಕೀಕರಣವಾಗಬೇಕು; ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತ ದೊರೆಯಬೇಕು: ಎಂಬದಾಗಿ ಕನ್ನಡಿಗರ ಮನಸ್ಸಿನೊಳು ಇರುವದು ಸರಿ. ಆದರೆ ಕೃತಿಯಲ್ಲಿ ತರುವದು ಮಾತ್ರ ಈ ವರೆಗೆ ಆಗದು; ಸರಕಾರದವರು ಅದರ ಲಾಭವನ್ನು ತೆಗೆದುಕೊಂಡು, ನಮ್ಮನ್ನು ಹಿಂದುಳಿದವರಂತೆ ಎಣಿಸದೇ ಬಿಡರು.

ಐನಾಪೂರದಲ್ಲಿ ಹೈಸ್ಕೂಲ ಈ ತಿಂಗಳಿನಲ್ಲಿ ಪ್ರಾರಂಭವಾದುದು, ಸ್ಥಾನಿಕ ಮುಂದಾಳುಗಳಿಗೂ, ಶಾಲೆಯ ಶಿಕ್ಷಕ ವರ್ಗದವರಿಗೂ ಒಳ್ಳೇ ಭೂಷಣವಾದ ಸಂಗತಿಯು. ಹಳ್ಳಿಯಲ್ಲಿ ಹೈಸ್ಕೂಲಾದುದು ಕರ್ನಾಟಕದಲ್ಲಿ ಇದೇ ಮೊದಲನೇಯದು. ಒಂದು ಸ್ಥಾನದಲ್ಲಿಯಾದರೂ ಹೈಸ್ಕೂಲಿದ್ದ ಇಂಥ ಹಳ್ಳಿಯು ಸಿಕ್ಕುವದೇ ಇಲ್ಲವೋ ಹೇಳಲು ಕಠಿಣವಿದೆ. ಇಲ್ಲಿಯ ಶಿಕ್ಷಕ ವರ್ಗದವರಲ್ಲಿದ್ದ ಶಿಕ್ಷಣ ವಿಷಯಕ ಅಭಿಮಾನ, ತಮ್ಮ ತಮ್ಮಲ್ಲಿಯ ಒಕ್ಕಟ್ಟು ಅನುಕರಣೀಯವಾಗಿವೆ. ದೊಡ್ಡ ದೊಡ್ಡ ನಗರಗಳಲ್ಲಿಯ ಶಾಲೆಗಳು ತಮ್ಮ ಅವ್ಯವಸ್ಥೆಯಿಂದ ಕೋರ್ಟ್, ವೃತ್ತಪತ್ರಿಕೆಗಳಿಂದ ಟೀಕಿಸಲ್ಪಡುತ್ತಲಿವೆ; ಇಂತಹ ಈಗಿನ ಪರಿಸ್ಥಿತಿಯಲ್ಲಿ ಹಳ್ಳಿಯಲ್ಲಿ ಈ ಹೈಸ್ಕೂಲು ಹೊರಟಿದ್ದು ಅಭಿನಂದನೀಯವೇ ಸರಿ. ಐನಾಪೂರವು ಕೃಷ್ಣಾನದಿಯ ತಟಾಕಿನಲ್ಲಿರುವವರಿಂದ, ಅದು ಬಹು ಆರೋಗ್ಯಕರವಾದುದೆಂಬದು ಸಹಜವಾದದು; ಮೇಲೆ ರೇಲ್ವೆ ಸ್ಟೇಶನ್ನು ಸಮೀಪವಿದೆ. ಇಂತಹ ಸೌಕರ್ಯಗಳುಳ್ಳ ಶಿಕ್ಷಣ ಸಂಸ್ಥೆಗೆ ಸ್ಥಾನಿಕ ಜನರ ಬೆಂಬಲವೂ ಚನ್ನಾಗಿರುವದರಿಂದ, ವಿದ್ಯಾರ್ಥಿಗಳ ಶಿಕ್ಷಣ ಕ್ರಮಕ್ಕೆ ಯಾವ ಕುಂದೂ ತಟ್ಟುವಂತಿಲ್ಲ. ಹಳ್ಳಿಯಾದ್ದರಿಂದ ನಗರದ ಸೌಕರ್ಯಗಳೂ, ಅವುಗಳಿಂದ ವಿದ್ಯಾರ್ಥಿಗಳಿಗಾಗುವ ಜಗತ್ತಿನ ಅನುಭವವೂ ಇಲ್ಲದಂತಾಗುವದೆಂದು ಕೆಲವರು ಆಕ್ಷೇಪ ತೆಗೆಯಬಹುದು. ಆದರೆ ನಗರದ ಈಗಿನ ಬಹುಜನ ವಿದ್ಯಾರ್ಥಿಗಳಲ್ಲಿ ನೆಲೆಗೊಂಡಿರುವ ಸ್ವೈರವೃತ್ತಿ, ವಿಲಾಸಭೋಗಗಳಿಂದ ತಮ್ಮ ಆರೋಗ್ಯವನ್ನೇ ಕೆಡಿಸಿಕೊಳ್ಳುತ್ತಿರುವಂತಹ ನಡತೆ ಪರದೇಶೀ ವಸ್ತ್ರಗಳನ್ನು ಹೆಚ್ಚಾಗಿ ಧರಿಸುವ ಪ್ರತಿಗಳನ್ನು ಪ್ರತ್ಯಕ್ಷವಾಗಿ ನಿರೀಕ್ಷಿಸುತ್ತಿರುವವರಿಗೆ ಹಳ್ಳಿಯ ವಾಸವೇ ಹೆಚ್ಚಾಗಿ ಸುಖಕರವೆಂಬುದು ತೋಚದೇ ಇರದು.

ಭಾರತೀಯ ರಾಜರು ಮಹಾರಾಜರುಗಳಿಗೆ ಪರದೇಶಗಳಲ್ಲಿ ಸುಳಿದಾಡುವದೊಂದು ಅನಿಷ್ಟ ಚಟವು ಗಂಟುಬಿದ್ದಿದೆ. ಹೀಗೆ ಪರದೇಶದಲ್ಲಿ ತಿರುಗಾಡಿ ಬರದಿದ್ದರೆ, ಅವರು ತಮಗೆ ಅಪಮಾನಕರವೆಂದು ತಿಳಿಯುತ್ತಿರುವರು. ರಾಜರ ಸಮೂಹದಲ್ಲಿ ತಿರಸ್ಕಾರವೆಲ್ಲಿ ಉದ್ಭವವಾಗುವದೋ ಎಂಬ ಭಯವುಂಟಾಗುವದು. ಇದರಿಂದ ಪ್ರತಿಯೊಬ್ಬ ರಾಜಪುತ್ರನ ಪರದೇಶ ಗಮನವೆಂದರೆ ಅತ್ಯಾವಶ್ಯಕವಾದ ವಿಷಯವಾಗಿದೆ. ಈ ಬಗ್ಗೆ ಸಾವಿರಗಟ್ಲೆ, ಯೋಗ್ಯತೆಯಿದ್ದವರು ಲಕ್ಷಗಟ್ಲೆ ಹಣವನ್ನು ಪರದೇಶಗಳಲ್ಲಿ ಸುರುವಿ ಬರುವರು. ರೈತರಿಂದ, ಅವರನ್ನು ಪೀಡಿಸಿ, ಹಣ ಕೂಡಿಸಿಕೊಂಡು, ನೀರಿನಂತೆ ಪರದೇಶಗಳಲ್ಲಿ ವ್ಯಯ ಮಾಡುವರು. ವಿಲಾಯತಿಯಲ್ಲಿಯ ಸಮಾಜದಲ್ಲಿ 'ಚೇನ್' ಹೊಡೆದು ಬಂದ ರಾಜರುಗಳಿಗೆ ತಮ್ಮ ಪ್ರಜೆಗಳ ಸಂಗಡ ಮಾತನಾಡುವದು, ಅವರ ಸಹವಾಸದಲ್ಲಿರುವದು, ಅವರ ಕಷ್ಟಗಳನ್ನು ತಿಳಿದುಕೊಳ್ಳುವದು ತಲೆಬೇಸರವಾಗುವದು. ಆದುದರಿಂದ ಹಿಂದುಸ್ಥಾನದಲ್ಲಿ ಸಹ, ಮಹಾಬಲೇಶ್ವರ, ನೀಲಗಿರಿ, ಸಿಮ್ಲಾ ಮೊದಲಾದ ಸ್ಥಾನಗಳಲ್ಲಿ ಮನೆಕಟ್ಟಿ ಇರುವರು; ಮುಂಬೈ ಮದ್ರಾಸಗಳಂತಹ ಪಟ್ಟಣಗಳಲ್ಲಿ ಮೆರೆಯುವರು. ಹೀಗೆ ಈ ಬಗೆಯ ಚಟವು ಹತ್ತುತ್ತಿರುವದರಿಂದ ದೇಶೀಯ ಸಂಸ್ಥಾನಗಳ ಪ್ರಜರ ಸ್ಥಿತಿಯು ಇನ್ನೂ ಎಷ್ಟು ಅವನತಿಗೆ ಇಳಿಯುವದೋ ತಿಳಿಯದಾಗಿದೆ. ನಾವು ಚಿತ್ರಿಸಿದ ಈ ರೂಪರೇಖೆಗೆ ಅಪವಾದಗಳಿಲ್ಲವೆಂದಲ್ಲ. ಆದರೆ ಸರ್ವ ಸಾಮಾನ್ಯವಾಗಿ ರಾಜರು—ಮಹಾರಾಜರ ಸ್ಥಿತಿಯಂದರೆ ಹಿಂದುಸ್ಥಾನದಲ್ಲಿ ಹೀಗೆಯೇ ಇದೆ. ಪ್ರಸ್ತುತದಲ್ಲಿ ರಾಜಪಿಪಲಾದ ಮಹಾರಾಜರು ಲಕ್ಷಗಟ್ಲೆ ಹಣ ವ್ಯಯಮಾಡಿ, ಲಂಡನ್ನಿನಲ್ಲಿ ಒಂದು ಅರಮನೆಯನ್ನು ಕಟ್ಟಿಸುತ್ತಲಿದ್ದಾರೆ; ಅಲ್ಲಿ ಅವರು ಕಾಯಂವಾಗಿರುವರಂತೆ! ಅಲ್ಲಿ ಅಂದವಾದ ತೋಟವೊಂದಾಗಬೇಕಂತೆ! ಹಿಂಡುವ ದನಗಳನ್ನು ಸಾಕುವದಕ್ಕಾಗಿ ಒಳ್ಳೇ ಅಚ್ಚುಕಟ್ಟಿನ ಏರ್ಪಡಾಗಬೇಕಂತೆ! ಇದೊಂದು ಹೊಸ ಉಪಕ್ರಮವನ್ನು ಇವರು ಪ್ರಾರಂಭಿಸಿದಂತಾಯಿತು! ಈ ವರೆಗೆ ಭಾರತೀಯ ರಾಜರು ಭಾರತಖಂಡದಲ್ಲಿಯೇ ವಿಲಾಸಿಗಳಾಗಿ ಆಳುತ್ತ, ಮನಸ್ಸಿಗೆ ಹೊಳೆದಾಗ್ಗೆ ಮಾತ್ರ ವಿಲಾಯತಿಗೆ ಹೋಗುತ್ತಿದ್ದರು. ಇನ್ನು ಮೇಲೆ ವಿಲಾಯತಿಯಲ್ಲಿಯೇ ಕಾಯಂವಾಗಿರುವ ಹೊಸಯುಗವೊಂದು ಉದಯವಾದಂತಾಗಿದೆ. ಬಡೋದೆಯ ಮಹಾರಾಜರು ೨೦–೨೫ ಸಲ ಪರದೇಶಗಳಿಗೆ ಹೋಗಿ ಬಂದಿದ್ದಾರೆ. ಈಗ್ಗೆ ಪುನಃ ಹೋಗಿದ್ದಾರೆ. ಆದರೆ ಅಲ್ಲಿಯೇ ಕಾಯಂವಾಗಿರಲು ಮನೆ ಕಟ್ಟಿರಲಿಲ್ಲ. ಈ ಹೊಸ ಯುಗದ ಗಾಳಿಯು ಇನ್ನು ಮೇಲೆ ಹೇಗೆ ಬೀಸುತ್ತ ಹೋಗುವದೋ ನೋಡಬೇಕು.

'ಕನ್ನಡಿಗ'ನಿಗೆ ಸಹಾಯ.

(೧) ಮುಂಬೈ, ಶ್ರೀ ಅಡವಿ ವ್ಹಿ. ಎನ್. ಇವರು ೫ ರೂ. ಕಳಿಸಿ 'ಕನ್ನಡಿಗ'ನ ಸಹಾಯಕರಾಗಿದ್ದಾರೆ. (೨) ಶ್ರೀ ಯಕ್ಕುಂಡಿ ಹಣಮಂತರಾಯರ ೩ ಜನ ಚಂದಾದಾರರನ್ನು ದೊರಕಿಸಿಕೊಟ್ಟಿದ್ದಾರೆ. (೩) ಶ್ರೀ ಪಾಟೀಲ ಅಣ್ಣಾರಾಯರ ಮೂರು ಜನ ಚಂದಾದಾರರನ್ನು ಕೂಡಿಸಿಕೊಟ್ಟಿರುವರು. ಇವರಿಗೆಲ್ಲ 'ಕನ್ನಡಿಗ'ನು ಋಣಿಯಾಗಿರುವನು.

ಪತ್ರವ್ಯವಹಾರ.

ಕರ್ನಾಟಕ ಆಯುರ್ವೇದ ಪರಿಷತ್ತು

ಸತ್ಯವಾದಿ ವೈದ್ಯರಿಂದ ಪ್ರಕಟವಾಗಿರುವ ಲೇಖನದ ವಿಷಯವಾಗಿ 'ಕನ್ನಡಿಗ'ನ ಸಂಪಾದಕರು ತಮ್ಮ ಪ್ರತಿನಿಧಿಗೆ ಆಹ್ವಾನ ಮಾಡಿದ್ದರಷ್ಟೇ! ಪ್ರತಿನಿಧಿಯಿಂದು ಸಮ್ಮೇಲನದಲ್ಲಿ ಆದ ಸಂಗತಿಯನ್ನು ನಾನು 'ಕನ್ನಡಿಗ'ನಲ್ಲಿ ಪ್ರಕಟಿಸಿದ್ದೇನೆ. ಆ ಆಕ್ಷೇಪಣೆಗಳಿಗೆ ಹೀಗೆ ಉತ್ತರವಿದೆ—

ನಾನು ದ್ವೇಷಭಾವದಿಂದ ಲೇಖವನ್ನು ಬರೆದಿಲ್ಲ. ಕಳಕಳಿಯಿಂದಲೂ, ವಿಷಾದದಿಂದಲೂ ಬರೆದಿದ್ದೇನೆ.

೧ ಸತ್ಯವಾದಿ ವೈದ್ಯರು ನನ್ನ ಲೇಖವನ್ನು ನಿರ್ವಿಕಾರ ಮನಸ್ಸಿನಿಂದ ಓದಿ ನೋಡಲೊಣವಾಗಲಿ! "ಹೊರಗಿನಿಂದ ಯಾರೂ ಬಂದಿರಲಿಲ್ಲ"ವೆಂಬ ವಿಚಾರವು ಹೇಗೆ ಬಂತೋ! ನಾನು ಹಾಗೆಂದೇಯಿಲ್ಲವಲ್ಲ!

೨. ವೈದ್ಯಕ ಪ್ರದರ್ಶನದ ಉದ್ದೇಶವನ್ನು ಸತ್ಯವಾದಿಗಳು ಲಕ್ಷ್ಯದಲ್ಲಿ ತಂದು ವಿಮರ್ಶಿಸಬೇಕು. ಸಂದಿಗ್ಧ ವನಸ್ಪತಿಗಳೂ, ಪ್ರಾಂತಭೇದದಿಂದ ಒಂದೇ ಹೆಸರಿನಿಂದ ಉಪಯೋಗಿಸಲ್ಪಡುವ ಭಿನ್ನ ಭಿನ್ನ ವನಸ್ಪತಿಗಳ ನಿರ್ಣಯ, ಸಿದ್ಧ ಔಷಧಿಗಳ ಗುಣದೋಷ, ಪ್ರಕ್ರಿಯೆ, ಉಪಯೋಗ, ಮುಂತಾದವುಗಳ ಊಹಾಪೋಹ ಮಾಡುವದೂ ಅವಶ್ಯಕವಾದದ್ದು. ಇದೇ ಪ್ರದರ್ಶನದ ಮುಖ್ಯ ಉದ್ದೇಶವು. ಆದರೆ ಇದಕ್ಕೆ ಆಸ್ಪದವಿರಲಿಲ್ಲ. ಸಮಯ ನೇಮಕ ಮಾಡಿರಲಿಲ್ಲ. ಅನೇಕರು ಬಂದು ಪ್ರದರ್ಶನವನ್ನು ನೋಡಿದ್ದು ನಿಜ. ಕಲೆಕ್ಟರರು ಬಂದು ಪ್ರದರ್ಶನ ನೋಡಿದರೆ ಇಷ್ಟೆ ಕರ್ತವ್ಯವಾಯಿತೇ? ಇತರ ವಸ್ತು ಪ್ರದರ್ಶನಕ್ಕೂ, ಈ ಪ್ರದರ್ಶನಕ್ಕೂ ಭೇದವಿದೆ, ಇತರ ವಸ್ತು ಪ್ರದರ್ಶನದಲ್ಲಿಯೂ ಕೂಡ ಜನರು ಆಯಾ ವಸ್ತುಗಳ ವಿಷಯಕ್ಕೆ ಚಿಕಿತ್ಸಕ ಬುದ್ಧಿಯಿಂದಲೂ ವಿಚಾರಿಸುವರು. ಅಂದರೆ ಇಷ್ಟೆ, ಸಂದಿಗ್ಧ ನಿರ್ಣಯ, ಪರಿಚಯ, ಭಿನ್ನಮತ ಇವುಗಳ ನಿರ್ಣಯ, ಊಹಾಪೋಹವಾಗುವದು ಅವಶ್ಯಕವು. ಕೇವಲ ಪ್ರದರ್ಶಿಸುವದಕ್ಕಾಗಿಯೇ ಈ ಪ್ರದರ್ಶನವೆಂದಲ್ಲಿ ವಾದವಿಲ್ಲ!

೩. ಮೊದಲು ಸಂಸ್ಕೃತ ಭಾಷಣ ಮಾಡಲು ಅನೇಕರಿಗೆ ತಿಳಿಯಲಾರದಾಗಿ ಕನ್ನಡದಲ್ಲಿ ಹೇಳಬೇಕೆಂದು ಕೇಳಿಕೊಂಡರೂ ಸಾಧ್ಯವಾಗಲಿಲ್ಲ' "ಅನೇಕರು ಎದ್ದು ಹೋದದ್ದು ನಿಜ

೪ ವಿಷಯನಿಯಾಮಕ ಮಂಡಲಕ್ಕೆ ನಾನು ದೋಷ ಕೊಟ್ಟಿಲ್ಲ ನನ್ನ ಲೇಖನವನ್ನು ನೋಡಲೊಣವಾಗಲಿ. ಆದರೆ ನಡೆದ ಸಂಗತಿಯನ್ನು ಹೇಳಿದ್ದೇನೆ

೫—೬ ತ್ರಿದೋಷದ ವಿಷಯಕ್ಕೆ ಡಾ. ಜನರು ಕೇಳಿದ್ದು ನಿಜ. ಈ ವಿಷಯವು ಈ ಮುಂದೆ ಹೊರಗೆ ಬಂದೇ ಬರುವದು. ಮೇಲಾಗಿ ಮೊದಲೇ ಪ್ರಕಟಿಸಿದ ಮೇರೆಗೆ ತ್ರಿದೋಷಗಳ ಸ್ವರೂಪ, ಪಾರದ ಸಂಸ್ಕಾರವಿಧಿ, ಗಂಧಕ ಜಾರಣಾದಿ ವಿಧಿ ಇವು ಚರ್ಚಿಸತಕ್ಕ ವಿಷಯಗಳಾಗಿದ್ದವು. ಇದಕ್ಕಾಗಿ ಸಮಯ ನೇಮಕ ಮಾಡಿರಲಿಲ್ಲ. ಆಸ್ಪದವೂ ದೊರಕಲಿಲ್ಲ!

ಪರದೇಶದ ಔಷಧಗಳಿಗೆ ತಡೆ ಹಾಕಲು ಮಾಡಿದ ಯಾವ ಪ್ರಯತ್ನಗಳು ನಿಷ್ಫಲವಾಗಿವೆ? ಸಮ್ಮೇಲನ, ಪ್ರದರ್ಶನದ ಉದ್ದೇಶವಾದರೂ ಏನು? ಕುತೂಹಲವುಳ್ಳ ೧—೨ ಡಾ. ರರಿಗಾದರೂ ತಿಂದಿದ್ದರೆ ನಿದರ್ಶನವಾಗುತ್ತಿದ್ದಿತೇ? ಹಾಗಾದರೆ ಸಮ್ಮೇಲನದಲ್ಲಿ ಯಾವ ಮಹತ್ಕಾರ್ಯವು ಆಗಿತು?

೭ ಉಪದಂಶ, ತ್ರಿದೋಷಗಳ ಮೇಲೆ ಓದಿದ ನಿಬಂಧಗಳಿಗೆ ಬಹುಮಾನ ದೊರೆತದ್ದು ಸತ್ಯವಾದಿಗಳು ಮರೆತಂತೆ ತೋರುತ್ತದೆ.

ಬಾಗಲಕೋಟೆಯ ನಮ್ಮ ಮಿತ್ರರಾದ ಓರ್ವ ಡಾಕ್ಟರರು ನಾನು ಬರೆದಿರುವ ಲೇಖಕ್ಕೆ ಒಪ್ಪಿದರೂ ಬಹಿರಂಗವಾಗಿ ಪ್ರಕಟಿಸಿದ್ದಕ್ಕೆ ದೋಷಾರೋಪಣ ಮಾಡುತ್ತಿದ್ದಾರೆ. ಸ್ವಾಮೀ! ವೃಥಾ ಆಡಂಬರದಿಂದ ಕಾರ್ಯವಾಗದು! ನಾನಾದರೂ ಆಯುರ್ವೇದದ ಅಭಿಮಾನಿಯೇ! ನಮ್ಮ ತಪ್ಪುಗಳನ್ನು ನಾವು ತಿಳಿದು ಸುಧಾರಿಸುವ ಪ್ರಯತ್ನ ಮಾಡುವದು ಯೋಗ್ಯವೋ ಅದರ ಮೇಲೆ ಆವರಣ ಹಾಕುವದು ಯೋಗ್ಯವೋ ತಿಳಿದು ನೋಡಿ!

ಸಜ್ಜನವಿಧೇಯ
ವಾದಿರಾಜ ಜಹಾಗೀರದಾರ,
ಇಲಕಲ್ಲ.

ಇಹವೃತ್ತ.

ಮಳೆಯ ಲಕ್ಷಣಗಳಿವೆ. ಮಾತ್ರ! ಆದರೆ ಮಳೆರಾಜನ ಪ್ರತ್ಯಕ್ಷ ದರ್ಶನವು ಎಂದಾಗುವದೋ ತಿಳಿಯದು.

'ಕೋ—ಆಪರೇಟಿವ ಇನ್‌ಸ್ಟಿಟ್ಯೂಟ'ದ ಚೇರಮನ್ನರ ಸ್ಥಾನಕ್ಕೆ ಇಲ್ಲಿಯ ತರುಣ ವಕೀಲರಾದ ಶ್ರೀ ಲೂತೀ ಮಠರು ಆರಿಸಲ್ಪಟ್ಟಿದ್ದಾರೆ ಇವರಿಗೆ ಮತಕೊಟ್ಟ ಅನೇಕ ಸಭಾಸದರು ಆ ಅ'ಸೋಸಾಯಿಟಿ'ಗಳಿಂದ ಅಧಿಕಾರ ಪತ್ರ ತಂದಿರಲಿಲ್ಲವಾದುದರಿಂದ, ಈ ಆರಿಸುವಿಕೆಯು ಕಾನೂನಿನ ವಿರುದ್ಧವಾದುದೆಂದು ಆ ದಿನ ಸಭೆಯಲ್ಲಿ ವಿಷಯವು ಹೊರಟಿತ್ತು. ಆದರೆ ಬಹುಮತದಿಂದ ಆ ವಿಷಯವು ಹಿಂದಕ್ಕೆ ತಳ್ಳಲ್ಪಟ್ಟಿತು. ಮೇಲಧಿಕಾರಿಗಳು ಈ ಬಗ್ಗೆ ಯೋಗ್ಯ ವಿಚಾರ ಮಾಡತಕ್ಕದ್ದು.

'ಕನ್ನಡಿಗ'ನ ಕಾರ್ಯಾಲಯದ ಎದುರಿನ ಬೈಲಿನಲ್ಲಿ ಕಳೆದ ವಾರ ಮನೋಹರ ಮೋಟಾರು ಓರ್ವ ಬಡ ಕೂಲಿಕಾರನ ಮೇಲೆ ಹಾಯ್ದು ಹೋಯಿತು. ಈ ಬಗ್ಗೆ ಪೋಲೀಸರ ವಿಚಾರಣೆ ನಡೆದಿದೆ. ಕೂಲಿಕಾರನು ಹುನಗುಂದ ತಾಲೂಕಿನ ಮಾಡಾಪೂರ ಗ್ರಾಮದವನಿದ್ದನೆಂಬಾತನು. ಪಕ್ಕಡಿಯ ಎಲುಬುಗಳೆರಡು ಮುರಿದಿದ್ದು, ಸರಕಾರೀ ದವಾಖಾನೆಯಲ್ಲಿ ಮಲಗಿರುವನು. ಮೋಟಾರುಗಳಿಂದ ಇತ್ತಿತ್ತ ಅನೇಕ ಬಗೆಯ ಭಯಂಕರವಾದ ಅಪಘಾತಗಳಾಗುತ್ತಲಿದ್ದದರಿಂದ ಸರಕಾರದವರು ಇವು ಸಂಭವಿಸದ ಹಾಗೆ ಎಚ್ಚರಗೊಳ್ಳುವದು ಅತ್ಯಾವಶ್ಯಕ.

ವಿಜಾಪೂರ ಜಿಲ್ಲೆಯ ಖಾದೀ ಸಂಘವು ಬಾಗಲಕೋಟೆಯಲ್ಲಿ ಸ್ಥಾಪಿಸಲ್ಪಟ್ಟಿದೆ. ಶ್ರೀ ಟಿಗ್ಗರಸೀ ವಕೀಲರೂ, ಕಟ್ಟಿಯವರೂ ಈ ಕಾರ್ಯದಲ್ಲಿ ತನುಮನಧನಗಳನ್ನರ್ಪಿಸಲು ಸಿದ್ಧವಾಗಿದ್ದುದು ಕರ್ನಾಟಕದ ಸುದೈವವೇ ಸರಿ.

ವಿಜಾಪೂರ ಜಿಲ್ಲೆಯ ಸುದ್ದಿಗಳು.

ಕಲೇಕ್ಟರ ಸಾಹೇಬರ ಪ್ರವಾಸ:— ಜೂನ ೨೦—೨೪ ಬೀಳಗಿ; ೨೫—೨೬ ಕಮತಗಿ; (ಕಲೆಕ್ಟರ ಸಾ। ಓರ್ವರೇ ಹುನಗುಂದಕ್ಕೆ ತಾ। ೨೬ ನೇ ದಿನ ಹೋಗುವರು.) ೨೭—೩೦ ಬಾಗಲಕೋಟೆ. (ತಾ ೨೭ನೇ ದಿನ ಟೀಗ್ಗ ಸಾಹೇಬರೊಬ್ಬರೇ ಗುಳೇದಗುಡ್ಡಕ್ಕೆ ಹೋಗುವರು.

ಮುದ್ದೇಬಿಹಾಳ.

ಮಳೆಯು ಸದ್ಯಕ್ಕೆ ಸಾಕಷ್ಟು ಆಗಿದೆ, ಬಿತ್ತಿಗೆ ನಡೆದದೆ. ಆಲಮಟ್ಟಿಯ ಹಾದಿಗೆ ಮಾತ್ರ ಮಳೆಯು ಹೆಚ್ಚಾಗಿ ಹಳ್ಳಗಳು ಕೊಚ್ಚಿಕೊಂಡು ಬಂದಿವೆ ಉಳಿದೆಲ್ಲ ಕಡೆಗೂ ಗಾಳಿ ಇಲ್ಲವೆ ಮಳೆ ಇಲ್ಲದೆ ನೋಡ—ಹೀಗೆ ಮಳೆಗಾಲದ ಲಕ್ಷಣಗಳಿವೆ. ಹನೆಯಲ್ಲಿ ತಂಪು ಹುಟ್ಟಿದೆ. ರೋಗಾದಿಗಳು ಸರಿಯುತ್ತಿವೆ. ಮೊನ್ನೆ ನಾಲತವಾಡದಲ್ಲಿ ಒಬ್ಬ ಲೋಕಲ್‌ಬೋರ್ಡಿನ ಚಾಕರನು ದಿರುಗಾಳಿಯು ಕೆಡವಿದ ಗಿಡದ ತುಳತಕ್ಕೆ ಸಿಕ್ಕು ತೀರಿಕೊಂಡನು. ಆಲಮಟ್ಟಿಯಲ್ಲಿ ಸ್ಥಾಪಿತವಾದ ವೀರಶೈವ ವಿದ್ಯಾಲಯದಿಂದ ಇಲ್ಲಿಯ ನೂಲುವವರಿಗೆ ರಾಟಿಲಗಳನ್ನು ಪೂರೈಸಕೊಡಗಿದ್ದಾರೆ ಎಂದು ಕೇಳುತ್ತೇವೆ.

ವಿಟ್ಠಲ ಭಕ್ತಿಯ ಇತಿಹಾಸ.

(ಲೇ:—ಶ್ರೀ. ನಾರಾಯಣ ಶ್ರೀನಿವಾಸ ರಾಜಪುರೋಹಿತ)

ವಿಟ್ಠಲ ಭಕ್ತಿಯ ಉಗಮವು ರಾಮಾನುಜಾಚಾರ್ಯರ ಕಾಲದಲ್ಲಿ ಎಂದರೆ ೧೨ನೆಯ ಶತಮಾನದಲ್ಲಿ ಆಯಿತು. ಇವರು ಉದಯರಾಗುವದಕ್ಕಿಂತ ಮೊದಲು, ಶೈವರ ಹಾಗು ಜೈನರ ಪ್ರಾಬಲ್ಯವು ವಿಶೇಷವಾಗಿತ್ತು. ಶೈವನಾದ ಚೋಳ ದೇಶದ ಅರಸನು ಇವರನ್ನು ಅತಿಶಯವಾಗಿ ಪೀಡಿಸಿದ್ದರಿಂದ ಕ್ರಿ. ಶ. ೧೧೧೭ರ ಸುಮಾರಕ್ಕೆ ಇವರು ಕರ್ನಾಟಕಕ್ಕೆ ಬಂದರು. ಆ ಕಾಲದಲ್ಲಿ ದ್ವಾರಸಮುದ್ರದಲ್ಲಿ ಬಿಟ್ಟಿದೇವನು (ಕ್ರಿ. ಶ. ೧೧೧೧-೧೧೪೧) ಆಳುತ್ತಿದ್ದನು. ಈತನು ಜೈನನಾಗಿದ್ದನು. ಇವನ ಸಭೆಯಲ್ಲಿ ರಾಮಾನುಜಾಚಾರ್ಯರು ಜೈನ ಪಂಡಿತರನ್ನು ಸೋಲಿಸಿದ್ದರಿಂದ ಇವನು ವೈಷ್ಣವ ಧರ್ಮವನ್ನು ಸ್ವೀಕರಿಸಿ, ವಿಷ್ಣುದೇವ ಅಥವಾ ವಿಷ್ಣುವರ್ಧನನೆಂಬ ಹೆಸರನ್ನಿಟ್ಟುಕೊಂಡನು. ಈ ವಿಷ್ಣುದೇವನ ಹೆಸರು ತತ್ಕಾಲೀನ ಕನ್ನಡ ಲೇಖಗಳಲ್ಲಿ 'ವಿಟ್ಠಲದೇವ' ಎಂದೂ ಸಿಕ್ಕುತ್ತದೆ. ಕನ್ನಡ ಭಾಷೆಯ ರೂಪನಿಯಮಗಳನ್ನನುಸರಿಸಿ 'ವಿಷ್ಣು' ಎಂಬ ಈ ಸಂಸ್ಕೃತ ಶಬ್ದದ 'ವಿಟ್ಠಲ' ಎಂಬ ಈ ಅಪಭ್ರಷ್ಟ ರೂಪವು ಇದೇ ಕಾಲದಲ್ಲಿ ಹುಟ್ಟಿತು. ಪ್ರಚಲಿತ ಕನ್ನಡ ಭಾಷೆಯಲ್ಲಿ ಕೃಷ್ಣ ಎಂಬದರ ಅಪಭ್ರಂಶವು, ಕೃಷ್ಟ ಎಂದಾಗುತ್ತದೆ. ಈ ನಿಯಮದ ಪ್ರಕಾರ ವಿಷ್ಣು=ವಿಷ್ಟು ಎಂದು ಶಬ್ದಮಣಿದರ್ಪಣದ ಅಪಭ್ರಂಶ ಪ್ರಕರಣದ ೩೨ನೆಯ ಸೂತ್ರದ ಪ್ರಕಾರ ವಿಷ್ಟು=ವಿಟ್ಟು ಆದ ಬಳಿಕ ವಿಟ್ಟು+'ಲ' ಸಾರ್ಥಕ ಪ್ರತ್ಯಯವು ಹತ್ತಿ 'ವಿಟ್ಟಲ' ಎಂಬ ರೂಪವು ಸಿದ್ಧವಾಗುತ್ತದೆ. (ವಿಷ್ಣು=ವಿಟ್ಟು=ವಿಟ್ಟು+ಲ=ವಿಟ್ಟಲ=ವಿಟ್ಠಲ). ಇದಕ್ಕೂ ಪೂರ್ವದಲ್ಲಿ ದ್ರಾವಿಡ ಭಾಷೆಗಳಲ್ಲಾಗಲಿ ಪ್ರಾಕೃತ ಭಾಷೆಗಳಲ್ಲಾಗಲಿ ಈ 'ವಿಟ್ಟಲ' ರೂಪವು ಎಲ್ಲಿಯೂ ಸಿಕ್ಕುವದಿಲ್ಲ. ಏನಂತ, ವಿಟ್ಠಲ ಶಬ್ದದ ಜನ್ಮವು ೧೨ನೇಯ ಶತಮಾನದಲ್ಲಿಯೇ ಆಗಿದೆ. ಅತಏವ, ವಿಟ್ಠಲ ಭಕ್ತಿಯ ಜನ್ಮವು ಕೂಡ ಇದೇ ಕಾಲಕ್ಕೆ ಆಗಿರುತ್ತದೆಂದು ಸ್ಪಷ್ಟವಾಗಿ ಹೇಳಬಹುದು*.

ಮುಂದೆ ೧೩ನೆಯ ಶತಮಾನದಲ್ಲಿ ಶ್ರೀಮನ್ಮಧ್ವಾಚಾರ್ಯರ ಅವತಾರವಾಗಿ ದ್ವೈತಮತದ ಸ್ಥಾಪನೆಯಾದಬಳಿಕಂತೂ ಈ ವಿಟ್ಠಲ ಭಕ್ತಿಯು ಅತ್ಯಂತ ಊರ್ಜಿತಾವಸ್ಥೆಯನ್ನು ಹೊಂದಿತು ಕ್ರಿ. ಶ. ೧೨೪೯ರಲ್ಲಿ ದೇವಗಿರಿಯ ಯಾದವ ಶ್ರೀ ಕನ್ನರ ರಾಜನ ಸರದಾರನಾದ ಮಲ್ಲಿಶೆಟ್ಟಿಯು ಭೀಮರಥೀ ನದಿಯ ತೀರದಲ್ಲಿರುವ ಪುಂಡರೀಕಪುರದ ವಿಟ್ಠಲದೇವರಿಗೆ ಒಂದು ಗ್ರಾಮವನ್ನೇ "ಇನಾಮ" ಕೊಟ್ಟಿದ್ದನೆಂದು ತಾಂಮ್ರಪಟ್ಟವು ಹೇಳುತ್ತದೆ†. ಇಷ್ಟೇ ಅಲ್ಲ. ಇದೇ ಕಾಲಕ್ಕೆ ಆಗಿ ಹೋದ ಚೌಂಡರಸನೆಂಬ ಕನ್ನಡ ಕವಿಯು ಪುಂಡರೀಕಪುರದ ವಿಟ್ಠಲನ ವರ್ಣನೆಗೆ ತನ್ನ "ಅಭಿನವದಶಕುಮಾರಚರಿತ್ರ" ಗ್ರಂಥದ ಒಂದು ಅಧ್ಯಾಯವನ್ನೇ ಅರ್ಪಿಸಿದ್ದಾನೆ; ಇದರಿಂದ ೧೪ನೆಯ ಶತಮಾನದಲ್ಲಿ ವಿಟ್ಠಲ ಭಕ್ತಿಯು ಜನರಲ್ಲಿ ಎಷ್ಟು ಪ್ರಿಯವಾಗಿತ್ತೆಂಬುದು ಚನ್ನಾಗಿ ವ್ಯಕ್ತವಾಗುತ್ತದೆ. ಆಗಿನ ಕಾಲದ ಜನರ ಹೃದಯದಲ್ಲಿ ವಿಟ್ಠಲನ ವಿಷಯವಾಗಿ ಎಷ್ಟು ಉತ್ಕಟ ಭಕ್ತಿಯು ವಾಸವಾಗಿತ್ತೆಂಬುದು ಚೌಂಡರಸನ ಗ್ರಂಥದಿಂದ ಸ್ಪಷ್ಟವಾಗಿ ತಿಳಿಯಬರುತ್ತದೆ. ಆದರೊಳಗಿನ ೪-೫ ಪದ್ಯಗಳನ್ನು ಇಲ್ಲಿ ಕೊಡುತ್ತೇನೆ.

*ಆದರೆ ವಿಷ್ಣುಭಕ್ತಿಯು ವೇದಕಾಲದಿಂದ ಭರತಖಂಡದಲ್ಲೆಲ್ಲ ನಡೆದು ಬಂದಿರುವದು. ಸ. ಪಾ.

†ಉಪರಿ ನಿರ್ದಿಷ್ಟವಾದ ತಾಮ್ರಪಟ್ಟವು ಬೆಂಡಿಗೇರಿಯ ತಾಮ್ರಶಾಸನವು ಆದರಲ್ಲಿ ದೇವಗಿರಿ ಯಾದವ ರಾಜನಾದ ಶ್ರೀಕನ್ನರ (ಕೃಷ್ಣ)ನ ಮಹಾಮಾತ್ಯನಾದ ಮಲ್ಲಿಸೆಟ್ಟಿಯು ಕಟಕಯಾತ್ರೆಯಲ್ಲಿ ಭೀಮರಥೀ ತೀರದಲ್ಲಿ ಪೌಂಡರೀಕ ಕ್ಷೇತ್ರದಲ್ಲಿ ಶ್ರೀವಿಷ್ಣುಸನ್ನಿಧಾನದಲ್ಲಿ ವೇಣುಗ್ರಾಮ ದೇಶದಲ್ಲಿಯ ತಾಮ್ರಪುರಿ ಎಂಬ ಗ್ರಾಮವನ್ನು ಅನೇಕ ಗೋತ್ರದ ಬ್ರಾಹ್ಮಣರಿಗೆ ದಕ್ಷಿಣಾನ್ವಿತವಾಗಿಯೂ, ಧಾರಾಪೂರ್ವಕವಾಗಿಯೂ, ಸರ್ವಮಾನ್ಯವಾಗಿಯೂ ಕೊಟ್ಟನೆಂದು ಬರೆದಿರುತ್ತದೆ. ಸ. ಪಾ.

(ಪಂಢರೀಪುರಕ್ಷೇತ್ರ ವರ್ಣನೆ.)

ಅವರಮಹತ್ವಮಂ ಪೊಗಳಲೆನ್ನಳವಲ್ಲ, ಸಮಸ್ತದೇವತಾ |
ಸದನಮನಂತತೀರ್ಥನಿಲಯಂ ಸಕಲೋತ್ತಮಭೂಮಿವಿಷ್ಣುವೆ || ಚ್ಚಿದಮೆನೆ ಲೋಕಲೋಚನ ಮನೋಹರಮಾಗಮ
ಶಾಸ್ತ್ರಕೋಟಿಮೆ | ಚ್ಚಿದನೆಲೆಪಾಂಡುರಂಗ ಮಹನಂಗೆಡೆಯಾಟದ ತಾಣಮೆಂಬಿನಂ ||

(ವಿಟ್ಠಲದೇವಾಲಯದ ವರ್ಣನೆ.)

ಅಭಿನವರತ್ನತೋರಣಮನೇಕಲಸತ್ಕಲಶಂಗರುತ್ಕಟಲ್ಲಳ
ನಪತಾಕೆ ವೈಷ್ಣವ ಜಯಧ್ವನಿ, ನಿರ್ಮಳಭಕ್ತಿಕಾಸುಧಾ ||
ಪ್ರಚಿನವಧೂಪಧೂಮಲತೆ ಮಂಗಳವಾದಕಗೇಯನರ್ತಕೀ | ರಭಸಮನಾರತಂ ಮೆರೆವ ವಿಟ್ಠಲರಾಯಗೃಹಂ ವಿರಾಜಿಕುಂ ||

(ವಿಟ್ಠಲರಾಯನ ವರ್ಣನೆ.)

ವರಮುಕುಟಂ ಮುಗುಳ್ನಗೆ ಕುಳುಂಕುವ ಮುದ್ದುಮೊಗಂ ಜಗನ್ಮನೋ | ಹರಕರಕುಂಡಲಂ ಪೆಗಲಕಲ್ಲಿಲಸತ್ಪದಕಂ ನಿತಂಬದೋಳ್ || ಸ್ಥಿರಮೆನಲಿಟ್ಟ ಹಸ್ತಯುಗಳಂ ಪೊಸಗೋವಳಗೋವಿಲೀನಸ | ಚ್ಚರಣ ಸರೋರುಹಂ ಮೆರೆವ ಚನ್ನಿಗ ವಿಟ್ಠಲರಾಯನೊಪ್ಪಿದಂ ||
ನವನೀಘುಷ್ಟವಿಮೆಯ್ಗಮಂದಹಸಿತಂ, ವಕ್ತ್ರಕ್ಕೆ ಶಂಖಾನವಿ | ನವನಲ್ ವಾಮಕರಕ್ಕೆ ಪಕ್ಕೆಗೆ ಸತಾಪ್ಪಣಿದ್ವಯಂ ಪಾದಪ || ಲ್ಲವಯುಗ್ಮಕ್ಕೆ ನೆಗಳ್ತೆಯಿಟ್ಟಿಗೆಲಸತ್ಸೌಂದರ್ಯ ಭಾಗ್ಯಂ ಸಮ | ಸ್ತವಿಶೇಷಂ ಸಮುದಾಯಶೋಭೆಯೆಸೆಯಲ್ಕಂದೊಪ್ಪಿದಂ ವಿಟ್ಠಲಂ || ಹೃದಯಸರೋಜದೊಳ್‌ನಲಿದು ವಿಟ್ಠಲರಾಯನ ಮೂರ್ತಿಲಕ್ಷ್ಮಿಯಂ | ಪದುಳದೊಳಿಟ್ಟು ನಾಮಬಲದಿಂದಘಕೋಟಿಯನೆಯ್ದಗಲ್ದು ವೈ|| ಕುಂದಸಖರಾಜ್ಯಮಂ ಪಡೆವ ವೈಷ್ಣವಬಂಧುಸಮೂಹಸಂಗದಿಂ ಸದಮಳಬೋಧೆಯಂ ತಿಳಿದು ಸತ್ಪಥವಂ ವಿಗೆ ಕಂಡೆನುರ್ವಿಪಾ ||

ಈ ಪಂಡರೀಕಪುರದ ಅತಿ ಪ್ರಾಚೀನ ಉಲ್ಲೇಖವು ೧೩ನೆಯ ಶತಮಾನದ ಪೂರ್ವಾರ್ಧದಲ್ಲಿ ದೊರೆಯುತ್ತದೆ. ಇದಕ್ಕೂ ಪೂರ್ವದಲ್ಲಿ ಈ ಹೆಸರು ಎಲ್ಲಿಯೂ ಕೇಳಿ ಬರುವದಿಲ್ಲ. ಆದುದರಿಂದ ಈ ಪಂಡರೀಪುರದ ವಿಟ್ಠಲನ ಸ್ಥಾಪನೆಯು ೧೩ನೆಯ ಶತಮಾನದ ಪೂರ್ವಾರ್ಧದಲ್ಲಿ ಅಥವಾ ೧೨ನೆಯ ಶತಮಾನದ ಉತ್ತರಾರ್ಧದಲ್ಲಿ ಆಗಿರುತ್ತದೆಂದು ಹೇಳಬಹುದು. ಈ ಸ್ಥಾಪನೆಯ ವಿಷಯವಾಗಿ ಜನರಲ್ಲಿ ಒಂದು ಆಖ್ಯಾಯಿಕೆಯು ಪ್ರಸಿದ್ಧವಿರುತ್ತದೆ ಏನಂದರೆ

ಪುಂಡರೀಕನೆಂಬುವನು ಕುಕ್ಕುಟಋಷಿಯ ಉಪದೇಶದಿಂದ ತಾಯಿತಂದೆಗಳ ಸೇವೆಯನ್ನು ಭಕ್ತಿಪೂರ್ವಕವಾಗಿ ಮಾಡುತ್ತಿದ್ದನು. ಇದಲ್ಲದೆ ಪರಮ ಭಗವದ್ಭಕ್ತನೂ ಆಗಿದ್ದನು. ಇವನು ಒಂದು ದಿನ ತಾಯಿತಂದೆಗಳ ಕಾಲು ಒತ್ತುತ್ತ ಕುಳಿತಿರಲು ಶ್ರೀಹರಿಯು ಈತನ ಭಕ್ತಿಗೆ ಮೆಚ್ಚಿ ಆ ಆಶ್ರಮದಲ್ಲಿ ಪ್ರಕಟನಾದನು. ಆಗ ಆ ಭಕ್ತನು ತನ್ನ ಕರ್ತವ್ಯವನ್ನು ಮಾಡುತ್ತಲೇ ಮಸ್ತಕದಿಂದ ನಮಸ್ಕಾರ ಮಾಡಿ ಎರಡು ಇಟ್ಟಿಗೆಗಳನ್ನು ಒಗೆದು ವಿಷ್ಣುವಿಗೆ ಆಸನವನ್ನು ಮಾಡಿದನು. ಈ ಆಸನದ ಮೇಲೆ ವಿಷ್ಣುವು ಭಕ್ತನ ಹಾದಿ ಕಾಯುತ್ತ ನಿಂತುಕೊಂಡನು. ತನ್ನ ಕರ್ತವ್ಯವು ಮುಗಿದ ಬಳಿಕ ಪುಂಡರೀಕನು ದೇವರ ಸನ್ನಿಧಾನಕ್ಕೆ ಬಂದು ಸಾಷ್ಟಾಂಗ ಪ್ರಣಾಮ ಮಾಡಿ ನಿಲ್ಲಲು "ನಿನ್ನ ಭಕ್ತಿಗೆ ನಾನು ಪ್ರಸನ್ನನಾಗಿರುವೆನು; ಇಚ್ಛಿತ ವರಗಳನ್ನು ಬೇಡು" ಎಂದು ವಿಷ್ಣುವು ಹೇಳಿದನು. ಆಗ ಪುಂಡರೀಕನು ಮೂರು ವರಗಳನ್ನು ಬೇಡಿದನು. (೧) ಈ ಕ್ಷೇತ್ರದಲ್ಲಿ ನೀನು ವಾಸವಾಗಿರಬೇಕು. (೨) ನೀನು ನನ್ನ ಹೆಸರಿನಿಂದ ಪ್ರಸಿದ್ಧನಾಗಬೇಕು. (೩) ಈ ಕ್ಷೇತ್ರವೂ ನನ್ನ ಹೆಸರಿನಿಂದ ಕರೆಯಲ್ಪಡಬೇಕು. ಆ ಭಕ್ತಶಿರೋಮಣಿಗೆ ಈ ಮೂರು ವರಗಳನ್ನು ಕೊಟ್ಟು ಆ ಇಟ್ಟಿಗೆಗಳ ಮೇಲೆ ವಿಷ್ಣುವು ಹಾಗೆಯೇ ನಿಂತುಬಿಟ್ಟನು.

ಈ ಆಖ್ಯಾಯಿಕೆಯಿಂದ "ಪಂಢರಪುರ" ಶಬ್ದದ ಉತ್ಪತ್ತಿಯು ಗೊತ್ತಾದಂತಾಯಿತು. ಪೌಂಡರೀಕಪುರ-ಪುಂಡರೀಪುರ-ಪಂಢರೀಪುರ-ಪಂಢರಪುರ ಅಥವಾ ಅಚ್ಚಗನ್ನಡ ಶಬ್ದವೆಂದರೆ ಪಂಡರಿಗೆ. ಚೌಂಡರಸನು ತನ್ನ ಗ್ರಂಥದಲ್ಲಿ ಪಂಡರೀಪುರವೆಂದು ಹೇಳಿರುವನು. ಜ್ಞಾನದೇವನೇ ಮೊದಲಾದ ಮಹಾರಾಷ್ಟ್ರ ಸಾಧುಸಂತರು ತಮ್ಮ ಅಭಂಗಗಳಲ್ಲಿ ಪಂಢರೀಪುರವೆಂದು ಉಪಯೋಗಿಸಿರುವರು. ಈಗಿನ ಕಾಲದಲ್ಲಿ ನಾವು ಪಂಢರಪುರವೆಂದು ಅನ್ನುತ್ತೇವೆ

ಚೌಂಡರಸನ ಕಾಲದ ನಂತರ, ಎಂದರೆ ೧೩ನೆಯ ಶತಮಾನದ ಕೊನೆಗೆ ಜ್ಞಾನದೇವನೇ ಮೊದಲಾದ ಮಹಾರಾಷ್ಟ್ರ ಸಾಧುವರ್ಯರ ಚಿತ್ತವು ಕರ್ನಾಟಕದೊಳಗಿನ ಈ ವಿಟ್ಠಲ ಭಕ್ತಿಯ ಕಡೆಗೆ ಆಕರ್ಷಿಸಲ್ಪಟ್ಟಿತು. ಜ್ಞಾನೇಶ್ವರನು ತನ್ನ ಒಂದು ಅಭಂಗದಲ್ಲಿ ಹೀಗೆ ಹೇಳಿರುವನು.

कानडाहो विठ्ठलु कर्नाटकु ।
त्यानें मज लाविलें वेधु ॥

(ಜ್ಞಾನದೇವ ಗಾಥಾ ಅಭಂಗ ೬೬೪,)

ಈ ಮೇರೆಗೆ ನಾಮದೇವನೂ ಒಂದು ಅಭಂಗದಲ್ಲಿ ಪಂಢರಪುರವು ಕರ್ನಾಟಕದೊಳಗಿನ ಒಂದು ಕ್ಷೇತ್ರವಾಗಿರುವದೆಂದು ಹೇಳಿರುವನು. ಕರ್ನಾಟಕದಿಂದ ವಿಟ್ಠಲ ಭಕ್ತಿಯನ್ನು ಮಹಾರಾಷ್ಟ್ರಕ್ಕೆ ಒಯ್ದು ಮೊದಲು ಅಲ್ಲಿ ಹಬ್ಬಿಸಿದವರು ಇವರೇ. ಇವರ ತರುವಾಯ ೧೪ನೇ ಶತಮಾನದಲ್ಲಿ ಮಹಾರಾಷ್ಟ್ರವು ಮುಸಲ್ಮಾನರ ಕೈಯಲ್ಲಿ ಸಿಕ್ಕು ಒದ್ದಾಡಹತ್ತಿತು. ಇದೇ ಕಾಲಕ್ಕೆ ಕರ್ನಾಟಕದಲ್ಲಿ ವಿಜಯನಗರದ ಶೈವ ಅರಸರು ಆಳಹತ್ತಿದರು. ಹೀಗೆ ಪ್ರತಿಕೂಲ ಸ್ಥಿತಿಯು ಒದಗಿದ್ದುದರಿಂದ ಆ ಕಾಲದಲ್ಲಿ ವಿಟ್ಠಲ ಭಕ್ತಿಯು ಸ್ವಲ್ಪ ಕಳೆಗುಂದಿತು ಈ ಸ್ಥಿತಿಯು ಮುಂದೆ ೧೫ನೇ ಶತಮಾನದ ಕೊನೆಯ ವರೆಗೂ ಇತ್ತು. ಆದುದರಿಂದ ಈ ೨೦೦ ವರ್ಷಗಳ ಅವಧಿಯಲ್ಲಿ ಕರ್ನಾಟಕ, ಮಹಾರಾಷ್ಟ್ರ ದೇಶಗಳಲ್ಲಿ ಹೇಳತಕ್ಕಂಥ ಒಬ್ಬ ಭಗವದ್ಭಕ್ತನೂ ಹುಟ್ಟಲಿಲ್ಲ ಆದರೆ ಮುಂದೆ ೧೬ನೇ ಶತಮಾನದಲ್ಲಿ ವೀರನರಸಿಂಹ, ಕೃಷ್ಣರಾಯ, ಅಚ್ಯುತರಾಯ ಮೊದಲಾದವರು ವಿಜಯನಗರದ ಸಿಂಹಾಸನವನ್ನೇರಿದರು. ಇವರು ವಿಷ್ಣುಭಕ್ತರಾಗಿದ್ದರು. ಆದುದರಿಂದ ಈ ಕಾಲದಲ್ಲಿ ವಿಟ್ಠಲ ಭಕ್ತಿಗೆ ಪುನಃ ಕಳೆಯೇರಿತು. ಈ ೧೬ನೇ ಶತಮಾನದ ಆರಂಭಕ್ಕೆ ಮುಸಲ್ಮಾನರು ಪಂಢರಪುರದ ವಿಟ್ಠಲನ ಮೂರ್ತಿಯ ಭಂಗಮಾಡಲಿಕ್ಕೆ ಪ್ರಯತ್ನ ಮಾಡಹತ್ತಿದರು. ಆಗ ವಿಜಯನಗರದಲ್ಲಿ ಆಳುತ್ತಿದ್ದ ಕೃಷ್ಣರಾಯನು (ಕ್ರಿ. ಶ. ೧೫೦೯-೧೫೨೯) ಈ ವಿಟ್ಠಲ ಮೂರ್ತಿಯನ್ನು ಅಲ್ಲಿಂದ ವಿಜಯನಗರಕ್ಕೆ ತಂದು ರಕ್ಷಿಸಿದನು. ಮುಂದೆ ಈ ಭೀತಿಯು ಇಲ್ಲದಂತೆ ಆದ ಬಳಿಕ ಹಂಪೆಯಿಂದ ಇದನ್ನು ಪುನಃ ಪಂಢರಪುರಕ್ಕೆ ಏಕನಾಥ ಸ್ವಾಮಿಯ ಅಜ್ಜನಾದ ಭಾನುದಾಸನು ಒಯ್ದನೆಂಬ ಮಹಾರಾಷ್ಟ್ರದಲ್ಲಿ ಲೋಕವಾರ್ತೆಯಿದೆ. ಈ ಕೃಷ್ಣರಾಜನ ತರುವಾಯ ಅಚ್ಯುತರಾಯನು ಪಟ್ಟಕ್ಕೆ ಕುಳಿತನು. ಇವನ ಆಳಿಕೆಯಲ್ಲಿ ಕರ್ನಾಟಕದಲ್ಲಿ ಪುರಂದರದಾಸ, ಕನಕದಾಸ; ವೈಕುಂಠದಾಸರೆಂಬ ಭಗವದ್ಭಕ್ತರು ಉದಯರಾಗಿ ವಿಟ್ಠಲ ಭಕ್ತಿಯನ್ನು ಪುನರುಜ್ಜೀವನ ಮಾಡಿದರು. ಇದರಿಂದ ಕರ್ನಾಟಕದಲ್ಲಿ ಇಷ್ಟೇ ಅಲ್ಲದೆ ಮಹಾರಾಷ್ಟ್ರದಲ್ಲಿ ಕೂಡ ವಿಠ್ಠಲ ಭಕ್ತಿಯು ಜಾಗೃತವಾಯಿತು. ಇದಕ್ಕೆ ಈ ದಾಸರ ತರುವಾಯ ಇದೇ ಶತಮಾನದಲ್ಲಿ ಮಹಾರಾಷ್ಟ್ರದಲ್ಲಿ ಅವತರಿಸಿದ ಮಹಾ ಭಗವದ್ಭಕ್ತನಾದ ಏಕನಾಥನೇ ಸಾಕ್ಷಿಯಾಗಿದ್ದಾನೆ. ಈ ಭಕ್ತನು ಒಂದು ಕಡೆಯಲ್ಲಿ ಸ್ಪಷ್ಟವಾಗಿ ಹೀಗೆ ಹೇಳುತ್ತಾನೆ.

कानडा विठ्ठल कानडा बोले ।
कानडया विठ्ठलें मन वेधियलें ॥
वेधियेलें मन कानडयानें माझें ।
एकजनार्दनी दुजें नाठवेची ॥

(एकनाथ माहाराजांचा गाथा पृ. ९४)

ಎಂದರೆ ಕನ್ನಡ ಜನರ ವಿಟ್ಠಲ ಭಕ್ತಿಯನ್ನು ನೋಡಿ, ಏಕನಾಥನ ಮನಸ್ಸು ಭಗವದ್ಭಕ್ತಿಯ ಕಡೆಗೆ ತಿರುಗಿತು. ಈತನು ಇನ್ನೊಂದು ಸ್ಥಳದಲ್ಲಿ ಹೇಳುವದೇನೆಂದರೆ,

तीर्थ कानडें देव कानडें ।
क्षेत्र कानडें पंढरीये ॥
विठ्ठल कानडे भक्त हे कानडें ।
पुंडलीकें उघडे उभे केलें ॥

(ए. म. पृ. ९४)

ಇದರಿಂದ ಈತನ ಕಾಲಕ್ಕೆ ಪಂಢರಪುರದಲ್ಲಿ ಇನ್ನೂ ಕನ್ನಡ ಭಾಷೆಯೇ ನಡೆಯುತ್ತಿತ್ತೆಂದು ಸ್ಪಷ್ಟವಾಗುತ್ತದೆ. ಮುಂದೆ ೧೭ನೇ ಶತಮಾನದಲ್ಲಿ ಮಹಾರಾಷ್ಟ್ರದಲ್ಲಿ ಇನ್ನೊಬ್ಬ ಸುಪ್ರಸಿದ್ಧ ವಿಟ್ಠಲ ಭಕ್ತನು ಹುಟ್ಟಿದನು. ಆತನ ಹೆಸರು ತುಕಾರಾಮ. ಈ ಭಗವದ್ಭಕ್ತನ ಕಾಲದಿಂದ ಮಹಾರಾಷ್ಟ್ರದಲ್ಲಿ 'ವಾರಕರಿ' ಸಂಪ್ರದಾಯವು ಪ್ರಬಲವಾಗಿ ಬಂದು, ಇಂದಿನ ವರೆಗೆ ಎಡೆಬಿಡದೆ ನಡೆಯುತ್ತದೆ ಪುರಂದರದಾಸರ ತರುವಾಯ ಕರ್ನಾಟಕದಲ್ಲಿ ವಿಜಯದಾಸರೆಂಬ ಭಗವದ್ಭಕ್ತರು ಹುಟ್ಟಿದರು. ಇವರ ಕಾಲದಿಂದ ದಾಸಕೂಟ ಸಂಪ್ರದಾಯವು ಪ್ರಬಲವಾಗಿ ಇವತ್ತಿನತನಕ ಅವಿಚ್ಛಿನ್ನವಾಗಿ ಸಾಗುತ್ತದೆ.

ವಾಗ್ಭೂಷಣ.

ಮೈಸೂರಿನ ಕರ್ನಾಟಕ ಮಹಾರಾಜರ ವರ್ಧಂತ್ಯುತ್ಸವವು!

೧೧ನೇ ತಾರೀಖಿನ ದಿನ ಮೈಸೂರ ಮಹಾರಾಜರ ಹುಟ್ಟಿದ ದಿನವು ಒಳ್ಳೇ ಸಡಗರದಿಂದ ಮೈಸೂರಿನಲ್ಲಿ ಜರಗಿತು. ಮಹಾರಾಜರಿಗೆ ೪೪ ವರ್ಷಗಳು ತುಂಬಿದ್ದರಿಂದ, ಬೆಳಿಗ್ಗೆ ೪೪ ತೋಫುಗಳು ಹಾರಿಸಲ್ಪಟ್ಟವು. ೧೦-೩೦ ಗಂಟೆಗೆ ದರ್ಬಾರವಾಯಿತು. ಪಂಡಿತ ಮಾಲವೀಯರೂ, ಸರದಾರ ಹೆಬ್ಬಳ್ಳಿಯ ಲಕ್ಷ್ಮಣರಾಯರೂ ಆಮಂತ್ರಿತರಾಗಿ, ದರ್ಬಾರಕ್ಕೆ ಬಂದಿದ್ದರು. ಸಾಯಂಕಾಲದಲ್ಲಿ ಒಂದು ಮೈಲಿನ ವರೆಗೆ ಹಬ್ಬಿದ ಮೆರವಣಿಗೆಯಲ್ಲಿ, ಅನೇಕ ಬಗೆಯ ವಾದ್ಯಗಳೂ, ಲಷ್ಕರೀ ಜನರ ಸಾಲುಗಳೂ, ಗಾಡಿ, ಮೋಟಾರ, ಕುದುರೆ, ಆನೆಗಳೂ ಒಳ್ಳೇ ಅಂದವಾಗಿ ಸಾಗಿದ್ದವು. ಬಂಗಾರದ ಉಡುಪು, ಲಕ್ಷಾವಧಿ ರೂಪಾಯಿ ಬೆಲೆ ಬಾಳುವ ಆಭರಣಗಳಿಂದ ಮಹಾರಾಜರು ಅಲಂಕೃತರಾಗಿದ್ದರು. ಶೃಂಗರಿಸಲ್ಪಟ್ಟ ರಾಜಬೀದಿಯ ಎರಡೂ ಮಗ್ಗಲುಗಳಲ್ಲಿ ಜನರು ತಮ್ಮ ತಮ್ಮ ಹಬ್ಬದ ಉಡಿಗೆತೊಡಿಗೆಗಳನ್ನು ತೊಟ್ಟು ಸಾಲಾಗಿ ನಿಂತಿದ್ದರು. ಮೆರವಣಿಗೆಯು ಪುನಃ ಅರಮನೆಗೆ ಬರುವಾಗ ರಾಜಬೀದಿಯಲ್ಲಿಯ ವಿದ್ಯುದ್ದೀಪಗಳನ್ನು ಬಗೆ ಬಗೆಯ ಬಣ್ಣಗಳ ಗ್ಲಾಸುಗಳಿಂದ ಬಹು ಮನೋಹರವಾಗಿ ಮಾಡಿದ್ದರು. ೯-೩೦ ಗಂಟೆಗೆ ಮಹಾರಾಜರು ಅರಮನೆ ಸೇರಲು ೨೧ ತೋಫುಗಳು ಹಾರಿಸಲ್ಪಟ್ಟವು.

ಮೈಸೂರ ಕರ್ನಾಟಕ.

ಡಿ. ವಿ. ಗುಂಡಪ್ಪನವರು ನ್ಯಾಯವಿಧಾಯಕ ಸಭೆಗೆ ಸರಕಾರದಿಂದ ನಿಯಮಿಸಲ್ಪಟ್ಟಿದ್ದರಿಂದ, ಅವರ ಗೌರವಾರ್ಥ ಬೆಂಗಳೂರಿನ 'ಕರ್ನಾಟಕ ಪಾರ್ಟಿ'ದಲ್ಲಿ ಒಂದು ಸಂತೋಷಕೂಟವು ನೆರೆದಿತ್ತು. 'ಕೃತಜ್ಞತಾಪ್ರದರ್ಶನ' ಗೋಷ್ಠಿಯಲ್ಲಿ ನೀಡಿದ ಸನ್ಮಾನಕ್ಕೆ ಕೃತಜ್ಞತೆ ಹೇಳಲಾಗಲಿಲ್ಲ. ಸಾರ್ವಜನಿಕರಿಂದ ಆರಿಸಲ್ಪಟ್ಟ ಸದಸ್ಯನಂತೆಯೇ ನನ್ನ ಯೋಗ್ಯತೆ ಮೀರಿ ಪ್ರಜಾ ಸೇವೆ ಮಾಡುತ್ತೇನೆಂದು ಶ್ರೀ ಗುಂಡಪ್ಪನವರು ಹೇಳಿದರು.

ಮಹಾತ್ಮಾ ಗಾಂಧಿಯವರ ಪ್ರಕೃತಿಯು ಚನ್ನಾಗಿದೆ. ಅವರ ಇಚ್ಛೆಯಂತೆ ಕರ್ನಾಟಕ ಹಿಂದೀ ಸಮ್ಮೇಲನವು ಜುಲೈ ೧ನೇ ವಾರಕ್ಕೆ ಮುಂದರಿಸಲಾಗಿದೆ.

ಬೆಳಗಾಂವ ಜಿಲ್ಹೆಯ ಪತ್ರ.

(ನಮ್ಮ ಸ್ವಂತ ಸುದ್ದಿಗಾರರಿಂದ)

ಕುರುಂದವಾಡ ಸಂಸ್ಥಾನದ ಚಿಕ್ಕೋಡಿ ತಾಲೂಕಿನಲ್ಲಿ ಅಳ್ಳಾರವಾದ ಮತ್ತು ಕೂಡಿ ಹಾಳೆಯುಂಬ ಹಳ್ಳಿಗಳವೆ. ಈ ಹಳ್ಳಿಯ ಜನರ ಮಾತೃಭಾಷೆ ಕನ್ನಡ. ಸುತ್ತಲಿನ ಹಳ್ಳಿಗಳು ಸಹ ಕನ್ನಡ. ಮರಾಠಿಯ ನಾತವೇ ಇಲ್ಲ! ಹೀಗಿದ್ದರೂ ಇಲ್ಲಿ ಮರಾಠಿ ಶಾಲೆಯು ಏರ್ಪಾಡಾಗಿವೆ. ಅದರ ಶಿಕ್ಷಕರು ಕನ್ನಡಿಗರು. ಈ ಪರಿಸ್ಥಿತಿಯಲ್ಲಿ ಏನನ್ನು ಕಲಿಸಬೇಕೆಂಬುದು ಶಿಕ್ಷಕರಿಗೆ ತಿಳಿಯಲೊಲ್ಲ. ಆದ್ದರಿಂದ ಅವರು ಮನೆಗೆ ಹೋಗಬೇಕಾಯಿತು. ಕನ್ನಡದ ಬಗ್ಗೆ ಏನೂ ವ್ಯವಸ್ಥೆ ಮಾಡುವುದಕ್ಕೆ ಮುಂದಾಗದೇ ೧-೨ ವರ್ಷಗಳ ವರೆಗೆ ಕಲಿತು ಬೇಸತ್ತು ಶಾಲೆ ಬಿಡುವರು. ಈ ಸಂಸ್ಥಾನದಲ್ಲಿ ಎಲ್ಲಿಲ್ಲಿ ಶಾಲೆಗಳಾಗಿವೆ. ಅದರಲ್ಲಿ ಮರಾಠಿ ಜನರು ಎಷ್ಟು? ಕನ್ನಡ ಜನರು ಎಷ್ಟು? ಎಂಬುದನ್ನು ನಿರ್ಣಯಿಸಿ ಆಯಾ ಭಾಷೆಯ ಶಾಲೆಗಳನ್ನು ತೆರೆಯುವುದು ಸಂಸ್ಥಾನಿಕರ ಕರ್ತವ್ಯವಲ್ಲವೇ? ಅಧಿಕಾರಿಗಳು ಲಕ್ಷ್ಯಕೊಡುವರೇ? ಕರ್ತವ್ಯವಲ್ಲವೇ?

ಶ್ರೀ ಗಂಗಾಧರರಾವ ದೇಶಪಾಂಡೆಯವರು ಹುದಲಿಯಲ್ಲಿ ಸ್ಥಾಪಿಸಿದ ಖಾದಿ ಉತ್ಪಾದನ ಕೇಂದ್ರವು ಚನ್ನಾಗಿ ನಡೆಯುತ್ತಿದೆಯೆಂದು ತಿಳಿದು ಬಂದಿದೆ. ಬೆಳಗಾಂವಿ ಭಾಗದವರು ಖಾದಿಯನ್ನು (ಬೆಳಗಾಂವಿ ಜಿಲ್ಹೆ) ತೆಗೆದುಕೊಂಡು ಉಪಯೋಗಿಸಬೇಕು. ಅಲ್ಲಿ ಖಾದಿ ತಯಾರಿಸುವ ಕೆಲಸವು ಹೆಚ್ಚುಹೆಚ್ಚಾಗಿ ನಡೆಯುತ್ತಿದೆ.

ಮುಂಬೈ ಕರ್ನಾಟಕ.

ಧಾರವಾಡ ಜಿಲ್ಲೆಯಿಂದ ಮ್ಯಾಟ್ರಿಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೊದಲನೇ ವೀರಶೈವ ಸ್ತ್ರೀ ವಿದ್ಯಾರ್ಥಿಗೋಸ್ಕರ ಇಟ್ಟ ಬಂಗಾರದ ಪದಕವು ಹಿರೇಕೇರೂರ ಮಾಮಲೇದಾರರಾದ ಶ್ರೀ ಕರಿಬಸವಂತಪ್ಪನವರ ಜ್ಯೇಷ್ಠಪುತ್ರಿಯಾದ ಶ್ರೀಮತಿ ಪಾರ್ವತೀಬಾಯಿಯವರಿಗೆ, ಹಿರೇಕೇರೂರ ತಾಲೂಕ ಸ್ತ್ರೀ ಸಂಘದವರಿಂದ ಅರ್ಪಿಸಲ್ಪಟ್ಟಿತು.

ಧಾರವಾಡ, ಹುಬ್ಬಳ್ಳಿ, ಸವದತ್ತಿ, ಜಮಖಂಡಿ, ವಿಜಾಪೂರಗಳಿಗೆ ಚನ್ನಾಗಿ ಮಳೆಯಾಗಿದೆ.

ಪಂಡಿತ ಮದನಮೋಹನ ಮಾಲವೀಯವರು ಬೆಳಗಾಂವಿಗೆ ಬಂದು ಹಿಂದು ಸಂಘದವರ ಸಂಗಡ ಮಾತನಾಡಿ, ಮೈಸೂರ ದರ್ಬಾರಕ್ಕೆ ಹೋದರು. ಉಟಕ ಮಂಡಲದಲ್ಲಿ ತಮ್ಮ ಪ್ರಕೃತಿಯನ್ನು ಸುಧಾರಿಸಿಕೊಳ್ಳಲು ಕೆಲ ಸಮಯ ನಿಲ್ಲುವರಂತೆ.

ಮುಂಬೈ ಸರಕಾರದ ಗ್ಯಾಝೆಟ.

ಮುಂಬೈಯಲ್ಲಿ ೧೪ ಜನ ಸ್ತ್ರೀಯರು ಆನರರಿ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ.

ಶ್ರೀ ಜಿ. ಆರ್. ಹುದ್ದಾರರು ಬೆಳಗಾಂವಿ ೧ನೇ ವರ್ಗ ಕೋರ್ಟಿಗೆ 'ಕ್ಲಾರ್ಕ ಆಫ ದಿ ಕೋರ್ಟ' ಆಗಿ ನೇಮಿಸಲ್ಪಟ್ಟಿದ್ದಾರೆ.

ಸೋಜಿಗದ ಸುದ್ದಿ.

ಆಕಳಗಳೂ ಆಡುಗಳೂ ಬೆದರಿದರೆ ಹಾಲನ್ನು ಕರೆಯುವದಿಲ್ಲ; ಅಥವಾ ಕಡಮೆ ಕೊಡುತ್ತವೆಂಬುಷ್ಟೇ? ಆದರೆ ಹಿಂದುಸ್ಥಾನಿ ಗಾಯನ ವಾದನಗಳಿಂದ ಅವನ್ನು ಆನಂದ ವೃತ್ತಿಯಲ್ಲಿಟ್ಟರೆ, ಅವು ಹೆಚ್ಚು ಹಾಲನ್ನು ಕೊಡುವವೆಂದು ಅಮೇರಿಕೆಯ ಕೆಲವು ತಜ್ಞರು ಸಿದ್ಧ ಮಾಡಿರುವರು.

ಮಳೆಯ ಸುದ್ದಿ.

ಬ್ರಹ್ಮದೇಶ, ಬಂಗಾಲ ಪ್ರಾಂತದ ಪೂರ್ವ ಭಾಗ, ಕೊಂಕಣ, ಮಲಬಾರ, ಮುಂಬೈ ಇಲಾಖೆಯ ದಕ್ಷಿಣ ಭಾಗಗಳಲ್ಲಿ ಮಳೆಯು ಚನ್ನಾಗಿ ಆಗಿದೆ. ಉತ್ಕಲ, ಕಾಶ್ಮೀರ, ಛೋಟಾ ನಾಗಪೂರ, ಮೈಸೂರ, ಹೈದರಾಬಾದದ ಉತ್ತರ ಭಾಗ ಮತ್ತು ಮದ್ರಾಸ ಇಲಾಖೆಯ ಉತ್ತರ ಭಾಗಗಳಲ್ಲಿ ಅಲ್ಲಲ್ಲಿ ಮಳೆಯಾಗಿದೆ. ಮಹಾಬಳೇಶ್ವರದಲ್ಲಿ ೨"; ಕಾರವಾರ ೧". ಬೆಳಗಾಂವಿ ೧"; ಮಡಿಕೇರಿ ೧" ಮಳೆಯಾಗಿದೆ.

ಗುಜರಾತ, ಮಧ್ಯ ಹಿಂದುಸ್ಥಾನ, ಬಂಗಾಲ ಉಪಸಾಗರದ ದಂಡೆಗಳಲ್ಲಿ ಈ ವಾರದಲ್ಲಿ ಹೆಚ್ಚಾಗಿ ಮಳೆಯಾಗುವದು.

— ಸರಕಾರೀ ವರದಿ.

ಹಿಂದುಸ್ಥಾನ.

ಸಿಯಾಮ ಸಾಹೇಬರು ೧೭ನೇ ತಾರೀಖಿನಿಂದ ಈ ತಿಂಗಳ ಕೊನೆಯ ವರೆಗೆ ಆಫರಂಗಾಬಾದಿನಲ್ಲಿ ಕಾಲ ಕಳೆಯುವರಂತೆ.

ಪರದೇಶ.

ಹಿಂದುಸ್ಥಾನದ ಹೊಸ ಸುಧಾರಣೆಯ ವಿಚಾರಮಂಡಲಕ್ಕೆ ಲಾರ್ಡ ರೀಡಿಂಗರಾಗಲಿ, ಲಾರ್ಡ ರೋನಾಲ್ಡ್ಶೇಯವರಾಗಲಿ, ಅಧ್ಯಕ್ಷರಾಗುವರೆಂಬ ವಾರ್ತೆಯಿದೆ.

'ಸನದಶೀರ' ಚಳವಳಿಯಿಂದಲೇ ಭಾರತೀಯರಿಗೆ ಸ್ವರಾಜ್ಯ ದೊರೆಯಬೇಕು; ಬಿದರಿಕೆ, ಕ್ರಾಂತಿಕಾರಕ ಕಟ್ಟಳೆಯಿಂದ ಇಂಗ್ಲಿಷರು ಮಂತ್ರಿಗಳಿಂದ ಬರುವಾಗಿ ಶ್ರೀ ಪಾಟೀಲ ವಿಠ್ಠಲಭಾಯಿಯವರು ವಿಲಾಯತಿಯಲ್ಲಿ ಸಾರಿ ಹೇಳಿದರು. ಅಂತು ಹವೆಯಲ್ಲಿ ಇವರ ಬುದ್ಧಿಯು ತೀಕ್ಷ್ಣವಾಗಿದೆಂಬುದು ಸ್ಪಷ್ಟವಿದೆ,

ಚಿತ್ರಮಾಲಿಯಿಂದಲಂಕೃತವಾದ
ಶ್ರೀಮನ್ಮಹಾರಾಜರ 'ಸಿಲ್ವರ್ ಜೂಬಿಲಿ' ವಿಶೇಷ ಸಂಚಿಕೆ.

೬೪ ಪುಟಗಳುಳ್ಳದ್ದು! ವಿಶ್ವಕರ್ನಾಟಕ **ಬೆಲೆ ಎಂಟೇ ಆಣೆಗಳು!!**

ವಾಚಕರೇ,

ಕರ್ನಾಟಕ ರತ್ನಸಿಂಹಾಸನಾಧೀಶ್ವರರಾದ ಶ್ರೀಮತ್ಕೃಷ್ಣರಾಜೇಂದ್ರ ಒಡೆಯರವರು ರಾಜ್ಯಸೂತ್ರಗಳನ್ನು ಧರಿಸಿ ೨೫ ವರ್ಷಗಳಾದವು. ಈ ಸಂತೋಷದ ಉತ್ಸವನ್ನು ಸಂಸ್ಥಾನದ ಪ್ರಜೆಗಳೆಲ್ಲರೂ ಮಹಾವೈಭವದಿಂದ ಆಗಸ್ಟ ತಿಂಗಳಲ್ಲಿ ನಡೆಯಿಸಬೇಕೆಂದು ನಿಶ್ಚಯಿಸಿದರು. ಆ ಸಮಯದಲ್ಲಿ ನಾವು ಒಂದು 'ವಿಶೇಷ ಸಂಚಿಕೆ' ಯನ್ನು ಹೊರಡಿಸುವವರಿದ್ದೇವೆ.

ಅದರಲ್ಲಿರವುದೇನು?

೧ ನಾಲ್ವಡಿ ಶ್ರೀಮತ್ಕೃಷ್ಣರಾಜೇಂದ್ರ ಒಡೆಯರವರ ಸಂಕ್ಷಿಪ್ತ ಜೀವನ ಚರಿತ್ರೆ. ೨. ಅವರ ಆಜ್ಞೆಯಿಂದ ಆಡಳಿತ ನಡೆಸಿದ ಅಷ್ಟಪ್ರಧಾನರ ವಿಚಾರ ೩. ಶ್ರೀಮನ್ಮಹಾರಾಜರವರ ೨೫ ವರ್ಷಗಳ ಆಳ್ವಿಕೆಯ ವೈಭವ. ೪. ಒಳನಾಡಿನವರೂ ಹೊರನಾಡಿನವರೂ ಶ್ರೀಮನ್ಮಹಾರಾಜರವರನ್ನು ಕುರಿತು ಬರೆದುಬಂದ ಪತ್ರಗಳು. ಸ್ವಲ್ಪ ಪತ್ರಿಕೆಗಳನ್ನು ಮಾತ್ರ ಮುದ್ರಿಸುವೆವು. ಜಾಗ್ರತೆ ಮಾಡಿರಿ.

ಹೆಚ್ಚು ಪತ್ರಿಕೆಗಳನ್ನು ಒಟ್ಟಿಗೆ ತರಿಸಿಕೊಳ್ಳುವವರಿಗೆ ರಿಯಾಯತಿ ತೋರಿಸಲ್ಪಡುವದು. ಅಂಚೆಹಾಸಲು ಪ್ರತ್ಯೇಕ.

ಜಾಹಿರಾತು ಪ್ರಕಟಿಸಲಿಕ್ಕೆ ಇದೇ ಸುಸಂಧಿ. ದರ ಬರೆದು ತಿಳಿಯಿರಿ.

"ಮ್ಯಾನೇಜರ್ ವಿಶ್ವಕರ್ನಾಟಕ" ಬೆಂಗಳೂರು ಸಿಟಿ

ಪ್ರಜಾಮಿತ್ರ.
ಬೆಂಗಳೂರಲ್ಲಿ ಪ್ರತಿದಿನ ಪ್ರಕಟವಾಗುವುದು.
ಸ್ವತಂತ್ರ ಧರ್ಮವನ್ನು ನಿರ್ಭೀತಿಯಿಂದ ಸಾರುತ್ತದೆ

ಪ್ರಜಾಸೇವೆ, ದೇಶಸೇವೆ, ಮಿತ್ರತ್ವ, ಪ್ರೇಮ ಮುಂತಾದ ಧ್ಯೇಯಗಳನ್ನೊಳಗೊಂಡ ಅತ್ಯಂತ ಸುಲಭ ಬೆಲೆಯುಳ್ಳ ಕನ್ನಡ ಪತ್ರಿಕೆ. ಪ್ರಪಂಚವಿಷಯವನ್ನೂ, ನೈತಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ ವಿಷಯಗಳನ್ನೂ ನಿರ್ಭಯವಾದ ಅಭಿಪ್ರಾಯವನ್ನೂ ಆಯಾ ದಿನದ ಸಮಾಚಾರವನ್ನೂ ತಿಳಿಯಬೇಕಾದಲ್ಲಿ ಕನ್ನಡನಾಡಿನಲ್ಲಿರುವ ದೈನಂದಿನ ಪತ್ರಿಕೆಯಾದ "ಪ್ರಜಾಮಿತ್ರ" ನನ್ನು ಓದಿರಿ. ಈ ದಿನವೇ ಪ್ರಜಾಮಿತ್ರನನ್ನು ನಿಮ್ಮ ಮನೆಗೆ ಬರಮಾಡಿಕೊಳ್ಳಿರಿ.

ವಾರ್ಷಿಕ ಚಂದಾ ರೂ ೧೦—೦—೦ ಅಂಚೇ ವೆಚ್ಚ ಸಹಿತ. ಬೆಂಗಳೂರಿನವರಿಗೆ ರೂ. ೫—೦—೦

ನಿಮ್ಮ ಜಾಹೀರಾತುಗಳನ್ನು "ಪ್ರಜಾಮಿತ್ರ" ನಲ್ಲಿ ಕೊಟ್ಟು, ವ್ಯಾಪಾರಗಳನ್ನು ಹೆಚ್ಚುಮಾಡಿಕೊಳ್ಳಿರಿ.

ಹೆಚ್ಚು ವಿಷಯಗಳಿಗೆ ಕೂಡಲೆ ಬರೆಯಿರಿ — ವ್ಯವಸ್ಥಾಪಕ "**ಪ್ರಜಾಮಿತ್ರ**" ಕಾರ್ಯಾಲಯ ಬೆಂಗಳೂರ ನಗರ

Notice.

Auction for right of Cultivating about 100 acres in Muchkandi Tank bed for triennium ending 31 st March 1930 will be held by the undersigned in his office at Bagalkot on 21-6-27 at 4 P M. conditions of Sale may be obtained in office any day except holidays.

Dated. 16-6-27.

L. V. Gadkari
Asist. Engineer Bagalkot.

ಭಯಂಕರ ಗರ್ಮಿ.

ಪರಮೆ, ರಕ್ತವಿಕಾರ, ಕುಷ್ಟ, ಮಹಾರೋಗ, ಧಾತುವಿಕಾರ ನಪುಂಸಕತ್ವಗಳಮೇಲೆ ಖಂಡಿತವಾಗಿ ಗುಣಕೊಡುವ ದಿವ್ಯೌಷಧಿ. ಬೆಲೆ ರೂ. ೫. ಪ್ರಕೃತಿವರ್ಣನತಿಳಿಸಿ ಔಷಧಿ ಪಡೆಯಬೇಕು.

ವೈದ್ಯ- ವಾದಿರಾಜ ಜಹಾಗೀರದಾರ
ಮು. ತಾಳಿಕಲ್ಲ. (ವಿಜಾಪೂರ)

ಕರ್ನಾಟಕ ವೈಭವ.
ರಾಷ್ಟ್ರೀಯ ಪಕ್ಷದ ಉಜ್ವಲವಾದ ವಾರ ಪತ್ರಿಕೆಯು

(ಸಂಪಾದಕ ಹನುಮಂತರಾವ ಮೋಹರಿ.)

ಕಳೆದ ೩೭ ವರುಷಗಳಿಂದ ಈ ವಾರ ಪತ್ರಿಕೆಯು ಸ್ವಾತಂತ್ರ್ಯ ಸೇನೆಯ ಮುಂಭಾಗದಲ್ಲಿ ನಿಂತು ಬ್ಯೂರಾಕ್ರಸಿಯ ಕೂಡ ಹೋರಾಡಹತ್ತಿರುತ್ತದೆ. ಬ್ಯೂರಾಕ್ರಸಿಯ ಅನ್ಯಾಯಗಳನ್ನು ನಿರ್ಭಯದಿಂದ ಬೈಲಿಗೆಳೆಯುವದರಲ್ಲಿಯೂ ಪ್ರಚಲಿತ ರಾಜಕೀಯ ವಿಷಯಗಳನ್ನು ನಿರ್ದಾಕ್ಷಿಣ್ಯದಿಂದ ಚರ್ಚಿಸುವದರಲ್ಲಿಯೂ ಅದು ಕಂಕಣಬದ್ಧವಾಗಿರುತ್ತದೆ ಕರ್ನಾಟಕ ಸಂಸ್ಕೃತಿಯನ್ನೊಳಗೊಂಡಿರುವ ಆರ್ಯ ಸಂಸ್ಕೃತಿಯು ಪುನರುಜ್ಜೀವನವಾಗಬೇಕೆಂದು ಹಂಬಲಿಸುತ್ತದೆ. ನಾಣ್ಯಗಳ ಚಲನಪದ್ಧತಿ ಮೊದಲಾದ ಅರ್ಥಶಾಸ್ತ್ರದ ಮೇಲೆ ಸಾಮಾನ್ಯ ಜನರಿಗೆ ಸುಲಭವಾಗಿ ತಿಳಿಯುವಂಥ ಲೇಖಗಳು ಇದರಲ್ಲಿ ಬರುತ್ತವೆ ರಾಷ್ಟ್ರೀಯ ಚಳವಳಿಯ ನಿಜವಾದ ರಹಸ್ಯ ತಿಳಿದುಕೊಳ್ಳಬೇಕಾದರೆ ಈ ಪತ್ರವನ್ನು ಅವಶ್ಯವಾಗಿ ಓದಬೇಕು.

ಇದರ ವ್ಯಾಪ್ತಿಯು ಮುಂಬಯಿ ಮದ್ರಾಸ ಕರ್ನಾಟಕಗಳಲ್ಲಿರುವದಲ್ಲದೆ ನಿಜಾಂ ಇಲಾಖೆ ಮೈಸೂರು ಮೊದಲಾದ ಸಂಸ್ಥಾನಗಳಲ್ಲಿ ಸಹ ಇರುತ್ತದೆ. ಜಾಹಿರಾತ ಕೊಡುವವರಿಗೆ ಒಳ್ಳೇ ಫಾಯದೆಯಾಗುತ್ತದೆ ಸ್ವದೇಶಿ ಕಾರಖಾನೆದಾರರಿಗೆ ಸವಲತ್ತು ತೋರಿಸಲ್ಪಡುವದು.

ವಿಳಾಸ— ಮ್ಯಾನೇಜರ, **ಕರ್ನಾಟಕ ವೈಭವ**
ಪೋಸ್ಟ— ವಿಜಾಪೂರ

ಶ್ರೀ ಕೃಷ್ಣಸಂಗೀತ ಕನ್ನಡ ನಾಟಕ ಮಂಡಲವು.

ತಾಜ ನಾಟಕಶಾಲೆಯ ಮನೆ ವೆಂಕಟಪೇಟೆ, ಬಾಗಲಕೋಟೆ

ಗುಳೇದಗುಡ್ಡ ಶ್ರೀಮತಿ ಗಂಗೂಬಾಯಿಯವರ ಈ ಹೊಸ ನಾಟಕ ಕಂಪನಿಯಲ್ಲಿ ಅಭಿನಯಿಸಲು ಸುಸ್ವರೂಪ, ಸುಶೀಲ, ಸುಶಿಕ್ಷಿತ ಹಾಗೂ ಹಾಡು ಬಲ್ಲ ನಾಟ್ಯಕಲಾಭಿಜ್ಞರಾದ ಬಾಲ ಬಾಲಿಕೆಯರೂ, ಸ್ತ್ರೀ-ಪುರುಷರೂ

ಬೇಕಾಗಿದ್ದಾರೆ.

ಅದೇ ಪ್ರಕಾರ ಪೆಟ್ಟಿಗೆ ಹಾಗೂ ತಬಲಾ ಬಾರಿಸುವದರಲ್ಲಿ ನಿಪುಣರಾದವರೂ ಬೇಕಾಗಿದ್ದಾರೆ. ಇಚ್ಛೆಯಿದ್ದವರು ಸಮಕ್ಷಮ ಇಲ್ಲವೆ ಪತ್ರದ್ವಾರದಿಂದ ವಿಚಾರಿಸಿಕೊಳ್ಳಬೇಕು.

—ವ್ಯವಸ್ಥಾಪಕ

'ಕನ್ನಡಿಗ'ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ. ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೯೦೦೦ ಯಾರ್ಡ ಕೈನೂಲು
ಪರಸ್ಥಳದವರಿಗೆ	ಮನಿಯಾರ್ಡರದಿಂದ ೧-೧೩-೦ ವಿ. ಪಿ. ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ ಯಾರ್ಡ ಕೈನೂಲು
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ—	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦ ,, ವಿ. ಪಿ. ಯಿಂದ ೩-೧-೦
ಸರಕಾರ, ಮುನಸಿ ಪಾಲಿಟಿ, ಲೋಕಲ್ ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ. ಯಿಂದ ೫-೧-೦

ಬಿಡಿ ಸಂಚಿಕೆಗೆ ೯ ಪೈ. ಹಿಂದಿನ ಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ. —ವ್ಯವಸ್ಥಾಪಕ

ಗೃಹಕೃತ್ಯದ ನೋಟೀಸು.

ಗಲಗಲಿ ಪಾಂಡುರಂಗ ಚಾರ್ಯ ಕಟ್ಟಿ ಎಂಬುವರು ಕಳೆದ ಜುಲೈ ೨೮ ನೇ ತಾರೀಖಿನಲ್ಲಿ ವಿಜಾಪೂರದಲ್ಲಿ ಮೃತಪಟ್ಟಿರುತ್ತಾರೆ. ಅವರಿಗೆ ಒಟ್ಟು ಇಬ್ಬರು ಹೆಂಡಿರು. ಕಮಲಾಬಾಯಿ ಆದ ನಾನು ೨ ನೇ ಹೆಂಡತಿ ಆಗಿಯೂ ವೆಂಕುಬಾಯಿ ಎಂಬುವರು ೧ ನೇ ಹೆಂಡತಿ ಆಗಿಯು ಇರುತ್ತೇವೆ. ೧ನೇ ಹೆಂಡತಿಯಾದ ವೆಂಕುಬಾಯಿ ಎಂಬುವರು ನಮ್ಮ ಯಜಮಾನರು ತೀರಿಕೊಂಡ ಲಾಗಾಯಿತ ವಿಶ್ವಾಸವಿಲ್ಲದವರಾಗಿಯೂ ನನಗೆ ಎಲ್ಲ ಭಾಗದಲ್ಲಿಯೂ ನಮ್ಮ ಯಜಮಾನರ ಆಸ್ತಿ ವಿಷಯದಲ್ಲಿ ನಷ್ಟ ಪಡಿಸಲು ಅನೇಕ ಜನಗಳ ಸಹಾಯದಿಂದ ನನಗೆ ಮೋಸಪಡಿಸಬೇಕೆಂದಿರುತ್ತಾರೆ. ಅಲ್ಲದೇ ಇವರು ನನ್ನ ಸಮಕ್ಷಮ ವಿಜಾಪೂರದಲ್ಲಿ ನಮ್ಮ ತಂದೆ ಮತ್ತು ಚಿಕ್ಕಪ್ಪನವರು ಇವರ ಸೋದರಮಾವನವರಾದ ಹಣಮಂತಾಚಾರ್ಯರ ಸಮಕ್ಷಮ ಒಬ್ಬ ಹುಡುಗನನ್ನು ದತ್ತಕ ಮಾಡಿಕೊಂಡು ನನ್ನನ್ನು ಹಾಳು ಮಾಡುತ್ತೇನೆಂದು ಹೇಳಿರುತ್ತಾರೆ. ೧ ನೇ ಹೆಂಡತಿ ವೆಂಕುಬಾಯಿಯವರು ನನ್ನ ಸಮ್ಮತಿ ಇಲ್ಲದೆ ದತ್ತಕ ತೆಗೆದುಕೊಳ್ಳಕೂಡದು. ಯಜಮಾನರ ಆಸ್ತಿ ಪೈಕಿ (೨) ಜಮೀನುಗಳು ವ್ಯಾಜ್ಯದಲ್ಲಿ ಬಿದ್ದಿದೆ. ಇದೆಲ್ಲ ಹೋಗಲಾಗಿ ೪|೧೦ ವರ್ಷ ಆದ ನಂತರ ತನ್ನ ಭಾಗದ ಆಸ್ತಿಗೆ ದತ್ತಕ ಮಾಡಿಕೊಳ್ಳಬಹುದು. ಶಿವಾಯ ಈಗ ಮಾಡಿಕೊಂಡದ್ದಾಗಲೀ ಅಥವಾ ದತ್ತಕಕ್ಕಾಗಿ ಬಂದದ್ದಾಗಲಿ ಇದು ಸಿದ್ಧಿಸುವದಿಲ್ಲ. ಮುಂದೆ ಸಂಭವಿಸುವ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಾರೆ. ಖಂಡಿತ, ತಿಳಿಯುವದು.

ಕಮಲಾಬಾಯಿ.

ನೋಟೀಸು.

ರಾ|| ರಾ|| ಪ್ರಾಣೇಶ ಗುರರಾವ ಕುಲಕರ್ಣಿ ಸಾ|| ಬ್ಯಾಕ ತಾಲ್ಕು ಬದಾಮಿ ವ ಸುಭದ್ರಾಬಾಯಿ ಕೋಂ ಸ್ವಾಮಿರಾವ ದೇಸಾಯಿ ಸಾ|| ಜೋಡ ನಾಯಿಕದಿನ್ನಿ ತಾಲ್ಕು ಬಾಗಲಕೋಟೆ ಈ ಉಭಯತರಿಗೇ—

ನಾನು ಕೆಳಗೆ ಸಹಿ ಮಾಡುವ ಬಸಪ್ಪಾ ಸಿದ್ದಪ್ಪಾ ಘಂಟಿ ಸಾ|| ಬಾಣಾಕದಿನ್ನಿ ಹಲ್ಲಿ ವಸ್ತಿ ಬಾಗಲಕೋಟ ಈತನು ಈ ನೋಟೀಸಿನಿಂದಾ ತಿಳಿಸುವ ವಿವರಾ—

ನಿಮ್ಮ ಪೈಕಿ ಸುಭದ್ರಾಬಾಯಿ ಮತ್ತು ನಿಮ್ಮ ಪೈಕಿ ಪ್ರಾಣೇಶನ ಅಣ್ಣಾಸಾಹೇಬ ಗೋವಿಂದ ಗುರರಾವ ಈ ಪ್ರಕಾರ ಉಭಯತರು ಬಾಗಲಕೋಟೆಯಲ್ಲಿ ನನಗೆ ಸುಳ್ಳು ಸಮಜೂತ ಹೇಳಿ ಬಿಳೇ ಕಾಗದದ ಮೇಲೆ ನನ್ನ ಸಹಿ ಮಾಡಿಸಿಕೊಂಡಿರುತ್ತೀರಿ ಆ ಮಾತಿಗೆ ಅಜಮಾಸು ೨-೩ ತಿಂಗಳು ಆಗಿರಬಹುದು ಸದರಿ ಸಹಿ ಕಾಗದ ನೀವು ಬಾಣಾಕದಿನ್ನಿ ಗ್ರಾಮದಲ್ಲಿರು ಪ್ರಾಣೇಶ ದತ್ತಕ ತಂದಿ ಸ್ವಾಮಿರಾವ ಜನಕ ತಂದಿ ರಾಘವೇಂದ್ರ ರಾವ ಧಾಣಕ- ಶಿರೂರ ಇವರ ಮಾಲ್ಕಿ ವಹಿವಾಟಿಯಲ್ಲಿ ಇರುವ ಜಮೀನಗಳಬಗ್ಗೆ ನಾನು ನಿಮ್ಮ ಕಡಿಂದಾ ಲಾವಣಿ ಹಿಡದಂತೆ ಲಾವಣಿ ಕಾಗದದ ತಾರೀಖು ಉಪಯೋಗ ಮಾಡುವ ಸಂಭವ ಕಾಣುತ್ತದೆ ಅಂದರೆ ನಾನು ಸದರಿ ಬಾಣಾಕದಿನ್ನಿಯಲ್ಲಿ ಇರುವ ಜಮೀನಗಳನ್ನು ಈವತ್ತಿನವರೆಗೆ ಅಂದರೆ ಆರೇಳು ವರ್ಷದ ಲಾಗಾಯಿತ ಸದರಿ ಪ್ರಾಣೇಶ ರಾಘವೇಂದ್ರ ದತ್ತಕ ತಂದಿ ಸ್ವಾಮಿರಾವ ಇವರ ತರ್ಫೆದಿಂದ ಲಾವಣಿ ಹಿಡದು ವಹಿವಾಟ ಮಾಡತೀನಿ ಚಾಲ ಸಾಲಿನಬಗ್ಗೆ ಸಹ ಅವರಕಡಿಂದಾನೇ ಹಿಡದು ಅಲಾಹಿದಾ ಕೋರ್ಟಿನ ಕಂತ್ರು ಅವರ ಹೆಸರಲೇ ಬರಕೊಟ್ಟೀನಿ ಆದ್ದರಿಂದ ನೀವು ನನ್ನ ಕಡಿಂದಾ ಸಹಿ ತಗೊಂಡ ಕಾಗದದ ಮೇಲೆ ನೀವು ಏನಾದರು ಬರದು ಉಪಯೋಗ ಮಾಡಿಕೊಳ್ಳುತ್ತಕ್ಕದ್ದು ಇಲ್ಲ. ತಿಳಿಯೇದು ತಾರೀಖು ೧೪-೬ ೧೯೨೭

ಬಸಪ್ಪಾ ತಂದಿ ಸಿದ್ದಪ್ಪಾ ಘಂಟಿ.

ಇಡೀ ಕರ್ನಾಟಕದಲ್ಲಿ ಒಂದೇಒಂದಾದ

ಎಲ್ಲಕ್ಕೂ ದೊಡ್ಡ! ಎಲ್ಲಕ್ಕೂ ಅಗ್ಗ!!

ಸಚಿತ್ರ ಮಾಸಪತ್ರಿಕೆ.

ಜಯ ಕರ್ನಾಟಕ.

ವಾರ್ಷಿಕ ಚಂದಾ (೫-೮-೦) ಬೇಕಾದ ತಿಂಗಳಿಂದ

[ಅಂಚೇ ವೆಚ್ಚ ಸೇರಿ] ಪ್ರಾರಂಭ ಮಾಡಬಹುದು

ಸಂಪಾದಕರು ಆಲೂರ ವೆಂಕಟೇಶರಾಯರು. ಧಾರವಾಡ

ಲೆವರಿನ ಗಡಿಯಾರಗಳು.

ಲೆವರಿನ ಕೈ ಗಡಿಯಾರ ರೂ. ೪.

ಲೆವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಅದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಬೋ ವಾಚ ಕಂ. (ಇಂಡಿಯಾ.) ಬಾಂಬೆ ೪. ೪.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದ ವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಪ್ಪಾ ಜಾಲವಾದಿ.

ಸ್ಟೇಶನರ್ಸ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ.

೫೭, ಚೀನಾಬಜಾರ್, ಮದ್ರಾಸು

ಯಾವದೇ {ಆಕಾರದ / ನಕ್ಷೆಯ / ನಂಬರಿನ} ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಬಗ್ಗೆ ನಾವು ಈ ದಾವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂ. ೭

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— ಸ್ವಾನ ಹೌಸ. ಪಿ. ಬಿ. ೫೦೮. ಪಿ. ಟಿ. ಮದ್ರಾಸ

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೋಕೆಟ್ ವೋಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವೋಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ. ಪಿ. ಬಿ. ಮದ್ರಾಸ ೫೩೫

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು.

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ. ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗ್ತುವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. | ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಆಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಒಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್ ಜಿ ಸಿ. ನಂ. ೨೭೩೬ ಸಯ್ಯದ ಅಲ್ಲಿ ಅಸಗರ ಜಿಲ್ಗ್ರಾಮ ಸುಪರೆಂಟೆಂಡೆಂಟ ಸಕ್ರೆಟರಿಯೆಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಜಿ. ಸಿ. ನಂ ೧೯೬೭ ನಾರಾಯಣ ವಿಠ್ಠಲ ಲೋಣಾಕರ. ಕೇರ ಆಫ್ ಡಿ. ಈ. ಪುರಾಣಿಕ ೧೦೭ ಸಿಹಾಲಪುರ ಇಂದೂರ ೧೦೦೦

(೩) ಎಲ್ ಜಿ. ಸಿ. ನಂ ೩೩೧ ರಾಮಚಂದ್ರ ಅನಂತ ಕಿರ್ಲೋಸ್ಕರ. ಡಿವಿಜನಲ್ ಫಾರೆಸ್ಟ ಆಫೀಸರ ಧತ್ತೂರು. ಪಶ್ಚಿಮ ಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೭ ಕೇ. ಜಿ. ಫರ್ನಾಂಡೋ ವ್ಯಾಪಾರಸ್ಥ ಬ್ರಿಕ್‌ಸ್ಟ್ರೀಟ ಸಿಲೋನ, ಕೊಲಂಬೋ. ರೂ ೧೨೦೦

(೫) ಬಾಂಡ ನಂಬರು ೧೫೭೩೪ ಎಸ್. ಜಿ. ಚವರೆ ಅಸಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ. ಜಿಲ್ಹಾ ವಿಜಾಪುರ ರೂ ೧೦೦೦

ಬಿ. ನ್. ಆರ್ಯ, ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಸ್ಟ್ಯಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ್, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸಹಿತ) ೧ ಪೌಂಡಿಗೆ ರೂ. ೧-೬-೦

೨ ನೇ ,, ,, ,, ರೂ. ೧-೩-೦

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ

ಚಿಕ್ಕಪೇಟ ಬೆಂಗಳೂರು ಸಿಟಿ.

ಜೀವ ವಿಮೆಯ ಕಾರ್ಯದಲ್ಲಿ ಅದ್ಭುತವಾದ ಜಯವು !

ಯಾಕೆಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ರೂಪಾಯಿ ಲಾಭ ಹಂಚಿದೆ.

ದಿ ಜನರಲ್ ಅಶ್ಯೂರನ್ಸ ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ನಾನಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉಳಿತಾಯವಾದದ್ದು ರೂ ೧,೮೫,೦೦೦

ಏಜಂಟರು ಬೇಕಾಗಿದೆ! ಧಾರಾಳವಾದ ಕಮಿಶನ್!

ಎಸ್. ಕಬ್ಬೂರ ಜ. ಎ. ಎಫ್. ಎಸ್. ಅಜಮೀರ.

Apply to:- H. Ramachandra Rao Branch Secretary, opposit Minto Hospital, Bangalore City

or

L. V Ramdurg. Chief Agent Near Vitoba Temple Hubli

ಈ ಪತ್ರವು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ. ಬಿ. ೧೯೪೭ ವಾ. ಚಂದಾ ೧–೧೨–೦ ಮಾತ್ರ

ಕನ್ನಡಿಗ

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಂಾವಿಷ್ಟವಾಗಿದೆ.)

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ರವಿವಾರ ಮಿತಿ ಜ್ಯೇಷ್ಠ ಬದ್ಯ ೧೨ ಶಕೆ ೧೮೪೯ ತಾ|| ೨೬-೬-೧೯೨೭ | ಸಂಚಿಕೆ ೧೩
Date 26-6-1927.

ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರಾದ

ವಿದ್ಯಾರಣ್ಯ ಮಹಾಮುನಿಗಳ

ಪುಣ್ಯತಿಥಿಯ ವಿಶೇಷ ಸಂಚಿಕೆ.

ಮಾಧವನೆ! ಎಲ್ಲಿ!

ಮಾಧವನೆ! ಎಲ್ಲಿ! ಅ।
ನಾದವನು! ಬಿಟ್ಟನಾಡು॥
ಬದಿಯು ಬೆಳಗೆಯು ಕಂಡು।
ಕುದಿಯುತಿದೆ ತಾಯ್ನಾಡು ॥ ೧ ॥

ಮಾಗಿಯುಡಗಿತು ಇನ್ನು।
ಸುಗ್ಗಿ ಬರುವದು ಎಂದು।
ಕುಗ್ಗನ್ನು ಉಡುಗಿಸುತ।
ಹಿಗ್ಗಿ ನುಡಿ ಕೋಗಿಲೆಯು ॥ ೨ ॥

ಬೆಳಕು ಬೆಳೆದು।
ಬಲಿತು ಮಾಗಿ॥
ಕಳೆ ಗುಲಿತುಳು।
ಬೀಜ ಮಾಡಳು ॥ ೩ ॥

ಹಾಡು—ಹಕ್ಕಿ।
ಓಡಿ ಬರಲಿ॥
ನಾಡ ಚಿಕ್ಕಿ।
ಮೂಡಿ ಬರಲಿ। ೪ ॥

ವಿದ್ಯಾರಣ್ಯ ಮಹಾಮುನಿಗಳು

ಕಾಮಧೇನು ಕಲ್ಪವೃಕ್ಷ।
ಶ್ರೀ ಮಹಾಲಕ್ಷ್ಮಿಯರಸ
ಮಾಧವ॥

ಎನ್ನ ತಾಯಿ
ಯನ್ನು ನಿನ್ನ
ಉಡಿಯ ಒಳಗೆ ನೀಡಿಇರುವೆ।
ಮುಡಿಗೆ ಮುಕುಟವನ್ನು
ಇಟ್ಟು ॥
ಕುಡಿಸೊ ಅಮೃತ ಧಾರೆ
ಯನ್ನು ॥ ೫ ॥

ಕನ್ನಡಿಗ ಹಿಡಿದದ್ದು ಹೊನ್ನಾಗ
ಲಯ್ಯ।
ಕನ್ನಡಿಗ ಕುಡಿದದ್ದು ಜೊನ್ನಾಗ
ಲಯ್ಯ ॥ ೬ ॥

—ರಾಮದಾಸ—

ಮೈಸೂರ ಸಂಸ್ಥಾನದ ಆಡಳಿತೆಯು

ಮೈಸೂರಿನ ಆಡಳಿತೆಯ ಬಗ್ಗೆ ಪ್ರಸಿದ್ಧವಾಗಿರುವ (೧೯೩೫-೩೬) ವರದಿಯೊಂದು ಕೈಸೇರಿದೆ. ಆಡಳಿತೆಯ ಮತ್ತು ಆರ್ಥಿಕ ಸ್ಥಿತಿಯಲ್ಲಿ ಆ ಸಂಸ್ಥಾನವು ಹೊಂದಿದ ಪ್ರಗತಿಯ ವಿವೇಚನೆಯೇ ಅದು. ಶ್ರೀ ಬ್ಯಾನರ್ಜಿಯವರು ಕಳೆದ ವರ್ಷದ ಮೇ ತಿಂಗಳ ವರೆಗೆ ದಿವಾಣರಿದ್ದುದರಿಂದಲೂ ವರದಿಯ ಅವಧಿಯು ಜೂನ ೩೦ ರ ವರೆಗೆ ಇದ್ದುದರಿಂದಲೂ ಆಗಿನ ಆಳಿಕೆಯು ಶ್ರೀ ಬ್ಯಾನರ್ಜಿಯವರದೇ ಇತ್ತೆಂದು ಹೇಳಿದರೆ ತಪ್ಪಾಗದು. ಸದ್ಯದ ದಿವಾಣರೆಂದರೆ, ಶ್ರೀ ಮಿರಝಾ ಇಸ್ಮಾಯಿಲರು. ಹಿಂದಿನ ವರ್ಷ (೧೯೩೪) ನದಿಗಳಿಗೆ ಅಸಾಧ್ಯ ನೆರೆ ಬಂದು ವಿಶೇಷ ಹಾನಿಯಾದದ್ದರಿಂದ ಆ ಜನರಿಗೆ ನೆರವಾಗುವ ಕೆಲಸವು ಕಳೆದ ವರ್ಷವೂ ನಡೆಯಿತು. ಸಂಸ್ಥಾನದ ಆರ್ಥಿಕ ಸ್ಥಿತಿಯು ೧೯೩೨-೩೩ ರಿಂದ ಈ ವರೆಗೂ ಸಮಾಧಾನಕಾರಕವಿದೆ. ಸಂಸ್ಥಾನದ ಆದಾಯ ಒಟ್ಟು ರೂಪಾಯಿ ೩,೪೬,೩೬,೯೬೦; ವೆಚ್ಚವಾಗತಕ್ಕ ಹಣ, ೩,೪೬,೦೨,೬೩೬ ರೂ. ಮತ್ತು ಒಟ್ಟಿಗೆ ಉಳಿಥಾಯವಾದ ರೊಕ್ಕಾಯಿ ೩೪,೩೨೪. ಕಬ್ಬಿಣ ಕಾರಖಾನೆಗಳಲ್ಲಿ ೮,೩೫,೪೮೧ ರೂ. ಹಾನಿ ತಟ್ಟದ್ದಿಲ್ಲೆಂದರೆ ಸಂಸ್ಥಾನಕ್ಕೆ ಇದಕ್ಕಿಂತ ಹೆಚ್ಚು ಲಾಭ ಉಳಿಯುತ್ತಿತ್ತು. ತೀರ್ಪು ಕೊಡುವ ಮತ್ತು ಮುಲ್ಕೀ ಖಾತೆಯ ಅಧಿಕಾರಗಳನ್ನು ವಿಂಗಡಿಸುವ ತತ್ವವು ಚಿತಲದುರ್ಗ ಜಿಲ್ಲೆಯಲ್ಲಿಯೂ ಅಮಲಿನಲ್ಲಿ ತರಲ್ಪಟ್ಟಿದೆ. ಬ್ರಿಟಿಶ ಸರಕಾರಕ್ಕಿಂತ ಮೈಸೂರಿನ ಹೆಜ್ಜೆಯು ಈ ವಿಷಯದಲ್ಲಿ ಮುಂದೆ ಬಿದ್ದಿದೆಯೆಂದು ಹೇಳಲು ಏನು ಕಾನೇ ಪ್ರತ್ಯವಾಯವು? ಒಂದು ಕಮಿಟಿಯು ನೇಮಿಸಲ್ಪಟ್ಟು ನ್ಯಾಯ ಕೋರ್ಟುಗಳಲ್ಲಿ ಜನರಿಗಾಗುವ ಹಲವು ತೊಂದರೆಗಳು ಕಡಿಮೆ ಮಾಡಲ್ಪಟ್ಟಿವೆ

ಹಿಂದುಸ್ಥಾನದಲ್ಲಿ ಎಲ್ಲ ಕಡೆಯಲ್ಲಿಯೂ ಇರುವಂತೆ ಒಕ್ಕಲತನವು ಮೈಸೂರಿನವರ ಮುಖ್ಯ ಹೋರೆಯಾಗಿದೆ. ಹಿಂದಿನ ವರ್ಷಕ್ಕಿಂತ ಈ ಸಲ ಹೆಚ್ಚು ಭೂಮಿಯು ಸಾಗುವಳಿಯಾಗಿದೆ ಕಬ್ಬು ಭತ್ತಗಳ ಬಿತ್ತಿಗೆಯು ಹಿಂದಿನ ವರ್ಷಕ್ಕಿಂತ ಹೆಚ್ಚು; ಆದರೆ ರಾಗಿ ಹತ್ತಿಗಳ ಬಿತ್ತಿಗೆಯು ಕಡಿಮೆ. ಮಲನಾಡ ಜಿಲ್ಲೆಗಳಲ್ಲಿ ಬ್ಯಾಂಕುಗಳು ಸ್ಥಾಪಿಸಿ ಸಾಲಗಾರರಾದ ಒಕ್ಕಲಿಗರಿಗೆ ಸಹಾಯ ಮಾಡಲ್ಪಟ್ಟಿತು. ಹೆಚ್ಚು ಯಾಕೆ? ಒಕ್ಕಲತನ ಮಾಡುವವರ ಸಂಖ್ಯೆಯು ಹಿಂದಿನ ವರ್ಷಕ್ಕಿಂತ ದ್ವಿಗುಣಿತವಾಯಿತು

ಕೋಚೀನ ಅಥವಾ ತ್ರಾವಣಕೋರದ ಶಿಕ್ಷಣವನ್ನು ಸರಿಗಟ್ಟದಿದ್ದರೂ, ಮೈಸೂರಿನ ಶಿಕ್ಷಣ ಪದ್ಧತಿಯು ಕೀಳು ತರಗತಿಯದಲ್ಲವು. ೧೯೩೪-೩೫ ರಲ್ಲಿ ೮,೦೦೭ ಶಾಲೆಗಳಲ್ಲಿ ೩೦೭,೩೯೪ ವಿದ್ಯಾರ್ಥಿಗಳಿದ್ದರೆ, ೧೯೩೫—೩೬ ರಲ್ಲಿ ೮,೦೬೬ ಶಾಲೆಗಳಲ್ಲಿ ೩೧೫,೯೮೯ ವಿದ್ಯಾರ್ಥಿಗಳಿದ್ದರು. ಶಾಲೆಗೆ ಹೋಗತಕ್ಕ ವಯಸ್ಸಿನಲ್ಲಿರುವ ಪ್ರತಿ ೨.೭೮ ಜನರಲ್ಲಿ ಒಬ್ಬನು ಕಲಿಸಲ್ಪಟ್ಟನು. ಹಿಂದಿನ ವರ್ಷದಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಪ್ರತಿ ೧೯ ಜನರಲ್ಲಿ ಒಬ್ಬನು ಶಿಕ್ಷಣ ಹೊಂದಿದ್ದರೆ, ವರದಿಯ ಹೊಸ ವರ್ಷ, ಪ್ರತಿ ೧೮.೫ ಜನರಲ್ಲಿ ಒಬ್ಬನು ಶಿಕ್ಷಣ ಪಡೆದಿರುವನು. ಬಾಲಿಕೆಯರ ಸಂಖ್ಯೆಯಾದರೂ ತುಸು ಹೆಚ್ಚಿದೆ ೧೯೩೪—೩೫ ರಲ್ಲಿ ೭೮೫ ಶಾಲೆಗಳಲ್ಲಿ ೩೪,೩೮೦ ಬಾಲಿಕೆಯರಿದ್ದರೆ, ೧೯೩೬ ಜೂನ ೩೦ನೇ ತಾ॥ ದಿನ ೪೮೭ ಶಾಲೆಗಳಲ್ಲಿ ೩೮೬೬೦ ವಿದ್ಯಾರ್ಥಿನಿಯರಿದ್ದರು ಇದಲ್ಲದೆ, ಬಾಲಕರ ಮತ್ತು ಖಾಸಗೀ ಶಾಲೆಗಳಲ್ಲಿ ೨೪,೨೩೭ ಬಾಲಿಕೆಯರಿದ್ದರು. ಹಿಂದುಳಿದ ಜಾತಿಗಳ ಶಿಕ್ಷಣದ ಸಲುವಾಗಿಯೂ ಮೈಸೂರು ಸರಕಾರವು ಹೆಚ್ಚು ಲಕ್ಷ್ಯ ಪೂರೈಸಿರುತ್ತದೆ. ಅಸ್ಪೃಶ್ಯರ ಮಕ್ಕಳ ಕಲ್ಯಾಣಕ್ಕಾಗಿ ೬೨೫ ಶಾಲೆಗಳಿದ್ದವು. ೧೬,೫೭೫ ವಿದ್ಯಾರ್ಥಿಗಳು ೧೯೩೫—೩೬ ರಲ್ಲಿ ಕಲಿಯುತ್ತಿದ್ದರೆ, ಅದರ ಹಿಂದಿನ ವರ್ಷ, ೬೦೯ ಶಾಲೆಗಳಲ್ಲಿ ೧೫೭೨೯ ಹುಡುಗರು ಶಿಕ್ಷಣ ಹೊಂದಿದ್ದರು. ಶಾಲೆಗಳ ಸಂಖ್ಯೆಯು ಕೊಂಚ ಕಡಿಮೆಯಾದರೂ, ವಿದ್ಯಾರ್ಥಿಗಳ ಸಂಖ್ಯೆಯು ಸಾಕಷ್ಟು ಹೆಚ್ಚಿದ ಸಂಗತಿಯು ಅಸ್ಪೃಶ್ಯ ವರ್ಗವು ಶಿಕ್ಷಣಕ್ಕೋಸ್ಕರ ಹಾತೊರೆಯುವದನ್ನೇ ವ್ಯಕ್ತಮಾಡುತ್ತದೆ. ೧೯೩೪—೩೫ ರಲ್ಲಿ ೨೫೦೪ ಅಸ್ಪೃಶ್ಯ ಬಾಲಿಕೆಯರು ಶಾಲೆಗೆ ಹೋಗುತ್ತಿದ್ದರೆ, ಮುಂದಿನ ವರ್ಷ, ೨೫೬೭ ಜನ ಬಾಲಿಕೆಯರು ಶಿಕ್ಷಣ ಪಡೆದರೆಂಬುದೂ ಆನಂದದ ವಿಷಯ ಈ ಜನರಿಗಾಗಿ ಪುಕ್ಕಟೆ ಊಟದ ವ್ಯವಸ್ಥೆಯಾಗಿ ಹೇರಳ ಶಿಷ್ಯವೃತ್ತಿಗಳೂ ಕೊಡಲ್ಪಟ್ಟಿವೆ. ಒಂದು ಕಮೀಟಿಯು ನಿಯಮಿತವಾಗಿ, ಮುಸಲ್ಮಾನರ ಶಿಕ್ಷಣದ ಬಗ್ಗೆ ಅನೇಕ ಪ್ರಶ್ನಗಳು ಚರ್ಚಿಸಲ್ಪಟ್ಟವು. ಶ್ರೀಮನ್ಮಹಾರಾಜರು ಸಂಸ್ಕೃತ ಶಿಕ್ಷಣಕ್ಕೂ ತಕ್ಕ ಪ್ರೋತ್ಸಾಹನ ಕೊಟ್ಟಿದ್ದಾರೆ. ೧೯ ಪಾಠಶಾಲೆಗಳಲ್ಲದೆ, ೩ ಸಂಸ್ಕೃತ ಮಹಾ ವಿದ್ಯಾಲಯಗಳಿವೆ. ಬೆಂಗಳೂರಿನ ಚಾಮರಾಜೇಂದ್ರ ಕಾಲೇಜವಂತೂ ಎಲ್ಲ ಜಾತಿಯವರಿಗೆ ವಿದ್ಯೆಯನ್ನು ಕೊಡಹತ್ತಿದೆ.

ಔದ್ಯೋಗಿಕ ಶಿಕ್ಷಣದ ಮಾತನ್ನೆತ್ತಿದರೆ, ಎಲ್ಲ ಸಂಸ್ಥಾನಗಳಲ್ಲಿ ಮೈಸೂರು ಮೇಲು ಎಂದೆನ್ನಲು ಅಡ್ಡಿಯಿಲ್ಲ ಹಳ್ಳಿಯ ಹೋರೆಗಳು ಪುನರುಜ್ಜೀವನ ಹೊಂದಿ ಭರದಿಂದ ಬೆಳೆಯುತ್ತಲಿವೆ. ನೂಲುವ ಸಂದ್ಯಾಟಗಳೂ ಪ್ರದರ್ಶನಗಳೂ ಹೆಚ್ಚಾದದ್ದಲ್ಲದೆ, ಬೇರೆ ತರಹದ ರಾಟಿಯನ್ನು ಗೊತ್ತು ಹಚ್ಚಿ ನೂಲುವದರಲ್ಲಿ ಒಳ್ಳೇ ತಿದ್ದುಪಡೆ ಮಾಡಲ್ಪಟ್ಟಿತು. ಜೇಲಿನಲ್ಲಿಯೂ ಸುಧಾರಣೆಯಾಯಿತು. ಧಾರ್ಮಿಕ ಉಪದೇಶವನ್ನು ಪಡೆಯುವದಲ್ಲದೆ, ಬಂದಿಗಳು ವಾಚನಾಲಯದ ಲಾಭವನ್ನೂ ಹೊಂದುತ್ತಿದ್ದಾರೆ. ಮಾದಕ ಪದಾರ್ಥಗಳ ೫೦ ಅಂಗಡಿಗಳು ಕಡಿಮೆಯಾಗಿದ್ದರೂ, ಅವುಗಳ ಸೇವನೆಯು ಅಷ್ಟು ಕಡಿಮೆಯಾಗಿಲ್ಲ. ವಿದೇಶದ ಸರಾಯಿಯಂತೂ ಮಿತಿಮೀರಿ ಖರ್ಚ ಆಗುತ್ತದೆ. ೨೩,೦೬೦ ಗ್ಯಾಲನ್ನಗಳು (೧೯೩೫—೩೬) ಮಾರಾಟವಾದರೆ ಅದರ ಹಿಂದಿನ ವರ್ಷ ೧೫,೮೭೫ ಗ್ಯಾಲನ್ನಗಳು ಮಾರಿದ್ದವು ಮಾರಾಟವು ಕೋಲಾರ ಜಿಲ್ಲೆಯಲ್ಲಿ ವಿಶೇಷ ಯಾವತ್ತೂ ಮ್ಯುನಿಸಿಪಾಲಟಿಗಳಲ್ಲಿ ಪರವಾನಗಿಯನ್ನೀಯುವ (Licensing Boards) ಬೋರ್ಡುಗಳ ಸ್ಥಾಪಿಸಲ್ಪಟ್ಟದ್ದು ಒಂದು ಆಬಕಾರೀ ಸುಧಾರಣೆಯು. ಮೈಸೂರ ಅಸೆಂಬ್ಲಿಯ ಅಧಿವೇಶನಗಳು (೧೯೩೫—೩೬) ಎರಡು, ಲೇಜಿಸ್ಲೇಟಿವ್ಹ ಕೌನ್ಸಿಲದ ಅಧಿವೇಶನಗಳು ಮೂರು. ಸಭಾಸದರು ನಡುವೆ ಕೇಳುವ ಪ್ರಶ್ನಗಳ ಸಂಖ್ಯೆಯು ಇಂತಿಷ್ಟೇ ಇರಬೇಕೆಂಬ ಪ್ರತಿಬಂಧವು ದೂರಿರಿಸಲ್ಪಟ್ಟಿತು. ಒಟ್ಟಿನ ಮೇಲೆ ಮೈಸೂರಿನ ಜನರು ಸುಖಿಗಳಿದ್ದಾರೆಂದು ಹೇಳಬಹುದು. — ಸಂಪಾದಕ

ಅಮೃತ-ವಚನಗಳು

ಲೇ॥ ಪಿ. ವ್ಹಿ. ಲಕ್ಷ್ಮಣಶರ್ಮಾ, ಸುಂಡಿಲಾಪುರ.

ಎಷ್ಟು ಸಂಕಟಗಳು ಪ್ರಾಪ್ತವಾದರೂ ನೀವು ನಿಮ್ಮ ಉದ್ದೇಶ್ಯದಿಂದ ಅಗಲಬೇಡಿರಿ. ಸಂಕಟಗಳು ಬಂದಾಗ ಅಳುವದು, ಹಾಗು ಅವು ಪರಿಹಾರವಾದಾಗ ಆನಂದ ಪಡುವದು, ಈ ಕೆಲಸಗಳನ್ನು ಮಂಗಗಳು ಸಹ ಮಾಡುತ್ತವೆ ಬಂದ ಸಂಕಟಗಳನ್ನು ನಾಶ ಮಾಡಿ ತನ್ನ ಉದ್ದೇಶ್ಯದ ಮಾರ್ಗವನ್ನು ಆಕ್ರಮಣ ಮಾಡುವದೇ ಮನುಷ್ಯನ ನಿಜವಾದ ಕರ್ತವ್ಯವಾಗಿದೆ. ‡ ‡ ‡

ಯಾರು ದುರಾಗ್ರಹವನ್ನು ಬಿಡುವದಿಲ್ಲವೋ ಅವರ ಕೈಯಿಂದ ಯಾವ ಕಾರ್ಯವೂ ಆಗಲಾರದು. ‡ ‡ ‡

ಯಾವದೊಂದು ಕಾರ್ಯವನ್ನು ಮಾಡಬೇಕಾದರೆ ಮೊದಲು ಅದನ್ನು ಬಹುಮತದಿಂದ ಜನತೆಯ ನಿದರ್ಶನಕ್ಕೆ ತಂದು ಕೊಡಲಿಕ್ಕೆ ಬೇಕು. ‡ ‡ ‡ ‡ ‡

ದೈವ ಹಾಗೂ ಪ್ರಯತ್ನ ಇವೆರಡೂ ಸಂಗತಿಗಳು ಅಷ್ಟಷ್ಟೇ ಮಹತ್ವದವುಗಳು ದೈವವು ಅನುಕೂಲವಿದ್ದು ಪ್ರಯತ್ನವು ಪ್ರತಿಕೂಲವಾದರೆ ಇಲ್ಲವೆ ಪ್ರಯತ್ನವು ಅನುಕೂಲವಿದ್ದು, ದೈವವು ಪ್ರತಿಕೂಲವಾದರೆ ಇವುಗಳಿಂದ ಏನೂ ಉಪಯೋಗವಾಗಲಾರದು.

ಕನ್ನಡಿಗ.

ಬಾಗಲಕೋಟೆ ಜೇಷ್ಠ ಬಹುಳ ೧೨ ಶಕೆ ೧೮೪೯

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೋಹವಾಡಿ ಕಟ್ಟುವೆನಾನು ।
ನಿನ್ನ ಬೆಸನವಮಾಡಿದಂಥ ಮಕ್ಕಳದೊಮ್ಮೆ!
ಚಿನ್ನದಾದರು ಚಿನ್ನ ಮೋಹಬಸ್ತಿಯ ನೊಂದು ಚಿನ್ನಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ನನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೋ॥

—ಅಂಬಿಕಾತನಯ ದತ್ತ

ಶ್ರೀಮದ್ವಿದ್ಯಾರಣ್ಯರ ಪುಣ್ಯತಿಥಿಯು ನಾಳಿನ ದಿನ ಜರಗುವದು. ಮಹಾತ್ಮರ ಪುಣ್ಯತಿಥಿಗಳನ್ನು ಜರಗಿಸುವದರಲ್ಲಿರುವ ಹುರುಳನ್ನು 'ಕನ್ನಡಿಗ'ನು ಮೇಲಿಂದ ಮೇಲೆ ತಿಳಿಸಿರುವನು. ಈ ಜೀವಜ್ಯೋತಿಗಳ ಪುಣ್ಯಸ್ಮರಣವು ಜನಜೀವನದಲ್ಲಿ ಒಂದು ಬಗೆಯ ನವಚೈತನ್ಯವನ್ನು ತರುವದು. ಇದೇ ತತ್ವವನ್ನನುಸರಿಸಿಯೇ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ದೇಹ ಸವೆಸಿದ ವೀರರ ಪುಣ್ಯ ತಿಥಿಗಳು ದೊಡ್ಡ ಹಬ್ಬದಂತೆ ಎಲ್ಲ ರಾಷ್ಟ್ರಗಳಲ್ಲಿ ಆಚರಿಸಲ್ಪಡುವವು. ವಿದ್ಯಾರಣ್ಯರಂತೂ ಕನ್ನಡಿಗರಿಗೆ ಕುಲಗುರುಗಳು. ತಾವು ಸನ್ಯಾಸ ವೃತ್ತಿಯವರಾದರೂ ಲೋಕಸಂಗ್ರಹಕ್ಕಾಗಿ ಟೊಂಕಕಟ್ಟಿ ಶ್ರೀ ವಿದ್ಯಾರಣ್ಯರು ವಿಶ್ವಕ್ಕೆಲ್ಲ ಕರ್ಮಯೋಗದ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿರುವರು. ಧರ್ಮ ಸಂಸ್ಕೃತಿಗಳ ರಕ್ಷಣೆಗೆ ರಾಷ್ಟ್ರದ ಸ್ವಾತಂತ್ರ್ಯವು ಮೂಲವಾಗಿರುವದೆಂಬದನ್ನು ಇವರು ಪ್ರತ್ಯಕ್ಷ ಸಿದ್ಧಮಾಡಿ ತೋರಿಸಿರುವರು. ಕಾವೇರಿಯಿಂದ ಗೋದಾವರಿಯವರೆಗೆ ಬೆಳೆದು ದಿಗಂತ ಕೀರ್ತಿಯನ್ನು ಪಡೆದ ಕನ್ನಡ ರಾಷ್ಟ್ರವು ಶ್ರೀ ವಿದ್ಯಾರಣ್ಯರ ಅಮೃತ ಹಸ್ತದಿಂದ ವಿರಾಟ್ ಸ್ವರೂಪವನ್ನು ಹೊಂದಿತು. ಸ್ವತಂತ್ರ ಕರ್ನಾಟಕ ರಾಷ್ಟ್ರ ನಿರ್ಮಾಣ ಮಾಡಿ ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರೆಂದು ಬಿರುದು ಪಡೆದ ಇವರ ಪ್ರಭಾವದಿಂದಲೇ ಕನ್ನಡ ಸಾಹಿತ್ಯ ಕಲೆಗಳ ಪ್ರವಾಹಕ್ಕೆ ನೆರೆ ಬಂದಿತು! ತೀರಿಸಲಾರದ ಅವರ ಈ ಉಪಕಾರವನ್ನು ಕನ್ನಡಿಗರು ಎಂದೂ ಮರೆಯುವಂತಿಲ್ಲ. ನಿತ್ಯಸ್ಮರಣೆಗೆ ಯೋಗ್ಯವಾದ ಅವರ ಹೆಸರು ಇಂಥ ಪುಣ್ಯತಿಥಿಗಳಲ್ಲಿಯಾದರೂ ಕನ್ನಡಿಗರ ಸ್ಮೃತಿಪಥಕ್ಕೆ ಬರಬೇಕು.

'ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ'ರೆಂಬ ಉದಾತ್ತ ಬಿರುದಿನಿಂದ ಮೆರೆದ ಈ ಮಹಾನುಭಾವರು, ಇಹಲೋಕದಲ್ಲಿ ತಮ್ಮ ಕಾರ್ಯಭಾರವನ್ನು ನಿರ್ವಹಿಸಿಕೊಂಡು, ಅಜರಾಮರ ಖ್ಯಾತಿಯನ್ನು ಹೊಂದಿ, ಸಹಸ್ರಾವಧಿ ಜನರು ರಾಷ್ಟ್ರಕಾರ್ಯಕ್ಕೆ ತಲೆಕೊಟ್ಟು ನಿಲ್ಲುವಂತೆ ಮಾಡಿ, ಈ ಸೃಷ್ಟಿ ನಾಟಕದ ನಟಕೂಟದಿಂದ ಪರಾನ್ಮುಖರಾಗಿ ಇಂದಿಗೆ ೬೦೦ ವರ್ಷಗಳಾಗುತ್ತ ಬಂದಿರುವವು. ಅವರ ಅದ್ಭುತ ಸಹಾಸದಿಂದ ಅಂಕುರಿಸಿ ಭರದಿಂದ ಬೆಳೆದ ಕನ್ನಡಿಗರ ಆ ವೈಭವದ ಸಾಮ್ರಾಜ್ಯ ವೃಕ್ಷವು ಉರುಳಿಕೊಂಡು ಬಿದ್ದು ಮಣ್ಣುಪಾಲಾಗಿ ಕಾಲಮಹಿಮೆಯಿಂದ ಅವರ ರಾಷ್ಟ್ರವೂ ಕೂಡ ಸಿಕ್ಕದಂತೆ ಅಗಿಹೋಯಿತು. ಅವರ ದಿವ್ಯವಾಣಿಯಿಂದ ಚೇತರಿಸಿಕೊಂಡೆದ್ದು, ಕನ್ನಡನಾಡಿನ ಉನ್ನತಿಗಾಗಿ ಅನೇಕ ರೀತಿಯಿಂದ ಹೋರಾಡಿ, ಅದರ ಘನತೆಯನ್ನು ಪ್ರಸ್ಥಾಪಿಸಿದ ಆ ಧೀರೋದಾತ್ತರ ಸದ್ದು ಸಹ ಅಡಗಿಹೋಯಿತು. ಎಲ್ಲಿ ನೋಡಿದಲ್ಲಿ ನೈರಾಶ್ಯವೂ ಹೇಡಿತನವೂ ಬೆಳೆದು, ಎಲ್ಲೆಲ್ಲಿಯೂ ಕನ್ನಡಿಗರ ಅವಹೇಲನವೇ ನಡೆದದೆ. ಆಲಸ್ಯದಲ್ಲಿಯೂ ವಿಷಯಲೋಲುಪತೆಯಲ್ಲಿಯೂ ಮುಳುಮುಳುಗಿ ಏಳುವ ಕನ್ನಡಿಗರಲ್ಲಿ ತಾವು ಎಂದೆಂದಿಗೂ ಹೀಗೆಯೇ ದುರ್ಬಲರೂ, ಹತವೀರ್ಯರೂ ದಾಸ್ಯವೃತ್ತಿಯವರೂ, ಹೇಡಿಗಳೂ, ಎಂಬ ಮೂಢ ಭಾವನೆಯೊಂದು ದೃಢವಾಗಿ ಕೂತಿದೆ. ಇತಿಹಾಸದಲ್ಲಿ ಕನ್ನಡನಾಡು ಅಷ್ಟೊಂದು ಪ್ರಜ್ವಲಿಸುವಂತೆ ಮಾಡಿದ, ಆ ಪುರುಷ ಸಿಂಹರ ಪುಣ್ಯ ಚರಿತ್ರೆಯಲ್ಲಿಯೂ ನಮ್ಮ ವಿಶ್ವಾಸವು ತಪ್ಪಿ, ಅವರ ಪೂರ್ಣವಿಸ್ಮರಣೆಯಾಗಿ, ಪರಪ್ರಾಂತಿಗರ ಕೀರ್ತಿಪತಾಕೆಯನ್ನು ಎತ್ತಿ, ಅವರ ಸಾಹಸ ಧೈರ್ಯಗಳನ್ನು ಹೊಗಳುವದರಲ್ಲಿಯೇ ಕೃತಕೃತ್ಯರೆಂದೆನಿಸಿಕೊಳ್ಳುತ್ತಿದ್ದೆವು! ನಮ್ಮ ಪೂರ್ವಜರನ್ನು ಹೀಯಾಳಿಸುವದರಲ್ಲಿಯೇ ನಾವು ಸಂತೋಷ ವ್ಯಕ್ತ ಮಾಡುತ್ತಿದ್ದೆವು!

ಆದರೆ ಇದೀಗ ಈ ಆತ್ಮವಿಸ್ಮರಣೆಯ ಕಗ್ಗತ್ತಲೆಯು ಹರಿಯಹತ್ತಿ ಆತ್ಮೀಯತೆಯ ಪುಣ್ಯ ಕಿರಣಗಳು ನಾಡಿನಲ್ಲೆಲ್ಲ ಹರಡ ಹತ್ತಿರುವವು. ಇದು ಬಹಿರಂಗವಾಗಿ ಅಷ್ಟೊಂದು ಒಡೆದು ತೋರದಿದ್ದರೂ ವಿವೇಚನ ದೃಷ್ಟಿಯುಳ್ಳವರಿಗೇ ಹೆಚ್ಚು ಮನವರಿಕೆಯಾಗುವಂತಿದೆ. ನಮ್ಮನ್ನು ಹರಿದು, ಹಂಚಿಗೊಂಡು, ತಾವು ಪುಷ್ಟರಾಗಬೇಕೆಂಬ, ಪರಪ್ರಾಂತಿಗರ ಚೀರಾಟದ ಸದ್ದಿಗೆ 'ದೇವರೊಲ್ಮೆ'ಯಿಂದ, ಎಚ್ಚತ್ತೇಳುತ್ತಿರುವ, ಕನ್ನಡಿಗರ ಈ ಪ್ರಭಾತ ಸಮಯದಲ್ಲಿ ವಿದ್ಯಾರಣ್ಯರಂಥ ಪುಣ್ಯಶ್ಲೋಕರ ಜೀವನಸ್ಮರಣೆಯ ಉಪಯುಕ್ತತೆಯು ಅಷ್ಟಿಷ್ಟೆಂದು ಹೇಳಲಾದೀತೆ?

ಕರ್ನಾಟಕ ಇತಿಹಾಸದಲ್ಲಿ ಮಿನುಗುತ್ತಿರುವ ಇಂಥ, ಧೀರ ಉದಾತ್ತರ, ಚರಿತಾಮೃತದ ಸೇಚನದಿಂದಲೆ, ನಮ್ಮಲ್ಲಿ ನವಚೈತನ್ಯವನ್ನೂ, ಇದೀಗ ಉದಯ ಹೊಂದುತ್ತಿರುವ ಆತ್ಮೀಯತೆಯ ಭಾವನೆಯನ್ನೂ ಆತ್ಮವಿಶ್ವಾಸನ್ನೂ ದೃಢಪಡಿಸಬೇಕಾಗಿದೆ. ಪರಪ್ರಾಂತಿಗರಂತೆ ನಾವಾದರೂ ಕಾರ್ಯನಿರ್ವಾಹಕ ಶಕ್ತಿಯುಳ್ಳವರೆಂಬ ಭಾವನೆಯನ್ನು ನಮ್ಮ ಹೃದಯದಲ್ಲಿ ಒಡಮೂಡಿಸಬೇಕಾಗಿದೆ. ನಮ್ಮನ್ನು ಆವರಿಸಿಕೊಂಡಿರುವ ನೈರಾಶ್ಯವನ್ನೂ ಅಭಾವ ವೈರಾಗ್ಯವನ್ನೂ ಹೊಡೆದೋಡಿಸಿ, ಪ್ರಗತಿಪರ ವಿಚಾರದಿಂದಲೂ ಆಶಾಭರಿತ ವೃತ್ತಿಯಿಂದಲೂ, ಜೀವಿಸಬೇಕಾಗಿದೆ. ನಮ್ಮ ಇತಿಹಾಸ ಪುರುಷರ ಶೌರ್ಯ, ಸಾಹಸ ಆಕಾಂಕ್ಷೆಯ, ಕಥೆಗಳಿಂದ ಪುಲಕಿತರಾಗಿ ನಾವು ಹೇಡಿಗಳೆಂಬ ಭ್ರಾಮಕ ಕಲ್ಪನೆಯನ್ನು ತಲೆಯೊಳಗಿಂದೋಡಿಸಿ, ನಾಲ್ಕು ಜನರಲ್ಲಿ ತಲೆಯೆತ್ತಿ ನಡೆಯುವ ಧೈರ್ಯ ತಂದುಕೊಳ್ಳಬೇಕಾಗಿದೆ. ಇಂಥ ಸಾಮ್ರಾಜ್ಯಾಚಾರ್ಯರ ವಂಶಜರೆಂದು ನೆನೆದುಕೊಂಡಾದರೂ ನಮ್ಮ ನಾಡಿಗಳಲ್ಲಿಯ ರಕ್ತ ಪ್ರವಾಹವನ್ನು ಸ್ಫೂರ್ತಿಯಿಂದಲೂ ಪ್ರಬಲತರವಾಗಿಯೂ ಹರಿಯುವಂತೆ ಒಳ್ಳೇ ಹುರುಪಿನ ಜೀವನ ಕ್ರಮವನ್ನು ಅನುಸರಿಸಬೇಕಾಗಿದೆ.

ಈ ಹೊತ್ತಿನ ಕನ್ನಡಿಗರ ಮನೋವೃತ್ತಿಯನ್ನು ಇಷ್ಟೆಲ್ಲ ಬದಲಾಯಿಸುವದಕ್ಕೆ ರಾಷ್ಟ್ರಜೀವನರಾದ ನಮ್ಮ ವೀರ ಪುರುಷರ ಚರಿತ್ರೆಯ ಕಥಾನುವಾದವೊಂದು ಉಪಾಯವಾಗಿದೆ. ಅವರ ಪುಣ್ಯತಿಥಿಗಳ ನಿಮಿತ್ತವಾಗಿಯಾಗಲಿ, ಆತುರಗೊಳಿಸುವಂಥ ಅವರ ಸಾಹಸ ಕೃತಿಗಳ ಸ್ಮರಣಾರ್ಥವಾಗಿಯಾಗಲಿ ಇಂಥವರ ಗುಣಗಾನವು ಮನೆಮನೆಗಳಲ್ಲಿ ನಡಿಯಬೇಕು. ಸಾರ್ವಜನಿಕ ರೀತಿಯಿಂದ ಉದ್ಘೋಷವಾಗಬೇಕು. ಚಿಕ್ಕ ಮಕ್ಕಳು ಅವರ ಕಥೆಗಳಿಂದ ಹುರುಪುಗೊಂಡು ಆ ಗುಣಗಂಭೀರರ ಸಾಹಸ ಕೃತಿಗಳ ಅನುಕರಣೆಯನ್ನು ತಮ್ಮ ಬಾವಶ ರೀತಿಯಿಂದ ಮಾಡಲೆತ್ನಿಸುವಷ್ಟು ಅವರ ವಿಚಾರದಲ್ಲಿ ಆ ರಾಷ್ಟ್ರೀಯತೆಯು ಭೋರ್ಗರೆಯುವಂತೆ ಮಾಡಬೇಕು. ಅದಕ್ಕಾಗಿಯೇ ಇಂಥವರ ಚರಿತ್ರೆಗಳನ್ನು ಉಜ್ವಲವಾದ ಭಾಷೆಯಿಂದ ಬರೆದು, ದೇಶದೇಶದಲ್ಲಿ ಪಸರಿಸಬೇಕು; ಅವರ ಕೃತಿಗಳು ಎಷ್ಟು ಅದ್ಭುತವಾಗಿರಲಿ—ಕೇವಲ ಅವರ ಸತತ ಪ್ರಯತ್ನ ಸಾಹಸದಿಂದಲೆ ಅವನ್ನು ಸಾಧಿಸಬೇಕೆಂದು ಒಡೆದು ಹೇಳಬೇಕು. ಅವುಗಳಲ್ಲಿ ಭಾವಿಕತನದ ಪ್ರಸ್ಥವನ್ನು ಬೆರಿಸಕೂಡದು. ಅವರು ತೋರಿಸಿದ ಘನತೆಯು ಅವರ ಮನೋಬಲದ ಮತ್ತು ಇಚ್ಛಾಶಕ್ತಿಯ ರೂಪಾಂತರವೇ ಹೊರತು ಯಾವದೇ ಒಂದು ಅಗಮ್ಯವಾದ ಶಕ್ತಿಯ ಪ್ರಸಾದಮಾತ್ರದಿಂದಲ್ಲವೆಂಬದನ್ನು ಚನ್ನಾಗಿ ಬಿಚ್ಚಿ ಬರೆಯಬೇಕು. ಯಾಕಂದರೆ, ಅವರೆಲ್ಲರೂ ಮಾಡಿದ ಮಹತ್ತರವಾದ ಕಾರ್ಯವೆಲ್ಲ ಆ ಸೃಷ್ಟಿಕರ್ತನ ಕೃಪಾಬಲದಿಂದವೆಂದು ಸಾಧಿಸಿದರೆ, ಆವೃತ್ತಿಯಲ್ಲಿಯ ಅನುಕರಣೀಯವಾದ ಆಚರಣೆಯ ಮಹತ್ವದ ಕಡೆಗೆ ನಮ್ಮ ಲಕ್ಷ ಹೋಗದು. ಓದುಗರ ಮನಸ್ಸು ವಿಸ್ಮಯ ಆಶ್ಚರ್ಯದಿಂದ ವ್ಯಗ್ರವಾಗುತ್ತದೆ. ಕಾರ್ಯಪರತೆಯ ಉದಾತ್ತ ಭಾವನೆಯು ಹುಟ್ಟುವದಿಲ್ಲ. ಆದುದರಿಂದ ಪ್ರತಿಯೊಬ್ಬನು ತನ್ನನ್ನು ತಾನು ತಿಳಿದುಕೊಂಡು, ತನ್ನಲ್ಲಿರುವ ಗುಣಗಳನ್ನು ಕೇವಲ ತನ್ನ ಸಾಹಸದಿಂದ ಪ್ರಕಟಗೊಳಿಸಲು ಎತ್ನಗಡಿಮಾಡತಕ್ಕದ್ದು.

ವಿದ್ಯಾರಣ್ಯರ ಕಾಲದಲ್ಲಿ ಆರ್ಯ ಧರ್ಮಕ್ಕೆ ತಗಲದ ಗ್ಲಾನಿಯು ೬ ಸಾವಿರ ಮುಖದಿಂದ ಈಗ್ಗೆ ನಮ್ಮ ಧರ್ಮವನ್ನು ಆವರಿಸಿಕೊಂಡಿದೆ. ವಿದ್ಯಾರಣ್ಯ ಸಾಧುಗಳು ಅದನ್ನು ಆಗ್ಗೆ ನಾಶಪಡಿಸಿ ಆರ್ಯ ಧರ್ಮದ ಕೀರ್ತಿಯು ಮತ್ತೆ ಶುಭ್ರವಾಗಿ ಹೊಳೆಯುವಂತೆ ಏರ್ಪಡಿಸಿದರು! ಆದರೆ ಈಗಿನ ಕಾಲಕ್ಕೆ ಅಂತಹ ಮಹಾಸಾಧುಗಳು ಮತ್ತೆ ಆರ್ಯ ಧರ್ಮದ ಉದ್ಧಾರಕ್ಕಾಗಿ ಉದಯರಾಗಿ ಬರಬೇಕಾಗಿದೆ. ಈ ಪುಣ್ಯ ಕೆಲಸಕ್ಕೆ ಇಂತಹ ಮಹಾತ್ಮರ ಆಗಮನವು ಬಲು ಬೇಗ ಆಗಬೇಕು; ಮತ್ತು ಅದು ಕರ್ನಾಟಕದಲ್ಲಿಯೇ ಪುನಃ ಆಗಬೇಕೆಂಬದಾಗಿ ಕನ್ನಡಿಗರ ಅಂತಃಕರಣವು ಕಳವಳಗೊಳ್ಳುತ್ತಿದ್ದರೆ, ವಿಲಂಬ ಮಾಡದೇ ಕನ್ನಡಿಗರೆಲ್ಲ ಅಂತಹ ಮಹಾ ವಿಭೂತಿಯ ಉದಯಕ್ಕಾಗಿ ತಪಶ್ಚರ್ಯ ಮಾಡಬೇಕು. ಈಗಿನ ಕಾಲದ ತಪಶ್ಚರ್ಯವೆಂದರೆ ಸದಸದ್ವಿವೇಕ ಭಾವದಿಂದ, ಸ್ವಾರ್ಥವನ್ನು ತ್ಯಜಿಸಿ, ರಾಷ್ಟ್ರದ, ತನ್ಮಾತೆಯ, ಧರ್ಮದ ಸೇವೆಯಲ್ಲಿ ನಿರತರಾಗುವದೇ ಸರಿ. ಸಾತ್ವಿಕ ಭಾವ, ರಾಷ್ಟ್ರೋದ್ಧಾರಕ್ಕಾಗಿ ನಿಜವಾದ ಕಳವಳಗಳು ಕನ್ನಡಿಗರೆಲ್ಲ ಉದಯ ಹೊಂದಿ, ಕನ್ನಡಿಗರಲ್ಲಿ ಕರ್ನಾಟಕ ಮಾತೆಯ ತನ್ಮೂಲಕ ಭಾರತ ಮಾತೆಯ ಪವಿತ್ರ ಚರಣ ಸೇವೆಯಲ್ಲಿ ನಿರತರಾದರೆ ಮಾತ್ರ ವಿದ್ಯಾರಣ್ಯರ ವಂಶಜರಾದ ಕನ್ನಡಿಗರಿಗೆ ಭೂಷಣವು! ವಿದ್ಯಾರಣ್ಯರ ಚರಿತ್ರೆಗೂ ಭೂಷಣವು!

ನನಗೆ ಹೊಳೆದಂತೆ.

ಕನ್ನಡ ವಿದ್ಯಾರ್ಥಿಗಳಿಂದಲೇ ಬೀಡಿ ಸಿಗರೇಟುಗಳು ಕಾಲೇಜದಲ್ಲಿ ಪ್ರಸಾರವಾದವೆಂದು ಪುಣೆಯ ಫರ್ಗ್ಯೂಸನ್ ಕಾಲೇಜದ ಮಹಾಜನಿ ಪಂಡಿತರು ಉಸುರಿದರಂತೆ! ಇದಕ್ಕೆ ಆಧಾರವೇನೆಂಬದನ್ನು ಮಾತ್ರ ಪಂಡಿತರು ನುಡಿಯಲಿಲ್ಲ! ಲಗ್ನ ಸಮಾರಂಭಗಳಲ್ಲಿ ಬೀಡಿ ಸಿಗರೇಟಗಳನ್ನೂ, ವಿಧವೆಯರು ಸಹ ಬೇಗ್ಗೆ ಚಹ ಕುಡಿಯುವದನ್ನೂ ರೂಢಿಯಲ್ಲಿ ಮರಾಟಿಗರೇ ತಂದಿರುತ್ತಾರೆ. ಬೀಡಿ, ಸಿಗರೇಟು, ಚಹಗಳು ಮುಂಬೈ ಪುಣೇಗಳಿಂದ ಮಾತ್ರ ಎಲ್ಲ ಕಡೆಗೆ ಜೊಂಪು ಹಾಕಿದವು! ... ಹೀಗೆ ಹಾರಾಡುವವನ್ನು, ಹುಡುಗರು—ಅಂದರೆ ಮರಾಟಿ ಹುಡುಗರೇ—ಕಾಲೇಜದಲ್ಲಿ ಪ್ರಸಾರ ಮಾಡಿ, ಕನ್ನಡ ವಿದ್ಯಾರ್ಥಿಗಳು ಕಲಿಯಲಿಯಲಿಕ್ಕೆಂದು ಪುಣೆಗೆ ಹೋಗಲು, ತಮ್ಮ ಚಟವನ್ನು ಕನ್ನಡ ವಿದ್ಯಾರ್ಥಿಗಳಿಗೆ ಹಚ್ಚಿದ್ದಾರೆ. ಈ ವಸ್ತುಸ್ಥಿತಿಯನ್ನು ಬಿಟ್ಟು, ಮಹಾಜನಿ ಪಂಡಿತರು ಆಧಾರವಿಲ್ಲದ ಸಂಗತಿಗಳನ್ನು ಕೂಗಿ ಹೇಳುವದೇಕೆ? 'ಕೇಸರಿ'ಯ ಕರ್ನಾಟಕದ ಸುದ್ದಿಗಾರನು ಹೇಳುವಂತೆ, ಕನ್ನಡ—ಮರಾಟಿ ವಾದವನ್ನು ಬೆಳೆಸುವದಕ್ಕೇನು?

* * * * *

ಇತ್ತಿತ್ತ ತರುಣ ತರುಣಿಯರು ಗಿಡ್ಡರಾಗುತ್ತಲಿದ್ದಾರೆ; ತರುಣರ ಕೂದಲುಗಳು ಬೇಗನೇ ಬೆಳ್ಳಗಾಗುತ್ತಲಿವೆ. ಆರ್ಯಧರ್ಮೀಯರಲ್ಲಿ ನಡೆದ ಈ ಅವಸ್ಥೆಯ ಬಗ್ಗೆ ಸಮಾಜ ಧುರೀಣರು ಏನು ಯೋಚಿಸುವರು? —ಓದುಗ

ವರ್ತಮಾನಸಾರ.

ಇಹವೃತ್ತ.

ಮಳೆಯು ಇಲ್ಲವೇ ಇಲ್ಲ!

ಮುಸ್ಕಿಳ ವಾರವು ೨೮ನೇ ತಾ|| ಗೆ ಪ್ರಾರಂಭವಾಗುವದು.

ಮನೋಹರ ಸ್ತ್ರೀ ಸಂಗೀತ ನಾಟಕ ಮಂಡಲದವರ ಹೊಸ ಹೊಸ ಪ್ರಯೋಗಗಳೇನೋ ನಡೆದಿವೆ. ಹಳೆಯ ಪರದೆ ಗಾಯನ ಶಾಂತಿ!

ಶ್ರೀಕೃಷ್ಣ ಸಂಗೀತ ಕನ್ನಡ ನಾಟಕ ಮಂಡಲದವರ ಮೊನ್ನಿನ 'ಸಂಶಯ ಸಾಮ್ರಾಜ್ಯ' ನಾಟಕವು ಚನ್ನಾಗಿ ಆಯಿತು. ಶ್ರೀ ದೇಶಪಾಂಡೆ ಗುರುರಾಯರ ಗಾಯನಕ್ಕೆ ಆ ದಿನ ಒಳ್ಳೇ ಕಳೆಯೇರಿತ್ತು. ಹಳೆಯ ನಾಟಕಗಳ ಹೊರತು ಮತ್ತಾವೂ ಇವರಿಗೆ ದೊರೆಯುವೇನೆಂಬ ರಸಿಕರ ಆಕ್ಷೇಪಣೆಯಿದೆ. ಈ ಮಂಡಳಿಯ ಬಗ್ಗೆ ನಮ್ಮ ಕಡೆಗೆ ಒಂದು ಪತ್ರ ಬಂದಿದ್ದು ಅದನ್ನು ನಾವು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ಮೈಸೂರ ಸರಕಾರದ ಗ್ಯಾಝೀಟ.

ಜಿ. ರ ದ್ರಪ್ಪನವರು ಬೆಂಗಳೂರಿನ ಸಿಟಿ ಮ್ಯಾಜಿಸ್ಟ್ರೇಟರಾಗಿಯೂ, ಬಿ. ಜಿ ರಾಮ ಅಯ್ಯರರು ಕೋಲಾರದ ಡೆಪುಟೀ ಕಮೀಶನರರಾಗಿಯೂ ನೇಮಿಸಲ್ಪಟ್ಟಿರುವರು.

ಮೈಸೂರಿನ ಚೀಫ ಕೋರ್ಟಿನ ಜಜ್ಜರಾದ ಸಿ. ಯಸ್. ದೊರೆಸ್ವಾಮಿ ಅಯ್ಯರರಿಗೆ ೨೭ ದಿನದ ರಜೆಯೂ, ಪಿ. ಜೆ. 'ಸೋಜಾ' ರೆವಿನ್ಯೂ ಕಮೀಶನರ ಇವರಿಗೆ ೧ ತಿಂಗಳ ರಜೆಯೂ ಕೊಡಲ್ಪಟ್ಟಿದೆ. ಡಿ ಸೋಜಾರವರ ಸ್ಥಾನಕ್ಕೆ ಎ. ಕೆ. ಸಯ್ಯದ ತಾಜ ಪೀರಾನರವರು ನೇಮಿಸಲ್ಪಟ್ಟಿದ್ದಾರೆ.

ಕೋಲಾರ ಚಿನ್ನದ ಗಣಿಯ ಅಸಿಸ್ಟಂಟ್ ಸರ್ಜನ್ನರಾದ ಶ್ರೀಮತಿ ರತ್ನಮ್ಮಾ ಇಝೂಕರಿಗೆ ೨ ತಿಂಗಳ ಬಾಣಂತಿ ರಜೆಯೂ, ತದನಂತರವಲ್ಲಿ ೨ ತಿಂಗಳ ಬಿನ್ ಭತ್ತೆಯ ರಜೆಯೂ ಕೊಡಲ್ಪಟ್ಟಿದೆ.

ಮೈಸೂರ ಕರ್ನಾಟಕ.

ಮೈಸೂರಿನ ವೃದ್ಧ ಪಿತಾಮಹರಾದ ಶ್ರೀ ಎಮ್. ವೆಂಕಟಕೃಷ್ಣಯ್ಯನವರ ೭೭ ನೇ ಹುಟ್ಟಿದ ದಿನವು ಅಗಸ್ಟ ೨೦ರಲ್ಲಿ ಆಗುವದು. ಆಗ್ಗೆ ಅವರಿಗೆ ಒಂದು ನಿಧಿಯನ್ನು ಕೊಡಬೇಕಾಗಿ, ಕರ್ನಾಟಕದ ಮಹನೀಯರ ವಿಚಾರವಿದೆ. ಕನ್ನಡಿಗರೆಲ್ಲ ಶಕ್ತ್ಯನುಸಾರ ಸಹಾಯ ಮಾಡತಕ್ಕದ್ದು.

ಮುಂಬೈ ಕರ್ನಾಟಕ.

ಕರ್ನಾಟಕ ಏಕೀಕರಣ ಸಭೆಯ ಕಾರ್ಯಕಾರೀ ಮಂಡಲವು ೧೦ನೇ ಜುಲೈ ಸಾಯಂಕಾಲ ೫ ಗಂಟೆಗೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನೆರೆಯುವದು. ಮೈಸೂರ ಮಹಾರಾಜರ ರಜತೋತ್ಸವದಲ್ಲಿ ಮಾನಪತ್ರ ಸಮರ್ಪಣೆ ಹಣ ಕೂಡಿಸುವದು ಶ್ರೀ ಕರಪಾರಾಯರ ಅಕಾಲ ಮರಣದ ಬಗ್ಗೆ ದುಃಖ ಪ್ರದರ್ಶನ; ಇವೇ ಮೊದಲಾದ ವಿಷಯಗಳು ಚರ್ಚಿಸಲ್ಪಡುವವು.

ಗಣಿತದ ಅಭ್ಯಾಸಕ್ಕಾಗಿ ಕೇಂಬ್ರಿಜ್ಜಿಗೆ ಹೋದ ಶ್ರೀ ಪಾವಟೇಯವರು ರ್‍ಯಾಂಗ್ಲರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರೆಂದು ತಿಳಿಸಲು ಸಂತೋಷವಾಗುತ್ತದೆ. ಕನ್ನಡ ಯುವಕರು ಮುಂದೊರೆಯುತ್ತಿರುವ ಸಮಯದಲ್ಲಿ ಇವರು ಉತ್ತೀರ್ಣರಾದ ಸುದ್ದಿಯು ಹಾಲಿನಲ್ಲಿ ಸಕ್ಕರೆ ಸೇರಿದಂತೆಯೇ ಸರಿ.

ಮದ್ರಾಸ ಕರ್ನಾಟಕ.

ಉದಕಮಂಡಲದಲ್ಲಿ ಕನ್ನಡ ಶಾಲೆಯನ್ನು ಸ್ಥಾಪಿಸುವದಕ್ಕಾಗಿ, ಅಲ್ಲಿಯ ಮುನಸೀಪಾಲಿಟಿಗೆ, ತಮ್ಮ ತಂದೆಯವರ ಪುಣ್ಯಸ್ಮರಣಕ್ಕಾ ನೀಲಗಿರಿಯ ಶ್ರೀ ಸಂಜೀವಯ್ಯನವರು ೨೫೦೦ ರೂ. ದಾನಮಾಡಲು ವಚನವನ್ನಿತ್ತಿದ್ದಾರೆ. ಕನ್ನಡಿಗರೆಲ್ಲ ಈ ಮಹನೀಯರನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ.

ಕೊಳ್ಳೇಗಾಲಿನಲ್ಲಿ ವಿಧವಾವಿವಾಹ ಸಂಘವು ಸ್ಥಾಪಿಸಲ್ಪಟ್ಟಿದ್ದು, ಅದರ ಪ್ರಚಾರದ ಕಾರ್ಯವು ಭರದಿಂದ ಸಾಗಿದೆ.

ಹೈದರಾಬಾದಿನ ಪರಿಷತ್ತುಗಳು.

ಜೂನ ೧೨-೧೩ನೇ ತಾ॥ ಗಳಲ್ಲಿ ಹೈದರಾಬಾದ ಹಿಂದೂ ಸಾಮಾಜಿಕ ಪರಿಷತ್ತು ಜರುಗಿತು. ಅಧ್ಯಕ್ಷರಾದ ಶ್ರೀಮತಿ ಸರಲಾದೇವಿ ಚೌಧುರಾಣಿಯವರು ಬಹಳ ಗಹನ ವಿಚಾರಗಳುಳ್ಳ ಸರಸವಾದ ಭಾಷಣ ಮಾಡಿದರು. ಈಗಿನ ಬ್ರಾಹ್ಮಣರು ಅಧೋಗತಿಗೆ ಮುಟ್ಟುತ್ತಿರುವರೆಂದೂ, ಉಚ್ಚ ಭಾವನಾಪ್ರೇರಿತರಾದ ಹೊಸ ಬ್ರಾಹ್ಮಣರು ಜನಿತರಾಗಬೇಕೆಂದೂ ಉಪದೇಶಿಸಿದರು,

ಮಹಾರಾಷ್ಟ್ರ ಭಾಷೆಗೆ ಸರಕಾರವು ದುರ್ಲಕ್ಷಿಸಬಾರದಾಗಿ ಒಂದು ಠರಾವು ಸಭೆಯಲ್ಲಿ ಬಂದಿತು. ಕನ್ನಡ ತೆಲಗರ ಸ್ಥಿತಿಯು ಹೈದರಾಬಾದಿನಲ್ಲಿ ಮರಾಟಿಯಂತೆಯೇ ಇದೆ ಆದುದರಿಂದ ಆ ಠರಾವಿನಲ್ಲಿ 'ಕನ್ನಡ ತೆಲಗು' ಈ ೭ ಶಬ್ದಗಳನ್ನು ಸೇರಿಸಬೇಕಾಗಿ ಕನ್ನಡ ಪ್ರತಿನಿಧಿಗಳು ಸಭೆಯಲ್ಲಿ ಸೂಚನೆ ತಂದರು; ಆ ಬಗ್ಗೆ ಬಹಳ ಗಲಾಟೆಯು [illegible] ಎಬ್ಬಿಸಿದರು. ಅದರ, ನ್ಯಾಯಮೂರ್ತಿ ಕೇಶವರಾಯರು ನಡುವೇ ಬಾಯಿ ಹಾಕಿ, "ಇದು ಮಹಾರಾಷ್ಟ್ರದ [illegible]; ಇದರಲ್ಲಿ ಕನ್ನಡ ಮತ್ತು ತೆಲಗರ ಸಂಬಂಧವೇ ಇಲ್ಲ!!" ಎಂದು ವಕ್ರವದನ ನಿರ್ಲಕ್ಷ್ಯ [illegible] ದರ್ಶ್ಯ ಅಧಿಕಾರ! ಮೇಲಾಗಿ ಮೊಗಲಾಯಿ! ಕನ್ನಡಿಗರ ಜಾಗೃತಿಯಾದರೂ ಅಷ್ಟಷ್ಟೇ ಈ ಕಾರಣಗಳಿಂದ ನ್ಯಾಯಮೂರ್ತಿಗಳು ತಮ್ಮ ಮಾತನ್ನು ಗೆದ್ದರೇನೋ ನಿಜ. ಆದರೆ ಬಾಗಲಕೋಟೆಯ 'ಕನ್ನಡಿಗ'ನ ೧೧ನೇ ಸಂಚಿಕೆಯಲ್ಲಿ ಪೂಜ್ಯ ಶ್ರೀ ಶೇಷಗಿರಿ ನರಸೋಪಂತರ ಮತವನ್ನಿಷ್ಟು ನಮ್ಮ ನ್ಯಾಯಮೂರ್ತಿಗಳು ಓದಿ, ಮನನ ಮಾಡಿದರೆ ಹಿತಕರವಾಗುವದು. ಕರ್ನಾಟಕ. ಕನ್ನಡಿಗರೆಂದರೆ ಇವರಿಗೆ ತಲೆಬೇಸರಿಕೆ! ಇರಲಿ! "ಹೈದರಾಬಾದ ಹಿಂದೂ ಸಾಮಾಜಿಕ ಪರಿಷತ್ತೆ"ಂದು ಹೆಸರಿದೆ, ಅಂದ ಮೇಲೆ ಈ ಪರಿಷತ್ತಿಗೆ, ಮರಾಟಿಗರೂ, ಕನ್ನಡಿಗರೂ, ತೆಲುಗರೂ ಎಲ್ಲರೂ ಅಷ್ಟೇ! "ಹೀಗಿದ್ದು, ಇದು ಮಹಾರಾಷ್ಟ್ರ'ದ ಪರಿಷತ್ತೆಂದು ನ್ಯಾಯಮೂರ್ತಿಗಳು ಸಾರಿದರು! ಹೈದರಾಬಾದಿನ ಹಿಂದೂ ಸಾಮಾಜಿಕ ಪರಿಷತ್ತೆಂದರೆ ಅದೇನು ಮರಾಟಿಗರ ಜಹಗೀರಿಯೇ? ಮಹಾರಾಷ್ಟ್ರ ಭಾಷೆಗೆ ಸರಕಾರದಿಂದ ಮನ್ನಣೆ ದೊರೆಯಬೇಕೆಂಬುದರಲ್ಲಿ ಕನ್ನಡ-ತೆಲಗು ಭಾಷೆಗಳ ಪ್ರವೇಶವಿದ್ದರೆ, ಯಾವ ಅನ್ಯಾಯವಾಗುತ್ತಿತ್ತು? ಆ ಮರಾಠೀಯ ಭಾಷೆಗಳಿಗೆ ಅವಕಾಶ ಕೊಡದಿರುವದೇ ಅನ್ಯಾಯವಾಯಿತು! ನ್ಯಾಯಮೂರ್ತಿಗಳು ಇನ್ನಾದರೂ ನ್ಯಾಯಾನ್ಯಾಯದ ನಿರ್ಣಯವನ್ನು ಕೊಡಲಿ!

ತಾ॥ ೧೦ರಲ್ಲಿ ಜರುಗಿದ ವಿದರ್ಭ ಸಾಹಿತ್ಯ ಪರಿಷತ್ತಿನವರು ನಿಜಾಮರವರಿಗೆ ಕೆಳಗಿನ ಬಿನ್ನಹಗಳನ್ನು ಮಾಡಿಕೊಂಡಿದ್ದಾರೆ. ಉಚ್ಚ ಶಿಕ್ಷಣದ ಶಾಲೆಗಳಲ್ಲಿಯ ಶಿಕ್ಷಣವನ್ನೆಲ್ಲ ಮರಾಟಿಯಿಂದಲೇ ನಡಿಸಬೇಕು. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಒಬ್ಬ ಮರಾಠೀ ಪ್ರೊಫೆಸರನನ್ನು ನಿಯಮಿಸಬೇಕು. ಕೇಸರಿ, ಜ್ಞಾನಪ್ರಕಾಶ, ಪತ್ರಿಕೆಗಳ ಮೇಲೆ ಹಾಕಿದ ನಿರ್ಬಂಧವನ್ನು ತೆಗೆದು ಮರಾಠಿ ಜನರಿರುವ ಭಾಗದ ಕೋರ್ಟು ಕಚೇರಿಯಲ್ಲಿ ಮರಾಠಿ ಭಾಷೆಯನ್ನು ಬಳಸಬೇಕು.

ಹೈದರಾಬಾದ ಮಹಿಲಾ ಸಭೆಯು ೧೫ನೇ ತಾರೀಖಿನಲ್ಲಿ ಜರುಗಿತು. ದೇವೀ ಚೌಧುರಾಣಿಯರು ಅಧ್ಯಕ್ಷರಿದ್ದರು, ಶ್ರೀಮತಿ ರುಕ್ಮಿಣಿದೇವಿಯವರು ಈ ಬಗ್ಗೆ ಪರಿಶ್ರಮಪಟ್ಟರು.

—ಹೈದರಾಬಾದಿನ ಓರ್ವ ಕನ್ನಡಿಗ.

ವಿಜಾಪೂರ ಜಿಲ್ಹೆಯ ಸುದ್ದಿಗಳು.

ಡಿ. ಡಿ. ಕಲೆಕ್ಟರ ಶ್ರೀ ಹಿರೇಮಠರ ಪ್ರವಾಸ:— ೨೭ ರಿಂದ ೩೦ ಬಾಗಲಕೋಟೆ.

ಬೀಳಗಿ:— ಈ ಭಾಗದಲ್ಲಿ ಮಳೆಯು ಚನ್ನಾಗಿ ಆಗಿದೆ. ಬಿತ್ತಿಗೆ ಮುಗಿದಿದೆ. ಕೆಲವು ಕಡೆಗೆ ನಾಟಿಗೆಯಾಗಿದೆ.

ಇಂಡಿ:— (೧) ಚಡಚಣದಲ್ಲಿ ಅಯ್ನಗಳ ತಿಂಡಿಗಾಗಿ, ಲಿಂಗಾಯತರಲ್ಲೇ ೭—೮ ಪಂಗಡಗಳಾಗಿವೆ. ಒಬ್ಬರಲ್ಲೊಬ್ಬರು, ಊಟದ ಬಳಕೆಯನ್ನಿಡದಾರದೆಂದು, ಒಂದೊಂದು ಪಂಗಡದವರ ಶಾಸನ! (೨) ಇಲ್ಲಿಯ "ವಾಗ್ವಿಲಾಸ ನಾಟಕ ಸಂಘ"ದ ಗೆಳೆಯರು, 'ಪೃಥ್ವೀರಾಜ' ವೆಂಬ ಆಖ್ಯಾಯಿಕೆಯನ್ನು ಕಲಿತಿರುವರು. ಕೆಲವು ಕಾರಣಗಳಿಂದ ಹುದುಗಿಕೊಂಡು ಕುಳಿತಿದೆ. (೩) ಭಕ್ತಗುಣಕಿ, ಇಲ್ಲಿಯ ಹೆಡ್ ಮಾಸ್ತರರು ಗೋಡಬೋಲೆಯವರು ಜಾಲಿಹಾಳ (ಬದಾಮಿ) ಕ್ಕೆ ವರ್ಗಾಯಿಸಲ್ಪಟ್ಟರು. (೪) ಒಕ್ಕಲತನದ ಸಾಲೆಯಿಂದಲೂ, ಕೃಷಿ-ಪ್ರದರ್ಶನದಲ್ಲಿ ಇಲ್ಲಿಯ ಹುಡುಗರ ಕಲೆಗೆ ಸಿಕ್ಕ ಬಹುಮಾನದಿಂದಲೂ ಈ ಸಾಲೆಯು ಹೆಸರಿಗೆ ಬಂದಿದೆ

ಹೋದ ವಾರದಲ್ಲಿ ಕೊಲ್ಹಾಪುರದಲ್ಲಿ ಢೋರ ಜಾತಿಯ ಹೆಣ್ಣುಮಗಳು ಮಾರಿಕಾದಿಂದ ಮಡಿದಳೆಂದು ತಿಳಿದ ನಂತರ ಹೆಣ್ಣುಮಗಳ ಕಳ್ಳಬಳ್ಳಿಯವರು ಸ್ಮಶಾನ ಕಡೆಗೆ ಒಯ್ಯುವ ತಯಾರಿಯನ್ನು ಮಾಡಿದರು. ಇನ್ನು ಹೆಣವನ್ನು ಎತ್ತತಕ್ಕವರು ಅಷ್ಟರಲ್ಲಿ ಇನ್ನೂ ಸತ್ತಿಲ್ಲವೆಂದು ತಿಳಿಯಿತು!! ಆ ಹೆಣ್ಣುಮಗಳು ಇನ್ನೂ ಜೀವಂತ ಇದ್ದು ಈಗ್ಗೆ ತಿರುಗಾಡುತ್ತಿರುವಳು.

ಬೆಳಗಾವಿ ಜಿಲ್ಹೆಯ ಭೋಜದಲ್ಲಿ ಒಂದು ಕೂಸು ಹುಟ್ಟಿರುತ್ತದೆ. ಅದರ ಎರಡೂ ಕಣ್ಣುಗುಡ್ಡಿಗಳಿಲ್ಲ. ಮೈತುಂಬ ಕೂದಲು ಇವೆ

ಶ್ರೀ ವಿದ್ಯಾರಣ್ಯರ ವಂಶಜರು ಈಗ ಎಲ್ಲಿದ್ದಾರೆ?

(ಲೇ:- ನಾ. ಶ್ರೀ. ರಾಜಪುರೋಹಿತ ಧಾರವಾಡ)

ಹತ್ತನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರಾದ ರಾವ ಬಹಾದ್ದೂರ ಎಚ್. ಕೃಷ್ಣಶಾಸ್ತ್ರಿಗಳವರು ತಮ್ಮ ಭಾಷಣದಲ್ಲಿ ಹೇಳಿದ್ದೇನೆಂದರೆ, "ಹಂಪೆಯ ಕೃಷ್ಣದೇವರ ಗುಡಿಗೆ ಸಮೀಪದಲ್ಲಿ ಕಮಲಾಪುರದಿಂದ ವಿರುಪಾಕ್ಷ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಒಂದು ನಾಲ್ಕು ಸ್ತಂಭದ ಮಂಟಪವಿದೆ. ಇದರಲ್ಲಿ ಕರೀಕಲ್ಲಿನ ಹಲಗೆಯ ಮೇಲೆ ಮುತ್ತುಗಳಂತಿರುವ ಸುಂದರಾಕ್ಷರಗಳಿಂದ ಕೆತ್ತಲ್ಪಟ್ಟ ಉತ್ಕೃಷ್ಟವಾದ ಶಾಸನವೊಂದುಂಟು. ಇದು ಶೀಘ್ರದಲ್ಲಿ ಪ್ರಚುರವಾಗಲಿರುವ ದಾಕ್ಷಿಣಾತ್ಯ ಶಾಸನಗಳೆಂಬ ಸಂಪುಟದಲ್ಲಿ ಮುದ್ರಿತವಾಗುತ್ತದೆ. ಇದು ವಿಜಯನಗರ ಪ್ರಭುವಾದ ಮೊದಲನೇ ದೇವರಾಯನ ಕಾಲದ್ದು. ದೇವರಾಯನ ಮುಖ್ಯ ಮಂತ್ರಿಯಾದ ಲಕ್ಷ್ಮೀಧರ ಅಮಾತ್ಯನಿಂದ ಪೋಷಿತನಾದ ಮಧುರ ಕವಿಯು ಈ ಶಾಸನವನ್ನು ರಚಿಸಿರುವನು. ಲಕ್ಷ್ಮೀಧರನು ಮಾಧವ-ಸಾಯಣರೆಂಬ ಮಹಾಪ್ರಧಾನರ ತಂಗಿಯಾದ ಸಿಂಗಲೆಗೂ ವಿಷ್ಣುವೃದ್ಧ ಗೋತ್ರದ ರಾಮರಸನಿಗೂ ಜನಿಸಿದವನು. ಈತನು "ಕನ್ನಡಿಗ ಕುಲಕ್ಕೆ ರನ್ನದ ಕನ್ನಡಿ" ಯೆಂದು ವರ್ಣಿಸಲ್ಪಟ್ಟಿರುವದರಿಂದ ಲಕ್ಷ್ಮೀಧರನ ಸೋದರ ಮಾವಂದಿರಾದ ಮಾಧವಸಾಯಣರೂ ಅಂದರೆ, ಮಾಧವಾಚಾರ್ಯ, ಸಾಯಣಾಚಾರ್ಯರೂ **ಕನ್ನಡಿಗ ಬ್ರಾಹ್ಮಣರೇ** ಆಗಿರಬೇಕೆಂದು ಸಿದ್ಧವಾಗುತ್ತದೆ."

ಈಗ ಕರ್ನಾಟಕ ದೇಶದಲ್ಲಿ "ಕನ್ನಡಿಗ ಬ್ರಾಹ್ಮಣರು" ಎಂಬ ಬ್ರಾಹ್ಮಣ ಪಂಗಡದವರು ಎಲ್ಲಿರುತ್ತಾರೆಂಬುದನ್ನು ಸಂಶೋಧನೆ ಮಾಡುತ್ತಿರಲು, ಶಿವಮೊಗ್ಗಾ ಜಿಲ್ಲೆಯಲ್ಲಿ.

(೧) ತ್ಯಾಗರ್ತಿ (ಶಿಕಾರಿಪುರ ತಾಲೂಕ)
(೨) ಗೌಜ (,,)
(೩) ಕಣ್ಣೂರು (,,)
(೪) ಕುಪ್ಪಗಡ್ಡಿ (ಸೊರಬ ತಾಲೂಕ)
(೫) ಎಲ್ಸಿ (,,)

ಈ ಐದು ಗ್ರಾಮಗಳಲ್ಲಿ ಇರುತ್ತಾರೆಂದು ಗೊತ್ತಾಯಿತು. ಅದು ಹೇಗೆಂದರೆ, ಈ ಐದು ಗ್ರಾಮಗಳಲ್ಲಿನ್ನ ಬೋಧಾಯನ ಶಾಖೆಯ ಬ್ರಾಹ್ಮಣರಿಗೆ "ಪಂಚಗ್ರಾಮ ಬ್ರಾಹ್ಮಣರು" ಎಂದು ಹೆಸರಿದೆ. ಈ ಬ್ರಾಹ್ಮಣರ ಮನೆತನಗಳಲ್ಲಿ ತಾಮ್ರಶಾಸನಗಳುಂಟು. ಇವುಗಳಲ್ಲಿ ಎರಡು ಶಾಸನಗಳು "ಶಿವಮೊಗ್ಗಾ ಜಿಲ್ಲೆಯ ಶಾಸನ ಪುಸ್ತಕ"ದಲ್ಲಿ ಮುದ್ರಿಸಲ್ಪಟ್ಟಿವೆ. (೧) ಸೊರಬ ತಾಲೂಕ ೧೮೩ನೆಯ ತಾಮ್ರಶಾಸನ (ಕುಪ್ಪಗಡ್ಡಿಯ ತಾಮ್ರಪಟ*), (೨) ಶಿಕಾರಿಪುರ ತಾಲೂಕ ೪೫ನೆಯ ತಾಮ್ರಶಾಸನ (ಗೌಜದ ತಾಮ್ರಪಟ†) ಈ ಎರಡು ತಾಮ್ರಪಟಗಳಲ್ಲಿ ಈ ಬ್ರಾಹ್ಮಣರು **ಕನ್ನಡ ಶಾಖೆ**ಯವರೆಂದು ಹೇಳಲ್ಪಟ್ಟಿದ್ದಾರೆ. ಅರ್ಥಾತ್ ಈ ಬೋಧಾಯನ ಶಾಖೆಯು "ಕನ್ನಡಶಾಖೆ"ಯೆಂದು ಸಂಬೋಧಿಸಲ್ಪಟ್ಟಿರುವದರಿಂದ "ಕನ್ನಡ ಬ್ರಾಹ್ಮಣ"ರೆಲ್ಲರೂ ಬೋಧಾಯನ ಶಾಖೆಯವರೇ ಮಾತ್ರ ಇದ್ದಿರಬೇಕೆಂದು ವ್ಯಕ್ತವಾಗುತ್ತದೆ. ವಸ್ತುಸ್ಥಿತಿಯೂ ಹೀಗೆಯೇ ಇರುತ್ತದೆ. "ಕನ್ನಡಿಗ ಬ್ರಾಹ್ಮಣ"ರಾದ ಶ್ರೀ ವಿದ್ಯಾರಣ್ಯರೂ ಸಾಯಣಾಚಾರ್ಯರೂ ಮತ್ತು ಲಕ್ಷ್ಮೀಧರನೂ ಬೋಧಾಯನ ಶಾಖೆಯವರೆಂಬುದು ಪ್ರಸಿದ್ಧವಾಗಿಯೇ ಇದೆ.

ಇತ್ಯರ್ಥವೇನೆಂದರೆ, ಬೋಧಾಯನ ಶಾಖೆಯವರಾದ ಈ ಪಂಚಗ್ರಾಮ ಬ್ರಾಹ್ಮಣರೇ "ಕನ್ನಡಿಗ ಕುಲ"ದ ಬ್ರಾಹ್ಮಣರೆಂಬುದು ಧಾರಾಳವಾಗಿ ವ್ಯಕ್ತವಾಗುತ್ತದೆ. ಆತಏವ ಇವರೇ ಶ್ರೀ ವಿದ್ಯಾರಣ್ಯರ ವಂಶಜರೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ

*ಕುಪ್ಪಗಡ್ಡಿಯ ತಾಮ್ರಪಟದ ಕಾಲ ಕ್ರಿ. ಶ. ೧೧೧೩.

†ಗೌಜದ ತಾಮ್ರಪಟದ ಕಾಲ ಕ್ರಿ. ಶ. ೧೧೯೨.

ಶ್ರೀ ವಿದ್ಯಾರಣ್ಯ.

ಜ್ಞಾನಿನಾಂ ಚರಿತುಂ ಶಕ್ಯಂ ಸಮ್ಯಗ್ರಾಜ್ಯಾದಿ ಲೌಕಿಕಮ್ ॥ ಪಂಚದಶೀ

ಶ್ರೀ ವಿದ್ಯಾರಣ್ಯರು ಮಹಾ ವಿಭೂತಿಗಳಾದುದರಿಂದ ಅವರಲ್ಲಿ ಏಕಕಾಲಕ್ಕೆ ಅನೇಕ ಸದ್ಗುಣಗಳ ಸಂಚಯವು ಸಮನ್ವಯದಿಂದ ಇರುವದನ್ನು ನಾವು ನೋಡಬಹುದು. ಸಾಮಾನ್ಯರಲ್ಲಿ ಒಂದೊಂದು ಗುಣವು ಕಂಡು ಬರುವದೂ ಸಹ ದುರ್ಲಭ. ಆದರೆ ವಿಭೂತಿಗಳ ಸ್ಥಿತಿಯು ಹಾಗಿರಲಾರದು. ಯಾವದೊಂದು ದೇಶಕಾಲಗಳ ವಿಶಿಷ್ಟ ಪರಿಸ್ಥಿತಿಯಲ್ಲಿ ವಿಶೇಷ ಸ್ಥಿತ್ಯಂತರಗಳನ್ನು ಮಾಡುವದಕ್ಕಾಗಿಯೇ ಅವರ ಜನ್ಮವಿರುವದರಿಂದ ಅವರಲ್ಲಿ ಆ ಅನೇಕ ಸದ್ಗುಣ, ಶಕ್ತಿಸಾಮರ್ಥ್ಯಗಳ ಏಕೀಕರಣವು ಇದ್ದೇ ಇರುತ್ತದೆ. ಆದರೆ ಅವರ ವಿಷಯಕ್ಕೆ ಬರೆಯುವಾಗ ಅವರ ಸಕಲ ಸದ್ಗುಣಗಳನ್ನು ಪರಿಶೀಲಿಸುವದು ದುರ್ಲಭವು. ಇದಲ್ಲದೆ ಶ್ರೀಮದ್ವಿದ್ಯಾರಣ್ಯರ ನಿಜವಾದ ಮತ್ತು ವಿಸ್ತೃತ ಇತಿಹಾಸವು ಇನ್ನೂ ಬರೆಯಲ್ಪಡಬೇಕಾಗಿದೆ. ಅವರ ಅನೇಕ ಕಾರ್ಯಕಲಾಪಗಳು ಇನ್ನೂ ಆವಿಷ್ಕೃತವಾಗಿಲ್ಲ. ಅವರ ರಾಜಕೀಯ ಕಾರ್ಯ ಮುಂತಾದವುಗಳ ಬಗ್ಗೆ ಕೇವಲ ನಾಮ ನಿರ್ದೇಶವು ಮಾತ್ರ ಕಂಡುಬರುವದು. ಆದರೆ ಪ್ರತ್ಯಕ್ಷ ಯಾವ ಮಹತ್ಕಾರ್ಯಗಳು ಅವರ ಕೈಯಿಂದಾದವೆಂಬುದನ್ನು ಹೇಳಲಸಾಧ್ಯವಾಗಿದೆ. ಇಂಥ ಪ್ರಸಂಗದಲ್ಲಿ ನಾನು ಅವರ ಒಂದೇ ಒಂದು ಉಕ್ತಿಯನ್ನು ಎತ್ತಿ ಅದರ ಬಗ್ಗೆ ನಾಲ್ಕು ನುಡಿಗಳನ್ನು ಬರೆಯುತ್ತಲಿದ್ದೇನೆ.

'ಪಂಚದಶೀ' ಎಂಬ ಪ್ರಸಿದ್ಧ ವೇದಾಂತ ಗ್ರಂಥದಲ್ಲಿ ೧೫ ಅಧ್ಯಾಯಗಳು. ಅವುಗಳಲ್ಲಿ ಮೊದಲಿನ ಆರು ಅಧ್ಯಾಯಗಳನ್ನು ಮಾತ್ರ ಶ್ರೀ ವಿದ್ಯಾರಣ್ಯರು ಬರೆದರು. ಮಿಕ್ಕವುಗಳನ್ನು ಭಾರತೀ ತೀರ್ಥರು ಬರೆದರೆಂದು ಪಂಡಿತರು ಹೇಳುವರು. ಮೇಲೆ ಉದಾಹರಿಸಿದ ಉಕ್ತಿಯು ಮೊದಲಿನ ಆರು ಅಧ್ಯಾಯಗಳಲ್ಲಿಲ್ಲದಿದ್ದರೂ ಅದನ್ನು ಭಾರತೀ ತೀರ್ಥರು ಬರೆದಿದ್ದರೂ ಅದು ಮೊದಲಿನ ಆರು ಅಧ್ಯಾಯಗಳಲ್ಲಿ ಹೇಳಿದ ವೇದಾಂತ ತತ್ವಗಳ ಪೂರಕವೆಂದೇ ಬರೆಯಲ್ಪಟ್ಟಿರುವದೆಂಬಲ್ಲಿ ಯಾವ ಸಂಶಯವೂ ಇಲ್ಲ. ಆ ದೃಷ್ಟಿಯಿಂದ ಆ ಉಕ್ತಿಯ ಕಡೆಗೆ ನಾವು ನೋಡಬೇಕಾಗಿದೆ.

ಈ ಮೇಲಿನ ಉಕ್ತಿಯಲ್ಲಿ ಒಂದು ಬಹಳ ಮಹತ್ವದ ವೇದಾಂತದ ಪ್ರಶ್ನೆಗೆ ಸ್ಪಷ್ಟವಾದ ಉತ್ತರವಿದೆ ಮತ್ತು ಶ್ರೀ ವಿದ್ಯಾರ

ಣ್ಯರ ಪ್ರತ್ಯಕ್ಷ ಉದಾಹರಣವನ್ನು ಇಟ್ಟುಕೊಂಡು ಈ ಉತ್ತರವು ಕೊಡಲ್ಪಟ್ಟಿದೆ. ಆದುದರಿಂದಲೇ ಅದರಲ್ಲಿ 'ಸನ್ಯ ಗ್ರಾಜ್ಯಾದಿ ಲೌಕಿಕವ್' ಎಂಬ ಶಬ್ದಗಳಿಗೆ ಭಾರತೀ ತೀರ್ಥರು ಈ ವಾಕ್ಯವನ್ನು ಬರೆಯುವಾಗ ಅವರ ಮುಂದೆ ಶ್ರೀಮದ್ವಿದ್ಯಾರಣ್ಯರಲ್ಲಿರುವ ಜ್ಞಾನವೃತ್ತಿ ಮತ್ತು ಕರ್ಮವೃತ್ತಿಗಳ ಸಮನ್ವಯವು ಕಣ್ಣಿದುರಿಗಿರಲಿಕ್ಕೆ ಸಾಕು. ಪೌರಾಣಿಕ ಕಾಲದಲ್ಲಿ ಈ ತರದ ಉದಾಹರಣೆಯನ್ನು ಕೊಡಬೇಕಾದರೆ ಜನಕರಾಜನ ಹೆಸರು ಹೇಳುವ ಪರಿಪಾಠವಿರುವದು. ಒಂದು ಬಗೆಯಿಂದ ಶ್ರೀ ವಿದ್ಯಾರಣ್ಯರ ಉದಾಹರಣೆಯು ಅದಕ್ಕೂ ಮೇಲು ಎಂದು ಹೇಳಬಹುದು ಜನಕರಾಜನು ಹುಟ್ಟಾ ಕ್ಷತ್ರಿಯನು. ಸ್ವಾಭಾವಿಕವಾಗಿ ಅವನು ರಾಜ್ಯವನ್ನಾಳುತ್ತಿದ್ದನು. ಮುಂದೆ ತನ್ನ ಸಾಧನದಿಂದಲೂ ಪರಮಾತ್ಮಾನುಗ್ರಹದಿಂದಲೂ ಜ್ಞಾನಿಯಾದರೂ ಅವನು ತನ್ನ ಪೂರ್ವ ವ್ಯವಹಾರಗಳನ್ನು ಬಿಡದೇ ಹಾಗೆಯೇ ಮುಂದೆ ಸಾಗಿಸಿದನೆಂದು ಹೇಳಬಹುದು. ಆದರೆ ವಿದ್ಯಾರಣ್ಯರ ಸ್ಥಿತಿಯು ಹಾಗಿರಲಿಲ್ಲ. ಇವರು ಬ್ರಾಹ್ಮಣ ಕುಲದಲ್ಲಿ ಹುಟ್ಟಿದರು. ಇವರಿಗೆ ರಾಜಕಾರಣದ ಸೊಂಕು ಸಹ ಮೊದಲು ಇರಲಿಲ್ಲ. ಆದರೆ ಮುಂದೆ ರಾಷ್ಟ್ರದ ಸ್ಥಿತಿಯನ್ನು ನೋಡಿ ಧರ್ಮಗ್ಲಾನಿಯನ್ನು ಹೋಗಲಾಡಿಸುವದಕ್ಕಾಗಿ ಅವಶ್ಯವಿದ್ದ ರಾಜಕಾರಣವನ್ನು ಕೈಕೊಂಡು ಜಗತ್ತಿನ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಲಿಕ್ಕೆ ಯೋಗ್ಯವಾದಂಥ ಸಾಮ್ರಾಜ್ಯವನ್ನು ಸ್ಥಾಪಿಸಲು, ಸ್ಥಿರಗೊಳಿಸಲು, ಸಹಾಯ ಮಾಡಿದರು. ತಾವು ಸ್ವತಃ ಎಲ್ಲ ಕಾಮನೆಗಳನ್ನು ಗೆದ್ದು 'ಆತ್ಮನ್ಯೇವಾತ್ಮನಾ ತುಷ್ಟಃ' ಎಂಬ ಉಚ್ಚ ಸ್ಥಿತಿಗೆ ಹೋದರೂ ಕೇವಲ 'ಸತ್ವಾನುಕಂಪೋದ್ಯತರಾ'ಗಿ ಕರ್ನಾಟಕದ ಮತ್ತು ವೈದಿಕ ಧರ್ಮದ ಉದ್ಧಾರಕ್ಕಾಗಿ ಅನೇಕ ಶ್ರೇಷ್ಠ ಕರ್ಮಗಳನ್ನು ಕೈಕೊಂಡು ಉತ್ತಮರೀತಿಯಿಂದ ಅವುಗಳನ್ನು ಕೊನೆಗಾಣಿಸಿದರು.

ಇನ್ನು ಮೇಲಿನ ವಾಕ್ಯದಲ್ಲಿ 'ಶಕ್ಯಂ' ಎಂಬ ಶಬ್ದಪ್ರಯೋಗವಿರುವದರಿಂದ ಈ ಪ್ರಶ್ನೆಯ ಬಗ್ಗೆ ವಾದವಿವಾದ ಅಥವಾ ಸಂಶಯವು ಪಂಡಿತರಲ್ಲಿ ಪ್ರಚಲಿತವಿತ್ತೆಂಬದು ಸ್ಪಷ್ಟವದೆ. ಈ ವಾದವು ಪ್ರಚಲಿತವಿತ್ತು ಎಂದು ಹೇಳುವದಕ್ಕಿಂತಲೂ ಈ ವಾದವು ಯಾವಾಗಲೂ ಇದ್ದೇ ಇರುವದೆಂದು ಹೇಳಬಹುದು. ಪ್ರವೃತ್ತಿ ನಿವೃತ್ತಿಗಳು ಅನ್ಯೋನ್ಯ ಬಾಧ್ಯ ಬಾಧ್ಯಕಗಳು, ಒಂದಿದ್ದಲ್ಲಿ ಇನ್ನೊಂದಿರಲಾರದು, ಅವು ಪರಸ್ಪರ ವಿರೋಧಿಗಳು ಮುಂತಾದ ವಿಚಾರಗಳು ಹೊಸವಲ್ಲ. ಆದರೆ ಈ ವಾದಕ್ಕೆ ವೇದಕಾಲದಿಂದಲೂ ಉತ್ತರವು ಕೊಡಲ್ಪಡುತ್ತಲೇ ಬಂದಿದೆ ಎಂದು ಹೇಳಬಹುದು. ಕೇವಲ ತರ್ಕ ದೃಷ್ಟಿಯಿಂದ ನೋಡುವವರು ಪ್ರವೃತ್ತಿಯು ನಿವೃತ್ತಿಗೆ ಪೂರ್ಣವಾಗಿ ವಿರೋಧಕವೆಂದು ಹೇಳಿದರೂ 'ಕುರ್ವನ್ನೇವೇಹ ಕರ್ಮಾಣಿ' 'ನಹಂತಿ ನ ನಿಬಧ್ಯತೇ' 'ನಿವೃತ್ತಕರ್ಮ' ಮುಂತಾದ ಈಶಾವಾಸ್ಯ, ಗೀತಾ ಮನುಸ್ಮೃತಿಗಳಲ್ಲಿಯ ಉಕ್ತಿಗಳನ್ನು ನೋಡಿದರೆ ಆತ್ಮನು ಒಂದು ವಿಶಿಷ್ಟ ಸ್ಥಿತಿಗೆ ಮುಟ್ಟಿದನೆಂದರೆ ಅಥವಾ ಸ್ವಸ್ವರೂಪಜ್ಞಾನವನ್ನು ಪಡೆದನೆಂದರೆ ಅವನು ಪ್ರವೃತ್ತಿಯಲ್ಲಿರತನಿದ್ದರೂ ಅವನ ಅಂತರಂಕ ನಿವೃತ್ತ ಮುದ್ರೆಯು ನಷ್ಟವಾಗಲಾರದೆಂದು ಸ್ಪಷ್ಟವಿದೆ!! ಕೇವಲ ನಿವೃತ್ತ ಸಮಾಧಿಸ್ಥಿತಿಯು ಶ್ರೇಷ್ಠವೋ ಅಥವಾ ಈ ಬಗೆಯ ನಿವೃತ್ತ ಕರ್ಮದಲ್ಲಿರತರಿರುವದು ಶ್ರೇಷ್ಠವೋ ಎಂದು ಕೆಲವರು ಕೇಳಬಹುದು. ಇದಕ್ಕೆ ಉತ್ತರ ಕೊಡಬೇಕಾದರೆ ಎರಡು ರೀತಿಯಿಂದ ವಿಚಾರ ಮಾಡಲಿಕ್ಕೆ ಬೇಕು. ಸ್ವತಃ ಜ್ಞಾನಿಯ ದೃಷ್ಟಿಯಿಂದ ಮತ್ತು ಜಗತ್ತಿನ ದೃಷ್ಟಿಯಿಂದ ವಿಚಾರ ಮಾಡಲಿಕ್ಕೆ ಬೇಕು. ಜ್ಞಾನಿಗೆ ಈ ಎರಡೂ ಸ್ಥಿತಿಗಳು ಸಮಸಮಾನವಾದವುಗಳು. ಇವುಗಳಲ್ಲಿ ಶ್ರೇಷ್ಠ ಕನಿಷ್ಠ ಅಥವಾ ಎಡಬಲ ಯಾವು ಇಲ್ಲ ಜ್ಞಾನಸ್ಥಿತಿಯು ಪ್ರಾಪ್ತವಾದ ಮೇಲೆ ಜ್ಞಾನಿಯು ಜ್ಞಾನಾನಂದದಲ್ಲಿ ನಿಮಗ್ನನಾಗಿರುವದೂ ಅಷ್ಟೇ. ಪರಮಾತ್ಮ ಪ್ರೇರಿತಲೀಲಾಕರ್ಮಗಳಲ್ಲಿ ಪ್ರವೃತ್ತನಾಗಿರುವದೂ ಅಷ್ಟೇ. ಲೋಕದ ದೃಷ್ಟಿಯಿಂದ ಇಂಥ ಜ್ಞಾನಿಯು ಕರ್ಮದಲ್ಲಿ ಹೊಕ್ಕು ಸಮಾಜಾದಿಗಳ ಕಾರ್ಯವನ್ನು ಮಾಡುವದು ಶ್ರೇಯಸ್ಕರವು. ಯಾಕಂದರೆ ಅದರಿಂದ ಸಮಾಜಕ್ಕೆ ಅನೇಕಾನೇಕ ಲಾಭಗಳಾಗುವ ಸಂಭವವಿರುವದು.

ಆದರೆ ಹಾಗೆ ಜ್ಞಾನಿಯು ಕರ್ಮಭೂಮಿಯಲ್ಲಿಳಿದು ರಾಜ್ಯಾದಿಗಳನ್ನು ಮಾಡುವದಾಗಲಿ, ಸ್ವಸ್ವ ಜ್ಞಾನಮುದ್ರೆಯಲ್ಲಿ ರತನಾಗಿ ಕೂಡ್ರುವದಾಗಲಿ ಇವೆರಡೂ ಯಾರ ಕೈಯಲ್ಲಿಯೂ ಇಲ್ಲ ಯಾವ ವ್ಯಕ್ತಿಯ ಸಂಕಲ್ಪದ ಮೇಲೂ ಅವಲಂಬಿಸಿಲ್ಲ. ಅದು ಪರಮಾತ್ಮ ಪ್ರೇರಣೆಯೇ ಹೊರತು ಜ್ಞಾನಿಯು ಹೀಗೆ ಮಾಡಬೇಕು ಹಾಗೆ ಮಾಡಬೇಕು ಎಂದು ನಾವು ಅನ್ನಲಾಗದು ಅಂದರೂ ಅದು ವ್ಯರ್ಥ. ಆದುದರಿಂದ ಹೀಗೆ ಮಾಡುವದ ಶ್ರೇಷ್ಠ ಎಂದು ಜ್ಞಾನಿಗೆ ಯಾರೂ ಅಪ್ಪಣೆ ಕೊಡಿಸಲಾರರು. ಇದನ್ನು ನಾವು ಲಕ್ಷದಲ್ಲಿಟ್ಟರೆ ಕರ್ಮ ಪ್ರವೃತ್ತಿಯಲ್ಲಿಯೇ ರತರಾದವರು ನಾವು ಜ್ಞಾನಿಗಳಿಗೆ ಸಹಸಾ ಅವರು ಹೀಗೆ ಏಕೆ ಮಾಡುವದಿಲ್ಲ ಹಾಗೆ ಏಕೆ ಮಾಡುವದಿಲ್ಲವೆಂದು ಎಂದಿಗೂ ಅನ್ನಲಾರೆವು. ಜ್ಞಾನಿಗೆ ತನ್ನ ಬುದ್ಧಿ ಅಥವಾ ವಿವೇಕ ಇವುಗಳಿಗಿಂತ ಪರಮಾತ್ಮ ಪ್ರೇರಣೆಯೇ ಪ್ರೇರಕವಾಗಿರುವದು. ನಾವು ಅವನ ಕಾರ್ಯ ಕಲಾಪಗಳನ್ನು ನಮ್ಮ ಬುದ್ಧಿ ಅಥವಾ ಸಾಮಾನ್ಯ ವಿವೇಕದಿಂದ ಕೆಡಕು ಅಥವಾ ಒಳಿತು ಎಂಬುವದು ತಪ್ಪಾಗುವದು. ಆದರೆ ಜ್ಞಾನಿಯು ಕರ್ಮ ಮಾಡಲಾರನು ಅಥವಾ ಮಾಡಬಾರದು ಎಂಬದು ಪೂರಾ ತಪ್ಪು. ಅವನು ಮಾಡಬಲ್ಲನು, ಅವನು ಅತ್ಯಂತ್ಯ ಶ್ರೇಷ್ಠ ಕಾರ್ಯವನ್ನು ಮಾಡುವದು ಶಕ್ಯವು ಎಂಬದನ್ನು ನಾವು ಮುಖ್ಯವಾಗಿ ಲಕ್ಷದಲ್ಲಿಡಬೇಕು. ಅಂದರೆ ಕೇವಲ ನಿವೃತ್ತಿಯೇ ಶ್ರೇಷ್ಠ, ಮೋಕ್ಷಕ್ಕೆ ಅದೇ ಅವಶ್ಯ ಎಂಬ ಏಕಾಂಗಿಯಾದ ತಪ್ಪು ತಿಳುವಳಿಕೆಯು ಹೋಗಿ ನಿವೃತ್ತಿಗಳ ಪ್ರವೃತ್ತಿಗಳ ಸಮನ್ವಯವು ಶಕ್ಯವು. ಅದರಿಂದಾದರು ಮೋಕ್ಷವು ಸುಲಭವು ಎಂಬುದು ವಿದ್ಯಾರಣ್ಯಾದಿಗಳ ಪ್ರತ್ಯಕ್ಷ ಸ್ಪಷ್ಟವಾಗುವದು.

ರಂಗರಾವ ದಿವಾಕರ.

"ಕನ್ನಡಿಗ"ನಿಗೆ ರಜೆ.

"ವಿದ್ಯಾರಣ್ಯ" ಪುಣ್ಯತಿಥಿಯ ಬಗ್ಗೆ ವಾಡಿಕೆಯಂತೆ "ಕನ್ನಡಿಗ"ನಿಗೆ ಮುಂದಿನ ವಾರದಲ್ಲಿ ರಜೆಯಿದೆ. ಜು.ಲೈ ೧೨ ನೇ ತಾರೀಖಿನಲ್ಲಿ ೧೪ ನೇ ಸಂಚಿಕೆಯು ಹೊರಡುವದು.

ವ್ಯವಸ್ಥಾಪಕ.

ರಾಷ್ಟ್ರಕಾರ್ಯವೂ ವಿದ್ಯಾರಣ್ಯರ ಉಪದೇಶವೂ.

ವಿದ್ಯಾ:—ಹರಿಯಣ್ಣಾ, ಮನುಷ್ಯನಿಗಿರುವ ಶಕ್ತಿ ಸಂಪತ್ತಿಗಳು ಅವನು ಕೈಗೊಳ್ಳುವ ಕಾರ್ಯದ ಮಹಿಮೆಯಿಂದ ಬೆಳೆಯುವವು. ಅಲ್ಲದೆ, ಈಗಿನ ಸನ್ನಿವೇಶವನ್ನು ನೋಡು. ಉತ್ತರ ದೇಶದಲ್ಲಿ ಅಲ್ಲಲ್ಲಿ ರಾಜ್ಯ ಸಂಕ್ಷೋಭೆಯಾಗಿ ಸುಲ್ತಾನನ ದರ್ಪವು ಕುಗ್ಗುತ್ತಿರುವುದೆಂದು ಕಾಶೀ ಪ್ರಾಂತದಿಂದ ಶೃಂಗಗಿರಿಗೆ ಬಂದ ಯಾತ್ರಿಕರಿಂದ ಕೇಳಿದ್ದೇನೆ. ಇಂತಹ ವೇಳೆಯಲ್ಲಿ ದೆಹಲಿಯವರ ಗಮನವು ಈ ಕಡೆಗೆ ಹೆಚ್ಚಾಗಿ ತಿರುಗುವಂತಿಲ್ಲ. ಇಲ್ಲಿಯ ಪ್ರಜೆಗಳ ಮನಃಸ್ಥಿತಿಯನ್ನು ನೋಡಿದರೆ ನಿನ್ನ ಧೀರತೆಯು ಪ್ರಕಾಶಗೊಳ್ಳಲು ಇದಕ್ಕಿಂತ ಅನುಕೂಲವಾದ ಸಮಯವು ಎಂದಿಗೂ ದೊರೆಯದೆಂದು ತೋರುತ್ತದೆ ಒಂದು ಕಡೆ ನಮ್ಮ ಶ್ರೀ ವಿದ್ಯಾತೀರ್ಥ ಗುರುಗಳ ಪ್ರಭಾವ; ಇನ್ನೊಂದು ಕಡೆ ಮಹಾ ಪಂಡಿತರಾದ ವೇದಾಂತದೇಶಿಕರ ಉಪದೇಶಾತಿಶಯ; ಮತ್ತೊಂದು ಕಡೆ ಪರಮ ಭಕ್ತರಾದ ಅಕ್ಷೋಭ್ಯತೀರ್ಥ ಮುನಿಗಳ ತತ್ತ್ವಪ್ರಚಾರ; ಇವರ ಜೊತೆಗೆ ಕ್ರಿಯಾಶಕ್ತ್ಯಾಚಾರ್ಯರು ಮೊದಲಾದ ಪರಮ ಶೈವರ ಬೋಧನೆ. ಹೀಗೆ ನಾನಾ ರೀತಿಗಳಲ್ಲಿ ಜನರ ಧರ್ಮೋತ್ಸಾಹವು ಕಾಂತಿಗೊಂಡು ಕಲೆಯುತ್ತಿದೆ. ಮೈಮರೆತು ನಿದ್ರಿಸುತ್ತಿದ್ದವರು ತಸ್ಕರ ಬಾಧೆಗೆ ಸಿಕ್ಕಿದ ಬಳಿಕ ಜಾಗರೂಕರಾಗುವಂತೆ, ಹಿಂದೂ ಜನರು ಪರಮತೀಯರಿಂದ ಹಿಂಸಿತರಾದ ಬಳಿಕ ಸ್ವಮತದಲ್ಲಿ ಅಭಿಮಾನಿಗಳಾಗುತ್ತಿರುವರು ಹರಿಹರೇಶ್ವರಾ ನಿನ್ನ ದೇಶಕ್ಕೂ, ದೇಶಧರ್ಮಕ್ಕೂ ಒದಗಿರುವ ವಿಪತ್ತನ್ನು ಪರಿಹರಿಸಲು ಇದೀಗ ತಕ್ಕ ಸಮಯ. ಧೀರನೊಬ್ಬನು ಈಗ ಮುಂದಾಳಾಗಿ ನಿಂತರೆ ಅವನಿಗೆ ಬೆಂಬಲವಾಗಿರಲು ದೇಶೀಯರೆಲ್ಲರೂ ಸಿದ್ಧರಾಗಿರುವರು. ಈಗ ನೀನು ಶೌರ್ಯ ಸಾಹಸಗಳನ್ನು ತೋರಿದರೆ ಜಯಶಾಲಿಯಾಗುವದು ದಿಟ. ಏನು ಹೇಳುವೆ?

ಹರಿ:—ಇಂತಹ ದೂರದೃಷ್ಟಿಯಿಂದ ಮಾಡಿದ ಉಪದೇಶಕ್ಕೆ ನಾನು ಪ್ರತ್ಯುತ್ತರ ಹೇಳಬಹುದೆ?

ವಿದ್ಯಾ:—ಸಂದೇಹವೇನಿದ್ದರೂ ಹೇಳು. ಮಹಾ ಕಾರ್ಯಕ್ಕೆ ಹೊರಡುವವನು ಉತ್ಸಾಹ ಮೂರ್ತಿಯಾಗಿರಬೇಕು. ಶಂಕೆಯು ಉಳ್ಳವನ ಮನಸ್ಸಿನ ಉತ್ಸಾಹವು ಕುಂಟು ಕುದುರೆಯ ಓಟದಂತೆ.

ಹರಿ:—ಮತ್ತಾವ ಶಂಕೆಯೂ ಇಲ್ಲ; ದೇವರು ನನಗೆ ಯೋಗ್ಯತೆ ಕೊಟ್ಟಿರುವನೆ— ಎಂಬುದೊಂದೇ.

ವಿದ್ಯಾ:—ಹರಿಯಣ್ಣಾ, ಆ ವಿಚಾರವನ್ನು ಮರೆತುಬಿಡು ಬಾಣಸೇತು ನಿರ್ಮಾಣ ಕಾಲದಲ್ಲಿ ಅಳಿಲು ತನ್ನ ಯೋಗ್ಯತೆಯನ್ನು ಚಿಂತಿಸುತ್ತಿದ್ದಿತೆ? ರಣರಂಗದಲ್ಲಿ ನಿಂತ ವೀರನು ಬಲಾಬಲ ವಿಮರ್ಶೆಯನ್ನು ಬಿಟ್ಟು, ಉಸಿರಿರುವ ವರೆಗೂ ಮೈಮರೆತು ಹೋರಾಡುವುದಿಲ್ಲವೆ? ದೊಡ್ಡ ಕೆಲಸಕ್ಕೆ ಕೈಹಾಕಿದವನು ಹಾಗೆ ಮೈಮರೆತಿರಬೇಕು.. ...ಹರಿಯಣ್ಣಾ, ನೀನು ಎಂದಾದರೂ ಏಕಾಕಿಯಾಗಿ ಸಮುದ್ರತೀರದಲ್ಲಿ ನಿಂತು ಅದರ ತರಂಗವಿನ್ಯಾಸವನ್ನೇ ಎವೆಯಿಕ್ಕದೆ ನೋಡುತ್ತಿದ್ದೆಯಾ?

ಹರಿ:—ಎಷ್ಟೋ ಬಾರಿ ಹಾಗೆ ಮಾಡಿದ್ದೇನೆ. ಅಲ್ಲಿ ನಿಂತರೆ ಹಿಂದಿರುಗುವುದಕ್ಕೆ ಮನಸ್ಸೇ ಬರುವುದಿಲ್ಲ.

ವಿದ್ಯಾ:—ಒಳ್ಳೆಯದು; ಎಂದಾದರೂ ನೀನು ಪರ್ವತ ಶಿಖರದ ಮೇಲೆ ನಿಂತು ಭೂಮಿಯೂ ಆಕಾಶವೂ ಅಪ್ಪಿಕೊಂಡಿರುವಂತೆ ತೋರಿಸುವ ದಿಗಂತ ರೇಖೆಯ ವರೆಗೂ ದೃಷ್ಟಿಪ್ರಸಾರವನ್ನು ಮಾಡಿರುವೆಯಾ?

ಹರಿ:—ಮನಃಕ್ಲೇಶವು ಹೆಚ್ಚಿದಾಗ ನಾನು ಮಾಡುವುದು ಹಾಗೆಯೇ.

ಇಂಥ ಪ್ರಕಾರ ರೋಗಗಳಿಂದ ಉತ್ಪನ್ನವಾಗುವ ವಿಕಾರ ಉಷ್ಣ ಪರಮಿ (ಉಪದಂಶ) ಗರ್ಮಿ ಚಟ್ಟಿ ಒದದ ಗಂಟು, ಸಡಿಸಲ್ಲಿಯ ಗಂಟು, (ವೃಡುಬು) ಅತಿಶಯ ಬಾವು, ಇಂದ್ರಿಯವಳಗೆ ತಿಡಿಕೆ, ಹೊಡತು, ರಕ್ತ ಕೀವು ಸುರಿಯೋಣ ಅದರಂತೆ ಸ್ತ್ರೀಯರ ಪ್ರದರ (ಕೆಂಪು ಬಿಳಿ ಸೆರಗು) ಹೊಲೆ ಕುಟ್ಟರೋಗ ಬೆಳೆಯೋಣ, ಕಡಕಿ ವಿಕಾರಗಳಿಂದ ಗರ್ಭಾಶಯ ಕಡೋಣ, ಮೂತ್ರ ಕಣ್ಣು ಕಾಲು ಉರಿಯೋಣ, ಕಾವು ಹೆಚ್ಚಾಗಿ ಮಧುಮೇಹ ಮೈಮೇಲೆ ಗರ್ಮಿ (ಉಷ್ಣ) ಒಡೆದು ಕೀವು ಹೊರಬಿದ್ದು ಅದರಿಂದ ವ್ರಣ (ಘಾಯ) ವಾಗಿ ಅಂಗಳಕ್ಕೆ ತೂತು ಬಿದ್ದು ಮೂಗು ಕೂಡ್ರುವದೂ ಸೋರುವದೂ ಎಲ್ಲ ತರದ ಮೂಲವ್ಯಾಧಿ, ಹೊಟ್ಟೆ ಕಡತ ವಗೈರೆ ಕಾರಣಗಳಿಂದಾ ಜನನೇಂದ್ರಿಯ ಶಿಥಿಲತಾ ಅಥವಾ ನಪುಂಸಕತ್ವ ಮುಷ್ಟಿಮೈಥುನದಿಂದ ಆಗುವ ಪರಿಣಾಮ, ಸ್ವಪ್ನಾವಸ್ಥೆ ಮೂತ್ರದಲ್ಲಿ ಧಾತು ಅಥವಾ ಖರ ಬೀಳೋಣ, ವೀರ್ಯ ತೆಳುವಾಗೋಣ, ಸ್ತ್ರೀಗಮನದಲ್ಲಿ ತೀಕು ಹತ್ತೋಣ. ತೀವ್ರ ವೀರ್ಯ ಪತನವಾಗೋಣ, ನಡಸೋವು (ಶೂಲಿ) ಸೋಯೋಣ, ಬೆನ್ನು ಬಿಗಿಯೋಣ, ವಾತವಿಕಾರ ಅವಿಚ್ಯಾರದಿಂದ ಮಾಡಿದ ವೀರ್ಯಪಾತ ವಗೈರೆ ರೋಗಗಳ ಮೇಲೆ ಅಶಿಕ್ಷಿತ ಅಡಾಣೀ ಜನರ ಕಡಿಯಿಂದ ಪಾರಜ ಮತ್ತು ರಸಕರ್ಪೂರ, ಇಂಗಳೀಕ ಮುಂತಾದ ಸವಿಷ ಮತ್ತು ಅಪಕ್ವ ಧಾತು ರೂಪ ಪದಾರ್ಥ (ರಸಾಯನ) ಮತ್ತು ಅಪಕಾರಕ ವಸ್ತು ಸೇವಿಸುವದರಿಂದ ಮೈಯೊಳಗೆ ರಸಾಯನ ನಿಂತು ಅದರಿಂದ ಕಾಲು ಕೈ ಮುಡವಾಗಿ ಮತ್ತು ಕೈ ಕಾಲುಗಳಲ್ಲಿ ರಸಾಯನ ಒಡೆದು ಸ್ವತಃ (ತನಗೆ) ಮತ್ತು ಮುಂದಾಗುವ ತನ್ನ ಸಂತತಿಗೆ ಅನೇಕ ರೋಗವು ಉತ್ಪನ್ನವಾಗಿ ಅದರಿಂದ ಭಯಂಕರ ಪರಿಣಾಮ ಭೋಗಿಸಬೇಕಾಗುವದು. ಇಂಥ ಪ್ರಕಾರದ ರೋಗಗಳು ಬಹಳ ದಿವಸ ನೆಲಗೊಂಡಿದ್ದಾಗಲೀ ಅಥವಾ ಹೊಸದಾಗಿ ಆದುದ್ದಾಗಲೀ ಇಂಥ ರೋಗಗಳ ಮೇಲೆ ಈ ನಮ್ಮ **ಮೃತ್ಯುಂಜಯ ಔಷಧ** ಉಪಯೋಗ ಮಾಡಿದರೆ ತತ್ ಸಂಬಂಧಿ ಸಂಪೂರ್ಣ ರೋಗಗಳು ತೀವ್ರವಾಗಿ ಹೋಗಿ ಮೈಯೊಳಗೆ ಇದ್ದ ರಸಾಯನವು ನಾಶವಾಗುವದು. ಮತ್ತು ಅಶಕ್ತಿ ಹೋಗಿ ಮೈಯೊಳಗೆ ಶಕ್ತಿ ಬಂದು ಪ್ರಕೃತಿ ಉತ್ತಮವಾಗುತ್ತದೆ. ಒಂದು ಬಾಟ್ಲಿಗೆ [೫] ರೂಪಾಯಿ ಟಪಾಲು ಖರ್ಚ ಬೇರೆ ಅನ್ನ ಪಾನ ಪತ್ರಿಕಾ ಔಷಧದ ಸಂಗಡ. ಲಾಭಕ್ಕೆ ಲಾಭವು. ಒಂದು ಆಣೆ ಟಿಕೀಟು ಕಳಿಸಿದಲ್ಲಿ ನಮ್ಮ ಔಷಧದ ಪೂರ್ಣ ಕ್ಯಾಟಲಾಕ ಕಳಿಸುವೆವು.

(ತಮ್ಮ ಪತ್ರ:- ಪೂರ್ಣ ಬರೆಯಿರಿ.)

ಸುಪ್ರಸಿದ್ಧ ಡಾ|| ಆರ್. ಎಲ್. ಹಿರೇಮಠ ಆರೋಗ್ಯ ಮಂದಿರ ಆರ್ಯ ವನೌಷಧಿ ೫೦೦೦, ಸಾವಿರ ಕಾರಖಾನೆ. ಕಮತನೂರ ಪೋ|| ಶಂಕೇಶ್ವರ ಜಿ|| ಬೆಳಗಾಂವ.

ಗೃಹಕೃತ್ಯದ ನೋಟೀಸು.

ಗಲಗಲಿ ಪಾಂಡುರಂಗಾಚಾರ್ಯ ಕಟ್ಟಿ ಎಂಬುವರು ಕಳೆದ ಜುಲೈ ೨೪ ನೇ ತಾರೀಖಿನಲ್ಲಿ ವಿಜಾಪೂರದಲ್ಲಿ ಮೃತಪಟ್ಟಿರುತ್ತಾರೆ. ಇವರಿಗೆ ಕಳಗೆ ರುಜು ಮಾಡುವ ಕಮಲಾಬಾಯಿ ಆದ ನಾನು ೨ ನೇ ಹೆಂಡತಿ ಆಗಿಯೂ ವೆಂಕುಬಾಯಿ ಎಂಬುವರು ೧ ನೇ ಹೆಂಡತಿ ಆಗಿಯು ಇರುತ್ತೇವೆ. ೧ನೇ ಹೆಂಡತಿಯಾದ ವೆಂಕುಬಾಯಿ ಎಂಬುವರು ನನ್ನ ಯಜಮಾನರು ತೀರಿಕೊಂಡ ಲಾಗಾಯಿತ ವಿಶ್ವಾಸವಿಲ್ಲದವರಾಗಿಯೂ ನನಗೆ ಎಲ್ಲ ಭಾಗದಲ್ಲಿಯೂ ನಮ್ಮ ಯಜಮಾನರ ಆಸ್ತಿ ವಿಷಯದಲ್ಲಿ ನಷ್ಟ ಪಡಿಸಲು ಅನೇಕ ಜನಗಳ ಸಹಾಯದಿಂದ ನನಗೆ ಮೋಸಪಡಿಸಬೇಕೆಂದಿರುತ್ತಾರೆ. ಅಲ್ಲದೇ ಇವರು ನನ್ನ ಸಮಕ್ಷಮ ವಿಜಾಪೂರದಲ್ಲಿ ನಮ್ಮ ತಂದೆ ಮತ್ತು ಚಿಕ್ಕಪ್ಪನವರು ಇವರ ಸೋದರಮಾವನವರಾದ ಹಣಮಂತಾಚಾರ್ಯರ ಸಮಕ್ಷಮ ಒಬ್ಬ ಹುಡಗನನ್ನು ದತ್ತಕ ಮಾಡಿಕೊಂಡು ನನ್ನನ್ನು ಹಾಳು ಮಾಡುತ್ತೇನೆಂದು ಹೇಳುತ್ತಾರೆ. ೧ ನೇ ಹೆಂಡತಿ ವೆಂಕುಬಾಯಿಯವರು ನನ್ನ ಸಮ್ಮತಿ ಇಲ್ಲದೆ ದತ್ತಕ ತೆಗೆದುಕೊಳ್ಳಕೂಡದು. ಯಜಮಾನರ ಆಸ್ತಿ ಪೈಕಿ (೨) ಜಮೀನುಗಳು ವ್ಯಾಜ್ಯದಲ್ಲಿ ಬಿದ್ದಿದೆ. ಇದಲ್ಲ ಹೋಗಲಾಗಿ ೮ ವರ್ಷ ಆದ ನಂತರ ತನ್ನ ಭಾಗದ ಆಸ್ತಿಗೆ ದತ್ತಕ ಮಾಡಿಕೊಳ್ಳಬಹುದು. ಶಿವಾಯ ಈಗ ಮಾಡಿಕೊಂಡದ್ದಾಗಲೀ ಅಥವಾ ದತ್ತಕಕ್ಕಾಗಿ ಬಂದದ್ದಾಗಲಿ ಇದು ನಿಲ್ಲಿಸುವದಲ್ಲ. ಮುಂದೆ ಸಂಭವಿಸುವ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಾರೆ. ಖಂಡಿತ ತಿಳಿಯುವದು.

ಕಮಲಾಬಾಯಿ.

ಇಡೀ ಕರ್ನಾಟಕದಲ್ಲಿ ಒಂದೇ ಒಂದಾದ

ಎಲ್ಲಕ್ಕೂ ದೊಡ್ಡ! ಎಲ್ಲಕ್ಕೂ ಅಗ್ಗ!!

ಸಚಿತ್ರ ಮಾಸಪತ್ರಿಕೆ.

ಜಯ ಕರ್ನಾಟಕ.

ವಾರ್ಷಿಕ ಚಂದಾ (೫-೮-೦) ಬೇಕಾದ ತಿಂಗಳಿಂದ

[ಅಂಚೇ ವೆಚ್ಚ ಸೇರಿ] ಪ್ರಾರಂಭ ಮಾಡಬಹುದು

ಸಂಪಾದಕರು ಆಲೂರ ವೆಂಕಟೇಶರಾಯರು. ಧಾರವಾಡ

ಲಿವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.

ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.



ಈ ಗಡಿಯಾರಗಳಲ್ಲಿಯು ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಪೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದ್ದುದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚವಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಆದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಬೋ ವಾಚ ಕಂ. (ಇಂಡಿಯಾ.) ಮುಂಬೆ. ಕೆ ೪.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವರಿಗು ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಪ್ಪಾ ಜಾಬಾದಿ.

ಸ್ಟೇಶನರ್ಸ ಬಾಗಲಕೋಟೆ

ರಾಜವೈದ್ಯ ನಾರಾಯಣಜಿ ಕೇಶವಜಿ.

೫೬. ಚೇನಾಬಜಾರ್, ಮದ್ರಾಸು

ಯಾವದೇ { ಆಕಾರದ ನಕ್ಷೆಯ ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಬಗ್ಗೆ ನಾವು ಈ ದಾವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂ. ೭ ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— ಸ್ವಾನ ಹೌಸ. ಪಿ. ಬಿ. ೫೦೮. ಪಿ. ಟಿ. ಮದ್ರಾಸ

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ ರಜಿಸ್ಟರ್ಡ್ ಪೊಕೆಟ್ ವೊಚ್ ೧೪ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖವಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಮೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ್ ೧೪ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವೊಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ. ಪಿ. ಬಿ. ಮದ್ರಾಸ. ೨೬೫

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ. ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ. ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುವವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. } ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ದಿ ಏಶಿಯಾಟಿಕ್ ಗೌರ್ನಮೆಂಟು ಸೆಕ್ಯೂರಿಟಿ ಲಾಯಿಫ ಅಶ್ಶೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ॥ ದಿವಸ ೧-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು—

(೧) ಎಲ್. ಬಿ. ಸಿ. ನಂ. ೭೭೩೭ ಸಯ್ಯದ ಅಲ್ಲಿ ಆಸಗರ ಜಿಲ್‍ಗ್ರಾಫಿ ಸುಪರೆಂಟೆಂಡೆಂಟ್ ಸೆಕ್ರೆಟರಿಯೆಟ್ ಹೈದರಾಬಾದ ಡೆಕ್ಕನ್ನ ರೂ. ೧೦೦೦

(೨) ಎಲ್. ಬಿ. ಸಿ. ನಂ ೧೯೬೨ ನಾರಾಯಣ ವಿಠ್ಠಲ ಲೋಣಕರ. ಕೇರ್ ಆಫ್ ದಿ. ಈ. ಪುರಾಣಿಕ ೧೧೭ ನಿಹಾಲಪುರ ಇಂದೂರ. ೧೦೦೦

(೩) ಎಲ್. ಬಿ. ಸಿ. ನಂ. ೩೪೧ ರಾಮಚಂದ್ರ ಅನಂತ ಶಿರೋಳ ? ಡಿವಿಜನಲ್ ಫಾರೆಸ್ಟ ಆಫೀಸರ. ಧಕ್ಲೂರಾ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೬ ಕೇ. ಜೆ. ಫರ್ನಾಂಡೋ ವ್ಯಾಪಾರಸ್ಥ. ಬ್ರಿಕ್‌ಸಾಯಿಡ ಸಿಲೋನ, ಕೋಲಂಬೋ. ರೂ. ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜಿ. ಚವರೆ ಅಸಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ. ಜಿಲ್ಲಾ ವಿಜಾಪುರ ೧೦೦೦.

ಜಿ. ??. ???,

ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ)

ಸ್ಟಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲೆಕ್ಟ್ರಿಕ್, ಮಿಶನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇರಿ) ೧ ಪೌಂಡಿಗೆ ರೂ. ೧-೭-೦

೨ ನೇ ,, ,, ,, ರೂ ೧-೩-೦

ದಿ ಸ್ಟಾಂಡರ್ಡ್ ಕಾಫಿ ಕಂಪನಿ

ಚಿಕ್ಕಪೇಟೆ ಬೆಂಗಳೂರು ಸಿಟಿ.

ಜೀವ ವಿಮೆಯ ಕಾರ್ಯದಲ್ಲಿ

ಅದ್ಭುತವಾದ ಜಯವು !

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೭೦ ರೂಪಾಯಿ ಲಾಭ ಹಂಚಿದೆ.

ದಿ ಜನರಲ್ ಅಶ್ಶೂರನ್ಸ ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ನಾನಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೭೧ ತಿಂಗಳಲ್ಲಿ ಹೆಚ್ಚಾಗಿ ಉಳಿತಾಯವಾದದ್ದು ರೂ. ೧,೦೯,೦೦೦

ಏಜಂಟರು ಬೇಕು! ಭಾರಿಯಾದ ಕಮಿಶನ್!

ಎಸ್. ಕಬ್ಬೂರ ಜಿ. ಎ. ಎಫ್. ಎಸ್. ಅಜಮೀರ.

Apply to — A. Ramachandra Rao

Branch Secretary, opposit Minto Hospital,

Bangalore City

or

L. V. Ramdurg Chief Agent

Near Vitoba Temple Hubli

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ೨. ೧೯೪೭

ವಾ. ಚಂದಾ ೧—೧೩—೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ } ಬಾಗಲಕೋಟೆ ರವಿವಾರ ತಿಥಿ ಆಷಾಢ ಬದ್ಯ ೩ ಶಕೆ ೧೮೪೯ ತಾ|| ೧೭-೭-೧೯೨೭.
Date 17—7—1927. { ಸಂಚಿಕೆ ೧೫

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ,
ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ
ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು, ಅವುಗಳೊ
ಳಗಿನ ಕೆಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿ
ಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತವರಾಗುತ್ತಾರೆ
ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು,
ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು.
ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾ
ಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ
ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.
ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು
ಕೊಳ್ಳಿರಿ !

ವಿಳಾಸ:— ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ.

ಶ್ರೀ ... ಗರ್ವಿಣ.

ಕರಮೆ, ರಕ್ತವಿಕಾರ, ಕುಷ್ಟ, ಮಹಾರೋಗ, ಧಾತು
ನಪುಂಸಕತ್ವಗಳವೇಲೆ ಖಂಡಿತವಾಗಿ ಗುಣಕೊಡುವ
ಔಷಧಿ ಬೆಲೆ ೧ರೂ. ಈ ಪ್ರಕೃತಿಮಾನತಿಳುಹಿಸಿ ಔಷಧಿ ಪಡೆಯ

ವೈದ್ಯ:- ವಾದಿರಾಜ ಜಹಾಗೀರದಾರ
ಮು ಇಲಕಲ್ಲ. (ವಿಜಾಪೂರ)

ಮುದ್ರಿಸುವ ಯಂತ್ರ.

ಸಿಂಗಲ್ ರಾಯಲ್ ಆಕಾರದ ಮುದ್ರಣ ಯಂತ್ರವನ್ನು ಮಾರತಕ್ಕದ್ದಿದೆ. ಯಂತ್ರವು ಉತ್ತಮಸ್ಥಿತಿಯಲ್ಲಿದ್ದು, ಕೆಲಸವನ್ನು ಚನ್ನಾಗಿ ಕೊಡುತ್ತದೆ. ಹೆಚ್ಚಿನ ಸಂಗತಿಗಳಿಗಾಗಿ ಬರೆಯಹುದು:-

ವಿದ್ಯಾ.ರತ್ನ. ಮುದ್ರಾ. ಮಂದಿರ ಬಾಗಲಕೋಟೆ.

ವಾಙ್ಮಯ ಪರಿಚಯ.

ದೇವಯಾನಿ (ಪೌರಾಣಿಕ ಕಾದಂಬರಿ) ಬರೆದವರು:- ವಿರೂಪಾಕ್ಷ ಶರವೀರ ಕುಲಕರ್ಣಿ ದೋಣ. ಬೆಲೆ ೧ ರೂಪಾಯಿ.

"ಶ್ರೀಮದ್ಭಾಗವತದಲ್ಲಿಯೂ, ಮಹಾಭಾರತದಲ್ಲಿಯೂ ಸಂಕ್ಷಿಪ್ತವಾಗಿರುವ ಕಚೋಪಾಖ್ಯಾನವು ಇದಕ್ಕೆ ಮೂಲಾಧಾರವಾಗಿರುವದು" ಕಚದೇವಯಾನಿಯರ ಚರಿತ್ರವು ಸಾಮಾನ್ಯವಾದುದಲ್ಲ. ಪೌರಾಣಿಕ ಕಾಲದ ಅದ್ವಿತೀಯ ವ್ಯಕ್ತಿಗಳಿವರು. ಪ್ರೇಮದ ಉದಾತ್ತ ಸ್ವರೂಪವು ಇವರ ಚರಿತ್ರದಲ್ಲಿ ಕಂಡು ಬರುವದು. ತನ್ನ ತಂದೆಯ ಕಡುಹಗೆಯ ಮಗನಾದರೂ ದೇವಯಾನಿಯು ಕಚನನ್ನು ಅನೇಕ ಸಾರೆ ಸಾವಿನ ಮವಡೆಯೊಳಗಿಂದ ಬಿಡಿಸಿ ಕಡೆಗೆ ದುರ್ಲಭವಾದ ಸಂಜೀವನೀ ಮಂತ್ರೋಪದೇಶವನ್ನಾದರೂ ಮಾಡಿಸಿದುದು ಪ್ರೇಮಶಕ್ತಿಯ ಪ್ರಭಾವವನ್ನು ಚನ್ನಾಗಿ ತೋರಿಸುವದು. ಮಗಳ ಹಿತಕ್ಕಾಗಿ ಸರ್ವಸ್ವವನ್ನು ತೊರೆಯಲು ಸಿದ್ಧರಾದ ಶುಕ್ರಾಚಾರ್ಯರ ಮಗಳ ಮೇಲಿನ ಮಮತೆಯು ಮೇಲ್ತರಗತಿಯದು. ಕಲಿಸಲಿಕ್ಕೆಂದು ಮನೆಗೆ ಹೋಗಿ ಕೇವಲ ಪ್ರೇಮಶಿಕ್ಷಣವನ್ನೇ ಕೊಡುತ್ತಿರುವ ಯುವಕ ಯುವತಿಯರ ಚಿತ್ರವು ಸದ್ಯದ ಸಮಾಜದ ಸತ್ಯ ಸೃಷ್ಟಿಯಲ್ಲಿಯೂ ಕಾದಂಬರಿಗಳ ಕಲ್ಪಿತ ಸೃಷ್ಟಿಯಲ್ಲಿಯೂ ಕೂಡಾ ಕಂಡು ಬರುವದು. ಸಹವಾಸ ಬಲದಿಂದ ಸಮರೂಪ ವಯಸ್ಕನಾದ ತನ್ನಲ್ಲಿ ನೆಟ್ಟ ದೇವಯಾನಿಯ ವೈಷಯಿಕ ಪ್ರೇಮವನ್ನು-ಗುರುಪುತ್ರಿಯನ್ನು ತಂಗಿಯೆಂದು ಭಾವಿಸಿ-ಬಂಧುಪ್ರೇಮದಲ್ಲಿ ಪರಿಣಮಿಸುವಂತೆ ಮಾಡಿದ ಕಚನ ಸತ್ವಾತಿಶಯವೂ ಗುರುಭಕ್ತಿಯೂ ನಮ್ಮ ಕಲ್ಪನೆಗೂ ಕೂಡಾ ನಿಲುಕದಷ್ಟು ಉದಾತ್ತವಾಗಿರುವವು. ಸಂದರ್ಭಾನುಸಾರವಾಗಿ ಇದರಲ್ಲಿ ಶರ್ಮಿಷ್ಠೆಯ ಚರಿತ್ರೆಯಾದರೂ ಬರುವದು. "ಯಯಾತೇರಿವ ಶರ್ಮಿಷ್ಠಾ"-ಯೆಂದು ನೂತನ ವಧೂವರರಿಗೆ ಯಯಾತಿ-ಶರ್ಮಿಷ್ಠೆಯರ ಜೋಡು ಆದರ್ಶಪ್ರಾಯವಾಗಿ ತೋರಿಸುವರು. ಇಂಥ ಉಜ್ವಲ ಚರಿತ್ರೆಯು ಕನ್ನಡದಲ್ಲಿ ಇದೂ ವರೆಗೆ ಚೆನ್ನಾಗಿ ಪ್ರಕಾಶವಾಗಿಲ್ಲ. ಪ್ರಸ್ತುತ ಕಾದಂಬರಿಯಿಂದ ಈ ಕೊರತೆಯನ್ನು ಲೇಖಕರು ಕಳೆದಿರುವದು ಸ್ತುತ್ಯವು. ಆದರೆ ಭಾಷೆ-ಶೈಲಿಗಳ ಬಗ್ಗೆ ಮಾತ್ರ ಕೆಲವು ಸೂಚನೆಗಳನ್ನು ಮಾಡುವೆವು.

(೧) ಕಾದಂಬರಿಯಲ್ಲಿ ಬಂದಿರುವ 'ಮದಿರಾಪಾನ'—ಮೊದಲಾದ ವಿಷಯಾಂತರಗಳು ಹರಿದು ಹೊಂದಿಸಿದಂತವುಗಳಾಗದೇ ಸಂದರ್ಭಕ್ಕೆ ತಕ್ಕವುಗಳಾಗಿಯೂ, ಕಥೆಯ ಓಘದಲ್ಲಿ ಸಮರಸವಾಗಿಯೂ ಮಾಡಬೇಕು.

(೨) ಕೇವಲ ವರ್ಣನೆಗಳಲ್ಲಿ ಪ್ರಕರಣಗಳನ್ನು ಮುಗಿಸದೆ ಕಲ್ಪಿತ ವ್ಯಕ್ತಿಗಳಿಂದ ಸ್ವಭಾವ ನಿರೂಪಣೆಗೆ ಹೆಚ್ಚು ಗಮನ ಕೊಡಬೇಕು.

(೩) 'ಮಗಳೆ!'-ಯೆಂದು ಹೇಳುವಲ್ಲಿ 'ತನೂಭವೆ! ತನುಜೆ!-ಯೆಂದು ಯಾಕೆ ಬೇಕು? ಸರಳ ಹಾಗು ಸುಬೋಧವಾದ ಶಬ್ದಗಳನ್ನು ಉಪಯೋಗಿಸಬೇಕು.

(೪) ಭಾಷೆಯು ಒಮ್ಮೆ ತೀರ ಸಂಸ್ಕೃತಮಯವಾದರೆ ಮತ್ತೊಮ್ಮೆ ತೀರ ಗ್ರಾಮ್ಯ ಶಬ್ದಗಳಿಂದ ತುಂಬಿರುವದು. ಶ್ರೀನಿವಾಸ, ಆನಂದಕಂದ ಮೊದಲಾದವರ ಕೃತಿಗಳನ್ನು ಓದಿ ಭಾಷೆಯ ಈ ವಿರೋಧಗಳನ್ನು ಸಮನಾಗುವಂತೆ ಮಾಡಬೇಕು.

ಪ್ರಸ್ತುತ ಲೇಖಕರು ಸುಖ ವಸ್ತುಗಳೂ ಶ್ರೀಮಂತರಾಗಿದ್ದರೂ ನಿಸ್ಸೀಮವಾದ ಭಕ್ತಿಯಿಂದ ಮಾಡುವ ಕನ್ನಡ ಸೇವೆಗೆ ಮೆಚ್ಚಿ ಕರ್ನಾಟಕ ಭಾಷಾ ಮಾತೆಯು ಅವರಿಗೆ ಪೂರ್ಣಾಶೀರ್ವಾದವನ್ನೀಯಲಿ.

—ಶ್ಯಾಮ.

ಸಹಕಾರ ಸಂಘಗಳಿಂದ ನಾವು ಕೆಟ್ಟೆವೊ?

ಕಳೆದ ೨೦—೨೫ ವರ್ಷಗಳಿಂದ ನಮ್ಮ ದೇಶದಲ್ಲಿ—ನಮ್ಮ ದೇಶದ ಜನರ ಸ್ಥಿತಿ ಸುಧಾರಿಸಬೇಕೆಂದು ನಮ್ಮ ಸರಕಾರದವರು ಸಹಕಾರ ಸಂಘಗಳನ್ನು ಹೊರಡಿಸಿದರು. ಹೀಗೆ ೨೫ ವರ್ಷಗಳು ಕಳೆದು ಹೋದರೂ, ಸಹಕಾರ ಸಂಘಗಳಿಂದ ನಮ್ಮ ಜನರ ಸ್ಥಿತಿ ಸುಧಾರಿಸದೆ ಹೆಚ್ಚು ಕೆಡುತ್ತಿರುವದು ಅತ್ಯಂತ ದುಃಖದ ಸಂಗತಿಯು. ಅನ್ಯ ದೇಶಗಳಿಗೆ—ಅಲ್ಲಿಯ ಜನರಿಗೆ ಸಹಕಾರಿ ಸಂಘಗಳಿಂದ ಬೇಕಾದಷ್ಟು ಲಾಭವಾಗಿರಬಹುದು; ಅವರು ಸುಖದಲ್ಲಿ ತೇಲುತ್ತಿರಬಹುದು, ಮತ್ತು ಇದೆಲ್ಲ ಆದದ್ದು ಸಹಕಾರ ಸಂಘಗಳ ಪುಣ್ಯ ವಿಶೇಷದಿಂದಲೇ ಎಂದು ಹಾಡಿ ಹರಿಸಬಹುದು; ಆದರೆ ಹಿಂದೂ ದೇಶದ ದುರ್ದೈವಕ್ಕೆ ಎಂಥ ಒಳ್ಳೇ ಸಂಘಗಳಾದರೂ ಅವರ ಜೀವಕ್ಕೆ ಮುಳುವಾಗುತ್ತವೆ. ಹೀಗಾಗಲಿಕ್ಕೆ ಇಲ್ಲಿಯ ವಿಲಕ್ಷಣ ಪದ್ಧತಿಯೇ ಕಾರಣವೆಂದು ಯಾರಾದರೂ ಅನ್ನಬಹುದು. ಸಹಕಾರಿ ಸಂಘಗಳು ರೈತರ ಅನುಕೂಲಕ್ಕಾಗಿ, ಜನರ ಹಿತಕ್ಕಾಗಿ, ಇರುವವೆಂಬ ಮೂಲ ಭಾವನೆಯೇ ಅವುಗಳನ್ನು ನಡಿಸುವವರಲ್ಲಿ ಯಾವಾಗಲೂ ಜಾಗೃತವಿರದ್ದರಿಂದ ಯಾವಾಗಲೂ ಈ ವಿಷಯದಲ್ಲಿ ಜನರಿಗೆ ಭ್ರಮೆಯಾಗಿ ಅವುಗಳಿಂದ ಜನರಿಗೇನೂ ಸುಖವಾಗುವದಿಲ್ಲೆಂಬುವ ಮಾತೇನೂ ಸುಳ್ಳಲ್ಲ. ಹಿಂದೂ ದೇಶವೆಂದರೆ ಹಳ್ಳಿಗಳ ದೇಶ; ಇಲ್ಲಿ ೭ ಲಕ್ಷ ಹಳ್ಳಿಗಳಿದ್ದವು. ಈಗ ಇಂಗ್ಲೀಷರ ಆಳಿಕೆಯಲ್ಲಿ ಆ ಹಳ್ಳಿಗಳೆಲ್ಲ ಹಾಳಾಗಿ ಪಟ್ಟಣಗಳಾಗುತ್ತಿವೆ. ಇಂಥ ಸ್ಥಿತಿಯಲ್ಲಿ ಹಳ್ಳಿಗಳನ್ನು ಕೇಳುವವರಾರು? ಹೆಸರಿಗೆ ಹಳ್ಳಿಗರ ಸುಸ್ಥಿತಿಗಾಗಿ ಸಹಕಾರ ಸಂಘಗಳು ಹೊರಟವು; ಆದರೆ ಅವುಗಳಿಂದ ಹಳ್ಳಿಯ ಜನರು ಹೆಚ್ಚು ಸಾಲಗಾರರಾದರೇ ವಿನಾ ಅವರ ಸಾಲ ತಪ್ಪಿ ಸುಧಾರಿಸಲಿಲ್ಲ. ಸಹಕಾರೀ ಸಂಘಗಳ ಉದ್ದೇಶವು ಜನರಿಗೆ ಬರೇ ಸಾಲ ಕೊಡುವದಷ್ಟೇ ಅಲ್ಲ; ಆದರೆ ದುಂದುಗಾರರನ್ನು ಮಿತವ್ಯಯಿಗಳನ್ನಾ ಮಾಡುವದು, ಎಚ್ಚರಗೆಟ್ಟು ನಡೆಯುವವರನ್ನು ಎಚ್ಚತ್ತು ನಡೆಯುವಂತೆ ಮಾಡುವದು, ಕುಡುಕರನ್ನು ಕುಡಿಯುವ ವ್ಯಸನದಿಂದ ಬಿಡುಗಡೆ ಮಾಡುವದು, ದುಷ್ಟರನ್ನು ಶಿಷ್ಟರನ್ನಾಗಿ ಮಾಡುವದು ಜನರನ್ನು ಸಂಪನ್ನರನ್ನಾಗಿ ಮಾಡುವದು. ಇವುಗಳಲ್ಲಿ ಒಂದಾದರೂ ಗುಣ ನಮ್ಮ ಜನರಲ್ಲಿ ೨೫ ವರ್ಷಗಳಾದರೂ ನಾಟಿರುವದೋ? ಅಂದ ಮೇಲೆ ನಾವೇಕೆಂದು ಸಹಕಾರ ದಿನವನ್ನಾಚರಿಸುವದು? ಸರಿಇದ್ದವರು ಸರಿಗೆ ಹಾಕಿಕೊಂಡರೆಂದು ನೆರೆಯವರು ಉರ್ಲು ಹಾಕಿಕೊಳ್ಳುವಂತೆಯೇ ನಮ್ಮ ಸ್ಥಿತಿಯು. ಬೇರೆ ಜನಾಂಗದವರಿಗೆ ಸಹಕಾರದಿಂದ ಸುಖವಾಗಿ ಅವರ ದಾರಿದ್ರ್ಯ ತಪ್ಪಿತೆಂದು ಅವರು ಆನಂದದಿಂದ ಸಹಕಾರವೆಂಬ ಸಂಘವು ಹುಟ್ಟಿದ ದಿನವನ್ನಾಚರಿಸಬಹುದು; ಆದರೆ ಅದರಿಂದ ನಾವು ಈ ಹೊತ್ತು ಮುಳುಗಿದ್ದೇವೆ ಮುಳುಗುತ್ತಿದ್ದೇವೆ; ಹೀಗಾಗಲಿಕ್ಕೆ ಕಾರಣವೇನೆಂಬುದರ ರಹಸ್ಯವನ್ನು ನಮ್ಮ ಜನರು ಹಾಗೂ ಸರಕಾರದವರು ತಿಳಿದುಕೊಂಡು ಈಗಲೇ ನಡೆದರೆ ಸುಖವಾಗುವದು; ಇಲ್ಲವಾದರೆ ಪಶ್ಚಾತ್ತಾಪವು ಕಟ್ಟಿಟ್ಟದ್ದೇ ಸರಿ.

—ಕರ್ನಾಟಕ ಟಾಯಿಮ್ಸ್.

ಸೋಜಿಗದ ಸುದ್ದಿ.

ಜಾಹೀರಾತುಗಳನ್ನು ದೊರಕಿಸುವ ಕಾರ್ಯವು ಸ್ತ್ರೀಯರಿಂದ ಬಲು ಯಶಸ್ವಿಯಾಗುವದೆಂದೂ, ಅವರು ಸ್ವಲ್ಪೇ ಅನುಭವದಿಂದ ಆ ಅಂಗಗಳ ಪಗಾರವನ್ನು ಪಡೆಯಬಲ್ಲರೆಂದೂ, "ಸ್ತ್ರೀಯರ ಪ್ರಕಟನಾಸಂಘ"ದ ಕಾರ್ಯದರ್ಶಿಗಳಾದ ಶ್ರೀಮತಿ ಹೋಗರು ಹೇಳುತ್ತಾರೆ.

ಉತ್ತರ ಕರಗತಿಯ ಅನೇಕ ಕೋಟೆಗಳ [illegible]ಯಲ್ಲಿ ಮುತ್ತುಗಳಿರುವದಾಗಿಯೂ ಇಂತಹ ಮುತ್ತೊಂದು ಸಿಲೋನದಲ್ಲಿ ಸಣ್ಣ ಚೆಂಡು ಹತ್ತಿದಂತವಲ್ಲಿ ದೊರೆಯಿತೆಂದೂ ಪ್ರಕಟವಾಗಿದೆ.

ಕನ್ನಡಿಗ.

ಬಾಗಲಕೋಟೆ ಆಷಾಢ ಬಹುಳ ೩ ಶಕೆ ೧೮೪೯.

ಸಂಪಾದಕರ ಭೂಮಿ

(೩೦)

ನನ್ನ ಮನಸಿನ ಪೀಠವಮಾಡಿ ಕಟ್ಟುವೆನಾನು।
ನಿನ್ನ ಬೆಸನಮಾಡಿದಂಥ ಮುಕ್ಕಳ ದೊಮ್ಮೆ।
ಚಿನ್ನದಾದರು ಚಿನ್ನ ಮೇಣಬಸ್ತಿಯ ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹನೆಂದು ತಿಳಿಯೆ

—ಅಂಬಿಕಾತನಯ ದತ್ತ

ಬಾಗಲಕೋಟೆಯಲ್ಲಿ ಇತ್ತಿತ್ತ ಹಿಂದೂ—ಮುಸಲ್ಮಾನರ ತಂಟೆಗಳು ಹೆಚ್ಚಾಗಿ ಉದ್ಭವಿಸುತ್ತಲಿವೆ. ಈಗ್ಗೆ ಎರಡು ವರ್ಷಗಳಿಂದ ಕಳೇಕೀ ಹಬ್ಬವು ಶಾಂತವಾಗಲಿಲ್ಲ. ಮೊನ್ನೆ ಮೊನ್ನೆ ಒಕರ ಇದ್ದದಲ್ಲಿ ಮುಸಲ್ಮಾನರು ಆಕಳ ವನ್ನು ಕೊಂದರೆಂದು ಊರಲ್ಲೆಲ್ಲ ಸುದ್ದಿ ಹಬ್ಬಿತ್ತು. ಆದರೆ ಪೋಲೀಸರ ವಿಚಾರಣೆಯಿಂದ ಮುಸಲ್ಮಾನರು ಅದನ್ನು ಕೊಂಡು ಕಡಿದುಕೊಂಡದ್ದು ತಿಳಿದು ಬಂದಿತೆಂದೂ ಆದ್ದರಿಂದ ಆ ಬಗ್ಗೆ ಕಟ್ಲೆ ಹಾಕಲು ಮಾರ್ಗವಿಲ್ಲೆಂದೂ ಕಂಡುಬಂದಿತಂತೆ. ಕಳೆದ ಏಕಾದಶಿಯಲ್ಲಿ ದೇವರ ಪಲ್ಲಕ್ಕಿಯು ಹೊರಡಬಾರದಾಗಿ ಕಲೆಕ್ಟರರ ಅಪ್ಪಣೆಯಾಯಿತು. ಈ ಪ್ರಕಾರವಾಗಿ ಹಿಂದೂ ಧರ್ಮದ ಮೆರವಣಿಗೆ, ಉತ್ಸವ, ಧಾರ್ಮಿಕ ವಿಧಿಗಳೆಲ್ಲ ಬಂದಾಗತೊಡಗಿವೆ. ಆದರೂ ಕೂಡ ಬಾಗಲಕೋಟೆಯ ಪ್ರಮುಖ ಹಿಂದೂ ಧರ್ಮೀಯರೆಲ್ಲ ಕೂಡಿಕೊಂಡು, ಈ ಪ್ರಶ್ನೆಯನ್ನು ವಿಚಾರಿಸಿ, ಈ ಬಗ್ಗೆ ಒಟ್ಟಾಗಿ ಏನು ಮಾಡತಕ್ಕದೆಂಬುದನ್ನು ಗೊತ್ತುಪಡಿಸಲು, ಹಿಂದೂ ಧರ್ಮದಲ್ಲಿಯ ಯಾವ ಜಾತಿಯವರೂ ಮುಂದೆ ಬಾರದಿದ್ದುದು ಅತ್ಯಂತ ವಿಷಾದದ ಮಾತಾಗಿದೆ. ಬ್ರಾಹ್ಮಣ, ವೀರಶೈವ ಸಾಳೀ, ಮರಾಠಾ, ವಿಶ್ವಕರ್ಮ ಮೊದಲಾದ ಎಲ್ಲ ಪಂಗಡದವರಿಗೂ ಈ ವಿಷಯದ ಮಹತ್ವವು ಸರಿಯಾಗಿರಲು, ಒಳಜಗಳದ ನೆವ ಮಾಡಿ, ಎಲ್ಲರೂ ತಮ್ಮ ತಮ್ಮ ಮನೆಯಲ್ಲಿ ಕುಳಿತರೆ, ಈ ಕಾರ್ಯವು ಸಿದ್ಧಿಗೆ ಹೋಗುವದು ಹೇಗೆ? ನಮ್ಮಲ್ಲಿ ಮತಭೇದಗಳೇನಾದರೂ ಇದ್ದಲ್ಲಿ ಅವನ್ನೆಲ್ಲ ಕಳೆದುಕೊಳ್ಳಲು ಇದು ಉತ್ತಮ ಸಂಧಿಯು. ಹಿಂದಿನ ಮನಸ್ತಾಪಗಳ ಸುದ್ದಿಯನ್ನೆತ್ತದೇ, ಅವನ್ನೆಲ್ಲ ಮೂಲೆಗೊತ್ತಿ, ಹೊಸ ಭೂಮಿಯನ್ನು ಸಿದ್ಧಪಡಿಸಿ, ಕಾರ್ಯಪ್ರವೃತ್ತರಾಗುವದು ನಗರದಲ್ಲಿ ಮುಖಂಡರೆನ್ನುವವರಿಗೆಲ್ಲ ಭೂಷಣವಾದುದು. ಹೀಗೆ ಸಮಯಕ್ಕೆ ತಕ್ಕ ಜಾಣತನವನ್ನು ತೋರಿಸುವಷ್ಟು ಉದಾರ ಬುದ್ಧಿಯನ್ನೂ ಕರ್ತೃತ್ವ ಶಕ್ತಿಯನ್ನೂ ಬಾಗಲಕೋಟೆಯ ಮಂದಾಳುಗಳು ತೋರಿಸದಿದ್ದರೆ, ಮುಕ್ಖಂಡರ ಯಾದಿಯನ್ನು ತಿದ್ದುವ ಪ್ರಸಂಗವು ಬರುವದಲ್ಲವೇ?

ಪುಣೆಯಲ್ಲಿ ಮಾಲತಿ—ಗುಲಾಬರ ಮದುವೆಯಾಯಿತು. ಹಿಂದೂ ಮುಸಲ್ಮಾನರ ಈ ಲಗ್ನಕ್ಕೆ ಅನೇಕರು ಕೋಪಗೊಂಡಿರುವರು. ಈ ಕೋಪಮಯ ವಾತಾವರಣದ ಬಗ್ಗೆ ರೇಖೆಯು ಮಾಲತಿಗೆ ಮೊದಲು ತಿಳಿದುಬಂದಿದ್ದರೂ, ಎಲ್ಲ ವಿರೋಧವನ್ನು ಧಿಕ್ಕರಿಸಿ, ಗುಲಾಬನನ್ನೇ ಕೂಡಿಕೊಂಡದ್ದು. ಅವಳ ಹೆಚ್ಚಿನ ಧೈರ್ಯ ಈ ಬಗೆಯ ಧೈರ್ಯವು ನಾಚಿಕೆ ಬಿಟ್ಟಂತಹ ಶಿಥಿಲವೃತ್ತಿಯ ಅಥವಾ ಅತ್ಯುತ್ಕಟವಾದ ಪ್ರೇಮವಿದ್ದವರಲ್ಲಿ ಕಂಡುಬರುವದು. ಯಾವ ವರ್ಗದಲ್ಲಿ ಮಾಲತಿಯನ್ನು ಸೇರಿಸಬೇಕೆಂದುದಕ್ಕೆ ಆಧಾರಗಳಿಲ್ಲ. ವಿಧವಾ ಪುನರ್ವಿವಾಹದ ಸ್ತ್ರೀಯಳ ಹೊಟ್ಟೆಯಲ್ಲಿ ಹುಟ್ಟಿದ ಮಾಲತಿಗೆ ಈ ಬಗೆಯ ವಿವಾಹದ ಕಲ್ಪನೆಗಳು ಬೇರೂರಲು ಸಾಕಷ್ಟು ಅವಕಾಶವಿದೆ. ವಿಧವಾ ವಿವಾಹ ಪದ್ಧತಿಯು ರೂಢವಾಗುವದಕ್ಕೆ ಅನುಕೂಲತೆಗಳನ್ನು ಒದಗಿಸಿ ಕೊಟ್ಟವರು ಮಾಲತೀ—ಗುಲಾಬರ ವಿವಾಹವನ್ನು ವಿರೋಧಿಸಲು ಮಾರ್ಗವಿಲ್ಲ. ಮಾಲತಿಯೇನೂ ಮಹಾವಿಭೂತಿಯಲ್ಲ; ರಾಜರಮಗಳಲ್ಲ; ಬಿ. ಎ. ಪರೀಕ್ಷೆಯಿಂದಾಕ್ಷಣಕ್ಕೆ ಅವಳನ್ನು ಯಾರೂ ತಲೆಯ ಮೇಲೆಯೂ ಕೂಡ್ರಿಸಿಕೊಳ್ಳುವದಿಲ್ಲ. ಸಮಾಜದಲ್ಲಿಯ ಅವುದೊಂದು ವ್ಯಕ್ತಿಯು ತನ್ನ ವೈಯುಕ್ತಿಕ ವಿಚಾರ-ಸುವಿಚಾರ-ಕುವಿಚಾರಗಳನ್ನು ಕೃತಿಯಲ್ಲಿ ತಂದರೆ ಅದಕ್ಕೆ ಇಲ್ಲದ ಮಹತ್ವವನ್ನು ಕೊಡುವದೇಕೆ? ಯಾವುದೋ ಒಂದು ತೊಪ್ಪಲವು! ಎಲ್ಲಿಯೋ ಬೀಳುತ್ತಲಿದೆ! ಇಂತಹ ಕ್ಷುಲ್ಲಕ ಪ್ರಶ್ನೆಗೆ ಅಷ್ಟೊಂದು ಮಹತ್ವವೇಕೆ? ಇನ್ನು, ಈ ವಿಷಯದಲ್ಲಿ ಮಹತ್ವವನ್ನು ಕೊಡತಕ್ಕದ್ದಿದ್ದರೆ, ಮಾಲತಿಗೆ ಏನೂ ಕೊಡಕೂಡದು. ಹಿಂದೂ ಧರ್ಮದ ಕಟ್ಟಳೆಗಳು ಎಷ್ಟೊಂದು ಶಿಥಿಲವಾಗಿವೆ! ಈಗಿನ ಶಿಕ್ಷಣ ಕ್ರಮವು ಎಷ್ಟೊಂದು ದೋಷಯುಕ್ತವಾಗಿದೆ! ಇವನ್ನು ಹೊಡೆದೋಡಿಸಲು ಭಾರತೀಯರಾದ ನಾವು ಎಷ್ಟೊಂದು ದುರ್ಬಲರಾಗಿದ್ದೇವೆ! ಎಂಬ ಮಹತ್ವದ ಪ್ರಶ್ನೆಗಳನ್ನು ನಾವು ಶಾಂತ ರೀತಿಯಿಂದ ಯೋಜಿಸಿ, ನಮ್ಮ ರಾಷ್ಟ್ರದಲ್ಲಿ ನಿಜವಾದ ತೇಜವು ನೆಲೆಗೊಳ್ಳುವಂತೆ ಪ್ರಯತ್ನಿಸಬೇಕು.

ಮೈಸೂರಿನ ವಿಶ್ವವಿದ್ಯಾಲಯದಲ್ಲಿ ಕನ್ನಡ ಪಂಡಿತರ (ಪ್ರೊಫೆಸರ) ನಿಯೋಜನೆಯಾಗಬೇಕಾಗಿದೆ. ಆ ಬಗ್ಗೆ ಪ್ರಕಟನೆಯೊಂದು ಬೇರೆ ಕಡೆಗೆ ಪ್ರಕಟವಾಗಿದೆ. ಬ್ರಿಟಿಶ್ ಕರ್ನಾಟಕ-ಮೈಸೂರ ಕರ್ನಾಟಕಗಳಲ್ಲಿ ಪರಸ್ಪರ ಬಳಕೆಯು ಹೆಚ್ಚಾಗಿ ಆಗಬೇಕಾದ್ದರಿಂದ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿಯ ಪಂಡಿತ-ಸ್ಥಾನಕ್ಕೆ ಮೈಸೂರಿನವರೇ ಆರಿಸಲ್ಪಡಬೇಕೆಂದು 'ಕನ್ನಡಿಗ'ನು ಆಗ್ರಹಪಟ್ಟದ್ದನ್ನು ಎಲ್ಲರೂ ಬಲ್ಲರು. ಆ ಪ್ರಕಾರವಾಗಿ ಮೈಸೂರಿನವರೇ ಸರಕಾರದಿಂದ ಆರಿಸಲ್ಪಟ್ಟಿದ್ದಾರೆ. ಈಗ್ಗೆ ಮೈಸೂರಿನ 'ಪಾಳಿಯು' ಬಂದಿದೆ. ಬ್ರಿಟಿಶ್ ಕರ್ನಾಟಕದ ಓರ್ವ ಪಂಡಿತರನ್ನೇ ಈ ಸ್ಥಾನಕ್ಕೆ ಆರಿಸುವದರಿಂದ ಪರಸ್ಪರರ ಪ್ರೀತಿಯ ಮಾರ್ಗವು ವಿಕಾಸಗೊಳ್ಳುತ್ತ ಹೋಗುವದು. ಧಾರವಾಡದ ಪ್ರಾಂತದ ಕನ್ನಡಿಗರು ವಿಶಾಲ ದೃಷ್ಟಿಯನ್ನಿಟ್ಟುಕೊಂಡು, ಮೈಸೂರಿನವರನ್ನು ಆರಿಸಿದ್ದನ್ನು ಮೈಸೂರಿನ ಅಧಿಕಾರಿಗಳು ಸರ್ವಥಾ ಮರೆಯಕೂಡದು. ಈ ವಾದವು ಹೊರಟಾಗ್ಗೆ, "ಮೈಸೂರಿನವರೇನು ನಮ್ಮ ಕಡೆಯ ಪಂಡಿತರನ್ನೇ ಆರಿಸಬೇಕೆಂಬ ಅಭಿಲಾಷೆಯುಳ್ಳವರಾಗಿಲ್ಲ. ಅವರು ಈ ವರೆಗೂ ಹೀಗೆ ಮಾಡಿಲ್ಲ; ಅವರು ಕದಾಚಿತ್ ಬ್ರಿಟಿಶ್ ಕನ್ನಡಿಗರನ್ನು ತಮ್ಮ ಸರಕಾರದಲ್ಲಿ ನಿಯಮಿಸಹತ್ತಿದರೆ, ನಾವು ಹಾಗೆ ಮಾಡಬಹುದಾಗಿ" ಮೊದಲೇ

ವಾಙ್ಮಯ ಪರಿಚಯ.

ದೇವಯಾನಿ (ಪೌರಾಣಿಕ ಕಾದಂಬರಿ) ಬರೆದವರು: ವಿರೂಪಾಕ್ಷ ಶಿವರಾವ ಕುಲಕರ್ಣಿ ರೋಣ. ಬೆಲೆ ೧ ರೂಪಾಯಿ.

“ಶ್ರೀಮದ್ಭಾಗವತದಲ್ಲಿಯೂ, ಮಹಾಭಾರತದಲ್ಲಿಯೂ ಸಂಕ್ಷಿಪ್ತವಾಗಿರುವ ಕಚೋಪಾಖ್ಯಾನವು ಇದಕ್ಕೆ ಮೂಲಾಧಾರವಾಗಿರುವದು” ಕಚದೇವಯಾನಿಯರ ಚರಿತ್ರವು ಸಾಮಾನ್ಯವಾದುದಲ್ಲ. ಪೌರಾಣಿಕ ಕಾಲದ ಅದ್ವಿತೀಯ ವ್ಯಕ್ತಿಗಳವು. ಪ್ರೇಮದ ಉದಾತ್ತ ಸ್ವರೂಪವು ಇವರ ಚರಿತ್ರದಲ್ಲಿ ಕಂಡು ಬರುವದು. ತನ್ನ ತಂದೆಯ ಕಡುಹಗೆಯ ಮಗನಾದರೂ ದೇವಯಾನಿಯು ಕಚನನ್ನು ಅನೇಕ ಸಾರೆ ಸಾವಿನ ಬಾಯೊಳಗಿಂದ ಬಿಡಿಸಿ ಕಡೆಗೆ ದುರ್ಲಭವಾದ ಸಂಜೀವನೀ ಮಂತ್ರೋಪದೇಶವನ್ನಾದರೂ ಮಾಡಿಸಿದುದು ಪ್ರೇಮಶಕ್ತಿಯ ಪ್ರಭಾವವನ್ನು ಚನ್ನಾಗಿ ತೋರಿಸುವದು. ಮಗಳ ಹಿತಕ್ಕಾಗಿ ಸರ್ವಸ್ವವನ್ನು ತೊರೆಯಲು ಸಿದ್ಧರಾದ ಶುಕ್ರಾಚಾರ್ಯರ ಮಗಳ ಮೇಲಿನ ಮಮತೆಯು ಮೇಲ್ತರಗತಿಯದು. ಕಲಿಸಲಿಕ್ಕೆಂದು ಮನೆಗೆ ಹೋಗಿ ಕೇವಲ ಪ್ರೇಮಶಿಕ್ಷಣವನ್ನೇ ಕೊಡುತ್ತಿರುವ ಯುವಕ ಯುವತಿಯರ ಚಿತ್ರವು ಸದ್ಯದ ಸಮಾಜದ ಸತ್ಯ ಸೃಷ್ಟಿಯಲ್ಲಿಯೂ ಕಾದಂಬರಿಗಳ ಕಲ್ಪಿತ ಸೃಷ್ಟಿಯಲ್ಲಿಯೂ ಕೂಡಾ ಕಂಡು ಬರುವದು. ಸಹವಾಸ ಬಲದಿಂದ ಸಮರೂಪ ವಯಸ್ಕನಾದ ತನ್ನಲ್ಲಿ ನಟ್ಟ ದೇವಯಾನಿಯ ವಿಷಯಕ ಪ್ರೇಮವನ್ನು—ಗುರುಪುತ್ರಿಯನ್ನು ತಂಗಿಯೆಂದು ಭಾವಿಸಿ—ಬಂಧುಪ್ರೇಮದಲ್ಲಿ ಪರಿಣಮಿಸುವಂತೆ ಮಾಡಿದ ಕಚನ ಸತ್ಪ್ರತಿಶಯವೂ ಗುರುಭಕ್ತಿಯೂ ನಮ್ಮ ಕಲ್ಪನೆಗೂ ಕೂಡಾ ನಿಲುಕದಷ್ಟು ಉದಾತ್ತವಾಗಿರುವವು. ಸಂದರ್ಭಾನುಸಾರವಾಗಿ ಇದರಲ್ಲಿ ಶರ್ಮಿಷ್ಠೆಯ ಚರಿತ್ರೆಯಾದರೂ ಬರುವದು. “ಯಯಾತಿ-ಶರ್ಮಿಷ್ಠಾ”—ಯೆಂದು ನೂತನ ವಧೂವರರಿಗೆ ಯಯಾತಿ-ಶರ್ಮಿಷ್ಠೆಯರ ಜೋಡು ಆದರ್ಶಪಾತ್ರವಾಗಿ ತೋರಿಸುವರು. ಇಂಥ ಉಜ್ವಲ ಚರಿತ್ರೆಯು ಕನ್ನಡದಲ್ಲಿ ಇದೂ ವರೆಗೆ ಹೆಚ್ಚಾಗಿ ಪ್ರಸಾರವಾಗಿಲ್ಲ. ಪ್ರಸ್ತುತ ಕಾದಂಬರಿಯಿಂದ ಈ ಕೊರತೆಯನ್ನು ಲೇಖಕರು ಕಳೆದಿರುವದು ಸ್ತುತ್ಯವು. ಆದರೆ ಭಾಷೆ-ಶೈಲಿಗಳ ಬಗ್ಗೆ ಮಾತ್ರ ಕೆಲವು ಸೂಚನೆಗಳನ್ನು ಮಾಡುವೆವು.

(೧) ಕಾದಂಬರಿಯಲ್ಲಿ ಬಂದಿರುವ ‘ಮದಿರಾಪಾನ’—ಮೊದಲಾದ ವಿಷಯಾಂತರಗಳು ಹರಿದು ಜೋಡಿಸಿದಂತವುಗಳಾಗದೇ ಸಂದರ್ಭಕ್ಕೆ ತಕ್ಕವುಗಳಾಗಿಯೂ, ಕಥೆಯ ಓಘದಲ್ಲಿ ಸಮರಸವಾಗಿಯೂ ಮಾಡಬೇಕು.

(೨) ಕೇವಲ ವರ್ಣನೆಗಳಲ್ಲಿ ಪ್ರಕರಣಗಳನ್ನು ಮುಗಿಸದೆ ಕಲ್ಪಿತ ವ್ಯಕ್ತಿಗಳಿಂದ ಸ್ವಭಾವ ನಿರೂಪಣೆಗೆ ಹೆಚ್ಚು ಗಮನ ಕೊಡಬೇಕು.

(೩) ‘ಮಗಳೆ!’—ಯೆಂದು ಹೇಳುವಲ್ಲಿ ‘ತನೂಭವೆ! ತನುಜೆ!’—ಯೆಂದು ಯಾಕೆ ಬೇಕು? ಸರಳ ಹಾಗು ಸುಬೋಧವಾದ ಶಬ್ದಗಳನ್ನು ಉಪಯೋಗಿಸಬೇಕು.

(೪) ಭಾಷೆಯು ಒಮ್ಮೆ ತೀರ ಸಂಸ್ಕೃತಮಯವಾದರೆ ಮತ್ತೊಮ್ಮೆ ತೀರ ಗ್ರಾಮ್ಯ ಶಬ್ದಗಳಿಂದ ತುಂಬಿರುವದು. ಶ್ರೀನಿವಾಸ, ಆನಂದಕಂದ ಮೊದಲಾದವರ ಕೃತಿಗಳನ್ನು ಓದಿ ಭಾಷೆಯ ಈ ಏರಿಳಿತಗಳನ್ನು ಸಮನಾಗುವಂತೆ ಮಾಡಬೇಕು.

ಪ್ರಸ್ತುತ ಲೇಖಕರು ಸುಖ ವಸ್ತುಗಳೂ ಶ್ರೀಮಂತರಾಗಿದ್ದರೂ ನಿಸ್ಸೀಮವಾದ ಭಕ್ತಿಯಿಂದ ದುಡಿಯುವ ತಕ್ಕ ಸೇವೆಗೆ ಮೆಚ್ಚಿ ಕರ್ನಾಟಕ ಭಾಷಾ ಮಾತೆಯು ಅವರಿಗೆ ಶುಭಾಶೀರ್ವಾದವನ್ನೀಯಲಿ.

—ಶ್ಯಾಮ.

ಸಹಕಾರ ಸಂಘಗಳಿಂದ ನಾವು ಕೆಟ್ಟೆವೋ?

ಕಳೆದ ೨೦—೨೫ ವರ್ಷಗಳಿಂದ ನಮ್ಮ ದೇಶದಲ್ಲಿ—ನಮ್ಮ ದೇಶ ಜನರ ಸ್ಥಿತಿ ಸುಧಾರಿಸಬೇಕೆಂದು ನಮ್ಮ ಸರಕಾರದವರು ಸಹಕಾರ ಸಂಘಗಳನ್ನು ಹೊರಡಿಸಿದರು. ಹೀಗೆ ೨೫ ವರ್ಷಗಳು ಕಳೆದು ಹೋದರೂ, ಸಹಕಾರ ಸಂಘಗಳಿಂದ ನಮ್ಮ ಜನರ ಸ್ಥಿತಿ ಸುಧಾರಿಸದೆ ಹೆಚ್ಚು ಕೆಡುತ್ತಿರುವದು ಅತ್ಯಂತ ದುಃಖದ ಸಂಗತಿಯು. ಅನ್ಯದೇಶಗಳಿಗೆ—ಅಲ್ಲಿಯ ಜನರಿಗೆ ಸಹಕಾರಿ ಸಂಘಗಳಿಂದ ಬೇಕಾದಷ್ಟು ಲಾಭವಾಗಿರಬಹುದು; ಅವರು ಸುಖದಲ್ಲಿ ತೇಲುತ್ತಿರಬಹುದು, ಮತ್ತು ಇಷ್ಟೆಲ್ಲ ಆದದ್ದು ಸಹಕಾರ ಸಂಘಗಳ ಪುಣ್ಯ ವಿಶೇಷದಿಂದಲೇ ಎಂದು ಹಾಡಿ ಹರಿಸಬಹುದು; ಆದರೆ ಹಿಂದೂ ದೇಶದ ದುರ್ದೈವಕ್ಕೆ ಎಂಥ ಒಳ್ಳೇ ಸಂಘಗಳಾದರೂ ಅವರ ಜೀವಕ್ಕೆ ಮುಳುವಾಗುತ್ತವೆ. ಹೀಗಾಗಲಿಕ್ಕೆ ಇಲ್ಲಿಯ ವಿಲಕ್ಷಣ ಪದ್ಧತಿಯೇ ಕಾರಣವೆಂದು ಯಾರಾದರೂ ಅನ್ನಬಹುದು. ಸಹಕಾರಿ ಸಂಘಗಳು ರೈತರ ಅನುಕೂಲಕ್ಕಾಗಿ, ಜನರ ಹಿತಕ್ಕಾಗಿ, ಇರುವವೆಂಬ ಮೂಲ ಭಾವನೆಯೇ ಅವುಗಳನ್ನು ನಡಿಸುವವರಲ್ಲಿ ಯಾವಾಗಲೂ ಜಾಗೃತವಿರದ್ದರಿಂದ ಯಾನಾಗಲೂ ಈ ವಿಷಯದಲ್ಲಿ ಜನರಿಗೆ ಭ್ರಮೆಯಾಗಿ ಅವುಗಳಿಂದ ಜನರಿಗೇನೂ ಸುಖವಾಗುವದಿಲ್ಲೆಂಬುವ ಮಾತೇನೂ ಸುಳ್ಳಲ್ಲ. ಹಿಂದೂ ದೇಶವೆಂದರೆ ಹಳ್ಳಿಗಳ ದೇಶ. ಇಲ್ಲಿ ೮ ಲಕ್ಷ ಹಳ್ಳಿಗಳಿದ್ದು, ಈಗ ಇಂಗ್ಲೀಷರ ಆಳಿಕೆಯಲ್ಲಿ ಆ ಹಳ್ಳಿಗಳೆಲ್ಲ ಹಾಳಾಗಿ ಪಟ್ಟಣಗಳಾಗುತ್ತಿವೆ. ಇಂಥ ಸ್ಥಿತಿಯಲ್ಲಿ ಹಳ್ಳಿಗಳನ್ನು ಕೇಳುವವರಾರು? ಹೆಸರಿಗೆ ಹಳ್ಳಿಗರ ಸುಸ್ಥಿತಿಗಾಗಿ ಸಹಕಾರ ಸಂಘಗಳು ಹೊರಟವು; ಆದರೆ ಅವುಗಳಿಂದ ಹಳ್ಳಿಯ ಜನರು ಹೆಚ್ಚು ಸಾಲಗಾರರಾದರೇ ವಿನಾ ಅವರ ಸಾಲ ತಪ್ಪಿ ಸುಧಾರಿಸಲಿಲ್ಲ. ಸಹಕಾರೀ ಸಂಘಗಳ ಉದ್ದೇಶವು ಜನರಿಗೆ ಬರೇ ಸಾಲ ಕೊಡುವದಷ್ಟೇ ಅಲ್ಲ; ಆದರೆ ಮುಂದುಗಾರರನ್ನು ಮಿತವ್ಯಯಿಗಳನ್ನಾ ಮಾಡುವದು, ಎಚ್ಚರಗೆಟ್ಟು ನಡೆಯುವವರನ್ನು ಎಚ್ಚತ್ತು ನಡೆಯುವಂತೆ ಮಾಡುವದು, ಕುಡುಕರನ್ನು ಕುಡಿಯುವ ವ್ಯಸನದಿಂದ ಬಿಡುಗಡೆ ಮಾಡುವದು, ದುಷ್ಟರನ್ನು ಶಿಷ್ಟರನ್ನಾಗಿ ಮಾಡುವದು, ಜನರನ್ನು ಸಂಪನ್ನರನ್ನಾಗಿ ಮಾಡುವದು. ಇವುಗಳಲ್ಲಿ ಒಂದಾದರೂ ಗುಣ ನಮ್ಮ ಜನರಲ್ಲಿ ೨೫ ವರ್ಷಗಳಾದರೂ ನಾಟಿರುವದೇನೋ? ಅಂದ ಮೇಲೆ ನಾವೇಕೆಂದು ಸಹಕಾರ ದಿನವನ್ನಾಚರಿಸುವದು? ಸರಿಯಿದ್ದವರು ಸರಿಗೆ ಹಾಕಿಕೊಂಡರೆಂದು ನೆರೆಯವರು ಉರ್ಲು ಹಾಕಿಕೊಳ್ಳುವಂತೆ ಯಿದೆ ನಮ್ಮ ಸ್ಥಿತಿಯು. ಬೇರೆ ಜನಾಂಗದವರಿಗೆ ಸಹಕಾರದಿಂದ ಚನ್ನಾಗಿ ಅವರ ದಾರಿದ್ರ್ಯ ತಪ್ಪಿತೆಂದು ಅವರು ಆನಂದದಿಂದ ಸಹಕಾರವೆಂಬ ಸಂಘವು ಹುಟ್ಟಿದ ದಿನವನ್ನಾಚರಿಸಬಹುದು; ಆದರೆ ಅವರಿಂದ ನಾವು ಈ ಹೊತ್ತು ಮುಳುಗಿದ್ದೇವೆ ಮುಳುಗುತ್ತಿದ್ದೇವೆ; ಹೀಗಾಗಲಿಕ್ಕೆ ಕಾರಣವೇನೆಂಬುದರ ರಹಸ್ಯವನ್ನು ನಮ್ಮ ಜನರು ಹಾಗೂ ಸರಕಾರದವರು ತಿಳಿದುಕೊಂಡು ಈಗಲೇ ನಡೆದರೆ ಸುಖವಾಗುವದು; ಇಲ್ಲವಾದರೆ ಪಶ್ಚಾತ್ತಾಪವು ತಟ್ಟಿಟ್ಟದ್ದೇ ಸರಿ.

—ಕರ್ನಾಟಕ ಟಾಯಿಮ್ಸ್.

ಸೋಜಿಗದ ಸುದ್ದಿ.

ಜಾಹೀರಾತುಗಳನ್ನು ದೊರಕಿಸುವ ಕಾರ್ಯವು ಸ್ತ್ರೀಯರಿಗೆ ಬಲು ಯಶಸ್ವಿಯಾಗುವದೆಂದೂ, ಅವರು ಸ್ವಲ್ಪೇ ಅನುಭವದಿಂದ ೪ ಅಂಕಿಗಳ ಪಗಾರವನ್ನು ಪಡೆಯಬಲ್ಲರೆಂದೂ, “ಸ್ತ್ರೀಯರ ಪ್ರಕಟನಾಸಂಘ”ದ ಕಾರ್ಯದರ್ಶಿಗಳಾದ ಶ್ರೀಮತಿ ಜೋಗರು ಹೇಳುತ್ತಾರೆ.

ಉತ್ತಮ ತರಗತಿಯ ಆನೆಗಳ ಕೋರೆಗಳ [illegible]ಯಲ್ಲಿ ಮುತ್ತುಗಳಿರುವದಾಗಿಯೂ ಇಂತಹ ಮುತ್ತೊಂದು ಸಿಲೋನದಲ್ಲಿ ಮೊನ್ನೆ ಬಂದ ಹಸ್ತಿದಂತದಲ್ಲಿ ದೊರೆಯಿತೆಂಬುದೂ ಪ್ರಕಟವಾಗಿದೆ.

ಕನ್ನಡಿಗ.

ಬಾಗಲಕೋಟೆ ಆಷಾಢ ಬಹುಳ ೩ ಶಕೆ ೧೮೫೯.

ಸಂಪಾದಕರ ಭೂಮಿ

(೬೧)

ನನ್ನ ಮನಸಿನ ವೀಣಾವಾಡಿ ಕಟ್ಟುವೆನಾನು।
ನಿನ್ನ ಬೆಸನವಮಾಡಿದಂಥ ಮಕ್ಕಳ ದೊವ್ಮ।
ಚಿನ್ನದಾದರು ಚಿನ್ನ ವೀಣಬಸ್ತಿಯು ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹನೆಂದು ತಿಳಿಯೊ

—ಅಂಬಿಕಾತನಯ ದತ್ತ

ಬಾಗಲಕೋಟೆಯಲ್ಲಿ ಇತ್ತಿತ್ತ ಹಿಂದೂ—ಮುಸಲ್ಮಾನರ ತಂಟೆಗಳು ಹೆಚ್ಚಾಗಿ ಉದ್ಭವಿಸುತ್ತಲಿವೆ. ಈಗ್ಗೆ ಎರಡು ವರ್ಷಗಳಿಂದ ಕಳೋಳೀ ಹುಣ್ಣಿವೆಯಲ್ಲಿ ಕಾಮದಹನವಾಗಲಿಲ್ಲ. ಮೊನ್ನೆ ಮೊನ್ನೆ ಒಕರ ಇದ್ದದಲ್ಲಿ ಮುಸಲ್ಮಾನರು ಆಕಳ ವನ್ನು ಕೊಂದರೆಂದು ಊರಲ್ಲೆಲ್ಲ ಸುದ್ದಿ ಹಬ್ಬಿತ್ತು. ಆದರೆ ಪೋಲೀಸರ ವಿಚಾರಣೆಯಿಂದ ಮುಸಲ್ಮಾನರು ಅದನ್ನು ಕೊಂಡು ತಂದಿದ್ದೆಂಡದ್ದು ತಿಳಿದು ಬಂದಿತೆಂದೂ ಆದ್ದರಿಂದ ಆ ಬಗ್ಗೆ ಕಟ್ಲೆ ಹಾಕಲು ಮಾರ್ಗವಿಲ್ಲೆಂದೂ ಕಂಡುಬಂದಿತಂತೆ. ಕಳೆದ ಏಕಾದಶಿಯಲ್ಲಿ ದೇವರ ಪಲ್ಲಕ್ಕಿಯು ಹೊರಡಬಾರದಾಗಿ ಕಲೆಕ್ಟರರ ಅಪ್ಪಣೆಯಾಯಿತು. ಈ ಪ್ರಕಾರವಾಗಿ ಹಿಂದೂ ಧರ್ಮದ ಮೆರವಣಿಗೆ, ಉತ್ಸವ, ಧಾರ್ಮಿಕ ವಿಧಿಗಳೆಲ್ಲ ಬಂದಾಗತೊಡಗಿವೆ. ಆದರೂ ಕೂಡ ಬಾಗಲಕೋಟೆಯ ಪ್ರಮುಖ ಹಿಂದೂ ಧರ್ಮೀಯರೆಲ್ಲ ಕೂಡಿಕೊಂಡು, ಈ ಪ್ರಶ್ನೆಯನ್ನು ವಿಚಾರಿಸಿ, ಈ ಬಗ್ಗೆ ಒಟ್ಟಾಗಿ ಏನು ಮಾಡತಕ್ಕದೆಂಬುದನ್ನು ಗೊತ್ತುಪಡಿಸಲು, ಹಿಂದೂ ಧರ್ಮದಲ್ಲಿಯ ಯಾವ ಜಾತಿಯವರೂ ಮುಂದೆ ಬಾರದಿದ್ದುದು ಅತ್ಯಂತ ವಿಷಾದದ ಮಾತಾಗಿದೆ. ಬ್ರಾಹ್ಮಣ, ವೀರಶೈವ ಸಾಳೀ, ಮರಾಠಾ, ವಿಶ್ವಕರ್ಮ ಮೊದಲಾದ ಎಲ್ಲ ಪಂಗಡದವರಿಗೂ ಈ ವಿಷಯದ ಮಹತ್ವವು ಸರಿಯಾಗಿರಲು, ಒಳಜಗಳದ ನೆವ ಮಾಡಿ, ಎಲ್ಲರೂ ತಮ್ಮ ತಮ್ಮ ಮನೆಯಲ್ಲಿ ಕುಳಿತರೆ, ಈ ಕಾರ್ಯವು ಸಿದ್ಧಿಗೆ ಹೋಗುವದು ಹೇಗೆ? ನಮ್ಮಲ್ಲಿ ಮತಭೇದಗಳೇನಾದರೂ ಇದ್ದಲ್ಲಿ ಅವನ್ನೆಲ್ಲ ಕಳೆದುಕೊಳ್ಳಲು ಇದು ಉತ್ತಮ ಸಂಧಿಯು. ಹಿಂದಿನ ಮನಸ್ತಾಪಗಳ ಸುದ್ದಿಯನ್ನೆತ್ತದೇ, ಅವನ್ನೆಲ್ಲ ಮೂಲೆಗೊತ್ತಿ, ಹೊಸ ಭೂಮಿಯನ್ನು ಸಿದ್ಧಪಡಿಸಿ, ಕಾರ್ಯಪ್ರವೃತ್ತರಾಗುವದು ನಗರದಲ್ಲಿ ಮುಖಂಡರೆನ್ನುವವರಿಗೆಲ್ಲ ಭೂಷಣಪ್ರದವು. ಹೀಗೆ ಸಮಯಕ್ಕೆ ತಕ್ಕ ಜಾಣತನವನ್ನು ತೋರಿಸುವಷ್ಟು ಉದಾರ ಬುದ್ಧಿಯನ್ನೂ ಕರ್ತೃತ್ವ ಶಕ್ತಿಯನ್ನೂ ಬಾಗಲಕೋಟೆಯ ಮುಂದಾಳುಗಳು ತೋರಿಸದಿದ್ದರೆ, ಮುಖಂಡರ ಯಾದಿಯನ್ನು ತಿದ್ದುವ ಪ್ರಸಂಗವು ಬರುವದಲ್ಲವೇ?

ಪುಣೆಯಲ್ಲಿ ಮಾಲತಿ—ಗುಲಾಬರ ಮದುವೆಯಾಯಿತು. ಹಿಂದೂ ಮುಸಲ್ಮಾನರ ಈ ಲಗ್ನಕ್ಕೆ ಅನೇಕರು ಕೋಪಗೊಂಡಿರುವರು ಈ ಕೋಪಮಯ ವಾತಾವರಣದ ಪೂರ್ಣ ರೇಖೆಯು ಮಾಲತಿಗೆ ಮೊದಲು ತಿಳಿದುಬಂದಿದ್ದರೂ, ಎಲ್ಲ ವಿರೋಧವನ್ನು ಧಿಕ್ಕರಿಸಿ, ಗುಲಾಬನನ್ನೇ ಕೂಡಿಕೊಂಡದ್ದು. ಅವಳ ಹೆಚ್ಚಿನ ಧೈರ್ಯ ಈ ಬಗೆಯ ಧೈರ್ಯವು ನಾಚಿಕೆ ಬಿಟ್ಟಂತಹ ಶಿಥಿಲವೃತ್ತಿಯ ಅಥವಾ ಅತ್ಯುತ್ಕಟವಾದ ಪ್ರೇಮವಿದ್ದವರಲ್ಲಿ ಕಂಡುಬರುವದು. ಯಾವ ವರ್ಗದಲ್ಲಿ ಮಾಲತಿಯನ್ನು ಸೇರಿಸಬೇಕೆಂದುದಕ್ಕೆ ಆಧಾರಗಳಿಲ್ಲ. ವಿಧವಾ ಪುನರ್ವಿವಾಹದ ಸ್ತ್ರೀಯಳ ಹೊಟ್ಟೆಯಲ್ಲಿ ಹುಟ್ಟಿದ ಮಾಲತಿಗೆ ಈ ಬಗೆಯ ವಿವಾಹದ ಕಲ್ಪನೆಗಳು ಬೇರೂರಿ ನಿಂತಿರುವದು ಸಾಕಷ್ಟು ಅವಕಾಶವಿದೆ. ವಿಧವಾ ವಿವಾಹ ಪದ್ಧತಿಯು ರೂಢವಾಗುವದಕ್ಕೆ ಅನುಕೂಲತೆಗಳನ್ನು ಒದಗಿಸಿ ಕೊಟ್ಟವರು ಮಾಲತೀ—ಗುಲಾಬರ ವಿವಾಹವನ್ನು ವಿರೋಧಿಸಲು ಮಾರ್ಗವಿಲ್ಲ. ಮಾಲತಿಯೇನೂ ಮಹಾವಿಭೂತಿಯಲ್ಲ; ರಾಜರಮಣಿಯಲ್ಲ; ಬಿ. ಎ. ಪರೀಕ್ಷೆಯಂದಾಕ್ಷಣಕ್ಕೆ ಅವಳನ್ನು ಯಾರೂ ತಲೆಯ ಮೇಲೆಯೂ ಕೂಡ್ರಿಸಿಕೊಳ್ಳುವದಿಲ್ಲ. ಸಮಾಜದಲ್ಲಿಯ ಅವುದೊಂದು ವ್ಯಕ್ತಿಯು ತನ್ನ ವೈಯುಕ್ತಿಕ ವಿಚಾರ-ಸುವಿಚಾರ-ಕುವಿಚಾರಗಳನ್ನು ಕೃತಿಯಲ್ಲಿ ತಂದರೆ ಅದಕ್ಕೆ ಇಲ್ಲದ ಮಹತ್ವವನ್ನು ಕೊಡುವದೇಕೆ? ಯಾವುದೋ ಒಂದು ತೊಪ್ಪಲವು! ಎಲ್ಲಿಯೋ ಬೀಳುತ್ತಲಿದೆ! ಇಂತಹ ಕ್ಷುಲ್ಲಕ ಪ್ರಶ್ನೆಗೆ ಅಷ್ಟೊಂದು ಮಹತ್ವವೇಕೆ? ಇನ್ನು, ಈ ವಿಷಯದಲ್ಲಿ ಮಹತ್ವವನ್ನು ಕೊಡತಕ್ಕದ್ದಿದ್ದರೆ, ಮಾಲತಿಗೆ ಏನೂ ಕೊಡಕೂಡದು. ಹಿಂದೂ ಧರ್ಮದ ಕಟ್ಟಳೆಗಳು ಎಷ್ಟೊಂದು ಶಿಥಿಲವಾಗಿವೆ! ಈಗಿನ ಶಿಕ್ಷಣ ಕ್ರಮವು ಎಷ್ಟೊಂದು ದೋಷಯುಕ್ತವಾಗಿದೆ! ಇವನ್ನು ಹೊಡೆದೋಡಿಸಲು ಭಾರತೀಯರಾದ ನಾವು ಎಷ್ಟೊಂದು ದುರ್ಬಲರಾಗಿದ್ದೇವೆ! ಎಂಬ ಮಹತ್ವದ ಪ್ರಶ್ನೆಗಳನ್ನು ನಾವು ಶಾಂತ ರೀತಿಯಿಂದ ಯೋಚಿಸಿ, ನಮ್ಮ ರಾಷ್ಟ್ರದಲ್ಲಿ ನಿಜವಾದ ತೇಜವು ನೆಲೆಗೊಳ್ಳುವಂತೆ ಪ್ರಯತ್ನಿಸಬೇಕು.

ಮೈಸೂರಿನ ವಿಶ್ವವಿದ್ಯಾಲಯದಲ್ಲಿ ಕನ್ನಡ ಪಂಡಿತರ (ಪ್ರೊಫೆಸರ) ನಿಯೋಜನೆಯಾಗಬೇಕಾಗಿದೆ. ಆ ಬಗ್ಗೆ ಪ್ರಕಟನೆಯೊಂದು ಬೇರೆ ಕಡೆಗೆ ಪ್ರಕಟವಾಗಿದೆ. ಬ್ರಿಟಿಶ್ ಕರ್ನಾಟಕ-ಮೈಸೂರ ಕರ್ನಾಟಕಗಳಲ್ಲಿ ಪರಸ್ಪರ ಬಳಿಕೆಯು ಹೆಚ್ಚಾಗಿ ಆಗಬೇಕಾದ್ದರಿಂದ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿಯ ಪಂಡಿತ-ಸ್ಥಾನಕ್ಕೆ ಮೈಸೂರಿನವರೇ ಆರಿಸಲ್ಪಡಬೇಕೆಂದು 'ಕನ್ನಡಿಗ'ನು ಆಗ್ರಹಪಟ್ಟದ್ದನ್ನು ಎಲ್ಲರೂ ಬಲ್ಲರು. ಆ ಪ್ರಕಾರವಾಗಿ ಮೈಸೂರಿನವರೇ ಸರಕಾರದಿಂದ ಆರಿಸಲ್ಪಟ್ಟಿದ್ದಾರೆ. ಈಗ್ಗೆ ಮೈಸೂರಿನ 'ಪಾಳಿಯು' ಬಂದಿದೆ. ಬ್ರಿಟಿಶ್ ಕರ್ನಾಟಕದ ಓರ್ವ ಪಂಡಿತರನ್ನೇ ಈ ಸ್ಥಾನಕ್ಕೆ ಆರಿಸುವದರಿಂದ ಪರಸ್ಪರರ ಪ್ರೀತಿಯ ಮಾರ್ಗವು ವಿಕಾಸಗೊಳ್ಳುತ್ತ ಹೋಗುವದು. ಧಾರವಾಡದ ಪ್ರಾಂತದ ಕನ್ನಡಿಗರು ವಿಶಾಲ ದೃಷ್ಟಿಯನ್ನಿಟ್ಟುಕೊಂಡು, ಮೈಸೂರಿನವರನ್ನು ಆರಿಸಿದ್ದನ್ನು ಮೈಸೂರಿನ ಅಧಿಕಾರಿಗಳು ಸರ್ವಥಾ ಮರೆಯಕೂಡದು. ಈ ವಾದವು ಹೊಂಟಾಗ್ಗೆ, "ಮೈಸೂರಿನವರೇನು ನಮ್ಮ ಕಡೆಯ ಪಂಡಿತರನ್ನೇ ಆರಿಸಬೇಕೆಂಬ ಅಭಿಲಾಷೆಯುಳ್ಳವರಾಗಿಲ್ಲ. ಅವರು ಈ ವರೆಗೂ ಹೀಗೆ ಮಾಡಿಲ್ಲ; ಅವರು ಕದಾಚಿತ್ ಬ್ರಿಟಿಶ್ ಕನ್ನಡಿಗರನ್ನು ತಮ್ಮ ಸರಕಾರದಲ್ಲಿ ನಿಯಮಿಸಹತ್ತಿದರೆ, ನಾವು ಹಾಗೆ ಮಾಡಬಹುದಾಗಿ" ಮೊದಲೇ

ಹಲವರು ಅಡಿತೋರಿಸಿದರು ಆದರೆ ಈ ಮಾರವಾಡಿ ಲೆಕ್ಕದ ವಿವರಣೆಯನ್ನು ನಾವು ಮಾಡಕೂಡದೆಂದೂ ಉದಾರ ಬುದ್ಧಿಯಿಂದ ಮೊದಲು ನಾವು ಮೇಲ್ಪಂಕ್ತಿಯನ್ನು ಎಲ್ಲರಿಗೂ ಹಾಕಿಕೊಡಬೇಕೆಂದೂ, ಉತ್ತರ ಕರ್ನಾಟಕದವರು ಈ ಬಗೆಯ ಮೇಲ್ಪಂಕ್ತಿಯನ್ನು ಬಹುದಿನಗಳಿಂದ ಹಾಕಿಕೊಡುತ್ತ ಬಂದಿರುವದರಿಂದ, ಈ ಉದಾತ್ತ ಪದ್ಧತಿಗೆ ಭಂಗ ತಂದುಕೊಡಕೂಡದೆಂದೂ, ನಾವು ಮತಪಟ್ಟಿದ್ದೆವು. ಇದನ್ನೆಲ್ಲ ಲಕ್ಷದಲ್ಲಿಟ್ಟು, ಮೈಸೂರಿನವರು, ಬ್ರಿಟಿಶ್ ಕರ್ನಾಟಕದವರನ್ನೇ ಆರಿಸುವಷ್ಟು ಜಿಗಟನ್ನು ತೋರಿಸಿದರೆ, 'ಮೈಸೂರೆಂದರೆ ಕರ್ನಾಟಕದ ಆಧಾರಸ್ತಂಭ"ವೆಂಬದಾಗಿ ನಾವೆಲ್ಲ ಹೆಮ್ಮೆಯಿಂದ ಹೇಳಿಕೊಳ್ಳುತ್ತಿರುವದು ಸಾರ್ಥಕವಾಗುವದು. ಆದರೆ "ಮೈಸೂರು ಮೈಸೂರಿನವರಿಗೆ ಮಾತ್ರ" ಎಂಬ 'ಕಿಸಿಬಾಯಿದಾಸನ' ಹಳೆಯ ಹಾಡನ್ನೇ ಹಾಡುತ್ತ ಕುಳಿತು, ಕನ್ನಡಿಗರೆಲ್ಲರಲ್ಲಿ ವಿಪರೀತ ಕಲ್ಪನೆಯಾಗುವಂತೆ ಮಾಡಕೂಡದೆಂದು ನಾವು ಆಗ್ರಹಪಡುತ್ತೇವೆ. ಇನ್ನು ಯೋಗ್ಯವಾದ ಪಂಡಿತರು ಮೈಸೂರಿನ ಹೊರಗೆ ದೊರೆಯುವರೊ ಇಲ್ಲವೋ ಎಂಬುವದು ಮುಖ್ಯ ಪ್ರಶ್ನೆಯು. ಆದರೆ ಬ್ರಿಟಿಶ್ ಕರ್ನಾಟಕದಲ್ಲಿಯೂ ಎಂತಹ ಪಂಡಿತರು ಬೇಕೋ ಅಂತಹರು ದೊರೆಯುವರೆಂಬುದನ್ನು ನಾವು ವಿಶ್ವಾಸ ಪೂರ್ವಕವಾಗಿ ಹೇಳಬಲ್ಲೆವು. ಮೈಸೂರ ಹಾಗೂ ಮೈಸೂರ ಹೊರಗಿನ ಕನ್ನಡನಾಡಿನ ಪಂಡಿತರ ಯೋಗ್ಯತೆಯಲ್ಲಿ ವ್ಯತ್ಯಾಸವಿರದಿದ್ದರೆ, ಮೈಸೂರಿನವರನ್ನೇ ಆರಿಸುವದರ ಬದಲು, ಬ್ರಿಟಿಶ್ ಕರ್ನಾಟಕದವರನ್ನೇ ಆರಿಸಿ, ಮೈಸೂರ ಕನ್ನಡಿಗರ ಹಾಗೂ ಮೈಸೂರ ಹೊರಗಿನ ಕನ್ನಡಿಗರ ಬಳಕೆಯು ಹೆಚ್ಚಾಗುವಂತೆ ಮಾಡಲು ಒದಗಿ ಬಂದ ಈ ಸುಪ್ರಸಂಗವನ್ನು ಹೋಗಗೊಡಬಾರದಾಗಿ ನಾವು ಬಲು ಒತ್ತರದಿಂದ ಆಗ್ರಹಪಡುತ್ತೇವೆ.

ಖಾದೀ ಪ್ರದರ್ಶನವು.

ದಕ್ಷಿಣ ಹಿಂದುಸ್ಥಾನದ ಖಾದೀ ಪ್ರದರ್ಶನವು ಬೆಂಗಳೂರಲ್ಲಿ ೩ನೇ ತಾ|| ದಿನ ಮಹಾತ್ಮಾ ಗಾಂಧೀಯವರ ಹಸ್ತದಿಂದ ತೆರೆಯಲ್ಪಟ್ಟಿತು. ಎರಡು ತಿಂಗಳ ಅಸ್ವಸ್ಥೆಯ ನಂತರ ಮಹಾತ್ಮರು ಸಾರ್ವಜನಿಕವಾಗಿ ಮಾತನಾಡಿದ್ದೆಂದರೆ ಇದೇ ಮೊದಲು. ಅನೇಕ ಮುಖಂಡರ ಭಾಷಣಗಳೂ ಆದವು. ತಮಿಳು, ಆಂಧ್ರ ಕರ್ನಾಟಕ ಪ್ರಾಂತಗಳಿಂದ ಖಾದಿಯ ಅಂಗಡಿಗಳೂ, ನೂಲುವ, ನೇಯುವದರಲ್ಲಿ ಪ್ರವೀಣರಾದವರೂ ಪ್ರದರ್ಶನಕ್ಕೆ ಬಂದಿದ್ದರು. ಹಿಂದುಸ್ಥಾನದಲ್ಲಿ ಪ್ರತಿವರ್ಷ ೨೫ ಲಕ್ಷ ರೂ. ಖಾದಿಯು ಹುಟ್ಟುತ್ತದೆ. ಅದರಲ್ಲಿ ೧೨ ಲಕ್ಷ ತಮಿಳ, ಆಂಧ್ರ, ಕರ್ನಾಟಕಗಳಲ್ಲಿ ಹುಟ್ಟುವದು ತಮಿಳನಾಡಿನಲ್ಲಿ ೯ ಲಕ್ಷ; ಆಂಧ್ರದಲ್ಲಿ ೧ ಲಕ್ಷ; ಕರ್ನಾಟಕದಲ್ಲಿ ಮಾತ್ರ ಹಾಗೂ ಹೀಗೂ ೧ ಲಕ್ಷ ರೂ. ಹುಟ್ಟುವಳಿಯಿದೆ ಕನ್ನಡನಾಡಿನ ಖಾದೀ ಪ್ರಚಾರಕರೂ, ವ್ಯಾಪಾರಿಗಳೂ ಇದ್ದಕ್ಕೆ ಏನೆಂದು ಉತ್ತರ ಕೊಡಬಲ್ಲರು?

ಈ ಪ್ರದರ್ಶನವು ಕರ್ನಾಟಕದಲ್ಲಿ ನಡೆದುದೇನೋ ನಿಜ. ಆದರೆ ಎಲ್ಲಿ ನೋಡಿದರೂ ತಮಿಳರದೇ ಪ್ರಾಬಲ್ಯ; ಹೆಸರಿಗೇನೋ ಶ್ರೀ ಗಂಗಾಧರರಾಯರು ಕಾರ್ಯದರ್ಶಿಗಳಾಗಿ ಕಟ್ಟಕಡೆಗೆ ಮಾಡಲ್ಪಟ್ಟರು. ಆದರೆ ಅವರ ಅಧಿಕಾರವೆಂದರೆ ಕಾಜಿನ ಗೊಂಬೆಗಿದ್ದಷ್ಟು. ಕರ್ನಾಟಕದ ಖಾದೀ ಅಂಗಡಿಗೆ ಮೂಲೆಯಲ್ಲಿ ಎತ್ತಲಾದರೂ ಸ್ಥಳ! ತಮಿಳರಿಗೆ ಮಾತ್ರ ಮುಖ್ಯಸ್ಥಾನಗಳು!

ಶ್ರೀ ಗಂಗಾಧರರಾಯರ ಬೆಳಗಾವಿಯ ಖಾದೀ ಅಂಗಡಿಯಿಂದ ಬಟ್ಟೆಗಳು ೩ ದಿನಗಳ ನಂತರ ಬಂದವು! ಆದರೆ ಆ ಬಗ್ಗೆ ಕ್ರಯದ ಪಟ್ಟಿಯಿಲ್ಲ! ಬಲ್ಲ ವ್ಯಾಪಾರಸ್ಥರೂ ಇರಲಿಲ್ಲ. ಗಿರಾಕಿಗಳು ಬಂದರೆ ಅರಿವೆ ತೋರಿಸಲಿಕ್ಕೂ, ಬೆಲೆ ಪಟ್ಟಿ ಬರೆದುಕೊಡಲಿಕ್ಕೂ ಹೆಚ್ಚು ಚೊಕ್ಕಟವಾದ ಏರ್ಪಾಡು ಬೇಕಾಗಿತ್ತು. ಕರ್ನಾಟಕದ ಸಿಂಹವು ಈ ಕಡೆಗೆ ದುರ್ಲಕ್ಷಿಸಿದ್ದೇಕೆ?

ಈ ಪ್ರದರ್ಶನದ ಸುದ್ದಿಯು ಮೊದಲಿನಿಂದ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಪ್ರಕಟಿಸಲ್ಪಡಲಿಲ್ಲ. ಕರ್ನಾಟಕ ಖಾದೀ ಚಳವಳದ ಮುಖ್ಯ ನಾಯಕರೇನೆಂದು ಉತ್ತರ ಕೊಡಬಲ್ಲರು?

ಖಾದೀ ಪ್ರದರ್ಶನದಲ್ಲಿ ಶ್ರೀಮತಿ ಕಸ್ತೂರಿಬಾಯಿ ಗಾಂಧೀ ಹಾಗೂ ಕಮಲಾದೇವಿ ಚಟ್ಟೋಪಾಧ್ಯರು ಖಾದೀ ನಿಧಿಗೆ ಹಣವನ್ನು ಕೂಡಿಸಲು ಖದ್ದರದ ಪೇಟಿಯಲ್ಲಿ ತಿರುಗಾಡುತ್ತಲಿದ್ದರು.

ಒಟ್ಟು ೧೫ ಸಾವಿರ ರೂ. ಖಾದಿಯು ಈ ಪ್ರದರ್ಶನದಲ್ಲಿ ಮಾರಲ್ಪಟ್ಟಿತು.

ಮೈಸೂರಿನ ಗುಣಗೌರವ.

ಪಂಡಿತ ಮಾಲವಿಯಾಜಿಯವರು ಮೈಸೂರಿನ ಬಗ್ಗೆ ಹೀಗೆ ಹೇಳಿದರು:— ತಮ್ಮ ಮಹಾರಾಜರ ಹಾಗೂ ಸರಕಾರದ ಬಗ್ಗೆ ಮೈಸೂರಿನ ಪ್ರಜೆಗಳು ಅಭಿಮಾನಪಡುತ್ತಿರುವದು ಯಥಾರ್ಥವಿದೆ. ಶ್ರೀಮಾನ್ ವಿಶ್ವೇಶ್ವರಯ್ಯನವರು ರಾಷ್ಟ್ರ ನಿರ್ಮಾಣ ಕಾರ್ಯವನ್ನು ಬಹು ದಕ್ಷತೆಯಿಂದಲೂ, ದೂರದೃಷ್ಟಿಯಿಂದಲೂ ಮಾಡಿದ್ದು ಆನಂದದ ವಿಷಯ. ಭದ್ರಾವತಿಯಂತಹ ದೊಡ್ಡ ಕಾರಖಾನೆಯಲ್ಲಿ ಮೇಲಿನಿಂದ ಕೆಳಗಿನ ವರೆಗಿನ ನೌಕರರು ಭಾರತೀಯರೇ ಇದ್ದು ಅವರೇ ಇದನ್ನು ನಡಿಸುತ್ತಿರುವದು ಎಲ್ಲರಿಗೂ ಅಭಿಮಾನ ಹುಟ್ಟಿಸುತ್ತಿರುವದು. ಪಾಶ್ಚಾತ್ಯ ರಾಷ್ಟ್ರಗಳಿಗೆ ಸಹ ಭದ್ರಾವತಿಯು ತನ್ನ ಸರಕುಗಳನ್ನು ಕಳಿಸುತ್ತಿರುವದು ನಮಗೆ ಮತ್ತಿಷ್ಟು ಆನಂದಪಡತಕ್ಕ ಮಾತಾಗಿದೆ. ಅಖಂಡ ಬ್ರಿಟಿಶ್ ಸಾಮ್ರಾಜ್ಯದಲ್ಲೆಲ್ಲ ಭದ್ರಾವತಿಯಂತಹ ದೊಡ್ಡ ಪ್ರಮಾಣದ ಕಟ್ಟಿಗೆಯನ್ನು ಸ್ವಚ್ಛ ಮಾಡುವ ಕಾರಖಾನೆಯು ಮತ್ತೆಲ್ಲಿಯೂ ಇಲ್ಲ ವಿಶಾಲ ದೃಷ್ಟಿಯುಳ್ಳವರಾಗಿ, ಜಾತಿಯ ಮತಭೇದಗಳನ್ನು ಬದಿಗೊತ್ತಿ, ಸ್ವದೇಶ ಪ್ರೀತಿಯಿಂದ ಪ್ರೇರಿತರಾಗಿ, ನಮ್ಮಲ್ಲಿದ್ದ ನೈಸರ್ಗಿಕ ಸೌಕರ್ಯಗಳೆಲ್ಲ ಈಗಿನ ಶಾಸ್ತ್ರೀಯ ಶೋಧಗಳಿಂದ ನಮಗೆ ಲಾಭ ಕೊಡುವ ಹಾಗೆ ಮಾಡಿದರೆ, ಭಾರತೀಯರನ್ನು ಜಗತ್ತಿನಲ್ಲಿ ಯಾರೂ ಹಿಂದಕ್ಕೊತ್ತಲಾರರು.

ಮುಂಬೈ ಸರಕಾರದ ಗ್ಯಾಝೆಟ್.

ವಿಜಾಪೂರ ಮಾಮಲೇದಾರ ಅಬ್ದುಲ್ ರಹಿಮಾನರಿಗೆ ೧ನೇ ವರ್ಗ ಮ್ಯಾಜಿಸ್ಟ್ರೇಟರ ಅಧಿಕಾರ ದೊರಕಿದೆ.

ಡೆಕ್ಕನ್ನ ಕಾಲೇಜದ ಪ್ರೊ. ಬೆಳವಲಕರರು ರಜೆ ಪಡೆದುಕೊಂಡಿದ್ದರಿಂದ, ಅವರ ಕೆಲಸವನ್ನು ಉಟಗೀಕರರು ನೋಡುವರು

ವ್ಯಾಪಾರದ ಸುದ್ದಿಗಳು.

ಮುಂಬೈ ತಾ. ೧೪—೭—೨೭

ಬಂಗಾರ, ೨೧||; ಬೆಳ್ಳಿ, ೫೮|||=‘; ಪವನ ೧೩|=‘ ವಾಸಿಂಗ ಸೋಡಾ, [illegible] ಕಾಸ್ಟಿಕ್ ಸೋಡಾ (೯೮), ೧೩|, ಭತೋಷ ಅರಳೆ ೩೪೧.

ಇಹವೃತ್ತ

ಈ ವಾರದಲ್ಲಿ ಮೋಡಗಳು ಬಹಳಾಗಿ ಸುಳಿದಾಡುತ್ತಲಿದ್ದವು ಮಳೆಯು ಮಾತ್ರ ಆಗಲಿಲ್ಲ. ಸಿಡಿ ಹನಿಗಳುಆಗಾಗ ಉದುರಿದವು. ಆದ ಆ ಮಲೆನಾಡಿನಂತೆ ಸೂರ್ಯದರ್ಶನದ ಅಭಾವವೂ, ತಂಪು ಹವೆಯೂ, ೪-೬ ವರ್ಷಗಳಲ್ಲಿ ಈ ಪ್ರಾಂತಕ್ಕಿರಲಿಲ್ಲ. ಗಾಳಿಯು ಪ್ರಚಂಡವಾಗಿ ಬೀಸುತ್ತಲಿದೆ. ಮಾರಿಕಾ ಬೇನೆಯು ಅತ್ಯಲ್ಪ ಪ್ರಮಾಣದಲ್ಲಿ ಇನ್ನೂ ಇದೆ.

ಮುಂಬೈಯಿಯ 'ಟೈಮ್ಸ ಆಫ ಇಂಡಿಯಾ' ದೈನಿಕ ಪತ್ರಿಕೆಯು ಇಲ್ಲಿಯ ಅವರ ದಳಳ್ಳಿಳರಿಂದ ಊರಲ್ಲಿ ಫುಕ್ಕಟೆಯಾಗಿ ಹಂಚಲ್ಪಡುತ್ತಲಿದೆ. ಈ ಪತ್ರಿಕೆಯನ್ನು ಪ್ರೀತಿಸುವವರು ಅವನ್ನು ಪ್ರೋತ್ಸಾಹಿಸಬೇಕು.

ಮೋಹರಮ್ಮದಲ್ಲಿ ಪೋಲೀಸರ ಕಾವಲಿದ್ದುದರಿಂದ ಗದ್ದಲವೇನಾಗಲಿಲ್ಲ. ದೇವರ ಪಲ್ಲಕ್ಕಿಯ ಮೆರೆವಣಿಗೆಗೆ ಅಪ್ಪಣೆ ದೊರೆಯದ್ದರಿಂದ ಹಿಂದೂ ಜನರಲ್ಲಿ ಅಸಮಾಧಾನವುಂಟಾಗಿದೆ. ಆದರೆ ಅದನ್ನು ಹೋಗಲಾಡಿಸುವಂತೆ ಪ್ರಯತ್ನಿಸಲು ಬಾಗಲಕೋಟೆಯ ಹಿಂದೂ ಧರ್ಮದ ಎಲ್ಲ ಪಂಗಡಗಳ ಮುಂದಾಳುಗಳು ಬೊಂಕ ಕಟ್ಟಿ ಮುಂದಕ್ಕೆ ಬಂದಿಲ್ಲವಾದ್ದರಿಂದ, ಕೈಯಲ್ಲಿ ಬಳೆ ಕಟ್ಟಿಕೊಂಡು ಮನೆಯಲ್ಲಿ ಕುಳಿತಿರುವರೆನ್ನಬಹುದೋ?

ಮೈಸೂರ ಕರ್ನಾಟಕ.

ಕಾಲೀಕತ್ತ ಕಡೆಯ ಟಪಾಲು ಮೈಸೂರಿಗೆ ೨೪ ತಾಸುಗಳಲ್ಲಿ ತಲ್ಪುವಂತೆ, ಮೈತ್ರಿ, ಮೆಪ್ಪಾಡಿ, ಗೂಡಾಲೂರ, ಉದಕಮಂಡಲದಿಂದ ಮೋಟಾರನ್ನು ಅಕ್ಟೋಬರದಿಂದ ಪ್ರಾರಂಭಿಸುವರು.

(೧) ಹೊಯ್ಸಳರ ಇತಿಹಾಸ; (೨) ಹೈದರಲ್ಲಿ ಕಾಲದ ಮೈಸೂರ ಸ್ಥಿತಿ. (೩) ವೀರಶೈವರ ಇತಿಹಾಸ. ಈ ಮೂವರಲ್ಲಿ ಬೇಕಾದುದನ್ನು ಆರಿಸಿ ೩೦ನೇ ಜೂನ ೧೯೨೮ ರೊಳಗಾಗಿ ನಿಬಂಧ ಬರೆದು ಕಳುಹಿಸಿದವರಲ್ಲಿ ಉತ್ತಮ ಕಂಡವರಿಗೆ ೧೦೦ ರೂ. ಬೆಲೆಯ ಸುವರ್ಣ ಪದಕವು ಮೈಸೂರ ವಿಶ್ವವಿದ್ಯಾಲಯದಿಂದ ಕೊಡಲ್ಪಡುವದು. ಭಾರತೀಯ ವಿಶ್ವವಿದ್ಯಾಲಯಗಳ ಎಲ್ಲ ಪದವೀಧರರೂ ಇದನ್ನು ಬರೆಯಬಹುದು.

ಶ್ರೀ ಶೃಂಗೇರಿ ಸ್ವಾಮಿಗಳು ನಂಜನಗೂಡಿನಲ್ಲಿ ಚಾತುರ್ಮಾಸ್ಯಕ್ಕೆ ಕುಳಿತಿರುವರು.

ಶ್ರೀಮದ್ಯುವರಾಜರು ಮುಂಬೈಗೆ ೧೫ಕ್ಕೆ ಬಂದು ೨೦ನೇ ತಾರೀಖಿಗೆ ಮೈಸೂರಿಗೆ ಹೋಗುವರು. ಪರದೇಶದಲ್ಲಿ ವಿಹಾರ ಮಾಡಲು ಮತ್ತೊಂದು ಹೊರಡುವರೋ ನೋಡಬೇಕು.

ಮೈಸೂರ ಮಹಾರಾಜರು ಕುದುರೆಗಳ ಪಂದ್ಯಾಟದಲ್ಲಿಟ್ಟ ಪಾರಿತೋಷಕವು ಕೊಲ್ಹಾಪೂರ ಮಹಾರಾಜರಿಗೆ ದೊರೆತಿದೆ. ಇದಕ್ಕಾಗಿ ಮೈಸೂರ ಮಹಾರಾಜರು ಕೊಲ್ಹಾಪೂರ ಮಹಾರಾಜರನ್ನು ಅಭಿನಂದಿಸಿದರು.

ಮಹಾರಾಜರ ರಜತೋತ್ಸವಕ್ಕಾಗಿ ೪೦ ಸಾವಿರ ರೂ. ಗಳು ಕೂಡಿವೆ. ಈ ವಾರದಲ್ಲಿ ಸರ ಇಸ್ಮಾಯಿಲ ಸೇಟರು ೫೦೦೦ ಕೆ. ಸೈಟಕಲ್ಲಪ್ಪನವರು ೨೫೦೦ ಡಿ ಎನ್. ಸಿರೂರರು, ೧೫೦೦ ಹಾಗೂ, ವಿನೋದರತ್ನಾಕರ ವೀರಣ್ಣನವರೂ, ಶಹಾ ಚಮನ್ ಲಾಲರೂ, ಕೈ ಸಂ ಹಿಂದ ಗಣಿಯವರೂ, ಒಂದೊಂದು ಸಾವಿರ ರೂಪಾಯಿಗಳನ್ನು ಕೊಟ್ಟಿರುವರು.

ಸರಕಾರದವರು ಬ್ರಿಟಿಶ್ ಕುದುರೆ ಸವಾರರನ್ನು ಬೆಂಗಳೂರ ಲಷ್ಕರದಿಂದ ಒಡಿಸಿದ್ದಕ್ಕಾಗಿ, ಅಲ್ಲಿಯ ವ್ಯಾಪಾರಕ್ಕೆ ಬಹು ಹಾನಿಯಾಗಿದೆ. ಅನೇಕ ಬಂಗಲೆಗಳೂ, ಅಶ್ವಶಾಲೆಗಳೂ ಬರಿದಾಗಿವೆ.

ಮುಂಬೈ ಕರ್ನಾಟಕ.

ವಿಜಾಪೂರ ಜಿಲ್ಲೆಯ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಪರಿಷತ್ತು ಕಲೆಕ್ಟರರಾದ ಶ್ರೀ ನಾಯಿಕರ ಅಧ್ಯಕ್ಷತೆಯಲ್ಲಿ ವಿಜಾಪೂರದಲ್ಲಿ ಜರುಗಿತು. ಸಂಯುಕ್ತ ಮತದಾರರ ಯೋಜನೆಯು ಅಮಲಿನಲ್ಲಿ ಬರಬೇಕಾಗಿಯೂ, ಜಾತಿವಾರ ಆರಿಸುವಿಕೆಯ ಪದ್ಧತಿಯನ್ನು ರದ್ದು ಮಾಡಬೇಕಾಗಿಯೂ ಠರಾವು ಆಗಿದೆ ಇದು ಪಾಸಾದುದಕ್ಕಾಗಿ ದಿವಾಣ ಸಾಹೇಬ ಜಾನವೇಕರರು ಸಭೆಯಿಂದ ಎದ್ದು ಹೋದರಂತೆ!

ಸೊಲ್ಲಾಪುರದಲ್ಲಿ ಏಕಾದಶಿಯ ದಿನ ರಥದ ಮೆರವಣಿಗೆಯು ನಡೆದ ಕಾಲಕ್ಕೆ, ಮೊಹರಮ್ಮದಲ್ಲಿ ಹಲವು ಮುಸಲ್ಮಾನರ 'ಹುಲಿಗ'ಳು, ಒಳನುಗ್ಗಿ, ತಮ್ಮ ಕೈಯಲ್ಲಿಯ ಚಾಕುವಿನಿಂದ ಜನರಿಗೆ ಗಾಯಪಡಿಸಿದರು. ಕೂಡಲೇ ಹಿಂದೂ ಜನರು ಅವರ ಬೆನ್ನು ಹತ್ತಿದರು. ಅವರು ಸಮೀಪದಲ್ಲಿಯ ಮುಸಲ್ಮಾನರ ಚಹದ ಅಂಗಡಿಯಲ್ಲಿ ಸೇರಿ, ಬಾಗಿಲ ಹಾಕಿಕೊಂಡು ಕುಳಿತರು. ಬಾಗಿಲ ಒಡೆದು ಒಳನುಗ್ಗಿ, ಹಿಂದೂ ಜನರು ಮುಸಲ್ಮಾನರನ್ನು ಚನ್ನಾಗಿ ಥಳಿಸುತ್ತಿರುವಾಗ್ಗೆ, ಪೋಲೀಸ ಸಾಹೇಬರು ಬಂದು, ದಂಗೆಯನ್ನು ಮುರಿದರು ಮುಂದೆ ಮೆರವಣಿಗೆಯು ಗೊಂದಲವಿಲ್ಲದಂತೆ ಸಾಗಿತು. ಒಟ್ಟು ೩೪ ಜನ ಮುಸಲ್ಮಾನರೂ, ೪ ಹಿಂದೂ ಜನರೂ ಗಾಯಹೊಂದಿರುವರು ಇಬ್ಬರು ಮಾತ್ರ ಬದಕುವಹಾಗಿಲ್ಲ.

ಬೆಳಗಾವಿಯ ಸ್ಕೂಲಬೋರ್ಡಿನವರು ೬೮ ಪ್ರಾಥಮಿಕ ಶಾಲೆಗಳನ್ನು ಬಂದುಮಾಡಿ ೧೦೦ ಜನ ಶಿಕ್ಷಕರಿಗೆ ಮನೆಗೆ ಹೋಗಲು ಅಪ್ಪಣೆ ಕೊಟ್ಟಿರುವರು! ಶಿಕ್ಷಕರಲ್ಲಿ ಒಳ್ಳೇ ಅಸಮಾಧಾನವುಂಟಾಗಿದೆ.

ಮುಂಬೈ ಇಲಾಖೆಯ ಹೈಸ್ಕೂಲ ಶಿಕ್ಷಕರ ಪರಿಷತ್ತನ್ನು ಧಾರವಾಡದಲ್ಲಿ ಅಕ್ಟೋಬರ ತಿಂಗಳಲ್ಲಿ ಕೂಡಿಸಬೇಕಾಗಿ ಗೊತ್ತಾಗಿದೆ.

ಕೊಡಗು ಕರ್ನಾಟಕ

ತುರಂಗಗಳ ಗೌರವ ಮೇಲ್ವಿಚಾರಕರಾಗಿ ಈ ಸಲ ಶ್ರೀಮತಿ ಕೆ. ಸಿ. ತಿಂಮ್ಮಯ್ಯನವರೆಂಬ ಸ್ತ್ರೀಯರೂ ಸರಕಾರದಿಂದ ನೇಮಿಸಲ್ಪಟ್ಟಿರುವರು.

ತಮ್ಮ ರಾಜಕೀಯ ಹಕ್ಕುಗಳ ಬಗ್ಗೆ ವೈಸರಾಯರ ಕಡೆಗೆ ಶಿಷ್ಟ ಮಂಡಲವನ್ನು ಕಳಿಸಬೇಕಾಗಿ ಕೊಡಗಿನ ಕನ್ನಡಿಗರು ಹಾತೊರೆಯುತ್ತಲಿದ್ದರು. ಆದರೆ ಅದಕ್ಕೆ ಸ್ಥಾನಿಕ ಅಧಿಕಾರಿಗಳಿಂದ ಅಪ್ಪಣೆ ದೊರೆಯಲಿಲ್ಲವಾದ್ದರಿಂದ, ಜನರು ವೈಸರಾಯರಿಗೆ ತಂತಿ ಕಳಿಸಿದರು, ಶಿಷ್ಟ ಮಂಡಲವನ್ನು ಸ್ವೀಕರಿಸಲು, ಅವಕಾಶವಿಲ್ಲವೆಂದೂ ಆದರೆ ವೈಸರಾಯರು ಸ್ವತಃ ಕೊಡಗನ್ನು ಬೇಗನೇ ಸಂದರ್ಶಿಸುವರೆಂದೂ ಉತ್ತರ ಬಂದುದರಿಂದ ಜನರಿಗೆ ಸಲ್ಪ ಸಮಾಧಾನವಾಗಿದೆ.

ಹಿಂದುಸ್ಥಾನ ತೆರಿಗೆಯನ್ನು ರದ್ದುಪಡಿಸದ ಹೊರ್ತು ಆವ ಜೈನರು ಶತ್ರುಂಜಯ ಕ್ಷೇತ್ರಕ್ಕೆ ಹೋಗಕೂಡದಾಗಿ ಜೈನರು ನಿಶ್ಚಯಿಸಿರುವರು.

ಕಳೆದ ವಾರದಲ್ಲಾದ ಮಳೆಯ ವಿವರ.

ಕಾರವಾರ ೨೦ ಇಂಚು; ಸಿಂದಗಿ ೧-೪೫; ಬೆಳಗಾವಿ ೩-೮೬. ಧಾರವಾಡ ೧-೯೪, ಮಂಗಳೂರ ೧-೯೬; ಬೆಂಗಳೂರ ೨೮

ಜಾಹಿರ ನೋಟೀಸು.

ಬಸವ್ವಾ ಕೊಂ ನಿಂಗಪ್ಪಾ ಹಡಪದ ಸಾ॥ ರಡ್ಡೇರತಿಮ್ಮಾಪೂರ ಹಲ್ಲಿವಸ್ತಿ ಹಡಗಲಿ ಕೇರ ಆಫ ಡಿ ಡಿ ಜೋಶಿ ಪ್ಲೀಡರ ಧಾರವಾಡ ಇವರಿಗೆ—

ನೀನು ಕೊಟ್ಟ ನೋಟೀಸಿನ ಮಜಕೂರು ಸುಳ್ಳು ಇರುತ್ತದೆ. ನಿಂನನ್ನು ನಾನು ಹೊಡೆದು ಬಡಿದು ಯಂದೂ ಹೊರಗೆ ಹಾಕಿಲ್ಲಾ ಈಗ ವಂದು ವರ್ಷದ ಕೆಳಗೆ ನೀನು ನಿಂನ ತವರಮನಿಗೆ ಹೋದವಳು ಪುನಃ ಕೆಲವು ದಿವಸಗಳ ಮೇಲೆ ಬಂದಿದ್ದು ಪುನಃ ತಿರುಗಿ ಹೋದವಳು ತಿರುಗಿ ನೀನಾಗಿ ಬಂದಿಲ್ಲಾ. ನಿಂನ ತವರಮನಿಯವರು ನಿನ್ನಮೇಲೆ ಯೇನೂ ದಾಗೀನೆ ಇಟ್ಟಿದ್ದಿಲ್ಲಾ ದಾಗೀನೆಗಳ ಮಜಕೂರು ಅಗದೀ ಸುಳ್ಳು ಇರುತ್ತದೆ. ನಾನು ದಾಗೀನೆ ಕಸಕೊಂಡೆನೆಂಬುವದು ಸುಳ್ಳು ವ ಮತಲಬೀಯ ಮಜಕೂರು ಇರುತ್ತದೆ. ಆದ್ರೆ ನಾನು ಸ್ವತಃ ನಿಂನ ಮೈಮೇಲೆ ಇಟ್ಟ ದಾಗೀನೆಗಳು ನಿಂನ ಹತ್ತರ ಇರುತ್ತವೆ. ೧೦ ತೊಲಿ ಸರಗಿ, ಬಳಿ ೬ ತೊಲಿ ಬೆಳ್ಳಿ ವಂಕಿ ಜೋಡು, ಮತ್ತು ಕಿರಕಳ ದಾಗೀನೆ ೧೦೦ ರುಪಾಯಿ ದ್ದು ಈ ಪ್ರಕಾರಾ ದಾಗೀನೆಗಳನ್ನು ನಾನು ನಿಂನ ಮೇಲೆ ಹಾಕಿದ್ದು ಅವುಗಳನ್ನು ನುಂಗಬೇಕೆಂದು ಖೊಟ್ಟಿ ನೋಟೀಸ ಕೊಟ್ಟಿರುತ್ತೀದಿ. ನೀನು ಕುಟ್ಟಿ ಬೀಸಿ ಹೊಟ್ಟೆ ತುಂಬಿಕೊಂಡದ್ದು ಮತ್ತು ಹೊಟ್ಟೆಯ ಸಲುವಾಗಿ ದೇಣೇ ಮಾಡಿದ್ದು ಸುಳ್ಳು ಇರುತ್ತದೆ. ಹಾಗೆ ಮಾಡಲಿಕ್ಕೆ ಏನೂ ಕಾರಣ ಇಲ್ಲಾ ಸುಳ್ಳು ಸಾಲ ನಮೂದ ಮಾಡಿರುತ್ತೀದಿ. ಕಾರಣ ನಾನು ಜವಾಬದಾರನಲ್ಲಾ ನೀನು ಎರಡನೇದವರನ್ನು ವುಡಕಿ ಮಾಡಿಕೊಂಡು ಹೋಗುತ್ತೇನೆ ಅನ್ನುವ ಮಜಕೂರಿಗೆ ನಾನು ಕಬೂಲ ಇಲ್ಲಾ ಮತ್ತು ನೀನು ಹಾಗೆ ಮಾಡುವದು ವ ಅದರಂತೆ ಅಂಜಿಕೆ ಹಾಕುವದು ಬೇಕಾಯದೇಶೀರ ಇರುತ್ತದೆ. ನೀನು ನಂನ ಮನೀಗೆ ಬಂದಲ್ಲಿ ನಾನು ನಿನ್ನನ್ನು ಸಂರಕ್ಷಣೆ ಮಾಡಲಿಕ್ಕೆ ಕಬೂಲ ಇರುತ್ತೇನೆ. ನೀನು ಜರ ವುಡಕಿ ಮಾಡಿಕೊಂಡರೆ ಅಥವಾ ನನ್ನ ಮನಿಗೆ ಬರದಿದ್ದರೆ ನಿಂನ ಮೇಲೆ ವ ನಿನ್ನನ್ನು ಬಿಥಾಯಿಸುವವರ ಮೇಲೆ ಯೋಗ್ಯ ಫವಜದಾರಿ ವ ದಿವಾಣಿ ಕೆಲ್ಸ ನಡಿಸುತ್ತೇನೆ. ಮತ್ತು ನಿನ್ನ ಕಜ್ಜಾದ ಬಗ್ಗೆ ಯೋಗ್ಯ ಕಾಯದೇಶೀರ ಇಲಾಜ ಮಾಡಿಕೊಳ್ಳುತ್ತೇನೆ ನೀನು ನಮ್ಮ ಮನಿಗೆ ಬಂದಲ್ಲಿ ಹೆಂಡತಿಯಂತೆ ನಿನ್ನನ್ನು ಸಂರಕ್ಷಣೆ ಮಾಡುತ್ತೇನೆ. ಈ ಮಜಕೂರು ನಿನಗೆ ತಿಳಿದಿರಬೇಕು ಅಂತಾ ಕೊಟ್ಟ ನೋಟೀಸ

ಸಹಿ ತಾ॥೧೪-೭-೨೨

() ಈ ಎಡಗೈ ಹೆಬ್ಬರಳಿನ ಗುರ್ತು ನಿಂಗಪ್ಪಾ ತಂದಿ ರಾಮಪ್ಪಾ ಹಡಪದ ಈತಂದು ಅದೆ

ಕರ್ನಾಟಕ ಹಿಂದೀ ಪರಿಷತ್ತು

ಬೆಂಗಳೂರಲ್ಲಿ ಈ ಪರಿಷತ್ತು ನೆರವೇರಿತು ಪಂಡಿತ ಮಾಲವಿಯಾಜಿ ಯವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಹಿಂದೀ ಭಾಷೆ, ದೇವನಗರ ಲಿಪಿಗಳು ಸರ್ವ ಮಾನ್ಯವಾಗಬೇಕಾಗಿ ಜನ್ನಾಗಿ ವಿವರಿಸಿ ಹೇಳಿದರು. ಮಹಾತ್ಮರೂ ಹೀಗೇ ಮತಪಟ್ಟರು. ಶಾಲೆ ಕಾಲೇಜಗಳಲ್ಲಿ ಹಿಂದೀ ಭಾಷೆಯು ಆವಶ್ಯಕ ವಿಷಯವಾಗಿರುವಂತೆ ಏರ್ಪಾಡ ಮಾಡಬೇಕೆಂದು ಮೈಸೂರ ವಿಶ್ವವಿದ್ಯಾಲಯಕ್ಕೆ ಹಾಗೂ ಸರಕಾರಕ್ಕೆ ಪ್ರಾರ್ಥಿಸುವ ಠರಾವುಗಳಾದವು ಕ್ರಿಶ್ಚನ್ನರೂ, ಹಂಡಬಂಡ ಸಾಹೇಬರೂ ಸಹ ಹಿಂದೀ ಕಲಿಯಬೇಕಾಗಿ ಮಂಗಳೂರಿನ ಶ್ರೀ ಪಾದ್ರಾ ಸಾ ಸಾಹೇಬರು ಹೇಳಿದರು

ಸಮುದ್ರ ಸ್ನಾನ ಮಾಡತಕ್ಕವರಲ್ಲಿ ಭಯ.

ಶ್ರೀ ಜಗನ್ನಾಥ ಪುರಿಯಲ್ಲಿ ಓರ್ವ ಬಂಗಾಲಿ ತರುಣನು ಸಮುದ್ರದಲ್ಲಿ ಸ್ನಾನ ಮಾಡುತ್ತಿರಲು, ಎಡದ ತೋಳಿಗೆ ಯಾರೋ ಹೊಡೆದಂತೆ ಭಾಸವಾಯಿತು! ಕೂಡಲೇ ಅವನಿಗೆ ಶೂಲೆಯುಂಟಾಗಿ ತೋಳು ಬಾತಿತು, ನಂತರ ಅಸಹ್ಯವಾದ ವೇದನೆಯು ದೇಹದಲ್ಲೆಲ್ಲ ಉಂಟಾಗಿ ಶರೀರವೆಲ್ಲ ಸುಡುವಂತೆ ಅವನಿಗೆ ಅನಿಸಹತ್ತಿತು. ಆಘೂದ 'ಇಂಜೆಕ್ಶನ್' ಕೊಟ್ಟು ಹೇಗಾದರೂ ನಿದ್ರೆ ಬರುವಂತೆ ಡಾಕ್ಟರರು ಪ್ರಯತ್ನಿಸಿದರು. ಮುಂದೇನಾಗುವದೋ ನೋಡಬೇಕು. ನೀರಿನಲ್ಲಿಯ ವಿಷ ಸರ್ಪದ ಬಾಲದ ಹೊಡತದಿಂದ ಹೀಗಾಗಿರಬೇಕೆಂಬು ಡಾಕ್ಟರರ ಮತವಿದ್ದುದರಿಂದ ಸಮುದ್ರ ಸ್ನಾನಕ್ಕೆ ಹೋಗುವ ಜನರಲ್ಲೆಲ್ಲ ಶ್ರೀ ಕ್ಷೇತ್ರ ಜಗನ್ನಾಥ ಪುರಿಯಲ್ಲಿ ಭಯವುಂಟಾಗಿದೆ

ಹಿಂದು ಸ್ಥಾನ.

ಜಮಶೇಟಪುರದಲ್ಲಿ ಟಾಟಾ ಕಂಪನಿಯ ಕಬ್ಬಿಣ ಕಾರಖಾನೆಯ ಕೂಲಿಯವರು ೧೫ ಫೂಟ ಭೂಮಿಯನ್ನು ಒಂದು ಸ್ಥಳದಲ್ಲಿ ಅಗೆದ ಕೂಡಲೇ, ಒಳಗೇ ಹೋದರು! ಅಲ್ಲಿ ೪ ಫೂಟ ಅಳವಾದ ಗುಹವೊಂದು ದೊರೆತಿತು! ಆ ಗುಹವು ಬೇರೆ ಕಡೆಗೆ ಬಹು ಆಳವಾಗಿದ್ದು, ಅದರ ನೆಲೆಯು ಇನ್ನೂ ಹತ್ತಿಲ್ಲ.

ಆಂಧ್ರ ವಿಶ್ವವಿದ್ಯಾಲಯದ ಪದವೀಧರರಿಗೆ ಅಯ್ ಸಿ ಯಸ್. ಪರೀಕ್ಷೆಗೆ ಕೂಡಲು ಅಪ್ಪಣೆ ಇಲ್ಲವಂತೆ! ಇದೊಂದು ಹೊಸ ಮಾದರಿಯ ಕಟ್ಟಳೆ! ಕನ್ನಡಿಗರನ್ನು ಸೆಳೆದುಕೊಳ್ಳಬೇಕೆಂದು ಹಾತೊರೆಯುತ್ತಿರುವ ಆಂಧ್ರರಿಗೆ ಇದೊಂದು ಹೊಸ ಹುಲಿಯ ಗಂಟು ಬಿದ್ದಂತಾಗಿದೆ!

ಇವತ್ತಿನ ದಿವಸ ಅನಗವಾಡಿಗೆ ಹೋಗುವದಕ್ಕೆ ಬಂಕಾಪುರ ಮೋಟರ ಸರ್ವ್ಹಿಸ್‌ದಲ್ಲಿ ಏಂಟಾಣೆ ಕೊಟ್ಟು ತಿಕೀಟು ತೆಗೆದುಕೊಂಡನು. ಮೋಟರದ ಮಾಲಕನಾದ ಶ್ರೀ ಹಣಮಂತಸಾ ಬಂಕಾಪುರನು ಟಿಕೀಟು ಕೊಟ್ಟು ಇನ್ನು ಅರ್ಧ ಘಂಟೆಯಲ್ಲಿ ಹೊರಡುವದೆಂದು ಮುಂಜಾನೆ ೭ ಘಂಟೆಗೆ ಹೇಳಿದನು ೭॥-೮ ಘಂಟೆಯಾಯಿತು ಹೊರಡಲಿಲ್ಲ ಬೇಸತ್ತು 'ಕನ್ನಡಿಗ'ನ ಕಾರ್ಯಾಲಯದಲ್ಲಿ ಕಾದಿರುತ್ತೇನೆ, ಹೋಗುವಾಗ ಕರೆದುಕೊಂಡು ಹೋಗಬೇಕೆಂದು ಮಾಲಕನಿಗೆ ಹೇಳಿ, ಅವನು ಒಪ್ಪಲಾಗಿ ಆ ಪ್ರಕಾರ 'ಕನ್ನಡಿಗ'ನ ಕಾರ್ಯಾಲಯದಲ್ಲಿ ೯। ಘಂಟೆಯ ವರೆಗೆ ದಾರೀ ನೋಡಿದೆನು. ಅಷ್ಟರಲ್ಲಿ ಪುನಃ ಶ್ರೀ ಹಣಮಂತಸಾ ಇವನು ಎದುರಿನಲ್ಲಿಯೇ ಹಾದು ಹೋಗುವದನ್ನು ಕಂಡು ಪುನಃ ಅವನನ್ನು ಒಸರಿ ಇಲ್ಲಿಯೇ ದಾರೀ ನೋಡುತ್ತ ಕುಳಿತಿರುವೆನು. ಹೋಗುವಾಗ ಮರೆಯದೆ ಕರೆದುಕೊಂಡು ಹೋಗಬೇಕೆಂದು ಹೇಳಿದೆ. ಹಾಗೆಯೇ ಆಗಲಿ ಎಂದು ಹೇಳಿ ಅವನು ಹೊರಟು ಹೋದನು. ಅದರ ೯॥ ಘಂಟೆಯ ಸುಮಾರಕ್ಕೆ ಮೋಟರದ ಸಪ್ಪಳವನ್ನು ಕೇಳಿ ಹೊರಗೆ ಬಂದು ನೋಡುವಷ್ಟರಲ್ಲಿ ಮೋಟರವು ದೂರ ಹೋಗಿಬಿಟ್ಟಿತ್ತು ಬಂಕಾಪುರ ಮೋಟರ ಅಹುದೋ ಅಲ್ಲೋ ಎಂದು ಸಂಶಯಗೊಂಡು ಸ್ಟ್ಯಾಂಡದ ವರೆಗೆ ಹೋಗಿ ನೋಡಲಾಗಿ ಅಹುದಾಗಿತ್ತು. ಉಳಿದರಡು ಮೋಟರದವರಿಗೇನಾದರೂ ಹೇಳಿ ಹೋಗಿರುವನೋ ಎಂದು ಶೋಧಿಸಲಾಗಿ ಹಾಗೆಯೂ ಮಾಡಲಿಲ್ಲ. ಅಷ್ಟರಲ್ಲಿ ನನ್ನ ತೆರೋ ತಿಕೀಟು ಪಡೆದುಕೊಂಡಿದ್ದ ಇನ್ನೊಬ್ಬ ಗೃಹಸ್ಥನು ಅಲ್ಲಿಗೆ ಬಂದನು. ಅವನಾದರೂ ಎರಡನೇ ಮೋಟರದಲ್ಲಿ ಪುನಃ ತಿಕೀಟು ತೆಗೆದುಕೊಂಡು ಹೋದನು ಈ ರೀತಿ ಅವ್ಯವಸ್ಥೆಯು ನಡೆದಿದೆ. ಅತ್ತ ಪೋಲೀಸ ಅಧಿಕಾರಿಗಳು ಲಕ್ಷ್ಯ ಕೊಡುವರೋ?

ಬಾಗಲಕೋಟ
ತಾ॥ ೧೦-೭-೨೨ } ತ ಬ. ಪುರೋಹಿತ.

ಜಾಹಿರ ನೋಟೀಸು.

ಬಸವ್ವಾ ಕೊಂ ನಿಂಗಪ್ಪಾ ಹಡಪದ ಸಾ॥ ರಡ್ಡೇರತಿಮ್ಮಾ ಪೂರ ಹಲ್ಲಿವಸ್ತಿ ಹಡಗಲಿ ಕೇರ ಆಫ ಡಿ ಡಿ ಜೋಶಿ ಪ್ಲೀಡರ ಧಾರವಾಡ ಇವರಿಗೆ—

ನೀನು ಕೊಟ್ಟ ನೋಟೀಸಿನ ಮಜಕೂರು ಸುಳ್ಳು ಇರುತ್ತದೆ. ನೀನು ಕೊಟ್ಟ ನೋಟೀಸಿನ ಮಜಕೂರು ಸುಳ್ಳು ಇರುತ್ತದೆ. ನಾನು ಹೊಡೆದು ಒಡೆದು ಯಂದೂ ಹೊರಗೆ ಹಾಕಿ ನಿಂನನ್ನು ಲ್ಲಾ ಈಗ ವಂದು ವರ್ಷದ ಕೆಳಗೆ ನೀನು ನಿಂನ ತವರಮನಿಗೆ ಹೋದವಳು ಪುನಃ ಕೆಲವು ದಿವಸಗಳ ಮೇಲೆ ಬಂದಿದ್ದು ಪುನಃ ತಿರುಗಿ ಹೋದವಳು ತಿರುಗಿ ನೀನಾಗಿ ಬಂದಿಲ್ಲಾ. ನಿಂನ ತವರ ಮನಿಯವರು ನಿನ್ನಮೇಲೆ ಯೇನೂ ದಾಗೀನೆ ಇಟ್ಟಿದ್ದಿಲ್ಲಾ ದಾಗೀನೆ ಗಳ ಮಜಕೂರು ಅಗದೀ ಸುಳ್ಳು ಇರುತ್ತದೆ. ನಾನು ದಾಗೀನೆ ಕಸಕೊಂಡೆನೆಂಬುವದು ಸುಳ್ಳು ವ ಮತಲಬೀಯು ಮಜಕೂರು ಇರುತ್ತದೆ. ಆದ್ರೆ ನಾನು ಸ್ವತಃ ನಿಂನ ಮೈಮೇಲೆ ಇಟ್ಟ ದಾಗೀ ನೆಗಳು ನಿಂನ ಹತ್ತರ ಇರುತ್ತವೆ. ೧೦ ತೊಲಿ ಸರಗಿ, ಬಳಿ ೬ ತೊಲಿ ಬೆಳ್ಳಿ ವಂಕಿ ಜೋಡು, ಮತ್ತು ಕಿರಕಳ ದಾಗೀನೆ ೧೦೦ ರುಪಾಯಿ ದ್ದು ಈ ಪ್ರಕಾರಾ ದಾಗೀನೆಗಳನ್ನು ನಾನು ನಿಂನ ಮೇಲೆ ಹಾಕಿ ದ್ದು ಅವುಗಳನ್ನು ನುಂಗಬೇಕೆಂದು ಖೊಟ್ಟಿ ನೋಟೀಸ ಕೊಟ್ಟಿ ರುತ್ತೀದಿ. ನೀನು ಖೊಟ್ಟಿ ಬೀಶಿ ಜೊಟ್ಟಿ ತುಂಬಿಕೊಂಡದ್ದು ಮತ್ತು ಹೊಟ್ಟೆಯ ಸಲುವಾಗಿ ದೇಣ್ಗಿ ಮಾಡಿದ್ದು ಸುಳ್ಳು ಇರುತ್ತದೆ. ಹಾಗೆ ಮಾಡಲಿಕ್ಕೆ ಏನೂ ಕಾರಣ ಇಲ್ಲಾ ಸುಳ್ಳು ಸಾಲ ನಮೂ ದ ಮಾಡಿರುತ್ತೀದಿ. ಕಾರಣ ನಾನು ಜವಾಬದಾರನಲ್ಲಾ ನೀನು ಎರಡನೇದವರನ್ನು ವುಡಕಿ ಮಾಡಿಕೊಂಡು ಹೋಗುತ್ತೇನೆ ಅನ್ನು ವ ಮಜಕೂರಿಗೆ ನಾನು ಕಬೂಲ ಇಲ್ಲಾ ಮತ್ತು ನೀನು ಹಾಗ ಮಾಡುವದು ವ ಅದರಂತೆ ಅಂಜಿಕೆ ಹಾಕುವದು ಬೇಕಾಯದೇಶೀ ರ ಇರುತ್ತದೆ. ನೀನು ನಂನ ಮನೀಗೆ ಬಂದಲ್ಲಿ ನಾನು ನಿನ್ನನ್ನು ಸಂರಕ್ಷಣೆ ಮಾಡಲಿಕ್ಕೆ ಕಬೂಲ ಇರುತ್ತೇನೆ. ನೀನು ಜರ ವುಡಕಿ ಮಾಡಿಕೊಂಡರೆ ಅಥವಾ ನನ್ನ ಮನಿಗೆ ಬರದಿದ್ದರೆ ನಿಂನ ಮೇಲೆ ವ ನಿನ್ನನ್ನು ಚಿಥಾಯಿಸುವವರ ಮೇಲೆ ಯೋಗ್ಯ ಫವಜದಾರಿ ವ ದಿವಾಣಿ ಕೆಲ್ಸ ನಡಿಸುತ್ತೇನೆ. ಮತ್ತು ನಿನ್ನ ಕಬ್ಜಾದ ಬಗ್ಗೆ ಯೋಗ್ಯ ಕಾಯದೇಶೀರ ಇಲಾಜ ಮಾಡಿಕೊಳ್ಳುತ್ತೇನೆ ನೀನು ನಮ್ಮ ಮ ನಿಗೆ ಬಂದಲ್ಲಿ ಹೆಂಡತಿಯಂತೆ ನಿನ್ನನ್ನು ಸಂರಕ್ಷಣೆ ಮಾಡುತ್ತೇನೆ. ಈ ಮಜಕೂರು ನಿನಗೆ ತಿಳಿದಿರಬೇಕು ಅಂತಾ ಕೊಟ್ಟ ನೋಟೀಸ

ಸಹಿ ತಾ॥೧೪-೭-೨೭

() ಈ ಎಡಗೈ ಹೆಬ್ಬರಳಿನ ಗುರ್ತು ನಿಂಗಪ್ಪಾ ತಂದಿ ರಾಮಪ್ಪಾ ಹಡಪದ ಈತಂದು ಅದೆ

ಕರ್ನಾಟಕ ಹಿಂದೀ ಪರಿಷತ್

ಬೆಂಗಳೂರಲ್ಲಿ ಈ ಪರಿಷತ್ತು ನೆರವೇರಿತು ಪಂಡಿತ ಮಾ ಲವಿಯಾಜಿ·ಯವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಹಿಂದೀ ಭಾಷೆ, ದೇವನಗರ ಲಿಪಿಗಳು ಸರ್ವ ಮಾನ್ಯವಾಗಬೇಕಾಗಿ ಜನ್ಮಾ ಗಿ ವಿವರಿಸಿ ಹೇಳಿದರು. ಮಹಾತ್ಮರೂ ಹೀಗೇ ಮತಪಟ್ಟರ. ತಾ ಲಿ ಕಾಲೇಜಗಳಲ್ಲಿ ಹಿಂದೀ ಭಾಷೆಯು ಆವಶ್ಯಕ ವಿಷಯವಾಗಿರು ವಂತೆ ಏರ್ಪಾಡ ಮಾಡಬೇಕೆಂದು ಮೈಸೂರ ವಿಶ್ವವಿದ್ಯಾಲಯಕ್ಕೆ ಹಾಗೂ ಸರಕಾರಕ್ಕೆ ಪ್ರಾರ್ಥಿಸುವ ಠರಾವುಗಳಾದವು ಶ್ರೀ ನ್ನರೂ, ಹಂಡಬಿಂಡ ಸಾಹೇಬರೂ ಸಹ ಹಿಂದೀ ಕಲಿಯಬೇಕಾಗಿ ಮುಂಗಳೂರಿನ ಶ್ರೀ ಪಾಲಾ ನಾ ಸಾಹೇಬರು ಹೇಳಿದರು

ಸಮುದ್ರ ಸ್ನಾನ ಮಾಡತಕ್ಕವರಲ್ಲಿ ಭಯ.

ಶ್ರೀ ಜಗನ್ನಾಥ ಪುರಿಯಲ್ಲಿ ಓರ್ವ ಬಂಗಾಲಿ ತರುಣನು ಸಮು ದ್ರದಲ್ಲಿ ಸ್ನಾನ ಮಾಡುತ್ತಿರಲು, ಎಡದ ತೋಳಿಗೆ ಯಾರೋ ಹೊಡೆ ದಂತೆ ಭಾಸವಾಯಿತು! ಕೂಡಲೇ ಅವನಿಗೆ ಶೂಲೆಯುಂಟಾಗಿ ತೋಳು ಬಾತಿತು. ನಂತರ ಅಸಹ್ಯವಾದ ವೇದನೆಯು ದೇಹದಲ್ಲೆ ಲ್ಲ ಉಂಟಾಗಿ ಶರೀರವೆಲ್ಲ ಸುಡುವಂತೆ ಅವನಿಗೆ ಅನಿಸಹತ್ತಿತು. ಆ ಘೂದ 'ಇಂಜೆಕ್ಶನ್' ಕೊಟ್ಟು ಹೇಗಾದರೂ ನಿದ್ರೆ ಬರುವಂತೆ ಡಾಕ್ಟ ರರು ಪ್ರಯತ್ನಿಸಿದರು. ಮುಂದೇನಾಗುವದೋ ನೋಡಬೇಕು. ನೀರಿನಲ್ಲಿಯ ವಿಷ ಸರ್ಪದ ಬಾಲದ ಹೊಡತದಿಂದ ಹೀಗಾಗಿರಬೇಕೆಂ ದು ಡಾಕ್ಟರರ ಮತವಿದ್ದದರಿಂದ ಸಮುದ್ರ ಸ್ನಾನಕ್ಕೆ ಹೋಗುವ ಜನ ರಲ್ಲೆಲ್ಲ ಶ್ರೀ ಕ್ಷೇತ್ರ ಜಗನ್ನಾಥ ಪುರಿಯಲ್ಲಿ ಭಯವುಂಟಾಗಿದೆ

ಹಿಂದು ಸ್ಥಾನ.

ಜಮಶೇಟಪುರದಲ್ಲಿ ಟಾಟಾ ಕಂಪನಿಯ ಕಬ್ಬಿಣ ಕಾರಖಾನೆಯ ಕೂಲಿಯವರು ೧೫ ಫೂಟ ಭೂಮಿಯನ್ನು ಒಂದು ಸ್ಥಳದಲ್ಲಿ ಅಗಿದ ಕೂಡಲೇ, ಒಳಗೇ ಹೋದರು! ಅಲ್ಲಿ ೪ ಫೂಟ ಆಳವಾದ ಗುಹವೊಂ ದು ದೊರೆತಿತು! ಆ ಗುಹವು ಬೇರೆ ಕಡೆಗೆ ಬಹು ಆಳವಾಗಿದ್ದು, ಅ ದರ ನೆಲೆಯು ಇನ್ನೂ ಹತ್ತಿಲ್ಲ.

ಆಂಧ್ರ ವಿಶ್ವವಿದ್ಯಾಲಯದ ಪದವೀಧರರಿಗೆ ಅಯರ್ ಸಿ ಯಸ್. ಪರೀಕ್ಷೆಗೆ ಕೂಡಲು ಅಪ್ಪಣೆ ಇಲ್ಲವಂತೆ! ಇದೊಂದು ಹೊಸ ಮಾದರಿಯ ಕಟ್ಟಳೆ! ಕನ್ನಡಿಗರನ್ನು ಸೆಳೆದುಕೊಳ್ಳಬೇಕೆಂದು ಹಾ ತೊರೆಯುತ್ತಿರುವ ಆಂಧ್ರರಿಗೆ ಇದೊಂದು ಹೊಸ ಹುಲಿಯು ಗಂಟು ಬಿದ್ದಂತಾಗಿದೆ!

ಇವತ್ತಿನ ದಿವಸ ಅನಗವಾಡಿಗೆ ಹೋಗುವದಕ್ಕೆ ಬಂಕಾಪುರ ಮೋಟರ ಸರ್ವಿಸ್‍ದಲ್ಲಿ ಏಂಟಾಣೆ ಕೊಟ್ಟು ತಿಕೀಟು ತೆಗೆದುಕೊಂಡೆ ನು. ಮೋಟರದ ಮಾಲಕನಾದ ಶ್ರೀ ಹಣಮಂತಸಾ ಬಂಕಾಪುರ ಇ ವನು ಟಿಕೀಟು ಕೊಟ್ಟು ಇನ್ನು ಅರ್ಧ ಘಂಟೆಯಲ್ಲಿ ಹೊರಡುವದೆಂ ದು ಮುಂಜಾನೆ ೭ ಘಂಟೆಗೆ ಹೇಳಿದನು ೭॥-೮ ಘಂಟೆಯಾಯಿತು. ಹೊರಡಲಿಲ್ಲ ಬೇಸತ್ತು 'ಕನ್ನಡಿಗ'ನ ಕಾರ್ಯಾಲಯದಲ್ಲಿ ಕಾದಿರು ತ್ತೇನೆ, ಹೋಗುವಾಗ ಕರೆದುಕೊಂಡು ಹೋಗಬೇಕೆಂದು ಮಾಲಕನಿಗೆ ಹೇಳಿ, ಅವನು ಒಪ್ಪಲಾಗಿ ಆ ಪ್ರಕಾರ 'ಕನ್ನಡಿಗ'ನ ಕಾರ್ಯಾಲಯ ದಲ್ಲಿ ೯॥ ಘಂಟೆಯ ವರೆಗೆ ದಾರೀ ನೋಡಿದೆನು. ಅಷ್ಟರಲ್ಲಿ ಪುನಃ ಶ್ರೀ ಹಣುಮಂತಸಾ ಇವನು ಎದುರಿನಲ್ಲಿಯೇ ಹಾದು ಹೋಗುವ ದನ್ನು ಕಂಡು ಪುನಃ ಅವನನ್ನು ಒಪರಿ ಇಲ್ಲಿಯೇ ದಾರೀ ನೋಡುತ್ತ ಕುಳಿತಿರುವೆನು. ಹೋಗುವಾಗ ಮರೆಯದೆ ಕರೆದುಕೊಂಡು ಹೋ ಗಬೇಕೆಂದು ಹೇಳಿದೆ. ಹಾಗೆಯೇ ಆಗಲಿ ಎಂದು ಹೇಳಿ ಅವನು ಹೊರಟು ಹೋದನು. ಆದರೆ ೧೦॥ ಘಂಟೆಯ ಸುಮಾರಕ್ಕೆ ಮೋಟ ರದ ಸಪ್ಪಳವನ್ನು ಕೇಳಿ ಹೊರಗೆ ಬಂದು ನೋಡುವಷ್ಟರಲ್ಲಿ ಮೋಟರ ವು ದೂರ ಹೋಗಿಬಿಟ್ಟಿತ್ತು ಬಂಕಾಪುರ ಮೋಟರ ಅದುವೋ ಅಲ್ಲ ವೋ ಎಂದು ಸಂಶಯಗೊಂಡು ಸ್ಟ್ಯಾಂಡದ ವರೆಗೆ ಹೋಗಿ ನೋಡ ಲಾಗಿ ಅದು ಹೋಗಿತ್ತು. ಉಳಿದೆರಡು ಮೋಟರದವರಿಗೇನಾದರೂ ಹೇಳಿ ಹೋಗಿರುವನೋ ಎಂದು ಶೋಧಿಸಲಾಗಿ ಹಾಗೆಯೂ ಮಾಡಿರ ಲಿಲ್ಲ. ಅಷ್ಟರಲ್ಲಿ ನನ್ನಂತೆಯೇ ತಿಕೀಟು ಪಡೆದುಕೊಂಡಿದ್ದ ಇನ್ನೊ ಬ್ಬ ಗೃಹಸ್ಥನು ಅಲ್ಲಿಗೆ ಬಂದನು. ಅವನಾದರೂ ಎರಡನೇ ಮೋಟಾ ರದಲ್ಲಿ ಪುನಃ ತಿಕೀಟು ತೆಗೆದುಕೊಂಡು ಹೋದನು ಈ ರೀತಿ ಅವ್ಯ ವಸ್ಥೆಯು ನಡೆದಿದೆ. ಇತ್ತ ಪೋಲೀಸ ಅಧಿಕಾರಿಗಳು ಲಕ್ಷ ಕೊಡು ವರೋ?

ಬಾಗಲಕೋಟ
ತಾ॥ ೧೦-೭-೨೭ } ತ ಬ. ಪುರೋಹಿತ.

UNIVERSITY OF MYSORE

Notification No 410. Dated the 8th July 1927

PROFESSOR OF KANNADA.

Applications are invited from qualified candidates for the post of PROFESSOR OF KANNADA in the Maharaja's College, Mysore.

2. The pay of the post will be up to Rs 400 according to qualifications. The candidate appointed will be on probation for a year. He will be subject to the rules in the Mysore Service Regulations as regards, salary leave and allownces and College discipline.

3. The applicants must possess requisite academical qualifications and be specialists in Kannada.

4. The Professor is expected to train students for the several degree Examinations of the Mysore University including M. A. Degree in Kannada.

5. Preference will be given to one who possesses high qualifications in Kannada and English, and a fair knowledge in Sanskrit and Telugu or Tamil and also some knowledge of comparative philology with special reference to Dravidian Languages.

6. The candidate selected will be required to join duty immediately.

7. Applications should contain the following particulars, with necessary testimonials:- Name, nationality, caste, or religion; age academical qualifications with dates of passing the examinations; present position, if any, and pay; if applicant had held any more than one appointment, particulars of such appointments with date and reason of termination in each case; experience of teaching and professorial work; works, if any, published; special qualifications, other particulars, if any, with references

8. Such applicants as are already in service should submit their applications through their official superiors.

9. Applications should be addressed to the Registrar, Mysore University, Mysore, and should reach him on or before 15th August 1927.

REGISTRAR.

ದ" ಶಬ್ದದ ಅರ್ಥವೇ ತಿಳಿದಿಲ್ಲ. ಈಗಿನ ಕಾಲದ ನಾಟಕ ಮಂಡಲಿಗಳು ರೊಕ್ಕವನ್ನು ಕೂಡಿಸಿಕೊಳ್ಳುವದಕ್ಕಾಗಿ ಹೊರಟಿರುವವಲ್ಲದೆ, ಜನರಲ್ಲಿ ನವಚೈತನ್ಯವನ್ನು ಹುಟ್ಟಿಸುವದಕ್ಕಾಗಿ ಅಲ್ಲ. ನಮ್ಮ ಈಗಿನ ರಂಗಭೂಮಿಯು ಪ್ರಮೋದೋತ್ಪಾದಕ ಸಾಧನವಾಗದ್ದರಿಂದ ಪ್ರೇಕ್ಷಕರಿಗೆ ನಿಜವಾದ ಪ್ರಮೋದವೇ ಸಿಗುವದಿಲ್ಲ. ಈಗಿನ ಉತ್ತಮ ನಾಟಕಗಳಿಂದ ಜನರು ಒಮ್ಮೊಮ್ಮೆ ಆನಂದವನ್ನೂ ಉತ್ಸಾಹವನ್ನೂ ಹೊಂದಬಹುದು. ಪ್ರಮೋದವು ಮಾತ್ರ ಇವುಗಳಿಂದ ತೀರ ಭಿನ್ನವಾದದ್ದಿರುತ್ತದೆ. ಜುಳು ಜುಳು ಹರಿಯುವ ತಿಳಿಯಾದ ನೀರು, ನಿಂತ ರಾಡಿ ನೀರಿನಿಂದ ಭಿನ್ನವಾಗಿರುವಂತೆ, ಪ್ರಮೋದವೂ ಆನಂದದಿಂದ ಭಿನ್ನವಾಗಿರುವದು. ಹಣ ಗಳಿಸುವದಕ್ಕಾಗಿ ಹೊರಟ ನಾಟಕ ಮಂಡಳಿಗಳೂ, ನಾಟಕಗಳನ್ನು ನೋಡಲು ಹೋಗುವ ಪ್ರೇಕ್ಷಕರೂ ಒಂದೇ ಮಾಲಿಕೆಯೊಳಗಿನವರು. ಈಗ ನಮಗೆ ನಾಟ್ಯ ಕಲಾಪೂರ್ಣ ನಾಟಕಗಳೂ ಪ್ರಮೋದಾಭಿಲಾಷಿ ಪ್ರೇಕ್ಷಕರೂ ಬೇಕಾಗಿದ್ದಾರೆ.

ಈ ಕೊರತೆಯನ್ನು ಹೋಗಲಾಡಿಸುವ ಭಾರವು ಎಲ್ಲರಿಗಿಂತಲೂ ವಿಶ್ವವಿದ್ಯಾಲಯದವರ ಮೇಲೆಯೇ ಹೆಚ್ಚಾಗಿರುತ್ತದೆ. ವಿದ್ಯಾಲಯದ ರಂಗಭೂಮಿಯು ಭಕ್ತರು, ಧನದಾಶೆಗೂ, ಗ್ರಾಮ್ಯ ಜನರ ದುರ್ವಿಚಾರ, ದುರಾಚಾರಗಳ ಬಲಿಗೂ ಬೀಳದೆ, ಸಂಸಾರ ಚಿತ್ರದ ಸೌಂದರ್ಯವನ್ನು ತೋರಿಸಲು ಹೊರಟರೆ ಅದೊಂದು ದೊಡ್ಡ ಶೈಕ್ಷಣಿಕ ಸಾಹಸವೇ ಆಗುವದು. "ನೋರಾ ರಿಚಾರ್ಡ"ರ ಮತದಂತೆ ಮಾನಸಿಕ ಮತ್ತು ಭೌತಿಕ ಶಿಕ್ಷಣಗಳಲ್ಲಿ

ಒಲೆಗಳನ್ನು ಸಂಭಾಳಿಸಲಿಕ್ಕೆ ಬರುವದಿಲ್ಲವೋ ಅವರು ರಾಷ್ಟ್ರದ ಒಲೆಯನ್ನು ಸಂಭಾಳಿಸುವದು ಹೇಗೆ? ನಮ್ಮ ಗಂಡಂದಿರಿಗೂ, ಮಕ್ಕಳಿಗೂ ಚಲೋ ಅಡಿಗೆ ಮಾಡಿ ಉಣಿಸಲಿಕ್ಕೆ ಬರದೇ ಇದ್ದ ಬಳಿಕ ಪರೋಪಕಾರ ಮಾಡುವ ಬಗೆ ಯಾವದು? ಎಲ್ಲರಿಗೂ ಶ್ರೀಮಂತ ಪತಿಗಳೇ ಸಿಗುವದಿಲ್ಲ. ಬಡವರೇ ಬಹಳ. ಬಡತನದ ಸಂಸಾರ ಮಾಡುವ ಶಿಕ್ಷಣವು ಬೇಕು. ಕಲಿತವರಿಗೆ ಅಡಿಗೆ ಮಾಡುವದು ತೊಂದರೆಯೆನಿಸುತ್ತದೆ. ಈಗಿನ ಸಮಯದಲ್ಲಿ ಜೀವನ ಕಲಹದ ಮೂಲಕ ಕುಟುಂಬಗಳು ಮೊದಲಿನಂತೆ ದೊಡ್ಡವಿರದೆ ಅತಿ ಚಿಕ್ಕವಾಗಿರುತ್ತವೆ ಗಂಡ, ಹೆಂಡತಿ, ಮಕ್ಕಳು ಕೂಡಿದರೆ ಒಂದು ಕುಟುಂಬವಾಯಿತು ಅತ್ತೆ ಮಾವಂದಿರ ಹೆಸರು ಬೇಡ. ಇಂಥ ಪುಟ್ಟ ಸಂಸಾರವನ್ನು ಅಚ್ಚುಕಟ್ಟಾಗಿ ಮಾಡಲಿಕ್ಕೆ ಬಾರದಿದ್ದರೆ, ನಾವು ಸ್ವರಾಜ್ಯವನ್ನು ಹೇಗೆ ಹೊಂದುವೆವು? ಅಡಿಗೆಯ ಮನೆಯೆಂದರೆ ಅನ್ನವನ್ನು ಕುದಿಸುವ ಸ್ಥಳವಷ್ಟೇ ಅಲ್ಲ. ನಾವು ಹೆಂಗಸರು ನಿರ್ಮಲರಾಗಿ ಅಡಿಗೆಯನ್ನು ಮಾಡಿ ದೇವರಿಗೆ ನೈವೇದ್ಯವನ್ನು ಕೊಡುತ್ತೇವೆಂದು ದೇವರು ನಮ್ಮ ಮನೆಯಲ್ಲಿ ವಾಸವಾಗಿರುತ್ತಾನೆ. ಅಡಿಗೆಯ ಪದಾರ್ಥ, ದೇವರು, ಮತ್ತು ಮಕ್ಕಳು ಇವೆಲ್ಲ ಇದ್ದರೆ ಅದರ ಹೆಸರು ಮನೆ. ಮನೆಯೇ ನಮ್ಮ ರಾಜ್ಯವು ರಾಜ್ಯವನ್ನ ಪರರಿಗೆ ಒಪ್ಪಿಸಿ ಖಾನಾವಳೀ ಊಟ, ದವಾಖಾನೆಯ ಬಾಣಂತಿತನ, ಆಗಹತ್ತಿದರೆ ಮನೆಯು ವನವಾಗುವದು! ಉತ್ತಮ ಗೃಹಿಣಿಯೆನಿಸುವವಳು ತನ್ನ ಮನೆತನವನ್ನು ಚನ್ನಾಗಿ ಸಾಗಿಸಬೇಕು. ನಿಮ್ಮ ಸಂತಾನವು ಬಲವಾನ್

ಆಗಬೇಕಾದರೆ, ಜಠರೋ ಅತಿಗೆ ವಿನಾಡಿ ಉಣಿಸಿರಿ. ಬುದ್ಧಿಬಲದ ವೃದ್ಧಿಯು ತಿನ್ನುವ ಆಹಾರವನ್ನು ಅವಲಂಬಿಸಿದೆ.

ಪ್ರೌಢ ವಿದ್ಯಾರ್ಥಿನಿಯರಿಗೆ ಸೂಲಗಿತ್ತಿತನದ ಜ್ಞಾನ ಮತ್ತು ಬಾಣಂತಿತನ ಇವೆರಡರ ಬಗ್ಗೆ ಕಲಿಸಬೇಕು. ಇವುಗಳಿಂದ ಸ್ವಂತಕ್ಕೆ ಉಪಯೋಗವಿದ್ದು ಪರರಿಗೂ ಉಪಕಾರ ಮಾಡಲಿಕ್ಕೆ ಬರುತ್ತದೆ.

ಓದಲಿಕ್ಕೂ, ಬರೆಯಲಿಕ್ಕೂ ಬಂದ ಬಳಿಕ ಯೋಗ್ಯವಾದ ಪುಸ್ತಕಗಳನ್ನೇ ಓದಬೇಕು. ಸಿನೇಮಾ, ನಾಟಕಗಳನ್ನು ನೋಡಲಿಕ್ಕೆ ಹೋಗಬಾರದು. ಅವುಗಳಿಂದ ಮನಸ್ಸು ಚಂಚಲವಾಗಿ ವಿಕಾರಗೊಳ್ಳುವದು. ಸದ್ಯಕ್ಕೆ ಸ್ತ್ರೀಯರು ಒಂಟಿಗರಾಗಿ ಪ್ರವಾಸ ಮಾಡುವ ಹೊತ್ತು ಒಮ್ಮೊಮ್ಮೆ ಬರುತ್ತದೆ. ಆಗ ಅವರಿಗೆ ರೈಲುಗಳ ಬಗ್ಗೆ ಮಾಹಿತಿಯೂ, ಧೈರ್ಯವೂ, ಶರೀರ ಸಾಮರ್ಥ್ಯವೂ ಬಲವಾದ ಮನಸ್ಸೂ ಅವಶ್ಯವಾಗಿ ಬೇಕು. ಹುಡುಗರಿಗೆ ಮನೆಗಿಂತ ಶಾಲೆಯಲ್ಲಿ ಸಹವಾಸ ಬಲದಿಂದ ಮನಸ್ಸು ನೀತಿಗಳು ಹೆಚ್ಚು ಬಲಹೊಂದುತ್ತವೆ. ಆದ್ದರಿಂದ ಶಾಲೆಯಲ್ಲಿ ಮಾತ್ರ ಆಚರಣೆಯು ನೀತಿಯಿಂದ ಶುದ್ಧವಾಗಿರಬೇಕು. ಶಾಲೆಯಲ್ಲಿ ಮಕ್ಕಳಿಗೆ ಶುದ್ಧವಾದ ವಾಣಿಯಿಂದ ಮಾತಾಡಲಿಕ್ಕೆ ಕಲಿಸಲಿಕ್ಕೆ ಬೇಕು. ಅನ್ಯ ಜಾತಿಯ ಶಿಕ್ಷಕಿಯರಿಂದ ಉಚ್ಚಾರವು ಕೆಡುತ್ತದೆ. ಇದರಿಂದ ಹಳೇ ಬ್ರಾಹ್ಮಣ ಪದ್ಧತಿಯು ಕೆಡುತ್ತದೆ. ಬ್ರಾಹ್ಮಣ ವಿಧವೆಯರು ಅನಾಥರಾಗಿ ಭಿಕ್ಷೆ ಬೇಡುವದಕ್ಕಿಂತ ಶಿಕ್ಷಕಿಯರಾಗುವದು ನೆಟ್ಟಗೆ. ಶಾರೀರಿಕ, ನೈತಿಕ ಮತ್ತು ಬೌದ್ಧಿಕ ಶಕ್ತಿಗಳು ಬಲ ಹೊಂದುವ ಶಿಕ್ಷಣವನ್ನೇ ಹುಡುಗಿಯರಿಗೆ ಅವಶ್ಯವಾಗಿ ಕೊಡತಕ್ಕದ್ದು.

ಸಮುದ್ರ ಸ್ನಾನ ಮಾಡತಕ್ಕವರಲ್ಲಿ ಭಯ.

ಶ್ರೀ ಜಗನ್ನಾಥ ಪುರಿಯಲ್ಲಿ ಓರ್ವ ಬಂಗಾಲಿ ತರುಣನು ಸಮುದ್ರದಲ್ಲಿ ಸ್ನಾನ ಮಾಡುತ್ತಿರಲು, ಎಡದ ಕೋಳಿಗೆ ಯಾರೋ ಹೊಡೆದಂತೆ ಭಾಸವಾಯಿತು! ಕೂಡಲೇ ಅವನಿಗೆ ಶೂಲೆಯುಂಟಾಗಿ ಕೋಳು ಬಾತಿತು. ನಂತರ ಅಸಹ್ಯವಾದ ವೇದನೆಯು ದೇಹದಲ್ಲೆಲ್ಲ ಉಂಟಾಗಿ ಶರೀರವೆಲ್ಲ ಸುಡುವಂತೆ ಅವನಿಗೆ ಅನಿಸಹತ್ತಿತು. ಆ ಘೂದ 'ಇಂಜೆಕ್ಶನ್' ಕೊಟ್ಟು ಹೇಗಾದರೂ ನಿಸ್ತ್ರ ಬದುವಂತೆ ಡಾಕ್ಟರರು ಪ್ರಯತ್ನಿಸಿದರು. ಮುಂದೇನಾಗುವದೋ ನೋಡಬೇಕು. ನೀರಿನಲ್ಲಿಯ ವಿಷ ಸರ್ಪದ ಬಾಲದ ಹೊಡತದಿಂದ ಹೀಗಾಗಿರಬೇಕೆಂದು ಡಾಕ್ಟರರ ಮತವಿದ್ದದರಿಂದ ಸಮುದ್ರ ಸ್ನಾನಕ್ಕೆ ಹೋಗುವ ಜನರಲ್ಲೆಲ್ಲ ಶ್ರೀ ಕ್ಷೇತ್ರ ಜಗನ್ನಾಥ ಪುರಿಯಲ್ಲಿ ಭಯವುಂಟಾಗಿದೆ.

ಹಿಂದು ಸ್ಥಾನ.

ಜಮಶೇಟಪುರದಲ್ಲಿ ಟಾಟಾ ಕಂಪನಿಯ ಕಬ್ಬಿಣ ಕಾರಖಾನೆಯ ಕೂಲಿಯವರು ೧೫ ಘೂಟ ಭೂಮಿಯನ್ನು ಒಂದು ಸ್ಥಳದಲ್ಲಿ ಅಗೆದ ಕೂಡಲೇ, ಒಳಗೇ ಹೋದರು! ಅಲ್ಲಿ ೪ ಘೂಟ ಆಳವಾದ ಗುಹವೊಂದು ದೊರೆಕಿತು! ಆ ಗುಹವು ಬೇರೆ ಕಡೆಗೆ ಬಹು ಆಳವಾಗಿದ್ದು, ಅದರ ನೆಲೆಯು ಇನ್ನೂ ಹತ್ತಿಲ್ಲ.

ಆಂಧ್ರ ವಿಶ್ವವಿದ್ಯಾಲಯದ ಪದವೀಧರರಿಗೆ ಆಯರ್ ಸಿಯಸ್. ಪರೀಕ್ಷೆಗೆ ಕೂಡಲು ಅರ್ಹತೆ ಇಲ್ಲವಂತೆ! ಇದೊಂದು ಹೊಸ ಮಾದರಿಯು ಕಟ್ಟಳೆ! ಕನ್ನಡಿಗರನ್ನು ಸೆಳೆದುಕೊಳ್ಳಬೇಕೆಂದು ಹಾತೊರೆಯುತ್ತಿರುವ ಆಂಧ್ರರಿಗೆ ಇದೊಂದು ಹೊಸ ಹುಲಿಯು ಗಂಟು ಬಿದ್ದಂತಾಗಿದೆ!

ಪರದೇಶ.

ಭಾರತೀಯ ರಾಜರ ಹಕ್ಕುಗಳ ಬಗ್ಗೆ ಪ್ರಸಿದ್ಧ ವಕೀಲರ ಅಭಿಪ್ರಾಯ ತೆಗೆದುಕೊಳ್ಳಲು ರಾಜರ ವತಿಯಿಂದ ವಿಲಾಯತಿಗೆ ಹೋದ ಅಧಿಕಾರಿಗಳು ತಮ್ಮ ಕಾರ್ಯದಲ್ಲಿ ಜಯ ದೊರೆಯಿತೆಂದು ಅಲ್ಲಿಯ ವಕೀಲರ ಮತ ದೊರೆತಿರುವದಾಗಿ ಪ್ರಸಿದ್ಧಿಸಿದ್ದಾರೆ.

ವಿಕ್ಟರಬ್ರುಸರೆಂಬುವರು ತಮ್ಮ ನೂತನ ಪತ್ನಿಯೊಡನೆ ಆರ್ಟಿಕಲ್ ವರೆಗೆ ಮೋಟಾರಿನಲ್ಲಿ ಪ್ರವಾಸ ಮಾಡಿ ಬರಲು ಹೊರಟಿದ್ದಾರೆ. ಲಂಡನ್ನಿನಿಂದ ಅದು ೬೦೦೦ ಮೈಲು ದೂರಿದೆ. ಪತ್ನಿಯೇ ಮೋಟಾರ ನಡೆಸುವಳು.

ಜಗದೀಶ ಚಂದ್ರ ಬೋಸರು ಮೊನ್ನೆ ಮೊನ್ನೆ ಲಂಡನ್ನಿನಲ್ಲಿ ವ್ಯಾಖ್ಯಾನ ಕೊಡುವಾಗ್ಗೆ, ಪ್ರಾಣಿಗಳ ಎದೆಯೂ ಮನುಷ್ಯರಂತೆ ಹಾರುತ್ತಿರುವದೆಂದೂ ಅದನ್ನು ಅವರು ಹೊಸದಾಗಿ ಶೋಧಪಡಿಸಿರುವರೆಂದೂ ಹೇಳಿದರು.

ಸ್ವಲ್ಪೇ ವಿನೋದ.

ಮೊನ್ನೆ ಆಷಾಢ ಏಕಾದಶಿ, ಶ್ರೀ ವಿಠ್ಠಲನ ದೇವಾಲಯದಿಂದ ಬರುವಾಗ್ಗೆ ಸಾಧು ಸಂತರ ಅಚಲ ಭಕ್ತಿಯ ಮತ್ತು ಅವರ ಅಪರೋಕ್ಷ ಜ್ಞಾನದ ಬಗ್ಗೆ ಚರ್ಚೆ ಹೊರಟಿತು. ಅಷ್ಟರಲ್ಲಿಯೇ ಮೂರು ಕಾಲಿನಿಂದ ಮಾತ್ರ ಕುಂಟುತ್ತ ಪ್ರಯಾಸದಿಂದ ಮಾರ್ಗಕ್ರಮಣ ನಡಿಸಿರುವ ಒಂದು ನಾಯಿಯು ನಮಗೆ ಎದುರಾಯಿತು.

"ಓಹೊ! ಈ ನಾಯಿಕರೂ ತ್ರಿಕಾಲಜ್ಞಾನಿಗಳಾಗಿರುವರು ನೋಡಿ" ಎಂದು ಬಟ್ಟು ಮಾಡಿ ಓರ್ವ ವಿನೋದಿಮಿತ್ರರು ತೋರಿಸಲು ಎಲ್ಲರೂ ಗಹಗಹಿಸಿ ನಕ್ಕರು.

ಪತ್ರವ್ಯವಹಾರ.

ಮೋಟಾರುಗಳ ಅವ್ಯವಸ್ಥೆಯು.

—:o)(o)(o):—

ಇವತ್ತಿನ ದಿವಸ ಅನಗವಾಡಿಗೆ ಹೋಗುವದಕ್ಕೆ ಬಂಕಾಪುರ ಮೋಟರ ಸರ್ವೀಸ್‌ದಲ್ಲಿ ಏಂಟಾಣೆ ಕೊಟ್ಟು ತಿಕೀಟು ತೆಗೆದುಕೊಂಡೆನು. ಮೋಟರದ ಮಾಲಕನಾದ ಶ್ರೀ ಹಣಮಂತಸಾ ಬಂಕಾಪುರ ಇವನು ಟಿಕೀಟು ಕೊಟ್ಟು ಇನ್ನು ಅರ್ಧ ಘಂಟೆಯಲ್ಲಿ ಹೊರಡುವದೆಂದು ಮುಂಜಾನೆ ೭ ಘಂಟೆಗೆ ಹೇಳಿದನು. ೭॥-೮ ಘಂಟೆಯಾಯಿತು. ಹೊರಡಲಿಲ್ಲ. ಬೇಸತ್ತು 'ಕನ್ನಡಿಗ'ನ ಕಾರ್ಯಾಲಯದಲ್ಲಿ ಕೂಡಿರುತ್ತೇನೆ, ಹೋಗುವಾಗ ಕರೆದುಕೊಂಡು ಹೋಗಬೇಕೆಂದು ಮಾಲಕನಿಗೆ ಹೇಳಿ, ಅವನು ಒಪ್ಪಲಾಗಿ ಆ ಪ್ರಕಾರ 'ಕನ್ನಡಿಗ'ನ ಕಾರ್ಯಾಲಯದಲ್ಲಿ ೯। ಘಂಟೆಯ ವರೆಗೆ ದಾರೀ ನೋಡಿದೆನು. ಅಷ್ಟರಲ್ಲಿ ಪುನಃ ಶ್ರೀ ಹಣಮಂತಸಾ ಇವನು ಎದುರಿನಲ್ಲಿಯೇ ಹಾದು ಹೋಗುವದನ್ನು ಕಂಡು ಪುನಃ ಅವನನ್ನು ಒದರಿ ಇಲ್ಲಿಯೇ ದಾರೀ ನೋಡುತ್ತ ಕೂತಿರುವೆನು. ಹೋಗುವಾಗ ಮರೆಯದೆ ಕರೆದುಕೊಂಡು ಹೋಗಬೇಕೆಂದು ಹೇಳಿದೆ. ಹಾಗೆಯೇ ಆಗಲಿ ಎಂದು ಹೇಳಿ ಅವನು ಹೊರಟು ಹೋದನು. ಆದರೆ ೯॥ ಘಂಟೆಯ ಸುಮಾರಕ್ಕೆ ಮೋಟರದ ಸಪ್ಪಳವನ್ನು ಕೇಳಿ ಹೊರಗೆ ಬಂದು ನೋಡುವಷ್ಟರಲ್ಲಿ ಮೋಟರವು ದೂರ ಹೋಗಿಬಿಟ್ಟಿತ್ತು. ಬಂಕಾಪುರ ಮೋಟರ ಅಹುದೋ ಅಲ್ಲವೋ ಎಂದು ಸಂಶಯಗೊಂಡು ಸ್ಟ್ಯಾಂಡದ ವರೆಗೆ ಹೋಗಿ ನೋಡಲಾಗಿ ಅಹುದಾಗಿತ್ತು. ಉಳಿದರು ಮೋಟರದವರಿಗೇನಾದರೂ ಹೇಳಿ ಹೋಗಿರುವನೋ ಎಂದು ಶೋಧಿಸಲಾಗಿ ಹಾಗೆಯೂ ಮಾಡಿಲ್ಲ. ಅಷ್ಟರಲ್ಲಿ ನನ್ನಂತೆಯೇ ತಿಕೀಟು ಪಡೆದುಕೊಂಡಿದ್ದ ಇನ್ನೊಬ್ಬ ಗೃಹಸ್ಥನು ಅಲ್ಲಿಗೆ ಬಂದನು. ಅವನಾದರೂ ಎರಡನೇ ಮೋಟಾರದಲ್ಲಿ ಪುನಃ ತಿಕೀಟು ತೆಗೆದುಕೊಂಡು ಹೋದನು. ಈ ರೀತಿ ಅವ್ಯವಸ್ಥೆಯು ನಡೆದಿದೆ. ಇತ್ತ ಪೋಲೀಸ ಅಧಿಕಾರಿಗಳು ಲಕ್ಷ ಕೊಡುವರೋ?

ಬಾಗಲಕೋಟೆ
ತಾ| ೧೦-೭-೨೭ } ತ ಬ. ಪುರೋಹಿತ.

ನನಗೆ ಹೊಳೆದಂತೆ.

ವಿಜಾಪೂರ ಪಟ್ಟಣದ “ ಮೇಲೆ ” ಮಾತ್ರ ಸ್ವಲ್ಪ ಮಳೆಯಾಯಿತು ಎಂಬದಾಗಿ ‘ ವೈಭವ ’ ವು ಹೇಳುತ್ತದೆ. ಪಟ್ಟಣದ ‘ ಬುಡಕ್ಕೆ ’ ಆಗಲಿಲ್ಲ! ನಮ್ಮ ಭಾಷೆಯ ಪುಣ್ಯ!!! ‡ ‡ ‡ ‡

ಆರ್. ತಾತಾಚಾರ್ಯರಾರು ? ತಿರುಮಲೆ ತಾತಾಚಾರ್ಯರಾರು? ಎಂಬದು ಈರ್ವ ಕನ್ನಡ ವೃತ್ತಪತ್ರಿಕಾ ಸಂಪಾದಕರಿಗೆ ಗೊತ್ತಿರಲಿಲ್ಲ. ಅದ್ದರಿಂದ ಸಾಹಿತ್ಯಪರಿಷತ್ತಿನ ಅಧ್ಯಕ್ಷರ ಪದವಿಯ ಮಾಲೆಯನ್ನು ವಿ. ಕ. ಸಂಪಾದಕರಾದ ತಿರುಮಲೆ ತಾತಾಚಾರ್ಯರ ಕೊರಳಲ್ಲಿ ಹಾಕಿದ್ದರು. ಈಗ್ಗೆ ಕೈ. ಭಾಂಡಾರಕರರ ಮೊಮ್ಮಗಳಾದ ಪಾಣಂದಿಕರ ಮ್ಯಾಲತಿಯು, ಕೈ ಭಾಂಡಾರಕರರ ಮಗಳೇ ಎಂದು ಇನ್ನೋರ್ವ ಸಂಪಾದಕರು ಬರೆದಿರುವರು! ಸಂಪಾದಕರ ಜ್ಞಾನವು ಹೇಗಿದೆ ?

—ಓದುಗ.

ನಮ್ಮ ನೀಲಗಿರಿಯ ಪತ್ರವು.

ಮಳೆಯು ಸುರಿಯುತ್ತಲಿದೆ. ರೋಗಾದಿಗಳಿರುವದಿಲ್ಲ.

ವೈಸರಾಯರು ೨ ನೇ ಆಗಸ್ಟಿಗೆ ಉದಕಮಂಡಲಕ್ಕೆ ಬರುವರು. ಸಿದ್ಧತೆಯು ಭರದಿಂದಸಾಗಿದೆ. ಬಡಿಗರ ಕಡೆಯಿಂದ ಶ್ರೀ ಅರಿಗೌಡರು ಅವರಿಗೆ ಮಾನಪತ್ರವನ್ನರ್ಪಿಸುವರು. ಬೆಳ್ಳಿಯ ಕರಂಡಕದ ಮೇಲೆ ೮೨ ವರ್ಷದ ಸಧ್ಯಧಿಕಾರಿಯವ್ವಳ್ಳಿ ಓರ್ವ ಬಡಗನ ಚಿತ್ರವನ್ನು ಕೆತರಿಸಿರುವರು. ಈ ಕನ್ನಡಿಗನು ಹೊಳೆಯಟ್ಟಿಲಾಯತಿಯಲ್ಲಿ ಸುಖವಾಗಿದ್ದಾನೆ.

ವೈಸರಾಯರು ೫ ನೇ ತಾ. ದಿನ ಕೂನೂರಿಗೆ ಹೋಗಿ, ಹುಚ್ಚು ನಾಯಿ ಕಡಿತದ ಬಗ್ಗೆ ಚಿಕಿತ್ಸೆಮಾಡುವ ದವಾಖಾನೆಯನ್ನು ಸಂದರ್ಶಿಸುವರು.

ನಮ್ಮ ಬೆಳಗಾಂವ ಜಿಲ್ಹೆಯ ಪತ್ರವು.

೧— ಬೆಳಗಾಂವಿ. ಹೋದ ಎರಡು ದಿವಸಗಳಿಂದ ಒಂದೇ ಸವನೆ ಮಳೆಯು ಸುರಿಯುತ್ತಲಿದೆ. ಈ ಸಾರೆ ಮೊಹರಮ ಹಬ್ಬದಲ್ಲಿ ಪ್ರತಿವರ್ಷದಷ್ಟು ಉತ್ಸಾಹವಿರಲಿಲ್ಲ. ಪ್ರತಿವರ್ಷ ೮ ತಾಬೂತಗಳಾಗುವವು. ಈ ವರ್ಷ ೩ ತಾಬೂತಗಳು ಮಾತ್ರ ಇದ್ದವು.

೨— ಶ್ರೀ ಶಂಕರಾಚಾರ್ಯರ (ಮಹಾಭಾಗವತರು) ಬೆಳಗಾಂವಿಯಿಂದ ಪುಣೆಗೆ ಟಿಳಕ ವಿದ್ಯಾಪೀಠದ ಪದವಿದಾನ ಸಮಾರಂಭಕ್ಕೆ ಹೋಗುವದಕ್ಕೆ ತಮಗಾಗಿ ಒಂದು ಡಬ್ಬಿ ರಿಜರ್ವ ಮಾಡಿರಲು ಅವರಿಗೆ ತಿಳಿಯಗೊಡದೆ, ಅಂಗ್ಲೋ ಇಂಡಿಯನ್ನರಿಗೆ ಕೊಟ್ಟದ್ದರಿಂದ ರೇಲವೆ ಕಂಪನಿಯ ಮೇಲೆ ಸ್ವಾಮಿಯವರು ೧೦ ಸಾವಿರ ರೂಪಾಯಿ ಹಾನಿಯ ದಾವೆಯನ್ನು ಮಾಡಿರುತ್ತಾರೆ.

ನಮ್ಮ ನಿಝಾಮ ಕರ್ನಾಟಕದ ಪತ್ರ.

ಹೈದ್ರಾಬಾದ:— ಇಲ್ಲಿಯ ಸುಪ್ರಸಿದ್ಧ ವಕೀಲರಾದ ಶ್ರೀ ಗಿರಿರಾವ ಇವರಿಗೆ ನಿಜಾಂ ಸರಕಾರದಿಂದ ಹೈಕೋರ್ಟಿನ ನ್ಯಾಯಾಧೀಶಸ್ಥಾನವು ಕೊಡಲ್ಪಟ್ಟ ಕಾರಣ, ಅವರನ್ನು ಅಭಿನಂದಿಸುವದಕ್ಕೆಂದು ಮೊನ್ನಿನ ಜುಲೈ ೧೫ ನೇ ತಾರೀಖಿಗೆ ರಾಜಾ ಕಾಂಟಾವಾನಕರ ಇವರ ವಿಶಾಲ ಪ್ರಾಸಾದದಲ್ಲಿ ಕರ್ನಾಟಕ ಸಂಘದ ಕಡೆಯಿಂದ ಸಭೆ ಕೂಡಿತ್ತು. ಅವರಿಗೆ ಮಾನಪತ್ರ ಸಮರ್ಪಿಸಲ್ಪಟ್ಟಮೇಲೆ, ಸ್ವಲ್ಪ ಉಪಹಾರವಾಗಿ ಸಭಾ ವಿಸರ್ಜನವಾಯಿತು. ನ್ಯಾಯಮೂರ್ತಿ ಗಿರಿರಾವ ಇವರು ಕನ್ನಡಿಗರಿದ್ದು, ಅವರು ವಕೀಲಿಯಲ್ಲಿ ಬಹಳೇ ಪ್ರಸಿದ್ಧರಿದ್ದರು. ಅವರ ಕಾಯದೇ ಪಾಂಡಿತ್ಯವು ಕರ್ನಾಟಕಕ್ಕೇ ಭೂಷಣವಾಗುವಂತಹದಿದೆ. ಆದರೆ ನ್ಯಾಯಮೂರ್ತಿಗಳು ತಮ್ಮ ಸತ್ಕಾರಾನಂತರ ಕೇಶವರಾವ ಇವರು ಬಾರಿಸಿಗೆ ತೋರಿಸುವಷ್ಟು ಅಭಿಮಾನವನ್ನು ತಮ್ಮ ಮಾತೃಭಾಷೆಯಾದ ಕನ್ನಡದ ಸಲುವಾಗಿ ತೋರಿಸುವದಿಲ್ಲ. ಮಹಾರಾಷ್ಟ್ರ ಮಂಡಳಿಯ ಕೇಶವರಾಯರಷ್ಟು ದುರಭಿಮಾನವನ್ನು ತೋರಿಸದಿದ್ದರೂ, ಸದಭಿಮಾನದಿಂದ ಈ ಹಿಂದುಳಿದ ನಿಜಾಂ ಕರ್ನಾಟಕವನ್ನೂ ಕನ್ನಡ ಭಾಷೆಯನ್ನೂ ಎತ್ತಿ ಹಿಡಿಯಲಿಕ್ಕೆ ತನು ಮನ ಧನದಿಂದ ಇನ್ನಾದರೂ ಸಹಾಯಮಾಡುವರೆಂದು ನಂಬಿದ್ದೇವೆ. ಸರಿಗದವರು ಸರಿಗೆಯನ್ನಿಟ್ಟರೆ ಕನ್ನಡ ಮಾತಿಗೆ ಕರಿಮಣಿಯಾದರೂ ಬೇಡವೇ ? ನಿಜಾಂ ಸರಕಾರದವರು ಕನ್ನಡಿಗರಲ್ಲಿದ್ದ ಗುಣೀ ಜನರಿಗೆ ತಕ್ಕಮರ್ಯಾದೆಯನ್ನು ಕೊಟ್ಟದ್ದಕ್ಕೆ ಅವರನ್ನು ನಾವು ತುಂಬಾ ಅಭಿನಂದಿಸುತ್ತೇವೆ. ಚನ್ನಾಗಿ ಹುಡುಕಿದರೆ ಇನ್ನೂ ಎಷ್ಟೋ ಕನ್ನಡರತ್ನಗಳು ಇಲ್ಲಿ ಸಿಗಬಹುದು.

ಇಂಥ ಪ್ರಕಾರ ರೋಗಗಳಿಂದ ಉತ್ಪನ್ನವಾಗುವ ವಿಕಾರ ಉಷ್ಣ ಪರಮಿ (ಉಪದಂಶ) ಗರ್ಮಿ ಚಟ್ಟಿ ಒದದ ಗಂಟು, ತೊಡಿಸಂದಿಯ ಗಂಟು, (ವೃಡುಬು) ಅತಿಶಯ ಬಾವು, ಇಂದ್ರಿಯವರ್ಗಕ್ಕೆ ತಿಡಿಕೆ, ಹೊಡತು, ರಕ್ತ ಕೀವು ಸುರಿಯೋಣ ಅದರಂತೆ ಸ್ತ್ರೀಯರ ಪ್ರದರ (ಕೆಂಪು ಬಿಳಿ ಶೆರಗು) ಹೊಲೆ ಕುಟ್ಟರೋಗ ಬೆಳೆಯೋಣ, ಕಡಕಿ ವಿಕಾರಗಳಿಂದ ಗರ್ಭಾಶಯ ಕೆಡೋಣ, ಮೂತ್ರ ಕಣ್ಣು ಕಾಲು ಉರಿಯೋಣ, ಕಾವು ಹೆಚ್ಚಾಗಿ ಮಧುಮೇಹ ಮೈಮೇಲೆ ಗರ್ಮಿ (ಉಷ್ಣ) ಒಡೆದು ಕೀವು ಹೊರಬಿದ್ದು ಅದರಿಂದ ವ್ರಣ (ಘಾಯ) ವಾಗಿ ಅಂಗಳಕ್ಕೆ ತೂತು ಬಿದ್ದು ಮೂಗು ಕೂಡ್ರುವದೂ ಸೋರುವದೂ ಎಲ್ಲ ತರದ ಮೂಲವ್ಯಾಧಿ, ಹೊಟ್ಟೆ ಕಡತು ವಗೈರೆ ಕಾರಣಗಳಿಂದಾ ಜನನೇಂದ್ರಿಯ ಶಿಥಿಲತಾ ಅಥವಾ ನಪುಂಸಕತ್ವ ಮುಷ್ಟಿಮೈಥುನದಿಂದ ಜಗುವ ಪರಿಣಾಮ, ಸ್ವಪ್ನಾವಸ್ಥ ಮೂತ್ರದಲ್ಲಿ ಧಾತು ಅಥವಾ ಖರ ಬೀಳೋಣ, ವೀರ್ಯ ತಿಳುವಾಗೋಣ, ಸ್ತ್ರೀಗಮನದಲ್ಲಿ ತೀರು ಹತ್ತೋಣ. ತೀವ್ರ ವೀರ್ಯ ಪತನವಾಗೋಣ, ನಡನೋವು (ಚೂಲಿ) ನೋಯೋಣ, ಬೆನ್ನು ಬಿಗಿಯೋಣ, ವಾತವಿಕಾರ ಅವಿಚ್ಯಾರದಿಂದ ಮಾಡಿದ ವೀರ್ಯಪಾತ ವಗೈರೆ ರೋಗಗಳ ಮೇಲೆ ಅಶಿಕ್ಷಿತ ಅಡಾಣೀ ಜನರ ಕಡಿಯಿಂದ ಪಾರಜ ಮತ್ತು ರಸಕರ್ಪೂರ, ಇಂಗಳೀಕ ಮುಂತಾದ ಸವಿಷ ಮತ್ತು ಅಪಕ್ವ ಧಾತು ರೂಪ ಪದಾರ್ಥ (ರಸಾಯನ) ಮತ್ತು ಅಪಕಾರಕ ವಸ್ತು ಸೇವಿಸುವದರಿಂದ ಮೈಯೊಳಗೆ ರಸಾಯನ ನಿಂತು ಅದರಿಂದ ಕಾಲು ಕೈ ಮುಡಪಾಗಿ ಮತ್ತು ಕೈ ಕಾಲುಗಳಲ್ಲಿ ರಸಾಯನ ಒಡೆದು ಸ್ವತಃ (ತನಗೆ) ಮತ್ತು ಮುಂದಾಗುವ ತನ್ನ ಸಂತತಿಗೆ ಅನೇಕ ರೋಗವು ಉತ್ಪನ್ನವಾಗಿ ಅದರಿಂದ ಭಯಂಕರ ಪರಿಣಾಮ ಭೋಗಿಸಬೇಕಾಗುವದು ಇಂಥ ಪ್ರಕಾರದ ರೋಗಗಳು ಬಹಳ ದಿವಸ ನೆಲಗೊಂಡಿದ್ದಾಗಲೀ ಅಥವಾ ಹೊಸದಾಗಿ ಆದುದ್ದಾಗಲೀ ಇಂಥ ರೋಗಗಳ ಮೇಲೆ ಈ ನಮ್ಮ ಮೃತ್ಯುಂಜಯ ಔಷಧ ಉಪಯೋಗ ಮಾಡಿದರೆ ತತ್ ಸಂಬಂಧಿ ಸಂಪೂರ್ಣ ರೋಗಗಳು ತೀವ್ರವಾಗಿ ಹೋಗಿ ಮೈಯೊಳಗೆ ಇದ್ದ ರಸಾಯನವು ನಾಶವಾಗುವದು ಮತ್ತು ಅಶಕ್ತಿ ಹೋಗಿ ಮೈಯೊಳಗೆ ಶಕ್ತಿ ಬಂದು ಪ್ರಕೃತಿ ಉತ್ತಮವಾಗುತ್ತದೆ ಒಂದು ಬಾಟ್ಲಿಗೆ [೫] ರೂಪಾಯಿ ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆಯು ಔಷಧದ ಸಂಗಡ. ಲಾಭಕ್ಕೆ ಲಾಭವ. ಒಂದು ಆಣೆ ಟಿಕಿಟು ಕಳಿಸಿದಲ್ಲಿ ನಮ್ಮ ಔಷಧದ ಪೂರ್ಣ ಕ್ಯಾಟಲಾಕ ಕಳಿಸುವೆವು. (ತಮ್ಮ ಪತ್ತೆ:- ಪೂರ್ಣ ಬರೆಯಿರಿ)

ಸುಪ್ರಸಿದ್ಧ ಡಾ|| ಆರ್. ಎಲ್. ಹಿರೇಮಠ ಆರೋಗ್ಯ ಮಂದಿರ ಆರ್ಯ ವನೌಷಧಿ ೫೦೦೦, ಸಾವಿರ ಕಾರಖಾನೆ. ಕಮತನೂರ ಪೋ|| ಸಂಕೇಶ್ವರ ಜಿ|| ಬೆಳಗಾಂವ.

ಲೆವರಿನ ಗಡಿಯಾರಗಳು.

ಲೆವರಿನ ಕೈ ಗಡಿಯಾರ ರೂ. ೯.

ಲೆವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ ಆದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲೀಬೋ ವಾಚ ಕಂ. (ಇಂಡಿಯಾ.) ದಾಂಬೆ ೪ ೪

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದ ವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ .—

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವರಿಗೂ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ

ವಿಜಾಪುರ:—ಜಂಬುಲಿಂಗಪ್ಪ ಜಾಲವಾದಿ.

ಸ್ಟೇಶನರ್ಸ ಬಾಗಲಕೋಟಿ

ರಾಜವೈದ್ಯ, ನಾರಾಯಣಜಿ ಕೇಶವಜಿ.

೫೭. ಜೇವಾಬಜಾರ್ ಮುಂಬಯಿ



ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

೧೯೨೭ನೇ ಜನವರಿ ೧೫ರಿಂದ ಪ್ರಾರಂಭ.



ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ-

೧. ನೀವು ನಮಗೆ ರೂ. ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ ೨ ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್‌ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬುದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪುವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ್ ಗೋಲ್ಡ್" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ಬಿಕರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು. ಅಥವಾ ವಿ. ಪಿ ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಳೆದುಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಅಸೂಯೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೬-೮-೧ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್. ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರ ಸಿಟಿ.

ಯಾವದೇ {ಆಕಾರದ, ನಕ್ಷೆಯ, ನಂಬರಿನ} ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ ೧೪. ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಒಳಗೆ ನಾವು ಈ ದರವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂ. ೭

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ—ಸ್ವಾನ ಹೌಸ ಪಿ. ಬಿ. ೫೦೮. ಪಿ. ಟಿ. ಮದ್ರಾಸ

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೋಕೆಟ್ ವಾಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಛೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೇ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ [illegible]

ಕ್ಯಾಪ್ಟನ್ ವಾಚ್ ಕಂ. ಪಿ, ಬಿ. ಮದ್ರಾಸ. [illegible]

ಕಿರ್ಲೋಸ್ಕರ

ಕಬ್ಬಿಣ ನೇಗಿಲಗಳು.

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ. ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯು ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. | ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಆಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯು ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ॥ ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸಿದ್ಧ್ಯಹಸ್ತರಿಗೆ ಒಡ್ಡಿ ಮತ್ತು ಪತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಪಿ. ಸಿ. ನಂ. ೨೭೩೭ ಸಯ್ಯದ ಅಲ್ಲಿ ಅಸಗರ ಪೋಸ್ಟ್ ಮ್ ಸುಪರಿಂಟೆಂಡಂಟ್ ಸಕ್ರೇಟರಿಯೇಟ್ ಹೈದರಾಬಾದ ದಕ್ಷಿನ್ನ ರೂ.೧೦೦೦

(೨) ಎಲ್. ಪಿ. ಸಿ. ನಂ ೧೯೭೨ ನಾರಾಯಣ ವಿಠ್ಠಲ ಲೋಣಕರ. ಕೇರ್ ಆಫ್ ಡಿ. ಈ. ಪುರಾಣಿಕ ೧೧೭ ಸಿಹಾಲಪುರ ಇಂದೂರ. ೧೦೦೦

(೩) ಎಲ್ ಪಿ. ಸಿ. ನಂ. ೩೪೧ ರಾಮಚಂದ್ರ ಅನಂತ ಚಿಟ್ನೀಸ. ಡಿವಿಜನಲ್ ಫಾರೆಸ್ಟ ಆಫೀಸರ ಧತ್ತೂರಾ. ಪಶ್ಚಿಮ ಖಾನದೇಶ ರೂ. ೮೦೦

(೪) ಬಾಂಡ ನಂಬರು ೭೪೧೭ ಕೇ. ಜೆ. ಫರ್ನಾಂಡೋ ವ್ಯಾಪಾರಸ್ಥ. ಬ್ರಿಕ್‌ಸಾಯಿಡ ಸಿಲೋನ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೭೩೪ ಎಸ್. ಜಿ. ಚವರೆ. ಸ್ಟೇಷನ್ ಮಾಸ್ತರ ತೆಲಗಿ. ಜಿಲ್ಹಾ ವಿಜಾಪುರ. ರೂ ೧೦೦೦

ಡಿ. ಸ್. ಆಟಾರ್ಯ, ಚೀಫ ಏಜಂಟ ಹುಬಳ್ಳಿ (ಮುಂಬಯಿ ಇಲಾಖಾ)

ಸ್ಟ್ಯಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ಪಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯು ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು

೧ ನೇ ದರ್ಜೆ ಪುಡಿ (ಸ್ಪ್ರೆಕಿಂಗ್ ಸೀಲ) ೧ ಪೌಂಡಿಗೆ ರೂ. ೧-೬-೦

೨ ನೇ ,, ,, ,, ರೂ. ೧-೩-೦

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ

ಚಿಕ್ಕಪೇಟೆ ಬೆಂಗಳೂರು ಸಿಟಿ.

ಜೀವ ವಿಮೆಯ ಕಾರ್ಯದಲ್ಲಿ

ಅದ್ಭುತವಾದ ಜಯವು !

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೩೦ ರೂಪಾಯಿ ಲಾಭ ಹಂಚಿದೆ

ದಿ ಜನರಲ್ ಆಶ್ಯೂರನ್ಸ ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ

ಸುಲಭ ಕಂತು! ನಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೩೧ ತಿಂಗಳಲ್ಲಿ ಹೆಚ್ಚಾಗಿ ಉಳಿತಾಯವಾದದ್ದು ರೂ ೧,೯೯,೦೦೦

ಏಜಂಟರು ಬೇಕು! ಧಾರಾಳವಾದ ಕಮೀಶನ್!

ಏಸ್. ಕಬ್ಬೂರ ಬಿ. ಎ. ಎಫ್. ಎಸ್. ಅಜಮೀರ.

Apply to:- A. Ramachandra Rao
Branch Secretary, opposit Minto Hospital,
Bangalore City
or
L. V Ramdurg. Chief Agent
Near Vitoba Temple Hubli.

GENERAL ASSURANCE SOCIETY

ಈ ಪತ್ರಿಕೆಯು ಮಂಗಳವೇಢ ರಾಜೇರಾಯರ ಹುಕ್ಕೇರಿ ಶ್ರೀನಿವಾಸ ರಾಯರಿಂದ ಬಾಗಲಕೋಟೆಯಲ್ಲಿಯ ಉದ್ಯಾಂಬಾ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೭

ವಾ ಚಂದಾ ೧—೧೩—೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ವಿ ತಿ ಶ್ರಾವಣ ಶುದ್ಧ ೩ ಶಕ ೧೮೪೯ ತಾ|| ೩೧-೭-೧೯೨೭ Date 31—7 1927 | ಸಂಚಿಕೆ ೧೭

ಲೋಕಮಾನ್ಯರ ಪುಣ್ಯಸ್ಮರಣೆ.

“ಸ್ವರಾಜ್ಯವು ನನ್ನ ಜನ್ಮಸಿದ್ಧವಾದ ಹಕ್ಕು.”

ಅಮೃತ-ವಚನಗಳು

ಉದ್ಯೋಗವನ್ನು ಮಾಡುವಾಗ ನಿರಾಶರಾಗಬಾರದು. ಇದೇ ವೇದಾಂತದ ನಿಜವಾದ ಶಿಕ್ಷಣವು! ಆದರೆ ಉದ್ಯೋಗವೆಂದರೆ ಏನಾದರೂ ಮಾತಾಡುತ್ತ ಕೂಡ್ರುವದಲ್ಲ ಅದರ ಉಪಯೋಗವು ಸಮಾಜದ ಇಲ್ಲವೆ ದೇಶದ ಹಿತವೃದ್ಧಿಯು ಕಡೆಗೆ ಆಗುತ್ತಿರಬೇಕು

‡ ‡ ‡

ಕಾಲನ ಗತಿಯು ಅನುಕೂಲವಿರಬೇಕು, ಪರಿಸ್ಥಿತಿಯು ಅನುಕೂಲವಿರಬೇಕು, ಪರಮೇಶ್ವರನು ಅನುಕೂಲನಾಗಿರಬೇಕು, ಸತ್ಕಾರ್ಯಕ್ಕಾಗಿ ಸ್ವಪ್ರಯತ್ನ ಮಾಡಬೇಕು. ಅಂದರೆ ಯಶವು ಸಿಕ್ಕೇ ಸಿಗುವದು

‡ ‡ ‡

“ಶ್ರೀ ಲೋಕಮಾನ್ಯ ಟಿಳಕರವರು”

ಯಾವದೊಂದು ಕಾರ್ಯವನ್ನು ವಿದ್ವಾನ್ ಸಮಂಜಸ ಮತ್ತು ತಜ್ಞಜನರ ಬಹುಮತದಿಂದಲೇ ಮಾಡಲಿಕ್ಕೆ ಬೇಕು. ಇಂಥ ಪ್ರಸಂಗದಲ್ಲಿ ಒಬ್ಬಿಬ್ಬರು ವಿರೋಧಿಗಳಾಗಿ ಉಳಿಯುತಕ್ಕವರೇ? ಅದಕ್ಕೆ ಉಪಾಯವಿಲ್ಲ ಬಹುಮತದಿಂದ ನಿರ್ಣಯವಾದ ಸಂಗತಿಗಳಿಗೆ ಮಾನ ಕೊಡದಿರುವದೆಂದರೆ ಜನತೆಯು ಅಪಮಾನ ಮಾಡಿದಂತೆಯೇ ಸರಿ.

† † †

“ರಾಜನೇ ಪ್ರಜಾದ್ರೋಹ ಮಾಡುತ್ತಿರಲು ರಾಜದ್ರೋಹದ ಬಗ್ಗೆ ಆಕ್ಷೇಪಿಸಲು ರಾಜನಿಗೆ ಏನೂ ಅಧಿಕಾರವು ಪ್ರಾಪ್ತವಾಗುವದಿಲ್ಲ

—ಲೋಕಮಾನ್ಯರು

ಬಿತ್ತಿದರು; ಸ್ವಾತಂತ್ರ್ಯದ ಸಲುವಾಗಿ ಬಲಾಢ್ಯ ಸರಕಾರವನ್ನು ಕೂಡ ಹೆಜ್ಜೆಜ್ಜೆಗೆ ಇದಿರಿಸಲು ಜನರಲ್ಲಿ ಧೈರ್ಯ ತಂದುಕೊಟ್ಟರು! ರಾಷ್ಟ್ರೀಯತೆಯು ಧರ್ಮದಕಿಂತಲೂ ಹೆಚ್ಚಿನದೆಂದು ಸಾರಿದರು! "ಓಮ್ ರಾಷ್ಟ್ರದೇವೋಭವ!" ಅಂದರೆ ಸ್ವರಾಷ್ಟ್ರವೇ ದೇವರೆಂದು ಭಾವಿಸಲಿಕ್ಕೆ ಕಲಿಸಿ, ರಾಷ್ಟ್ರ ಧರ್ಮವನ್ನು ಸ್ಥಿರವಾಗಿ ನಲೆಗೊಳಿಸಿ, ತಮ್ಮ ಮುಂದಿನ ಆಕಾಂಕ್ಷೆಯನ್ನು ಪೂರೈಸುವ ಭಾರವನ್ನು ಈಗಿನವರ ತಲೆಯ ಮೇಲೆ ಹೊರಿಸಿ, ದೇಹವನ್ನಿಟ್ಟರು! ಈ ಅವರ ಇಚ್ಛೆಯನ್ನು ಬೇಗನೇ ನಾವು ಎಂತು ಪೂರ್ತಿಗೊಳಿಸಬೇಕೆಂಬುವನ್ನೇ ನಾವೆಲ್ಲರೂ ಹಗಲಿರುಳು ಚಿಂತಿಸುತ್ತಿರಬೇಕು

ಟಿಳಕರ ಸ್ವಂತ ಮುಖದಿಂದ.

ಲೋಕಮಾನ್ಯರು ವಿಲಾಯತಿಯಲ್ಲಿದ್ದಾಗ್ಯೆ 'ಬ್ರಿಟನ್ ಆ್ಯಂಡ ಇಂಡಿಯಾ' ಎಂಬ ಪತ್ರಿಕೆಯ ಪ್ರತಿನಿಧಿಯು ಅವರ ಭೆಟ್ಟಿಯಾದಾಗ್ಯೆ, ಲೋಕಮಾನ್ಯರು ಹೇಳಿದ್ದು. † † †

"ನಿಮಗೆ ತುರುಂಗಕ್ಕೆ ಹೋಗಲು ಕಾರಣವೆ ನಾಯಿತು?" ಎಂಬದಾಗಿ ಪ್ರತಿನಿಧಿಯು ಕೇಳಿದನು

"ನಾನು ಎರಡು ವೃತ್ತಪತ್ರಗಳನ್ನು ಹೊರಡಿಸುತ್ತಿದ್ದೆನು. ಕೊಲ್ಹಾಪೂರದ ಮಹಾರಾಜರ ಕಾರಭಾರಿಯು ಮಹಾರಾಜರನ್ನೇ ಬಹಳ ಕೆಟ್ಟ ರೀತಿಯಿಂದ ನಡಸಿಕೊಳ್ಳುತ್ತಾನೆಂಬ ಅರ್ಥದ ವಿಷಯವನ್ನು ನಾನು ಪ್ರಕಟಿಸಿದ್ದರಿಂದ ನನ್ನ ಮೇಲೆ ಖಟ್ಲೆಯಾಗಿ ಅದರ ವಿಚಾರಣೆಯಲ್ಲಿ ನನಗೆ ಶಿಕ್ಷೆಯಾಯಿತು. ತುರುಂಗದಿಂದ ಹೊರಗೆ ಬಂದ ಮೇಲೆ ನಾನು ಮೊದಲಿನಂತೆ, ನನ್ನ ಸ್ವೀಕೃತ ಕಾರ್ಯವನ್ನು ಕೈಕೊಂಡೆನು ನಾನು ನಡೆಸಿದ ಶಾಲೆಗೆ ನನ್ನ ಸಂಬಂಧವು ೧೮೯೦ರ ವರೆಗೆ ಇದ್ದಿತು. ನಾನು ಈ ಶಾಲೆಯಲ್ಲಿ, ಗಣಿತ, ಸಂಸ್ಕೃತ ಪದಾರ್ಥ ವಿಜ್ಞಾನಶಾಸ್ತ್ರ ಮುಂತಾದವುಗಳನ್ನು ಕಲಿಸುತ್ತಿದ್ದೆನು. ಬಳಿಕ ಶಾಲೆಯನ್ನು ಯಾವ ತತ್ವದ ಮೇಲೆ ನಡೆಸಬೇಕೆಂಬುವದರಲ್ಲಿ, ನನ್ನ ಮತ್ತು ನನ್ನ ಸಹಕಾರ ವರ್ಗದವರ ಮತಭೇದವಾಯಿತು. ಸಂಕಾರವು ಸಹಾಯಕ್ಕಾಗಿ ಹಣ ಕೊಟ್ಟು, ಶಾಲೆಯ ಅಂತರ್ಗತ ವ್ಯವಸ್ಥೆಯಲ್ಲಿ ಕೈ ಹಾಕುವ ಪ್ರಯತ್ನವನ್ನು ಮಾಡಿತು! ಬೇಕಾದರೆ ಸಹಾಯ ಕೊಡಬಹುದು ಆದರೆ ಶಾಲೆಯ ವ್ಯವಸ್ಥೆಯಲ್ಲಿ ಹಚ್ಚಾಡಿಕೆಯನ್ನು ಮಾಡಕೂಡದೆಂದು ನನ್ನ ಮತವಿತ್ತು. ಆದ್ದರಿಂದಲೇ ಸರಕಾರದಿಂದ 'ಗ್ರ್ಯಾಂಟ' ತೆಗೆದುಕೊಳ್ಳಬಾರದೆಂದು ನಾನು ಪ್ರತಿಪಾದಿಸುತ್ತಿದ್ದೆನು. ಆದರೆ ನನ್ನ ವಿರುದ್ಧ ಬಹುಮತವಾಗಿ ನನಗೆ ಶಾಲೆಯಲ್ಲಿ ಕೆಲಸ ಮಾಡುವುದು ಶಕ್ಯವಾಗಲಿಲ್ಲ. ಆ ಹೊತ್ತಿನಿಂದ ನನ್ನ ಶಾಲೆಯು ಸರಕಾರದ ಸ್ವಾಧೀನದಲ್ಲಿ ಹೋಗಿ, ಯಾವ ಧ್ಯೇಯಕ್ಕಾಗಿ ಅಸ್ತಿತ್ವದಲ್ಲಿ ಬಂದಿತ್ತೋ ಅದು ಹಿಂದುಳಿದು ದೇಶದ ಹಾನಿಯಾಯಿತು! ಮಧ್ಯದಲ್ಲಿ ೧೮೮೫ರಿಂದ ನಾನು ಒಂದು "ಡೆಕ್ಕನ್" ವರ್ಗವನ್ನು ತೆಗೆದೆನು. ಅದು ೧೮೯೮ರ ವರೆಗೆ ಸ್ಥಿರವಿತ್ತು ೧೮೯೦ರಲ್ಲಿಯೇ ನಾನು ವೃತ್ತಪತ್ರಕಾರರ ವರ್ಗದಲ್ಲಿ ಸೇರಿದ್ದೆನು, ನನ್ನ 'ಕೇಸರಿ'ಕ್ಕೆ ನನ್ನ ಯಾವತ್ತು ಶಕ್ತಿಯನ್ನು ನೀಡಿದೆನು 'ಕೇಸರಿ' ಪತ್ರವನ್ನು ನಾನು ಕೇವಲ ರಾಜಕೀಯ ಜಾಗೃತಿಯ ಕಾರ್ಯಕ್ಕಾಗಿ ಉಪಯೋಗಿಸಿದೆನು. ಮೊದಲಿಗೆ ಚಂದಾದಾರರ ಸಂಖ್ಯೆಯು ೧ ಸಾವಿರವಿತ್ತು; ಮುಂದೆ ೮ ಸಾವಿರವಾಯಿತು; ಈಗ್ಗೆ ೨೦ ಸಾವಿರ ಇದ್ದು ಚಿಲ್ಲರ ಮಾರಾಟ ಸಹಿತವಾಗಿ ೩೦ ಸಾವಿರವಿದೆ. ಶಾಸ್ತ್ರೀಯ ಮತ್ತು ವಾಙ್ಮಯ ಸೇವೆಗಳಲ್ಲಿ ನನ್ನ ಮೂಲ ಪ್ರವೃತ್ತಿ. ಆದರೆ ಪರಿಸ್ಥಿತಿಯ ಮೂಲಕ ಎಲ್ಲವೂ ಬದಲಾಗಿ ನನ್ನ ಮೂಲ ಪ್ರವೃತ್ತಿಯು ಒತ್ತಟ್ಟಿಗೆ ಉಳಿದು, ನನಗೆ ನನ್ನ ಕಾರ್ಯದಲ್ಲಿ ರಾಜಕಾರಣಕ್ಕೆ ಅಗ್ರಸ್ಥಾನವನ್ನು ಕೊಡಬೇಕಾಯಿತು."

—ಬಿಲ್ವತನಯ.

ಮಾಲಿನಿ—ಗುಲಾಬಖಾನರು.

—:o)(o)(o):—

'ಗೃಹಲಕ್ಷ್ಮಿ' ಎಂಬ ಸ್ತ್ರೀಯರ ಮಾಸಪತ್ರಿಕೆಯಲ್ಲಿ ಮಾಲಿನಿಯು ತನ್ನ ಮದುವೆಯನ್ನು ಸಮರ್ಥಿಸಿಕೊಂಡು ಹೀಗೆ ಬರೆದಿರುವಳು:—"ಉದಾತ್ತ ಭಾವನೆಯಿಂದ ನಾನು ಖಾನರನ್ನು ಕೂಡಿಕೊಂಡದ್ದರಿಂದ ಯಾರಿಗೂ ಅನ್ಯಥಾ ತಿಳಿಯಲು ಮಾರ್ಗವಿಲ್ಲ. ಒಂದು ವರ್ಷದಿಂದ ಈ ಮದುವೆಯು ನಿಶ್ಚಯವಾಗಿದ್ದಿತು ನಾನು ಸಂಪೂರ್ಣ ವಿಚಾರ ಮಾಡಿ ಲಗ್ನ ಮಾಡಿಕೊಂಡಿದ್ದೇನೆ. ನನಗೆ ಯಾರೂ ಈ ಬಗ್ಗೆ ಜುಲುಮೆ ಮಾಡಿಲ್ಲ. ನಮ್ಮ ತಂದೆಯವರು ವಿಧವಾ ವಿವಾಹ ಮಾಡಿಕೊಂಡಾಗ್ಯೆ ಜನರು ಅವರನ್ನು ಹೀಗೆಯೇ ದೂರಿದರು. ನಾನು ಶ್ರೀ ಗುಲಾಬಖಾನರನ್ನು ಬಹು ದಿನಗಳಿಂದ ಬಲ್ಲೆ. ಅವರನ್ನು ಪ್ರೀತಿಸುತ್ತಲಿದ್ದೆನು. ಆದರೆ ಆಗ್ಗೆ ಮದುವೆಯ ಕಲ್ಪನೆ ಸಹ ಇರಲಿಲ್ಲ. ನಮ್ಮ ತಂದೆಯವರು ಉದಾರ ಮನಸ್ಸಿನವರು. ಬ್ರಹ್ಮೋ ಸಮಾಜದವರು. ಆದುದರಿಂದ ನಾನು ಮೊದಲಿನಿಂದ ವಿಶಾಲದೃಷ್ಟಿಯುಳ್ಳವಳಾಗಿರುವೆನು."

(ಈ ಪ್ರಕಾರವಾಗಿ ಮಾಲಿನಿಯವರು ಬರೆದಿರುತ್ತಾರೆ. ವಿಧವಾ ವಿವಾಹ, ಬ್ರಹ್ಮೋ ಸಮಾಜಗಳ ವಾತಾವರಣದಲ್ಲಿ ಹುಟ್ಟಿ ಬೆಳೆದ ಮಾಲಿನಿಗೆ 'ವಿಶಾಲ'ದೃಷ್ಟಿ ಬಂದಿರಬಹುದು. ತಾಯಿ ತಂದೆಗಳ ಕೃತ್ಯದಿಂದ ಹೀಗಾಗುವದು ಸ್ವಾಭಾವಿಕ. ಮಗಳ ಕೃತ್ಯಕ್ಕೆ ತಾಯಿಯನ್ನು ಜವಾಬ್ದಾರಳನ್ನಾಗಿ ಮಾಡುವದು ನ್ಯಾಯವೋ ಅನ್ಯಾಯವೋ ಎಂಬ ಪಕ್ಷೆಯನ್ನು 'ಸ್ವದೇಶಾಭಿಮಾನಿ'ಯು ಎತ್ತಿದೆ, ಅದನ್ನೆತ್ತುವ ಅವಶ್ಯವಿಲ್ಲ. ಈ ಬಗೆಯ (ಅಂತರ್ಗತ ವಿವಾಹದ) ವಿವಾಹಗಳ ಕಲ್ಪನೆಯು ಬೇರೂರಲು ಮಾಲಿನಿಗೆ ಅವಕಾಶವಿದೆಂದು 'ಕನ್ನಡಿಗ'ನು ಹೇಳಿದುದು ಅದು ಯಾವಾಗಲೂ ಸತ್ಯವಾಗಿಯೇ ಇರುವದು. ಇನ್ನು ವ್ಯಭಿಚಾರ ಮೂಲಕ ಹುಟ್ಟಿದವರ ಗತಿಯೇನೆಂದು ಆ ಪತ್ರಿಕೆಯು ಮತ್ತೊಂದು ಸಂಶಯ. ವ್ಯಭಿಚಾರಗಳ ಗತಿಯು ಎಲ್ಲರಿಗೂ ತಿಳಿದೇಯಿದೆ ಅಪವಾದವು ಎಲ್ಲ ನಿಯಮಗಳಲ್ಲಿರುವಂತೆ ಒಬ್ಬಿಬ್ಬರು ಈ ವರ್ಗದವರಲ್ಲಿಯೂ ಅಪರೂಪದಿಂದ ಸದ್ಗುಣಿಗಳಾಗಬಹುದು. ಅದೇ ಪ್ರಕಾರವಾಗಿ ಒಳ್ಳೇ ಮನೆತನದವರಲ್ಲಿ ದುರಾಚಾರಿಗಳೂ ಅಪವಾದವಾಗಿ ಹುಟ್ಟಬಹುದು. ಅಪವಾದಗಳು ಯಾವಾಗಲೂ ಅಪವಾದಗಳೇ. ಆದರೆ ತಾಯಿ ತಂದೆಗಳ ಬೇರೆ ಬೇರೆ ಕೃತ್ಯಗಳು ಮಕ್ಕಳುಗಳ ಮನಸ್ಸಿನ ಮೇಲೆ ಆ ಆ ಬಗೆಯ ಪರಿಣಾಮವನ್ನು ಮಾಡೇ ಮಾಡುತ್ತವೆಂಬ ಸರ್ವ ಮಾನ್ಯವಾದ ಸಿದ್ಧಾಂತವು ಸುಳ್ಳಾಗದು.)

—ಸಂ. ಕ.

ಮುಂಬೈ ಸರಕಾರದ ಗಾಝೇಟ.

ಎಸ್ ಎ ಹತ್ತಂಗಡಿಯವರು ಬೆಳಗಾವಿಯ ಜಾಯಿಂಟ ೧ನೇ ವರ್ಗದ ಸಬ್‌ಜಡ್ಜರಾಗಿಯೂ ವಿ ಬಿ. ಹಾಳಭಾವಿಯವರು ವಿಜಾಪೂರದ ೧ನೇ ವರ್ಗ ಸಬ್‌ಜಡ್ಜರಾಗಿಯೂ ನೇಮಿಸಲ್ಪಟ್ಟಿರುವರು.

ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ೪೦೩ ಜನ ವಿದ್ಯಾರ್ಥಿಗಳು ಕೂಡುವರು!!

ಕರ್ನಾಟಕ ವೈಭವದ "ಪೌರಾಣಿಕ ಪುತ್ರನಿಗೆ"

ಕರ್ನಾಟಕ ವೈಭವಕಾರರು "ವಿಜಾಪೂರ ಪಟ್ಟಣದ 'ಮೇಲೆ' ಮಳೆಯಾಯಿತು," ಎಂದು ಬರೆದುದಕ್ಕೆ 'ಕನ್ನಡಿಗ'ನು 'ಪಟ್ಟಣದ 'ಮೇಲೆ' ಆಯಿತು. ಬುಡಕ್ಕೆ ಆಗಲಿಲ್ಲ! ನಮ್ಮ ಭಾಷೆ ಸಂಪೂರ್ಣ!!' ಎಂಬ ಹಾಗೆ ಟೀಕೆ ಮಾಡಿದನು 'ಪೌರಾಣಿಕಪುತ್ರ' ರೆಂಬೋರ್ವರ ಉತ್ತರವು 'ವೈಭವ'ದ ೨೪ ನೇ ತಾರೀಖಿನ ಸಂಚಿಕೆಯಲ್ಲಿ ಪ್ರಸಿದ್ಧವಾಗಿದೆ. ಅವರು ಕೇಳುವದೇನೆಂದರೆ:—"ಯಾವನಾದರೊಬ್ಬ ದಾರಿಕಾರನು ನಮಗೆ 'ಇಂಥ ಊರಹಾದಿಯು ಎತ್ತಕಡೆಯಿಂದ ಹೋಗಿರುತ್ತದೆ.' ಎಂದು ಕೇಳಿದರೆ. ತಾವು (ನೀವು) 'ಇಂಥಿಂಥ ಊರುಗಳಮೇಲೆ ಹಾಯ್ದುಹೋಗಿರುತ್ತದೆ,' ಎಂದು ವಾಡಿಕೆಯಾಗಿ ಹೇಳುವದುಂಟು ಆದರೆ ನಿಜವಾಗಿ ಆ ದಾರಿಯು ಆಯಾ ಊರುಗಳ ಗೋಡೆ, ಕುಂಬೆಗಳಮೇಲೆ ಹಾಯ್ದುಹೋದಂತಾಯಿತೇ?" ಎಂದು.

ಎಂಥ ತಿರುಪುಮರುಗಿನ ವಿಚಾರದ ಪ್ರಶ್ನೆ ಇದು! ಇಂಥದೊಂದು ದಾರಿಯು ಇಂಥಿಂಥ ಊರುಗಳ ಮೇಲೆ ಹಾಯ್ದುಹೋಗಿರುವದೆಂದು ಹೇಳುವದು ವಾಡಿಕೆಯ ಮಾತಾಗಿರಬಹುದು. ಆದರೆ "ಮಳೆಯು ಇಂಥ ಪಟ್ಟಣದ 'ಮೇಲೆ' ಆಯಿತು" ಎಂದು ಯಾರಾದರೂ ಹೇಳಿದ್ದನ್ನು ಎಲ್ಲಿಯಾದರೂ ಕೇಳಿದ್ದುಂಟೋ? ಇನ್ನು, ಕೇಳಿದ್ದರೂ ಅದನ್ನು ಲೇಖಗಳಲ್ಲಿ ಬರೆಯುವರುಂಟೇ?

'ಎಲೆಯ ಮೇಲೆ ಬಂದುಕುಳ್ಳಿರಿ' ಎಂದು ಹೇಳುವದು ರೂಢಿಯೊಳಗಿನ ಮಾತು. ಹೀಗೆ ಹೇಳಿದಕೂಡಲೆ ತಾವು ಹೋದವರೇ ಬಡಿಸಿದ ಎಲೆಯ ಮೇಲೆಯೇ ಕುಳಿತುಕೊಳ್ಳುವಿರೋ? 'ಎಲೆಯ ಮೇಲೆ ಕುಳ್ಳಿರೆಂದು ಹೇಳುವ ರೂಢಿಯುಂಟೆಂದು, 'ಒಲೆಯಮೇಲೆ' ಕುಳ್ಳಿರು,' ಎಂದು ಯಾರಾದರೂ ಹೇಳುವರೋ? ಹಾಗೆಯೇ 'ಇಂಥದೊಂದು ದಾರಿಯು ಇಂಥಿಂಥ ಊರುಗಳ 'ಮೇಲೆ' ಹಾಯ್ದಿರುವದು ಎಂದು ಹೇಳುವ ಪರಿಪಾಠವಿದ್ದರೆ, "ಮಳೆಯು ಪಟ್ಟಣದ 'ಮೇಲೆ' ಆಯಿತು" ಎಂದೇ ಹೇಳಬೇಕೆಂಬೀ ನಿಯಮವನ್ನು ಪೌರಾಣಿಕ ಪುತ್ರರು ಯಾವ ವ್ಯಾಕರಣದ ಆಧಾರದಿಂದ ನುಡಿದಿರುವರು!

ಪೌರಾಣಿಕ ಪುತ್ರರೆ, ನಿಮ್ಮ ಲೇಖವು ಪ್ರಕಟವಾದ ಸಂಚಿಕೆಯೊಳಗಿನದೇ ಆದ ಸಂಪಾದಕರಿಂದಲೇ ಬರೆಯಲ್ಪಟ್ಟ ನಮಗೆ ತಿಳಿಯದ ವಾಕ್ಯದ ಅರ್ಥವನ್ನು ಕೇಳುತ್ತೇವೆ; ದಯಮಾಡಿ ಸ್ಪಷ್ಟೀಕರಿಸುವಿರಾ?

"ಆದರೆ ಅವನು ಪ್ರಪಂಚವನ್ನು ಆ ನೆಲದ ಉತ್ಪನ್ನದ ಮೇಲಿಂದಲೇ ಸಾಗಲಾರದು" ಸ್ವಾಮೀ, ಪೌರಾಣಿಕ ಪುತ್ರರೇ ಇದಕ್ಕೆ ವ್ಯಾಕರಣ ಹೇಳಬಲ್ಲಿರಾ?

'ಕರ್ನಾಟಕವೈಭವ'ವು ಕನ್ನಡನಾಡಿನ ಉಜ್ವಲವಾದ ವಾರಪತ್ರಿಕೆಯಲ್ಲಿ ಒಂದು. ಆದ್ದರಿಂದ ಇಂತಹ ಪತ್ರಿಕೆಯಲ್ಲಿ ವ್ಯಾಕರಣ ದೋಷಗಳೇನೂ ಇರಕೂಡದೆಂದು ಯಾರಾದರೂ ಇಚ್ಛಿಸಿದರೆ ಅದೇನೂ ತಪ್ಪೆನಿಸಲಾರದು ಆದರೆ 'ವೈಭವ'ದ ಪ್ರತಿಯೊಂದು ಸಂಚಿಕೆಯನ್ನು ನೋಡಿದರೂ ಮೇಲೆ ಉದಹರಿಸಿದಂಥ ದೋಷಗಳು ಕಂಡುಬರುತ್ತವೆಂದು ವಿಷಾದದೊಂದಿಗೆ ಹೇಳಬೇಕಾಗುತ್ತದೆ ಇದಕ್ಕಾಗಿ 'ಕನ್ನಡಿಗ'ನು 'ವೈಭವ'ದ ಕರ್ತರನ್ನು ಕೊಂಚ ಎಚ್ಚರಗೊಳಿಸಲು ಯತ್ನಿಸಿದರೆ, ಅವನ ಮೇಲೆ ಹರಿಹಾಯುವದು, 'ಪೌರಾಣಿಕ ಪುತ್ರ'ರಿಗೆ ಎಷ್ಟುಮಾತ್ರವೂ ಭೂಷಣವಲ್ಲ

—ಸೀತಾತನಯ

ಸೋಜಿಗದ ಸುದ್ದಿ.

ಸಮುದ್ರದ ತೆರೆಗಳು ಅಲೆದಾಡುತ್ತಲಿವೆ. ಅವನ್ನು ಪುಕ್ಕಟೆಯಾಗಿ ಹೋಗಗೊಡಬಾರದು. ಆ ತೆರೆಗಳಿಗೆ ವ್ಯಾಪಾರದ ಬೆಲೆ ಕೊಡಬೇಕೆಂದು ಯೋಚಿಸಿ ಎಸ್ವರಾವುಥದ ಫ್ಲೆಮಿಂಗರು ಒಂದು ಯಂತ್ರವನ್ನು ಸಿದ್ಧಪಡಿಸಿರುವರು. ಇದರಿಂದಾ ಅಗ್ಗವಾಗಿ ವಿದ್ಯುತ್ತನ್ನು ಸಿದ್ಧಪಡಿಸಿ, ಬೇಕಾದಲ್ಲಿ ಒಯ್ಯಬಹುದು. ಒಂದು ಯಂತ್ರದ ಬೆಲೆ ೬೫ ಪೌಂಡು!

(೨) "ಓದುಗನೂ" "ಪೌರಾಣಿಕ ಪುತ್ರನೂ"

"ಮೇಲೆ" ಈ ಪ್ರಯೋಗವು ಸರಿಯಾಗಿಲ್ಲವೆಂಬುದನ್ನು ನಾನು ತೋರಿಸಿದ್ದು 'ವಿಲಕ್ಷಣಟೀಕೆಯಾಯಿತೆಂದು 'ಪೌರಾಣಿಕಪುತ್ರ'ನ ಮತ. 'ಕನ್ನಡಿಗ'ನಲ್ಲಿ ಇದು ಪ್ರಕಟವಾಯಿತೆಂದು ಸಿಟ್ಟೇಕೆ? 'ಕನ್ನಡಿಗ'ನ ಮೇಲೆ ಹರಿಹಾಯುವದೇಕೆ? 'ಕನ್ನಡಿಗ'ನ "ಉಚ್ಛ, ತರಗತಿಯ ಭಾಷೆಯನ್ನೂ" "ವಿಚಿತ್ರ ಭಾಷಾಶೈಲಿ"ಯನ್ನೂ ಅನುಕರಿಸುವದು 'ಪುತ್ರ'ನಿಗೆ ರುಚಿಸದಿದ್ದರೂ 'ವೈಭವ'ದಲ್ಲಿ ಕಡೆಗೆ ಶುದ್ಧವಾದ ಭಾಷೆಯಾದರೂ ಇರಲಿ! ಯಾವ ಸಂಚಿಕೆಯಲ್ಲಿ "ಮೇಲೆ" ಶಬ್ದದ ವಾರ್ತೆಯು ಪ್ರಕಟವಾಗಿದೆಯೋ ಅದೇ ಸಂಚಿಕೆಯ ಅಗ್ರಲೇಖದಲ್ಲಿಯ ಈ ವಾಕ್ಯದ ಅರ್ಥವನ್ನು ಪುತ್ರರು ನಮಗೆ ಹೇಳಲಿ—"ಸದ್ಯಕ್ಕೆ ಲಿಂಗಾಯತರು ಕೈಕೊಂಡ ಜಾತೀಯ ಧೋರಣದಿಂದ ಮುಕ್ಕಳಿದ ಜಾತಿಯನ್ನೂ ಜಾತಿಯಕ್ಷದ ಭಾವನೆಯನ್ನುಂಟು ಮಾಡಹತ್ತಿದೆ" [illegible] ಕೂಡಲೇ ಮನಸ್ಸಿಗೆ ವಿಷಾದವಾಗಿ 'ವೈಭವ'ಕ್ಕೆ ಕೊಂಚ [illegible] ಬೇಕೆಂದು ಆದು ಸಂಪಾದಕೀಯ ಲೇಖನವನ್ನು [illegible] "ಮೇಲೆ"ಯ ಮೇಲೆ ಮಾತ್ರ ಕೊಂಚ [illegible]. ಆದರೇ ಅದು ವಿಲಕ್ಷಣವಾಯಿತೇ?

ಇನ್ನು "ಡೇಟಿ"ನ ಬಗ್ಗೆ, ಈ "ಡೇಟು" ಅನೇಕ ದಿನಗಳಿಂದ 'ಕನ್ನಡಿಗ'ನಲ್ಲಿ ಪ್ರಕಟವಾಗುತ್ತಿದ್ದು, ಈ ವರೆಗೆ 'ಪೌರಾಣಿಕ ಪುತ್ರ'ನಿಗೆ ಅದು ಕಾಣಿಸಲಿಲ್ಲ ಆದರೆ "ಮೇಲೆ"ಯ ಗೋದಲವು ಎದ್ದ ಕೂಡಲೇ 'ಕನ್ನಡಿಗ'ನ ದೋಷಗಳನ್ನು ಹೊರಗೆಡಹಬೇಕೆಂಬ ಇಚ್ಛೆಯು ಉಂಟಾದುದು ವಿಷಾದದ ಮಾತು ಇರಲಿ, ಮುಂಬೈ ಮದ್ರಾಸಗಳಲ್ಲಿಯ ಜಾಹೀರಾತುದಾರರಿಗೆ ಕನ್ನಡ ತಿಳಿಯುವದಿಲ್ಲ. ತಮ್ಮ ಜಾಹೀರಾತನ್ನು ಮಾತ್ರ ಒಂದೆರಡು ಸಂಜ್ಞೆಯಿಂದ ಅವರು ಗುರುತಿಸಿಕೊಳ್ಳುವರು. ಆದರೆ ಅದು ಪ್ರತಿ ವಾರದಲ್ಲಿಯೂ ಪ್ರಕಟವಾಗಿ, ಅದೇ ವಾರದ ಸಂಚಿಕೆಯೇ ತಮಗೆ ಕಳಿಸಲ್ಪಟ್ಟಿದೆಂಬುದು ಅವರಿಗೆ ಇಂಗ್ಲೀಷ ತಾರೀಖು ಇದ್ದರೆ ಮಾತ್ರ ತಿಳಿಯುವದು. ಆದ್ದರಿಂದಲೇ ತಾರೀಖನ್ನು ಇಂಗ್ಲೀಷಿನಲ್ಲಿಯೂ ಪ್ರಕಟಿಸಿರೆಂದು ಅವರು ಆಗ್ರಹಪಟ್ಟಿದ್ದರಿಂದ, ಹಾಗೆ ಏರ್ಪಾಡಾಗಿದೆ. ಕನ್ನಡದಲ್ಲಿ ಬರೆಯುವಂತೆ ಬರೆದು, ಅದನ್ನು ಮೇಲೆ ಬರೆದು, ಕೆಳಗೆ ಇಂಗ್ಲೀಷ ಬರೆದರೆ ಯಾವ ತಪ್ಪೂ ಇಲ್ಲ. ಹೀಗಿದ್ದರೂ 'ಪುತ್ರ'ರು ಮೈಸೂರಿನವರು ಇಂಗ್ಲೀಷ ಅಂಕೆಗಳನ್ನು ಹಾಕುತ್ತಿರುವ ಉದಾಹರಣೆಯನ್ನು ಕೊಟ್ಟಿರುವರು. ಕನ್ನಡಕ್ಕೆ "ಅರ್ಧಚಂದ್ರ"ವನ್ನು ಕೊಟ್ಟು ಕೇವಲ ಇಂಗ್ಲೀಷ ಅಂಕೆಗಳಿಗೆ ಮೈಸೂರಿನವರು ಪ್ರಾಧಾನ್ಯವನ್ನು ಕೊಡುವದು 'ಪುತ್ರ'ನ ಕನ್ನಡ ಅಭಿಮಾನಕ್ಕಾದರೂ ಯೋಗ್ಯವಾಗಿದೆಯೋ? ಏನಾದರೂ ಟೀಕೆ ಮಾಡಬೇಕೆಂದು ಟೀಕಿಸುವದು ಸರಿಯಲ್ಲ! ಯೋಗ್ಯ ವಿಚಾರ, ಸತ್ಯಾನ್ವೇಷಣೆ, ಹಾಗೂ ಸಾತ್ವಿಕವೃತ್ತಿ ಇವು ಟೀಕೆಯಲ್ಲಿ ಅವಶ್ಯವಾಗಿರಬೇಕು.

—ಓದುಗ

ರಂಗಭೂಮಿಯ ಸಮಾಚಾರ.

ದತ್ತಾತ್ರಯ ನಾಟಕ ಮಂಡಲದವರು, ಸೊಲ್ಲಾಪುರದಲ್ಲಿ ಕನ್ನಡದ ಅಭಿಮಾನವು ಪಸರಿಸುವಂತೆ ತಮ್ಮ ಶಕ್ತಿ ಮೀರಿ ಪ್ರಯತ್ನಿಸಿದ್ದು ಗುಲಬುರ್ಗೆಗೆ ಹೋಗಿದ್ದಾರೆ.

ಅಂಬಾಪ್ರಸಾದಿಕ ನಾಟಕ ಮಂಡಲದವರಿಗೆ ಕಡೂರಿನಲ್ಲಿ ರಸಿಕರಿಂದ ಚನ್ನಾಗಿ ಪ್ರೋತ್ಸಾಹವು ದೊರೆಯಿತು. ಒಂದು ಧರ್ಮಾರ್ಥ ನಾಟಕವನ್ನಾಡಿ ೫೧೦ ರೂ, ಗಳನ್ನು ಮಹಾರಾಜರ ರಜತೋತ್ಸವಕ್ಕಾಗಿ ಕಂಪನಿಯವರು ಕೊಟ್ಟರು. 'ರಾಮಾಂಜನೇಯ' 'ಶ್ರೀಕೃಷ್ಣಲೀಲಾ' ಹೊಸದಾಗಿ ರಂಗಭೂಮಿಯ ಮೇಲೆ ಬಂದಿವೆ. ಕಡೂರಲ್ಲಿ ಉಂಗುರ, ಬೆಳ್ಳಿಬಟ್ಟಲ ಪದಕಗಳು ಕಂಪನಿಯ ಒಡೆಯರಾದ ಶ್ರೀ ರಘುನಾಥಭಟ್ಟರಿಗೂ, ಇತರ ನಟರಿಗೂ ಕಡೂರಿನ ರಸಿಕರಿಂದ ಕೊಡಲ್ಪಟ್ಟವು.

ಮೈಸೂರ ಸರಕಾರದ ಗ್ಯಾಝೆಟ್

ಆರ್. ವಿ. ಪಟ್ಟಾಭಿರಾಮಯ್ಯನವರು ಪೆನಶನ್ ತೆಗೆದುಕೊಂಡದ್ದರಿಂದ, ಸಿ. ಯಸ್. ದೊರೆಸ್ವಾಮಿ ಅಯ್ಯರರು ಚೀಫ ಜಡ್ಜರಾಗಿಯೂ ಜ. ಶ್ರೀನಿವಾಸ ಅಯ್ಯರರು, ಶಿವಮೊಗ್ಗೆಯ ಜಿಲ್ಲಾ ಜಡ್ಜರಾಗಿಯೂ ನೇಮಿಸಲ್ಪಟ್ಟಿರುವರು.

ಮಹಾಪುರುಷರ ಚರಿತ್ರೆಗಳು.

("ಕೇಸರಿ"ಯ ತಾ॥ ೨೬-೫-೧೯[illegible] ನೆಯ ಸಂಚಿಕೆಯಲ್ಲಿ **ಲೋಕಮಾನ್ಯರು ಸ್ವತಃ ಬರೆದ ಲೇಖದ ಸಾರಾಂಶವು**)

ಪರಾಕ್ರಮ ಶಾಲಿಗಳಾದ ಪುರುಷರು ದೇಶದೊಳಗೆ ಬೇಕಾದಾಗ್ಗೆ ಉದಯಿಸುತ್ತಾರೆಂತಲ್ಲ. ಒಂದುವೇಳೆ ಉದಯಿಸಿದರೂ ಅವರಿಗೆ ಎಲ್ಲಮಾತಿನ ಅನುಕೂಲತೆಯುಂಟಾಗಿ ಅವರಿಂದ ದೊಡ್ಡ ಕಾರ್ಯಗಳಾಗುವದು ಸರ್ವಸ್ವೀ ಅವರ ಪ್ರಯತ್ನಾಧೀನವಿರುವದಿಲ್ಲ. ಹುಟ್ಟಿದಾಕ್ಷಣವೇ ಇಂಥವನು ಮಹಾಪುರುಷನಿರುವನೋ ಅಥವಾ ಆಗುವನೋ ಎಂದು ಹೇಳುವದು ಕಠಿಣವಾದದ್ದು. ಯಾವನಲ್ಲಿ ವಿಶಾಲಬುದ್ಧಿ ಅಸಾಧಾರಣಧೈರ್ಯ ಮುಂತಾದ ಗುಣಗಳು ಸ್ವಭಾವತಃ ಇರುವವೋ ಮತ್ತು ಮುಂದೆ ಆ ಗುಣಗಳು ಬಾಲ್ಯದಲ್ಲಿ ನಾಶವಾಗದೆ ವಿಕಾಸಹೊಂದಿ, ಅವನಿಗೆ ತನ್ನ ಸ್ವಂತ ಪ್ರಯತ್ನದಿಂದ ಅನ್ಯ ಸಂಗತಿಗಳ ಅನುಕೂಲತೆಗಳೂ ಒದಗಿ, ಅವನಿಂದ ದೊಡ್ಡ ದೊಡ್ಡ ಕಾರ್ಯಗಳು ಯಾವಾಗ್ಗೆ ಆಗುವವೋ ಆಗ್ಗೆ ಆ ಮನುಷ್ಯನು ದೊಡ್ಡವನೆಂದು ಪ್ರತ್ಯಯಕ್ಕೆ ಬರುವನು. ಮತ್ತು ಯಾವಮಾತಿನ ಅನುಕೂಲತೆಯು ಬಂದೊದಗುವದು, ಮನುಷ್ಯನ ಪ್ರಯತ್ನಾಧೀನವಿರುವದಿಲ್ಲವೋ ಆ ಮಾತುಗಳು ಈಶ್ವರ ಕೃಪೆಯಿಂದ, ಕಾಲಸತ್ತೆಯಿಂದ ಅಥವಾ ಈಗಿನ ಕಾಲದ ಕೆಲವು ಸುಶಿಕ್ಷಿತ ನಾಸ್ತಿಕ ಜನರ ಮತದಂತೆ ಅಜ್ಞೇಯಕಾರಣದಿಂದೊದಗಿಬರುವದೆನ್ನುವದು ರೂಢಿಯಾಗಿದೆ. ಸಾರಾಂಶ, ವಿಶಾಲ ಬುದ್ಧಿ ಅಥವಾ ಧೈರ್ಯಶಾಲಿಯಾದ ಪುರುಷನು ಹುಟ್ಟುವದು, ಮತ್ತು ಅವನಿಗೆ ಮನುಷ್ಯನ ಪ್ರಯತ್ನಾಧೀನವಿರದೇಯಿದ್ದ ಮಾತುಗಳ ಅನುಕೂಲತೆಯಾಗುವದು, ಈಶ್ವರ ಕೃಪೆಯ ಲಕ್ಷಣವಿದ್ದು, ಇಂಥಜನರು ಭಗವದ್ಗೀತೆಯಲ್ಲಿಯ ಸಿದ್ಧಾಂತದಂತೆ ಈಶ್ವರೀ ಅವತಾರದವರಲ್ಲವೆಂದೆನ್ನುವದು ಕಠಿಣವಾದದ್ದು. ಗಿಡದ ಎಲೆಗಳು ಈಶ್ವರನ ಕೃಪೆಯಿಂದ ಅಲೆದಾಡುವವೆಂದು ತಿಳಿದು, ಗಿಡಕ್ಕೆ ಈಶ್ವರನ ಅವತಾರವೆಂದೆನ್ನುವ ಸಿದ್ಧಾಂತವು ಸರಿಯಲ್ಲ. "ಜಗತ್ತಿನಲ್ಲಿ ನಮಗೆ ಯಾವ ಯಾವ ಕಾರ್ಯಗಳನ್ನು ಮಾಡಬೇಕಾಗಿರುವದೋ ಅಥವಾ ದೊಡ್ಡ ದೊಡ್ಡ ಜನರು ಯಾವ ಯಾವ ಕಾರ್ಯಗಳನ್ನು ಮಾಡುವರೋ, ಅವೆಲ್ಲ ಸ್ವಪ್ರಯತ್ನದಿಂದಲೇ ಸಾಧ್ಯವಾಗಲಾರವು ಆದ್ದರಿಂದಲೇ ಇಂಥ ದೊಡ್ಡ ಕಾರ್ಯಗಳು ಕೈಗೂಡಲು, ಈಶ್ವರನ ಕೃಪೆಯು ಅವಶ್ಯಕವೆಂ"ದು ಜನರು ಅನ್ನುತ್ತಿರುವರು. ನಾಕಷ್ಟು ಗೊಬ್ಬರವನ್ನು ಹಾಕಿದರೂ ಸಹ, ಗಿಡಕ್ಕೆ ಸ್ವಭಾವಸಿದ್ಧವಾದ ಮುಗುಳು, ಫಲ, ಪುಷ್ಪಗಳನ್ನು ಹೇರಳವಾಗಿ ತರಿಸುವದು ಹಲವುಸಲ ಅಶಕ್ಯವಾದಾಗ್ಯೂ, ಜನರು ಯಾವಪ್ರಕಾರ ಗಿಡಗಳನ್ನು ಹಚ್ಚುವದನ್ನೂ, ತೊಟಪಟ್ಟಿಗಳನ್ನು ಮಾಡುವದನ್ನೂ ಗೊಬ್ಬರ ಹಾಕುವದನ್ನೂ ಬಿಡುವದಿಲ್ಲವೋ, ಅದರಂತೆಯೇ ದೊಡ್ಡ ದೊಡ್ಡ ಜನರ ಜಯಂತ್ಯುತ್ಸವಗಳನ್ನು ಮಾಡುವದನ್ನು ನಾವಾದರೂ ಬಿಡಕೂಡದು. ತಮ್ಮ ಕೈಯಿಂದಾಗುವಷ್ಟು ಕೆಲಸವನ್ನು ಮಾಡಿ, ಆ ಮೇಲೆ ಈಶ್ವರೀ ಸಹಾಯದ ಅಪೇಕ್ಷೆಯನ್ನು ಮಾಡುವದು, ಪ್ರತಿಯೊಬ್ಬ ಮನುಷ್ಯನ ಕರ್ತವ್ಯವು. ಮತ್ತು ಉದ್ಯೋಗಶೀಲ ಮನುಷ್ಯನಿಗೆ ಈಶ್ವರನು ಸಹಾಯಮಾಡುವನೆಂಬ ಮಾತಿನ ಅರ್ಥವಾದರೂ ಇದೇ. ಈಶ್ವರೀ ಸಹಾಯದ ಅವಶ್ಯಕತೆ ಇದ್ದಾಗ್ಯೂ ಕೇವಲ ಅದರಿಂದೇ ಕೆಲಸವಾಗದೆ ಮನುಷ್ಯನ ಸ್ವಪ್ರಯತ್ನದ ನೆರವು ಬೇಕಾಗುವದು. ಈ ಪ್ರಕಾರ ನಾಕಷ್ಟು ಪ್ರಯತ್ನ ಮಾಡಿದ ಮೇಲೆ, ನಾವು ನಮ್ಮ ಕರ್ತವ್ಯದಿಂದ ಮುಕ್ತರಾಗುವೆವು. ಇದೇ ಉದ್ಯೋಗದ ನಿಜವಾದ ತತ್ವವು.

ಇನ್ನು, ಒಬ್ಬ ದೊಡ್ಡ ಮನುಷ್ಯನಲ್ಲಿ ಈಶ್ವರನ ಅಂಶವಿರುವದೆಂದು ಹೇಳಿದರೆ, ಉಳಿದ ಜನರ ಮನಸ್ಸಿನಲ್ಲಿ ಉದ್ಯೋಗಪ್ರವೃತ್ತಿಯು ಇಚ್ಛೆಯು ನಷ್ಟವಾಗುವದೆಂದೆನ್ನುವದು, ಅವಿಚಾರದ ಮತ್ತು ಆಕುಂಚಿತ ಬುದ್ಧಿಯ ಲಕ್ಷಣವು. "ಪ್ರತಿಯೊಂದು ರಾಷ್ಟ್ರದ ಅಭ್ಯುದಯಕ್ಕೆ ಈಶ್ವರೀ ಕೃಪೆಯು ಅವಶ್ಯಕತೆಯಿದೆ" ಎಂದು ಹೇಳುವದರ ನಿಜವಾದ ಅರ್ಥವೇನಂದರೆ:— ಮನುಷ್ಯನ ಸ್ವಪ್ರಯತ್ನದ ಜೋಡಾಗಿ, ಇತರ ಸಂಗತಿಗಳ ಅವಶ್ಯಕತೆಯಾದರೂ ಇರುವದು; ಆದರೆ ಇದರಿಂದ ಮನುಷ್ಯನು ಪ್ರಯತ್ನವನ್ನೇನೂ ಮಾಡಬಾರದೆಂಬರ್ಥವಲ್ಲ. ಉದಾಹರಣಾರ್ಥ:— ಉತ್ಕೃಷ್ಟಕವಿ ಅಥವಾ ಒಳ್ಳೇ ಚಿತ್ರಕಾರರು ಹುಟ್ಟುವದು ಮನುಷ್ಯನ ಪ್ರಯತ್ನಾಧೀನವಲ್ಲ. ಸಮಾಜಸ್ಥಿತಿ, ಕಾಲಗತಿ, ಅಥವಾ ಬೇರೆ ಕೆಲವು ಅಜ್ಞೇಯ ಸಂಗತಿಗಳೇ ದೊಡ್ಡ ಮನುಷ್ಯರ ನಿರ್ಮಾಣಕ್ಕೆ ಕಾರಣೀಭೂತವಾಗುತ್ತವೆ. ಆದರೆ ಕಾಲಗತಿಯನ್ನು ತಿರುಗಿಸುವದರಲ್ಲಿಯಾದರೂ, ಮನುಷ್ಯನ ಪ್ರಯತ್ನಗಳು ಸ್ವಲ್ಪ ಅಂಶದಿಂದಾದರೂ ಉಪಯೋಗಬೀಳುವವು. ಪ್ರಖ್ಯಾತ ಚಿತ್ರಗಾರರ ಚಿತ್ರಗಳನ್ನು ನೋಡಿ ಚಿತ್ರಕಲೆಯ ಹುಟ್ಟುಬುದ್ಧಿಯುಳ್ಳ ಮನುಷ್ಯನು ಜಾಗೃತನಾಗಿ ಒಳ್ಳೇ ಚಿತ್ರಕಾರನಾಗುವ ಸಂಭವವಿರುವದು. ಆದರೆ ಯಾವನಲ್ಲಿ ಇಂಥ ಹುಟ್ಟುಗುಣವಿರುವದಿಲ್ಲವೋ, ಅವನು ಉತ್ಕೃಷ್ಟ ಚಿತ್ರಗಳ ಸಂಗ್ರಹವನ್ನು ನೋಡಿದರೂ, ಕೇವಲ ಮನರಂಜನದ ಹೊರತಾಗಿ ಆ ಕಲೆಯಿಂದ ಅನ್ಯ ಉಪಯೋಗವೇನೂ ಅವನಿಗಾಗದು. ಸಾರಾಂಶ ಶ್ರೇಷ್ಠ ಚಿತ್ರಕಾರನು ಹುಟ್ಟುವದು ಪ್ರಯತ್ನಾಧೀನವಲ್ಲದಿದ್ದರೂ, ಒಳ್ಳೇ ಚಿತ್ರಗಳ ಸಂಗ್ರಹವನ್ನು ಮಾಡುವದು ನಮ್ಮ ಪ್ರಯತ್ನದಿಂದ ಸಾಧ್ಯವಾಗುವ ಮಾತು. ಇಷ್ಟೇ ಅಲ್ಲ ಸ್ವಭಾವತಃ ಚಿತ್ರಕಾರನ ಗುಣವುಳ್ಳ ಮನುಷ್ಯನ ಸಲುವಾಗಿ ಇಂಥ ಪ್ರಯತ್ನಸಾಧ್ಯವಿದ್ದ ಸಾಧನಗಳ ಸಂಗ್ರಹಗಳನ್ನು ಮಾಡುವದು ಅತ್ಯಾವಶ್ಯಕವು.

ಇದೇ ನ್ಯಾಯವನ್ನೇ ಪ್ರಕೃತದಲ್ಲಿ ಹಚ್ಚಬೇಕು. ರಾಷ್ಟ್ರದ ಅಭ್ಯುದಯವು ಆಗಬೇಕಾದರೆ ರಾಮದಾಸ ಮತ್ತು ಶಿವಾಜಿಯಂಥವರು ನಮ್ಮ ರಾಷ್ಟ್ರದಲ್ಲಿ ಹುಟ್ಟಬೇಕು. ಆದರೆ ಮುಂದೆ ಬರುವ ಶ್ರೇಷ್ಠ ಪುರುಷರು ಇವರು ಮಾಡಿದಂತಹ ಕಾರ್ಯಗಳನ್ನೇ ಮಾಡಬೇಕೆಂದಲ್ಲ. ಶಿವಾಜೀ ಮಹಾರಾಜರು ಅಫಝುಲಖಾನನ ಕೊಲೆ ಮಾಡಿದರು; ಅಥವಾ ಮಾಡಿಸಿದರು, ಎಂದು, ಮುಂದೆ ಆಗುವ ದೊಡ್ಡ ಪುರುಷರು, ಒಬ್ಬ ಹಿಂದು ಅಥವಾ ಮುಸಲ್ಮಾನನ ಕೊಲೆ ಮಾಡಲೇ ಬೇಕು, ಹೀಗೆನಲ್ಲ.

ರಾಷ್ಟ್ರದಲ್ಲಿ ಮಹಾ ಪುರುಷರು ಹುಟ್ಟುವದು ಈಶ್ವರೀ ಕೃಪೆಯಿಂ ಸರಿ. ಮತ್ತು ಇಂಥ ದೊಡ್ಡ ಜನರು ಹುಟ್ಟಿದರೆಂದರೆ, ಅವರು ಏನು ಮಾಡಬೇಕು ಎಂಬದನ್ನು ಹೇಳುವದಕ್ಕೆ ಸುಧಾರಕರ ಅಥವಾ ಕೇಸರಿಯ ಅವಶ್ಯಕತೆಯೂ ಇಲ್ಲ ತಾನು ತನ್ನ ಸುತ್ತಲಿನ ಪರಿಸ್ಥಿತಿಯನ್ನು ನಿರೀಕ್ಷಿಸಿ ತನ್ನ ಸಾಧನೆಗಳ ಯೋಗ್ಯ ಯೋಜನೆ ಮಾಡುವದೇ ಪುರುಷ ಶ್ರೇಷ್ಠನ ಲಕ್ಷಣವು. ಅವನ ಈ ಕೆಲಸಕ್ಕೆ ಅವನ ಪ್ರಯತ್ನ ಬಾಹ್ಯವಾದ ಅನ್ಯ ಸಂಗತಿಗಳ ಸಹಾಯವು ಸಿಕ್ಕು, ಯಶಸ್ಸು ಬಂದರೆ, ಅವನ ಮಹತ್ವವು ಲೋಕದ ನಿದರ್ಶನಕ್ಕೆ ಬರುವದು. ಜನ್ಮತಃ ಯಾವನೂ ದೊಡ್ಡ ಮನುಷ್ಯನಿರುವದು ಕಂಡು ಬರುವದಿಲ್ಲ. ಬಾಹ್ಯ ಸಾಧನೆಗಳ ಅನುಕೂಲತೆ ಸಿಗದ್ದರಿಂದ ಪ್ರಸಿದ್ಧಿಗೆ ಬರದ ಎಷ್ಟೋ ಪುರುಷ ಶ್ರೇಷ್ಠರು ತೊಟ್ಟಿಲದೊಳಗಾಗಲೀ, ಹುಟ್ಟಿ, ದೊಡ್ಡವರಾಗಿಯಾಗಲೀ, ಸತ್ತಿರಬಹುದು. ಆದ ಕಾರಣ ಈ ಮಾತಿನ ವಿಚಾರ ಮಾಡುವದು ಉಪಯೋಗದ್ದಲ್ಲ. ಯಾವ ಸಂಗತಿಯು ಈಶ್ವರನ ಕೃಪೆಯಿಂದ ಆಗತಕ್ಕದ್ದೋ, ಅದು ಈಶ್ವರ ಕೃಪೆಯಿಂದಲೇ ಆಗತಕ್ಕದ್ದು. ಆದರೆ ಮನುಷ್ಯನು ತನ್ನ ಉತ್ಕರ್ಷದ ಸಲುವಾಗಿ ಪ್ರಯತ್ನ ಮಾಡಲಾಗಿ ಅವನಿಗೆ ಈಶ್ವರನ ಸಹಾಯವು ಒಮ್ಮೆಯಾದರೂ ದೊರೆಯದೇ ಎಂದೂ ಹೋಗದೆನ್ನುವದು ಪ್ರಾಚೀನ ಇತಿಹಾಸದಿಂದ ಸ್ಪಷ್ಟವಾಗಿ ಕಂಡು ಬರುತ್ತದೆ. ಶ್ರೀ ಶಿವಾಜಿ ರಾಮದಾಸ ಮುಂತಾದ ಶ್ರೇಷ್ಠ ಪುರುಷರ ಉತ್ಸವ ಮಾಡಿ, ಅವರ ಕೃತಿಯ ಮತ್ತು ಉದ್ಯೋಗದ ಸ್ಮರಣೆಯನ್ನು ನಮ್ಮ ದೇಶ ಬಾಂಧವರಿಗೆ ಮಾಡಿಕೊಡುವದು ನಮ್ಮ ಪ್ರಯತ್ನಾಧೀನವಿದೆ. ಆದ್ದರಿಂದ ಕೃತಜ್ಞತೆಯ ಬುದ್ಧಿಯಿಂದಾಗಲೀ ದೇಶಹಿತದ ದೃಷ್ಟಿಯಿಂದಾಗಲೀ ಹೀಗೆ ಮಾಡುವದು ನಮ್ಮ ಆದ್ಯ ಕರ್ತವ್ಯವಿರುವದು.

ಶಿವಾಜಿಯ ಚರಿತ್ರೆಯನ್ನು ಪಠಣ ಮಾಡುವದರಿಂದ ಅಥವಾ ಶಿವಜಯಂತಿಯ ಉತ್ಸವವನ್ನು ಅನೇಕ ಬಗೆಯಾಗಿ ಮಾಡುವದರಿಂದ, ಓರ್ವ ಹುಂಬ ಕುರುಬನಾಗಲಿ, ವಿಶ್ವವಿದ್ಯಾಲಯದ ಪದವೀಧರನಾಗಲಿ ಶಿವಾಜಿ ಆಗಲಾರನು. ಆದರೆ ಯಾವ ಪ್ರಕಾರ ಅಲೆಕ್ಝಾಂಡರನ ಚರಿತ್ರೆಯು ಜ್ಯೂಲಿಯಸ್ ಸೀಝರನ ಪ್ರೋತ್ಸಾಹನಕ್ಕೆ ಕಾರಣೀಭೂತವಾಯಿತೋ ಅದರಂತೆ ಶ್ರೀ ಶಿವಾಜಿಯಂಥ ಪುರುಷ ಶ್ರೇಷ್ಠರ ಉತ್ಸವದಿಂದ ಮತ್ತು ಚರಿತ್ರದಿಂದ ಕಾಲಾಂತರದಲ್ಲಿ ಯಾವ ಪುರುಷನಲ್ಲಿ ನೈಸರ್ಗಿಕ ಬುದ್ಧಿ ಅಥವಾ ತೇಜಸ್ಸು ಇರುವದೋ, ಅವನಿಗೆ ಸಹಜವಾಗಿ ಸ್ಫೂರ್ತಿಯು ಬರುವದು. ಆದುದರಿಂದ ಪುರುಷ ಶ್ರೇಷ್ಠರ ಚರಿತ್ರಗಳೂ ಜಯಂತಿಗಳೂ ಇದರ ಸಲುವಾಗಿಯೇ ಆಚರಿಸಲ್ಪಡಬೇಕು.

—ಸವಣೂರ ಶ್ರೀನಿವಾಸರಾಯರು.

ಬಿ. ಎ. ಬಿ. ಟಿ.

ಕರ್ನಾಟಕ ಏಕೀಕರಣವೂ. ಲೋಕಮಾನ್ಯರೂ.

(ಲೋಕಮಾನ್ಯರ "ಆಠವಣಿ ಆಣಿ ಆಖ್ಯಾಯಿಕಾ" ಈ ಗ್ರಂಥದಿಂದ ಎತ್ತಿ ಬರೆದಿದ್ದು.)

ಭಾಷಾವಾರ ಪ್ರಾಂತರಚನೆಗೆ, ಭಾವೀಸ್ವರಾಜ್ಯ ವ್ಯವಸ್ಥೆಯಲ್ಲಿ, ವಿಶೇಷ ಮಹತ್ವದೊರೆಯಬೇಕೆಂದು ಪ್ರಯತ್ನ ಮಾಡುವ ವ್ಯಕ್ತಿಗಳಲ್ಲಿ ಲೋಕಮಾನ್ಯರಿಗೆ ಅಗ್ರಸ್ಥಾನವನ್ನು ಕೊಡಬೇಕಾಗುವದು. ಜೋಸೆಫ ಬಪ್ಟಿಸ್ಟಾ ಇವರ ಅಧ್ಯಕ್ಷತೆಯ ಕೆಳಗೆ ಪುಣೆಯೊಳಗೆ ಸೇರಿದ ಮುಂಬೈಪ್ರಾಂತಿಕ ಪರಿಷತ್ತಿನಲ್ಲಿ ಲೋಕಮಾನ್ಯರು ತಂದ ಕ್ಕೆ. ನಾ ಗೋಖಲೆಯವರಬಗ್ಗೆ ದುಃಖಪ್ರದರ್ಶಕ ಠರಾವಿಗೆ ಅನುಮೋದನ ಕೊಡುವದಕ್ಕೆ ನಾನು ನಿಲ್ಲಲು, "ಕರ್ನಾಟಕ ಭಾಷೆಯ ಹಕ್ಕು ಪ್ರಸ್ಥಾಪಿತ ಮಾಡುವದಕ್ಕೆ ನೀವು ಕನ್ನಡದಲ್ಲಿಯೇ ಭಾಷಣ ಮಾಡಿರಿ" ಎಂದು ಲೋಕಮಾನ್ಯರು ನನಗೆ ಅಪ್ಪಣೆ ಕೊಟ್ಟರು. ಆ ಪ್ರಕಾರ ನಾನು ಆಗ್ಗೆ ಕನ್ನಡದಲ್ಲಿಯೇ ಭಾಷಣವನ್ನು ಮಾಡಿದೆನು. ಪರಿಷತ್ತಿನ ತರುವಾಯ ಕೆಲವು ದಿವಸದ ಮೇಲೆ ನಾನು ಲೋಕಮಾನ್ಯರಿಗೆ "ತಮ್ಮ ಉಪದೇಶದ ಫಲದಿಂದ ಕರ್ನಾಟಕವು ಮಹಾರಾಷ್ಟ್ರದಿಂದ ವಿಭಕ್ತವಾಗುವದೆಂದಂದೆನು. ಆಗ್ಗೆ ಅವರು ಗಂಭೀರತೆಯಿಂದಂದದ್ದು:— ನಿಜವಾಗಿ ನೋಡಿದರೆ ನಿಮ್ಮ ಚಳವಳಿಯನ್ನು ನೀವು ಸ್ವತಂತ್ರವಾಗಿ ಮಾಡುವದಕ್ಕೆ ಕಲಿಯಬೇಕು. ಈ ಮೊದಲನೇ ಪಾಠವನ್ನು ತೀಡದ ಹೊರತು ಸ್ವರಾಜ್ಯಕ್ಕೆ ನೀವು ಹೇಗೆ ಪಾತ್ರರಾಗುವಿರಿ?" ಎಂದು ಹೇಳಿದರು. ಈ ಉಪದೇಶಕ್ಕನುಸರಿಸಿ, ಕರ್ನಾಟಕ್ಕೆ ಸ್ವರಾಜ್ಯಸಂಘದ ಸ್ವತಂತ್ರಶಾಖೆಯನ್ನು ಬೇಡಲು, ಅವರು ಅದನ್ನು ಸಂತೋಷದಿಂದಿತ್ತರು. ಬಳಿಕ ಕರ್ನಾಟಕ ಪ್ರಾಂತಿಕ ಪರಿಷತ್ತನ್ನು ಸ್ವತಂತ್ರವಾಗಿ ಕೂಡಿಸುವ ನಮ್ಮ ಕಲ್ಪನೆಗೆ ಅವರು ಸಂಪೂರ್ಣ ಅನುಮತಿಯನ್ನು ಕೊಟ್ಟರು. ಇದರಿಂದ ಲೋಕಮಾನ್ಯರ ಉದಾತ್ತವಿಚಾರವೂ, ಮಹಾರಾಷ್ಟ್ರಕ್ಕಿಂತಲೂ ವಿಶಾಲವಾದ, ಮತ್ತು ಭವಿಷ್ಯತ್ಕಾಲದಲ್ಲಿ ಬಹುದೂರದವರೆಗೆ ಪ್ರವೇಶಮಾಡುವ ಅವರ ದೃಷ್ಟಿಯೂ, ಕ್ಷುದ್ರಬುದ್ಧಿಯಿಂದ ದೂಷಿತವಾಗದಿದ್ದ ಅವರ ನಿರ್ಮಲ ಮನಸ್ಸೂ ಸಹಜವಾಗಿ ವ್ಯಕ್ತವಾಗುವವು. ಲೋಕಮಾನ್ಯರು ಮಹಾರಾಷ್ಟ್ರದಲ್ಲಿಯೇ ವಿಶೇಷಕಾರ್ಯವನ್ನು ಮಾಡಿದರೆಂದು ಬಾಹ್ಯತಃ ಕಂಡು ಬಂದರೂ, ಅದು ನಿಜವಾದ ರಾಷ್ಟ್ರೀಯತ್ವದ ಪೋಷಕವಾಗಿತ್ತು. ಆಲೂರ ವೆಂಕಟರಾಯರು,

(ವೈ ವಾ. ಜ.)

ನನಗೆ ಹೊಳೆದಂತೆ.

ಟಿಳಕರು ಪುಣೆಯಲ್ಲಿ ಖಾಸಗೀ ಶಾಲೆಯನ್ನು ತೆಗೆದು, ಎಲ್ಲರಿಗೂ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರು. ಸರಕಾರದ 'ಗ್ರ್ಯಾಂಟ'ನ್ನು ಅವರ ಕಟ್ಟಳೆಗಳಿಗೆ ಒಳಪಟ್ಟು ಸ್ವೀಕರಿಸದೊಂದು ಅವರು ತಾತ್ವಿಕರೀತಿಯಿಂದ ವಿಚಾರಿಸಿ, ತಮ್ಮ ಮಾತು ನಡೆಯದ್ದರಿಂದ ಆ ಶಾಲೆಯ ಸಂಬಂಧವನ್ನು ಸಹ ಬಿಟ್ಟುಕೊಟ್ಟರು! ಆದರೆ 'ಗ್ರ್ಯಾಂಟ' 'ಗ್ರ್ಯಾಂಟ' ಎಂಬದಾಗಿ ಬಾಯಿಬಿಡುತ್ತ 'ಗ್ರ್ಯಾಂಟ'ನ ಮೇಲೆಯೇ ಅವಲಂಬಿಸಿ, ಗ್ರ್ಯಾಂಟಿಗಾಗಿ ಅಧಿಕಾರಿಗಳಿಗೆ ಬೆಣ್ಣೆ ಹಚ್ಚುತ್ತ, ಸರಕಾರಕ್ಕೆ ಬೊಗ್ಗಿ ಬೊಗ್ಗಿ ಸಲಾಮು ಹಾಕುವ ಈಗಿನ ಶಿಕ್ಷಣ ಸಂಸ್ಥೆಗಳಿಗೇನೆನ್ನಬೇಕು.

ಕರ್ನಾಟಕ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡಿಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟ-ಜಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ಸಾಕ್ಷಾತ್ ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಸಹಿಬಿಸಿಯುಳಿಯುವದಿಲ್ಲ ಸುರಿತಪರರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ !

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.

೪೯೫ ಶನಿವಾರ ಪೇಠ ಜನುಬಂಡಿಕರ ವಾಡ ಪುಣೆ ಶಹರ.

ಭಯಂಕರ ಗರ್ಮಿ.

ಪರಮೆ, ರಕ್ತವಿಕಾರ, ಕುಷ್ಟ, ಮಹಾರೋಗ, ಧಾತುವಿಕಾರ ಸರ್ವಾಂಗಕಷ್ಟಗಳಮೇಲೆ ಖಂಡಿತವಾಗಿ ಗುಣಕೊಡುವ ದಿವ್ಯ ಔಷಧಿ ಬೆಲೆ ರೂ. ೫ ಪ್ರಕೃತಿಮಾನತಿಳುಹಿಸಿ ಔಷಧಿ ಪಡೆಯಬೇಕು

ವೈದ್ಯ- ವಾದಿರಾಜ ಜಹಾಗೀರದಾರ ಇಲಕಲ್ಲ. (ವಿಜಾಪೂರ)

WANTED.

Wanted Candidates for training in Telegraphy and Station Master's Courses. Railfare Granted. Suitable Boarding and Lodging arrangements. Prospectus on two anna Stamp.—Presidency Telegraph College, Royapettaph P. O., Madras.

ಸಹಕಾರಿ ಸಂಘ

ಈ ಸಹಕಾರ ಸಂಘಗಳಿಗೆ ಬೇಕಾಗುವ ನಮೂನೆಗಳನ್ನು ಅಚ್ಚುಹಾಕಿಸಿ ನಮ್ಮ ಪಾಂಲಿಕ್ಕೆ ಇಟ್ಟಿರುವೆವು. ಖಾವತಿ ಮೆಂಬರನಾಗಲಿಕ್ಕೆ ಮಾಡುವ ಅರ್ಜಿ ಸಾಲ ಬೇಡುವ ಅರ್ಜಿ ಮುದ್ದತ ಬೇಡುವ ಅರ್ಜಿ ಮೊದಲಾದ ಎಲ್ಲ ನಮೂನೆಗಳೂ ಇವೆ

ವ್ಯವಸ್ಥಾಪಕ, ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಇಹವೃತ್ತ.

ಇಲ್ಲಿಯ ಬಸವೇಶ್ವರ ಹೈಸ್ಕೂಲಿನಲ್ಲಿ ಶಿಕ್ಷಕರ ಬದಲಾವಣೆ ಹೆಚ್ಚಾಗಿ ಆಗಿದೆ. ಹಳಬರನೇಕರು ಹೋಗಿದ್ದು, ಹೊಸಬರು ಬರುತ್ತಲಿದ್ದಾರೆ. ಹೆಡ್‌ಮಾಸ್ತರರ ಸ್ಥಾನದಲ್ಲಿ ಪದವೀಧರರಲ್ಲದ ಓರ್ವ ಶಿಕ್ಷಕರ ತಾತ್ಪೂರ್ತಿಕ ನಿಯೋಜನೆಯಾಗಿದೆ. ಈ ಕಾರಣಗಳಿಗಾಗಿ ವಿದ್ಯಾರ್ಥಿಗಳು ಪರಸ್ಥಳಕ್ಕೆ ಹೋಗಿರುವರೆಂದು ತಿಳಿಯುತ್ತದೆ. ಕೆಲ ವಿದ್ಯಾರ್ಥಿಗಳಿಗೆ "ಹಿಂಬಡತಿ" ಯಾಗಿದೆಯಂತೆ. ಇದು ಸುವ್ಯವಸ್ಥೆಯ ಲಕ್ಷಣವೇ?

ರ್ವೈ. ವಾಸುದೇವಾಚಾರ್ಯರ ಭಾವಪಟದ ಅನಾವರಣೆಯು ಪೂರ್ಣ ಸಿದ್ಧತೆಯಲ್ಲಿ ನಡೆಗಿದ್ದು, ಇದಿನ ಸಾಯಂಕಾಲದ ೫ ಗಂಟೆಗೆ ಸಮಾರಂಭವು ಪ್ರಾರಂಭವಾಗುವದು.

ನಿರ್ಮಾಣ ಕರ್ನಾಟಕ

ಶಿಕ್ಷಣ ಖಾತೆಯು ಡೆಪ್ಯುಟೀ ಡಾಯರೆಕ್ಟರರ ಮೇಲೆ, ಗೋಷ್ಟಿಗೆ ಹಿಂದೂ ಮುಸಲ್ಮಾನರ ಮುಂದಾಳುಗಳು ಮಾಡಿದ ಘೋಷಣೆಯ ಪ್ರಾಮಾಣಿಕ ಸೊಗಸೊಮ್ಮೆ, ಗುಬ್ಬಿಗೆಯು ಜಿಲ್ಲಾ ಕೊರ್ಟನಲ್ಲಿ ನಡೆದ ಹೈದರಾಬಾದಿನ ಹಾಯಕೋರ್ಟಿನಲ್ಲಿ ನಡೆಯಬೇಕಾಗಿದ್ದ ಹಾಯಕೋರ್ಟಿನವರು ನಿರ್ಧರಿಸಿದರು.

ಗುಣ ಬರದಿದ್ದರೆ ಹಣ ಪರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ಥ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತುದೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿ ಮಾಂಧ್ಯ ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು.) ಇದರಿಂದ ಮೈಯ್ಯುರಿ ವ ಗರಮಿಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦, ಟಪಾಲು ಖರ್ಚ ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ:—

ಎಸ್ ಬಿ. ಕವಟ್ ಮತ್ತು ಸನ್ಸ್.

ಮು. ಪೋಷ್ಟ ನಿಪ್ಪಾಣಿ (ಜಿ ಬೆಳಗಾಂವ.)

S.U.N.&CO. BENARES CITY.

ಬನಾರಸ್ ರೇಶ್ಮೀ ಶೀರೆಗಳು.

ನಮ್ಮಲ್ಲಿ ಉತ್ತಮೋತ್ತಮ ಎಲ್ಲಾ ವಿಧವಾದ ರೇಶ್ಮೀ ಮಾಲುಗಳನ್ನು ಕೋರುವವರಿಗೆ ವ್ಹಿ. ಪಿ. ಮೂಲಕ ಕಳುಹಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕ ಉದ್ದ ನೊ ೧೪ ಅಗಲಿ ಮೊಳ ೩, ಥಾನು ೧ಕ್ಕೆ ೧೫ ರಿಂದ ೫೦ ಜರಿ ಶೀರೆಗಳು ೧೬-೧೮ ಮೊಳ ಉದ್ದ ೧ಕ್ಕೆ ರೂ. ೨೫ ರಿಂದ ೫೦ ರವರೆಗೆ. ಬುಟ್ಟೆದಾರ್ ಬನಾರಸ್ ಶೀರೆ ೧೬-೧೮ ಉದ್ದ ಮೊಳ ೭ ೧ಕ್ಕೆ ರೂ. ೫ ರಿಂದ ೩೦೦ ರ ವರೆಗೆ ಉಡುವ ಮುಗುಟ ಉದ್ದ ೬ ೮ ಮೊಳ ೧ಕ್ಕೆ ರೂ ೧೦ ರಿಂದ ೩೦ ರ ವರೆಗೆ ಖರೀದ್ದು ೬ ೮ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೪೦ ರ ವರೆಗೆ ಬಿಳಿ ರೇಶ್ಮೆ ಜರಿ ದ ಪಟ್ಟೆ ೬ ಮೊಳ ಉದ್ದ ೧ಕ್ಕೆ ರೂ ೧೭ ರಿಂದ ೩೦ ರವರೆಗೆ ಸಾದಾ ಬಂಗಾಳ ರೇಶ್ಮೆ ಶಾಲು ೬ ಮೊಳ ಉದ್ದ ೩ ಮೊಳ ಅಗಲು ೧ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಪಟಿಕದ ೧೦೮ ರ ಸರ ೧ಕ್ಕೆ ರೂ. ೧ ರಿಂದ ೧೦ ರ ವರೆಗೆ ಸುದರ್ಶನ ೧ಕ್ಕೆ ಆಣೆ ೮ ರಿಂದ ರೂಪಾಯಿ 1½ ರವರೆಗೆ ಜಗನ್ನಾಥ ಭಾಗಂಟಿ ೧ಕ್ಕೆ ರೂ. 2½ ರಿಂದ 15 ರ ವರೆಗೆ ಮತ್ತು ಬೇರೆ ಬೇಕಾದವಸ್ತುಗಳ ಕಳುಹಲಾಗುವದು.

ವಿಳಾಸ- ಶಿರೋವ. ಣೆ ನಾರಾಯಣ. ಬಾಲಾಜಿ.

ಕಂಪನಿ ಚೌಕಂಬಾ ಕಾಶಿ ಬನಾರಸ್.

ಕನ್ನಡ ಉಪನಿಷತ್—ಪ್ರಕಾಶ.

ಭಾಗ ೧ (೨ನೇ ಆವೃತ್ತಿ):— ಈಶ, ಕೇನ, ಕಠ, ಮಾಂಡೂಕ್ಯ, ಪ್ರಶ್ನ ಇವುಗಳ ಮೂಲಮಂತ್ರ (ಕನ್ನಡ ಲಿಪಿಯಲ್ಲಿ ಅಥವಾ ಸಂಸ್ಕೃತದಲ್ಲಿ) ಸರಳ ಕನ್ನಡ ಅರ್ಥ, ಪೂರ್ಣ ಸಾರಾಂಶ ನಾಲ್ಕು ನುಡಿಗಳು. ೬೪ ಪುಟದ ಪ್ರಸ್ತಾವನೆ ಸಹಿತ ೧ ರೂ ವ್ಹಿ. ಪಿ. ಯಿಂದ ೧-೪-೦. ಯಾವ ಲಿಪಿಯಲ್ಲಿ ಬೇಕು ಬರೆಯಬೇಕು.

ಭಾಗ ೨:— ತೀರ ಕಠಿಣ ಪ್ರತಿಗಳಿರುವವು ಐತರೇಯ ತೈತ್ತಿರೀಯ ಮುಂಡಕ. ಮೊದಲನೇ ಭಾಗದಂತೆ. ಆದರೆ ಮೂಲ ಸಂಸ್ಕೃತದಲ್ಲಿ ಮಾತ್ರ ಪ್ರಸ್ತಾವನೆ ಸಹಿತ ೧೨ ಆಣೆ. ವ್ಹಿ. ಪಿ. ಯಿಂದ ೧ ರೂ. ಎರಡೂ ಭಾಗ ಒಮ್ಮೆಲೆ ವ್ಹಿ. ಪಿ. ಯಿಂದ ೧—೧೨—೦.

ವಿಳಾಸ:—ರಂಗನಾಥ ದಿವಾಕರ ಧಾರವಾಡ.

WANTED.

Wanted Candidates. Two attractive Circulars--THE WAY--TO BIG PAY-on 2 annas stamp. One Session in 1927. Duration four months. Expert training by Professor with Metropolitan experience. Fare Paid SECRETARIAL CLASS, 51, Peters Road, Royapettah, Madras.

ಅತೀ ಸುಲಭ ಕಂತುಗಳು! **ಫಲಿತಾಂಶವು ಹೆಚ್ಚು!**

ದಿ. ಹಿಂದುಸ್ಥಾನ ಕೋಆಪರೇಟಿವ್ಹ

ಇನ್ಸುರೆನ್ಸ ಸೊಸೈಟಿ ಲಿಮಿಟೆಡ್.

(ಬ್ರಾಂಚ್:- ಮುಂಬಯಿ) (ಹೆಡ್ ಆಫೀಸು:- ಕಲ್ಕತ್ತಾ)

ಈ ಕಂಪನಿಯು ಇಡೀ ಹಿಂದುಸ್ಥಾನದಲ್ಲೆಲ್ಲಾ ಪ್ರಾಮುಖ್ಯತೆಗೆ ಬಂದ ಸ್ವದೇಶಿ ಕಂಪನಿಗಳಲ್ಲಿ ಒಂದಾಗಿದೆ ಜನರ ಸೌಕರ್ಯಕ್ಕಾಗಿ ಈ ವಿಜಾಪೂರ ಜಿಲ್ಹೆಯೊಳಗೆ ಇದರ ಒಂದು ಶಾಖೆಯನ್ನಿಟ್ಟಿರುವರು. ಕಂತುಗಳು ಅತೀ ಸುಲಭ ವಿದ್ದು, ಧಾರಾಳವಾಗಿ ಈ ಕಂಪನಿಯಲ್ಲಿ ನಿಮ್ಮ ಜೀವ ವಿಮೆಯನ್ನು ಇಳಿಸಬಹುದು.

ಇದರ ಮೂಲಧನವು ೫೦,೦೦೦,೦೦೦ ವಿರುವದೆ. ೧೯೨೫-೨೬ ನೇ ವರ್ಷದಲ್ಲಿ ಸಾಸರಿ ವರ್ಷಕ್ಕೆ ೧೦೦೦ ರೂ. ವಿಮೆಗ ರೂ. ೧೫ ರೂ. ದ ತೆ ಫಲಿತಾಂಶ ಕೊಟ್ಟಿರುವೆವು.

ಎಲ್ಲಾ ಕಡೆಯಲ್ಲಿ ಏಜಂಟರು ಬೇಕಿದ್ದಾರೆ.

ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿದಲ್ಲಿ ಹೆಚ್ಚಿನ ಮಾಹಿತಿ ತಕ್ಕೊಳ್ಳಬಹುದು.

ವಿಳಾಸ:-

ವಿಜಾಪೂರ. ೨೪—೭—೨೭ } ಜಿ ಆರ್. ಪಕ್ಕನಳ್ಳಿ ಅಂಡ ಬ್ರದರ್ಸ.

ಚೀಫ ಏಜಂಟ್ಸ,

ವಿಜಾಪೂರ ಜಿಲ್ಹಾ.

ಶ್ರೀ ಭಾರತ ಜಗತ್ಪ್ರಸಿದ್ಧ ಜಗ ಜಾಹೀರ ನೋಟೀಸು.

ಮೃತ್ಯುಂಜಯ ಔಷಧದಿಂದ ಮೂರೇ ತಾಸಿನಲ್ಲಿ ಗುಣವಿಲ್ಲೆಂದು ಸಿದ್ಧ ಮಾಡಿದವರಿಗೆ-೫೦೦ ರೂ. ಬಕ್ಷೀಸ ಕೊಡುವೆವು.

ಮೂರೇ ತಾಸಿನಲ್ಲಿ ಗುಣ] ಶಕ್ತಿಯುಕ್ತ ರಸಾಯನ ತಕ್ಕೊಂಡು ಸಾಯುವದೇಕೆ? **[ಮೂರೇ ದಿವಸಗಳಲ್ಲಿ ರೋಗವು ಪೂರ್ಣ ಹೋಗುವದು.**

ಶುದ್ಧ ವನಸ್ಪತಿಯಿಂದ ತಯಾರು ಮಾಡಿದ ಮೃತ್ಯುಂಜಯ ಔಷಧ.

ಉಪದಂಶ, ಗರ್ಮಿ (ಉಷ್ಣ) ಪರಮಿ ಮುಂತಾದ ಏಳು ಪ್ರಕಾರದ ರೋಗ ಬಹುದಿನ ನೆಲಗೊಂಡದ್ದು ಶರೀರ ಕತ್ತರಿಸಿ ಬಿದ್ದರೂ ಮೂರು ದಿವಸಗಳಲ್ಲಿ ಗುಣವಾಗುವದು.

ಇಂಥ ಪ್ರಕಾರ ರೋಗಗಳಿಂದ ಉತ್ಪನ್ನವಾಗುವ ವಿಕಾರ ಉಷ್ಣ ಪರಮಿ (ಉಪದಂಶ) ಗರ್ಮಿ ಚಟ್ಟಿ ಒದದ ಗಂಟು, ನಡಿನಲ್ಲಿಯ ಗಂಟು, (ವೃಡುಬು) ಅತಿಶಯ ಬಾವು, ಇಂದ್ರಿಯವು ಗೆ ತಿಡಿಕೆ, ಹೊಡತು, ರಕ್ತ ಕೀವು ಸುರಿಯೋಣ ಆದರಂತೆ ಸ್ತ್ರೀಯರ ಪ್ರದರ (ಕೆಂಪು ಬಿಳಿ ಶೆರಗು) ಹೊಲೆ ಕುಟ್ಟರೋಗ ಬೆಳೆಯೋಣ, ಕಟಕಿ ವಿಕಾರಗಳಿಂದ ಗರ್ಭಾಶಯ ಕೆಡೋಣ, ಮೂತ್ರ ಕಣ್ಣು ಕಾಲು ಉರಿಯೋಣ, ಕಾವು ಹೆಚ್ಚಾಗಿ ಮಧುಮೇಹ ಮೈಮೇಲೆ ಗರ್ಮಿ (ಉಷ್ಣ) ಒಡೆದು ಕೀವು ಹೊರಬಿದ್ದು ಆದರಿಂದ ವ್ರಣ (ಘಾಯ) ವಾಗಿ ಅಂಗಳಕ್ಕೆ ತೂತು ಬಿದ್ದು ಮೂಗು ಕೂಡ್ರುವದೂ ಸೋರುವದೂ ಎಲ್ಲ ತರದ ಮೂಲವ್ಯಾಧಿ, ಹೊಟ್ಟೆ ಕಡತು ವಗೈರೆ ಕಾರಣಗಳಿಂದಾ ಜನನೇಂದ್ರಿಯ ಶಿಥಿಲತಾ ಅಥವಾ ನಪುಂಸಕತ್ವ ಮುಷ್ಟಿಮೈಥುನದಿಂದ ಆಗುವ ಪರಿಣಾಮ, ಸ್ವಪ್ನಾವಸ ಮೂತ್ರದಲ್ಲಿ ಧಾತು ಅಥವಾ ಖರ ಬೀಳೋಣ, ವೀರ್ಯ ತಿಳುವಾಗೋಣ, ಸ್ತ್ರೀಗಮನದಲ್ಲಿ ತೇಕು ಹತ್ತೋಣ. ತೀವ್ರ ವೀರ್ಯ ಪತನವಾಗೋಣ, ನಡಸೋವು (ಶೂಲಿ) ಸೋಯೋಣ, ಬೆನ್ನು ಬಿಗಿಯೋಣ, ವಾತವಿಕಾರ. ಅವಿಚ್ಯಾರದಿಂದ ಮಾಡಿದ ವೀರ್ಯಪಾತ ವಗೈರೆ ರೋಗಗಳ ಮೇಲೆ ಅಶಿಕ್ಷಿತ ಅಡಾಣೀ ಜನರ ಕಡಿಯಿಂದ ಪಾರಜ ಮತ್ತು ರಸಕರ್ಪೂರ, ಇಂಗಳೀಕ ಮುಂತಾದ ಸವಿಷ ಮತ್ತು ಅಪಕ್ವ ಧಾತು ರೂಪ ಪದಾರ್ಥ (ರಸಾಯನ) ಮತ್ತು ಅಪಕಾರಕ ವಸ್ತು ಸೇವಿಸುವದರಿಂದ ಮೈಯೊಳಗೆ ರಸಾಯನ ನಿಂತು ಆದರಿಂದ ಕಾಲು ಕೆ ಮುಡಪಾಗಿ ಮತ್ತು ಕೈ ಕಾಲುಗಳಲ್ಲಿ ರಸಾಯನ ಒಡದು ಸ್ವತಃ (ತನಗೆ) ಮತ್ತು ಮುಂದಾಗುವ ತನ್ನ ಸಂತತಿಗೆ ಅನೇಕ ರೋಗವು ಉತ್ಪನ್ನವಾಗಿ ಆದರಿಂದ ಭಯಂಕರ ಪರಿಣಾಮ ಭೋಗಿಸಬೇಕಾಗುವದು. ಇಂಥ ಪ್ರಕಾರದ ರೋಗಗಳು ಬಹಳ ದಿವಸ ನೆಲಗೊಂಡಿದ್ದಾಗಲೀ ಅಥವಾ ಹೊಸವಾಗಿ ಆದುದ್ದಾಗಲೀ ಇಂಥ ರೋಗಗಳ ಮೇಲೆ ಈ ನಮ್ಮ ಮೃತ್ಯುಂಜಯ ಔಷಧ ಉಪಯೋಗ ಮಾಡಿದರೆ ತತ್ ಸಂಬಂಧಿ ಸಂಪೂರ್ಣ ರೋಗಗಳು ತೀವ್ರವಾಗಿ ಹೋಗಿ ಮೈಯೊಳಗೆ ಇದ್ದ ರಸಾಯನವು ನಾಶವಾಗುವದು. ಮತ್ತು ಅಶಕ್ತಿ ಹೋಗಿ ಮೈಯೊಳಗೆ ಶಕ್ತಿ ಬಂದು ಪ್ರಕೃತಿ ಉತ್ತಮವಾಗುತ್ತದೆ ಒಂದು ಬಾಟ್ಲಿಗೆ [೫] ರೂಪಾಯಿ ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆಯು ಔಷಧದ ಸಂಗಡ- ಲಾಭಕ್ಕೆ ಲಾಭವು. ಒಂದು ಆಣೆ ಟಿಕೀಟು ಕಳಿಸಿದಲ್ಲಿ ನಮ್ಮ ಔಷಧದ ಪೂರ್ಣ ಕ್ಯಾಟಲಾಕ ಕಳಿಸುವೆವು. (ತಮ್ಮ ಪತ್ತೆ:- ಪೂರ್ಣ ಬರೆಯಿರಿ)

ಸುಪ್ರಸಿದ್ಧ ಡಾ|| ಆರ್. ಎಲ್. ಹಿರೇಮಠ ಆರೋಗ್ಯ ಮಂದಿರ ಆಯುರ್ವ ವನೌಷಧಿ ೫೦೦೦, ಸಾವಿರ ಕಾರಖಾನೆ. ಕಮತನೂರ ಪೋ|| ಶಂಕೇಶ್ವರ ಜಿ|| ಬೆಳಗಾಂವ.

ಲವರಿನ ಗಡಿಯಾರಗಳು.

ಲೆವರಿನ ಕೈ ಗಡಿಯಾರ ರೂ. ೯.

ಲೆವರಿನ ಕಿಸೆಯೊಳಗಿಡುವ ಗಡಿಯಾರ ರೂ. ೬.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ಬಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಆದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಟಿಬೋ ವಾಚ ಕಂ. (ಇಂಡಿಯಾ.) ಬಾಂಬೆ ೪

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವರಿಗೆ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ

ಏಜಂಟರು:— ಜಂಬುಲಿಂಗಪ್ಪಾ ಜಾಲವಾದಿ ಸ್ಟೇಶನರ್ಸ ಬಾಗಲಕೋಟೆ

ರಾಜವೈದ್ಯ ನಾರಾಯಣಜಿ ಕೇಶವಜಿ

೫೬. ಚೀನಾಬಜಾರ್. ಮದ್ರಾಸು





ಉಚಿತ!　　ಉಚಿತ!!!　　ಕೇವಲ ಪುಗಸಟ್ಟೆ!!

೧೯೨೭ನೇ ಜನವರಿ ೧೫ರಿಂದ ಪ್ರಾರಂಭ.

ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ-

೧ ನೀವು ನಮಗೆ ರೂ ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್‌ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪುವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ ಗೋಲ್ಡ" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ಬಿಕರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು. ಅಥವಾ ವಿ. ಪಿ ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಳೆದುಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಅಸೂಯೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೬-೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್. **ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ,** ಬೆಂಗಳೂರ ಸಿಟಿ.

ಯಾವದೇ {ಆಕಾರದ / ನಕ್ಷೆಯ / ಸಂಬರಿನ} ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ ೧೪. ಅರ್ಧ ಬೆಲೆ ರೂ. ೭



ಬರೇ ... ತಿಂಗಳ ... ನಾವು ಈ ... ವನ್ನು **ಈ ವರ್ಷ**ದಲ್ಲಿ ಮಾತ್ರ ಕೊಡುತ್ತೇವೆ ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವವನ್ನಿಗೆ ಯೋಗ್ಯ ಹಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಕರತ್ತದೆ ಯಾವದೇ ಆಕಾರದ, ನಕ್ಷೆಯ, ಸಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ **ಬೆಲೆ ರೂ. ೭**

ಅಪ್ಪವೇ ... ವೆ; ಈಗಲೇ ಬರೆಯಿರಿ

ಪತ್ರ:— ಸ್ಟ್ಯಾನ ಹೌಸ ಪಿ. ಬಿ ೫೦೮. ಪಿ. ಟಿ ಮದ್ರಾಸ

ಅತ್ಯಲ್ಪವಿವೆ!　　ಉಚಿತ!

ಕೇವಲ ಉಚಿತ　　ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೋಕೆಟ್ ವಾಚ್ ೧೪ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು **ಈ** ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ್ ೧೪ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ. ಪಿ, ಬಿ. ಮದ್ರಾಸ. ೨೬೫

ಕಿರ್ಲೋಸ್ಕರ

ಕಬ್ಬಿಣ ನೇಗಿಲಗಳು

ಸಂಗ್ರಾಮ (ಸುಗ್ಗಿ) ಸಮಾಪಿಸಿತು. ಈ ವರ್ಷ ಮಳೆ ಬೇಗ ಬನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್ } ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ: ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಒಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೭೬೬ ಸಯ್ಯದ ಅಲ್ಲಿ ಅಸಗರ ಒಲ್‌ಗ್ರಾಮಿ ಸುಪರೆಂಟೆಂಡೆಂಟ್ ಸೆಕ್ರೆಟರಿಎಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ ೧೯೬೩ ನಾರಾಯಣ ವಿಠ್ಠಲ ಲೋಣಕರ, ಕೇರ್ ಆಫ್ ಡಿ. ಈ. ಪುರಾಣಿಕ ೧೧೭ ನಿಹಾಲಪುರ ಇಂದೂರ ೧೦೦೦

(೩) ಎಲ್ ಬಿ. ಸಿ. ನಂ ೩೪೧ ರಾಮಚಂದ್ರ ಅನಂತ ಶಿರೋಳ. ಡಿವಿಜನಲ್ ಫಾರೆಸ್ಟ ಆಫೀಸರ ಧಾರವಾಡ. ಪಶ್ಚಿಮ ಖ ನದೇಶ ರೂ. ೮೦೦

(೪) ಬಾಂಡ ನಂಬರು ೭೫೦೬ ಕೇ. ಜಿ. ಫರ್ನಾಂಡೋ ವ್ಯಾಪಾರಸ್ಥ ಬ್ರಿಕ್‌ಸ್ಟ್ರೀಟ ಸಿಲೋನ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜಿ ಚವರೆ. ಅಸಿಸ್ಟಂಟ ಸ್ಟೇಶನ್ ಮಾಸ್ತರ ತೆಲಗಿ ಜಿಲ್ಲಾ ವಿಜಾಪುರ ರೂ ೧೦೦೦

ಬಿ. ಸ್. ರಂಗ್ರ, ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ)

ಸ್ಟ್ಯಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ್ ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಒಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸಹಿತ) ೧ ಪೌಂಡಿಗೆ ರೂ. ೧-೬-೦

೨ ನೇ ,, ,, ,, ರೂ ೧-೩-೦

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ

ಚಿಕ್ಕಪೇಟೆ ಬೆಂಗಳೂರು ಸಿಟಿ.

ಜೀವ ವಿಮೆಯ ಕಾರ್ಯದಲ್ಲಿ

ಅದ್ಭುತವಾದ ಜಯವು!

ಯಾಕೆಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ರೂಪಾಯಿ ಲಾಭ ಹಂಚಿದ

ದಿ ಜನರಲ್ ಅಶ್ಯೂರನ್ಸ ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ

ಸುಲಭ ಕಂತು! ಸಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉತ್ಪನ್ನವಾದದ್ದು ರೂ ೧,೧೯,೦೦೦

ಏಜಂಟರು ಬೇಕು ಗಾರಾಕ್ಷವಾದ ಕಮಿಶನ್!

ಎಸ್. ಕಟ್ಟೂರ ಬಿ. ಎ. ಎಫ್. ಎಸ್. ಅಜಮೀರ.

Apply to:- N. Ramachandra Rao

Branch Secretary, opposit Minto Hospital,

Bangalore City.

or

L. V Ramdurg. Chief Agent

Near Vitoba Temple Hubli.

GENERAL ASSURANCE SOCIETY AJMER

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸ ರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಣ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರ. ನಂ ಬಿ. ೧೯೪೭ ವಾ. ಚಂದಾ ೧—೧೩—೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ } ಬಾಗಲಕೋಟೆ ಸೋಮವಾರ ಮಿತಿ ಶ್ರಾವಣ ಶುದ್ಧ ೧೦ ಶಕೆ ೧೮೪೯ ತಾ|| ೮-೮-೧೯೨೭. { ಸಂಚಿಕೆ ೧೮
Date 8—8—1927.

ಮೈಸೂರಿನ ಮಹಾರಾಜರೂ

ಅಖಂಡ ಕರ್ನಾಟಕದ ಆಧಾರಸ್ಥಂಭರೂ ಆದ

ನಾಲ್ವಡಿ ಕೃಷ್ಣರಾಜ ಬಹದ್ದೂರ ಇವರ

ರಜತೋತ್ಸವ ಸಮಾರಂಭ.

ಮೈಸೂರಿನ ಬೆಡಗು.

ಚಿನ್ನದ ನಾಡದು,
ಮೈಸೂರು.
ಗಂಧದ ಗುಡಿಯದು,
ಮೈಸೂರು.
ವೀಣೆಯ ಬೆಡಗದು,
ಮೈಸೂರು,
ನಾಲುಮಡಿ ಕೃಷ್ಣನ,
ಮೈಸೂರು.
ಬೆಳೆಯುವ ನಾಡದು,
ಮೈಸೂರು,
ಇಳೆಯ ಹಾಡಂಯದು,
ಮೈಸೂರು.
ಕನ್ನಡಿಗನುಸಿರದು,
ಮೈಸೂರು
ನಾಲುಮಡಿ ಕೃಷ್ಣನ,
ಮೈಸೂರು.

—ಶ್ರೀ.

"ಪ್ರತಿಯೊಂದು ಅವನತಿಯೂ ಮುಂದೆ ಬರುವ ಉನ್ನತಿಗೆ ಕಾರಣವೆನಿಸುತ್ತದೆ. ಅಧೋಗತಿಯ ಅವಧಿಯು ಕಳೆದು ಹೋದೊಡನೆಯೇ . ಉತ್ಕರ್ಷೆಯ ಅವಧಿಯು ಬಂದೇ ತೀರಬೇಕು"

—ಶ್ರೀಮತ್ಕೃಷ್ಣರಾಜರು

† † † †

"ಪುರಾತನದ ರಾಜವಂಶದ ಗಂಭೀರವಾದ ಕಳೆಯೂ ಉತ್ತಮ ಗುಣಗಳ ಮತ್ತು ಪ್ರತಿಭೆಯ ಚಿಹ್ನೆಗಳ ವ್ಯಕ್ತಿತ್ವವೂ ಸೇರಿ ಶೋಭಿಸುವವರನ್ನು ಕಂಡರೆ ಯಾರಿಗೆ ತಾನೇ ಆನಂದವೂ ಹೆಮ್ಮೆಯೂ ಉಂಟಾಗಲಾರದು. ಮೈಸೂರ ಮಹಾರಾಜರು ಈ ಸದ್ಗುಣ ಚಿಹ್ನಗಳಿಂದ ಬೆಳಗುತ್ತಿರುವರು."

—ಲಾಲಾ ಲಜಪತರಾಯರು.

(ಮಧುರ ಕವಿಗೆ ಮಣಿದು)

ಸಲೆ ನಾನಾ ಸಸ್ಯ ಸಂಪತ್ತಿಯು ನೊದವಿಸಿ ದಾನಧಾರಾ
ಜಲದಿಂ ಸಂತಾಪಮಂ ತಳ್ಳಿಸಿ ವಿತತ ಸಿತಚ್ಛತ್ರ ಸುಚ್ಛಾಯೆಗೊಯ್ದು ।
ಜ್ವಲಿತಾಚ್ಛಾದಾಮ ದೋಳ್ಳಿಯುಮಿಸಿ ನಿಜದೋಸ್ತಂಭದೊಳ್ಕಟ್ಟಿ ಗೋವಂ
ಡಲಮಂ ಸತ್ಕೀರ್ತಿದುಗ್ಧಂ ಕರದ ನರಿಕೆಯಿಂ ಕೃಷ್ಣರಾಜಾವನೀಂದ್ರಂ ॥

— ತಿ. ತಾತಾಚಾರ್ಯ

ಮಹಾರಾಜರ ಮೂಲಪುರುಷರು.

ವಿಜಯನಗರ ಸಂಸ್ಥಾನದ ಬಲವು ತಗ್ಗಿದ ಮೇಲೆ ಆ ಸಂಸ್ಥಾನದ ಆಶ್ರಯದಲ್ಲಿದ್ದ ಅನೇಕ ರಾಜರೂ, ಪಾಳೆಯಗಾರರೂ, ಸ್ವತಂತ್ರರಾದರು. ಹೀಗಾದವರಲ್ಲಿ ಮೈಸೂರು ರಾಜರೂ ಒಬ್ಬರು. ಕ್ರಿ. ಶ. ೧೩೯೯ನೇಯ ಇಸವಿಯಲ್ಲಿ ಯದುರಾಯರು, ಕೃಷ್ಣರಾಯರು ಎಂಬ ಇಬ್ಬರು ಅಣ್ಣತಮ್ಮಂದಿರು ದ್ವಾರಕಾಪಟ್ಟಣದಿಂದ ಹೊರಟು ನಂಜನಗೂಡ ಬಳಿ ಇರುವ ಹದಿನಾಡೆಂಬ ಸ್ಥಳಕ್ಕೆ ಯಾವುದೋ ಕೆಲಸದ ಮೇಲೆ ಬಂದು ಸೇರಿದರು. ಈ ಇಬ್ಬರಲ್ಲಿ ಹಿರಿಯರಾದ ಯದುರಾಯರೆಂಬುವರೇ ಈಗ ಆಳುತ್ತಿರುವ ಮೈಸೂರು ಮಹಾರಾಜರ ವಂಶಕ್ಕೆ ಮೂಲಪುರುಷರು. ಇವರು ಭಗವಾನ್ ಶ್ರೀ ಕೃಷ್ಣನ ವಂಶಜರೆಂದು ಹೇಳುತ್ತಾರೆ.

ಯದುರಾಯರಿಗೆ ರಾಜ್ಯವು ಸಿಕ್ಕಿದ್ದು ಬಹಳ ಆಶ್ಚರ್ಯವಾಗಿದೆ. ಈಗ ಮೈಸೂರು ಸಂಸ್ಥಾನವೆಂದು ಹೆಸರು ಪಡೆದಿರುವ ದೇಶವೆಲ್ಲವೂ ಹಿಂದಣ ಕಾಲದಲ್ಲಿ ಒಂದೇ ಆಳಿಕೆಯಲ್ಲಿರಲಿಲ್ಲವೆಂದು ತಿಳಿದೇ ಇದೆಯಷ್ಟೆ. ಆಗ ಈ ದೇಶವು ಅನೇಕ ಪಾಳೆಯಗಾರರ ಪಾಲಾಗಿದ್ದಿತ್ತು. ಇವರೆಲ್ಲರೂ ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ಅಧಿಕಾರಿಯ ಅಪ್ಪಣೆಯ ಪ್ರಕಾರ ನಡೆಯುತ್ತ ಆ ಸಂಸ್ಥಾನಕ್ಕೆ ಕಪ್ಪವನ್ನು ಕೊಡುತ್ತಿದ್ದರು. ಮೈಸೂರು ಪಟ್ಟಣಕ್ಕೆ ಸಮೀಪವಾಗಿರುವ ರಂಗಸಮುದ್ರ, ಸೊಸಲೆ ಅರಕೆರೆ, ಪಿರಿಯಾಪಟ್ಟಣ, ಕಾರುಗಹಳ್ಳಿ, ಹರದನಹಳ್ಳಿ, ಮೂಗೂರು ಇವೇ ಮುಂತಾದ ಸ್ಥಳಗಳಲ್ಲಿ ಬೇರೆ ಬೇರೆ ಪಾಳೆಯಗಾರರು ಅಧಿಕಾರವನ್ನು ಮಾಡುತ್ತಿದ್ದರು. ಇವರಲ್ಲಿ ಒಕ್ಕಟ್ಟಿಲ್ಲದುದರಿಂದ ತಮ್ಮ ತಮ್ಮಲ್ಲಿ ಜಗಳವನ್ನು ಬೆಳೆಸಿಕೊಂಡು, ಯಾರಾದರೂ ಬಲಹೀನರಾದರೆ ಅವರ ಸೀಮೆಯನ್ನು ಇತರರು ಸೇರಿಕೊಳ್ಳುವುದಕ್ಕೆ ಯತ್ನ ಮಾಡುತ್ತಿದ್ದರು.

ಹೀಗಿರುವಾಗ, ೧೩೯೯ನೆಯ ಇಸವಿಯಲ್ಲಿ ಹದಿನಾಡೆಂಬ ಗ್ರಾಮದಲ್ಲಿ ಆಳುತ್ತಿದ್ದ ಚಾಮರಾಜರೆಂಬುವರು ಮರಣವನ್ನು ಹೊಂದಿದುದರಿಂದ ರಾಜ್ಯವು ಅನಾಯಕವಾಯಿತು. ಆ ಸಮಯದಲ್ಲಿ ಕಾರುಗಹಳ್ಳಿ ಪಾಳೆಯಗಾರನಾದ ಮಾರನಾಯಕನೆಂಬುವನು ಹದಿನಾಡನ್ನು ಸ್ವಾಧೀನಪಡಿಸಿಕೊಂಡು ಚಾಮರಾಜರ ಮಗಳನ್ನು ತನಗೆ ಮದುವೆ ಮಾಡಿಕೊಡಬೇಕೆಂದು ಬಲಾತ್ಕಾರ ಮಾಡಿದನು. ಮಾರನಾಯಕನು ಕೀಳಿಯ ಜಾತಿಯವನಾದುದರಿಂದ ಅವನಿಗೆ ಮಗಳನ್ನು ಕೊಡಲು ಚಾಮರಾಜನ ಹೆಂಡತಿಗೆ ಮನಸ್ಸು ಇರಲಿಲ್ಲ; ಆದರೂ ಅವನಿಗೆ ಅಂಜಿ ಮದುವೆ ಮಾಡಿಕೊಡುವುದಾಗಿ ಒಪ್ಪಿಕೊಂಡಿದ್ದಳು. ಆ ವೇಳೆಗೆ ಸರಿಯಾಗಿ ಯದುರಾಯರೂ, ಕೃಷ್ಣರಾಯರೂ ಹದಿನಾಡನ್ನು ಸೇರಿದರು. ಅವರು ಅಲ್ಲಿಯ ಸಂಗತಿಯನ್ನೆಲ್ಲ ಕೇಳಿ ಮಾರನಾಯಕನ ಬಾಧೆಯಿಂದ ತಪ್ಪಿಸುವುದಕ್ಕೆ ತಕ್ಕ ಉಪಾಯವನ್ನು ಯೋಚಿಸಿ ಚಾಮರಾಜನ ಹೆಂಡತಿಗೆ ಹೇಳಿ ಕಳುಹಿಸಿದರು. ಆ ನಂತರ ಈ ರಾಜಕುಮಾರರು ಗುಟ್ಟಾಗಿ ಅರಮನೆಯನ್ನು ಸೇರಿದರು. ಮಾರನಾಯಕನಾದರೋ ಗರ್ವದಿಂದ ಮೈಮರೆತಿದ್ದನು. ಆದರೂ ಅವನಿಗೆ ಸಂಶಯವುಂಟಾಗದಂತೆ ಮದುವೆಗೆ ಬೇಕಾದ [illegible] ಮೊದಲಿನಂತೆ ಮಾಡಲ್ಪಟ್ಟಿದ್ದುವು. ರಾಜಕುಮಾರರು ಸಮಯವನ್ನು ಕಾಯುತ್ತಿದ್ದರು. ಒಂದಾನೊಂದು ದಿವಸ ಮಾರನಾಯಕನು ಊಟಮಾಡುತ್ತಿರುವ ಕಾಲದಲ್ಲಿ ಇವರು ಅವನಮೇಲೆ ಬಿದ್ದು ಅವನನ್ನೂ ಅವನ ಕಡೆಯವರನ್ನೂ ಕೊಂದು ತರುವಾಯ ಕಾರುಗಹಳ್ಳಿಗೆ ಹೋಗಿ ಊರನ್ನು ಸೂರೆಮಾಡಿಕೊಂಡು ಹಿಂದಿರುಗಿದರು. ಅನಂತರ ಯದುರಾಯರು ಚಾಮರಾಜರ ಮಗಳನ್ನು ಮದುವೆ ಮಾಡಿಕೊಂಡರು. ರಾಜ್ಯವೂ ಅವರಿಗೆ ಸೇರಿತು. ಈತನು ೨೪ ವರ್ಷ ರಾಜ್ಯವಾಳಿದನು. ಈತನು ಅನೇಕ ಪಾಳೆಯಗಾರರನ್ನು ಜಯಿಸಿ ತನ್ನ ರಾಜ್ಯವನ್ನು ಬೆಳೆಸಿದನು.

—ಮೈಸೂರು ಸಂಸ್ಥಾನದ ಚರಿತ್ರಸಾರ

ಮೈಸೂರಿಗೆ ೧೦॥ ಲಕ್ಷ ರೂ. ಉಳಿತಾಯ.

ಮೈಸೂರ ಸರಕಾರದವರು ಪ್ರತಿವರ್ಷ ೩೫ ಲಕ್ಷ ರೂ. ಕಪ್ಪ ಬ್ರಿಟಿಶರಿಗೆ ಕೊಡುತ್ತಾರೆ. ಟೀಪೂಸುಲ್ತಾನನ ಪಶ್ಚಾತ್ ಪಟ್ಟಕ್ಕೆ ಕುಳಿತ ಹಿಂದೂರಾಜರು ೨೪॥ ಲಕ್ಷ ರೂ. ಕೊಡಬೇಕಾಗಿ ಗೊತ್ತಾಗಿದ್ದಿತು. ಆ ಮೇಲೆ ೫೦ ವರ್ಷಗಳವರೆಗೆ ಬ್ರಿಟಿಶರು ತಮ್ಮ ವಶದಲ್ಲಿ ಮೈಸೂರನ್ನಿಟ್ಟುಕೊಂಡು ಮರಳಿ ರಾಜರಿಗೆ ರಾಜ್ಯವನ್ನು ಕೊಟ್ಟಾಗ್ಗೆ ೧೦॥ ಲಕ್ಷ ರೂ ಕಪ್ಪ ಹೆಚ್ಚಾಗಿ ಕೊಡಬೇಕೆಂದು ಗೊತ್ತುಮಾಡಿಕೊಂಡರು. ಆದರೆ ಅಖಂಡಭರತಖಂಡದಲ್ಲಿಯ ದೇಶೀಯ ಸಂಸ್ಥಾನಗಳೆಲ್ಲ ಕೂಡಿ ಬ್ರಿಟಿಶರಿಗೆ ೯೦ ಲಕ್ಷ ರೂ ಕಪ್ಪವನ್ನು ಪ್ರತಿವರ್ಷ ಕೊಡುತ್ತಿರುವಾಗ್ಗೆ, ಕೇವಲ ಮೈಸೂರು ಒಂದೇ ೩೫ ಲಕ್ಷ ರೂ ಕೊಡುವದು ಬಹು ಅನ್ಯಾಯಕರವಾದುದೆಂದು ಅನೇಕ ವರ್ಷಗಳಿಂದ ಮೈಸೂರ ಸರಕಾರವು ಬ್ರಿಟಿಶರಿಗೆ ಹೇಳುತ್ತಲೇ ಇದೆ. ಲಾರ್ಡ ರೀಡಿಂಗರು ಮೈಸೂರಿಗೆ ಬಂದಾಗ್ಗೆ "ಸಾಮ್ರಾಜ್ಯದ ಸಂರಕ್ಷಣೆಯ ಸೈನಿಕರಿಗಾಗಿ ಸಂಸ್ಥಾನಿಕರು ವೆಚ್ಚಮಾಡುವ ಹಣವೂ, ನಮಗೆ ದೇಶೀಯ ಸಂಸ್ಥಾನಗಳು ಸಲ್ಲಿಸುತ್ತಿರುವ ಕಪ್ಪಿನ ಹಣವೂ ಸೇರಿ, ಆ ಸಂಸ್ಥಾನದ ಉತ್ಪನ್ನದ ನೂರಕ್ಕೆ ೧೫ ರ ಪ್ರಮಾಣವನ್ನು ಮೀರುವಂತಿದ್ದರೆ, ಹೆಚ್ಚಿನ ಪ್ರಮಾಣವನ್ನೆಲ್ಲ, ಸೂಟ ಬಿಡತಕ್ಕದ್ದೆ"ಂದು ಹೇಳಿದರು. ಈಗ್ಗೆ ಈ ತತ್ವವನ್ನನುಸರಿಸುವರೋ ಇಲ್ಲವೋ ತಿಳಿಯದಿದ್ದರೂ, ವೈಸರಾಯರು ಮೈಸೂರಿಗೆ ಬಂದಾಗ್ಗೆ ೧೦॥ ಲಕ್ಷ ರು. ಸೂಟ ಬಿಟ್ಟ ಬಗ್ಗೆ ಹೇಳಿದರು. ಇದರಿಂದ ಮೈಸೂರ ಸರಕಾರಕ್ಕೆ ನ್ಯಾಯವು ಸಂಪೂರ್ಣ ದೊರೆಯಿತೆಂದು ಹೇಳಲಿಕ್ಕಾಗದು. ಯಾಕೆಂದರೆ ಎಲ್ಲ ದೇಶೀಯ ಸಂಸ್ಥಾನಗಳೂ ಕಲೆತು ೯೦ ಲಕ್ಷ ರು. ಕಪ್ಪ ಕೊಡುತ್ತಿರುವಾಗ್ಗೆ ೨೪॥ ಲಕ್ಷ ರೂಪಾಯಿಗಳ ಭಾರವನ್ನು ಮೈಸೂರೊಂದೇ ಹೊರಬೇಕೆನ್ನುವದು ಸಮಂಜಸವಾಗದು. ಆದರೂ, ೧೦॥ ಲಕ್ಷದ ಉಳಿತಾಯವು ಸಣ್ಣಮಾತಲ್ಲ. ಮೈಸೂರಿನಲ್ಲಿ ಅಭಿವೃದ್ಧಿಯು ಬಹು ಸಮಾಧಾನಕರವಾಗಿರುವದರಿಂದ ಹೀಗೆ ಸೂಟ ಬಿಡಲು ಹಿಂದುಸ್ತಾನ ಸರಕಾರಕ್ಕೆ ಅತ್ಯಾನಂದವಾಗುತ್ತದೆಂದು ಲಾರ್ಡ ಇರ್ವಿನ್ನರು ಹೇಳಿದರು. ಇನ್ನು ಮೈಸೂರಲ್ಲಿ ಹೊಸ ರೇಲವೇ ಹಾಗೂ ಕಾರಖಾನೆಗಳನ್ನು ರಭಸದಿಂದ ತೆರೆಯಲು ಅವಕಾಶವಾಗುವದರಿಂದ, ಮೈಸೂರಿಗೂ, ಸುತ್ತಲಿನ ಕನ್ನಡಿಗರಿಗೂ, ಇದರಿಂದ ಲಾಭವಾಗುವದೆನ್ನುವದರಲ್ಲಿ ಸಂದೇಹವಿಲ್ಲ. ಅದಕ್ಕಾಗಿ ಲಾರ್ಡ ಇರ್ವಿನ್ನರ ಹೆಸರು ಬಹುದಿವಸಗಳವರೆಗೆ ನೆನಿಸಲ್ಪಡುವದು. ಈಗಿನ ದಿವಾನರಾದ ಮಿರ್ಝಾರವರು ದಿವಾನರಾದಂದಿನಿಂದ ಈ ಅನ್ಯಾಯದ ಕಪ್ಪನ್ನು ಕಡಿಮೆ ಮಾಡುವದರಲ್ಲಿ ಶ್ರಮಪಡುತ್ತಿರುವರು. ಈ ಕೆಲಸಕ್ಕಾಗಿ ಕೆಲವು ದಿನಗಳ ಹಿಂದೆ ಸಿಮ್ಲಾಕ್ಕೆ ಸಹ ಅವರು ಹೋಗಿ ಬಂದರು. ಸಂಪೂರ್ಣವಾಗಿ ಅಲ್ಲದಿದ್ದರೂ ಕೆಲ ಅಂಶದಿಂದಾದರೂ ಜಯ ದೊರಕಿಸಿದ್ದು ಅವರಿಗೆ ಭೂಷಣವೇ ಸರಿ. ಮುಂದಾದರೂ ಪ್ರಯತ್ನಪಟ್ಟು ಸಂಪೂರ್ಣವಾದ ನ್ಯಾಯವು ದೊರೆಯುವಂತೆ ಪ್ರಯತ್ನಿಸುವರಾಗಿ ನಂಬುತ್ತೇವೆ.

ಕನ್ನಡಿಗ.

ಬಾಗಲಕೋಟೆ ಶ್ರಾವಣ ಶುದ್ಧ ೧೦ ಶಕೆ ೧೮೪೯.

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೇಣಮಾಡಿ ಕಟ್ಟುವೆನಾಸು ।
ನಿನ್ನ ಬೆಸನವಮಾಡಿದಂಥ ಮಕ್ಕಳ ದೊಮ್ಮ ।
ಚಿನ್ನದಾದರು ಚಿನ್ನ ಮೇಣಬಸ್ತಿಯ ನೊಂದು ಚಿನ್ಮಯಾಕಾಶದಲ್ಲಿ ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೆ

—ಅಂಬಿಕಾತನಯ ದತ್ತ

ಶ್ರೀಮನ್ ಮೈಸೂರ ಮಹಾರಾಜರಾದ ನಾಲ್ವಡಿ ಕೃಷ್ಣರಾಯರು ರಾಜ್ಯಭಾರವನ್ನು ವಹಿಸಿ ಇಂದಿಗೆ ಕಾಲು ಶತಮಾನವು ಪೂರ್ತಿಯಾಗುವದು. ಈ ನಿಮಿತ್ತವಾಗಿ ಮೈಸೂರು ಸೀಮೆಯಲ್ಲೆಲ್ಲ ಉತ್ಸವವೇ ಉತ್ಸವವು ! ಮಕ್ಕಳಕಿಂತಲೂ ಹೆಚ್ಚು ಅಕ್ಕರತೆಯಿಂದ ಪೋಷಣ ಮಾಡುತ್ತಿರುವ ರಾಜನಲ್ಲಿ ಪ್ರಜೆಗಳು ಇಷ್ಟೊಂದು ಅನುರಾಗವುಳ್ಳವರಾಗಿದ್ದರೆ ಏನಾಶ್ಚರ್ಯವು! ಮಹಾರಾಜರ ಪ್ರಜಾವಾತ್ಸಲ್ಯವನ್ನೂ ಅವರು ಸಂತತ ಪ್ರಜೆಗಳ ಕಲ್ಯಾಣವನ್ನೇ ಚಿಂತಿಸುತ್ತಿರುವದನ್ನೂ ನೆನೆದರೆ ಪ್ಲೇಟೋನು "The rule of the wise (ಜಾಣನಾಳುವದೇ ಲೇಸು) ಅಥವಾ The philosopher King (ಆಳುವ ಅರಸು ರಾಜರ್ಷಿಯಾಗಿರಬೇಕು) ಇರುವದು, ಈ ಅನಿರ್ದಿಷ್ಟ ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಗಿಂತಲೂ ಎಷ್ಟೋಪಾಲು ಉತ್ತಮವಾದದ್ದೆಂದ ಮಾತು ನಿದರ್ಶನಕ್ಕೆ ಬರುವಂತಿದೆ ಆದರೆ ಎಲ್ಲ ಭೂಭಾಗಗಳಿಗೂ ಕೃಷ್ಣರಾಜರಂಥ ಒಡೆಯರೇ ದೊರಯುವದೆಂತು ? ಈ ದೃಷ್ಟಿ ಬೇರೆ ಮೈಸೂರ ನೈತರ ಕೇವಲ ಭಾಗ್ಯವಶದಿಂದಲೇ, ಇಂತಹ ಲೋಕಪಾಲಕರು ಅವರಿಗೆ ಲಭಿಸಿರುವರು. ಇವರ ವಿಮಲತರವಾದ ಚರಿತ್ರೆಯನ್ನು ಅವಲೋಕಿಸಿದರೆ, ಸುಮ್ಮ ರಘುರಾಜನ ವಂಶದ ಅರಸರನ್ನು ವರ್ಣಿಸುವಾಗ ಕಾಲಿದಾಸನು ತನ್ನ ಕಾವ್ಯದಲ್ಲಿ ಮೊದಲಿಗೆ ಹೇಳಿದ 'ಶೈಶವೇಭ್ಯಸ್ತವಿದ್ಯಾನಾಂ ಯೌವನೆ ವಿಷಯೈಷಿಣಾಂ । ವಾರ್ಧಕ್ಯೇ ಮುನಿವೃತ್ತೀನಾಂ ಯೋಗಿನಾಂತೆ ತನುತ್ಯಜಾಮ್' ಎಂಬ ಸಾಮಾನ್ಯ ಶ್ಲೋಕವು ಈ ಕೃಷ್ಣರಾಜರಿಗೂ ಅಕ್ಷರಶಃ ಅನ್ವಯಿಸುವದನ್ನು ನೋಡಿದರೆ, ಶ್ರೀರಾಮಚಂದ್ರನ ಪೂರ್ವಜರಲ್ಲೇ ಒಬ್ಬರು, ಈ ಕನ್ನಡ ನಾಡಿನ ಸಿರಿಗೂ ಶ್ರೀಲಕ್ಷ್ಮಿ ವೆಚ್ಚ, ಇಂತಹ ಬಡಗಿನ ನಾಡನ್ನು ಕೆಳಗಾದ ದ್ರವ್ಯಲುಬ್ಧರ ಪಾಲು ಮಾಡಬಾರದೆಂದು, ಮತ್ತೊಮ್ಮೆ ಜನಿಸಿಬಂದು,

ರಾವಬಾಹದ್ದೂರ
ಶ್ರೀ ಕೃಷ್ಣರಾಜ ಒಡೆಯರು.

ಕನ್ನಡ ಪ್ರಜಾಜನಹಿತಕ್ಕಾಗಿ ರಾಜ್ಯಭಾರವನ್ನು ವಹಿಸಿರಬಹುದೇ ಎಂದು ಭಾಸವಾಗುತ್ತದೆ. ಸಿರಿಯಿಂದಲೂ ಸಂಪತ್ತಿನಿಂದಲೂ ತುಂಬಿ ತುಳುಕುತ್ತಿದ್ದ ಈ ಆರ್ಯಾವರ್ತವು ಇಂಗ್ಲರ ಆಧಿಪತ್ಯಕ್ಕೊಳಪಟ್ಟನಂತರ ಅದರ ಸಿರಿಯೆಲ್ಲ ಹರಿದು ಹೋಗಿ, ಹೊಟ್ಟೆಗೆ ಕೂಳು ಸಿಕ್ಕದೆ ಅಸಂತುಷ್ಟತೆಯಿಂದ ಮನಸಿನಲ್ಲಿ ಕುದಿಯುತ್ತಿರುವ ಸಮಗ್ರ ಹಿಂದೀ ಪ್ರಜಾವರ್ಗವಲ್ಲಿ, ಎಲ್ಲಿಯಾದರೂ ಸಂತೋಷ ಸಮಾಧಾನಗಳ ಒಂದೆರಡು, ಕಣಗಳಾದರೂ ಸಿಕ್ಕಬಹುದಾದರೆ, 'ಕುರುಡರಲ್ಲಿ ಮೆಳ್ಳಶ್ರೇಷ್ಠ'ನೆಂಬಂತೆ, ಅದು ಮೈಸೂರ ಪ್ರಜಾಜನರಲ್ಲಿಯೇ ಎಂದು ಧಾರಳವಾಗಿ ಹೇಳಬಹುದು, ಯಾಕಂದರೆ ಮಹಾರಾಜರು ಸಂಪದಭಿವೃದ್ಧಿಗಾಗಿ, ಹೆಚ್ಚು ಹೆಚ್ಚಿನ ಸಾಹಸ ಮಾಡುತ್ತಿರುವರು. ತಮ್ಮ ಪ್ರಜಾಜನರ ಉದ್ಯೋಗಪ್ರೀತಿಯನ್ನೂ ವಿದ್ಯಾಭಿರುಚಿಯನ್ನೂ ಹೆಚ್ಚಿಸುವದರ ಕಡೆಗೆ ಇವರು ಅತ್ಯಂತ ಜಾಗರೂಕರಾಗಿರುವರು. ಸ್ವಸುಖದ ಆಶೆಯಿಲ್ಲದೆ ರಾಜನು ಲೋಕಹಿತಕ್ಕಾಗಿ ದುಃಖಪಡುತ್ತಿರುವದನ್ನು ಲಕ್ಷಿಸಿ, ಜಾಣಾಕ್ಷ ಜನರು ಒಳ್ಳೇ ಸಹಾನುಭೂತಿಯಿಂದಲೂ ತಮ್ಮ ಬುದ್ಧಿಸಾಮರ್ಥ್ಯದಿಂದಲೂ ರಾಜನಿಗೆ ನೆರವಾಗುತ್ತಿರುವದರಿಂದ ಬಂಗಾರಕ್ಕೆ ಕುಂದಣ ಕೂಡ್ರಿಸಿದಂತಾಗಿ, ಕೃಷ್ಣರಾಜರ ಯತ್ನಗಳಿಗೆ ಒಳ್ಳೇ ಕಳೆ ಏರಹತ್ತಿವೆ. ತಮ್ಮ ಪ್ರಾಂತದ ಸಿರಿ ಸಂಪತ್ತನ್ನು ಹೆಚ್ಚಿಸಲಿಕ್ಕೆ ಇವರು ಯತ್ನಿಸುತ್ತಿರುವಂತೆ, ತಮ್ಮ ನಾಡಿನ ತಾಯ್ನುಡಿಯಾದ ಕನ್ನಡವನ್ನು ವೃದ್ಧಿಗೊಳಿಸಲಿಕ್ಕೂ ಯತ್ನಿಸುತ್ತಿರುವರು. ಈ ಸಾಹಿತ್ಯಸಂಗತಿಯಲ್ಲಿ ಮಾತ್ರ ತಾವು ಆಳುತ್ತಿರುವ ಮೈಸೂರನ್ನಷ್ಟೆ ಮೇರೆಯಾಗಿ ಇಟ್ಟುಕೊಳ್ಳದೆ, ಭಿನ್ನ ಭಿನ್ನವಾಗಿ ಹರಿದುಹೋದ ನಿಕ್ಕಳಿದ ಕರ್ನಾಟಕದ ಚಿಂತನೆಯನ್ನು ಸಹ ಮಹಾರಾಜರು ಮಾಡುತ್ತಿರುವರು. ಉಳಿದ ಕನ್ನಡಿಗರಲ್ಲನೇಕರು ಮಹಾರಾಜರ ಆಧಿಪತ್ಯವನ್ನೇ ಬಯಸುತ್ತಿರುವದನ್ನು ಮಹಾರಾಜರು ಮರೆಯಲಾಗದು. ಪವಿತ್ರವಾದ ಭಾಷಾ ಬಂಧನದಿಂದ ಒದ್ಧರಾದ ಉಳಿದ ಕರ್ನಾಟಕಸ್ಥರಿಗೆ ಮಹಾರಾಜರು ಎಲ್ಲಕಾಲದಲ್ಲೂ ಆಪ್ತರಾಗಿಹರೆಂಬದು ಇದೀಗ ಎಲ್ಲ ಕನ್ನಡಿಗರ ಮನಸ್ಸಿನಲ್ಲಿ ಒಡಮೂಡಹತ್ತಿರುವ ಸಂಗತಿಯನ್ನು ಮಹಾರಾಜರು ತಮ್ಮ ಉದಾತ್ತಕೃತಿಗಳಿಂದ ದೃಢಪಡಿಸಬೇಕು; ಕನ್ನಡಿಗರೆಲ್ಲರೂ ಒಂದೇ ಮನೆಯವರಂತೆ ಬಂಧುಭಾವದಿಂದ ಇರುವಂತೆ ಮಾಡುವ ಸುಲಭ ಉಪಾಯವೆಂದರೆ ಕನ್ನಡ ತರುಣರೆಲ್ಲರೂ ಒಂದೇ ಮಠದಲ್ಲಿ ವಿದ್ಯಾವ್ಯಾಸಂಗಮಾಡುವಂತೆ ಏರ್ಪಾಡು ಮಾಡುವದು; ಹೀಗಾಗುವದರಿಂದ ಉತ್ತರ ಕರ್ನಾಟಕಸ್ಥರ ಓಘವು ಮುಂಬಯಿ ಪುಣೆ ಪಟ್ಟಣಗಳಿಂದಲೂ ದಕ್ಷಿಣಕರ್ನಾಟಕಸ್ಥರ ದೃಷ್ಟಿಯು ಮದ್ರಾಸಪಟ್ಟಣದಿಂದಲೂ ಹಿಂತಿರುಗಿ ಬೆಂಗಳೂರ ಮೈಸೂರ ಕಡೆಗೆ ಹರಿಯಹತ್ತಿ, ಈಗಿದ್ದ ಪರಸ್ಪರರ ಪರಿಚಯವೂ ಸಹವಾಸವೂ ಪ್ರೇಮವೂ ಆದರವೂ ದೃಢವಾಗುವದೆಂಬದು ಕಟ್ಟಿಟ್ಟ ಮಾತು. ಇದಕ್ಕಾಗಿ ಮೈಸೂರೇ ಅಖಿಲ ಕರ್ನಾಟಕದ ವಿದ್ಯಾಪೀಠವಾಗುವಂತೆಯೂ ಕನ್ನಡ ತರುಣರೆಲ್ಲರೂ ಏಕತ್ರ ಮಿಲಿತರಾಗಿ ವ್ಯಾಸಂಗಮಾಡುವಂತೆಯೂ ಉದಾರ ಚರಿತರಾದ ಮಹಾರಾಜರು ಏರ್ಪಡಿಸಿದರೆ ಕರ್ನಾಟಕ

ಪ್ರಪಂಚವೆಲ್ಲವೂ ಅವರಿಗೆ ಋಣಿಯಾಗುವದೆಂಬದರಲ್ಲಿ ಸಂಶಯವಿಲ್ಲ. ಮಹಾರಾಜರನ್ನುಳಿದು, ಕನ್ನಡ ನುಡಿಗೆ ರಾಜಾಶ್ರಯವಿಲ್ಲ; ರಾಜಮಾನ್ಯತೆಯಿಲ್ಲ; ಸ್ವತಂತ್ರ ಮನೆಯಿಲ್ಲ. ಎಲ್ಲಕಡೆಯಲ್ಲಿಯೂ ತೀಕ್ಷ್ಣವಾದ ಸವತಿ ಮತ್ಸರದ ಕುದಿಗೆ ಬೆಂದು ಬೇಗುದಿಗೊಂಡಿದೆ. ಈ ಕನ್ನಡನುಡಿ! ಇಂತಿಷ್ಟು ಅನಾಥೆಯಾದ ಕನ್ನಡ ನುಡಿಯ ದುರವಸ್ಥೆಯನ್ನು ತಮ್ಮ ರಾಜಾಶ್ರಯದ ಬೆಂಬಲದಿಂದ ಹೋಗಲಾಡಿಸುವಂತೆ ಹೊರದೇಶದ ಕನ್ನಡ ಸಾಹಿತ್ಯಭಕ್ತರಿಗೂ ಇನ್ನೂ ಹೆಚ್ಚಾಗಿ ನೆರವಾಗುತ್ತಿರಬೇಕೆಂದು ನಮ್ಮ ನಮ್ರ ಪ್ರಾರ್ಥನೆ. ಬ್ರಿಟಿಷಕರ್ನಾಟಕಸ್ಥರೆಲ್ಲರೂ ಈ ರಜತ ಮಹೋತ್ಸವದ ಮಂಗಲಸಮಯದಲ್ಲಿ ಶ್ರೀಮನ್ಮಹಾರಾಜರಿಗೆ 'ಆಯುರಾರೋಗ್ಯವನ್ನೂ ಹೆಚ್ಚಿನ ಪ್ರಜಾವಾತ್ಸಲ್ಯವನ್ನೂ ದಯಪಾಲಿಸೆ'ದು ಆ ಜಗಜ್ಜನಕನಿಗೆ ಪ್ರಾರ್ಥಿಸುತ್ತಿರುವೆವು.

ಕರ್ನಾಟಕ ಸಿಂಹಾಸನಾಧೀಶ್ವರರ ರಜತ ಮಹೋತ್ಸವ.

(ಲೇ:- ಚನ್ನಕೇಶವಯ್ಯಂಗಾರ
ಧಾರವಾಡ ಕರ್ನಾಟಕ ಕಾಲೇಜಿಯ ಕನ್ನಡ ಪಂಡಿತರು.)

ಕನ್ನಡನಾಡೆನಿಸಿಕೊಳ್ಳುವ ಸಂಸ್ಥಾನಗಳಲ್ಲೆಲ್ಲ ಕನ್ನಡಿಗರು ಇರುವ ಸ್ಥಳಗಳಲ್ಲೆಲ್ಲ ಈ ದಿನ ದೊಡ್ಡ ಹಬ್ಬ. ಈಗ ೨೫೦-೩೦೦ ವರ್ಷಗಳಿಂದಲೂ ನಡೆನುಡಿಗಳಲ್ಲಿ ಆಚಾರ ವ್ಯವಹಾರಗಳಲ್ಲಿ ಪರಾವಲಂಬಿಯಾಗಿ ಪರರ ಮುಖವಿಕಾಸಕ್ಕೆ ಹಂಗಾಗಿ ಸಿಕ್ಕಿಸೊರಗಿರುವ ನಮ್ಮ ಬಡಕನ್ನಡ ನಾಡು ಸಂಯುಕ್ತತೆಯನ್ನೂ ಐಕಮತ್ಯವನ್ನೂ 'ಉದ್ಧರೇದಾತ್ಮನಾತ್ಮಾನಂ' ಎಂಬ ದಿವ್ಯತತ್ವವನ್ನೂ ಅರಿತು ಆಚರಿಸುವ ಶುಭಯೋಗವೆಂದರೆ ಈ ದಿವಸವೇ.

ಹೊಯ್ಸಳ ರಾಜ್ಯದಲ್ಲಿ ಒಬ್ಬಿಬ್ಬರು ಹೊರತಾಗಿ, ಕರ್ನಾಟಕದ ಅಖಂಡ ಭೂಮಂಡಲ ಸಾರ್ವಭೌಮನಾದ ಚಿರಸ್ಮರಣೀಯ ಕೃಷ್ಣದೇವರಾಯ ಭೂಪಾಲನು ಕೂಡ, ೨೫ವರ್ಷಗಳ ಕಾಲ ರಾಜ್ಯಭಾರಮಾಡಲಿಲ್ಲ. ಮೈಸೂರರಸರಲ್ಲಾದರೂ ಬೆಟ್ಟದ ಚಾಮರಾಜ-ರಾಜಒಡೆಯ-ಚಿಕ್ಕದೇವರಾಜ ಒಡೆಯರೆಂಬೀ ಮೂವರು ವಿನಾ ಮತ್ತಾರೂ ೨೫ ವರ್ಷಗಳಿಗೆ ಮೀರಿ ರಾಜ್ಯಸೂತ್ರವನ್ನು ಕೈಯಲ್ಲಿ ಹಿಡಿಯಲಿಲ್ಲ. ಆದರೆ ಈಗಿನ ಮೈಸೂರ ಮಹಾರಾಜರ ಧರ್ಮ ಕರ್ಮ ಸಂಯೋಗದಿಂದ ಸುಕೃತ ವಿಶೇಷದಿಂದ-ರಾಜಪ್ರಜೆಗಳಿಬ್ಬರೂ ಕಣ್ಮನಂಗಳಿಗೆ ಹಬ್ಬವನ್ನುಂಟು ಮಾಡುವ ಧನ್ಯಾವೇಶದ ಸತ್ಸಂದರ್ಭವು ಈ ದಿನಕ್ಕೆ ಒದಗಿದೆ.

ಮೈಸೂರ ಮಹಾರಾಜರ ರಜತಮಹೋತ್ಸವದಲ್ಲಿ— ೨೫ ವರ್ಷಗಳ ಆಳ್ವಿಕೆಯು ಮುಗಿದ ದಿನದಲ್ಲಿ-ಇತರ ಕರ್ನಾಟಕ ಪ್ರಾಂತದವರು ಆನಂದಿಸುವುದಕ್ಕೆ ಇನ್ನೊಂದು ಕಾರಣವೂ ಇದೆ. ಕನ್ನಡಿಗರ ದುರ್ದೈವದಿಂದ ತುಂಡುತುಂಡಾಗಿ ಛಿದ್ರವಾಗಿರುವ ಕನ್ನಡ ನಾಡೆಲ್ಲವೂ ಈಗ ಸುಮಾರು ೧೩೦ ವರ್ಷಗಳ ಕೆಳಗೆ ಒಂದಾಗಿ ಒಂದೇ ರಾಜರ ಆಳ್ವಿಕೆಯಲ್ಲಿ ಇದೇ ಮೈಸೂರ ಮಹಾರಾಜರ ಪೂರ್ವಿಕರಾದ ಖಾಸಾ ಚಾಮರಾಜ ಒಡೆಯರ ಆಳಿಕೆಯಲ್ಲಿ ಅರ್ಥಾತ್ ಅವರ ನವಾಬನಾದ ಟಿಪ್ಪುಸುಲ್ತಾನನ ಆಳ್ವಿಕೆಯಲ್ಲಿ ಒಳಪಟ್ಟಿತ್ತು. ಕ್ರಿ. ಶ. ೧೮೦೦ ರಿಂದೀಚೆಗೆ ನಮ್ಮ ನಾಡು ತುಂಡು ತುಂಡಾಗಿ ಕತ್ತರಿಸಲ್ಪಟ್ಟು ಬೇರೆ ಬೇರೆ ಸರಕಾರಕ್ಕೆ ಅಧೀನವಾಯಿತು. ಈ ಕಾಲವನ್ನೂ, ಮತ್ತೆ ಈಗ ೪೦೦ ವರ್ಷಗಳ ಹಿಂದೆ ದಕ್ಷಿಣ ಹಿಂದುಸ್ಥಾನವೆಲ್ಲವೂ ಶುದ್ಧ ಕನ್ನಡಿಗನಾದ ಕೃಷ್ಣದೇವರಾಯ ಸಾರ್ವಭೌಮನ ಅಖಂಡ ಸಾಮ್ರಾಜ್ಯಕ್ಕೆ ಒಳಪಟ್ಟಿದ್ದ ಕಾಲವನ್ನೂ ಕನ್ನಡಿಗರು ಜನ್ಮಜನ್ಮಾಂತರದಲ್ಲಿಯೂ ಮರೆಯುವಂತಿಲ್ಲ. ನೀರಲ್ಲಿ ಮುಳುಗುತ್ತಿರುವವನು ಹುಲ್ಲುಕಡ್ಡಿ ಸಿಕ್ಕಿದರೂ ಭದ್ರವಾಗಿ ಹಿಡಿದುಕೊಳ್ಳುವಂತೆ ಕನ್ನಡಿಗರೆಲ್ಲರೂ ಒಂದಾಗಿ ಮೈಸೂರ ಮಹಾರಾಜರ ರಜತಮಹೋತ್ಸವದ ಸಂತೋಷದಲ್ಲಿ ಭಾಗಿಗಳಾಗುವುದು ಅತಿಶಯವಲ್ಲ. ಈ ಸಂತೋಷ ಸಮಯಕ್ಕೆ ಸರಿಯಾಗಿ ೧೦॥ ಲಕ್ಷ ರೂಪಾಯಿಗಳ ಕಪ್ಪ ಕಡಮೆಯಾದ ಆನಂದದ ಸುದ್ದಿ ಬಂದಿದೆ. ಇದರಿಂದ ಮೈಸೂರ ರಾಜ್ಯಕ್ಕೆ ಪರಮೋಪಕಾರವಾಯಿತೆಂದು ನಾವು ಹೇಳಬರುವಂತಿಲ್ಲ. ಏಕೆಂದರೆ ಮೈಸೂರು ರಾಜ್ಯವು ಇಂಗ್ಲಿಷ ಕಮೀಷನರರ ಆಳ್ವಿಕೆಯಿಂದ ಮಹಾರಾಜರಿಗೆ ಬಂದ ಮೊದಲು, ಎಂದರೆ ಈ ೪೬ ವರ್ಷಗಳಿಂದ ಬೆಂಗಳೂರು ದಂಡಿನ ಸ್ಥಾಂಪು ಉತ್ಪನ್ನವು ಮೈಸೂರು ಸರಕಾರಕ್ಕೆ ನ್ಯಾಯವಾಗಿ ಸಲ್ಲುತ್ತ ಬರಲಿಲ್ಲ. ಈ ವಿಷಯವು ಮುದರ್ಶಿಸಿನವರೇ ಪ್ರಧಾನವಾಗಿದ್ದ ಮೈಸೂರ ಸರ್ಕಾರದ ಗೋಚರಕ್ಕೆ ಬಹಳ ಕಾಲದ ವರೆಗೆ ಬರಲೇ ಇಲ್ಲ. ಈಗ ಕೆಲವು ವರ್ಷಗಳ ಹಿಂದೆ ಅದು ಬಯಲಿಗೆ ಬಿದ್ದು ಚರ್ಚೆ ನಡೆದಿದೆ.

ಮೈಸೂರ ರಾಜ್ಯವು ೧೭೯೯ ನೇಯ ಜುಲೈ ತಿಂಗಳಲ್ಲಿ ಮಹಾರಾಜರಿಗೆ ಧರ್ಮಭಿಕ್ಷೆಯಾಗಿ ದೊರೆಯಲಿಲ್ಲವೆಂಬ ಸಂಗತಿಯನ್ನು ಮುದರಾಸ ಫೋರ್ಟ ಸೆಂಟ ಜಾರ್ಜಕೋಟೆಯಲ್ಲಿರುವ ಆ ಕಾಲದ ಸರಕಾರಿ ಕಾಗದ ಪತ್ರಗಳಿಂದ ವಿಶದವಾಗಿ ತಿಳಿಯಬರುವುದು. ಟಿಪ್ಪು ಸುಲ್ತಾನನ್ನು ಸೋಲಿಸಲು ಮರಾಟರಲ್ಲಿ ತಕ್ಕ ಬಲಸನ್ನಾಹಗಳಿದ್ದರೂ ಅವರು ಇಂಗ್ಲೀಷರಿಗೆ ಸಹಾಯಮಾಡಲಿಲ್ಲ ತರುವಾಯ ಹೈದರಾಬಾದ ನಿಜಾಮನೂ ಇಂಗ್ಲಿಷರೂ ಸೇರಿ ಟಿಪ್ಪು ಸುಲ್ತಾನನ್ನು ಸೋಲಿಸಿದರು. ಆಗ ಜಯಿಸಿದ ೧೧೦ ಲಕ್ಷ ಹುಟ್ಟುವಳಿಯ ಪ್ರಚಂಡ ರಾಜ್ಯವನ್ನು ಇಬ್ಭಾಗವಾಗಿ ಹಂಚಿಕೊಂಡರೆ ನಿಜಾಮರಿಗೆ ರಾಜ್ಯವಿಸ್ತಾರವು ಹೆಚ್ಚಿ ಮತ್ತೆಲ್ಲಿ ತಮ್ಮ ಮೇಲೆ ತಿರುಗಿ ಬಿದ್ದಾರೋ ಎಂಬ ಭೀತಿಯಿಂದ ೭೪ ಲಕ್ಷದ ರಾಜ್ಯವನ್ನು ತಾವು ಇಟ್ಟುಕೊಂಡು ಅಷ್ಟೇ ರಾಜ್ಯವನ್ನು ನಿಜಾಮರಿಗೆ ಕೊಟ್ಟು, ೫೦ ಲಕ್ಷದ ರಾಜ್ಯವನ್ನು ಮೈಸೂರ ರಾಜರಿಗೆ ಉಳಿಸಿಕೊಟ್ಟಂತೆ ಮಾಡಿ ಇದರ ಜೊತೆಯಲ್ಲಿಯೇ ಒಪ್ಪಂದದಿಂದ ಅವರ ಸ್ವಾತಂತ್ರ್ಯವನ್ನು ಮುರಿದು, ಉಳಿದ ೧೩ ಲಕ್ಷ ರಾಜ್ಯವನ್ನು ಮರಾಟರಿಗೆಂದು ಇಟ್ಟು ನೆವಮಾಡಿ ಕಡೆಗೆ ಕಾರಣಾಂತರದಿಂದ ಇಂಗ್ಲೀಷರೇ (ಈಸ್ಟ ಇಂಡಿಯಾ ಕಂಪೆನಿಯವರೇ) ಅದನ್ನೂ ಆಕ್ರಮಿಸಿಕೊಂಡರು ಹೀಗೆ ಛಿನ್ನವಾದ ಕರ್ನಾಟಕ ರಾಜ್ಯದೊಳಗೆ ಇಂಗ್ಲೀಷರ ಭಾಗವು ಮತ್ತಷ್ಟು ತುಂಡು ತುಂಡಾಗಿ ಕೊಡಗು, ಮುಂಬಯಿ, ಮದರಾಸ ಭಾಗಗಳಿಗೆ ಸೇರಿದವು.

ಸುಮಾರು ೧೫೦೦ ವರ್ಷಗಳ ಹಿಂದೆಯೇ ಗಂಗರಾಜರ ಪರಿಪಾಲನೆಗೆ ಒಳಪಟ್ಟಿದ್ದ ಮೈಸೂರ ರಾಜ್ಯವು ಈಚೆಗೆ ಹೊಯ್ಸಳರಿಂದಲೂ ವಿಜಯನಗರ ಚಕ್ರವರ್ತಿಗಳಿಂದಲೂ ಪಾಲಿಸಲ್ಪಟ್ಟು, ಏಕಛತ್ರಾಧಿಪತ್ಯದಿಂದ ಆಳಿದ ಕೃಷ್ಣದೇವರಾಯ ಸಾರ್ವಭೌಮನ ಪುರಾತನ ಕರ್ನಾಟಕ ಸಿಂಹಾಸನವನ್ನೇ ಮೈಸೂರ ಮಹಾರಾಜರೂ ಆರೋಹಿಸಿ ಹಿಂದಿನ ರಾಜರುಗಳಂತೆಯೇ ಧರ್ಮಕ್ಕೂ ನ್ಯಾಯಕ್ಕೂ ಭಾಷೆಗೂ ಸಾಹಿತ್ಯಕ್ಕೂ ಬೆಂಬಲವನ್ನು ಕೊಡುತ್ತಿರುವುದರಿಂದ, ಪರಂಪರಾ ಪ್ರಾಪ್ತವಾಗಿ ಬಂದ ತಮ್ಮ ಬಿರುದುಗಳಿಂದ' ಮೈಸೂರ ಶ್ರೀಮನ್ಮಹಾರಾಜರವರ ಹೀಗೆ ಮುಂದೆ ಬರುವ ಕನಕಮಹೋತ್ಸವದ—ವಜ್ರಮಹೋತ್ಸವದ— ವಿಜೃಂಭಣೆಗಳನ್ನು ಅಖಂಡ ಕರ್ನಾಟಕರು ಶ್ರದ್ಧಾಭಕ್ತಿಗಳಿಂದ ಆಚರಿಸುವ ಸುಯೋಗವನ್ನು ಭಗವಂತನು ಅನುಗ್ರಹಿಸಲೆಂದು ಕನ್ನಡಿಗರೆಲ್ಲರೂ ಏಕಕಂಠದಿಂದ ಪ್ರಾರ್ಥಿಸುತ್ತಾರೆ.

ಬಿನ್ನಹ.

ರಜತೋತ್ಸವದ ಲೇಖಗಳನ್ನೊಳಗೊಂಡ ಈ ಸಂಚಿಕೆಯು, ಬೇಕೆಂದು (ನಿನ್ನಿನ ಬದಲು) ಈ ದಿನ ರಜತೋತ್ಸವದ ಹಬ್ಬದಲ್ಲಿ, ಪ್ರಕಟಿಸಲ್ಪಟ್ಟಿದೆ.

—ವ್ಯವಸ್ಥಾಪಕ ಕನ್ನಡಿಗ

ವಾಸುದೇವನ ಉತ್ಸವವು!

ರವಿವಾರ ಶ್ರಾವಣ ಶುದ್ಧ ೪ (೩೧-೭-೨೭) ದಿನವು ಬಾಗಲಕೋಟೆಯಲ್ಲಿ ಬಹುದಿನ ನೆನಿಸಲ್ಪಡುವದು. ಕನ್ನಡನಾಡಿನಲ್ಲಿ "ವಾಙ್ಮಯ ಸಮ್ರಾಟ್" ನೆಂದು ಪ್ರಸಿದ್ಧಿಯನ್ನು ಹೊಂದಿ, ಕನ್ನಡಿಗರ ಮನಸ್ಸನ್ನು ಆಕರ್ಷಿಸಿಕೊಂಡ, ಬಾಗಲಕೋಟೆಯ ಈ ದಿವ್ಯಮೂರ್ತಿಯ ಪುಣ್ಯಸ್ಮರಣೆಯ ಉತ್ಸವವನ್ನು ಬಾಗಲಕೋಟೆಯವರು ಆ ದಿನ ಬಹು ಅಂದವಾಗಿ ಜರುಗಿಸಿದರು. ಯಾವ ಮಹಾಪುರುಷನಿಗಾದರೂ ತನ್ನ ಸ್ವಂತ ಊರಲ್ಲಿ ಮರ್ಯಾದೆಯು ದೊರೆಯುವದಿಲ್ಲವಂತೆ, ಪರಸ್ಥಳಗಳಲ್ಲಿಯ ಜನರು ತಿಳಿದೂಗಹತ್ತಿದಾಗ್ಗೆ, ಸ್ಥಳೀಕರಿಗೆ ಅವನ ಮಹಾತ್ಮೆಯು ಕಂಡುಬರುವದೆಂದು ಒಂದು ಆಖ್ಯಾಯಿಕೆಯಿದೆ. ಆದರೆ ವಾಸುದೇವನ ವಿಷಯದಲ್ಲಿ ಇದು ಅಪವಾದವಾಗಿದೆಂಬುದನ್ನು ಬಾಗಲಕೋಟೆಯ ಜನರು ತೋರಿಸಿಕೊಟ್ಟಿದ್ದಾರೆ. ಯಾವದೇ ಮಹಾಪುರುಷನ ಕೀರ್ತಿಯು ಹೊರಗೆ ಎಷ್ಟೇ ಹಬ್ಬಿದ್ದರೂ, ಅದಕ್ಕೆ ಮಹತ್ವವಿಲ್ಲ; ಸ್ವಸ್ಥಳದಲ್ಲಿಯೇ ಮೊದಲು ಅವನ ಕೀರ್ತಿಯು ಶುಭ್ರವಾಗಿರಬೇಕು. ಆಗಮಾತ್ರ ಅವನು ನಿಜವಾದ ಯೋಗ್ಯತೆಯುಳ್ಳವನೆಂದು ತಿಳಿಯಬೇಕೆಂಬದಾಗಿ ಮತ್ತೊಂದು ಆಖ್ಯಾಯಿಕೆಯಿದೆ. ಅದು ಸಹ ವಾಸುದೇವನ ವಿಷಯದಲ್ಲಿ ಸತ್ಯವಾಗಿ ಪರಿಣಮಿಸಿದ್ದು, ವಾಸುದೇವನ ಯೋಗ್ಯತೆಯನ್ನೂ ಅವನಲ್ಲಿ ಬಾಗಕೋಟೆಯರಿಗಿದ್ದ ಭಕ್ತಿಯನ್ನೂ ಸಿದ್ಧಪಡಿಸುತ್ತವೆ.

ಹಾರ್ಡಿಂಜ ಲೈಬ್ರರಿಯ ಹೊರಗಿನ ಪಟಾಂಗಣದಲ್ಲಿ ಚೊಕ್ಕಟವಾದ ಮಂಟಪವು ನಿರ್ಮಿಸಲ್ಪಟ್ಟಿತ್ತು. ಪಟ್ಟಣದಲ್ಲಿಯ ಶೆಟ್ಟರು, ಸಾವುಕಾರರು, ವಕೀಲರು, ಡಾಕ್ಟರರು, ಶಿಕ್ಷಕರು, ವಿದ್ಯಾರ್ಥಿಗಳು, ಹೀಗೆ ಎಲ್ಲವರ್ಗದ ಹಿರಿಯರೂ ಕಿರಿಯರೂ ಸಭೆಗೆ ಬಂದಿದ್ದರು; ಪರಸ್ಥಳದಿಂದ ಸಹ ಕರ್ನಾಟಕ ಕಾಲೇಜಿಯ ಕನ್ನಡ ಪಂಡಿತರಾದ ಶ್ರೀಮಾನ್ ಚನ್ನಕೇಶವ ಅಯ್ಯಂಗಾರರೂ, ಧಾರವಾಡದ ಕವಿಗಳಾದ ಬೇಂದ್ರೇಯವರೂ, ಹ ಸಂಗಿಯ ಇತಿಹಾಸ ಸಂಶೋಧಕರಾದ ಚೆನ್ನಮಲ್ಲಪ್ಪನವರೂ, ಬಂದಿದ್ದರು. ಮೊದಲಿಗೆ ಸ್ವಾಗತ ಪದಗಳನು ಹಾಡುವದಾಯಿತು. ಕೂಡಲೇ ಕಾರ್ಯದರ್ಶಿಗಳಾದ ಶ್ರೀ ಜೋರಾಪುರರು, ಶ್ರೀ ತಿರುಮಲೆ ತಾತಾಚಾರ್ಯ ಶರ್ಮರು ಆ ದಿನದ ಮುಖ್ಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಬೇಕೆಂದು ಕೇಳಿಕೊಂಡು, ಅವರ ಪರಿಚಯವನ್ನು ಪ್ರೇಕ್ಷಕರಿಗೆ ಮಾಡಿಕೊಟ್ಟರು. ಶ್ರೀ ತಾತಾಚಾರ್ಯರ ಮಾತೃಭಾಷೆಯು ತೆಲಗು; ಆದರೂ ಕನ್ನಡನಾಡಿನಲ್ಲಿ ಮನೆಮಾಡಿಕೊಂಡಿದ್ದರಿಂದ ಕನ್ನಡ ನಾಡಿನ ಜೀವಾಳದಲ್ಲಿ ಬೆರೆತುಕೊಂಡಿರುವದೇ ತಮ್ಮ ಕರ್ತವ್ಯವೆಂಬುದನ್ನು ತಿಳಿದುಕೊಂಡು ಅದನ್ನು ಕೃತಿಯಲ್ಲಿ ತಂದಿರುವರು. ಲಲಿತಕಲೆಗಳಲ್ಲಿ ಪ್ರವೀಣರು; ಕೇವಲ ಅಧಿಕಾರಿಗಳು ಮುದುಕರೂ ಸರಕಾರದ ಆಶ್ರಯದೊರೆದರೆ ಮಾತ್ರ ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕು, ಸರಕಾರದ ಆಶ್ರಯವಿಲ್ಲದೆ, ತರುಣರು ಮುಂದೆಬರುವದೆಂದರೆ ತುಂಟತನವೇ ಸರಿ' ಎಂಬದಾಗಿ ಮೈಸೂರು ಪ್ರಾಂತದಲ್ಲಿ ಹಿರಿಯರು ಹೇಳಿಕೊಳ್ಳುತ್ತಿದ್ದದರಿಂದ ಶ್ರೀ ತಾತಾಚಾರ್ಯರು, "ತುಂಟರ ಗುಂಪ" ನ್ನು ಸ್ಥಾಪಿಸಿದರು. ಇವರು "ವಿಶ್ವಕರ್ನಾಟಕ" ದಿಂದ ಎಲ್ಲರಿಗೂ ಪರಿಚಿತರಾಗಿರುವರೆಂಬುದನ್ನು ಶ್ರೀ ಜೋರಾಪುರರು ಹೇಳಿದರು.

"'ತುಂಟರ ಗುಂಪು' ಎಂಬದಾಗಿ ಉತ್ತರಭಾಗದಲ್ಲಿ ಹೇಳಿದ್ದು ನನಗೆ ಅಭಿಮಾನಪರವಾದ ಸಂಗತಿ; ಪೂರ್ವಭಾಗದಲ್ಲಿ ಪ್ರಶಂಸೆಗಾಗಿ ಹೇಳಿದ್ದುದಾಗಿ ಅನಿಸುತ್ತದೆ; ನಾನು ಹುಟ್ಟಿದುದು ತೆಲಗು ತಾಯಿಯಿಂದ; ಉಳಿದ ಸಂಸ್ಕಾರವೆಲ್ಲ ಕನ್ನಡ ತಾಯಿಯದು; ಅದರಿಂದ ಈ ಉಭಯ ತಾಯಿಂದಿರ ಅತೀವವಾದ ಬಲವಿದ್ದುದರಿಂದ ನನಗೆ ವಿಶೇಷ ಧೈರ್ಯವಿದೆ" ಎಂಬದಾಗಿ ಶ್ರೀ ಶರ್ಮರು ಹೇಳಿ, ಮುಂದಿನ ಕಾರ್ಯಕ್ರಮವು ಸಾಗಬೇಕಾಗಿ ಅಪ್ಪಣೆಕೊಟ್ಟರು. ಕೌಜಲಗೀ ಶ್ರೀನಿವಾಸರಾವ, ಹುನಗುಂದ ಕೃಷ್ಣರಾವ ಮುತಾಲೀಕ, ಬಿಂದೂರಾವ, ಆಲೂರ ವೆಂಕಟರಾವ ಮೊದಲಾದವರ ಸಹಾನುಭೂತಿ ಪರವಾದ ಪತ್ರಗಳನ್ನು ಶ್ರೀ ಜೋರಾಪುರರು ಓದಿದರು. ಆ ವೇಳೆ ಅಧ್ಯಕ್ಷರಿಗೆ ಬಂದ ಶ್ರೀ ಬೆನಗಲ್ಲ ರಾಮರಾಯರ ಹಾಗೂ ಶ್ರೀ ಪೋತದಾರ ರಂಗಪ್ಪನವರ ಪತ್ರಗಳನ್ನು ಶ್ರೀ ಮಾಗಳೀ ರಂಗನಾಥರು ಓದಿದರು. ತದನಂತರ ಧಾರವಾಡ ವಕೀಲರು ಮುಕ್ಕಾಲು ಗಂಟೆಯವರೆಗೆ ವಾಸುದೇವಾಚಾರ್ಯರ ಜೀವನ ಚರಿತ್ರೆಯನ್ನು ವಿಶದವಾಗಿ ಹೇಳಿದರು. ಪಟವರ್ಧನ ವಕೀಲರೂ, ಚನ್ನಕೇಶವಯ್ಯಂಗಾರರೂ, ಬೇಂದ್ರೆಯವರೂ ಆಚಾರ್ಯರ ಗುಣಗೌರವ ಪರವಾದ ಭಾಷಣಮಾಡಿದರು. ವಾಸುದೇವಾಚಾರ್ಯರು ರಚಿಸಿದ ಅಜಮಿಳಾಪ, ಸ್ತ್ರೀನಿರ್ವಾಣ ಮೊದಲಾದ ಕವಿತೆಗಳನ್ನು ವಿದ್ಯಾರ್ಥಿಗಳು ಹಾಡಿದರು. ಮುಳಗೀ ಕೃಷ್ಣನು ತನ್ನ ಇಂಪಾದ ಧ್ವನಿಯಿಂದ, 'ನಲದಮಯಂತಿ' ನಾಟಕದಲ್ಲಿಯ ಪದಗಳನ್ನಂದು ಜನರನ್ನು ಸಂತೋಷಗೊಳಿಸಿದನು.

ಆ ವೇಳೆ ವಿದ್ಯುತ್ ದೀಪಗಳಿಂದ ಬಹುವಿಧವಾಗಿ ಅಲಂಕರಿಸಲ್ಪಟ್ಟು, ಉಚ್ಚಸ್ಥಾನದಲ್ಲಿಡಲ್ಪಟ್ಟದ್ದ, ಹಾಗೂ ವೇಣೀಬಂಧುಗಳಿಂದ ಚಿತ್ರಿಸಲ್ಪಟ್ಟ ಅಂದವಾದ ಭಾವಪಟದ ಅನಾವರಣವನ್ನು, ಸಭಿಕರ ಕರತಾಡನೆಯಲ್ಲಿ ಜರುಗಿಸಿ, ಶ್ರೀ ತಾತಾಚಾರ್ಯರು ತಮ್ಮಂತಹ ಕಿರಿಯರ ಬದಲಾಗಿ ಹಿರಿಯರು ಈ ಸಮಾರಂಭದ ಅಧ್ಯಕ್ಷರಾಗಿದ್ದರೆ ಚನ್ನಾಗಿತ್ತೆಂದು ಹೇಳಿ, ಮೈಸೂರ ಮಹಾರಾಜರ ಕನ್ನಡಾಭಿಮಾನವನ್ನು ಬಣ್ಣಿಸಿ, ಬಸವಪ್ಪಶಾಸ್ತ್ರಿಗಳೂ ಮೈಸೂರಿನ ಓರ್ವ ಪದವೀಧರರೂ ವಾಸುದೇವಾಚಾರ್ಯರೂ, ಶಿಕ್ಷಪೀಯರರ ಗ್ರಂಥಗಳನ್ನು ಕನ್ನಡಿಸಿದ್ದು, ಅವರಲ್ಲಿ ವಾಸುದೇವಾಚಾರ್ಯರ ಕೃತಿಗಳೇ ಮಿಗಿಲಾಗಿವೆಂದು ಸಿದ್ಧಪಡಿಸಿದರು. ರಾತ್ರಿ ಹತ್ತುಗಂಟೆಯವರೆಗೆ ಸಭೆ ಸಾಗಿದ್ದರೂ, ಜನರೆಲ್ಲ ಉತ್ಸಾಹದಿಂದ ಕಡೆಯವರೆಗೆ ಕುಳಿತು, ಅಧ್ಯಕ್ಷರ ಭಾಷಣವನ್ನು ಸಂಪೂರ್ಣವಾಗಿ ಕೇಳಿ ಆನಂದಪಟ್ಟರು. ಆ ಮೇಲೆ ಅತ್ತರು ಹೂಮಾಲೆ ರುಚಿಕರವಾದ ತಾಂಬೂಲಗಳನ್ನು ಸಭಿಕರು ಸ್ವೀಕರಿಸಿ, ಉತ್ಸವಮಂಡಲದವರು ಸಿದ್ಧಪಡಿಸಿದ ಉಪಹಾರವನ್ನು ತೆಗೆದುಕೊಂಡು, ಎಲ್ಲರೂ ಆನಂದದಿಂದ ಮನೆಗೆ ತೆರಳಿದರು. ಅದೇರಾತ್ರಿ ವಾಸುದೇವಾಚಾರ್ಯರ ಹಿರಿಯಮಕ್ಕಳಾದ ಶ್ರೀ ಸ್ವಾಮಿರಾಚಾರ್ಯರು ಹೊರಗಿನಿಂದ ಬಂದ ಅತಿಥಿಗಳಿಗೂ, ಇಲ್ಲಿಯ ವಾಸುದೇವನ ಭಕ್ತರಿಗೂ, ಮಿಷ್ಟಾನ್ನವನ್ನೀಡಿ ತೃಪ್ತಿಗೊಳಿಸಿದರು. ಸಾಯಂಕಾಲದ ಆರುಗಂಟೆಗೆ ಪ್ರಾರಂಭವಾಗಿ, ರಾತ್ರಿ ೧ ಗಂಟೆಯವರೆಗೆ ಈ ಸಮಾರಂಭವು ಅತ್ಯಂತ ಉತ್ಸಾಹದಿಂದ ನಡೆಯಿತು.

ಮರುದಿನ ಹಾರ್ಡಿಂಜ ಲಾಯಬ್ರರಿಯಲ್ಲಿ ಶ್ರೀ ತಾತಾಚಾರ್ಯರು 'ಟೊಳ್ಳುಗಟ್ಟಿ' ಯನ್ನು ಓದಿ ಅದರಲ್ಲಿಯ ಹಾಸ್ಯರಸ, ಕಲ್ಪನಾ ಚಾತುರ್ಯಗಳ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಟ್ಟರು. ರಸಿಕ ರಂಗನು ಶ್ರೀಧರ ಕೃತ 'ನೌಕಾಕ್ರೀಡೆ' ಯನ್ನು ಹಾಡಿ, ಪ್ರೇಕ್ಷಕರನ್ನು ಕಾವ್ಯಸೃಷ್ಟಿಯಲ್ಲಿ ತಿರುಗಾಡಿಸಿ, ಆನಂದಗೊಳಿಸಿದನು. ಕಡೆಗೆ 'ವಸಂತಯಾಮಿನಿ ಸ್ವಪ್ನಚಮತ್ಕಾರ'ದಲ್ಲಿಯ ಕೈ ಜೋಳಿಗೆಯ ನಾಟಕದ ಪ್ರಸಂಗವನ್ನು ಪ್ರೌಢವಿದ್ಯಾರ್ಥಿಗಳು ಪ್ರಯೋಗಿಸಿ, ಎಲ್ಲರನ್ನೂ ಹಾಸ್ಯದಿಂದ ಸಂತುಷ್ಟಗೊಳಿಸಿದರು. ಈ ಉತ್ಸವದಲ್ಲಿ ಭಾಗತೆಗೆದುಕೊಂಡ ವಿದ್ಯಾರ್ಥಿಗಳಿಗೆ, ವಾಸುದೇವಾಚಾರ್ಯರ ಗ್ರಂಥಗಳನ್ನು ಶ್ರೀ ತಾತಾಚಾರ್ಯರು, ಪಾರಿತೋಷಕವಾಗಿ ಹಂಚಿದನಂತರ ಶ್ರೀ ಧಾರವಾಡ, ವಕೀಲರು ಎಲ್ಲರನ್ನೂ ಅಭಿನಂದಿಸಿ ಈ ಚಿತ್ರಪಟ ಅನಾವರಣಕಾರ್ಯವು ಇಷ್ಟೊಂದು ವೈಭವದಿಂದ ಯಶಸ್ವಿಯಾಗಲು ಶ್ರೀಯುತರುಗಳಾದ ಜೋರಾಪುರ ಗುರುರಾಯರೂ, ಮಂಗಳವೇಢೆ ಶ್ರೀನಿವಾಸರಾಯರೂ ಕಾರಣರೆಂದೂ, ಇದರಿಂದ ಬಾಗಲಕೋಟೆಯ ಮುಂದಿನ ಸಾರ್ವಜನಿಕ ಕಾರ್ಯಗಳು ಯಶಸ್ವಿಯಾಗುವ ಚಿತ್ರಪಟವು ತಮ್ಮ ಮುಂದೆ ಬಂದುನಿಲ್ಲುವದೆಂದೂ ಹೇಳಿದರು. ಹೀಗೆ ಅತ್ಯಂತ ಉತ್ಸಾಹದಿಂದ ೨ ದಿನಗಳವರೆಗೆ ನಡೆದ ವಾಸುದೇವನ ಉತ್ಸವವು ಬಹು ವಿಜೃಂಭಣೆಯಿಂದ ಕೊನೆಗಂಡಿತು.

(೬ ನೇ ಪುಟ ನೋಡಿ)

ನಾಲುವಡಿ ಕೃಷ್ಣ

ನಾಲುವಡಿ ಕೃಷ್ಣನು ನಮ್ಮ ನಾಡಿಗೊಡೆಯನು ಮಾತ್ರವಲ್ಲ. ನಮ್ಮ ನಾಡಿನ ಜೀವನಾಡಿಗೆ ಮೂಲಸ್ಥಾನವು. ನಮ್ಮ ಮನೋರಾಜ್ಯದ ಮೇಲೆ ಆತನ ಅರಸುತನವು ಅತಿಶಯವಾಗಿ ಉಂಟು; ಅದು ಹಿತವಾಗಿಯೂ ಉಂಟು.

ಈ ಕೃಷ್ಣನು ಆ ಗರ್ಭ ಶ್ರೀಮಂತ—ಅಲ್ಲ—ಅರಸನಲ್ಲವೇ! ಆದರೇನು? ಕಡುಬಡವನು. ಆ ಬಡತನವು ಅವನಾಗಿ ಅವನು ಸ್ವೀಕಾರ ಮಾಡಿದುದು. ಅವನ ಅರಸುತನವೆಲ್ಲ ಬಡತನದೊಳಗಿಹುದು. ನೆಲದೊಳಗಿದ್ದು ಅದಕ್ಕೆ ತಾಕದಂತಿರುವ ಜೀವನವು ಅವನದು. ಪೂರ್ವಾಚಾರಗಳಲ್ಲಿ ಗೌರವಿದ್ದು ಹೊಸಹೊದಿಕೆಗಳನ್ನು ನಿರಾಕರಿಸದ ನಡತೆಯಾತನದು.

ಎಲ್ಲ ಮತದವರನ್ನೂ ಪೂಜ್ಯಭಾವದಿಂದ ಕಾಣುವ ವಿಶುದ್ಧವಾದ ಧರ್ಮಬುದ್ಧಿಯು ಅರಸನದು. ನಾ ಹೆಚ್ಚು ತಾ ಹೆಚ್ಚು ಎಂದು ಕಾದಾಡುವ ಧರ್ಮ ಪಂಥದವರನ್ನು ಹುಚ್ಚರೆಂದು ತಿಳಿದು, ಹೆಚ್ಚುತನದ ಭಾವಯುಳ್ಳವರಿಗೆ ಯಾರೊಬ್ಬರಿಗೂ ಬಂಧವಿಮೋಚನೆಯಾಗಲಾರದೆಂಬ ವೇದಾಂತ ರಹಸ್ಯವ ಅರಿತವನೀತನು.

ಇಲ್ಲವಾದರೆ ಈ ಸಮಯದಲ್ಲಿ ಅಖಿಲ ಕರ್ನಾಟಕ ದೇಶವೇ ಆನಂದೋತ್ಸಾಹಗಳಿಂದ ಮೈ ಮರೆಯಲೇನು ಕಾರಣ! ಎಲ್ಲೆಲ್ಲಿಯ ಕನ್ನಡಿಗರೂ ಎದ್ದು ಅಲ್ಲಿಂದಲೇ ಕೃಷ್ಣನಿಗೆ ತಮ್ಮ ಭಕ್ತಿಯ ಕಾಣಿಕೆಯನ್ನು ಅರ್ಪಿಸಲೇನು ಕಾರಣ?

ಹಿರಿಯರ ಸಂಸ್ಕೃತಿಯಲ್ಲಿ ಹಿಗ್ಗಿ ಅವರ ಆದರ್ಶಕ್ಕೆಳ್ಳಷ್ಟು ಕೊರತೆಯುಂಟುಮಾಡದೆ ತಮ್ಮ ಜೀವನ ಚರ್ಯೆಯನ್ನು ನಡೆಸುತ್ತಿರುವುದು! ಆಚಾರ ವ್ಯವಹಾರಗಳಲ್ಲಿ ಹಿಂದಿನವರಾರಿಗೂ ಯಾವ ಬಗೆಯಲ್ಲೂ ಮನಸ್ಸಿಗೆ ಅಸಮಾಧಾನವುಂಟು ಮಾಡದಿರುವುದು! ಆಶ್ರಮ ಧರ್ಮಗಳನ್ನು ಗೆರೆ ದಾಟದೆ ಅನುಸರಿಸುವುದು! ಸಂಧ್ಯಾಕಾಲಗಳಲ್ಲಿ ಸ್ವಯಂ ದೇವತಾರ್ಚನೆ, ಶ್ರೀ ಪರಕಾಲಮಠ ಶ್ರೀ ಶೃಂಗೇರಿ ಮಠ ಮುಂತಾದ ಗುರುಸ್ಥಾನಗಳಲ್ಲಿ ಅವರಿಗಿರುವ ಶ್ರದ್ಧಾಭಕ್ತಿ [illegible]ಗಳನ್ನು ಹೇಗೆ ತಾನೇ ವಿವರಿಸಲಾದೀತು?

ಇಂದು ಒಂದು ಮಸೀದಿಯನ್ನು ತೆರೆದು, ಆ ಉತ್ಸವದಲ್ಲಿ ಭಾಗಿಗಳಾಗುವರು. ನಾಳೆ ಜೈನ ಪರಿಷದುತ್ಸವವನ್ನು ಮೊದಲಿಟ್ಟು ಮುಸ್ಲಿಂ ಕ್ರಿಶ್ಚನ್ ಸಭಾಮಂದಿರಗಳಲ್ಲಿ ಬೆರೆತು ಹೋಗುವರು. ಹರಿ ಹರನ ಧ್ಯಾನದಲ್ಲಿ ಮೈ ಮರೆಯುವರು. ಹೆಸ್ಟೀಕ ಭಾರತಭಕ್ತರನೇಕರು ಹೇಳಿದಂತೆ ಇವರು ರಾಜರ್ಷಿಗಳೇ ಸರಿ.

ನಾನು ಬ್ರಾಹ್ಮಣರಿಗೆ ಮಾತ್ರ ಅರಸನೋ? ಇಲ್ಲವೆ, ನನ್ನ ಪ್ರಜೆಗಳಿಗೆಲ್ಲ ಅರಸನೋ? ಎಂಬುದಾಗಿ ಒಮ್ಮೆ ಪ್ರಶ್ನೆ ಹಾಕಿದ ಈ ಮಹಾರಾಜನ ಹೃದಯವನ್ನು ತಿಳಿದುಕೊಳ್ಳುವುದು ಅಷ್ಟು ಕಷ್ಟವೆ?

ಈತನಿಗೆ ತನ್ನ ಪ್ರಜೆಗಳೆಂಬ ಒಂದೇ ಭಾವನೆಯುಂಟು ಅಷ್ಟೇ! ಶ್ರೇಷ್ಠವರ್ಗ ಕನಿಷ್ಠವರ್ಗವೆಂಬ ಯೋಚನೆಯೇ ತಲೆಗೆ ಬರುವದಿಲ್ಲ. ಪಂಚಮರ ಉದ್ಧಾರಕ್ಕಾಗಿ ಆವನು ನೀಡಿರುವ ಕೃಪಾಹಸ್ತವೇ ಇದಕ್ಕೆ ಸಾಕ್ಷಿ.

ಕೃಷ್ಣರಾಜ-ಒಡೆಯರು ಕನ್ನಡಿಗರು ಮೇಲೆ ಕನ್ನಡಿಗರು. ದಿವಾನರಾಗಲಿ, ಸಚಿವರಾಗಲಿ ಮತ್ತಾರೇ ಆಗಲಿ ಅವರ ಬಳಿ ಹೋದಾಗ ಅವರು ಕನ್ನಡದಲ್ಲೇ ಮಾತನಾಡಿಸುವರು (ಕನ್ನಡ ಬಾರದ ಅಧಿಕಾರಿಗಳಿದ್ದರೆ ಮಾತ್ರ ಅವಕಾಶವಿಲ್ಲ) ಯಾರು ಅವರನ್ನು ನೋಡಬೇಕೆಂದು ಹೋದರೂ ಕನ್ನಡದಲ್ಲೆ ಮಾತನಾಡಬೇಕು. ಆ ಕನ್ನಡತ್ವವು ಮೇರೆ ಮೀರಿದೆ. ಆದರ ಪ್ರಭಾವವು ಅಲ್ಲಲ್ಲಿಯ ಹೊಸ ಕುರುಹುಗಳಿಂದ ಕಂಡು ಬರುತ್ತಲಿದೆ.

ಮತ್ತೊಂದು ಮಾತ್ರ. ಕೃಷ್ಣರಾಜ ಒಡೆಯರು ಮೊದಲು ಉಜ್ವಲ ದೇಶಭಕ್ತಿಯಿಂದ ಕೂಡಿದ ಭಾರತೀಯರು ಅನಂತರ ಕನ್ನಡಿಗರು, ಆ ಮೇಲೆ ಮೈಸೂರ ಅರಸರು. ಈ ಮಾತನ್ನು ಸಾರ್ಥಕಗೊಳಿಸುವ ಸಲುವಾಗಿ ನಾನು ಉದಾಹರಣೆಗಳನ್ನು ಪೋಣಿಸಬೇಕಿಲ್ಲ, ಮಹಾರಾಜರು ಶ್ರವಣ ಬೆಳ್ಗೊಳದ ಅಖಿಲ ಭಾರತ ಜೈನ ಪರಿಷತ್ತಿನಲ್ಲಿ ಮಾಡಿದ ಭಾಷಣವನ್ನು ಎಲ್ಲರ ಲಕ್ಷ್ಯಕ್ಕೂ ಎಳೆಯಬಯಸುವೆನು. ಮಹಾತ್ಮ ಗಾಂಧಿಯವರ ಆರೋಗ್ಯ ಭಾಗ್ಯವು, ಕರ್ನಾಟಕದಲ್ಲಿ ಕಾಲಿಟ್ಟ ಕೂಡಲೇ, ಕುಂದಲು, ಕೂಡಲೇ ಅವರಿಗೆ ರಾಜಾಹ್ವಾನವಿತ್ತು, ನಂದೀ ದುರ್ಗದ ಮೇಲಿನ ಭವನವನ್ನೂ ಬೆಂಗಳೂರು ಮೈಸೂರುಗಳಲ್ಲಿ (ಕುಮಾರಪಾರ್ಕ) ಸರ್ ಕೆ. ಶೇಷಾದ್ರಿ ಅಯ್ಯರ ಭವನಗಳನ್ನೂ ಅವರ ವಾಸಕ್ಕೆ ಅಳವಡಿಸಿದುದನ್ನು; ಮತ್ತೂ ಖಾದೀ ಸಂದೇ ಚರಕಸಂದೇಶಗಳ ಸಾರವರಿತು ಮೈಸೂರ ದೇಶದಲ್ಲಿ ಅವುಗಳ ವ್ಯಾಪ್ತಿಗೆ ಹಾಕಿದ ಸಹಾನುಭೂತಿಯನ್ನೂ ವಾಚಕರ ನೆನಪಿಗೆ ತರುವೆನು.

೨೫ ವರ್ಷಗಳ ರಾಜ್ಯಭಾರ ಮಾಡಿ, ಭರತಖಂಡಕ್ಕೇ ಕೀರ್ತಿ ತಂದ ಅರಸರಿವರು! ಅದೇಕೆ ಅಂತರ ರಾಷ್ಟ್ರೀಯ ಪ್ರಸಂಗಗಳಲ್ಲೂ ಮೈಸೂರೊಡೆಯರ ಮೇಲುತನವು ಆಗಾಗ್ಗೆ ಚರ್ಚೆಗೆ ಬಂದು ಕನ್ನಡಿಗರ ಕೀರ್ತಿ ಮಾತ್ರವೇಕೆ ಭರತಖಂಡದ ಕೀರ್ತಿಯೇ ವಿಸ್ತಾರವಾಗಿದೆ.

ಇಂತಹ ಕರ್ನಾಟಕ ಅರಸನನ್ನು ಹೆತ್ತ ಮಾತೆಯು ಧನ್ಯಳಲ್ಲವೆ! ಭುವನೇಶ್ವರಿಯು ಕೃಪಾನಿಧಿಯು!

—ತಿರುಮಲೆ ತಾತಾಚಾರ್ಯ ಶರ್ಮ

ಮೈಸೂರಲ್ಲಿ ದೊಡ್ಡಗಡಿಯಾರ

ಶ್ರೀಮನ್ಮಹಾರಾಜರವರ ರಜತೋತ್ಸವದ ಸ್ಮರಣಾರ್ಥವಾಗಿ ರಾಜಧಾನಿಯ ದೊಡ್ಡ ಗಡಿಯಾರದ ಕಟ್ಟಡವನ್ನು ೯೦ ಅಡಿಗಳೆತ್ತರಿಸಿ ೩ ಮೈಲುದೂರದವರೆಗೆ ಕೇಳಿಬರುವಂತಹ ಗಂಟೆಯನ್ನಿಡಿಸಬೇಕೆಂದು ಅರಮನೆಯ ಅಧಿಕಾರಿಗಳು ೧೦ ಸಾವಿರ ರೂಪಾಯಿಗಳ ವರೆಗೆ ಚಂದಾ ದ್ರವ್ಯವನ್ನು ಕೂಡಿಸಿರುವರಷ್ಟೆ! ಈಗ ಗಡಿಯಾರದ ಕಟ್ಟಡವು ಎತ್ತರಿಸಲ್ಪಟ್ಟು, ಒಂದು ಅಗಾಧವಾದ ಘಂಟೆಯನ್ನು ಶಿಖರದ ಮಧ್ಯ ಭಾಗದಲ್ಲಿಟ್ಟಿರುವರು. ಮತ್ತೂ ಅದರ ಕೆಳಗೆ ಗಡಿಯಾರವನ್ನಿಡಲು ನಾಲ್ಕು ಪಾರ್ಶ್ವಗಳಲ್ಲೂ ಚಕ್ರಾಕಾರವಾಗಿ ಗೂಡುಗಳು ಬಿಡಲ್ಪಟ್ಟವೆ. ವಿದ್ಯುಚ್ಛಕ್ತಿಯ ಸಹಾಯದಿಂದಲೇ ಗಡಿಯಾರವು ನಡೆಯುವುದಲ್ಲದೆ ಘಂಟೆಯೂ ಬಾರಿಸುವದು. ರಾತ್ರಿವೇಳೆ ಬಹುದೂರದ ವರೆಗೆ ಘಂಟೆಯ ಮುಳ್ಳುಗಳು ಕಾಣುವಂತೆ ಅತ್ಯಂತ ಪ್ರಕಾಶಮಾನವಾದ ವಿದ್ಯುದ್ದೀಪವು ಹೊತ್ತಿಸಲ್ಪಡುವುದು ಈ ಗಡಿಯಾರದ ಕಟ್ಟಡವು ಪೂರೈಸಿದಮೇಲೆ ಒಂದು ಪ್ರೇಕ್ಷಣೀಯ ವಸ್ತುವೇ ಆಗುವದೆನ್ನುವುದರಲ್ಲಿ ಸಂದೇಹವಿಲ್ಲ.

ಮುಂಬೈ ಸರಕಾರದ ಗಾಝೀಟ.

ಶ್ರೀ ನಾಡಿಗರು ೨ ನೇ ವರ್ಗದ ಡೆಪುಟಿ ಕಲೆಕ್ಟರರಾಗಿದ್ದಾರೆ.

ಮಾಸ್ತರ ಸಾ|| ರಜೆಯಿಂದ ಬಂದಮೇಲೆ ಧಾರವಾಡದ ಕಲೆಕ್ಟರರಾಗುವರು; ಈಗಿನ ಕಲೆಕ್ಟರ ವೆಬ್ಬರು ಬೆಳಗಾವಿ ಕಲೆಕ್ಟರರಾಗುವರು. ರಜೆಯಿಂದ ಬಂದಮೇಲೆ ಶ್ರೀ ಬಸ್ಕವಿಲ್ಲೀರವರು ಕಾರವಾರದ ಕಲೇಕ್ಟರರಾಗುವರು; ಈಗಿನವರಾದ ಶ್ರೀ ಮಾಡೇಕರರು ಲ್ಯಾಂಡ ರಿಕಾರ್ಡದ (ದಕ್ಷಿಣ ಭಾಗ) ಸುಪರಿಂಟೆಂಡೆಂಟರಾಗುವರು.

ಶ್ರೀ ಬಿ. ಸಿ. ಪಾಟೀಲರು ಇಸ್ಲಾಮಪೂರದ ೨ ನೇ ವರ್ಗದ ಸಬ್‌ಜಡ್ಜರಾಗುವರು.

“ರಾಜರ್ಷಿ ಕರ್ಮಯೋಗಿ”

ಅಲ್ಲೊಬ್ಬ ನಮಗಿಹನು ನಾಯಕನು: ಭಕ್ತಿಯಲಿ ನಿಲುನಿಲುಕಿ

ಬನ್ನಿ ಕೆಳೆಯರೆ, ನಮ್ಮ ಬಾಳಿಕೆಯ ಹಾಡಿಕೆಯನೊಪ್ಪಿಸುವ,
ಕೈಕೊಳುವ ದೊರೆಯ ಗುರಿಯ,
ನೋಡಿಯೂ ಕನದು— ಕನ್ನಡಿಗನೆಯ ಹಸಗೆಯ್ದು ಬೆಳಗಿದಂಕೆಯು,
ಬೆಳಗಿ ಊರ, ನಾಡ,
ಹಸಗೆಯು, ಹೊಸಗೆಯು ನೆಂಬೊಲುವೆ: ನಾವೆಲ್ಲಾ ನಾಯಕನ

೭ ರಮೇಶ ಲಲಿತಾ ನಾಟಕವು.

ಮಹಾಕವಿ ಶೇಕ್ಸಪೀಯರನ ‘ರೋಮಿಯೋ ಆ್ಯಂಡ ಜ್ಯೂಲಿಯೇಟ’ದ ಅನುವಾದವು.

೮ ಪತಿವಶೀಕರಣ ನಾಟಕ

ಸಾಮಾಜಿಕ ನಾಟಕ

ಆಂಗ್ಲ ಹಾಸ್ಯಕಾರನಾದ ಆಲಿವ್ಹರ ಗೋಲ್ಡಸ್ಮಿತ್ಥನ ‘ಶೀಸ್ಟೂಪ್ಸ ಟು ಕಾಂಕರ’ದ ಅನುವಾದವು.

೯ ಕವಿತೆಗಳು

ಸಣ್ಣ ಸಣ್ಣ ಕವಿತೆಗಳ ಗುಚ್ಛವು.

೧೦ ನಿಬಂಧಗಳು (ಭಾಗ ೨.)

ಅತ್ಯುತ್ತಮವಾದ ಸಣ್ಣ ದೊಡ್ಡ ಹಾಸ್ಯಕಾರಕ ಕಥೆಗಳು.

ಹರಳುಗಳು ದೊರೆಯುವ ಸ್ಥಳ } ಸ್ವಾಮಿ. ರಾ. ಕೆರೂರ.
ಕಿಲ್ಲೆ ಬಾಗಲಕೋಟೆ
ಜಿಲ್ಹೆ ವಿಜಾಪೂರ.

ಪಿ ಮು. ಮಂ ಬಾ.

ಬಿನ್ನಹ.

ಲಕ್ಷ್ಮೀಃಕೌಸ್ತುಭ ಪಾರಿಜಾತಕ ಸುರಾಧನ್ವಂತರಿಶ್ಚಂದ್ರಮಾಃ
ಧೇನುಃಕಾಮದುಘಾ ಸುರೇಶ್ವರಗಜೋ ರಂಭಾದಿದೇವಾಂಗನಾಃ।
ಅಶ್ವಃಸಪ್ತಮುಖೋವಿಷಂ ಹರಿಧನುಃಶಂಖೋಮೃತಂಚಾಂಬುಧೇ
ರತ್ನಾನೀಹ ಚತುರ್ದಶ ಪ್ರತಿದಿನಂ ಕುರ್ವಂತು ವೋ ಮಂಗಲಂ॥

ನನ್ನ ತಂದೆಯವರಾದ ವೈ॥ ಕೆರೂರ ವಾಸುದೇವಾಚಾರ್ಯರು ಬರೆದ ಕಥೆಕಾದಂಬರಿ ನಾಟಕ ಕವಿತೆಗಳನ್ನೆಲ್ಲ ಮುದ್ರಿಸಿ ಕನ್ನಡಿಗರ ಮುಂದಿರಿಸಬೇಕೆಂಬ ಒಲವಾದ ಇಚ್ಛೆ. ಆದರೆ ಅಷ್ಟೊಂದು ಅನುಕೂಲಪರಿಸ್ಥಿತಿಯಿಲ್ಲ. ಹಾಗೂ ಹೀಗೂ ಮಾಡಿ ವಾಸುದೇವನ ಕೌಸ್ತುಭಗಳಲ್ಲಿ ನಾಲ್ಕು ಹರಳುಗಳನ್ನು ಮಾತ್ರ ತಮ್ಮ ಮುಂದರಿಸಿದ್ದೇನೆ.

ಉಳಿದ ಹತ್ತು ಹರಳುಗಳ ಬಗ್ಗೆ (ಕನ್ನಡಿಗರೆಲ್ಲರೂ ಈಗ್ಗೆ ಆಜ್ಞಾಗಿದ್ದ ನಾಲ್ಕು ಹರಳುಗಳನ್ನು ಕೂಡಲೇ ತರಿಸಿಕೊಂಡು) ನನಗೆ ನೆರವಾದಲ್ಲಿ ಅವುಗಳನ್ನೂ ಸಹ ಬೇಗನೇ ಪ್ರಸಿದ್ಧಮಾಡುವೆನು.

ಗ್ರಾಹಕರು ತಮಗೆ ಬೇಕಾದ ಹರಳುಗಳ ಹೆಸರುಗಳನ್ನು ಬೇಗನೇ ತಿಳಿಸಿ ತಮ್ಮ ಹೆಸರನ್ನು ನೋಂದಾಯಿಸುವರೆಂದು ನಂಬಿದ್ದೇನೆ.

ಬಾಗಲಕೋಟೆ ತಾ ೨೪-೭-೨೭ } ಸಜ್ಜನ ವಿಧೇಯ ಸ್ವಾಮಿ. ರಾ. ಕೆರೂರ.

ರಾಜರು ತಮ್ಮಲ್ಲಿರುವ ಅಮೂಲ್ಯವಾದ ಗುಣಗಳಿಂದಲೂ, ಪ್ರಜಾವಾತ್ಸಲ್ಯದಿಂದಲೂ ಅಖಿಲ ಭರತಖಂಡದಲ್ಲಿ ಹೆಸರಾಗಿದ್ದಾರೆ ಮೈಸೂರಿನ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಪ್ರಚಂಡವಾದ ಉದ್ದಿಮೆಗಳ ಕಾರ್ಯಗಳನ್ನು ಕೈಕೊಂಡು ಕೋಟ್ಯಾವಧಿ ರೂಪಾಯಿಗಳನ್ನು ವ್ಯಯ ಮಾಡಿ, ಅದ್ಭುತವಾದ ಶಾಸ್ತ್ರೀಯ ಉಪಕರಣಗಳನ್ನು ತಂದು, ಜಗತ್ತಿನ ಪ್ರಮುಖ ರಾಷ್ಟ್ರಗಳಲ್ಲಿಯ ಮಹಾ ಮಹಾ ತಜ್ಞರು ಸಹ ಆಶ್ಚರ್ಯಗೊಳ್ಳುವಂತೆ ಮಾಡಿದ್ದಾರೆ?

ರಾಜ್ಯದಲ್ಲಿ ನೆರೆಯುವ ಅಂತರ ರಾಷ್ಟ್ರೀಯ ಅಂಚೆ ಇಲಾಖೆಯ ವಿಮಾನುಗಳ ಪರಿಷತ್ತಿಗೆ (International Air Mails Conference) ಭರತಖಂಡದ ಪ್ರತಿನಿಧಿಯಾಗಿ ಈ ಕನ್ನಡಿಗನು ಹಿಂದುಸ್ಥಾನ ಸರಕಾರದಿಂದ ಆರಿಸಲ್ಪಟ್ಟಿದ್ದಾನೆ. ಶ್ರೀ. ಗುರುರಾಯರು ವೆಡನ್ನಿಸ ಒಸೇ ಕಾ॥ ದಿನ ಮುಂಬೈಯಿಂದ ಹಾಲಂಡಕ್ಕೆ ತೆರಳಿದರು ಇಂಗ್ಲಂಡ, ಫ್ರಾನ್ಸ, ಹಾಲಂಡ ದೇಶಗಳನ್ನು ಸಂದರ್ಶಿಸಿ ಇವರು ಆಕ್ಟೋಬರದಲ್ಲಿ ಮರಳಿ ಹಿಂದುಸ್ಥಾನಕ್ಕೆ ಬರುವರು

ಸ್ಥಾನದ ಆದ್ಯ ಪ್ರವರ್ತಕರೂ ದರಿದ್ರ ನಾರಾಯಣನ ಸೇವೆಯಲ್ಲಿ ನಿರತರೂ ಆದ ಪ್ರಫುಲ್ಲ ಚಂದ್ರ ರಾಯರೂ ಇವರೇ ಮೊದಲಾದರೂ, ಭರತಖಂಡದ ಎಲ್ಲ ಮುತ್ಸದ್ದಿಗಳ ಪತ್ರಕರ್ತರೂ ಈ ಕನ್ನಡ ರಾಜನನ್ನು ಹೊಗಳಿದ್ದು, ಶ್ರೀಕೃಷ್ಣರಾಜ ಒಡೆಯರವರ ಸದ್ಗುಣ, ವಿಶಾಲದೃಷ್ಟಿ, ರಾಷ್ಟ್ರಾಭಿಮಾನ, ಧರ್ಮಾಭಿಮಾನಗಳಿಗಾಗಿಯೇ? ಇವೆಲ್ಲ ಕನ್ನಡಿಗರು ಅಭಿಮಾನ ಹೊಂದತಕ್ಕ ಸಂಗತಿಗಳಲ್ಲವೇ?

ನಾಲುವಡಿ ಕೃಷ್ಣ

ನಾಲುವಡಿ ಕೃಷ್ಣನು ನಮ್ಮ ನಾಡಗೊಡೆಯನು ಮಾತ್ರ ವಲ್ಲ. ನಮ್ಮ ನಾಡಿನ ಜೀವನಾಡಿಗೆ ಮೂಲ ಸ್ಥಾನವು. ನಮ್ಮ ಮನೋರಾಜ್ಯದ ಮೇಲೆ ಆತನ ಅರಸುತನವು ಅತಿಶಯವಾಗಿ ಉಂಟು; ಅದು ...

ಮತ್ತೊಂದು ಮಾತ್ರ. ಕೃಷ್ಣರಾಜ ಒಡೆಯರು ಮೊದಲು ಉಜ್ವಲ ದೇಶಭಕ್ತಿಯಿಂದ ಕೂಡಿದ ಭಾರತೀಯರು ಅನಂತರ ಕನ್ನಡಿಗರು, ಆ ಮೇಲೆ ಮೈಸೂರ ಅರಸರು. ಈ ಮಾತನ್ನು ಸಾರ್ಥಕಗೊಳಿಸುವ ಸಲುವಾಗಿ ನಾನು ಉದಾಹರಣೆಗಳನ್ನು ಪೋಣಿಸಬೇಕಿಲ್ಲ. ಮಹಾರಾಜರು ...

ಕನ್ನಡದಲ್ಲಿ ಸ್ವಾರಸ್ಯವುಳ್ಳ ಕಾವ್ಯ ನಾಟಕ ಕಾದಂಬರಿಗಳು ಇಲ್ಲವೆಂದರೆ, ಕನ್ನಡಿಗರೇ! ಇತ್ತ ಬನ್ನಿ; ಆಧುನಿಕ ವಾಙ್ಮಯ ಸಾಮ್ರಾಟರಾದ ವೈ|| ಕೆರೂರ ವಾಸುದೇವಾಚಾರ್ಯರು ಬರೆದ ಕಥೆ ಕಾದಂಬರಿ ನಾಟಕ ಕವಿತೆಗಳನ್ನು ಓದಿ, ಸಂತುಷ್ಟರಾಗಿರಿ!!

ಅಚ್ಚಾಗಿವೆ! ಅಚ್ಚಾಗಿವೆ!!

ವಾಸುದೇವನ ಕೌಸ್ತುಭಗಳು!

೧ **ಇಂದಿರೆ**
ದ್ವಿತೀಯ ಮುದ್ರಣ:-ಅತ್ಯುತ್ಕೃಷ್ಟವಾದ ಸಚಿತ್ರ ಸಾಮಾಜಿಕ ಕಾದಂಬರಿ ಬೆಲೆ ೨—೮—೦

೨ **ಯಮುಮಹಾರಾಜ**
(ಐತಿಹಾಸಿಕ ಕಾದಂಬರಿ) ೧—೦—೦

೩ **ವಸಂತಯಾಮಿನೀ**
ಸ್ವಪ್ನ ಚಮತ್ಕಾರ ನಾಟಕ.
(ಮಿಡ್‌ಸಮರ ನಾಯಿಟ್ಸ ಡ್ರೀಮದ ರೂಪಾಂತರವು) ೦—೧೪—೦

೪ **ನೀಳ್ಗತೆಗಳು (ಭಾಗ ೧.)**
(ಪ್ರತ್ಯಕ್ಷಬಲ, ಪ್ರೇಮವಿಜಯ, ಟೆಕ್ಕ ಟಿಕ್ಕೆ, ಮಲ್ಲೇಶಿಯ ನಲ್ಲೆಯರು) ೧—೪—೦

ಟಿಪ್ಪಣೀ-ಬುಕ್ಕಶೇಲರುಗಳಿಗೆ ಯೋಗ್ಯ ಕಮಿಶನ್ ಅಂಟಿವೆಚ್ಚ ಬೇರೆ.

ಅಚ್ಚಿನಲ್ಲಿದ್ದ ಕೌಸ್ತುಭಗಳು

ಬೇಗನೇ ಹೊರಬೀಳುವವು.

೧ **ಭ್ರಾತೃಘಾತಕನಾದ ಚಕ್ರವರ್ತಿ ಔರಂಗಜೇಬ**
ಎಂಬ ಅತ್ಯುತ್ತಮವಾದ ಐತಿಹಾಸಿಕ ಕಾದಂಬರಿಯು.

೨ **ಯವನಸ್ತೈರಂಧ್ರಿ**
ಎಂಬ ಮನೋಹರವಾದ ಕಾದಂಬರಿ

೩ **ವಾಲ್ಮೀಕಿ ವಿಜಯ**
ಇದೊಳ್ಳೇ ಪೌರಾಣಿಕ ಕಾದಂಬರಿ

೪ **ಸಂಗೀತ ನಲದಮಯಂತೀ ನಾಟಕ**
ಆಚಾರ್ಯರ ಪ್ರೀತಿಯ ಪೌರಾಣಿಕ ನಾಟಕವು. ಅಭಿನಯಿಸಲು ಯೋಗ್ಯವಾಗಿದೆ.

೫ **ಸಂಗೀತ ರುಕ್ಮಿಣೀಹರಣ ನಾಟಕ**
ಉತ್ತಮವಾದ ಪೌರಾಣಿಕ ನಾಟಕವು.

೬ **ಸುರತ್‌ನಗರದ ಶ್ರೇಷ್ಠಿ ನಾಟಕವು.**
ಮಹಾಕವಿ ಶೇಕ್ಸಪೀಯರನ, 'ಮರ್ಚಂಟ ಆಫ ವೆನಿಸ'ದ ಅನುವಾದವು.

... ಎಲ್ಲ ಪ್ರಜೆಗಳೆಂಬ ಒಂದೇ ಭಾವನೆಯುಂಟು ಅಷ್ಟೇ! ಶ್ರೇಷ್ಟವರ್ಗ ಕನಿಷ್ಟವರ್ಗವೆಂಬ ಯೋಚನೆಯೇ ತಲೆಗೆ ಬರುವದಿಲ್ಲ. ಪಂಚಮರ ಉದ್ಧಾರಕ್ಕಾಗಿ ಆವನು ನೀಡಿರುವ ಕೃಪಾಹಸ್ತವೇ ಇದಕ್ಕೆ ಸಾಕ್ಷಿ.

ಕೃಷ್ಣರಾಜ ಒಡೆಯರು ಕನ್ನಡಿಗರು ವೀರಕನ್ನಡಿಗರು. ದಿವಾನರಾಗಲಿ, ಸಚಿವರಾಗಲಿ ಮತ್ತಾರೇ ಆಗಲಿ ಅವರ ಬಳಿ ಹೋದಾಗ ಅವರು ಕನ್ನಡದಲ್ಲೇ ಮಾತನಾಡಿಸುವರು (ಕನ್ನಡ ಬಾರದ ಅಧಿಕಾರಿಗಳಿದ್ದರೆ ಮಾತ್ರ ಅವಕಾಶವಿಲ್ಲ) ಯಾರು ಅವರನ್ನು ನೋಡಬೇಕೆಂದು ಹೋದರೂ ಕನ್ನಡದಲ್ಲಿ ಮಾತನಾಡಬೇಕು. ಆ ಕನ್ನಡತ್ವವು ಮೇರೆ ಮೀರಿದೆ. ಅವರ ಪ್ರಭಾವವು ಅಲ್ಲಲ್ಲಿಯ ಹೊಸ ಕುರುಹುಗಳಿಂದ ಕಂಡು ಬರುತ್ತಲಿದೆ.

... ಪೂರೈಸಿದಮೇಲೆ ಒಂದು ಪ್ರೇಕ್ಷಣೀಯ ವಸ್ತುವೇ ಆಗುವದೆನ್ನುವುದರಲ್ಲಿ ಸಂದೇಹವಿಲ್ಲ.

ಮುಂಬೈ ಸರಕಾರದ ಗಾಝೇಟ.

ಶ್ರೀ ನಾಡಿಗರು ೨ ನೇ ವರ್ಗದ ಡೆಪುಟಿ ಕಲೆಕ್ಟರರಾಗಿದ್ದಾರೆ.

ಮಾಸ್ತರ ಸಾ|| ರಜೆಯಿಂದ ಬಂದಮೇಲೆ ಧಾರವಾಡದ ಕಲೆಕ್ಟರರಾಗುವರು; ಈಗಿನ ಕಲೆಕ್ಟರ ಪೆಪ್ಪರು ಬೆಳಗಾವಿ ಕಲೆಕ್ಟರರಾಗುವರು ರಜೆಯಿಂದ ಬಂದಮೇಲೆ ಶ್ರೀ ಬಸ್ಸವಿಳ್ಳೀರವರು ಕಾರವಾರದ ಕಲೆಕ್ಟರರಾಗುವರು; ಈಗಿನವರಾದ ಶ್ರೀ ಮುಚೇಕರರು ಲ್ಯಾಂಡ ರಿಕಾರ್ಡದ (ದಕ್ಷಿಣ ಭಾಗ) ಸುಪರಿಂಟೆಂಡೆಂಟರಾಗುವರು.

ಶ್ರೀ ಬಿ. ಸಿ. ಪಾಟೀಲರು ಇಸ್ಲಾಮಪೂರದ ೨ ನೇ ವರ್ಗದ ಸಬ್‌ಜಡ್ಜರಾಗುವರು.

"ರಾಜರ್ಷಿ ಕರ್ಮಯೋಗಿ"

ಆಲ್ಲೊಬ್ಬ ನಮಗಿಹನು ನಾಯಕನು, ಭಕ್ತಿಯಲಿ ನಿಲುನಿಲುಕಿ
ಕಣ್ತುಂಬ ನೋಡುತಿರಲು,
ಅನೆಯಂಬಾರಿಯಲಿ ನಸುನಗೆಯನಿಕ್ಕಲಿಕೆ ಬೀರಿ, ಜನರಕ್ಕರೆಯ
ಸ್ವೀಕರಿಸುವನು.
ಧೀರನಾತನು, ಕುಂಬಿಣಿಗಾಂಭೀರ್ಯದಲಿ ಸತ್ಯವನೆ ಎತ್ತಿ ಹಿಡಿಸುವವನು
ಪ್ರಜೆಯ ತಂದೆ
ಮರೆತು ತನ್ನನು ರಾಜ್ಯಸೇವೆಯಲಿ, ನಲಿಸುವನು ಧರ್ಮವನು
ರಾಜರ್ಷಿ ಕರ್ಮಯೋಗಿ.

ಬನ್ನಿ ಕೆಳೆಯರೆ, ನಮ್ಮ ಬಾಳಕೆಯ ಕಾಣಿಕೆಯನೊಪ್ಪಿಸುವ,
ಕೈಕೊಳುವ ದೊರೆಯ ಗುರಿಯು;
ನೋಡಿಯಾತನದು— ಕನ್ನಡಿಗನೆಯ ಹಸಗೆಯನ್ನು ಬೆಳಗಿದಂತೆಯೆ,
ಬೆಳಗಿ ಊರ, ನಾಡ,
ಹಸಗೆಯ್ವ, ಹೊಸಗೆಯ್ವನೆಂಬೊಲುವೆ. ನಾವೆಲ್ಲರಾ ನಾಯಕನ
ದಳದಿ ದೀಕ್ಷೆ ಪಡೆದು,
ಗೆಲುವ ಬಳಸುವ ಬನ್ನಿ ಬುದ್ಧಿಯನು ಶ್ರದ್ಧೆಯನು, ಕನ್ನಡಿಗರೈಸಿರಿಯ
ಬೆಳೆಯ ಬೆಳಸಿ.

— ಬಿ. ಎಂ. ಶ್ರೀಕಂಠಯ್ಯ
ಎಂ. ಎ. ಬಿ. ಎಲ್.
ರಜಿಸ್ಟ್ರರ ಮೈಸೂರು ವಿಶ್ವವಿದ್ಯಾಲಯ.

ಬ್ರಿಟಿಶ್ ಕನ್ನಡಿಗರಿಗೆ ಮೈಸೂರ ಮಹಾರಾಜರು ಮಾಡಿದುದಾದರೂ ಏನು?

(ಲೇಖಕ-ಓರ್ವ ಬ್ರಿಟಿಶ್ ಕನ್ನಡಿಗ)

"ಇತ್ತಿತ್ತ ಹಲಕೆಲವು ಬ್ರಿಟಿಶ್ ಕನ್ನಡಿಗರು ಮೈಸೂರ ಮಹಾರಾಜರಲ್ಲಿಯೂ ಮೈಸೂರಿನವರಲ್ಲಿಯೂ ಒಳ್ಳೇ ಪ್ರೀತಿ, ಭಕ್ತಿ, ವಿಶ್ವಾಸಗಳನ್ನು ಪ್ರಕಟಿಸತೊಡಗಿದ್ದಾರೆ. ಅದಕೆ ಇದು ಹೇಗೆ ಸರಿಯೋ ನಮಗೆ ತೋರದು ಮಹಾರಾಜರಾಗಲೀ, ಮೈಸೂರ ಕನ್ನಡಿಗರಾಗಲೀ ನಮಗೆ ಮಾಡಿದ್ದಾದರೂ ಏನು? ನಾವು ಅಷ್ಟೊಂದು ಪ್ರೇಮವನ್ನು ತೋರ್ಪಡಿಸಲು ಕಾರಣವಾದರೂ ಏನಿದೆ" ಎಂದು ಹಲಕೆಲ ಹಂಡಬಂಡ ಕನ್ನಡಿಗರೂ ಇಂತಹ ಕನ್ನಡಿಗರ ವರ್ಚಸ್ಸಿಗೆ ಒಳಗಾದವರೂ ಕೇಳುತ್ತಿರುವರು. ಆದುದರಿಂದ ಈ ವಿಷಯವನ್ನು ರಜತ ಮಹೋತ್ಸವ ಸಂಚಿಕೆಯಲ್ಲಿ, 'ಕನ್ನಡಿಗ'ನ ಸಂಪಾದಕರ ಅಪ್ಪಣೆಯ ಮೇರೆಗೆ, ವಿವೇಚಿಸತೊಡಗಿರುವೆನು.

ಸದ್ಗುಣಿಯಾದ ಪುರುಷನು ಎಲ್ಲಿಪ್ಪರೂ ಎಲ್ಲರಿಗೂ ಪ್ರಿಯನಾಗುವನು. ಶ್ರೀಮತ್ ಈಗಿನ ಮಹಾರಾಜರು ತಮ್ಮಲ್ಲಿರುವ ಅಮೂಲ್ಯವಾದ ಗುಣಗಳಿಂದಲೂ, ಪ್ರಜಾವಾತ್ಸಲ್ಯದಿಂದಲೂ ಅಖಿಲ ಭರತಖಂಡದಲ್ಲಿ ಹೆಸರಾಗಿದ್ದಾರೆ ಮೈಸೂರಿನ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಪ್ರಚಂಡವಾದ ಉದ್ಯೋಗಿಕ ಕಾರ್ಯಗಳನ್ನು ಕೈಕೊಂಡು ಕೋಟ್ಯಾವಧಿ ರೂಪಾಯಿಗಳನ್ನು ವ್ಯಯ ಮಾಡಿ, ಅದ್ಭುತವಾದ ಶಾಸ್ತ್ರೀಯ ಉಪಕರಣಗಳನ್ನು ತಂದು, ಜಗತ್ತಿನ ಪ್ರಸಿದ್ಧ ರಾಷ್ಟ್ರಗಳಲ್ಲಿಯ ಮಹಾ ಮಹಾ ತಜ್ಞರು ಸಹ ಆಶ್ಚರ್ಯಗೊಳ್ಳುವಂತೆ ಉದ್ಯೋಗಗಳ ಪ್ರಗತಿಯನ್ನು ಈಗಿನ ಮಹಾರಾಜರು ಮೈಸೂರಲ್ಲಿ ತೋರಿಸುತ್ತಲಿದ್ದಾರೆ ಅಂತೆಯೇ ಮೈಸೂರಿನಲಿ ಹುಟ್ಟುತ್ತಿರುವ ಉತ್ತಮ ರೇಶಿಮೆಯು ಫ್ರಾನ್ಸಕ್ಕೆ ಸಹ ಹೋಗುತ್ತದೆ. ಭದ್ರಾವತಿ ಕಾರಖಾನೆಯಲಿಯ ಒಳ್ಳೇ ಕಬ್ಬಿಣ ಹಾಗೂ ಉಕ್ಕಿನ ಮೂಲಕ ಭಾರತೀಯ ಹಾಗೂ ಪರರಾಷ್ಟ್ರೀಯ ತಜ್ಞರಿಂದ ಆನೊಂದು ಹೊಗಳಲ್ಪಟ್ಟಿದೆ. ಗಂಧದ ಎಣ್ಣೆ ಗಂಧದ ಕಟ್ಟಿಗೆಯ ಕೆತ್ತನೆಯ ಒಡವೆಗಳು ಹಸ್ತಿದಂತದ ಜೀನಸುಗಳು ಇತ್ಯಾದಿ ಪರರಾಷ್ಟ್ರಕ್ಕೆ ಹೋಗುತ್ತವೆ. ಮೈಸೂರು ಸೋಪ್ ಭರತಖಂಡದ ಯಾವತ್ತೂ ಭಾಗಗಳಲ್ಲಿಯ ಶೃಂಗಾರಪ್ರಿಯರ ಮನೆಗಳಲ್ಲಿ ಮನೆ ಮಾಡಿದೆ.

ಭಾರತೀಯ ಮುಂದಾಳುಗಳಾದ ಲಾಲಾ ಲಜಪತರಾಯರೂ, ಪಂಡಿತ ಮದನಮೋಹನ ಮಾಲವೀಯಾಜಿಯವರೂ, ಕವೀಂದ್ರರಾದ ರವೀಂದ್ರರೂ, ಕಲಾಪ್ರಿಯರಾದ ಕಝಿನ್ಸ ದಂಪತಿಗಳೂ, ಕವಯಿತ್ರಿ ಸರೋಜಿನಿ ದೇವಿಯವರೂ, ಬಂಗಾಲದ ಖಾದೀ ಪ್ರತಿಷ್ಠಾನದ ಅಧ್ಯಕ್ಷರೂ, ಪ್ರವರ್ತಕರೂ ದರಿದ್ರ ನಾರಾಯಣನ ಸೇವೆಯಲ್ಲಿ ನಿರತರೂ ಆದ ಪ್ರಫುಲ್ಲ ಚಂದ್ರರಾಯರೂ ಇವರೇ ಮೊದಲಾದರೂ, ಭರತಖಂಡದ ಎಲ್ಲ ಮುತ್ಸದ್ದಿಗಳೂ ಪತ್ರಕರ್ತರೂ ಈ ಕನ್ನಡ ರಾಜನನ್ನು ಹೊಗಳಿದ್ದು, ಶ್ರೀಕೃಷ್ಣರಾಜ ಒಡೆಯರವರ ಸದ್ಗುಣ, ವಿಶಾಲದೃಷ್ಟಿ, ರಾಷ್ಟ್ರಾಭಿಮಾನ, ಧರ್ಮಾಭಿಮಾನಗಳಿಗಾಗಿಯಲ್ಲವೇ? ಇವೆಲ್ಲ ಕನ್ನಡಿಗರು ಅಭಿಮಾನ ಹೊಂದತಕ್ಕ ಸಂಗತಿಗಳಲ್ಲವೋ?

ಹಿಂದುಸ್ಥಾನ ಸರಕಾರದಿಂದ ಗೌರವಿಸಲ್ಪಟ್ಟ ಕನ್ನಡಿಗನು

ಬಾಗಲಕೋಟೆಯ ಶ್ರೀ ಜೇವೂರ ಗುರುರಾಯರು (ಆಯ್. ಸಿ. ಯಸ್.) ನಾಗಪುರದಲ್ಲಿ ಪೋಸ್ಟ ಮಾಸ್ಟರ ಜನರಲ್ಲರಾಗಿದ್ದಾರೆ (ಹಾಲಂಡ) ಹೇಗದಲ್ಲಿ ಸಪ್ಟಂಬರ ೧ನೇ ತಾರೀಖಿನಲ್ಲಿ ನೆರೆಯುವ ಅಂತರ ರಾಷ್ಟ್ರೀಯ ಅಂಚೆ ಇಲಾಖೆಯ ವಿಮಾನುಗಳ ಪರಿಷತ್ತಿಗೆ (International Air Mails Conference) ಭರತಖಂಡದ ಪ್ರತಿನಿಧಿಯಾಗಿ ಈ ಕನ್ನಡಿಗನು ಹಿಂದುಸ್ಥಾನ ಸರಕಾರದಿಂದ ಆರಿಸಲ್ಪಟ್ಟಿದ್ದಾನೆ. ಶ್ರೀ. ಗುರುರಾಯರು ಮೊನ್ನಿನ ೬ನೇ ತಾ॥ ದಿನ ಮುಂಬೈಯಿಂದ ಹಾಲಂಡಕ್ಕೆ ತೆರಳಿದರು. ಇಂಗ್ಲಂಡ, ಫ್ರಾನ್ಸ, ಹಾಲಂಡ ದೇಶಗಳನ್ನು ಸಂದರ್ಶಿಸಿ ಇವರು ಅಕ್ಟೋಬರದಲ್ಲಿ ಮರಳಿ ತಮ್ಮ ಸ್ಥಾನಕ್ಕೆ ಬರುವರು.

ಇನ್ನು ಕನ್ನಡಕ್ಕೆ ಈ ರಾಜರು ಮಾಡಿದ್ದೇನೆಂದು ಕೇಳುವಿರೋ? ಸಾಹಿತ್ಯಪರಿಷತ್ತು ಉಗಮಗೊಂಡಿದ್ದು, ಇವರ ಆಳಿಕೆಯಲ್ಲಿಯೇ ಬೆಂಗಳೂರಿನಂತಹ ನಗರದಲ್ಲಿ ಪರಿಷತ್ತಿನ ಕಟ್ಟಡಕ್ಕಾಗಿ ಪುಕ್ಕಟೆಯಾಗಿ ಅಭಿಮಾನದಿಂದ ಸ್ಥಳವನ್ನು ಕೊಟ್ಟವರು ಇವರೇ. ಅಲ್ಲದೇ ಪ್ರತಿವರ್ಷ ದ್ರವ್ಯದ ಸಹಾಯ ಮಾಡುವವರು. ದೇವರಾಜ ಬಹದ್ದೂರರ ನಿಧಿಯಿಂದ ಪ್ರತಿವರ್ಷ ಕನ್ನಡ ಗ್ರಂಥಕಾರರಿಗೆ ಪಾರಿತೋಷಕಗಳನ್ನು ಕೊಡುತ್ತಿರುವರು. ಮೈಸೂರ ವಿಶ್ವವಿದ್ಯಾಲಯದಲ್ಲಿ ಕನ್ನಡಕ್ಕೆ ಹೆಚ್ಚಿದ ಮನ್ನಣೆಯು ದೊರೆಯುವಂತೆ ಮಾಡಿರುವರು'

ಭರತ ಖಂಡದಲ್ಲೆಲ್ಲ ಸುಳಿದಾಡುತ್ತಿರುವ ರಾಷ್ಟ್ರಭಾವನೆಯು ಮಹಾರಾಜರಲ್ಲಿಯೂ ನೆಲೆಗೊಂಡಿದೆಂಬುದಕ್ಕೆ, ಗಾಂ ಹಾ ರಾ ಜ ರು ಮಹಾತ್ಮರಿಗೆ ಎಲ್ಲ ಸೌಕರ್ಯಗಳನ್ನು ಒದಗಿಸಿಕೊಟ್ಟು, ದರಿದ್ರನಾರಾಯಣನ ಸನ್ಯಾಸಿಯನ್ನು ಭವ್ಯವಾದ ಅರಮನೆಯಲ್ಲಿ ತಂದಿಟ್ಟದ್ದೇ ಸಾಕ್ಷಿಯಾಗಿದೆ. ಸ್ವತ. ನೋಡುವದಲ್ಲದೇ, ಮೈಸೂರು ಕರ್ನಾಟಕದ ಎಲ್ಲ ಹಳ್ಳಿಹಳ್ಳಿಗಳಲ್ಲಿಯೂ ನೂಲುವವರಿಗೆ ಅನುಕೂಲತೆಗಳನ್ನು ಒದಗಿಸಿಕೊಡಲು, ತಮ್ಮ ಸರಕಾರದ ಔದ್ಯೋಗಿಕ ಇಲಾಖೆಯವರಿಗೆ ಅಪ್ಪಣೆಕೊಡಿಸಿದ್ದು, ಬಡ ಬೋರೇಗೌಡನಲ್ಲಿ ಇವರಿಗಿರುವ ಪ್ರೀತಿಯನ್ನು ವ್ಯಕ್ತಗೊಳಿಸುತ್ತದೆ. ಒಂದು ಸೊಟ್ಟಬಾದ ಸರಕಾರೀ ನೌಕರಿಯಲ್ಲಿರುವ ಬ್ರಿಟಿಶ್ ಪ್ರಜೆಗಳು ರಾವಬಹದ್ದೂರ, ರಾವಸಾಹೇಬ, ಖಾನಬಹದ್ದೂರ, ಖಾನಸಾಹೇಬ, ಸರ್, ಶ್ರೀಮಂತ, ಕೇಟರು ಭಾರತೀಯ ರಾಜರುಗಳು ಸಹ ಪದವಿಯನ್ನು ಧರಿಸಲು ಬೆದರಿ ಬೀಳುತ್ತಿರುವಾಗ್ಯೂ, ಪ್ರಚಂಡವಾದ ರಾಜ್ಯದ ಭಾರವನ್ನು ಹೊತ್ತ ಕನ್ನಡ ನಾಡಿನ ಈ ವೀರನು ಅಷ್ಟೊಂದು ಧೈರ್ಯವನ್ನು ತೋರಿಸುತ್ತಲಿರುವದು ಸಾಮಾನ್ಯ ಸಂಗತಿಯೇ? ಇಂತಹ ಕನ್ನಡರಾಜನ ಬಗ್ಗೆ ಬ್ರಿಟಿಶ್ ಕನ್ನಡಿಗರು ಸಹ ಅಭಿಮಾನ ತಾಳುತ್ತಿರುವದೂ, ಅವನಲ್ಲಿ ಪ್ರೀತಿ ವಿಶ್ವಾಸಗಳನ್ನು ತೋರ್ಪಡಿಸುತ್ತಿರುವದೂ ಸ್ವಾಭಾವಿಕವಲ್ಲವೇ?

(೫ ನೇ ಪುಟದಿಂದ ಮುಂದೆ ಬಂದದ್ದು)

ಕೃತಜ್ಞತೆ.

ವೈ. ವಾಸುದೇವಾಚಾರ್ಯರ ಭಾವಪಟದ ಅನಾವರಣ ಸಮಾರಂಭವು ಯಶಸ್ವಿಯಾಗಿಯೂ ಆಚಾರ್ಯರಿಗೆ ಉಚಿತವಾಗುವಂತೆಯೂ ಪೂರ್ತಿಗೊಳಿಸಿದ ಶ್ರೇಯವು, ಉದಾರ ಹಸ್ತದಿಂದ ದ್ರವ್ಯ ಸಹಾಯ ಮಾಡಿದ ಅವರ ಸ್ನೇಹಿತರನೇಕರಿಗೂ ಅಳಿಲ-ಭಕ್ತಿಯಿಂದ ತಮ್ಮ ಶಕ್ತ್ಯನುಸಾರ ದುಡ್ಡಿನಿಂದಲೂ ಇತರ ಮಾರ್ಗದಿಂದಲೂ ನೆರವಾದ ಆಚಾರ್ಯರ ಶಿಷ್ಯವರ್ಗಕ್ಕೂ ಮತ್ತು ಅವರ ಭಕ್ತವೃಂದಕ್ಕೂ ಸಲ್ಲತಕ್ಕದ್ದು. ಇವರಿಗೆಲ್ಲ ನಾವು ತುಂಬಾ ಋಣಿಯಾಗಿದ್ದೇವೆ. ಪಂದರವನ್ನು ಹೊಡೆದು ಅದನ್ನು ಅಲಂಕರಿಸಿ, ಈ ಉತ್ಸವಕ್ಕೆ ಹೆಚ್ಚಿನ ಅಧ್ಭುತತೆಯನ್ನೂ ವಿಶೇಷ ಶೋಭೆಯನ್ನೂ ತಂದು ಕೊಟ್ಟ ಇಲ್ಲಿಯ ಕಾಂಟ್ರ್ಯಾಕ್ಟರರಾದ ಶ್ರೀ ಜೋರಾಪುರ ಕೃಷ್ಣರಾಯರಿಗೂ ಪರ್ವತಿಕರ ರಂಗರಾಯರಿಗೂ ಸಕಾಲದಲ್ಲಿ ನೆರವಾದ ರಸಿಕರಂಗನಿಗೂ, ಚಿತ್ರಕಲಾಭಿಜ್ಞರಾದ ಹುದ್ದಾರ ಭೀಮರಾಯರಿಗೂ, ಮತ್ತು ಪೇಟೆಬಂಧುಗಳಿಗೂ, ನಾವು ತುಂಬಾ ಕೃತಜ್ಞರಾಗಿದ್ದೇವೆ. ಇದೇ ಸಂದರ್ಭದಲ್ಲಿ ದೊಡ್ಡ ಗುಡಾರವನ್ನು (Tarpaulin) ಉಪಯೋಗಿಸಲಿಕ್ಕೆ ಕೊಟ್ಟ ಇಲ್ಲಿಯ ಪಾಲಕಟ ಕಂಪನಿಯವರ ತಾರಾಪುರ ಇವರ ಉಪಕಾರವನ್ನೂ ಸ್ಮರಿಸದೆ ಇರೆವು.

ಇನ್ನು ಈ ಸ್ಮಾರಕ ವಿಚಾರವು ಮೊದಲು ಹುಟ್ಟಿದ್ದು ಶ್ರೀ ಮಂಗಳವೇಡೆ ಮದ್ವರಾಯರಲ್ಲಿ. ಬೇಕೆಂದು ಹಿಂದೆ ನಿಂತುಕೊಂಡು ಉತ್ಸಾಹವರ ಮಾತನಾಡುತ್ತ, ಎಲ್ಲ ಅನುಕೂಲತೆಗಳನ್ನು ಒದಗಿಸಿಕೊಟ್ಟು, ಇದನ್ನು ವೈಭವದಿಂದ ಕೊನೆಗಾಣಿಸಿದ್ದಕ್ಕಾಗಿ ಆಚಾರ್ಯರ ಅಭಿಮಾನಿಗಳೆಲ್ಲರೂ ಅವರಿಗೆ ಸದಾ ಋಣಿಯಾಗಿರಬೇಕಾಗಿದೆ. ಇದೇ ಬಗೆಯಾಗಿ ಕಜ್ಜಿಕ್ಕಾಗಿ ಸಹಾಯ ಮಾಡಿದ ಶ್ರೀ ಸೊಲ್ಲಾಪಟ್ಟಿ ರಾಮಣ್ಣನಾಯಕರಿಗೂ ನಾವು ತುಂಬಾ ಉಪಕೃತರಾಗಿದ್ದೇವೆ. ಅನಗ್ಗಯೋಗ್ಯ ಸಲಹೆಗಳನ್ನು ಹೇಳಿ ಹಾದಿ ತೋರಿಸಿಕೊಟ್ಟ ಇಲ್ಲಿಯ ವಾಙ್ಮಯ ಕೋವಿದರಾದ ಶ್ರೀ ಧಾರವಾಡ ಯ. ಲಿಂಗ ಪ. ರಾಯರಿಗೆ ನಮ್ಮ ಕೃತಜ್ಞತೆಯನ್ನು ಅರ್ಪಿಸಿ ಈ ಮಹಾನಿಯರು ಸಾರ್ವಜನಿಕ ಕಾರ್ಯಗಳಿಗೆ ಹೀಗೇ ನೆರವಾಗಲಿಕ್ಕೆ, ಅವರನ್ನು ಪ್ರೇರಿಸುತ್ತಿರಬೇಕೆಂದು, ಆಸರ್ವತಂತ್ರನನ್ನು ಪ್ರಾರ್ಥಿಸುವೆವು. ಹಿಂದುಸ್ಥಾನೀ ಸೇವಾದಲದ ಸ್ವಯಂಸೇವಕರು ಸಭೆಯ ಕಾರ್ಯವನ್ನು ವ್ಯವಸ್ಥೆಯಿಂದ ಜರಗಿಸಿದ್ದಕ್ಕೆ ನಾಯಕ ಕೇರಿ ಶ್ರೀನಿವಾಸರಾಯರ ಮುಖಾಂತರ ಎಲ್ಲರನ್ನೂ ಅಭಿನಂದಿಸುತ್ತೇವೆ.

ಸವಣೂರ ಶ್ರೀನಿವಾಸರಾವ, ಬಿ. ಎ. ಬಿ. ಟಿ. ಸಿ.
ಜೋರಾಪೂರ ಗುರುರಾವ, ಬಿ. ಎ. ಎಲ್. ಎಲ್. ಬಿ.
ಕಾರ್ಯದರ್ಶಿಗಳು.

ಇಹವೃತ್ತ.

ಮಳೆಯಿಲ್ಲ. ಹವೆಯಲ್ಲಿ ತಂಪವಕತ್ರ ಇದೆ.

ಮೈಸೂರಿನ ಮಹಾರಾಜರಾದ ಶ್ರೀಮಂತ್ ಕೃಷ್ಣರಾಜ ಒಡೆಯರರ ರಜತೋತ್ಸವ ಸಮಾರಂಭದಲ್ಲಿ ಭಾಗತೆಗೆದುಕೊಳ್ಳಲು ಬಾಗಲಕೋಟೆಯವರಿಗೂ ಆನಂದವಾಗುತ್ತದೆಂಬ ಹಾಗೂ ದೇವರು ಮಹಾರಾಜರಿಗೆ ಆಯುರಾರೋಗ್ಯವನ್ನು ಕೊಡಲೆಂಬ ಠರಾವುಗಳು ನಿನ್ನೆ ಹಾರ್ಡಿಂಜ ಲೈಬ್ರರಿಯಲ್ಲಿ ಸಾರ್ವಜನಿಕ ಸಭೆಯಾಗಿ, ಅಲ್ಲಿ ನಿರ್ಣಯಿಸಲ್ಪಟ್ಟವು.

WANTED.

Wanted Candidates for training in Telegraphy and Station Master's Courses. Railfare Granted. Suitable Boarding and Lodging arrangements. Prospectus on two anna Stamp.—Presidency Telegraph College, Royapettaph P. O., Madras.

ಗುಣ ಬರದಿದ್ದರೆ ಹಣ ಪರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿವೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತದೆ, ಸಂಗ್ರಹಿಣಿ, ಜೀರ್ಣಜ್ವರ, ಅಗ್ನಿಮಾಂಧ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರವದಿಲ್ಲ (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು.) ಇದರಿಂದ ಮೈಯ್ಯುರಿ ವ ಗರಮಿಯ ಎಲ್ಲಾತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ. ವಿಳಾಸ:—

ಎಸ್. ಬಿ. ಕದಮ್ ಮತ್ತು ಸನ್ಸ್
ಮು. ಪೋಷ್ಟ ನಿಪ್ಪಾಣಿ (ಜಿ. ಬೆಳಗಾಂವ.)

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟ-ಒಟ್ಟ ಮುಂದ-ಹಿಂದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆ ಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೇಳ್ರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ.

ಬನಾರಸ್ ರೇಶ್ಮೀ ಶೀರೆಗಳು.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೀ ಮಾಲುಗಳನ್ನು ಕೋರುವವರಿಗೆ ವ್ಹಿ. ಪಿ. ಮೂಲಕ ಕಳುಹಿಸಲ್ಪಡುವದು ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕ ಉದ್ದ ಮೊಳ ೧೪ ಅಗಲಿ ಮೊಳ ೩, ಥಾನು ೧ಕ್ಕೆ ೧೫ ರಿಂದ ೫೦ ಜರಿ ಶೀರೆಗಳು ೧೭ ೧೮ ಮೊಳ ಉದ್ದ ೧ಕ್ಕೆ ರೂ. ೨೫ ರಿಂದ ೫೦ ರವರೆಗೆ. ಬುಟ್ಟೆದಾರ್ ಬನಾರಸ್ ಶೀರೆ ೧೭-೧೮ ಉದ್ದ ಮೊಳ ೭ ೧ಕ್ಕೆ ರೂ. ೫ ರಿಂದ ೩೦೦ ರ ವರೆಗೆ ಉಡುವ ಮಗುಟ ಉದ್ದ ೭-೮ ಮೊಳ ೧ಕ್ಕೆ ರೂ ೧೦ ರಿಂದ ೩೦ ರ ವರೆಗೆ ಜರೀದ್ದು ೭-೮ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೪೦ ರ ವರೆಗೆ ಬಿಳಿ ರೇಶ್ಮೆ ಜರೀದುಪ್ಪಟೆ ೭ ಮೊಳ ಉದ್ದ ೧ಕ್ಕೆ ರೂ ೧೧ ರಿಂದ ೩೦ ರವರೆಗೆ ಸಾದಾ ಬಂಗಾಳ ರೇಶ್ಮೆ ಶಾಲು ೭ ಮೊಳ ಉದ್ದ ೩ ಮೊಳ ಅಗಲು ೧ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಪಟಿಕದ ೧೦೮ ರ ಸರ ೧ಕ್ಕೆ ರೂ. ೧ ರಿಂದ ೧೦ ರ ವರೆಗೆ ಸುದರ್ಶನ ೧ಕ್ಕೆ ಆಣೆ ೮ ರಿಂದ ರೂಪಾಯಿ $1\frac{1}{2}$ ರವರೆಗೆ ಜಗನ್ನಾಥ ಜಾಗಂಟೆ ೧ಕ್ಕೆ ರೂ. $2\frac{1}{2}$ ರಿಂದ 15 ರ ವರೆಗೆ ಮತ್ತು ಬೇರೆ ಬೇಕಾದ ಮಾಲುಗಳ ಕೆಟಲಾಗು ಇನಾಂ.

ವಿಳಾಸ:- ಶಿರೋಮಣಿ ನಾರಾಯಣಾಚಾರ್ಯ
ಕಂಪನಿ ಚೌಕಂಬಾ ಕಾಶಿ ಬನಾರಸ್.

ಅತೀ ಸುಲಭ ಕಂತುಗಳು! ಫಲಿತಾಂಶವು ಹೆಚ್ಚು!

ದಿ. ಹಿಂದುಸ್ಥಾನ ಕೋಆಪರೇಟಿವ್ಹ
ಇನ್ಸುರೆನ್ಸ ಸೊಸೈಟಿ ಲಿಮಿಟೆಡ್.

(ಬ್ರ್ಯಾಂಚ್:- ಮುಂಬಯಿ) (ಹೆಡ್ ಆಫೀಸು:- ಕಲ್ಕತ್ತಾ)

ಈ ಕಂಪನಿಯು ಇಡೀ ಹಿಂದುಸ್ಥಾನದಲ್ಲೆಲ್ಲಾ ಪ್ರಾಮುಖ್ಯತೆಗೆ ಬಂದ ಸ್ವದೇಶಿ ಕಂಪನಿಗಳಲ್ಲಿ ಒಂದಾಗಿದೆ. ಜನರ ಸೌಕರ್ಯಕ್ಕಾಗಿ ಈ ವಿಜಾಪೂರ ಜಿಲ್ಹೆಯೊಳಗೆ ಇದರ ಒಂದು ಶಾಖೆಯನ್ನಿಟ್ಟಿರುವರು. ಕಂತುಗಳು ಅತೀ ಸುಲಭ ಇದ್ದು, ಧಾರಾಳವಾಗಿ ಈ ಕಂಪನಿಯಲ್ಲಿ ನಿಮ್ಮ ಜೀವ ವಿಮೆಯನ್ನು ಇಳಿಸಬಹುದು.

ಇದರ ಮೂಲಧನವು ೫೦,೦೦೦,೦೦೦ ವಿರುವದು. ೧೯೨೫-೨೬ ನೇ ವರ್ಷದಲ್ಲಿ ಸರಾಸರಿ ವರ್ಷಕ್ಕೆ ೧೦೦೦ ರೂ. ವಿಮೆಗೆ ರೂ. ೧೫ ರೂ. ದಂತೆ ಫಲಿತಾಂಶ ಕೊಟ್ಟಿರುವೆವು.

ಎಲ್ಲಾ ಕಡೆಯಲ್ಲಿ ಏಜಂಟರು ಬೇಕಿದ್ದಾರೆ.

ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿದಲ್ಲಿ ಹೆಚ್ಚಿನ ಮಾಹಿತಿ ತಿಳಿಯಬಹುದು.

ವಿಳಾಸ:—
ವಿಜಾಪೂರ. ೨೪—೭—೨೭ } ಜಿ. ಆರ್. ವಕ್ಕನಳ್ಳಿ ಅಂಡ ಬ್ರದರ್ಸ.
ಚೀಫ ಏಜಂಟ್ಸ,
ವಿಜಾಪೂರ ಜಿಲ್ಹಾ.

ಶ್ರೀ ಭಾರತ ಜಗಪ್ರಸಿದ್ಧ ಜಗ ಜಾಹೀರ ನೋಟೀಸು.

ಮೃತ್ಯುಂಜಯ ಔಷಧದಿಂದ ಮೂರೇ ತಾಸಿನಲ್ಲಿ ಗುಣವಿಲ್ಲೆಂದು ಸಿದ್ಧ ಮಾಡಿದವಂಗೆ-೫೦೦ ರೂ. ಬಕ್ಷೀಸ ಕೊಡುವೆವು.

ಮೂರೇ ತಾಸಿನಲ್ಲಿ ಗುಣ] ಕಳ್ಳಬತ್ತಿ ರಸಾಯನ ತಕ್ಕೊಂಡು ಸಾಯುವದೇಕೆ? **[ಮೂರೇ ದಿವಸಗಳಲ್ಲಿ ರೋಗವು ಪೂರ್ಣ ಹೋಗುವದು.**

ಶುದ್ಧ ವನಸ್ಪತಿಯಿಂದ ತಯಾರು ಮಾಡಿದ ಮೃತ್ಯುಂಜಯ ಔಷಧ.

ಉಪದಂಶ, ಗರ್ಮಿ (ಉಷ್ಣ) ಪರ್ಮಿ ಮುಂತಾದ ಎಷ್ಟು ಪ್ರಕಾರದ ರೋಗ ಬಹುದಿನ ನೆಲಗೊಂಡದ್ದು ಶರೀರ ಕತ್ತರಿಸಿ ಬಿದ್ದರೂ ಮೂರು ದಿವಸಗಳಲ್ಲಿ ಗುಣವಾಗುವದು.

ಇಂಥ ಪ್ರಕಾರ ರೋಗಗಳಿಂದ ಉತ್ಪನ್ನವಾಗುವ ವಿಕಾರ ಉಷ್ಣ ಪರಮಿ (ಉಪದಂಶ) ಗರ್ಮಿ ಚಟ್ಟೆ ಒದದ ಗಂಟು, ನಡಿನಲ್ಲಿಯ ಗಂಟು, (ವುಡುಚು) ಅತಿಶಯ ಬಾವು, ಇಂದ್ರಿಯವಾಗೆ ತಿಡಿಕ, ಹೊಡಕು, ರಕ್ತ ಕೀವು ಸುರಿಯೋಣ ಅದರಂತೆ ಸ್ತ್ರೀಯರ ಪ್ರದರ (ಕೆಂಪು ಬಳಿ ಶೆರಗು) ಹೊಲಿ ಕುಟ್ಟಿಹೋಗ ಬೆಳೆಯೋಣ, ಕಡಕಿ ವಿಕಾರಗಳಿಂದ ಗರ್ಭಾಶಯ ಕೆಡೋಣ, ಮೂತ್ರ ಕಣ್ಣು ಕಾಲು ಉರಿಯೋಣ, ಕಾವು ಹೆಚ್ಚಾಗಿ ಮಧುಮೇಹ ಮೈಮೇಲೆ ಗರ್ಮಿ (ಉಷ್ಣ) ಒಡೆದು ಕೀವು ಹೊರಬಿದ್ದು ಅದರಿಂದ ವ್ರಣ (ಘಾಯ) ವಾಗಿ ಅಂಗಳಕ್ಕ ತೂತು ಬಿದ್ದು ಮೂಗು ಕೂಡ್ರುವದೂ ಸೋರುವದೂ ಎಲ್ಲ ತರದ ಮೂಲವ್ಯಾಧಿ, ಹೊಟ್ಟೆ ಕಡತು ವಗೈರೆ ಕಾರಣಗಳಿಂದಾ ಜನನೇಂದ್ರಿಯ ಶಿಥಿಲತಾ ಅಥವಾ ನಪುಂಸಕತ್ವ ಮುಷ್ಟಿಮೈಥುನದಿಂದ ಆಗುವ ಪರಿಣಾಮ, ಸ್ವಪ್ನಾವಸ್ಥೆ ಮೂತ್ರದಲ್ಲಿ ಧಾತು ಅಥವಾ ಖರ ಬೀಳೋಣ, ವೀರ್ಯ ತಿಳುವಾಗೋಣ, ಸ್ತ್ರೀಗಮನದಲ್ಲಿ ತೀಕು ಹತ್ತೋಣ. ತೀವ್ರ ವೀರ್ಯ ಪತನವಾಗೋಣ, ನಡನೀವು (ಶೂಲಿ) ನೋಯೋಣ, ಬೆನ್ನು ಬಿಗಿಯೋಣ, ವಾತವಿಕಾರ ಅವಿಚ್ಯಾರದಿಂದ ಮಾಡಿದ ವೀರ್ಯಪಾತ ವಗೈರೆ ರೋಗಗಳ ಮೇಲೆ ಅಶಿಕ್ಷಿತ ಅಡಾಣೀ ಜನರ ಕಡಿಯಿಂದ ಪಾರಜ ಮತ್ತು ರಸಕರ್ಪೂರ, ಇಂಗಳೀಕ ಮುಂತಾದ ಸವಿಷ ಮತ್ತು ಅಪಕ್ವ ಧಾತು ರೂಪ ಪದಾರ್ಥ (ರಸಾಯನ) ಮತ್ತು ಅಪಕಾರಕ ವಸ್ತು ಸೇವಿಸುವದರಿಂದ ಮೈಯೊಳಗೆ ರಸಾಯನ ನಿಂತು ಅದರಿಂದ ಕಾಲು ಕೆ ಮುಡಪಾಗಿ ಮತ್ತು ಕೈ ಕಾಲುಗಳಲ್ಲಿ ರಸಾಯನ ಒಡೆದು ಸ್ವತಃ (ತನಗೆ) ಮತ್ತು ಮುಂದಾಗುವ ತನ್ನ ಸಂತತಿಗೆ ಅನೇಕ ರೋಗವು ಉತ್ಪನ್ನವಾ[illegible]ಂದ ಭಯಂಕರ ಪರಿಣಾಮ ಭೋಗಿಸಬೇಕಾಗುವದು. ಇಂಥ ಪ್ರಕಾರದ ರೋಗಗಳು ಬಹಳ ದಿವಸ ನೆಲಗೊಂಡಿದ್ದಾಗಲೀ ಅಥವಾ [illegible]ಸದಾಗಿ ಆದುದ್ದಾಗಲೀ ಇಂಥ ರೋಗಗಳ ಮೇಲೆ ಈ ನಮ್ಮ ಮೃತ್ಯುಂಜಯ ಔಷಧ ಉಪಯೋಗ ಮಾಡಿದರೆ ತತ್[illegible] ಸಂಪೂರ್ಣ ರೋಗಗಳು ತೀವ್ರವಾಗಿ ಹೋಗಿ ಮೈಯೊಳಗೆ ಇದ್ದ ರಸಾಯನವು ನಾಶವಾಗುವದು. ಮತ್ತು ಅಶಕ್ತಿ [illegible] ಮೈಯೊಳಗೆ ಶಕ್ತಿ ಬಂದು ಪ್ರಕೃತಿ ಉತ್ತಮವಾಗುತ್ತದೆ ಒಂದು ಬಾಟ್ಲಿಗೆ [೫] ರೂಪಾಯಿ ಟಪಾಲು ಖರ್ಚ ಬೇರೆ ಅನ[illegible] ಪತ್ರಿಕೆಯು ಔಷಧದ ಸಂಗಡ- ಲಾಭಕ್ಕೆ ಲಾಭವು. ಒಂದು ಆಣೆ ಟಿಕಿಟು ಕಳಿಸಿದಲ್ಲಿ ನಮ್ಮ ಔಷಧದ ಪೂರ್ಣ ಕ್ಯಾಟಲಾಗ್ ಕಳಿಸುವೆವು.

(ತಮ್ಮ ಪತ್ತೆ:- ಪೂರ್ಣ ಬರೆಯಿರಿ)

ಸುಪ್ರಸಿದ್ಧ ಡಾ|| ಆರ್. ಎಲ್. ಹಿರೇಮಠ ಆರೋಗ್ಯ ಮಂದಿರ ಆಯುರ್ವನೌಷಧಿ ೫೦೦೦, ಸಾವಿರ ಕಾರಖಾನೆ. ಕಮತನೂರ ಪೋ|| ಸಂಕೇಶ್ವರ ಜಿ|| ಬೆಳಗಾಂವ.

ಲವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.

ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವವು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು ಮತ್ತು ಬಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚ ತಗಲುತ್ತದೆ ಆದರೆ ನಾವು ಯೋಗ್ಯ ವೆಚ್ಚ ಮಾಡಿ, ಗಡಿಯಾರಗಳ [illegible] ಪಂಕ್ತಿ ತಯಾರಿಸಿದ್ದೇವೆ ಅದರಿಂದ ಬೆಲೆ ಕಡಿಮೆ [illegible] ಕಾರಣವಿಲ್ಲ.

[illegible] (ಇಂಡಿಯಾ) [illegible]

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟ ಪ್ರಾಪ್ತ್ಯರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ

[illegible] ೨೦ ಎಲಿಂಗಸ್ವಾ ಜಾಲನಾದಿ.

ಸ್ಟೇಶನ್ ಬಾಗಲಕೋಟೆ

[illegible]

[illegible]



ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

೧೯೨೭ನೇ ಜನವರಿ ೧೫ರಿಂದ ಪ್ರಾರಂಭ.



ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್ ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ-

೧ ನೀವು ನಮಗೆ ರೂ. ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್‌ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು.

೩ ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್‌ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪುವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ ಗೋಲ್ಡ" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ಬಿಕರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು. ಅಥವಾ ವಿ. ಪಿ ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಳೆದುಕೊಳ್ಳುವ ಭಯವಿಲ್ಲ ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಅಸೂಯೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ಎಥವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೭-೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್. ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರ ಸಿಟಿ.

ಯಾವದೇ { ಆಕಾರದ ನಕ್ಷೆಯ ಸಂಬಂಧಿಸ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಒಳಗೆ ನಾವು ಈ ದರವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವವಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರತ್ತದೆ ಯಾವದೇ ಆಕಾರದ, ನಕ್ಷೆಯ, ಸಂಬಂಧಿಸ ಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ ಬೆಲೆ ರೂ ೭

ಅಲ್ಪವೇ ಇವೆ, ಈಗಲೇ ಬರೆಯಿರಿ

ಪತ್ತೆ:— ಸ್ವಾನ ಹೌಸ ಪಿ. ಬ ೫೦೮ ಪಿ. ಟಿ ಮದ್ರಾಸ

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೋಕೆಟ್ ವಾಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ. ಪಿ, ಬಿ. ಮದ್ರಾಸ. ೨೬೫

ಕಿರ್ಲೋಸ್ಕರ

ಕಬ್ಬಿಣ ನೇಗಿಲಗಳು.

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್ } ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರಿ

ಸ್ಟಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ್ ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇರಿ) ೧ ಪೌಂಡಿಗೆ ರೂ. ೧-—-

೨ ನೇ ,, ,, ,, ರೂ ೧-೩-೦

ದಿ ಸ್ಟಾಂಡರ್ಡ್ ಕಾಫಿ ಕಂಪನಿ

ಚಿಕ್ಕಪೇಟೆ ಬೆಂಗಳೂರು ಸಿಟಿ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಿ.ಶ.ವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ॥ ದಿವಸ ೧೧-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೭೩೭ ಸಯ್ಯದ ಅಲ್ಲಿ ಅಸಗೆರ ಬಿಲ್‌ಗ್ರಾಮಿ ಸುಪರೆಂಟೆಂಡಂಟ್ ಸೆಕ್ರೆಟರಿಏಟ್ ಹೈದರಾಬಾದ ಡೆಕ್ಕನ್ನ ರೂ.೧೦೦೦

(೨) ಎಲ್. ಬಿ. ಸಿ. ನಂ. ೧೯೭೨ ನಾರಾಯಣ ವಿಠ್ಠಲ ಲೋಣಕರ. ಕೇರಾ ಆಫ್ ಡಿ. ಈ. ಪುರಾಣಿಕ ೧೦೭ ನಿಹಾಲಪುರ ಇಂದೂರ. ೧೨೦೦

(೩) ಎಲ್. ಬಿ. ಸಿ. ನಂ ೩೪೧ ರಾಮಚಂದ್ರ ಅನಂತ ಶಿರೋಳಿ. ಡಿವಿಜನಲ್ ಫಾರೆಸ್ಟ ಆಫೀಸರ ಧತ್ತೂರಾ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೧೦೭ ಕೇ. ಜಿ. ಫರ್ನಾಂಡೋ ವ್ಯಾಪಾರಸ್ಥ ಬ್ರಾಕ್‌ಸಾಯಿಡ ಸಿಲೋನ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೭೩೪ ಎಸ್. ಜಿ ಚವರೆ. ಅಶಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ. ಜಿಲ್ಲಾ ವಿಜಾಪುರ. ರೂ ೧೦೦೦

ಬಿ. ನ್. ಆರಾಧ್ಯ

ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ)

ಜೀವ ವಿಮೆಯ ಕಾರ್ಯದಲ್ಲಿ

ಅದ್ಭುತವಾದ ಜಯವು !

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ರೂಪಾಯಿ ಲಾಭ ಹಂಚಿದೆ

ದಿ ಜನರಲ್ ಅಶ್ಯೂರನ್ಸ ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರನಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ಸಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉಳಿತಾಯವಾದದ್ದು ರೂ. ೧,೦೯,೦೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್!

ಎಸ್. ಕಬ್ಬೂರ ಬಿ. ಎ. ಎಫ್. ಎಸ್. ಆಜಮೀರ.

Apply to:- A. Ramachandra Rao
Branch Secretary, opposit Minto Hospital,
Bangalore City

or

L. V Ramdurg. Chief Agent
Near Vitoba Temple Hubli.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ 'ಬಿ ೧೯೪೭ ವಾ. ಚಂದಾ ೧—೧೩—೦ ಮಾತ್ರ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು — ಮಂಗಳವೇಢೇ ರಾಜೀರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ... ಮಿತಿ ಶ್ರಾವಣ ಬಹುಳ ೧ ಶಕ ೧೮೪೯ ತಾ|| ೧೪-೮-೧೯೨೭ | ಸಂಚಿಕೆ ೧೯

Date 14-8 1927

ರಜತೋತ್ಸವ ಸಮಾರಂಭ.

ಪರಮಮಂಗಲವಾದ ಮೈಸೂರ ಮಹಾರಾಜರ ಬಿರುದು ಹೀಗಿದೆ:—

"ಸ್ವಸ್ತಿ ಶ್ರೀ ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲ ದೇಶಾವತಂಸ ಕರ್ನಾಟಕ ಜನಪದ ಸಂಪದಧಿಷ್ಠಾನಭೂತ ಶ್ರೀ ಮನ್ಮಹೀಶೂರ ಮಹಾಸಂಸ್ಥಾನ ಮಧ್ಯ ದೇದೀಪ್ಯಮಾನ ನಿಖಿಲ ಕಲಾನಿಧಿ ಕುಲಕ್ರಮಾಗತ ರಾಜರ್ಷಿ ಮಂಡಲ ಪ್ರಮುಖ ನಿಜರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮ ವೀರನರಪತಿ ಬಿರುದಂತೆಂಬರ ಗಂಡ ಲೋಕೈಕವೀರ ಯದುಕುಲ ಪಯಃಪಾರಾವಾರ ಕಲಾನಿಧಿ ಶಂಖಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ಶ್ರೀ ಚಾಮರಾಜ ಮಹೀಪಾಲ ಧರ್ಮಪತ್ನೀ ಗರ್ಭಸುಧಾಂಬುಧಿ ರಾಕಾಸುಧಾಕರಾಯಮಾಣ, ಶ್ರೀ ಚಾಮುಂಡಿಕಾ ವರಪ್ರಸಾದೋದ್ಭವ ಶ್ರೀಮತ್ಸಕಲದಿಗ್ಧಿಶಾಲ ... ಕೃಷ್ಣರಾಜೇಂದ್ರ ಒಡೆಯರ್ ... ಶುಕ್ಲಪಕ್ಷದ ಚಂದ್ರನಂತೆ ದಿನದಿನಕ್ಕೆ ಅಭಿವೃದ್ಧಿ ಹೊಂದುತ ವಿಶ್ವವಿದ್ಯಾವಿಚಕ್ಷಣ ವಿದ್ವಜ್ಜನ ಧುರೀಣರಾಗಿ ಕರ್ನಾಟಕ ದಿವ್ಯರತ್ನ ಸಿಂಹಾಸನಾರೂಢರಾಗಿ ಸುಖದಿಂದಲೂ ಧರ್ಮದಿಂದಲೂ ಪೃಥ್ವೀಸಾಮ್ರಾಜ್ಯವಂಗೈಯುತ್ತಿರಲಿ! ಮಂಗಳಂ!

ಮಂಗಳಂ

ಶುಭಂ

ನಾಲ್ವಡಿ ಕೃಷ್ಣರಾಜ ಬಹದ್ದೂರ.

ರಜತೋತ್ಸವ ಸಮಾರಂಭ.

—:o:(c)(o):—

ಮೈಸೂರ ಪ್ರಾಂತದ ಎಲ್ಲ ಪ್ರಜೆಗಳಿಂದಲೂ, ಬ್ರಿಟಿಶ್ ಕರ್ನಾಟಕದ ಅನೇಕ ಭಾಗಗಳಿಂದಲೂ ಭರತಖಂಡದ ಪ್ರಮುಖ ಪಟ್ಟಣಗಳಿಂದಲೂ, ಲಂಡನ್ನಿನಿಂದಲೂ ಅಭಿನಂದನಪರವಾದ ತಂತಿಗಳು ಮಹಾರಾಜರಿಗೆ ಹೋಗಿವೆ. ರಾಜಧಾನಿಯಲ್ಲಿ ದೊಡ್ಡ ಸಮಾರಂಭವಾಯಿತು. ಎಲ್ಲ ಭಾಗಗಳಿಂದಲೂ ೧೫೦೦೦ ದೊಡ್ಡ ದೊಡ್ಡ ಜನರು ಬಂದಿದ್ದರು. ಸರ ಪುಟ್ಟಣಶೆಟ್ಟರು ಜನರ ಪರಿಯಿಂದ ಮಹಾರಾಜರಿಗೆ ಮಾನಪತ್ರವನ್ನರ್ಪಿಸಿದರು. ಬಂಗಾರ, ವಜ್ರಗಳಿಂದ ಅಲಂಕೃತವಾದ ಬೆಳ್ಳಿಯ ಕರಡಿಗೆಯಲ್ಲಿ ಚಿನ್ನದ ಪತ್ರಕವನ್ನಿಟ್ಟುಕೊಟ್ಟರು. ರೈಲ್ವೆ, ಒಕ್ಕಲತನ, ಶಿಕ್ಷಣ, ಉದ್ಯೋಗಗಳ ಪ್ರಗತಿ, ನ್ಯಾಯ ದೇವಾಲಯಗಳ ಮುಖಾಂತರ ಪ್ರಜೆಗಳಿಗೆ ದೊರೆತ ಅಧಿಕಾರಗಳನ್ನು ಉದಾರದೃಷ್ಟಿಯಿಂದ ಮಹಾರಾಜರು ಪ್ರಜೆಗಳಿಗಾಗಿ ಒದಗಿಸಿಕೊಟ್ಟದ್ದಕ್ಕಾಗಿ ಆನಂದವನ್ನು ಪ್ರಕಟಿಸಿ ಅವರು ಮಹಾರಾಜರಿಗೆ ಆಯುರಾರೋಗ್ಯವು ದೊರೆಯುವಂತೆ ದೇವರನ್ನು ಪ್ರಾರ್ಥಿಸಿದರು.

೨೧ ತೋಪುಗಳ ಸಿಡಿದ್ದಲ್ಲಿ ಮಹಾರಾಜರು ಉತ್ತರ ಕೊಡಲು ಪ್ರಾರಂಭಿಸಿದರು. ಪ್ರಜೆಗಳು ಇಷ್ಟು ದಿನ ಪ್ರೀತಿವಿಶ್ವಾಸಗಳಿಂದ ತಮ್ಮನ್ನು ಪೂಜಿಸಿದ್ದಕ್ಕೆ ತಮ್ಮ ಅಂತಃಕರಣವು ಕರಗಿದೆಂಬವಾಗಿ ಮಹಾರಾಜರು ಹೇಳಿದರು. ಇಂಥ ಸದ್ಗುಣಿ, ಉದ್ಯೋಗಪ್ರಿಯ ಹಾಗೂ ಜಾಣರಾದ ಪ್ರಜೆಗಳು ದೊರೆತುದಕ್ಕಾಗಿ ತಮಗೆ ಆನಂದವಾಗುತ್ತಿದೆಯೆಂದೂ ಅದಕ್ಕಾಗಿ ಭಗವಂತನನ್ನು ಪ್ರಾರ್ಥಿಸುತ್ತೇನೆಂದೂ ನುಡಿದು, ಶ್ರೀಕೃಷ್ಣರಾಜರು ಹೀಗೆ ಭಾಷಣ ಮಾಡಿದರು—ನಮ್ಮ ಸಂಸ್ಥಾನವು ಈ ಬಗೆಯ ಮಾದರಿಯದಾಗಲು ಪ್ರಜೆಗಳಾದ ನೀವೇ ಕಾರಣರು. ಇದೇ ಬಗೆಯ ಭಾವನೆಯು ಕಾಯಮವಾಗಿದ್ದರೆ, ನಮ್ಮ ಸಂಸ್ಥಾನವು ಜಗತ್ತಿನ ಒಳ್ಳೇ ಸುಧಾರಿಸಿದ ರಾಷ್ಟ್ರಗಳಿಗೆ ಸರಿಸಮಾನವಾಗುವದರಲ್ಲಿ ಸಂದೇಹವಿಲ್ಲ. ಎಲ್ಲ ಜಾತಿಯವರೂ ನಮ್ಮ ದೇಶದ ಪುತ್ರರು; ನನ್ನ ಪ್ರಜೆಗಳೆಂಬುದನ್ನು ತಾವು ತಿಳಿದು; ತಮಗಿಂತ ಹೆಚ್ಚು ಕಷ್ಟದಲ್ಲಿರುವವರಿಗೆ ತಾವು ಸಹಾನುಭೂತಿಯನ್ನು ತೋರಿಸಬೇಕು. ಅದೇ ಪ್ರಕಾರವಾಗಿ ಮೂಕಪ್ರಾಣಿಗಳಿಗೆ ಸಹ ದಯೆಯನ್ನು ತೋರಿಸುವದು ನಿಮ್ಮ ಕರ್ತವ್ಯವಾಗಿದೆಂಬುದನ್ನೂ, ಅನ್ಯರಿಗೆ ಬಹು ಪವಿತ್ರವಾಗಿರುವ ಪ್ರಾಣಿಗಳನ್ನು ಹಿಂಸಿಸಬಾರದೆಂಬುದನ್ನೂ ನಮ್ಮ ಪ್ರಜೆಗಳೆಲ್ಲ ತಿಳಿದುಕೊಳ್ಳಬೇಕಾಗಿ ನನ್ನ ಇಚ್ಛೆಯಿದೆ. ನನ್ನ ಪ್ರಜೆಗಳೆಲ್ಲರೂ ಸುಖಶಾಂತಿಗಳಿಂದ ಆನಂದ ಪಡೆಯಬೇಕೆಂಬುದೇ ನನ್ನ ಘನತರವಾದ ಆಶೆ. ಈ ನನ್ನ ಆಶೆಯು ಪೂರ್ತಿಗೊಳ್ಳಲು ಪರಮೇಶ್ವರನು ನನಗಷ್ಟು ಶಕ್ತಿ, ಬುದ್ಧಿಗಳನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ.

ಮೈಸೂರ ಸಂಸ್ಥಾನದ ಪ್ರತಿಯೊಂದು ಹಳ್ಳಿಯಲ್ಲಿಯೂ, ಪ್ರತಿ ಮನೆಯಲ್ಲಿಯೂ ಈ ಉತ್ಸವ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಪೂಜೆ ಪುರಸ್ಕಾರಗಳು ಮಸೀದೆ, ಗುಡಿ, ಚರ್ಚುಗಳಲ್ಲೆಲ್ಲ ನಡೆದವು. ಬಡವರಿಗೆ ಪ್ರತಿಯೊಂದು ಹಳ್ಳಿಯಲ್ಲಿ ಊಟವು ನೀಡಲ್ಪಟ್ಟಿತು.

ಬೆಂಗಳೂರಲ್ಲಿ ಅತ್ಯಂತ ಉತ್ಸಾಹವು ಕಂಡುಬಂದಿತು. ಕಲ್ಲಿನ ತೋರಣ ಮನೆಮನೆಗೆ ಅಲಂಕಾರಗಳು ದೃಗ್ಗೋಚರವಾದವು. ಬೆಳಿಗ್ಗೆ ದೊಡ್ಡ ಸಭೆಯಾಯಿತು. ಶಾಲೆಯ ಹುಡುಗರಿಗೆ ಮಿಠಾಯಿ ಹಂಚಲ್ಪಟ್ಟವು. ಬೇರೆ ಬೇರೆ ಭಾಗದ ಬಡವರಿಗೆ ಅನ್ನ ಹಾಗೂ ವಸ್ತ್ರಗಳೂ ಹಂಚಲ್ಪಟ್ಟವು. ಹೊಸ ಕೋಟೆ ಬೀದಿ ಹಾಗೂ ಕೃಷ್ಣರಾಜೇಂದ್ರ ಪಥಗಳು ಪ್ರಾರಂಭಿಸಲ್ಪಟ್ಟವು. ಮಧ್ಯಾಹ್ನದಲ್ಲಿ ಸಹಸ್ರಾವಧಿ ಜನರು ತಂಡತಂಡವಾಗಿ ಕಬ್ಬನ ಪಾರ್ಕಿನಲ್ಲಿ ಕೂಡಿದ್ದರು. ಅಲ್ಲದೆ, ಪೋಲೀಸ ಬಾಂಡಿನ ರಾಗಗಳ ಆಟವು ಆನಂದದಾಯಕವಾಗಿದ್ದಿತು. ಶಾಸ್ತ್ರಿ ಹಾಗೂ ಖಡ್ಗಗಳ ಆಟವು ಬಹು ಪ್ರೇಕ್ಷಣೀಯವಾಗಿದ್ದವು. [illegible] ಗಳು ಹಂಚಲ್ಪಟ್ಟವು.

ಮೈಸೂರಲ್ಲಿ ಸ್ತ್ರೀ ವಿದ್ಯಾಭ್ಯಾಸವು ಸಮಾಧಾನಕರವಾಗಿದೆಯಾದ್ದರಿಂದ ಮಹಾರಾಜರನ್ನು ಅಭಿನಂದಿಸುತ್ತೇವೆಂದು ಮದ್ರಾಸದ ಹಿಂದೂ ಸ್ತ್ರೀ ಸಭೆಯವರು ಮಹಾರಾಜರಿಗೆ ತಿಳಿಸಿದ್ದಾರೆ.

ಮಹಾತ್ಮಾ ಗಾಂಧಿ, ಸರ ಶಿವಸ್ವಾಮಿ ಅಯ್ಯರ ಮೊದಲಾದವರು ಮಹಾರಾಜರನ್ನು ಮನಃಪೂರ್ವಕವಾಗಿ ಅಭಿನಂದಿಸಿದರು. ಮದ್ರಾಸದ ನ್ಯಾಯಮೂರ್ತಿ ಶ್ರೀನಿವಾಸ ಅಯ್ಯಂಗಾರರು ಮಹಾರಾಜರೆಂದರೆ ದಕ್ಷಿಣ ದೇಶದ ಆಧುನಿಕ ಜನಕರಾಜನೆಂದೂ, ರಾಜರ ಉಡುಪಿನಲ್ಲಿದ್ದ ಯೋಗೀಶ್ವರನೆಂದೂ ಹೇಳಿದ್ದಾರೆ.

ಕಲಕತ್ತೆಯಲ್ಲಿ ವಿಜೃಂಭಣೆಯಿಂದ ರಜತೋತ್ಸವವು ಜರುಗಿತು.

ಮದ್ರಾಸದ ಎಲ್ಲ ವೃತ್ತಪತ್ರಿಕೆಗಳೂ ಮಹಾರಾಜರ ಆಡಳಿತೆಯನ್ನು ಹೊಗಳಿವೆ.

ಈ ವರೆಗೆ ೫೩೦ ತಂತಿಗಳು ಬೇರೆ ಬೇರೆ ಕಡೆಯಿಂದ ಮಹಾರಾಜರಿಗೆ ಬಂದಿವೆ.

ಧಾರವಾಡದಲ್ಲಿ ದಿವಾನ ಬಹದ್ದೂರ ರೊದ್ದರಾಯರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಜನಾನೇಕರು ಬಂದಿದ್ದರು. ತಂತಿಯಿಂದ ಮಹಾರಾಜರಿಗೆ ಧಾರವಾಡಿಗರು ವಂದನೆಗಳನ್ನರ್ಪಿಸಿದರು. ಇದರ ಜೊತೆಗೆ ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘದವರೂ, ಧಾರವಾಡದಲ್ಲಿರುವ ಮೈಸೂರಿನವರೂ ತಂತಿಗಳನ್ನು ಕಳಿಸಿದರು.

ಬಾಗಲಕೋಟೆಯ ಸಾರ್ವಜನಿಕ ಸಭೆಯ ಅಧ್ಯಕ್ಷರಾದ ಶ್ರೀ ಭಸ್ಮೆ ಗೋವಿಂದರಾಯರೂ, 'ಕನ್ನಡಿಗ'ನ ಸಂಪಾದಕರೂ ಪ್ರತ್ಯೇಕವಾಗಿ ಮಹಾರಾಜರಿಗೆ ತಂತಿಯ ಮೂಲಕ ತಮ್ಮ ಅಭಿನಂದನೆಗಳನ್ನರ್ಪಿಸಿದರು.

ವೈಸರಾಯರ ಹಾಗೂ ಮದ್ರಾಸದ ಗವರ್ನರರ ಅಭಿನಂದನಪರ ತಂತಿಗಳು ಎಲ್ಲಕ್ಕೂ ಮೊದಲು ಈ ಮಹಾರಾಜರ ಕೈಸೇರಿದವು. ಲಂಡನ್ನಿನಿಂದ ಸಹ ತಂತಿಗಳು ಬಂದಿವೆ.

ಚನ್ನಪಟ್ಟಣದ ಮುಸಲ್ಮಾನರ ಸಭೆ ಸೇರಿತ್ತು. ಮಹಾರಾಜರೆಂದರೆ ಮತಪಂಥಗಳ, ಜಾತಿ, ಧರ್ಮ, ಪಂಥಗಳ ಎಳ್ಳಷ್ಟು ಭೇದ ಭಾವ ಮನ್ನಿಸದೇ ರಾಜರು ತಮ್ಮ ಪ್ರಜೆಗಳನ್ನು ರಕ್ಷಿಸುತ್ತಲಿದ್ದಾರೆಂದು, ಮೈಸೂರ ಪ್ರಾಂತದ ಪ್ರಾಚೀನ ಮುಸಲ್ಮಾನ ಮನೆತನದ ಪಠಾಣ ಅಬ್ದುಲ್ ಮುಮ್ಹಾನರು ಹೇಳಿದರು.

ಮುಂಬೈಯಲ್ಲಿಯ ಕರ್ನಾಟಕ ಆರ್ಯ ಸಮಾಜದವರು ಈ ಉತ್ಸವವನ್ನು ಮುಂಬೈಯಲ್ಲಿ ವಿಜೃಂಭಣೆಯಿಂದ ಜರುಗಿಸಿದರು.

ಮೈಸೂರ ಸಂಘ (ಮುಂಬೈ) ದವರು ಈ ಆನಂದ ಸಮಯದಲ್ಲಿ ಭಾಗ ತೆಗೆದುಕೊಂಡು, ಸಭೆಮಾಡಿ, ಮಹಾರಾಜರಿಗೆ ತಂತಿ ಕಳಿಸಿದರು. ಡಾ. ನಾಡಗೇರ ಮೊದಲಾದ ಮಾನ್ಯರೂ ಈ ಸಭೆಗೆ ಹೋಗಿದ್ದರು. 'ರಜತೋತ್ಸವ ಸ್ಮಾರಕ ಕನ್ನಡ ವಾಚನಾಲಯ'ವೊಂದು ಮುಂಬೈಯಲ್ಲಿ ಆ ದಿನ ಸ್ಥಾಪಿಸಲ್ಪಟ್ಟಿತು. ಅಂತೂ ಮುಂಬೈಯಲ್ಲಿ ಒಂದು ಕನ್ನಡ ವಾಚನಾಲಯವು ಪ್ರಾರಂಭವಾಯಿತು. ಆನಂದದಲ್ಲಿ ಆನಂದ!

ಮೈಸೂರ ಕರ್ನಾಟಕ.

ಪಂಡಿತ ಮೋತಿಲಾಲರು ಬೆಂಗಳೂರಿಗೆ ಬಂದು ಮಹಾತ್ಮರನ್ನು ಕಂಡು ರಜತೋತ್ಸವಕ್ಕಾಗಿ ಮೈಸೂರಿಗೆ ಹೋಗಿದ್ದರು. ಬೆಂಗಳೂರ ಕಾಂಗ್ರೆಸ ಕಮಿಟಿ ಹಾಗೂ ಹಿಂದೀ ಪ್ರಚಾರಕ ಸಭೆಗಳು ಪಂಡಿತರಿಗೆ ಮಾನಪತ್ರವನ್ನರ್ಪಿಸಿದರು.

[illegible] ಪತ್ರಿಕೆಯನ್ನು ಹೊರಡಿಸಲು ಸರಕಾರದವರು ಅಪ್ಪಣೆಯನ್ನು ಕೊಡಲಿಲ್ಲ. ಕಾನೂನಿನ ಬೆದರಿಕೆಯನ್ನು ತೋರಿಸುತ್ತಲಿದ್ದಾರೆ; ಮೊದಲಾಗಿ ತಗಡೂರ ರಾಮಚಂದ್ರರಾಯರನ್ನು ಸಂಸ್ಥಾನದ ಗಡಿಪಾರ ಮಾಡುವ ವಿಚಾರದಲ್ಲಿರುವದರಿಂದ ಸತ್ಯಾಗ್ರಹವನ್ನು ಇದೇ ೧೫ ರಿಂದ ಪ್ರಾರಂಭಿಸುವೆವೆಂದು ಶ್ರೀ ತಗಡೂರ ರಾಮಚಂದ್ರರಾಯರು ತಿಳಿಸಿರುವರು.

ಕನ್ನಡಿಗ.

ಬಾಗಲಕೋಟೆ ಶ್ರಾವಣ ಬಹುಳ ೧ ಶಕೆ ೧೮೪೯.

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೇಣಮಾಡಿ ಕಟ್ಟುವೆನಾನು।
ನಿನ್ನ ಬೆಸನವಮಾಡಿದಂಥ ಮಕ್ಕಳ ದೊಂಪಿ!
ನನ್ನದಾದರು ಚಿನ್ನ ಮೇಣಬತ್ತಿಯು ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ।
ನನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ

—ಅಂಬಿಕಾತನಯದತ್ತ

ಮೈಸೂರ ಮಹಾರಾಜರ ಶ್ರೀಕೃಷ್ಣ ಒಡೆಯರರ ರಜತೋತ್ಸವವು ಅತ್ಯಂತ ಉಲ್ಲಾಸ, ವೈಭವಗಳಿಂದ ಮೈಸೂರ ಸಂಸ್ಥಾನದ ಎಲ್ಲ ಗ್ರಾಮ ಹಾಗೂ ನಗರಗಳಲ್ಲಿ ನಡದ ವೃತ್ತಾಂತವನ್ನು ಕೇಳಿ ಆವನಿಗೆ ಆನಂದವಾಗಲಿಕ್ಕಿಲ್ಲ? ಮೈಸೂರ ಹೊರಗಿನ ಕನ್ನಡನಾಡಿನ ಭಾಗಗಳಲ್ಲಿಯೂ, ಮುಂಬಯಿ, ಮದ್ರಾಸ, ಪುಣೆ, ಕಲಕತ್ತೆಗಳಲ್ಲಿಯೂ ಈ ಸಮಾರಂಭವು ನಡೆದುದು ವಿಶೇಷ ಸಂಗತಿಯು. ಭರತಖಂಡದ ಎಲ್ಲ ವೃತ್ತಪತ್ರಿಕೆಕರ್ತರೂ, ಮಹಾರಾಜರ ಆಳಿಕೆಯ ಬಗ್ಗೆ ಸಂತೋಷವನ್ನು ವ್ಯಕ್ತಗೊಳಿಸಿರುವರು. ಭರತಖಂಡದ ೬೦೦ ದೇಶೀಯ ಸಂಸ್ಥಾನಗಳಲ್ಲಿ ಮೈಸೂರೊಂದೇ ಒಳ್ಳೇ ಅಭಿವೃದ್ಧಿಗೆ ಬಂದಿರುವುದೆಂದೂ, ಮೈಸೂರಲ್ಲಿ ಕಂಡು ಬರುವ ರಾಜರಲ್ಲಿಯ ಭಕ್ತಿ, ವಿಶ್ವಾಸಗಳು ಮತ್ತಾವ ದೇಶೀ ಸಂಸ್ಥಾನಗಳಲ್ಲಿಯೂ ತೋರುವದು ಶಕ್ಯವಿಲ್ಲವೆಂದೂ "ಟೈಮ್ಸ್ ಆಫ ಇಂಡಿಯಾ" ಪತ್ರಿಕೆಯು ಸಹ ಒಪ್ಪಿದ್ದು, ಕರ್ನಾಟಕಸ್ಥರಿಗೆಲ್ಲ ಅತ್ಯಂತ ಅಭಿಮಾನದ ಸಂಗತಿಯಲ್ಲವೆ? ಇಂತಹ ಕನ್ನಡ ರಾಜನು ಅನೇಕ ವರ್ಷ ಬಾಳಲೆಂದೂ, ತನ್ನ ಸ್ವಂತ ಪ್ರಜೆಗಳಿಗೂ ಕನ್ನಡ ನಾಡಿನ ಬಂಧುಗಳಿಗೂ ಇನ್ನೂ ಹೆಚ್ಚಿನ ಆನಂದವನ್ನುಂಟು ಮಾಡಿ ಕೀರ್ತಿವಂತನಾಗಲೆಂದೂ ಆ ಭಗವಂತನಲ್ಲಿ ಪ್ರಾರ್ಥಿಸುವೆವು

ಕುಮಾರಿ ಕೆಥರಾಯಿನ ಮೇಯೊ ಎಂಬ ಅಮೇರಿಕೆಯ ವಿದುಷಿಯು ೧೧ ವರ್ಷದ ಹಿಂದೆ ಹಿಂದುಸ್ಥಾನಕ್ಕೆ ಬಂದಿದ್ದಳು. ಅವಳು ಈಗ್ಗೆ "ಮದರ ಇಂಡಿಯಾ" ಎಂಬ ಗ್ರಂಥವನ್ನು ಪ್ರಕಟಿಸಿದ್ದು, ಅದರಲ್ಲಿ ಹಿಂದೀಯರು ಸ್ವರಾಜ್ಯಕ್ಕೆ ಅಪಾತ್ರರೆಂದು ಸಾರಿದ್ದಾಳೆ. ಪ್ರಾಣಿಬಲಿ, ಹಿಂದೂ ಮುಸಲ್ಮಾನರ ಬಡಿದಾಟ, ಎಲ್ಲರ ಅನಾರೋಗ್ಯಕರ ಸ್ಥಿತಿಯಲ್ಲಿರುವದು, ೯-೧೦ ವರ್ಷದ ಕನ್ಯೆಯರ ಮೇಲಿನ ಬಲಾತ್ಕಾರ [illegible] ಭಾರತೀಯರ ಬಗ್ಗೆ ಬಹು [illegible] ಸಂಗತಿಗಳು ಆ ಪುಸ್ತಕದಲ್ಲಿ ತುಂಬಿವೆ. ಇಂಗ್ಲೆಂಡಿನ ಭಾರತೀಯ ವೈರಿಗಳಿಗೆ ಇದು [illegible] ಭಾರತೀಯರು ಸ್ವರಾಜ್ಯಕ್ಕೆ ಅಪಾತ್ರರೆಂದು [illegible] ವಾದಿಸಲು ಅವರು ಪ್ರಾರಂಭಿಸಿದ್ದಾರೆ. ಕೇವಲ ೩ ತಿಂಗಳ ಪ್ರವಾಸದಿಂದ ಇಂಥಹ ವಿಧಾನಗಳನ್ನು ಮಾಡಲು ಈ ವಿದುಷಿಯು ಧೈರ್ಯಗೊಂಡದ್ದು, ಇತರರ ಪ್ರೇರಣೆಯಿಂದೆಂಬದಾಗಿ ಕಲವರು ಹೇಳುತ್ತಾರೆ. ಅದು ಏನೇ ಇರಲಿ; ಪ್ರತಿಯೊಂದು ರಾಷ್ಟ್ರದಲ್ಲಿಯೂ "ಊರಿನಲ್ಲಿ ಹೊಲಗೇರಿ" ಎಂಬಂತೆ ದೋಷಗಳಿದ್ದೇ ಇರುವವು. ಉಚ್ಚ ಭಾವನೆಗಳನ್ನೂ, ಸಾಂಸ್ಕೃತಿಕ ಹೆಚ್ಚಳವನ್ನೂ ಲಕ್ಷಿಸದೇ, ಈ ದೋಷಗಳಿಗೆ ಮಾತ್ರ ಗಮನ ಕೊಡುವದು ಸರ್ವಥಾ ಅಯೋಗ್ಯವಾಗಿದೆ

ಕರ್ನಾಟಕದ ಕೂಲಿಗಳನ್ನು ಆಸಾಮಕ್ಕೆ ಕಳೆದ ೨ ವರ್ಷಗಳಿಂದ, ಇಲ್ಲದ ಸಲ್ಲದ, ಸುಳ್ಳು ಸೊಟ್ಟು ಆಶೆಗಳನ್ನು ತೋರಿಸಿ, ಕರೆದುಕೊಂಡು ಹೋಗುತ್ತಿರುವರು. ಈ ಕಾರ್ಯಕ್ಕಾಗಿ ದಳ್ಳಾಳರು ಅಲ್ಲಲ್ಲಿ ಸುಳಿದಾಡುತ್ತಲಿದ್ದು, ಅವರ ಮುಖ್ಯಸ್ಥನು ಧಾರವಾಡದಲ್ಲಿ ಗೂಡುಕಟ್ಟಿಕೊಂಡು ಕುಳಿತಿರುವನು. "ಒಂದೇ ವರ್ಷದ ಬಗ್ಗೆ ಸರಕಾರಕ್ಕೆ ಕೂಲಿಯವರು ಬೇಕಾಗಿದ್ದಾರೆ. ಒಂದು ವರ್ಷದ ಮೇಲೆ ನೀವು ಮರಳಿ ನಿಮ್ಮ ದೇಶಕ್ಕೆ ಬರಬಹುದು; ಅಲ್ಲಿ ಬೇಕಾದಷ್ಟು ಕೂಲಿ ದೊರೆಯುತ್ತದೆ; ಇಲ್ಲಿ ಯಾದರೂ ನೋಡಿ, ಕ್ಷಾಮ; ನಿಮಗೆ ಹೊಟ್ಟೆಗಿಲ್ಲ; ಬಟ್ಟೆಗಿಲ್ಲ; ತೊಂದರೆಬಡುವದೇಕೆ?" ಎಂಬದಾಗಿ ಸವಿ ಸವಿ ಮಾತನಾಡಿ, ಕರೆದೊಯ್ಯುವರು. ಅಲ್ಲಿಗೆ ಹೋದಮೇಲೆ ಈ ಕೂಲಿಕಾರರನ್ನು ಮಾತನಾಡಿಸುವವರೇ ಇಲ್ಲ. ಆಸಾಮ ಕಾಂಗ್ರೆಸ್ಸಿಕ್ಕೆ ಹೋದ ಹಿಂ. ಸೇ. ದಳದ ಸ್ವಯಂಸೇವಕರು ಈ ಬಗ್ಗೆ ಅಲ್ಲಿಯ ಹೃದಯದ್ರಾವಕ ಸಂಗತಿಗಳನ್ನು ಆಗ್ಗೆ ಪ್ರಕಟಿಸಿದ್ದನ್ನು "ಕನ್ನಡಿಗ"ನ ವಾಚಕರು ಮರೆತಿರಲಿಕ್ಕಿಲ್ಲ. ಕಾರವಾರ ಜಿಲ್ಲೆಯ ಕೆಲಕೂಲಿಕಾರರಿಗೆ ಕನ್ನಡದ ಹೊರತಾಗಿ ಯಾವ ಭಾಷೆಯೂ ಬರುತ್ತಿರಲಿಲ್ಲ; ದೇಶಪರ್ಯಟನ ಎಂದೂ ಮಾಡಿದವರೂ ಅಲ್ಲ ಹತ್ತಿರ ಕಾಸಿಲ್ಲ; ಹೀಗಿದ್ದರೂ ಆಸಾಮದಲ್ಲಿಯ ದುರ್ಘಟ ಪ್ರಸಂಗವನ್ನು ತಪ್ಪಿಸಿಕೊಳ್ಳಲಿಕ್ಕೆ ಕಾಲು ನಡಿಗೆಯಿಂದ, ಆಸಾಮದಿಂದ ಹೊರಟು, ಕಾರವಾರಕ್ಕೆ ಬಂದು ಸೇರಿದರು! ಇಷ್ಟೊಂದು ಕಷ್ಟ ಬಟ್ಟು ಅವರು ಮರಳಿ ತಮ್ಮ ನಾಡಿಗೆ ಬರಬೇಕಾದ್ದರೆ, ಆಸಾಮದಲ್ಲಿ ಅವರಿಗೆ ಎಂತಹ ಎಡರುಗಳು ಬಂದಿರಬೇಕೆನ್ನುವದನ್ನು ಎಲ್ಲರೂ ಕಲ್ಪಿಸಬಹುದಾಗಿದೆ. ಈ ಬಗ್ಗೆ ಕನ್ನಡ ಪತ್ರಿಕೆಗಳಲ್ಲಿ ಸಾಕಷ್ಟು ಬೊಬ್ಬಾಟವೂ ಆಗಿದೆ. ಆದರೆ ನಮ್ಮ ಮುಂಬೈ ಸರಕಾರಕ್ಕೆ ಇದು ತಿಳಿಯದೇ ಹೋಯಿತು. ಈ ಸಲದ ಮುಂಬೈ ಕಾಯದೇ ಮಂಡಲದಲ್ಲಿ, ಆಸಾಮಕ್ಕೆ ಹೋದ ಕನ್ನಡ ಕೂಲಿಕಾರರ ಬಗ್ಗೆ ಸಂಪೂರ್ಣ ಸಂಗತಿಗಳನ್ನರುಹಬೇಕಾಗಿ ಶ್ರೀ ಕರ್ಕಿಯವರು ಕೇಳಿದಾಗ್ಗೆ ಆ ಬಗ್ಗೆ ಹೆಚ್ಚಿನ ವಿಚಾರವು ನಡೆದಿದೆಂಬ ಪಡಿಯಚ್ಚಿನ ಉತ್ತರವನ್ನು ಸರಕಾರದವರು ಕೊಟ್ಟರು! ಇನ್ನೂ ವಿಚಾರಿಸುವದೇ ತೀರಿಲ್ಲ! ರಾಜಕೀಯ ವಿಷಯಗಳು ಎಲ್ಲಿಯಾದರೂ ಮೂಲೆಯಲ್ಲಿ ನಡೆದಿದ್ದರೂ ಚಪಲವಾದ ಸರಕಾರದ ಕಿವಿಗೆ ಕೂಡಲೇ ಬಂದು ತಗಲುತ್ತವೆ. ಆದರೆ ಇಂತಹ ವಿಷಯಗಳು ಮಾತ್ರ ಅಜ್ಞಾನ ಸಾಗರದಲ್ಲಿ ತೇಲುತ್ತವೆ!

ಗವರ್ನರರಿಗೆ ಖದ್ದರದ ಬಟ್ಟೆಯಲ್ಲಿ ಮುದ್ರಿತವಾದ ಮಾನಪತ್ರವನ್ನು ಕೊಡುವದು ಅಪಮಾನಕರವೆಂದು ಮಂಗಳೂರಿನ ಕಲೆಕ್ಟರರು ವಿಚಿತ್ರವಾಗಿ ವಿಚಾರಿಸಿ, ಹಾಗೆ ಮಾಡಕೂಡದೆಂದು ಉಪ್ಪಿನಂಗಡಿ ತಾಲೂಕಿನ ಲೋಕಲ್ ಬೋರ್ಡಿನ ಅಧ್ಯಕ್ಷರಾದ ಶ್ರೀ. ಮೊಳಹಳ್ಳಿ ಶಿವರಾಯರಿಗೆ ತಿಳಿಸಿದ್ದಾರೆ. ಈ ಲೋಕಲ್ ಬೋರ್ಡಿನವರು ಖದ್ದರದ ಮೇಲೆ ಮುದ್ರಿಸಿದ ಮಾನಪತ್ರವನ್ನು ಕೊಡಬೇಕಾಗಿ ನಿರ್ಣಯಿಸಿದ್ದರು. ಆದರೆ ಅದು

ಕಲೆಕ್ಟರರಿಗೆ ಸಹನವಾಗಲಿಲ್ಲ. ಶ್ರೀ. ಶಿವರಾಯರು ಕೈ. ಗೋಖಲೆಯವರ ಶಿಷ್ಯರು ರಾಜಕಾರಣದಲ್ಲಿ ಪ್ರಾಗತಿಕ ಪಕ್ಷಕ್ಕೆ ಸೇರಿದವರು. ಅಸಹಯೋಗದ ಝಂಝಾವಾತದಲ್ಲಿ ಸಹ ಅವರು, ರಾಷ್ಟ್ರೀಯಪಕ್ಷವನ್ನು ಸ್ವೀಕರಿಸಿದವರಲ್ಲ. ಹೀಗಿದ್ದರೂ, ಅವರಲ್ಲಿ ಸಹ ತಮ್ಮ ವಿಶ್ವಾಸವಿಲ್ಲವೆಂದು ಕಲೆಕ್ಟರರು ಸಾರಿದ್ದು ಅತ್ಯಾಶ್ಚರ್ಯವಾದುದು. ಅಥವಾ ಆಶ್ಚರ್ಯವಾದುದಾದರೂ ಏನು ? ಖಾದಿಯ ಭಕ್ತರಾದುದೇ ಶ್ರೀ. ಶಿವರಾಯರ ತಪ್ಪು ! ಆ ತಪ್ಪಿಗಾಗಿ ಅಪಮಾನವೆಂಬ ಟೀಕೆಯ ದಂಡವನ್ನು ತೆತ್ತಬೇಕೆಂದು ಕಲೆಕ್ಟರರು ಕಾಣುತ್ತಾರೆ. ಬ್ರಿಟಿಶ್ ನ್ಯಾಯದೇವತೆಯ ಪೇಟೆಯಲ್ಲಿ ನಡೆಯತಕ್ಕಂತೆ ನಡೆದಿದೆ. ಇತ್ತ, ಶ್ರೀ. ಶಿವರಾಯರು ಒಳ್ಳೇ ಧೈರ್ಯದಿಂದ ಸಮಯೋಚಿತವಾದ ಉತ್ತರವನ್ನು ಕೊಟ್ಟಿದ್ದಕ್ಕಾಗಿ ನಮಗೆ ಬಹು ಆನಂದವೂ ಅಭಿಮಾನವೂ ಎನಿಸಿದೆ. "ಖದ್ದರವೆಂದರೆ ಹಿಂದೀ ಜನಾಂಗದ ಸ್ವಾಭಿಮಾನದ ಮತ್ತೂ ಸ್ವಾವಲಂಬನದ ಸಂಕೇತ, ದೇಶಪುಡು ವಸ್ತ್ರಗಳಲ್ಲಿ ಮಾನಪತ್ರಗಳನ್ನು ಮುದ್ರಿಸುವ ಪದ್ಧತಿಯು ಇಷ್ಟೇ ಇರುತ್ತದೆ. ಆದುದರಿಂದ ಅರಿವೆಯಮೇಲೆ ಮುದ್ರಿಸಿದರೆ, ಅಪಮಾನಕರವೆಂಬ ನಿಮ್ಮ ಭ್ರಮೆಯನ್ನು ಕಿತ್ತಿಹಾಕಿರಿ; ಈ ವಿಷಯದಲ್ಲಿ ಗವರ್ನರರ ಸ್ವಂತ ಅಭಿಪ್ರಾಯವೇನಿದೆಂಬುದನ್ನಾದರೂ, ಕಲೆಕ್ಟರರೇ, ನೀವು ತಿಳಿದುಕೊಳ್ಳಿ" ಎಂಬದಾಗಿ ಶ್ರೀ. ಶಿವರಾಯರು ಉತ್ತರಕೊಟ್ಟಿದ್ದಾರೆ. ಇದರಿಂದಲಾದರೂ ಕಲೆಕ್ಟರರ ಭ್ರಮನಿರಸನವಾಗುದೋ ಇಲ್ಲವೋ ನೋಡಬೇಕು.

ಹಿಂದೂ ಧರ್ಮದವರಿಗೆ ತಮ್ಮ ಧರ್ಮದ ಅಭಿಮಾನವಿಲ್ಲ; ಸಾಕಷ್ಟು ಅವರಲ್ಲಿ ವಿಶ್ವಾಸವೂ ಇಲ್ಲವೆಂಬುದಾಗಿ ಹೇಳಬಹುದಲ್ಲವೇ ? ಯಾಕಂದರೆ ಹಿಂದೂ ಧರ್ಮದಿಂದ ಪರಧರ್ಮಕ್ಕೆ ಈ ೧ ಸಾವಿರ ವರ್ಷಗಳಲ್ಲಿ ೧೦ ಕೋಟಿ ಜನರು ಪರಿವರ್ತನ ಹೊಂದಿರುವರು. ಸಧ್ಯದಲ್ಲಿ ಇಸ್ಲಾಮ ಧರ್ಮಕ್ಕೂ, ಕ್ರೈಸ್ತ ಧರ್ಮಕ್ಕೂ ಹಿಂದೂಮತೀಯರನ್ನು ಸೆಳೆಯುತ್ತಲೂ ಇದ್ದಾರೆ. ಯಾವನಾದರೊಬ್ಬನು ಸ್ವಸಂತೋಷದಿಂದ, ಸ್ವಬುದ್ಧಿಯಿಂದ, ತನ್ನ ಧರ್ಮಕ್ಕಿಂತ ಬೇರೆ ಧರ್ಮವೇ ಶ್ರೇಷ್ಠವಾದುದೆಂಬುದನ್ನು ಮನಗಂಡು, ಆ ಧರ್ಮದೀಕ್ಷೆಯನ್ನು ತೆಗೆದುಕೊಂಡರೆ ವಿಹಿತವೇ. ಆ ಬಗ್ಗೆ ಯಾರೂ ದ್ವೇಷವನ್ನು ತಳೆಯುವ ಕಾರಣವಿಲ್ಲ. ಆದರೆ, ಹಣದ ಆಶೆ, ಅಧಿಕಾರದ ಆಶೆ, ಇಲ್ಲದ ಬೆದರಿಕೆ, ಸಲ್ಲದ ಆಗ್ರಹ, ಮೊದಲಾದವುಗಳಿಂದ ತಮ್ಮ ಧರ್ಮಕ್ಕೆ ಹಿಂದೂಮತೀಯರನ್ನು ಸೆಳೆದುಕೊಳ್ಳುವದು, ಧರ್ಮದ ಮುಖ್ಯ ನಿರ್ಬಂಧಗಳಿಗೆ ವಿರೋಧವಾದುದು; ಹಾಗೂ ನೀತಿವಿರುದ್ಧವಾದುದು. ಆದರೂ ಈ ಬಗೆಯ ಪದ್ಧತಿಯು ಎಲ್ಲಕಡೆಗೂ ರೂಢವಾಗಿವೆ. ಉತ್ತರ ಹಿಂದುಸ್ಥಾನದಲ್ಲಿ ಇದನ್ನು ಪ್ರತಿಬಂಧಿಸಲಿಕ್ಕೆ ಶುದ್ಧಿ ಸಂಘಟನೆಗಳು ಹೊರಟಿವೆ. ದಕ್ಷಿಣ ಹಿಂದುಸ್ಥಾನದಲ್ಲಿ ಇವುಗಳ ಸದ್ದು ಅಷ್ಟೊಂದು ಇಲ್ಲ. ಒಂದಕ್ಕೆ ಕ್ರೈಸ್ತರು ಕರ್ನಾಟಕದ ಅನೇಕ ಭಾಗಗಳಲ್ಲಿ ಹಿಂದೂ ಧರ್ಮೀಯರನ್ನು ತಮ್ಮ ಮತಕ್ಕೆ ಪರಿವರ್ತಿಸಿ, ಅಲ್ಲಲ್ಲಿ ಮಿಶನ್‌ಗಳನ್ನು ಸ್ಥಾಪಿಸಿ, 'ಚರ್ಚ' ಗಳನ್ನು ಕಟ್ಟಿದರು; ಆವೇಳೆ ಬಹುದಿನಗಳೂ ಅವರು ಇತ್ತೀಚೆ ಅವರ ಧರ್ಮ ಪರಿವರ್ತನದ ಸುದ್ದಿಯು ಅಷ್ಟೊಂದು ಕೇಳಬರುವದಿಲ್ಲ. ಆದರೆ ಮಂಗಳೂರಲ್ಲಿ ಕಳೆದ ವಾರದಲ್ಲಿ ಒಂದು ಧರ್ಮ ಪರಿವರ್ತನದ ಸಂಪೂರ್ಣ ವರ್ತಮಾನವನ್ನು ಇದೇ ವಾರದ "ಕನ್ನಡಿಗ" ದಲ್ಲಿ ಓದಬಹುದು. ಶಿವರಾಯನೆಂಬೊಬ್ಬ ವಿದ್ಯಾರ್ಥಿಯು ಹುಟ್ಟಿದಾರಭ್ಯ ಆ ಒಂದು ದಿವಸದವರೆಗೆ ಹಿಂದೂ ಧರ್ಮದಂತೆ ನಡೆದುಕೊಂಡಿದ್ದನು. ಆ ದಿನ ಬೆಳಿಗ್ಗೆ ಸ್ನಾನ ಸಂಧ್ಯಾದಿ ಕರ್ಮಗಳನ್ನು ಸಹ ಮಾಡಿರುವನು. ಇಂತಹನು ಮಧ್ಯಾಹ್ನದಲ್ಲಿ ಥಟ್ಟನೇ ಕ್ರೈಸ್ತ ಮತವನ್ನು ಸ್ವೀಕರಿಸಲು ನಿಶ್ಚಯಿಸಿದನಂತೆ! ಆ ಹುಡುಗನನ್ನು ಕಾಣಬೇಕೆಂದರೆ ಅವನ ಅಣ್ಣನಿಗೆ ಸಹ ಪಾದ್ರಿಗಳು ಅಪ್ಪಣೆಕೊಡಲಿಲ್ಲ. ಕ್ರೈಸ್ತ ಧರ್ಮದ ಗುಟ್ಟನ್ನು ಅವನು ಚನ್ನಾಗಿ ಅರಿತುಕೊಂಡೇ ಈ ಕಾರ್ಯದಲ್ಲಿ ಧುಮ್ಮಿಕ್ಕಿದ್ದರೆ, ತಮ್ಮನನ್ನು ಕಾಣಲಿಕ್ಕೆ ಪಾದ್ರಿಗಳು ಆತಂಕವನ್ನುಂಟುಮಾಡಿದುದುಯೇಕೆ? ಈ ದಿನವಲ್ಲದಿದ್ದರೂ, ನಾಳೆಯಾದರೂ ಒಳಗಿನ ನಿಜವಾದ ಹುಳುಕು ಹೊರಗೆ ಬೀಳಲೇಬೇಕು; ನಾವದನ್ನೇ ನಿರೀಕ್ಷಿಸುತ್ತಲಿರುವೆವು. ಇತ್ತ ಮಂಗಳೂರಿನ ಹಿಂದುಗಳು ಈ ಗೊಂದಲದಿಂದ ಕೊಂಚ ಎಚ್ಚರಾದುದು ಸುಚಿಹ್ನವು!

'ಕನ್ನಡಿಗ'ನಿಗೆ ಸಹಾಯ.

ರೋಣದ ಕನ್ನಡಾಭಿಮಾನಿಗಳಾದ ಶ್ರೀ ವಿರುಪಾಕ್ಷ ಕರವೀರ ಕುಲಕರ್ಣಿಯವರು ಉಪಕಾರ ಕರ್ತೃಗಳಾಗಿ ಸ್ವಸಂತೋಷದಿಂದಲೂ 'ಕನ್ನಡಿಗ' ನ ಮೇಲಿನ ಪ್ರೀತಿಯಿಂದಲೂ ಈ ವರ್ಷ ೫ ರೂ, ಕಳುಹಿದ್ದಾರೆ. ಗಳಗಲಿಯ ಶ್ರೀ ವಸಂತ ಮಾಧವಾಚಾರ್ಯ ನರಸಿಂಹಾಚಾರ್ಯರು ಈವರ್ಷ, ಹಾಗೂ ಇಲ್ಲಿಯ ಶ್ರೀ ಹೂಲಿ ಮಾಧವರಾಯರು ೫ ಜನ ಚಂದಾದಾರರನ್ನು ಕೂಡಿಸಿಕೊಟ್ಟಿದ್ದಾರೆ. ಕನ್ನಡನಾಡಿನ ಕನ್ನಡಾಭಿಮಾನಿಗಳು ಇದೇ ಬಗೆಯಾಗಿ ಸಹಾಯಮಾಡಹತ್ತಿದರೆ, 'ಕನ್ನಡಿಗ'ನು ಇನ್ನೂ ಹೆಚ್ಚು ಹುಮ್ಮಸ್ಸಿನಿಂದ ಕನ್ನಡಿಗರ ಕೈಸೇರುವನು.

ವಿನಾಯಕ ಪುತ್ರರೂ. ಸಿ ತಾತನಯರೂ

ಅಯ್ಯಾ ವಿನಾಯಕ ಪುತ್ರರೆ, 'ಕರ್ನಾಟಕ ವೈಭವ'ದಲ್ಲಿ ಪ್ರಸಿದ್ಧವಾದ ತಮ್ಮ ಲೇಖವನ್ನು ಓದಿದ್ದಾಯಿತು. 'ನಿಮ್ಮ ನಿರಾಧಾರವಾದ ಮಾತುಗಳಲ್ಲಿ ಏನೂ ಅರ್ಥವಿಲ್ಲದೆ. ವ್ಯರ್ಥವಾಗಿ ಕಾಗದಗಳನ್ನು ಕಪ್ಪುಮಾಡಿರುವಿರಿ' ಎಂದು ಉಪದೇಶಿಸಬಂದವರಾದ ತಾವು ಆ ಮಾತಿಗೆ ಸ್ವತಃ ಗುರಿಯಾಗಿರುವಿರಲ್ಲ!

ಗಿರಿಯ 'ಮೇಲೆ' ಮಳೆಯಾಯಿತೆಂದು ಹೇಳುವದು ಸ್ವಾಭಾವಿಕವೇ. ಯಾಕಂದರೆ ಗಿರಿಯೆಂದರೆ ನೆಲಬಿಟ್ಟು ಎಷ್ಟಾದರೂ ಎತ್ತರದಲ್ಲಿ ತಕ್ಕಸ್ಥಾನವು. ಎತ್ತರವಾದ ಸ್ಥಳಗಳಬಗ್ಗೆ ಮಾತಾಡಬೇಕಾದರೆ "ಮೇಲೆ" ಎಂಬ ಶಬ್ದವನ್ನು ಉಪಯೋಗಿಸುವೆವು. ಉದಾಹರಣಾರ್ಥವಾಗಿ ಡಬ್ಬದ ಮೇಲೆ ಕುಳಿತಿದ್ದಾನೆ, ಮಾಳಿಗೆಯ ಮೇಲೆ ಹೋಗುತ್ತೇನೆ ಮುಂತಾದ ರೀತಿಯಲ್ಲಿ ವ್ಯವಹೃತವಾದ ವಾಕ್ಯಗಳನ್ನು ನಾನೇನು ತಮಗೆ ಕಲಿಸಬೇಕಾಗಿಲ್ಲ. ಆದರೆ ಇಂಥಿಂಥ ಪಟ್ಟಣಗಳ "ಮೇಲೆ" ಇಷ್ಟಿಷ್ಟು ಮಳೆಯಾಯಿತೆಂದು ಹೇಳಿದ್ದು ಯಾವ ಭೂಗೋಲದಲ್ಲಿಯೂ ಇಲ್ಲ. ಚಂದಗಡವೆಂಬ ಪಟ್ಟಣದಲ್ಲಿ ೧೦೭ ಇಂಚು ಮಳೆಯಾಗುತ್ತದೆಂದೂ, ಲಾಹೋರವೆಂಬ ಪಟ್ಟಣದಲ್ಲಿ ವರ್ಷದಲ್ಲಿ ೨೦ ಇಂಚು ಮಳೆ, ಚಿರಾಪುಂಜಿಯೆಂಬ ಪಟ್ಟಣದಲ್ಲಿ ೫೦೦ ಇಂಚು, ಕಲಕತ್ತೆಯೆಂಬ ಪಟ್ಟಣದಲ್ಲಿ ೬೫ ಇಂಚು ಮಳೆಯಾಗುವದೆಂದೂ ಸೊಲ್ಲಾಪೂರ, ವಿಜಾಪೂರ, ಬಳ್ಳಾರಿ ಜಿಲ್ಲೆಗಳಲ್ಲಿ ತೀರ ಕಡಿಮೆ ಮಳೆಯಾಗುತ್ತದೆಂದೂ ಬೇರೆ ಬೇರೆ ಭೂಗೋಲಗಳು ಹೇಳುತ್ತಿವೆ. ಅಲ್ಲದೆ ವಿನಾಯಕ ಪುತ್ರರು ಹೇಳುವಂತೆ ಇಂಥಿಂಥ ಪಟ್ಟಣಗಳ "ಮೇಲೆ" ಇಷ್ಟಿಷ್ಟು ಮಳೆಯಾಯಿತೆಂದು ಎಲ್ಲಿಯೂ ಬರೆದಿಲ್ಲ. ಕಾಕತಾಲೀಯ ನ್ಯಾಯದಂತೆ ಒಬ್ಬ ಬರಹಗಾರನೂ (ತಿಳಿಯದೆ) ಪಟ್ಟಣದ (ಕೊಳ್ಳದ ಮೇಲೆ ನೀರು ಬೀಳುತ್ತದೆಂಬ ಕಲ್ಪನೆಯ ಅಜ್ಞಾನಿಗಳಂತೆ) ಹಾಗೆ ಬರೆದಿದ್ದರೆ ಅವರ ಪಾಂಡಿತ್ಯವು ತಾನೇ ಸಿದ್ಧವಾಗುತ್ತದೆ.

—ಸೀತಾ ತನಯ.

"ಕಲಬುರ್ಗೆಯಲ್ಲಿಯ ಕನ್ನಡವೂ, ನೂತನ ವಿದ್ಯಾಲಯದ ಉದ್ಧಾಮತನವೂ."

(ನಮ್ಮ ಸುದ್ದಿಗಾರರಿಂದ)

ಯಾವದಾದರೊಂದು ಸಂಸ್ಥೆಯು ಅಸ್ತಿತ್ವಕ್ಕೆ ಯೋಗ್ಯವಾಗ ಬೇಕಾದರೆ ಅದು ಅಲ್ಲಿಯ ಸ್ಥಾನಿಕ ಸ್ಥಿತಿಯನ್ನವಲಂಬಿಸಿ ಇರಬೇಕಾಗುವದು. ಆದರೆ ಮರಾಟಿಗರ ಉನ್ಮತ್ತತೆಯು ಎಲ್ಲ ಕಡೆಗೆ ಬೆಳೆದಂತೆ ಕಲಬುರ್ಗೆಯಲ್ಲಿಯೂ ಬೆಳೆದದ್ದ ಕನ್ನಡಿಗರ ದುರ್ದೈವದಿಂದು, ಹುಟ್ಟು ಕನ್ನಡಿಗರಾದ ಕನ್ನಡಿಗರಿಗೆ "ಮಾತೃಭಾಷೆಯಾದ" ಮರಾಟಿಯಲ್ಲಿ ಶಿಕ್ಷಣವನ್ನು ಕೊಡುವ ಹಟವನ್ನು ಇಲ್ಲಿಯ ನೂತನ ವಿದ್ಯಾಲಯವು ಬಿಡಲೊಲ್ಲದಾಗಿದೆ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ಉದ್ದೇಶವನ್ನೆಲ್ಲಿಯವರೆಗೆ ನೂತನ ವಿದ್ಯಾಲಯವು ಇಟ್ಟುಕೊಳ್ಳುವದಿಲ್ಲವೋ ಅಲ್ಲಿಯವರೆಗೆ ಅದು ಕಲಬುರ್ಗೆಯಲ್ಲಿ ತನ್ನ ಹಕ್ಕನ್ನು ಪ್ರಸ್ಥಾಪಿಸುವದಿಲ್ಲ ಈ ಮರಾಟೀ ಜನರ "ಪಾದ್ರೀ"ತನವು ಇಲ್ಲಿ ಬೆಳೆದದ್ದು, ಅಷ್ಟೇನು ಆಶ್ಚರ್ಯದ ಮಾತಲ್ಲ! ಆದರೆ ಅದನ್ನು ಬೆಳೆಯಗೊಟ್ಟ ಇಲ್ಲಿಯ ಕನ್ನಡಿಗರ ಅಭಿಮಾನಶೂನ್ಯತೆಯೂ, ಕಾರ್ಯಾಕ್ಷಮತೆಯೂ ಆಶ್ಚರ್ಯವಾದವು!! ಹುಟ್ಟುಗನ್ನಡಿಗರನ್ನು ಮರಾಟಿಗೆ "ಬಾಟಾಯಿಸುವ" ಪಾದ್ರೀತನವನ್ನು ಕೈಕೊಂಡಿರುವ ನೂತನ ವಿದ್ಯಾಲಯಕ್ಕೆ ಕಣ್ಣು ಮುಚ್ಚಿ ಸಹಾಯ ಮಾಡುವ ಕನ್ನಡಿಗರ ಮೂರ್ಖತೆಯ ಫಲವಿದು! ಬಸವಾದಿ ಪ್ರಮಥ ಗಣಂಗಳು ಕಲಬುರ್ಗಿಯಲ್ಲೂ ಅದರ ಸುತ್ತುಮುತ್ತಲಿನ ಪ್ರದೇಶದಲ್ಲೂ ಕನ್ನಡದಲ್ಲಿ ತಮ್ಮ ಧರ್ಮವನ್ನು ಸಾರಿರುವರು ಶರಣಬಸವಸಂತನು ಕನ್ನಡದಲ್ಲಿ ಉಪದೇಶಿಸುತ್ತ ಕಲಬುರ್ಗಿಯಲ್ಲಿಯೇ ಸಮಾಧಿಯನ್ನು ಹೊಂದಿರುತ್ತಾನೆ' ಸುಸ್ವರದಿ ಜೈಮಿನಿಯನ್ನು ಹಾಡಿದ ಲಕ್ಷ್ಮೀಶ ಕವಿಯು ಆ ಹರದಾರಿಗಳಲ್ಲಿಯೇ ಜನ್ಮಿಸಿರುವನು! ಕನ್ನಡ ಭಾಷೆಯು ಜನ್ಮಭೂಮಿಯಲ್ಲಿಯೇ ಕನ್ನಡವನ್ನು ತುಳಿದೊತ್ತಿ ಉದ್ಧಾಮತನದಿಂದ ತನ್ನ ಧ್ವಜಪತಾಕೆಯನ್ನೆತ್ತಿರುವ ಈ ನೂತನ ವಿದ್ಯಾಲಯವನ್ನೂ ಮತ್ತು ಅಲ್ಲಿಯ ಚಾಲಕರ ಕನ್ನಡ ವಿಷಯಕ್ಕಿರುವ ದ್ವೇಷವನ್ನೂ ನೋಡಿದರ ಯಾವ ಕನ್ನಡಿಗನಲ್ಲಿ ದ್ವೇಷವು ಉದಯವಾಗಲಿಕ್ಕಿಲ್ಲ! ಕನ್ನಡ ಸಾಲಿನ ದುಡ್ಡಿನಿಂದ ಪುಷ್ಟನಾದ ಈ ಮರಾಟೀ ಬಾವುಗವು ಕನ್ನಡಿಗರ ಮೇಲೆಯೇ ಗುರ್ರೆನ್ನ ಹತ್ತಿದೆ. ಶ್ರೀ ಬಸವೇಶ್ವರನ ಅನುಯಾಯಿಗಳಾದ ಲಿಂಗಾಯತ ಬಂಧುಗಳೇ, ಈ ಸಾಲೆಯ ಚಾಲಕರು ಘಂಡಿಗೆ ಬಂದಾಗ್ಗೆ ಎಚ್ಚರಿಕೆ! ಲಕ್ಷ್ಮೀಶ ಕವಿಯ ಜಾತಿ ಬಂಧುಗಳಾದ ಬ್ರಾಹ್ಮಣರೇ, ಕನ್ನಡದಲ್ಲಿ ಶಿಕ್ಷಣಕೊಡದ ಹೊರ್ತು ಸಹಾಯ ಮಾಡುವದು ನಿಮ್ಮ ನಿರಭಿಮಾನತೆಯ ಲಕ್ಷಣವೇಸರಿ! ಈ ಸಂಸ್ಥೆಯೂ ಅದರ ಕಟ್ಟಡವೂ ಇಂತಹ ಮರಾಟಿಗರ ವಶದಲ್ಲಿರುವದು, ಇಲ್ಲಿಯ ಕನ್ನಡಿಗರಿಗೆ ಲಾಂಛನಾಸ್ಪದವು! ನಮ್ಮದುರ್ಗಿನ ಕೀರ್ತಿಮಂತವಾಗಿ ಎದ್ದು ನಿಂತಿರುವ ಈ ಅಪಮಾನಕಾರಕ ನಿರ್ಲಜ್ಜತೆಯನ್ನು ಅಳಿದು ಬಿಡುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಿದೆ ಎಲ್ಲಿಯವರೆಗೆ ಕನಿಷ್ಟ ಪಕ್ಷಕ್ಕೆಂದರೆ ಈ ಸಂಸ್ಥೆಯಲ್ಲಿ ಕನ್ನಡವು ಮರಾಟಿಗೆ ಸಧಿಸಮಾನವಾಗುವದಿಲ್ಲವೋ ಅಲ್ಲಿಯವರೆಗೆ ಕನ್ನಡಿಗರು ಸಹಾಯ ಮಾಡುವದೆಂದರೆ ಮರವು ಕೊಡ್ಲಿಗೆ ಕಾವುತಯಾರಿಸಿ ಕೊಟ್ಟಂತೆಯೇ ಸರಿ.

ಇಲ್ಲಿಯ ಉಸ್ಮಾನಿಯಾ ಸ್ಕೂಲಿನಲ್ಲಿ ವಾರ್ಷಿಕ ಸಮಾರಂಭ ಮಹೋತ್ಸವದಲ್ಲಿ ವಕೀಲರ ವಿಷಯವಾದ ಫಾರ್ಸನ್ನು ಆಡಿ ತೋರಿಸಿದ್ದಕ್ಕೆ ಕೆಲವು ಪ್ರತಿಷ್ಟಿತ ವಕೀಲರು ಆ ಶಾಲೆಯ ಹೆಡ್‌ಮಾಸ್ತರರಮೇಲೂ ಇಲ್ಲಿಯ ಶಾಲಾ ಖಾತೆಯ ಇನಸ್ಪೇಕ್ಟರರಮೇಲೂ ಕಟ್ಲೆ ಮಾಡಿದ್ದಾರೆ. ಈ ತರದ ವಿಚಾರವು ಕೆಲವು ವಕೀಲರಲ್ಲೇಕೆ ತೊರಬಂದಿದೆಯೋ ತಿಳಿಯದು. ಮದ್ರಾಸ ಇಲಾಖೆಯಲ್ಲಿ ಒರೆದು ಅಚ್ಚು ಹಾಕಿಸಿದ ಈ ನಾಟಕವು ಅಲ್ಲಿ ಅನೇಕ ಬಾರಿಗೆ ಅಲ್ಲಿಯ ವಕೀಲರೆಲ್ಲರು ನೋಡಿ ಬಿದ್ದುಬಿದ್ದು ನಕ್ಕರಂತೆ ಅವರಿಗೇನೂ ಅಪಮಾನವಾಗಲಿಲ್ಲ. ಅದೇಗ ಖರೇಅಡಿಗತನವು ಆದರೆ ಇಲ್ಲಿಯ ವಕೀಲರಿಗೆ ಅಪಮಾನವಾಯಿತಂತೆ. ಇರಲಿ ಈ ವಿಷಯವು ಕೋರ್ಟಿನಲ್ಲಿರುವದರಿಂದ ಟೀಕಿಸಲು ಬರುವಂತಿಲ್ಲ

ತೆಲಗಿನಲ್ಲಿ ಮಾತನಾಡಿದರೆ ಲೋಕಮಾನ್ಯರಿಗೆ ರುಚಿಸದು

(ನಮ್ಮ ಸುದ್ದಿಗಾರರಿಂದ)

ಹೈದ್ರಾಬಾದ:- ಇಲ್ಲಿಯ ಟಿಳಕ ಜಯಂತಿಯು ವಾಡಿಕೆಯಂತೆ ಜರುಗಿತು. ಆಂಧ್ರ ಜನರ ಮೂಲ ಸ್ಥಾನವಾದ ಈ ಭಾಗ್ಯನಗರದಲ್ಲಿ ತೆಲಗಿನಲ್ಲಿ ಭಾಷಣ ಮಾಡುವದಕ್ಕೆ ಅಧ್ಯಕ್ಷರಾದ ಮಾಜೀ ನ್ಯಾಯಾಧೀಶರು ಆತಂಕ ಮಾಡಿದರು! ಶ್ರೀ ಕೋದಂಡರಾಮರಾಯರು ಭಷಣಮಾಡುವದಕ್ಕೆ ಎದ್ದಾಗ್ಗೆ ಶ್ರೀ ಕೇಶವರಾಯರು "ಸ್ವರ್ಗಸ್ಥರಾದ ಲೋ|| ಟಿಳಕರವರಿಗೆ ತೆಲಗು ಬಾರದ ಕಾರಣ ತೆಲಗಿನಲ್ಲಿ ಭಾಷಣಮಾಡಿದರೆ ಅದು ಮೃತಾತ್ಮರಿಗೆ ಹೋಗಿ ತಲಪುವದಿಲ್ಲ" ವೆಂಬ ವೇದಾಂತವನ್ನೂ ವಕೀಲಿಯನ್ನೂ ಮುಂದೆ ತಂದರು. ನ್ಯಾಯಮೂರ್ತಿಯವರ ತಂದೆಗೆ ಸಂಸ್ಕೃತ ಬರುವದಿಲ್ಲೆಂದು ಸಂಸ್ಕೃತ ಮಂತ್ರದಿಂದ ಮಾಡಿದ ಶ್ರಾದ್ಧವು ಪಿತರಗಳಿಗೆ ಮುಟ್ಟುವದಿಲ್ಲವೋ:? ಇನ್ನು ಮರಾಟಿಯಲ್ಲಿಯೇ ಶ್ರಾದ್ಧ ಮಾಡಲಿಕ್ಕೆ ಉಪಕ್ರಮಿಸಿರಿ, ಮಾಜೀ ನ್ಯಾಯಮೂರ್ತಿಗಳೇ; ಕೈ. ಗೋಖಲೆಯವರ ನಿಧನದಬಗ್ಗೆ ದುಃಖಪ್ರದರ್ಶನ ಮಾಡುವ ಠರಾವಿನ ವಿಷಯಕ್ಕೆ ಶ್ರೀ ಆಲೂರ ಇವರಿಗೆ ಕನ್ನಡದಲ್ಲಿಯೇ ಭಾಷಣ ಮಾಡಲಿಕ್ಕೆ ಅಪ್ಪಣೆ ಮಾಡಿದ ಸ್ವರ್ಗಲೋಕವಾನ್ಯರ ಉದಾರತನವೆತ್ತ! ಅವರ ಜೀವಿತ ರಹಸ್ಯವನ್ನರಿಯದ ಕೇಶವರಾಯರು ಅವರ ಆತ್ಮಕ್ಕೆ ತೆಲಗು ಭಾಷೆಯು ತಿಳಿಯುವದಿಲ್ಲೆಂದು ಹುಚ್ಚುವೇದಾಂತವನ್ನು ಕೊಚ್ಚುವ ಈ ಮರಾಟಿಯ ದುರಭಿಮಾನವೆತ್ತ!! ಇನ್ನು ಮೇಲಂದರೂ ಆಂಧ್ರರೂ ಕನ್ನಡಿಗರೂ ಬುದ್ಧಿಗಲಿತು ಕನ್ನಡ ದ್ವೇಷಿಕರಾದ ಕೇಶವರಾಯರನ್ನು ಬದಿಗೊತ್ತಿ' ಬೇರೆ ಕೆಲಸ ಮಾಡುವ ಉದ್ಯೋಗಕ್ಕೆ ಹತ್ತಬೇಕು ಆಂಧ್ರನಾಯವಾದ ಈ ಭಾಗ್ಯ ನಗರದಲ್ಲಿ ಕನ್ನಡಿಗ ಆಂಧ್ರರಿಗೆ ಈ ದುರ್ಭಾಗ್ಯವೊದಗುವದೆಂದರೆ ಅವರ ದೌರ್ಬಲ್ಯವೇ ಸರಿ.

ಇಹವೃತ್ತ.

ಗುಜರಾಥದಲ್ಲಿ ನೆರೆಹಾವಳಿಯಿಂದ ಪೀಡಿತರಾದ ಜನರಿಗೆ ಸಹಾಯ ಮಾಡಲು ಹಿಂ. ಸೇ. ದಳದ ವತಿಯಿಂದ ಶ್ರೀ ಕೆಲೂರ ಹಾಗೂ ಮಿರ್ಜಿ ಈ ಸ್ವಯಂ ಸೇವಕರು ಗುಜರಾತಕ್ಕೆ ಹೋಗಿದ್ದಾರೆ.

ಕಲಾದಗಿ ಬೀದಿಯಲ್ಲಿ ಒಂದು ಖಾದಿಯ ವಸ್ತ್ರವು ದೊರೆತಿದ್ದು, ಅದು 'ಕನ್ನಡಿಗ'ನ ಕಾರ್ಯಾಲಯದಲ್ಲಿದೆ. ಕಳೆದು ಕೊಂಡವರು ಅದರ ಗುರ್ತನ್ನು ಹೇಳಿ ತೆಗೆದುಕೊಂಡು ಹೋಗಬೇಕು.

ಒದಾಮಿಯ ಶಿರಸ್ತೇದಾರರಾದ ತೊರವಿ ಇವರಿಗೆ—ಬಾಗಲಕೋಟೆಗೆ ವರ್ಗವಾಗಿದೆ. ಒದಾಮಿಗೆ ಪುರಾಣಿಕ ಎಂಬುವವರು ಬರುವರೆಂದು ವಾರ್ತೆಯಿದೆ.

ಮಂಗಳೂರಲ್ಲಿ
ಕ್ರೈಸ್ತರ ಮುರ್ಖ್ಯಾಳತನವು.

ಮಂಗಳೂರಿನಲ್ಲಿ ಸೈಂಟ ಎಲೋಶಿಯಸ್ ಕಾಲೇಜ್ ಎಂಬುದೊಂದು ಉಚ್ಚ ಶಿಕ್ಷಣಾಲಯ. ಇಲ್ಲಿ ಬೆಳ್ಳಿ ಶಿವರಾವ್ ಎಂಬ ಹಿಂದೂ ವಿದ್ಯಾರ್ಥಿಯು ಪ್ರಥಮ ವರ್ಷದ ಬಿ. ಎ. ಕ್ಲಾಸಿನಲ್ಲಿ ಕಲಿಯುತ್ತಿದ್ದನು. ಅವನು ಕಲಿಯುವುದರಲ್ಲಿ ಚತುರನಾಗಿದ್ದು ಇಂಟರ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದನು. ಇವನ ಅಣ್ಣಾ ಶ್ರೀ. ಭುಜಂಗರಾಯರೆಂಬವರು ಅದೇ ಶಾಲೆಯಲ್ಲಿ ಅಧ್ಯಾಪಕರು. ಕಳೆದ ಶನಿವಾರ ಸಾಯಂಕಾಲ ಆಕಸ್ಮಿಕವಾಗಿ ಅವರಿಗೊಂದು ಪತ್ರಬಂದಿತು. ಅದು ಅವರ ತಮ್ಮನ ಸ್ವಹಸ್ತಾಕ್ಷರಗಳಲ್ಲಿತ್ತು. ಆ ಪತ್ರದ ಸಾರಾಂಶವು ಹೀಗೆ:- ನಾನು ಹಿಂದೂ ಧರ್ಮಕ್ಕಿಂತಲೂ ಕ್ರೈಸ್ತ ಧರ್ಮವೇ ಮೇಲೆಂದು ನಂಬಿಕೆಯುಳ್ಳವನಾದುದರಿಂದಲೂ, ಆ ಧರ್ಮವನ್ನು ಅಂಗೀಕರಿಸುವುದಕ್ಕೆ ನನ್ನನ್ನ ಪರಮಾತ್ಮನು ಪ್ರೇರಿಸುತ್ತಿರುವುದರಿಂದಲೂ ಹಾಗೆ ಮಾಡದ ಉಪಾಯವಿಲ್ಲ. ಇನ್ನು ಮುಂದೆ ನಾವಿಬ್ಬರೂ ಭಿನ್ನ ಧರ್ಮಗಳ ಅನುಯಾಯಿಗಳಾಗುವುದಿದ್ದರೂ ನಮ್ಮ ಭ್ರಾತೃ ಭಾವಕ್ಕೆ ಸ್ವಲ್ಪವೂ ಆತಂಕವಿರಲಾರದು. * *

ಈ ಪತ್ರವನ್ನು ತಂದುಕೊಟ್ಟ ಪಾದ್ರಿ ಮಹಾಶಯರಲ್ಲಿ ಶ್ರೀ ಭುಜಂಗರಾಯರು ಹೀಗೆ ಹೇಳಿದರಂತೆ:— "ಕ್ರೈಸ್ತ ಧರ್ಮವು ಪಾಶ್ಚಾತ್ಯ ದೇಶಗಳಲ್ಲಿ ಎಂತಹ ಅನಾಹುತಗಳನ್ನು ಮಾಡುತ್ತಿರುವುದೆಂಬುದನ್ನು ಅಲ್ಲಿಯ ಪ್ರಕೃತದ ಕ್ಷುಬ್ಧ ವಾತಾವರಣವು ಸಾರುತ್ತಿರುವುದದು. ಅಲ್ಲಿಯ ಜನರ ವರ್ತನೆಯು ಈಗ ಕ್ರೈಸ್ತ ಧರ್ಮಕ್ಕೆ ಸರೀ ವಿರುದ್ಧವಾದುದು. ನೀವು ಅಲ್ಲಿ ನಿಮ್ಮ ಧರ್ಮ ಪ್ರಸಾರವನ್ನು ಮಾಡುವುದರ ಬದಲಾಗಿ ಇಂತಹ ದುರ್ಬಲ ಮನಸ್ಸಿನ ನಿರ್ದುಷ್ಟ ವ್ಯಕ್ತಿಗಳನ್ನು ಮತಭ್ರಷ್ಟರನ್ನಾಗಿ ಮಾಡುವುದು ಯುಕ್ತವಲ್ಲ. ಇದರಿಂದ ನಿಮಗೆ ಸ್ವಲ್ಪವಾದರೂ ಪುಣ್ಯಬರಲಾರದು" ಅದಕ್ಕೆ ಆ ಪಾದ್ರಿಗಳು ತಾವು ಮಿಶನರಿಗಳಾದುದರಿಂದ ಸ್ವಕರ್ತವ್ಯವನ್ನು ಮಾಡದಿರಲಾಗುದಿಲ್ಲ ಎಂದು ಉತ್ತರಕೊಟ್ಟರಂತೆ, ಆ ಮೇಲೆ ಭುಜಂಗರಾಯರು, "ನಾನು ನಿಮ್ಮ ಅರಿಯಾಳಾಗಿ ಕೆಲವರ್ಷಗಳಿಂದ ಕೆಲಸಮಾಡುತ್ತ ಬಂದಿರುವೆನು. ನನ್ನ ತಮ್ಮನನ್ನು ಮಗನಂತೆ ಸಾಕಿರುವೆನು ಆ ವಿಷಯವು ನಿಮಗೂ ಗೊತ್ತಿದೆ. ಅವನು ಕ್ರೈಸ್ತಧರ್ಮವನ್ನು ಸೇರಬೇಕೆಂದು ಸ್ವಪ್ರೇರಣೆಯಿಂದಲೇ ಹೇಳಿದರೂ, ನಾಲ್ಕು ದಿವಸಗಳ ಮೊದಲಾದರೂ ನೀವು ನನಗೆ ತಿಳಿಸಬಹುದಿತ್ತು" ಎಂದು ಬಿನ್ನೈಸಿಕೊಂಡರಂತೆ ಅದಕ್ಕೆ "ಅದು ನಿಮ್ಮ ತಮ್ಮನ ಕರ್ತವ್ಯವಿತ್ತು. ನಾವ ಶಾಲೆಯಲ್ಲಿ ಉಪಾಧ್ಯಾಯರಾದರೂ, ಮಿಶನರಿಗಳಾಗಿ ನಮ್ಮ ಧರ್ಮವು ಪ್ರತ್ಯೇಕವಾಗಿರುವುದು ಅದರಂತೆ ನಾವು ವರ್ತಿಸಿರುವೆವು" ಎಂಬ ಉತ್ತರವನ್ನು ಪಾದ್ರಿಗಳು ದಯಪಾಲಿಸಿದರು. ಆ ವೇಳೆ ತಮ್ಮನ ಮುಖವನ್ನೊಮ್ಮೆ ನೋಡಬೇಕೆಂದು ಶ್ರೀ. ರಾಯರು ಪಾದ್ರಿಗಳನ್ನು ದೈನ್ಯದಿಂದ ಯಾಚಿಸಿಕೊಂಡರೂ, ಅವರು ಒಪ್ಪಿಗೆ ಕೊಡಲಿಲ್ಲ. ಇಷ್ಟೆಲ್ಲ ಸಂಗತಿಗಳು ಶನಿವಾರ ಸಾಯಂಕಾಲ ನಡೆದುವು. ಮರುದಿವಸ ಶಿವರಾಯನಾದ ವಿದ್ಯಾರ್ಥಿಗೆ ಇಗ್ನೇಶಿಯಸ್ ಎಂಬ ಹೆಸರಾಯಿತು. 'ಡಿವೈನ್ ಲೈಟೂ' ದೊರಕಿತು * *

ಈ ಸುದ್ದಿಯು ವಿದ್ಯಾರ್ಥಿವರ್ಗದಲ್ಲಿ ಅಭೂತಪೂರ್ವಕವಾದ ಉದ್ವೇಗವನ್ನುಂಟುಮಾಡಿತು ಸೋಮವಾರ ಕಾಲೇಜು ಕ್ಲಾಸುಗಳು ಪ್ರಾರಂಭವಾದಾಗ ಹಿಂದೂ ವಿದ್ಯಾರ್ಥಿಗಳಾರೂ ಶಾಲೆಯೊಳಗೆ ಕಾಲಿಡಲಿಲ್ಲ. ಹಿಂದುಗಳೊಂದಿಗೆ ಒಬ್ಬಿಬ್ಬರು ಮುಸಲ್ಮಾನರೂ ಆ ದಿನ ಪಾಠಗಳಿಗೆ ಬಹಿಷ್ಕಾರ ಹಾಕಿದುದು ಅಭಿನಂದನೀಯವಾದ ವಿಷಯ. ಅದೇ ದಿನ ಸಾಯಂಕಾಲ, ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳ ಪ್ರಚಂಡ ಸಭೆಯೊಂದು ನೆರೆಯಿತು. ಸಭೆಯ ಪ್ರಕಟಣೆಯು ಸರಿಯಾಗಿರದಿದ್ದರೂ ಎಲ್ಲ ಶಾಲೆಗಳ ಹಿಂದೂ ವಿದ್ಯಾರ್ಥಿಗಳೂ ಅಲ್ಲಿ ಬಂದು ಸಮ್ಮಿಳಿತರಾಗಿದ್ದರು. ಕೆಲ ಮಂದಿ ವಕೀಲರೂ ಸಭೆಯಲ್ಲಿ ಹಾಜರಿದ್ದರು. * *

ಸಭೆಗೆ ವಕೀಲ ಮಾಧವರಾಯರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿದರು. ಅವರು ಆರಂಭದಲ್ಲಿ ಹಿಂದೂ ಸಮಾಜ ಸ್ಥಿತಿಯ ಕುರಿತು ಹೃದಯದ್ರಾವಕವಾದೊಂದು ಭಾಷಣವನ್ನಿತ್ತರು. ಕ್ರೈಸ್ತ ಧರ್ಮವನ್ನು ಅನೇಕರು ಹೇಯವೆಂದೂ ಪರಿತ್ಯಾಜ್ಯವೆಂದೂ ಅಭಿಪ್ರಾಯಿಸಿರೇ ಡಂಗುರ ಸಾರಿದುದಕ್ಕೆ ಇತಿಹಾಸದಲ್ಲಿ ಅನೇಕ ನಿದರ್ಶನಗಳಿವೆ. ಆದರೂ ಅದನ್ನು ನಿಂದಿಸುವುದು ನಮ್ಮ ಪ್ರಕೃತದ ಕರ್ತವ್ಯವಲ್ಲ. ಮಂಗಳೂರಿನ ಹಿಂದೂ ಜನರು, ಮಕ್ಕಳನ್ನು ಸೆಂಟ್ ಎಲೋಸಿಯಸ್ ಕಾಲೇಜಿಗೆ ಕಳುಹಿಸುವಾಗ, ಕಾಲೇಜಿನ ಅಧಿಕಾರಿಗಳು ಪಾದ್ರಿಗಳಾದರೂ, ಅವರಿಗೆ ಹಿಂದೂ ಮತದಲ್ಲಿ ಸಹಿಷ್ಣುತೆ ಯುಂಟೆಂದು ಇದು ವರೆಗೆ ಎಣಿಸುತ್ತಿದ್ದರು. ಈಗ ಆ ಎಣಿಕೆಯು ಹುಸಿಯಾಯಿತು. ಎಂದು ಮೊದಲಾಗಿ ಹೇಳಿದರು. ಹುಡುಗನ ಅಣ್ಣಾ ಶ್ರೀ ಭುಜಂಗರಾಯರು ತಮ್ಮನು ಮೊನ್ನೆ ಶನಿವಾರದವರೆಗೆ ಅತ್ಯಂತ ವಿಧೇಯನಾಗಿದ್ದನೆಂದೂ, ಅವನು ಸಂಧ್ಯಾವಂದನಾದಿಗಳನ್ನು ಸರಿಯಾಗಿ ಮಾಡಿ ನಿತ್ಯ ಕರ್ಮದಲ್ಲಿ ಶ್ರದ್ಧೆಯನ್ನು ತೋರಿಸುತ್ತಿದ್ದನೆಂದೂ, ಈ ಎಲ್ಲ ವಿಷಯಗಳನ್ನು ನೋಡಿದರೆ, ಅನ್ಯಾಯ ಮಾರ್ಗದಿಂದಲೆ, ಪಾದ್ರಿಗಳು ಶಿವರಾಯನನ್ನು ಕೆಡಿಸಿದರೆಂದೂ ಖಚಿತವಾಗಿ ಹೇಳಲು ಆಸ್ಪದವಿಲ್ಲವಾದರೂ ನ್ಯಾಯ ಮಾರ್ಗದಿಂದಲೇ ಮತಾಂತರ ಗೊಳಿಸಿದರೆಂಬುದಕ್ಕೆ ಆಧಾರ ಸಾಲದೆಂದು ಹೇಳಿದರು. ಅವರ ಮಾತುಗಳಿಂದ ಬಹುಶಃ ಸಭೆಯಲ್ಲಿ ನೆರೆದಿದ್ದ ಜನರ ಹೃದಯವು ಕರಗಿ ಹೋಯಿತೆಂದರೆ ಅತಿಶಯೋಕ್ತಿಯಲ್ಲ * * * *

ಕೊನೆಯಲ್ಲಿ ಪಾದ್ರಿಗಳ ವರ್ತನವನ್ನು ನಿಷೇಧಿಸುವ, ಶಿವರಾಯನ ಕುಟುಂಬಕ್ಕೆ ಸಹಾನುಭಾವವನ್ನು ಸೂಚಿಸುವ, ಮತ್ತು ಸ್ಥಳಿಕ ಗೌರ್ನಮೆಂಟ್ ಕಾಲೇಜಿನಲ್ಲಿ ಬಿ ಎ. ಕ್ಲಾಸುಗಳನ್ನು ತೆರೆಯುವುದಕ್ಕೆ ಮಂಗಳೂರ ಪಟ್ಟಣಿಗರು ಯತ್ನಿಸಬೇಕೆಂಬುದನ್ನು ಪ್ರದಿಪಾದಿಸುವ ಠರಾವುಗಳು ಮಾನ್ಯವಾದುವು. —ನವಯುಗ

ರಂಗಭೂಮಿಯ ಸಮಾಚಾರ.

ಹಲಗೇರಿ ಲೋಕಸೇವಕ ನಾಟಕ ಮಂಡಲದವರು ಶಿವಮೊಗ್ಗೆಗೆ ಬಂದಿರುವರು.

ಶ್ರೀ ದತ್ತಾತ್ರಯ ನಾಟಕ ಮಂಡಲಿಯವರು ಕಲಬುರ್ಗೆಯಲ್ಲಿರುವರು

ಶ್ರೀ ಕೃಷ್ಣ ಸಂಗೀತ ಕನ್ನಡ ನಾಟಕ ಮಂಡಲದವರ ಬಳ್ಳಾರಿಯ ಕಾರ್ಯಕ್ರಮವು ತೀರಿತು. ೧೫ ನೇ ಸೋಮವಾರ ದಿನ ಬೆಂಗಳೂರ ಗಾಯ್ಟಿ ನಾಟಕ ಶಾಲೆಯಲ್ಲಿ ಸತೀ ಪದ್ಮಾವತಿ ನಾಟಕವನ್ನಾಡಿ, ಬೆಂಗಳೂರ ಕಾರ್ಯಕ್ರಮವನ್ನು ಪ್ರಾರಂಭಿಸುವರು,

ವಂಗೋಬರೂಯರು ಸವಣೂರಲ್ಲಿರುವರು. ಅಲ್ಲಿಯ ರಸಿಕರಿಂದ ಅವರಿಗೆ ಚನ್ನಾಗಿ ಪ್ರೋತ್ಸಾಹವು ದೊರೆಯುತ್ತಲಿದೆ

ಡಾ. ನಾಡಗೀರರು ಸಪ್ಟಂಬರ ೧೩ ರಿಂದ ೨ ತಿಂಗಳ ೧೯ ದಿನ ರಜೆ ತೆಗೆದುಕೊಂಡಿರುವರು

ನನಗೆ ಹೊಳೆದಂತೆ.

'ಕನ್ನಡಿಗ'ನ ೧೬ನೇ ಸಂಚಿಕೆಯ ಸಂಪಾದಕೀಯ ಲೇಖವನ್ನು ಎತ್ತಿ 'ಕನ್ನಡಿಗ'ನ ನಾಮನಿರ್ದೇಶ ಮಾಡದೇ, ತನ್ನ ಸಂಪಾದಕೀಯ ಟಿಪ್ಪಣಿಗಳಲ್ಲಿ 'ಮುಂದಾಳತ್ವ' (೧೮ನೇ ಸಂಚಿಕೆಯಲ್ಲಿ) ತನ್ನದೆಂದು ಅದನ್ನು ಪ್ರಕಟಿಸಿದ! ಇದಕ್ಕೇನೆನ್ನಬೇಕು? ‡ ‡

ದಿಬ್ಬ, ಮರಡಿ, ಬೆಟ್ಟ, ಪರ್ವತ ಮೊದಲಾದ ಉಚ್ಚಸ್ಥಾನಗಳ "ಮೋಳೆ" ಮಳೆಯಾಯಿತೆನ್ನುವದು ಸರಿಯಾಗಿದೆ. ಆದರೆ ಇದರ ಆಧಾರದಿಂದ ಪಟ್ಟಣದ "ಮೋಳೆ" ಎಂಬದಾಗಿ ಬರೆಯುವದೋ? 'ಕರ್ನಾಟಕ ವೈಭವ'ದ ಭಾಷೆಯಲ್ಲಿ ವ್ಯಾಕರಣದೋಷಗಳಿರಬಾರದೆಂಬ ಇಚ್ಛೆಯಿಂದ ನಾನು ಈ ವಿಷಯವನ್ನೆತ್ತಿದ್ದಷ್ಟು ಅತ್ತಕಡೆಗೆ 'ವೈಭವ'ದ ದೃಷ್ಟಿಯು ಹತ್ತಿದರೆ ಸಾಕಿದೆ. ಇವನ್ನು ಕನ್ನಡದಲ್ಲಿ ಬರೆಯುವಂತೆ ಬರೆದು ಅದನ್ನೂ ಅಗ್ರಸ್ಥಾನದಲ್ಲಿ ಬರೆದು ಕೆಳಕ್ಕೆ (ಸಕಾರಣವಾಗಿ) ಇಂಗ್ಲೀಷಿನಿಂದಲೂ ತಾರೀಖನ್ನು ಬರೆದರೆ 'ಕನ್ನಡಿಗ'ನ ಕನ್ನಡಾಭಿಮಾನವು ಕುಂದದು. 'ಕನ್ನಡಿಗ'ನಿಗೆ ಕನ್ನಡದಲ್ಲಿ ಪ್ರೀತಿಯಿದೆ; ಅಭಿಮಾನವಿದೆಯೋ ಹೊರತಾಗಿ ಅನ್ಯ ಭಾಷೆಗಳು ದ್ವೇಷವಿಲ್ಲ. 'ವೈಭವ' 'ಕರ್ಮವೀರ'ಗಳಿಗೆ ಹೇಳದೇ 'ಕನ್ನಡಿಗ' 'ಕರ್ನಾಟಕವೃತ್ತ'ಗಳಿಗೆ ಮಾತ್ರ ಮುಂಬೈ ಮದ್ರಾಸಗಳ ಜಾಹೀರಾತದಾರರು "ಇಂಗ್ಲೀಷಿನಲ್ಲಿಯೂ ತಾರೀಖನ್ನು ಹಾಕಿರಿ" ಎಂಬದಾಗಿ ಅಗ್ರಹಪಟ್ಟಿದ್ದಾರೆ ಯಾರ ತಪ್ಪದು? ಹೊರಗೆ ನಿಂತು ಏನಾದರೂ ಬರೆಯುವ 'ವಿನಾಯಕಸುತ'ನಿಗೆ ಈ ಕಾರಣವು ತಪ್ಪಿಲ್ಲಕವಾಗಿದ್ದರೂ, ಜಾಹೀರಾತುದಾರರಿಗೆ ಅದು ಒಳ್ಳೇ ಮಹತ್ವದ್ದಾಗಿದೆ. ಈ ಜಾಹೀರಾತಿನವರ ಪತ್ರಗಳನ್ನು ಓದುವ ಇಚ್ಛೆಯಿದ್ದರೆ, 'ವಿನಾಯಕಪುತ್ರ'ರು 'ಕನ್ನಡಿಗ'ನ ಕಾರ್ಯಾಲಯದಲ್ಲಿ ನೋಡಬಹುದು. ‡ ‡ ‡ ‡

ಬಾಗಲಕೋಟೆಯವರಾದ ವೈ. ವಾಸುದೇವಾಚಾರ್ಯರ ಭಾವಪಟವನ್ನು ಬಾಗಲಕೋಟೆಯ ಹಾರ್ಡಿಂಜ ಲೈಬ್ರರಿಯಲ್ಲಿಟ್ಟದ್ದು, ಧಾರವಾಡದ 'ವಿಜಯ'ಕಾರರಿಗೆ ಸಮಂಜಸವಾಗಿ ತೋರಲಿಲ್ಲ! ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿಡಬೇಕಾಗಿದ್ದಿತಂತೆ! ಧಾರವಾಡಿಗರಲ್ಲಿ ಒಣ ಹೆಮ್ಮೆಯೇ ಹೆಚ್ಚಾಗಿದೆ! ತನಗೆ ಸರಿದೋರಿದರೆ ಸಂಘದಲ್ಲಿ ಆಚಾರ್ಯರ ಭಾವಪಟವನ್ನು ಅವಶ್ಯವಾಗಿಡಬಹುದು! ಯಾರ ಅಡ್ಡಿಯೂ ಇಲ್ಲವಲ್ಲ! ಇನ್ನು ಸಂಘದ ವ್ಯವಸ್ಥೆಯಾದರೋ ಅದು, ನೋಡಿ, ಹೇಗಿದೆ! ಹಳೆಯ ಪುಸ್ತಕಗಳೂ, ಮಾಯವಾಗಿವೆ! ವಾಗ್ಭೂಷಣವು ಸರಿಯಾಗಿ ಸಾಗದು. ಕಟ್ಟಡವು ಸೋರುತ್ತಲಿದೆ! ಹೀಗಿದ್ದರೂ ಆ ಬಗ್ಗೆ ತಮ್ಮ ಕನ್ನಡಾಭಿಮಾನವನ್ನು ವ್ಯಕ್ತಗೊಳಿಸುವ ಶಕ್ತಿ ಸಹ ಇಲ್ಲದ ಧಾರವಾಡಿಗರಿಗೆ ಬಾಗಲಕೋಟೆಯ ನಿವಾಸಿಗಳಿಂದ ಭಾವಪಟವು ಬೇಕಂತೆ! ಹೇಗಿದೆ ಮೋಜು! ‡ ‡ ‡

'ಗ್ರಾಂಟ' ಈ ಇಂಗ್ಲೀಷ ಶಬ್ದವನ್ನು ವೀರ ಕನ್ನಡ ಕಂಠದ ಅಭಿಮಾನಿಯಾದ 'ಕನ್ನಡಿಗ'ನಲ್ಲಿ ಕೇಳದು "ಸ್ವದೇಶಾಭಿಮಾನಿ"ಯ ಪ್ರೀತಿಯ ಪ್ರಶ್ನೆ. ಅವತರಣ ಚಿನ್ಹಗಳಲ್ಲಿ "ಗ್ರಾಂಟ" ಎಂಬದನ್ನಾಗಿ ಬರೆದುದು ತಾನೇ! ಅದರ ಅರ್ಥವನ್ನು ಹೇಳುತ್ತವೆ! —ಓದುಗ

ಸ್ವಲ್ಪ ವಿನೋದ.

"ಇಂತಹ ದುರ್ಗದ ಕಾರ್ಯಕ್ಕೆ ತಮ್ಮಿಂದ ಧನ ಸಹಾಯ ದೊರೆಯಬಹುದೇ ಹೇಗೆಂದು ವಿಚಾರಿಸಲು ಬಂದಿರುವೆನು"

"ಓಹೋ! ಅವಶ್ಯವಾಗಿ ತೆಗೆದುಕೊಳ್ಳಿ ಈ ಪಂಚಿಯನ್ನು"

"ಗುರುತು ಹಾಕಲು ಮರೆತುಹೋಯಿತಲ್ಲ ಸ್ವಾಮೀ?"

"ಮರೆತಿಲ್ಲ. ಆದರೆ ಅದು ಗುಪ್ತದಾನ!!"

ಸಂದೇಶ.

ಮಹಾಯುದ್ಧದ ಸ್ಮಾರಕದ ದಿನದಲ್ಲಿ ಒಂದು ಚಿತ್ರಪಟವು ಲಂಡನ್ನಿನಲ್ಲಿ ತೋರಿಸಲ್ಪಡುವದು. ಮಹಾಯುದ್ಧದ ಅನೇಕ ಸಂಗತಿಗಳು ಅದರಲ್ಲಿ ಒಳಗೊಂಡಿವೆ. ಈ ಚಿತ್ರಪಟದಲ್ಲಿ ಬಾವರಿಜ- ಜರ್ಮನ ಹಿರಿಯ ಮಕ್ಕಳೇ ಭಾಗ ತೆಗೆದುಕೊಂಡಿದ್ದಾರೆ. ಇದಕ್ಕಾಗಿ ಕಳೆದ ವಾರದಲ್ಲಿ ಬಿಲ್ಲ ಬದಿಮುಕೊಂಡು ಅವರು ಚಿತ್ರದೊಳಿನ ನಟಿನ ಸಂಗಡ ನಟನ ಮಾಡಬೇಕಾಯಿತು!

ಅರಳಿಯ ಬೆಲೆ ಏರಿತು!

ಅಮೇರಿಕೆಯಲ್ಲಿ ಅರಳಿಯ ಬೆಲೆಯು ಅಕಸ್ಮಾತ್ತಾಗಿ ಏರಿದೆ. ಸರಕಾರದ ಬೆಳೆಗಳಲ್ಲಿ ಲೆಕ್ಕ ಹಾಕಿದ್ದಕ್ಕಿಂತ ೧೦ ಲಕ್ಷ ಗಂಟುಗಳು ಕಡಿಮೆಯಾಗಿ ಹೊರಟಿದ್ದರಿಂದ ಬೆಲೆ ಏರಿಹೋಯಿತು. ಈ ಸುದ್ದಿಯು ಮುಂಬೈಗೆ ಸೋಮವಾರ ರಾತ್ರಿ ಬಂದಿತು. ಆ ದಿನ ಬೆಳಗ್ಗೆ ೩೬೩ ರೂ. ಇದ್ದದ್ದು ಕೂಡಲೇ ೩೮೩ ರೂ ಆಯಿತು! ಮಂಗಳವಾರ ೩೯೫ ರ ವರೆಗೆ ಹೋಯಿತು. ಬುಧವಾರ ೪೦೧ ರೂ ಆಯಿತು. ಅರಳಿಯು ಸಾಕಷ್ಟು ಮುಂದಿನ ವರ್ಷ ದೊರೆಯಲಿಕ್ಕಿಲ್ಲವೆಂತಲೂ, ಧಾರಣೆಯು ದಿನೇ ದಿನೇ ಏರುವದೆಂತಲೂ ಮುಂಬೈ ವರ್ತಕರು ತಿಳಿದಿರುವರು.

ಪತ್ರವ್ಯವಹಾರ.

ಸಿಂದಗೀ ಮಾಮಲೇದಾರರು.

ಸಿಂದಗಿ ತಾಲೂಕದ ಮಾಮಲೇದಾರರು ಹೋದವರುಷ ಕೋರೆವಾರದ ಹನುಮಂತರಾಯರ ಕುದುರೆಯನ್ನು ಅವರ ಅಣ್ಣತಮ್ಮಂದಿರ ಕಡೆಯಿಂದ ಬರತಕ್ಕ ೧೩ ರೂಪಾಯಿ ಜೂಡಿ ಹಣದ ಸಲುವಾಗಿ ಜಪ್ತಮಾಡಿದ್ದರು. ಆ ಹದಿಮೂರು ರೂಪಾಯಿಗಳನ್ನು ಕೊಡಲಿಕ್ಕೆ ಬಾಧ್ಯನಲ್ಲ. ನನ್ನ ಅಣ್ಣತಮ್ಮಂದಿರ ಕಡೆಯಿಂದ ವಸೂಲ ಮಾಡಿಕೊಳ್ಳಬೇಕೆಂದು ಎಷ್ಟು ಹೇಳಿದರೂ ಕೇಳಲಿಲ್ಲ. ಆ ಕುದುರೆಯನ್ನು ಲಿಲಾವ ಮಾಡಲಿಕ್ಕೆ ಮುದ್ದತ ನೇಮಿಸಿದರು. ಹಣಮಂತರಾಯರು ತಮ್ಮ ಕುದುರೆಯನ್ನು ಜಪ್ತ ಮಾಡಿದ್ದು ಅನ್ಯಾಯವೆಂದು ಅಸಿಸ್ಟಂಟ ಕಲೆಕ್ಟರ ಸಾಹೇಬರ ಕಡೆಗೆ ಅರ್ಜಿ ಮಾಡಿಕೊಂಡರು. ಅಸಿಸ್ಟಂಟ ಕಲೆಕ್ಟರ ಸಾಹೇಬರು ಕುದುರೆಯನ್ನು ಸದ್ಯಕ್ಕೆ ಲಿಲಾವ ಮಾಡಬಾರದೆಂದು ಕೂಡಲೇ ಹುಕುಂ ಕಳಿಸಿದರು. ಮಾಮಲೇದಾರರು ಸಾಹೇಬರಗೂಡ ಗುಪ್ತ ಪತ್ರವ್ಯವಹಾರ ಮಾಡಿ ಜಪ್ತಿಯನ್ನು ಕಾಯಂ ಮಾಡಬೇಕಾಗಿ ಪ್ರಯತ್ನ ಮಾಡಿದರು. ಮುಂದೆ ಆ ಪ್ರಕರಣದ ಪೂರ್ಣ ವಿಚಾರವಾಗಿ ಜಪ್ತಿಯನ್ನು ರದ್ದು ಮಾಡಿ ಅವರ ಕುದುರೆಯನ್ನು ಅವರಿಗೆ ತಿರುಗಿ ಕೊಡಿಸಬೇಕೆಂದು ಮೇಲಾಧಿಕಾರಿಗಳ ಹುಕುಂ ಆಯಿತು. ಸದರೀ ೧೩ ರೂಪಾಯಿಗಳನ್ನು ಅವರ ಅಣ್ಣತಮ್ಮಂದಿರ ಕಡೆಯಿಂದ ವಸೂಲ ಮಾಡಿಕೊಳ್ಳಲಾಯಿತು. ಹನುಮಂತರಾಯರು ದೊಡ್ಡ ಜಮೀನದಾರರೂ ಸಭ್ಯಗೃಹಸ್ಥರೂ ಇದ್ದಾರೆ. ಸರಕಾರಕ್ಕೆ ಅವರು ಕೊಡತಕ್ಕ ಹಣದ ವಿಷಯವಾಗಿ ಎಂದೂ ತಕರಾರ ಬಂದಿಲ್ಲ. ಇಷ್ಟಕ್ಕೆ ಇದು ಮುಗಿಯಲಿಲ್ಲ. ಈ ವರುಷ ಮೇ ತಿಂಗಳ ಕೊನೆಗೆ ಅದೇ ಮಾಮಲೇದಾರರು ಹಣಮಂತರಾಯರ ಕಡೆಯಿಂದ ಏನಾದರೂ ಬಾಕಿ ಬರುವದದೆಯೋ ಹೇಗೆ ಎಂದು ಕೋರೆವಾರ ಗ್ರಾಮಸ್ಥರಿಗೆ ಹುಕುಂ ಕಳಿಸಿದರು. ಸರಕಾರೀ ಜಮೀನದ ಬಾಬತು ೫ ರೂ. ೮ ಆಣೆ ಮಾತ್ರ ಬರತಕ್ಕದ್ದಿರುತ್ತದೆಂದು ಅವರು ತಿಳಿಸಿದರು. ಆ ವೇಳೆಯಲ್ಲಿ ಹನುಮಂತರಾಯರು ಊರಲ್ಲಿ ಇದ್ದಿಲ್ಲ. ಮತ್ತು ಆ ಗ್ರಾಮದಲ್ಲಿ ನೂರಿನ್ನೂರು ರೂಪಾಯಿ ತೆರಿಗೆಯನ್ನು ಕೊಡುವವರು ಎಷ್ಟೋ ಜನರಿದ್ದಾರು. ಅವರು ಇನ್ನೂ ಕೊಟ್ಟಿದ್ದಿಲ್ಲವೆಂದು ಗ್ರಾಮ ಖಾತೆಯಿಂದ ಇವತ್ತಿಗೂ ಸಿದ್ಧವಾಗುತ್ತದೆ. ಹೀಗಿದ್ದರೂ ಹನುಮಂತರಾಯರಿಗೆ ಚೌಥಾಯಿ ದಂಡ ಮಾಡಿ ಆ ಹಣವನ್ನು ಹಾಜರ ಮಾಡತಕ್ಕದ್ದು. ಇಲ್ಲದಿದ್ದರೆ ಜಪ್ತಿ ಮಾಡುತ್ತೇವೆಂದು ಮಾಮಲೇದಾರ ಸಾಹೇಬರು ನೋಟೀಸು ಕೊಟ್ಟರು. ಅದೇ ತಾಲೂಕದಲ್ಲಿ ಆಲಮೇಲದ ಇನಾಮದಾರರಾದ ರಾವಸಾಹೇಬರ ದೇಶಮುಖ ಇವರ ಹೆಸರಲ್ಲಿ ಜುಲೈ ತಿಂಗಳದವರೆಗೆ ೧೫೭ ರೂಪಾಯಿ ಬಾಕಿ ಇತ್ತು. ಸಿಂದಗಿ ಮಾಮಲೇದಾರರು ತಮ್ಮ ಅಧಿಕಾರದ ಉಪಯೋಗವನ್ನು ಯಾವ ರೀತಿಯಿಂದ ನಡಿಸುತ್ತಾರೆಂಬದು ಇದರ ಮೇಲಿಂದ ಸಹಜವಾಗಿ ಕಂಡು ಬರುತ್ತದೆ. ಕಲೆಕ್ಟರ ಸಾಹೇಬರಂತೂ ಕಣ್ಣು ಮುಚ್ಚಿದ್ದಾರೆ. ಅಂಥ ಒಳಗೆ ಕೇಳುವವರಾರು? —ಓರ್ವ

ಶೀಘ್ರದಲ್ಲಿಯೇ ಬರುತ್ತಾರೆ! ಅಪೂರ್ವ ಸಮಯ!!

ಮೈಸೂರು ದೇಶದ ಸುಪ್ರಸಿದ್ಧರಾದ

ವಿನೋದ ರತ್ನಾಕರ ಜಿ. ಎಚ್. ವೀರಣ್ಣನವರ

ಗುಬ್ಬಿ ಶ್ರೀಚನ್ನಬಸವೇಶ್ವರ ನಾಟಕ ಕಂ.

ಗುಬ್ಬಿಯವರು ಹುಬ್ಬಳ್ಳಿಯಲ್ಲಿರುವ ಮಲ್ಲಿಕಾರ್ಜುನ ನಾಟಕ ಮಂದಿರದಲ್ಲಿ ೧೯೨೭ ಸಪ್ಟಂಬರ ಮಾಹೆ ಮೊದಲನೇ ವಾರದಿಂದ ತಮ್ಮ ಅನರ್ಘ್ಯವಾದ ನಾಟಕಗಳನ್ನಾಡುವರು ಕರ್ನಾಟಕ ದೇಶ ಮತ್ತು ಭಾಷಾಭಿಮಾನಿಗಳೆಲ್ಲರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ನೋಟೀಸು.

ಈರಮ್ಮ ಕೋಂ ಈರಯ್ಯಾ ಪೂಜಾರ ಸಾ॥ ಗುಡ್ಡದಮಲ್ಲಾಪುರ ತಾಲೂಕ ಬದಾಮಿ ಇವಳಿಗೆ—

ಕಳಗ ಸಹಿ ಮಾಡುವ ಈರಯ್ಯಾ ತಂದಿ ಕರವೀರಯ್ಯಾ ಪೂಜಾರಿ ಸಾ॥ ಸದರ ನಾನು ಕೊಡುವ ನೋಟೀಸ ಏನಂದರೆ ನೀನು ನನ್ನ ಲಗ್ನದ ಹಂಡತಿ ಇದ್ದು ನನ್ನ ಕೂಡಾ ಬಾಳುವೆ ಮಾಡುವದು ಬಿಟ್ಟು ಈಗ ಮೂರು ವರ್ಷಗಳಿಂದ ತವರು ಮನಿಗೆ ಹೋಗಿ ಅಲ್ಲಿಯೇ ಇದ್ದು ನೀನು ವ್ಯಭಿಚಾರ ಕೃತ್ಯ ಮಾಡುತ್ತಾ ಬಂದಿರುತ್ತೀದಿ ನಿನ್ನ ಹೊಟ್ಟಿಲೆ ಗಂಡು ಆಗಲಿ ಹೆಣ್ಣು ಕೂಸು ಹುಟ್ಟಿದರೆ ಅದು ವ್ಯಭಿಚಾರದ್ದು ಅಂತಾ ತಿಳಿಬೇಕು. ನಿನ್ನ ಮೇಲಿನ ಹಕ್ಕು ನಾನು ಬಿಟ್ಟಿರುತ್ತೇನೆ. ಇದೇ ಸೋಡ ಪತ್ರ ಅಂತಾ ತಿಳೀತಕ್ಕದ್ದು ಇವತ್ತಿನಿಂದಾ ನೀನು ನನ್ನ ಹೆಂಡತಿ ಅಲ್ಲಾ ಅಂತಾ ಈ ನೋಟೀಸು ತಾರೀಖು ೧೧-೮-೧೯೨೭ ನೇ ಇಸ್ವಿ

() ಈ ಎಡಗೈ ಹೆಬ್ಬಟ್ಟಿನ ಗುರ್ತು ಈರಯ್ಯಾ ತಂದಿ ಕರವೀರಯ್ಯಾ ಪೂಜಾರಿ ಖುದ್ದ ಮಾಡಿದ್ದು ಇರುತ್ತದೆ

ಜಾಹೀರ ನೋಟೀಸು.

ಮೊದಲು ಪ್ರಕಟಿಸಿದ ಪ್ರಕಾರ ಬಾಗಲಕೋಟೆ ತಾಲೂಕ ಮತ್ತು ಬೀಳಗೀ ಪೇಟಾ ಸಹಕಾರಿ ಕಾನಫರನ್ಸ ಇದೇ ತಿಂಗಳ ೨೫ನೇ ತಾರೀಖಿನ ದಿವಸ ಬೀಳಗಿಯಲ್ಲಿ ಕೂಡಿಸುವದು ಗೊತ್ತು ಮಾಡಿದೆ. ಆ ಕಾನಫರನ್ಸಕ್ಕೆ ಇಲ್ಲಿಯ ಡಿ॥ ಡಿ॥ ರಜಿಸ್ಟ್ರಾರರಾದ ರಾವಬಹದ್ದೂರ ಆರ್. ಯಸ್. ಹಿರೇಮಠ ಸಾಹೇಬರವರು ಅಧ್ಯಕ್ಷರಾಗಲಿಕ್ಕೆ ಒಪ್ಪಿಕೊಂಡಿರುತ್ತಾರೆ ಆದ್ದರಿಂದ ಎಲ್ಲ ಸಹಕಾರಿಗಳು ಮತ್ತು ಸಭ್ಯಗೃಹಸ್ಥರು ಸದರಿ ಕಾನಫರನ್ಸಕ್ಕೆ ಬಂದು ಸದರ ಕೆಲಸವನ್ನು ಜರಗಿಸಬೇಕೆಂದು ಸಾದರದ ವಿನಂತಿ ಅದೆ ಕಾನಫರನ್ಸದ ಕೆಲಸವು ಒಂದು ದಿವಸ ನಡೆಯುವದು.

ಬಾಗಲಕೋಟೆ
ತಾ॥ ೧೧-೮-೧೯೨೭

ವಿ. ಯಸ್. ಅಥಣಿ ಮಠ
ಚೇರಮನ್
ಕೋ ಆ ಇನ್ಸ್ಟಿಟ್ಯೂಟ
ವಿಜಾಪೂರ ಜಿಲ್ಲಾ ಶಾಖಾ ಬಾಗಲಕೋಟೆ

WANTED.

Wanted Candidates for training in Telegraphy and Station Master's Courses. Railfare Granted Suitable Boarding and Lodging arrangements. Prospectus on two anna Stamp.—Presidency Telegraph College, Royapettah P. O., Madras

ಗುಣ ಬರದಿದ್ದರೆ ಹಣ ಮರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತದ, ಸಂಗ್ರಹಣಿ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ (ಏಳು ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು) ಇದರಿಂದ ಮೈಯ್ಯಲ್ಲಿರುವ ಗರಮಿಯ ಎಲ್ಲಾತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಮಿರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮೀಶನು ಸಿಗುವದು ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ:—

ಎಸ್ ಬಿ ಕದಮ್ ಮತ್ತು ಸನ್ಸ್
ಮು ಪೋಸ್ಟ ನಿಪ್ಪಾಣಿ (ಜಿ. ಬೆಳಗಾಂವ)

ಕರ್ನಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯುಲರ ಸ್ಕೂಲಫೈನಲ್, ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರುವದಕ್ಕೆ ತಕ್ಕದ್ದಾದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಜರದ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು. ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು

ವಿಚಾರಗೃಹ, ಧಾರವಾಡ. ಶ್ರಾವಣ ಮೊದಲಿನ ಜಿಲ್ಹೆಗಳಲ್ಲಿಯ ವಿದ್ಯಾರ್ಥಿನಿಯರು ಬರುತ್ತಿದ್ದಾರೆ

ಸಾ॥ ಅ. ರಾ. ಕುಂಭಕೋಣಂ,
ವ್ಯವಸ್ಥಾಪಕರು, ಮ. ವಿ. ವಿದ್ಯಾಲಯ, ಧಾರವಾಡ.

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕೆಟ್ಟ-ಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರನೆ ಬರೆದು ಕೊಳ್ಳಿರಿ!

ವಿಳಾಸ—ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ.

S.U.N. & CO.
BENARES CITY.

ಬನಾರಸ್ ರೇಶ್ಮೇ ಶೀರೆಗಳು.

ನಮ್ಮಲ್ಲಿ ಉತ್ತಮೋತ್ತಮ ಎಲ್ಲಾ ವಿಧವಾದ ರೇಶ್ಮೇ ಮಾಲುಗಳನ್ನು ಕೊಳ್ಳುವರಿಗೆ ವಿ. ಪಿ. ಮೂಲಕ ಕಳಿಸಲ್ಪಡುವದು. ಬಿಳೀ ರೇಶ್ಮೇ ಕೋಟಿಂಗ್ ಶಿಲ್ಕ ಉದ್ದ ಮೊಳ ಗಳ ಅಗಲಿ ಮೊಳ ೩, ಧೋತುರ ... ರಿಂದ ... ಜರಿ ಶೀರೆಗಳು ... ಮೊಳ ಉದ್ದ ... ರೂ. ... ರಿಂದ ... ರವರೆಗೆ. ಬುಟ್ಟೆದಾರ್ ಬನಾರಸ್ ಶೀರೆ ... ಉದ್ದ ಮೊಳ ... ರಿಂದ ... ರವರೆಗೆ ಉಡುವ ಮಗುಟ ... ಮೊಳ ... ರೂ. ... ರಿಂದ ... ರ ವರೆಗೆ ಜರೀದ್ದು ... ಮೊಳ ಉದ್ದ ... ರಿಂದ ... ರ ವರೆಗೆ ಬಿಳಿ ರೇಶ್ಮೆ ಜರೀದ. ಪಟ್ಟೆ ... ಮೊಳ ಉದ ... ರೂ ... ರಿಂದ ... ರವರೆಗೆ ಸಾದಾ ಬಂಗಾಳ ರೇಶ್ಮೆ ಶಾಲು ... ಮೊಳ ಉದ್ದ ... ಮೊಳ ಅಗಲು ... ರೂ. ... ರಿಂದ ... ರವರೆಗೆ ಸ್ಪಟಿಕದ ... ರೂ. ... ರಿಂದ ... ರವರೆಗೆ ಸುದರ್ಶನ ... ರಿಂದ ... ರೂಪಾಯಿ 1½ ರವರೆಗೆ ಜಗನ್ನಾಥ ಜಾಗಂಟೆ ... ರಿಂದ 15ರ ವರೆಗೆ ಮತ್ತು ಬೇರೆ ದೇಶಗಳ ... ಸಿಗಲಾಗುವದು.

ವಿಳಾಸ- ಶಿರೋಡ್ ... ಸಿಂಗ ನಾರಾಯಣ

ಕಂಪನಿ ... ಬನಾರಸ್

ಅತೀ ಸುಲಭ ಕಂತುಗಳು! ಫಲಿತಾಂಶವು ಹೆಚ್ಚು!

ದಿ. ಹಿಂದುಸ್ಥಾನ ಕೋಆಪರೇಟಿವ್ಹ

ಇನ್ಸುರೆನ್ಸ ಸೊಸೈಟಿ ಲಿಮಿಟೆಡ್.

(ಬ್ರ್ಯಾಂಚ್:- ಮುಂಬಯಿ) (ಹೆಡ್ ಆಫೀಸು:- ಕಲ್ಕತ್ತಾ)

ಈ ಕಂಪನಿಯು ಇಡೀ ಹಿಂದುಸ್ಥಾನದಲ್ಲೆಲ್ಲಾ ಪ್ರಾಮುಖ್ಯತೆಗೆ ಬಂದ ಸ್ವದೇಶಿ ಕಂಪನಿಗಳಲ್ಲಿ ಒಂದಾಗಿದೆ. ಜನರ ಸೌಕರ್ಯಕ್ಕಾಗಿ ಈ ವಿಜಾಪೂರ ಜಿಲ್ಹೆಯೊಳಗೆ ಇದರ ಒಂದು ಶಾಖೆಯನ್ನಿಟ್ಟಿರುವರು. ಕಂತುಗಳು ಅತೀ ಸುಲಭ ಇದ್ದು, ಧಾರಾಳವಾಗಿ ಈ ಕಂಪನಿಯಲ್ಲಿ ನಿಮ್ಮ ಜೀವ ವಿಮೆಯನ್ನು ಇಳಿಸಬಹುದು.

ಇದರ ಮೂಲಧನವು ... ಮೀರಿದೆ. ೧೯೨೫-೨೬ ನೇ ವರ್ಷದಲ್ಲಿ ಸಾವಿರ ವರ್ಷಕ್ಕೆ ... ರೂ. ... ದರ ಫಲಿತಾಂಶ ಕೊಟ್ಟಿರುವೆವು.

ಎಲ್ಲ ಕಡೆಯಲ್ಲಿ ಏಜಂಟರು ಬೇಕಿದ್ದಾರೆ.

ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿದಲ್ಲಿ ಹೆಚ್ಚಿನ ಮಾಹಿತಿ ತಿಳಕೊಳ್ಳಬಹುದು.

ವಿಳಾಸ:-

ವಿಜಾಪೂರ. ೨೮-೬-೨೭ | ಜಿ. ಆರ್. ವಕ್ಕಸಳ್ಳಿ ಆಂಡ ಬ್ರದರ್ಸ.
ಚೀಫ ಏಜಂಟ್ಸ,
ವಿಜಾಪೂರ ಜಿಲ್ಹಾ.

ಶ್ರೀ ಭಾರತ ಜಗಪ್ರಸಿದ್ಧ ಜಗ ಜಾಹೀರ ನೋಟೀಸು.

ಮೃತ್ಯುಂಜಯ ಔಷಧದಿಂದ ಮೂರೇ ತಾಸಿನಲ್ಲಿ ಗುಣವಿಲ್ಲೆಂದು ಸಿದ್ಧ ಮಾಡಿದವರಿಗೆ-೫೦೦ ರೂ ಬಕ್ಷೀಸ ಕೊಡುವೆವು.
ಮೂರೇ ತಾಸಿನಲ್ಲಿ ಗುಣ] ಕಣ್ಣಿಡಬತ್ತಿ ರಸಾಯನ ತಕ್ಕೊಂಡು [ಮೂರೇ ದಿವಸಗಳಲ್ಲಿ ರೋಗವು ಪೂರ್ಣ ಹೋಗುವದು.
ಸಾಯುವದೇಕೆ?

ಶುದ್ಧ ವನಸ್ಪತಿಯಿಂದ ತಯಾರು ಮಾಡಿದ ಮೃತ್ಯುಂಜಯ ಔಷಧ.

ಉಪದಂಶ, ಗರ್ಮಿ (ಉಷ್ಣ) ಪರ್ಮಿ ಮುಂತಾದ ಎಳು ಪ್ರಕಾರದ ರೋಗ ಬಹುದಿನ ನೆಲಗೊಂಡದ್ದು ಶರೀರ ಕತ್ತರಿಸಿ ಬಿದ್ದರೂ ಮೂರು ದಿವಸಗಳಲ್ಲಿ ಗುಣವಾಗುವದು

ಇಂಥ ಪ್ರಕಾರ ರೋಗಗಳಿಂದ ಉತ್ಪನ್ನವಾಗುವ ವಿಕಾರ ಉಷ್ಣ ಪರಮಿ (ಉಪದಂಶ) ಗರ್ಮಿ ಚಟ್ಟಿ ಒಡದ ಗಂಟು, ತೊಡಿಸಂದಿಯ ಗಂಟು, (ವೃಷಣ) ಅತಿಶಯ ಬಾವು, ಇಂದ್ರಿಯ ವರ್ಗಕ್ಕೆ ತಿಡಿಕೆ, ಹೊಡತು, ರಕ್ತ ಕೀವು ಸುರಿಯೋಣ ಅದರಂತೆ ಸ್ತ್ರೀಯರ ಪ್ರದರ (ಕೆಂಪು ಬಿಳಿ ಸೆರಗು) ಮೊದಲೆ ಕುಟ್ಟರೋಗ ಬೆಳೆಯೋಣ, ಕಡಕಿ ವಿಕಾರಗಳಿಂದ ಗರ್ಭಾಶಯ ಕೆಡೋಣ, ಮೂತ್ರ ಕಣ್ಣು ಕಾಲು ಉರಿಯೋಣ, ಗಾಯವು ಹೆಚ್ಚಾಗಿ ಮಧುಮೇಹ ಮೈಮೇಲೆ ಗರ್ಮಿ (ಉಷ್ಣ) ಒಡೆದು ಕೀವು ಹೊರಬಿದ್ದು ಅದರಿಂದ ವ್ರಣ (ಘಾಯ) ವಾಗಿ ಅಂಗಗಳಿಗೆ ತೂತು ಬಿದ್ದು ಮೂಗು ಕೊಡ್ರುವದೂ ಸೋರುವದೂ ಎಲ್ಲ ತರದ ಮೂಲವ್ಯಾಧಿ, ಹೊಟ್ಟೆ ಕಡತು ವಗೈರೆ ಕಾರಣಗಳಿಂದಾ ಜನನೇಂದ್ರಿಯ ಶಿಥಿಲತಾ ಅಥವಾ ನಪುಂಸಕತ್ವ ಮುಷ್ಟಿಮೈಥುನದಿಂದ ಆಗುವ ಪರಿಣಾಮ, ಸ್ವಪ್ನಾವಸ್ಥೆ ಮೂತ್ರದಲ್ಲಿ ಧಾತು ಅಥವಾ ಖರ ಬೀಳೋಣ, ವೀರ್ಯ ತಿಳುವಾಗೋಣ, ಸ್ತ್ರೀಗಮನದಲ್ಲಿ ಬೇಗ ಹತ್ತೋಣ. ಶೀಘ್ರ ವೀರ್ಯ ಪತನವಾಗೋಣ, ನಡಸೋವು (ಶೂಲಿ) ನೋಯೋಣ, ಬೆನ್ನು ಬಿಗಿಯೋಣ, ವಾತವಿಕಾರ ಅವಿಚಾರದಿಂದ ಮಾಡಿದ ವೀರ್ಯಪಾತ ವಗೈರೆ ರೋಗಗಳ ಮೇಲೆ ಅಶಿಕ್ಷಿತ ಅಡಾಣೀ ಜನರ ಕಡಿಯಿಂದ ಪಾರಜ ಮತ್ತು ರಸಕರ್ಪೂರ, ಇಂಗಳೀಕ ಮುಂತಾದ ಸವಿಷ ಮತ್ತು ಅಪಕ್ವ ಧಾತು ರೂಪ ಪದಾರ್ಥ (ರಸಾಯನ) ಮತ್ತು ಅಪಕಾರಕ ವಸ್ತು ಸೇವಿಸುವದರಿಂದ ಮೈಯೊಳಗೆ ರಸಾಯನ ನಿಂತು ಅದಾವ ಕಾಲು ಕೆ ಮುಖವಾಗಿ ಮತ್ತು ಕೈ ಕಾಲುಗಳಲ್ಲಿ ರಸಾಯನ ಒಡೆದು ಸ್ವತಃ (ತನಗೆ) ಮತ್ತು ಮುಂದಾಗುವ ತನ್ನ ಸಂತತಿಗೆ ಅನೇಕ ರೋಗವು ಉತ್ಪನ್ನವಾಗಿ ಅದರಿಂದ ಭಯಂಕರ ಪರಿಣಾಮ ಭೋಗಿಸಬೇಕಾಗುವದು ಇಂಥ ಪ್ರಕಾರದ ರೋಗಗಳು ಬಹಳ ದಿವಸ ನೆಲಗೊಂಡಿದ್ದಾಗಲೀ ಅಥವಾ ಹೊಸದಾಗಿ ಆದುದ್ದಾಗಲೀ ಇಂಥ ರೋಗಗಳ ಮೇಲೆ ಈ ನಮ್ಮ ಮೃತ್ಯುಂಜಯ ಔಷಧ ಉಪಯೋಗ ಮಾಡಿದರೆ ಶರೀರ ಸಂಬಂಧಿ ಸಂಪೂರ್ಣ ರೋಗಗಳು ಶೀಘ್ರವಾಗಿ ಹೋಗಿ ಮೈಯೊಳಗೆ ಇದ್ದ ರಸಾಯನವು ನಾಶವಾಗುವದು ಮತ್ತು ಆಶಕ್ತಿ ಹೋಗಿ ಮೈಯೊಳಗೆ ಶಕ್ತಿ ಬಂದು ಪ್ರಕೃತಿ ಉತ್ತಮವಾಗುತ್ತದೆ ಒಂದು ಬಾಟ್ಲಿಗೆ [೫] ರೂಪಾಯಿ ಟಪಾಲು ಖರ್ಚು ಬೇರ ಅನುಪಾನ ಪತ್ರಿಕೆಯು ಔಷಧದ ಸಂಗಡ. ಲಾಭಕ್ಕೆ ಲಾಭ. ಒಂದು ಆಣೆ ಟಿಕಿಟು ಕಳಿಸಿದಲ್ಲಿ ನಮ್ಮ ಔಷಧದ ಪೂರ್ಣ ಕ್ಯಾಟಲಾಕ ಕಳಿಸುವೆವು. (ತಮ್ಮ ಪತ್ತೆ - ಪೂರ್ಣ ಬರೆಯಿರಿ.)

ಸುಪ್ರಸಿದ್ಧ ಡಾ|| ಆರ್. ಎಲ್. ಹಿರೇಮಠ ಆರೋಗ್ಯ ಮಂದಿರ ಆಯುರ್ವೇದ ವನೌಷಧಿ ಕಂಪನಿ, ಸಾವಿರ ಕಾರಖಾನೆ. ಕಮತನೂರ ಪೋ|| ಶಂಕೇಶ್ವರ ಜಿ|| ಬೆಳಗಾಂವ

ಲಮಾನ ಗಡಿಯಾರಗಳು.
ಲಿವರಿನ ಕೈ ಗಡಿಯಾರ ೯ರೂ. ೫.
ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ ೬



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೂಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ಶಾಶ್ವತವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚ ಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ ಆದ್ದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ

ಲಿಬರ್ಟಿ ವಾಚ ಕಂ. (ಇಂಡಿಯಾ.) ಬೆಂಗಳೂರ

ಭೂಲೋಕದ ಕಲ್ಪವೃಕ್ಷವು.
ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧನಾರ್ಜನ ಕಾಮಮೋಕ್ಷಾದಿಗಳನ್ನು ಕೊಡುವ —

ಪ್ರಿಯವು ಇನಾಂ!!! ಅಂ. ಹಾಸಲು
ಅಲ್ಲದೆ ಸರ್ವರಿಗು ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ

ವಿಳಾಸ:—ಶಂಕರಲಿಂಗಶಾಸ್ತ್ರಿ ಜಾಲವಾದಿ.
ಪ್ರೊಪ್ರೈಟರ ಬಾಗಲಕೋಟಿ.
ರಾಜವೈದ್ಯ ನಾರಾಯಣಜೀ ಕೇಶವಜಿ.
ಶೇ. ಲಾಲಜೀಬಾಜಾರ ಮುಂಬಯಿ





ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

೧೯೨೭ನೇ ಜನವರಿ ೧೫ರಿಂದ ಪ್ರಾರಂಭ.

ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ-

೧. ನೀವು ನಮಗೆ ರೂ. ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪುವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ್ ಗೋಲ್ಡ್" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಸ್ಮಿ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ.

೪ ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ವಿಕರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು ಅಥವಾ ವಿ. ಪಿ ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಳೆದುಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಆಶೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೬-೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್. ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರ ಸಿಟಿ.

ಯಾವದೇ { ಆಕಾರದ ನಕ್ಷೆಯ ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ ೧೪, ಅರ್ಧ ಬೆಲೆ ರೂ. ೭

ಬರೇ ಒಂದು ತಿಂಗಳ ವರೆಗೆ ನಾವು ಇವುಗಳನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ ಬೆಲೆ ರೂ ೭

ಅಪ್ಪವೇ ವೆ; ಈಗಲೇ ಬರೆಯರಿ

ಪತ್ರ— ಸ್ವಾನ ಹೌಸ ಪೋ. ಬಾ. ನಂ. ೩೧ ಮದ್ರಾಸ

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ **ಕೇವಲ ಉಚಿತ**



"ತಾರಾ" ಲೀವರ್ ರಜಿಸ್ಟರ್ಡ್ ಪೊಕೆಟ್ ವಾಚ್ ೧೦ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ್ ೧೦ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ. ಪಿ, ಬಿ. ಮದ್ರಾಸ. ೨೩೫

ಕಿರ್ಲೋಸ್ಕರ

ಕಬ್ಬಿಣ ನೇಗಿಲಗಳು.

ಸಂಗ್ರಾಮ (ಸುಗ್ಗಿ) ಸಮಾಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ. ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನು ಉಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯು ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್ } ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೭ ನೇ ಇಸ್ವಿಯ ಜನೇವರಿ ೩೧ ನೇ ತಾ। ದಿವಸ ೧೨-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಒಟ್ಟಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯ ಬೇಕೆಂದು ನಿರ್ಣಯವಾಯಿತು:—

(೧) ಎಲ್ ಬಿ ಸಿ. ನಂ. ೨೭೩೭ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರಿಟೆಂಡೆಂಟ್ ಸಕ್ರ್ಯಟೆಂವಿಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ ಸಿ. ನಂ ೧೯೬೩ ನಾರಾಯಣ ವಿಠ್ಠಲ ಲೂಣಾಕರ. ಕೆರ್ ಆಫ್ ಡಿ. ಈ ಪುರಾಣಿಕ ೧೧೭೩ ಸಿಯಾಲಪುರ ಇಂದೂರ ೧೦೦೦

(೩) ಎಲ್ ಬಿ. ಸಿ. ನಂ. ೩೪೧೧ ರಾಮಚಂದ್ರ ಅನಂತ ಶಿರೋಳ. ಡಿವಿಜನಲ್ ಫಾರೆಸ್ಟ ಆಫೀಸರ ಧಕ್ಕೂರಾ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೧೦೬ ಕೆ. ಜೆ ಫರ್ನಾಂಡೋ ವ್ಯಾಪಾರಸ್ಥ ಬ್ರಿಕ್‌ಸಾಯಿಡ ಸಿಟೂ ಸ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೬೩೪ ಎಸ್ ಜೆ ಚವರೆ. ಅಸಿಸ್ಟಂಟ ಸ್ಟೇಶನ್ ಮಾಸ್ತರ ಕೆಲಗಿ ಜಿಲ್ಹಾ ವಿಜಾಪುರ. ರೂ ೧೦೦೦

ಬಿ. ಸ್ ಉದಾಪ್ಪ, ಚೀಫ ಏಜಂಟ ಹುಬ್ಬಳ್ಳಿ (ಧಾರವಾಡ ಜಿಲ್ಹಾ)

ಸ್ಟ್ಯಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲೆಕ್ಟ್ರಿಕ್ ಮಿಷನರಿಗಳ ಸಹಾಯದಿಂದ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಿಸಲ್ಪಡುತ್ತದೆ. ಆರೋಗ್ಯವೂ ಒಳ್ಳೆ ರುಚಿಕರವೂ ಆದದ್ದು.

ನಾಲ್ಕು ಪಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಒಳ್ಳೆ ವಾಸನೆಯನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜ ಪುಡಿ (ಪ್ಯಾಕಿಂಗ್ ಸಹಿತ) ೧ ಪೌಂಡಿಗೆ ರೂ. ೧-೦-೦

೨ ನೇ ,, ,, ,, ರೂ ೦-೩-೦

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ

ಚಿಕ್ಕಪೇಟೆ ಬೆಂಗಳೂರು ಸಿಟಿ.

ಜೀವ ವಿಮಾಯ ಕಾರ್ಯದಲ್ಲಿ ಅದ್ಭುತವಾದ ಜಯವು !

ಆರಂಭದ ವರ್ಷದ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ರೂಪಾಯಿ ಲಾಭ ಹಂಚಿದ

ದಿ ಜನರಲ್ ಅಶ್ಯೂರನ್ಸ ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮಾ ಕಂಪನಿಗಳನ್ನು ಹಿಂದೆ ಹಾಕಿ ಮುಂದೆ ಹೋಯಿತು. ಹಿಂದಿನ ಇದರಲ್ಲಿಯ ಕಾರ್ಯಶಕ್ತಿ ಪ್ರತ್ಯಕ್ಷ ಶ್ರೇಷ್ಠವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ಸಾಕಷ್ಟು ಸೌಕರ್ಯ! ಬೇಗನೆ ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉಂಟಾಗುವದದ್ದು ರೂ ೧,೦೯,೨೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್!

ಎಸ್. ಕಬ್ಬೂರ ಬಿ. ಎ. ಎಫ್. ಎಸ್ ಆಜ್ಮೀರ.

Apply to - *A. Ramachandra Rao*
Branch Secretary, opposit Minto Hospital,
Bangalore City
or
L. V Ramdurg. Chief Agent
Near Vithoba Temple Hubli

ಈ ಪತ್ರಿಕೆಯು ವೆಂಗಳವೇಡ ರಾಮರಾಯರ ವತಿಯಿಂದ ಶ್ರೀನಿವಾಸರಾಯರಿಂದ ಬಾಗಲಕೋಟೆ ಎಲ್ಲಿಯ ಓಂ ಪ್ರಿಂಟಿಂಗ ವರ್ಕ್ಸದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರ. ನಂ ಬಿ ೧೯೪೭

ವಾ. ಚಂದಾ ೧—೧೪—೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ಶ್ರಾವಣ ಬಹುಳ ೯ ಶಕೆ ೧೮೪೯ ತಾ|| ೨೧-೮-೧೯೨೭. Date 21—8 1927. | ಸಂಚಿಕೆ ೨೦

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ

ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕೆಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ.

WANTED.

Wanted Candidates for training in Telegraphy and Station Master's Courses. Railfre Granted Suitable Boarding and Lodging arrangements. Prospectus on two anna Stamp-Presidency Telegraph College. Royapettaph P. O., Madras.

ಭಯಂಕರ ಗರ್ಮಿ.

ಪರಮ್ಮೆ, ರಕ್ತವಿಕಾರ, ಕುಷ್ಟ, ಮಹಾರೋಗ, ಧಾತುವಿಕಾರ ಮೊದಲಾದವುಗಳ ಮೇಲೆ ಖಂಡಿತವಾಗಿ ಗುಣ ಕೊಡುವ ದಿವ್ಯ ಔಷಧಿ ಬೇಕಾದರೆ ಪ್ರಕೃತಿಮಾನ ತಿಳಿಸಿ ಔಷಧಿ ಪಡೆಯಬೇಕು.

ವೈದ್ಯ:—ವಾದಿರಾಜ ಜಹಗೀರದಾರ
ಮು. ಇಲಕಲ್ಲ (ವಿಜಾಪೂರ)

ವಾಙ್ಮಯ ಪರಿಚಯ.

ದೀನಬಂಧು ಕಬೀರ:— ನಾಟ್ಯ ಸೃಷ್ಟಿಯಲ್ಲಿ ಶ್ರೀ ರಾಮನಾಥರವರು ಪ್ರವೇಶಿಸಿದ್ದು ಇದೇ ಮೊದಲನೆಯ ಸಾರಿ. ಅಚ್ಚುಕಟ್ಟಾಗಿ ಮರಾಠಿ [illegible] ಯೊಂದಿಗೆ 'ದೀನಬಂಧು ಕಬೀರ' ಎಂಬ ನೃತ್ಯವು ಕನ್ನಡ ಲಿಪಿಯಲ್ಲಿ ಪ್ರಕಟವಾಗಿದೆ. ಇದೊಮ್ಮೆ ಬೆಂಗಳೂರಿನಲ್ಲಿ ಆಟವಾಡಿದ್ದಾಗಿದೆ. ಆದರೆ ಕಬೀರದಾಸನ ನಿಜಾರ್ಥವಾಗಿದ್ದ ಉಳಿದ ನಾಟಕ ಮಂಡಳಿಗಳ ರೀತಿಯಿಂದ ಇದು ಬೇರೆಯಾಗಿದೆ. ಗುಬ್ಬೀ ಸಭೆಯವರ [illegible] ದಲ್ಲಿ ಕಬೀರನು ಹಿಂದೂ ಮುಸಲ್ಮಾನ-ಕನ್ನಡ ಹೀಗೆ ೩-೪ ಭಾಷೆಗಳನ್ನಾಡುತ್ತಾನೆ. ಬೇರೆ ಮಂಡಳಿಗಳಲ್ಲಿ ಕಬೀರನು ಕನ್ನಡವನ್ನೇ ಆಡುತ್ತಾನೆ. ಆದರೆ ಈ 'ದೀನಬಂಧು ಕಬೀರ'ನು ಹಿಂದೀ [illegible] ಯಲ್ಲಿ ಬರೆಯಲ್ಪಟ್ಟಿದೆ. ಅಂತೇ ಕಬೀರನ ಹೃದಯದ ಚಿತ್ರವು ಆ ಭಾಷೆಯಲ್ಲಿಯೂ ನಿಜರೂಪವಾಗಿದೆ. ಅದರಲ್ಲಿ ಯಮಕ ಪ್ರಾಸಾದಿಗಳಿಂದ ಎಸೆಯುವ ಶ್ರೀ ರಾಮನಾಥರ ಭಾಷೆ. ಕಬೀರನ ಕೃತಿಗಳನ್ನು ಹೆಚ್ಚಾಗಿ ತುಂಬಿ ನಾಟಕವನ್ನು ಕೀರ್ತನವನ್ನಾಗಿ ಮಾಡದೆ ಅವನ ದೀನಬಂಧುತ್ವದ ಪ್ರಕಟನಕ್ಕಾಗಿ ಮಾತ್ರ ಕೆಲವು ಅವನ ಬಾಳುವೆಯ ಚಿತ್ರಗಳು ಆರಿಸಲ್ಪಟ್ಟಿವೆ. "ಧನದಾರಿದ್ರ್ಯ, ದಯಾದಾರಿದ್ರ್ಯಕ್ಕಿಂತ ಹೆಚ್ಚು" ಮುಂತಾದ ವಾಕ್ಯಗಳು ಅವನ ಸಂಭಾಷಣೆಯಲ್ಲಿ ಅವನ [illegible] ಗಳನ್ನು ಹೊಂದಿಸುತ್ತವೆ. ಅವನಿಂದ ಒಂದೆರಡು ಕೀಳು ದಾಳಿ [illegible] ಕರೀಮ-ಜಾನಿಯವರ ಕಥೆಯಲ್ಲಿ [illegible] ಭಗ್ನಚಿತ್ತದ ಕ್ಷಮೆಯು ಮುಖ್ಯ ವಸ್ತುವಾಗಿದೆ. ಈ ಕ್ಷಮೆಯಲ್ಲಿ ತ್ಯಾಗ ಮಾಡಿದ ರಾಮದಾಸ ಎಂಬುವ ಸಂಸಾರಿಯು ಕಬೀರನ [illegible] ಶಿವಾಜಿಯು ರಾಮದಾಸನಿಗಿಷ್ಟಂತೆ. ನಾಟಕವು ಚಿಕ್ಕದಾದರೂ ಹಾಡುಗಳು ಹೇರಳವಾಗಿವೆ, ಬಂಧುರವಾಗಿವೆ.

—ರಸಿಕ ರಂಗ

ಪಾರ್ವತಿ ಪರಿಣಯಂ:— ಕರ್ನಾಟಕ ಸಾಹಿತ್ಯಸಿದ್ಧಿ ಶ್ರೀ॥ ವೆಂಕಟರಮಣಯ್ಯ ಹುಲಕೂರ (ಗೋರೀಬಿದನೂರ ತಾಲೂಕ) ಇವರಿಂದ ರಚಿತವಾದ ಕೀರ್ತನ ಗ್ರಂಥವು ಕ್ರಯ ನಾಲ್ಕು ಆಣೆ.

ಈ ಪುಸ್ತಕದಲ್ಲಿ ಅನೇಕ ಪದಗಳು ಕೆಲವೆಡೆಯಲ್ಲಿ ಕ್ಲಿಷ್ಟವಿಷ್ಟ ರಚನೆಯವಾಗಿವೆ. ಆಗಿಸು, ಕಂದಿಲ, ಕೆಷರ, ಪಾಲೋಗವೋ, [illegible] ಇವೇ ಮೊದಲಾದ ಅಪರಿಚಿತ ಶಬ್ದಗಳು [illegible] ದ್ದರೂ ಗದ್ಯ ಭಾಗವು ಶುಷ್ಕವಿದೆ. ಕ್ಲಿಷ್ಟ ಶಬ್ದದ [illegible] ವಿಶೇಷ್ಯವು ಪುಲ್ಲಿಂಗ ಅಥವಾ ಸ್ತ್ರೀಲಿಂಗ ದೇ [illegible] ವಿಶೇಷಣವನ್ನು ನಪುಂಸಕದಲ್ಲಿ ಉಪಯೋಗಿಸಿದ ಉದಾಹರಣೆಗಳುಂಟು. ಇವಲ್ಲದೆ ವ್ಯಾಕರಣ ಮತ್ತು ಮುದ್ರಣ ದೋಷಗಳು [illegible] ಉಳಿದುಕೊಂಡಿವೆ. ಪುಟಗಳ ಅಂಕಿಗಳು ಕನ್ನಡದಲ್ಲಿದ್ದರೆ ನೆಟ್ಟಗಿತ್ತು.

ಶ್ರೀ [illegible] ಕರಲ್ಲಿ ಪರತ್ವವೇ [illegible] ಯು ಸಾಕಷ್ಟು ಕಂಡು ಬರುವದಿಲ್ಲ. [illegible] ಪರ ಬ್ರಹ್ಮಾದಿಗಳು ಸುದರ್ಶನವನ್ನೇ ವಿಧಾಸಿಸಿದ್ದರ [illegible] ಕಾರ್ಯವಾಗುವಂತಿದ್ದರೂ ಗ್ರಂಥಕರ್ತರು ಪರಮಶಿವನನ್ನು ದೂಷಿಸಲು ಧೈರ್ಯಗೊಂಡಿದ್ದಾರೆ. ಹರಿಹರರಲ್ಲಿ ಭೇದ ಕಲ್ಪಿಸಿಕೊಂಡು ರಾಜಸರು ಅನ್ಯರಿಗೆ ಕಾಡಕೊಟ್ಟು ತಾವೂ ಕೊಂಚರಿಗೆ ಪಾತ್ರರಾಗುವರೇ. ತಮ್ಮ ಮತವನ್ನು ಸಾಧಿಸಲು 'ಶಂಕರಃ ಸಮದರ್ಶನಃ' ಎಂಬ ಗೀತಾ ವಾಕ್ಯವನ್ನು ದಹರಿಸಿದ್ದಾರೆ. ಆದರೆ ಸಮಪದಕ್ಕೆ ಎಲ್ಲವೂ ಒಂದೇ ಎಂದು ನಾಲ್ಕು ನಿಘಂಟುಗಳಲ್ಲಿದ್ದ ಅರ್ಥಕ್ಕೆ ಅನರ್ಥ ಮಾಡಿದರೆಂಬ ಭಾವನೆಯಿಂದಲೋ ಏನೋ ಭಗವಾನ್ ಶ್ರೀಕೃಷ್ಣನು ಸಮತ್ವಬುದ್ಧಿಯ ವ್ಯಕ್ತಿಯನ್ನು 'ಸಮದರ್ಶನಂ ಹಿತಬ್ರಹ್ಮ' ಎಂದು ಕರೆದಿದ್ದಾನೆ. ಆದ್ದರಿಂದ ಆ ಚತುರ್ಥದಲ್ಲಿ ಪರಬ್ರಹ್ಮವನ್ನು ಕಾಣುವವರೇ ಸಮದರ್ಶಿಗಳೆಂದು ಶ್ರೀಕೃಷ್ಣನ ಅಭಿಮತವು. ಈ ಪರಬ್ರಹ್ಮವೇ ಅಜನೂ ಹರನೂ ಎಂದಾಗುವದಾದರೆ 'ಬ್ರಹ್ಮನೋಪ್ಯಾದಿಕರ್ತ್ರೆ' ಎಂಬ ಗೀತೆಯುಕ್ತಿಗೆ ವಿರೋಧ ಬರಲಾರದೇ? ಇರಲಿ. ಕೀರ್ತನಕಾರರು ಪರಮಶಿವನಲ್ಲಿ ಪ್ರೇಮಭಾವ ತಾಳುವರೆಂದು ತಿಳಿಯುವೆವು.

ಸುಧಾಸಾರ:— ಮೋಕ್ಷಂದ ಗ್ರಂಥಕಾರರಿಂದಲೇ ರಚಿತವಾದುದು. ಬೆಲೆ ಆರು ಕಾಸು. ರಾಮನಾಮಧ್ಯಾನವನ್ನು ಮುಂಜಾವಿನಲ್ಲಿಯೂ, ಸೋಮನಾಮಧ್ಯಾನವನ್ನು ಸಂಜೆಯಲ್ಲಿಯೂ, ಪಠಿಸಲು ತಕ್ಕದ್ದಾಗಿದೆ. —ನಾರಾಯಣ.

ಪ್ರಬುದ್ಧ ವೈದ್ಯಬೋಧಿನಿ:— ಬೆಂಗಳೂರ ವೈದ್ಯ ಸಿಂಧು ವಿನ ಸಂಪಾದಕರಾದ ಎ॥ ಎ. ಡಿ. ಪಂಡಿತರವರು ಬರೆದುದು.

ಇದೊಂದು ಮಾದರಿಯ ಪುಷ್ಪ ಗುಚ್ಛವು. ತರತರದ ಸುವಾಸನೆಯನ್ನು ಇಲ್ಲ ತೆಗೆದುಕೊಳ್ಳಲು ಅನುವಿದೆ. ಸಿಂಧುವೇ ಅದು! [illegible] ಸಂಪುಗಳಿಂದಲೂ ಆರಿಸಿಟ್ಟಿವೆ. ಮೌಕ್ತಿಕಗಳನ್ನು ಆರಿಸುವ ಪ್ರಮಾಣದರ ಹಿಡುಗರಿಗೇ ಆಗಲಿ; ಮತ್ತು ವಿಷಯಾಸು ಸರಳಯಿಲ್ಲ. ಶರೀರ ಶಾಸ್ತ್ರ ಒಂದೆರಡು ಪಾನಿನಲ್ಲಿ ಮುಗಿದೊಡನೆ ಇಂದ್ರಿಯ ವಿಜ್ಞಾನ ಶಾಸ್ತ್ರ ತೆಗೆದುಕೊಂಡಿದ್ದಾರೆ. ಅದನ್ನಾದರೂ ಸಾಧ್ಯಂತವಾಗಿ ವರ್ಣಿಸಿಲ್ಲ. ಆ ಮೇಲೆ ಆಯುಷ್ಯಪ್ರಮಾಣ. ಇನಾದ ಮೇಲೆ ವ್ಯಾಯಾಮ. ಇಷ್ಟಾದ ಬಳಿಕ "ಮೆಡಿಕಲ್-ರಜಿಸ್ಟ್ರೇಶನ್ ಆಕ್ಟಿನ" ಅನ್ಯಾಯ ಊಹಾಪೋಹ ಹಿಡಿದ ವಿಷಯವು ಎಲ್ಲಿಯೂ ಸಂಪೂರ್ಣವಾಗಿ ಕೊನೆಗೊಂಡಿರುವದಿಲ್ಲ. ಭಾಷಾ ಸರಣಿಯಾದರೂ ಅಷ್ಟೊಂದು ಸೊಗಸಿಲ್ಲ. ಪಾರಿಭಾಷಿಕ ಶಬ್ದಗಳು ತುಂಬಿವೆ. ಭಕೆಸ್ವರ ವಿಷಯವು [illegible] ವಾಗಿ ವರ್ಣಿಸಲ್ಪಟ್ಟಿದೆ. ನಮ್ಮ ಆಯುರ್ವೈದ್ಯರಿಗೆ ಆಧುನಿಕ ವೈದ್ಯಕೀಯ ಶಾಸ್ತ್ರಗಳ ಪರಿಚಯ ಮಾಡಕೊಡುವದಾದರೆ, ಒಂದೊಂದು ಶಾಸ್ತ್ರವನ್ನು ತೆಗೆದುಕೊಂಡು ಸಾಧ್ಯಂತವಾಗಿ ಬರೆಯುವದು ಅತ್ಯಾವಶ್ಯ. ಈ ಭಾಗದಲ್ಲಿ ಎಷ್ಟೋ ವಿಷಯಗಳು ಬೋಧಪ್ರದವಾಗಿದ್ದು, ತಿಳಿದುಕೊಳ್ಳಲರ್ಹವಾಗಿದ್ದರೂ, ಯಾವದೂ ಪೂರ್ಣಗೊಳ್ಳದೇ ಹೋಗಿದೆ.

ಮುಖಪುಟದ [illegible] ಕಾಗದಗಳೂ ಮತ್ತು ಮುದ್ರಣ ಸಾಮಗ್ರಿಗಳೂ ಅಗ್ಗವಾಗಿದ್ದರೂ ಈ ಸಂಚಿಕೆಗೆ ಹೊಸ ಕಾಗದಗಳು ದೊರೆಯಲಿಲ್ಲವೆಂಬಂತೆ ತೋರುತ್ತದೆ. ಮತ್ತೂ ಹೊಸ ಸೀಸಾಕ್ಷರಗಳೂ ಬೆಂಗಳೂರಲ್ಲಿ [illegible] ಇಷ್ಟು ದೊರೆಯದಿದ್ದೀತು ಆಶ್ಚರ್ಯ. ಮುಂದೆ ಈ ಸಂಚಿಕೆಯನ್ನು ಪ್ರಕಟಿಸುವಾಗ್ಗೆ ಹೆಚ್ಚು ಅಂದವಾಗಿ ಮಾಡುವರೆಂದು ಕೋರುತ್ತೇವೆ. —ಓರ್ವ ಡಾಕ್ಟರರು.

ಸೋಜಿಗದ ಸುದ್ದಿ.

ಅನಾಥೆಯಾದ ೭ ವರ್ಷದ ಬಾಲಿಕೆಯೊರ್ವಳು ತನ್ನ ಸಣ್ಣ ಹಳ್ಳಿಯಿಂದ ಹೊಟ್ಟೆ ತುಂಬಿಕೊಳ್ಳುವದಕ್ಕೆ ಹೊರಟು, ದೊಡ್ಡ ಊರಿಗೆ ಹೋಗಿ, ನಗರದಲ್ಲ ಅನಾಥೆಯಾದವಳು ಹೆಂಗಸಾಗಿರುವದು ಸರಿಯಲ್ಲವೆಂದು ಬಗೆದು ಹುಡುಗನ ವೇಷ ಧರಿಸಿ, ಓರ್ವ ಜಮೀನದಾರನಲ್ಲಿ ನೌಕರಿಗೆ ನಿಂತಳು. ೯ ವರ್ಷ ಗಂಡಸಿನಂತೆ ಹೊಲಕ್ಕೆ ಹೋಗಿ, ಹಸಿವನ್ನು ಬಿತ್ತುವದು ಮೊದಲಾದ ಎಲ್ಲ ಬಗೆಯ ಗಂಡಸರ ಕೆಲಸವನ್ನು ಮಾಡಿ ತ್ರಿಸ್ವಳು. ಆರಿಗೂ ಹೆಂಗಸೆಂಬ ಕಲ್ಪನೆ ಬರಲಿಲ್ಲ. ಆಕೆಯು ಜನರಿದ್ದಲ್ಲಿ ಸ್ನಾನವನ್ನು ಮಾಡುತ್ತಿರಲಿಲ್ಲ; ಉಡುಪನ್ನು ತೆಗೆಯುತ್ತಿರಲಿಲ್ಲ. ಒಂದು ದಿನ ತನ್ನ ಒಡೆಯನ ಸಂಗಡ ಜಗಳಾಡಿ, ಬೇಸತ್ತು ರಾತ್ರಿಯಲ್ಲಿ ಎರಡು ಎತ್ತುಗಳನ್ನು ಕದ್ದು ಹೊರಡಲು, ಪೋಲೀಸರ ಕೈಗೆ ಸಿಕ್ಕಳು. ಗುದಾರಸ್ಪುರ ಕಚೇರಿಯಲ್ಲಿ ಆಕೆ ಮೇಲೆ ಕಟ್ಲೆ ನಡೆದಿರಲು, ಆಕೆಯು ತನ್ನ ನಿಜವೃತ್ತಾಂತವನ್ನೆಲ್ಲ ಹೇಳಲು ಎಲ್ಲರೂ ಆಶ್ಚರ್ಯಚಕಿತರಾದರು!

ಸ್ವಲ್ಪ ವಿನೋದ.

ವಿಮಾನಿಕನ್ನಿ ಕೊಡ್ರಲು ಇಚ್ಛಿಸುವವ:—ನಿಮ್ಮ ವಿಮಾನಿನಲ್ಲಿ ಕುಳಿತುಕೊಂಡರೆ ಅಂಜಿಕೆ ಏನೂ ಇಲ್ಲವಷ್ಟೇ?

ವಿಮಾ. ನಡೆ.—ಭೂಮಿಯಲ್ಲಿದ್ದಷ್ಟೂ ಏನೂ ಅಂಜಿಕೆಯಿಲ್ಲ!

ಕನ್ನಡಿಗ.

ಬಾಗಲಕೋಟೆ ಶ್ರಾವಣ ಬಹುಳ ೯ ಶಕೆ ೧೮೭೧

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೋಣಮಾಡಿ ಕಟ್ಟುವೆನಾನು।
ನಿನ್ನ ಬೆಸನವಮಾಡಿದಂಥ ಮಕ್ಕಳ ದೊಮ್ಮ!
ಚಿನ್ನದಾದರು ಚೆನ್ನ ಮೋಣಬಸ್ತಿಯ ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೆ

—ಆಂಡಿಕಾ ಕನಯ ದತ್ತ

ಕರ್ನಾಟಕದ ಏಕೀಕರಣವೂ ಮುಂಬಯಿಯ "ಟೈಮ್ಸ್" ಪತ್ರಿಕೆಯೂ. ಈ ಪತ್ರಿಕೆಯ ಅಗಸ್ಟ ೯ನೇ ತಾರೀಖಿನಲ್ಲಿ "ಕರ್ನಾಟಕದ ಭವಿತವ್ಯತೆ" ಎಂಬದೊಂದು ಅಗ್ರಲೇಖವು ಪ್ರಸಿದ್ಧವಾಗಿದ್ದು, ಅದರಲ್ಲಿ ಸಿಂಧೀಯರಿಗೆ ಪ್ರತ್ಯೇಕವಾಗಿ ಭಾಷಾನ್ವಯ ಪ್ರಾಂತರಚನೆಯು ದೊರೆಯಲು ಸಾಕಷ್ಟು ಕಾರಣಗಳಿವೆಯೆಂದೂ, ಕನ್ನಡಿಗರಿಗೆ ಮಾತ್ರ ಪ್ರತಿಕೂಲ ಕಾರಣಗಳೇ ಇರುವವೆಂದೂ ಪ್ರತಿಪಾದಿಸಲ್ಪಟ್ಟಿದೆ. ೧೯೧೧ ರಲ್ಲಿ ಬಂಗಾಲವು ಲಾರ್ಡ ಹಾರ್ಡಿಂಜರಿಂದ ಒಂದು ಮಾಡಲ್ಪಟ್ಟಾಗ್ಗೆ, ಇದೇ ಪತ್ರಿಕೆಯು ಭಾಷಾನ್ವಯ ಪ್ರಾಂತಿಕ ಏಕೀಕರಣಕ್ಕೆ ತನ್ನ ಸಮ್ಮತಿಯನ್ನು ಕೊಟ್ಟಿದೆ. ಆದರೆ ೧೯೧೩ ರಲ್ಲಿ ಆಂಧ್ರ ಚಳವಳಿಯು ಭರದಿಂದ ಸಾಗಿದಾಗ, ಅವರ ಪ್ರತ್ಯೇಕ ಪ್ರಾಂತದ ಚಳವಳವನ್ನು ಕುರಿತು ಇದೇ ಟೈಮ್ಸ್‌ಕಾರರು ಹೀಗೆ ಬರೆದಿದ್ದಾರೆ:— "ಆಂಧ್ರರೇ ನೀವು ನಿಮ್ಮ ಭಾಷಾವಾರ ಪ್ರಾಂತರಚನೆಯ ಬಗ್ಗೆ ಗಲಭೆ ಎಬ್ಬಿಸುತ್ತೀರಿ. ಆದರೆ ಈ ತತ್ವಕ್ಕೆ ಯಾರೂ ಸಮ್ಮತಿಸರು ಈಗ್ಗೆ ನೋಡಿ, ಮುಂಬೈ ಇಲಾಖೆಯಲ್ಲಿಯ ಕನ್ನಡಿಗರು ೩ ೪ ರಾಜ್ಯದಾಡಳಿತೆಯಲ್ಲಿ ಹಂಚಲ್ಪಟ್ಟಿದ್ದರೂ ಅವರಿಗೆ ಪ್ರತ್ಯೇಕ ಪ್ರಾಂತದ ಅವಶ್ಯಕತೆಯಿಲ್ಲ. ನೋಡಿ ಅವರು ಹೇಗೆ ಶಾಂತರಾಗಿದ್ದಾರೆ. ನೀವೆಲ್ಲ ಒಂದೇ ಪ್ರಾಂತದಲ್ಲಿ ಒಟ್ಟಾರೆ ಇದ್ದರೂ, ಹೀಗೇಕೆ ಇಲ್ಲದ ಗೊಂದಲವನ್ನೆಬ್ಬಿಸುವಿರಿ"ಎಂದು ಇದೇ ಟೈಮ್ಸಪತ್ರಿಕೆಯು, ಮಲಗಿಕೊಂಡ ಕನ್ನಡಿಗರ ಬೆನ್ನು ಚಪ್ಪರಿಸಿ, ಆಂಧ್ರರನ್ನು ಉಪದೇಶಿಸಲು ಹೋಗಿತ್ತು. ಈಗ್ಗೆ ಸಿಂಧೀಯರಿಗೆ ಸಹಾನುಭೂತಿಯನ್ನು ತೋರಿಸಿದಂತೆ ಮಾಡಿ, ಕನ್ನಡಿಗರ ವಿರುದ್ಧವಾಗಿ ನಿಂತುಕೊಂಡಿದೆ. ಹೀಗೆ ಈ ವಿಷಯದಲ್ಲಿ ಆಗಿಂದಾಗ್ಗೆ ತನ್ನ ಅಭಿಪ್ರಾಯವನ್ನು ಬದಲಿಸುವದೊಂದು ಟೈಮ್ಸ ಪತ್ರಿಕೆಯ ಶೀಲವೇ ಆಗಿದೆ. ತಿಂಗಳ ಹಿಂದೆ ಇದೇ ಪತ್ರಿಕೆಯು ಭಾಷಾನ್ವಯ ಪ್ರಾಂತರಚನೆಗೆ ಅನುಕೂಲವಾಗಿಯೇ ಬರೆದಿತ್ತು. ಹೀಗಿದ್ದರೂ ಈಗ್ಗೆ ಕನ್ನಡಿಗರ ವಿರುದ್ಧವಾಗಿ ಸಂಧಿಸಿದೆ. ಈ ಬಗೆಯಿಂದ ಭಿನ್ನಾಭಿಪ್ರಾಯ ಕೊಡುವದರಲ್ಲಿ ಟೈಮ್ಸ ಪತ್ರಿಕೆಯ ಸ್ವಾರ್ಥವೇನಾದರೂ ಇರಬೇಕು ಇರಲಿ. ಸಧ್ಯದಲ್ಲಿ ಈ ಪತ್ರಿಕೆಯು ಮಂಡಿಸಿದ ವಿಧಾನಗಳನ್ನು ಪರ್ಚಿಸುವಾ. ಸಿಂಧಕ್ಕೆ ಪ್ರತ್ಯೇಕವಾಗಿ ಪ್ರಾಂತವು ದೊರೆಯಲು ಈ ಐದು ಕಾರಣಗಳು ಮಂಡಿಸಲ್ಪಟ್ಟಿವೆ:— (೧) ಐತಿಹಾಸಿಕ ವಿಚಾರ (೨) ಸೃಷ್ಟಿಸೌಕರ್ಯ (೩) ತನ್ನಲ್ಲಿ ಸಮೀಕರಣ ಮಾಡಿಕೊಳ್ಳುವಂತಹ ಶಕ್ತಿಯುಳ್ಳ ಹಾಗೂ ಏಕ ಜಾತೀಯ ಜನತೆ (೪) ಸಿಂಧದ ಸ್ಥಿತಿಗತಿಗಳನ್ನರಿಯುವ ಹಾಗೂ ಅದರ ಬಗ್ಗೆ ಸಹಾನುಭೂತಿಯಿಲ್ಲದ ಈಗಿನ ಮುಂಬೈ ಕಾಯದೇ ಮಂಡಲದಲ್ಲಿ ಅಲ್ಲಿಯ ವಿಶಿಷ್ಟ ಹಕ್ಕುಗಳನ್ನು ಕಾಯಲು ಬೇಕಾಗುವ ವಿಶಿಷ್ಟ ತರಗತಿಯ ಕಟ್ಟಳೆಗಳನ್ನು ಕೊನೆಗಾಣಿಸುವದು ಶಕ್ಯವಿಲ್ಲ (೫) ಒಳ್ಳೇ ಮಹತ್ವದ ಒಂದರ ಇವುಗಳಿಗಾಗಿ ಪ್ರತ್ಯೇಕ ಪ್ರಾಂತವು ಸಿಂಧೀಯರಿಗೆ ದೊರೆಯಬೇಕು. ಆದರೆ ಕರ್ನಾಟಕದ ವಿಷಯದಲ್ಲಿ ಇವು ಸಂಪೂರ್ಣವಾಗಿ ಅಭಾವವಾಗಿದ್ದು, ಕೆಳಗಿನ ಕಾರಣಗಳು ಪ್ರತ್ಯೇಕ ಪ್ರಾಂತಕ್ಕಾಗಿ ಅಡ್ಡಬರುತ್ತಲಿವೆ:— (೧) ಕನ್ನಡಿಗರಲ್ಲಿ ಒಂದೇ ರಾಜ್ಯದಾಡಳಿತೆಯಲ್ಲಿ ಇದ್ದುದು ಅವರ ಇತಿಹಾಸದಲ್ಲಿ ಕಂಡುಬರುವದಿಲ್ಲ (೨) ಸೃಷ್ಟಿಸೌಕರ್ಯಗಳೂ, ಕರ್ನಾಟಕದ ಮೇರೆಯೂ ಸರಿಯಾಗಿಲ್ಲ (೩) ಭಿನ್ನ ಸಂಸ್ಕೃತಿಗಳುಳ್ಳ ಜನಾಂಗದವರಿಂದ ಕನ್ನಡಿಗರ ಉತ್ಪತ್ತಿಯಾಗಿದೆ. (೪) ಕನ್ನಡದ ಹೊರತಾಗಿ ಅನೇಕ ಉಪಭಾಷೆಗಳೂ ಇವೆ (೫) ಘಟ್ಟದ ಮೇಲಿನ ಹಾಗೂ ಘಟ್ಟದ ಕೆಳಗಿನ ಜನರ ಆಚಾರವಿಚಾರಗಳೂ ರಕ್ತ ಸಂಬಂಧವೂ ತೀರ ಭಿನ್ನವಾಗಿವೆ (೬) ಇಂತಹ ಜನಾಂಗವು ತನ್ನ ಭಾಷೆಯನ್ನು ಸಂಪೂರ್ಣವಾಗಿ ತೊರೆದು ಅನ್ಯ ಭಾಷೆಯನ್ನೂ ಸ್ವೀಕರಿಸಬಹುದು ಇದಕ್ಕೆ ಐತಿಹಾಸಿಕ ಆಧಾರವೂ ಇದೆ. ಇಂಗ್ಲೀಷರು ಮುಂಬೈಯನ್ನು ಪೋರ್ತಗೀಜರಿಂದ ತೆಗೆದುಕೊಂಡು ಇಲ್ಲಿಗೆ ಬಂದ ವೇಳೆ ತಮ್ಮ ಕಟ್ಟಳೆಗಳನ್ನೆಲ್ಲ ಕನ್ನಡ ನುಡಿಯಲ್ಲಿಯೇ ಮುದ್ರಿಸಿದ್ದರು. ಯಾಕಂದರೆ ಆಗ್ಗೆ ಕನ್ನಡವು ಮುಂಬೈ ಸುತ್ತಲಿನ ಪ್ರದೇಶದಲ್ಲೆಲ್ಲ ಹಬ್ಬಿದ್ದಿತು. ಆದರೆ ಈಗ್ಗೆ ಕನ್ನಡವು ಬಹು ದೂರವಾಗಿ ಮುಂಬೈ ಕೆಳಕ್ಕೆ ಅಟ್ಟಲ್ಪಟ್ಟಿದೆ. (೭) ಅನೇಕ ರಾಜ್ಯದಾಡಳಿತೆಯಲ್ಲಿ ಕನ್ನಡಿಗರು ಹಂಚಲ್ಪಟ್ಟಿದ್ದಾರೆ ಇದನ್ನು ಸರಿಪಡಿಸುವದು ಅತ್ಯಂತ ಕಷ್ಟವಾದುದು (೮) ದೇಶೀಯ ಸಂಸ್ಥಾನಗಳಲ್ಲಿ ನೂರಕ್ಕೆ ೬೦ ರಷ್ಟು ಭಾಗವು ಅಡಕವಾಗಿದೆ. ಹರಿಯಲಾರದಂತಹ ದೊಡ್ಡ ದೊಡ್ಡ ಪ್ರಶ್ನೆಗಳು ಈಗಾಗಲೇ ಸಂಸ್ಥಾನಗಳೆಮುಂದಲ್ಲಿ ಬಿದ್ದಿರುವಾಗ್ಗೆ ಇದೊಂದು ದೊಡ್ಡ ಗುದ್ದಿಯನ್ನು ಎತ್ತಿಕೊಂಡು ಸಂಸ್ಥಾನಗಳೇನು ಮಾಡಿಯಾವು? (೯) ಪ್ರತ್ಯೇಕ ಪ್ರಾಂತದಿಂದ ನೂರಕ್ಕೆ ೪೦ರಷ್ಟು ಜನರಿಗೆ ಮಾತ್ರ ಲಾಭ (೧೦) ಕನ್ನಡದ ಹೊರತಾಗಿ ಅನ್ಯ ಭಾಷೆಯನ್ನಾಡುವ ಜನರು ಇಲ್ಲಿ ಅಸಂಖ್ಯರಿರುವರು (೧೧) ಎಲ್ಲರೂ ತಲೆದೂಗುವಂತಹ ಸಾಂಸ್ಕೃತಿಕ ಸಂಬಂಧವೂ ವ್ಯಾಪಾರದ ಕೇಂದ್ರವೂ ಕನ್ನಡಿಗರಲ್ಲಿಲ್ಲ (೧೨) ಆದ್ದರಿಂದ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವು ದೊರೆಯಬೇಕೆಂಬುದಕ್ಕೆ ಏನೂ ಆಧಾರವಿಲ್ಲ. ಆದರೂ ಸ್ಕಾಟಲಂಡದವರು ಪ್ರತ್ಯೇಕವಾದ ಪಾರ್ಲಮೆಂಟವು ಎಡಿನ್‌ಬರೋದಲ್ಲಿರಬೇಕೆಂದು ಕೇಳುತ್ತಿರುವದನ್ನೂ, ಸಣ್ಣ ಸಣ್ಣ ಪ್ರಾಂತಗಳಾದ ಜ್ಯುಗೋ-ಸ್ಲೇವಿಯಾ, ಕ್ರೋಟ, ಮತ್ತು ಸ್ಲೋವೆನ್ಸ ಇವೆಲ್ಲ ಸರ್ಬರು ತಮ್ಮನ್ನು ನುಂಗಿಬಿಡುತ್ತಲಿರುವರೆಂಬುದಾಗಿ ಗೊಂದಲವನ್ನೆಬ್ಬಿಸಿರುವದನ್ನೂ ನಾವು ಮರೆಯುವಂತಿಲ್ಲ. ಮಧ್ಯವರ್ತಿ ಸರಕಾರವು ದೂರವಾಗಿದ್ದರೆ ಸ್ಥಾನಿಕ ವಿಷಯಗಳು ದುರ್ಲಕ್ಷಿಸಲ್ಪಡುತ್ತವೆಂಬುದನ್ನೂ ನಾವು ಒಪ್ಪುತ್ತೇವೆ. ಆದರೆ ಪರರಾಷ್ಟ್ರಗಳ ಈ ಸಾಮ್ಯವು ಹಿಂದುಸ್ಥಾನಕ್ಕೆ ಸರಿಹೋಗದು ಯಾಕಂದರೆ ಇಲ್ಲಿ ವೈಯಕ್ತಿಕ ಅಧಿಕಾರದ ಆಳಿಕೆಯೋ ಹೆಚ್ಚಿದೆ ಜಿಲ್ಲಾ ಕಲೆಕ್ಟರನೇ ಜನರಿಗೆ ದೇವರಾಗಿದ್ದಾನೆ.

ಹಾಗೂ ಭಿನ್ನ ಜಾತಿಗಳು ಎಲ್ಲೆಲ್ಲಿಯೂ ತುಂಬಿವೆ. ಆದುದರಿಂದ ಅಲ್ಲಲ್ಲಿಯ ಕಮೀಶನರರು, ಆ ಆ ಭಾಗದ ಪ್ರತಿನಿಧಿಗಳ ಸಹಾಯದಿಂದ ರಾಜ್ಯಭಾರ ಮಾಡಿದರೆ ಸಾಕಿದೆ. ಇದೇ ಹಿಂದುಸ್ಥಾನದಲ್ಲಿ ಉತ್ತಮವಾದ ಉಪಾಯವು. ಈ ಬಗೆಯಾಗಿ ಟೈಮ್ಸ ಪತ್ರಿಕೆಯ ಉಪಸಂಹಾರವೂ ಪ್ರಕಟವಾಗಿದೆ. ಇನ್ನು ನಾವು ಒಂದೊಂದೇ ಕಾರಣವನ್ನು ತೆಗೆದುಕೊಳ್ಳುವಾ. ಸಿಂಧದ ಬಗ್ಗೆ ತೋರಿಸಿದ ಐದು ಕಾರಣಗಳನ್ನು ಮೊದಲು ವಿವೇಚಿಸಿ, ಆ ಮೇಲೆ ಕರ್ನಾಟಕದ ವಿರುದ್ಧವಾಗಿರುವ ೧೨ ಕಾರಣಗಳನ್ನು ಖಂಡಿಸುವೆವು. (೧) ಐತಿಹಾಸಿಕ ದೃಷ್ಟಿಯಿಂದ ಸಿಂಧದಕಿಂತಲೂ ಕರ್ನಾಟಕದಲ್ಲಿ ಹೆಚ್ಚಿನ ಓಜಸ್ವಿತೆಯು ಕಂಡುಬರುತ್ತದೆ. ಕರ್ನಾಟಕದ ಪ್ರಾಚೀನತೆಯು ಸಿಂಧಕ್ಕಿಲ್ಲ. ಕರ್ನಾಟವು ಲಲಿತ ಕಲೆಗಳಲ್ಲಿ ತೋರ್ಪಡಿಸಿದ ವೈಭವವು ಸಿಂಧಕ್ಕೆಲ್ಲಿದೆ? ಭಾಷೆಯ ಪ್ರಾಚೀನತ್ವದ ಇತಿಹಾಸದಲ್ಲಿಯೂ ಕರ್ನಾಟಕವೇ ಮೇಲಿದೆ. ಮುಸಲ್ಮಾನರ ದಾಳಿಯನ್ನು ತಡೆದು ನಿಲ್ಲುವಷ್ಟು ಬಲವು ಸಿಂಧದಲ್ಲಿಲ್ಲವೆಂದೇ ಸಿಂಧವು ಮುಸಲ್ಮಾನರಿಗೆ ತುತ್ತಾಯಿತು. ಆದರೆ ಪ್ರಚಂಡವಾದ ಶಕ್ತಿಯಿಂದ ಉತ್ತರ ಹಿಂದುಸ್ಥಾನದಿಂದ ಧಾವಿಸಿ ಬಂದ ಪರಕೀಯರ ಭಯಂಕರವಾದ ದಾಳಿಯನ್ನು, ಕರ್ನಾಟಕವು ತನ್ನ ಗಂಡಸತನದಿಂದ ಮುರಿಬಡಿದು, ಆರ್ಯರ ಸಂಸ್ಕೃತಿಯನ್ನು ಸಂರಕ್ಷಿಸಿ, ಅಖಂಡ ಭರತಖಂಡದ ಮಾನವನ್ನು ಉಳಿಸಿದೆ. ಆದುದರಿಂದ ಐತಿಹಾಸಿಕ ದೃಷ್ಟಿಯಿಂದ ಕರ್ನಾಟಕಕ್ಕೆ ಹೆಚ್ಚಾದ ಮಹತ್ವವಿದೆ. (೨) ಸೃಷ್ಟಿ ಸೌಕರ್ಯದಲ್ಲಿ, ಸಿಂಧೂ ನದಿಯ ದಂಡೆಯು ಮಾತ್ರ ಸಿಂಧದಲ್ಲಿ ಫಲವತ್ತಾಗಿದೆ. ಉಳಿದ ಪ್ರದೇಶವೆಲ್ಲ ಮಳಲುಗಾಡು. ಆದರೆ ಕರ್ನಾಟಕದಲ್ಲಿ ಸಂಪೂರ್ಣ ಪ್ರದೇಶವು ಫಲವನ್ನೀಯುವದು. ಸಿಂಧದಲ್ಲಿ ಕರಾಚಿ ಬಂದರವಿದೆ. ಕರ್ನಾಟಕದಲ್ಲಿಯೂ ಬಂದರಗಳನ್ನೇರ್ಪಡಿಸಲು ಅನೇಕ ಯೋಗ್ಯಸ್ಥಾನಗಳಿವೆ. ಆದರೆ ಒಡೆದು ಹಂಚಿಹೋದ ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವು ದೊರೆಯದ ವಿನಹ ಬಂದರಗಳಾಗುವಂತಿಲ್ಲವಾದ್ದರಿಂದಲೇ ನಮಗೆ ಪ್ರತ್ಯೇಕ ಪ್ರಾಂತವು ಬೇಕಾದುದು. (೩) ಮುಸಲ್ಮಾನರ ಸಂಖ್ಯೆಯು ಸಿಂಧದಲ್ಲಿ ಹೆಚ್ಚಿದೆಯಾದ್ದರಿಂದ ಅದನ್ನಲ್ಲಿ ಸಮೀಕರಣ ಮಾಡುವ ಶಕ್ತಿಯೂ, ಏಕಜಾತೀಯ ಜನತೆಯೂ ಸಿಂಧದಲ್ಲಿದೆಯೆಂದು ಟೈಮ್ಸಕಾರರು ಹೇಳುತ್ತಾರೆಂಬುದು ಸ್ಪಷ್ಟವಿದೆ. ಭಾಷಾನ್ವಯ ಪ್ರಾಂತರಚನೆಗೆ ಈ ಜಾತೀಯತೆಯ ಸಂಬಂಧವೇ ಇಲ್ಲ. ಟೈಮ್ಸಕಾರರ ಈ ತತ್ವವನ್ನನುಸರಿಸಿದರೆ ಭರತಖಂಡದ ಹಿಂದೂಧರ್ಮೀಯರುಳ್ಳ ಪ್ರಾಂತದವರಿಗೆ ಪ್ರತ್ಯೇಕ ಪ್ರಾಂತವನ್ನು ಕೊಡಬಾರದೆಂದಾಗುವದು. ಆದುದರಿಂದ ಈ ಕಾರಣವು ಹಾಸ್ಯಾಸ್ಪದವೂ, ಟೈಮ್ಸಕಾರರ ಯಾವದೊಂದು ಸ್ವಾರ್ಥ ಸಾಧಿಸುವದೂ ಆಗಿದೆಂಬುದು ತಾನೇ ಕಂಡುಬರುತ್ತದೆ. (೪) ವಿಶಿಷ್ಟ ಪ್ರಶ್ನೆಗಳು ಪ್ರತಿಯೊಂದು ಪ್ರಾಂತದಲ್ಲಿಯೂ, ಪ್ರತಿಯೊಂದು ಜಿಲ್ಲೆಯಲಿಯೂ ಇದ್ದೇ ಇವೆ. ಸ್ಥಾನಿಕ ಸ್ಥಿತಿಗಳನ್ನರಿಯದ, ಹಾಗೂ ಸಹಾನುಭೂತಿಯಿಲ್ಲದ ಮುಂಬೈ, ಮದ್ರಾಸ ಕಾಯದೇ ಮಂಡಲಗಳಿಂದ ಕರ್ನಾಟಕಕ್ಕೆ ವಿಪರೀತವಾದ ಹಾನಿಯಾಗಿದೆಯೆಂದೇ ನಾವು ಕರ್ನಾಟಕಕ್ಕೆ ಬೇರೆ ಪ್ರಾಂತವನ್ನು ಬೇಡುತ್ತಿರುವದು. (೫) ಬಂದರದ ಸೌಕರ್ಯವು ಕರ್ನಾಟಕಕ್ಕಿದ್ದೇ ಇದೆ. ಕರ್ನಾಟಕಕ್ಕೆ ಸ್ವತಂತ್ರ ಬಂದರವು ದೊರೆತರೆ, ಪಶ್ಚಿಮ, ದಕ್ಷಿಣ ಹಿಂದುಸ್ಥಾನದ ವ್ಯಾಪಾರವು ಕರ್ನಾಟಕದಿಂದಲೇ ಸಾಗುವದು. ವಿಮ್ಹಾನರು ಸಹ ಗೋವೆ ಬಂದರದ ಲಾಭ ಪಡೆಯಲು, ವಾಡೀ—ಗದಗ ರೇಲ್ವೇ ಜೋಡಿಸಲು ಆತುರರಾಗಿರುವರೆಂಬುದು ಎಲ್ಲರಿಗೂ ಗೊತ್ತಿದ್ದ ಸಂಗತಿಯಾಗಿದೆ. ಆದುದರಿಂದ ಸಿಂಧದ ವಿಷಯದಲ್ಲಿ ಟೈಮ್ಸಕಾರರು ತೋರಿಸಿದ ಐದೂ ಕಾರಣಗಳ ಅಭಾವವು ಕರ್ನಾಟಕದಲ್ಲಿ ಇರುವದಿಲ್ಲವೆಂಬುದು ಸಿದ್ಧವಾಯಿತು. ಇನ್ನು ಉಳಿದ ಹನ್ನೆರಡು ಕಾರಣಗಳನ್ನು ಯೋಚಿಸುವೆವು. (೧) ಮಹಾ ಪರಾಕ್ರಮಿಯಾದ ವಿಕ್ರಮನೂ, ವಿಜಯನಗರದ ರಾಯರೂ ಏಕಛತ್ರಾಧಿಪತ್ಯವನ್ನು ಸ್ಥಾಪಿಸಿದ್ದರೆಂಬುದು ಟೈಮ್ಸಕಾರರಿಗೆ ತಿಳಿಯದಿದ್ದರೆ, ಅದು ಅವರ ಅಜ್ಞಾನವನ್ನೇ ಸಿದ್ಧಪಡಿಸುತ್ತದೆ. ಇನ್ನು ಒಂದೇ ಆಡಳಿತದಲ್ಲಿ ಕನ್ನಡನಾಡು ಹಿಂದಕ್ಕಿರಲಿ; ಇಲ್ಲದಿರಲಿ. ಬ್ರಿಟಿಶ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವನ್ನೇರ್ಪಡಿಸಲು ಅದು ಎಳ್ಳಷ್ಟಾದರೂ ಆತಂಕವನ್ನುಂಟು ಮಾಡದು. ಆದುದರಿಂದ ಈ ಆತಂಕವು ಜೊಳ್ಳು. (೨) ಸೃಷ್ಟಿ ಸೌಕರ್ಯಗಳು ಕರ್ನಾಟಕಕ್ಕಿದ್ದಷ್ಟು ಮತ್ತಾವ ಪ್ರಾಂತಕ್ಕೂ ಹಿಂದುಸ್ಥಾನದಲ್ಲಿರುವದಿಲ್ಲವೆಂದು ನಾವು ಬಲು ಹೆಮ್ಮೆಯಿಂದ ಹೇಳಬಲ್ಲೆವು. ಕರ್ನಾಟಕಕ್ಕೆ ಬಂದರದ ಅನುಕೂಲತೆಗಳಿದ್ದಂತೆ, ಬಿಹಾರ, ಮಧ್ಯಹಿಂದುಸ್ಥಾನ, ಪಂಜಾಬ, ಆಸಾಮ, ಸಂಯುಕ್ತಪ್ರಾಂತ ಮೊದಲಾದ ಪ್ರಾಂತಗಳಿಗೆ ಇಲ್ಲವೇಯಿಲ್ಲ. ಆದರೂ ಈ ಪ್ರಾಂತಗಳಿಗೆ ಸ್ವತಂತ್ರ ಸರಕಾರಗಳಿವೆ; ಕರ್ನಾಟಕದ ಭೂಮಿಯಲ್ಲಿ ಅವಶ್ಯವಾದ ಎಲ್ಲ ಬಗೆಯ ಬೆಳೆ ಬರುತ್ತದೆ. ಹತ್ತಿ, ಅಕ್ಕಿ, ಜೋಳ, ಕಬ್ಬು, ಚಹ, ಕಾಫಿ, ಗೋದಿ, ಮೊದಲಾದ ಪ್ರತಿಯೊಂದು ಪದಾರ್ಥವನ್ನು ಕರ್ನಾಟಕದಲ್ಲಿ ಬೆಳೆದುಕೊಳ್ಳುತ್ತೇವೆ. ಆದರೆ ಅನ್ಯ ಪ್ರಾಂತಗಳಲ್ಲಿ ಹೀಗಿಲ್ಲ; ಒಂದೊಂದು ಬೆಳೆಗಾಗಿ ಮಾತ್ರ ಒಂದೊಂದು ಪ್ರಾಂತವು ಪ್ರಸಿದ್ಧವಿದೆ. ಮೇಲಾಗಿ, ಬಂಗಾರ, ಕಬ್ಬಿಣ, ಬೇರೆ ಬೇರೆ ನಮೂನೆಯ ಉತ್ತಮ ಒಗೆಯ ಕಲ್ಲು, ಇವೇ ಮೊದಲಾದ ಖನಿಜ ದ್ರವ್ಯಗಳೂ ಕರ್ನಾಟಕದಲ್ಲಿ ಹುಟ್ಟುತ್ತವೆ. ಅರಣ್ಯಗಳಲ್ಲಿ ಹುಟ್ಟುವ ಪದಾರ್ಥಗಳೂ ಬೇರೆ. ಫಲವತ್ತಾದ ಬೆಳೆಗಳನ್ನೂ, ಪರದೇಶಕ್ಕೆ ಸಹ ಕಳಿಸಲು ಶಕ್ಯವಾದಷ್ಟು ಪದಾರ್ಥಗಳನ್ನೂ, ಖನಿಜ ದ್ರವ್ಯಗಳನ್ನೂ, ಕಾನನ-ಪದಾರ್ಥಗಳನ್ನೂ ಕರ್ನಾಟಕದಲ್ಲಿ ಮಾತ್ರ ಕಾಣಬಹುದು. ಹೀಗಿದ್ದು, ಕರ್ನಾಟಕದಲ್ಲಿ ಸೃಷ್ಟಿಸೌಕರ್ಯಗಳಿಲ್ಲವೆಂದೆನ್ನುವದು ಅಜ್ಞಾನದ ಪರಮಾವಧಿಯು. ಇನ್ನು ಕರ್ನಾಟಕದ ಮೇರೆಯು ಸರಿಯಾಗಿಲ್ಲವಂತೆ! ಸರಿಯಾಗಿಲ್ಲವೆಂದರೇನೋ ತಿಳಿಯದು. ಯಾವ ರಾಷ್ಟ್ರದ ಹಾಗೂ ಯಾವ ಹಿಂದೀ ಪ್ರಾಂತದ ಮೇರೆಯು ಸಮನಾಗಿದೆ? ಟೈಮ್ಸಕಾರರ ದೇಶವಾದ ಇಂಗ್ಲಂಡಿನ ಮೇರೆಗಳು ಗೆರೆ ಹೊಡೆದಂತೆ ಸಮನಾಗಿವೆಯೇ? ಸಮವಿರಲಿ ಇಲ್ಲದಿರಲಿ, ಪ್ರತ್ಯೇಕ ಪ್ರಾಂತನಿರ್ಮಾಣಕ್ಕೆ ಇದು ಹೇಗೆ ಆತಂಕವಾಗುವದೋ ತಿಳಿಯದು. ಆದುದರಿಂದ ಈ ಆತಂಕವು ಟೈಮ್ಸಕಾರರ ಕಲ್ಪನಾಸೃಷ್ಟಿಯಲ್ಲಿಯೇ ಇಲ್ಲದ ಬೆದರಿಕೆ. (೩) ಕನ್ನಡಿಗರಲ್ಲಿ ದ್ರಾವಿಡರ ಹಾಗೂ ಆರ್ಯರ ಸಂಸ್ಕೃತಿಗಳು ಸಮ್ಮಿಲನ ಹೊಂದಿದ್ದರಿಂದ, ನಮಗೆ ಎರಡೂ ಸಂಸ್ಕೃತಿಗಳ ಲಾಭವು ದೊರೆತಿದ್ದು, ನಮಗೆ ಅದರಿಂದ ಹೆಚ್ಚು ಆನಂದವೇ ಆಗುತ್ತದೆ. ಈ ದಿನಗಳಲ್ಲಿ ದ್ರಾವಿಡ ಹಾಗೂ ಆರ್ಯ ಹೀಗೆ ಭೇದವನ್ನೆಣಿಸುವ ಕಾರಣವೂ ಇಲ್ಲ. ಅಖಂಡ ಭರತಖಂಡದಲ್ಲಿ ರಾಮೇಶ್ವರದಿಂದ ಹಿಮಾಲಯದವರೆಗೆ ಹಿಂದೂ ಮತೀಯರಲ್ಲಿ ಒಂದೇ ಸಂಸ್ಕೃತಿಯಿದೆಂದು ಪಂಡಿತರೆಲ್ಲ ಒಪ್ಪುತ್ತಿರುವಾಗ್ಗೆ ಟೈಮ್ಸಕಾರರ ಈ ವಿಚಿತ್ರವಾದ ಮತಭೇದದ ಗಣನೆಯು ನಮಗೆ ಆಶ್ಚರ್ಯವನ್ನುಂಟು ಮಾಡಿದೆ. ಕನ್ನಡಿಗರ ಉತ್ಪತ್ತಿಯು ಭಿನ್ನ ಸಂಸ್ಕೃತಿಗಳ ಸಮ್ಮಿಲನದಿಂದಾಗಿದ್ದರೂ ಪ್ರತ್ಯೇಕ ಪ್ರಾಂತನಿರ್ಮಾಣಕ್ಕೆ ಯಾವ

ಬಗೆಯಿಂದಲೂ ತೊಂದರೆಯಾಗುವದಿಲ್ಲ. (೪) ಕನ್ನಡನಾಡಿನಲ್ಲಿ ಕನ್ನಡದ ಹೊರತಾಗಿ ತುಳು, ಬಡಗ, ಕೊಡಗು, ತೋಡ ಮೊದಲಾದ ಉಪಭಾಷೆಗಳಿದ್ದಂತೆ, ಸಿಂಧದಲ್ಲಿ ಸಹ ಸಿಂಧೀ ಭಾಷೆಯ ಹೊರತಾಗಿ ಸಿರೈಕೀ, ಬಲೋಚಿ, ಲಾಸೀ, ಕೋಹಿಸ್ತಾನಿ, ಥಟಿ ಯಾಂಕೀ, ಮೊದಲಾದ ಉಪಭಾಷೆಗಳಿವೆ. ಅಲ್ಲದೆ ಸಿಂಧಿ ಭಾಷೆಯಲ್ಲಿಯೇ ಉತ್ತರಸಿಂಧೀ, ಮಧ್ಯಸಿಂಧೀ, ದಕ್ಷಿಣಸಿಂಧೀ ಎಂಬ ಮೂರು ಭಾಷಾಭೇದಗಳಿವೆ. ಆದರೂ ಸಿಂಧಕ್ಕೆ ಈ ಉಪಭಾಷೆಗಳೂ ಮುಖ್ಯ ಭಾಷೆಯ ಭೇದಗಳೂ ಪ್ರತ್ಯೇಕ ಪ್ರಾಂತನಿರ್ಮಾಣ ಮಾಡಲು ಆತಂಕವಾಗುವದಿಲ್ಲ. ಕರ್ನಾಟಕಕ್ಕೆ ಮಾತ್ರ ಅವು ಆತಂಕವನ್ನುಂಟು ಮಾಡುವವೋ? ಹೇಗಿದೆ ಟೈಮ್ಸ್‌ಕಾರರ ಪರಸ್ಪರ ವಿರೋಧವಾದ ವಿಧಾನವು! ಇದೊಂದೇ ಕಾರಣದಿಂದ, ಟೈಮ್ಸ್‌ಕಾರರು ಯಾವುದೊಂದು ಸ್ವಾರ್ಥ ದೃಷ್ಟಿಯಿಂದಲೇ ಹೀಗೆ ಸಿಂಧ ಕರ್ನಾಟಕಗಳಲ್ಲಿ ಇಲ್ಲದ ವಿಪರೀತತ್ವವನ್ನು ತಲೆತುರಿಸಿ, ತೆಗೆಯುತ್ತಲಿರುವರೆಂಬುದು ಸಿದ್ಧವಾಗುತ್ತದೆ. (೫) ಘಟ್ಟದ ಮೇಲಿನ ಜನರಲ್ಲಿಯೇ ಆಚಾರವಿಚಾರ ರಕ್ತಸಂಬಂಧಗಳು ತೀರ ಭಿನ್ನವಾಗಿವೆ; ಘಟ್ಟದ ಕೆಳಗಿನ ಜನರ ವಿಚಾರವೂ ಬೇರೆಯಿದೆ. ಆದರೂ ಪ್ರತ್ಯೇಕ ಪ್ರಾಂತ ನಿರ್ಮಾಣಕ್ಕೆ ಇದು ಹೇಗೆ ಆತಂಕವು? ಈಗ್ಗೆ ಇದೇ ಬಗೆಯ ಭಿನ್ನ ಸಂಪ್ರದಾಯಗಳಿಂದ ಮುಂಬೈ ಇಲಾಖೆಯಲ್ಲಿರುವವು. ಆದರೆ ಈ ಇಲಾಖೆಯ ನಿರ್ಮಾಣಕ್ಕೆ ಯಾವ ತೊಂದರೆಯೂ ಇಲ್ಲ. ಇದರಿಂದ ಮುಂಬೈ ಇಲಾಖೆಯ ರಾಜ್ಯದಾಡಳಿತೆಗೂ ಆತಂಕವಿಲ್ಲ. ಆದರೆ ಕರ್ನಾಟಕಕ್ಕೆ ಪ್ರತ್ಯೇಕವಾಗಿ ಪ್ರಾಂತ ದೊರೆತಾಕ್ಷಣಕ್ಕೆ ಈ ಭಿನ್ನ ಸಂಪ್ರದಾಯಗಳು ಭೂತಚೇಷ್ಟೆಯನ್ನು ಪ್ರಾರಂಭಿಸುವವೋ? ಸ್ಕಾಟಲಂಡ, ಆಯರ್ಲಂಡ, ವೇಲ್ಸ, ಇಂಗ್ಲಂಡಗಳಲ್ಲಿ ಸಹ ಬೇರೆ ಬೇರೆ ಸಂಪ್ರದಾಯಗಳೂ ಇವೆ; ರಕ್ತಸಂಬಂಧದಲ್ಲಿಯೂ ಕೊಂಚ ವ್ಯತ್ಯಾಸವಿದೆ. ಆದರೂ, ಇಂಗ್ಲಂಡಿನಿಂದ ತಮ್ಮನ್ನು ಬೇರ್ಪಡಿಸಬೇಕೆಂದು ಅವೇಕೆ ಕೇಳುತ್ತಿವೆ? ಸ್ವಿಟ್ಝರಲಂಡದಲ್ಲಿ ೨೨ ಭಾಗಗಳಿವೆ. ಪ್ರತಿಯೊಂದು ಭಾಗದಲ್ಲಿ ಭಿನ್ನ ಭಿನ್ನ ಜಾತಿಯೂ, ಭಿನ್ನ ಭಾಷೆಯೂ ನೆಲೆಗೊಂಡಿವೆ. ಆದರೂ ಅದು ಸ್ವತಂತ್ರ ರಾಷ್ಟ್ರವಾಗಿದೆ. ಇವೆಲ್ಲ ಕಣ್ಣೆದುರಿನಲ್ಲಿದ್ದರೂ, ಅವನ್ನು ಮೂಲೆಗೊತ್ತಿ ಕರ್ನಾಟಕದಲ್ಲಿ ಭಿನ್ನ ಆಚಾರವಿಚಾರಗಳಿದ್ದುದರಿಂದ ಪ್ರತ್ಯೇಕ ಪ್ರಾಂತಕ್ಕೆ ಆತಂಕವಾಗುವದನ್ನುವದು ಕೊಂಚ ಹುಚ್ಚುತನವು. (೬) ಇನ್ನು ನಾಪಿರ ವರ್ಷದ ಕರ್ನಾಟಕವು ತನ್ನ ಭಾಷೆಯನ್ನು ಬದಲು ಮಾಡುವದು ಒಂದು ವೇಳೆ ಗ್ರಹಿಸಿದರೂ, ಈ-ದಿನ ಬೇರೆ ಪ್ರಾಂತವನ್ನು ನಮಗೆ ಕೊಡಬಾರದೆಂದು ನಿರ್ಧಾರವಾಗದು "ಕಾವೇರಿಯಿಂದಮಾ ಗೋದಾವರಂ" ಯವರೆಗೆ ಕನ್ನಡವು ನೆಲೆಗೊಂಡಿತ್ತೆಂಬುದು ಸರ್ವಶ್ರುತವಿದೆ. ಕನ್ನಡವು ಗೋದಾವರಿ ಹಾಗೂ ಕೃಷ್ಣೆಗಳ ನಡುವೆ ಇಲ್ಲದುದಾಗಲು ಬಹುಕಾಲ ಬೀದ ಭಯಂಕರವಾದ ದುರ್ಗಾದೇವಿ ಬರಗಾಲವೇ ಕಾರಣವೆಂಬುದು ಸ್ಪಷ್ಟವಾಗಿದೆ. ೫೦—೬೦ ವರ್ಷಗಳ ವರೆಗೆ ಈ ದುಷ್ಕಾಲದಿಂದ ಗೋದಾವರಿ ಕೃಷ್ಣಾ ನದಿಗಳ ನಡುವಿನ ಪ್ರದೇಶವು ನಿರ್ಜನವಾಗಿದ್ದಿತು. ಕನ್ನಡವು ಆಗ್ಗೆ ಅಲ್ಲಿ ನಿರ್ನಾಮವಾಯಿತು. ಆ ಮೇಲೆ ಪುನಃ ಜನರ ವಸತಿಯು ಆಗಹತ್ತಿತು. ಉತ್ತರ ಹಿಂದುಸ್ಥಾನದಿಂದ ಜನರು ಬಂದು ಇಲ್ಲಿ ವಾಸಮಾಡಹತ್ತಿದರು. ಹೀಗಾಗಿ ಆ ಪ್ರದೇಶವು ಕನ್ನಡಿಗರ ಕೈಬಿಟ್ಟಿತು. ಐತಿಹಾಸಿಕ ವಿಧಾನವು ಹೀಗಿರಲು, ಕನ್ನಡಿಗರು ತಮ್ಮ ಭಾಷೆಯನ್ನೇ ಬದಲಿಸುವಷ್ಟು ದುರ್ಬಲರಾಗಿರುವರೆನ್ನುವದು ತೀರ ಅಸಂಬದ್ಧವು. ಅದು ಸತ್ಯವಾಗಿದ್ದರೆ ಕ್ರಿಸ್ತಶಕದ ಪ್ರಾರಂಭದ ಪೂರ್ವದಲ್ಲಿಯೇ ಅಸ್ತಿತ್ವದಲ್ಲಿ ಬಂದ ಕನ್ನಡನುಡಿಯು ಈ ವರೆಗೆ ಬಾಳುತ್ತಿರಲಿಲ್ಲ. ಕನ್ನಡದಲ್ಲಿ ತನ್ನ ಭಾಷೆಯನ್ನು ವೃದ್ಧಿಗೊಳಿಸುವ ಯೋಗ್ಯತೆ ಸಾಮರ್ಥ್ಯವಿದೆಂಬುದನ್ನು ನಾವು ಹೇಳಿದರೆ ಟೈಮ್ಸ್‌ಕಾರರಿಗೆ ವಿಶ್ವಾಸವಾಗಲಿಕ್ಕಿಲ್ಲ. ಆದುದರಿಂದ ಸರಕಾರದಿಂದ ಪ್ರಕಟವಾದ "[illegible]ನೇಸುಮಾರಿ" ವರದಿಯನ್ನು ಟೈಮ್ಸ್‌ಕಾರರು ನೋಡಲಿ; ಅಂದರೆ "ಮರಾಟಿಯ ದಾಳಿಯನ್ನು ತಡೆದು ನಿಲ್ಲಿಸಿ, ತನ್ನ ವ್ಯಕ್ತಿತ್ವವನ್ನು ಪ್ರಸ್ಥಾಪಿಸುವ ಹಾಗೂ ತನ್ನ ಭಾಷೆಯನ್ನು ಹಬ್ಬಿಸುವ ಪ್ರಬಲ ಶಕ್ತಿಯು ಕನ್ನಡದಲ್ಲಿದೆ. ಆದುದರಿಂದಲೇ ದಕ್ಷಿಣ ಮರಾಠ ರಾಷ್ಟ್ರದಲ್ಲಿ ಮರಾಠಿಯು ಕಳೆಗುಂದಿ, ಕನ್ನಡವು ತಲೆಯೆತ್ತುತ್ತಲಿದೆ" ಎಂಬದಾಗಿ ಯುರೋಪಿಯನ್ ಪಂಡಿತರೇ, ಸರಕಾರೀ ವರದಿಯಲ್ಲಿ ಬರೆದುದು ಟೈಮ್ಸ್‌ಕಾರರಿಗೆ ಗೊತ್ತಾಗಿ, ಕನ್ನಡದ ಸಾಮರ್ಥ್ಯವು ಎಷ್ಟಿದೆಂಬುದು ಅವಗತವಾಗುವದು. ಆಗಲಾದರೂ ಟೈಮ್ಸ್‌ಕಾರರ ಹುಚ್ಚು ಒಂದಿಷ್ಟು ತಲೆಯಿಂದ ಇಳಿಯಬಹುದು. (೭) [illegible] ರಾಜ್ಯದಾಡಳಿತಗೊಳಗಾದ್ದರಿಂದಲೇ ಕನ್ನಡಿಗರಿಗಾದ, ಆಗುತ್ತಿರುವ ಹಾನಿಯನ್ನು ತಪ್ಪಿಸುವದಕ್ಕಾಗಿ ನಾವು ಪ್ರತ್ಯೇಕ ಪ್ರಾಂತವನ್ನು ಬೇಡುತ್ತೇವೆ. ಆದುದರಿಂದ ಇದು ಆತಂಕವಾಗದು. ಎಷ್ಟೇ ಕಷ್ಟವಾಗಿದ್ದರೂ ನಾವಿದನ್ನು ಸಾಧಿಸಿಕೊಳ್ಳಬೇಕಿದೆ. (೮) ದೇಶೀಯ ಸಂಸ್ಥಾನಗಳನ್ನು ಬ್ರಿಟಿಶ್ ಕರ್ನಾಟಕದಲ್ಲಿ ಸೇರಿಸುವದು ಶಕ್ಯವಿಲ್ಲೆಂದೇ ನಾವು ಬ್ರಿಟಿಶ್ ಕರ್ನಾಟಕಕ್ಕೆ ಮಾತ್ರ ಪ್ರತ್ಯೇಕ ಪ್ರಾಂತವನ್ನು ಬೇಡುತ್ತಿರುವದು. ಆದುದರಿಂದ ದೇಶೀಯ ಸಂಸ್ಥಾನಗಳಿಗೆ ಗುದ್ದಿ ಕಟ್ಟುವ ಪ್ರಸಂಗವೇ ಇಲ್ಲ! (೯) ನೂರಕ್ಕೆ ನೂರು ಜನರಿಗೆ ಸಂಪೂರ್ಣ ಲಾಭವಾಗುವದು ಶಕ್ಯವಿಲ್ಲದಿದ್ದರೆ, ನೂರರಲ್ಲಿ ೬೦ ರಷ್ಟು ಜನರಿಗೂ ಆ ಲಾಭವು ದೊರೆಯಬಾರದೆಂದು ಅಭಿಪ್ರಾಯಪಡುವ ಟೈಮ್ಸ್‌ಕಾರರ ಪಾಂಡಿತ್ಯಕ್ಕೇನೆನ್ನಬೇಕು? (೧೦) ಕರ್ನಾಟಕದಲ್ಲಿ ಕನ್ನಡದ ಹೊರತಾಗಿ ೧೪ ಭಾಷೆಗಳನ್ನಾಡುವವರಿದ್ದಾರೆ. ಸಿಂಧದಲ್ಲಿ ಸಿಂಧೀ ಹೊರತಾಗಿ ೧೯ ಭಾಷೆಗಳನ್ನಾಡುವವರಿದ್ದಾರೆ. ಆದರೆ ಅನ್ಯಭಾಷೆಯನ್ನಾಡುವವರು ಸಿಂಧಕ್ಕೆ ಪ್ರತ್ಯೇಕ ಪ್ರಾಂತವನ್ನುಂಟು ಮಾಡಲು ಆತಂಕವನ್ನು ಮಾಡರು; ಆದರೆ ಕನ್ನಡಿಗರಿಗೆ ಮಾತ್ರ ಮಾಡುವರೆಂದು ಸುಳ್ಳುಸುಳ್ಳಾಗಿ ಸಾಧಿಸುವ ಟೈಮ್ಸ್‌ಕಾರರಿಗೆ ಜೋಡು ಶರಣೆಗಳು!! (೧೧) ಎಲ್ಲರೂ ತಲೆದೂಗುವಂತಹ ಸಾಂಸ್ಕೃತಿಕ ಸಂಬಂಧವು ಕರ್ನಾಟಕದಲ್ಲಿರುವದಿಲ್ಲೆಂದು, ಟೈಮ್ಸ್‌ಕಾರರ ಸಲುವಾಗಿ, ಒಂದು ಕಾಲ ಗ್ರಹಿಸಿದರೂ, ಸಿಂಧೀಯರಲ್ಲಿ ಈ ಬಗೆಯ ಸಂಬಂಧ ಎಲ್ಲವೇ ಇಲ್ಲವೆಂದು ಧಾರಾಳವಾಗಿ ಹೇಳಬಲ್ಲೆವು. ಹಿಂದೂ-ಮುಸಲ್ಮಾನರ (ಇನ್ನು ಮೇಲೆ ಸಕ್ಕರ ಕಾಲುವೆಯಾದ ಮೇಲೆ ಯುರೋಪೀಯರ ಬಳಿಯೂ ಸೇರುವದು.) ಸಂಸ್ಕೃತಿಯು ತಿಕ್ಕಾಟನಡೆಸಿದ್ದು ಯಾರಿಗೆ ಗೊತ್ತಿಲ್ಲ? ಈ ಬಗೆಯ ಭಯಂಕರವಾದ ತಿಕ್ಕಾಟವಿದ್ದರೂ ಸಿಂಧವು ಪ್ರತ್ಯೇಕ ಪ್ರಾಂತಕ್ಕೆ ಪಾತ್ರವಾಯ್ತು; ಆ ತಿಕ್ಕಾಟ ಇಲ್ಲ ಕರ್ನಾಟಕದಲ್ಲಿರದಿದ್ದರೂ ಕರ್ನಾಟಕವು ಅಪಾತ್ರವಿದೆ. ಎಂತಹ ಮೋಜಿನ ಪ್ರಶ್ನೆಯಿದು! ಇನ್ನು ವ್ಯಾಪಾರದ ಕೇಂದ್ರವು ಕರ್ನಾಟಕದಲ್ಲಿರಲಿಕ್ಕಿಲ್ಲ. ಅದಕ್ಕೇ ನಾವು ಪ್ರತ್ಯೇಕ ಪ್ರಾಂತವನ್ನು ಬೇಡುವದು. ಗೋವೆಯ ಬದಲು ಕಾರವಾರವು ಬಂದರವಾಗಬೇಕೆಂದು, ಪ್ರಯತ್ನ ನಡೆದಾಗ ಮುಂಬೈಯ ಯುರೋಪೀಯ ವರ್ತಕರೇ ಅಡ್ಡಬಂದರೆಂಬುದನ್ನು ಕನ್ನಡಿಗರು ಮರೆಯುವಂತಿಲ್ಲ. ಆಗ್ಗೆ ಕಾರವಾರದ ಬಂದರವು ತೆರೆಯಲ್ಪಟ್ಟಿದ್ದರೆ,

(೯ನೇ ಪುಟ ನೋಡಿರಿ)

'ಕೇಸರಿ'ಯೂ ಕರ್ನಾಟಕವೂ

(ಪುಣೆ ಕೇಸರೀ ತಾ। ೯—೮—೨೭)

"ಮಹಾರಾಷ್ಟ್ರದ ವಸಾಹತವು ಮಹಾರಾಷ್ಟ್ರದ ಹೊರಗೆ ಉತ್ತರ ಹಿಂದುಸ್ಥಾನದಲ್ಲಿದ್ದಂತೆ ದಕ್ಷಿಣ ಹಿಂದುಸ್ಥಾನದಲ್ಲಿಯು ಕರ್ನಾಟಕ, ತಂಜಾವರಾದಿ ಪ್ರಾಂತಗಳಲ್ಲಿಯೂ ಉಂಟು. ಸಮಸ್ತ ಹಿಂದವಾಸಿಗಳಲ್ಲಿ ಸಮತ್ವದ ಭಾವನೆಯು ಎಲ್ಲಿಯ ವರೆಗೆ ಇದ್ದಿತೋ ಅಲ್ಲಿಯ ವರೆಗೆ ಅಲ್ಲಲ್ಲಿ ತಂಡು ತಂಡಾಗಿ ಹಬ್ಬಿರುವ ಮಹಾರಾಷ್ಟ್ರೀಯರನ್ನು ಆಯಾ ಪ್ರಾಂತೀಯ ನಿವಾಸಿಗಳು ಒಳ್ಳೇ ಸಹಾನುಭೂತಿಯಿಂದ ನಡೆಸಿಕೊಳ್ಳುತ್ತಿದ್ದರು. ಆದರೆ ಬ್ರಿಟಿಶ್ ಸರಕಾರವು ಮಾಡದಿದ್ದರೂ, ರಾಷ್ಟ್ರೀಯ ಸಭೆಯು ಮುಂದೊದೆದು ಬಂದು ಭಾಷಾವಾರ ಪ್ರಾಂತ ರಚನೆಯನ್ನು ಒಪ್ಪಿಸಿದ್ದರಿಂದ ಸರ್ವತ್ರ ಪ್ರಾಂತಿಕ ಅಭಿಮಾನವು ಉತ್ಪನ್ನವಾಗಿ, ತತ್ ಪ್ರಾಂತೀಯ ಜನತೆಯು ಪರಪ್ರಾಂತೀಯರ ಕಡೆಗೆ, ಪರಕೀಯತ್ವದ ದೃಷ್ಟಿಯಿಂದ ನೋಡುತ್ತಿದೆ. ಇದರ ಪರಿಣಾಮವನ್ನು ಅಲ್ಪ ಸಂಖ್ಯಾತರಾದ ಪರಪ್ರಾಂತೀಯರು ಸಾಂಪ್ರತಃ ಅನುಭವಿಸಬೇಕಾಗಿದೆ. ಈ ಬಗ್ಗೆ ವಿಜಾಪೂರ ಜಿಲ್ಲೆಯ ಬಾಗಲಕೋಟೆಯ ಒಬ್ಬ ಮಹಾರಾಷ್ಟ್ರೀಯ ನಿವಾಸಿಯು ನಮ್ಮ ಕಡೆಗೆ ಒಂದು ಪತ್ರವನ್ನು ಕಳುಹಿಸಿದ್ದು ಅದರ ಮಥಿತಾರ್ಥವು ಹೀಗಿದೆ:-"

(ಈ ಪತ್ರದ ಸಾರಾಂಶವನ್ನು ಮಾತ್ರ ಇಲ್ಲಿ ಕೊಟ್ಟಿರುವೆವು.)

"ಇತ್ತೀಚೆಗೆ ಕರ್ನಾಟಕದಲ್ಲಿ ಮಹಾರಾಷ್ಟ್ರೀಯರ ಪ್ರಭಾವವು ಕಡಿಮೆಯಾಗುತ್ತ ನಡೆದಿದೆ. ಅದನ್ನು ಹೋಗಗೊಡದೇ ಯಾರು ಇನ್ನೂ ತಡೆದು ನಿಂತಿದ್ದಾರೋ ಅವರಿಗೆ ಅನೇಕ ತೊಂದರೆಗಳಿಗೆ ಎದುರಾಗಬೇಕಾಗಿದೆ, ವಿಜಾಪೂರ ಜಿಲ್ಲೆಯಲ್ಲಿಯ ಹೊಳೆದಂಡೆಯ ಭೂಮಿಗಳು ಫಲವತ್ತಾಗಿದ್ದು ಕೇವಲ ಹೊಳೆನೀರಿನಿಂದ ಪೈರು ತೆಗೆದ ಕೊಳ್ಳುವಂತಿವೆ, ಭೂಮಿಗಳೂ ದೊರಕುವಂತಿವೆ. ವಿಜಾಪೂರ ಧಾರವಾಡ ಜಿಲ್ಲೆಯಲ್ಲಿ ಸಂಘಟಿತ ವ್ಯವಹಾರವನ್ನು ಪ್ರಾರಂಭಿಸಿದರೆ ವಿಶೇಷ ಫಲಕಾರಿಯಾಗುವದು. ನಿರುದ್ಯೋಗಕ್ಕೆ ಉಪಾಯವೆಂದು ಈ ಬಗೆಯಿಂದ ಪ್ರಯತ್ನ ಮಾಡತಕ್ಕದ್ದಾಗಿದೆ. ಅಲ್ಲಲ್ಲಿ ಸಂಘಗಳನ್ನು ಸ್ಥಾಪಿಸಿ ಅವುಗಳ ಕೇಂದ್ರವನ್ನು ಪುಣೆಯಲ್ಲಿ ಮಾಡಲಾಗಿ ಈ ಕಾರ್ಯಕ್ಕೆ ವಿಶೇಷ ಸಹಾಯವಾಗುವದೆಂಬಲ್ಲಿ ಸಂದೇಹವಿಲ್ಲ;"

ಇತ್ತೀಚೆಗೆ ಕರ್ನಾಟಕದಲ್ಲಿ ಏಕೀಕರಣದ ಚಳವಳಿಯೂ, ಭಾಷಾಭಿಮಾನವೂ ತಲೆದೋರಹತ್ತಿದ್ದರಿಂದಲೂ, ಅದರ ಪರಿಣಾಮವು ತಮ್ಮ ಮೇಲೂ, ತಮ್ಮ ಪ್ರಾಂತೀಯರ ಮೇಲೂ ಆಗುತ್ತಿರುವದೆಂಬ ಪೊಳ್ಳು ಬೆದರಿಕೆಯಿಂದಲೂ ಮಹಾರಾಷ್ಟ್ರದ ಮುಖಂಡರಿಗೂ 'ಕೇಸರಿ' ಪತ್ರಕ್ಕೂ ಬಾಗಲಕೋಟೆಯ ರಹಿವಾಸಿಯಾದ ಓರ್ವ ಮಹಾರಾಷ್ಟ್ರೀಯ ವ್ಯಕ್ತಿಗೂ ಎದೆ ಹಾರುತ್ತಿರುವುದು ವಿಸ್ಮಯಜನಕವು! "ಸಪ್ಪನಾಗಿ ಕಂಡರೆ ಕೈಕಾಲು ನಡುಗುವವು." ಎಂಬಂತೆ ಈ ಮಹಾರಾಷ್ಟ್ರೀಯರಿಗೆ ಬಿಸಿ ಹತ್ತಿರಬಹುದೇ? ಅಂತೆಯೇ ಪರಕೀಯತ್ವವೆಂಬ ವಿಕಲ್ಪವು ಅವರಲ್ಲಿ ಮೂಡಹತ್ತಿದೆ. ಮತ್ತು ಪ್ರಸಂಗವಿರಲಿ, ಇಲ್ಲದಿರಲಿ; ಅವರು ಪರಪ್ರಾಂತೀಯರನ್ನು ನಿಂದಿಸತೊಡಗಿದ್ದಾರೆ. ಸಧ್ಯದಲ್ಲಿ ಧಾರವಾಡ, ವಿಜಾಪೂರ ಜಿಲ್ಲೆಗಳಲ್ಲಿ ನದಿಗಳಿವೆ; ಇಲ್ಲಿ ಹೊಸ ಉದ್ಯೋಗಗಳನ್ನು ಪ್ರಾರಂಭಿಸಲಿಕ್ಕೆ ಬರುವಂತಿದೆ; ಎಂಬ ವಿಷಯವನ್ನು ಪ್ರತಿಪಾದಿಸಬೇಕಿದ್ದರೆ, ಕನ್ನಡಿಗರ ಮೇಲೆಯೂ ಕಾಂಗ್ರೆಸ್ಸಿನ ಮೇಲೆಯೂ ಹರಿಹಾಯ್ದು ಬ್ರಿಟಿಶ್ ಸರಕಾರವನ್ನು ಅಭಿನಂದಿಸುವ ಅಡ್ಡಗಾಲಿನ ಅಧಿಕಪ್ರಸಂಗವನ್ನು ವ್ಯಕ್ತಗೊಳಿಸುವ ಕಾರಣವೇನಿದ್ದಿತು? ನಿಜವಾಗಿ ಹೇಳಬೇಕಾದರೆ ಮಹಾರಾಷ್ಟ್ರೀಯರನ್ನು ಇಲ್ಲಿಂದ ಸಮೂಲ ಉಚ್ಚಾಟನೆ ಗೈಯುವದು ಕರ್ನಾಟಕಸ್ಥರ ಉದ್ದೇಶವೇ ಇಲ್ಲ. ಹೀಗೆ ಎಳ್ಳಷ್ಟೂ ನಾವು ಅಂದುದಿಲ್ಲ ಮತ್ತು ಪ್ರಯತ್ನವನ್ನೂ ಮಾಡಿದ್ದಿಲ್ಲ. ನಮ್ಮ ಕನಸಿನಲ್ಲಿ ಸಹ ಈ ಕಲ್ಪನೆಯಿಲ್ಲ. ಆದರೆ ಕನ್ನಡ ನಾಡಿನಲ್ಲಿ ಮರಾಟೀ ಭಾಷೆಯು ಹೆಚ್ಚಾಗಿ ಪ್ರಸಾರವಾದದ್ದರಿಂದ ಕರ್ನಾಟಕ ವಾಙ್ಮಯಕ್ಕೆ ಧಕ್ಕೆ ತಗಲುತ್ತಿರುವದನ್ನು ತಿಳಿದು, ನಮ್ಮ ಸ್ವಂತ ದೆಸೆಯನ್ನರಿತು, ನಾವು ಎಚ್ಚರಗೊಳ್ಳುತ್ತಿರುವೆವು. ಕನ್ನಡ ನಾಡಿನಲ್ಲಿದ್ದ ಮಹಾರಾಷ್ಟ್ರೀಯರು ಕನ್ನಡಿಗರ ಸಂಗಡ ಕಲೆತು, ಕನ್ನಡ ನುಡಿಗೆ ಮನ್ನಣೆಯನ್ನಿತ್ತು, ಕನ್ನಡ ಸಂಸ್ಕೃತಿಯಲ್ಲಿ ಬೆರೆತ ಕೊಳ್ಳಲೇ ಬೇಕೆಂದು ಆಗ್ರಹಪಡುತ್ತಿರುವೆವು. ಇದೊಂದು ಮರಾಟಿಗರಿಗೆ ಸಹನವಾಗದ್ದನ್ನು ನೋಡಿ ವಿಷಾದಪಡಬೇಕಿದೆ. ಇಂಥಹ ಕುತ್ಸಿತ ವಿಚಾರಗಳಿಂದಲೇ ಪರಕೀಯತ್ವದ ಬೀಜಾರೋಪಣಕ್ಕೆ ಅನುವುಗೊಟ್ಟಂತಾಗುವದು. ಲೋಕಮಾನ್ಯರು ಈ ನಮ್ಮ ಕರ್ನಾಟಕಸ್ಥರ ವಿಚಾರಕ್ಕೆ ಆನಂದದಿಂದ ಒಪ್ಪಿ ಆ ಕಾರ್ಯದಲ್ಲಿ ತಾವೂ ನಮಗೆ ಸಹಾಯ ಮಾಡಿದರು. ನೇರವಾಗಿ ಕನ್ನಡದಿಂದ ಕುಲಗೆಟ್ಟು ಮರಾಟಿಯು ಚಿಗಿತಿದೆಂದೂ ಹೇಳಿ, ಕನ್ನಡದ ಪ್ರಾಚೀನತ್ವವನ್ನು ಸಿದ್ಧಗೊಳಿಸಿ, ನಮ್ಮನ್ನು ಅಭಿನಂದಿಸಿದರು. ಅಲ್ಲದೇ ಅಧಿಕಾರ ವಿಭಾಗಣೀ ಕಮೀಶನ್‌ದ ಮುಂದೆ, ಭಾಷಾವಾರ ಪ್ರಾಂತರಚನೆಯ ಅವಶ್ಯಕತೆಯನ್ನು ಒಳ್ಳೇ ಮಾರ್ಮಿಕತನದಿಂದ ಒತ್ತಿ ಹೇಳಿದರು! ಇಂತಹ ಲೋಕೋತ್ತರ ಪುರುಷನ ಉದಾತ್ತ ವಿಚಾರವೆತ್ತ! ಕುತ್ಸಿತ ವಿಚಾರವನ್ನು ಹರಡಲು ಬೀಜಾರೋಪಣೆಯನ್ನು ಮಾಡುತ್ತಿರುವ ಅವರ ಶಿಷ್ಯರೆಂದು ಕರೆಯಿಸಿಕೊಳ್ಳುವ ಕಠೋರ ಹೃದಯವೆತ್ತ! ಲೋಕಮಾನ್ಯರ ಪ್ರಖರವಾದ 'ಕೇಸರಿ' ಪತ್ರದ ತೇಜಸ್ವಿತೆಯು ಈಗ ಈ ಬಗೆಯಾಗಿ ಮೂರ್ಖತನದ ಕಲ್ಪನೆಗಳನ್ನು ಸಾರುತ್ತಿರುವದನ್ನು ನೋಡಿ ಅದಾವ ಹೃದಯವು ತಲ್ಲಣಗೊಳ್ಳಲಿಕ್ಕಿಲ್ಲ!

ರಾಷ್ಟ್ರೀಯ ಸಭೆಯು ಭಾಷಾವಾರ ಪ್ರಾಂತವಿಭಾಗವನ್ನು ಮಾಡಿದ್ದು ಈ ನಮ್ಮ ಸ್ವಾರ್ಥಪರಾಯಣವಾದ "ಕೇಸರಿ"ಗೆ ಸರಿದೋರಲಿಲ್ಲ! ರಾಷ್ಟ್ರೀಯ ಸಭೆಗೆ ಇಲ್ಲದ ಹೆಸರನ್ನಿಡುವ ಇವರ ಅರಣ್ಯಪಾಂಡಿತ್ಯವೂ, ಬ್ರಿಟಿಶರು ಭಾಷಾವಾರ ಪ್ರಾಂತರಚನೆಯನ್ನು ಮಾಡದ್ದರಿಂದ ಅವರ ಬೆನ್ನು ಚಪ್ಪರಿಸುವ ಹೇಡಿತನವೂ, 'ಕೇಸರಿ'ಯ ಬಗ್ಗೆ ನಮ್ಮಲ್ಲಿ ನಿಜವಾಗಿಯೂ ಬೇರೆ ಕಲ್ಪನೆಯನ್ನುಂಟು ಮಾಡಹತ್ತಿದೆ! ಲೋಕಮಾನ್ಯರ ಶಿಷ್ಯರಾದ ಮಹಾರಾಷ್ಟ್ರೀಯರ ಈ ಚಾಳಿವು ಹೇಯವಾದದು!

ಕರ್ನಾಟಕದ ಉದಾರ ಹೃದಯವನ್ನು ಮರಾಟಿಗರು ಈ ವರೆಗೆ ಅನೇಕ ಸಾರೆ ಮನಗಂಡಿರಬಹುದು. ಇಲ್ಲಿ ಅವರು ಸ್ಥಿರವಾಗಿ ನಿಲ್ಲಲಿ! ವಸಾಹತುಗಳನ್ನು ಬೆಳೆಸಲಿ! ಅವರಿಗೆ ಯಾವ ಆತಂಕವೂ ಬಂದಿಲ್ಲ, ಬರುವದಿಲ್ಲ, ಬರಲಿಕ್ಕಿಲ್ಲ! ಆದರೆ ಕನ್ನಡ ನಾಡಿನಲ್ಲಿದ್ದ ಮೇಲೆ ಕನ್ನಡಿಗರಲ್ಲಿ ಬೆರೆತುಕೊಳ್ಳಬೇಕು. ಆಯರ್ಲಂಡಿನ ಅಲ್‌ಸ್ಟರರಂತೆ ಪ್ರಯುಕ್ತಿ ಸಲ್ಲದು. ಇಷ್ಟೇ ನಮ್ಮ ನ್ಯಾಯವಾದ ಚಳವಳಿಯ ಗರ್ಭಿತಾರ್ಥವು. ಆದರೆ ಈ ನ್ಯಾಯವಾದ ಮಾರ್ಗಕ್ಕೆ ಮರಾಟಿಗರು ಅಡ್ಡಬರಹತ್ತಿದರೆ ಮಾತ್ರ ಕರ್ನಾಟಕವು ಇನ್ನು ಮುಂದೆ ಇದರ ಚಟವನ್ನು ನಡೆಯಗೊಡದು. ಇದು ಖಂಡಿತ.

— ಬಿಳಿ ತನಯ.

ನನಗೆ ಹೊಳೆದಂತೆ

ಮೈಸೂರಿನಲ್ಲಿಯ ರಜತೋತ್ಸವದ ಬಗ್ಗೆ ಭರತಖಂಡದ ಎಲ್ಲ ವೃತ್ತಪತ್ರಿಕೆಗಳೂ ಸಂಪಾದಕೀಯ ಲೇಖನಗಳನ್ನು ಬರೆದು, ಭರತಖಂಡಕ್ಕೆ ಮಹಾರಾಜರು ಭೂಷಣರಾಗಿದ್ದಾರೆಂದು ಮತಕೊಟ್ಟಿರುವರು. ಆದರೆ ಈ ಬಗ್ಗೆ 'ಕೇಸರಿ'ಯ ಸಂಪಾದಕೀಯ ಮಾತನೇ ಇಲ್ಲವಲ್ಲ! ಕನ್ನಡ ರಾಜನೊಬ್ಬನು ಇಷ್ಟೊಂದು ಪ್ರಖ್ಯಾತಿಗೆ ಒಳಗಾದ ಕಹಾಣಿ 'ಕೇಸರಿ'ಯ ಸಂಪಾದಕರಿಗೆ ತಿಳಿದಿರಲಿಕ್ಕಿಲ್ಲ!! ‡ ‡ ‡

ಈಗಿನ ಕಾಲಕ್ಕೆ ಮಾನಪತ್ರಗಳ ಯುಗವೆಂದು ಹೆಸರಿಟ್ಟರೆ ಸಲ್ಲುವದು! ಪ್ರಪಂಚಕ್ಕೆ ಬೇಕಾಗುವ ಸಾಮಗ್ರಿಗಳು ತುಟ್ಟಿಯಾಗಿವೆಯೆಂದು ಸಂಸಾರಿಗಳು ಚಿಂತಿಸುತ್ತಿರುವಾಗ್ಗೆ, ಈ ಮಾನಪತ್ರಗಳು ಬಹು ಅಗ್ಗವಾಗುತ್ತಲಿವೆ! ಯಾರಿಗೆ ಈ ಬಿನ್ನವತ್ತಳಿಕೆಗಳನ್ನು ಕೊಡತಕ್ಕದ್ದೋ ಅವರಿಗೆ ಕೊಡಲು ಜನರಿಗೆ ಅಂಜಿಕೆ! ಹೇಗಾದರೂ ಧೈರ್ಯ ಮಾಡಿ, ಮಹಾತ್ಮರಿಗೆ ಮಾನಪತ್ರ ಕೊಡುವದನ್ನು ನಿಶ್ಚಯಿಸಬೇಕಾದರೆ ಕಳವಳದಲ್ಲಿ ಅದೊಂದು ಸೃಷ್ಟಿ ನಿರ್ಮಾಣದಷ್ಟು ಕಷ್ಟವಾಗುತ್ತದೆ. ಏನೋ ತೊಂದರೆಯಾದರೂ ಒಂದಾವರ್ತಿ ನಿಶ್ಚಯಿಸಿದರೂ ಕೂಡ ಆ ಮಾನಪತ್ರಗಳನ್ನರ್ಪಿಸಲು ತಗಲುವ ವೆಚ್ಚವನ್ನು ಮುಂದಾಗಿ ಪ್ರಯತ್ನಿಸಿದವರೇ ತೆರಬೇಕೇ ಹೊರತಾಗಿ, ಸ್ಥಾನಿಕ ಸಂಸ್ಥೆಗಳಿಗೆ ಆ ವೆಚ್ಚದ ಬಗ್ಗೆ ವಿಚಾರಿಸುವ ಧೈರ್ಯವಿಲ್ಲ! ಸರ್ವಮಾನ್ಯರೂ ಲೋಕಪ್ರಿಯರೂ ಆದ ಮಹಾತ್ಮಾ ಗಾಂಧಿಯವರಿಗೆ ಬಿನ್ನವತ್ತಳಿಕೆಯನ್ನರ್ಪಿಸಬೇಕೆಂದರೆ ವಿಜಾಪೂರದ ಸ್ಥಾನಿಕ ಸಂಸ್ಥೆಯವರಿಗೆ ೫ ರೂ, ವೆಚ್ಚದ ಹಣವನ್ನು ಗೊತ್ತು ಮಾಡುವ ಧೈರ್ಯವಿರಲಿಲ್ಲ. ಆದರೆ ಗವರ್ನರರು ವಿಜಾಪುರಕ್ಕೆ ಬರುವರಂತೆ! ಅಗ್ಗೆ ೫೦೦ ರೂ. ವೆಚ್ಚ ಮಾಡಬೇಕೆಂದು ನಿರ್ಧಾರವಾಗಿದೆಯಂತೆ! ಇದೇನು ಸ್ಥಾನಿಕ ಸ್ವರಾಜ್ಯದ ಮಹಾತ್ಮೆಯೋ ಅಥವಾ ಸಭಾಸದರು ಆತ್ಮಗೌರವವನ್ನು ಹೆಚ್ಚಿಸಲು ಹುಡುಕಿ ತೆಗೆದ ಮಾರ್ಗವೋ? —ಓದುಗ

ಅರಳೆಯ ವ್ಯಾಪಾರಕ್ಕೆ ಕಳೆ ಬರುವದು.

ಅಮೇರಿಕೆಯಲ್ಲಿ ಹತ್ತಿಯ ಬೆಳೆ ಸಾಕಷ್ಟು ಬರಲಿಲ್ಲ ಆದುದರಿಂದ ಈಗಾಗಲೇ ಅರಳೆಯ ಧಾರಣೆಯು ಏರುತ್ತಲಿದೆ. ಗುಜರಾತದಲ್ಲಿ ವಿಪರೀತ ಮಳೆಯಾಗಿ ಬೆಳೆಗಳು ಹಾಳಾದ್ದರಿಂದ, ಅತ್ತ ಕಡೆಯಿಂದ ಅರಳೆ ಮುಂದಿನ ಸಲ ಪೇಟೆಗೆ ಬಾರದು. ಇದರಿಂದ ಕರ್ನಾಟಕದ ಅರಳೆಗೆ ಮುಂದಿನ ಸುಗ್ಗಿಯಲ್ಲಿ ಹೆಚ್ಚಾದ ಬೆಲೆ ಬರುವದಾಗಿ ಮುಂಬಯಿ ವರ್ತಕರು ಹೇಳುತ್ತಲಿರುವರು. ಕರ್ನಾಟಕದಲ್ಲಿ ಪ್ರತಿವರ್ಷಕ್ಕಿಂತ ನೂರಕ್ಕೆ ೨೫ ರಂತೆ ಹತ್ತಿಯನ್ನು ಹೆಚ್ಚಾಗಿ ಬಿತ್ತುವ ಸಂಭವವಾಗಿದೆ. ಒಟ್ಟಿಗೆ ೫೩ ಸಾವಿರ ಎಕರೆ ಭೂಮಿಯಲ್ಲಿ ಈ ವರ್ಷ ಹತ್ತಿಯು ಬಿತ್ತಲ್ಪಡುವದು. ಬಿತ್ತಿದ ಮೇಲೆ ಸಕಾಲದಲ್ಲಿ ಮಳೆಯಾಗಿ, ಬೆಳೆ ಕೈಗೆ ಹತ್ತಿದರೆ ಒಕ್ಕಲಿಗರು ಈ ವರ್ಷ ಧನ್ಯರಾಗುವ ಲಕ್ಷಣಗಳಿವೆ!

ಹಿಂದೀಯರಿಗೇಕೆ ಹಳಿಯುವದು?

ಧರ್ಮಾಂಧ ಹುಚ್ಚರೆಂದು ಹಿಂದೀಯರನ್ನು ಯುರೋಪಿಯನರು ಹಳಿಯುವರು. ಆದರೆ ಕೆಳಗಿನ ಸಂಗತಿಗೆ ಏನೆಂದು ಈ ಮಹಾಶಯರು ಉತ್ತರ ಹೇಳಬಲ್ಲರು? —

ಇಂಗ್ಲಂಡಿನ ಒಂದು ನಾಟಕ ಮಂದಿರದಲ್ಲಿ ಒಬ್ಬರು ನವಿಲುಗರಿಯ ಚಿತ್ರಿಕೆಗಳನ್ನು ಕತ್ತರಿಸಿ ಗೋಡೆಗಳನ್ನು ಅಲಂಕರಿಸಿದ್ದರಂತೆ. ಆದರೆ ಈ ಅಲಂಕಾರವು ದುರ್ಭಾಗ್ಯದ ಸೂಚನೆಯೆಂದು ಅಲ್ಲಿಯವರ ವಿಶ್ವಾಸವಿದ್ದಿತು. ಈ ಅಲಂಕಾರ ಮಾಡಿದ ಮೇಲೆ ಪ್ರಥಮ ನಾಟಕಕ್ಕೆ ಬಂದ ಪ್ರೇಕ್ಷಕರಲ್ಲಿ ಹಲವರು ಅಸ್ವಸ್ಥ ಬಿದ್ದರಂತೆ. ಇದಕ್ಕೆ ಈ ನವಿಲುಗರಿಗಳೇ ಕಾರಣವೆಂದು ಆ ಅಲಂಕಾರವು ಆ ಮೇಲೆ ತೆಗೆದುಹಾಕಲ್ಪಟ್ಟಿತಂತೆ. ‡ ‡ ‡ ‡ ‡

ಕರ್ನಾಟಕ ವೈಭವಕಾರರಿಗೂ ಕನ್ನಡಿಗನಿಗೂ ಬಹಳ ತಕರಾರು—ಮಳೆಯು ಮೇಲೆ ಬೀಳುತ್ತದೋ, ಕೆಳಗೆ ಬೀಳುತ್ತದೋ ಎಂದು. ಕನ್ನಡದ ಅಭ್ಯಾಸಕ್ಕಾಗಿ ನಡೆಯುವ ಈ ಪ್ರಬಂಧವು ಬಹಳ ಪ್ರೇಕ್ಷಣೀಯವಿದೆ. —ಸ್ವದೇಶಾಭಿಮಾನಿ

ಹಿಂದುಸ್ಥಾನ.

ನಾಗಪುರದಲ್ಲಿ ಶಸ್ತ್ರಗಳನ್ನು ಧರಿಸುವ ಸತ್ಯಾಗ್ರಹವು ಮತ್ತೆ ಪ್ರಾರಂಭವಾಗಿದೆ. ಶ್ರೀ ಸಾಂಬಮೂರ್ತಿ ಹಾಗೂ ತಿವಾರಿ ಇವರ ಮುಖಂಡತ್ವದಲ್ಲಿ ೫೦ ಸ್ವಯಂಸೇವಕರು ಶಸ್ತ್ರಗಳನ್ನು ಹಿಡಿದು ಮೆರವಣಿಗೆಯಿಂದ ಹೊರಟರು. ಆದರೆ ಪೋಲೀಸರು ಈ ಸಲ ಅವರನ್ನು ಬಂಧಿಸಲಿಲ್ಲ! ಜಾಣರಾದರೆನ್ನಬೇಕೇ? ಅದೂಯಿಲ್ಲ, ಯಾಕಂದರೆ ಸ್ವಯಂಸೇವಕರ ಕೈಯಲ್ಲಿಯ ಶಸ್ತ್ರಗಳನ್ನು ಕಸಿದುಕೊಳ್ಳುತ್ತಲಿದ್ದಾರೆ. ಈ ಪ್ರಕರಣವು ಇನ್ನು ಹೇಗೆ ಬೆಳೆಯುವದೋ ನೋಡಬೇಕು.

ಹಿಂದುಸ್ಥಾನ ಸರಕಾರಕ್ಕೆ ಅಂಚೆ ಖಾತೆಯಿಂದ ೪೯ ಲಕ್ಷ ರೂ. ಈ ಸಲ ಲಾಭವಾಗಿದೆ.

ಮದ್ರಾಸ ಮುನಸಿಪಾಲ್ಟಿಯ ಶಾಲೆಗಳಲ್ಲಿ ಮಹಾತ್ಮಾ ಗಾಂಧಿಯವರ ಭಾವಪಟಗಳನ್ನಿಡಲು ಅಡ್ಡಿಯಿಲ್ಲೆಂದು ಸರಕಾರದವರು ತಿಳಿಸಿದ್ದಾರೆ.

ಪಂಡಿತ ಮೋತೀಲಾಲ ನೆಹರೂ ಇವರು ಇದೇ ೨೧ನೇ ತಾರೀಖಿನಲ್ಲಿ ವಿಲಾಯತಿಗೆ ತೆರಳುವರು.

ಕಲಕತ್ತೆಯ ಓರ್ವ ವರ್ತಕನಿಗೆ ಬಂದ ತಂತಿಯ ಸಮಾಚಾರವನ್ನು ತಂತೀ ಕಚೇರಿಯ ಕಾರಕೂನನು ಬೇರೆಯವನಿಗೆ ಹೇಳಿದಕ್ಕಾಗಿ, ಆ ಕಾರಕೂನನ ಮೇಲೆ ಖಟ್ಲೆಯಾಗಿದೆ.

ಡಾ॥ ಮುಂಜೇಯವರಿಗೆ ಅವರ ಮಿತ್ರರು ೧೦ ಸಾವಿರ ರೂಪಾಯಿಯ ಚೀಲವನ್ನರ್ಪಿಸಿದರು.

ವೈಸರಾಯರ ಮನೆಯ ವೆಚ್ಚಕ್ಕಾಗಿ ಸಿಮ್ಲಾದಲ್ಲಿ ೨೫ ಸಾವಿರ ರೂಪಾಯಿಗಳನ್ನು ಕೊಡಬೇಕಾಗಿ ಹಿಂದುಸ್ಥಾನ ಸರಕಾರದ ಅರ್ಥಿಕ ಸಭೆಯಲ್ಲಿ ಸರಕಾರದವರು ಕೇಳಿದರು. ಕೇವಲ ಒಂದೆರಡು ಬಹುಮತಗಳಿಂದ ಅದು ಸ್ವೀಕೃತವಾಯಿತು! ಬಡ ಬೋರೇಗೌಡನ ಹಣ! ಮತ ಕೊಟ್ಟವರಿಗೆ ಯಾವ ಹಾನಿಯೂ ಇಲ್ಲ!

ಮಧ್ಯ ಹಿಂದುಸ್ಥಾನ ಸರಕಾರದ ಕ್ರಮಿಕ ಪುಸ್ತಕಗಳಲ್ಲಿ ಲೋಕಮಾನ್ಯರ ಬಗ್ಗೆ ಅಲ್ಲಲ್ಲಿ ಉಲ್ಲೇಖಗಳಿದ್ದವು. ಅವನ್ನು ತೆಗೆದು ಹಾಕಬೇಕೆಂದು ಹಿಂದಕ್ಕೆ ಸರಕಾರದವರು ನಿರ್ಧರಿಸಿದ್ದರು. ಆದರೆ ಈಗಿನ ಶಿಕ್ಷಣ ಮಂತ್ರಿಗಳು ಅವು ಕಾಯಂವಾಗಿರಬೇಕೆಂದು ನಿರ್ಧರಿಸಿದ್ದಾರೆ.

ದಿಲ್ಲಿಯ ದೊಡ್ಡ ಕಾಯದೇ ಮಂಡಲವು ೧೮ನೇ ತಾ॥ ನಲ್ಲಿ ಪ್ರಾರಂಭವಾಗಿದೆ.

ಯಾವ ಶಾಲೆಯಲ್ಲಿಯೂ ಬಾಲಿಕೆಯರಿಂದ ಕೆಲವು ವರ್ಗಗಳವರೆಗೆ ಫೀ ತೆಗೆದುಕೊಳ್ಳಬಾರದೆಂದೂ, ಸರಕಾರೀ ನೌಕರರಿಗೆ ಖಾದೀ ಬಟ್ಟೆಯನ್ನು ಧರಿಸಲು ಆತಂಕವಿರಬಾರದೆಂದೂ ಬಿಡುಗಡೆಯಾದ ರಾಜಕೀಯ ಕೈದಿಗಳಿಗೆ ಕಾಯದೇ ಮಂಡಲಗಳನ್ನು ಸೇರಬಾರದೆಂಬ ಕಾನೂನು ರದ್ದಾಗಬೇಕೆಂದೂ ಮದ್ರಾಸ ಕಾಯದೇ ಮಂಡಲದಲ್ಲಿ ಸ್ವಾತಂತ್ರ್ಯಾಭಿಲಾಷಿಗಳಿಂದ ಠರಾವುಗಳು ಬರತಕ್ಕವಿವೆ.

ಸರ ಗಂಗಾರಾಮರು ತಮ್ಮ ಮೃತ್ಯುಪತ್ರದಿಂದ ೧೫ ಲಕ್ಷ ರೂಪಾಯಿಗಳನ್ನು ಸಾರ್ವಜನಿಕ ಕಾರ್ಯಗಳಿಗಾಗಿ ಕೊಟ್ಟಿದ್ದಾರೆ. ೩೦ ಲಕ್ಷ ಜೀವಂತರಿರುವಾಗಲೇ ಕೊಟ್ಟಿದ್ದರು.

ಪರದೇಶ.

ಯುರೋಪಖಂಡದ ಸುಪ್ರಸಿದ್ಧ ಪೈಲವಾನನಾದ ಝಿಬಿಸ್ಕೋನು ತನ್ನ ತಮ್ಮನೊಂದಿಗೆ ಭರತಖಂಡಕ್ಕೆ ಬರಲು ಹೊರಟಿರುವನು. ಪಂಜಾಬದ ಗಾಮಾನನೊಡನೆ ಕುಸ್ತಿಯಾಡಬೇಕೆಂಬ ಉತ್ಕಟ ಪ್ರೇಮದಿಂದ ಇವನು ಬರುತ್ತಿರುವನು.

ಸ್ಕೀನ ಕಮೀಟಿಯವರು ಹಿಂದೀಯರ ಲಷ್ಕರೀ ಶಿಕ್ಷಣಕ್ಕಾಗಿ ಒಂದು ಕಾಲೇಜನ್ನು ಭರತಖಂಡದಲ್ಲಿ ಸ್ಥಾಪಿಸಬೇಕೆಂದು ನಿರ್ಧರಿಸಿದ್ದರು, ಆದರೆ ವಿಲಾಯತಿಯಲ್ಲಿರುವ ಭಾರತೀಯ ಮಂತ್ರಿಗಳೂ ಯುದ್ಧ ಖಾತೆಯವರೂ ಅದಕ್ಕೆ ಒಪ್ಪಲಿಲ್ಲ!

ಅಕಾಲೀ ಕೈದಿಗಳ ಸಹಾಯಕ್ಕಾಗಿ ಅಮೇರಿಕೆಯ ಅಕಾಲೀ ಜತ್ತಾದವರು ೫೮೬ ರೂಪಾಯಿಗಳನ್ನು ಕಾಂಗ್ರೆಸ ಕಾರ್ಯವರ್ಗದ ಕಡೆಗೆ ಕಳಿಸಿದ್ದಾರೆ.

ಮುಂಬೈ ಬ್ರಾಹ್ಮಣೇತರರೂ ಕಾಂಗ್ರೆಸ್ ಸೇರುವರೋ?

ಮದ್ರಾಸದ ಬ್ರಾಹ್ಮಣೇತರರಂತೆ ಮುಂಬೈಯಿಲಾಖೆಯ ಬ್ರಾಹ್ಮಣೇತರರೂ ಕಾಂಗ್ರೆಸ್ಸನ್ನು ಸೇರುವರಾಗಿ ತಿಳಿಯುತ್ತದೆ. ಈ ಬಗ್ಗೆ ವಿಚಾರಿಸಲು ಇದೇ ತಿಂಗಳ ೨೮—೨೯ ತಾ॥ ಗಳಲ್ಲಿ ಮುಂಬೈಯಲ್ಲಿ ಬ್ರಾಹ್ಮಣೇತರ ಪರಿಷತ್ತು ಸೇರುವದು. ಬೆಳಗಾವಿ ಶ್ರೀ ದಳವೀಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಮಹಾಭಾರತದ ಹೊಸ ಆವೃತ್ತಿ.

ಪುಣೆಯ ಭಾಂಡಾರಕರ ಸಂಸ್ಥೆಯವರು ಮಹಾಭಾರತದ ಶುದ್ಧವಾದ ಸಂಪೂರ್ಣ ಆವೃತ್ತಿಯನ್ನು ಪ್ರಕಟಿಸಲು ಉಪಕ್ರಮಿಸಿ ಅನೇಕ ವರ್ಷಗಳಾದವು. ಅಖಿಲ ಭರತಖಂಡದ ಪಂಡಿತರ ಸಹಾಯದಿಂದ ಈಗ್ಗೆ ಈ ಮಹಾಗ್ರಂಥದ ಹಸ್ತಲಿಖಿತ ಶುದ್ಧ ಪ್ರತಿಯು ಸಿದ್ಧವಾಗಿದ್ದು ಮುದ್ರಣವೂ ಪ್ರಾರಂಭವಾಗಿದೆ. ಕೇವಲ ಮುದ್ರಣ(ಶ್ರೀಮಂತ ಔಂಧದ ರಾಜರು ತೆಗೆದ ಚಿತ್ರಗಳನ್ನು ಕೂಡಿ)ದ ವೆಚ್ಚವು ೧ ಲಕ್ಷ ರೂ ಆಗುವದು. ಪಂಡಿತರ ಸಂಭಾವನೆ, ಕಾಗದ ಮುಂತಾದವುಗಳ ವೆಚ್ಚಕ್ಕೆ ೩ ಲಕ್ಷ ರೂ ಪ್ರತ್ಯೇಕವಾಗಿ ಬೇಕಾಗಿದೆ. ೮೦೦೦ ಪುಟಗಳ ಪುಸ್ತಕವು ೧೨ ಭಾಗಗಳಲ್ಲಿ ಉತ್ತಮರೀತಿಯಿಂದ ಬೈಂಡಾಗುವದು. ಔಂಧದ ರಾಜರೂ, ಮುಂಬೈ ಸರಕಾರವೂ, ಬಡೋದೆ ಭಾವನಗರ ದರ್ಬಾರಗಳೂ ಈಗ್ಗೆ ಧನದಿಂದ ಸಹಾಯ ಮಾಡಿದ್ದರಿಂದ ಮುದ್ರಣದ ಕಾರ್ಯವೇನೋ ಪ್ರಾರಂಭವಾಗಿದೆ. ಆದರೆ ಶ್ರೀಮಂತರೂ, ರಾಜರೂ ಈ ಕಾರ್ಯಕ್ಕೆ ಸಹಾಯ ಮಾಡಬೇಕಾಗಿ ಸಂಸ್ಥೆಯವರ ಪ್ರಾರ್ಥನೆಯಿದೆ.

ಇನ್‌ಕಮ್ ಟ್ಯಾಕ್ಸಿನ ಹಾವಳಿ.

ದಿಲ್ಲಿಯ ಕ್ಲಾತ ಕಂಪನಿಯವರಿಗೆ ೧೯೨೪ರಲ್ಲಿ ಇನ್‌ಕಮ್ ಟ್ಯಾಕ್ಸಿನ ಬಗ್ಗೆ ನೋಟೀಸು ಸರಕಾರವು ಕೊಡಲಿಲ್ಲ. ಆದರೂ ೨ ವರ್ಷಗಳ ಮೇಲೆ ೧೯೨೨-೨೩ರ ಇಸ್ವಿಯ ಲಾಭದ ಬಗ್ಗೆ ಇನ್‌ಕಮ್ ಟ್ಯಾಕ್ಸ ವಸೂಲ ಮಾಡಿದ್ದು ಅನ್ಯಾಯವೇನೋ, ೧೯೧೮ರಿಂದ ಆಪದ್ಧನ (ರಿಝರ್ವ ಫಂಡ) ವೆಂದು ಕೂಡಿಟ್ಟ ಹಣದಲ್ಲಿಯ ೧ ಲಕ್ಷ ರೂ.ಗಳು ೧೯೨೨ನೇ ಇಸ್ವಿಯಲ್ಲಿ ಕೊಟ್ಟ ಗಿರಾಕಿಗಳ ಉದ್ದರಿಯನ್ನು ಕಿತ್ತಿ ಹಾಕಲು ಮುಳುಗುಗಂಟೆಂದು ತಿಳಿಯಲು, ಸರಕಾರವು ಅವರ ಮೇಲೂ ತೆರಿಗೆಯನ್ನು ಆಕರಣ ಮಾಡಿದ್ದು ಅನ್ಯಾಯವೆಂದೂ, ಪ್ರೀವಿ ಕೌನ್ಸಿಲಿನಲ್ಲಿ ಈ ಕಂಪನಿಯವರು ಅಪೀಲು ಮಾಡಿದ್ದರು. ಆದರೆ ಅದು ಕಿತ್ತಿ ಹಾಕಲ್ಪಟ್ಟಿದೆ.

ರಂಗಭೂಮಿಯ ಸಮಾಚಾರ.

ಹೊಸದಾಗಿ ಮುಂಬೈಯಲ್ಲಿ ಸ್ಥಾಪಿತವಾದ ಧ್ವನಿವಾಹಕಯಂತ್ರ (ಬ್ರಾಡ ಕಾಸ್ಟಿಂಗ ಮಶಿನ್)ದಲ್ಲಿ ಬಾಲಗಂಧರ್ವನ ಗಾಯನದ ಕಾರ್ಯಕ್ರಮವು ಜರುಗಿತು. ಅದನ್ನು ಲಂಡನ್ನಿನಲ್ಲಿ ಎಲ್ಲ ಗಾಯನ ಪ್ರೇಮಿಗಳು, ಆಗಿಂದಾಗ್ಗೆ, ಕೇಳಿ, ಬಹಳೇ ಸಂತೋಷವನ್ನು ವ್ಯಕ್ತಗೊಳಿಸಿದರು. ಗಂಧರ್ವನಿಗೆ ಫೋನೋಗ್ರಾಫುಗಳ ಜೊತೆಯಲ್ಲಿ ಇದೊಂದು ಹೊಸ ಉತ್ಪನ್ನವಾದಂತಾಯಿತು.

ಬೆಂಗಳೂರ ಗುಬ್ಬೀ ನಾಟಕ-ಶಾಲೆಯಲ್ಲಿ 'ದೀನಬಂಧು ಕಬೀರ' ಹಾಗೂ 'ಒಥೆಲೊ' ನಾಟಕಗಳು ಅಮೇಚೂರ ನಾಟಕಸಂಘದವರಿಂದ ಕಳೆದ ವಾರದಲ್ಲಿ ಪ್ರಯೋಗಿಸಲ್ಪಟ್ಟವು. ಟಿ. ರಾಘವಾಚಾರ್ಯರೂ, ಪಂಡಿತ ತಾರಾನಾಥರೂ ಭಾಗ ತೆಗೆದುಕೊಂಡಿದ್ದರು.

'ದಕ್ಷಕನ್ಯಾ' ಎಂಬ ಹೊಸ ನಾಟಕವನ್ನು ನಾಳಿನ ಬುಧವಾರ ದಿನ ಶ್ರೀ. ವೆಂಕೋಬರಾಯರ ಶಿರಹಟ್ಟಿ ನಾಟಕ ಮಂಡಲದವರು ರಂಗಭೂಮಿಯ ಮೇಲೆ ತರುವರು. ಕಾಮದಹನ, ಯಜ್ಞಕುಂಡದಲ್ಲಿ ಪಾರ್ವತಿಯು ಹಾರುವದು ಇವೇ ಮೊದಲಾದ ನೋಟಗಳು ಅತ್ಯಂತ ಆಕರ್ಷಕವಾಗಿ ತೋರಿಸಲ್ಪಡುವವು. ಶ್ರೀ. ಕಂಠೀ ಸಿದ್ಧಲಿಂಗಪ್ಪನವರಿಂದ ವಿರಚಿತವಾದ ಹೊಸ ಸಾಮಾಜಿಕ ನಾಟಕವಾದ 'ದಿವ್ಯಪ್ರೇಮ' ವನ್ನಾದರೂ ಸವಣೂರಲ್ಲಿಯೇ ಪ್ರಯೋಗಿಸಬೇಕೆಂದು ಮಾಡಿದ್ದಾರೆ.

“ದಿವಾಳೀ ಖೋರರು”

ಸಟ್ಟಾವ್ಯಾಪಾರದಿಂದ ಹಾನಿಪಡೆದು ಕೆಲವರು ನಾದಾರ ಅರ್ಜಿ ಮಾಡಿದರೆ, ಅವನ್ನು ಒಪ್ಪಿಕೊಳ್ಳಬಾರದೆಂದು ಮುಂಬೈಯ ನ್ಯಾಯಾಧೀಶ ಬಾಮರ ಇವರು ನಿರ್ಣಯಿಸಿದ್ದಾರೆ. ಅಪ್ರಕಾರ ಅನೇಕರಿಗೆ ಆಜ್ಞೆಯನ್ನು ಕೊಟ್ಟಿದ್ದಾರೆ. ಕೆಲವು ಉದಾಹರಣೆಗಳು ಹೀಗಿವೇ—

(೧) ಫ್ರಿಂಕ ಬಾಜೂಡ ಎಂಬ ಯುರೋಪಿಯನ್ನನಿಗೆ ೯೩೦ರೂ. ಪಗಾರವಿದೆ, ಅವನ ಹಣವೆಲ್ಲ ಸಟ್ಟೆಯಲ್ಲಿ ಹೋಯಿತು. ನಾದಾರ ಬಗ್ಗೆ ಅರ್ಜಿ ಮಾಡಲು, ಪಗಾರದಲ್ಲಿ ಪ್ರತಿತಿಂಗಳಿಗೆ ೪೫೦ರೂ. ಕೊಟ್ಟು ಸಾಲ ಮುಟ್ಟಿಸಬೇಕು.

(೨) ಓರ್ವ ಮರಾಠಾ ಜವಳಿ ವ್ಯಾಪಾರನಿಗೆ ೧೦೦೦ ಸಾಲವು ಮಕ್ಕಳ ಮದುವೆಗಾಗಿ ಆಯಿತು. ಪೆನ್ಶನ್ ೧೦೦ರೂ. ಬರುತ್ತಿವೆ. ಆದ್ದರಿಂದ ಆ ಹಣವನ್ನು ಜಪ್ತಮಾಡಿ, ಸಾಲತೀರಿಸಬೇಕೆಂದು ಹುಕುಂ ಕೊಟ್ಟರು.

(೩) ಓರ್ವ ೨೩ ವರ್ಷದ ಹಿಂದೂ ತರುಣನಿಗೆ ತಂದೆಯ ಸಾಲದ ಭಾರವು ಬಂದಿದೆ. ಬಡವನಿವನು, ಆದರೆ ತಂದೆಯು ಲಕ್ಷಾವಧಿ ರೂಪಾಯಿ ಗಳಿಸಿದ್ದರೆ ಅವನೇನು ಚಿಕ್ಕಾಸು ಬಡ್ಡಿಯನ್ನು ಸಾಲಗಾರರಿಗೆ ಕೊಡುತ್ತಿರಲಿಲ್ಲ. ಇದ್ದರಿಂದ ಈಗ್ಗೆ ಬಡವನಾದರೂ, ಸಧ್ಯಕ್ಕೆ ಶಾಯುದವನಾಗಿದ್ದರಿಂದ ದುಡಿದು ಸಾಲ ಮುಟ್ಟಿಸಬೇಕು.

ಆನಂದದಸುದ್ದಿ!

ಟ್ರೇನಿಂಗ ಕಾಲೇಜವು ಪುನಃ ಪ್ರಾರಂಭವಾಯಿತು.

ಧಾರವಾಡ ಟ್ರೇನಿಂಗ ಸ್ಕೂಲು ನಿಂತುಹೋದ ವಾರ್ತೆಯನ್ನು ಪ್ರಕಟಿಸಿದ ಕೆಲವೇ ದಿನಗಳಲ್ಲಿಯೇ ಅದು ಪುನಃ ಪ್ರಾರಂಭವಾಯಿತೆಂದು ಬರೆಯುವ ಸುಯೋಗವು ಬಂದದ್ದಕ್ಕಾಗಿ ನಾವು ಆನಂದ ಪಡಬೇಕಾಗಿದೆ. ಕರ್ನಾಟಕದ ವೃದ್ಧಪಿತಾಮಹರಾದ ರಾ. ಬ. ರೊದ್ದರವರು, ನಮ್ಮ ಭಾಗದ ಎಂ. ಎಲ್. ಸಿ. ಜನರು, ಅವರಲ್ಲಿ ಮುಖ್ಯವಾಗಿ ಮಿ. ಜೋಗ ಬಂಗಾರೋಪಂತರು, ರಾ. ಬ. ಕಂಬಳಿಯವರು, ಮಿ. ಚಿಕ್ಕೋಡಿಯವರು, ಕರ್ನಾಟಕದ ಎಲ್ಲ ವರ್ತಮಾನಪತ್ರಕಾರರು, ಮುಂದಾಳುಗಳು ಹೋರಾಡಿದ ಪ್ರಯತ್ನದಿಂದಲೇ ೬೬-೬೭ ವರ್ಷಗಳ ವಯೋವೃದ್ಧ ಟ್ರೇನಿಂಗ ಕಾಲೇಜದ ಮೃತಶರೀರದಲ್ಲಿ ಪುನಃ ಜೀವಕಳೆ ತುಂಬಿತೆನ್ನಬೇಕಾಗುವದು. ಪುನರ್ಜನ್ಮಕ್ಕೆ ಬಂದ ಟ್ರೇನಿಂಗ ಸ್ಕೂಲು ದಿನದಿನಕ್ಕೆ ಹೆಚ್ಚು ಹೆಚ್ಚಾಗಿ ಬೆಳೆದು ಮೊದಲಿನ ಟ್ರೇನಿಂಗ ಕಾಲೇಜದಂತೆ ಅಭಿವೃದ್ಧಿಹೊಂದಿ ಕರ್ನಾಟಕ ಜನತೆಗೆ ವಿದ್ಯಾದಾನ ಮಾಡಿ ಶ್ರೇಯಸ್ಸು ಪಡೆದು ಬಾಳಲೆಂದು ಹಾರೈಸುವೆವು. ಶಾ. ಹ.

ಮದ್ರಾಸ ಕರ್ನಾಟಕ.

ಲಿಂಗಾಯತರ ವಸತಿ ಗೃಹ— ನೀಲಗಿರಿಯಲ್ಲಿ ಲಿಂಗಾಯತರದೊಂದು ಕನ್ನಡ ಶಾಲೆಯಿರುತ್ತದೆ. ಅದರಲ್ಲಿ ಈಗ ೧೦೦ ಜನರು ಓದುತ್ತಿರುವರು. ಬಡವರಾದ ಹುಡುಗರಿಗೆ ಅನ್ನವಸ್ತ್ರಗಳನ್ನೇರ್ಪಡಿಸಬೇಕೆಂದು ಆ ಶಾಲೆಯ ಲೆಮು ಸಮಿತಿಯವರೀಗ ಪ್ರಯತ್ನ ಮಾಡುತ್ತಿರುವರು.

ಮೈಸೂರು ಕರ್ನಾಟಕ.

ಕಣಿಯೂರ ಪತ್ರಿಕೆಯನ್ನು ಹೊರಡಿಸಲು ಸರಕಾರದಿಂದ ಅಪ್ಪಣೆ ದೊರೆಯಲಿಲ್ಲವಾದ್ದರಿಂದ ಶ್ರೀ ತಗಡೂರ ರಾಮಚಂದ್ರರಾಯರು ಮೈಸೂರಲ್ಲಿ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಆದ್ದರಿಂದ ಸರಕಾರವು ಅವರಿಗೆ ಗವರ್ನಮೆಂಟಿನ ಅಪ್ಪಣೆಯನ್ನು ಕೊಟ್ಟಿದೆ. ಮಹಾತ್ಮಾಜಿಯರ 'ರಾಮರಾಜ್ಯ' ದಲ್ಲಿ ಈ ಬಗೆಯೇನೋ ತಿಳಿಯದು.

EAT KASHMIR FRUITS & NUTS!

ಕಾಶ್ಮೀರದ ಹಣ್ಣು ಹಂಪಲಗಳನ್ನು ಸೇವಿಸಿರಿ!

ತೆಳುವಾದ ತೊಗಟೆಯ ತಾಜಾ ಅಕ್ರೋಡಗಳೂ, ಅರಿಸಿದ ಅಡವಿಯ ಸೇಬುಗಳೂ, (Hazelnuts) ೧೧ ಪೌಂಡಿಗೆ ರೂ. ೫—೮—೦; ತಾಜಾ ಕಾಗದೀ ಬದಾಮು; ಹರಳಿಲ್ಲದ್ದು, ಬಲು ಸವಿಯಾದ ಜರ್ದಾಳು (Apricots); ಅಂಜೂರ; ದ್ವೀಪದ್ರಾಕ್ಷಿ; ಕಿಸಮಿಸು, ೧೧ ಪೌ. ಗೆ ೧೨ ರೂ.; ಕಮಲದ ಶುದ್ಧವಾದ ಜೇನತುಪ್ಪ, ೫॥ ಪೌ. ಗೆ ೮ ರೂ; ಶುದ್ಧ ಕೇಶರ, ೧ ತೊಲೆಗೆ ೩ ರೂ. ಮಾಲ ಖರ್ಚ ಮಾಫ!

ಡಾರ ಬ್ರದರ್ಸ ಶ್ರೀನಗರ, ಕಾಶ್ಮೀರ.

Dar Bros Srinagar, Kashmir

(೫ನೇ ಪುಟದಿಂದ ಬಂದದ್ದು)

ಈಗ್ಗೆ ಇದೇ ಹುಬ್ಬಳ್ಳಿಯು ಬೇಕಾದಂತಹ ವ್ಯಾಪಾರದ ಕೇಂದ್ರವಾಗುತ್ತಿತ್ತು; ಪ್ರತ್ಯೇಕ ಪ್ರಾಂತವು ದೊರೆತರೆ ನಾಳೆಯಾದರೂ ಹುಬ್ಬಳ್ಳಿಯು ಎಲ್ಲರೂ ತಲೆದೂಗುವ ವ್ಯಾಪಾರದ ಕೇಂದ್ರವಾಗುವದೆಂಬುದರಲ್ಲಿ ಸಂದೇಹವಿಲ್ಲ (೧೨) ಆದುದರಿಂದ ಕರ್ನಾಟಕಕ್ಕೆ ಸಂಪೂರ್ಣವಾಗಿ ಆಧಾರಗಳವೆಂಬುದೂ ಸಿದ್ಧವಾಗುತ್ತದೆ; ಟೈಮ್ಸಕಾರರ ವಿಧಾನಗಳೆಲ್ಲ ಹುಸಿಹೋಗುತ್ತವೆಂಬುದೂ ಸಿದ್ಧವಾಗುತ್ತದೆ. ಹೀಗಿದ್ದರೂ ಟೈಮ್ಸಕಾರರು ಸಿಂಧ-ಕರ್ನಾಟಕಗಳಲ್ಲಿ ಭೇದವನ್ನೆಣಿಸಲು ಹಲವು ಕಾರಣಗಳಿರುವವು, ಒಂದು ಹಾರುವ ಗುಬ್ಬಿಯು ನಮಗೆ ಹೇಳುತ್ತದೆ. ಅವು ಹೀಗಿವೆ:— (೧) ಭಾಷಾನ್ವಯ ಪ್ರಾಂತರಚನೆಗೆ ಸರಕಾರವು ಈ ಅರ್ಥದಲ್ಲಿ ಸಿದ್ಧವಿಲ್ಲ. ಆದುದರಿಂದ ಹೊರಗಿನ ವಾತಾವರಣವು ಸರಕಾರಕ್ಕೆ ಅನುಕೂಲವಾಗಿರುವಂತೆ ಟೈಮ್ಸಕಾರರು ಹೊಸ ಹೊಸ ವಿಧಾನಗಳನ್ನು ಹುಡು-ಹುಡುಕಿ, ಮುಂದೆ ಮುಂದೆ ಒಡ್ಡಿಸುತ್ತಾರೆ. ಅಂತೆಯೇ ಈ ವಿಷಯವಾಗಿ ಈ ಪತ್ರಿಕೆಯ ಅಭಿಪ್ರಾಯಗಳು ಆಗಿಂದಾಗ್ಗೆ ಬದಲಾಗುತ್ತಲಿವೆ. (೨) ಸಿಂಧಕ್ಕೆ ಮಾತ್ರ ಪ್ರತ್ಯೇಕ ಪ್ರಾಂತವನ್ನು ನಿರ್ಮಿಸುವದು ಸರಕಾರಕ್ಕೆ ಅವಶ್ಯವಾಗಿ ಬೇಕಾಗಿದೆ. ಯಾಕಂದರೆ:- (ಅ) ಮುಸಲ್ಮಾನರನ್ನು ಎತ್ತಿ ಹಿಡಿದು, ಹಿಂದೂ ಮುಸಲ್ಮಾನರಲ್ಲಿ ಮತಭೇದವು ಕಾಯಂವಾಗಿ ಉಳಿಯುವಂತೆ ಮಾಡುವದು ಸರಕಾರಕ್ಕೆ ಬೇಕಾದ ಮಾತು (ಆ) ಮುಂಬೈ ಕಾಯದೇ ಮಂಡಲಗಳಲ್ಲಿ ಸಿಂಧೀ ಮುಸಲ್ಮಾನರು ಸರಕಾರದಂತೆ ಮತಕೊಡುತ್ತಿರುವರಷ್ಟೇ! ಈ ಬಗೆಯ ಸಭ್ಯ ಕುರಿಗಳು ತಮ್ಮ ವಶದಲ್ಲಿರುವದು ಅವಶ್ಯವೆಂದು ಸರಕಾರದ ವಿಚಾರವಿದ್ದು, ಪ್ರತ್ಯೇಕ ಪ್ರಾಂತದಿಂದ ತಮ್ಮ ವಶಕ್ಕೆ ಅವರು ಮತ್ತಿಷ್ಟು ಬರುವರೆಂಬ ವಿಶ್ವಾಸವೂ ಅವರಲ್ಲಿದೆ. (ಇ) ಸಕ್ಕೂರ ಕಾಲುವೆಯು ಮುಗಿದೊಡನೆ, ಹತ್ತಿಯು ಬಹುದೊಡ್ಡ ಪ್ರಮಾಣದಿಂದ ಬೆಳೆಯುವದು. ಈ ಕಾರ್ಯಕ್ಕೆ ಇಂಗ್ಲೀಷರೇ ಹೆಚ್ಚಾಗಿ ಒಂದು ನಿಂತು, ಸಿಂಧದಲ್ಲಿ ಕಾಯಂವಾದ ವಸಾಹತು ಮಾಡುವರು. ಆಗ್ಗೆ ಪ್ರತ್ಯೇಕ ಪ್ರಾಂತವಿದ್ದರೆ ಮಾತ್ರ ಅವರ ಬೇಳೆ ಬೇಯುವದು. ಸಿಂಧದ ವಿಶಿಷ್ಟ ಪಟ್ಟಿಗಳೆಂದು ಟೈಮ್ಸಕಾರರು ಪ್ರತಿಪಾದಿಸುತ್ತಿರುವದಾದರೂ ಈ ಯುರೋಪಿಯ ವಸಾಹತಿಗೆ ಸಂಬಂಧವಿದ್ದುದೇ (ಈ) ದಿಲ್ಲಿಯು ಹಿಂದುಸ್ಥಾನದ ರಾಜಧಾನಿಯಾದಂದಿನಿಂದ ಕರಾಚಿ ಬಂದರದ ಪ್ರಾಮುಖ್ಯವು ಹೆಚ್ಚಾಗಿ ಬೆಳೆದಿದೆ ಮುಂದಾದರೂ ಬೆಳೆಯುವದು. ಆದುದರಿಂದ ಯುರೋಪಿಯ ವಸಾಹತಿನಿಂದ ವಿಶಿಷ್ಟ ಕಾನೂನುಗಳನ್ನು ಮಾಡಿ, ಸಿಂಧ ಪ್ರಾಂತವು ಹಿಂದುಸ್ಥಾನ ಸರಕಾರದ "ಜೀ ಹುಕುಂ" ಪ್ರಾಂತವಾಗಿರುವದು ಸರಕಾರಕ್ಕೆ ಬೇಕಾಗಿದೆ. ಇಂತಹ ಸ್ವಾರ್ಥ ಪರಿಸ್ಥಿತಿಯಲ್ಲಿ ಸಿಂಧಕ್ಕೆ ಪ್ರತ್ಯೇಕ ಪ್ರಾಂತವು ಬೇಕೆಂದೂ, ಕರ್ನಾಟಕಕ್ಕೆ ಬೇಡೆಂದೂ, ಸರಕಾರದ ಬಾಲ ಬಡೆಯುವ ಟೈಮ್ಸ ಪತ್ರಿಕೆಯು ಹೇಳುವದು ಸಮಂಜಸವೇ ಸರಿ; ಹೀಗೆ ಸ್ವಾರ್ಥದೃಷ್ಟಿಯಿಂದ ಹೇಳುವದನ್ನು ಲೆಕ್ಕಿಸದಿರುವದು, ಕನ್ನಡಿಗರಿಗೂ ಸಮಂಜಸವೇ ಸರಿ. ಇತಿ ಟೈಮ್ಸ ಮಹಾಪುರಾಣಂ ಸಮಾಪ್ತಂ

ಗುಣ ಬರದಿದ್ದರೆ ಹಣ ಮರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ'ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿ ಮಾಡಿಕೊಳ್ಳಬಹುದು.) ಇದರಿಂದ ಮೈಯೊಳಗಿನ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ, ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೆ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿ ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ:—

ಎಸ್. ಬಿ. ಕದಮ್ ಮತ್ತು ಸನ್ಸ್.

ಮು. ಪೋಸ್ಟ ನಿಪ್ಪಾಣಿ (ಜಿ. ಬೆಳಗಾವ.)

ಕ್ಷಿಪ್ರದಲ್ಲಿಯೇ ಬರುತ್ತಾರೆ! ಅಪೂರ್ವ ಸಮಯ!!

ಮೈಸೂರು ದೇಶದ ಸುಪ್ರಸಿದ್ಧವಾದ

ವಿನೋದ ರತ್ನಾಕರ ಜಿ. ಎಚ್. ವೀರಣ್ಣನವರ

ಗುಬ್ಬಿ ಶ್ರೀ ಚೆನ್ನಬಸವೇಶ್ವರ ನಾಟಕ ಕಂ.

ಹುಬ್ಬಳ್ಳಿಯಲ್ಲಿ ಶಿವ ಮಲ್ಲಿಕಾರ್ಜುನ ನಾಟಕ ಮಂದಿರದಲ್ಲಿ ೧೯೨೭ನೇ ಸಪ್ಟಂಬರ ಮಾಹೆ ಮೊದಲನೇ ವಾರದಿಂದ ತಮ್ಮ ಅಮೋಘವಾದ ನಾಟಕಗಳನ್ನಾಡುವರು. ಕರ್ನಾಟಕ ದೇಶ ಮತ್ತು ಭಾಷಾಭಿಮಾನಿಗಳೆಲ್ಲರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಶ್ರೀ ಭಾರತ ಜಗಪ್ರಸಿದ್ಧ ಜಗ ಜಾಹೀರ ನೋಟೀಸು.

ಮೃತ್ಯುಂಜಯ ಔಷಧದಿಂದ ಮೂರೇ ತಾಸಿನಲ್ಲಿ ಗುಣವಿಲ್ಲೆಂದು ಸಿದ್ಧ ಮಾಡುವವಂಗೆ ೫೦೦ ರೂ ಬಕ್ಷೀಸ ಕೊಡುವೆವು. ಮೂರೇ ತಾಸಿನಲ್ಲಿ ಗುಣ] ಕನ್ನಡಜತ್ರಿ ರಸಾಯನ ತಕ್ಕೊಂಡು ಸಾಯುವದೇಕೆ? **[ಮೂರೇ ದಿವಸಗಳಲ್ಲಿ ರೋಗವು ಪೂರ್ಣ ಹೋಗುವದು.**

ಶಿಷ್ಟ ... ಪದ್ಧತಿಯಿಂದ ತಯಾರು ಮಾಡಿದ ಮೃತ್ಯುಂಜಯ ಔಷಧ.

ಉಪದಂಶ ಗರ್ಮಿ (ಉಷ್ಣ) ಪರ್ಮಿ ಮುಂತಾದ ಏಳು ಪ್ರಕಾರದ ರೋಗ ಬಹಳ ದಿನ ನೆಲಗೊಂಡದ್ದು ಶರೀರ ಶಕ್ತಿಹೀನ ಬಿದ್ದರೂ ಮೂರು ದಿವಸಗಳಲ್ಲಿ ಗುಣವಾಗುವದು.

ಇಂಥ ಪ್ರಕಾರ ರೋಗಗಳಿಂದ ಉತ್ಪನ್ನವಾಗುವ ವಿಕಾರ ಉಷ್ಣ ಪರಮಿ (ಉಪದಂಶ) ಗರ್ಮಿ ಜಟ್ಟಿ ಒಡದ ಗಂಟ, ನಡಿನಲ್ಲಿಯ ಗಂಟು, (ವೃಷಣ) ಅತಿಶಯ ಬಾವು, ಇಂದ್ರಿಯವಳಗೆ ತಿಡಿಕೆ, ಹೊಡತು, ರಕ್ತ ಕೀವು ಸುರಿಯೋಣ ಅದರಂತೆ ಸ್ತ್ರೀಯರ ಪ್ರದರ (ಕೆಂಪು ಬಿಳಿ ಸೆರಗು) ಹೊಲಿ ಕುಷ್ಟರೋಗ ಚಳೆಸೋಣ, ಕಡಕಿ ವಿಕಾರಗಳಿಂದ ಗರ್ಭಾಶಯ ಕೆಡೋಣ, ಮೂತ್ರ ಕಣ್ಣು ಕಾಲು ಉರಿಯೋಣ, ಕೀವು ಹೆಚ್ಚಾಗಿ ಮಧುಮೇಹ ಮೈಮೇಲೆ ಗರ್ಮಿ (ಉಷ್ಣ) ಒಡೆದು ಕೀವು ಹೊರವಿದ್ದು, ಅದರಿಂದ ವ್ರಣ (ಘಾಯ) ವಾಗಿ ಅಂಗಳಕ್ಕೆ ತೂತು ಬಿದ್ದು ಮೂಗು ಕೂಡ್ರುವದೂ ಸೋರುವದೂ ಎಲ್ಲ ತರದ ಮೂಲವ್ಯಾಧಿ, ಹೊಟ್ಟೆ ಕಡತು ವಗೈರೆ ಕಾರಣಗಳಿಂದಾ ಜನನೇಂದ್ರಿಯ ಶಿಥಿಲತಾ ಅಥವಾ ನಪುಂಸಕತ್ವ ಮುಷ್ಟಿಮೈಥುನದಿಂದ ಆಗುವ ಪರಿಣಾಮ, ಸ್ವಪ್ನಾವಸ ಮೂತ್ರದಲ್ಲಿ ಧಾತು ಅಥವಾ ಬಿಳಿ ಬೀಳೋಣ, ವೀರ್ಯ ತಿಳುವಾಗೋಣ, ಸ್ತ್ರೀಗಮನದಲ್ಲಿ ತೀಕು ಪತ್ತೋಣ. ತೀವ್ರ ವೀರ್ಯ ಪತನವಾಗೋಣ, ನಡಸೋಣ (ರೂಲಿ) ನೋಯೋಣ, ಬೆನ್ನು ಬಿಗಿಯೋಣ, ವಾತವಿಕಾರ ಅವಿಚ್ಚಾರದಿಂದ ಮಾಡಿದ ವೀರ್ಯನಾಶ ವಗೈರೆ ರೋಗಗಳ ಮೇಲೆ ಅಶಿಕ್ಷಿತ ಅಡಾಣೀ ಜನರ ಕಡಿಯಿಂದ ಪಾರಜ ಮತ್ತು ರಸಕರ್ಪೂರ, ಇಂಗಳೀಕ ಮುಂತಾದ ಸವಿಷ ಮತ್ತು ಅಪಕ್ವ ಧಾತು ರೂಪ ಪದಾರ್ಥ (ರಸಾಯನ) ಮತ್ತು ಅಪಕಾರಕ ವಸ್ತು ಸೇವಿಸುವದರಿಂದ ಮೈಯೊಳಗೆ ರಸಾಯನ ನಿಂತು ಅದುವ ಕಾಲು ಕೆ ಮುಡಪಾಗಿ ಮತ್ತು ಕೈ ಕಾಲುಗಳಲ್ಲಿ ರಸಾಯನ ಇಡೆದು ಸ್ವತಃ (ತನಗೆ) ಮತ್ತು ಮುಂದಾಗುವ ತನ್ನ ಸಂತತಿಗೆ ಅನೇಕ ರೋಗವು ಉತ್ಪನ್ನವಾಗಿ ಅದರಿಂದ ಭಯಂಕರ ಪರಿಣಾಮ ಭೋಗಿಸಬೇಕಾಗುವದು. ಇಂಥ ಪ್ರಕಾರದ ರೋಗಗಳು ಬಹಳ ದಿವಸ ನೆಲಗೊಂಡಿದ್ದಾಗಲೀ ಅಥವಾ ಹೊಸದಾಗಿ ಆದುದ್ದಾಗಲೀ ಇಂಥ ರೋಗಗಳ ಮೇಲೆ ಈ ನಮ್ಮ ಮೃತ್ಯುಂಜಯ ಔಷಧ ಉಪಯೋಗ ಮಾಡಿದರೆ ತತ್ಸಂಬಂಧ ಸಂಪೂರ್ಣ ರೋಗಗಳು ತೀವ್ರವಾಗಿ ಹೋಗಿ ಮೈಯೊಳಗೆ ಇದ್ದ ರಸಾಯನವು ನಾಶವಾಗುವದು ಮತ್ತು ಅಶಕ್ತಿ ಹೋಗಿ ಮೈಯೊಳಗೆ ಶಕ್ತಿ ಬಂದು ಪ್ರಕೃತಿ ಉತ್ತಮವಾಗುತ್ತದೆ ಒಂದು ಬಾಟ್ಲಿಗೆ [೫] ರೂಪಾಯಿ ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆಯು ಔಷಧದ ಸಂಗಡ ಲಾಭಕ್ಕೆ ಲಾಭ. ಒಂದು ಆಣೆ ಟಿಕಿಟು ಕಳಿಸಿದಲ್ಲಿ ನಮ್ಮ ಔಷಧದ ಪೂರ್ಣ ಕ್ಯಾಟಲಾಗ ಕಳಿಸುವೆವು. (ತಮ್ಮ ಪತ್ತೆ - ಪೂರ್ಣ ಬರೆಯಿರಿ)

ಸುಪ್ರಸಿದ್ಧ ಡಾ|| ಆರ್. ಎಲ್. ಹಿರೇಮಠ ಆರೋಗ್ಯ ಮಂದಿರ ಆಯುರ್ ವನೌಷಧಿ ಕಂಪನಿ, ಸಾವಿರ ಕಾರಖಾನೆ. ಠಿಕಾಣಾ ಪೋ ಶಂಕೇಶ್ವರ ಜಿ|| ಬೆಳಗಾಂವ

ಲಿವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.

ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ. ೬.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಪೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಅದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚ ತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚ ಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಅದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಬರ್ಟಿ ವಾಚ ಕಂ (ಇಂಡಿಯಾ.) ಬಾಂಬೆ. ೪

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದ ವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ

ಏಜಂಟರು:—ಜಂಬುಲಿಂಗಸ್ವಾಮಿ ಜಾಲವಾದಿ
ಸ್ಟೇಶನರ್ಸ ಬಾಗಲಕೋಟೆ

ರಾಜವೈದ್ಯ ನಾರಾಯಣಜಿ ಕೇಶವಜಿ
೫೭. ಚಿಂಚಬಜಾರ್ ಮದ್ರಾಸು



ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

೧೯೩೭ ನೇ ಜನವರಿ ೧೫ರಿಂದ ಪ್ರಾರಂಭ.



ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್ ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ-

೧. ನೀವು ನಮಗೆ ರೂ. ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್‌ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪುವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ ಗೋಲ್ಡ" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ

೪ ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ಏಕರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು. ಅಥವಾ ವಿ. ಪಿ ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಳೆದುಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಆಶ್ಚರ್ಯಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೬-೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್. ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರ ಸಿಟಿ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ವರೆಗೆ ನಾವು ಈ ದುಂದನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸ ನದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂ ೭

ಅಲ್ಪವೇ ಇವೆ; ಈಗಲೇ ಬೇಗಬರಿ

ಪತ್ರ— ಸ್ವಾನ ಹೌಸ. ಪಿ. ಬ ೩೦೭ ಪಿ. ಟಿ ಮದ್ರಾಸ

ಅತ್ಯಲ್ಪವಿವೆ ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೊಕೆಟ್ ವಾಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ ರಿಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ. ಪಿ, ಬಿ. ಮದ್ರಾಸ. ೨೩೫

ಒಕ್ಕಲತನದ

ಸಾಮಾನ! (ಆಗ್ರಿಕಲ್ಚರಲ್ ಟೂಲ್ಸ)

(ಗುದ್ದಲಿ, ಸಲಿಕೆ, ಕೊಡಲಿ, ಇತ್ಯಾದಿ ಆಯುಧಗಳು.)

ಈ ಸಾಮಾನುಗಳು ನಿತ್ಯೋಪಯೋಗಿಯಾಗಿರುತ್ತವೆ ವ್ಯಾಪಾರಸ್ಥರು ಇವುಗಳನ್ನು ವಿಶೇಷ ಕಂಪನಿಯಿಂದ ಖರೀದಿ ಮಾಡಿ ಸಟಿಸಿ ವ್ಯಾಪಾರ ಮಾಡುವದುಂಟು ಇವು ಗಳನ್ನು ನಮ್ಮ ಕಡೆಯಿಂದ ತರಿಸಿಕೊಂಡಲ್ಲಿ ನಾವು ಅತಿ ಅಗ್ಗವಾಗಿ ಪೂರೈಸುತ್ತೇವೆ. ನಮ್ಮಲ್ಲಿ ದೊರೆಯುವ ಸಾಮಾನುಗಳೆ ದಃ—

೧ ಗುದ್ದಲಿ, ೨ ಸಲಿಕೆ, ೩ ಕೊಡಲಿ, ೪ ಜಮ್ಮಟಿಗೆ. ೫ ಕಲ್ಲು ಒಡೆಯುವ ಸುತ್ತಿಗೆ, ೬ ಕಂದಲಿ ಇತ್ಯಾದಿ.

ಸವಿಸ್ತರ ವರ್ಣನೆ ಬಗ್ಗೆ ಹಾಗು ಬೆಲೆಪತ್ರಿಕೆಯ ಬಗ್ಗೆ ಇಂದೇ ಕಾಗದವನ್ನು ಬರೆದು ತಿಳಿದುಕೊಳ್ಳಿರಿ (ಅಲ್ಲಲ್ಲಿ ನಮಗೆ ಲೋಕಲ್ ಏಜಂಟರು ಬೇಕಾಗಿ ಎವರು ಇಚ್ಛೆಯುಳ್ಳವರು ಕರಾರ ಬಗ್ಗೆ ಕೇಳಿಕೊಳ್ಳಿರಿ.)

ಕಿರ್ಲೋಸ್ಕರ ಬಂಧು ಲಿಮಿಟೆಡ್

ಕಿರ್ಲೋಸ್ಕರವಾಡಿ, ಜಿ. ಸಾತಾರಾ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟಣೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಒತ್ತಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೭೩೬ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರಿಂಟೆಂಡಂಟ್ ಸೆಕ್ರೆಟರಿಏಟ್ ಹೈದರಾಬಾದ ಡೆಕ್ಕನ್ನ ರೂ.೧೦೦೦

(೨) ಎಸ್. ಬಿ. ಸಿ. ನಂ ೧೯೬೨ ನಾರಾಯಣ ವಿಠ್ಠಲ ಶಿಓಣಕರ. ಕೇರ್ ಆಫ್ ಡಿ. ಈ. ಪುರಾಣಿಕ ೧೦೬ ಸಿಹಾಲಪುರ ಇಂದೂರ. ೧೦೦೦

(೩) ಎಲ್. ಬಿ. ಸಿ. ನಂ. ೩೪೧ ರಾಮಚಂದ್ರ ಅನಂತ ಶಿರೋಳೆ. ಡಿವಿಜನಲ್ ಫಾರೆಸ್ಟ ಆಫೀಸರ ಧಕ್ಕೂರಾ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೬ ಕೇ. ಜಿ. ಫರ್ನಾಂಡೋ ವ್ಯಾಪಾರಸ್ಥ ಬ್ರಿಕ್‌ಸಾಯಿಡ ಸಿಲೋನ, ಕೋಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜೆ ಜವರೆ. ಅಶಿಸ್ಟಂಟ ಸ್ಟೇಶನ್‌ಮಾಸ್ತರ ತಿಲಗಿ. ಜಿಲ್ಹಾ ವಿಜಾಪುರ. ರೂ ೧೦೦೦

ಬಿ. ಸ್. ಆರಾಧ್ಯ

ಚೀಫ ಏಜಂಟ ಹುಬಳ್ಳಿ, (ಮುಂಬಯಿ ಇಲಾಖಾ.)

ಸ್ಟಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ್ ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟೆ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸಹ) ೧ ಪೌಂಡಿಗೆ ರೂ ೧-೦-೦

೨ ನೇ ,, ,, ,, ರೂ. ೧-೩-೦

ದಿ ಸ್ಟಾಂಡರ್ಡ್ ಕಾಫಿ ಕಂಪನಿ

ಚಿಕ್ಕಪೇಟೆ ಬೆಂಗಳೂರು ಸಿಟಿ.

ಜೀವ ವಿಮೆಯ ಕಾರ್ಯದಲ್ಲಿ

ಅದ್ಭುತವಾದ ಜಯವು!

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೂ ಸಾವಿರಕ್ಕೆ ೨೦ ರೂಪಾಯಿ ಲಾಭ ಕೊಟ್ಟಿದ

ದಿ ಜನರಲ್ ಅಶ್ಯೂರನ್ಸ ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ಸಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉಳಿತಾಯವಾದದ್ದು ರೂ ೧,೦೯,೦೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್!

ಎಸ್. ಕಬ್ಬೂರ ಬಿ. ಎ. ಎಫ್. ಎಸ್. ಅಜಮೀರ.

Apply to:- A. Ramachandra Rao
Branch Secretary, opposit Minto Hospital,
Bangalore City

or

L. V Ramdurg. Chief Agent
Near Vitoba Temple Hubli.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ ೧೯೪೭ ವಾ. ಚಂದಾ ೧—೧೩—೦ ಮಾತ್ರ

(ಇದೀಗ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ಭಾದ್ರಪದ ಶುದ್ಧ ೧ ಶಕೆ ೧೮೪೯ ತಾ|| ೨೮-೮-೧೯೨೭. Date 28—8—1927. | ಸಂಚಿಕೆ ೨೧

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರು ಬಹಳ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರು ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕೆಟ್ಟ-ಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುತ್ತೇವೆ. ಅದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಪಸಿಬಿಸಿಯುಳ್ಳವರು ಇದಿಲ್ಲ. ನುರಿತವರಾಗುತ್ತಾರೆ ಅದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರು ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅವೇ ರೀತಿಯ ಪದ್ಧತಿಗನುಸಾರವಾಗಿ ಸರಾಕ್ತ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ !

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ.

WANTED.

Wanted Candidates for training in Telegraphy and Station Master's Courses. Railfre Granted. Suitable Boarding and Lodging arrangements. Prospectus on two Anna Stamp-Presidency Telegraph College, Royapettah P. O., Madras.

ಭಯಂಕರ ಗರ್ಮಿ.

ಪರಮೆ, ರಕ್ತವಿಕಾರ, ಕುಷ್ಟ, ಮಹಾರೋಗ, ಧಾತುವಿಕಾರ ಸಮೊಂಸಕಕ್ಕಗಳ ಮೇಲೆ ಖಂಡಿತವಾಗಿ ಗುಣ ಕೊಡುವ ನಮ್ಮ ಔಷಧಿ ಬೆಲೆ ರೂ. ೫ ಪ್ರಕೃತಿಮಾನ ತಿಳಿಸಿ ಔಷಧಿ ಪಡೆಯಬೇಕು.

ವೈದ್ಯ:—ವಾದಿರಾಜ ಜಹಗೀರದಾರ
ಮು. ಇಂಡಿ (ವಿಜಾಪೂರ)

ಬಾಗಲಕೋಟೆಯ
ಶ್ರೀಮಧ್ವಜಯಂತಿ ಮಹೋತ್ಸವ!

ವೈಷ್ಣವ ಭೂಯಿಷ್ಠವಾದ ಈ ಬಾಗಲಕೋಟೆ ಕ್ಷೇತ್ರದಲ್ಲಿ ಶ್ರೀ ಮಧ್ವಾಚಾರ್ಯರ ಜಯಂತಿಯ ಉತ್ಸವವು ೭—೮ ವರ್ಷಗಳಿಂದಲೂ ನಡೆಯುತ್ತ ಬಂದಿರುವದು. ಸಂಧ್ಯಾದಿ ವಿಷಯಗಳಲ್ಲಿ ಬಾಲಕರ ಪರೀಕ್ಷೆ ತೆಗೆದುಕೊಂಡು ಅವರಿಗೆ ಉಪಯುಕ್ತ ಪುಸ್ತಕಗಳನ್ನು ಪಾರಿತೋಷಕವಾಗಿ ಕೊಡುತ್ತ ಬಂದಿರುವೆವು ಅದರ ಈ ಸಾರೆಯ ಪರೀಕ್ಷೆಯಲ್ಲಿ ಬೇರೆ ಬೇರೆ ತರಗತಿಗಳನ್ನು ಮಾಡಿ ಪ್ರತಿ ತರಗತಿಯಲ್ಲಿಯೂ, ಉತ್ತೀರ್ಣರಾದ ಸ್ವಸ್ಥಳದ ಹಾಗೂ ಪರಸ್ಥಳದ ವಿದ್ಯಾರ್ಥಿಗಳಿಗೆ ವಿಶೇಷ ಪಾರಿತೋಷಕಗಳನ್ನು ಕೊಡುವದನ್ನು ಗೊತ್ತು ಮಾಡಿದ್ದೇವೆ.

ಪ್ರತಿವರ್ಷದಂತೆ ಈ ವರ್ಷದಲ್ಲಿಯೂ ಪರೀಕ್ಷೆಯು ಆಶ್ವಿನ ಶುದ್ಧ ಏಕಾದಶೀ—ದ್ವಾದಶೀ— ತ್ರಯೋದಶೀ ದಿನಗಳಲ್ಲಿ ನಡೆಯುವದು. ಭಾದ್ರಪದದ ಅಮಾವಾಸ್ಯೆಯ ಒಳಗಾಗಿ, ಪರೀಕ್ಷೆ ಕೊಡತಕ್ಕ ವಿದ್ಯಾರ್ಥಿಗಳು ತಮ್ಮ ಪೂರ್ಣ ಹೆಸರು ಮತ್ತು ತರಗತಿಗಳನ್ನು ವ್ಯವಸ್ಥಾಪಕರಿಗೆ ತಿಳಿಸಬೇಕು.

ಈ ಸಂಸ್ಥೆಗೆ ಧನಸಹಾಯವು ವಿಶೇಷವಿಲ್ಲದ್ದರಿಂದ ವೈದಿಕ ಧರ್ಮಾಭಿಮಾನಿಗಳೂ ವಿದ್ಯಾಪಕ್ಷಪಾತಿಗಳೂ ಮುಕ್ತ ಹಸ್ತದಿಂದ ಸಹಾಯ್ಯ ಮಾಡಬೇಕಾಗಿ ಪ್ರಾರ್ಥನೆಯು.

೧ನೇ ತರಗತಿ— ತ್ರಿಕಾಲಸಂಧ್ಯಾ, ಅಂಭೃಣಿಸೂಕ್ತ, ಬಳಿತ್ಥಾ ಮುಂತಾದ ಸೂಕ್ತಗಳು, ಪುರುಷಸೂಕ್ತ, ವಿಷ್ಣುಸೂಕ್ತ, ಸರಸ್ವತೀ ಸೂಕ್ತ, ವಾಯುಸ್ತುತಿ, ದ್ವಾದಶಸ್ತೋತ್ರ ವೈಶ್ವದೇವ ಬಲಿಹರಣ, ದೇವಪೂಜಾ ಪದ್ಧತಿ. **ವಯಸ್ಸು ೧೪, ಪಾರಿತೋಷಕ** ನಂ ೧, ೨, ೩, **ಕ್ರಮವಾಗಿ ದಕ್ಷಿಣೆ ರೂ.** ೫, ೩, ೨,

ಸೂಚನೆ:— ಈ ಮೂರು ತರಗತಿನ ಹೊರತಾಗಿ ಉಳಿದ ವಿದ್ಯಾರ್ಥಿಗಳಿಗೆ ಉಪಯೋಗವಾದ ಚಿಕ್ಕ ಪುಸ್ತಕಗಳು ಪಾರಿತೋಷಕವಾಗಿ ಕೊಡಲ್ಪಡುವವು

೨ನೇ ತರಗತಿ— ಉಭಯ ಶಾಖಾದ ಶ್ರಾವಣಿ ಶ್ರಾದ್ಧಪ್ರಯೋಗ ಮತ್ತು ಶ್ರಾವಣೀ (ಸೂತ್ರ ಸಹಿತ) **ಪಾರಿತೋಷಕ** ನಂ. ೧, ೨, ೩, **ಕ್ರಮವಾಗಿ ದಕ್ಷಿಣೆ ರೂ** ೬, ೩, ೨

೩ನೇ ತರಗತಿ:— ಪೂರ್ವಾಪರ ಸಹಿತ ಯಾಜ್ಞೀಕ ಶಾಂತಿಕ ಪೌಷ್ಟಿಕ ಸಹಿತ, **ಪಾರಿತೋಷಕ** ನಂ. ೧, ೨, ೩. **ಕ್ರಮವಾಗಿ ದಕ್ಷಿಣ ರೂ.** ೧೫, ೧೦, ೫.

೪ನೇ ತರಗತಿ:— ಮಣಿಮಂಜರಿ ಯಾವದೇ ನಾಲ್ಕು ಸರ್ಗಗಳು, ಸುಮಧ್ವವಿಜಯ ೫ ಸರ್ಗಗಳು, ರುಕ್ಮಿಣೀಶವಿಜಯದ ೫ ಸರ್ಗಗಳು ಇವುಗಳ ಶ್ಲೋಕಗಳನ್ನು ಕೇಳಿದಲ್ಲಿ ಉತ್ತಮವಾಗಿ ಹೇಳಬೇಕು. **ವಯಸ್ಸು ೧೮. ಪಾರಿತೋಷಕ** ನಂ ೧, ೨, ೩, **ಕ್ರಮವಾಗಿ ದಕ್ಷಿಣೆ ರೂ**, ೮, ೬, ೪.

೫ನೇ ತರಗತಿ:— ಶ್ರೀಮದ್ಭಗವತ ವಿಜಯಧ್ವಜೀಯಪೂರ್ವದೀಪಿಕೆ ಸಹಿತ. ಗೀತಾವಿವೃತ್ತಿ **ಪಾರಿತೋಷಕ** ನಂ. ೧, ೨, ೩. **ಕ್ರಮವಾಗಿ ದಕ್ಷಿಣೆ** ೨೦, ೧೫, ೧೦

೬ನೇ ತರಗತಿ— ಪ್ರಮಾಣ ಪದ್ಧತಿ, ವಾದಾವಳಿ, ಛಲೋಜ್ಜೀವನ, ಶಿಷ್ಯೋದ್ಧಾರ ತತ್ವನಿರ್ಣಯ **ಪಾರಿತೋಷಕ** ನಂ ೧, ೨, ೩ **ಕ್ರಮವಾಗಿ ದಕ್ಷಿಣೆ ರೂ** ೨೦, ೧೫, ೧೦.

೭ನೇ ತರಗತಿ— ತತ್ವಪ್ರಕಾಶಿಕಾ ಸಂಪೂರ್ಣ ಗೀತಾಭಾಷ್ಯ ಪ್ರಮೇಯ ದೀಪಿಕಾ ಸಹಿತ. **ಪಾರಿತೋಷಕ** ನಂ ೧, ೨, ೩ **ಕ್ರಮವಾಗಿ ದಕ್ಷಿಣೆ ರೂ** ೩೦, ೧೫, ೧೦.

೮ನೇ ತರಗತಿ— ಶ್ರೀಮನ್ನ್ಯಾಯ ಸುಧಾ ಸಂಪೂರ್ಣ, **ಪಾರಿತೋಷಕ** ನಂ. ೧, ೨, ೩. **ಕ್ರಮವಾಗಿ ದಕ್ಷಿಣೆ ರೂ.** ೨೫, ೧೫, ೧೦

೧ನೇ ತರಗತಿಯನ್ನು ಬಿಟ್ಟು ಇತರ ಎಲ್ಲ ತರಗತಿಗಳಲ್ಲಿಯೂ ಲೇಖೀ ಮತ್ತು ವಾಚಾ ಪರೀಕ್ಷೆಗಳು ನಡೆಸಲ್ಪಡುವವು.

೧ನೇ ಮತ್ತು ೨ನೇ ೩ನೇ ತರಗತಿಗಳನ್ನು ಬಿಟ್ಟು ಇತರ ತರಗತಿಗಳಲ್ಲಿ ವಾಚಾ ಪರೀಕ್ಷೆಯ ಕಾಲಕ್ಕೆ ಆಯಾ ಪುಸ್ತಕಗಳು ಕೊಡಲ್ಪಡುವವು. ಆಯಾ ಪುಸ್ತಕಗಳನ್ನು ಹಿಡಿದು ಅವರು ಉತ್ತರ ಹೇಳಬಹುದು.

ಅರ್ಜಿ ಮೊದಲಾದ ಪತ್ರವ್ಯವಹಾರ ಮಾಡತಕ್ಕವರು ಕೆಳಗಿನ ವಿಳಾಸಕ್ಕೆ ಮಾಡತಕ್ಕದ್ದು.

ಕೃಷ್ಣಾಚಾರ್ಯ ನಾಗಸಂಪಗಿ.
ಬಿಂದಾಚಾರ್ಯ ಜಮದಗ್ನಿ.
ಕಾರ್ಯದರ್ಶಿಗಳು

ಶ್ರಾವಣ ಬಹುಳ ೨ ಸೋಮವಾರ } ಶ್ರೀಮಧ್ವ ಜಯಂತಿ ಮಹೋತ್ಸವ ಮಂಡಳ.

ಏಕಾದಶಿಯ ಉತ್ಪತ್ತಿ.

ಕುಂಭನೆಂಬ ದೈತ್ಯನ ಮಗನಾದ ಮೃದುಮನ್ಯನೆಂಬವನು ತಾನು ಅಮರನಾಗುವಂತೆ ಈಶ್ವರನಿಂದ ವರವನ್ನು ಪಡೆದು ಎಲ್ಲ ದೇವತೆಗಳಿಗೂ ಅಜಿಂಕ್ಯನಾದನು ಇದರಿಂದ ದೇವತೆಗಳು ಹೆದರಿ ತ್ರಿಕೂಟ ಪರ್ವತದಲ್ಲಿ ಒಂದು ನೆಲ್ಲೀಗಿಡದ ಬುಡದಲ್ಲಿರುವ ಗುಹೆಯಲ್ಲಿ ಅಡಗಿಕುಳಿತರು ಇವರಿಗೆ ಆಹಾರವು ಸಿಗದ್ದರಿಂದ ಉಪೋಷಣವೂ ಮಳೆಯಲ್ಲಿ ತೊಯ್ದದ್ದರಿಂದ ಸ್ನಾನವೂ ಘಟಿಸಿದವು ಈ ಎಲ್ಲ ದೇವತೆಗಳು ದುಃಖದಿಂದ ತೆಗೆದ ಉಚ್ಛ್ವಾಸದ ವೇಗದಿಂದ ಒಂದು ಶಕ್ತಿಯು ಉತ್ಪನ್ನವಾಗಿ ಆ ಶಕ್ತಿಯು ಆ ಗುಹೆಯ ಬಾಗಿಲಲ್ಲಿ ಕಾದಿರುವ ಮೃದುಮನ್ಯನನ್ನು ನಾಶಮಾಡಿ ದೇವತೆಗಳನ್ನು ಕಷ್ಟದಿಂದ ಮುಕ್ತಮಾಡಿತು. ಈ ಶಕ್ತಿಯೇ ಏಕಾದಶೀ ದೇವಿಯು. ಇವಳಲ್ಲಿ ಎಲ್ಲ ದೇವತೆಗಳ ಶಕ್ತಿಯು ಕೂಡಿರುವದರಿಂದ ಸ್ಮಾರ್ತ, ವೈಷ್ಣವ, ಶೈವ ಮುಂತಾದ ಸಂಪ್ರದಾಯಗಳೂ ಈ ಏಕಾದಶೀ ವ್ರತದಲ್ಲಿ ಭಕ್ತಿಯುಳ್ಳವರಾದರು.

ಈ ಪ್ರಕಾರ ಏಕಾದಶಿಯ ಉತ್ಪತ್ತಿಯು ಎಲ್ಲ ದೇವತೆಗಳ ಶ್ವಾಸದಿಂದ ಆಯಿತೆಂದಿದ್ದರೂ ಈ ದಿನ ಶ್ರೀವಿಷ್ಣುವೇ ಪೂಜ್ಯದೈವತವಾಗಿದ್ದಾನೆ ಈ ಜಗತ್ತಿನಲ್ಲಿ ಆಯಾಯ ಕಾಲಕ್ಕೆ ಅಧರ್ಮವನ್ನು ಉಚ್ಚಾಟನ ಮಾಡಿ ಸದ್ಧರ್ಮ ಸ್ಥಾಪನೆಯ ಕಾರ್ಯವು ಶ್ರೀವಿಷ್ಣುವಿನ ಅಂಶಗಳಿಂದ ಅಥವಾ ಅವತಾರಗಳಿಂದ ತಿಳಿಯುತ್ತದೆ. —ನಂದಿ

ಸೋಜಿಗದ ಸುದ್ದಿ.

ತಿಜೋರಿಗಳಿಗೆ ವಿದ್ಯುತ್—ಗಂಟೆಗಳಿದ್ದರೂ, ಕಳ್ಳರು ಸಹ ಹಾಗೆಯೆ ಸುಶಿಕ್ಷಿತರೂ ಇದ್ದುದರಿಂದ ಲಂಡನ್ನಿನಲ್ಲಿ ತಿಜೋರಿಗಳ ಬೀಗ ತೆಗೆದು ಅಲ್ಲಿಯ ಹಣ ಆಭರಣಗಳನ್ನು ಎತ್ತಿಯೊಯ್ಯುತ್ತಿರುವರು, ಅದ್ದರಿಂದ ಓರ್ವ ವಿದ್ಯುತ್-ಪ್ರಕಾಶ-ತಜ್ಞನು, ತಿಜೋರಿ ಬಾಗಿಲದ ಕೀಲಿಗೆ ಕೈ ಹಚ್ಚಿದೊಡನೆ ಮನೆಯ ಒಳಗೆ ಹೊರಗೆ, ಕಕ್ಷೆ ಹಾದು ಎಲ್ಲ ಕಡೆಗೂ ದೀಪಗಳು ಪ್ರಕಾಶ ಹೊಂದುವಂತೆ ಏರ್ಪಡಿಸಿದನು ಕಳ್ಳರು ಇದನ್ನರಿಯದೇ ಬೀಗಕ್ಕೆ ಕೈ ಹಚ್ಚಿದೊಡನೆ, ಪ್ರಕಾಶವಾಗಿ ಬೀದಿಯ ಪೋಲೀಸರೂ ಮನೆಯವರೂ ಒಂದು ಅವರನ್ನು ಹಿಡಿವರು.

ಸ್ವಲ್ಪ ವಿನೋದ.

ವೈ. ವಾಸುದೇವಾಚಾರ್ಯರು ನಗರ ಸಭೆಯ ಚೇರಮನ್ನರಿದ್ದರು..... ಪರೊಬ್ಬರು ತಮ್ಮ ಮನೆಯ ಗೋಡೆಗಳಿಗಾಗಿ ಹುಡೆಯಲಿಗಿನ ಮಣ್ಣನ್ನು ಕೊಡಬೇಕೆಂದು ನಗರ ಸಭೆಗೆ ಕೇಳಿಕೊಂಡಿದ್ದರು ಈ ವಿನಂತಿಗೆ ಉತ್ತರರೂಪವಾಗಿ ವಾಸುದೇವಾಚಾರ್ಯರು......ಅವರಿಗೆ ಮಣ್ಣು ಕೊಡಬೇಕು' ಎಂದು ನಗರ ಸಭೆಯ ಅಧಿಕಾರಿಗಳಿಗೆ ಆಜ್ಞಾಪಿಸಿದ್ದರು!

ಕನ್ನಡಿಗ.

ಬಾಗಲಕೋಟೆ ಭಾದ್ರಪದ ಶುದ್ಧ ೧ ಶಕೆ ೧೮೪೫.

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು ।
ನಿನ್ನ ಬೆಸನವಮಾಡಿದಂಥ ಮಕ್ಕಳ ಬೊಮ್ಮೆ!
ಚಿನ್ನದಾದರು ಚಿನ್ನ ಮೇಣಬಸ್ತಿಯು ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೆ

—ಅಂಡಕಾ ತನಯ ದತ್ತ

ಸಿಂದ ಗುಜರಾಥ ಕ ರೇವಾಡ ಪ್ರಾಂತಗಳಲ್ಲಿ ತೆರಪಿಲ್ಲದೆ ಮಳೆ ಸುರಿದದ್ದರಿಂದ ಹೊಳೆ ಹಳ್ಳಗಳು ಬಂದು ಸಾವಿರಾರು ಹಳ್ಳಿಗಳನ್ನು ನೀರಿನಲ್ಲಿ ಮುಳುಗಿಸಿಬಿಟ್ಟಿವೆ. ಹಳ್ಳಿಯ ಜನರ ಸ್ಥಿತಿಯು ಬಹಳ ಘೋರವಾಗಿದೆ. ಅವರ ಮನೆಮಾರುಗಳೆಲ್ಲ ಬಿದ್ದು ನೆಲಸಮವಾಗಿವೆ; ದನಕರುಗಳು ತೇಲಿಹೋಗಿವೆ, ಹೊಲಗಳೆಲ್ಲ ಕೆರೆಯಾಗಿ ನಿಂತಿವೆ; ಇಲ್ಲವೆ ತೆರ್ಗೆಯು ಉಸುಬೊಡೆದವೆ. ತಮ್ಮ ಹಳ್ಳಿಗಳನ್ನು ಬಿಟ್ಟು ಬೇರೊಂದೆಡೆಗೆ ಹೋಗುವೆವೆಂದರೆ ಮಾರ್ಗಗಳೆಲ್ಲ ನೀರಿನಲ್ಲಿ ಮುಳುಗಿ ನಿಂತಿವೆ. ಇದೇ ಪ್ರಕಾರ ಅವರ ಅಡಚಣೆಗಳಿಗೆ ಅಂತವೇ ಇಲ್ಲದಾಗಿದೆ. ಇಂತು ದುಃಖಾಂತರರಾಗಿ ಅತೀವ ದೈನ್ಯದಿಂದಲೂ ಉಪವಾಸದಿಂದಲೂ ಛಳಿ ಗಾಳಿಯಿಂದ ನಡುಗುತ್ತಲೂ ಕಾಲ ಕಳೆಯುತ್ತಿರುವರು, ಆ ಬಡ ರೈತರು! ಅವರ ಸಹಾಯಕ್ಕೆಂದು ಮಹನೀಯರಾದ ದೀನಬಾಂಧವರನೇಕರು ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ದೇಶದಲ್ಲಿ ಸುತ್ತುತ್ತಿರುವರು। ಗುಜರಾಥ ರೈತರ ದೀನಾವಸ್ಥೆಯನ್ನೂ ಅವರ ದುಃಖದ ಕಥೆಯನ್ನೂ ಅಲ್ಲಲ್ಲಿ ಬಿತ್ತರಿಸಿ ಜನರ ಕರುಣೆಯನ್ನು ಜಾಗ್ರತ ಮಾಡುತ್ತಿರುವರು. ಕರುಣಾಸಂಪನ್ನರು ಸಾವಿರಾರು ರೂಪಾಯಿಗಳನ್ನು ಅವರ ಪಾತ್ರೆಯಲ್ಲಿ ಸುರಿಯುತ್ತಿರುವರು. ಮುಂಬಯಿ ಮದ್ರಾಸ ಕಲಕತ್ತಾ, ಅಲಹಾಬಾದ, ಬೆಂಗಳೂರ ಮೊದಲಾದ ದೂರದೂರ ಪಟ್ಟಣಗಳಲ್ಲಿ ಲಕ್ಷಾವಧಿ ರೂಪಾಯಿಗಳು ಎಣಿಸಲಿಲ್ಲದೆ ಕೂಡಹತ್ತುತಲಿವೆ. 'ಆದರೆ ಮುಗಿಲು ಹರಿದ ಕೊಳ್ಳಿಗೆ ' ಬಿದ್ದಂಗೆ' ಮನುಷ್ಯನ ಸಹಾಯವೂ ಸಾಹಸವೂ ಎಲ್ಲಿಗೆ ಮುಟ್ಟಬೇಕು! ಎಷ್ಟು ಸಹಾಯ ಮಾಡಿದರೂ ದುಃಖಾಪನ್ನರಾದ ಲಕ್ಷಾವಧಿ ಜನರಿಗೆ ಅಡಚಣಿಗಳ ಅಂಶವನ್ನಾದರೂ ತಪ್ಪಿಸಲಿಕ್ಕಾದೀತೊ ಇಲ್ಲವೊ ಎಂಬುದು ಸಂಶಯದ ಮಾತಾಗಿದೆ. ಇಂಥ ವೇಳೆಯಲ್ಲಿಯೂ ದಯಾಳು ಸರಕಾರವು ಇನ್ನೂ ಯುಕ್ತಾಯುಕ್ತ ವಿಚಾರ ನಡಿಸಿದೆ; ಬೊಕ್ಕಸಮೋಳಿನ ಹಣದ ಎಣಿಕೆ ಇನ್ನೂ ಮುಗಿದಿಲ್ಲವಂತೆ! ತಾವು ಸಹಾಯ ಮಾಡಿದರೆ ಅದಕ್ಕೆ ಪ್ರತಿಫಲವೇನು ಎಂಬುದನ್ನು ಯೋಚಿಸುತ್ತಿರುವದು. ಅಂತೆಯೇ 'ವಾಣೀ ಮಿತ್ರ ನಷ್ಟ' ಎಂದು ಮರಾಟಿಗರು ಅನ್ನುತ್ತಿರುವರು. ನಾವು ಕರ್ನಾಟಕಸ್ಥರಾದರೂ ಇಂಥ ಆಪತ್ತಿನಲ್ಲಿ ಸಿಲುಕಿ ಬಳಲುತ್ತಿರುವ ಬಾಂಧವರಿಗೆ ಯಥಾಯೋಗ್ಯವಾಗಿಯೂ ನಮ್ಮ ದಯಾಪರತೆಗೆ ಅನುರೂಪವಾಗಿಯೂ ಸಹಾಯ ಮಾಡಿಲ್ಲವೆಂಬುದನ್ನು ಪ್ರಾಂಜಲೆಯಿಂದ ಒಪ್ಪಬೇಕಾದ ಮಾತು. ಇನ್ನು ಮೇಲಾದರೂ ಈ ವಿಷಯದಲ್ಲಿ ಹೆಚ್ಚು ಯತ್ನ ನಡಿಸುವದು ಅವಶ್ಯಕ ಇಲ್ಲದಿದ್ದರೆ, 'ಕರ್ನಾಟಕದವರು ಕಲ್ಲೆದೆಯವರು' ಎಂದು ಅಪವಾದ ಹೊರಬೇಕಾಗುವದು. 'ಬರ ಮೂರು ದಿವಸವಾದರೂ ಮಾತು ಅನಗಾಲ'ವೆಂಬುದು ಲಕ್ಷ್ಯದಲ್ಲಿರಲಿ!

ಕರ್ನಾಟಕ-ಏಕೀಕರಣದ ಬಗ್ಗೆ ಟೈಮ್ಸಕಾರರು ಮಂಡಿಸಿದ ವಿಧಾನಗಳೆಲ್ಲ ಹೇಳಿಕ್ಕಾಗಿವೆಯೆಂಬುದನ್ನೂ, ಅವು ಯಾವುದೊಂದು ಸ್ವಾರ್ಥದೃಷ್ಟಿಯ ಪ್ರೇರಣೆಯಿಂದಲೇ ಒಡಮೂಡಿವೆಯೆಂಬುದನ್ನೂ ಸವಿಸ್ತರವಾಗಿ ನಾವು ಕಳೆದ ವಾರದಲ್ಲಿ ಪ್ರತಿಪಾದಿಸಿರುವೆವಷ್ಟೆ? ಅದೇ ಪ್ರಕಾರ ಉತ್ತರ ಕರ್ನಾಟಕದ ಎಲ್ಲ ಪತ್ರಿಕೆಗಳೂ—ಬ್ರಾಹ್ಮಣ ವೀರಶೈವ ಎಂಬ ಮತಭೇದವಿಲ್ಲದೇ—ಟೈಮ್ಸಕಾರರ ಮತವನ್ನು ಖಂಡಿಸಿವೆ. ಇದರಿಂದಲಾದರೂ ಟೈಮ್ಸಕಾರರಲ್ಲಿ ಕರ್ನಾಟಕದ ಬಗ್ಗೆ ನಿಜವಾದ ಜ್ಞಾನವು ಉದಯವಾಗುವದಾಗಿ ನಾವು ಕೋರುತ್ತೇವೆ. ಇನ್ನು ಟೈಮ್ಸಕಾರರ ಮಾತು ಹಾಗಾಯಿತು! ಇತ್ತ ನಮ್ಮ ಕನ್ನಡಿಗರ ಮಾತೇನು? ಈ ಏಕೀಕರಣ ಚಳವಳಿಯು ಹೀಗೇ ಕತ್ತಲೆ ಕೋಣೆಯಲ್ಲಿ ಎಲ್ಲಿಯವರೆಗಿರಬೇಕು? ಏಕೀಕರಣ ಸಭೆಯು ಸ್ಥಾಪಿತವಾಗಿ ೩ ವರ್ಷಗಳಾಗುತ್ತ ಬಂದರೂ, ಅದರ ಕಾರ್ಯವು ಇನ್ನೂ ಎಡವುತ್ತ ಕುಂಟುತ್ತ ಹಾಗೂ ಹೀಗೂ ನಡೆದಿದೆ. ಈಗ್ಗೆ ಟೈಮ್ಸಕಾರ ವಿಧಾನಗಳನ್ನು ಖಂಡಿಸುವ ಲೇಖಗಳು ಮುಂಬಯಿಯ ದೈನಿಕ ಪತ್ರಿಕೆಗಳಲ್ಲಿ ಪ್ರಕಟವಾಗುವಂತೆಯಾದರೂ ಈ ಸಭೆಯು ಏರ್ಪಾಡು ಮಾಡಬೇಕಿತ್ತು! ಆದರೆ ವೆಚ್ಚವಿಲ್ಲದ ಈ ಕಾರ್ಯದ ಕಡೆಗೂ ಈ ಸಭೆಯು ಲಕ್ಷ್ಯ ಕೊಟ್ಟಿಲ್ಲ. ಏಕೀಕರಣ ಉದ್ದೇಶ್ಯವಾಗಿಯೇ ಹೊರಟ ಸಭೆಯು ಹಾಡೇ ಹೀಗಾದ ಮೇಲೆ ಕರ್ನಾಟಕದಲ್ಲಿ ಈ ಚಳವಳಿಯು ನನೆಗುದಿಗೆ ಬಿದ್ದುದು ಆಶ್ಚರ್ಯವಲ್ಲ! ಈ ಸಭೆಯ ಕಾರ್ಯಕಾರಿ ಮಂಡಳವು ಕರ್ನಾಟಕದ ಎಲ್ಲ ಜಾತಿಯ, ಎಲ್ಲ ಮತದ ಮುಂದಾಳುಗಳಿಂದ ಭೂಷಿತವಾಗಿದೆ. ಆದರೆ ಈ ಭೂಷಣವು ಕೇವಲ ಸ್ತಬ್ಧತೆಗಾಗಿದ್ದರೆ ಅದರಿಂದ ಪ್ರಯೋಜನವಾದರೂ ಏನು? ಕರ್ನಾಟಕದ ಇಂತಹ ಅತಿರಥಿ ಮಹಾರಥಿಗಳಿಂದಲೂ ಯಾವ ಕಾರ್ಯವೂ ಜರುಗದಿದ್ದರೆ, ಅದು ಕನ್ನಡನಾಡಿನ ದುರ್ದೈವವೋ, ಅಥವಾ ಈ ಸಭೆಯ ದುರ್ದೈವವೋ, ಇಲ್ಲವೆ, ಕನ್ನಡನಾಡಿನ ಈ ಮಹಾಪ್ರಖ್ಯಾತರಾದ ಮುಂದಾಳುಗಳ ದುರ್ದೈವವೋ ತಿಳಿಯದಾಗಿದೆ.

ರಾಮದುರ್ಗ ಸಂಸ್ಥಾನದಲ್ಲಿ ವಿಧಿಸಲೇಬೇಕಿದ್ದ ತೆರಿಗೆಯನ್ನು ರೈತರ ತಲೆಯ ಮೇಲೆ ಹೇರಿಸಿ, ಈಗಿನ ದುಷ್ಕಾಳದ ಸಮಯದಲ್ಲಿ ಯಾವ ವಿಶೇಷ ಸೌಕರ್ಯಗಳನ್ನು ಕೊಡದೇ, ರೈತರನ್ನು ಜರಿಸಿ, ಕೈದು ಮಾಡಿ, ತೆರಿಗೆಯನ್ನು ವಸೂಲ ಮಾಡುತ್ತಿರುವರಾಗಿ ಪ್ರಕಟವಾಗಿದೆ. ಸ್ವತಃ ಮಹಾರಾಜರೇ ಈ ಕಾರ್ಯದಲ್ಲಿ ಉತ್ಸಾಹದಿಂದ ತೊಡಗಿಕೊಂಡಿರುವರಂತೆ! ಬೇಲಿಯೇ ಹೊಲವನ್ನು ಮೇಯ್ದಂತೆ, ರಾಜರು ಪ್ರಜೆಗಳನ್ನು ಹೀಗೆ ಪೀಡಿಸಿದರೆ, ರೈತರು ಜೀವಿಸುವದೆಂತೆಂಬ ವಿಚಾರವು ಸಹ ರಾಮದುರ್ಗದ ರಾಜರಲ್ಲಿ ಇಲ್ಲದಿರುವದು ಬಹು ಸೋಜಿಗವಾದುದು. ರಾಮರಾಜ್ಯವೆಂಬುದಾಗಿ ಪ್ರಸಿದ್ಧವಾದ ಮೈಸೂರ ರಾಜರ ಆಡಳಿತೆಯ

ಕಡೆಗೆ ಈ ರಾಮದುರ್ಗದ ರಾಜರು ಕೊಂಚ ದೃಷ್ಟಿಯನ್ನೆತ್ತಿ ನೋಡಲಿ! ಅಂದರೆ ಪ್ರಜೆಗಳು ರಾಜನನ್ನು ಎಷ್ಟೊಂದು ಪರಿಯಿಂದ ಪ್ರೀತಿಸುತ್ತಿರುವರೆಂಬದು ಅವರಿಗೆ ತಿಳಿಯುವದು! ಅಥವಾ ಅದು ದೊಡ್ಡ ಸಂಸ್ಥಾನವು, ಅದರ ಉತ್ಪನ್ನವೂ ದೊಡ್ಡದು; ಅದರ ಸಾಮ್ಯವು ರಾಮದುರ್ಗಕ್ಕೆ ಹೋಲದೆಂದರೆ, ಇತ್ತಕಡೆಯ ಸಾವಂತವಾಡಿಯ ರಾಜರನ್ನಾದರೂ ರಾಮದುರ್ಗದ ರಾಜರು ನಿರೀಕ್ಷಿಸಲಿ! ಮಹಾತ್ಮಾ ಗಾಂಧಿಯಂತಹ ವಿಭೂತಿಯಿಂದ ಪ್ರಶಂಸಿಸಲ್ಪಟ್ಟ ಅವರ ಆಡಳಿತೆಯಲ್ಲಿಯ ರೈತರ ಸುಖಸಂಪತ್ತನ್ನು ಈ ರಾಜರು ಮನದಟ್ಟಾಗಿ ಮಾಡಿಕೊಳ್ಳಲಿ ಅಥವಾ ಅದಕ್ಕೂ ಸಮೀಪದ ಉದಾಹರಣೆಯು ಬೇಕಿದ್ದರೆ, ಜಮಖಂಡಿಯ ಸಂಸ್ಥಾನವನ್ನು ಪರೀಕ್ಷಿಸಬಹುದು. ರಾಜನಿನ್ನೂ ಚಿಕ್ಕವನಾಗಿದ್ದರೂ, ಪಟ್ಟವೇರಿ ಸ್ವಲ್ಪೇ ಕಾಲವಾಗಿದ್ದರೂ, ಪ್ರಜೆಗಳ ಪ್ರೀತಿಗೆ ಪಾತ್ರನಾಗಿ ಹೋಗಿರುವನು! ಕುಡಿಯುವ ನೀರಿಲ್ಲೆಂದು ಪ್ರಜೆಗಳು ದೈನ್ಯದಿಂದ ಕೇಳಿಕೊಳ್ಳಲು, ಲಕ್ಷಾವಧಿ ರೂಪಾಯಿಗಳನ್ನು ವೆಚ್ಚಮಾಡಿ, ಇವರು ನಳದ ಹೊಸ ಏರ್ಪಾಟು ಮಾಡುತ್ತಿರುವರು! ಪ್ರಜಾಪರಿಷತ್ತನ್ನು ಕೂಡಿಸಲು ಅಪ್ಪಣೆ ಬೇಡಲು, ಕೂಡಲೇ ಅತ್ಯಾನಂದದಿಂದ ಅದಕ್ಕೂ ಸಮ್ಮತಿಸಿದರು! ಪ್ರಜೆಗಳೆಲ್ಲ ಹರ್ಷಭರಿತರಾಗಿ, ಪುಣೆಯ ಶ್ರೀ ಕೇಳಕರ ನರಸೋಪಂತರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದಲೂ, ಉತ್ಸಾಹದಿಂದಲೂ ಪ್ರಜಾಪರಿಷತ್ತನ್ನು ಕೂಡಿಸಿ, ತಮ್ಮ ಹಕ್ಕುಬಾಧ್ಯತೆಗಳ ಬಗ್ಗೆ ರಾಜರನ್ನು ಪ್ರಾರ್ಥಿಸಿದ್ದಾರೆ. ಹೀಗೆ ಅಲ್ಲಲ್ಲಿ ಪ್ರಗತಿಯ ಲಕ್ಷಣಗಳೇ ತಲೆದೋರುತ್ತಿರುವಾಗ್ಗೆ, ರಾಮದುರ್ಗದ ರಾಜರಿಗೆ ಪ್ರಜೆಗಳನ್ನು ಪೀಡಿಸುವ ಲವಲವಿಕೆಯು ಎಲ್ಲಿಂದ ಉಂಟಾಗಿದೆಯೋ ತಿಳಿಯದು. ಎಂತಹ ತಪ್ಪಾಗಿದ್ದರೂ ತಿದ್ದುವದು ಕಠಿಣವಲ್ಲ. ಆದುದರಿಂದ 'ರಾಮದುರ್ಗದ ರಾಜರು ಎಚ್ಚತ್ತು ಈಗಲಾದರೂ ಪ್ರಜೆಗಳ ಪ್ರೀತಿಯು ತಮ್ಮಲ್ಲಿ ಶಾಶ್ವತವಾಗಿ ಉಳಿಯುವಂತೆ ಹೊಸ ಯುಗವನ್ನು ತಡವಿಲ್ಲದೇ ಪ್ರಾರಂಭಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಬಾಗಲಕೋಟೆಯಲ್ಲಿ ನಗರ ರಚನೆಯ ಕಾರ್ಯವು ಮುನಸಿಪಾಲ್ಟಿಯಿಂದ ಪ್ರಾರಂಭಿಸಲ್ಪಟ್ಟಿದೆಯಷ್ಟೇ! ಅಲ್ಲಲ್ಲಿ ಬೀದಿಗಳನ್ನು ಹೊಸದಾಗಿ ಹಾಕುತ್ತಿರುವದರಲ್ಲಿ ತೊಡಗಿದ್ದರಿಂದ ಮುನಸಿಪಾಲ್ಟಿಯವರು ಹಳೆಯ ಹಾದಿಗಳಲ್ಲಿ ಹಣ ಹಾಕುವದನ್ನು ಬಂದು ಮಾಡಿರುವರೆಂದೂ, ಅವುಗಳನ್ನು ಸರಿಪಡಿಸುವದನ್ನು ದುರ್ಲಕ್ಷಿಸಿರುವರೆಂದೂ ಕೆಲವು ತಕರಾರುಗಳು ನಮ್ಮ ಕಡೆಗೆ ಬಂದಿವೆ. ಮಳೆಗಾಲದಲ್ಲಿಯೇ ಹಳೆಯ ಹಾದಿಗಳನ್ನು ಸರಿಪಡಿಸತಕ್ಕದ್ದು. ಇಲ್ಲವಾದರೆ ಮುಂದಿನ ಮಳೆಗಾಲದ ವರೆಗೆ ಅಂದರೆ ಒಂದು ವರ್ಷದ ವರೆಗೆ ಹಾದೀ ನೋಡಬೇಕಾಗುವದು. ಆದುದರಿಂದ ಈ ಬಗ್ಗೆ ಏನು ಏರ್ಪಾಡು ಮಾಡುವರೆಂಬುದನ್ನು ಮುನಸೀಪಾಲ್ಟಿಯ ಅಧಿಕಾರಿಗಳು ಜನರಿಗೆ ತಿಳಿಸುವದು ಅವಶ್ಯಕ. ಇನ್ನು ನಗರ ರಚನೆಯ ಹೊಸ ಬೀದಿಗಳ ವೆಚ್ಚಕ್ಕಾಗಿ ಆ ಆ ಭೂಮಿಯ ಒಡೆಯರು ಇಷ್ಟಿಷ್ಟು ಹಣವನ್ನು ಕೊಡಬೇಕಾಗಿ, ಮಿರಾವ್ಸಾಹೇಬರು ನಿಶ್ಚಯಿಸಿದಂತೆ, ಅವರಿಗೆಲ್ಲ ಮುನಸೀಪಾಲ್ಟಿಗೆಳಿಂದ ಆ ಹಣ ತಂದು ಕೊಡಬೇಕಾಗಿ, ಪತ್ರಿಕೆಗಳು ಹೋಗಿವೆ ಈ ಹಣವೆಂದರೆ ಸಾವಿರಗಟ್ಟಲೆಯಿದೆಂಬದನ್ನು ಎಲ್ಲರೂ ಬಲ್ಲರು. ಆ ಭೂಮಿಗಳು ಮಾರಾಟವಾಗುವದು ಈಗಿನ ಕ್ಷಾಮಕಾಲದಲ್ಲಿ ಅಶಕ್ಯವಾಗಿದೆ. ಪ್ರತಿಯೊಬ್ಬ ಸಂಸಾರಿಗೂ ದುಷ್ಕಾಳದ ಕಳೆಯು ತಗಲೇಯಿದೆ. ಅದರಂತೆ ಈ ಹೊಸ "ಪ್ಲಾಟು"ಗಳ ಒಡೆಯರಿಗೂ ತಗಲಿದ್ದು ಸ್ವಾಭಾವಿಕವು. ಇಂತಹ ಪರಿಸ್ಥಿತಿಯಲ್ಲಿ ಸಾವಿರಾರು ರೂಪಾಯಿಗಳನ್ನು ಮುನಸೀಪಾಲ್ಟಿಗೆ ಕೊಡುವದಾದರೂ ಎಲ್ಲಿಂದೆನ್ನುವದನ್ನು ನಗರ ಪಿತಾಮಹರು ಕೊಂಚ ವಿಚಾರಿಸತಕ್ಕದ್ದು. 'ಪ್ಲಾಟು'ಗಳ ಮಾರಾಟದಂತೆಯಾಗಲಿ, ಹಗುರಾದ ಕಂತಿನಿಂದಾಗಲಿ, ಹಣ ವಸೂಲ ಮಾಡಬೇಕು; ಇಲ್ಲವೆ ಮಿರಾಮ ಸಾಹೇಬರು ಕಟ್ಟಿದ ಬೆಲೆ ಕೊಟ್ಟು ಸ್ವತಃ ಆ 'ಪ್ಲಾಟು'ಗಳನ್ನೆಲ್ಲ ಮಾರಲಿಕ್ಕೆ ತೆಗೆದುಕೊಳ್ಳಬೇಕೆಂದು ಭೂಮಿಯ ಒಡೆಯರೆಲ್ಲ ಕೂಡಿ, ಮುನಸೀಪಾಲ್ಟಿಗೆ ಕೇಳಿದ್ದಾರೆ ಇಷ್ಟೊಂದು ಹಣ ವ್ಯಯಮಾಡಿ ಎಲ್ಲ ಭೂಮಿಯನ್ನು ಕೊಳ್ಳುವಷ್ಟು ಶಕ್ತಿಯು ಮುನಸೀಪಾಲ್ಟಿಯಲ್ಲಿ ಸಹ ಇಲ್ಲವೆಂಬುದನ್ನು ನಾವು ಬಲ್ಲೆವು ಈ ಕಾರಣಕ್ಕಾಗಿ 'ಪ್ಲಾಟು'ಗಳು ಮಾರಾಟವಾದಂತೆ ಒಡೆಯರಿಂದ ಹಣವನ್ನು ವಸೂಲ ಮಾಡುತ್ತ ಹೋಗುವದು, ಉಭಯತರಿಗೂ ಅನುಕೂಲ. ಆದುದರಿಂದ ನಗರ ಪಿತಾಮಹರು ಇದನ್ನು ಸಂಪೂರ್ಣ ವಿಚಾರಿಸಿ, ಕಡೆಯ ನಿರ್ಣಯ ಕೊಡಬೇಕಾಗಿ ಆಗ್ರಹಪಡುತ್ತೇವೆ

ಇಲ್ಲಿಯ ಶೇಟ ಬಾಳಕೃಷ್ಣದಾಸರು ಪ್ರತಿವರ್ಷದಂತೆ ಈ ವರ್ಷವಾದರೂ ಶ್ರೀ ಗಜಾನನ ಪೂಜಾ ಮಂಟಪವನ್ನು ಅತ್ಯಂತ ಕೌತುಕಪ್ರದವಾಗಿಯೂ, ನಯನಾಭಿರಾಮವಾಗಿಯೂ ಆಗುವಂತೆ ಆಧುನಿಕ ಶಾಸ್ತ್ರೀಯ ಸಾಮಗ್ರಿಗಳಿಂದ ಈಗ ತಿಂಗಳನಿಂದಲೆ ಶೃಂಗರಿಸತೊಡಗಿದ್ದಾರೆ. ಮುಂಬಯಿ, ಮದ್ರಾಸ, ಮೊದಲಾದ ಪಟ್ಟಣಗಳನ್ನೂ, ಅಲ್ಲಿಯ ಪೇಟೆಯ ಒಡವೆಗಳನ್ನೂ ನೋಡದವರನೇಕರು, ಇಲ್ಲಿಗೆ ಬಂದು, ಇಲ್ಲಿ ಮಂಡಿಸಿದ ವೈಚಿತ್ರ್ಯವನ್ನೂ, ಮಾಡಿದವರ ಕಲಾಕುಶಲತೆಯನ್ನೂ ಕಂಡು, ಬೆಪ್ಪಾಗಿ ಹೋಗುವರೆಂಬದರಲ್ಲಿ ಸಂದೇಹವಿಲ್ಲ ಅಂದಮೇಲೆ ಜನರ ಸಮ್ಮರ್ದನವು ಇಲ್ಲಿ ಹೆಚ್ಚಾಗಿ ನೆರೆಯುತ್ತಿರುವದು ಸಹಜವಾದದ್ದು. ಈ ಜನರೆಲ್ಲರೂ (ಸುತ್ತಲಿನ ಹಳ್ಳಿಯ ಜನರೂ) ಹರಡಿರುವ ಅದ್ಭುತ ಸೃಷ್ಟಿಯನ್ನು ನೋಡಿ, ನೋಡಿ, ತಮ್ಮ ಕಣ್ಣುಗಳನ್ನು ತಣಿಸಿ, ವಿಸ್ಮಯಭರಿತರಾಗಿ, ಶೇಠಜಿಯವರನ್ನು ಹರಸುತ್ತ ಜುಕ್ಕ ಜುಲುಮೆಯಿಂದ ಹಿಂತಿರುಗುತ್ತಿರುವದನ್ನು ನಾವು ಕಂಣಾರೆ ನೋಡಿರುವೆವು. ಆದರೆ ಕಲಾಭಿಜ್ಞರಾದ ಶೇಠಜಿಯವರು ಈ ಜನರ ಕಣ್ಣುಗಳಿಗೆ ಇಂಥ ಹಬ್ಬವನ್ನು ಒದಗಿಸಿಕೊಡುವಂತೆ, ಗಾಯನ, ನರ್ತನ, ಕೀರ್ತನೆ, ಪುರಾಣ, ಉಪನ್ಯಾಸ ಮೊದಲಾದ ವಿವಿಧವಾದ ಕಾರ್ಯಕ್ರಮವನ್ನು ಸೇರಿಸಿ, ಸೋಜಿಗವೆಂದು ನೋಡಲಿಕ್ಕೆಂದು ಬಂದವರಿಗೆ, ಕರ್ಣಾನಂದವನ್ನೂ, ಹೆಚ್ಚಿನ ಸಮ್ಮೋದವನ್ನೂ ಬೀರಬೇಕೆಂದು ನಾವು ಸೂಚಿಸದೆ ಇರೆವು ಭಜನೆ, ಪುರಾಣ, ಕೀರ್ತನೆ ಮೊದಲಾದವುಗಳ ಶ್ರವಣದಿಂದ ಬಂದ ಜನರಲ್ಲಿಯ ಶ್ರದ್ಧಾಭಕ್ತಿಯನ್ನು ಹೆಚ್ಚಿಸಿ, ಅವರನ್ನು ಆನಂದಗೊಳಿಸುತ್ತಲೆ, ಆತ್ಮೋನ್ನತಿಯ ಸೋಪಾನವನ್ನು ನಿರ್ಮಿಸಿಕೊಟ್ಟರೆ, ಅವರ ಮೇಲೆ ಅನಂತ ಉಪಕಾರ ಮಾಡಿದಂತಾಗುವದಲ್ಲವೆ? ಸಾಂಗಲಿ, ಕೊಲ್ಹಾಪೂರ, ಮಿರ್ಜ ಮೊದಲಾದ ಸ್ಥಳಗಳಲ್ಲಿ ಸಿದ್ಧಿವಿನಾಯಕನ ಉತ್ಸವ ಮಾಡುವವರೆಲ್ಲ ಇದೇ ಮೇರೆಗೆ ತಮ್ಮ ಕಾರ್ಯಕ್ರಮವನ್ನು ಏರ್ಪಡಿಸುತ್ತಿರುವರೆಂಬುದು ಶೇಠಜಿಯವರಿಗೆ ಗೊತ್ತಿರಲಿಕ್ಕೆ ಸಾಕು ನಾವು ಕಳೆದ ವರ್ಷವೇ ಇದನ್ನು ಶೇಠಜಿಯವರಿಗೆ ಸೂಚಿಸಿದ್ದೆವು. ಆದರೆ ಅತ್ತ ಕಡೆಗೆ ಅವರ ಲಕ್ಷ್ಯವು ಈ ವರೆಗೆ ಹೋದಂತೆ ಕಾಣಲಿಲ್ಲ ಈಗಲಾದರೂ ಅವರು ಈ ಬಗ್ಗೆ ಏರ್ಪಾಡುಮಾಡುವರಾಗಿ ನಂಬಿರುವೆವು

'ಕನ್ನಡಿಗ'ನಿಗೆ ಸಹಾಯ

ಧಾರವಾಡದ ಶ್ರೀ ವೇ. ರಾ. ನಗರ ಇವರು ಈ ವಾರದಲ್ಲಿ ಓರ್ವ ಚಂದಾದಾರನನ್ನು 'ಕನ್ನಡಿಗ'ನಿಗೆ ಕೂಡಿಸಿಕೊಟ್ಟಿದ್ದಾರೆ.

ಮಹತ್ವದ ಸೂಚನೆ.

(೧) ಕನ್ನಡಿಗನ ಕಾರ್ಯಾಲಯದಿಂದ ಯಾವದೇ ವಿಷಯದ ಒಗ್ಗೆ ಉತ್ತರವನ್ನಪೇಕ್ಷಿಸುವವರು ಉತ್ತರಕ್ಕಾಗಿ ಅಂಚೆವೆಚ್ಚವನ್ನು ಮೊದಲೇ ಕಳಿಸಬೇಕು. ಇಲ್ಲವಾದರೆ ಅವರಿಗೆ ಉತ್ತರ ಕೊಡುವದು ಶಕ್ಯವಿಲ್ಲ.

(೨) ಪತ್ರವ್ಯವಹಾರದಲ್ಲಿ ಸುವಾಚ್ಯವಾದ ಅಕ್ಷರಗಳಿರಬೇಕ. ಕೆಲವರು ಪತ್ರದ ಎರಡೂ ಮಗ್ಗಲು, ಸಣ್ಣ ಅಕ್ಷರಗಳಿಂದ ಕರೀ ಮಸಿಯಲ್ಲಿ ಒರೆದು, ಕೆಂಪು ಮಸಿಯಿಂದ ನಡುವೆ ಸಹ ಒರೆಯುವರು. ಇಂತಹವುಗಳನ್ನು ಓದುವದು ಶಕ್ಯವೇಯಿಲ್ಲ.

(೩) ಲೇಖಗಳು ಯಾವಾಗಲೂ ಕಾಗದಗಳ ಒಂದೇ ಮಗ್ಗಲಲ್ಲಿ ಸ್ಪಷ್ಟವಾಗಿ ಬರೆದಿರಬೇಕು. ಲೇಖಕರ ಹೆಸರು ವಿಳಾಸಗಳನ್ನು (ಪ್ರಕಟನೆಗಾಗಿ ಅಲ್ಲದಿದ್ದರೂ) ನಮಗೆ ತಿಳಿಸಲೇಬೇಕು. ಇವನ್ನು ದುರ್ಲಕ್ಷಿಸುವ ಲೇಖಗಳು ನಮ್ಮಿಂದ ಸ್ವೀಕರಿಸಲ್ಪಡಲಾರವು

(೪) 'ಕನ್ನಡಿಗ'ನ ವಾರ್ಷಿಕ ಚಂದಾ ಅತ್ಯಲ್ಪವಾಗಿದೆಯಾದ್ದರಿಂದ, ಅರ್ಧ ಬೆಲೆಗಾಗಿಯೂ ಉಚಿತವಾಗಿಯೂ, ಒಂದು ವರ್ಷದ ಒಳಗಿನ ಅವಧಿಯ ಚಂದಾ ಹಣಕ್ಕಾಗಿಯೂ, ಕಳಿಸುವದು ಶಕ್ಯವಿಲ್ಲ.

(೫) ಬಾಗಲಕೋಟೆಯ ೧೦ ವರ್ಷದ ಓರ್ವ ಬಾಲಿಕೆಯನ್ನು ಕೊಪ್ಪಳದ ೫೫ ವರ್ಷದ ಮುದುಕನಿಗೆ ಲಗ್ನ ಮಾಡಿಕೊಟ್ಟ ಬಗ್ಗೆಯೂ ಧಾರವಾಡದಲ್ಲಿ ಶ್ರೀಮದುತ್ತರಾದಿ ಮಠಾಧೀಶರ ನೇತೃತ್ವದಲ್ಲಿ ಜರುಗಿದ ಇದೇ ಬಗೆಯ ವಿಷಮವಿವಾಹದ ಬಗ್ಗೆಯೂ ನಮ್ಮ ಕಡೆಗೆ ಪತ್ರಗಳು ಬಂದಿವೆ. ತಡವಾಗಿ ಕೈಸೇರಿದ್ದರಿಂದ ಇವನ್ನು ಮುಂದಿನ ವಾರದ ವರೆಗೆ ತಡೆಯಬೇಕಾಗಿದೆ.

ನಿಝಾಂ ಕರ್ನಾಟಕದ ಪತ್ರ.

(ನಮ್ಮ ಸ್ವಂತ ಸುದ್ದಿಗಾರರಿಂದ)

ಗುಲಬುರ್ಗಾ:—ಇಲ್ಲಿ ಶ್ರೀ ಸದಾಶಿವರಾವ ಗರೂಡ ಇವರ ನಾಟಕಗಳು ಅತ್ಯಂತ ಲೋಕಪ್ರಿಯವಾಗಿ ನಡೆದಿರುತ್ತವೆ. ಗುಲಬುರ್ಗೆಯಲ್ಲಿ ಮರಾಟಿಯು ಮಾತೃಭಾಷೆಯೆಂದು ಹೇಳಿಕೊಳ್ಳುವವರು ಈ ನಾಟಕದಲ್ಲಿಯ ಜನಸಂಮರ್ದವನ್ನು ನೋಡಿ ಬೆರಗಾದರು. ತಿರುವು ಬೈತಲದ ಮರಾಟಿಗರೂ ಕೂಡ ಕನ್ನಡ ನಾಟ್ಯಾಭಿನಯದ ಕೌಶಲವನ್ನೂ, ಹೃದಯಕ್ಕೆ ಹೋಗಿ ಮುಟ್ಟುವ ಕನ್ನಡದ ಓಜಸ್ವಿತೆಯನ್ನೂ ಕಂಡು ಬಾಯಿಂದ ಭೇದವೆಂದೆನ್ನುತ್ತಿದ್ದರೂ ಕೃತಿಯಿಂದ ಒಪ್ಪುತ್ತಿರುವರು. ಶ್ರೀ ಗರುಡರವರು ಇಲ್ಲಿಗೆ ಸಾಹಿತ್ಯ ಪರಿಷತ್ತು ಬರುವಂತೆ ಏನಾದರೂ ಅನುಕೂಲ ಮಾಡಬಹುದೆಂದು ತೋರುತ್ತದೆ. ಆದರೆ ಆಗ್ರಹದಿಂದ ನೂತನ ವಿದ್ಯಾಲಯಕ್ಕೆ ಧರ್ಮಾರ್ಥ ಆಟ ಕೊಟ್ಟು, ಕರ್ನಾಟಕದ ವಿರುದ್ಧ ನಿಂತಿರುವ ಕೊಡ್ಲಿಗೆ ಸಹಾಯ ಮಾಡಬಾರದಾಗಿ ನಾಟ್ಯಾಲಂಕಾರರಿಗೆ ಪ್ರಾರ್ಥನೆಯಿದೆ. ೫೦—೬೦ ರೂಪಾಯಿಗಳ ಸಹಾಯವು ಬಹಳಾಗದಿದ್ದರೂ, ಅದರಿಂದ ಸಿಗುವ ನೈತಿಕ ಸಹಾಯವು ಮಾತ್ರ ಕನ್ನಡಕ್ಕೆ ವಿಘಾತಕವಾಗುವದು.

ಇಲ್ಲಿ "ಕರ್ನಾಟಕ ವಾಙ್ಮಯ ಸೇವಾ ಗಣಪತಿ"ಯನ್ನು ಪೇಟೆಯಲ್ಲಿ ಕೂಡ್ರಿಸಬೇಕೆಂಬ ವಿಚಾರ ನಡೆದಿದೆ. ಇದಕ್ಕೆ ಹುಟ್ಟುಗನ್ನಡಿಗರಾದ ಲಿಂಗಾಯತರೂ ಬ್ರಾಹ್ಮಣರೂ ಚನ್ನಾಗಿ ಸಹಾಯ ಮಾಡುವರೆಂದೂ ಈ ವೇಳೆಯಲ್ಲೇ ಕರ್ನಾಟಕ ಸಂಘವನ್ನು ಸ್ಥಾಪಿಸುವ ಕಾರ್ಯವನ್ನು ನೆರವೇರಿಸುವರೆಂದೂ ನಂಬಿಕೆಯಿದೆ.

ಹೈದ್ರಾಬಾದ:—ಇಲ್ಲಿಯ ಪೆದ್ದಾಪುರ ದೇಶಮುಖರು ಮುಸಲ್ಮಾನ ಧರ್ಮದವರಿದ್ದರೆಂದು ಕೆಲವು ಮಹಮ್ಮದೀಯರು ಅವರ ಉತ್ತರವಿಧಿಗಳನ್ನು ಹಿಂದೂ ಧರ್ಮದ ಪ್ರಕಾರ ನೆರವೇರಿಸಿಗೊಡದೇ ದಫನ ಮಾಡಿಬಿಟ್ಟರು. ಮುಸಲ್ಮಾನ ಧರ್ಮಕ್ಕೆ ಸ್ವಲ್ಪ ಸಹಾನುಭೂತಿ ತೋರಿಸಿದ್ದೇ ಅವರ ತಪ್ಪು. ಕಾರಣ "ಆಚಾರಃ ಪ್ರಥಮೋ ಧರ್ಮಃ" ಎಂಬಂತೆ ಆಚಾರಕ್ಕೆ ಮಹತ್ವ ಕೊಡದೆ ಕೆಲವು ಜನರು ಫಕೀರರಾಗುವ ಪದ್ಧತಿಯನ್ನು ಕೈಕೊಳ್ಳುವದು ಪರಿಣಾಮದಲ್ಲಿ ಎಷ್ಟು ಅನಿಷ್ಟವಾಗುವದೆಂಬದನ್ನು ಲಕ್ಷದಲ್ಲಿ ತರಬೇಕು. ಮತ್ತು "ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್" ಎಂಬಂತೆ ಪರಧರ್ಮವನ್ನು ದ್ವೇಷಿಸದೇ, ತಮ್ಮ ಧರ್ಮದ ಆಚಾರವನ್ನೇ ಅನುಸರಿಸುವದು ವಿಹಿತವೆಂದು ನಮ್ಮ ಹಿಂದೂ ಬಾಂಧವರಲ್ಲಿ ವಿಜ್ಞಾಪನೆ. ಮುಸಲ್ಮಾನ ಬಂಧುಗಳಾದರೂ ಈ ಪ್ರಕಾರ ತಲೆತಿರುಕತನವನ್ನು ಮಾಡುವದೆಂದರೆ ಇದ್ದ ಬೇಗೆಯನ್ನು ಹೆಚ್ಚು ಬೆಳೆಸಿದಂತೆಯೇ. ನಾವೂ ಹಿಂದುಸ್ಥಾನದಿಂದ ಅಳಿಯಲಾರೆವು. ಮಹಮ್ಮದೀಯರೂ ಇಲ್ಲಿಂದ ಹೋಗಲಾರರು. ಅಂದ ಮೇಲೆ ಸುಳ್ಳೇ ಬಡಿದಾಡಿ ಅತಃಕಲಹವನ್ನೇಕೆ ಬೆಳೆಸುವದು?

ಲಿಂಗಸುಗೂರ ತಾಲೂಕ ಪೈಕಿ ಭಾಗಾಪೂರ ಗ್ರಾಮಕ್ಕೆ ೧೦-೧೧ ವಯಸ್ಸಿನ ಜಂಗಮಸ್ವಾಮಿಯೋರ್ವನು ಬಂದಿದ್ದಾನೆ. ಅನೇಕ ಕಾಲದಿಂದಲೂ ದುಃಸಾಧ್ಯವಾದ ಆಧಿ ವ್ಯಾಧಿಗಳನ್ನು ಸ್ಪರ್ಶದಿಂದಲೇ ಕ್ಷಣಮಾತ್ರದಲ್ಲಿ ಗುಣಪಡಿಸುವನಂತೆ! ಕಣ್ಣಿಲ್ಲದವರಿಗೂ ಅವರ ಇಷ್ಟಾರ್ಥವು ಲಭಿಸುವದಂತೆ! ಆಧುನಿಕ ಚಿಕಿತ್ಸಕ ಬುದ್ಧಿಯವರು ಸ್ವಾಮಿಯನ್ನು ಪರೀಕ್ಷಿಸಬೇಕು.

ಹಿಂದುಸ್ಥಾನ

ಇಂಗ್ಲೀಷ ಶಾಲೆಯಲ್ಲಿ ಮೇಲಿಂದ ಮೇಲೆ ಕ್ರಮಿಕ ಪುಸ್ತಕಗಳನ್ನು ಬದಲುಮಾಡುತ್ತಿರುವದರಿಂದ, ಪಾಲಕರು ತಮ್ಮ ಅನೇಕ ಮಕ್ಕಳಿಗಾಗಿ ಬೇರೆ ಬೇರೆ ಪುಸ್ತಕಗಳನ್ನು ಕೊಳ್ಳುವದರಲ್ಲಿ ಬಹು ಹಣವನ್ನು ವ್ಯಯಮಾಡಬೇಕಾಗುತ್ತದೆ. ಆದುದರಿಂದ ಹೀಗೆ ಮೇಲಿಂದ ಮೇಲೆ ಬದಲು ಮಾಡಕೂಡದೆಂದು ಮುಂಬೈ ಸರಕಾರವು ಎಲ್ಲ ಇಂಗ್ಲೀಷ ಶಾಲೆಗಳಿಗೂ ಎಚ್ಚರ ಕೊಟ್ಟಿದೆ.

ಮೈಸೂರ ಕರ್ನಾಟಕ.

ಇಂಗ್ಲೀಷ—ಕನ್ನಡ ಕೋಶವನ್ನು ಹೊಸದಾಗಿ ಸಿದ್ಧಪಡಿಸಲು ೧೦ ಸಾವಿರ ರೂ. ಕೊಡಬೇಕಾಗಿ ಶಿಕ್ಷಣ ಖಾತೆಯವರು ಮಹಾರಾಜರ ಸರಕಾರವನ್ನು ಕೇಳಿದ್ದಾರೆ.

ಮಹಾತ್ಮಾ ಗಾಂಧೀಯವರು ಮೈಸೂರ ಮಹಾರಾಜರಿಗೆ ಒಂದು ಬೆಳ್ಳಿಯ ಹೊದಿಕೆಯನ್ನು ಹಾಕಿದ ರಾಟಿಯನ್ನು ಕಾಣಿಕೆಯಾಗಿ ಕೊಡಲು, ಮಹಾರಾಜರು ಬಲು ಸಂತೋಷದಿಂದ ಸ್ವೀಕರಿಸಿ, ಅದರಿಂದಲೇ ದಿನಾಲು ಅರಮನೆಯಲ್ಲಿ ಸ್ವತಃ ನೂಲುತ್ತಿರುವರು.

ಮದ್ರಾಸ ಕರ್ನಾಟಕ.

ಸೊಂಡೂರಿನ ಮಹಾರಾಜರಿಗೆ ಗಂಡು ಸಂತಾನವಿರದ್ದರಿಂದ ಅವರ ಶೂನ್ಯಸಿಂಹಾಸನಕ್ಕೆ ಒಡೋದೆಯ ನರಸಿಂಗರಾವ ಘೋರ್ಪಡೆಯವರು ಬಾಧ್ಯರಾಗುವರಂತೆ!

ಹೈದರಾಬಾದದ ಕನ್ನಡಿಗರೇ,
ಮುಂದೇನು?

ನಿಜಾಂ ಕರ್ನಾಟಕ ಸಂಘದವರು ಕನ್ನಡಿಗರಾದ ನ್ಯಾಯಮೂರ್ತಿ ಗಿರಿರಾಯರನ್ನು ಇಲ್ಲಿಯ ಜಹಾಗೀರದಾರರಾದ ಕಾರವಾನಕರ ಶ್ರೀನಿವಾಸರಾಯರ ಮನೆಯಲ್ಲಿ ಜುಲೈ ೧೫ನೇ ತಾರೀಖಿನ ದಿವಸ ಬರಮಾಡಿಕೊಂಡು, ಶ್ರೀ ಗಿರಿರಾಯರು ನ್ಯಾಯಮೂರ್ತಿಗಳಾದುದಕ್ಕೆ ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿದರಷ್ಟೇ? ನ್ಯಾಯಮೂರ್ತಿಗಳು ಸಭೆಯ ವಿಸರ್ಜನಯ ಕಾಲಕ್ಕೆ ೪೦೦ ರೂಪಾಯಿಗಳ ಮಹಾ ಕಾಣಿಕೆಯ ವಚನವನ್ನಿತ್ತರು ಸ್ತುತ್ಯ! ಸಂಘದವರು ಸ್ಫೂರ್ತಿಗೊಂಡು ಈ ಪರಿಯಾಗಿ ಮಾಡಿದ್ದು ಸ್ತುತ್ಯ. ಆದರೆ ಮುಂದೇನು!

ಯಾಕಂದರೆ ಕೀರ್ತನ ಕೇಸರಿಯು ಸನ್ ೧೯೨೫ ನೇ ಇಸ್ವಿಯಲ್ಲಿ ತನ್ನ ಅಭರ್ಜಿಸುವ ಕೀರ್ತನಗಳಿಂದ ಇಲ್ಲಿಯ ಕನ್ನಡಿಗರನ್ನು ಎಚ್ಚರ ಪಡಿಸಿ, ಕರ್ನಾಟಕ ಸಂಘವನ್ನೊಂದು ಏರ್ಪಡಿಸಿತು. ಆ ಕಾಲಕ್ಕೆ ಇಲ್ಲಿಯ ಕನ್ನಡಿಗರಾದರೂ ಹಿಂದೆ ಮುಂದೆ ನೋಡದೆ, ಗುಡುಗಿನ ಹುರುಪಿನಲ್ಲಿ ಧನ್! ಧನ್ ಎಂದು ೧೦೦೦೦ ರೂಪಾಯಿಗಳ ವರೆಗೆ, ತಮ್ಮ ಚಂದಾದ ಅಂಕಿಯನ್ನು ಕಾಗದದಲ್ಲಿ ಒಗೆದರು. ಸಂಘದ ಧ್ಯೇಯಗಳು ಅಚ್ಚಾಗಿ ಹಂಚಲ್ಪಟ್ಟವು. ಆಯಿತು! ಇನ್ನೇನು! ನಿಜಾಂ ಕರ್ನಾಟಕವು ಮುಂದಕ್ಕೆ ಹೆಜ್ಜೆಯನ್ನು ಹಾಕಿತು ಎಂದು ತಿಳಿದುಬಿಟ್ಟರು. ಅದರ ಮುಂದೇನು? ಯಾವತ್ತು ಸೋಡಾ ವಾಟರದ ಬುರುಗಿನಂತೆ ಆಯಿತು! ಇತ್ತ ವಚನವನ್ನಿತ್ತ ಸದ್ಗೃಹಸ್ಥರು ಕೈಯಿಂದ ಹಣವನ್ನು ಬಿಚ್ಚಲಿಲ್ಲ ಅತ್ತ ಸಂಘದ ಸದಸ್ಯರೆಂಬುವವರು ಸಂಘದ ಮಾತನ್ನೂ ಎತ್ತಲಿಲ್ಲ ಕೇಸರಿಯಂತೂ ತನ್ನ ಗವಿಯಾದ ಕೊಪ್ಪಳವನ್ನು ಹೊಕ್ಕು ನಿದ್ರಿಸಹತ್ತಿತು.

ಆದರೂ ಸುದೈವದಿಂದ, ಹೊಸದಾಗಿ ಪುನರ್ಘಟನೆಯಾಗಿ ಅದೇ ಹೆಸರಿನಿಂದ ಸಂಘವು ಜೀವದಿಂದುಳಿದು ಕೆಲಸವನ್ನು ಮಾಡಲಿಕ್ಕೆ ಹತ್ತಿರುವದು ಆದರೆ ಸಮಾಧಾನಕರವಾದ ಕೆಲಸವು ನಡೆದಿಲ್ಲವೆಂದು ಅತಿ ದುಃಖದಿಂದ ಹೇಳಬೇಕಾಗುತ್ತದೆ. ಯಾವದೊಂದು ಕಾರ್ಯವನ್ನು ವಿಚಾರಿಸಲು ಕಾರ್ಯಕಾರಿ ಸಭೆಯನ್ನು ಕರೆದರೆ ಸಭಿಕರು ಒತ್ತಟ್ಟಿಗೆ ಕೂಡುವದೇ ಅತಿ ಕಷ್ಟ. ನಾಲ್ಕೈದು ವೇಳೆ ಕರೆದಾಗ್ಯೆ ಒಂದು ವೇಳೆ ಕೂಡುವರು. ಇನ್ನು ಸಂಘದ ಪರವಾಗಿ ಜರುಗಿದ ಕಾರ್ಯಗಳು. ಎರಡೇ ಎರಡು ಅನಾಯಾಸವಾಗಿ ಇಲ್ಲಿಗೆ ಬಂದಿದ್ದ ದೇವುಡು ನರಸಿಂಹ ಶಾಸ್ತ್ರಿಗಳ ವ್ಯಾಖ್ಯಾನ ಒಂದನೇದು. ನ್ಯಾಯಮೂರ್ತಿ ಗಿರಿರಾಯರನ್ನು ಬರಮಾಡಿಕೊಂಡ ಸಭೆ ಎರಡನೇದು. ಹೀಗೆ ಎರಡು ವರುಷಗಳ ಅವಧಿಯಲ್ಲಿ ಸಂಘದ ಪತಿಯಿಂದ ಜರುಗಿದ ಕಾರ್ಯಗಳಿವು ಇನ್ನು ಸಂಘದ ಸಹಾಯದಿಂದ ನಡೆದ ಕರ್ನಾಟಕ ಧರ್ಮಾರ್ಥ ವಾಚನಾಲಯದ ಸ್ಥಿತಿಯಂದರೆ–

(೧) ವಾಚನಾಲಯವು ಒಂದು ಚಿಕ್ಕದಾದ ಕೋಣೆಯಲ್ಲಿ ಒದ್ದಾಡುತ್ತಿರುವದು

(೨) ಶ್ರೀ. ಗಳಗನಾಥರ ಕಾದಂಬರಿ ಮತ್ತು ಸದ್ಬೋಧ ಚಂದ್ರಿಕೆಯ ಕಾದಂಬರಿಗಳ ಹೊರತಾಗಿ ಪುಸ್ತಕ ಭಾಂಡಾರವಿಲ್ಲ

(೩) ಈಗಿನ ಪದ್ಧತಿಯಂತೆ ವಾಚನಾಲಯಕ್ಕೆ ಬೇಕಾಗುತ್ತಿರುವ ಖುರ್ಚಿ ಮೇಜುಗಳಿಲ್ಲ.

(೪) ವಾಚನಾಲಯಕ್ಕೆ ಕಾರ್ಯಕಾರಿ ಮಂಡಲದ ಸದಸ್ಯರ ದರ್ಶನವಿಲ್ಲ ದರ್ಶನ ವಿದ್ದರೆ, ದೇವರೇ ಬಲ್ಲ!

ಈ ಪರಿಯಾಗಿ ವಾಚನಾಲಯದ ಸ್ಥಿತಿಯಾದ ಮೇಲೆ ಭಾಷಾಭಿವೃದ್ಧಿಯಾಗುವ ಬಗೆಹೇಗೆ? ವಾಚನಾಲಯವೆಂದರೆ ಭಾಷಾಭಿವೃದ್ಧಿಯ ಮೂಲಸ್ತಂಭವು. ಆದ್ದರಿಂದ ಸಂಘದವರು ಕೆಳಗಿನ ಏರ್ಪಾಡುಗಳನ್ನು ತೀವ್ರವಾಗಿ ಮಾಡಬೇಕಾಗಿ ವಿನಂತಿ

(೧) ವಾಚನಾಲಯವು ತೀವ್ರವಾಗಿ ಬೇರೊಂದು ದೊಡ್ಡದಾದ ಸ್ಥಳಕ್ಕೆ ಒಯ್ಯಲ್ಪಡಬೇಕು.

(೨) ವಾಚನಾಲಯದ ಪುಸ್ತಕ ಭಾಂಡಾರವು ಹೆಚ್ಚಿಸಲ್ಪಡಬೇಕು.

(೩) ವಾಚನಾಲಯದಲ್ಲಿ ಬೇಕಾಗುವ ಖುರ್ಚಿ ಮೇಜುಗಳ ವ್ಯವಸ್ಥೆಯಾಗಬೇಕು

(೪) ಕನ್ನಡದ ಹೊರತಾಗಿ ಒಂದು ಇಂಗ್ರೇಜಿ ಮತ್ತು ಒಂದು ಮರಾಟಿ ದೈನಿಕಗಳು ತರಿಸಲ್ಪಡಬೇಕು ಯಾಕಂದರೆ ಕೆಲವೊಂದು ಸ್ಫೂರ್ತಿಯುಳ್ಳ ಕನ್ನಡಿಗರು ಕನ್ನಡ ಲೇಖನ ವಾಚನಗಳನ್ನರಿಯರು.

(೫) ಸಂಘದ ಸಭೆಗಳೆಲ್ಲವು ವಾಚನಾಲಯದಲ್ಲಿಯೇ ಆಗಲಿಕ್ಕೇಬೇಕು (ಹೀಗಾಗಿಯಾದರೂ ಕಾರ್ಯಕಾರಿ ಮಂಡಲದ ಸದಸ್ಯರು ವಾಚನಾಲಯಕ್ಕೆ ತಮ್ಮ ದರ್ಶನ ಕೊಟ್ಟಾರೆಂಬ ಆಶೆ)

(೬) ಕನ್ನಡ ವ್ಯಾಖ್ಯಾನ ಮಾಲೆಯನ್ನು ಹೂಡಬೇಕು ಹೊರನಾಡಿನ ಕನ್ನಡ ವಿದ್ವಾಂಸರನ್ನು ಇಲ್ಲಿಗೆ ಬರಮಾಡಿಕೊಂಡು ಅವರಿಂದ ಕನ್ನಡ ಸಂಸ್ಕೃತಿಯ ಬಗ್ಗೆ ಕನ್ನಡ ವ್ಯಾಖ್ಯಾನಗಳು ಮೇಲಿಂದ ಮೇಲೆ ಆಗುತ್ತಿರುವಂತೆ ಏರ್ಪಡಿಸಬೇಕು.

(೭) ಕನ್ನಡನಾಡಿನ ವಿಭೂತಿಗಳ ಪುಣ್ಯದಿನವನ್ನು ಪಾಲಿಸಬೇಕು (ವಿದ್ಯಾರಣ್ಯ ಸ್ವಾಮಿಗಳ ಪುಣ್ಯದಿನದ ಮಾತನ್ನು ಎತ್ತಿದಾಗ್ಯೂ ಕೂಡ ಸಂಘದ ಸದಸ್ಯರು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲವಂತೆ. ಕರ್ನಾಟಕದ ಮಾತೆಯ ದುರ್ದೈವ)

ಕನ್ನಡ ಬಂಧುಗಳೇ,

ಯಾವ ಮಹಾಯೋಗಿಯು ತನ ಅಖಂಡವಾದ ತಪಸ್ಸನ್ನು ತನ್ನ ಬಂಧುಗಳಾದ ಕನ್ನಡಿಗರ ಸುಖಶಾಂತಿಗಾಗಿ ಮೋಕ್ಷವನ್ನು ಧಿಕ್ಕರಿಸಿ, ಸುವರ್ಣವೃಷ್ಟಿಯನ್ನು ಬೇಡಿಕೊಂಡು ಬಂಧುದ್ವಯರಾದ ಹುಕ್ಕ ಬುಕ್ಕರಾಯರೊಂದಿಗೆ, ಕನ್ನಡ ಧ್ವಜಪತಾಕೆಯನ್ನೇರಿಸಿ ತನ್ನ ಕೀರ್ತಿಯನ್ನು ಅಜರಾಮರವಾಗಿ ಮಾಡಿಕೊಂಡನೋ ಅಂಥ ವಿಭೂತಿಯ ಪುಣ್ಯದಿನವನ್ನು ಪಾಲಿಸದೇ ಬಿಡುವದೆಂದರೆ ಎಂಥ ಲಾಂಛನಾಸ್ಪದದ ಮಾತು! ನೋಡಿರಿ ವಿದ್ಯೆಗೆ ಮಾನ ಕೊಟ್ಟದ್ದಕ್ಕಾಗಿ ವಿಜಯನಗರದ ರಾಜ್ಯವು ಕಮ್ಮದೆಂದು ಹೇಳುತ್ತ ಆಂಧ್ರರು ಕೃಷ್ಣರಾಯನ ಪುಣ್ಯದಿನವನ್ನು ಪಾಲಿಸುತ್ತಿದ್ದಾರೆ. ಯಾವ ಕನ್ನಡ ಶಿಲ್ಪಿಗರು ತಮ್ಮ ಕಲೆಯನ್ನು ಇಡೀ ಜಗತ್ತಿಗೆ ಆದರಣೀಯವಾಗಿ ಮಾಡಿದರೋ ಅಂಥವರ ಕುರುಹುಗಳು ನಿಮ್ಮ ಸಮೀಪದಲ್ಲಿದ್ದಾಗ್ಯೂ ಕೂಡ ನಿಮ್ಮಲ್ಲಿ ಕನ್ನಡಾಭಿಮಾನದ ಅಂಕುರವು ಕೂಡ ಉದ್ಭವಿಸಬಾರದೆಂದರೆ, ದುರ್ದೈವವೇ ಸರಿ ಹೈದರಾಬಾದಲ್ಲಿ ೨೧ ಸಾವಿರಕಿಂತ ಹೆಚ್ಚಾಗಿ ಕನ್ನಡಿಗರಿದ್ದಾಗ್ಯೂ ಕನ್ನಡ ವಾಚನಾಲಯವು ಒಂದು ಅತಿ ಕಷ್ಟಕರವಾದ ಸ್ಥಿತಿಯಲ್ಲಿ ಕೊಳೆಯುವದೆಂದರೆ ಎಂಥ ಭಾಷಾಭಿಮಾನದ ಖೂನ್ನತೆಯು! ಭಾಷಾಸೇವೆಯೆಂದರೆ ಸಾಮಾನ್ಯವಾದುದಲ್ಲ. ಭಾಷಾಭಿಮಾನವೇ ಸ್ವಾಭಿಮಾನ! ಭಾಷಾಭಿವೃದ್ಧಿಯೇ ಸ್ವದೇಶಾಭಿವೃದ್ಧಿ.

ಬಾಗಲಕೋಟಿ—ಕನ್ನಡಿಗ ಮೇಲ್ಸಂಚಿಕೆ ಭಾದ್ರಪದ ಶುದ್ಧ ೧ ಶಕೆ ೧೮೪೯

ಜನರು ಸಾಯುವರು!

ಬಾಗಲಕೋಟಿಯ ಕಲಾದಗಿ ಬೀದಿಯ "ಪಬ್ಲಿಕ್ ವರ್ಕ್ಸ" ಕಚೇರಿಯ ಮುಂದೆ ಪೂಲೊಂದು (೨ ನೇ ಪೂಲು) ಇದೆಯಷ್ಟೇ! ಈ ಪೂಲು ಕಿರಿದಾಗಿ, ಬೀದಿಯು ಮಾತ್ರ ವಿಶಾಲವಾಗಿದ್ದರಿಂದ ರಾತ್ರಿಯಲ್ಲಿ ಬೀದಿಹಿಡಿದು ಬರುವ ಜನರೂ, ದನಕರಗಳೂ ಮೇಲಿಂದ ಮೇಲೆ, ಅಲ್ಲಿರುವ ತಗ್ಗಿನಲ್ಲಿ ಬೀಳುತ್ತಿರುವವು! ನಿನ್ನೆದಿನ ರಾತ್ರಿ ೮ ಗಂಟೆಯ ಸುಮಾರಕ್ಕೆ ಟಾಂಗೆಯೊಂದು ಇದೇ ಬಗೆಯಾಗಿ ಅಪಘಾತಕ್ಕೊಳಗಾಗಿ, ಕುದುರೆಯು ಉಸುರಾಡಿಸಲು ಅವಕಾಶವಿಲ್ಲದಂತೆ, ಆ ತಗ್ಗಿನಲ್ಲಿ ಬಿದ್ದಿತು!! ಸರಿದಾಡಲು ಸಹ ಬಾರದಂತೆ ಅದು ಬಲು ಇಕ್ಕಟಿನಲ್ಲಿ ಸಿಲುಕಿತ್ತು! ತಿರುಗಾಡುತ್ತ ಹೋದ ಶ್ರೀ. ಜೋರಾಪುರ, ಮಧ್ವರಾವ ಹಾಗೂ ಗುರುರಾವ, ಮಂಗಳವೇಢೆ ಶ್ರೀನಿವಾಸರಾವ, ಹುದ್ದಾರ ಭೀಮರಾವ ಮೊದಲಾದವರು ಅಲ್ಲಿಗೆ ಬಂದು ಆ ಹೃದಯದ್ರಾವಕ ಪ್ರಕಾರವನ್ನು ಕಂಡು, ಕುದುರೆಯನ್ನು ಇನ್ನಿತರರ ಸಹಾಯದಿಂದ ಎತ್ತಲು, ಆ ಬಡ ಮೂಕಪ್ರಾಣಿಯು ಬಹು ಆನಂದದಿಂದ ಒಟ್ಟನೇ ಜಿಗಿದು, ಎದ್ದು ನಿಂತಿತು! ಹೀಗೆ ಮೇಲಿಂದ ಮೇಲೆ ಅಪಘಾತಗಳಾಗುತ್ತಿದ್ದರೂ, "ಪಬ್ಲಿಕ್ ವರ್ಕ್ಸ" ಇಲಾಖೆಯವರು ಆ ಪೂಲನ್ನು ಬೀದಿಯಷ್ಟೇ ದೊಡ್ಡದಾಗಿ ಮಾಡುವ ಕಡೆಗೆ ಏನೂ ಲಕ್ಷ್ಯ ಕೊಟ್ಟಿಲ್ಲ! ನಗರ ಪಿತಾಮಹರಾಗಲಿ, ಪೋಲೀಸರಾಗಲಿ, ಇತರ ಸರಕಾರಿ ಅಮಲದಾರರಾಗಲಿ, ಈ ಇಲಾಖೆಯವರಿಗೆ ಒತ್ತಾಯವನ್ನೂ ಪಡಿಸಿಲ್ಲ!! ಹೀಗೇ ಎಲ್ಲರೂ ಇದನ್ನು ದುರ್ಲಕ್ಷಿಸಿದರೆ, ಜನರು ಸಾಯುವದು ಖಂಡಿತ! ಈಗಲಾದರೂ ಅಧಿಕಾರಿಗಳು ಕಣ್ತೆರೆಯುವರೋ?

ಮಂತ್ರಿಗಳ ರಾಜೀನಾಮೆ!

ಬಂಗಾಲದ ಮಂತ್ರಿಗಳಲ್ಲಿ ವಿಶ್ವಾಸವಿಲ್ಲೆಂದು, ಅಲ್ಲಿಯ ಪ್ರಾಂತಿಕ ಕಾಯದೇ ಮಂಡಲದಲ್ಲಿ ಬಹುಮತದಿಂದ ತೀರ್ಮಾನವಾಗಲು, ಮಂತ್ರಿಗಳಾದ ಬಿ. ಚಕ್ರವರ್ತಿ ಹಾಗೂ ಎ. ಕೆ. ಘಜ್ನಾವೀ ಇವರಿಬ್ಬರೂ ತಮ್ಮ ಮಂತ್ರಿಪದಕ್ಕೆ ರಾಜೀನಾಮೆ ಕೊಟ್ಟರು! ಗವರ್ನರರು ಅದನ್ನು ಸ್ವೀಕರಿಸಿದ್ದಾರೆ

ನೋಟೀಸು.

ರಾ|| ರಾ|| ಸಿದ್ದಲಿಂಗಪ್ಪಾ ವ ಬೋಡಪ್ಪಾ ತಂದಿ ನಾಗಪ್ಪಾ ಹುಚ್ಚಬಾಳಪ್ಪನವರ ಸಾಕೀನ ಕಮತಗಿ ಇವರಿಗೆ—

ನಾನು ಮಲ್ಲವ್ವಾ ಗಂಡಾ ರೇವಣೆಪ್ಪಾ ಹುಚ್ಚಬಾಳಪ್ಪನವರ ಸಾಕೀನ ಕಮತಗಿ ಈ ನೋಟೀಸಿನಿಂದ ನಿಮಗೆ ತಿಳಿಸತೀನಲ್ಲಾ ನೀವು ನನ್ನ ಮೃತ ಗಂಡನ ಖಾಸ ಅಣ್ಣ ತಮ್ಮಂದಿರಾಗಬೇಕು. ನನ್ನ ಗಂಡನು ಅಜಮಾಸು ೧೫—೧೬ ವರ್ಷಗಳ ಹಿಂದೆ ನಿಮ್ಮ ಕೂಡ ಬ್ಯಾರೆ ಆಗಿ ಹುಚ್ಚಪ್ಪಾ ಮಾಡಬಾಳ ಈತನ ಮನಿ ಸ್ವತಃ ಸಂಪಾದನ ಮಾಡಿ ಸಂಸಾರ ಮಾಡತಿದ್ದಿ. ನನ್ನ ಗಂಡನು ಅಜಮಾಸ ಆರು ತಿಂಗಳ ಹಿಂದೆ ಮೃತವಾದನು. ಆತನು ಜೀವಂತ ಇದ್ದಾಗ್ಯೆ ನೇಯುವದರ ವಳಿಯಿಂದಾ ನೂಲು, ರೇಶ್ಮಿ ವ ರೋಖ ಹೀಗೆ ದೇಣೆ ಯೋಗಪ್ಪಾ ಘಟ್ಟದ ಸಾ|| ಗುಳೇದಗುಡ್ಡ ಇವರ ಹತ್ತರ ತಂದಿದ್ದನು. ನನ್ನ ಗಂಡನು ಮೃತವಾದನಂತರಾ ಸದರ ದೇಣೇದ ತಗಾದಿ ನನಗೆ ಮಾಡಿದ್ದರಿಂದ ಸದರ ಮನಿ ಅವರ ದೇಣೆದಲ್ಲಿ ಅವರಿಗೆ ಬರಕೊಟ್ಟೆನು ನನ್ನ ಹತ್ತರ ನನ್ನ ಗಂಡನ ಯಾವ ತರದ ಜಂಗಮ ಜಿಂದಗಿ ಇಲ್ಲಾ. ಆದರಿಂದಾ ನನ್ನ ಮುಂದಿನ ಸಂರಕ್ಷಣೆ ಆಗುವದು ಕಠಿಣವದೆ. ಕಾರಣಾ ನಾನು ಯಂಡಪ್ಪನವನ್ನು ಉಡಿಕೆ ಮಾಡಿಕೊಳ್ಳುವ ವಿಚಾರದಲ್ಲಿದ್ದೇನೆ. ಆದರೆ ನೀವು ವಿನಾಕಾರಣಾ ತ್ರಾಸಕೊಡಬೇಕೆಂದು ಉಡಿಕೆಮಾಡಿಕೊಳ್ಳುವದಕ್ಕೆ ನಮ್ಮ ಹರಕತ್ತವದೆ ಅಂತಾ ಜನರ ಮುಂದೆ ಅಂದಕೋತ ತಿರಗತೀರಿ. ಇದು ಯೋಗ್ಯ ವ ಕಾಯದೇಶೀರ ಮಾತು ಅಲ್ಲಾ. ನನ್ನ ಮೇಲೆ ನಿಮ್ಮದು ಯಾವ ತರದ ಹಕ್ಕು ವ ಸತ್ತಾ ಇರುವದಿಲ್ಲಾ, ವ ಕಾಯದೇದಿಂದ ನನಗೆ ಹರಕತ್ತ ಕೊಡಲಿಕ್ಕೆ ಸಹ ನಿಮಗೆ ಅಧಿಕಾರವಿಲ್ಲಾ ನನ್ನ ಗಂಡನ ಸಮ್ಮಂಧಿ ಯಾವದೂ ಜಿಂದಗಿ ವಗೈರೆ ನನ್ನ ಹತ್ತರ ಇರುವದಿಲ್ಲಾ. ಇದ್ದರೂ ಅದನ್ನು ಸಹ ಕೇಳಲಿಕ್ಕೆ ನೀವು ಹಕ್ಕದಾರರು ಅಲ್ಲಾ, ನಾನು ಉಡಿಕೆಮಾಡಿಕೊಂಡು ಹೋಗತೀನಿ. ಉಡಿಕೆ ಆದವನಿಗೂ ನನಗೂ ನಿಮ್ಮ ಸಮ್ಮಂಧ ಏನೂ ಇರುವದಿಲ್ಲಾ. ವಿನಾಕಾರಣಾ ಹಾಗೆ ಧಮಕಿ ಕೊಟಗೋತ ತಿರುಗಿದರೆ ನಿಮ್ಮ ಮೇಲೆ ಕಾಯದೆ ಪ್ರಕಾರ ಫಿರ್ಯಾದ ಮಾಡುವದಲ್ಲಿ ಬರುವದು ತಿಳಿಯೋದು.

ತಾ|| ೨೭—೮—೨೭.

() ಈ ಎಡಗೈ ಹೆಬ್ಬಟ್ಟಿನ ಗುರ್ತು **ಮಲ್ಲವ್ವಾ ಗಂಡಾ ರೇವಣೆಪ್ಪಾ ಹುಚ್ಚಬಾಳಪ್ಪನವರ ಸಾ|| ಕಮತಗಿ.**

ಇವರಿಬ್ಬರೂ ಇಟಲಿಯ ದಂಗೆಗಾರರು ಅಮೇರಿಕೆಯಲ್ಲಿರುತ್ತ ... ತಾವು ಕೊಡುವರೆಂದು ಅಪವಾದ ... ಸಂಶಯಿದ್ದರು ೧೯೨೦ ರಲ್ಲಿ ಒಬ್ಬ ಕಾರಕೂನ ಹಾಗೂ ಸೇವಕರ ... ಅಪರಾಧ ಹೊರಿಸಿದ್ದಾರೆ.

(೫) ಈಗಿನ ಪದ್ಧತಿಯಂತೆ ವಾಚನಾಲಯಕ್ಕೆ ಬೇಕಾಗು
ವ ಖುರ್ಚಿ ಮೇಜುಗಳಿಲ್ಲ.

ತೆಯು! ಭಾಷಾಸೇವೆಯೆಂದರೆ ಸಾಮಾನ್ಯವಾದುದಲ್ಲ. ಭಾಷಾ
ಮಾನವೇ ಸ್ವಾಭಿಮಾನ! ಭಾಷಾಭಿವೃದ್ಧಿಯೇ ಸ್ವದೇಶಾಭಿವೃದ್ಧಿ

ಭಾಷಾಭಿಮಾನವೇ ಒಕ್ಕಟ್ಟಿನಗುಟ್ಟು. ಭಾಷಾ ಸೇವೆಯಿಂದಲೇ ಲೋಕವು ಉದ್ಧಾರವಾಗುವದರಿಂದ ನಮ್ಮ ನಿಜಾಂ ಕನ್ನಡಿಗರೇ ಮುದ್ದೈವದಿಂದ ಜೀವದಿಂದುಳಿದಿರುವ ನಿಜಾಂ ಕರ್ನಾಟಕ ಸಂಘದ ಸದಸ್ಯರಾಗಿ ಸಂಘವನ್ನೊಳಗೊಂಡು ಮಾತೃಭಾಷೆಯ ಸೇವೆಯನ್ನು ಮನಮುಟ್ಟಿ ಹಗಲಿರುಳು ಮಾಡಿ, ಕರ್ನಾಟಕ ಮಾತೆಯ ಮಾನವನ್ನು ಕಾಯಬೇಕೆಂದು ಸವಿನಯ ಪ್ರಾರ್ಥನೆಯಿದೆ.

ಹೈದರಾಬಾದ ದಕ್ಷಿಣ. ತಮ್ಮ ಓರ್ವ ಕನ್ನಡಿಗ

ನನಗೆ ಹೇಳಿರಂತೆ

'ನಡೆಸ್ಯಾದು' 'ಒಳ್ಳೆದ್ಯಾವುದು' (ಸತ್ಯಾಗ್ರಹ) 'ನವಕರಿ' 'ಅವಸಥ' (ಕ ವೈಭವ) 'ವಿಶಯ' 'ಬಂಗ್ರಾಳಿಗೆ' (ಸ್ವದೇಶಾಭಿಮಾನಿ) ಇಂತಹ ಅಶುದ್ಧ ಪ್ರಯೋಗಗಳು ಇನ್ನೂ ಎಷ್ಟಿಯವರೆಗೆ ಕನ್ನಡನುಡಿಯಲ್ಲಿರತಕ್ಕದ್ದು?

“ಸೂರ್ಯನು ಮರೆಯಾಗಿ ಹಗಲನ್ನು ರಾತ್ರಿಯನ್ನಾಗಿ ಮಾಡಿದ್ದಕ್ಕೆ ಲಕ್ಷಗಟ್ಟಲೆ ವಿದ್ಯುದ್ದೀಪಗಳು ಆ ರಾತ್ರಿಯನ್ನು ಹಗಲನ್ನಾಗಿ ಮಾಡಲ್ಪಟ್ಟವು”!! ಈ ವಾಕ್ಯದ ಅರ್ಥವನ್ನೂ, ಕರ್ತೃ, ಕರ್ಮ, ಕ್ರಿಯಾಪದಗಳ ಸಂಬಂಧವನ್ನೂ 'ತರುಣ ಕರ್ನಾಟಕ'ದ ಸಂಪಾದಕರೇ ತಿಳಿಸಿ ಹೇಳಲಿ! ನನಗಂತೂ ಅದರ ಅರ್ಥವಾಗದು. —ಓದುಗ

ಟಿಳಕರ ಮಕ್ಕಳೂ, “ಕೇಸರಿ—ಮರಾಠಾ”ದ ಪಂಚರೂ

ಇಬ್ಬರಲ್ಲಿಯೂ ಗುದ್ದಾಟ!

'ಕೇಸರಿ' ಹಾಗೂ 'ಮರಾಠಾ' ಪತ್ರಿಕೆಗಳ ಪಂಚರಿಗೆ ಟಿಳಕರ ನಿವಾಸಸ್ಥಾನವಾದ [illegible]ವಾಡದ ವಾಡೇದ ಒಡೆತನದ ಬಾಧ್ಯತೆಯಿಲ್ಲ; ಆ ಪಂಚರು ನಮ್ಮ ವಾಡೇದಲ್ಲಿ ಕಾಯಂವಾಗಿ ಬಾಡಿಗೆಯಿಂದ ಇರತಕ್ಕದ್ದು ಎಂಬದಾಗಿ ಟಿಳಕರ ಮಕ್ಕಳು ಸಾಧಿಸುತ್ತಾರೆ. ಆದರೆ ಟಿಳಕರಿಗೆ ಸ್ವಂತಕ್ಕ ಮನೆಯು ಮಾತ್ರ ಅವರ ಮಕ್ಕಳದು; ಉಳಿದ ವಾಡೇದ ಭಾಗವೆಲ್ಲ ಪಂಚರದೆಂದು ವಿರುದ್ಧ ಪಕ್ಷದವರು ಸಾರುತ್ತಾರೆ. ಹೀಗಾಗಿ ಈ ವಾದವು ವಿಕೋಪಕ್ಕೆ ಹೋಗಿ, ಟಿಳಕರ ಮಕ್ಕಳು ಪಂಚರನ್ನು ಕೊಲ್ಲುವೆವೆಂದು ಬೆದರಿಕೆ ಹಾಕಿದರಂತೆ. ಕೂಡಲೇ ಪಂಚರು ಪೋಲೀಸ ಸಾಹೇಬರನ್ನು ಕರೆದರು! ಯಾವ ಗಾಯಕವಾದರ ವಾಡೇದಲ್ಲಿ, ಮಾಜಿಯು, ಮುಖ್ಯರಾಷ್ಟ್ರದ, ಅನೇಕ ಅಖಂಡ ಭರತಖಂಡದ ರಾಜಕಾರಣಗಳು ಒಳ್ಳೇ ಸ್ಫೂರ್ತಿಯಿಂದ ನಡೆಯುತ್ತಿದ್ದವೋ, ಆ ವಾಡೇದಲ್ಲಿ ಪೋಲೀಸಸಾಹೇಬರು ಕಾಲಿಡುವಂಥ ಒಳ್ಳೇ ಲಾಂಛನಾಸ್ಪದವಾದ ಪ್ರಸಂಗವು ಬಂದಿದೆ! ಪೋಲೀಸ ಸಾಹೇಬರು ಬಂದು, ಚೌಕಶಿ ಮಾಡಲು, ಕೊಲೆಯ ಬೆದರಿಕೆಯನ್ನು ತಾವೆಂದೂ ಹಾಕಿಲ್ಲವೆಂದು ಮಕ್ಕಳು ಹೇಳಿದರು. ಆದರೆ ತಾವು ಕಾಲೇಜಿನಲ್ಲಿರುವಾಗ್ಗೆ ಪಂಚರು ೩ ಲಕ್ಷ ರೂ. ಗಳನ್ನು ಅನ್ಯಾಯವಾಗಿ ತಿಂದರೆಂದೂ, ಆ ಬಗ್ಗೆ ಓರ್ವ ಪಂಚರ ಮೇಲೆ ೪೫ ಸಾವಿರ ರೂ. ದಾವೆ ಮುಂಬಯಿ ಹೈಕೋರ್ಟಿನಲ್ಲಿ ಹೂಡಲ್ಪಟ್ಟಿದೆಯೆಂದೂ, ಈ ಕಾರಣಕ್ಕಾಗಿ, ಪರಸ್ಪರರಲ್ಲಿ ಘೋರವಾಗಿ ಬಡದಾಟ ಮಾತ್ರ ಆಗಿದ್ದು ನಿಜವೆಂದೂ ಟಿಳಕ ಬಂಧುಗಳು ಹೇಳಿದ್ದಾರೆ. ಕೊಲೆ ಬೆದರಿಕೆಯ ಬಗ್ಗೆ ಸಾಕ್ಷಿ ಇವೆಯೆಂದೂ, ಪೋಲೀಸರು ತಮ್ಮನ್ನು ಸಂರಕ್ಷಿಸಬೇಕೆಂದೂ ಡಾ| ವಿ. ಗೋಖಲೇ ಎಂಬವರು ಪೋಲೀಸರಿಗೆ ತಿಳಿಸಿದ್ದಾರೆ! ಎಂತಹ ವಿಪರೀತಕಾಲವಿದು!!!

ಸ್ಯಾಕೋ ಮತ್ತು ವೆಂಝೆಟ್ಟೀ.

ಇವರಿಬ್ಬರೂ ಇಟಲಿಯ ದಂಗೆಗಾರರು ಅಮೇರಿಕೆಯಲ್ಲಿರುತ್ತಿದ್ದರು ೧೯೨೦ ರಲ್ಲಿ ಓರ್ವ ಕಾರಕೂನ ಹಾಗೂ ಸೇವಕನನ್ನು ಕೊಂದರೆಂಬದಾಗಿ ಇವರು ಹಿಡಿಯಲ್ಪಟ್ಟರು. ಅಗ್ಗೆ ಅಮೇರಿಕೆಯಲ್ಲಿ ನಡೆದ ರಾಜಕಾರಣದಲ್ಲಿ ಇವರು ಪ್ರಮುಖಭಾಗ ತೆಗೆದುಕೊಳ್ಳುತ್ತಿದ್ದರು. ಇದು ಸರಕಾರಕ್ಕೆ ರುಚಿಸಲಿಲ್ಲ. ಆದುದರಿಂದಲೇ ಈ ಕೊಲೆಯ ಅಪವಾದವನ್ನು ಸುಳ್ಳಾಗಿ ಹೊರಿಸಿ, ಇವರನ್ನು ಬಂಧನದಲ್ಲಿಟ್ಟಿರುವರೆಂದು ಜನರೆಲ್ಲ ತಿಳಿದರು. ಮುಂದೆ ಇವರೇ ಕೊಲೆಗಾರರೆಂದು ಕೋರ್ಟಿನಲ್ಲಿ ಗೊತ್ತಾಯಿತು. ಅಪೀಲುಗಳ ಮೇಲೆ ಅಪೀಲುಗಳಾದವು. ಪ್ರಮುಖ ಜನರು ಸಹ ಅಮೇರಿಕಾ, ಯುರೋಪಗಳಲ್ಲಿ ಇವರ ಸಂರಕ್ಷಣೆಗಾಗಿ ಹಣಕೊಟ್ಟರು. ಅಷ್ಟರಲ್ಲಿ ನಿಜವಾದ ಕೊಲೆಗಾರನು ನಾನೇ ಎಂದು ತುರುಂಗದಲ್ಲಿದ್ದ ಬೇರೆ ಕೈದಿಯು ಹೇಳಿದನು. ಆದರೂ ಸರಕಾರವು ಅವುದನ್ನೂ ನಂಬದೇ, ೭ ವರ್ಷ ತುರುಂಗದಲ್ಲಿಟ್ಟು, ಕಳೆದ ವಾರದಲ್ಲಿ ಸ್ಯಾಕೋ ಹಾಗೂ ವೆಂಝೆಟ್ಟೀ ಇವರನ್ನು ಗಲ್ಲಿಗೇರಿಸಿದರು. ಇತ್ತ ಜನರ ಚಳವಳಿಯು ನಡೆದೇ ಇದೆ. ಇದನ್ನು ಅಮೇರಿಕೆಯ ಸರಕಾರವು ಲೆಕ್ಕಿಸಲೇ ಇಲ್ಲ. ಆದುದರಿಂದ ಇಟಲಿ, ಫ್ರಾನ್ಸ ದೇಶಗಳಲ್ಲಿ ಅಮೇರಿಕೆಯ ವಸ್ತುಗಳಿಗೆ ಬಹಿಷ್ಕಾರ ಹಾಕಬೇಕಾಗಿ ಚಳವಳಿ ನಡೆದಿದೆ. ಅಮೇರಿಕೆಯ ಸರಕಾರದ ವಿರುದ್ಧವಾದ ಈ ಚಳವಳಿಯು ಇಷ್ಟಕ್ಕೇ ಇನ್ನು ಮೇಲಾದರೂ ಶಾಂತವಾಗುವದೋ ಅಥವಾ ಅದು ವಿಕೋಪಕ್ಕೆ ಹೋಗಿ, ಯುದ್ಧವೇ ಉದ್ಭವವಾಗುವದೋ ನೋಡಬೇಕು. ಏನೇ ಆಗಲಿ, ೭ ವರ್ಷ ತುರುಂಗದಲ್ಲಿ ಇವರನ್ನಿಟ್ಟದ್ದು ಸಾಕಾಗಿತ್ತು, ಆದರೂ ಅಮೇರಿಕೆಯು ಇವರನ್ನು ದೀರ್ಘಕ್ಕೆ ಒಯ್ದದ್ದು ಸಮಂಜಸವಲ್ಲ!

ಅತಿವೃಷ್ಟಿಯ ಹಾಹಾಕಾರ.

ಉತ್ತರ ಹಿಂದುಸ್ಥಾನ, ಮಧ್ಯ ಹಿಂದುಸ್ಥಾನಗಳ ಅನೇಕ ಭಾಗಗಳಲ್ಲಿ ಅತಿವೃಷ್ಟಿಯಿಂದ ಭಯಂಕರವಾದ ಹಾನಿಯಾಗಿದೆ. ಆಸಾಮದಲ್ಲಿ ವಿಪರೀತವಾದ ಮಳೆಯಿಂದ, ನದಿಗೆ ನೆರೆಬಂದು ಚಹದ ತೋಟಗಳು ಹಾಳಾದವು. ಸಿಂಧದಲ್ಲಿ ಮಹಾಪೂರ ಬಂದು ಬೆಳೆಗಳೂ, ದನಕರುಗಳೂ, ಹಳ್ಳಿಗಳೂ ತೇಲಿದವು. ಗುಜರಾತ ಕಾಠೇವಾಡ ಜಮಕೇತ ಪುರಗಳಲ್ಲಿ ಅನೇಕ ದಿನಗಳವರೆಗೆ ನಗರಗಳೂ, ಹಳ್ಳಿಗಳೂ ನೀರಿನಲ್ಲಿ ನಿಂತದ್ದರಿಂದ, ಮನುಷ್ಯರ ಹಾಗೂ ದನಗಳ ಪ್ರೇತದೇಹಗಳು ಅಲ್ಲಲ್ಲಿ ನಿಂತು, ಮನೆಗಳೂ ಬಿದ್ದು, ಬೆಳೆಗಳು ಹಾಳಾಗಿ, ಗ್ರಾಮಗಳಲ್ಲಿ ಭಯಂಕರವಾದ ಹಾನಿಯಾಗಿದೆ. ದಿಲ್ಲಿ, ಪಾಟಣಾ, ಕಾಶಿ, ಪ್ರಯಾಗಗಳಲ್ಲಿ ನದಿ ನೆರೆಯಿಂದ ಜನರೂ, ದನಕರುಗಳೂ, ನಾಶಹೊಂದಿದ ಸುದ್ದಿ ಬಂದಿದೆ. ಪುಣೆ, ಮುಂಬಯಿ, ಉತ್ತರ ಕರ್ನಾಟಕಗಳಲ್ಲಿಯೂ ಇದೇ ಬಗೆಯಿಂದ ವಿಪರೀತವಾದ ಮಳೆಯಾಗಿ, ಜನರೆಲ್ಲ ತೊಂದರೆಗೀಡಾಗುವರೆಂದು ಭವಿಷ್ಯವಿದೆಯಂತೆ. ಹೊರಬಿದ್ದ ಹೊರಬೀಳುವದು ಯಾವಾಗಲೋ ನೋಡುವಾ.

ನೆರೆಹಾವಳಿಯ ಸಮಾಚಾರ.

ಕಲಕತ್ತಾ ಮದ್ರಾಸ ಬೆಂಗಳೂರಲ್ಲಿ ಸಭೆಗಳಾಗಿ ಗುಜರಾತ ಕಾಠೇವಾಡಗಳ ನಿರಾಶ್ರಿತ ಬಾಂಧವರ ಸಹಾಯಕ್ಕಾಗಿ ಹಣ ಕೂಡಿಸುವ ಕಾರ್ಯ ನಡೆದಿದೆ.

ದುಷ್ಕಾಳದ ನಿಧಿಯಿಂದ ೧ ಕೋಟಿ ರೂ. ಸಾಲವನ್ನು ಮನೆ ಕಟ್ಟಲಿಕ್ಕೆ ಕೊಡಬೇಕಾಗಿ ಅಹಮದಾಬಾದಿನ ಜನರು ಮುಂಬಯಿ ಸರಕಾರಕ್ಕೆ ಕೇಳಿದರು; ೯೦ ಲಕ್ಷ ರೂಪಾಯಿ ಸರಕಾರವು ಒಪ್ಪುವ ಲಕ್ಷಣವಿದೆ.

ಪುಣೆಯ ಮಧ್ಯವರ್ತಿ ಸಹಕಾರ ಸಂಘದವರು ಬಡವರಿಗೆ ಮನೆ ಕಟ್ಟಲು ೩ ಲಕ್ಷ ರೂ. ಕೊಡಬೇಕೆಂದು ನಿರ್ಧರಿಸಿರುವರು.

ಸಾಮದಾರ ಪಟೇಲರು ತಮ್ಮ ಪಗಾರದ ಉಳಿಕೆಯಲ್ಲಿಯ ೧೦ ಸಾವಿರ ರೂ. ಕೊಟ್ಟಿರುವರು. ವ್ಯಾಡಿಯಾ ಸರದಾರರು ೫೦೦ ರೂ. ಮಾತ್ರ ಕೊಟ್ಟಿದ್ದಾರೆ.

ಅಹಮದಾಬಾದಿನ ನಾಗರಿಕರು ಅಲ್ಲಿಯ ನಿರಾಶ್ರಿತರ ಸಹಾಯಕ್ಕಾಗಿ ಎಷ್ಟು ಹಣ ಕೂಡಿಸುವರೋ, ಅಷ್ಟೇ ಯಾರ್ಡ ಹೊಸ ಬಟ್ಟೆಯನ್ನು ತಾವು ಕೊಡುವೆವೆಂದು ಅಹಮದಾಬಾದ ಮಿಲ್ಲಿನ ಸಂಘದವರು ಅಂಗೀಕರಿಸಿದ್ದಾರೆ.

ಬಡೋದೆಯ ಮಹಾರಾಣಿಯವರು ೨೦ ಸಾವಿರ ರೂ. ಗಳನ್ನು ಯುರೋಪದಿಂದ ತಂತಿಮೂಲಕವಾಗಿ ನಿರಾಶ್ರಿತರಿಗಾಗಿ ಕಳಿಸಿದ್ದಾರೆ. ರಾಜಕುಮಾರರೂ ೧೦ ಸಾವಿರ ರೂ. ಕೊಟ್ಟಿದ್ದಾರೆ.

ಮುಂಬೈ ಸರಕಾರದ ಮಂತ್ರಿಗಳೂ, ಕಾರ್ಯಕಾರೀ ಮಂಡಲದ ಸಭಾಸದರೂ ನೆರೆಹಾವಳಿಯ ಪ್ರದೇಶವನ್ನು ಪ್ರತ್ಯಕ್ಷವಾಗಿ ಸಂದರ್ಶಿಸಿ ಬಂದರು

ಮುಂಬೈ ಸರಕಾರದ ಪಬ್ಲಿಕ್‌ವರ್ಕ್ಸ ಇಲಾಖೆಗೆ ನೆರೆಹಾವಳಿಯಿಂದ ೪ ಲಕ್ಷ ರೂ. ಹಾನಿತಟ್ಟಿದೆ

ಗುಜರಾತದಲ್ಲಿ ನಿರಾಶ್ರಿತರಿಗೆ ಸಹಾಯಮಾಡಲು ಮುಂಬೈ ಸರಕಾರದವರು "ನೆರೆಹಾವಳಿ- ನಿವಾರಣೆಯ ಅಮಲದಾರ"ರನ್ನು ನೇಮಿಸಿದ್ದು, ಅವರು ಅಹಮ್ಮದಾಬಾದಿನಲ್ಲಿ ಕಚೇರಿಮಾಡುವರು. ಗ್ಯಾಝೆಟ್ ಸುಪೇರ್‌ಟರ ಅಸ್ಥಾನದ ಅಧಿಕಾರಿಗಳು

ಜಿಲ್ಲೆಗಳೂ ಮಳೆಬೆಳೆಗಳೂ.

ವಿಜಾಪುರ ಮಳೆ ಎಲ್ಲ ಕಡೆಗೂ ಅವಶ್ಯವಾಗಿ ಬೇಕಾಗಿದೆ ಅನೇಕ ಕಡೆಗೆ ಬೆಳೆಗಳು ಒಣಗುತ್ತಲಿವೆ ಹತ್ತಿ ಬಿತ್ತುವ ಮಾತಂತೂ ದೂರೇ ಉಳಿಯಿತು. ಸಿಂದಗಿ, ಬಾಗೇವಾಡಿ, ಬೀಳಗಿಗಳ ಕೆಲವು ಭಾಗಗಳಲ್ಲಿ ಕುಡಿಯುವ ನೀರೂ ಇಲ್ಲ.

ಬೆಳಗಾವಿಯಲ್ಲಿ ೯೦ ಸೆಂಟು ಮಳೆಯಾಗಿದೆ. ಚಂದಗಡದಲ್ಲಿ ೨॥ ಇಂಚು. ಉತ್ತರ ಪಶ್ಚಿಮಭಾಗಗಳಲ್ಲಿ ಮಳೆಯಿಲ್ಲವೇಯಿಲ್ಲ. ಕೆಲವು ಕಡೆಯಲ್ಲಿ ಹತ್ತಿಬಿತ್ತುತ್ತಲಿರುವರು ಸಂಪಗಾವಿ, ಪರಸಗಡ ತಾಲೂಕಗಳಲ್ಲಿ ಜಿಟ್ಟೆಗಳ ಉಪದ್ರವವು ಹೆಚ್ಚಾಗಿದೆ.

ಧಾರವಾಡದಲ್ಲಿ ೩೦ ಸೆಂಟು. ಮುಂಡರಗಿಯಲ್ಲಿ ೭೦ ಸೆಂಟು; ಬೆಳೆಗಳು ಚೆನ್ನಾಗಿವೆ ಕೆಲವಡೆ ಹತ್ತಿ ಬಿತ್ತುವದು ಪ್ರಾರಂಭವಾಗಿದೆ. ಜೋಳ ಗೋದಿಗಳ ಬಗ್ಗೆ ಭೂಮಿಯು ಹದಮಾಡಲ್ಪಟ್ಟಿದೆ ಕೆಲವು ತಾಲೂಕಗಳಲ್ಲಿ ಚಿಟ್ಟೆ ಮಾತ್ರ ಹತ್ತಿವೆ.

ಕಾರವಾರದಲ್ಲಿ ೧॥ ಇಂಚು ಮಳೆ; ಸಿದ್ಧಾಪುರದಲ್ಲಿ ೨ ಇಂಚು; ಮುಂಡಗೋಡದಲ್ಲಿ ೮೫ ಸೆಂಟು; ಎಲ್ಲಕಡೆಗೂ ಸಾಕಷ್ಟು ಮಳೆ ಸಕಾಲಕ್ಕೆ ಆಗಿದೆ. ಭತ್ತದ ಸಸಿಗಳನ್ನು ಕೆಲವಡೆ ಕಿತ್ತಿ ನಾಟುತ್ತಲಿದ್ದಾರೆ ಭತ್ತ, ಕಬ್ಬು, ಹಾಗೂ ತೋಟದ ಬೆಳೆಗಳು ಒಳ್ಳೇ ಸ್ಥಿತಿಯಲ್ಲಿವೆ.

ಕೊಲ್ಹಾಪುರದಲ್ಲಿ ೧೫ ಇಂಚು ಮಳೆ; ಕನ್ನಡ ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ಆದರೆ ಇನ್ನೂ ಬೇಕು. ಸಧ್ಯಕ್ಕೆ ಬೆಳೆಗಳು ಚೆನ್ನಾಗಿವೆ; ಆದರೆ ಈ ವಾರದಲ್ಲಿ ಮಳೆಯಾಗದಿದ್ದರೆ, ಬಾಡುವವು.

ಸಾತಾರೆ. ಕನ್ನಡ ಭಾಗದಲ್ಲಿ ಸಾಕಷ್ಟು ಮಳೆಯಿಲ್ಲ; ತಾಸಗಾವಿ ವಾಳವಾ ಎರಡೂ ಕನ್ನಡ ತಾಲೂಕಗಳಲ್ಲಿ ಬೆಳೆಗೆ ಜಿಟ್ಟೆಗಳು ಹತ್ತಿವೆ.

ದ. ಕರ್ನಾಟಕ ಸಂಸ್ಥಾನಗಳು ಕುರುಂದವಾಡದಲ್ಲಿ ಕೊಂಚ ಮಳೆಯಾಗಿದೆ. ಉಳಿದಲ್ಲಿ ಮಳೆ ಬೇಕಾಗಿದೆ. ಬೆಳೆ ಚೆನ್ನಾಗಿವೆ. ಆದರೆ ಕೆಲವೆಡೆಯಲ್ಲಿ ಜಿಟ್ಟೆಗಳು ಹತ್ತಿವೆ. ತೇರದಾಳ ಶಿರಹಟ್ಟಿ ಕುಂದಗೋಳ, ಜಮಖಂಡಿ ತಾಲೂಕಗಳಲ್ಲಿ ಕುಡಿಯುವ ನೀರಿನ ಕೊರತೆಯಿದೆ

ಶ್ರೀ ಮಂತ್ರಾಲಯದ ಉತ್ಸವವು.

(ನಮ್ಮ ಪ್ರತಿನಿಧಿಯಿಂದ)

ಪ್ರತಿ ವರ್ಷದಂತೆ ಈ ಸಲವೂ ಶ್ರೀ ರಾಘವೇಂದ್ರ ಗುರುಗಳ ಆರಾಧನೆಯು ಬಹು ವಿಜೃಂಭಣೆಯಿಂದ ನೆರವೇರಿತು ಶ್ರೀ ಶ್ರೀ. ಸುಪ್ರತೀಂದ್ರ ಶ್ರೀಗಳವರೂ ದಯಮಾಡಿಸಿದ್ದರು. ಶ್ರೀಮಾನ್ ಯಲತೂರ ಕೃಷ್ಣಾಚಾರ್ಯ, ಹೊಳವನಹಳ್ಳಿ ಶೇಷಾಚಾರ್ಯ ಪ್ರಭೃತಿಗಳೂ ಬಂದಿದ್ದರು. ಇಲ್ಲಿ ಮಾರಿಕಾ ಬೇನೆಯೆಂಬ ಸುದ್ದಿಯಾಗಿದ್ದರಿಂದ ಜನರು ಹೆಚ್ಚಾಗಿ ನೆರೆಯಲಿಲ್ಲ ೨೦೦೦ ಭಕ್ತರು ಮಾತ್ರ ಬಂದಿದ್ದರು ಮೊದಲು ಬಹಳೇ ಮಳೆಯಾಗಿ ತೊಂದರೆಯಾಯಿತು ಅದುದರಿಂದ ಶ್ರೀಗಳವರು ರಾಯರನ್ನು ಪ್ರಾರ್ಥಿಸಿ, ಮೂರುದಿನ ಮಳೆಯಾಗಬಾರದೆಂದು ಮುಡುಪು ತೆಗೆದಿಟ್ಟರು. ರಾಯರ ಮಹಿಮೆಯಿಂದ ಮುಂದೆ ೩ ದಿನ ಮೇಘರಾಜನು ಭಕ್ತರಿಗೆ ಏನೂ ತೊಂದರೆ ಕೊಡಲಿಲ್ಲ.

ಶ್ರೀ. ಹೊಳವನಹಳ್ಳಿ ಶೇಷಾಚಾರ್ಯರು ಪ್ರತಿಪದೆಯ ದಿನ ಭಾಗವತದ ಮಂಗಳವನ್ನು ಮಾಡಿದರು. ವೇದಾಂತ ಶಾಸ್ತ್ರದಲ್ಲಿ ಪಾರಂಗತರಾದ ಆಚಾರ್ಯರ ಪುರಾಣವು ಸುಶ್ರಾವ್ಯವಾಗಿದ್ದಿತು! ಶ್ರೀಗಳವರೂ, ಉಳಿದ ಭಕ್ತರೂ ಅವರಿಗೆ ಚೆನ್ನಾಗಿ ಮನ್ನಣೆಮಾಡುತ್ತಿದ್ದರು; ಸಾಯಂಕಾಲದಲ್ಲಿ ರಾಯರ ಮಹಾತ್ಮೆಯೂ ಈ ಆಚಾರ್ಯರವರಿಂದ ಹೇಳಲ್ಪಡುತ್ತಿತ್ತು

ಶ್ರೀ ಮೂಲರಾಮದೇವರ ಪೂಜೆ, ತೀರ್ಥಪ್ರಸಾದ, ಅಲಂಕಾರ, ಬ್ರಾಹ್ಮಣರಿಗೆ ಮಿಷ್ಟಾನ್ನ ಭೋಜನ, ವಾಹನೋತ್ಸವಗಳು ಅತ್ಯಂತ ಆಹ್ಲಾದಕರವಾಗಿದ್ದವು ಪ್ರದಕ್ಷಿಣೆ, ನಮಸ್ಕಾರ, ಜಪ, ಪಾರಾಯಣಾದಿಗಳನ್ನು ಭಕ್ತರೆಲ್ಲ ಅತ್ಯಂತ ಭಕ್ತಿ ವಿಶ್ವಾಸಗಳಿಂದ ದಿನಾಲು ಜರಗಿಸುತ್ತಿರುವದನ್ನು ಕಂಡರೆ, ಎಂತಹ ಕಠೋರ ಹೃದಯದ ನಾಸ್ತಿಕಶ್ರೇಷ್ಠರೂ, ಅವನಲ್ಲಿ ಆಸ್ತಿಕ್ಯಬುದ್ಧಿಯು ಹುಟ್ಟುತ್ತಿತ್ತು! ಇಂತಹ ಪವಿತ್ರವಾದ ನೋಟವನ್ನು ಪ್ರತ್ಯಕ್ಷವಾಗಿ ನೋಡಿಯೇ, ಅದರ ಸುಖವನ್ನನುಭವಿಸಬೇಕಲ್ಲದೇ, ವರ್ಣನೆಯಿಂದಾಗದು!

ಮುಂಬೈ ಸರಕಾರದ ಗ್ಯಾಝೇಟ.

ಎನ್. ಎಸ್. ಕುಲಕರ್ಣಿಯವರು ಧಾರವಾಡದ ಜಿಲ್ಲೆಯ ಲ್ಯಾಂಡ ರೆಕಾರ್ಡ್ಸದ ಇನ್‌ಸ್ಪೆಕ್ಟರರಾಗುವರು; ಅವರ ಬೆಳಗಾವಿಯ ಸ್ಥಳಕ್ಕೆ ಎಸ್. ಭಾಗವತರು ಬರುವರು, ಪುಣೆಯಲ್ಲಿದ್ದ ಡಿ ಯಸ್. ಧರ್ಮಾಟ್ಟೆಯವರು ರತ್ನಾಗಿರಿ ಜಿಲ್ಲೆಯ ಇನ್‌ಸ್ಪೆಕ್ಟರರಾಗುವರು

ಸಗ್ಗೀಹಳ್ಳಿ ನರಸಿಂಹ ಅಯ್ಯಂಗಾರರು ಪಬ್ಲಿಕ್ ವರ್ಕ್ಸ ಇಲಾಖೆಯ ಮುಂಬೈ ಸರಕಾರದ ಅಂಡರ ಸೆಕ್ರೆಟರಿಗಳಾಗುವರು. ಧಾರವಾಡ ಇರಿಗೇಶನ್ ಭಾಗಕ್ಕೆ ಟಪ್ಪುರೂ, ಕಾರವಾರದ ಭಾಗಕ್ಕೆ ರೇಗೇಯವರೂ ನೇಮಿಸಲ್ಪಟ್ಟಿದ್ದಾರೆ.

ಮಾರಿಕಾದ ವರದಿ.

ಉತ್ತರ ಕರ್ನಾಟಕದಲ್ಲಿ ಈ ಬೇನೆಯು ಕಡಿಮೆಯಾಗುತ್ತಲಿದೆ. ಕಳೆದವಾರದಲ್ಲಿಯ ವಿವರ:- ಧಾರವಾಡ ಜಿಲ್ಲಾ, ೨ ಬಂದದ್ದು; ೧ ಸತ್ತದ್ದು; ಬೆಳಗಾವ ಜಿಲ್ಲಾ, ೨೩ ಮತ್ತು ೧೫; ವಿಜಾಪುರ ಜಿಲ್ಲಾ, ೧೦ ಮತ್ತು ೫೦; ಸಾಂಗಲಿ ಒಂದು ಬಂದದ್ದು; ಜಮಖಂಡಿ ೧೫ ಮತ್ತು ೧; ಕುರುಂದವಾಡ ೧೭ ಮತ್ತೂ ೭.

ವ್ಯಾಪಾರದ ವಿಷಯ.

ಮುಂಬೈ ತಾ॥ ೨೫-೮-೨೭

ಬಂಗಾರ, ೨೧-೮-೯; ಬೆಳ್ಳಿ, ೫೭ ರೂ. ಪೌನ, ೧೩-೮-೦; ಸರಕಾರೀ ಪ್ರಾಮಿಸರಿ ನೋಟು, ೭೫-೮-೦

ಇಹವೃತ್ತ.

ಮಳೆಯ ದರ್ಶನವೇಯಿಲ್ಲ. ಬೆಳೆಗಳು ಒಣಗುತ್ತಲಿವೆ ಈ ವಾರದಲ್ಲಿಯೂ ಮೇಘರಾಜನ ಕೃಪೆಯಾಗದಿದ್ದರೆ ನಮ್ಮ ಜಿಲ್ಲೆಗೆ ಬರಗಾಲವು ಮತ್ತೆ ಕಟ್ಟಿಟ್ಟಂತೆಯೇ.

ಹಿಂ. ಸೇ. ದಳದ ವತಿಯಿಂದ ಶ್ರೀ ನೀರಲಕೇರಿಯವರು ಊರಲ್ಲೆಲ್ಲ ತಿರುಗಾಡಿ, ಗುಜರಾತದ ನಿರಾಶ್ರಿತರಿಗಾಗಿ ಬಟ್ಟೆಗಳನ್ನು ಕಲೆಹಾಕಿ, ಅವನ್ನು ಮುಂಬೈಗೆ ಕಳುಹಿಸಿದರು. ಶೇಠ ಕಲ್ಯಾಣಜಿ ಮೇಲಜಿ ಧರ್ಮಸಿಯವರು ೩೦೦ ಮಳೆಯ ನಿಲುವಂಗಿಗಳನ್ನು (ರೇನ್‌ಕೋಟ) ಕೊಟ್ಟಿದ್ದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ. ಅದೇ ಪ್ರಕಾರವಾಗಿ ಭಿಕ್ಷೆಯ ಕಾಲಕ್ಕೆ ಶ್ರೀಯುತರುಗಳಾದ ನರಗುಂದ ಜಯರಾವ, ಜೋರಾಪುರ, ಕೃಷ್ಣರಾವ, ಗುರುರಾವ, ಕಂಚಿ ಇತ್ಯಾದಿ ಉತ್ಸಾಹಿಗಳು ಈ ಕಾರ್ಯಕ್ಕೆ ನೆರವಾಗಿದ್ದರಿಂದ ಅವರಿಗೆ ತಮ್ಮ ಧನ್ಯವಾದಗಳನ್ನು ಶ್ರೀ ನೀರಲಕೇರಿಯವರು ಅರ್ಪಿಸುತ್ತಾರೆ. ಬಟ್ಟೆಗಳ ಹೊರತಾಗಿ, ಭಿಕ್ಷಾಪಟ್ಟಿಯಲ್ಲಿ ೮-೬-೦ ಜಮೆಯಾಗಿವೆ. ಆದರೆ ಪಾರ್ಸಲ್ ವೆಚ್ಚ, ಎಕ್ಕಾ, ಮುದ್ರಣಗಳಿಗಾಗಿ ಉಜಮಾಸ ೧೨ ರೂ ವೆಚ್ಚವಾಗಿದೆ, ಬಟ್ಟೆಗಳನ್ನು ಉದಾರ ಬುದ್ಧಿಯಿಂದ ಕೊಟ್ಟದ್ದಕ್ಕಾಗಿ ಬಾಗಲಕೋಟೆಯ ನಾಗರಿಕರನ್ನು ನಾವು ಅಭಿನಂದಿಸುತ್ತೇವೆ; ಆದರೆ ಕೇವಲ ೮-೬-೦ ಜಮೆಯಾಗಿದ್ದಕ್ಕಾಗಿ ವಿಷಾದಿಸಬೇಕಾಗಿದೆ.

ಬರಗಾಲ- ಪ್ರತಿಬಂಧಕ್ಕಾಗಿ ನಿನ್ನೆದಿನ ಮೇ॥ ಹಿರೇಮಠ ಸಾ॥ ಅಧ್ಯಕ್ಷತೆಯಲ್ಲಿ ಸಭೆಯಾಯಿತು ಈ ಬಗ್ಗೆ ಹೆಚ್ಚಿನ ವೃತ್ತಾಂತ ಮುಂದಿನ ಸಲ

ಶೀಘ್ರದಲ್ಲಿಯೇ ಬರುತ್ತಾರೆ! ಅಪೂರ್ವ ಸಮಯ!!

ಮೈಸೂರು ದೇಶದ ಸುಪ್ರಸಿದ್ಧವಾದ

ವಿನೋದ ರತ್ನಾಕರ ಜಿ. ಎಚ್. ವೀರಣ್ಣನವರ

ಗುಬ್ಬಿ ಶ್ರೀಚನ್ನಬಸವೇಶ್ವರ ನಾಟಕ ಸಂ.

ಹುಬ್ಬಳ್ಳಿಯಲ್ಲಿರುವ ಮಲ್ಲಿಕಾರ್ಜುನ ನಾಟಕ ಮಂದಿರದಲ್ಲಿ ೧೯೨೭ನೇ ಸಪ್ಟೆಂಬರ ಮಾಹೆ ಮೊದಲನೇ ವಾರದಿಂದ ತಮ್ಮ ಅಮೋಘವಾದ ನಾಟಕಗಳನ್ನಾಡುವರು. ಕರ್ನಾಟಕ ದೇಶ ಮತ್ತು ಭಾಷಾಭಿಮಾನಿಗಳೆಲ್ಲರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಗುಣ ಬರದಿದ್ದರೆ ಹಣ ಮರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕ'ವು ಉತ್ತಮ ವನಸ್ಪತಿ ಚೂರ್ಣ ದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿಮಾಂದ್ಯ ಕೃಶತ್ವ, ದಮ್ಮು ಮತ್ತು ಕೆಮ್ಮು ನಗೈರೆ ವಿಕಾರಗಳೂ, ನಾಶ ವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗು ವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂ ಸಕತ್ವವು ಎಂದೂ ಇರುವದಿಲ್ಲ. (ಐಳೇ ದಿವಸ ತಕ್ಕೊಂಡು ಖಾತ್ರಿ ಮಾಡಿಕೊಳ್ಳಬಹುದು.) ಇದರಿಂದ ವೀರ್ಯದ ವಿಗರಮಿಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌ ಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೆ ಯೋಗ್ಯತೆಯು ಸೇ ವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿ ಕಮಿಶನು ಸಿಗುವದು. ಪೂರ್ಣ ಗುಣ ಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ —

ಎಸ್. ಬಿ. ಕದಮ್ ಮತ್ತು ಸನ್ಸ್

ಮು. ಪೋಷ್ಟ ನಿಪ್ಪಾಣಿ (ಜಿ. ಬೆಳಗಾವ)

ಕರ್ನಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯವು ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ಮಹಾಕನ್ಯಾಲಯ ಸ್ಕೂಲ ಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರುವದಕ್ಕೆ ಶಕ್ಯವಿದ್ದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಚರಕ ಕೆಲಸ ಮುಂ ತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನು ಕೂಲವಾದ ವಸತಿಗೃಹವೂ ಇರುವದು. ಯೋಗ್ಯರಾದ ಬಡವಿದ್ಯಾ ರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾ ಗುವದು

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಹೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ

ಸೌ॥ ಲಕ್ಷ್ಮೀಬಾಯಿ ಕುಂಭಕೋಣಂ,

ವ್ಯವಸ್ಥಾಪಕರು, ಕ. ಮ. ವಿದ್ಯಾಲಯ, ಧಾರವಾಡ.

ಬನಾರಸ್ ರೇಶ್ಮೇ ಶೀರೆಗಳು.

S.U.N.&CO.
BENARESCITY.

ನಮ್ಮಲ್ಲಿ ಉತ್ತಮತರದ ಎಲ್ಲಾವಿಧವಾದ ರೇಶ್ಮೀ ಮಾಲುಗಳನ್ನು ಕೊಳ್ಳುವವರಿಗೆ ವ್ಹಿ. ಪಿ. ಮೂಲಕ ಕಳುಹಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕ ಉದ್ದ ಮೊಳ ೧೪ ಅಗಲಿ ಮೊಳ ೩, ಥಾನು ೧ಕ್ಕೆ ೧೫ ರಿಂದ ೫೦ ಜರಿ ಶೀರೆಗಳು ೧೭-೧೮ ಮೊಳ ಉದ್ದ ೧ಕ್ಕೆ ರೂ. ೨೫ ರಿಂದ ೫೦ ರವರೆಗೆ. ಬುಟ್ಟೆದಾರ್ ಬನಾರಸ್ ಶೀರೆ ೧೭-೧೮ ಉದ್ದ ಮೊಳ ೭ ೧ಕ್ಕೆ ರೂ. ೫ ರಿಂದ ೩೦೦ ರ ವರೆಗೆ ಉಡುವೆ ಮಗುಟ ಉದ್ದ ೬-೮ ಮೊಳ ೧ಕ್ಕೆ ರೂ ೧೦ ರಿಂದ ೩೦ ರ ವರೆಗೆ ಜರೀದ್ದು ೬-೮ ಮೊಳ ಉದ್ದ ೧ಕ್ಕೆ ರೂ. ೧೧ ರಿದ ೪೦ ರ ವರೆಗೆ. ಬಿಳಿ ರೇಶ್ಮಿ ಜರೀದ-ಪ್ಪಟೆ ೬ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೩೦ ರವರೆಗೆ ಸಾದಾ ಬಂಗಾಳ ರೇಶ್ಮಿ ಶಾಲು ೬ ಮೊಳ ಉದ್ದ ೩ ಮೊಳ ಅಗಲು ೧ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಪಟಿಕದ ೧೦೮ ರ ಸರ ೧ಕ್ಕೆ ರೂ. ೧ ರಿಂದ ೧೦ ರ ವರೆಗೆ ಸುದರ್ಶನ ೧ಕ್ಕೆ ಆಣೆ ೮ ರಿಂದ ರೂಪಾಯಿ 1½ ರವರೆಗೆ ಜಗನ್ನಾಥಜಾಗಂಟೆ ೧ಕ್ಕೆ ರೂ. 2½ರಿಂದ 15 ರ ವರೆಗೆ ಮತ್ತು ಬೇರೆ ಬೇಕಾದವುಗಳ ಕೆಟಲಾಗಉಚಿತ

ವಿಳಾಸ-ಶಿರೋಮಣಿ ನಾರಾಯಣ-ಚಾರ್ಯ

ಕಂಪನಿ ಚೌಕಂಬಾ ಕಾಶಿ ಬನಾರಸ್

ಅತೀ ಸುಲಭ ಕಂತುಗಳು! ಫಲಿತಾಂಶವು ಹೆಚ್ಚು!

ದಿ. ಹಿಂದುಸ್ಥಾನ ಕೋಆಪರೇಟಿವ್ಹ

ಇನ್ಸುರೆನ್ಸ ಸೊಸೈಟಿ ಲಿಮಿಟೆಡ್.

(ಬ್ರಾಂಚ್- ಮುಂಬಯಿ) (ಹೆಡ್ ಆಫೀಸ- ಕಲ್ಕತ್ತಾ)

ಈ ಕಂಪನಿಯು ಇಡೀ ಹಿಂದುಸ್ಥಾನದಲ್ಲೆಲ್ಲಾ ಪ್ರಾಮುಖ್ಯ ತೆಗೆ ಬಂದ ಸ್ವದೇಶಿ ಕಂಪನಿಗಳಲ್ಲಿ ಒಂದಾಗಿದೆ. ಜನರ ಸೌಕರ್ಯ ಕ್ಕಾಗಿ ಈ ವಿಜಾಪೂರ ಜಿಲ್ಹೆಯೊಳಗೆ ಇದರ ಒಂದು ಶಾಖೆಯ ನ್ನಿಟ್ಟಿರುವರು. ಕಂತುಗಳು ಅತೀ ಸುಲಭ ಇದ್ದು, ಧಾರಾಳವಾಗಿ ಈ ಕಂಪನಿಯಲ್ಲಿ ನಿಮ್ಮ ಜೀವ ವಿಮೆಯನ್ನು ಇಳಿಸಬಹುದು.

ಇದರ ಮೂಲಧನವು ೮೫,೦೦,೦೦೦ ಇರುವದು. ೧೯೨೬-೨೭ ನೇ ವರ್ಷದಲ್ಲಿ ಸಾವಿರ ವರ್ಷಕ್ಕೆ ೧೫ ರೂ. ವಿಮೆಗೆ ರೂ. ೧೫ ರೂ. ದರ ಫಲಿತಾಂಶ ಕೊಟ್ಟಿರುವರು.

ಎಲ್ಲಾ ಕಡೆಯಲ್ಲಿ ಏಜಂಟರು ಬೇಕಿದ್ದಾರೆ.

ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿದಲ್ಲಿ ಹೆಚ್ಚಿನ ಮಾಹಿತಿ ತಿಳಿಯ ಬಹುದು.

ವಿಳಾಸ—

ವಿಜಾಪೂರ. ೨೪—೭—೨೭ | ಜಿ. ಆರ್. ಪಕ್ಕನವಳ್ಳಿ ಅಂಡ ಬ್ರದರ್ಸ್, ಚೀಫ ಏಜಂಟ್ಸ್, ವಿಜಾಪೂರ ಜಿಲ್ಹಾ

ಶ್ರೀ ಭಾರತ ಜಗತ್ಪ್ರಸಿದ್ಧ ಜಗ ಜಾಹೀರ ನೋಟೀಸು.

ಮೃತ್ಯುಂಜಯ ಔಷಧದಿಂದ ಮೂರೇ ತಾಸಿನಲ್ಲಿ ಗುಣವಿಲ್ಲೆಂದು ಸಿದ್ಧ ಮಾಡಿದವರಿಗೆ-೫೦೦ ರೂ. ಬಕ್ಷೀಸ ಕೊಡುವೆವು. ಮೂರೇ ತಾಸಿನಲ್ಲಿ ಗುಣ] ಶಕ್ಯವಿದ್ದಷ್ಟು ರಸಾಯನ ತಗ್ಗೆಂದು ಸಾಯುವದೇಕೆ? **[ಮೂರೇ ದಿವಸಗಳಲ್ಲಿ ರೋಗವು ಪೂರ್ಣ ಹೋಗುವದು.**

೫೦೦ ದ್ರವ್ಯ ವನಸ್ಪತಿಯಿಂದ ತಯಾರು ಮಾಡಿದ ಮೃತ್ಯುಂಜಯ ಔಷಧ.

ಉಪದಂಶ, ಗರ್ಮಿ (ಉಷ್ಣ) ಪರ್ಮಿ ಮುಂತಾದ ಏಳು ಪ್ರಕಾರದ ರೋಗ ಬಹುದಿನ ನೆಲಗೊಂಡದ್ದು ಶರೀರ ಕತ್ತರಿಸಿ ಬಿದ್ದರೂ ಮೂರು ದಿವಸಗಳಲ್ಲಿ ಗುಣವಾಗುವದು

ಇಂಥ ಪ್ರಕಾರ ರೋಗಗಳಿಂದ ಉತ್ಪನ್ನವಾಗುವ ವಿಕಾರ ಉಷ್ಣ ಪರಮ (ಉಪದಂಶ) ಗರ್ಮಿ ಚಟ್ಟಿ ಒಡೆದ ಗಂಟು, ನಾಡಿನಲ್ಲಿಯ ಗಂಟು, (ವೃಷಣ) ಅತಿಶಯ ಬಾವು, ಇಂದ್ರಿಯದ ಮೇಗೆ ತಿನಿಕೆ, ಹೊಡಕು, ರಕ್ತ ಕೀವು ಸುರಿಯೋಣ ಅದರಂತೆ ಸ್ತ್ರೀಯರ ಪ್ರದರ (ಕೀವು ಬಿಳಿ ಸೆರಗು) ಮೊಲೆ ಕುಟ್ಟರೋಗ ಬೆಳೆಯೋಣ, ಗರ್ಮಿ ವಿಕಾರಗಳಿಂದ ಗರ್ಭಾಶಯ ಕೆಡೋಣ, ಮೂತ್ರ ಕಣ್ಣು ಕಾಲು ಉರಿಯೋಣ, ಕಾವು ಹೆಚ್ಚಾಗಿ ಮಧುಮೇಹ ಮೈಮೇಲೆ ಗರ್ಮಿ (ಉಷ್ಣ) ಒಡೆದು ಕೀವು ಹೊರಬಿದ್ದು, ಅದರಿಂದ ವ್ರಣ (ಗಾಯ) ವಾಗಿ ಅಂಗಗಳಿಗೆ ತೂತು ಬಿದ್ದು ಮೂಗು ಕೂಡ್ರುವದೂ ಸೋರುವದೂ ಎಲ್ಲ ತರದ ಮೂಲವ್ಯಾಧಿ, ಹೊಟ್ಟೆ ಕಡತು ವಗೈರೆ ಕಾರಣಗಳಿಂದಾ ಜನನೇಂದ್ರಿಯ ಶಿಥಿಲತಾ ಅಥವಾ ನಪುಂಸಕತ್ವ ಮುಷ್ಟಿಮೈಥುನದಿಂದ ಆಗುವ ಪರಿಣಾಮ, ಸ್ವಪ್ನಾವಸ ಮೂತ್ರದಲ್ಲಿ ಧಾತು ಅಥವಾ ಖರ ಬೀಳೋಣ, ವೀರ್ಯ ತಿಳುವಾಗೋಣ, ಸ್ತ್ರೀಗಮನದಲ್ಲಿ ತೀಕು ಹತ್ತೋಣ. ಶೀಘ್ರ ವೀರ್ಯ ಪತನವಾ ಗೋಣ, ನಡಸೋವು (ಚೂಲಿ) ಸೋಯೋಣ, ಬೆನ್ನು ಬಿಗಿಯೋಣ, ಹಾಂವಿಕಾರ ಅವಿಚ್ಯಾರದಿಂದ ಮಾಡಿದ ವೀರ್ಯಪಾತ ವಗೈರೆ ರೋಗ ಗಳ ಮೇಲೆ ಅಶಿಕ್ಷಿತ ಅಡಾಣೀ ಜನರ ಕಡಿಯಿಂದ ಪಾರಜ ಮತ್ತು ರಸಕರ್ಪೂರ, ಇಂಗಳೀಕ ಮುಂತಾದ ಸವಿಷ ಮತ್ತು ಅಪಕ್ವ ಧಾತು ರೂಪ ಪದಾರ್ಥ (ರಸಾಯನ) ಮತ್ತು ಅಪಕಾರಕ ವಸ್ತು ಸೇವಿಸುವದರಿಂದ ಮೈಯೊಳಗೆ ರಸಾಯನ ಸಿಂಬು ಅದರಿಂದ ಕಾಲು ಕೈ ಮುಡಪಾಗಿ ಮತ್ತು ಕೈ ಕಾಲುಗಳಲ್ಲಿ ರಸಾಯನ ಒಡೆದು ಸ್ವತಃ (ತನಗೆ) ಮತ್ತು ಮುಂದಾಗುವ ತನ್ನ ಸಂತತಿಗೆ ಅನೇಕ ರೋಗವು ಉತ್ಪನ್ನವಾಗಿ ಅದರಿಂದ ಭಯಂಕರ ಪರಿಣಾಮ ಭೋಗಿಸಬೇಕಾಗುವದು ಇಂಥ ಪ್ರಕಾರದ ರೋಗಗಳು ಬಹಳ ದಿವಸ ನೆಲಗೊಂಡಿ ದ್ದಾಗಲೀ ಅಥವಾ ಹೊಸದಾಗಿ ಆದುದ್ದಾಗಲೀ ಇಂಥ ರೋಗಗಳ ಮೇಲೆ ಈ ನಮ್ಮ ಮೃತ್ಯುಂಜಯ ಔಷಧ ಉಪಯೋಗ ಮಾಡಿ ದರೆ ತತ್ ಸಂಬಂಧಿ ಸಂಪೂರ್ಣ ರೋಗಗಳು ತೀವ್ರವಾಗಿ ಹೋಗಿ ಮೈಯೊಳಗೆ ಇದ್ದ ರಸಾಯನವು ನಾಶವಾಗುವದು. ಮತ್ತು ಅಶಕ್ತಿ ಹೋಗಿ ಮೈಯೊಳಗೆ ಶಕ್ತಿ ಬಂದು ಪ್ರಕೃತಿ ಉತ್ತಮವಾಗುತ್ತದೆ ಒಂದು ಬಾಟ್ಲಿಗೆ [೫] ರೂಪಾಯಿ ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆಯು ಔಷಧದ ಸಂಗಡ ಲಾಭಕ್ಕೆ ಲಾಭ . ಒಂದು ಆಣೆ ಟಿಕಿಟು ಕಳಿಸಿದಲ್ಲಿ ನಮ್ಮ ಔಷಧದ ಪೂರ್ಣ ಕ್ಯಾಟಲಾಕ ಕಳಿಸುವೆವು. (ನಮ್ಮ ಪತ್ತೆ- ಪೂರ್ಣ ಬರೆಯಿರಿ.)

ಸುಪ್ರಸಿದ್ಧ ಡಾ|| ಆರ್. ಎಲ್. ಹಿರೇಮಠ ಆರೋಗ್ಯ ಮಂದಿರ ಆಯುರ್ವೇದ ವನೌಷಧಿ ಚಿಂತಾ, ಸಾಬಿರ ಕಾರಖಾನೆ. ಕಮತನೂ ಪೋ|| ಶಂಕೇಶ್ವರ ಜಿ|| ಬೆಳಗಾಂವ

EAT KASHMIR FRUITS & NUTS!

ಕಾಶ್ಮೀರದ ಹಣ್ಣು ಹಂಪಲುಗಳನ್ನು ಸೇವಿಸಿರಿ!

ತಿಳವಾದ ತೊಗಟೆಯ ತಾಜಾ ಅಕ್ರೋಡಗಳೂ, ಒರಿಸಿದ ಅಡವಿಯ ಸೇಂಗಗಳೂ, (Hazelnuts) ೧೧ ಪೌಂಡಿಗೆ ರೂ. ೫—೮—೦; ತಾಜಾ ಕಾಗದೀ ಬದಾಮು; ಹರಳಿಲ್ಲದ್ದೂ, ಬಲು ಸವಿಯಾದ ಜಲ್ದರು. (Apricots); ಅಂಜೂರಿ; ದ್ರಾಕ್ಷಿ; ಕಿಸಮಿಸು, ೧೧ ಪೌ. ಗೆ ೧೩ ರೂ. ; ಕಮಲದ ಶುದ್ಧವಾದ ಜೇನತುಪ್ಪ, ೫|| ಪೌ. ಗೆ ೮ ರೂ ; ಶುದ್ಧ ಕೇಶರ, ೧ ತೊಲೆಗೆ ೩ ರೂ ಟಪಾಲ ಖರ್ಚ ಮಾಫ!

ಡಾರ ಬ್ರದರ್ಸ ಶ್ರೀನಗರ, ಕಾಶ್ಮೀರ.

Dar Bros Srinagar, Kashmir.

ಭೂಲೋಕದ ಕಲ್ಪವೃಕ್ಷವು

ದೇವಲೋಕದ ಕಾಮಧೇನುವು ಹೇಗೆ ಬೇಡಿದ ವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಎಲ್ಲಾ ತರದ ಧನಾರ್ಥ ಕಾಮಮೋ ಕ್ಷಾದಿಗಳನ್ನು ಕೊಡುವ —

ಕ್ರಮವು ಇನಾಂ!!! ೫೦. ಹಾಸಬು

ಅಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ಶ್ರೀ ವಿದ್ಯಾ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಪ್ಪಾ ಬಾಲವಾಡಿ.
ಸ್ಟೇಶನರ್ಸ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ.
ಜಿ. ಟೀನಾಬಜಾರ್, ಮದ್ರಾಸು



ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

೧೯೩೭ನೇ ಜನವರಿ ೧೫ರಿಂದ ಪ್ರಾರಂಭ.



ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್ ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ-

೧. ನೀವು ನಮಗೆ ರೂ. ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಅಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್‌ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪುವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ ಗೋಲ್ಡ" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ.

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ವಿಕರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು. ಅಥವಾ ವಿ. ಪಿ ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಳೆದುಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಅಸೂಯೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೬-೮-೦ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್. ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರ ಸಿಟಿ.

ಯಾವುದೇ { ಆಕಾರದ / ಸಣ್ಣದು / ಸಂಖ್ಯೆಯ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ ೧೪. ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಒಳಗೆ ನಾವು ಈ ಬೆಲೆಯನ್ನು ಈ ವರ್ಷದಲ್ಲಿ ಮಾಡಿ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವುದೇ ಆಕಾರದ, ಚಿಕ್ಕದಾದ, ಸಂಖ್ಯೆಯ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ ಬೆಲೆ ರೂ ೭

ಕೆಲವೇ ಇವೆ; ಈಗಲೇ ಬರೆಯಿರಿ

ಪತ್ರ - ಸ್ವಾನ ಹೌಸ. ಪಿ. ಬಿ. ೫೦೮. ಪಿ. ಟಿ ಮದ್ರಾಸ

ಅತ್ಯಲ್ಪವಿದೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ ರಜಿಸ್ಟರ್ಡ ಪೊಕೆಟ್ ವೊಚ್ ೧೫ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ ೧೫ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವೊಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ. ಪಿ, ಬಿ. ಮದ್ರಾಸ. ೨೬೫

ಒಕ್ಕಲತನದ

ಸಾವಧಾನ! (ಅಗ್ರಿಕಲ್ಚರಲ್ ಟೂಲ್ಸ್)
(ಗುದ್ದಲಿ, ಸಲಿಕೆ, ಕೊಡಲಿ, ಇತ್ಯಾದಿ ಆಯುಧಗಳು)

ಈ ಸಾಮಾನುಗಳು ಸಿಕ್ಕುವಹಾಗಿರುತ್ತವೆ ನಾವು ಅವುಗಳನ್ನು ನಿಮ್ಮ ಕಂಪನಿಯಿಂದ ಸೋವಿಯಾಗಿ ತರಿಸಿ ವ್ಯಾಪಾರ ಮಾಡುವದುಂಟು ಇವು ಗಳನ್ನು ನಮ್ಮ ಪತಿಯಿಂದ ತರಿಸಿಕೊಂಡಲ್ಲಿ ನಾವು ಅತಿ ಅಗ್ಗವಾಗಿ ಪೂರೈಸುತ್ತೇವೆ. ನಮ್ಮಲ್ಲಿ ದೊರೆಯುವ ಸಾಮಾನುಗಳು ದಃ—

೧ ಗುದ್ದಲಿ, ೨ ಸಲಿಕೆ, ೩ ಕೊಡಲಿ, ೪ ಚಮ್ಮಟಿಗೆ. ೫ ಕಲ್ಲು ಒಡೆಯುವ ಸುತ್ತಿಗೆ, ೬ ಕಂದಲಿ ಇತ್ಯಾದಿ

ಸವಿಸ್ತರ ವರ್ಣನೆ ಬಗ್ಗೆ ಹಾಗು ಬೆಲೆಪತ್ರಿಕೆಯ ಬಗ್ಗೆ ಇಂದೇ ಕಾಗದವನ್ನು ಬರೆದು ತಿಳಿದುಕೊಳ್ಳಿರಿ
(ಅಲ್ಲಲ್ಲಿ ನಮಗೆ ಲೋಕಲ್ ಏಜಂಟರು ಬೇಕಾಗಿ ಏವರು ಇಚ್ಛೆಯುಳ್ಳವರು ಕರಾರ ಬಗ್ಗೆ ಕೇಳಿಕೊಳ್ಳಿರಿ.)

ಕಿರ್ಲೋಸ್ಕರ ಬಂಧು ಲಿಮಿಟೆಡ್
ಕಿರ್ಲೋಸ್ಕರವಾಡಿ, ಜಿ ಸಾತಾರಾ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೭ ನೇ ಇಸ್ವಿಯ ಜನೇವರಿ ೩೧ ನೇ ತಾ। ದಿವಸ ೧೧—೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವಂತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯ ಬೇಕೆಂದು ನಿರ್ಣಯವಾಯಿತು—

(೧) ಎಲ್. ಬಿ. ಸಿ. ನಂ. ೨೭೩೬ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರಿಂಟೆಂಡಂಟ್ ಸಕ್ರಿಟೆರಿಯಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ ೧೯೬೩ ನಾರಾಯಣ ವಿಠ್ಠಲ ಲೋಣಕರ. ಕೇರ್ ಆಫ್ ಡಿ. ಈ. ಪುರಾಣಿಕ ೧೦೭ ನಿಹಾಲಪುರ ಇಂದೂರ ೧೦೦೦

(೩) ಎಲ್. ಬಿ. ಸಿ. ನಂ ೩೪೮೧ ರಾಮಚಂದ್ರ ಅನಂತ ಶಿರೋಳಿ. ಡಿವಿಜನಲ್ ಫಾರೆಸ್ಟ ಆಫೀಸರ ಛತ್ರಪೂರಾ. ಪತ್ತಿಮಬಾನದೇಶ ರೂ. ೮೦೦

(೪) ಬಾಂಡ ನಂಬರು ೬೫೦೬ ಕೇ. ಜೆ. ಫರ್ನಾಂಡೀಸ ವ್ಯಾಪಾರಸ್ಥ ಬ್ರಿಕ್‌ಸ್ಟ್ರೀಟ ಸಿಲೋನ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜಿ. ಚವರೆ. ಅಶಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ. ಜಿಲ್ಲಾ ವಿಜಾಪುರ. ರೂ ೧೦೦೦

ಬಿ. ಸ್. ಆರಾಧ್ಯ,
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಸ್ಟ್ಯಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಿಕ್ಟ್ರಿಕ್ ಮಶಿನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇರಿ) ೧ ಪೌಂಡಿಗೆ ರೂ. ೧—.
೨ ನೇ ,, ,, ,, ರೂ ೧-೩-೦

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಜೀವ ವಿಮೆಯ ಕಾರ್ಯದಲ್ಲಿ ಅದ್ಭುತವಾದ ಜಯವು!

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೇ ನೂರಕ್ಕೆ ೭೦ ರೂಪಾಯಿ ಲಾಭ ಹಂಚಿದೆ

ದಿ ಜನರಲ್ ಅಶ್ಯೂರನ್ಸ ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ಸಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೭೧ ತಿಂಗಳಲ್ಲಿ ಹೆಚ್ಚಾಗಿ ಉತ್ಪಾದಿಸಲಾದದ್ದು ರೂ ೧,೨೫,೦೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್!

ಎಸ್. ಕಬ್ಬೂರ ಬಿ. ಎ. ಎಫ್. ಎಸ್. ಅಜಮೀರ.

Apply to:- H. Ramachandra Rao
Branch Secretary, opposit Minto Hospital,
Bangalore City

OR

L. V. Ramdurg: Chief Agent
Near Vitoba Temple Hubli.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ ೧೯೪೭ ವಾ. ಚಂದಾ ೧—೧೩—೦ ಮಾತ್ರ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಯದ್ಯತ್ ಪರವಶಂ ಕರ್ಮ । ತತ್ತದ್ಯತ್ನೇನ ವರ್ಜಯೇತ್ ॥ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ಭಾದ್ರಪದ ಶುದ್ಧ ೮ ಶಕೆ ೧೮೪೯ ತಾ| ೪-೯-೧೯೨೭. Date 4—9 1927. | ಸಂಚಿಕೆ ೩೨

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು, ಅವುಗಳೊಳಗಿನ ಕಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕದ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ.

ಹೊಸ ಟ್ರೇಡಲ್.

ಇದೀಗ ನಾವು ಯುರೋಪದಿಂದ ಹೊಸ ಟ್ರೇಡಲ್ ತರಿಸಿದ್ದೇವೆ ಇದು ಫೂಲಸ್ಕ್ಯಾಪ ಹಾಫಶೀಟಿದ ಆಕಾರದ್ದು, ಬೆಲೆ ೫೦೦ ರೂ ಮಾತ್ರ ಕರ್ನಾಟಕದಲ್ಲಿಯ ಮುದ್ರಕರಿಗೆ ಇವು ಬೇಕಿದ್ದರೆ ನಾವು ತರಿಸಿಕೊಡುವೆವು ಯಂತ್ರವನ್ನು ನೋಡತಕ್ಕವರು ನಮ್ಮಲ್ಲಿಗೆ ಬಂದು ನೋಡಬಹುದು ಇದಲ್ಲದೇ ರಾಯಲ್ ಆಕಾರದ ಒಂದು ಮುದ್ರಿಸು ಯಂತ್ರವು ನಮ್ಮಲ್ಲಿ ಮಾರಲಿಕ್ಕಿದೆ. ಇದು ಹಳೆಯದಾದರೂ ಉತ್ತಮ ಕೆಲಸ ಕೊಡುತ್ತದೆ

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಭಯಂಕರ ಗರ್ಮಿ.

ಪರಮೆ, ರಕ್ತವಿಕಾರ, ಕುಷ್ಟ, ಮಹಾರೋಗ, ಧಾತುವಿಕಾರ ನಪುಂಸಕತ್ವಗಳ ಮೇಲೆ ಖಂಡಿತವಾಗಿ ಗುಣ ಕೊಡುವ ದಿವ್ಯ ಔಷಧಿ ಬೆಲೆ ರೂ. ೫ ಪ್ರಕೃತಿಮಾನ ತಿಳುಹಿಸಿ ಔಷಧಿ ಪಡೆಯಬೇಕು

ವೈದ್ಯ:—ವಾದಿರಾಜ ಜಹಗೀರದಾರ
ಮು ಇಲಕಲ್ಲ (ವಿಜಾಪೂರ)

ಪತ್ರವ್ಯವಹಾರ.

ವಿಷಮವಿವಾಹದ ವೈಚಿತ್ರ್ಯ.

(೧) ಅಕ್ಕಬೇಳೆ ಕೂಡಿ ಬೇಯುವದೇ?

ಸಂಪಾದಕರೇ ಇದನ್ನಷ್ಟು ನಿಮ್ಮ ಪತ್ರದಲ್ಲಿ ಕಾಣಿಸುವಿರಾ?

ಇದೇ ಶ್ರಾವಣ ಮಾಸದಲ್ಲಿ ನಮ್ಮ (ಮಾಧ್ವರ) ಅನುಕೂಲ್ಯ ದರ್ಪಣದ ಟೀಕಿನಲ್ಲಿಯ ಲೇಖಗನುಸರಿಸಿ, ಈ ನಮ್ಮ ಕೊಪ್ಪಳ (ನಿಜಾಂ ಇಲಾಖೆ) ದೊಳಗೆ, ಹುಲಿಗಿ ಆಚಾರ್ಯರ ಆಶ್ರಯದಲ್ಲಿ, ರಾಯರ ಪುಣ್ಯತಿಥಿಯ ದಿನ, ಸುಮಾರು ನಾಲ್ವತ್ತು ನಾಲ್ವತ್ತೈದು ವಯಸ ಅಂತರವುಳ್ಳ ವಧೂವರರ ಪಾಣಿಗ್ರಹಣವು, ಒಬ್ಬರ ಆನಂದಕ್ಕಾಗಿ ಆಯಿತೆಂದು, ಆಡಿ ತೋರಿಸಲು ಒಳ್ಳೇ ವಿಷಾದವಾಗುತ್ತದೆ

ಇಂಥ ವಿಷಮವಿವಾಹಗಳ ಸಲ್ಲದ ಸಹಾಯದಿಂದ ಭಾರತ ದೇಶವು, ಅವ ರಸಾತಳಕ್ಕಿಳಿಯುತ್ತಿರುವುದೆಂಬುದು ಈ ನಮ್ಮ ನವನವ ಅಭಿನವ ವರರಿಗೂ ಈ ವಿವಾಹವನ್ನು ಏರ್ಪಡಿಸಿದ ಬಾಗಲಕೋಟೆಯ ಓರ್ವ ಸುಪ್ರತಿಷ್ಠಿತ ಶಟ್ಟಿಯ ಆಚಾರ್ಯಪರ್ಯಾಯರಿಗೂ, ಹುಲಗೀ ಆಚಾರ್ಯರಿಗೂ ತಿಳಿಯುವುದೆಂತು?

ಮೊನ್ನಿನ ಈ ವಿವಾಹ ಮಹೋತ್ಸವಾಹ್ವಾನಕ್ಕನುಸರಿಸಿ, ಆಶೀರ್ವದಿಸ ಹೋದವರು, ಆ ಎಳೆ ಹತ್ತು ವರುಷದ ಏನೂ ಅರಿಯದ ವಧುವನ್ನು ನೋಡಿ, ವರನನ್ನು ನೋಡುತ್ತಲೇ ಹರಸಬಂದ ಕೈಗಳು, ಶಕ್ತಿಹೀನವಾಗಿ ತಮ್ಮ ಕೆಲಸವನ್ನು ಚಕ್ಕನಾಗಿ ದುಃಖಾಶ್ರುಗಳಿಂದ ಮಾಡಿದ ಆ ಅತ್ಯಂತ ಶೋಚನೀಯ ನೋಟವನ್ನೇನು ಬಣ್ಣಿಸಲಿ! ಇಂಥ ವಿವಾಹಗಳಿಂದ ಆಗಬೇಕಾದ ಮಹತ್ಕಾರ್ಯಗಳಾವವೆಂಬುದನ್ನು ಶ್ರೀಗಳವರೂ ಮನನ ಮಾಡಿಸುವರೋ! ಈ ವಿವಾಹದಿಂದ ತಮಗೂ ಅಸ್ತರಿಗೂ ನೆರೆಹೊರೆಯವರಿಗೂ ಮುಖ್ಯ ಸಮಾಜಕ್ಕೂ ಆವ ಬಗೆಯ ಸಹಾಯಕಾರಕ ಶಾಂತಿಯು ಸಂಘಟಿಸುವುದೆಂದು ಊಹಿಸಿ, ಈ ವಿವಾಹನೀಯರಲ್ಲಿ (?) ಈ ಕಾರ್ಯಕ್ಕೆ ಟೊಂಕ ಕಟ್ಟಿದರೋ ತಿಳಿಯದು!

—ಕಣ್ಣೀರಿಕಂಡವ.

(೨) ಧಾರವಾಡದ ಪತ್ರ.

(ನಮ್ಮ ಸ್ವಂತ ಸಂಬಾದಗಾರರಿಂದ.)

ಮೊನ್ನೆ ಸೋಮವಾರ ಇಲ್ಲಿಯ [illegible] ಪೇಟೆಯ ವೆಂಕಟರಮಣನ ದೇವಾಲಯದಲ್ಲಿ ಒಂದು ವಿಚಿತ್ರ ವಿಷಮವಿವಾಹವಾಯಿತು. ಶ್ರೀಮದುತ್ತರಾದಿ [illegible] ಮಾಡುತ್ತಿರುವ ಸುಪ್ರಸಿದ್ಧ ಪಾಂಡುರಂಗಿ ಮನೆತನದ ವರನು ತನ್ನ ವಯಸ್ಸು ೫೦ ಕ್ಕೆ ಮೀರಿದ, ಕನ್ನೆಯು ಸುಮಾರು ೧೨ ವರ್ಷದ ಬಾಲಿಕೆ! ಇಂಥ ವಧೂವರರ ವಿವಾಹ 'ಮಂಗಲೋತ್ಸವವು (ಅಮಂಗಲೋತ್ಸವವು ಎಂದರೆ ಹೆಚ್ಚು ಯೋಗ್ಯವಾಗುವದಲ್ಲವೇ?) ಧಾರವಾಡದಂಥ ನಗರದಲ್ಲಿ ಶ್ರೀಮದುತ್ತರಾದಿ ಶ್ರೀರಸ್ಕರ ಮಂಗಳಾಶೀರ್ವಾದ ಪೂರ್ವಕವಾಗಿ ಜರಗಬೇಕೆಂದ್ದರೆ ಎಂಥ ನ್ಯಾಯವು! ಧರ್ಮೋಪದೇಶಕರಾದ ಗುರುಗಳೇ ಈ ತರದ ವಿವಾಹಕ್ಕೆ ಸಮ್ಮತಿ ಎನ್ನು ಕೊಡಬೇಕೆಂದರೆ ನಮ್ಮ ಧರ್ಮದ ಅವನತಿಯು ಎಷ್ಟರ ಮಟ್ಟಿಗೆ ಆಗಿರುವದೆಂಬುದು ಒಡೆದು ಕಾಣುವದು. ವರನಿಗೆ ಸಂತಾನವಾದರೂ ಇಲ್ಲವೆನ್ನಬೇಡಿರಿ! ಐದಾರು ಮಂದಿ ಹೆಣ್ಣು ಮಕ್ಕಳವರು, ಅದರಲ್ಲಿ ಒಬ್ಬಳು ಎರಡು ಹಡೆದಿರುವಳು. ಇನ್ನೊಬ್ಬಳು ಹಡೆಯುವ ದಿನಗಳು ಸಮೀಪಿಸಿವೆ. ಪುತ್ರಸಂತಾನವಿಲ್ಲವೆಂದು [illegible] ಮಾತ್ರ [illegible]. ಇನ್ನು ಧರ್ಮಶಾಸ್ತ್ರದಲ್ಲಿ ಈ ತರದ ವಿವಾಹಕ್ಕೆ ಪ್ರತಿಬಂಧವಿಲ್ಲವಾದ್ದರಿಂದ ಇಂಥ ವಿವಾಹಕ್ಕೆ [illegible] ಶ್ರೀಗಳವರು ಸಾಧಿಸಿದರೆ ಸಾಧಿಸಬಹುದು. ಆದರೆ ಹಾಗೆ ಮಾಡುವದು ಎಷ್ಟು ಸಮಂಜಸವಾಗುವದೆಂಬುದನ್ನು ಶ್ರೀಗಳವರು ಅಂತಃಕರಣಪೂರ್ವಕ ಹೇಳಬೇಕು.

ಇಲ್ಲಿಯ ವಿಷಯಕಾರರು ಅಸ್ವಲೀಕವೊಂದನ್ನು ಬರೆದು ಎಲ್ಲಾ ಕಡೆಗೆ ಈ ಸುದ್ದಿಯನ್ನು ಹರಡಿಬಿಟ್ಟಿದ್ದಾರೆ. ಕೋರ್ಟುಗಳಲ್ಲಿ ಬಾಜಾರದಲ್ಲಿ ಸಹ ಈ ಸುದ್ದಿಯ ಚರ್ಚೆಯೇ ನಡೆದಿದೆ. 'ಕರ್ನಾಟಕವೃತ್ತ'ಕಾರರೂ ಈ ಬಗ್ಗೆ ಬರೆದಿರುವರು. ಬ್ರಾಹ್ಮಣ ಸಮಾಜದಲ್ಲಿ ಇಂಥ ವಿವಾಹಗಳು ಕೆಲವು ಕಡೆಗೆ ಆಗ[illegible]ರುತ್ತವೆಂಬುದೇನೋ ನಿಜ. ಹಾಗೆಯೇ ಎಲ್ಲಿಯಾದರೂ ಒಂದು ಅಪ್ರಸಿದ್ಧ[illegible]ನ ಮನೆತನದಲ್ಲಿ ಇಂಥ ವಿವಾಹವಾಗಿದ್ದರೆ ಇಷ್ಟೇನೂ ಚರ್ಚಿಸುವ ಕಾರಣವಿದ್ದಿಲ್ಲ. ಸುಪ್ರಸಿದ್ಧ ಪಾಂಡುರಂಗೀ ಮನೆತನದಲ್ಲಿ ಶ್ರೀಮದುತ್ತರಾದಿ[illegible] ಪೀಠಾಧೀಶರ ಸಾನ್ನಿಧ್ಯದಲ್ಲಿ ಈ ವಿವಾಹ ಸಮಾರಂಭವು ಜರಗಿದ್ದಕ್ಕಾಗಿ [illegible] ಬುದ್ಧಿವಾದ ಹೇಳಬೇಕಾಗಿದೆ, ಅಜ್ಞಜನರಿಗೂ ಸಾಮಾನ್ಯ ಜನರಿಗೂ [illegible] ಹೇಳುವವರು [illegible]ವನ್ನು ಹೇಳುವ ವಿದ್ವಾಂಸರು ಹೀಗೆ ಮಾಡಿದ ಮೇಲೆ [illegible] ಸಮಾಜದ [illegible] ಅವರನ್ನು ಅನುಕರಿಸಿದರೆ ಏನು ತಪ್ಪು! ಅನುಕರಿಸಿದರೆ [illegible] ವಿಷಯ ಅತ್ಯಂತ ಹಾನಿಯಾಗುವದು ಮಾತ್ರ ಕಟ್ಟಿಟ್ಟ ಮಾತು. [illegible] ಶಿಷ್ಯರಿಗೆ [illegible]ದಲ್ಲಿ ಉತ್ತರಾದಿ ಶ್ರೀರಸ್ಕರು ತಮ್ಮ ಅಭಿಪ್ರಾಯವನ್ನಷ್ಟು ಜಾಹೀರ ರೀತಿಯಿಂದ ಹೇಳಿದರೆ ನೆಟ್ಟಗಾಗುವದು.

ಮತ್ತೆ ಕಿ ಸೂರ ರಸ್ತೆ!

ಸಂಪಾದಕ ಮಹಾಶಯರು,

ಬೆಂಗಳೂರ, ಶಿರಸೂರ, ಮುಲ್ಲಾಪೂರ ಮೊದಲಾದ ಹಳ್ಳಿಗೆ ಹೋಗುವ ದಾರಿಯ ದುಃಸ್ಥಿತಿಯ ಬಗ್ಗೆ ಈಗೊಮ್ಮೆ ನಿಮ್ಮ ಪತ್ರದಲ್ಲಿಯೇ ಬರೆದುಕೊಂಡಿದ್ದೆನಷ್ಟೆ? ಅದನ್ನು ಓದಿಕೊಂಡೇ ಆಗಲಿ ಅಥವಾ ಈ ಹಾದಿಕಾರರ ದೈವಯೋಗದಿಂದೇ ಆಗಲಿ, ಈ ಮಾರ್ಗ ದುರಸ್ತಿಯು ಇದೀಗ ಸುರುವು ಆದಂತಾಗಿದೆ. ಆದರೇನು 'The Remedy is worse than the disease' (ಬೇನೆಗಿಂತಲೂ ಬರಮೋ ಘೋರವಾಗಿದೆ) ಎಂಬಂತೆ, ಈ ದುರಸ್ತಿ ಕ್ರಮವು ಸಾಗಿರುವದು. ಹಾದಿಯ ಎರಡೂ ಮಗ್ಗಲಿಗೂ ಹರಿಗಳನ್ನು ಕಡಿದು, ಅದೇ ಎರೆಮಣ್ಣನ್ನು ಹಾದಿಯ ಮೇಲೆ ಯದ್ವಾತದ್ವಾ ಹರವಿಬಿಟ್ಟರೆಂದರೆ, ತಾವು ಕೃತಕೃತ್ಯರಾದೆವೆಂದವರು ಲೋಕಲ್ ಬೋರ್ಡದವರು ಬೆನ್ನು ಚಪ್ಪರಿಸಿಕೊಳ್ಳುತ್ತಿದ್ದಂತೆ ತೋರುತ್ತದೆ. ದುರಸ್ತಿಯ ಕಾರ್ಯವು ಎಷ್ಟು ಸುಲಭವಾಗಿದೆಯಲ್ಲ! ವಿಂತಮ್ಮ ಯತ್ನವನ್ನು ಸಾಧಿಸಿದಂತಾಗಲಿಲ್ಲವೆ?! ಈ ನಮ್ಮ ಲೋಕಲ್ಲಬೋರ್ಡದವರೂ ಅವರ ಸಬ್ಬೋವರಸೀಯರೂ ಕೂಡಿ 'Road Repairs made easy' (ಮಾರ್ಗನಿರ್ಮಾಣದ ಹಗುರ ಹಾದಿ) ಎಂಬ ಪುಸ್ತಕವನ್ನಾದರೂ ಬರೆದು ಪ್ರಸಿದ್ಧಪಡಿಸಬಾರದೆ? ಅಂದರೆ ಉಳಿದ ಸ್ಥಾನಿಕ ಸಂಸ್ಥೆಗಳಿಗೆ ಇವರ ಈ ಹೊಸ ಶೋಧದ ಲಾಭದೊರೆದಲನುವಾಗಿ ನಮ್ಮ ಬೋರ್ಡಿನವರಿಗೆ ಧನ್ಯವಾದವೂ ದೊರೆಯಬಹುದು. ನಿಜವಾಗಿಯೇ ಈ ಶೋಧವು ಚಮತ್ಕಾರವಾದುದಾಗಿದೆ ಹೇಗೆಂದರೆ ಈ ಮಣ್ಣು ಕಡಿದು ಒಗೆಯುವ ಒಂದೇ ಒಂದು ಕೃತಿಯಿಂದ ದಾರಿಕಾರರಿಗೆ ಕಾಲತ್ರಯದಲ್ಲಿಯೂ ತ್ರಿವಿಧ ತಾಪಗಳಲ್ಲಿ ಒಂದಿಲ್ಲೊಂದು ಬಿಡದಂತಾಗಿದೆ. ಮಳೆಗಾಲದಲ್ಲಿ ಮೊಣಕಾಲವರೆಗೆ ರೊಜ್ಜು, ಛಳಿಗಾಳಿಯಲ್ಲಿ ಕಣ್ಣುತುಂಬ ಧೂಳ, ಬೇಸಿಗೆಯಲ್ಲಿ ಕಾಲು ಸುಟ್ಟು ಬೂದಿಯಾಗುವಂಥ ಹುಡಿ ಇವೆಲ್ಲ ನಮ್ಮ ದಯಾಳು ಲೋಕಲ್ಲಬೋರ್ಡದವರ ಕಾಣಿಕೆ. ಸಂಪಾದಕರೆ, ಈ ಬಡ ದಾರಿಕಾರರ ತಾಪಗಳಲ್ಲಿ ಒಂದನ್ನಾದರೂ ಕಳೆಯಲಿಕ್ಕೆ ತಾವು ಯತ್ನಿಸಬಾರದೆ? ತಮ್ಮ ಅಮೋಘ ಲೇಖಣಿಯಿಂದ ಈ ಹಳ್ಳಿಯವರನ್ನು ದಿನಂಪ್ರತಿಯ ಈ ಅಡಚಣಿಯಿಂದ ಪಾರುಮಾಡಿರೆಂದು ನಂಬಿದ,

ತಮ್ಮ

—ಓರ್ವ ದಾರಿಕಾರ.

ಸ್ತ್ರೀ ವಿನೋದ:

"ನೀವು ಮೋಟಾರಿನಲ್ಲಿ ಕುಳಿತಾಗ್ಗೆ ಎಂದ [illegible] ಅನುಭವಕ್ಕೆ ಬಂದಿದೆಯೋ?"

"ಎಂದಾದರೂ ಯಾಕೆ? ಅನೇಕ ಸಲ! ವಿಶೇಷತಃ ನನ್ನ ಹೆಂಡತಿಯು ಬಳಿ [illegible]"

ಕನ್ನಡಿಗ.

ಬಾಗಲಕೋಟೆ ಭಾದ್ರಪದ ಶುದ್ಧ ೮ ಶಕೆ ೧೮೪೯

ಸಲಿಗೆಯ ಮೋಹವಾದಿ ಕಟ್ಟುವೆನಾನು।
ನಿನ್ನ ಬೆಳಕವಾಡಿ ಬಂಧ ನುಕ್ಕಳ ದೊನ್ನು।
ಚಿನ್ನದಂತಹ ನಿನ್ನ ನೋಟ ಬಸ್ತಿಯ ನೊಂದು ಚಿನ್ನಯಾಕಾಶದಲ್ಲಿ॥
ನನ್ನ ಬೀಜವು ನಿನ್ನ ವೀರಶಾಸನಕಾಗಿ।
ಕನ್ನನ್ನ ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನವ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹನಾದು ಕೀಳಿಯೆ

—ಆಂಡಾಳ ಕವಯಿತ್ರಿ

ಮಹಾತ್ಮಾ ಗಾಂಧಿಯವರು **ಕರ್ನಾಟಕದಲ್ಲಿ ೫ ತಿಂಗಳಿ**ದ್ದು, ಈಗ್ಗೆ ತಮಿಳನಾಡಿನ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಮೈಸೂರ ಕರ್ನಾಟಕವನ್ನು ಮಾತ್ರ ಮಹಾತ್ಮರು ಈಗ ಸಂದರ್ಶಿಸಿದ್ದಾರೆ. ಉಳಿದ ಕರ್ನಾಟಕದ ಭಾಗವನ್ನು ಇನ್ನು ಮೇಲೆ ಸಂದರ್ಶಿಸುವರು. ಇರಲಿ. ೫ ತಿಂಗಳ ಹಿಂದೆ ಕರ್ನಾಟಕದಲ್ಲಿ ಮಹಾತ್ಮರು ಕಾಲಿಡುತ್ತಲೆ, ಬೇನೆ ಬಿದ್ದರು. ಹೀಗೆ ಅಕಸ್ಮಾತ್ತಾಗಿ ಅಸ್ವಸ್ಥರಾದುದು ವ್ಯಸನದಾಯಕವಾಗಿದ್ದರೂ ಇದರಲ್ಲಿ ಈಶ ಸಂಕಲ್ಪವೇನಾದರೂ ಇರಬಹುದೆ ಕ; ಇದರಿಂದ ಮಹಾತ್ಮರಿಗೆ ಕರ್ನಾಟಕದಲ್ಲಿ ಹೆಚ್ಚು ಕಾಲ ಇರುವ ಪ್ರಸಂಗವು ಒದಗಿ ಅವರಿಂದ ಕರ್ನಾಟಕಕ್ಕೆ ಮಹಾತ್ಮರಿಗೂ ಕೂಡಿಯೇ ಅಂತ್ಯದಲ್ಲಿ ಆನಂದವಾಗಿರುವುದೆಂದು ನಾವು ೫ ತಿಂಗಳ ಹಿಂದೆ ಭವಿಷ್ಯವಾಗಿ ಬರೆದುದು ಈಗ್ಗೆ ಫಲದ್ರೂಪವಾಗಿ ಪರಿಣಮಿಸಿದ್ದನ್ನು ನಾವು ಪ್ರತ್ಯಕ್ಷವಾಗಿ ನೋಡುತ್ತಿದ್ದೇವೆ. ಮಹಾತ್ಮರ ವಾಸದಿಂದ ಮೈಸೂರಿನಲ್ಲಿ ಖಾದಿಯ ಪ್ರಸಾರಕ್ಕೆ ಒಳ್ಳೇ ಕಳೆಬಂದಿದೆ; ಮೈಸೂರ ಪ್ರಾಂತದಲ್ಲಿಯ ಅಧಿಕಾರಿಗಳೂ ಸಹ ಬಡವರ ಸಲುವಾಗಿ ಖಾದಿ ಧರಿಸಲು ಒಪ್ಪುತ್ತಲಿದ್ದಾರೆ. ಖಾದಿಯ ಪ್ರಚಾರಕ್ಕಾಗಿ ೫೦ ಸಾವಿರ ರೂಪಾಯಿಗಳು ಮೈಸೂರ ಕನ್ನಡಿಗರಿಂದ ಮಹಾತ್ಮರಿಗೆ ಅರ್ಪಿಸಲ್ಪಟ್ಟಿವೆ. ಮಹಾತ್ಮರಿಗಾಗಿ ಅರಮನೆಯ ಸೌಕರ್ಯಗಳನ್ನು ಸಹ ಒದಗಿಸಿಕೊಟ್ಟು, ಕನ್ನಡ ರಾಜನೂ, ತನ್ಮೂಲಕ ಕರ್ನಾಟಕವೂ, ಹಿಂದುಸ್ಥಾನದಲ್ಲಿ ಪ್ರಶಂಸೆಯನ್ನು ಪಡೆದಿರುವವು. ಅತ್ತ ಮಹಾತ್ಮರಾದರೂ, ಕರ್ನಾಟಕದ ಈ ವಾಸದಿಂದ ತಮಗೆ ಅತ್ಯಂತ ಆನಂದದಾಯಕವಾಗಿರುವುದೂ, ಕನ್ನಡನಾಡಿನ ಈ ವಾಸದ ಮಹಾತ್ಮೆಯನ್ನು ತಾವು ಎಂದಿಗೂ ಮರೆಯಲಾರೆವೆಂದು ಹೇಳಿ, ಕನ್ನಡಿಗರ ಪ್ರೇಮಬಲ ಹಾಗೂ ಉದಾರ ಸ್ವಭಾವ, ಲಲಿತ ಕಲೆಗಳಲ್ಲಿಯ ಪ್ರೇಮ, ಸ್ವದೇಶಪ್ರೀತಿ, ಅತಿಥಿ ಸತ್ಕಾರಗಳನ್ನು ಚನ್ನಾಗಿ ಹೊಗಳಿದ್ದಾರೆ. ಮೇಲಾಗಿ ರಾಮರಾಜ್ಯದಂತಿರುವ ಮೈಸೂರ ರಾಜ್ಯವನ್ನು ನೋಡಿ ಮಹಾತ್ಮರು ಅತ್ಯಾನಂದ ಹೊಂದಿರುವರು. ಕರ್ನಾಟಕವನ್ನು ಅವರು ಗಡಿಬಿಡಿಯಿಂದ, ಮೊದಲಿನ ಕಾರ್ಯಕ್ರಮದಂತೆ, ಒಂದೇ ತಿಂಗಳಲ್ಲಿ ಸಂಚರಿಸಿ ಹೋಗಿದ್ದರೆ, ಇವೆಲ್ಲ ಸಂಗತಿಗಳು ಒದಗಿ ಬರುತ್ತಿರಲಿಲ್ಲ. ದೈವದಿಂದಲೇ ೫ ತಿಂಗಳ ವರೆಗೆ ಅವರಲ್ಲಿರುವಂತೆ ಕರ್ನಾಟಕ ಮಾತೆಯು ಅವರಿಗೆ ಪ್ರೇರಿಸಿದ್ದು ಸಯುಕ್ತವಾಯಿತಲ್ಲವೇ?

ಉತ್ತರ ಕರ್ನಾಟಕದ ಕನ್ನಡ ಕ್ರಮಿಕ ಪುಸ್ತಕಗಳಲ್ಲಿ ತಿದ್ದುಪಡಿಯಾಗಬೇಕೆಂದು 'ಕನ್ನಡಿಗ'ನು ಅನೇಕ ಸಲ ಬರೆದಿರುವನು. ಈ ಸಂಬಂಧದ ಕೆಲವು ವರೆಗೂ ಮುಟ್ಟಿರುವದಾಗಿ, ಮುಂಬೈ ಕಾಉನ್ಸಿಲ್ ಮಂಡಲದ ಪ್ರಶ್ನೋತ್ತರಗಳಿಂದ ತಿಳಿಯುತ್ತಿದೆ. ಈ ಬಗ್ಗೆ ಸರಕಾರದವರು ವಿಚಾರಿಸುತ್ತಿರುವರಾಗಿ ಪ್ರಕಟವಾದದ್ದರಿಂದ, ಕನ್ನಡ ವೃತ್ತಪತ್ರಕಾರರೂ, ಶಿಕ್ಷಣಾಭಿಮಾನಿಗಳೂ, ಕನ್ನಡದಲ್ಲಿ ಪ್ರೇಮವುಳ್ಳ ಮಹನೀಯರೂ, ಸರಕಾರಕ್ಕೆ ತಿದ್ದುವಿಕೆ ವಿಷಯದಲ್ಲಿ ಒತ್ತಾಯ ಮಾಡುವದು ಅವಶ್ಯಕವಾಗಿದೆ. ಆದುದರಿಂದ ನಾವು ಈ ವಾರದಿಂದ ಮೈ. ವಾಸುದೇವಾಚಾರ್ಯರು ಈ ಬಗ್ಗೆ ಬರೆದ ಟೀಕೆಗಳನ್ನು ಪ್ರಕಟಿಸತೊಡಗಿರುವೆವು. ವ್ಯಾಕರಣದೋಷ, ಅಲಂಕಾರದೋಷ, ವಿಷಯ ಪ್ರತಿಪಾದನೆಯಲ್ಲಾದ ತಪ್ಪು, ಹೊಡೆದು ಬರಲೆಬೇಕಾದ ವಿಷಯಗಳನ್ನು ವಾಸುದೇವನು, ಒಳ್ಳೇ ಮಾರ್ಮಿಕವಾಗಿ ಚರ್ಚಿಸಿದ್ದರಿಂದ ಈ ಟೀಕೆಗಳು ಈಗ್ಗೆ ಒಳ್ಳೇ ಉಪಯೋಗವಾಗುವವಾಗಿ ನಮ್ಮ ನಂಬಿಗೆಯಿದೆ. ಇನ್ನು ಮುಂಬೈ-ಮೈಸೂರ-ಮದ್ರಾಸ-ಹೈದ್ರಾಬಾದ ಕರ್ನಾಟಕಕ್ಕೆಲ್ಲ ಒಂದೇ ಮಾದರಿಯ ಕ್ರಮಿಕ ಪುಸ್ತಕಗಳಿರುವದು ಅತ್ಯಾವಶ್ಯಕವೆಂದು ನಾವು ಹೇಳಿದ ಮೇಲೆ ಪ್ರತಿಪಾದಿಸುತ್ತ ಬಂದಿರುವೆವಷ್ಟೆ? ಆದರೂ ಸರಕಾರದ ಲಕ್ಷ್ಯವು ಇತ್ತ ಕಡೆಗೆ ಇಷ್ಟೊಂದು ಬೇಗನೇ ಹೋಗುವದು ಸಂಭವವಿಲ್ಲ. ಹೋದರೂ, ಉಳಿದ ಸರಕಾರಗಳ ಸಂಗಡ ಅವರು ಸಹಕಾರಿಗಳಾಗಿ ನಡೆಯಲು ಸುಲಭವಾಗಿ ಒಪ್ಪುವದೂ ಶಕ್ಯವಿಲ್ಲ. ಆದುದರಿಂದ ಕನ್ನಡಿಗರು ಒತ್ತಾಯಪಡಿಸಿದರೆ ಮಾತ್ರ ಅವರು ಈ ಬಗ್ಗೆ ವಿಚಾರಮಾಡಬಹುದು. ಅದಕ್ಕಾಗಿಯೇ ಕನ್ನಡಿಗರು ಎಚ್ಚತ್ತು ಈ ಬಗ್ಗೆ ಆಂದೋಲನವನ್ನುಂಟು ಮಾಡಬೇಕಾಗಿದೆ. ಕರ್ನಾಟಕ ವಿದ್ಯಾವರ್ಧಕ ಸಂಘವು ಇಂತಹ ವಾಙ್ಮಯ ವಿಷಯದಲ್ಲಿಯೂ ಮುಖಂಡತ್ವವನ್ನು ವಹಿಸಬಾರದೆ?



ಮಹಾರಾಷ್ಟ್ರ ಬ್ರಾಹ್ಮಣೇತರ ಪರಿಷತ್ತಿನ ವಿಶೇಷ ಅಧಿವೇಶನವು ಕಳೆದ ವಾರದಲ್ಲಿ ಮುಂಬೈಯಲ್ಲಿ ಸೇರಿತ್ತು. ಈ ವಿಶೇಷ ಅಧಿವೇಶನದ ಮುಖ್ಯ ಉದ್ದೇಶವು, ಆ ಪ್ರಾಂತದ ಬ್ರಾಹ್ಮಣೇತರರು ರಾಷ್ಟ್ರೀಯ ಸಭೆಯ ಸಭಾಸದರಾಗುವದರ ಯುಕ್ತಾಯುಕ್ತತೆಯನ್ನು ವಿಚಾರಿಸುವದಿತ್ತು. ಹಾಗೆ ಮಾಡುವದು ಅಂದರೆ ಕಾಂಗ್ರೆಸದಲ್ಲಿ ಕೂಡಿಕೊಳ್ಳುವದು ಅಯುಕ್ತವಾದದ್ದು, ಅಲ್ಲದೇ, ತಮ್ಮ ಬಣಕ್ಕೆ ಘಾತಕವಾದುದೂ ಎಂದೂ ನಿಶ್ಚಯಿಸುವದಾಯಿತು! ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ಸದಲ್ಲಿ ಬೆರೆತುಕೊಂಡು ಹೋರಾಡುವದೇ ಶ್ರೇಷ್ಠವಾದುಪಾಯವೆಂದು, ತಮ್ಮ ಅನುಭವದಿಂದ ಕಂಡು ಹಿಡಿದ ಮದ್ರಾಸ ಬ್ರಾಹ್ಮಣೇತರರು ಇವರ ಮುಂದೆ ಮೂರ್ಖರಾದರು! ಮದ್ರಾಸ ಬ್ರಾಹ್ಮಣೇತರರು ತಮ್ಮ ಹಿತವನ್ನೇ ತಾವರಿಯದ ವಿಚಾರಮೂಢರಾಗಿದ್ದಾರಂತೆ! ಇದಲ್ಲದೆ! ತಮ್ಮ ಪ್ರಾಂತದಲ್ಲಿಯ ಸ್ಥಿತಿಯು, ಅವರ ಸ್ಥಿತಿಗತಿಗಳಿಗಿಂತ ಭಿನ್ನವಾಗಿರುವದಂತೆ! ಇನ್ನು, ಸಭಾಧ್ಯಕ್ಷರಾದ ಶ್ರೀ ದಳವೀ ಭ. ಜಂಗರಾಯರ ಭಾಷಣವನ್ನು ನೋಡಿರಿ! ಬ್ರಿಟಿಶರ ರಾಜ್ಯದಾಡಳಿತೆಯನ್ನು ಎಷ್ಟು ಭಯಭಕ್ತಿಯಿಂದ ಸ್ತುತಿಮಾಡಿರುವರಲ್ಲ ಮಹಾರಾಯ! ಇಂತಹ ದಯಾಳು ಮತ್ತು ಕಲ್ಯಾಣ ಬುದ್ಧಿಯ ಸರಕಾರವು ಭಾರತೀಯರಿಗೆ ದೊರೆತದ್ದಾದರೂ, ನಮ್ಮ ಭುಜಂಗರಾಯರಂತಹ ಅಗ್ರೇಸರರ ಪುಣ್ಯಬಲದಿಂದಲ್ಲವೆ? ಧನಧಾನ್ಯ ಸಮೃದ್ಧಿಯಿಂದ ಮೆರೆಯುತ್ತಿದ್ದ ಹಿಂದುಸ್ಥಾನವನ್ನು ಕೂಳುಗೇಡು ಮಾಡಿದ ಈ ರಾಜ್ಯಪದ್ಧತಿಯನ್ನು ಅಗ್ಗಳವಾಗಿ ಹೊಗಳುವ ದಳವಿಯಂತಹ ಪುಣ್ಯಾತ್ಮರು ದೇಶದಲ್ಲಿ ಅಲ್ಲಲ್ಲಿಗೆ ಇನ್ನೂ ತಲೆಯೆತ್ತುತ್ತಿರುವರೆಂದರೆ ದೇಶದ ದುರ್ದೈವವೇ ಸರಿ. ಇವರ ಬುದ್ಧಿಯೇ ಹೀಗೆ ಪ್ರಾಮಾಣಿಕವಾಗಿ ಮಾರ್ಪಟ್ಟಿರಬಹುದೋ, ಅಥವಾ ವೈಯಕ್ತಿಕ ಉನ್ನತಿಯನ್ನು ಬಯಸಿ, ಇವರು ಹೀಗೆ ನುಡಿಯುತ್ತಿರುವರೋ ದೇವರೇ ಬಲ್ಲ. ಭುಜಂಗರಾಯರಂತೂ ಸರಕಾರೀ ವಕೀಲರಿರುವರಂತೆ! ಮದ್ರಾಸಕ್ಕಿಂತಲೂ ಮಹಾರಾಷ್ಟ್ರದ ಪರಿಸ್ಥಿತಿಯು ಎಲ್ಲಿ ಭಿನ್ನವಾಗಿರುವದೋ ನಾವಂತೂ ಕಾಣೆವು. "ಕಳ್ಳಾ ಕಳ್ಳಾ ಹುಲಿ ಇರಿ" ಎಂದು ನಮ್ಮನಮ್ಮೊಳಗೆ ಉರಿಹಚ್ಚಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವ ಈ ಸರಕಾರದ ಕೃಪಾಛತ್ರದ ಆಶೆಯನ್ನು ಬಯಸಿ, ಸ್ವಜನರನ್ನು ವಿರೋಧಿಸುವ, ಈ ಬ್ರಾಹ್ಮಣೇತರರ ದುರ್ಬುದ್ಧಿಯು ತೀವ್ರವೇ ನಷ್ಟವಾಗಲೆಂದು ಆ ಸರ್ವತಂತ್ರನನ್ನು ಬೇಡಿಕೊಳ್ಳುವದೊಂದು ಉಳಿದಿದೆ. ಆದೀತ.! ಮದ್ರಾಸಿನಲ್ಲಿ ಉದಯಿಸಿದ ಸದ್ಬುದ್ಧಿಯ ಕಿರಣಗಳು ತೀವ್ರವೇ ಮಹಾರಾಷ್ಟ್ರದಲ್ಲಿಯೂ ಪಸರಿಸಬಹುದು. ಮೊನ್ನಿನ ಪರಿಷತ್ತಿನಲ್ಲಿ ಸ್ವತಂತ್ರ ವಿಚಾರವುಳ್ಳ ಬ್ರಾಹ್ಮಣೇತರ ತರುಣರು, ಕಾಂಗ್ರೆಸ್ಸಿನಲ್ಲಿ ಸೇರಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದಾರೆಂಬುದು ಮಾತ್ರ ಆಶಾಜನಕವಾಗಿದೆ.

ಇತ್ತಿತ್ತಲಾಗಿ ನಮ್ಮ 'ವಿಜಾಪೂರ ಜಿಲ್ಲೆ'ಯಲ್ಲಿ ಬರಗಾಲವು ತವರು ಮನೆ ಮಾಡಿಕೊಂಡಿರುವದನ್ನು ನೋಡಿ, ಅದನ್ನು ಇಲ್ಲಿಂದ ಹೊಡೆದೋಡಿಸಲಿಕ್ಕೆ ಉಪಾಯಗಳನ್ನೇನಾದರೂ ಕಲ್ಪಿಸಬೇಕೆಂಬ ಆಲೋಚನೆಯಲ್ಲಿ ಇಲ್ಲಿಯ ಜಿಲ್ಲಾ ಅಧಿಕಾರಿಗಳು ತೊಡಗಿರುವರೆಂದು ತಿಳಿದು ಬರುತ್ತದೆ. ಯಾಕಂದರೆ, ಈ ಆಳರಸರುಗಳಿಗೆ ಜಪ್ತರಿಸಿಸಲ್ಕೆ ಹಾಡುವಂಥ ದೇಸಾಯಿ, ದೇಶಪಾಂಡೆ ಮತ್ತು ಗೌಡ ನಾಡಗೌಡರೂ ರಾವಸಾಹೇಬ ರಾವಬಹಾದ್ದೂರರೂ ತೂಗಿನ್ನೆ ಒತ್ತಟ್ಟಿಗೆ, ಸೇರಿಕೊಂಡು, ಸಾಹೇಬರಂದದ್ದಕ್ಕೆ, ವಿಚಾರ ಬಿಡಾದ ತಮ್ಮ ತಲೆಹಾಕಿ, 'ಬರಗಾಲ ಪ್ರತಿಬಂಧಕ ಸಂಸ್ಥೆ'ಯೆಂಬ ಆತ್ಮೋದ್ಧಾರ ಕುಮಾರಂಗೆ ಜನ್ಮ ಕೊಟ್ಟಿದ್ದಾರೆ. ಇದನ್ನು ಒಂದು ಚಮತ್ಕಾರ! ಈಗಿನ ಬರಗಾಲದ ಮೂಲಕ ಅರಹೊಟ್ಟೆಯಿಂದ ಜೀವಿಸುತ್ತಿರುವ ಬಡ ರೈತರೇ ತಮ್ಮ ಹೊಟ್ಟೆಗೆ ಬರೆ ಹಾಕಿಕೊಂಡು ತಮ್ಮ ತಮ್ಮೊಳಗೆ ಪಟ್ಟಿ ಮಾಡಿ ಸಹಸ್ರಾವಧಿ ರೂಪಾಯಿಗಳನ್ನು ಕಲೆಹಾಕಬೇಕಂತೆ! ಆ ಮೇಲೆ ಈ ಆಳರಸರು ಬಂದು ಈ ದುಡ್ಡಿನಿಂದ ಬೇಸಾಯದ ಆಧುನಿಕ ಉಕ್ಕಿನ ಉಪಕರಣಗಳನ್ನು ತರಿಸಿಕೊಟ್ಟು ಅವುಗಳ ಉಪಯುಕ್ತತೆಯ ಬಗ್ಗೆ ಉಪನ್ಯಾಸಗಳನ್ನು ಹೇಳುವದಲ್ಲದೆ ಒಡ್ಡು ಹಾಕಲಿಕ್ಕೂ ನಟ್ಟು ಕಡಿಸಲಿಕ್ಕೂ ಹೇಳಿಕೊಡುವ ಮಹದುಪಕಾರ ಮಾಡುವವರಿದ್ದಾರೆ!! ಎಂಥ ಪ್ರಜಾಹಿತ ಚಿಂತನೆಯ ಲಕ್ಷಣವಿದು. ನೋಡಿದಿರಾ!! ಇಂಥ ಔಪಚಾರಿಕ ಉಪಾಯಗಳ ಯೋಜನೆಯಲ್ಲೇಕೆ ವ್ಯರ್ಥ ಶ್ರಮಪಡುತ್ತಿರುವರಾದೀತು? ಈ ನಟನೆಯು ಜನರಿಗೆ ಎಷ್ಟು ದಿನ ತಿಳಿಯದೆ ಉಳಿದೀತು! ಈ ನಮ್ಮ ಜಿಲ್ಲೆಯ ಆಳರಸರುಗಳಿಗೆ ಜನರ ದೈನ್ಯಾವಸ್ಥೆಯ ಬಗ್ಗೆ ನಿಜವಾಗಿಯೇ ಕಳಕಳಿಯಿದ್ದುದಾದರೆ, ಮೊಟ್ಟಮೊದಲು ನಿಷ್ಕಪಟ ಬುದ್ಧಿಯಿಂದ ಸತ್ಯವನ್ನು ಸ್ಮರಿಸಿ 'ಆಣೆವಾರಿ'ಯನ್ನು ಕಳಿಸಿಕೊಡುವ ಕ್ರಮವನ್ನಿಡಲಿ. ಆ ಮೇಲೆ ನಿರ್ವಂಚನೆಯಿಂದ, ಈ ಜಿಲ್ಲೆಯ ನೈಜಸ್ಥಿತಿಯ ಬಗ್ಗೆ ಮೇಲಧಿಕಾರಿಗಳಿಗೆ ಮೇಲಿಂದ ಮೇಲೆ ಬರೆದು ಅವರ ಲಕ್ಷವನ್ನು ಈ ಜಿಲ್ಲೆಯ ನಿರಂತರವಾದ ಕ್ಷಾಮದ ಮತ್ತೂ ಅದರಿಂದುಂಟಾದ ಭೀಕರವಾದ ಸ್ಥಿತಿಯ ಕಡೆಗೆ ಎಳೆದು ತರಲಿ! ಕೆರೆ, ಬಾವಿ, ತೆರಿಗೆಯನ್ನು ಸೂಟು ಬಿಡುವದು ಇವೇ ಮೊದಲಾದ ಯೋಗ್ಯ ಉಪಾಯಗಳನ್ನು ಕೈಕೊಳ್ಳಲಿಕ್ಕೆ ಸರಕಾರವನ್ನು ಒತ್ತಾಯಪಡಿಸಬೇಕು. ಬರಗಾಲದ ಕಠೋರವಾದ ತೊಂದರೆಗಳಿಗೀಡಾಗಿ, ಬಡರೈತರನೇಕರು, ಹೊಟ್ಟೆ ಹೊರೆದುಕೊಳ್ಳಲು ಪರಸ್ಥಳಗಳಿಗೆ ಹೋಗುವಾಗ್ಯೂ, ಇನ್ನಿತರರು ಅರಹೊಟ್ಟೆಯಿಂದ ಬಳಲುತ್ತಿರುವಾಗ್ಯೂ, ಮಾನವಂತರು ಸಾಲದಲ್ಲಿ ಮುಳುಮುಳುಗಿ ಏಳುತ್ತಿರುವಾಗ್ಯೂ, ಇವೆಲ್ಲವನ್ನೂ ಇದೇ ಜಿಲ್ಲೆಯಲ್ಲಿ ಕಣ್ಣಾರೆ ಕಾಣುತ್ತಿರುವಾಗ್ಯೂ ಸಹ, ಸರಕಾರವೇ ಜನರಿಗೆ ಸಹಾಯ ಮಾಡುವದನ್ನು ಬಿಟ್ಟು, ಸರಕಾರದ ಪ್ರತಿನಿಧಿಗಳಾದ ಜಿಲ್ಲಾಧಿಕಾರಿಗಳು ರೈತರಿಂದಲೇ ಸಹಾಯ ಬೇಡುತ್ತಿರುವದೂ, ಸಹಸ್ರಾವಧಿ ರೂಪಾಯಿಗಳನ್ನು ಕಲೆಹಾಕಿಕೊಡಿರೆಂದು ಆಗ್ರಹಪಡುವದೂ ಎಲ್ಲಿಯ ನ್ಯಾಯವು! ಇಷ್ಟೊಂದು ಹಣ ಕೂಡಿಸಿಕೊಡಲಿಕ್ಕೆ ಒಡಸ್ಯತರು ಹೊಟ್ಟೆ ಸುಟ್ಟುಕೊಳ್ಳಬೇಕೋ?! ಇನ್ನು, ರೈತರು ಕಾಲ ಚಾಚಿಕೊಂಡು ಕೂಡ್ರಬೇಕೆಂದು ನಮ್ಮ ಮತವಲ್ಲ. ಮಳೆಬೆಳೆಗಳ ಸಮೃದ್ಧಿಯಿಂದ ರೈತರು ಧನಕನಕ ಸಂಪನ್ನರಿದ್ದಾಗ್ಯೆ ಧನಸಂಚಯ ಮಾಡುವದಕ್ಕಾಗಿ ಜಿಲ್ಲಾಧಿಕಾರಿಗಳೂ ಸಹಾಯಕರಾಗಿದ್ದರೆ ಆ ಮಾತು ಬೇರೆ. ಆದರೆ ಗಡ್ಡಕ್ಕೆ ಬೆಂಕಿ ಹತ್ತಿದ ಈಗಿನ ಸಮಯದಲ್ಲಿ ಒಡ್ಡು ಹಾಕಿಸಲಿಕ್ಕೂ, ಹಳ್ಳಗಳನ್ನು ತೋಡಿಸಲಿಕ್ಕೂ, ಪರದೇಶದಿಂದ ಯಂತ್ರಗಳನ್ನು ತರಿಸಲಿಕ್ಕೂ, ಉರಿಯುತ್ತಿದ್ದು ಬಡವಾಡುವ ರೈತರಿಂದಲೇ ಹಣ ಕಲೆಹಾಕುವದೆಂದರೆ "ಚೇಣೆ ಒಂದು, ಬರೆ ಒಂದು." ಎಂಬಂತಾಗುವದು. ಧನಸಹಾಯವನ್ನು ಮುಖ್ಯವಾಗಿ ಸರಕಾರವೇ ಮಾಡಬೇಕು; ದೈವ್ಯಳ್ಳ ಕಟ್ಟಿಂದ ರೈತರ ವಿಶ್ವಾಸಕ್ಕೆ ಪಾತ್ರರಾದ ಮುಖಂಡರನ್ನು ಕರೆಸಿಕೊಂಡು, ಆಣೆವಾರಿ, ತೆರಿಗೆಯಲ್ಲಿ ಕಂತುಗಳ ಸೌಕರ್ಯ, ಸೂಟು, ಬಡವರಿಗಾಗಿ ಕೂಲಿ ದೊರೆಯುವಂತಹ ಕೆಲಸ, ಕಡಿಮೆ ಬಡ್ಡಿಯ ಸಾಲ ಇವೇ ಮೊದಲಾದ ಯೋಗ್ಯ ಉಪಾಯಗಳನ್ನು ಕೈಕೊಳ್ಳಬೇಕು. ಅಂದರೆ ಮಾತ್ರ ರೈತರಿಗೆ ಈಗಿನ ಕಠಿಣಕಾಲದಲ್ಲಿ ನಿಜವಾಗಿ ಕಲ್ಯಾಣಮಾಡಿದಂತಾಗುವದು.

ಶ್ರೀಮನ್ಮೂಲ ಸೀತಾರಾಮೋ ವಿಜಯತೇ.

---:o0o:---

ಅಯ್ಯಾ ಸಂಪಾದಕ ಮಹಾಶಯರೇ,

“ಕನ್ನಡಿಗ”ನ ಕಳೆದ ಸಂಚಿಕೆಯ ಮೂಲಕ ಶ್ರೀ ಮಂತ್ರಾಲಯದ ಉತ್ಸವಾಮೃತವನ್ನು ತಮ್ಮ ಪ್ರತಿನಿಧಿಗಳೊರ್ವರು ತಮ್ಮ ವಾಚಕರಿಗೆ ಪಾನ ಮಾಡಿಸಿರುವರಷ್ಟೆ? ಆದರೆ ಆ ಅಮೃತದಲ್ಲಿ ಒಂದು ಕೂವಲೆಳೆಯು ಮಿಶ್ರವಾಗಿ ಎಷ್ಟೋ ಜನರಿಗೆ ಅಸಮಾಧಾನವಾಗಿದ್ದರಿಂದ ಅದನ್ನಷ್ಟು ತಮ್ಮ ಪ್ರತಿನಿಧಿಗಳ ದೃಷ್ಟಿಪಥಕ್ಕೆ ತಂದು ಕೊಡಬೇಕೆಂದು ನನ್ನ ಉದ್ದೇಶ. ಆದ್ದರಿಂದ ಈ ಎರಡು ಸಾಲುಗಳಿಗೆ ಆಶ್ರಯ ಕೊಡಬೇಕೆಂದು ತಮಗೆ ವಿನ್ನಪಿಸದಿರೆನು.

ಶ್ರೀಮೂಲರಾಮನು ತಮ್ಮ (ರಾಯರ) ಮಠದಲ್ಲಿಯೇ ಇದ್ದಾನೆಂದು ಅವರು ಸಹಸಾ ವಿಧಾನಿಸಿದ್ದಾರೆ. ಆದರೆ ಉತ್ತರಾದಿ ಮಠದ ರತ್ನಖಚಿತವಾದ ಅಗ್ರಪೀಠದ ಮೇಲೆ ನಿತ್ಯಾವಿಯೋಗಿನಿಯಾದ ಶ್ರೀಮೂಲಾ ಸೀತಾದೇವಿಯೊಡನೆ ಶ್ರೀಮನ್ಮೂಲ ರಾಮನು ಅದ್ಯಾಪಿ ರಾರಾಜಿಸುತ್ತಿರುವನೆಂಬ ಬಗ್ಗೆ ಹೇರಳ ಪ್ರಮಾಣಗಳೂ, ಪುಷ್ಕಳ ಪುರಾವೆಗಳೂ ಇದ್ದೇ ಇರುತ್ತವೆ. ಅವುಗಳನ್ನು ಇಲ್ಲಿ ವಿವರಿಸುವದು ಸಮಯವೂ ಅಲ್ಲ; ಸಮಂಜಸವೂ ಅಲ್ಲ. ಆದ್ದರಿಂದ ನಾವು ನಮ್ರತನದಿಂದ ತಮ್ಮ ಪ್ರತಿನಿಧಿಗಳಿಗೆ ಕೇಳುವದೇನಂದರೆ, ಪರಸ್ಪರರಲ್ಲಿ ಸಹಕಾರವೂ ಪ್ರೀತಿಯೂ ಹೆಚ್ಚಾಗಬೇಕೆಂದಿದ್ದರೆ, ಪರಮತೀಯರಿಗೆ ವಿರೋಧವಾಗದ ವಿಧಾನಗಳೊಂದಿಗೆ ಆತ್ಮಗುರುಗಳ ಬಗ್ಗೆಯೂ ಸ್ವೀಯ ಮಠದ ಬಗ್ಗೆಯೂ ಬೇಕಾದಷ್ಟು ಸ್ತುತಿಪರವಾದ ಲೇಖಗಳನ್ನು ಬರೆದುಕೊಳ್ಳಬೇಕು. ಅಂತಃಕಲಹಕ್ಕೆ ಕೋಡು ಮೂಡಿಸಬೇಕೆಂದಿದ್ದರೆ ಮಾತ್ರ ತಮಗೆ ಇಷ್ಟ ತೋರಿದ್ದನ್ನು ಮಾಡಬೇಕು. ನಮ್ಮ ಪ್ರತ್ಯವಾಯವಿಲ್ಲ.

— ಪರಮತೀಯ.

ಮತ್ತೆ “ವೈಭವ”ಕಾರರು!

‘ಕರ್ನಾಟಕ ವೈಭವ’ದಲ್ಲಿ ಮತ್ತೆ ‘ಮೋಲೆ’ಯ ವಿಷಯವು ಚರ್ಚಿಸಲ್ಪಟ್ಟಿದೆ. ಅದಕ್ಕೆ ಲೇಖಕರ ಸಹಿ ಇರದ್ದರಿಂದ, ಅದು ಸಂಪಾದಕರಿಂದ ಬರೆಯಲ್ಪಟ್ಟದೆಂದು ತಿಳಿಯುತ್ತೇನೆ.

ಸಂಪಾದಕ ಮಹಾಶಯರು ತಮಗೆ ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುವದನ್ನು ಬಿಟ್ಟುಕೊಟ್ಟು ಸೀತಾತನಯರ ಈ ವಿಷಯಕ್ಕೆ ಸಂಬಂಧವಿಲ್ಲದ ಕ್ಷುಲ್ಲಕ ದೋಷವನ್ನು ಹುಡುಕಲು ಯತ್ನ ಮಾಡಿದ ಸಣ್ಣ ಮನಸ್ಸಿನ ರೀತಿಯನ್ನು ನೋಡಿದರೆ ಅತೀ ವ್ಯಸನವಾಗುತ್ತದೆ. ಚಿರಾಪುಂಜಿಯಲ್ಲಿ ೬೧೦ ಇಂಚು ಮಳೆಯಾಗುತ್ತಿರಲು ೫೧೦ ಇಂಚೆಂದು ಬರೆದುದು ಹೇಗೆಂದು ‘ವೈಭವ’ಕಾರರ ಮಹಾ ಪ್ರಶ್ನೆಯು! ಭಪ್ಪರೆ ಲೇಖಕನೇ, ನಿನ್ನ ವಿಸಂಗತ ಶೈಲಿಯನ್ನು ಇನ್ನು ಹೊಸದಾಗಿ ಕನ್ನಡಿಗರು ಕಲಿಯಬೇಕು! ಭೂಗೋಲದೊಳಗೆ ಚಿರಾಪುಂಜಿಯು “ಮೋಲೆ” ಮಳೆಯಾಗುವದೆಂದು ಬರೆದಿರುವದೋ ಅಥವಾ ಚಿರಾಪುಂಜಿ“ಯಲ್ಲಿ” ಮಳೆಯಾಗುವದೆಂದಿರುವದೋ ಎಂಬದನ್ನು ನೋಡುವದೇ ನಮ್ಮ ಮುಖ್ಯೋದ್ದೇಶವಲ್ಲದೆ, ಚಿರಾಪುಂಜಿಯಲ್ಲಿ ಎಷ್ಟು ಇಂಚು ಮಳೆಯಾದ ಭಾಗ್ಯವು ನಮಗೇನು? ಇಂಥ ಪಟ್ಟಣದ “ಮೋಲೆ” ಮಳೆಯಾಯಿತೆಂಬ ವಾಕ್ಯದಲ್ಲಿ ತಪ್ಪೇನೆಂದು ಸಂಪಾದಕರು ಕೇಳುತ್ತಾರೆ. ಸಮಗ್ರ ಆರು ತಿಂಗಳು ರಾಮಾಯಣವನ್ನು ಕೇಳಿ ಕಡೆಗೆ ರಾಮನಿಗೆ ಸೀತೆಯೇನಾಗಬೇಕೆಂದು ಕೇಳಿದಂತೆಯೇ ಈ ಪ್ರಶ್ನೆಯು! ಪೌರಾಣಿಕ ಪುತ್ರ, ವಿನಾಯಕ ಪುತ್ರರ ಲೇಖಗಳನ್ನು ತಮ್ಮ ವರ್ತಮಾನ ಪತ್ರಗಳಲ್ಲಿ ಪ್ರಕಟಿಸಿ, ಅವುಗಳ ಉತ್ತರಗಳನ್ನೂ ‘ಕನ್ನಡಿಗ’ದಲ್ಲಿ ಓದಿ, ಈ ಟೀಕೆಯು ತಮ್ಮ ವಿಷಯವಾಗಿಯೇ ಇರುತ್ತಿದ್ದರೂ ಸಂಪಾದಕ ಮಹಾಶಯರು ಹೀಗೆ ಅರಿಯದವರಂತೆ ಕೇಳುವದು ಆಶ್ಚರ್ಯವಲ್ಲವೆ? ಸಾಧಾರಣ ನಾವಿರುವ ನೆಲಕ್ಕಿಂತಲೂ ಎತ್ತರವಾದ ಸ್ಥಳಗಳ ಬಗ್ಗೆ ಮಾತನಾಡುವದಾದರೆ ‘ಮೋಲೆ’ ಎಂಬ ಶಬ್ದವನ್ನುಪಯೋಗಿಸುವ ರೂಢಿಯುಂಟೆಂದೂ ಮಳೆಯು ಪಟ್ಟಣದ “ಮೋಲೆ” ಯಾಯಿತೆಂಬದು, ಲೇಖಗಳಲ್ಲೆಲ್ಲಿಯೂ ಇಲ್ಲವೆಂದೂ ನಾನು “ತನಯ”ದ್ವಯರಿಗೆ ಹೇಳಿದ್ದನ್ನೇ ಈಗ್ಗೆ ಸಂಪಾದಕ ಮಹಾಶಯರಿಗೂ ಹೇಳಲಪೇಕ್ಷಿಸುತ್ತೇನೆ.

ಇನ್ನು ಸಂಪಾದಕರ ಮೂರನೆಯ ವಿಧಾನವೆಂದರೆ, ರೂಢಿಯೊಳಗೆ ಪ್ರಚಾರದಲ್ಲಿರುವ ಶಬ್ದಗಳನ್ನು ಲೇಖಗಳಲ್ಲೇಕೆ ಉಪಯೋಗಿಸಬಾರದೆಂಬದು. ರೂಢಿಯಲ್ಲಿದ್ದ ಸುಶಿಕ್ಷಿತರ ಭಾಷೆಯೇ ಬರೆಯುವ ಭಾಷೆಯಾಗಬೇಕೆಂಬದು ಪಂಡಿತರ ಅಭಿಪ್ರಾಯವಿದ್ದದು ನಿಜ. ಆದರೆ “ಮೋಲೆ” ಎಂಬ ಶಬ್ದದಷ್ಟೇ ಅಪಭ್ರಷ್ಟವಾದ “ಹಸೀ ಒದ್ದೆ” “ಚಾತುರ್ಮಾಸ್ಯ ನಾಲ್ಕು ತಿಂಗಳು” ಮುಂತಾದವುಗಳನ್ನು ಉಪಯೋಗಿಸುವ ರೂಢಿಯುಂಟೆಂದು ಅವುಗಳನ್ನೂ ಲೇಖನಗಳಲ್ಲಿ ಉಪಯೋಗಿಸುವದು ಸಮಂಜಸವೇ?

ಪಟ್ಟಣದ ‘ಮೋಲೆ’ ಈ ವಾಕ್ಯವು ತಪ್ಪಾದುದೆಂದು ನಾನು ಯಾವ ವ್ಯಾಕರಣದ ಆಧಾರದಿಂದ ನುಡಿಯುತ್ತೇನೆಂಬದು ತಮ್ಮ ಕಡೆಯ ಪ್ರಶ್ನೆಯಲ್ಲವೇ? ಮೊದಲು ಆ ವಾಕ್ಯವು ಶುದ್ಧವಾಗಿದೆಂಬದಕ್ಕೆ ತಮಗಾವ ವ್ಯಾಕರಣವು ಆಧಾರಭೂತವಾಗಿರುವದೆಂಬದನ್ನಷ್ಟು ಸಂಪಾದಕರು ಬೆಳಕಿಗೆ ತರಲಿ, ಆ ಮೇಲೆ ನಾನು ಯಾವ ವ್ಯಾಕರಣದ ಆಧಾರದಿಂದ ಈ ವಾಕ್ಯವು ತಪ್ಪಿದೆಂಬದನ್ನು ಹೇಳಬಲ್ಲೆನು.

—ಸೀತಾತನಯ.

ಕರ್ನಾಟಕ ಏಕೀಕರಣದ ಸುದ್ದಿಗಳು.

‘ಹೆರಾಲ್ಡ’ ಪತ್ರಿಕೆಯಲ್ಲಿ ಶ್ರೀ ದಿವಾಕರರು ಒಂದು ಲೇಖ ಪ್ರಕಟಿಸಿದ್ದಾರೆ. ಅದರಲ್ಲಿ ಟೈಮ್ಸಕಾರರ ವಿಧಾನಗಳೆಲ್ಲ ಖಂಡಿಸಲ್ಪಟ್ಟಿವೆ

ಬಾಗಲಕೋಟೆ, ಹುನಗುಂದಗಳಲ್ಲಿ ಏಕೀಕರಣ ಸಭೆಯ ಅರ್ಜಿಗೆ ಸಹಿ ದೊರಕಿಸುವ ಕಾರ್ಯವು ಉತ್ಸಾಹದಿಂದ ಸಾಗಿದೆ.

ಶ್ರೀ ಬುರ್ಲಿಯವರು ಬೆಳಗಾವಿ ಜಿಲ್ಲೆಯಲ್ಲಿ ಸಂಚರಿಸಿ, ಚಿಕೋಡಿಯಲ್ಲಿ ಶ್ರೀ ಲೇಂಗಡೆಯವರ ಸಹಾಯದಿಂದ ೨½ ಸಾವಿರ ಸಹಿಗಳನ್ನು ದೊರಕಿಸಿದ್ದಾರೆ.

ರಂಗಭೂಮಿಯ ಸಮಾಚಾರ.

ಅಂಬಾಪ್ರಸಾದಿಕ ನಾಟಕ ಮಂಡಳಿಯವರು ರಾಣೇಬೆನ್ನೂರಿನಿಂದ ಚಿತ್ರದುರ್ಗಕ್ಕೆ ಹೋಗಿದ್ದಾರೆ.

ವಿಶ್ವಗುಣಾದರ್ಶದವರ ಬೆಂಗಳೂರ ಕಾರ್ಯಕ್ರಮವು ಮುಗಿಯುತ್ತ ಬಂದಿದ್ದು, ಮತ್ತೆ ಮೈಸೂರಿಗೆ ದಸರೆಯ ಮಹೋತ್ಸವಕ್ಕಾಗಿ ಬೇಗನೇ ಹೋಗತಕ್ಕವರಿದ್ದಾರೆ.

ಶ್ರೀಕೃಷ್ಣ ಸಂಗೀತ ಮಂಡಳದವರ ಬೆಂಗಳೂರ ಕಾರ್ಯಕ್ರಮವು ೧೫ ದಿನಗಳ ವರೆಗೆ ಶ್ರೀಮತಿ ಗಂಗೂಬಾಯಿಯವರ ಅಸ್ವಸ್ಥೆಗಾಗಿ ತಡೆದುನಿಂತಿತ್ತು. ಈ ವಾರದಿಂದ ಮತ್ತೆ ಪ್ರಾರಂಭವಾಗಿದೆ.

ಪ್ರೊ. ಕೆರೂರ ವಾಸುದೇವಾಚಾ-
-ರ್ಯರೂ ಕ್ರಮಿಕ ಪುಸ್ತಕಗಳೂ.

ಕನ್ನಡ ಐದನೇ ಪುಸ್ತಕವು.

ಸಚಿತ್ರಭಾರತದ ನಾಲ್ಕನೆಯ ಸಂಚಿಕೆಯಲ್ಲಿ ನಾವು ಕನ್ನಡ ನಾಲ್ಕನೆಯ ಪುಸ್ತಕದ ಪರೀಕ್ಷಣವನ್ನು ಮಾಡಿದ ಕಾಲಕ್ಕೆ ಭಾರತದ ಮುಂದಿನ ಸಂಚಿಕೆಗಳಲ್ಲಿ ಐದನೆಯ ಹಾಗೂ ಆರನೆಯ ಪುಸ್ತಕಗಳನ್ನಾದರೂ ಸಮಾಲೋಚಿಸಿ ನೋಡುವೆವೆಂದು ಹೇಳಿದ್ದೆವಷ್ಟೆ? ಆ ಮೇರೆಗೆ 'ಕನ್ನಡ ಐದನೇ' ಪುಸ್ತಕವನ್ನು ತೆಗೆದುಕೊಂಡು ಓದಲಾರಂಭಿಸಲಾಗಿ ಪರೀಕ್ಷಣದ ಕೆಲಸವು ಸುಲಭವಾದದ್ದಾಗಿ ಕಂಡುಬರಲಿಲ್ಲ. ಪಾಠಪಾಠಗಳಲ್ಲಿ ದೋಷಗಳು ತಕ್ಕಮಟ್ಟಿಗೆ ಇದ್ದೇ ಇರುತ್ತವೆ. ಅವುಗಳನ್ನೆಲ್ಲ ಹಿಡಿಹಿಡಿದು ನೋಡಿ ಪರೀಕ್ಷಿಸಲು ಅವಕಾಶವೆಲ್ಲಿ? ಆದಕಾರಣ ಈ ಪುಸ್ತಕದೊಳಗಿನ ಹಲಕೆಲವು ಅಪದ್ಧವಾದ ಶಬ್ದಪ್ರಯೋಗ ವಾಕ್ಯರಚನೆ ಮುಂತಾದವುಗಳನ್ನು ಉಪೇಕ್ಷಿಸಿ, ತರ್ಕ ಅನುಮಾನಾದಿಗಳಿಗೂ ನಿಜವಾದ ಸಂಗತಿಗಳಿಗೂ ಪ್ರತ್ಯಕ್ಷದರ್ಶನದಲ್ಲಿಯೇ ವಿರುದ್ಧವಾಗಿ ತೋರುವ ಕೆಲವು ದೋಷಗಳನ್ನು ಮಾತ್ರ ಸಚಿತ್ರಭಾರತದಲ್ಲಿಯ ಸ್ಥಳಾವಕಾಶವನ್ನು ನೋಡಿಕೊಂಡು ಇಲ್ಲಿ ವಿವರಿಸುತ್ತೇವೆ.

ವಾಙ್ಮಯ ಸಾಮ್ರಾಟ್

ಪ್ರೊ. ಕೆರೂರ ವಾಸುದೇವಾಚಾರ್ಯರು.

ಪಾಠ ೧ ಪೌರುಷ—

ಪೌರುಷವೆಂದರೇನೆಂಬುದರ ನಿಶ್ಚಿತವಾದ ಕಲ್ಪನೆಯು ಬಾಲಕರಿಗೆ ಆಗುವಂತೆ ಅದರ ವ್ಯಾಖ್ಯೆಯನ್ನಾಗಲೀ, ಸ್ವರೂಪ ವರ್ಣನೆಯನ್ನಾಗಲಿ ಗ್ರಂಥಕರ್ತರು ಮಾಡಿಲ್ಲ. ಅಲ್ಲೊಂದು ಇಲ್ಲೊಂದಾಗಿ ಉದುರಿ ಬಿದ್ದಿರುವ ವಾಕ್ಯಗಳನ್ನಾರಿಸಿಕೊಂಡು ವಾಚಕರು (ಸಾಲೆಯ ಎಳೆ ಮಕ್ಕಳು) ಪೌರುಷದ ಕಲ್ಪನೆಯನ್ನು ಮಾಡಿಕೊಳ್ಳಬೇಕಾಗಿದೆ. "ದಿವಸಾಲು ವ್ಯಾಯಾಮವನ್ನು ಮಾಡಿ ಮನಸ್ಸನ್ನು ಅತ್ಯುತ್ತಮ ರೀತಿಯಾಗಿ ತಿದ್ದಿದರೆ ಮಕ್ಕಳು ಪೌರುಷವುಳ್ಳವರಾಗುತ್ತಾರೆ"ಂದು ಪಾಠದ ಕಡೆಯ ವಾಕ್ಯದಲ್ಲಿ ಹೇಳಿಸಿದ್ದಾರೆ. ಮುರುಕು-ಮುರುಕಾಗಿರುವ ಇನ್ನೂ ಎರಡು ವಾಕ್ಯಗಳಿಂದಲಾದರೂ ಇದೇ ಅರ್ಥವನ್ನು ಸೂಚಿಸಿಕೊಳ್ಳಬೇಕಾಗಿದೆ.

ಪೌರುಷವೆಂದರೇನೆಂಬುದನ್ನು ಚನ್ನಾಗಿ ವಿವರಿಸಿ ಹೇಳಿ, ಅದರ ಪ್ರಶಂಸೆಯನ್ನು ಮಾಡಿ ಪೌರುಷವುಳ್ಳ ಮಹಾತ್ಮರು ಮಾಡಿದ ಸಾಹಸದ ಮಹತ್ಕಾರ್ಯಗಳ ವರ್ಣನೆಯನ್ನು ಮಾಡಿದ್ದರೆ ಓದುವವರ ಮೈಯಲ್ಲಿ ಪೌರುಷದ ಗಾಳಿಯು ತುಂಬುತ್ತಿದ್ದಿಲ್ಲವೆ? ಆರೋಗ್ಯಶಾಸ್ತ್ರದ ಬಲಪಡಿಸಿದ ಯುವಕರನ್ನೂ ಮುದುಕರನ್ನು ಬಿಡುವುದಿಲ್ಲ. ಕೆಲವು ವೈದ್ಯಕದ ತಂತ್ರಗಳನ್ನೂ ಪ್ರಾಸ ವ್ಯಾಸ ನೀತಿಯ ವಸ್ತುಗಳನ್ನು ಒತ್ತಟ್ಟಿಗೆ ಕೂಡಿಸಿ ಮುದ್ದೆಯನ್ನು ಮಾಡಿ ಮಕ್ಕಳ ಕೈಯಲ್ಲಿ ಕೊಟ್ಟರೆ ಅದರಿಂದ ಅವರಲ್ಲಿ ಪೌರುಷವು ಹುಟ್ಟಬಲ್ಲದೆ?

"ಬಂಗಾರಕ್ಕೆ ಸುಗಂಧವು ಕೂಡಿದಂತಾಗುವದು" ಇದು ಅಸಂಭವಾಲಂಕಾರವೆಂಬ ಹೊಸ ಅಲಂಕಾರವು!! "ಗಂಧಂ ಸುವರ್ಣೇ ಫಲಮಿಕ್ಷುದಂಡೇ" ಎಂಬ ಶ್ಲೋಕವನ್ನು ಹರಿದಾಸನು ಹೇಳಿ ಬ್ರಹ್ಮದೇವರ ಜಡಮತಿಯನ್ನು ಕುರಿತು ಅಪಹಾಸ ಮಾಡಿದ್ದನ್ನು ಕೇಳಿಕೊಂಡಾಕ್ಷಣವೇ ಲೇಖಕರು ಅದನ್ನು ಐದನೆಯ ಪುಸ್ತಕದಲ್ಲಿ ಸೇರಿಸಬಹುದೆ?

ಪಾಠ ೮ ಮಿತಭಾವ— ಮಿತಭಾವದ ಮಾಹಾತ್ಮ್ಯವನ್ನು ಕೇಳಿ.!!! "ಮಿತಭಾವದಿಂದಿರುವ ಮನುಷ್ಯರು ನಿರೋಗಿಗಳೂ, ತೀಕ್ಷ್ಣಬುದ್ಧಿಯುಳ್ಳವರೂ, ಶಾಂತಸ್ವಭಾವದವರೂ, ಗಂಭೀರಮುದ್ರೆಯವರೂ ಆಗಿರುವರು. ವಾ; ವಾ,! ಶಾಬಾಸ್!! ಭಲೇ!!! ಮಿತಭಾವದವರು ಉದಾರರೂ ಶೂರರೂ ಪುಣ್ಯಶೀಲರೂ ಸುಂದರರೂ ಆಗುವದಿಲ್ಲವೇಕೆ? ಮತ್ತೆ ಕೇಳಿರಿ! "ಇವರು ತಮ್ಮ ಚುರುಕು ಬುದ್ಧಿಯಿಂದ ವಿಷಯಗ್ರಹಣ ಶಕ್ತಿಯನ್ನು ಹೆಚ್ಚಿಸಿಕೊಂಡು ಆಯುಷ್ಯವನ್ನು ಸುಖದಿಂದ ಕಳೆಯುವರು. ಸುಖದ ಸಾಧನಗಳಂತೂ ದೇವರಿಂದ ಅವರಿಗೆ ಅನಾಯಾಸವಾಗಿ ಪ್ರಾಪ್ತವಾಗಿರುವವು!" ಅಹುದೇನು ದೇವರೆ? ಸತ್ಯವಾಗಿ ಹೇಳು; ಮಂಚಿಸಬೇಡ ಕಂಡಿಯಾ!!! ಗ್ರಂಥಕರ್ತನೆ, ಗುರುವೆ, ಎಲ್ಲಿಯ ಒಳಬಿಡಿತವನ್ನು ಪಡೆದಿ? ಮಾನವ ದೇಹಧರನಾದ ಇಷ್ಟದೇವತೆಯ ಮಾನಸಪೂಜೆಯನ್ನು ಮಾಡಿ ನೀನು ಆ ದೇವತೆಯ ಸ್ತುತಿಯನ್ನು ಈ ಪರಿಯಾಗಿ ಮಾಡಿ ಚಿಕ್ಕಮಕ್ಕಳಿಗೆ ಟೊಪ್ಪಿಗೆ ಹಾಕಿದಿ!

ಪಾಠವನ್ನೋದಿ ನೋಡಲಾಗಿ ಮಿತಭಾವವೆಂದರೆ, (೧) ಪಚನವಾಗುವಷ್ಟು ಆಹಾರವನ್ನು ತಿನ್ನುವದು, (೨) ನಿಂತಾಯಿಯನ್ನು ಕುಡಿಯದಿರುವದು, (೩) ರಾತ್ರಿಯಲ್ಲಿ ಜಾಗರಣೆಯನ್ನು ಮಾಡದಿರುವದು, (೪) ವ್ಯಾಯಾಮವನ್ನು ಮಾಡುವದು, (ವಿಲಕ್ಷಣವಾದ ಮಿತಭಾವದ ಲಕ್ಷಣವಿದು!) ಈ ಕ್ರಿಯಾಚತುಷ್ಟಯದಿಂದ ಮನುಷ್ಯನು ತೀಕ್ಷ್ಣವಾದ ಬುದ್ಧಿಯುಳ್ಳವನಾಗುತ್ತಾನಂತೆ! ಅವನ ದುರ್ಗುಣಗಳೆಲ್ಲ—ಕಾಮ ಕ್ರೋಧ ಮದ ಮತ್ಸರಾದಿಗಳು ನಷ್ಟವಾಗುತ್ತವೆ. ಕೇಳಿದಿರಾ? ಮತ್ತೇನು? ವಿಷಯಗ್ರಹಣಶಕ್ತಿಯು ಹೆಚ್ಚಾಗುವದಿಲ್ಲವೆ? (ಮುಂದೆ ಸಾಗುವದು.)

ಮದ್ರಾಸ ಕರ್ನಾಟಕ.

ಬಳ್ಳಾರಿ ಜಿಲ್ಲೆಯ ಹಲವು ಭಾಗಗಳಲ್ಲಿ ಮಾರಿಕಾ ಹಾಗೂ ಪ್ಲೇಗು ರೋಗಗಳು ಜನರನ್ನು ಬಹಳ ತೊಂದರೆಯನ್ನು ಕೊಡುತ್ತಿವೆ

ನನಗೆ ಹೊಳೆದಂತೆ

ಕಳೆದ ಸಂಚಿಕೆಯ ಮೊದಲಿಗೆ 'ವೈಭವ'ಕಾರರು ಸೇರಿಸಿದ ವಕ್ತ್ರ ಅದು ಆಗಿಯುವಂತೆ ಮಾಡಿರುವರು. 'ಶೇಟ'ನ ಬಗ್ಗೆ ನಾನು ಹಾಗೆನ್ನಬಹುದು ಬರೆದಿರುವೆನು. ಎಲ್ಲರೂ ಸಮಾಧಾನವನ್ನು ಹೊಂದಿರುವರು. ತಿಳಿಯದಿದ್ದವರಿಗೆ ಹೊಸ ಮಾತನ್ನು ತಿಳಿಸುವದು ಸುಲಭ, ಆದರೆ ತಿಳಿದಿದ್ದರೂ, ತಿಳಿಯದಂತೆ ನಟಿಸುವವರಿಗೆ ದೂರಿನ ಜೋಡು ಏಟುಗಳೇ ಸಮರ್ಪಕವಾದ ಉತ್ತರವು. ಇನ್ನು, "ನೋಲಿ"ಯಾದ ಮಲೆಯ ಕತೆಯ ಬಗ್ಗೆ. ಮೊದಲು ಎಲ್ಲ ರೀತಿಯಿಂದಲೂ 'ನೋಲಿ' ಪ್ರಯೋಗವು ಸರಿಯಾಗಿದೆಯೆಂದು 'ವೈಭವ'ಕಾರರು ವಾದಿಸಿದರು. ಗ್ರಂಥಸ್ಥವಾಗಿದೆಯೆಂದೂ ಸಾಧಿಸಿದರು. ಅವು ನಿರಾಧಾರವಾದದ್ದರಿಂದ, ನಾವಿದನ್ನು ವಾಙ್ಮಯದಲ್ಲಿ ರೂಢ ಮಾಡಬಾರದೆಂದೆವು. ಈಗ ಹೊಸ ಹಾದಿಯನ್ನು ಹಿಡಿದು ಕೇಳತೊಡಗಿದ್ದಾರೆ. ಶಾಸ್ತ್ರಸಮ್ಮತವೂ, ನಾಟ್ಯಕಲೆಯ ಪರಂಪರೆಗೆ ಅನುಕೂಲವೂ ಆಗದಿದ್ದವುಗಳನ್ನೆಲ್ಲ "ಗರುಡ ಚಕ್ರ"ವೆಂಬದಾಗಿ ತಿಳಿಯಿರೆಂದು ಶ್ರೀ ಗರುಡ ಸದಾಶಿವರಾಯರು ಸಾರಿದ್ದು ಈಗ್ಗೆ ನೆನಪಾಗಿದೆ. ಅದೇ ಪ್ರಕಾರ "ವೈಭವಚಕ್ರ"ವನ್ನೂ ಪ್ರಾರಂಭಿಸಬೇಕೆಂದಿದ್ದರೆ ಅವಶ್ಯವಾಗಿ 'ವೈಭವ'ಕಾರರು ಪ್ರಾರಂಭಿಸಲಿ! ನನ್ನದೇನೂ ಅತಂಕವಿಲ್ಲ. ಇನ್ನು 'ವೈಭವ'ದ ಸಂಪಾದಕೀಯ ಲೇಖಗಳಲ್ಲಿಯ ದೋಷಗಳನ್ನೆತ್ತಿ ನಾನು ಅವರಿಗೆ ಕಾಣಿಕೆಯಾಗಿ ಕೊಟ್ಟದ್ದನ್ನು, 'ವೈಭವ'ಕಾರರು ಹಿಂದಕ್ಕೆ ಇಟ್ಟು, ೫೦೦ ಇಂಚಿನಲ್ಲಿ ೬೦೦ ಇಂಚಿಯೆಯೆಂದು ದೊಡ್ಡ ರಾದ್ಧಾಂತವನ್ನೇ ಬರೆದಿರುವರು! ಅಂತೂ ಈ 'ನೋಲಿ'ಯ ಕತೆಯು ಬಹು ರಮ್ಯವಾಗಿದೆಯಷ್ಟೇ! ಇನ್ನೂ ಎಂತೆಂಥ ಮೋಜು ಮುಂದೆ ಬರುವದೋ ನೋಡೋಣ. * *

ಬೆಳೆಗಳನ್ನು ಕೆಡಿಸುತ್ತಿರುವ ಹಂದಿಗಳನ್ನು ನಾಶಮಾಡಲಿಕ್ಕೆ ಬಂದೂಕಿನ ಹೆಚ್ಚಿನ ಸೌಕರ್ಯಗಳನ್ನು ಕೊಟ್ಟರೆ, ಜನ ಸ್ನೇಹ ಪ್ರಾಣಿಗಳು ಹಿಂಸೆಪಡುತ್ತವೆ. ಆದ್ದರಿಂದ ಹಾಗೆ ಮಾಡಲು ಆಗದೆನ್ನುತ್ತ ಮುಂಬೈ ಸರಕಾರದವರು ಶ್ರೀ ಕಕಿರ್ಯರ ಪ್ರಶ್ನೆಗೆ ಉತ್ತರ ಕೊಟ್ಟಿರು. ರೈತರಿಗಾಗಿ ಸಾಯಲು ಹುಲಿ ಹೊರಬರಬೇಕು. ಅವಕ್ಕೆ ಎಲ್ಲ ಅನುಕೂಲತೆಗಳೂ ಸರಕಾರದಿಂದ ದೊರೆಯುವವು. ಜನರ ಬೆಳೆಗಳ ಕಡೆಗೆ ಸರಕಾರದ ಲಕ್ಷ್ಯವೇ ಇಲ್ಲ! — ಹಿಮಾಂ.

ಬೆಳಗಾಂವ ಜಿಲ್ಹೆಯ ಪತ್ರ.

—:(o)(o)(o):—

(ನಮ್ಮ ಸ್ವಂತ ಸುದ್ದಿಗಾರರಿಂದ)

ಬೆಳಗಾಂವಿಯಲ್ಲಿ ಮಳೆಯು ಚೆನ್ನಾಗಿ ಆಗಿದೆ. ಆದರೂ ಗೋಕಾಕ, ಸವದತ್ತಿ ಭಾಗದಲ್ಲಿ ಇನ್ನೂ ನೀರಿನ ಕೊರತೆಯಿದೆ. ದತ್ತನ ಹುಟ್ಟಿಗೆ ತುಸು ಹಸಿಯನ್ನು ಮಾಡಿದ ಮಳೆಯು ಸದ್ದಿಲ್ಲದೆ ಆದಗಿದೆ. ಈ ವರುಷವೂ ಬರ ಬೀಳುವ ಭೀತಿಯುಂಟು.

ಬೆಳಗಾವಿಯಲ್ಲಿ ಇಷ್ಟು ದಿವಸ ಮಾರಿಕಾ ಬೇನೆಯು ಕಾಣಿಸಿತು. ಈಗ ಪ್ಲೇಗ ಬೇನೆಯು ತಲೆಯೆತ್ತಲು ಹವಣಿಸುತ್ತಿದೆ. ಊರಲ್ಲಿ ೨೧ ಮರಣಗಳಾಗಿದ್ದು ಇಲಿಗಳು ಬೀಳುತ್ತಿವೆ. ಡಾಕ್ಟರ ಜನರ ದವಾಖಾನೆಗಳಲ್ಲಿ ಮೈಲೀ ಚುಚ್ಚುವ ಕಾರ್ಯವು ಭರದಿಂದ ನಡೆದಿದೆ.

ಮೈಸೂರ ಶ್ರೀಮನ್ಮಹಾರಾಜರ ರಜತೋತ್ಸವ ಸಮಾರಂಭಕ್ಕಾಗಿ ಇಲ್ಲಿ ಅನೇಕ ಸಭೆ ದಿವಸ ಸಭೆಗೂಡಿತ್ತು. ಅದೇ ಸುಮುಹೂರ್ತದಲ್ಲಿಯೇ ಕರ್ನಾಟಕ ಏಕೀಕರಣ ಸಂಘದವರು ಸಭೆಯೊಂದನ್ನು ಕೂಡಿಸುವ ಕಾರ್ಯವನ್ನು ಆರಂಭಿಸಿರುವರು. ಇದು ವರೆಗೆ ೩೫ ಜನ ಸಭಾಸದರಾಗಿದ್ದು ಬೆಳಗಾಂವಿಯಲ್ಲಿ ೧೦೦ ಜನರು ಸಭಾಸದರಾಗಬಹುದು. ಇನ್ನು ಇಡೀ ಜಿಲ್ಹೆಯಲ್ಲಿ ಪ್ರಯತ್ನಿಸಿದರೆ ಸಂಖ್ಯೆಯು ಹೆಚ್ಚುಗುವದೆಂಬದಕ್ಕೆ ಸಂದೇಹವಿಲ್ಲ. ಕಾರ್ಯವನ್ನು ಸಟೆಯಾಗಿ ಸಾಗಿಸಬೇಕೆಂಬ ಆಗ್ರಹದ ವಿನಂತಿಯುಂಟು.

ಕಳೆದಾಟೆಯ ವಾರದಲ್ಲಿ ಇಲ್ಲಿಯ ಮಾರುತಿ ಗುಡಿಯಲ್ಲಿ ಹಿಂದುಗಳ ಹಾಗು ಸತ್ಯಶೋಧಕರ ಉತ್ತರ ಪ್ರತ್ಯುತ್ತರದ ರೂಪದ ಸಭೆಗಳು ಜರಗಿದವು. ಅಬ್ರಾಹ್ಮಣರಿಂದ ಹಿಡಿದು ಹೊರತು ಸತ್ಯಶೋಧಕರಲ್ಲಿ ಮತ್ತೆ ಏನೂ ಕಂಡುಬಂದಿಲ್ಲ.

ಲಿಂಗಾಯತ ಎಜ್ಯುಕೇಶನ್ ಸೋಸಾಯಟಿಯವರು ಬರುವ ಜೂನದಿಂದ ಬೆಳಗಾಂವಿಯಲ್ಲಿ ಒಂದು ಆರ್ಟ್ಸ ಕಾಲೇಜನ್ನು ಪ್ರಾರಂಭಿಸುವ ವಿಚಾರದಲ್ಲಿರುವರು. ಮೊದಲಿಗೆ ೨ನೇ ವರ್ಗದ ಕಾಲೇಜವನ್ನು ತೆರೆಯುವರೆಂಬ ವಾರ್ತೆಯಿದೆ.

ಹುಬಳಿಯ ನೇಕಾರರಲ್ಲಿ ವಾದ ಬೆಳೆದು, ಭಯಂಕರ ಮಾರಾಮಾರಿ. ಎಂಬ ತರುಣನು, ಮುಂಜಾನೆ ೫॥ ಘಂಟೆಗೆ ಹಾದಿ ನೇಯಲಿಕ್ಕೆ ಪ್ರಾರಂಭ ಮಾಡಿ, ಸಂಜೆ ೬ ಘಂಟೆಗೆ ೬೬ ಮೊಳ ಅಂದರೆ ನಾಲ್ಕು ಸೀರೆಗಳನ್ನು ನೇಯ್ದನು. ಒಂದು ಸೀರೆಗೆ ೨ ರೂಪಾಯಿ ಕೂಲಿ ಸಿಗುತ್ತದೆ. ಈ ಲೆಕ್ಕದ ಮೇರೆಗೆ ೧೨ ತಾಸಿನಲ್ಲಿ ೮ ರೂಪಾಯಿ ಸಿಕ್ಕಂತಾಯಿತು. ಇದನ್ನು ನೋಡಲಿಕ್ಕೆ ಸುಮಾರು ೬೦೦ ಜನರು ಕೂಡಿದ್ದರು.

ಇಲ್ಲಿಯ ಜಿಲ್ಲಾ ಸ್ಕೂಲ ಬೋರ್ಡಿನವರು ಹೊಸದಾಗಿ ೧೨೫ ಶಾಲೆಗಳನ್ನು ತೆರೆಯುವರು. ಆದರೆ ಆ ಶಾಲೆಗಳೆಲ್ಲ ಪಶ್ಚಿಮ ಭಾಗದಲ್ಲಿ ಆಗಬೇಕು; ಹಾಗೂ ಮರಾಟಿ ಭಾಷೆಯಲ್ಲಿ ಜರುಗಬೇಕೆಂದು ಮರಾಟಿ ಪತ್ರಕರ್ತರು ಹಸ್ತಪತ್ರಿಕೆಗಳನ್ನು ತೆಗೆದು ಹಂಚಲಿಕ್ಕೆ ಪ್ರಾರಂಭ ಮಾಡಿರುತ್ತಾರೆ. ಮತ್ತು ವರ್ತಮಾನ ಪತ್ರದಲ್ಲಿ ಲೇಖಗಳನ್ನು ಬರೆದು ಚಳವಳಿ ಎಬ್ಬಿಸಿರುತ್ತಾರೆ.

ತಾ॥ ೧—೯—೨೭ ರಿಂದ ಶುಕ್ರವಾರದಿಂದ ಬರುಹೋಗುವ ಮೇಲ ಉಗಿಬಂಡಿಗೆ ಬೆಳಗಾವಿಯಿಂದ ಮೂರನೇ ವರ್ಗದ ಜನರ ಸಲುವಾಗಿ ಒಂದು ಹೆಚ್ಚಿನ ಡಬ್ಬಿಯನ್ನು ಹಚ್ಚಬೇಕಾಗಿ ರೇಲ್ವೇ ಕಂಪನಿಯವರು ಗೊತ್ತು ಮಾಡಿದ್ದಾರೆ. ಇದಕ್ಕೆ ರಾ। ರಾ। ನಾಗೇಶರಾವ ಮುದಾರೆಯವರೇ ಕಾರಣರು. ಬೆಳಗಾಂವಿಯಿಂದ ಗೋಕಾವಿಯ ವರೆಗೆ ಪ್ರತಿ ಶನಿವಾರ ಬುಧವಾರಗಳ ಸಂತೆಗೆ ಜನರು ಬಂದು ಹೋಗುವರು. ಆದರೆ ಯಾವ ಸ್ಟೇಶನ್ನಗಳಲ್ಲಿ ಮೇಲು ಬಂಡಿಯು ನಿಲ್ಲುವದಿಲ್ಲವೋ ಆ ಸ್ಟೇಶನ್ನಗಳಲ್ಲಿ ಮೂರನೇ ವರ್ಗದವರಿಗೆ ಬಹು ತೊಂದರೆಯಾಗುವದನ್ನು ಎಷ್ಟೋ ಸಾರೆ ಶ್ರೀ ಮುದಾರೆ ರಾಯರಿಗೆ ತಿಳಿಸಿದೆ. ಆದರೆ ಇನ್ನೂ ಆ ಬಗ್ಗೆ ವ್ಯವಸ್ಥೆಯಾಗಿಲ್ಲ. ಇತ್ತ ಕಡೆಗೆ ಅವರು ಈಗಲಾದರೂ ಲಕ್ಷ್ಯ ಕೊಡುವರೇ?

ಕರ್ನಾಟಕವೂ ಮುಂಬೈ ಕಾಯದೇ ಮಂಡಲವೂ.

(ಮೊನ್ನೆ ಸಮಾಪ್ತವಾದ ಈ ಕಾಯದೇ ಮಂಡಲದಲ್ಲಿಯ ಪ್ರಶ್ನೋತ್ತರಗಳಿಂದ ಸಂಗ್ರಹಿಸಿದ್ದು.)

(೧) ಅಂಚೆ ಹಾಗೂ ಮುಲಕೀ ಖಾತೆಯಲ್ಲಿ ಕನ್ನಡ ನಮೂನೆಗಳಿರಬೇಕಾಗಿ ಮುಂಬೈ ಸರಕಾರದ ಕಡೆಗೆ ಯಾವ ಕನ್ನಡಿಗರಿಂದಲೂ ಅರ್ಜಿಗಳು ಬಂದಿಲ್ಲ; ಅದುದರಿಂದ ಕನ್ನಡ ನಮೂನೆಗಳ ಪ್ರಚಾರಕ್ಕಾಗಿ ಸರಕಾರವು ಏನನ್ನೂ ಮಾಡಿಲ್ಲ.

(೨) ಕರ್ನಾಟಕ ಏಕೀಕರಣದ ಬಗ್ಗೆ ಉ. ಕರ್ನಾಟಕದ ಜಿಲ್ಹಾ ಕಲೆಕ್ಟರರ ಅಭಿಪ್ರಾಯಗಳನ್ನು ಸರಕಾರವು ಕೇಳಿಲ್ಲ. ಆದುದರಿಂದ ಅವರ ವರದಿಗಳನ್ನು ಪ್ರಕಟಿಸುವ ಪ್ರಶ್ನೆ ಹೊರಡುವದಿಲ್ಲ.

(೩) ನವಲಗುಂದ ತಾಲೂಕಿನಲ್ಲಿ ಬೆಣ್ಣೇಹಳ್ಳದ ಪೂಲಿಗಾಗಿ ೫೯,೬೧೦ ರೂ ವೆಚ್ಚವಾಗುವದಾಗಿ ಅಂದಾಜಿದೆ. ಈ ಕಾರ್ಯವು ಬೇಗನೇ ಪ್ರಾರಂಭವಾಗುವದು.

(೪) ಧಾರವಾಡ ಜಿಲ್ಹೆಯಲ್ಲಿ ಬೆಳೆಗಳನ್ನು ನಾಶಪಡಿಸುವ ಬಂದೂಕುಗಳು ಕಾಡುಹಂದಿಗಳನ್ನು ಕೊಲ್ಲಲು ಏನೂ ಉಪಯೋಗವಾಗುವದೆಂಬುದು ಸರಕಾರಕ್ಕೆ ಗೊತ್ತಿಲ್ಲ. ಈ ಬಗ್ಗೆ ಈಗಿದ್ದ ನಿಯಮಗಳು ಸಾಕಷ್ಟು ಉದಾರವಾಗಿವೆಯಾದ್ದರಿಂದ ಹೆಚ್ಚಿನ ಸೌಕರ್ಯಗಳ ಅವಶ್ಯಕತೆಯಿಲ್ಲ.

(೫) ಕೋರ್ಟುಗಳ ಸವಾಲುಗಳಲ್ಲಿರುವ 'ನೀವು' ಶಬ್ದವು ಬಹಳ ಬೇಸರದ್ದಾಗಿ ಬೆಂಗಳೂರಿನ 'ಕನ್ನಡಿಗ'ದಲ್ಲಿ ಟೀಕೆ ಬಂದುದು ಸರ್ಕಾರಕ್ಕೆ ತಿಳಿದಿದೆ. ಆದರೆ ಇದನ್ನು ಯಾರೂ ಕೋರಿರುವದಿಲ್ಲ. ಸಂಸ್ಕೃತ ಜನರಿಗೆ ಮಾತ್ರ ಪತ್ರಗಳು ಕಳಿಸಲ್ಪಡುತ್ತವೆ.

೧೯೨೫ನೇ ಇಸವಿಯ ಹೈಕೋರ್ಟ್ ಕ್ರಿಮಿನಲ್ ಸರ್ಕ್ಯೂಲರದ ೩೧ನೇ ಪುಟದಲ್ಲಿ ೨೮ನೇ ನಿಯಮವನ್ನು ನೋಡಬಹುದು. ದೇಶೀ ಭಾಷೆಗಳಲ್ಲಿ ಮಾತ್ರ ಏಕವಚನವಿದೆ. ಇಂಗ್ಲೀಷಿನಲ್ಲಿ ಬಹುವಚನವೇ ಉಪಯೋಗಿಸಲ್ಪಡುತ್ತದೆ 'ಪ್ರತಿಷ್ಠಿತ ಜನರಾರೆ'ಂಬುದನ್ನು ಕೇಳಿದರೂ ಸರಕಾರದವರು ಉತ್ತರ ಹೇಳಲಿಲ್ಲ

(೬) ಮೋಟಾರುಗಳ ಅಪಘಾತಗಳ ಬಗ್ಗೆ 'ಕನ್ನಡಿಗ'ನಲ್ಲಿಯ ಸಂಪಾದಕೀಯ ಟೀಕೆಯನ್ನು ನೋಡಿದ್ದಾಯಿತು. ದೊಡ್ಡ ಮೋಟಾರುಗಳ ಬಗ್ಗೆ ಕೆಲವು ಕಠಿಣ ಕಟ್ಟಳೆಗಳನ್ನು ಸರಕಾರದವರು ಮಾಡತಕ್ಕವರಿದ್ದಾರೆ

(೭) ಶ್ರೀ ಕಂಪಣಗಾರರು ಅಕಾರ್ಯಕ್ಷಮರೆಂದು ಕಂಡು ಬಂದದ್ದರಿಂದ ಅವರನ್ನು ತೆಗೆದ, ಕರ್ನಾಟಕ ಕಾಲೇಜಿಯ ಕನ್ನಡ ಪಂಡಿತರ ಸ್ಥಾನಕ್ಕೆ ಶ್ರೀ ಚನ್ನಕೇಶವ ಅಯ್ಯಂಗಾರರು ನೇಮಿಸಲ್ಪಟ್ಟಿದ್ದಾರೆ. ಇವರು ಬಿ ಎ ಇದ್ದು, ಮದ್ರಾಸ ವಿಶ್ವವಿದ್ಯಾಲಯದ 'ವಿದ್ವಾನ್' ಪರೀಕ್ಷೆಯಲ್ಲಿಯೂ ಕನ್ನಡ ತೆಗೆದುಕೊಂಡು ೧ನೇ ವರ್ಗದಲ್ಲಿ ತೇರ್ಗಡೆ ಹೊಂದಿರುವರು. ಅಲ್ಲದೇ ಸಂಸ್ಕೃತ, ತೆಲಗು, ತಮಿಳಗಳನ್ನೂ ಚನ್ನಾಗಿ ಬಲ್ಲವರಿದ್ದಾರೆ

(೮) ಬೆಳಗಾವಿಯ ಸರದಾರ ಹೈಸ್ಕೂಲಿನಲ್ಲಿಯ ಬಡಿಗ ಹಾಗೂ ಕಮ್ಮಾರ ವರ್ಗಗಳಿಗಾಗಿ, ಜಿಲ್ಲಾ ಬೋರ್ಡಿನವರೂ, ಊರಲ್ಲಿಯ ಜನರೂ ವರ್ಗಣೀ ಕೊಟ್ಟಿದ್ದು ನಿಜ. ಆದರೆ ಅವನ್ನು ಬಂದು ಮಾಡಿದಾಗ್ಗೆ, ವರ್ಗಣಿ ಕೊಟ್ಟವರ ಮತ ತೆಗೆದುಕೊಳ್ಳಲಿಲ್ಲ. ಯಾಕೆಂದರೆ ಹಾಗೆ ಮಾಡುವದು ಅವಶ್ಯ ಕಾಣಲಿಲ್ಲ. ವರ್ಗಣೀ ಹಣದಲ್ಲಿ ೬೬೧ ರೂ. ಉಳಿದಿದೆ. ಒಟ್ಟು ೨೫ ರೂ. ಬಡ್ಡಿಯೂ ಪ್ರತಿವರ್ಷ ಅದಕ್ಕೆ ಸೇರಿಸಲ್ಪಡುತ್ತದೆ

(೯) ವಿಜಾಪುರ ಜಿಲ್ಲೆಯ ಮಮದಾಪುರದಲ್ಲಿ ೨ ಕೆರೆಗಳಿವೆ; ಅವು ಆದಿಲ್‌ಶಾಹಿ ವಂಶಜರ ಆಳಿಕೆಯಲ್ಲಿ (೧೪೯೮—೧೬೮೬) ಕಟ್ಟಿಸಲ್ಪಟ್ಟಿವೆ. ಅವುಗಳಿಗೆ ೧೯೦೨ ರಲ್ಲಿ ಹೊಸದಾಗಿ ದುರಸ್ತಿ ಮಾಡಿದವು. ಇದರಿಂದ ಈಗ್ಗೆ ಕಾಲುವೆಗಳಿಗೆ ಸಾಕಾದಷ್ಟು ನೀರು ದೊರೆಯುತ್ತದೆ. ಕೆರೆಯ ಕೆಳಭಾಗವು ಮಾತ್ರ ಹೂಳಿದಿದೆ. ಬೇಸಿಗೆಯಲ್ಲಿ ಕೆರೆಯ ಕೆಲಭಾಗವನ್ನು ಸಾಗುವಳಿಗಾಗಿ ಕೊಡುವದು ನಿಜ. ಇದರಿಂದ ೧೯೨೪—೨೫ ರಲ್ಲಿ ೨,೪೬೦ ರೂ, ೧೯೨೫—೨೬ ರಲ್ಲಿ ೪೦೦ ರೂ.-೨೬ ರಲ್ಲಿ ೪೬೦೦ ಉತ್ಪನ್ನವಾಗಿದೆ. ನೀರು ಹೆಚ್ಚಾಗಿಲ್ಲದಿದ್ದರೂ ಸಾಕಷ್ಟಿದ್ದುದರಿಂದ ಈ ಭೂಮಿಗಳಿಗೆ ಹೆಚ್ಚಾದ ತೆರಿಗೆಯನ್ನು ಕೂಡಿಸಿದೆ

(೧೦) ಕನ್ನಡ ಪ್ರಾಥಮಿಕ ಪುಸ್ತಕಗಳಲ್ಲಿ ತಿದ್ದುಪಡಿಯಾಗಬೇಕೆಂಬುದಾಗಿ 'ಕನ್ನಡಿಗ'ಪತ್ರಿಕೆಯಲ್ಲಿ ಬಂದ ಟೀಕೆಗಳನ್ನು ಸರಕಾರವು ನೋಡಿದೆ. ಆ ಬಗ್ಗೆ ವಿಚಾರಣೆಯೂ ನಡೆದಿದೆ

ಸ್ವೀಕಾರ.

'ಮೈಸೂರ ಪೆಟ್ರಿಯಟ್' ಎಂಬ ಹೊಸ ಇಂಗ್ಲೀಷ ದೈನಿಕ ಪತ್ರಿಕೆಯು ಮೈಸೂರಲ್ಲಿ ಪ್ರಕಟವಾಗುತ್ತಲಿದೆ. ಮೈಸೂರಿನ ಪೂಜ್ಯ ದಿವಾನರಾದ ಎಂ. ವೆಂಕಟಕೃಷ್ಣಯ್ಯನವರ ೮೩ ನೇ ವರ್ಧಂತ್ಯುತ್ಸವದ ಸಂದರ್ಭದಲ್ಲಿ ಈ ದೈನಿಕ ಪತ್ರಿಕೆಯು ಉಗಮವಾಗಿದೆ. ಶ್ರೀ ಸಿ. ಆರ್. ರಾಮಯ್ಯನವರೇ ಇದರ ಸಂಪಾದಕರು. ಕರ್ನಾಟಕದಲ್ಲಿ ದೈನಿಕ ಪತ್ರಿಕೆಗಳೇ ಇಲ್ಲವಾದುದರಿಂದ ಈ ದೈನಿಕವು ಎಲ್ಲರಿಂದಲೂ ಪ್ರೋತ್ಸಾಹಿಸಲ್ಪಡುವದಾಗಿ ಕೋರುತ್ತೇವೆ. ಪರದೇಶ, ಭರತಖಂಡಗಳ ತಾಜಾ ವೃತ್ತಾಂತವನ್ನು ಕೊಡುವಂತೆ, ಕರ್ನಾಟಕದ ಎಲ್ಲ ಭಾಗಗಳ ಸುದ್ದಿಗಳನ್ನೂ ಪ್ರಕಟಿಸಿ, ಇದರ ಕನ್ನಡ ಪ್ರತಿಯೊಂದನ್ನೂ ಹೊರಡಿಸಿದರೆ, ಈಗಿನ ಕರ್ನಾಟಕದ ಒಂದು ಕೊರತೆಯನ್ನು ದೂರ ಮಾಡಿದ ಶ್ರೇಯಸ್ಸಿಗೆ ಶ್ರೀ ರಾಮಯ್ಯನವರು ಪಾತ್ರರಾಗುವರು.

'ರಂಗಭೂಮಿ' ಮಾಸಿಕ ಪತ್ರಿಕೆಯ ೩ ನೇ ವರ್ಷದ ೧ ನೇ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಬೆಂಗಳೂರು ಅಮೆಚೂರ ನಾಟಕ ಸಭೆಯವರು ಇದನ್ನು ತಮ್ಮ ಕೈಯಲ್ಲಿ ತೆಗೆದುಕೊಂಡಂದಿನಿಂದ ಇದು ಹೆಚ್ಚು ಉತ್ಸಾಹದಿಂದ ಕನ್ನಡಿಗರ ಸೇವೆಯಲ್ಲಿ ತೊಡಗಿರುವದು. ೬೦ ದಿನಗಳಿಗೆ ಒಂದೊಂದು ಸಂಚಿಕೆಯನ್ನು ಹೊರಡಿಸಿ, ಹಿಂದಿದ್ದ ಸಂಚಿಕೆಗಳನ್ನೆಲ್ಲ ಸರಿಪಡಿಸಿದ್ದಾರೆ. ಬಂಗಾಲದ ಚಿತ್ರಗಳೂ ಅಂದವಾಗಿ ಪ್ರಕಟಿಸಲ್ಪಡುತ್ತವೆ. ಬೇರೆ ಬೇರೆ ವಿಷಯಗಳೂ, ಹೊಸ ಹೊಸ ನಾಟಕಗಳೂ ಈ ವರ್ಷದಲ್ಲಿ ಬರುವಂತೆ ಏರ್ಪಾಡಾಗಿದೆ. ಕೇವಲ ಲಲಿತಕಲೆಗಳ ಸೇವೆಗಾಗಿ ಹೊರಟ ಮಾಸಿಕವೆಂದರೆ ಕರ್ನಾಟಕದಲ್ಲಿ ಇದೊಂದೇ. ಇದನ್ನು ಲಕ್ಷ್ಯದಲ್ಲಿಟ್ಟು ಕನ್ನಡಿಗರೆಲ್ಲ ಇದನ್ನು ಪ್ರೋತ್ಸಾಹಿಸಬೇಕಾಗಿ ಆಗ್ರಹಪಡುತ್ತೇವೆ

ಬೆಂಗಳೂರಿನ ವಿಶ್ವಕರ್ನಾಟಕದ "ರಜತಮಹೋತ್ಸವ" ಸಂಚಿಕೆಯು ಕೈಸೇರಿದೆ. ಅದರಲ್ಲಿ ಬೇರೆ ಬೇರೆ ಮಹನೀಯರ ಲೇಖನಗಳನ್ನೋದಲು ಮೈಸೂರ ಸಂಸ್ಥಾನದ ಪ್ರಗತಿಯ ಪರಿಚಯವು ವಾಚಕರಿಗೆ ಚನ್ನಾಗಿ ಆಗುವದು. ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರ ಆಳಿಕೆಯಲ್ಲಿ ಆ ಸಂಸ್ಥಾನವು ದಿನಾಲು ಊರ್ಜಿತಾವಸ್ಥೆಯನ್ನು ಹೊಂದುತ್ತಲಿದೆಯೆಂಬ ಮಾತು ಒಡೆದು ಕಾಣುವದು. ವಿದ್ಯಾಭ್ಯಾಸದ ವಿಷಯಕ್ಕೆ ಆದಾಯದ ೧/೩ ನೇ ಪಾಲು ಹಣವು ವೆಚ್ಚ ಮಾಡಿದರೂ ಅಡ್ಡಿಯಿಲ್ಲವೆಂಬದಾಗಿ ಸ್ವತಃ ಮಹಾರಾಜರವರು ಅಭಿಪ್ರಾಯಪಟ್ಟಿರುವರು. ಈಗ ೧/೫ ಪಾಲು ಹಣವು ಆ ಬಗ್ಗೆ ವೆಚ್ಚವಾಗುತ್ತಲಿದೆ. ನಮ್ಮ ಸರಕಾರದವರು ಮಹಾರಾಜರಿಂದ ಈ ಬಗ್ಗೆ ಬುದ್ಧಿಗಲಿಯಬೇಕಾಗಿದೆ. ಮಹಾತ್ಮಾ ಗಾಂಧಿಯವರು ಸಹ ಈ ಮಹಾರಾಜರನ್ನು ವರ್ಣಿಸಿದ ಮೇಲೆ ಬೇರೆಯವರು ಆ ಬಗ್ಗೆ ಬರೆಯುವ ಕಾರಣವೇ ಇಲ್ಲ. ಮಹಾರಾಜರ ಬಗ್ಗೆ ಎಲ್ಲ ಸಂಗತಿಗಳನ್ನು ತಿಳಿಯಲಪೇಕ್ಷೆಯುಳ್ಳವರು ಈ ಸಂಚಿಕೆಯನ್ನು ಕೂಡಲೇ ತರಿಸಿಕೊಳ್ಳಬೇಕು. ಮುದ್ರಣವು ಅಂದವಾಗಿದೆ. ಚಿತ್ರಗಳಿಂದ ಕೂಡಿದ್ದರಿಂದ ಅದರ ಶೋಭೆಯು ಮತ್ತಿಷ್ಟು ಹೆಚ್ಚಾಗಿದೆ. ಬೆಲೆ ಎಂಟಾಣೆ ಮಾತ್ರ.

ಇಹವೃತ್ತ.

ಮಳೆಯಾಗದ್ದರಿಂದ ಬೆಳೆಗಳೆಲ್ಲ ಹಾಳಾಗುತ್ತಲಿವೆ.

ಸಾರ್ವಜನಿಕ ಗಣೇಶೋತ್ಸವವು ಕೊತ್ತಲಪ್ಪನ ಗುಡಿಯಲ್ಲಿ ಭರದಿಂದ ಸಾಗಿದೆ. ಡಾ ಹರ್ಡೀಕರ ಇವರ ವ್ಯಾಖ್ಯಾನವು ನೆನ್ನೆ ಆಯಿತು. ಬೆಂಗಳೂರಿನ ಶ್ರೀಮತಿ ಆರ್. ಕಲ್ಯಾಣಮ್ಮನವರು ನಾಳೆ ಬರತಕ್ಕವರಿದ್ದಾರೆ. ಪುರಾಣ ಕೀರ್ತನಗಳು ನಡದಿವೆ. ಶ್ರೀ ಜೋರಾಪುರ ಕೃಷ್ಣರಾಯರೂ, ನೀರಲಕೇರಿ ಶ್ರೀನಿವಾಸರಾಯರೂ, ಶ್ರೀ ಜಯರಾಯರ ನೇತೃತ್ವದಲ್ಲಿ ಇದನ್ನು ಚೊಕ್ಕಟವಾಗಿ ಸಾಂಗಗೊಳಿಸುತ್ತಿದ್ದಾರೆ.

ಫಲಭೀಮ ಧಾರ್ಮಿಕ ವಾಚನಾಲಯವು ಇಲ್ಲಿಯ ಕೆಲವು ಕನ್ನಡ ಬಾಲಕರಿಂದ ಗಣೇಶ ಚತುರ್ಥಿಯ ದಿನ ಪ್ರಾರಂಭಿಸಲ್ಪಟ್ಟಿತು. ಹಿಂ. ಸೇ. ದಲದ ಕಾರ್ಯದರ್ಶಿಗಳು ತಮ್ಮ ಕಚೇರಿಯ ಕಟ್ಟಡವನ್ನು ಈ ವಾಚನಾಲಯಕ್ಕೆ ಕೊಟ್ಟು, ಅವರಿಗೆ ಒಳ್ಳೇ ಸಹಾಯ ಮಾಡಿದ್ದಾರೆ. ಕನ್ನಡ ಯುವಕರು ಇಂತಹ ಕಾರ್ಯಗಳಲ್ಲಿ ಹೆಚ್ಚು ಉತ್ಸಾಹದಿಂದ ತೊಡಗಿಕೊಳ್ಳುತ್ತಿರುವದು ಅಭಿಮಾನಾಸ್ಪದವಾದ ಸಂಗತಿಯು. ಆ ದಿನ ಶ್ರೀ ಮಂಗಳವೇಢೇ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಸಭೆಯಾಗಿ, ಇಲ್ಲಿಯ ಅನುಭವಿಕ ಸಾರ್ವಜನಿಕ ರಾವ ಶ್ರೀ ನರಗುಂದ ಬಸುರಾವ, ತರುಣ ವಕೀಲ ಶ್ರೀ ಜಿ. ಆರ್. ಪುಣೇ ಗುರುರಾವ ಮೊದಲಾದವರ ವ್ಯಾಖ್ಯಾನಗಳಾದವು.

ಕಲಬುರ್ಗಿಯಲ್ಲಿ ಕನ್ನಡ—ಮರಾಠಿ.

ನೂತನ ವಿದ್ಯಾಲಯದ ಉದ್ಘಾಟನದ ಬಗ್ಗೆ ಕಲಬುರ್ಗಿಯಲ್ಲಿ ಈ ವಾದವು ಹುಟ್ಟಿ ಅದು ವಿಕೋಪಕ್ಕೆ ಹೋಗಿದೆಯಾಗಿ ಕೇಳುತ್ತೇವೆ. ಎರಡೂ ಪಕ್ಷ [illegible]. ಉಭಯತರ ಪಕ್ಷದ ಹೇಳಿಕೆಯನ್ನು ಸ್ಪಷ್ಟವಾಗಿ ಬರೆದು ಕಳಿಸಿದರೆ, 'ಕನ್ನಡಿಗ'ನು ಆನಂದದಿಂದ ಅದನ್ನು ಪ್ರಕಟಿಸುವನು

ಗುಣ ಬರದಿದ್ದರೆ ಹಣ ಮರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ಥ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿ ಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿ ಮಾಡಿಕೊಳ್ಳಬಹುದು.) ಇದರಿಂದ ವೈಯುರಿ ವಗೈರೆಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತವೆ. ಇದರ ಖರೆ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿ ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ:— **ಎಸ್ ಬಿ. ಕದಮ್ ಮತ್ತು ಸನ್ಸ್.**

ಮು. ಪೋಷ್ಟ ನಿಪ್ಪಾಣಿ (ಜಿ ಬೆಳಗಾಂವ.)

ಜಾಹೀರ ನೋಟೀಸು

ರಾ|| ರಾ|| ದೊಡ್ಡಬಸಪ್ಪಾ ತಂದಿ ಸಣ್ಣೀರಪ್ಪಾ ಧೂಪದ ಸಾ| ಕಂಪಲೀ ಇವರಿಗೆ—

ಕೆಳಗೆ ಸಹಿಮಾಡುವವಳ ಕಡಿಯಿಂದ ತಿಳುಹಿಸುವದೇನಂದರೆ ನೀನು ನನ್ನ ಲಗ್ನವಗಂಡನಿದ್ದು ನಾನು ನೆರೆತನಂತರ ಒಂದೆರಡುಸಾರೆ ನನ್ನನ್ನು ಕರಕೊಂಡು ಹೋಗಿ ಚನ್ನಾಗಿ ಪ್ರಪಂಚಮಾಡಿದಿ ಮುಂದೆ ದುಷ್ಟಜನರ ಸಹವಾಸದಿಂದ ವ್ಯಸನಕ್ಕೆ ಬಿದ್ದು ನನ್ನನ್ನು ತವರಮನಿಗೆ ಕಳಿಸಿ ತಿರಗಿ ಕರಕೊಂಡು ಹೋಗದೇ ಅಜಮಾಸು ಹನ್ನೆರಡುವರ್ಷಗಳಾದವು. ನಾಲ್ಕು ಜನ ಬುದ್ಧಿವಂತರಕಡಿಂದ ಹೇಳಿಸಿದರೂ ಕೇಳಲಿಲ್ಲಾ ಮತ್ತು ಎ...ವಳನ್ನು ಉಡಕಿ ಮಾಡಿಕೊಂಡು ಮೂರು ನಾಲ್ಕು ಮಕ್ಕಳನ್ನು ಪಡೆದಿರುತ್ತೀ- ಇವತ್ತಿಗೂ ನನ್ನ ಹೊಟ್ಟೆಯ ವ್ಯವಸ್ಥಾ ಮಾಡಲಿಲ್ಲಾ ನನ್ನ ತವರ ಮನೆಯವರು ಅತಿ ಬಡವರಿದ್ದು ನನ್ನ ಹೊಟ್ಟೆಗೆ ಹಾಕುವದಿಲ್ಲಾ ಕಾರಣ ನನ್ನ ಹೊಟ್ಟೆಯ ಸಲುವಾಗಿ ಇವತ್ತಿನವರೆಗೆ ಎರಡನೇಯವರಲ್ಲಿ- ಎಂಟುನೂರು ರೂಪಾಯಿ ಸಾಲಮಾಡಿರುತ್ತೇನೆ. ಸಾಲಗಾರರ ತಗಾದೆಬಹಳಆಗಿರುವದು. ಈ ನೋಟೀಸು ಮುಟ್ಟಿದ ಎಂಟು ದಿವಸದಲ್ಲಿ ನಾನುಮಾಡಿದ ಸಾಲ ಎಲ್ಲಾ ತೀರಿಸಿ ಚಲೋರೀತಿಯಿಂದ ಪ್ರಪಂಚ ಮಾಡಿಕೊಳ್ಳುವಬಗ್ಗೆ ಖಾತ್ರಿ ಮಾಡಿಕೊಟ್ಟು ನನ್ನನ್ನು ಸಮಕ್ಷಮ ಬಂದು ಕರೆದುಕೊಂಡು ಹೋಗಬೇಕು ನಾನು ಬರಲಿಕ್ಕೆ ಕಬೂಲ ಇರುವೆನು ಜರ ಸದರಿ ಪ್ರಕಾರ ಮಾಡದಿದ್ದರೆ ನನ್ನ ಮರ್ಜೀ ಪ್ರಕಾರ ಎರಡನೇಯವನನ್ನು ಉಡಕಿ ಮಾಡಿಕೊಂಡು ನನ್ನ ಸಾಲ ತೀರಿಸುತ್ತೇನೆ. ಆಮೇಲೆ ನನ್ನ ಮೇಲೆ ನಿನ್ನ ಯಾ ಕಿ ಮಾಡಿಕೊಂಡವನಮೇಲೂ ನಿನ್ನದು ಯಾವತರದ ಹಕ್ಕು, ಸತ್ತಾ ಉಳಿಯಲಿಕ್ಕಿಲ್ಲಾ ಈ ನೋಟೀಸಿನ ಖರ್ಚು ನಿನ್ನ ತಲಿಯಮೇಲೆ ಅದೆ. ತಾ|| ೩೦-೮-೧೯೨೭ನೇ ಇಸ್ವಿ

() ಈ ಹೆಬ್ಬೆಟ್ಟಿನ ಗುರ್ತು **ಬಸವ್ವಾ ಕೋಂ| ದೊಡ್ಡಬಸಪ್ಪಾ ಧೂಪದ** ಸಾ|| ಇಲಕಲ್ಲ-

S.U.N.&CO.
BENARESCITY.

ಬನಾರಸ್ ರೇಶ್ಮೀ ಶೀರೆಗಳು.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೀ ಮಾಲುಗಳನ್ನು ಕೋರುವವರಿಗೆ ವ್ಹಿ. ಪಿ. ಮೂಲಕ ಕಳುಹಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕು ಉದ್ದ ಮೊಳ ೧೪ ಅಗಲಿಮೊಳ ೩, ಥಾನು ೧ಕ್ಕೆ ೧೫ ರಿಂದ ೫೦ ಜರಿ ಶೀರೆಗಳು ೧೭-೧೮ ಮೊಳ ಉದ್ದ ೧ಕ್ಕೆ ರೂ. ೨೫ ರಿಂದ ೫೦ ರವರೆಗೆ. ಬುಟ್ಟೆದಾರ್ ಬನಾರಸ್ ಶೀರೆ ೧೭-೧೮ ಉದ್ದ ಮೊಳ ೭ ೧ಕ್ಕೆ ರೂ. ೫ ರಿಂದ ೩೦೦ ರ ವರೆಗೆ ಉಡುವ ಮಗುಟ ಉದ್ದ ೬-೮ ಮೊಳ ೧ಕ್ಕೆ ರೂ ೧೦ ರಿಂದ ೩೦ ರ ವರೆಗೆ ಜರೀದ್ದು ೬-೮ ಮೊಳ ಉದ್ದ ೧ಕ್ಕೆ ರೂ. ೧೧ ರಿದ ೪೦ ರ ವರೆಗೆ. ಬಿಳಿ ರೇಶ್ಮಿ ಜರೀದುಪ್ಪಟಿ ೬ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೩೦ ರವರೆಗೆ ಸಾದಾ ಬಂಗಾಳ ರೇಶ್ಮಿ ಶಾಲು ೬ ಮೊಳ ಉದ್ದ ೩ ಮೊಳ ಅಗಲು ೧ ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಪಟಿಕದ ೧೦೮ ರ ಸರ ೧ಕ್ಕೆ ರೂ. ೧ ರಿಂದ ೧೦ ರ ವರೆಗೆ ಸುದರ್ಶನ ೧ ಕ್ಕೆ ಆಣೆ ೮ ರಿಂದ ರೂಪಾಯಿ $1\frac{1}{2}$ ರವರೆಗೆ ಜಗನ್ನಾಥಜಾಗಂಟಿ ೧ಕ್ಕೆ ರೂ. $2\frac{1}{2}$ರಿಂದ 15 ರ ವರೆಗೆ ಮತ್ತು ದೇರೆ ಬೇಕಾದಮಾಲುಗಳ ಕೆಟಲಾಗಇನಾಂ

ವಿಳಾಸ:-ಶಿರೋಮಣಿ ನಾರಾಯಣಾಚಾರ್ಯ ಕಂಪನಿ ಚೌಕಂಬಾ ಕಾಶಿ ಬನಾರಸ್

ಕರ್ನಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯೂಲರ ಸ್ಕೂಲಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರುವದಕ್ಕೆ ಶಕ್ಯವಾದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಜರದ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು.

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಲೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ|| ಲಕ್ಷ್ಮೀಬಾಯಿ ಕುಂಭಕೋಣಂ,

ವ್ಯವಸ್ಥಾಪಕರು, ಕ ಮ. ವಿದ್ಯಾಲಯ, ಧಾರವಾಡ.

ಅತೀ ಸುಲಭ ಕಂತುಗಳು! **ಫಲಿತಾಂಶವು ಹೆಚ್ಚು!**

ದಿ. ಹಿಂದುಸ್ಥಾನ ಕೋಆಪರೇಟಿವ್ಹ

ಇನ್ಸುರೆನ್ಸ ಸೊಸೈಟಿ ಲಿಮಿಟೆಡ್.

(ಬ್ರಾಂಚ್:- ಮುಂಬಯಿ) (ಹೆಡ್ಆಫೀಸು:- ಕಲ್ಕತ್ತಾ)

ಈ ಕಂಪನಿಯು ಇಡೀ ಹಿಂದುಸ್ಥಾನದಲ್ಲೆಲ್ಲಾ ಪ್ರಾಮುಖ್ಯತೆಗೆ ಬಂದ ಸ್ವದೇಶಿ ಕಂಪನಿಗಳಲ್ಲಿ ಒಂದಾಗಿದೆ. ಜನರ ಸೌಕರ್ಯಕ್ಕಾಗಿ ಈ ವಿಜಾಪೂರ ಜಿಲ್ಹೆಯೊಳಗೆ ಇದರ ಒಂದು ಶಾಖೆಯನ್ನಿಟ್ಟಿರುವರು. ಕಂತುಗಳು ಅತೀ ಸುಲಭ ಇದ್ದು, ಧಾರಾಳವಾಗಿ ಈ ಕಂಪನಿಯಲ್ಲಿ ನಿಮ್ಮ ಜೀವ ವಿಮೆಯನ್ನು ಇಳಿಸಬಹುದು.

ಇದರ ಮೂಲಧನವು ... ೧೯೨೫-೨೬ ನೇ ವರ್ಷದಲ್ಲಿ ಸರಾಸರಿ ವರ್ಷಕ್ಕೆ ... ರೂ. ... ರೂ. ... ರೂ. ... ಕೊಟ್ಟಿರುವೆವು.

ಎಲ್ಲಾ ಕಡೆಯಲ್ಲಿ ಏಜಂಟರು ಬೇಕಿದ್ದಾರೆ.

ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿದಲ್ಲಿ ಹೆಚ್ಚಿನ ಮಾಹಿತಿ ತಿಳಿಯಬಹುದು.

ವಿಳಾಸ:—

ವಿಜಾಪೂರ. | ಜಿ. ಆರ್. ಪಕ್ಕನಳ್ಳಿ ಅಂಡ ಬ್ರದರ್ಸ.

ಚೀಫ ಏಜಂಟ್ಸ್

೨೪—೭—೨೭ | ವಿಜಾಪೂರ ಜಿಲ್ಹಾ.

ಶ್ರೀ ಭಾರತ ಜಗಪ್ರಸಿದ್ಧ ಜಗ ಜಾಹೀರ ನೋಟೀಸು.

ಮೃತ್ಯುಂಜಯ ಔಷಧದಿಂದ ಮೂರೇ ತಾಸಿನಲ್ಲಿ ಗುಣವಿಲ್ಲೆಂದು ಸಿದ್ಧ ಮಾಡಿದವರಿಗೆ-೫೦೦ ರೂ. ಬಕ್ಷೀಸ ಕೊಡುವೆವು.

ಮೂರೇ ತಾಸಿನಲ್ಲಿ ಗುಣ] ಕಣ್ಣದಬತ್ತಿ ರಸಾಯನ ತಕ್ಕೊಂಡು ಸಾಯುವದೇಕೆ? **[ಮೂರೇ ದಿವಸಗಳಲ್ಲಿ ರೋಗವು ಪೂರ್ಣ ಹೋಗುವದು.**

೫೬ ಶುದ್ಧ ವನಸ್ಪತಿಯಿಂದ ತಯಾರು ಮಾಡಿದ ಮೃತ್ಯುಂಜಯ ಔಷಧ.

ಉಪದಂಶ, ಗರ್ಮಿ (ಉಷ್ಣ) ಪರ್ಮಿ ಮತ್ತು ಅತ್ತಾಳ ಏಳು ಪ್ರಕಾರದ ರೋಗ ಬಹುದಿನ ನೆಲೆಗೊಂಡದ್ದು ಶರೀರ ಕತ್ತರಿಸಿ ಬಿದ್ದರೂ ಮೂರು ದಿವಸಗಳಲ್ಲಿ ಗುಣವಾಗುವದು

ಇಂಥ ಪ್ರಕಾರ ರೋಗಗಳಿಂದ ಉತ್ಪನ್ನವಾಗುವ ವಿಕಾರ ಉಷ್ಣ ಪರಮಿ (ಉಪದಂಶ) ಗರ್ಮಿ ಜಟ್ಟಿ ಒದದ ಗಂಟು, ನಡಿನಲ್ಲಿಯ ಗಂಟು, (ವೃಡುಬು) ಅತಿಶಯ ಬಾವು, ಇಂದ್ರಿಯ-ವಳಗೆ ತಿಡಿಕೆ, ಹೊಡತು, ರಕ್ತ ಕೀವು ಸುರಿಯೋಣ ಅದರಂತೆ ಸ್ತ್ರೀಯರ ಪ್ರದರ (ಕೆಂಪು ಬಿಳಿ ಶೆರಗು) ಹೊಲೆ ಕುಟ್ಟರೋಗ ಬೆಳೆಯೋಣ, ಕಡಕಿ ವಿಕಾರಗಳಿಂದ ಗರ್ಭಾಶಯ ಕೆಡೋಣ, ಮೂತ್ರ ಕಣ್ಣು ಕಾಲು ಉರಿಯೋಣ, ಕಾವು ಹೆಚ್ಚಾಗಿ ಮಧುಮೇಹ ಮೈಮೇಲೆ ಗರ್ಮಿ (ಉಷ್ಣ) ಒಡೆದು ಕೀವು ಹೊರಬಿದ್ದು ಅದರಿಂದ ವ್ರಣ (ಘಾಯ) ವಾಗಿ ಅಂಗಳಕ್ಕೆ ತೂತು ಬಿದ್ದು ಮೂಗು ಕೊಡ್ರುವದೂ ಸೋರುವದೂ ಎಲ್ಲ ತರದ ಮೂಲವ್ಯಾಧಿ, ಹೊಟ್ಟೆ ಕಡತು ವಗೈರೆ ಕಾರಣಗಳಿಂದಾ ಜನನೇಂದ್ರಿಯ ಶಿಥಿಲತಾ ಅಥವಾ ನಪುಂಸಕತ್ವ ಮುಷ್ಟಿಮೈಥುನದಿಂದ ಆಗುವ ಪರಿಣಾಮ, ಸ್ವಪ್ನಾವಸ ಮೂತ್ರದಲ್ಲಿ ಧಾತು ಅಥವಾ ಬಿಳಿ ಬೀಳೋಣ, ವೀರ್ಯ ತಿಳುವಾಗೋಣ, ಸ್ತ್ರೀಗಮನದಲ್ಲಿ ಶೀಘ್ರ ಸ್ಖಲನವಾಗೋಣ. ತೀವ್ರ ವೀರ್ಯ ಪತನವಾಗೋಣ, ಸಡಸೋವು (ಶೂಲಿ) ಸೋಬೋಣ, ಬೆನ್ನು ಬಿಗಿಯೋಣ, ವಾತವಿಕಾರ ಅವಿಚಾರದಿಂದ ಮಾಡಿದ ವೀರ್ಯಪಾತ ವಗೈರೆ ರೋಗಗಳ ಮೇಲೆ ಅಶಿಕ್ಷಿತ ಅಡಾಣೀ ಜನರ ಕಡಿಯಿಂದ ಪಾರಜ ಮತ್ತು ರಸಕರ್ಪೂರ, ಇಂಗಳೀಕ ಮುಂತಾದ ಸವಿಷ ಮತ್ತು ಅಪಕ್ವ ಧಾತು ರೂಪ ಪದಾರ್ಥ (ರಸಾಯನ) ಮತ್ತು ಅಪಕಾರಕ ವಸ್ತು ಸೇವಿಸುವದರಿಂದ ಮೈಯೊಳಗೆ ರಸಾಯನ ನಿಂತು ಅದರಿಂದ ಕಾಲು ಕೈ ಮುಡಪ್ಪಾಗಿ ಮತ್ತು ಕೈ ಕಾಲುಗಳಲ್ಲಿ ರಸಾಯನ ಒಡೆದು ಸ್ವತಃ (ತನಗೆ) ಮತ್ತು ಮುಂದಾಗುವ ತನ್ನ ಸಂತತಿಗೆ ಅನೇಕ ರೋಗವು ಉತ್ಪನ್ನವಾಗಿ ಅದರಿಂದ ಭಯಂಕರ ಪರಿಣಾಮ ಭೋಗಿಸಬೇಕಾಗುವದು ಇಂಥ ಪ್ರಕಾರದ ರೋಗಗಳು ಬಹಳ ದಿವಸ ನೆಲಗೊಂಡಿದ್ದಾಗಲೀ ಅಥವಾ ಹೊಸದಾಗಿ ಆದುದ್ದಾಗಲೀ ಇಂಥ ರೋಗಗಳ ಮೇಲೆ ಈ ನಮ್ಮ ಮೃತ್ಯುಂಜಯ ಔಷಧ ಉಪಯೋಗ ಮಾಡಿದರೆ ತತ್ ಸಂಬಂಧಿ ಸಂಪೂರ್ಣ ರೋಗಗಳು ಶೀಘ್ರವಾಗಿ ಹೋಗಿ ಮೈಯೊಳಗೆ ಇದ್ದ ರಸಾಯನವು ನಾಶವಾಗುವದು . ಮತ್ತು ಆರೋಗ್ಯವಾಗಿ ಮೈಯೊಳಗೆ ಶಕ್ತಿ ಬಂದು ಪ್ರಕೃತಿ ಉತ್ತಮವಾಗುತ್ತದೆ ಒಂದು ಬಾಟ್ಲಿಗೆ [೪] ರೂಪಾಯಿ ಟಪಾಲು ಖರ್ಚ ಬೇರೆ ಅನುಪಾನ ಪತ್ರಿಕೆಯು ಔಷಧದ ಸಂಗಡ ಲಾಭಕ್ಕೆ ಲಾಭ. ಒಂದು ಆಣೆ ಟಿಕಿಟು ಕಳಿಸಿದಲ್ಲಿ ನಮ್ಮ ಔಷಧದ ಪೂರ್ಣ ಕ್ಯಾಟಲಾಗ ಕಳಿಸುವೆವು.

(ತಮ್ಮ ಪತ್ತೆ:- ಪೂರ್ಣ ಬರೆಯಿರಿ.)

ಸುಪ್ರಸಿದ್ಧ ಡಾ|| ಆರ್. ಎಲ್ ಹಿರೇಮಠ ಆರೋಗ್ಯ ಮಂದಿರ ಆಯುರ್ವೇದ ವನೌಷಧಿ ೫೦೦, ಸಾವಿರ ಕಾರಖಾನೆ ಕಮತನೂ ಪೋ|| ಶಂಕೇಶ್ವರ ಜಿ|| ಬೆಳಗಾಂವ

EAT KASHMIR FRUITS & NUTS!

ಕಾಶ್ಮೀರದ ಹಣ್ಣು ಹಂಪಲ ಕೊಂಡು ಸೇವಿಸಿರಿ!

ತಿಳುವಾದ ತೊಗಟೆಯ ತಾಜಾ ಅಕ್ರೋಡಗಳೂ, ಉತ್ತಿನ ಅಡವಿಯ ಸೇಬುಗಳೂ, (Hazelnuts) ೧೧ ಪೌಂಡಿಗೆ ರೂ. ೫—೮—೦; ತಾಜಾ ಕಾಗದೀ ಬದಾಮು, ಹರಳೆಣ್ಣದೂ, ಒಲು ಸವಿಯಾದ ಜಲ್ದರು (Apricots); ಅಂಜೂರ ; ದ್ವೀ ದ್ರಾಕ್ಷಿ; ಪಿಸ್ತಾ ಮಿಸಿ, ೧೧ ಪೌ. ಗೆ ರೂ. , ಕಮಳದ ಶುದ್ಧವಾದ ಜೇನುತುಪ್ಪ, ೫|| ಪೌಂಡಿಗೆ ರೂ. ; ಶುದ್ಧ ಕೇಸರ, ೧ ತೊಲಿಗೆ ೩ ರೂ. ಸಾಲು ಖರ್ಚು ಮಾಫ!

ಡಾರ ಬ್ರದರ್ಸ ಶ್ರೀನಗರ, ಕಾಶ್ಮೀರ.

Dar Bros Srinagar, Kashmir

ಭೂಲೋಕದ ಕಲ್ಪವೃಕ್ಷ

ದೇವಲೋಕದ ಕಾಮಧೇನು ಬೇಡಿದ ವರ ಪದಾರ್ಥಗಳನ್ನು ಕೊಡುವದೋ ಹಾಗೆಯೇ ಮನಸ್ಸಿನ ಇಷ್ಟಾರ್ಥ ವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಶ್ರಮವು ಇನಾಮ!!! ಆಂ. ಹಾಸಲು

ಕಲ್ಲನೆ ಸಮಸ್ತ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ

ಏಜಂಟರು:— ಜಂಬುಲಿಂಗಪ್ಪ ಬಾಲವಾದಿ ಸ್ಟೇಶನರ್ಸ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ

೫ . ಬೀಂದಬಜಾರ್ ಮುಂಬಯಿ



ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

೧೯೨೭ನೇ ಜನವರಿ ೧೫ರಿಂದ ಪ್ರಾರಂಭ.



ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ-

೧. ನೀವು ನಮಗೆ ರೂ. ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್‌ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪುವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ ಗೋಲ್ಡ" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ.

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ಬಿಕರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ನಮಗೆ ... ಡೆಯಬಹುದು. ಅಥವಾ ವಿ. ಪಿ. ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಳೆದುಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಅಸೂಯೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೬-೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್ ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರ ಸಿಟಿ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ವ ... ಲೆ ... ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ... ನಾವು ಈ ... ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ ಯಾ... ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ ಬೆಲೆ ರೂ. ೭

ಅಪ್ಪವೇ ... ಈಗಲೇ ಬರೆಯಿರಿ

ಪತ್ತೆ— ಸ್ವಾನ ಹೌಸ, ಪಿ. ಬಿ. ೫೦೨ ಪಿ ಟಿ ಮದ್ರಾಸ

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೋಕೆಟ್ ವಾಚ್ ೧೦ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ್ ೧೦ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ. ಪಿ. ಬಿ. ಮದ್ರಾಸ. ೨೫೫

ಒಕ್ಕಲತನದ

ಸಾಮಾನ! (ಅಗ್ರಿಕಲ್ಚರ ಟೂಲ್ಸ)
(ಗುದ್ದಲಿ, ಸಲಿಕೆ, ಕೊಡಲಿ, ಇತ್ಯಾದಿ ಆಯುಧಗಳು.)

ಈ ಸಾಮಾನುಗಳು ನಿತ್ಯೋಪಯೋಗಿರುತ್ತವೆ ವ್ಯಾಪಾರಸ್ಥರು ಇವುಗಳನ್ನು ವಿದೇಶೀ ಕಂಪನಿಯಿಂದ ನೇರವಾಗಿ ತರಿಸಿ ವ್ಯಾಪಾರ ಮಾಡುವದುಂಟು. ಇವುಗಳನ್ನು ನಮ್ಮ ಪತಿಯಿಂದ ತರಿಸಿಕೊಂಡಲ್ಲಿ ನಾವು ಅತಿ ಅಗ್ಗವಾಗಿ ಪೂರೈಸುತ್ತೇವೆ ನಮ್ಮಲ್ಲಿ ದೊರೆಯುವ ಸಾಮಾನುಗಳೆಂದರೆ—

೧ ಗುದ್ದಲಿ, ೨ ಸಲಿಕಿ, ೩ ಕೊಡಲಿ, ೪ ಪಮ್ಮಟ್ಟಿಗೆ. ೫ ಕಲ್ಲು ಒಡೆಯುವ ಸುತ್ತಿಗೆ, ೬ ಕಂದಲಿ ಇತ್ಯಾದಿ.

ಸವಿಸ್ತರ ವರ್ಣನೆ ಬಗ್ಗೆ ಹಾಗು ಬೆಲೆಪತ್ರಿಕೆಯ ಬಗ್ಗೆ ಇಂದೇ ಕಾಗದವನ್ನು ಬರೆದು ತಿಳಿದುಕೊಳ್ಳಿರಿ (ಅಲ್ಲಲ್ಲಿ ನಮಗೆ ಲೋಕಲ್ ಏಜಂಟರು ಬೇಕಾಗಿರುವರು ಇಚ್ಛೆಯುಳ್ಳವರು ಕರಾರ ಬಗ್ಗೆ ಕೇಳಿಕೊಳ್ಳಿರಿ.)

ಕಿರ್ಲೋಸ್ಕರ ಬಂಧು ಲಿಮಿಟೆಡ್

ಕಿರ್ಲೋಸ್ಕರವಾಡಿ, ಜಿ. ಸಾತಾರಾ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಆಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೭೩೬ ಸಯ್ಯದ ಅಲ್ಲಿ ಅಸಗರ ಬಿಲಗ್ರಾಮಿ ಸುಪರೆಂಟೆಂಡಂಟ್ ಸೆಕ್ರೆಟರಿಯೆಟ್ ಹೈದರಾಬಾದ ಡೆಕ್ಕನ್ನ ರೂ.೧೦೦೦

(೨) ಎಲ್. ಬಿ. ಸಿ. ನಂ ೧೯೭೨ ನಾರಾಯಣ ವಿಠ್ಠಲ ಲೋಣಕರ. ಕೇರ್ ಆಫ್ ಡಿ. ಈ. ಪುರಾಣಿಕ ೧೯೭ ನಿಪಾಲಪುರ ಇಂದೂರ ೧೦೦೦

(೩) ಎಲ್. ಬಿ. ಸಿ. ನಂ ೩೪೧ ರಾಮಚಂದ್ರ ಅನಂತ ಶಿರೋಳಿ. ಡಿವಿಜನಲ್ ಫಾರೆಸ್ಟ ಅಫೀಸರ ಛತ್ತರಪುರ. ಪಶ್ಚಿಮ ಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೬ ಕೇ. ಟಿ. ಫನಾರ್ಂಡಿಸ್ ವ್ಯಾಪಾರಸ್ಥ ಬ್ರುಕ್‌ಸಾಯಿಡ ಸಿಲೋನ, ಕೋಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜಿ. ಚವರೆ. ಅಸಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ. ಜಿಲ್ಹಾ ವಿಜಾಪುರ. ರೂ ೧೦೦೦

ಬಿ. ಎಸ್. ಆರಾಧ್ಯ,
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಸ್ಟಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇ:) ೧ ಪೌಂಡಿಗೆ ರೂ. ೧-೦-೦
೨ ನೇ ,, ,, ,, ರೂ. ೧-೩-೦

ದಿ ಸ್ಟಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಜೀವ ವಿಮೆಯ ಕಾರ್ಯದಲ್ಲಿ ಅದ್ಭುತವಾದ ಜಯವು!

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ರೂಪಾಯಿ ಲಾಭ ಹಂಚಿದೆ

ದಿ ಜನರಲ್ ಅಶ್ಯೂರನ್ಸ ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ಸಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉಳಿತಾಯವಾದದ್ದು ರೂ ೧,೦೯,೦೦೦!

ಏಜಂಟರು ಬೇಕು! ಧಾರಾಳವಾದ ಕಮಿಶನ್!

ಎಸ್. ಕಟ್ಟೂರ ಬಿ. ಎ. ಎಫ್. ಎಸ್. ಅಜಮೀರ.

Apply to:- M. Ramachandra Rao
Branch Secretary, opposit Minto Hospital,
Bangalore City
or
L. V Ramdurg. Chief Agent
Near Vitoba Temple Hubli.

ಈ ಪತ್ರಿಕೆಯು ಮಾರುತಿ ಪೇಠೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

೧ ನಂ. ೩ ೧೯೪೭ ವಾ. ಚಂದಾ ೧—೧೩—೦ ಮಾತ್ರ

ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಸಂಪಾದಕರು— ಮಂಗಳವೇಢೇ ರಾಜೀರಾಯರ ಮುಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟಿ ರವಿವಾರ ಮಿತಿ ಭಾದ್ರಪದ ಶುದ್ಧ ೧೫ ಶಕೆ ೧೮೪೯ ತಾ. ೧೧ ೯—೧೯೨೭. Date 11—9 1927. { ಸಂಚಿಕೆ ೩೬

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರು ನಡೆಯಿಸುವ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಚ್ಚುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಸಿಕ್ಕಿದರೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.

೪೯೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ.

ಹೊಸ ಟ್ರೇಡಲ್.

ಇದೀಗ ನಾವು ಯುರೋಪದಿಂದ ಹೊಸ ಟ್ರೇಡಲ್ ತರಿಸಿದ್ದೇವೆ ಇದು ಫೂಲಸ್ಕ್ಯಾಪ ಗಾತ್ರದ ಅರ್ಧ ಆಕಾರದಷ್ಟು, ಬೆಲೆ ೩೦೦ ರೂ ಮಾತ್ರ! ಈ ನಗರದಲ್ಲಿಯ ಮುದ್ರಕರಿಗೆ ಇದು ಬೇಕಿದ್ದರೆ ನಾವು ತರಿಸಿಕೊಡುವೆವು! ಯಂತ್ರವನ್ನು ನೋಡತಕ್ಕವರು ನಮ್ಮಲ್ಲಿಗೆ ಬಂದು ನೋಡಬಹುದು. ಇದಲ್ಲದೇ ರಾಯಲ್ ಆಕಾರದ ಒಂದು ಮುದ್ರಿಸುವ ಯಂತ್ರವು ನಮ್ಮಲ್ಲಿ ಮಾರಲಿಕ್ಕಿದೆ ಇದು ಹಳೆಯದಾದರೂ ಉತ್ತಮ ಕೆಲಸ ಕೊಡುತ್ತದೆ.

ವ್ಯವಸ್ಥಾಪಕ

ಕನ್ನಡಿಗ ಮುದ್ರಣ ಮಂದಿರ ಬಾಗಲಕೋಟೆ

ಭಯಂಕರ ಗರ್ಮಿ.

ಪರಮೆ, ರಕ್ತವಿಕಾರ, ಕುಷ್ಟ, ಮಹಾರೋಗ, ಧಾತುವಿಕಾರ ನಪುಂಸಕತ್ವಗಳ ಮೇಲೆ ಖಂಡಿತವಾಗಿ ಗುಣ ಕೊಡುವ ದಿವ್ಯ ಔಷಧಿ ಬೆಲೆ ರೂ. ೫ ಪ್ರಕೃತಿಮಾನ ತಿಳುಹಿಸಿ ಔಷಧಿ ಪಡೆಯಬೇಕು

ಸ್ಥಳ:—ವಾದಿರಾಜ ಜಹಗೀರದಾರ

ಮು ಇಂಡಿ (ವಿಜಾಪುರ)

ವಾಙ್ಮಯ ಪರಿಚಯ.

ಜಯ:— ಅಖಿಲ ಭಾರತ ವರ್ಷೀಯ ಜಯತೀರ್ಥೀಯ ಸಭೆಯ ಮುಖಪತ್ರವಾದ ಸಚಿತ್ರ ಸಾಮಾಜಿಕ ಮಾಸಿಕ ಪತ್ರವು. ತರ್ಕವಾಚಸ್ಪತಿ ವಿದ್ಯಾಭೂಷಣ ಶ್ರೀರಂಗ ಭೀಮಾಚಾರ್ಯರು ಇದರ ಮುಖ್ಯ ಸಂಪಾದಕರು. ದುಃಖಮಯವಾದ ಈ ಸಂಸಾರವನ್ನು ತ್ಯಜಿಸಿದರೇನೇ ಶಾಶ್ವತ ಸುಖವು ಸಿಗುವದೆಂಬ ಮತವು ತೀರ ತಪ್ಪು. ಭುಕ್ತಿಯ ಹೊಳೆಯು ಭಕ್ತಿಯ ಹಿರೇ ಹೊಳೆಯನ್ನು ಕೂಡಿದರೆ ಮಾತ್ರ ಅದು ಮುಕ್ತಿಯ ಸಾಗರವನ್ನು ಸೇರಿಸುವದೆಂಬೀ ಸತ ತತ್ವವನ್ನು ಸಶಾಸ್ತ್ರವಾಗಿಯೂ ಸೋಪಪತ್ತಿಕವಾಗಿಯೂ ಸಂಸಾರಿಗಳಿಗೆ ಚನ್ನಾಗಿ ತಿಳಿಸಿ ಅವರನ್ನು ಸುಖಿಗಳನ್ನಾಗಿ ಮಾಡುವದೇ ಇದರ ಧ್ಯೇಯ. ಇದರಲ್ಲಿ ಅಖಿಲ ಹಿಂದುಸ್ತಾನಕ್ಕೆ ಸಂಬಂಧಿಸಿದ ಧಾರ್ಮಿಕ ವಿಷಯಗಳೂ ಚರ್ಚಿಸಲ್ಪಡುತ್ತವೆ. ಆರಂಭದ ೪ ಸಂಚಿಕೆಗಳು ನಮ್ಮ ಕೈಸೇರಿವೆ. ಹಿಂದೂ ಮಹಾಸಭೆ, ಹಿಂದೂ ಸಂಘಟನೆ, ಹಿಂದೂ ಧರ್ಮಸ್ವರೂಪ ಮೊದಲಾದ ವಿಷಯಗಳು ಸಾಧಾರಣ ಸಮಾಧಾನಕರವಾಗಿ ಚರ್ಚಿಸಲ್ಪಟ್ಟಿವೆ. ಚೈತ್ರಾರಂಭದಿಂದ ವರ್ಷದ ಕೊನೆಯ ವರೆಗೆ ಹಿಂದೂ ಜನರು ಅಸಂಖ್ಯ ಹಬ್ಬಗಳನ್ನು ಪಾಲಿಸುತ್ತಾರೆ. ಆದರೆ ದ್ವಾಪರಾನ್ನವನ್ನು ಸವಿದರೆ ಮಾತ್ರ ಅವರಿಗೆ ಹಬ್ಬವಾದಂತಾಗುವದು; ಅದರ ಉದ್ದೇಶ, ವಿಧಾನಗಳು ಯಾವವೂ, ತುಸು ಕೂಡ ಗೊತ್ತಿರುವದಿಲ್ಲ. ಈ ಅಜ್ಞಾನವನ್ನು ಕಳೆಯುವದಕ್ಕಾಗಿ 'ಭಾರತವಾಸೀಯರ ಹಬ್ಬಗಳು' ಎಂಬ ಲೇಖನ ಮಾಲೆಯ ದ್ವಾರಾ ಸಂಪಾದಕರು, ಅನೇಕ ಪುರಾಣಗಳಲ್ಲಿ ಉಲ್ಲೇಖಿಸಿರುವ ಹಬ್ಬಗಳ ಪೂರ್ವೇತಿಹಾಸವನ್ನು ಸದ್ಯಕ್ಕೆ ಎಲ್ಲ ಕಡೆಯಲ್ಲಿ ನಡೆಯುವ ರೂಢಿಯನ್ನೂ ಅವುಗಳ ವಿಧಾನಗಳನ್ನೂ ವಾಚಕರಿಗೆ ನಿವೇದಿಸಹತ್ತಿದ್ದಾರೆ. ಪಂ ಮಾಲವೀಯಾಜೀ, ಶ್ರೀ ಚಿಂತಾಮಣರಾವ ವೈದ್ಯ ಇವರ ಲೇಖನಗಳನ್ನೂ ಸಂಗ್ರಹ ಮಾಡಿದ್ದಾರೆ. ಮಹಾರಾಷ್ಟ್ರೀಯ ಸಂತರು ಅದ್ವೈತರಿದ್ದಾಗ್ಯೂ ಅವರ ಮೇಲೆ ಮಾಧ್ವಮತದ ಪರಿಣಾಮವು ಒಳಿತಾಗಿ ಆಗಿದೆಯೆಂದು ಪ್ರೊ. ಬನಹಟ್ಟಿಯವರು ಇವರಲ್ಲಿ ಯೋಗ್ಯ ವಿಚಾರ ಮಾಡಿದ್ದಾರೆ. ಜಾತಿಯನ್ನು ಜನ್ಮದಿಂದ ನಿಶ್ಚಯಿಸಬೇಕು; ಗುಣಕರ್ಮಗಳಿಂದಲ್ಲವೆಂಬದಕ್ಕೆ ಕಾಲಿದಾಸನೂ ಅನುಕೂಲಿಸಿರುವನೆಂದು ಪ್ರೊ. ನಂದನಾಚಾರ್ಯರು ಅನೇಕ ಲೌಕಿಕ ದೃಷ್ಟಾಂತಗಳನ್ನು ಕೊಟ್ಟು ಸಿದ್ಧಮಾಡಿರುವರು. ಅಲ್ಲಲ್ಲಿ ನಡೆಯುವ ಮಾಧ್ವಮತದ ಸಭೆಗಳ ವಾರ್ಷಿಕ ವರದಿಗಳು ಇದರಲ್ಲಿ ಪ್ರಕಟವಾಗುತ್ತವೆ. ಪಂಚಾಂಗದ ಬಗ್ಗೆ ಸದ್ಯಕ್ಕೆ ನಡೆದಿರುವ ಸಂಪೂರ್ಣ ನಿವೇದನೆಯೂ ಇದರಲ್ಲಿ ಬಂದಿದೆ.

ಈ ಪತ್ರವು ಸರ್ವಾಂಗ ಸುಂದರವಾಗಿ ಬಹುಕಾಲ ಬಾಳಲೆಂದು ನಮ್ಮ ಬಲವಾದ ಬಯಕೆ. ಅದ್ದರಿಂದ ಕೆಲವು ಸೂಚನೆಗಳನ್ನು ಮಾಡಲಿಕ್ಕೆನ್ನುವೆವು. (೧) ಇದು ಸಾಮಾಜಿಕ ಪತ್ರವೆಂದು ೧ನೇ ಸಂಚಿಕೆಯಲ್ಲಿ ಪ್ರಕಟವಾಗಿದ್ದು ಉಳಿದ ಸಂಚಿಕೆಗಳಲ್ಲಿ ಸಚಿತ್ರ ಪತ್ರವೆಂದೇ ಪ್ರಸಿದ್ಧವಾಗಿವೆ. ಸಾಮಾಜಿಕ ಶಬ್ದವನ್ನು ಲೋಪಮಾಡಿದ್ದು ಏನು ಕಾರಣವು? ಪುನಃ ಆ ಶಬ್ದವನ್ನಿಟ್ಟು ಇನ್ನೂ ಅನೇಕ ಸಾಮಾಜಿಕ ಪ್ರಶ್ನೆಗಳನ್ನು ಬಿಡಿಸಬೇಕು. ಉದಾ:—ಸಮುದ್ರಯಾನದ ವಿಷಯ, ಪ್ರೌಢ ವಿವಾಹ, ಅಸ್ಪೃಶ್ಯತೆ, ಬ್ರಾಹ್ಮಣ್ಯ ಕಾಯುವದಕ್ಕೆ ಹೊಸ ಉಪಾಯಗಳನ್ನು ಕಲ್ಪಿಸುವದು, ಧಾರ್ಮಿಕ ದೃಷ್ಟಿಯಿಂದ ವಿದೇಶೀ ಅರಿವೆಯ ಹಾಗೂ ತಿಂಡಿಗಳ ಅಯೋಗ್ಯತೆ, ಖಾದಿಯ ಮಹತ್ವ ಮೊದಲಾದವುಗಳು. (೨) ವೃತ್ತಪತ್ರ, ಮಾಸಿಕ ಪತ್ರಗಳಲ್ಲಿ ಮಾಧ್ವಮತದ ಮೇಲೆ ನಿರಾಧಾರವಾಗಿ ಬರುವ ಆಕ್ಷೇಪಗಳನ್ನು ನಿರಾಕರಿಸಬೇಕು. (೩) ಮಾಧ್ವಮತದ ಮತ್ತು ಇತರ ಮತಗಳ ಮುಖ್ಯ ತತ್ವಗಳ ಪರಿಚಯ ಮಾಡಿಕೊಡಬೇಕು.

ಪತ್ರವು ಭಾಷೆಯ ದೃಷ್ಟಿಯಿಂದ ಅಂದವಾಗುವದಕ್ಕೆ ನಮ್ಮ ಸೂಚನೆಗಳು ಹೀಗಿರುತ್ತವೆ. (೧) ಪರಿಂಡು ಪೈಕಿ, ಜಾಲೂ ರೂಢಿ, ರಿಪೋರ್ಟ ಮೊದಲಾದ ಪರಭಾಷೆಯ ಶಬ್ದಗಳನ್ನು ಉಪಯೋಗಿಸಬಾರದು. (೨) ಅಪಾಂಕ್ತ: ಓತಪ್ರೋತ ಮೊದಲಾದ ರೂಢಿಯೊಳಗಿಲ್ಲದ ಸಂಸ್ಕೃತ ಶಬ್ದಗಳನ್ನು ಉಪಯೋಗಿಸಬಾರದು. ಸಂಸ್ಕೃತ ವಾಕ್ಯಗಳನ್ನು ಇಲ್ಲವೆ ಶ್ಲೋಕಗಳನ್ನು ಉಪಯೋಗಿಸಿದಾಗ್ಗೆ ಅರ್ಥವನ್ನು ಕೊಡದಿದ್ದರೆ ಓದುಗರಿಗೆ ಸಮಾಧಾನವಾಗದು. (೩) ಭಾಷೆಯ ಶೈಲಿಯು ಕನ್ನಡ ವಾಙ್ಮಯಕ್ಕೆ ಅಷ್ಟು ಒಪ್ಪುವದಿಲ್ಲ. ಮನೆಯೊಳಗೆ ಮಾತನಾಡುವ ಅಶುದ್ಧ ನುಡಿಗಳನ್ನೇ ಬರಹದಲ್ಲಿ ಉಪಯೋಗಿಸಿದ್ದಾರೆ. ಉದಾ:-ಭಕಳೆ, ಇಂಥಾ, ಇಲ್ಲಾ, ಅಕಾರಾಂತ ಸಂಸ್ಕೃತ ಶಬ್ದಗಳನ್ನು ಹಾಗೆಯೇ ಇಟ್ಟಿದ್ದಾರೆ. ಉದಾ:ಸೇವಾ. ಇನ್ನೂ ಅನೇಕ ದೋಷಗಳಿವೆ. ಅವರುಗಳು ಸಾಪ್ತಗಳು ಇತ್ಯಾದಿ. ಕರ್ತೃವು ಬಹು ವಚನದಲ್ಲಿದ್ದರೂ ಕ್ರಿಯಾಪದವು ಏಕವಚನದಲ್ಲಿರುತ್ತದೆ. ಮುದ್ರಣ ದೋಷಗಳ ಕಡೆಗೂ ಹೆಚ್ಚು ಲಕ್ಷ ಗೊಟ್ಟು ಸಾಹಿತ್ಯಕ್ಕೆ ಸಲ್ಲುವ ನುಡಿಗಳನ್ನು ಉಪಯೋಗಿಸಬೇಕು. (೪) ಇನ್ನು ಕೊನೆಯ ಮಹತ್ವದ ಸೂಚನೆಯೇನಂದರೆ ಈ ಪತ್ರವನ್ನು ಕನ್ನಡ ಲಿಪಿಯಲ್ಲಿ ಹೊರಡಿಸಬೇಕು. ಸದ್ಯಕ್ಕೆ ಇದು ಬಾಲಬೋಧ ಲಿಪಿಯಲ್ಲಿ ಹೊರಡುತ್ತಲಿದೆ. ಆದರೆ ಅನಸೂಯಾ ಅಥವಾ ಸಮಾಜ ಸುಧಾರಣೆ ಎಂಬ ಕಾದಂಬರಿಯನ್ನು ಕನ್ನಡ ಲಿಪಿಯಲ್ಲಿ ಪ್ರಸಿದ್ಧಿಸಿದ್ದರಿಂದ ಸಮಗ್ರ ಪತ್ರವನ್ನು ಕನ್ನಡ ಲಿಪಿಯಲ್ಲಿಯೇ ಅಚ್ಚು ಹಾಕಿಸದೇ ಬಿಡಲಿಕ್ಕಿಲ್ಲೆಂದು ನಮಗೆ ಅನಿಸುತ್ತಲಿದೆ. 'ಜಯ'ದ ವಾಚಕರು ಮತ್ತು ಮುಖ್ಯ ಲೇಖಕರು ಕನ್ನಡ ಲಿಪಿಯನ್ನರಿಯರೆಂದು ಪತ್ರವು ದೇವನಾಗರಿ ಲಿಪಿಯಲ್ಲಿ ಹೊರಡುವದೋ? ಕನ್ನಡ ಭಾಷೆ ಸಂಸ್ಕೃತ ವೈದಿಕ ಲೌಕಿಕ ಜನರಿಗೆ ಕನ್ನಡದ ಮೂಲಾಕ್ಷರಗಳನ್ನು ಹೊಸದಾಗಿ ಕಲಿಯಲಿಕ್ಕೆ ಬಹಳ ಶ್ರಮವಾಗುವದೋ? ಪ್ರಾಚೀನ ಸಂಸ್ಕೃತ ಪುಸ್ತಕಗಳು ಬಾಲಬೋಧ ಲಿಪಿಯಲ್ಲಿ ಬರೆಯಲ್ಪಟ್ಟಿರುವದೇನೋ ನಿಜ. ಅದು ಕಾರಣವೇ ಬಾಲಬೋಧ ಲಿಪಿಯಲ್ಲಿ ಸಂಪಾದಕರಿಗೆ ಹೆಚ್ಚು ಆದರವೂ ಪ್ರೇಮವೂ ಇದ್ದರೂ ಇರಬಹುದು. ಆದರೂ ತಾಯ್ನಾಡಿಯ ಅಕ್ಷರಗಳಿಗೆ ತಕ್ಕ ಆಕ್ಕರತೆಯನ್ನು ತೋರಿಸದಿದ್ದರೆ, 'ಮಾತೃದೇವೋ ಭವ' ಎಂಬೀ ಉಪನಿಷತ್ತಿನ ಮಾತು ಸಂಪಾದಕ ವರ್ಗದ ನಡೆಯಲ್ಲಿ ಅಸಾರ್ಥಕವಾಗಲಿಕ್ಕಿಲ್ಲವೇ? ಸಂಸ್ಕೃತದಲ್ಲಿ ಅಗಾಧ ಪಾಂಡಿತ್ಯ ಸಂಪಾದಿಸಿದ್ದರೂ, ಶ್ರೀಮ. ಧ್ರುವಾಚಾರ್ಯರ ಸಾಕ್ಷಾತ ಶಿಷ್ಯರಾದ ನಾರಾಯಣರು (ಸಂಪಾದಕರು) ಕನ್ನಡ ನುಡಿಯ ಬಗ್ಗೆ ತಮಗಿರುವ ಮಮತೆಯನ್ನು ವ್ಯಕ್ತಗೊಳಿಸಲಿಲ್ಲವೇ? ಕನ್ನಡ ಲಿಪಿಯನ್ನು ಉಪಯೋಗಿಸಿದರೆ ಅಸಂಖ್ಯ ಕನ್ನಡಿಗರಿಗೆ 'ಜಯವು' ಉಪಯೋಗವಾಗಲಿಕ್ಕಿಲ್ಲವೇ? ಸಂಪಾದಕ ವರ್ಗವು ಸಂಪೂರ್ಣ ವಿಚಾರಮಾಡಿ ಕನ್ನಡ ತಾಯಿಗೆ ಒಪ್ಪುವ ಸೀರೆಯನ್ನು ಉಡಿಸಬೇಕೆಂದು ಆಗ್ರಹದಿಂದ ಸೂಚಿಸುವೆವು. ಇರಲಿ, ಚಿರಾಯುವಾಗಿ 'ಜಯವು' ಸರ್ವತ್ರ ವಿಜಯಹೊಂದಲಿ.

—ಭೀಮಸೇನ

ವಾರ್ಷಿಕ ವರ್ಗಣಿ ೩-೦-೦. ಸಿಗುವ ಸ್ಥಳ —
"ಜಯ" ಕಾರ್ಯಾಲಯ
೧೦೭೦ ಕಿಲ್ಲೆ ಹುಬ್ಬಳ್ಳಿ.

ಸೋಜಿಗದ ಸುದ್ದಿ

ನಿದ್ರೆ ಬಾರದಿದ್ದರೆ. ಅವರಿಗಾಗಿ ಒಂದು ಪಲ್ಲಂಗವು ಶೋಧಿಸಲ್ಪಟ್ಟಿದೆ. ವಿದ್ಯುತ್ತಿನ ಸಹಾಯದಿಂದ ಮಲಗಿದ ಹಾಸಿಗೆಯು ಸ್ವಲ್ಪವೂ ಅಲ್ಲಾಡದಂತೆ ಸಾವಕಾಶವಾಗಿ ಅಗಳೊಡುವದು, ತಿರೋಭಾವಾಂತರ ಅನೇಕ ವಿಧದಿಂದ ಅಲೆದಾಡುವದು. ಮಲಗಿದವನಿಗೆ ಅಲೆವ ದುಮದೆಂಬ ಭಾಸ ಸಹ ಆಗದು, ಆದರೆ ಆದರ ಮೇಲೆ ಮಲಗಿದ ಕೂಡಲೇ ನಿದ್ರೆಯು ಪಕ್ಕನೇ ಬಂದುಬಿಡುವದು! ಲಂಡನ್ನಿನ ಸಿವಿಲ ಇನ್ಸ್ಟಿಟ್ಯೂಟ ಆಫ ಸಿವಿಲ್ ಇಂಜಿನಿಯರಿಂಗ್‌ದವರಲ್ಲಿದು ದೊರೆಯುವದು. ಸರ ಆಲ್‌ಫ್ರೆಡ್ ಯಾರೋ ಇವರು ಅದರ ಶೋಧಕರು. ಈ ಪಲ್ಲಂಗಿಗೆ "ನಿದ್ರೆಯ-ವಿಮೆ" (Sleep-insurer) ಎಂಬ ಹೆಸರಿದೆ.

ಕನ್ನಡಿಗ.

ಬಾಗಲಕೋಟಿ ಭಾದ್ರಪದ ಶುದ್ಧ ೧೫ ಶಕೆ ೧೮೪೯.

ಸಂಪಾದಕರ ಭೂಮಿ

(೬೦)

ನಿನ್ನ ಮನಸಿನ ಮೋಹವಮಾಡಿ ಕಟ್ಟುವೆನಾನು।
ನಿನ್ನ ದೇಶವಮಾಡಿದಂಥ ಮಕ್ಕಳ ದೊಮ್ಮ।
ಎನ್ನ ನಾವರು ನಿನ್ನ ಮೋಹಬಟ್ಟೆಯು ಸೊಂದು ಹಿನ್ನಯಾಳ ಇದಕ್ಕೆ।
ನನ್ನ ದೇಹವು ನಿನ್ನ ವೀರಶಾಸನಕಾಗಿ।
ನನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧನಿದೆ।
ನನ್ನಪ್ರಾಣವು ನಿನ್ನ ಗಂಧವನು ಹೀರಬಹ ಗಂಧವಹವೆಂದು ತಿಳಿಯೊ

—ಅಂದಕಾ ಕನಯು ದಕ್ಷ

ಈ ಜಿಲ್ಲೆಯಲ್ಲಿ ಈ ವರ್ಷವೂ ಬರಗಾಲವು ತಲೆಹಾಕುವ ಲಕ್ಷಣಗಳು ಸ್ಪಷ್ಟವಾಗುತ್ತಲಿವೆ. ಮುಂಗಾರಿಯು ಬೆಳೆಗಳು ಸಂಪೂರ್ಣವಾಗಿ ನಾಶವೊಂದಿವೆ. ಹಿಂಗಾರಿ ಬಿತ್ತಲು ಮಳೆಯಿಲ್ಲ; ಆಗುವ ಲಕ್ಷಣವು ಸಧ್ಯಕ್ಕಂತೂ ತೋರದು. ದೇವರ ಕೃಪೆಯಿಂದ ಕ್ಷಿಪ್ರದಲ್ಲಿ ಮಳೆಯು ಬಿದ್ದರೆ ಆದರೆ ಆ ಮಾತು ಬೇರೆ. ಆದರೆ ಮುಂದಾಳುಗಳು ಈಗಿನಿಂದಲೇ ಎಚ್ಚತ್ತು, ಬರದೈತರ ಕಷ್ಟನಿವಾರಣೆಗಾಗಿ ಟೊಂಕಕಟ್ಟಬೇಕು. ಇಲ್ಲವಾದರೆ ಸರಕಾರವು ಯಥಾಪ್ರಕಾರವಾಗಿ ತನ್ನ "ಪದ್ಧತಶೀರ ಆಗೆವಾರಿ"ಯನ್ನು ಮಾಡತಲಿಕ್ಕೂ, 'ಪಬ್ಲಿಕ್ ವರ್ಕ್ಸ'ದವರಿಗೆ ಕೂಲಿಯವರೇ ಸಿಗಗೊಡು ಸಾರುವದಕ್ಕೂ" ಹಿಂದು ಮುಂದು ನೋಡದೇ ತನ್ನ ಕಳೆದ ವರ್ಷದ ಕಾರ್ಯಕ್ರಮವನ್ನು ಪ್ರಾರಂಭಿಸುವರು. ಕಳೆದ ಸಾರೆ ಕಾಂಗ್ರೆಸ್ಸಿನವರೂ, ವೀರಶೈವ ತರುಣ ಸಂಘದವರೂ ಮಾಡಿದ ಚಳವಳಿಗೆ ಬಗ್ಗೆ ಸಂಪೂರ್ಣ ಜಯವು ದೊರಿಯದಿದ್ದರೂ, ಅದರಿಂದ ಕೆಲವಂಶಗಳಲ್ಲಿ ಮಹತ್ವದ ಪರಿಣಾಮವು ಆಗಿಯೇ ಇರುವದು. ಆದುದರಿಂದ ಮುಂಜಾಗ್ರತವಾಗಿ ಈ ಸಲವೂ ಚಳವಳಿ ನಡೆಸಿದರೆ ಬಡವರಿಗೆ ಅದರಿಂದ ಕಲ್ಯಾಣವಾಗದೇ ಇರದು. ಜಿಲ್ಲಾ ಅಧಿಕಾರಿಗಳು ಉಪಕ್ರಮಿಸಿದ ಅಪದ್ಧ ಪದ್ಧತಿಯ ಬಗ್ಗೆ ಕಳೆದ ವಾರದಲ್ಲಿ ನಾವು ಬರೆದುದಾಗಿದೆ. ಈವರೆಗೆ ಸರಕಾರದಲ್ಲ ಸುಬುದ್ಧಿ ಉತ್ಪನ್ನವಾಗಿ, ತಾವಾಗಿಯೇ ನಾವು ಸೂಚಿಸಿದಂತೆ, ಬಡವರಿಗೆ ಕೂಲಿ ದೊರೆಯುವಂತೆಯೂ, ಮಾನವಂತ ಕೃಷಿಕರಿಗೆ ಕಡಿಮೆ ಬಡ್ಡಿಯ ಸಾಲ ದೊರೆಯುವಂತೆಯೂ ಮಾಡಿಲ್ಲ. ಅಲ್ಲದೇ ಅನ್ನಸಾಮಗ್ರಿಯು ಪೇಟೆಯಲ್ಲಿ ದೊರೆಯುವಂತೆಯೂ, ವ್ಯಾಪಾರಸ್ಥರೂ, ಧಾನ್ಯವನು ಒಮ್ಮಿಂದೊಮ್ಮೆ ಏರಿಸದಂತೆಯೂ ವಿಚಾರ ಮಾಡಬೇಕು. ಬಾಗಲಕೋಟೆಯ ಪೇಟೆ ಜೋಳಕ್ಕಾಗಿ ಹಳ್ಳಿಗರಿಂದ ತುಂಬಿಲ್ಲದೇ ಬಿಕ್ಕಿಡಿಗಳು ಬಡುತ್ತಲಿವೆ. ಇದರಿಂದ ರೂಪಾಯಿಗೆ ಸೇರು ಇದ್ದ ಜೋಳವು ಈ ವಾರದಲ್ಲಿ ೭॥ ಸೇರು ಆಗಿದೆ! ಪೇಟೆಗಳಲ್ಲಿ ಪರಿಕರಗಳು ಇರತಕ್ಕದ್ದು ಸರಿಯಾಗಿದೆಯಾದರೂ, ಹೆಚ್ಚು ಲಾಭಕ್ಕಾಗಿ ಒಮ್ಮಿಂದೊಮ್ಮೆ ವ್ಯಾಪಾರಸ್ಥರಿಂದ ಬೆಲೆ ಏರಿಸಲ್ಪಟ್ಟರೆ ಹಣ ಕಟ್ಟಿಕೊಂಡು

ಜೋಳ ಕೊಳ್ಳಲು ಪೇಟೆಗೆ ಬಂದ ಬಡ ಬೋರೇಗೌಡನಿಗೆ ದಿಕ್ಕು ತಪ್ಪಿದಂತಾಗುವದು! ಆದುದರಿಂದ ಜಿಲ್ಲಾ ಅಧಿಕಾರಿಗಳ ಲಕ್ಷ್ಯವು ಇತ್ತ ಕಡೆಗೂ ಇರಬೇಕು. ಹಳ್ಳಿಗಳಲ್ಲಿ ಈಗ ಕೂಲಿ ದೊರೆಯದಂತಾಗಿದೆ. ಆದುದರಿಂದ ಅಲ್ಲಲ್ಲಿ, ಹಾದಿ ಬಡಿಯುವದೂ, ಸಣ್ಣಪುಟ್ಟ ಕಳವೂ, ಪ್ರಾರಂಭವಾಗಿವೆ. ಅಲ್ಲದೇ ಮಕ್ಕಳ ಹಸಿವೆಯನ್ನು ನೋಡಿ, ಅದನ್ನು ಹಿಂಗಿಸಲು ಕಾಸುಯಿಲ್ಲದ ತಾಯಿದೋರೆಗಳು ತನ್ನ ಗಂಟಲಿಗೆ ಗಾಣ ಹಾಕಿಕೊಂಡ ವರ್ತಮಾನವೂ ದಟ್ಟವಾಗಿದೆ; ಇಂತಹ ಹೃದಯದ್ರಾವಕವಾದ ನೋಟವನ್ನು ಕಣ್ಣಾರೆ ಕಂಡೂ, ಕಂಡೂ, ಜಿಲ್ಲಾಧಿಕಾರಿಗಳು ಸುಮ್ಮನಿರುವದು ಅವರ ಶೀಲಕ್ಕೆ ಯೋಗ್ಯವೇ? ಬಡ ಜನರಿಗೆ ಕೂಲಿ ದೊರೆಯುವಂತಹ ಕೆಲಸಗಳನ್ನು ಸಧ್ಯದಲ್ಲಿಯೇ ತೆಗೆಯುವದು ಸರಕಾರದ ಆದ್ಯಕರ್ತವ್ಯವಾಗಿದೆ. ಆದರೆ ದಯಾಳು ಸರಕಾರವು ಇಂತಹ ಸಂಗತಿಗಳನ್ನು ವಿಚಾರಿಸುವದು, ಆಲೋಚಿಸುವದು, ನಿರ್ಣಯಿಸುವದು; ಮುಗಿಯುವದೇಯಿಲ್ಲ; ದೈವವಶಾತ್ ಮುಗಿದರೆ, ವಿಲಂಬವಾಗುತ್ತ ಆಗುತ್ತ, ವರ್ಷದ ಕೊನೆಗೆ ಮುಗಿಯುವದು! ಅಷ್ಟೊಂದು ಕಾಲದಲ್ಲಿ ಉಪಜೀವಿಸಲು ಕೂಲಿ ಕಾಣದೆ ಕುಸ್ತಿ ನಡುಕುತ್ತ ಬಡವರು ಪರಸ್ಥಳಕ್ಕೆ ಹೋಗಿರುವರು! ಅಥವಾ ಮಳೆಯಾಗಿದ್ದರೆ, ಹೊಲದ ಕೆಲಸದಲ್ಲಿ ತೊಡಗುವರು! "ಈಗ್ಗೆ ಕೂಲಿಯೇ ದೊರೆಯಲೊಲ್ಲದು! ಆದುದರಿಂದ ಬರಗಾಲವೆಂದು ಚಳವಳಿಗಾರರು ಬೊಬ್ಬೆ ಕುಟ್ಟುತ್ತಿರುವದು ಸುಳ್ಳು" ಎಂಬುದಾಗಿ ಸರಕಾರವು ಬಹು ಆಥ್ಯತೆಯಿಂದ ಸಾರಹೊಡೆಯುವದು! ಆದುದರಿಂದಲೇ ಮುಂದಾಳುಗಳು ಜಾಗೃತರಾಗಿ ಈ ಬಗ್ಗೆ ಚಳವಳ ಹೂಡಬೇಕಾಗಿ ನಾವು ಒತ್ತಾಯಪಡಿಸುತ್ತಿರುವದು. ಕಾಂಗ್ರೆಸ್‌ದವರೂ ವೀರಶೈವ ತರುಣ ಸಂಘದವರೂ ಈ ಬಗ್ಗೆ ಮತ್ತೆ ತಮ್ಮ ಕಾರ್ಯ ಪ್ರಾರಂಭಿಸುವರಾಗಿ ನಾವು ನಂಬುತ್ತೇವೆ.

ಕರ್ನಾಟಕದಲ್ಲಿಯ ಶಿಲಾಲೇಖಗಳು ಮಣ್ಣುಪಾಲಾಗಿ ಹೋಗುತ್ತಲಿವೆಯೆಂಬುದನ್ನೂ, ಸರಕಾರವು ಹೀಗೇ ಇವನ್ನು ದುರ್ಲಕ್ಷಿಸುತ್ತ ಹೋದರೆ, ಕರ್ನಾಟಕ ಇತಿಹಾಸದಲ್ಲಿಯ ಮಹತ್ವದ ಸಾಧನಗಳು ನಮಗೆ ದೊರೆಯದೇ ಹೋಗುವವೆಂಬುದನ್ನೂ, ಚನ್ನಾಗಿ ವಿವರಿಸಿ, ಕರ್ನಾಟಕಕ್ಕೆ ಪ್ರತ್ಯೇಕ ಶಿಲಾಶಾಸನ ಇಲಾಖೆಯನ್ನೇರ್ಪಡಿಸುವದೇ ತರಣೋಪಾಯವೆಂಬುದನ್ನೂ ನಾವು ಕೆಲವು ತಿಂಗಳ ಹಿಂದೆ ಲೇಖಾಂಕಗಳನ್ನು ಬರೆದು ಸಿದ್ಧಪಡಿಸಿದ್ದೇವಷ್ಟೆ! ಆತ್ತ ಕರ್ನಾಟಕ ಇತಿಹಾಸ ಮಂಡಲದವರೂ ಈ ಬಗ್ಗೆ ಹಿಂದುಸ್ಥಾನ ಸರಕಾರದ ಸಂಗಡ ಪತ್ರವ್ಯವಹಾರ ನಡೆಸಿರುವರು. ಇಂತಹ ಸಮಯದಲ್ಲಿ ಶ್ರೀ ಬೆಳವೀಯವರು (ಅಸೆಂಬ್ಲಿಯಲ್ಲಿ) ದಿಲ್ಲಿಯ ಹಿಂದುಸ್ಥಾನ ಕಾಯದೇ ಮಂಡಲದಲ್ಲಿ, ಈ ಬಗ್ಗೆ 'ಕನ್ನಡಿಗ'ನು ಸೂಚಿಸಿದಂತೆ, ಕರ್ನಾಟಕದ ಬಗ್ಗೆ ಕೊಂಚಾದರೂ ಅಭಿಮಾನವುಳ್ಳವರು, ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ಇವುಗಳಲ್ಲಿಯ ಕೆಲವು ಪ್ರಶ್ನೆಗಳಿಗೆ ಸರಕಾರದಿಂದ ಉತ್ತರವು ಕೊಡಲ್ಪಟ್ಟಿದ್ದು, ಉಳಿದ ಪ್ರಶ್ನೆಗಳಿಗಾದರೂ ಉತ್ತರವು ಬೇಗನೇ ದೊರೆಯಬಹುದು ಈಗ್ಗೆ ಕೊಟ್ಟ ಪ್ರಶ್ನೆಗಳಿಂದ ಒಂದು ಸ್ವತಂತ್ರ ಲೇಖವನ್ನು ನಾವು ಇದೇ ಸಂಚಿಕೆಯಲ್ಲಿ ಕೊಟ್ಟಿರುವೆವು. ಕರ್ನಾಟಕಕ್ಕೆ ಪ್ರತ್ಯೇಕ ಶಿಲಾಶಾಸನ ಇಲಾಖೆಯನ್ನು ಕೊಡುವ ವಿಷಯವನ್ನು ಸರಕಾರವು ಯೋಚಿಸುತ್ತಿರುವದಾಗಿ ಉತ್ತರ ಬಂದಿದೆ. ಸರಕಾರದ "ಯೋಚಿಸುವ" ಉತ್ತರದಲ್ಲಿ ನಾವು ಅಷ್ಟೊಂದು ವಿಶ್ವಾಸವನ್ನಿಟ್ಟು, ಕರ್ನಾಟಕಕ್ಕೆ ಈ ಇಲಾಖೆಯು ದೊರೆಯುವದೆಂದು

ನಂಬಲಾಗದೆಂಬದು ಅನುಭವಸಿದ್ಧವಾಗಿದೆ. ಆದರೆ ಈ ವರೆಗೆ ಈ ವಿಷಯವು ಹಿಂದುಸ್ಥಾನ ಸರಕಾರದ ದಿವ್ಯದೃಷ್ಟಿಗೆ ತಲ್ಪಿರಲೇ ಯಿಲ್ಲ; ಈಗಲಾದರೂ ನಮ್ಮ ಕೂಗು ಅವರ ಕಿವಿಗೆ ತಗಲೀತೆಂ ಬದಿಷ್ಟೇ! ಕೊಂಚ ಆನಂದದ ಸಂಗತಿ ಕನ್ನಡಿಗರು ಎಚ್ಚತ್ತು ಕ ರ್ನಾಟಕದ ಬಗ್ಗೆ ಹೆಣಗಾಡಬೇಕಾದ ವಿಷಯಗಳನೇಕವಾಗಿವೆ ಅವರಲ್ಲಿ ಇದೂ ಒಂದು, ಎಂಬದಾಗಿ ಬಗೆದು ಯಾರೂ ಈ ವಿಷಯವನ್ನು ಉದಾಸೀನ ದೃಷ್ಟಿಯಿಂದ ನೋಡತಕ್ಕದ್ದಲ್ಲ ಕ ರ್ನಾಟಕದ—ಅಖಂಡ ಕರ್ನಾಟಕದ—ವೃತ್ತ ಪತ್ರಕಾರರೂ ಈ ವಿಷಯವನ್ನೆತ್ತಿ ಈಗ್ಗೆ ಜನರಲ್ಲಿ ಜಾಗೃತಿ ಮಾಡಬೇಕು ಇತಿಹಾ ಸ ಪ್ರೇಮಿಗಳು ವೈಯುಕ್ತಿಕವಾಗಿಯೂ, ಕನ್ನಡನಾಡಿನಲ್ಲಿಯ ಸಾರ್ವಜನಿಕ ಸಂಸ್ಥೆಗಳು ತಮ್ಮ ಸಾಂಘಿಕ ಶಕ್ತಿಯಿಂದಲೂ, ದಿಲ್ಲಿ ಯ ಕಾಯದೆ ಮಂಡಲಗಳಲ್ಲಿಯ ಕರ್ನಾಟಕದ ಪ್ರತಿನಿಧಿಗಳು ತಮ್ಮ ವಚಸ್ಸಿನಿಂದಲೂ, ಹಿಂದುಸ್ಥಾನ ಸರಕಾರಕ್ಕೆ ಅರ್ಜಿಗಳ ಮೇಲೆ ಅರ್ಜಿಗಳ ಮಳೆಗರೆಯುತ್ತ, ಕರ್ನಾಟಕಕ್ಕೆ ಶಿಲಾಶಾಸನ ದ ಪ್ರತ್ಯೇಕ ಇಲಾಖೆಯ ಅವಶ್ಯವಾಗಿದೆಂಬುದನ್ನು ಅವರಿಗೆ ಅವಗತ ಮಾಡಿಕೊಡಬೇಕು. ಕರ್ನಾಟಕ ಇತಿಹಾಸ ಮಂಡಲ ದವರು ಮತ್ತೆ ಸರಕಾರಕ್ಕೆ ವಿಲಂಬವಿಲ್ಲದೇ ಬರೆದು, ತಮ್ಮ ವಿನಂ ತಿಗೆ ಸರಕಾರವು ಬೇಗನೇ ಮನ್ನಣೆಯನ್ನೀಯಬೇಕಾಗಿ ಒತ್ತಾ ಯ ಪಡಿಸಬೇಕು. 'ಕನ್ನಡಿಗ'ನು ಎತ್ತಿ ಹಿಡಿದ ಈ ಕಾರ್ಯದ ಲ್ಲಿಯೂ ಅವನಿಗ ಜಯ ದೊರೆಯುವಂತೆ ಪ್ರಯತ್ನಿಸಲು ಎಲ್ಲ ಸಹಾಯಗಳನ್ನು ಕರ್ನಾಟಕ ಮಾತೆಯ, ಅವನಿಗೆ ದಯಪಾಲಿಸ ಬೇಕಾಗಿ ಪ್ರಾರ್ಥಿಸುತ್ತೇವೆ.

"ಮೈಸೂರು ಸಂಸ್ಥಾನದ ಮಹಾಸಭೆ." ಮೈಸೂರಿನ "ವೆಲ್ಫೇರ್ ಆಫ್ ಮೈಸೂರ್" ಪತ್ರಿಕೆಗೆ "ಶ್ರೀಯುತ ಜೆ ಆರ್. ಜೋಯಿಸರ್. ಎಂ. ಎ, ಎಲ್. ಎಲ್. ಬಿ ಎಂಬುವರು 'ಮೈಸೂರು ಸಂಸ್ಥಾನದ ಮಹಾಸಭೆ' ಎಂಬ ವಿಚಾರವಾಗೊಂದು ಲೇಖನ ಬರೆ ದಿರುವರು ರಾಜಕೀಯ ವಿಷಯದಲ್ಲಿ ಈ ಸಂಸ್ಥಾನಕ್ಕಿಂತಲೂ ಮುಂದಾಗಿರುವ ಸಂಸ್ಥಾನಗಳ ಮೇಲ್ಪಂಕ್ತಿಯನ್ನನುಸರಿಸಿ, ಈ ರಜತ ಮಹೋತ್ಸವವು ಚಿರಸ್ಮರಣೀಯವಾಗಿ, ಮೈಸೂರು ಸಂಸ್ಥಾನದ ಪ್ರಜೆಗಳು ವರ್ಷಕ್ಕೊಮ್ಮೆ ಸೇರಿ, ತಮ್ಮ ಹಕ್ಕು ಬಾಧ್ಯತೆಗಳ ಚಾಲಕತ್ವವನ್ನೂ, ಸಂಕಷ್ಟ ನಿವಾರಣೋಪಾಯ ವನ್ನೂ, 'ಸ್ವರಾಜ್ಯ' ಗವ್ಯಸ್ಥಾನಕ್ಕೆ ವಾಯುವೇಗದಲ್ಲಿ ಹೋಗು ತ್ತಿರುವ ಬ್ರಿಟಿಷ್ ಹಿಂದುಸ್ಥಾನದ ಪ್ರಜೆಗಳೊಂದಿಗೆ ನಮ್ಮ ಹಿತ, ಆಕಾಂಕ್ಷೆಗಳಿಗೆ ಯಾವತೊಂದರೆಯೂ ಉಂಟಾಗದಂತೆ ಬಾಂಧವ್ಯ ವನ್ನು ಕಲ್ಪಿಸಿಕೊಂಡ, ಮುಂದೆ ಸಾಧಿಸಲ್ಪಡುವ ಸ್ವರಾಜ್ಯ ಸರ್ಕಾರ ದಲ್ಲಿ ಆಶ್ರಿತ ಸಂಸ್ಥಾನಗಳು ಯಾವ ಸ್ಥಾನವನ್ನು ಪಡೆಯಬೇ ಕೆಂದು ನಿಷ್ಕರ್ಷಿಸುವುದರಲ್ಲಿಯೂ ತೊಡಗಬೇಕೆಂಬ ಉತ್ತಮೋ ದ್ದೇಶವನ್ನಿಟ್ಟು, ಸ್ಥಾಪಿತವಾಗಲಿಕ್ಕಿರುವ ಈ ಸಂಸ್ಥೆಗೆ ಸ್ವಾತಂತ್ರ್ಯ ಸಾಧಕರೆಲ್ಲರೂ ಸಹಾನುಭೂತಿಯನ್ನು ತೋರಿಸಬೇಕಾದುದು ಧರ್ಮವಾಗಿದೆ. ಮದರಾಸಿನ ನೀಚ ಮೇಲ್ಪಂಕ್ತಿಯನ್ನನುಸರಿಸಿ, ಬಟ್ಟ ಗೆಜ್ಜೆಗಳನ್ನು ಕಟ್ಟಿಕೊಂಡು ತಪ್ಪು ತಪ್ಪು ಹೆಜ್ಜೆಗಳನ್ನು ಹಾಕಿಕೊಂಡು ಕುಣಿಯುತ್ತಿರುವ, ಈ ಸಂಸ್ಥಾನದ ಬ್ರಾಹ್ಮಣೇತರ ಮುಖಂಡರಿಗೂ, "ಅಜ್ಜನೆಟ್ಟ ಆಲದಮರದ" ತತ್ವದಾಸರಾಗಿ ಪ್ರಗತಿ ಸೂಚಕ ಸ್ಥಳಗಳಲ್ಲಿ ಅಭಿಮಾನವನ್ನಿಡದಿರುವ ಬ್ರಾಹ್ಮಣ ಮುಖಂಡರಿಗೂ, ಒಂದು ಉನ್ನತವಾದ ಮತ್ತೂ ಉತ್ತಮವಾದ ರಾಷ್ಟ್ರೀಯ ಗುರಿಯನ್ನು ಕಲ್ಪಿಸಿಕೊಟ್ಟು, ಅವರು ಒಣಜಾತಿ ನೀತಿ ಗಳ ವ್ಯರ್ಥ ಧಡಗೊಂದಲವನ್ನು ಬದಿಗೊತ್ತಿ ಪವಿತ್ರವಾದ ರಾಷ್ಟ್ರ ಸೇವಾಕಾರ್ಯದಲ್ಲಿ ಮಗ್ನರಾಗುವಂತೆ ಮಾಡಲು ಈ ಸಂಸ್ಥೆಯು ವಿಶೇಷ ಪ್ರಯೋಜನಕಾರಿಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಪ್ರಜಾರಂಜಕರಾದ ಪ್ರಭುಗಳನ್ನೂ, ಪ್ರಜಾಪ್ರಭು ಸೇವಾ ಪಾರಾಯಣರಾದ ಪ್ರಧಾನರನ್ನೂ ಪಡೆದಿರುವ ಮೈಸೂರಿನ ಈ ಸಂಸ್ಥೆಯ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿಸಿಗಳಿಗೆ ತರಲು ಪ್ರಯುಕ್ತ ಪಟ್ಟರೆ, 'ಮಾದರಿ ಸಂಸ್ಥಾನ' ವಾಗುವುದರಲ್ಲಿ ಸಂದೇಹ ವಿಲ್ಲ. ಶ್ರೀ ಜೋಯಿಸರವರ ಲೇಖನದ ಪ್ರೇರಣೆಗೆ ಸಂಸ್ಥೆಯ 'ಪ್ರಗತಿ ಸಾಧನ'ಯ ಕಡೆಗೆ ದೃಷ್ಟಿಯಿಟ್ಟಿರುವುದೇ ವಿನಾ "ರಾಜಕೀಯ' ವಿಷಯಗಳ ಕಡೆಗಲ್ಲವೆಂದುದರಿಂದ ಪ್ರಭುಸ್ಥಾನದವರು ಸಹಾನು ಭೂತಿಯನ್ನು ತೋರಿಸುವುದು ಯುಕ್ತವಾಗಿ ತೋರುತ್ತದೆ. "ಅಖಿಲ ಭಾರತ ರಾಷ್ಟ್ರೀಯ ಮಹಾಸಭೆ"ಗೆ ಪರಿಸ್ಥಿತಿಯಲ್ಲಿ ಸಾಮ್ಯವಿರತಕ್ಕ ಹಿರಿಯದಾದ 'ಪ್ರಜಾ ಪ್ರತಿನಿಧಿ ಸಭೆ' ಯೊಂದು ಮೈಸೂರಿನಲ್ಲಿ ದ್ದರೂ ಅದರಿಂದ ಹೆಚ್ಚಿಗೆ ಕೆಲಸಗಳನ್ನಪೇಕ್ಷಿಸಲು ಸಾಧ್ಯವಿಲ್ಲ. ಕಳೆದಧಿವೇಶನದಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ನೋಡಿದವರಿಗೆ ಕೋಮುವ್ಯಾಧಿಯನ್ನು ಹರಡುವ ಈ ರೋಗಬೀಜವು ಮೈಸೂರಿನ ಲ್ಲಿಲ್ಲದಿದ್ದರೇ ಚನ್ನಾಗಿರುತ್ತಿತ್ತಲ್ಲಾ' ಎಂದೆನಿಸುತ್ತಿತ್ತು. ದೇಶಾ ಭ್ಯುದಯವನ್ನೇ ಪಕ್ಷ, ಕೋಮು, ಸ್ವಾರ್ಥಗಳೆಲ್ಲಕ್ಕಿಂತ ಹೆಚ್ಚಿನ ದಾಗಿ ಭಾವಿಸುವ ಮೈಸೂರಿನವರಿಗೆ ಪ್ರಜಾಪ್ರತಿನಿಧಿ ಸಭೆಯಲ್ಲಿ ನಂಬಿಕೆಯಾಗಲೀ ಮರ್ಯಾದೆಯಾಗಲೀ ಇಲ್ಲವೆಂದರೆ ಸಟೆಯಾಡಿ ದಂತಾಗುವುದಿಲ್ಲ. ರಜತ ಮಹೋತ್ಸವದ ಹಬ್ಬದ ದಿನಗಳಲ್ಲಿ ಶ್ರೀ ಜೋಯಿಸರವರ ಸಭೆಯು ಪ್ರಜಾ ಪ್ರಮುಖರ ಗಮನಕ್ಕೆ ಒಂದು ಅಪರೂಪ ಕಾರ್ಯಕ್ಷೇತ್ರವನ್ನಾಗಿ ಮಾಡುವುದೆಂದು ನಾವು ನಂಬಿರು ತ್ತೇವೆ. ಸಭೆಯು ಡಿಸೆಂಬರ್ ತಿಂಗಳಲ್ಲಿ ಸೇರಬೇಕೆಂದು ನಿಶ್ಚಯ ವಾಗಿದೆ. ಅಧ್ಯಕ್ಷರ ಯೋಜನೆಯಿನ್ನೂ ಆಗಿಲ್ಲ. ಉನ್ನತ ದರ್ಜೆ ಗಳನ್ನಿಟ್ಟುಕೊಂಡು ಈಗ ತಾನೇ ನ್ಯಾಯ ವಿಧಾಯಕ ಸಭಾಸ್ಥರ ಮೂಲಕ ರಾಜಕೀಯ ರಂಗಕ್ಕಿಳಿದಿರುವ, ಹಿರಿಯರಿಗೆ ಕಿರಿಯರೂ, ಕಿರಿಯರಿಗೆ ಹಿರಿಯರೂ, ಸುಪ್ರಸಿದ್ಧ ಬರಹಗಾರರೂ, ಆಶ್ರಿತ ಸಂಸ್ಥಾನಗಳ ಸಮಸ್ಯೆಯ ಬಗ್ಗೆ ಪೂರ್ಣ ಪರಿಜ್ಞಾನವುಳ್ಳವರೂ ಆದ ಶ್ರೀಯುತ ಡಿ. ವಿ. ಗುಂಡಪ್ಪನವರು ಅಧ್ಯಕ್ಷರಾಗುವಂತೆ ಕಾರ್ಯದರ್ಶಿಗಳು ಕೋರಬೇಕಾಗಿ ನಮ್ಮ ಸೂಚನೆ. ಈ ಸಂಸ್ಥೆಯ ಬೆಳವಳಿಗೆಯನ್ನು ಬ್ರಿಟಿಷ್ ಕನ್ನಡಿಗರು ತೆರದಾಲಿಗಳಿಂದ ಕಾದು ಮಧ್ಯೆಮಧ್ಯೆ ಒದಗುವಂಥಾದ ಅರಿಷ್ಟಗಳನ್ನು ನಿವಾರಿಸಲು ಉತ್ಸಾಹ ಪೂರಿತರಾದ ಕಾರ್ಯದರ್ಶಿಗಳಿಗೆ ತಮ್ಮ ಸಹಾಯಕ ಹಸ್ತವನ್ನು ನೀಡುವರೆಂದು ನಿರೀಕ್ಷಿಸುತ್ತೇವೆ.

ಪ್ರಾಥಮಿಕ ಶಾಲಾ ಶಿಕ್ಷಕರ ಕೈವಾರಿಗಳೆಂದು ಬೊಂಬಾಯಿ ರಾಜ್ಯದವರು ಹೆಸರಾಗಿದ್ದಾರೆ. ಆ ಪ್ರಕಾರ ಅವರು ತಮ್ಮ ಕೃತಿ ಯಿಂದ ತೋರಿಸುತ್ತಲೂ ಇದ್ದಾರೆ. ಹೀಗಿದ್ದರೂ ಖರ್ಚಿನ ಭಾ ರವನ್ನು ಕಡಿಮೆ ಮಾಡಬೇಕಾಗಿ, ಸರಕಾರಕ್ಕೆ ಈಗ್ಗೆ ಸೂಚಿಸಿದ್ದು ಎಲ್ಲರಲ್ಲಿಯೂ ಖೇದವನ್ನುಂಟು ಮಾಡಿದೆ. ಟ್ರೇನಿಂಗ ಕಾಲೇಜ ಯನ್ನು ಬಂದು ಮಾಡಬಾರದೇ ದು ವಿಧಾನಿಸುವಾಗ್ಯೆ, ಅದನ್ನಿಡಲು ಹೆಚ್ಚಾಗಿ ವೆಚ್ಚ ತಗಲುತ್ತಿದ್ದರೆ, ಪ್ರಾಥಮಿಕ ಶಾಲಾ ಶಿಕ್ಷಕರ ಪಗಾರವನ್ನು ಕಡಿಮೆ ಮಾಡಿ, ಕಾಲೇಜಿಗೆ ಜೀವಕಳೆ ತುಂಬಿರೆಂದು ರೊದ್ದರು ಸರಕಾರಕ್ಕೆ ಸೂಚಿಸಿದ್ದು, ಕೈಯಲ್ಲಿಯ ಒಂದು ಬೆರಳು ಕೊಳೆಯುತ್ತದೆಂದು, ಅದರ ಸಮೀಪದಲ್ಲಿಯ ಮತ್ತೊಂದು ಬೆರಳ ನ್ನು ಕಿತ್ತಿ, ಅಲ್ಲಿ ಕೂಡಿಸಿರೆಂದಂತೆಯೇ ಹಾಸ್ಯಾಸ್ಪದವಾಗಿದೆ. ಟ್ರೇನಿಂ

ಗ ಕಾಲೇಜಿಯು ಜರುಗಬೇಕೆಂದು ದಿವಾಣ ಬಹದ್ದೂರರು ಪ್ರಯತ್ನಿಸಿದ್ದು ಎಷ್ಟು ಪುಣ್ಯದಾಯಕವೋ, ಅಷ್ಟೇ ರೀತಿಯಿಂದ, ಶಿಕ್ಷಕರ ಪಗಾರವು ಕಡಿಮೆಯಾಗಬೇಕೆಂದು ಸಾಧಿಸಿದ್ದು ಪಾಪಕರವಾಗಿದೆ. ಬಡ ಶಿಕ್ಷಕರನ್ನು ಯಾರೂ ಕೇಳುವಂತಿಲ್ಲ! ಇಷ್ಟು ದಿನಗಳ ವರೆಗೆ ಸ್ವಲ್ಪೇ ವೇತನದಿಂದ ಜೀವಿಸುತ್ತ, ನೊಂದು, ಬೆಂದು, ಕಡೆಗೆ ಬೇಸತ್ತು, ತಮ್ಮ ಆರ್ತಸ್ವರವು ಎಲ್ಲರ ಕಿವಿಗೂ ಕೇಳುವಂತೆ ಹಳವಳ ಮಾಡಿದ್ದರಿಂದ, ಈಗ್ಗೆ ಏನೋ ಸ್ವಲ್ಪು ಅವರಿಗೆ ಸೌಕರ್ಯಗಳು ಕೊಡಲ್ಪಟ್ಟಿವೆ. ಆದರೂ ಕಾಯಂವಾದ ಯೋಜನೆಯು ಇನ್ನೂ ಸರಕಾರದ ವಿಚಾರಣೆಯ ಕೋಣೆಯಲ್ಲಿಯೇ ಕೊಳೆಯುತ್ತಲಿದೆ. ಇಂತಹ ಪ್ರಸಂಗದಲ್ಲಿ, ಬಡ ಶಿಕ್ಷಕರ ಮೇಲೆ ಕೊಡಲಿಯನ್ನು ಹಾಕುವ ದುರ್ಬುದ್ಧಿಯು ದಿವಾಣ ಬಹದ್ದೂರ ರೊದ್ದರಾಯರಲ್ಲಿ ಉದ್ಭವವಾದುದನ್ನು ನಾವು ನಿಷೇಧಿಸದೇಯಿರೆವು.

'ಕನ್ನಡಿಗ'ನಿಗೆ ಸಹಾಯ

ಕೆಳಗೆ ಕಾಣಿಸಿದ ಕರ್ನಾಟಕದ ಅಭಿಮಾನಶಾಲಿಗಳು 'ಕನ್ನಡಿಗ'ನ ಮೇಲಿನ ಮಮತೆಯಿಂದ ತಮ್ಮ ವರ್ಗದ ಪೋಷಕ ಹಣವನ್ನು ಪ್ರತಿವರ್ಷದಂತೆ ಈ ವರ್ಷದಲ್ಲಿ ಸಲ್ಲಿಸಿದ್ದಾರೆ. ಇದಕ್ಕಾಗಿ ನಾವು ಅವರಿಗೆ ತುಂಬಾ ಋಣಿಯಾಗಿರುವೆವು. 'ಕನ್ನಡಿಗ'ನು ಇದೇ ಬಗೆಯಾಗಿ ಇತರ ಕರ್ನಾಟಕಾಭಿಮಾನಿಗಳ ಪ್ರೇಮಕ್ಕೆ ಪಾತ್ರನಾಗುವನಾಗಿ ಕೋರುತ್ತೇವೆ:—

(೧) ಬೆಳಕೂರ ನಾರಾಯಣರಾಯರು ಬಿ ಎ ಎಲ್. ಬಿ. ಸೆಸ್ಸ್ ಬಜಾರು ಬೆಳಗಾವು

(೨) ಬಹಗಿರ್ದಾರ ರಂಗಾಚಾರ್ಯರು ಎಮ್. ಎ. ಎಲ್. ಎಲ್. ಬಿ. ಹೈಕೋರ್ಟ ವಕೀಲರು ಮುಂಬೈ

(೩) ರ್‍ಯಾಂಗಲರ ಪಾಂಡುರಂಗ ಶ್ರೀನಿವಾಸರಾವ ಕಟ್ಟಿ ಎಮ್. ಎ. ಪ್ರೊಫೆಸರರು ಎಲ್ಫಿನ್‌ಸ್ಟನ್ ಕಾಲೇಜ ಮುಂಬೈ.

(೪) ದೇಶಪಾಂಡೆ ರುಕ್ಮಾಂಗದರಾಯರು ಎಮ್. ಎ. ಇನ್‌ಕಮ್-ಟ್ಯಾಕ್ಸ್-ಆಫೀಸರರು, ಮುಂಬೈ

(೫) ಫ. ನೀಲಕಟ್ಟಿ ನಾಗಾಭಟ್ಟರು, ತೀರ್ಥಹಳ್ಳಿ,

(೬) ರಾಮದುರ್ಗ ಪುರುಷೋತ್ತಮಾಚಾರ್ಯರು ವಕೀಲರು. ಹಾವೇರಿ.

(೭) ಹಳ್ಳಿಪ್ಪನವರ ಲಕ್ಷ್ಮಣರಾಯರು ಕಲಘಟಗಿ

(೮) ನಟಕಲ್ಲಪ್ಪ ದಾಮೋದಾಚಾ ಬಾಗಲಕೋಟೆ.

ಕನ್ನಡ ಶಿಲಾಲಿಪಿಗಳೂ ದಿಲ್ಲಿಯ ದೊಡ್ಡ ಕಾಯದೇ ಮಂಡಳವೂ.

ಶ್ರೀ ಜೋಶಿಯವರು ಕೇಳಿದ ಪ್ರಶ್ನೆಗಳಿಗೆ ಸರಕಾರದಿಂದ ಕೊಡಲ್ಪಟ್ಟ ಉತ್ತರಗಳಿಂದ ಸಂಗ್ರಹಿಸಿದ್ದು:- (೧) ಡಾ. ಫ್ಲೀಟ ಸರ್ವಾತ್ ೧,೮೮೫ ಶಿಲಾಲೇಖಗಳು ಸಂಗ್ರಹಿಸಲ್ಪಟ್ಟಿದ್ದು, ಅವುಗಳಲ್ಲಿ ೩-೪ ಭಾಗವು ಓದಲ್ಪಟ್ಟಿವೆ. ಈಗ್ಗೆ ೧,೭೭೫ ಶಿಲಾಲೇಖಗಳು ಪ್ರಕಟಿಸಲಾಗದೇ, ಸರಕಾರದ ಶಿಲಾಶಾಸನ ಕಚೇರಿಯಲ್ಲಿವೆ. ಇವನ್ನು "ಸಾವುತ್ ಇಂಡಿಯನ್ ಇನ್‌ಸ್ಕ್ರಿಪ್ಶನ್ಸ್", "ಪೆಶೀಸ್ಸ ಸಿರೀಜ" ಅಥವಾ "ಎಪಿಗ್ರಾಫಿಕಾ ಇಂಡಿಕಾ" ಗಳಲ್ಲಿ ಪ್ರಕಟಿಸುತ್ತಲಿರುವೆವು. ಮಹತ್ವವಿದ್ದರೆ ಮಾತ್ರ ಶಿಲಾಶಾಸನಗಳು ನಮ್ಮಿಂದ ಪ್ರಕಟಿಸಲ್ಪಡುವವು. ಬ್ರಿಟಿಶ ಕರ್ನಾಟಕದಲ್ಲಿ ಇನ್ನೂ ೫ ಸಾವಿರ ಶಿಲಾಲೇಖಗಳು ಸಂಗ್ರಹಿಸಲ್ಪಡದೇ ಇರಬಹುದು. ಹೀಗಿದ್ದರೆ ಈಗ್ಗೆ ನಡೆದ ಸಾವಕಾಶವಾದ ಕ್ರಮದಿಂದ ಎಲ್ಲ ಶಿಲಾಲೇಖಗಳನ್ನು ಸಂಗ್ರಹಿಸಲು ೬೦ ವರ್ಷ ಬೇಕಾಗುವದೆಂದು ಬಾಗಲಕೋಟೆಯ 'ಕನ್ನಡಿಗ' ಪತ್ರಿಕೆಯಲ್ಲಿ ಪ್ರಕಟವಾದ ಲೇಖಾಂಕಗಳನ್ನು ಸರಕಾರವು ನೋಡಿಲ್ಲ. ಸಂಗ್ರಹದ ಕಾರ್ಯವು ಭರದಿಂದ ಸಾಗುವದಕ್ಕೆಂದೇ, ಮದ್ರಾಸಿನ ಕಚೇರಿಯಲ್ಲಿ ಒರ್ವ "ಗ್ಯಾಝೆಟೆಡ್" ಅಧಿಕಾರಿಯಿದ್ದಾನೆ. ಅವನಿಗೆ ೫ ಜನ ಸಹಾಯಕರೂ ಇದ್ದಾರೆ. ಕರ್ನಾಟಕವನ್ನೊಳಗೊಂಡ ಮದ್ರಾಸ ಇಲಾಖೆಯ ಎಲ್ಲ ಶಾಸನಗಳನ್ನು ಸಂಗ್ರಹಿಸಿ ಪ್ರಕಟಿಸುವ ಕೆಲಸವು ಅವನದಿರುತ್ತದೆ.

(೨) ಧಾರವಾಡದ ಕರ್ನಾಟಕ ಇತಿಹಾಸ ಮಂಡಲದಿಂದ ಒಂದು ಬಿನ್ನಹ ಪತ್ರವು ಬಂದಿದ್ದು ಕರ್ನಾಟಕಕ್ಕೆ ಪ್ರತ್ಯೇಕವಾದ ಶಿಲಾಶಾಸನ ಇಲಾಖೆಯು ಬೇಕೆಂದು ಅವರು ಬೇಡಿದ್ದು ನಿಜವಿದೆ. ಆ ಬಗ್ಗೆ ಸರಕಾರವು ಯೋಗ್ಯ ವಿಚಾರ ಮಾಡುತ್ತಲಿದೆ.

(೩) ಶಾಸನ ಖಾತೆಯ ಮುಖ್ಯಸ್ಥನು ಕೆಳಗೆ ಕಾಣಿಸಿದಂತೆ ಯೋಗ್ಯತೆಯನ್ನು ಹೊಂದಿದವನಿರಬೇಕು:— ಪದವೀಧರನಿರಬೇಕು; ಶಿಲಾಶಾಸನದ ವಿಶೇಷ ಜ್ಞಾನದವನಿರಬೇಕು; ಭಾಷೆಯ ಇತಿಹಾಸ, ಜನಾಂಗದ ಇತಿಹಾಸ, ಸಂಸ್ಕೃತ ಹಾಗೂ ಪಾಲೀಗಳನ್ನರಿತವನಾಗಿರಬೇಕು. ಈಗಿದ್ದ ಮುಖ್ಯಾಧಿಕಾರಿಯ ಹೆಸರು ಹಿರಾನಂದ ಶಾಸ್ತ್ರಿ. ಇವರು ಎಂ ಎ. ಇದ್ದಾರೆ. ಪಗಾರ ೮೦೦ ರೂ. ಹಾಗೂ ೧೦೦ ರೂ. ಭತ್ತೆ. ಶಾಸನಗಳನ್ನೋದುವದು, ಹೊಂದಿಸುವದು, ಸಂಪಾದಕತ್ವದ ಕಾರ್ಯ ಮಾಡುವದು ಹಾಗೂ ಮೇಲ್ವಿಚಾರಣೆ ಮಾಡುವದು ಇವೇ ಅವರ ಕೆಲಸ. ಮದರಾಸಿನ ಶಾಸನಗಳ ಸಂಬಂಧವು ಅವರಿಗಿಲ್ಲ. ಬ್ರಿಟಿಶ ಹಾಗೂ ಹಿಂದೂಸ್ಥಾನಗಳಲ್ಲಿಯ ಎಲ್ಲ ಶಿಲಾಶಾಸನ ಕಾರ್ಯವನ್ನು ಅವರೇ ನೋಡುವರು. ಹಿರಾನಂದರು ೨೩ ವರ್ಷ ಕೆಲಸ ಮಾಡಿದ್ದಾರೆ. ಅವರಿಗೆ ದ್ರಾವಿಡ ಭಾಷೆಗಳ ಜ್ಞಾನವಿಲ್ಲ. ಅವರು "ಎಪಿಗ್ರಾಫಿಕಾ ಇಂಡಿಕಾ"ದ ಸಂಪಾದಕರು ಇವರೇ ಇದ್ದಾರೆ. ಈ ಮಾಸಪತ್ರಿಕೆಯಲ್ಲಿ, ದಕ್ಷಿಣ ಹಿಂದೂಸ್ಥಾನದಲ್ಲಿ ವಿಪುಲವಾಗಿರುವ ದ್ರಾವಿಡ ಭಾಷೆಗಳ ಶಿಲಾಲೇಖಗಳೇ ಪ್ರಕಟವಾಗುವದು ನಿಜ.

ಪ್ರಸನ್ನವೆಂಕಟರ ಪುಣ್ಯತಿಥಿ.

ಅಪರೋಕ್ಷಜ್ಞಾನಿಗಳೂ, ದಾಸಶ್ರೇಷ್ಠರೂ ಆದ ಪ್ರಸನ್ನವೆಂಕಟರ ಪುಣ್ಯತಿಥಿಯು ಮೊನ್ನಿನ ದ್ವಾದಶಿಯ ದಿನ ಬಾಗಲಕೋಟೆಯಲ್ಲಿ ವಿಜೃಂಭಣೆಯಿಂದ ಪಾಲಿಸಲ್ಪಟ್ಟಿತು. ಮುಂಜಾನೆ ಪೂಜೆ ಪುನಸ್ಕಾರಾದಿಗಳನ್ನು ತೀರಿಸಿ, ನೂರಾರು ಜನ ಬ್ರಾಹ್ಮಣರಿಗೆ, ಅವರ ವಂಶಜರಾದ ವೇ. ರಾ|| ರಾ|| ಕಾಖಂಡಕಿ ಅಣ್ಣಾಚಾರ್ಯರು ಮೃಷ್ಟಾನ್ನ ಭೋಜನ, ದಕ್ಷಿಣೆಗಳನ್ನರ್ಪಿಸಿ ಸಂತೃಪ್ತಗೊಳಿಸಿದರು. ಸಾಯಂಕಾಲದಲ್ಲಿ ವೇ| ರಾ|| ರಾ|| ಮುಗಳೀ ವೆಂಕಣ್ಣಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದಿತು. ಶ್ರೀ ಕಬ್ಬಿ ಬಳವಂತರಾವ, ಜೇರಾಪುರ ಗುರುರಾವ ಹಾಗೂ ಪಂಢರೀ ಶೇಷಾಚಾರ್ಯರ ಭಾಷಣಗಳಾದವು. ಪ್ರಸನ್ನ ವೆಂಕಟರಾಯರ ಕೀರ್ತನಗಳನ್ನೊಳಗೊಂಡು ಒಂದು ಪುಸ್ತಕವನ್ನು ಪ್ರತಿವರ್ಷ ಮುದ್ರಿಸಿ ಪ್ರಕಟಿಸಲು, ಶ್ರೀ ಮಂಗಳವೇಡೆ ಶ್ರೀನಿವಾಸರಾಯರು ಒಪ್ಪಿದರು. ಇದೇ ಮೊದಲನೇ ಸಲವಾಗಿದ್ದರೂ, ಊರಲ್ಲಿಯ ವೈಷ್ಣವ ಮಂಡಳಿಗಳು, ದಾಸರಲ್ಲಿಯ ತಮ್ಮ ಭಕ್ತಿ ವಿಶ್ವಾಸಗಳನ್ನು ಸೂಸಿ ಸಭೆಗೆ ಬಂದಿದ್ದು ಆನಂದದ ಸಂಗತಿಯು. ಮುಂದಿನ ವರ್ಷದಿಂದ ಈ ಉತ್ಸವವನ್ನು ಹೆಚ್ಚು ಚೊಕ್ಕಟವಾಗಿಯೂ, ವಿಶಾಲವಾಗಿಯೂ ಜರುಗಿಸಬೇಕೆಂದು ಗೊತ್ತಾಗಿದೆ. (ಮುಂಚಿ ನಡೆವದು.)

ವೈ. ಕೆರೂರ ವಾಸುದೇವಾಚಾ-
-ರ್ಯರೂ ಕ್ರಮಿಕ ಪುಸ್ತಕಗಳೂ.

ಕನ್ನಡ ಐದನೇ ಪುಸ್ತಕವು.

(ಲೇಖಾಂಕ—೨)

ಪಾಠ ೧೬ ದುಂದುಗಾರಿಕೆ!!!

ನಾವು ಕೆಲವರು ಹೊಗೆಬಂಡಿಯಲ್ಲಿ ಕುಳಿತು ಪ್ರವಾಸ ಮಾಡುತ್ತಿರುವಾಗ ನಮ್ಮ ಸ್ನೇಹಿತರೊಬ್ಬರು ಕನ್ನಡ "ಐದನೇ" ಪುಸ್ತಕವನ್ನು ತೆಗೆದು ಓದ ಓದುತ್ತ "ಆದಾಯಕ್ಕಿಂತಲೂ ಕಡಿಮೆ ವೆಚ್ಚ ಮಾಡುವದು ಮಿತವ್ಯಯವೆನಿಸುತ್ತದೆ." ಎಂದೀ ಪುಸ್ತಕದಲ್ಲಿ ಬರೆದದೆ. ಇದು ಯಥಾರ್ಥವಾದ ಮಾತೋ? ಎಂದು ಪ್ರಶ್ನೆ ಮಾಡಿದರು.

"ಎಂತೆಂತು!" ಎಂದು ಉದ್ಗಾರ ತೆಗೆದು ಅಲ್ಲಿಯೇ ಕುಳಿತಿದ್ದ ಬಾಳ್ಯಜಸವಂತಶೆಟ್ಟಿಯು ಅಂದದ್ದು "ಹಾಗಾದರೆ ನಾನು ತಿಂಗಳಾ ನೂರು ರೂಪಾಯಿ ಗಳಿಸುತ್ತೇನೆ. ಸಂಸಾರಕ್ಕೆ ದಿನಾಲು ಒಂದು ರೂಪಾಯಿದಂತೆ ಇಡುವದಲ್ಲದೆ ಮೇಲೆ ಕಾದಿಟ್ಟ ಗಂಟೆಂದು ದಿನಾಲು ಅರ್ಧ ರೂಪಾಯಿ ಇಡುತ್ತೇನೆ. ಉಳಿದ ಐವತ್ತೈದು ರೂಪಾಯಿಗಳನ್ನು ನಾನು ವ್ಯಸನದಲ್ಲಿ ಚೆಲ್ಲು ಮಾಡಿಬಿಡುತ್ತೇನೆ. ಇದು ಮಿತವ್ಯಯವಾದೀತೋ? ಎಂದು ನುಡಿದು "ಯಾಕೆ ಮಾಸ್ತರರೇ, ಮಾತಾಡಕೊಲ್ಲರಿ?" ಎಂದು ನುಡಿದು ಅಲ್ಲಿ ಕುಳಿತ ಓರ್ವ ಮಾಸ್ತರನನ್ನು ಕುರಿತು ಪ್ರಶ್ನೆ ಮಾಡಿದನು

ಅದಕ್ಕೆ ಮಾಸ್ತರರು "ಮಿತವ್ಯಯ, ಮಿತಾಹಾರ, ಮಿತಭಾಷಣ ಇವುಗಳಿಂದ ಬಹಳ ಸುಖವುಂಟೆಂದು ಇದೇ ಪಾಠದ ಕಡೆಯಲ್ಲಿ ಬರೆದಿದೆ." ಎಂದು ಮುಗುಳು ನಗೆ ನಗುತ್ತ ಮಾಸ್ತರರು ಉತ್ತರವನ್ನಿತ್ತರು.

ನಮ್ಮ ಸ್ನೇಹಿತರು ಮಾಸ್ತರ ಒಳಿಯಲ್ಲಿ ಹೋಗಿ ಕುಳಿತು ಮಾಸ್ತರರೇ, ಈ ಪಾಠದಲ್ಲಿ, ಮೊಟ್ಟಮೊದಲು ದುಂದುಗಾರಿಕೆಗೆ ಎರಡು ಅಂಗಗಳನ್ನು ತೋರಿಸಿದ್ದಾರೆ. (೧) ಅವಶ್ಯವಲ್ಲದ ವಿಷಯಿ ರಾಮದ (ಅಂದರೆ ಸುಖೋಪಭೋಗದ) ವಸ್ತುಗಳನ್ನು ಕೊಳ್ಳುವದಕ್ಕೆ ಹಣ ವೆಚ್ಚ ಮಾಡುವದು; (೨) ಅವಿಚಾರದಿಂದ ತನ್ನ ಅಭಿಲಾಷೆಗಳನ್ನು ತೀರಿಸಿಕೊಳ್ಳುವದಕ್ಕಾಗಿ ಬಿದ್ದಷ್ಟು ಬೆಲೆ ಕೊಟ್ಟು ಯಾವದಾದರೊಂದು ಅಪರೂಪದ ಒಡವೆಯನ್ನು ಕೊಂಡುಕೊಳ್ಳುವದು ಮಾಸ್ತರರೇ, ಈ ಭೇದಗಳನ್ನು ನೀವು ಚನ್ನಾಗಿ ಮನನ ಮಾಡಿಕೊಂಡಿರೋ?" ಎಂದು ಕೇಳಿದರು.

ಮಾಸ್ತರರು ನಕ್ಕು ಮನನವಾಗದೇನು! ನಾನು ಮೂರನೆಯ ವರುಷದ ಟ್ರೇಂಡನಿದ್ದೇನೆ. ನನಗೆ ೪೦ ರೂಪಾಯಿ ಸಂಬಳವುಂಟು" ಎಂದು ಹೇಳಿದರು.

"ಒಬ್ಬೇದು ದಿನಾಲು ಒಂದು ರೂಪಾಯಿ ಗಳಿಸುವಂಥವನ ಮನೆಯಲ್ಲಿ ನಾಲ್ಕು ಜನರು ಉಣ್ಣುವವರಿದ್ದಾರೆ. ಅಂಥವನು ಆರವತ್ತು ರೂಪಾಯಿ ಕೊಟ್ಟು ಒಂದು ಅಂದವಾದ ಕನ್ನಡಿಯ ಕಪಾಟನ್ನೂ ಆ ಕಪಾಟಿನಲ್ಲಿ ಇಡಲು ಒಪ್ಪುವಂಥ ನೂರು ರೂಪಾಯಿಯ ಗೋಕಾವಿಯ ಗೊಂಬೆಗಳನ್ನೂ ಕೊಳ್ಳುತ್ತಾನೆ. ಇದು ಯಾವ ಪ್ರಕಾರದ ದುಂದುಗಾರಿಕೆ ಹೇಳಿರಿ! ಪುಸ್ತಕವನ್ನು ಮಾತ್ರ ನಿಮಗೆ ನಾನು ತೋರಿಸುವದಿಲ್ಲ!"

ಮಾಸ್ತರರು ತುಸು ವಿಚಾರದಲ್ಲಿ ಮುಳುಗಿದಂತೆ ಮಾಡಿ "ಅಪರೂಪವಾದ ಒಡವೆಗಳನ್ನು ಕೊಂಡುಕೊಂಡಿದ್ದಾನೆ. ಇದರಲ್ಲಿ ವಿಷಯಾರಾಮವೇನೂ ಇಲ್ಲ. ಅರ್ಥಾತ್ ಇದು ಎರಡನೆಯ ಪ್ರಕಾರದ ದುಂದುಗಾರಿಕೆಯಾಗುವದು!" ಎಂದು ನಿಶ್ಚಿತವಾಗಿ ಹೇಳಿದರು

ನಮ್ಮ ಸ್ನೇಹಿತರು ಪುಸ್ತಕವನ್ನು ತೆರೆದು ಮಾಸ್ತರರ ಮುಂಪಕ್ಕೆ ಹಿಡಿದು "ನೋಡಿರಿ! ಇದು ಮೊದಲನೆಯ ಪ್ರಕಾರದ ದುಂದುಗಾರಿಕೆಯೆಂದು ಇದರಲ್ಲಿ ಬರೆದದೆ" ಎಂದು ಆಧ್ವತೆಯಿಂದ ನುಡಿದರು.

ಮಾಸ್ತರರು ಚಕಿತರಾಗಿ "ಇದು ತಪ್ಪಾಗಿರಬೇಕು" ಎಂದು ಮೆಲ್ಲನೆ ಹೇಳಿದರು

ಮಾಸ್ತರರೆ, 'ವಿಷಯಾರಾಮ' ಎಂಬ ಅನ್ಯದೇಶೀಯವಾದ ಶಬ್ದಯೋಜನೆಯ ಅಪಾಯಕ್ಕಾಗಿ ಇಂಥ ವಿಪರ್ಯಾಸವಾಗಿರಬಹುದೇನು?"

"ಇಂಥ ಪ್ರಶ್ನೆಗಳ ಉತ್ತರವನ್ನು ಕೊಡುವದು ನಮ್ಮಂಥವರ ಅಧಿಕಾರವಲ್ಲ! ಸುಮ್ಮನೆ ಕಾಡಬೇಡಿರಿ!" ಎಂದು ನುಡಿದು ಮಾಸ್ತರರವರು ಕೊಂಚ ಸರಕೊಂಡು ಕುಳಿತರು.

"ಮಾಸ್ತರರೆ, ದಯಮಾಡಿ ಇನ್ನೊಂದು ಪ್ರಶ್ನೆಯನ್ನು ಕಿವಿಯ ಮೇಲೆ ಹಾಕಿಕೊಳ್ಳಿರಿ! "ಧಾರ್ಮಿಕರೆಂದೆನ್ನಿಸಿಕೊಳ್ಳುವ ಎಷ್ಟೋ ಜನರು ಧರ್ಮವೆಂದು ಹಣವನ್ನು ವೆಚ್ಚಮಾಡುತ್ತಾರೆ. ಇದಾದರೂ ಒಂದು ಪ್ರಕಾರದ ದುಂದುಗಾರಿಕೆ" ಎಂದು ಇಲ್ಲಿ ಬರೆದಿದೆ. ಔಷಧಾಲಯ, ಧರ್ಮಶಾಳೆ, ಅರವಟ್ಟಿಗೆ ಮುಂತಾದವುಗಳನ್ನು ಕಟ್ಟಿಸುವದು ದುಂದುಗಾರಿಕೆಯೇನು?"

ಅದಕ್ಕೆ ಮಾಸ್ತರರು ನಕ್ಕು "ಹಾಗಲ್ಲ! ಬಿಕ್ಕೆ ಬೇಡುವದು ತಮ್ಮ ಉದ್ಯೋಗವೆಂದು ತಿಳಿದು ಮನೆಮನೆ ತಿರುಗುವವರಿಗೆ ಸಹಾಯ ಮಾಡುವದು ಸರಿಯಲ್ಲವೆಂಬದೇ ಮೇಲಿನ ಅಭಿಪ್ರಾಯದ ಅರ್ಥವು."

"ಹಾಗಾದರೆ ಇಲ್ಲಿ ನೋಡಬನ್ನಿರಿ, ಮಾಸ್ತರರೆ. ಈ ಪ್ಯಾರಾದ ಕಡೆಯ ವಾಕ್ಯವನ್ನಾದರೂ ಓದಿರಿ! ಬಿಕ್ಕೆ ಬೇಡುವದು ನಮ್ಮ ಉದ್ಯೋಗವೆಂದು ತಿಳಿದು ಮನೆ ಮನೆ ತಿರುಗುವವರಿಗೆ ದ್ರವ್ಯವಸ್ತ್ರ ಮುಂತಾದವುಗಳನ್ನು ದಾನ ಮಾಡುವದು" ಬೇರೊಂದು ಪ್ರಕಾರದ ದುಂದುಗಾರಿಕೆಯೆಂದು ಬರೆದಿದೆ. ಇದಕ್ಕೇನನ್ನುವಿರಿ?"

"ಅನ್ನುವದಿಲ್ಲ! ಆಡುವದಿಲ್ಲ!! ನಮ್ಮ ಸ್ಟೇಶನ್ನು ಬಂದಿತು. ಇಳಿದು ಹೋಗುತ್ತೇನೆ" ಎಂದು ನುಡಿದವರೇ ಮಾಸ್ತರರು ಲಗಬಗೆಯಿಂದ ಇಳಿದು ನಡೆದರು. ಹೋಗುವಾಗ ಹೆಸರು ವಾಸಸ್ಥಳ ಮುಂತಾದದ್ದು ಕೇಳಿದರೆ ಹೇಳಲಿಲ್ಲ!

ಮುಂದೆ ನಾವು ಆ ಪಾಠವನ್ನು ಓದುವದನ್ನು ಹಾಗೆಯೇ ನಡಿಸಿದೆವು. ಪುಸ್ತಕದಲ್ಲಿ ಮತ್ತೆ ಕಂಡದ್ದೇನಂದರೆ—"ಆದರೆ ಇವನು (ಧಾರ್ಮಿಕನು) ಯಾರ ಮೇಲೆ ಉಪಕಾರ ಮಾಡಬೇಕೆಂದು ಬಯಸುತ್ತಾನೋ ಅವರಿಗೆ ಇವನಿಂದ ನಿಜವಾದ ಉಪಕೃತಿ ಏನಾದರೂ, ಆಗದೆ, ಅವರ ಮೂರ್ಖತನ, ಆಲಸ್ಯ, ಡಾಂಭಿಕತನ ಇವುಗಳಿಗೆ ಉತ್ತೇಜನ ದೊರೆತಂತೆ ಆಗುತ್ತದೆ."

ನಮ್ಮ ಧರ್ಮವನ್ನು ನಿಂದಿಸಿ ಪಾದ್ರಿಗಳು ಮಾಡುತ್ತಿರುವ ಉಪನ್ಯಾಸದ ಕ್ರಮವಿದು. ಬ್ರಾಹ್ಮಣ, ಜಂಗಮ ಫಕೀರ ಮುಂತಾದವರಿಗೆ ನಾವು ದಾನ ಕೊಡುತ್ತೇವೆ ಹಸಿದುಬಂದವರಿಗೂ ಚಳಿಯಿಂದ ನಡುಗುವ ವಸ್ತ್ರಹೀನರಿಗೂ ನಾವು ಏನಾದರೂ

ಕೊಡುತ್ತೇವೆ. ಕುರುಡ—ಕುಂಟ ಮುಂತಾದ ಅಂಗಹೀನರಿಗಾದರೂ ನಾವು ಕೂಳು-ಕಾಳುಗಳನ್ನು ನೀಡುತ್ತೇವೆ. ತಮ್ಮ ಉದ್ಯೋಗವನ್ನು ಮಾಡಿಕೊಂಡಿದ್ದರೂ ಅದರಿಂದ ಹೊಟ್ಟೆಗೆ ಸಾಲದಿದ್ದ ಜನರಾದರೂ ಇದ್ದಾರೆ; (ಇಂಥ ಜನರು ಇಂಗ್ಲಂಡದಲ್ಲಿಯೂ ಇದ್ದಾರೆ) ಇವರಿಗೆ ಏನಾದರೂ ಕೊಡಬೇಡವೆ? ಬ್ರಾಹ್ಮಣ, ಜಂಗಮ, ಫಕೀರರನ್ನುಳಿದು ಮೇಲ್ಕಂಡ ಎಲ್ಲ ಜನರಿಗೂ ನಾವು ದಾನ ಮಾಡಲಿಕ್ಕೇ ಬೇಕು. ಲಫಂಗರನ್ನಂತೂ ನಾವು ಹುಡುಕಿ ದಾನ ಕೊಡುವದಿಲ್ಲ. ಇನ್ನು ಮನೆಗೆ ಬಂದ ಬ್ರಾಹ್ಮಣ, ಜಂಗಮ, ಫಕೀರರನ್ನು ಕೂಡಿಮ ದೂಡಬಹುದೋ? ಇದೊಂದು ಬಹು ಮಹತ್ವದ ಸಾಮಾಜಿಕ ವಿಷಯವು. ಅದರ ಊಹಾಪೋಹವು ಸಮಾಜದಲ್ಲಿ ಅನೇಕಾವರ್ತಿಯಾಗಿ ಇಂಥ ಪ್ರಕಾರದ ದಾನಧರ್ಮಗಳನ್ನು ನಿಲ್ಲಿಸುವದು ಅಪ್ರಶಸ್ತವಾದದ್ದೆಂದು ಅನೇಕ ಸ್ಥಳಗಳಲ್ಲಿ ನಿರ್ಣಯವಾಗಿರಲು ಅದು ಸಿದ್ಧಾಂತವೆಂದು ಐದನೆಯ ಪುಸ್ತಕದಲ್ಲಿ ಧ್ವನಿತವಾಗಿ ಹೇಳುವದು ಅಶ್ಲಾಘ್ಯವಾದ ಮಾತು!

ಕರ್ನಾಟಕದ ರಾಷ್ಟ್ರೀಯ ಉತ್ಸವವೇ ನವರಾತ್ರಿಯು.

ಲೋ. ಟಿಳಕರು ಗಣೇಶೋತ್ಸವಕ್ಕೆ ರಾಷ್ಟ್ರೀಯತ್ವದ ಸ್ವರೂಪವನ್ನು ಕೊಟ್ಟು ಮಹಾರಾಷ್ಟ್ರದಲ್ಲಿ ರಾಷ್ಟ್ರಾಭಿಮಾನವನ್ನು ಹುಟ್ಟಿಸುವದಕ್ಕೆ ಯತ್ನಿಸಿದರು. ಕರ್ನಾಟಕದಲ್ಲಿಯೂ ನಮ್ಮ ಮುಂದಾಳುಗಳು ಅವರನ್ನು ಅನುಕರಿಸಿದರು. ಆದರೆ ನಮ್ಮ ಮುಂದಾಳುಗಳು ಇಲ್ಲಿಯ ಸಂಸ್ಕೃತಿಯ ಕಡೆಗೂ ನಡೆನುಡಿಗಳ ಕಡೆಗೂ ಜನರಾಡುವ ಭಾಷೆಯ ಕಡೆಗೂ ಲಕ್ಷ್ಯಗೊಡದಿಲ್ಲವಾದುದರಿಂದ ಇಲ್ಲಿ ಆ ಉತ್ಸವವು ಬೇರೂರಲು ಶಕ್ಯವಾಗಲಿಲ್ಲ. ಗಣೇಶೋತ್ಸವವು ಮಹಾರಾಷ್ಟ್ರದಲ್ಲಿ ನೆಲೆಗೊಳ್ಳಲು ಮಹಾರಾಷ್ಟ್ರದಲ್ಲಿಯ ಬಹು ಜನರು ಗಣಪತ್ಯರಾಗಿದ್ದುದೇ ಕಾರಣ. ಕರ್ನಾಟಕದ ದೈವತವು ಶಕ್ತಿ. ಸಾರ್ವಭೌಮರಾದ ಚಾಲುಕ್ಯರ ಕುಲದೈವತವು ಬನಶಂಕರಿ. ಪಟ್ಟದ ಕುಲದೇವತೆಯು ಎಲ್ಲಮ್ಮ. ವಿಜಯನಗರದ ಕುಲದೈವತವು ಭುವನೇಶ್ವರಿ. ಸದ್ಯಕ್ಕೆ ಕರ್ನಾಟಕ ಸಿಂಹಾಸನಾಧೀಶ್ವರರಾದ ಶ್ರೀಮನ್ ಮೈಸೂರ ಮಹಾರಾಜರ ಕುಲದೈವತವು ಚಾಮುಂಡೇಶ್ವರಿ. ಶ್ರೀ ಶಂಕರಾಚಾರ್ಯರ ಧರ್ಮಪೀಠದಲ್ಲಿಯೂ ಶಕ್ತಿಗೆ ಸ್ಥಾನವಿದೆ. ಲಿಂಗವಂತರ ತತ್ವಜ್ಞಾನವು ಶಕ್ತಿವಿಶಿಷ್ಟಾದ್ವೈತವೆಂಬುದು ಪ್ರಸಿದ್ಧವಿರುವದು. ಹೀಗೆ ಕರ್ನಾಟಕದಲ್ಲಿ ದೇವಿಯ (ಶಕ್ತಿಯ) ಉಪಾಸಕರು ಹೆಚ್ಚು. ಈ ಶಕ್ತಿಯ ಉತ್ಸವವು ಅಂದರೆ ನವರಾತ್ರಿಯು ಕರ್ನಾಟಕದಲ್ಲಿ ಬಹಳ ಉತ್ಸಾಹದಿಂದ ನೆರವೇರಿಸಲ್ಪಡುತ್ತದೆ. ರಾಷ್ಟ್ರೀಯ ಶಕ್ತಿಗಳೂ ದೈವತಗಳೂ ಆದ ಶಕ್ತಿ, ಸರಸ್ವತಿ, ಶ್ರೀಗಳ ಉಪಾಸನೆ ಈ ಕಾಲಕ್ಕೆ ಮಾಡಲ್ಪಡುತ್ತದೆ. ಈ ಉತ್ಸವವು ೯ ದಿವಸಗಳ ವರೆಗೆ ನಡೆಯುವದರಿಂದ ಅನೇಕ ಕಾರ್ಯಗಳನ್ನು ನೆರವೇರಿಸಲು ಅನುಕೂಲವಿರುತ್ತದೆ. ಇಕ್ಕೇರಿ ಪೂರ್ವ ರಾಜರು ಈ ಉತ್ಸವವನ್ನು ರಾಷ್ಟ್ರೀಯ ಉತ್ಸವವಾಗಿ ಉಪಯೋಗಿಸುತ್ತಿದ್ದುದನ್ನು ಭರತೇಶವೈಭವ ಮೊದಲಾದ ಗ್ರಂಥಗಳಲ್ಲಿ ನೋಡಬಹುದು. ವಿಜಯನಗರದಲ್ಲಿ ಇದೇ ಉತ್ಸವವೇ ಬಹಳ ವಿಜೃಂಭಣೆಯಿಂದ ಜರಗುತ್ತಿತ್ತು. ಅದೇ ಪರಂಪರೆಯೇ ಮೈಸೂರಲ್ಲಿಯೂ ನಡೆದುಬಂದಿದೆ. ಅಲ್ಲಿಯ ನವರಾತ್ರಿಯ ಉತ್ಸವವನ್ನು ನೋಡಿದರೆ ರಾಷ್ಟ್ರೀಯ ಉತ್ಸವವೆಂದು ಒಡೆದು ಕಾಣುತ್ತದೆ. ಯೋಧರಿಗೆ ಸನ್ಮಾನವನ್ನೀಯುವ, ಎಲ್ಲರಿಗೆ ಮೆಚ್ಚುಗಳನ್ನು ಕೊಡುವ, ವಿದ್ವಾಂಸರಿಗೆ ಸಂಭಾವನೆಯನ್ನೀಯುವ, ದೇಶದ ಎಲ್ಲ ಕಲೆಗಳಿಗೆ ಉತ್ತೇಜನವನ್ನೀಯುವ, ಈ ಉತ್ಸವವು ರಾಷ್ಟ್ರೀಯವಲ್ಲವೇ? ಆದುದರಿಂದ ಮಹಾರಾಷ್ಟ್ರದಲ್ಲಿ ಗಣೇಶೋತ್ಸವವು ಹೇಗೆ ರಾಷ್ಟ್ರೀಯ ಉತ್ಸವವಾಗಿದೆಯೋ ಹಾಗೆಯೇ ಕರ್ನಾಟಕದಲ್ಲಿ ರಾಷ್ಟ್ರೀಯ ಉತ್ಸವವಾಗಲು ನವರಾತ್ರಿಯು ಯೋಗ್ಯವೆಂಬುದು ಸ್ಪಷ್ಟವಾದುದು.

—ಸ್ವಧರ್ಮ.

(ಪ. ಕ)

ನನಗೆ ಹೊಳೆದಂತೆ

ಬೆಳಗಾವಿಯಲ್ಲಿ ಸಾರ್ವಜನಿಕ ಸಭೆಗಳ ಹಸ್ತಪತ್ರಿಕೆಗಳೂ, ಮಾತುಗಳೂ, ಮರಾಟಿಯಲ್ಲಿ ಇನ್ನೂ ನಡೆಯುತ್ತಲಿವೆ! ಕನ್ನಡಿಗರೆಂದು ಹೇಳಿಕೊಳ್ಳುವವರೂ, ನನಗೆ ಕನ್ನಡದ ಅಭಿಮಾನವಿದೆಂದು ಕೂಗಿ ಕೂಗಿ ಸಭೆಗಳಲ್ಲಿ ಅರ್ಭಟಿಸುತ್ತಿರುವವರೂ, 'ಹೇಸರ' ಕನ್ನಡಿಗರೂ ('ಹೇಸರ' ಪತ್ರಿಕೆಗಳಲ್ಲಿ!) ಜಿಗಿ ಜಿಗಿದು ಮರಾಟಿಯಲ್ಲಿ ಉಪದೇಶಿಸುವರು! ಇವರಿಗೆ ಈಗ್ಗೆ ಏನೆಂದು ಹೊಸ ನಾಮಕರಣ ಮಾಡಬೇಕು? ಗೆಳೆಯರ ಗುಂಪಿನವರೇ ಬನ್ನಿರಿ! ಹೊಸ ಶಬ್ದವನ್ನು ಹುಡುಕಿ ಕೊಡಿ! ಆದರೆ ಆ ಶಬ್ದದ ಅರ್ಥವು ಎಲ್ಲರಿಗೂ ಸಹಜವಾಗಿ ತಿಳಿಯುವಂತಹದಿರಲಿ! ‡ ‡ ‡ ‡ ‡ ‡ ‡

ಮದ್ರಾಸಿನ ಗವರ್ನರರು ಮಂಗಳೂರಿಗೆ ಅಕ್ಟೋಬರದಲ್ಲಿ ಬರತಕ್ಕವರಿದ್ದಾರೆ. ಅಗ್ಗ ಅಲ್ಲಿಯ ಲೋಕಲ್ ಬೋರ್ಡ, ಮುನಸಿಪಾಲಿಟಿ, ಮೊದಲಾದ ಸಂಸ್ಥೆಯವರು ಮಾನಪತ್ರಗಳನ್ನು ಅವರಿಗೆ ಅರ್ಪಿಸಬಹುದು. ಆದರೆ ಕರ್ನಾಟಕ ಏಕೀಕರಣದ ಬಗ್ಗೆ ಮಾನಪತ್ರಗಳಲ್ಲಿ ಉಲ್ಲೇಖ ಮಾಡಲು ಜನರು ಮರೆಯಬಾರದು. ಜಿಲ್ಲೆಯ ಪತಿಯಿಂದಲೂ ಬೇರೊಂದು ಮಾನಪತ್ರವನ್ನು ಕೇವಲ ಏಕೀಕರಣಕ್ಕಾಗಿಯೇ ಅರ್ಪಿಸಿದರೆ ವಿಹಿತ.

—ಓದುಗ

ಹಿಂದುಸ್ಥಾನ.

ನೇಲ ಸಾಹೇಬರ ಶಿಲಾಪ್ರತಿಮೆಯೊಂದು ಮದ್ರಾಸಿನಲ್ಲಿದೆ; ಹಿಂದೀಯರ ವಿರುದ್ಧವಾಗಿ ಈ ಸಾಹೇಬರು ಕಾದಿದ್ದರು. ಹಿಂದೀಯರೆಂದರೆ ಅವರಿಗೆ ತುಚ್ಛರು. ಇಂಥಹ ಸಾಹೇಬರ ಪ್ರತಿಮೆಯು ಮದ್ರಾಸಿನಂತಹ ಪಟ್ಟಣದ ರಾಜಮಾರ್ಗದಲ್ಲಿರುವದೆಂದರೆ ಹಿಂದೀಯರ ಅಪಮಾನವೇ ಸರಿಯೆಂದು, ಅದನ್ನು ಒಡೆದು ಹಾಕಲು ಸತ್ಯಾಗ್ರಹವು ಮದ್ರಾಸಿನಲ್ಲಿ ನಡೆದಿದೆ. ಗಣಪತಿ ಅಯ್ಯರ ಎಂಬವರೂ ಈ ಬಗ್ಗೆ ಬಂಧಿಸಲ್ಪಟ್ಟಿರುವರು. ಆ ಪ್ರತಿಮೆಯನ್ನು ಅಲ್ಲಿಂದ ಕಿತ್ತದ ಹೊರತು ತಾವು ಅನ್ನ ಮುಟ್ಟುವದಿಲ್ಲವೆಂದು ಸೆರೆಮನೆಯಲ್ಲಿ ವ್ರತಸ್ಥರಾಗಿದ್ದಾರೆ. ಇವರ ಹೆಂಡತಿಯೂ ಸತ್ಯಾಗ್ರಹಕ್ಕೆ ಸಿದ್ಧಳಾಗಿದ್ದಾಳೆ. ಮಹಾತ್ಮರ ಅನುಮತಿಯೂ ಈ ಸತ್ಯಾಗ್ರಹಕ್ಕೆ ದೊರೆತಿದೆ.

ಕೊಲ್ಹಾಪುರದಲ್ಲಿ ಕಡ್ಡಾಯದ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸಬೇಕೆಂದು ಮುನಸಿಪಾಲ್ಟಿಯವರು ನಿಶ್ಚಯಿಸಿದ್ದಾರೆ.

ಮೈಸೂರ ಕರ್ನಾಟಕ.

ಮಹಾರಾಜರ ಅರಮನೆಯ ಬೊಕ್ಕಸದಲ್ಲಿ ೩೦ ಸಾವಿರ ರೂ. ಇಲ್ಲದಂತಾಗಿವೆ. ಆ ಬಗ್ಗೆ ಮೂವರು ಬಂಧಿಸಲ್ಪಟ್ಟಿದ್ದಾರೆ.

ಪರದೇಶದಿಂದ ಬರುವ ಕೃತ್ರಿಮ ರೇಶಿಮೆಯ ಮೇಲಿನ ಸುಂಕವನ್ನು ಸರಕಾರದವರು ಕಡಿಮೆ ಮಾಡಿದ್ದರಿಂದ, ಮೈಸೂರಲ್ಲಿಯ ರೇಶಿಮೆಯ ವ್ಯವಹಾರವು ಕುಂದುವದಾಗಿ ಜನರು ಗಾಬರಿಗೊಂಡಿರುವರು.

ಮೈಸೂರಿನ ವೃದ್ಧಪಿತಾಮಹ ವೆಂಕಟಕೃಷ್ಣಯ್ಯನವರಿಗೆ ಕಾಶಿಯ ಭಾರತ ಧರ್ಮ ಮಹಾಮಂಡಲದವರು "ವಿದ್ಯಾರತ್ನ"ವೆಂಬ ಬಿರುದನ್ನು ಕೊಟ್ಟಿದ್ದಾರೆ.

ರೇಲ್ವೆಯ ಹೊಸ ದಾರಿ.

ದುಂಡೂರ-ನರಗುಂದ ಹಾಗೂ ಧಾರವಾಡ-ಸವದತ್ತಿ-ಬೆಳಗಾವಿಗಳ ಹೊಸ ರೇಲ್ವೇ ಮಾರ್ಗವನ್ನು ಮಾಡಬೇಕಾಗಿ ರೇಲ್ವೇ ಬೋರ್ಡನವರು ನಿಶ್ಚಯಿಸಿದ್ದಾರೆ.

ಸ್ವಲ್ಪ ವಿನೋದ.

ಶಿಷ್ಯ- ಗುರುಗಳೇ, ಇಂಗ್ಲೀಷದಲ್ಲಿ "Never put off till tom rrow what you can do to day" ಎಂಬ ಗಾದೆಯ ಮಾತಿಲ್ಲವೇ?

ಶಿಕ್ಷಕ- ಹೌದೋ, ಮುಂದೇನು?

ಶಿಷ್ಯ- ನಾಳೆ ಕೊಡುವ ಸೂಟಿಯನ್ನು ಇವತ್ತೇ ಕೊಡಬೇಕು! ಇಷ್ಟೇ ಬಿನ್ನಹ

ಇಹವೃತ್ತ.

ಮಳೆಗಾಲದ ಲಕ್ಷಣವೆಲ್ಲ ಅಳಿದು, ಬಿಸಿಲುಗಾಲವೇನೋ ಎಂಬುವಂತೆ ಬಿಸಿಲು ಬೀಳುತ್ತಲಿದ್ದಿತು. ಆದರೆ ನಿನ್ನೆ ರಾತ್ರಿ ಪಾತ್ಕ್ರಟನ್ನಾಗಿ ಮಳೆಯಾಯಿತು (೧॥। ಇಂಚು) ಬೆಳೆಗಳು ಸಂಪೂರ್ಣ ಕೆಟ್ಟದ್ದರಿಂದ ಹಳ್ಳಿಗಳಿಂದ ಅಸಂಖ್ಯವಾಗಿ ಚಕ್ಕಡಿಗಳು ಜೋಳ ತುಂಬಿಕೊಂಡು ಹೋಗಲಿಕ್ಕೆ ಬರುತ್ತಲಿವೆ! ರೂ. ಗೆ ೯ ಸೇರು ಇದ್ದ ಜೋಳವು ಒಮ್ಮಿಂದೊಮ್ಮೆ ೬॥ ಸೇರಾಗಿದೆ! ವ್ಯಾಪಾರಸ್ಥರು ದುಡ್ಡು ಗಳಿಸುವ ಸಮಯವು ಇದೇ ಅಲ್ಲವೇ? ನಿನ್ನೆ ದಿನ ೨೨ ವ್ಯಾಗಿನ್ ಜೋಳವು ಇಲ್ಲಿಗೆ ಬಂದರೂ, ಸಾಯಂಕಾಲದೊಳಗೆ ಎಲ್ಲ ಚೀಲಗಳೂ ಮಾರಾಟವಾಗಿ ಹೋದವು!!

ಕೇಟೆ ಬಾಳಕೃಷ್ಣದಾಸರು ಏರ್ಪಡಿಸಿದ ಗಜಾನನೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಹಳ್ಳಿಗಳಿಂದ ದಿನಾಲು ಸಾವಿರಗಟ್ಲೆ ಜನರು ಅಲ್ಲಿಯ ವಿದ್ಯುದ್ದೀಪ, ಕಾರಂಜಿ, ಶಾಸ್ತ್ರೀಯ ಉಪಕರಣಗಳಿಂದ ಸಿದ್ಧಿ ಪಡಿಸಿದ ವಿಧವಿಧದ ಚಮತ್ಕಾರಗಳನ್ನು ನೋಡಲು ಕಿಕ್ಕಿರಿಯುತ್ತಲಿದ್ದರು. ನಿನ್ನೆ ದಿನ ಮೆರವಣಿಗೆಯೂ ಅತ್ಯಂತ ವೈಭವದಿಂದ ಜರುಗಿತು. ಚೌಘಡ, ಬ್ಯಾಂಡು, ಗಾಯನ, ತಂಬೂರಿ ಸಮಾರಂಭಗಳೊಂದಿಗೆ, ಕೀರ್ತನ, ಪುರಾಣ, ವ್ಯಾಖ್ಯಾನಗಳನ್ನು ಕೇಟೆಜಿಗಳು ಏರ್ಪಡಿಸಿದ್ದರೆ ಜ್ಞಾನಾಮೃತವನ್ನು ಪಾನ ಮಾಡಿಸುವ ಪ್ರಯತ್ನ ಅವರು ಮಾಡುತ್ತಲಿದ್ದರು. ಆದರೆ ಅವರ ಲಕ್ಷವು ಇತ್ತ ಕಡೆಗೆ ಎಳೆಯಲ್ಪಟ್ಟಿದ್ದರೂ, ಅವರು ಅದನ್ನು ದುರ್ಲಕ್ಷಿಸಿದ್ದೇ ಕಾಣುವುದು. ಈ ದಿನ ದುಸ್ತಿಗಳೂ ಜರುಗುವವು, ಈ ಉತ್ಸವಕ್ಕಾಗಿ ಕೇಟೆಜಿಗಳು ೧೫ ಸಾವಿರ ರೂ. ವೆಚ್ಚ—ಖರ್ಚು ಮಾಡಿರುವರಂತೆ! ಹಣದ ಬೆಲೆಯು ಈ ಲಕ್ಷ್ಮೀಪುತ್ರರಿಗಿಲ್ಲವೆಂಬ ಸ್ಪಷ್ಟವೆಂಬುದು ನಿಜವಾಗಿದ್ದರೂ, ಇಂತಹ ಕಷ್ಟದ ಕಾಲದಲ್ಲಿ ಬಡಬಗ್ಗರ ಹೊಟ್ಟೆಗೆ ಹಿಡಿ ಹಿಟ್ಟನ್ನಾದರೂ ಹಾಕಲಿಲ್ಲವೆಂದು ಅನೇಕರು ಗೊಣಗುಟ್ಟುತ್ತಿದ್ದುದನ್ನು ನಾವು ಕೇಳುತ್ತಿದ್ದೆವು! ಇವರ ಗಜಾನನೋತ್ಸವವನ್ನು ನೋಡಲಿಕ್ಕೆ ಬಂದ ಬಡ ಜೋರೇಗೌಡರಿಗೆ ಒಂದು ದಿನದ ಫಲಾಹಾರವನ್ನು ಕೊಡಬಹುದಾಗಿತ್ತಲ್ಲವೇ? ಇರಲಿ. ಮುಂದಿನ ವರ್ಷದಿಂದಲಾದರೂ ಗಜಾನನನು ಅವರಿಗೆ ಈ ಸದ್ಬುದ್ಧಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ.

ಕೊತ್ತಲಪ್ಪನ ಗುಡಿಯಲ್ಲಿಯ ಸಾರ್ವಜನಿಕ ಗಣೇಶೋತ್ಸವದ ಚಿತ್ರವನ್ನು ನೋಡಿ! ದಿನಾಲು ಅಲ್ಲಿ ನಡೆದ ಸ್ಥಳ— ಪರಸ್ಥಳೀಯರ ಕೀರ್ತನ, ವ್ಯಾಖ್ಯಾನ, ಪುರಾಣಗಳಿಂದ ಜನರು ಆನಂದಿತರಾಗಿ ಹೋಗುತ್ತಲಿದ್ದರು. ಊರಲ್ಲಿಯ ಸುಶಿಕ್ಷಿತ ವರ್ಗವೆಲ್ಲ ಅಲ್ಲಿ ಸೇರುತ್ತಲಿದ್ದಿತು. ಪರಸ್ಥಳಗಳಿಂದ, ಶ್ರೀ ಆಲೂರ ವೆಂಕಟರಾಯರು, ಶ್ರೀಮತಿ ಆರ್. ಕಲ್ಯಾಣಮ್ಮಾ. ಕುಮಾರ ವ್ಯಾಸನ ಭಾರತವನ್ನು ಬಹು ಸೊಗಸಾಗಿ ಓದುತ್ತಿರುವ ಗದಗಿನವರಾದ ಶ್ರೀ ಬಿ ಎಚ್ ಗಂಗಪ್ಪ, ಮೊದಲಾದವರೆಲ್ಲ ತಮ್ಮ ತಮ್ಮ ವಿದ್ವತ್ತೆಯಿಂದ ಇಲ್ಲಿಯ ಜನರಲ್ಲಿ ಅನೇಕ ಬಗೆಯ ವಿಚಾರ ಉತ್ಸಾಹಗಳನ್ನು ತುಂಬಿ ಹೋಗಿರುವರು. ಈ ಬಗೆಯ ಜ್ಞಾನವೃದ್ಧಿಯ ಕಾರ್ಯಕ್ರಮವನ್ನು ಏರ್ಪಡಿಸಿದ್ದಕ್ಕಾಗಿ, ಈ ಉತ್ಸವ ಮಂಡಳಿಗೂ, ಈ ಮಂಡಳಿಗೆ ಸಹಾಯ ಮಾಡಿದ ಮಹನೀಯರಿಗೂ, ಜವಾಬ್ದಾರಿಯನ್ನೆಲ್ಲ ಹೊತ್ತು ಅದನ್ನು ಕಾರ್ಯಗತಗೊಳಿಸಿದ ಹಿಂ. ಸೇ. ದಳದ ಶ್ರೀ ನೀರಲಕೇರಿ ಎಂಬುವರಿಗೂ ಬಾಗಲಕೋಟೆಗರು ಆಭಾರಿಯಾಗಿರುವರು.

ಶ್ರೀ ನರಗುಂದ ಜಯರಾಯರ ಅಧ್ಯಕ್ಷತೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಭೆ ಸೇರಿ, ಶ್ರೀ ಕೋಡ್ಡರಾಯರು ಶಿಕ್ಷಕರ ಪಗಾರವು ಕಡಿಮೆಯಾಗಬೇಕೆಂದು ಪ್ರಕಟಿಸಿದ ಮತವು ನಿಷೇಧಿಸಲ್ಪಟ್ಟಿತು.

ಪರಮತೀಯನಿಗೆ ಉತ್ತರ.

ಶ್ರೀ ಸಂತಪ್ರಲಯದ ಉತ್ಸವಾಮೃತವನ್ನು ಪಾನ ಮಾಡುವ ಕಾಲಕ್ಕೆ, ಅದರಲ್ಲಿ ಒಂದು ಕೊರತೆಯು ಕಣ್ಣಿಗೆ ಬಂದದ್ದು ನೋಡಿ ನನಗೆ ವಿಷಾದವಾಗುತ್ತದೆ. ಅದಕ್ಕೆ ಉಪಾಯವಿಲ್ಲ. ಯಾಕಂದರೆ ಯಾವ ಪ್ರಕಾರ ಪರಮತೀಯನಿಗೆ ತಮ್ಮ ಮತದಲ್ಲಿ ಶ್ರೀಮಹಾಲಕ್ಷ್ಮೀ ದೇವರು ಇದ್ದಾರೆಂದು ಪ್ರಮಾಣಗಳು ಸಿಗುತ್ತವೆಯೋ, ಅದರಂತೆಯೇ ನಮಗಾದರೂ ಅನೇಕ ಪ್ರಮಾಣಗಳುಂಟು. ಐತಿಹಾಸಿಕ ಪ್ರಮಾಣಗಳು (ತಾಮ್ರಪಟ) ಪೂರ್ವಿಕರು ಮಾಡಿದ ಸ್ತೋತ್ರ, ಅನೇಕ ಅಪರೋಕ್ಷ ಜ್ಞಾನಿಗಳ ಪದಗಳು ಹಾ.ಗೂ ಮತದಲ್ಲಿಯ ಕಾಗದ ಪತ್ರಗಳಲ್ಲಿ ಇದರ ಬಗ್ಗೆ ವರ್ಣನೆ ಹೀಗೆ ಅನೇಕ ಆಧಾರಗಳು ನನಗಾದರೂ ಉಂಟು. ಅಂದ ಮೇಲೆ ತಮ್ಮ ಮತದಲ್ಲಿಯೇ ಶ್ರೀಲಕ್ಷ್ಮೀರಮಣನು ಇರುವನು ಎಂಬ ಬಗ್ಗೆ ಪರಮತೀಯನಿಗೆ ಎಷ್ಟು ಅಧಿಕಾರ ಉಂಟೋ, ಅಷ್ಟೇ ಅಧಿಕಾರವು ನಮಗಾದರೂ ಉಂಟೆಂದು ನಾವು ನಿರ್ವಿವಾದವಾಗಿ ಹೇಳುತ್ತೇವೆ. ಇದರಲ್ಲಿ ಪರಮತೀಯನ ಮನಸ್ಸು ನೋಯುವ ಕಾರಣವಿಲ್ಲ. ಯಾಕಂದರೆ ಪರಮತೀಯನು ತನ್ನ ಲೇಖದ ಶಿರೋಲೇಖದಲ್ಲಿ ಬರೆದ, 'ಶ್ರೀಮನ್ಮೂಲ ಸೀತಾರಾಮೋ ವಿಜಯತೆ' ಎಂಬುದನ್ನು ಓದಿ ನಮಗಾದರೂ ಮನಸ್ಸು ನೋಯಬಹುದು. ಅದ್ದರಿಂದ ನಾವು ಹೇಳುವದೇನಂದರೆ, ಆ ತರದ ಬರವಣಿಗೆಯಿಂದ (ಎರಡೂ ಕಡೆಗೆ ಆಧಾರಗಳಿದ್ದ ಮೇಲೆ ಪರಸ್ಪರರ ಮನಸ್ಸು ನೋಯುವ ಕಾರಣವಿಲ್ಲ. ಅಂತಃಕಲಹಕ್ಕೆ ಕಾರಣ ಮಾಡುವ ಇಚ್ಛೆಯೂ ನಮಗಿರುವದಿಲ್ಲ. ಅದ್ದರಿಂದ ನಾನಿಲ್ಲಿಗೆ ತಮ್ಮ ರಜೆಯನ್ನು ತೆಗೆದುಕೊಳ್ಳುತ್ತೇನೆ. ಹಾಗೂ ಇನ್ನು ಮೇಲೆ ತಾವು ಇದಕ್ಕೆ ಏನಾದರೂ ಉತ್ತರ ಕೊಟ್ಟರೂ ಅದಕ್ಕೆ ನಾನು ಪ್ರತ್ಯುತ್ತರ ಬರೆಯುವದಿಲ್ಲವೆಂದು ತಮಗೆ ಹೇಳುತ್ತೇನೆ. —'ಕನ್ನಡಿಗ'ನ ಪ್ರತಿನಿಧಿ

ಬಿಳಗಿ ವಾರ್ತೆ.

ಗತ ನಿಯ ಪೀರ್ ಎಂಬ ಮುಸಲ್ಮಾನನು ಈ ಊರ ಹಣಗುಂತ ದೇವರಿಗೆ ಕಾಯಿ ಅರ್ಪಿಸಿದ್ದಕ್ಕಾಗಿ ಎಲ್ಲ ಮುಸಲ್ಮಾನರು ಕೂಡಿ ಅವನಿಗೆ ೧-೪-೦ ದಂಡ ಕಟ್ಟಿದರು. ಮತ್ತು ಬರಬರುತ್ತ ಮಾಲೂತಿ ಮುಂದೆ ವಾದ್ಯ ಬಾರಿಸುವದನ್ನು ಬಂದು ಮಾಡಿದರು. ಇದರಿಂದ ಇಲ್ಲಿಯ ಹಿಂದೂ ಜನರು ಮೊಹರಮ್ಮದಲ್ಲಿ ಯಾವದಕ್ಕೂ ಸಹಾಯ ಮಾಡಬಾರದೆಂದು ಕಟ್ಟು ಮಾಡಿದರು. ಮುಂದೆ ಬಜಂತ್ರಿಗಾರರು ಮುಸಲ್ಮಾನರ ಮನೆಗೆ ಊದಲಿಕ್ಕೆ ಬರುವದಿಲ್ಲೆಂದರು; ಬ್ರಾಹ್ಮಣರು, ಲಿಂಗಾಯತರು ಯಾವ ಮುಸಲ್ಮಾನನಿಗೂ ಕೂಲಿ ಹೇಳಲಿಲ್ಲ. ಬಂಬಳಿ, ಕಿರಾಣಿ, ಜವಳಿ ಸಾಮಾನುಗಳನ್ನು ಸಹ ಹಿಂದೂಗಳು ಅವರಿಗೆ ಕೊಡದಾದರು. ಇದರಿಂದ ಮುಸಲ್ಮಾನರು ಮೆತ್ತಗಾದರು. ಮಾಲೂತಿಯ ಮುಂದೆ ವಾದ್ಯ ಬಾರಿಸುವದು ಪ್ರಾರಂಭವಾಗಬೇಕು. ೧—೪—೦ ದಂಡವನ್ನು ತಿರಿಗಿ ಕೊಡಬೇಕು; ಹೀಗೆ ರಾಜಿ ಮಾಡಿಕೊಂಡರು. ನಿಜ ಜ್ಞಾನದ ಕಿರಣವು ಕಡೆಗೆ ಹೊಳೆದುದು ಆನಂದ!

ಬರಗಾಲದ ಭೂತವು ಭೀಕರವಾಗಿ ಅಭಿನಯಿಸುತ್ತಿದೆ. ನೋಡಿದತ್ತೆಲ್ಲ ಸ್ಮಶಾನ ಶಾಂತತೆಯು ಪಸರಿಸಿದೆ. ಕೊಲವಾನೆ ಇದ್ದ ದೈವವು ಎಲ್ಲಿಗೆ ಹೋಗಿ ಒಂದಕ್ಕೆ ಎರಡಾದರೂ ಬಾರದು, ಜೋಳ ತಂದು ಹೇಗಾದರೂ ಜೀವ ಹಿಡಿಯಬಹುದು ಆದರೆ ಕೂಲಿ ಸಿಗದ, ಸಾಲ ಹುಟ್ಟದ, ಕೂಲಿಕಾರರ ದೈನ್ಯವು ಯಾರ ಪಾಷಾಣದ ಮನಸ್ಸನ್ನು ಕರಗಿಸುವದೋ ನೋಡಬೇಕು. ಇದ್ದ ದೈವಗಳು, ಹುಳ-ನುಸಿ ಹತ್ತಿ, ಜೊಳ್ಳಾಗುವ ಹಗೆಯೊಳಗಿನ ಜೋಳವನ್ನು ತೆಗೆದು ಉಪವಾಸ ಬೀಳಲಾರದೆ ಆತ್ಮಹತ್ಯ ಮಾಡಿಕೊಳ್ಳುವ ತಮ್ಮ ಬಾಂಧವರನ್ನು ಬದುಕಿಸುವರೋ? ಇನ್ನು ದಯಾಳು ಸರಕಾರದ ದಿವ್ಯ ದೃಷ್ಟಿಯಾದರೂ ಇತ್ತ ಹೊರಳಿ, ಬಡವರಿಗೆ ಕೂಲಿ ದೊರೆಯುವಂತೆ ವ್ಯವಸ್ಥೆ ಆಗುವದೋ?

ರಂಗಭೂಮಿಯ ಸಮಾಚಾರ.

ವಾಮನರಾಯರ ವಿಶ್ವಗುಣಾದರ್ಶದವರು 'ಕಲಹಪ್ರಿಯ ನಾರದ' ಎಂಬ ಹೊಸ ನಾಟಕವನ್ನು ೩ನೇ ತಾರೀಖಿನಲ್ಲಿ ಬೆಂಗಳೂರಲ್ಲಿ ಆಡಿದರು. 'ಈ ಮಂಡಳಿಯವರು ತಮ್ಮ ಪ್ರಯೋಗಗಳಲ್ಲಿರುವ ದೋಷಗಳನ್ನು ತಿದ್ದಿಕೊಂಡು ಹೆಚ್ಚು ಜನರಂಜಕವಾಗಿ ಮಾಡುವದಿಲ್ಲವೆಂದು ಜಟ ತೊಟ್ಟಂತೆ ಕಾಣುತ್ತದೆ'ಂದು ನಮ್ಮ ಸುದ್ದಿಗಾರರು ತಿಳಿಸುತ್ತಾರೆ.

'ಟೊಳ್ಳುಗಟ್ಟಿ' 'ಪೋಲಿಕಿಟ್ಟಿ' ಮೊದಲಾದ ಚಿಕ್ಕ ಪ್ರಹಸನಗಳನ್ನು ಬರೆದು ಕನ್ನಡಿಗರಿಗೆ ಪರಿಚಿತರಾದವರೂ ಸುಪ್ರಸಿದ್ಧ ಹಾಸ್ಯಕಾರರೂ ಆದ ಶ್ರೀ. ಕೈಲಾಸಮ್ ಇವರು ತಮ್ಮ ೧೨ ಜನ ಅಭಿನಯಕಾರರೊಂದಿಗೆ ಧಾರವಾಡಕ್ಕೆ ಬಂದಿದ್ದು ಅಲ್ಲಿ ತಮ್ಮ ನಾಟಕಗಳನ್ನಾಡಿ, ಆ ಮೇಲೆ ಹುಬ್ಬಳ್ಳಿ ಗದಗ, ಬಾಗಲಕೋಟೆ, ವಿಜಾಪುರಗಳನ್ನು ಸಂದರ್ಶಿಸುವರು.

ಗುಣ ಬರದಿದ್ದರೆ ಹಣ ಪರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿಸಿ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕ್ಷಯ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕೊಳ್ಳುಂಡು ಖಾತ್ರಿ ಮಾಡಿಕೊಳ್ಳಬಹುದು.) ಇದರಿಂದ ಮೈಯ ರಿ ವಗೈರೆಯು ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೆ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿ ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ — **ಎಸ್ ಬಿ. ಕದಮ್ ಮತ್ತು ಸನ್ಸ್.**
ಮು. **ಪೊಷ್ಟ ನಿಪ್ಪಾಣಿ** (ಜಿ. ಬೆಳಗಾವ.)

C.U.N.&CO.
BENARES CITY.

ಬನಾರಸ್ ರೇಶ್ಮೀ ಶೀರೆಗಳು.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೀ ಮಾಲುಗಳನ್ನು ಕೋರುವವರಿಗೆ ವ್ಹಿ. ಪಿ. ಮೂಲಕ ಕಳಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕ ಉದ್ದ ಮೊಳ ೧೪ ಅಗಲ ಮೊಳ ೩, ಥಾನು ೧ಕ್ಕೆ ೧೫ ರಿಂದ ೫೦ ಜರಿ ಶೀರೆಗಳು ೧೭ ೧೮ ಮೊಳ ಉದ್ದ ೧ಕ್ಕೆ ರೂ. ೨೫ ರಿಂದ ೫೦ ರವರೆಗೆ. ಬುಟ್ಟೆದಾರ ಬನಾರಸ್ ಶೀರೆ ೧೭-೧೮ ಉದ್ದ ಮೊಳ ೭ ೧ಕ್ಕೆ ರೂ. ೫ ರಿಂದ ೩೦೦ ರ ವರೆಗೆ ಉಡುವ ಮಗುಟ ಉದ್ದ ೭-೮ ಮೊಳ ೧ಕ್ಕೆ ರೂ ೧೦ ರಿಂದ ೩೦ ರ ವರೆಗೆ ಪಿತಾಂಬ್ರ ೭-೯ ಮೊಳ ಉದ್ದ ೧ಕ್ಕೆ ರೂ. ೧೧ ರಿದ ೪೦ ರ ವರೆಗೆ, ಬಿಳಿ ರೇಶ್ಮಿ ಜ. ದುಪ್ಪಟಿ ೭ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೩೦ ರವರೆಗೆ ಸಾದಾ ಬಂಗಾಳ ರೇಶ್ಮಿ ಶಾಲು ೭ ಮೊಳ ಉದ್ದ ೩ ಮೊಳ ಅಗಲು ೧ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಪಟಿಕದ ೧೦೮ ರ ಸರ ೧ಕ್ಕೆ ರೂ. ೧ ರಿಂದ ೧೨ ರ ವರೆಗೆ ಸುದರ್ಶನ ೧ಕ್ಕೆ ಆಣೆ ೮ ರಿಂದ ರೂಪಾಯಿ 1½ ರವರೆಗೆ ಜಗನ್ನಾಥಜಾಗಂಟೆ ೧ಕ್ಕೆ ರೂ. 2½ರಿಂದ 15 ರ ವರೆಗೆ ಮತ್ತು ಬೇರೆ ಬೇರೆ ದವ್ವಾಗಳ ಕೆಟಲಾಗ ಇನಾಂ

ವಿಳಾಸ-ಶಿರೋಽ ಎಣಿ ನಾರಾಯಣಾಚಾರ್ಯ
ಕಂಪನಿ ಚೌಕಂಬಾ ಕಾಶಿ ಬನಾರಸ್

ಕರ್ನಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯುಲರ್ ಸ್ಕೂಲ್ ಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರುವದಕ್ಕೆ ತಕ್ಕದ್ದಾದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಜೊತೆಗೆ, ಜರದ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಲೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ॥ **ಲಕ್ಷ್ಮೀಬಾಯಿ ಕಂಭಕೋಣಂ,**
ವ್ಯವಸ್ಥಾಪಕರು, ಕ. ಮ. ವಿದ್ಯಾಲಯ, ಧಾರವಾಡ.

ಅತೀ ಸುಲಭ ಕಂತುಗಳು! **ಫಲಿತಾಂಶವು ಹೆಚ್ಚು!**

ದಿ. ಹಿಂದುಸ್ಥಾನ ಕೋಽಆಪರೇಟಿವ್ಹ

ಇನ್ಸುರೆನ್ಸ ಸೊಸೈಟಿ ಲಿಮಿಟೆಡ್.

(ಬ್ರಾಂಚ್:- ಮುಂಬಯಿ) (ಹೆಡ್ ಆಫೀಸು:- ಕಲ್ಕತ್ತಾ)

ಈ ಕಂಪನಿಯು ಇಡೀ ಹಿಂದುಸ್ಥಾನದಲ್ಲೆಲ್ಲಾ ಪ್ರಾಮುಖ್ಯತೆಗೆ ಬಂದ ಸ್ವದೇಶಿ ಕಂಪನಿಗಳಲ್ಲಿ ಒಂದಾಗಿದೆ. ಜನರ ಸೌಕರ್ಯಕ್ಕಾಗಿ ಈ ವಿಜಾಪೂರ ಜಿಲ್ಹೆಯೊಳಗೆ ಇದರ ಒಂದು ಶಾಖೆಯನ್ನಿಟ್ಟಿರುವರು. ಕಂತುಗಳು ಅತೀ ಸುಲಭ ವಿದ್ದು, ಧಾರಾಳವಾಗಿ ಈ ಕಂಪನಿಯಲ್ಲಿ ನಿಮ್ಮ ಜೀವ ವಿಮೆಯನ್ನು ಇಳಿಸಬಹುದು.

ಇದರ ಮೂಲಧನವು ೯,೦೦,೦೦೦ ಮೀರಿದೆ. ೧೯೨೫-೨೬ ನೇ ವರ್ಷದಲ್ಲಿ ಸಾಸಿರ ವರ್ಷಕ್ಕೆ ೧೦೦ ರೂ. ವಿಮೆಗೆ ರೂ. ೧೫ ರೂ. ದಂತೆ ಫಲಿತಾಂಶ ಕೊಟ್ಟಿರುವೆವು

ಎಲ್ಲಾ ಕಡೆಯಲ್ಲಿ ಏಜಂಟರು ಬೇಕಿದ್ದಾರೆ.

ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿದಲ್ಲಿ ಹೆಚ್ಚಿನ ಮಾಹಿತಿ ತಿಳಿಯ್ಯಬಹುದು.

ವಿಳಾಸ:—

ವಿಜಾಪೂರ. ೨೪—೭—೨೭ } ಜಿ. ಆರ್. ಪಕ್ಕನಳ್ಳಿ ಆಂಡ ಬ್ರದರ್ಸ್.
ಚೀಫ ಏಜಂಟ್ಸ,
ವಿಜಾಪೂರ ಜಿಲ್ಹಾ.

ಸ್ಟಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಧಾರಿ ಎಲಕ್ಟ್ರಿಕ, ಮಶಿನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇರಿ) ೧ ಪೌಂಡಿಗೆ ರೂ. ೧—-
೨ ನೇ ,, ,, ,, ರೂ. ೧-೩-೦

ದಿ ಸ್ಟಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಶ್ರೀ ಭಾರತ ಜಗಪ್ರಸಿದ್ಧ ಜಗ ಜಾಹೀರ ನೋಟೀಸು.

ಮೃತ್ಯುಂಜಯ ಔಷಧದಿಂದ ಮೂರೇ ತಾಸಿನಲ್ಲಿ ಗುಣವಿಲ್ಲೆಂದು ಸಿದ್ಧ ಮಾಡಿದವರಿಗೆ-೫೦೦ ರೂ. ಬಕ್ಷೀಸ ಕೊಡುವೆವು.

ಮೂರೇ ತಾಸಿನಲ್ಲಿ ಗುಣ] ಕಳ್ಳದಬತ್ತಿ ರಸಾಯನ ತಕ್ಕೊಂಡು ಸಾಯುವದೇಕೆ? **[ಮೂರೇ ದಿವಸಗಳಲ್ಲಿ ರೋಗವು ಪೂರ್ಣ ಹೋಗುವದು.**

೫೭ ಶುದ್ಧ ವನಸ್ಪತಿಯಿಂದ ತಯಾರು ಮಾಡಿದ ಮೃತ್ಯುಂಜಯ ಔಷಧ.

ಉಪದಂಶ, ಗರ್ಮಿ (ಉಷ್ಣ) ಪರ್ಮಿ ಮುಂತಾದ ಎಲ್ಲ ಪ್ರಕಾರದ ರೋಗ ಬಹುದಿನ ನೆಲಗೊಂಡದ್ದು ಶರೀರ ಕೆಟ್ಟಿ ಬಿದ್ದರೂ ಮೂರು ದಿವಸಗಳಲ್ಲಿ ಗುಣವಾಗುವದು

ಇಂಥ ಪ್ರಕಾರ ರೋಗಗಳಿಂದ ಉತ್ಪನ್ನವಾಗುವ ವಿಕಾರ ಉಷ್ಣ ಪರಮಿ (ಉಪದಂಶ) ಗರ್ಮಿ ಚಟ್ಟಿ ಒದದ ಗಂಟು, ನಡಿನಲ್ಲಿಯ ಗಂಟು, (ವುಡುಚು) ಅತಿಶಯ ಬಾವು, ಇಂದ್ರಿಯ ವಳಗೆ ತಿಡಿಕೆ, ಹೊಡತು, ರಕ್ತ ಕೀವು ಸುರಿಯೋಣ ಅದರಂತೆ ಸ್ತ್ರೀಯರ ಪ್ರದರ (ಕೀವು ಬಿಳಿ ಸೆರಗು) ಹೊಲೆ ಕುಟ್ಟರೋಗ ಬೆಳೆಯೋಣ, ಕಡಕಿ ವಿಕಾರಗಳಿಂದ ಗರ್ಭಾಶಯ ಕೆಡೋಣ, ಮೂತ್ರ ಕಣ್ಣು ಕಾಲು ಉರಿಯೋಣ, ಕಾವು ಹೆಚ್ಚಾಗಿ ಮಧುಮೇಹ ಮೈಮೇಲೆ ಗರ್ಮಿ (ಉಷ್ಣ) ಒಡೆದು ಕೀವು ಹೊರಬಿದ್ದು ಅದರಿಂದ ವ್ರಣ (ಘಾಯ) ವಾಗಿ ಅಂಗಾಂಗಕ್ಕೆ ತೂತು ಬಿದ್ದು ಮೂಗು ಕೂಡ್ರುವದೂ ಸೋರುವದೂ ಎಲ್ಲ ತರದ ಮೂಲವ್ಯಾಧಿ, ಹೊಟ್ಟೆ ಕಡತ ವಗೈರೆ ಕಾರಣಗಳಿಂದಾ ಜನನೇಂದ್ರಿಯ ಶಿಥಿಲತಾ ಅಥವಾ ನಪುಂಸಕತ್ವ ಮುಷ್ಟಿಮೈಥುನದಿಂದ ಆಗುವ ಪರಿಣಾಮ, ಸ್ವಪ್ನಾವಸ್ಥೆ ಮೂತ್ರದಲ್ಲಿ ಧಾತು ಅಥವಾ ಖರ ಬೀಳೋಣ, ವೀರ್ಯ ತಿಳುವಾಗೋಣ, ಸ್ತ್ರೀಗಮನದಲ್ಲಿ ತೀಕು ಹತ್ತೋಣ. ಶೀಘ್ರ ವೀರ್ಯ ಪತನವಾಗೋಣ, ನಡಸೋವು (ಶೂಲಿ) ನೋಯೋಣ, ಬೆನ್ನು ಬಿಗಿಯೋಣ, ವಾತವಿಕಾರ ಅವಿಚಾರದಿಂದ ಮಾಡಿದ ವೀರ್ಯಪಾತ ವಗೈರೆ ರೋಗಗಳ ಮೇಲೆ ಅಶಿಕ್ಷಿತ ಅಡಾಣೀ ಜನರ ಕಡಿಯಿಂದ ಪಾರಜ ಮತ್ತು ರಸಕರ್ಪೂರ, ಇಂಗಳೀಕ ಮುಂತಾದ ಸವಿಷ ಮತ್ತು ಅಪಕ್ವ ಧಾತು ರೂಪ ಪದಾರ್ಥ (ರಸಾಯನ) ಮತ್ತು ಅಪಕಾರಕ ವಸ್ತು ಸೇವಿಸುವದರಿಂದ ಮೈಯೊಳಗೆ ರಸಾಯನ ನಿಂತು ಅದರಿಂದ ಕಾಲು ಕೈ ಮುಡಪಾಗಿ ಮತ್ತು ಕೈ ಕಾಲುಗಳಲ್ಲಿ ರಸಾಯನ ಒಡೆದ. ಸ್ವತಃ (ತನಗೆ) ಮತ್ತು ಮುಂದಾಗುವ ತನ್ನ ಸಂತತಿಗೆ ಅನೇಕ ರೋಗವು ಉತ್ಪನ್ನವಾಗಿ ಅದರಿಂದ ಭಯಂಕರ ಪರಿಣಾಮ ಭೋಗಿಸಬೇಕಾಗುವದು ಇಂಥ ಪ್ರಕಾರದ ರೋಗಗಳು ಬಹಳ ದಿವಸ ನೆಲಗೊಂಡಿದ್ದಾಗಲೀ ಅಥವಾ ಹೊಸದಾಗಿ ಆದುದ್ದಾಗಲೀ ಇಂಥ ರೋಗಗಳ ಮೇಲೆ ಈ ನಮ್ಮ **ಮೃತ್ಯುಂಜಯ ಔಷಧ** ಉಪಯೋಗ ಮಾಡಿದರೆ ತತ್ ಸಂಬಂಧಿ ಸಂಪೂರ್ಣ ರೋಗಗಳು ಶೀಘ್ರವಾಗಿ ಹೋಗಿ ಮೈಯೊಳಗೆ ಇದ್ದ ರಸಾಯನವು ನಾಶವಾಗುವದು ಮತ್ತು ಅಶಕ್ತಿ ಹೋಗಿ ಮೈಯೊಳಗೆ ಶಕ್ತಿ ಬಂದು ಪ್ರಕೃತಿ ಉತ್ತಮವಾಗುತ್ತದೆ ಒಂದು ಬಾಟ್ಲಿಗೆ [೫] ರೂಪಾಯಿ ಟಪಾಲು ಖರ್ಚ ಬೇರೆ ಅನುಪಾನ ಪತ್ರಿಕೆಯು ಔಷಧ ಸಂಗಡ. ಲಾಭಕ್ಕೆ ಲಾಭವು. ಒಂದು ಆಣೆ ಟಿಕಿಟು ಕಳಿಸಿದಲ್ಲಿ ನಮ್ಮ ಔಷಧದ ಪೂರ್ಣ ಕ್ಯಾಟಲಾಗ ಕಳಿಸುವೆವು. (ತಮ್ಮ ಪತ್ತೆ ಪೂರ್ಣ ಬರೆಯಿರಿ.)

ಸುಪ್ರಸಿದ್ಧ ಡಾ॥ ಆರ್. ಎಲ್ ಹಿರೇಮಠ ಆರೋಗ್ಯ ಮಂದಿರ ಆರ್ಯ ವನೌಷಧಿ ೫೦೦೦, ಸಾವಿರ ಕಾರಖಾನೆ ಕಮತನೂ ಪೋ॥ ಸಂಕೇಶ್ವರ ಜಿ॥ ಬೆಳಗಾಂವ

EAT KASHMIR FRUITS & NUTS!

ಕಾಶ್ಮೀರದ ಹಣ್ಣು ಹಂಪಲಗಳನ್ನು ಸೇವಿಸಿರಿ!

ತೆಳವಾದ ತೊಗಟೆಯ ತಾಜಾ **ಅಕ್ರೋಡ**ಗಳೂ, ಹುರಿಸಿದ ಅಡವಿಯ **ಸೇಬು**ಗಳೂ, (Hazelnuts) ೧೧ ಪೌಂಡಿಗೆ ರೂ ೫—೮—೦; ತಾಜಾ ಕಾಗದೀ ಬದಾಮು; ಹರಳಿಲ್ಲದ್ದೂ, ಬಲು ಸವಿಯಾದ ಜಲ್ದರು (Apricots); **ಅಂಜೂರಿ; ದ್ವೀಪದ್ರಾಕ್ಷಿ; ಕಿಸಮಿಸು,** ೧೧ ಪೌ. ಗೆ ೧೩ ರೂ.; ಕಮಲದ ಶುದ್ಧವಾದ **ಜೇನತುಪ್ಪ,** ೫॥ ಪೌ. ಗೆ ೮ ರೂ.; ಶುದ್ಧ **ಕೇಶರ,** ೧ ತೊಲೆಗೆ ೩ ರೂ. ಟಪಾಲ ಖರ್ಚ ಮಾಫ!

ಡಾರ ಬ್ರದರ್ಸ ಶ್ರೀನಗರ, ಕಾಶ್ಮೀರ.

Dar Bros Srinagar, Kashmir.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದ ಮನೋಕಾಮನಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ **ಪುಸ್ತಕ**ವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಪ್ಪ ಹಾಲವಾದಿ ಸ್ಟೇಶನರ್ಸ ಬಾಗಲಕೋಟಿ

ರಾಜವೈದ್ಯ ನಾರಾಯಣಜಿ ಕೇಶವಜಿ.

೫೭. ಚೀನಾಬಜಾರ್. ಮದ್ರಾಸು



ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

೧೯೨೭ ನೇ ಜನವರಿ ೧೫ರಿಂದ ಪ್ರಾರಂಭ.



ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್ ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ-

೧. ನೀವು ನಮಗೆ ರೂ. ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್‌ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೧ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್‌ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪುವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ್ ಗೋಲ್ಡ್" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ.

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ಜಾರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು. ಅಥವಾ ವಿ. ಪಿ. ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಳೆದುಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಆಶ್ಚರ್ಯಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೭-೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್ ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರ ಸಿಟಿ.

ಯಾವದೇ { ಆಕಾರದ ನಕ್ಷೆಯ ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ ೧೪, ಅರ್ಧ ಬೆಲೆ ರೂ. ೭



ಬರೇ ಒಂದ ತಿಂಗಳ ಬಗ್ಗೆ ನಾವು ಈ ದರವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. **ಬೆಲೆ ರೂ. ೭**

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— ಸ್ವಾನ ಹೌಸ ಪಿ. ಬಿ ೫೦೮. ಪಿ. ಟಿ ಮದ್ರಾಸ

ಅತ್ಯಲ್ಪವಿವೆ ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೋಕೆಟ್ ವೊಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೇ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವೊಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೩

ಕ್ಯಾಪ್ಟನ್ ವಾಚ್ ಕಂ ಪಿ, ಬಿ. ಮದ್ರಾಸ. ೨೬೫



ಕಿರ್ಲೋಸ್ಕರ

ಸೇಂಗಾ ಒಡೆಯುವ ಯಂತ್ರ.

ನಮ್ಮ ಕಾರ್ಖಾನೆಯಲ್ಲಿ ಎರಡು ಮಾದರಿಯ ಯಂತ್ರಗಳು ತಯಾರಾಗುತ್ತವೆ ಒಂದು ಇಂಜಿನ ಶಕ್ತಿಯಿಂದಲೂ, ಇನ್ನೊಂದು ಕೈಯಿಂದಲೂ ನಡೆಯುತ್ತವೆ ಇವುಗಳ ಯಾವತ್ತೂ ಭಾಗಗಳು ಕಬ್ಬಿಣದವು ಜೋಡಣಿಕೆಯಿರುವದರಿಂದ ಕಾಳುಗಳು ಹಸನಾಗಿ ಬೀಳುವವು ನುಚ್ಚಾಗುವದಿಲ್ಲ.

ಸೇಂಗಾದ ಮಣ್ಣಿಯನ್ನು ತೆಗೆಯುವವರೂ ಸೇಂಗಾ ಬಿತ್ತುವವರೂ ಕೆಲಸನ್ನು ಮಾಡಲಿಕ್ಕೆ ಈ ನಮ್ಮ ಯಂತ್ರಗಳನ್ನೇ ಉಪಯೋಗಿಸಬೇಕು. ಕಳೆದ ವರ್ಷಕ್ಕಿಂತಲೂ ಈ ವರ್ಷ ಇವುಗಳ ಬೆಲೆಯನ್ನು ಕಡಿಮೆ ಮಾಡಿರುತ್ತೇವೆ. ಬಿಡಿ ಭಾಗಗಳು ನಮ್ಮಲ್ಲಿ ದೊರೆಯುತ್ತವೆ. ಸವಿಸ್ತರ ಸಂಗತಿ ಒಗ್ಗೆ ತಿಳಿದುಕೊಳ್ಳಿರಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್

ಕಿರ್ಲೋಸ್ಕರ ವಾಡಿ,
ಜಿ ಸಾತಾರಾ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ

ಈ ಕಂಪನಿಯ ಬಾಂಡು ಪಾಲ್ಸಿಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದ ಕಾಲಕ್ಕೆ ಕೆಳಗಿನ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತಿ ಇಲ್ಲದೆ ೧೦೦೦ ರೂ ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್ ಪಿ. ಸಿ. ನಂ ೨೭೩೭ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರಿಂಟೆಂಡಂಟ್ ಸೆಕ್ರೆಟರಿಯಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಪಿ ಸಿ. ನಂ ೧೯೭೨ ನಾರಾಯಣ ವಿಠ್ಠಲ ಲಿಮೋಣಕರ, ಕೆರ್ ಆಫ್ ಡಿ. ಈ ಪುರಾಣಿಕ ೧೦೭ ನಿಹಾಲಪುರ ಇಂದೂರ ೧೦೦೦

(೩) ಎಲ್ ಪಿ ಸಿ ನಂ ೩೪೧ ರಾಮಚಂದ್ರ ಅನಂತ ಶಿರೂರ ಡಿವಿಜನಲ್ ಫಾರೆಸ್ಟ ಆಫೀಸರ ಧಮ್ತರೀ. ಪಶ್ಚಿಮ ಮಧ್ಯಪ್ರದೇಶ ರೂ ೮೦೦

(೪) ಬಾಂಡ ನಂಬರು ೭೫೦೭ ಕೇ. ಜೆ. ಫರ್ನಾಂಡೋ ವ್ಯಾಪಾರಸ್ಥ ಬ್ರಿಕ್‌ಸ್ಟಾಯಿಡ ಸಿಲೋನ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೭೩೪ ಎಸ್. ಜಿ ಚವರೆ. ಅಶಿಸ್ಟಂಟ ಸ್ಟೇಶನ್ ಮಾಸ್ತರ ತೆಲಗಿ. ಜಿಲ್ಹಾ ವಿಜಾಪುರ. ರೂ ೧೦೦೦

ಬಿ. ಸ್. ಆರಾಧ್ಯ,
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಜೀವ ವಿಮೆಯ ಕಾರ್ಯದಲ್ಲಿ ಅದ್ಭುತವಾದ ಜಯವು !

ಯಾಕೆಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ರೂಪಾಯಿ ಲಾಭ ಹಂಚಿದೆ

ದಿ ಜನರಲ್ ಅಶ್ಯೂರನ್ಸ

ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಒಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇವಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ನಾನಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉತ್ಪಾದಿಯವಾದದ್ದು ರೂ. ೧,೦೯,೦೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್!

ಎಸ್. ಕಬ್ಬೂರ ಬಿ. ಎ. ಎಫ್. ಎಸ್. ಅಜಮೀರ.

Apply to:- **A. Ramachandra Rao**
Branch Secretary, opposit Minto Hospital,
Bangalore City
or
**L. V Ramdurg. Chief Agent
Near Vitoba Temple Hubli.**

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ ೧೯೪೭ ವಾ. ಚಂದಾ ೧—೧೪—೦ ಪೋಸ್ಟ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡದ ನವಜೀವನವು ಸಮಾವಿಷ್ಟವಾಗಿದೆ.)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ } ಬಾಗಲಕೋಟೆ ರವಿವಾರ ಮಿತಿ ಭಾದ್ರಪದ ಬಹುಳ ೮ ಶಕೆ ೧೮೪೯ ತಾ॥ ೧೮-೯-೧೯೨೭. { ಸಂಚಿಕೆ ೩೪

Date 18—9—1927.

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಿದೆ ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಚ್ಚುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ.

ಹೊಸ ಪ್ರೇಡಲ್.

ಈಗ ನಾವು ರಾಯಕೋಟದಿಂದ ಹೊಸ ಟ್ರೇಡಲ್ ತರಿಸಿದ್ದೇವೆ ಇದು ಫೂಲಸ್ಕ್ಯಾಪ ಹಾಫಶೀಟಿನ ಆಕಾರದ್ದು, ಬೆಲೆ ಕಡಿಮೆ ಮಾತ್ರ! ಕರ್ನಾಟಕದಲ್ಲಿಯ ಮುದ್ರಕರಿಗೆ ಇದು ಬೇಕಿದ್ದರೆ ನಾವು ತರಿಸಿಕೊಡುವೆವು! ಯಂತ್ರವನ್ನು ನೋಡತಕ್ಕವರು ನಮ್ಮಲ್ಲಿಗೆ ಬಂದು ನೋಡಬಹುದು ಇದಲ್ಲದೆ ರಾಯಲ್ ಆಕಾರದ ಒಂದು ಮುದ್ರಿಸುಯಂತ್ರವು ನಮ್ಮಲ್ಲಿ ಮಾರಲಿಕ್ಕಿದೆ. ಇದು ಹಳೆಯದಾದರೂ ಉತ್ತಮ ಕೆಲಸ ಕೊಡುತ್ತದೆ.

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಾಮಂದಿರ ಬಾಗಲಕೋಟೆ.

ಭಯಂಕರ ಗರ್ಮಿ.

ಪರಮೆ, ರಕ್ತವಿಕಾರ, ಕುಷ್ಟ, ಮಹಾರೋಗ, ಧಾತುವಿಕಾರ ನಪುಂಸಕತ್ವಗಳ ಮೇಲೆ ಖಂಡಿತವಾಗಿ ಗುಣ ಕೊಡುವ ದಿವ್ಯ ಔಷಧಿ ಬೆಲೆ ರೂ. ೫ ಪ್ರಕೃತಿಮಾನ ತಿಳುಹಿಸಿ ಔಷಧಿ ಪಡೆಯಬೇಕು

ವೈದ್ಯ:—ವಾದಿರಾಜ ಜಹಗೀರದಾರ
ಮು. ಇಲಕಲ್ಲ (ವಿಜಾಪೂರ)

ವಾಙ್ಮಯ ಪರಿಚಯ.

ಸಂಗೀತ ಕರ್ನಾಟಕ ಸಿಂಹಾಸನ ಸ್ಥಾಪನೆ—ಶ್ರೀಯುತ ಹೆಗ್ಡೆ ನರಸಿಂಗರಾಯರು ಬಿ ಎ. ಇವರು ಬರದುದು ಬೆಲೆ ೦—೧೨—೦.

ಇಲ್ಲಿಯ ವರೆಗೆ ರಂಗಭೂಮಿಯ ಮೇಲೆ ಬಂದಿರುವ—"ಉದ್ದ ಉದ್ದವಾಗಿ ಬರೆದ ಪುರಾಣದ ಬದನೇಕಾಯಿಗಳನ್ನು" (ಈ ರೂಪಕವೇತಕ್ಕದೊ ನಾವರಿಯೆವು) "ಇಪ್ಪತ್ತನೇ ಶತಮಾನದ ಸುಧಾರಿತ (?) ಜನರು ಹೇಗೆ ರುಚಿಸಬಹುದೆಂದು ಇವರ ಶಂಕೆ. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಕನ್ನಡಿಗರ "ಅಭಿರುಚಿಯನ್ನು ತೀಕ್ಷ್ಣಗೊಳಿಸುವ", "ಅಪೂರ್ವ ನಾಟಕ"ವನ್ನು ಬರೆಯಲು ಮಾಡಿದ ಇವರ ಸಾಹಸವೇನೊ ಸ್ತುತ್ಯವೇ ಸರಿ. ಆದರೆ ಈ ಸ್ವಾಭಿಪ್ರಾಯ-ಸ್ವಪ್ರಶಂಸೆಗಳ ಸುಳಿವು ಪ್ರಾರಂಭದಲ್ಲಿಯೇ ಇಳಿದು ಮುಂದೆಲ್ಲಿಯೂ ಇವುಗಳ ಸಮರ್ಥನವಾಗಿ ಉಳಿದಿರುವದು ಮಾತ್ರ ಖೇದದ ಮಾತು.

ಕರ್ನಾಟಕದ ಕುಲಗುರುಗಳಾದ ಶ್ರೀ ವಿದ್ಯಾರಣ್ಯರು ಹರಿಹರರಾಯನಿಂದ ಕರ್ನಾಟಕ ಸಿಂಹಾಸನದ ಸ್ಥಾಪನೆಯನ್ನು ಮಾಡಿಸಿದ ಇತಿಹಾಸವು ಈ ನಾಟಕದ ಮೂಲವಾಗಿದೆ. ಇದೇ ಕಥಾಭಾಗವನ್ನೊಳಗೊಂಡ ಕಾದಂಬರಿಗಳೂ ಇವೆ. ಅಚ್ಚು ಹಾಕಿದ ನಾಟಕಗಳೂ ಒಂದೆರಡಿವೆ. ಹಸ್ತಲಿಖಿತ ನಾಟಕಗಳೂ ಒಂದೆರಡಿವೆ ಎಂಬುದು ನಮಗೆ ಗೊತ್ತಿದೆ. ಇದೇ ಮೇರೆಗೆ ಕರ್ನಾಟಕದ ಆದ್ಯ ಸಾಮ್ರಾಜ್ಯ ಸ್ಥಾಪಕರಾದ ಪುಲಿಕೇಶಿ ಮೊದಲಾದವರ ಚರಿತ್ರೆಯನ್ನೂ ಕಾಲವನ್ನೂ ಚಿತ್ರಿಸುವ ಕಥೆ—ನಾಟಕಗಳು ಹೊರಟರೆ ನವೀನ್ಯತೆಯನ್ನು ತರುವದಲ್ಲದೇ ಸದ್ಯದ ಕೊರತೆಯನ್ನು ಹೋಗಲಾಡಿಸಿದಂತಾಗುವದು.

ನಾಟಕದ ಸಂವಿಧಾನಕವು ಅಷ್ಟೊಂದು ಸರಿಯಾಗಿ ಸಾಧಿಸಿಲ್ಲ. ಶ್ರೀ ಮಾಧವಾಚಾರ್ಯರ ತಂಗಿಯಾದ ಸಿಂಗಲೆಯ ಪಾತ್ರವು ಅನಾವಶ್ಯಕ. ಪಂಚಮಾಂಕದ ತೃತೀಯ ಪ್ರವೇಶದಲ್ಲಿ "ಶ್ರೀಮಂತ" ಎಂಬುವನೊಂದು ಪಾತ್ರವು ಕೇವಲ ಒಂದೇ ಹಾಡಿನ ಸಲುವಾಗಿ ಬೇಕಾಗಿತ್ತೆ? ಸಿಂಗಲೆಯ ಮುಖಾಂತರವಾಗಿ 'ಕರ್ನಾಟಕ ಭಗಿನಿಯರಿಗೆ'-ಸ್ವದೇಶೀ ವ್ರತದ ಬೋಧನೆ; ದಾಸಿಯಾದ ತಿರುಮಾಂಬೆಯ ಮಾತುಗಳಲ್ಲಿ "ಸಾಮವೇದದಿಂದ ಹುಟ್ಟಿದ" ಕರ್ನಾಟಕ ಗಾಯನದ ಬಗ್ಗೆ ವ್ಯಾಖ್ಯಾನವು; ಇದರಂತೆಯೇ ಮಾಧವಾಚಾರ್ಯರ ಬಾಯಲ್ಲಿ ವರದಕ್ಷಿಣೆಯ ಬಗ್ಗೆ ಪ್ರವಚನವು;-ಇವೇ ಮೊದಲಾದ ಅಪ್ರಸ್ತುತವಾದ ವಿಷಯಗಳನ್ನು ಸ್ಥಾನಾಸ್ಥಾನಗಳನ್ನು ನೋಡದೇ ರಸಭಂಗವಾಗುವಂತೆ ಸೇರಿಸಿರುವರು. ಹಾಡುಗಳಲ್ಲಿ ಹುರುಳಿಲ್ಲ. ಅವುಗಳಲ್ಲಿ ಕಲ್ಪನಾಚಾತುರ್ಯವಿಲ್ಲ. ರೂಪಕಾದಿ ರಸಪೋಷಕಗಳಾದ ಅಲಂಕಾರಗಳಿಲ್ಲ. ಪಾತ್ರಾಪಾತ್ರಾದಿ ವಿಚಾರವಿಲ್ಲ. ಮಾಧವಾಚಾರ್ಯರ ಬಾಯಲ್ಲಿಯೂ ಹಾಡೇ! ದಾಸಿಯ ಬಾಯಲ್ಲಿಯೂ ಹಾಡೇ!! ಸಾಮಾನ್ಯವಾಗಿ ಎಲ್ಲ ನಾಟಕಗಳಲ್ಲಿಯ ಹಾಡಿನ ಹಾಡೇ ಇದು!!! ಸುಶಿಕ್ಷಿತರಾದ ಶ್ರೀ ಹೆಗ್ಡೆಯವರ ಸದ್ಯದ ನಾಟಕವಾದರೂ ಈ ನಿಯಮಕ್ಕೆ ಅಪವಾದವಾಗಿಲ್ಲ. ಭಾಷೆಯು ಕೆಲಮಟ್ಟಿಗೆ ಬಂಧುರವಾಗಿದ್ದರೂ ಸದೋಷವಾಗಿದೆ.

ಇವೆಲ್ಲ ದೋಷಗಳನ್ನು ಮರೆಮಾಚಿಸುವ ಲೇಖಕರ ಭಾವನೆಯು ಉದಾತ್ತವಾಗಿದೆ. ಕನ್ನಡ-ಕರ್ನಾಟಕಗಳ ಬಗ್ಗೆ ಇರುವ ಅವರ ಅಭಿಮಾನವೂ ಕಳಕಳಿಯೂ ಪ್ರತಿಪುಟದಲ್ಲಿ ಕಂಡುಬರುವದು. ಈ ಭಾವನೆಯೇ ಲೇಖಕರಿಗೆ ಬೆಂಬಲವಾಗಿ ಅವರಿಂದ ಹೆಚ್ಚು ಸರಸವಾದ ಕೃತಿಗಳು ಹೊರಡಲೆಂದು ಕೋರುವೆವು.

ಮೈಸೂರ ಶಿಲಾಶಾಸನ ಇಲಾಖೆಯ ೧೯೨೬ನೇ ಇಸ್ವಿಯ ವರದಿಯು.

—:(೦)(೦)(೦):—

ಎರಡನೇ ಶತಮಾನದ ಗ್ರೀಕ ಭಾಷೆಯ ಪ್ರಹಸನಗಳಲ್ಲಿ ಕನ್ನಡ ವಾಕ್ಯಗಳಿದ್ದ ಉಲ್ಲೇಖವು ಈ ಮೊದಲೇ ಪ್ರಕಟವಾಗಿದ್ದರೂ, ಆ ಬಗ್ಗೆ ಸಾದ್ಯಂತವಾದ ಎಲ್ಲ ಸಂಗತಿಗಳು ವಿಶದವಾಗಿ ಕನ್ನಡಿಗರಿಗೆ ತಿಳಿದಿರಲಿಲ್ಲ. ಆ ಬಗ್ಗೆ ಮೈಸೂರ ಸರಕಾರದ ಶಿಲಾಶಾಸನ ಇಲಾಖೆಯವರು ಈಗ ಅವಕಾಶಮಾಡಿಕೊಟ್ಟಿದ್ದು ಆನಂದದ ಮಾತು. [illegible] ಬಂದರದ ನೆರೆಯಲ್ಲಿ ರಾಜನ ಹತ್ತರ ಸಿಕ್ಕಿದ್ದ ಓರ್ವ ಗ್ರೀಕ ಸ್ತ್ರೀಯಳನ್ನು ಬಂಧವಿಮುಕ್ತ ಮಾಡುವದಕ್ಕೆ ಅವಳ ಅಣ್ಣನು ಕೆಲವು ಜನರೊಂದಿಗೆ ಬಂದು ರಾಜನಿಗೂ ಅವನ ಪರಿವಾರದವರಿಗೂ ಯಥೇಚ್ಛವಾಗಿ ಮದ್ಯಪಾನ ಮಾಡಿಸಿ ಅವರು ಎಚ್ಚರತಪ್ಪಿದ ಕಾಲದಲ್ಲಿ ಅವಳನ್ನು ಕರೆದುಕೊಂಡು ಹೋದ ವೃತ್ತಾಂತವು ಹೇಳಲ್ಪಟ್ಟಿದೆ. ಆ ಪ್ರಹಸನದಲ್ಲಿ ಸುಮಾರು ೫೦ ಕನ್ನಡ ವಾಕ್ಯಗಳಿರುವವು. [illegible] ಉಚ್ಚಾರವು ಪರಕೀಯರಿಗೆ ನೆಟ್ಟಗೆ ಬಾರದ್ದರಿಂದಲೋ ಲಿಪಿಭೇದವು [illegible] ಆದರಲ್ಲಿಯ ವಾಕ್ಯಗಳ ಸ್ಪಷ್ಟ ಅರ್ಥವು ನಮ್ಮ ದೃಷ್ಟಿಗೆಯೇ ಆಗುವಂತಿಲ್ಲ. ಆದರೆ ಅವು ಕನ್ನಡ ವಾಕ್ಯಗಳೇ ಇರಬೇಕಲ್ಲದೆ ಬೇರೆ ಯಾವ ಭಾಷೆಯ ವಾಕ್ಯಗಳಲ್ಲವೆಂಬುದು ಕಂಡುಬರುವಂತಿದೆ. ಮಾದರಿಗಾಗಿ ಕೆಲವು ಶಬ್ದಗಳನ್ನು ಕೊಡುವೆವು.

"ಅಯಿತೋ. ಬೇಳದ್ರಾಕ್ಷ ಒಪ್ಪುತಿಪೆ ಅವಂ"

ಅಂದರೆ [illegible] ಕೊಡತಿಪ್ಪ ದ ತರಗೆಯು.

"ತಾವಮಿನೀಪನ್" ಅಂದರೆ [illegible] ಕೊಡುವನು.

"ಅಷದೇಕ ಬಿಟ್ಟು"

ಪರದೇಶದವರು ಇಲ್ಲಿಗೆ ಬಂದು ಕನ್ನಡವನ್ನು ಕಲಿತು ತಮ್ಮ ಭಾಷೆಯ ಗ್ರಂಥಗಳಲ್ಲಿ ಕನ್ನಡವನ್ನು ಉಪಯೋಗಿಸುತ್ತಿದ್ದರೆಂದರೆ ಕನ್ನಡವು ಆ ಸಮಯದಲ್ಲಿ ಅತ್ಯಂತ ಉಚ್ಚ ಸ್ಥಾನದಲ್ಲಿ ಇತ್ತೆಂದು ಹೇಳಬಹುದು. ಆ ನಮ್ಮ ವೈಭವವನ್ನು ಅರಿತು ಈಗಿನ ಕಂಠ ಕುಳಿತುಕೊಳ್ಳುವ ಎಚ್ಚರವಾಗಿ ಕಳಕೊಂಡ ಆ ಮಹಿಮೆಯನ್ನು ಪುನಃ ಸಂಪಾದಿಸುವದಕ್ಕೆ ಏಕನಿಷ್ಠೆಯಿಂದ ಕನ್ನಡಿಗರು ಪ್ರಯತ್ನ ಮಾಡಬೇಕು ಅಂದರೆ ನಿಜವಾಗಿ ನಮಗೆ ಯಶಸ್ಸು ದೊರೆಯುವದು.

ಈ ವರದಿಯಲ್ಲಿ ಉಲ್ಲೇಖಿತವಾದ ಉಳಿದ ಐತಿಹಾಸಿಕ ಚಿತ್ರಪಟಗಳೂ, ನಾಣ್ಯಗಳೂ, ಶಿಲಾಲೇಖಗಳೂ ಮಹತ್ವದವಾಗಿವೆ. ಕರ್ನಾಟಕ ಇತಿಹಾಸಕ್ಕೆ ಇವೆಲ್ಲ ಒಳ್ಳೇ ಮಹತ್ವವಾದವುಗಳು. ಮೈಸೂರು ಸರಕಾರದವರು ಈ ಕಾರ್ಯವನ್ನು ಇಷ್ಟೊಂದು ಅಚ್ಚುಕಟ್ಟುತನದಿಂದ ಸಾಗಿಸಿದ್ದು ಕನ್ನಡಿಗರಿಗೆಲ್ಲ ಒಳ್ಳೇ ಅಭಿಮಾನದಾಯಕ. ನಮ್ಮ ಬ್ರಿಟಿಶ್ ಸರಕಾರವು ಮಾತ್ರ ಬ್ರಿಟಿಶ್ ಕರ್ನಾಟಕದಲ್ಲಿರುವ ಕನ್ನಡ ಶಿಲಾಲೇಖಗಳ ಸಂಗ್ರಹದ ಕಾರ್ಯವನ್ನು ಒಳ್ಳೇ ಶಿಸ್ತಿನಿಂದಲೂ ಪ್ರೇಮದಿಂದಲೂ ನಡಿಸದೇ ಅದನ್ನು ದುರ್ಲಕ್ಷಿಸುತ್ತಿರುವದು ವಿಷಾದಕರವಾದುದು.

ಸೋಜಿಗದಸುದ್ದಿಗಳು

ಬರ್ಮಾ ರೇಲ್ವೆ ಕಂಪನಿಯವರು ೧—೨ ವರ್ಗಗಳ ಹೊಸ ಡಬ್ಬಿಗಳನ್ನು ಕಟ್ಟಿದ್ದಾರೆ. ಇವುಗಳ ಬಾಗಿಲಗಳು ಗಾಡಿ ಹೊರಟ ಕೂಡಲೇ ತಾವಾಗಿಯೇ ಮುಚ್ಚಿಕೊಂಡು, ಗಾಡಿ ಸ್ಟೇಶನ್ನಗಳಲ್ಲಿ ನಿಂತ ಕೂಡಲೇ ತಾವೇ ತೆರೆಯುವವು. ಗಾಡಿಗಳು ವೇಗದಲ್ಲಿದ್ದಾಗ್ಗೆ ಬಾಗಿಲುಗಳನ್ನು ತೆರೆಯಲು ಬರುವದಿಲ್ಲ.

ಕುದುರೆಗೆ ಕನ್ನಡಕ:-ಕೊಂಡಿನ ಕನ್ನಡಕಗಳನ್ನು ಹಾಕಿಕೊಂಡು ಮೆರೆಯುವದು ಅಮೇರಿಕನ್ನರ ಒಂದು ಶೋಕು. ಈಚೆಗೆ ಕುದುರೆಗಳಿಗೂ ಕೊಂಡಿನ ಕನ್ನಡಕ ಹಾಕುತ್ತಿರುವರು. ನ್ಯೂಯಾರ್ಕನಲ್ಲಿ ಒಂದು ಜೂಜಿನಲ್ಲಿ ಕುದುರೆಗಳು ಕನ್ನಡಕ ಹಾಕಿಕೊಂಡು ಓಡಿದವು. ಕುದುರೆಯ ವೈದ್ಯರು ಪರೀಕ್ಷಿಸಿ ಕನ್ನಡಕ ಕೊಡುವರು. ಅದರಿಂದ ಅವಕ್ಕೆ ಪ್ರಯೋಜನವಾಗಿರುವದು.

ಕನ್ನಡಿಗ.

ಬಾಗಲಕೋಟೆ ಭಾದ್ರಪದ ಬಹುಳ ೮ ಶಕೆ ೧೮೪೫.

ಸಂಪಾದಕರ ಭೂಮಿಕೆ

(೬೦)

ನನ್ನ ಮನಸಿನ ಮಂಟಪವಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮುಕ್ಕಳ ದೊಪ್ಪು ।
ನಿನ್ನ ಬಾದರು ಜೆನ್ನ ಮೋಣಬಸ್ತಿಯು ನೊಂದು ಬಿನ್ನಯಾಕಾಶದಲ್ಲಿ ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ಕಣ್ಣನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ

—ಅಂಬಿಕಾತನಯ ದತ್ತ

ಕರ್ನಾಟಕದ ರಾಷ್ಟ್ರೀಯ ಹಬ್ಬವು ಈಗ್ಗೆ ವೃತ್ತಪತ್ರಗಳಲ್ಲಿ ಚರ್ಚಿಸಲ್ಪಡುತ್ತಲಿದೆ. ಕರ್ನಾಟಕದ ಸ್ವಯಂ ನಿರ್ಣಯತ್ವದ ಪ್ರಶ್ನೆಯು ಹೊರಟಾಕ್ಷಣವೇ ಕರ್ನಾಟಕದಲ್ಲಿರುವ ಮರಾಟಿಗರಿಗೆ ದ್ವೇಷವೇ ಎಲ್ಲ ಕಡೆಗೂ ದೃಗ್ಗೋಚರವಾಗುತ್ತದೆ! ಕಾಮಿಣಿಯಾದವನಿಗೆ ಜಗತ್ತೆಲ್ಲ ಹಾದಿಯಾಗಿರುವಂತೆ ಮೂಲತಃ ತಮ್ಮಲ್ಲಿಯೇ ದ್ವೇಷವನ್ನು ತುಂಬಿಕೊಂಡಿರುವ ಈ ಹೇಸರ ಮರಾಟಿಗರಿಗೆ ಹೀಗೆ ಕಾಣುವದರಲ್ಲಿ ಆಶ್ಚರ್ಯವೇನಿಲ್ಲ. ಈ ಪ್ರಶ್ನೆಯು ಹೊರಟದ್ದು ಮೊದಲು ಗೆಳೆಯರಗುಂಪಿನ "ಸ್ವಧರ್ಮ"ದಲ್ಲಿ. ಮರಾಟಿ ಮಾತೃಭಾಷೆಯುಳ್ಳವರಾದ ಶ್ರೀ ಬೇಂದ್ರೆಯವರೇ ಗೆಳೆಯರ ಗುಂಪಿನ ಮೂಲಸ್ಥಾಪಕರು; ಆದುದರಿಂದ, ಮರಾಟಿ ದ್ವೇಷಪೂರಿತ ವಿಷಯಗಳಿಗೆ ಗೆಳೆಯರ ಗುಂಪಿನಲ್ಲಿ ಅವಕಾಶವು ದೊರೆಯದೆಂಬುದು ಸ್ಪಷ್ಟವಿದೆ. ಹೀಗಿದ್ದರೂ ದಸರೆಯು ಕರ್ನಾಟಕದ ರಾಷ್ಟ್ರೀಯ ಉತ್ಸವವಾಗಬೇಕೆಂದರೆ ಮರಾಟಿಯ ದ್ವೇಷದಿಂದ ಈ ವಿಚಾರವು ಹೊರಟಿದೆಂದು ತಿಳಿಗೊಳ್ಳುವದು ಮರಾಟಿಗರ ಅವನತಿಯ ಲಕ್ಷಣವು. ಇನ್ನು ದಸರೆಯು ಕರ್ನಾಟಕದ ರಾಷ್ಟ್ರೀಯ ಉತ್ಸವವಾಗಲು ಯೋಗ್ಯವಿದೆಂಬುದು 'ಸ್ವಧರ್ಮ'ದಲ್ಲಿ ಚನ್ನಾಗಿ ಚರ್ಚಿಸಲ್ಪಟ್ಟಿದೆ; ಸಪ್ರಮಾಣವಾಗಿಯೂ ಸಿದ್ಧಪಡಿಸಲ್ಪಟ್ಟಿದೆ. ವಿಜಾಪುರದವರು ಕರ್ನಾಟಕಕ್ಕೆಲ್ಲ ಮೇಲ್ಪಂಕ್ತಿಯನ್ನು ಹಾಕಿ ಕೊಡಲು ಸಿದ್ಧರಾಗಿಯೂ ಇದ್ದಾರೆ. ಇವರು ಈ ಉತ್ಸವವನ್ನು ಹೇಗೆ ಕೊನೆಗಾಣಿಸುವರೋ ಎಂಬುದನ್ನು ಕರ್ನಾಟಕವು ನಿರೀಕ್ಷಿಸುತ್ತಲಿದೆ. ಈ ದಸರೆಯ ಉತ್ಸವವನ್ನು ಕನ್ನಡಿಗರು ಮಾಡಲುಪಕ್ರಮಿಸುವದೆಂದರೆ ಗಣೇಶೋತ್ಸವವನ್ನು ಕರ್ನಾಟಕದಿಂದ ತಳ್ಳಿಬಿಡಬೇಕೆಂದಲ್ಲ. ಹಿಂದುಸ್ಥಾನದ ಈಗಿನ ಪರಿಸ್ಥಿತಿಯಲ್ಲಿ, ಜನರ ಜಾಡ್ಯವನ್ನು ಹೊಡೆದೋಡಿಸಲು ಎಷ್ಟು ಉತ್ಸವಗಳಾದರೂ ಬೇಕೆ ಬೇಕು. ಆದರೆ ಗಣೇಶೋತ್ಸವವು ಕೆಲವು ಶತಮಾನದಿಂದ ಅಸ್ತಿತ್ವದಲ್ಲಿದ್ದರೂ, ಮಹಾರಾಷ್ಟ್ರದಲ್ಲಿ ಸಾರ್ವತ್ರಿಕವಾಗಿ ಹಬ್ಬಿದಂತೆ ಕನ್ನಡನಾಡಿನಲ್ಲಿ ಹಬ್ಬಲಿಲ್ಲದು; ಮಹಾರಾಷ್ಟ್ರದಲ್ಲಿಯ ಎಲ್ಲ ನಗರಗಳಲ್ಲಿಯೂ ಹಳ್ಳಿಹಳ್ಳಿಗಳಲ್ಲಿಯೂ ಇದು ಹಬ್ಬಿದೆ; ಆದರೆ ಕರ್ನಾಟಕದ ಎಲ್ಲ ಭಾಗಗಳಲ್ಲಿ ಈ ಉತ್ಸವದ ಪ್ರಸಾರವಿಲ್ಲ. ಮಹಾರಾಷ್ಟ್ರದ ಹೊರತು ಭರತಖಂಡದ ಉಳಿದ ಭಾಗಗಳಲ್ಲಿಯೂ ಅದರ ಪ್ರಸಾರವಿಲ್ಲ. ಮಹಾರಾಷ್ಟ್ರದಲ್ಲಿ ಗಜಾನನ ಆರಾಧಕರು ಹೆಚ್ಚಾಗಿದ್ದುದರಿಂದಲೂ, ಹಿಂದೂ ಮತದ ಎಲ್ಲ ಜಾತಿ ಪಂಗಡದವರಿಗೂ ಈ ದೇವರು ಪ್ರಿಯನಾಗಿರುವನೆಂದು ಲೋಕಮಾನ್ಯರು ಇದರ ಪುರಸ್ಕರ್ತರಾದುದರಿಂದಲೂ, ಈ ಉತ್ಸವವು ಮರಾಟಿಗರ ನಾಡಿನಲ್ಲಿ ಹೆಚ್ಚು ಫಲದ್ರೂಪವಾಗಿದೆ. ಆದರೆ ಈ ಉತ್ಸವವನ್ನು ಮಾಡಬೇಡಿರೆಂದು ಕರ್ನಾಟಕದಲ್ಲಿ ಈ ಕಾಲು ಶತಮಾನದಲ್ಲಿ ಯಾರೂ ಹೇಳಿಲ್ಲ, ಅಲ್ಲದೇ ಕೆಲವು ನಗರಗಳಲ್ಲಿ ಲೋಕಮಾನ್ಯರ ಕಾಲದಿಂದ ಈ ಉತ್ಸವವು ಕರ್ನಾಟಕದಲ್ಲಿ ಆಚರಿಸಲ್ಪಡುತ್ತಲಿದೆ. ಹೀಗಿದ್ದರೂ, ಗಜಾನನೋತ್ಸವವು ಕರ್ನಾಟಕದಲ್ಲಿ ಮಹಾರಾಷ್ಟ್ರದಂತೆ ಯಾಕೆ ಪ್ರಸಾರಹೊಂದಿಲ್ಲವೆಂಬುದನ್ನು ಕೊಂಚ ಆಳವಾಗಿ ವಿಚಾರಿಸಿ, ಗಜಾನನಾರಾಧಕರು ಕರ್ನಾಟಕದಲ್ಲಿರದಿರುವದೇ ಇದರ ಕಾರಣವೆಂಬುದು 'ಸ್ವಧರ್ಮ'ದಲ್ಲಿ ತೋರಿಸಲ್ಪಟ್ಟಿದೆ. ಮುಂದೆ ದಸರೆಯು ಎಲ್ಲ ಹಿಂದೂ ಮತೀಯರಿಂದಲೂ ಆಚರಿಸಲ್ಪಡುತ್ತಿರುವದೂ, ಪ್ರಾಚೀನ ಕಾಲದಿಂದ ಕರ್ನಾಟಕದ ರಾಜರು ಈ ಹಬ್ಬವನ್ನು ರಾಷ್ಟ್ರೀಯ ಹಬ್ಬವೆಂದು ಗಣಿಸಿದ ಹಾಗೂ ಅದನ್ನು ಆಚರಿಸಿದ ಐತಿಹಾಸಿಕ ಆಧಾರವೂ ತೋರಿಸಲ್ಪಟ್ಟಿವೆ. ಯಾವ ಸಮಂಜಸ ಮನುಷ್ಯನಿಗಾದರೂ ಇವು ಸರಿಯಾಗಿ ತೋರುವವು. ಆದುದರಿಂದ ಮರಾಟಿಗರಿದನ್ನು ಪಕ್ಷದೃಷ್ಟಿಯಿಂದ ನೋಡಿ, ಇಲ್ಲದ ಕಲ್ಮಷವನ್ನು ಹೃದಯದಲ್ಲಿ ತಾಳಿಕೊಳ್ಳಬಾರದೆಂದು ಸೂಚಿಸದೇಯಿರೆವು.

ಮುಸಲ್ಮಾನರು ದಸರೆಯಂತಹ ಹಬ್ಬವನ್ನು ಕರ್ನಾಟಕದ ರಾಷ್ಟ್ರೀಯ ಹಬ್ಬವನ್ನಾಗಿ ಮಾಡಿದರೆ, ಇದರಲ್ಲಿ ಸೇರುವದು ಹೇಗೆಂಬ ಪ್ರಶ್ನೆಯನ್ನು ಒಬ್ಬಿಬ್ಬರು ಹೊರಡಿಸಿರುವರು. ಗಜಾನನೋತ್ಸವವನ್ನು ಸಮರ್ಥಿಸಿ, ಕರ್ನಾಟಕವು ದಸರೆಯ ಪ್ರಶ್ನೆಯನ್ನು ಹೊರಡಿಸಿದ ಕೂಡಲೇ, ಮುಸಲ್ಮಾನರ ವಿಚಾರವನ್ನು ಮುಂದಿಟ್ಟು, ಇದನ್ನು ವಿರೋಧಿಸುವದು ಸರಿಯಲ್ಲ. ಗಜಾನನೋತ್ಸವದಲ್ಲಿ ಮುಸಲ್ಮಾನರು ಈಗ್ಗೆ ಭಾಗವನ್ನು ತೆಗೆದುಕೊಳ್ಳುವದಿಲ್ಲವಾದರೂ, ಮಹಾರಾಷ್ಟ್ರದಲ್ಲಿ ಅದು ಕಾಯಂವಾದ ರಾಷ್ಟ್ರೀಯ ಉತ್ಸವವಾಗಿದೆ. ಆದುದರಿಂದ ಕರ್ನಾಟಕದ ವಂಶಪರಂಪರೆಗೆ ಅನುಗುಣವಾಗಿದ್ದ ದಸರೆಯು ಕರ್ನಾಟಕ ರಾಷ್ಟ್ರೀಯ ಉತ್ಸವವಾಗಲು ಅದೇಕೆ ಆತಂಕವಾಗಬೇಕು? ಇನ್ನು ಮುಸಲ್ಮಾನರು, ಕ್ರೈಸ್ತರೂ ಸಹ ಆಚರಿಸುವಂತಹ ರಾಜಕೀಯ ದೃಷ್ಟಿಯುಳ್ಳ ಹಬ್ಬವೊಂದು ಪ್ರತ್ಯೇಕವಾಗಿ ಬೇಕೆಂದರೆ ಆ ಮಾತು ಬೇರೆ. ಹಾಗೆ ಒಂದು ದಿನವನ್ನು ವಿಚಾರಿಸಿ ತೆಗೆಯಬಹುದು. ಆದರೆ ಕ್ರೈಸ್ತನ್ನ ಮುಸಲ್ಮಾನರು ದಸರೆಯಲ್ಲಿ ಭಾಗ ತೆಗೆದುಕೊಳ್ಳುವದಿಲ್ಲೆಂದು ಹೇಳಿ, ಹಿಂದೂ-ಜನರು ದಸರೆಯ ಹಬ್ಬವನ್ನಾಚರಿಸಬಾರದೆಂದು ಡಬ್ಬಬಾರಿಸುವದು ಏಹಿತವಲ್ಲ.

ವಿಷಮವಿವಾಹದ ವಿವರಣೆಯನ್ನು ಕಳೆದಾಜೆಯ ಸಂಚಿಕೆಯಲ್ಲಿ ನಾವು ಕೊಟ್ಟಿದ್ದೇವಷ್ಟೇ? ಕೊಪ್ಪಳ, ಧಾರವಾಡಗಳಲ್ಲಾದಂತೆ ಕಾರವಾರ ಜಿಲ್ಲೆಯಲ್ಲಿಯೂ ಈ ಬಗೆಯ ಒಂದು ವಿಷಮವಿವಾಹವಾಗಿದೆ. ಈ ಸುದ್ದಿಯು ಮಹಾತ್ಮರ ಕಿವಿಯ ವರೆಗೆ ಹೋಗಿದ್ದು, ಅವರು ಈ ವಿವಾಹಗಳನ್ನು ನಿಷೇಧಿಸಿ, ಈ ನವನವ ಹುರುಪಿನಿಂದಲೂ ಉತ್ಸಾಹದಿಂದಲೂ, ವರಗಳಾಗಿ ಮುಂದೊರೆದು ಬಂದ ಮಹನೀಯರಿಗೂ, ಈ ವಿವಾಹಗಳನ್ನೇರ್ಪಡಿಸುವದರಲ್ಲಿ ತಮ್ಮ ವೇಳೆ, ಉತ್ಸಾಹಗಳನ್ನು ವ್ಯರ್ಥವಾಗಿ ವ್ಯಯಮಾಡುವ

ಹುಬ್ಬಳ್ಳಿಯ ಪತ್ರ.

ತಾ|| ೧೪ ರಲ್ಲಿ ಬೆಳಗು ಮುಂಜಾನೆ ೫|| ಘಂಟೆಯಿಂದ ಮಳೆಯು ಪ್ರಾರಂಭವಾಗಿ ೮|| ಘಂಟೆಯ ವರೆಗೆ ಒಂದೇ ಸಮನೆ ಹೊಡೆಯಿತು ಇದರಿಂದ ಹಾಸ್ಪಿಟಲ್ ರೋಡ ಮತ್ತು ಮೇದಾರ ಓಣಿಗಳಲ್ಲಿ ಹಾನಿಯಾಗಿರುತ್ತದೆ. ೨ ಪ್ರೆಸ್ಸುಗಳೂ ಬಿದ್ದಿದ್ದು ಒಂದು ಪ್ರೆಸ್ಸಿನಲ್ಲಿ ಹತ್ತಿಕಾಳುಗಳ ೨೦೦ ಚೀಲಗಳು ತೇಲಿ ಹೋಗಿರುತ್ತವೆ. ಮೇದಾರ ಜನರ ೫೦-೬೦ ಮನೆಗಳು ಬಿದ್ದಿರುತ್ತವೆ. ಗುಳಕವ್ವನ ಕೆರೆಯು ಒಡೆದದ್ದರಿಂದ ರಸ್ತೆಯಲ್ಲಿಯ ಪೂಲಿನ ಮೇಲೆ ಕುಳಿತಂಥ ೩ ಜನರು (ನೀರಿನ ಧಡಕಿಯಿಂದ ಪೂಲು ಒಮ್ಮಿಂದೊಮ್ಮೆ ಬಿದ್ದುದಕ್ಕಾಗಿ) ಸೆಳವಿನ ಗುಂಟ ತೇಲಿ ಹೋಗುತ್ತಿದ್ದರು. ಅಷ್ಟರಲ್ಲಿ ಯಾರೋ ಅವರು ತೆಗೆದುಬಿಟ್ಟರು ಅವರಿಗೆ ಘಾಯಗಳಾಗಿದ್ದು ಸರಕಾರಿ ದವಾಖಾನೆಯಲ್ಲಿ ಅವರನ್ನು ಹಾಕಿರುತ್ತದೆ. ಒಟ್ಟು ಮಳೆಯು ೫|| ಇಂಚು ಆಗಿದ್ದು, ಉಣಕಲ್ಲ ಕೆರೆಗೆ ೧೧ ಫೂಟು ನೀರು ಬಂದಿದೆ ಇನ್ನೂ ಒರತಿತ್ತಿದೆ. ಇಲ್ಲಿಯ ವರ್ಕಶಾಫ್ ಹಾಗೂ ಅರವಿಯ ಗಿರಣಿಗಳಲ್ಲಿ ೫-೬ ಫೂಟು ನೀರು ನಿಂತದ್ದರಿಂದ ಅವು ಬಂದುಮಾಡಲ್ಪಟ್ಟಿವೆ. ಒಟ್ಟು ೬೦ ಸಾವಿರ ರೂ ಹುಬ್ಬಳ್ಳಿಗೆ ಹಾನಿಯಾಗಿದೆಯಂತೆ.

—ಡಿ. ಜಿ. ಸರಾಫ

ಮೈಸೂರ ಸರಕಾರವೂ ಖಾದಿಯೂ.

ಅಖಿಲ ಭಾರತ ನೂಲುವ ಸಂಘದ ಪತಿಯಿಂದ ಶ್ರೀ ಶಂಕರಲಾಲ ಬ್ಯಾಂಕರರು ಗೊತ್ತು ಮಾಡಿದ ಖಾದಿ ಪ್ರಚಾರದ ಯೋಜನೆಯನ್ನು ಮೈಸೂರ ಸರಕಾರದವರು ಸ್ವೀಕರಿಸಿದ್ದಾರೆ. ನಂಜನಗೂಡದ ಬಾದನಾವಳಿಯು ಮಧ್ಯವರ್ತಿ ಸ್ಥಾನವಾಗಿ ಆರಿಸಲ್ಪಟ್ಟಿದೆ. ಅಲ್ಲಿ ೫೦೦ ರಾಟಿಗಳೂ, ೪೦ ಕೈಮಗ್ಗಗಳೂ ನಡೆಯುವವು. ತಿಂಗಳಿಗೆ ೨ ಸಾವಿರ ರೂ. ಬೆಲೆ ಬಾಳುವ ಖಾದಿಯು ಹುಟ್ಟುವದಾಗಿ ಅಂದಾಜಿದೆ. ಮೈಸೂರ ಸರಕಾರದವರು ಇದಕ್ಕಾಗಿ ೩೫೦೦ ರೂ. ಗಳನ್ನು ತೆಗೆದಿಟ್ಟು, ಸರಕಾರದ ಔದ್ಯೋಗಿಕ ಖಾತೆಯವರು ನೂಲುವ ಸಂಘದವರ ಸಹಾಯದಿಂದ ಇದನ್ನು ಸುವ್ಯವಸ್ಥೆಯಿಂದ ಸಾಗಿಸಬೇಕಾಗಿ ಗೊತ್ತುಮಾಡಿದ್ದಾರೆ ಅಂತೂ ಕರ್ನಾಟಕವು ಖಾದಿಯ ಪ್ರಸಾರದಲ್ಲಿ ಬೇಗನೇ ಮುಂದಾಗುವದಾಗಿ ಕಾಣಬಹುದಲ್ಲವೇ?

ಮೈಸೂರ ಕರ್ನಾಟಕ.

ರಜತೋತ್ಸವದ ಆನಂದಕ್ಕಾಗಿ ಬೆಂಗಳೂರ ಮುನಸಿಪಾಲ್ಟಿಯವರು ಕಳೆದ ವಾರದಲ್ಲಿ ಮಹಾರಾಜರಿಗೆ ಮಾನಪತ್ರವನ್ನರ್ಪಿಸಿದರು. ಸರಂಜಾಮು ಸಹಿತವಾದ ದರ್ಬಾರದ ಮೆರವಣಿಗೆಯು ಮೈಸೂರಲ್ಲಿ ಮಾತ್ರ ನಡೆಯುತ್ತದೆ. ಆದರೆ ಬೆಂಗಳೂರಲ್ಲಿ ಮಹಾರಾಜರ ದರ್ಬಾರದ ಮೆರವಣಿಗೆಯು ಆದುದು ಇದೇ ಮೊದಲು. ಹೊರಗಿನಿಂದ ಈ ನೋಟವನ್ನು ನೋಡಲು ೨ ಲಕ್ಷ ಜನರು ಬಂದಿದ್ದರಂತೆ. ಬೆಂಗಳೂರ ಮಹಾಜನರ ಇಚ್ಛೆಯನ್ನು ಮಹಾರಾಜರು ಈ ಮಾತಿನಲ್ಲಿ ಪೂರ್ತಿಗೊಳಿಸಿದರು.

ಬೆಂಗಳೂರ ಮುನಸೀಪಾಲ್ಟಿಯ ಇಂಜಿನಿಯರ ರಾಮಚಂದ್ರ ರಾಯರಿಗೆ ಒಮ್ಮಿಂದೊಮ್ಮೆ ಆರಿಗೂ ಕೇಳದೇ ಕಮೀಶನರರು ಕಾವೇ ೪ ತಿಂಗಳ ರಜೆ ಕೊಟ್ಟರು. ಇದನ್ನು ನಿಷೇಧಿಸುವ ಠರಾವನ್ನು ತಾವು ಸಭೆಯಲ್ಲಿ ತರುವೆವೆಂದು ೧೪ ಜನ ಸಭಾಸದರು ಸೂಚಿಸಿದರು. ಇದಕ್ಕೆ ಅಪ್ಪಣೆ ದೊರೆಯಲಿಲ್ಲವಾದ್ದರಿಂದ ೧೪ ಜನರೂ ತಮ್ಮ ಸಭಾಸದತ್ವಕ್ಕೆ ರಾಜೀನಾಮೆ ಕೊಟ್ಟರು. ಇದರಿಂದ ಗೊಂದಲವೆದ್ದಿದೆ. ಮುಂದೇನಾಗುವದೋ ನೋಡಬೇಕು.

ಯೇಡುಗಿರಿ ಎಂಬ ೯ ವರ್ಷದ ಬಾಲಿಕೆಯು ಶಿವಮೊಗ್ಗೆಯಲ್ಲಿ ಕೀರ್ತನಗಳನ್ನು ಮಾಡುತ್ತಿರುವಳು. ಇವಳ ತತ್ವವಿವೇಚನೆ, ರಾಗಜ್ಞಾನ, ಸ್ಪಷ್ಟವಾದ ಮಾತು ಎಲ್ಲರನ್ನೂ ಆಶ್ಚರ್ಯಗೊಳಿಸಿವೆ.

ಮುಂಬೈ ಸರಕಾರದ ಗ್ಯಾಝೀಟ.

ಜಿ ಎ ಹಿರೇಮಠರು ರತ್ನಾಗಿರಿ ಜಿಲ್ಲೆಯ ಹಾಗೂ ರಾವಬಹದ್ದೂರ ಪಾಲೇಕರರು ಬೆಳಗಾವಿ ಜಿಲ್ಲೆಯ ಡಿ. ಡಿ. ಕಲೆಕ್ಟರರಾಗುವರು.

ಈ ತ್ರೈಮಾಸಿಕದಲ್ಲಿ ಮುಂಬೈ ಇಲಾಖೆಯೊಳಗೆ ೬೪೯ ಪುಸ್ತಕಗಳು ಪ್ರಕಟವಾಗಿವೆ ಅವುಗಳಲ್ಲಿ ೧೨ ಪುಸ್ತಕಗಳು ಮಾತ್ರ ಕನ್ನಡದಲ್ಲಿವೆ!!! ಕನ್ನಡದ ವಾಙ್ಮಯ ವಿಕಾಸವು ಸೊಗಸಾಗಿ ಸಾಗಿದೆಯನ್ನಬೇಕಲ್ಲವೇ? ಈ ಪ್ರಕಟವಾದ ೧೨ ಪುಸ್ತಕಗಳಲ್ಲಿ ೧-೨ ಆಣೆ ಬೆಲೆಯ ಪುಸ್ತಕಗಳೇ ಹೆಚ್ಚು. ಕರ್ನಾಟಕದಲ್ಲಿ ಓದುವವರೂ ಇಲ್ಲ, ಬರೆಯುವವರೂ ಇಲ್ಲವೆಂದೂ ಅನ್ನಬಹುದೋ? ಮರಾಠಿ, ಗುಜರಾತಿ, ಇಂಗ್ಲೀಷಗಳಲ್ಲಿ ಪ್ರಕಟವಾಗುವ ಮಾಸಿಕ ಪುಸ್ತಗಳು ಈ ಯಾದಿಯಲ್ಲಿ ಸರಕಾರದಿಂದ ನಮೂದಿಸಲ್ಪಟ್ಟಿವೆ. ಆದರೆ ನಾವು ಅನೇಕ ಸಲ ಈ ಬಗ್ಗೆ ಟೀಕೆ ಮಾಡಿದ್ದರೂ, ಸರಕಾರವು ಅದನ್ನು ದುರ್ಲಕ್ಷಿಸಿ, ಈ ಸಲ ಸಹ ಕನ್ನಡ ಮಾಸಿಕ ಪುಸ್ತಕಗಳನ್ನು ಈ ಯಾದಿಯಲ್ಲಿ ನಮೂದಿಸಿಲ್ಲ; ಕಾಯದೇ ಮಂಡಲದ ಕರ್ನಾಟಕ ಪ್ರತಿನಿಧಿಗಳು ಈ ಬಗ್ಗೆ ಪ್ರಶ್ನೆ ಮಾಡಬಾರದೇ?

ಕರ್ನಾಟಕದ ಏಕೀಕರಣದ ಸುದ್ದಿ.

ಮುಂಬೈ ಕಾಯದೇ ಮಂಡಲವು ಇದೇ ತಿಂಗಳ ಕೊನೆಯಲ್ಲಿ ಸೇರುವದು. ಆಗ್ಗೆ ಕರ್ನಾಟಕದ ಏಕೀಕರಣದ ಬಗ್ಗೆ ಠರಾವನ್ನು ತರುವ ಬಗ್ಗೆ ಸೂಚನೆಯನ್ನು ಕಳಿಸಬೇಕಾಗಿ ಕರ್ನಾಟಕದ ಎಲ್ಲ ಕಾಯದೇ ಮಂಡಲದ ಸಭಾಸದರನ್ನೂ 'ಕನ್ನಡಿಗ'ನ ಸಂಪಾದಕರು ಪ್ರಾರ್ಥಿಸಿದ್ದರು ಪ್ರತಿಯೊಬ್ಬ ಕರ್ನಾಟಕದ ಪ್ರತಿನಿಧಿಯು ಈ ಸೂಚನೆಯನ್ನು ಕಳಿಸಿದರೆ ಮಾತ್ರ ಅದು ಸಭೆಯಲ್ಲಿ ಚರ್ಚೆಗೆ ಹೊರಬಲು ಅವಕಾಶವಾಗುವದು. ಇಲ್ಲವಾದರೆ ಈಗಿನಂತೆಯೇ ಈ ಪ್ರಶ್ನೆಯು ನೆನೆಗುದಿಗೆ ಬೀಳುವದೆಂದು ಪ್ರತಿನಿಧಿಗಳಿಗೆ ಅವರು ಸ್ಪಷ್ಟವಾಗಿ ಬರೆದಿದ್ದರು. ಆದರೂ ಎಲ್ಲ ಪ್ರತಿನಿಧಿಗಳ ಲಕ್ಷವು ಇತ್ತ ಕಡೆಗೆ ಹೋದಂತೆ ಕಾಣುವದಿಲ್ಲ. ಶ್ರೀಯುತ ಜೋಗರು ಮಾತ್ರ ಈ ಬಗ್ಗೆ ಸೂಚನೆ ಕೊಟ್ಟರುವೆವೆಂದು ಒಳ್ಳೇ ಅಭಿಮಾನದಿಂದ ತಿಳಿಸಿದ್ದು ಸಂತೋಷದ ಮಾತು. ಸರದಾರ ಮಹಾಬೂಬ ಅಲ್ಲಿಖಾನರು ೩—೪ ತಿಂಗಳಿಂದ ಅಸ್ವಸ್ಥವಾಗಿರುವದರಿಂದ, ಈ ಸಲ ಈ ಸಭೆಗೆ ಹೋಗುವದಾಗುವದಿಲ್ಲವೆಂದೂ, ಅದಕ್ಕಾಗಿ ಈ ಸೂಚನೆ ಕಳಿಸಿಲ್ಲವೆಂದೂ ತಿಳಿಸಿದ್ದಾರೆ. ಉಳಿದ ಕರ್ನಾಟಕದ ಪ್ರತಿನಿಧಿಗಳು ಏನೇನು ಮಾಡುವರೋ ನೋಡಬೇಕು.

ಕಲಾದಗಿಯಲ್ಲಿ ಶ್ರೀ ದೇಸಾಯಿ ಹಣಮಂತರಾಯರು ಅನೇಕ ಉದಾರದೃಷ್ಟಿಯಿಂದ ಹೊಸ ದವಾಖಾನೆಯನ್ನು ಸ್ಥಾಪಿಸಿದ್ದಾರೆ. ನೊನ್ನಿನ ಮಾರಿಕಾದಸಮಯದಲ್ಲಿ ಕಲಾದಗಿಯ ಸುತ್ತಲಿನ ಹಳ್ಳಿಗಳ ಅನೇಕರು ಇವರ ಚಿಕಿತ್ಸೆಯಿಂದ ಗುಣ ಹೊಂದಿದ್ದರಿಂದ ಇವರಲ್ಲಿ ಜನರ ವಿಶ್ವಾಸವು ವಿಶೇಷವಾಗಿದೆಯೆಂದು ಕೇಳುತ್ತೇವೆ. ಕಲಾದಗಿಗೆ ಮಳೆ ಚನ್ನಾಗಿ ಆಗಿದೆ.

ಗುಳೇದಗುಡ್ಡದಲ್ಲಿ ಶ್ರೀಗುರು ಬಸವೇಶ್ವರ ಲಾಯಬ್ರರಿಯೆಂಬ ಹೆಸರಿನ ವಾಚನಾಲಯವನ್ನು ಸ್ಥಾಪಿಸಿರುವರು. ವಾಚನಾಭಿರುಚಿಯುಳ್ಳವರು ಇಂಥವುಗಳಿಗೆ ಪ್ರೋತ್ಸಾಹಿಸುವದಾಗಿ ನಂಬಿಗೆ ಇದೆ. ಕರ್ನಾಟಕದಲ್ಲಿ ಸಾರ್ವಜನಿಕ ವಾಚನಾಲಯಗಳು ತೀರ ಕಡಮೆಯಿವೆ ಆದುದರಿಂದ ಹೊಸ ಹೊಸ ವಾಚನಾಲಯಗಳು ಬೇಗ ಬೇಗನೇ ಎಲ್ಲ ಕಡೆಗೂ ಉದ್ಭವವಾಗುವದು ಅತ್ಯಾವಶ್ಯಕ. ಗುಳೇದಗುಡ್ಡದಲ್ಲಿ ವಿಪುಲವಾಗಿ ಮಳೆಯಾಗಿದೆ.

ಪ್ರಸನ್ನ ವೆಂಕಟರು.

—:0O:—

(ಹೋದ ವಾರದಿಂದ ಮುಂದೆ ಸಾಗಿದ್ದು)

ಪ್ರಸನ್ನ ವೆಂಕಟರ ಜೀವಿತದ ಬಗ್ಗೆ ವಿಶದವಾದ ಸಂಗತಿಗಳಾವೂ ವಿಶ್ವಸನೀಯವಾಗಿ ಗೊತ್ತಿಲ್ಲ. ಆದರೂ ಗೊತ್ತಿದ್ದ ಮಟ್ಟಿಗೆ ಅವರ ಚರಿತ್ರೆಯನ್ನು ಹೀಗೆ ಹೇಳಬಹುದಾಗಿದೆ:— ಇವರು ಬಾಗಲಕೋಟೆಯ ಜೋಯಿಸರ ಮನೆತನದವರು. ಚಿಕ್ಕಂದಿನಿಂದ ಆಟನೋಟಗಳಲ್ಲಿಯೇ ಅವರ ಮನಸ್ಸು ಹೆಚ್ಚಾಗಿ ಹರಿಯುತ್ತಲಿದ್ದಿತು. ಹೀಗೇ ಅನೇಕ ದಿನಗಳು ಹೋದನಂತರ, "ನಾನು ಹುಟ್ಟಿ ಮಾಡಿದ್ದೇನು?" ಎಂಬ ವಿಚಾರವು ಅವರಿಗೆ ಹೊಳೆದು, ಅವರು ಅದರಲ್ಲಿಯೇ ಮಗ್ನರಾಗಿ, ಒಂದು ದಿನ ಫಕ್ಕನೇ, ತಿರುಪತಿಗೆ ಹೋಗುವದನ್ನು ನಿಶ್ಚಯಿಸಿ, ಕೂಡಲೇ ಹೊರಟರು. ನಡೆದು ಶ್ರಮಬಟ್ಟು, ತಿರುಪತಿಗೆ ಮುಟ್ಟಿದರು. ಸ್ನಾನ ಮಾಡಿ, ಒದ್ದೆ ಬಟ್ಟೆಯಿಂದ ಹೋಗಿ, ವೆಂಕಟೇಶದೇವರೆದುರಿನಲ್ಲಿ ನಿಂತು "ಹೇ, ಪ್ರಭೋ ನೀನು ನನ್ನನ್ನು ಹುಟ್ಟಿಸಿದ್ದೇಕೆ?" ಎಂಬದಾಗಿ ಕೇಳಿ, ಧ್ಯಾನದಲ್ಲಿ ತೊಡಗಿಕೊಂಡರು. ಸ್ವಲ್ಪಾವಕಾಶದಲ್ಲಿ "ಪ್ರಸನ್ನನಾಗಿರುವೆನು" ಎಂಬದಾಗಿ ಅವರಿಗೆ ಶ್ರೀ ಪ್ರಭುವು ಹೇಳಿದಂತಾಯಿಯಿತು! ಕೂಡಲೇ ವೆಂಕಟರಮಣನ ಮೇಲೆ ಒಂದು ಪದವನ್ನು ಕಟ್ಟಿ ಹಾಡಲಾರಂಭಿಸಿದರು. ಕಡೆಗೆ "ಪ್ರಸನ್ನ ವೆಂಕಟ"ವೆಂಬ ಮುದ್ರಿಕೆಯನ್ನು ಹಾಕಿದರು. ತಿರುಪತಿಯಲ್ಲಿ ಮುಂಜಾವಿನಿಂದ ರಾತ್ರಿಯ ವರೆಗೆ ನಡೆಯುವ ಎಲ್ಲ ಉತ್ಸವಕಾಲದಲ್ಲಿ, ಆ ಆ ಉತ್ಸವಕ್ಕೆಂದು ಪ್ರಸನ್ನ ವೆಂಕಟರು ಸಿದ್ಧಪಡಿಸಿದ ಹಾಡುಗಳನ್ನು ಭಕ್ತರು ಈ ಹೊತ್ತಿಗೂ ಹಾಡುತ್ತಿರುವರೆಂದು ಕೇಳುತ್ತೇವೆ

ತಿರುಪತಿಯಿಂದ ಬಾಗಲಕೋಟೆಗೆ ಒಂದ ಮೇಲೆ ಇವರು ತಮ್ಮ ನಿತ್ಯ ಪೂಜೆಯನ್ನು ಮಾಡಿ, ದೇವರ ಧ್ಯಾನದಲ್ಲಿರುವಾಗ್ಗೆ ಓರ್ವ ಹೊಲೆಯನು ಹೊರಗೆ ಬಂದು "ಜೋಯಿಸರೆಲ್ಲಿ! ನನಗೆ ಒಂದು ಮುಹೂರ್ತ ಬೇಕಾಗಿದೆ"ಯೆಂದು ಕೇಳಿದನಂತೆ. ಕೂಡಲೇ ಬಾಗಲಕೋಟೆಯಲ್ಲಿಯ ಈಗಿನ ಜೋಯಿಸರ ಮನೆತನದ ಮೂಲ ಪುರುಷನನ್ನು ಕರೆಸಿ "ಇನ್ನು ಮೇಲೆ ನನ್ನ ಜೋಯಿಸ್ಸಿಯ ಹಕ್ಕು ಬಾಧ್ಯತೆಗಳನ್ನೆಲ್ಲ ನಿಮಗೆ ಕೊಟ್ಟಿರುವೆನು" ಎಂದು ಅವರಿಗೆ ಹೇಳಿ, ತಾವು ಈ ವ್ಯವಸಾಯಕ್ಕೆ ತಿಲಾಂಜಲಿ ಕೊಟ್ಟು, ತಮ್ಮ ಭಗವದಾರಾಧನೆಗೆ ತೊಂದರೆ ಬಾರದಂತೆ ಮಾಡಿಕೊಂಡರಂತೆ.

ಮೈಸೂರಿನಲ್ಲಿ ಪ್ರಸನ್ನವೆಂಕಟರ ಪದಗಳನ್ನು ಹೆಚ್ಚಾಗಿ ಹಾಡುತ್ತಿರುವರು. ಅಲ್ಲಿಯ ಇವರ ಭಕ್ತರಾರಾದರೂ ಈ ಬಗ್ಗೆ 'ಕನ್ನಡಿಗ'ನ ಸಂಗಡ ಪತ್ರವ್ಯವಹಾರ ನಡಿಸಿ, ತಮ್ಮಲ್ಲಿದ್ದ ಪದಗಳ ಸಂಗ್ರಹದ ಲಾಭವನ್ನು ನಮಗೆ ಒದಗಿಸಿಕೊಟ್ಟರೆ, ಕನ್ನಡ ವಾಙ್ಮಯಕ್ಕೂ, ದಾಸರ ಶಿಷ್ಯರಿಗೂ, ಬಹು ಪರಿಯಿಂದ ಉಪಕಾರ ಮಾಡಿದಂತಾಗುವದು.

ಪ್ರಸನ್ನ ವೆಂಕಟರ ಕಾಲವು ನಿಶ್ಚಿತವಾಗಿಲ್ಲ. ಶ್ರೀ ಸತ್ಯಬೋಧರ ಸ್ತುತಿಪರವಾದ ಪದಗಳನ್ನು ದಾಸರು ಕಟ್ಟಿರುವದರಿಂದ, ಅವರು ೧೫೦ ವರ್ಷದ ಹಿಂದೆ ಬಾಳಿದರೆಂದು ಅನುಮಾನ ತೆಗೆಯಬಹುದಾಗಿದೆ. ಸತ್ಯಬೋಧರ ಸಮಕಾಲೀನರಿದ್ದರೋ ಅಥವಾ ಅವರ ನಂತರದಲ್ಲಿ ಇವರು ಪ್ರಸಿದ್ಧಿಗೆ ಬಂದರೋ ತಿಳಿಯದು. ಸವಣೂರಲ್ಲಿ ಇವರ ಬಗ್ಗೆ ಏನಾದರೂ ದಂತ ಕಥೆಯಿದ್ದರೆ, ಅಲ್ಲಿಯ ಮಧ್ವಮತಾಭಿಮಾನಿಗಳು ನಮ್ಮ ಸಂಗಡ ಪತ್ರವ್ಯವಹಾರ ಮಾಡಬೇಕಾಗಿ ಪ್ರಾರ್ಥನೆಯಿದೆ.

ಪ್ರಸನ್ನ ವೆಂಕಟರಾಯರಿದ್ದ ಮನೆಯು ಬಾಗಲಕೋಟೆಯ ಕಿಲ್ಲೆಯಲ್ಲಿ ಇನ್ನೂ ಇದೆ. ಅವರು ಪೂಜೆ ಮಾಡುತ್ತಿದ್ದ ಸ್ಥಾನದಲ್ಲಿ, ಅವರು ಪೂಜಿಸಿದ ದೇವರ ಮೂರ್ತಿ, ಗೋಪಾಳಬುಟ್ಟಿ, ಕೈಯಲ್ಲಿಯ ಚಿತ್ರ, ಹಾಗೂ ತಂಬೂರಿಗಳು ಈಗ್ಯೆಯೂ ಇವೆ. ಹೂವಿನ ಹಿಪ್ಪರಿಗೆಯ ದಾಸರಾದ ಮಧ್ವಾಚಾರ್ಯರು, ಇದೇ ತಂಬೂರಿಯಿಂದ ಅಲ್ಲಲ್ಲಿ ಸಂಚರಿಸಿ, ಈಗ್ಗೆ ಐದು ವರ್ಷಗಳಿಂದ ಅದರ ಪುಣ್ಯತಿಥಿಗೆ ದ್ರವ್ಯ ಸಂಪಾದನೆ ಮಾಡಿ, ಸಹಾಯ ಮಾಡುತ್ತಿರುವರು.

ಧಾರವಾಡದಲ್ಲಿ ಶ್ರೀ ಕೌಜಲಗೀ ಎಂಬುವವರು ಪ್ರಸನ್ನ ವೆಂಕಟರ ಭಾಗವತ ಕೀರ್ತನೆಯನ್ನು ಮುದ್ರಿಸುವ ಕಾರ್ಯ ಪ್ರಾರಂಭ ಮಾಡಿರುವರಾಗಿ ಕೇಳುತ್ತೇವೆ. ಅವರು ಆದಷ್ಟು ಬೇಗನೇ ಈ ಪ್ರಕಟನೆಯ ಕಾರ್ಯವನ್ನು ಮುಗಿಸುವರಾಗಿ ಕೋರುತ್ತೇವೆ

ವೈ. ಕೆರೂರ ವಾಸುದೇವಾಚಾ-

-ರ್ಯರೂ ಕ್ರಮಿಕ ಪುಸ್ತಕಗಳೂ.

ಕನ್ನಡ ಐದನೆ, ಪುಸ್ತಕವು.

(ಲೇಖಾಂಕ—೩)

ಬೀರಬಲನ ಮೇಲೆ ಮದ್ದಾನೆಯನ್ನು ಹಾಕಿದ ಕನಿಷ್ಠ ಅಪರೂಪವೇ! (ಈ ಪುಸ್ತಕದಲ್ಲಿಯ ಯಾವ ಕಥೆಗಳಾದರೂ ಎಲ್ಲ ಹಸರಿಡುವಂತಿವೆ!) ಅಕಬರ ಬಾದಶಹನ ಪೇಟ್ಟಾಗಿನಿಂದ ಆ ಇಕ್ಕಟ್ಟಿನ ಓಣಿಗ ಸಮೀಪದಲ್ಲಿಯೇ ಇತ್ತಂತೆ! ಟೆರಾರ ತಿಪ್ಪಣ್ಣನ ಮನೆಯ ಮೇಲೆ ಅಕಬರನು ನಿಂತಿದ್ದನೆಂದು ಕಲ್ಪಿಸೋಣ! ಟಿಕಿಸ್ಸೆ ಮಾಡಬೇಡಿರಿ ಮುಂದೆ ಚಮತ್ಕಾರವಿದೆ! ಬೀರಬಲ್ಲನು ಎಂದು ಬರುವನೋ ಯಾವಾಗ ಬರುವನೋ ಎಂಬದನ್ನರಿಯದ ಆ ಮದ್ದಾನೆಯು ಓಣಿಯಲ್ಲಿ ನಿಂತು ಎಂಟೊಂಬತ್ತು ದಿವಸ ಕಳೆದುಕೊಂಡಿತ್ತು. ಆ ಓಣಿಯ ಜನರ ಗತಿಯೇನೆಂದು ಕೇಳಬೇಡಿರಿ! ಕಡೆಗೊಮ್ಮೆ ಬೀರಬಲ್ಲನು ಕಾಲಿಲೆ ನಡೆಯುತ್ತ ಬಂದನು. ಮೇಣೆ, ಪಲ್ಲಕ್ಕಿ ರಥ, ಕುದುರೆಗಳು ಅವನಿಗಿಲ್ಲ? ಜೋಡುಗಳನ್ನಾದರೂ ಮೆಟ್ಟಿದ್ದನೋ ಇಲ್ಲವೋ ಕಥೆಯಲ್ಲಿ ಹೇಳಿಲ್ಲ. ಬೀರಬಲ್ಲನು ಆ ಓಣಿಯಲ್ಲಿ ಬಂದನೆಂಬ ವಾರ್ತೆಯನ್ನು ಮಾವುತನು ಬಾದಶಹನಿಗ ಅರುಹ ಹೋದನು. ತಾನು ಮರಳಿ ಬರುವವರೆಗೆ ಓಣಿಯನ್ನು ಬಿಟ್ಟು ಹೋಗತಕ್ಕದ್ದಲ್ಲವೆಂದು ಅವನು ಬೀರಬಲ್ಲನಿಗೆ ದುರಾಜ್ಞೆಯನ್ನಿಟ್ಟೇ ಹೋಗಿರಬಹುದು. ಮಾವುತನು ಬಂದು ತಿಳಿಸದಿದ್ದರೆ ಬಾದಶಹನಾದರೂ ಆ ನೋಟವನ್ನು ನೋಡಲಿಕ್ಕೆ ಬರುವದಂತು? (ಕಥೆಗಾರನ ಚಾತುರ್ಯವಿದು!) ಬೀರಬಲನ ಮೇಲೆ ಮಾವುತನು ಹಾಗೂ ಹೀಗೂ ಮಾಡಿ ಆನೆಯನ್ನು ಹಾಕಿದನು. ಹಿಂತಿರುಗಿ ಹೋಗಲಿಕ್ಕೆ ಬೀರಬಲ್ಲನಿಗೆ ಬರುತ್ತಿತ್ತೋ, ಮುಂದೆ ಯಾರಾದರೂ ಅವನ ಹಾದಿಯನ್ನು ಕಟ್ಟಿದ್ದರೋ ತಿಳಿಯದು! ಅಷ್ಟರಲ್ಲಿ ಒಂದು ನಾಯಿಯು ಬಂದಿತು. ನಾಯಿಯು ಪ್ರಸಂಗಾವಧಾನವನ್ನಾದರೂ ನೋಡಿರಿ! ಹೇಗೆ ಸಮಯಕ್ಕೆ ಬಂದೊದಗಿತು!!! ನಾಯಿಯು ಬರುವದೆಂಬ ಧೈರ್ಯದಿಂದ ಬೀರಬಲ್ಲನು ಆಲೋಚಿಸುತ್ತಲೇ ಇದ್ದನು. ನಾಯಿಯನ್ನು ಕಂಡಾಕ್ಷಣವೇ ಬೀರಬಲ್ಲನು ಅದನ್ನೆತ್ತಿ (ಕೈಕಾಲು ಮೋರೆಗಳನ್ನು ತೊಳಕೊಂಡು ಸ್ವಚ್ಛವಾಗಿಯೇ ಬಂದಿತ್ತು!!) ಆನೆಯ ಕುಂಭಸ್ಥಳಕ್ಕೆ ನೆಟ್ಟನೆ ಗುರಿಯಿಟ್ಟು ಎಸೆದನು.

ಗುರುತ್ವಾಕರ್ಷಣ ಗುರುತ್ವ ಮಧ್ಯಗಳ ತತ್ವಗಳು ಕಥೆಗಳಲ್ಲಿ ನಡೆಯುವದಿಲ್ಲ. ಹಾಗೆ ತೂರಿದ ನಾಯಿಯ ತಲೆಯು ನೆಟ್ಟನೆ ಮೇಲಾಗಿಯೇ ನಿಂತಿರಲಿಲ್ಲವೆಂದು ಯಾರು ಹೇಳುತ್ತಾರೆ? ನಾಯಿಯು ತನ್ನೆರಡೂ ಮುಂಗಾಲುಗಳನ್ನು ಆನೆಯ ಕುಂಭಸ್ಥಳಕ್ಕೆ ಅಂಟಿಸಿಕೊಂಡು ತನ್ನ ಉಗುರುಗಳಿಂದ (ನಾಯಿಯ ಉಗುರುಗಳು ತೀಕ್ಷ್ಣವಾಗಿರುವವೆಂಬದನ್ನು, ಬಾಲಕರೆ, ನೀವು ನಾಯಿಯ ಪಾತ ಲ್ಲಿ ಓದಿರುವಿರಾದೀತು!) ಗಟ್ಟಿಯಾಗಿ ಅದನ್ನು ಹಿಡುಕೊಂಡಿತು. Absurd! most absurd!! hopelessly absurd!!!

ನನಗೆ ಹೊಳೆದಂತೆ

ವೈ. ವಾಸುದೇವಾಚಾರ್ಯರ ಭಾವಚಿತ್ರ ಅನಾವರಣ ಸಮಾರಂಭಕ್ಕೆ ಆಮಂತ್ರಣವಿದ್ದರೂ, ಸ್ಥಾನಿಕ ಅಧಿಕಾರಿಗಳಾರು ಆ ಸಭೆಗೆ ಬರಲಿಲ್ಲ. ಮೋಟಾರು ತೆಗೆದುಕೊಂಡು ಅವರನ್ನು ಕರೆಯಲಿಕ್ಕೆ ಸಕಾಲದಲ್ಲಿ ಕಾರ್ಯದರ್ಶಿಗಳು ಹೋಗಲಿಲ್ಲವಾದ್ದರಿಂದ, ಈ ಅವರ ಅಕ್ಷಮ್ಯವಾದ ತಪ್ಪಿಗಾಗಿ ಅಧಿಕಾರಿಗಳು ಮುನಿದುಕೊಂಡು ಬಂದಿರಲಿಕ್ಕಿಲ್ಲವೆಂದು ನಾನು ತಿಳಿದುಕೊಂಡಿದ್ದೆ. ಆದರೆ ಕೇವಲ ಸಾರ್ವಜನಿಕ ಬಿನ್ನಹ ಪತ್ರಿಕೆಗಳ ಆಮಂತ್ರಣದಿಂದ ಸಂತುಷ್ಟರಾಗಿ, ಇಲ್ಲಿಯ ಮಾಮಲೇದಾರರಾದ ಶ್ರೀ ದೇಶಪಾಂಡೆಯವರು ಶ್ರೀ ಕಲ್ಯಾಣಮ್ಮನವರ ವ್ಯಾಖ್ಯಾನಕ್ಕೆ ಬಂದುದಲ್ಲದೆ, ಸ್ವತಃ ತಾವೇ ಬಂದೆನೆಂದು ಮಾತನ್ನು ಹೇಳಿ ಹೋದ್ದರಿಂದ ನನ್ನ ತಪ್ಪು ಭಾವನೆಯನ್ನು ತಿದ್ದಿಕೊಳ್ಳುವ ಪ್ರಸಂಗವು ಬಂದುದು ನನ್ನ ಸುದೈವ! ಆದರೆ ಉಳಿದ ದೊಡ್ಡ ದೊಡ್ಡ ಅಧಿಕಾರಿಗಳ ಬಗ್ಗೆ ಉಂಟಾದ ಕಲ್ಪನೆಯು ಹಾಗೆಯೇ ಇದೆ! ಈ ಭ್ರಮನಿರಸನವು ಆವಾಗ್ಯೆ ಆಗುವದೋ ನೋಡಬೇಕು. ‡ ‡

ವೈ. ವಾಸುದೇವಾಚಾರ್ಯರ ಭಾವಪಟ ಅನಾವರಣೆಯೆಂದರೆ ಅದೊಂದು ಕನ್ನಡಿಗರಿಗೆ ಅಭಿಮಾನಾಸ್ಪದವಾದ ವಾಙ್ಮಯೋತ್ಸವವಷ್ಟೇ? ಆದರೆ ಈ ಬಗ್ಗೆ ಕನ್ನಡನಾಡಿನವರ ಪ್ರೀತಿಗೆ ಪಾತ್ರವಾದ 'ಕನ್ನಡ ಧುರೀಣ' ಕರ್ನಾಟಕ ವಿದ್ಯಾವರ್ಧಕ ಸಂಘದ 'ವಾಗ್ಭೂಷಣ' ವಾಙ್ಮಯ ವಿಚಾರದಲ್ಲಿ ಯಾವಾಗಲೂ ಅರ್ಭಟಿಸುವ 'ಸಂದೇಶ' ಇತ್ತಿತ್ತ ಕನ್ನಡ ವಾಙ್ಮಯದ ಬಗ್ಗೆ ಹೆಚ್ಚು ಪ್ರೀತಿಯನ್ನು ತೋರಿಸುತ್ತಿರುವ "ಸ್ವದೇಶಾಭಿಮಾನಿ" ಮೊದಲಾದ ಪತ್ರಿಕೆಗಳಲ್ಲಿ ಈ ಉತ್ಸವದ ಬಗ್ಗೆ ಯಾವ ಆನಂದವೂ ಪ್ರಕಟಿಸಲ್ಪಡಲಿಲ್ಲ! ರಾಜಕೀಯ ರಣಾಂಗಣದಲ್ಲಿ ತೊಡಕಿದ 'ಸತ್ಯಾಗ್ರಹಿ', ಜಗತ್ತೆಂದರೆ ಕೇವಲ ಮೈಸೂರ ಪ್ರಾಂತವೆಂದು ಭಾವಿಸಿದ, ಮೈಸೂರ ಪ್ರಾಂತದ ಪತ್ರಿಕೆಗಳು, ವೀರಶೈವರ ಪ್ರಗತಿಯಲ್ಲಿ ತೊಡಗಿರುವ, 'ಮುಂದಾಳು' 'ಕರ್ನಾಟಕ ವೈಶ್ಯ' ("ಲೋಕಮತವು ಅಪವಾದವಾಗಬಹುದಾಗಿತ್ತು! ಆದರೆ ಹಾಗೆ ಆಗಲಿಲ್ಲವೆಂಬುದು ವಿಷಾದದ ಮಾತು!) ಇವೇ ಮೊದಲಾದ ಪತ್ರಿಕೆಗಳಿಗೆ ಈ ವಾಙ್ಮಯೋತ್ಸವದ ಮಹತ್ವವು ಹೊಳೆಯದಿದ್ದುದು ಆಶ್ಚರ್ಯವಲ್ಲವಷ್ಟೇ?

—ಓದುಗ.

ಖಾದಿಯ ಸುದ್ದಿ.

ಮಹಾತ್ಮರು ಚಿಕ್ಕ ಮಗಳೂರಿಗೆ ಹೋದಾಗ್ಗೆ ಅಲ್ಲಿಯ ಪೋಲೀಸ ಸುಪರಿಂಟೆಂಡರೂ, ಇಂಜನಿಯರರೂ, ನಖಶಿಖಾಂತ ಖಾದೀ ಉಡಪನ್ನೇ ಧರಿಸಿದ್ದನ್ನು ಕಂಡು ಮಹಾತ್ಮರು ಆನಂದಿತರಾದರು.

ಸರಕಾರೀ ಕಚೇರಿಗಳಲ್ಲಿ ಖಾದಿಯ ಉಡುಪೇ ಇರಬೇಕಾಗಿಯೂ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಲಷ್ಕರೀ ಶಿಕ್ಷಣದ ಸೌಕರ್ಯಗಳನ್ನುಂಟು ಮಾಡಿ ಕೊಡಬೇಕಾಗಿಯೂ ಬಿಹಾರ ಹಾಗೂ ಉತ್ಕಳ ಪ್ರಾಂತದ ಕಾಯದೇ ಮಂಡಲದಲ್ಲಿ ಠರಾವುಗಳಾಗಿವೆ.

ಸ್ವಲ್ಪ ವಿನೋದ.

ತಂದೆ— ಮಗೂ, ಹೀಗೆ ಮನಬಂದಂತೆ ವೆಚ್ಚ ಮಾಡಬೇಡ. ಇದ್ದದ್ದರಲ್ಲಿ ಸಂತುಷ್ಟನಾಗಿರೆಂದು ನಾನು ಹೇಳಿದ್ದಿಲ್ಲವೇ? ನಿನ್ನಲ್ಲಿ ಮನೋನಿಗ್ರಹದ ಕೊರತೆಯಿದೆ

ಮಗ— ಹಾಗಿಲ್ಲ ತಾತಯ್ಯನವರೇ, ಮನೋನಿಗ್ರಹಕ್ಕೆ ಏನೂ ಕೊರತೆಯಿಲ್ಲ! ಹಣಕ್ಕೆ ಮಾತ್ರ ಕೊರತೆಯಿದೆ!

ಬಾಗಲಕೋಟೆಯ ಸಾರ್ವಜನಿಕ ಗಜಾನನೋತ್ಸವದ ಜಮಾಖರ್ಚಿನ ವರದಿಯು.

ಜಮಾ:— ೨೭-೧೦-೦ ಹೋದ ವರ್ಷದ ಶಿಲ್ಕು; ೩೧-೩-೦ ಈ ವರ್ಷ ಭಿಕ್ಷಾದಲ್ಲಿ ಕೂಡಿದ ಹಣವು; ೫೮-೧೩-೦ ಒಟ್ಟು ಜಮಾ.

ಖರ್ಚು:— ೯-೧೦-೬ ಅಲಂಕಾರ ಸಲುವಾಗಿ; ೪-೧೫-೯ ಪೂಜಾಸಾಹಿತ್ಯ (ಗಜಾನನ ಸಹಿತ.) ೨—೪—೬ ದೀಪದ ಸಲುವಾಗಿ; ೩—೮—೦ ಬಜಂತ್ರಿ; ೨—೫—೦ ದಕ್ಷಿಣೆ; ೨೧-೧೩-೬ ಕೀರ್ತನೆ ಮತ್ತು ಪುರಾಣದ ಸಲುವಾಗಿ; ೩—೦—೦ ಪ್ರವಾಸದ ಸಮ್ಬಂಧ; ೧—೦—೦ ಪೋಸ್ಟು; ೧—೦—೦ ಹಸ್ತಪತ್ರಿಕೆ; ೪೯—೯—೩ ಒಟ್ಟು ಖರ್ಚು; ೯—೩—೯ ಇಂದಿಗೆ ಶಿಲ್ಕು.

ಈ ವರೆಗೆ ಆದ ಜಮಾ ಮತ್ತು ಖರ್ಚಿನ ತಪಶೀಲು ಮೇಲೆ ಕೊಟ್ಟ ಪ್ರಕಾರ ಇದ್ದು ಮುಂದೆ ಅಲ್ಪಸ್ವಲ್ಪ ಜಮೆ ಖರ್ಚಿನ ಬಾಬು ಉಳಿದೆ, ಜಮಾಖರ್ಚ ಆದ ಪ್ರಕಾರ ತಿಳಿಸುತ್ತೇನೆ.

ಗಜಾನನೋತ್ಸವಕ್ಕೆ ಬಾಗಲಕೋಟೆಯ ನಾಗರಿಕರೆಲ್ಲ ಸಹಾಯ ಮಾಡಿದ್ದರಿಂದ ಅವರನ್ನೂ ಶ್ರೀ ನರಗುಂದ ಜಯರಾಯರು, ಶ್ರೀ ಜೋರಾಪೂರ ಕೃಷ್ಣರಾಯರು, ಹಾಗೂ ಗುರುರಾಯರು ಪರ್ವತೀಕರ ರಂಗರಾಯರು, ಮಂಗಳವೇಢೆ ಶ್ರೀನಿವಾಸರಾಯರು ಮತ್ತು ಹಿಂ. ಸೇ.ದಲದ ಸ್ವಯಂಸೇವಕರು ಸ್ವಯಂಸ್ಫೂರ್ತಿಯಿಂದ ಕಾಲಕಾಲಕ್ಕೆ ಸಹಾಯ ಮಾಡಿದ್ದಕ್ಕಾಗಿ ಇವರನ್ನೆಲ್ಲ ಈ ಬಗ್ಗೆ ಧನ್ಯತೆಯ ಅಭಿನಂದಿಸದೇ ಇರಲಾರೆನು.

ತಮ್ಮ,

ಬಾಗಲಕೋಟೆ, ತಾ| ೧೨-೯-೨೭ | ನೀರಲಕೇರಿ ಶ್ರೀನಿವಾಸರಾಯರು, ತಾತ್ಪೂರ್ತಿಕ ಕಾರ್ಯದರ್ಶಿ.

ಮದ್ರಾಸದಲ್ಲಿ ರಾಷ್ಟ್ರೀಯ ಧ್ವಜದ ಗೊಂದಲ.

ಮದ್ರಾಸ ಮುನಸಿಪಾಲ್ಟಿಯ ಕಟ್ಟಡದ ಮೇಲೆ ಯಾವ ಧ್ವಜವನ್ನು ಹಾರಿಸತಕ್ಕದ್ದೆಂಬ ಬಗ್ಗೆ ವಿಚಾರಿಸಲು ಒಂದು ಉಪಮಂಡಲವು ಏರ್ಪಟಾಗಿದೆ. ಕಾಂಗ್ರೆಸ್ಸ ಧ್ವಜವನ್ನೇರಿಸಬೇಕೆಂದು, ಸ್ವರಾಜ್ಯವಾದಿಗಳೂ, ಚರಕದ ಧ್ವಜವನ್ನೇರಿಸಬೇಕೆಂದು, ಬ್ರಾಹ್ಮಣೇತರರೂ, ಯೂನಿಯನ್ ಜಾಕೇ ಇರತಕ್ಕದೆಂದು ಯುರೋಪಿಯನರೂ, ಚಂದ್ರನ ಚಿತ್ರವುಳ್ಳ ಧ್ವಜವಿರಬೇಕೆಂದು ಮುಸಲ್ಮಾನರೂ ವಾದಿಸಿದರು. ಕಡೆಗೆ ಈ ನಾಲ್ಕು ಧ್ವಜಗಳಿಂದ ಕೂಡಿದ ಹೊಸದೊಂದು ಧ್ವಜವನ್ನು ಸಿದ್ಧಪಡಿಸಬೇಕೆಂದೂ ಅದೇ ರಾಷ್ಟ್ರೀಯ ಧ್ವಜವೆಂದು ತಿಳಿಯಬೇಕೆಂದೂ ನಿರ್ಧಾರವಾಯಿತು. ಉಪಮಂಡಲದ ಈ ನಿರ್ಣಯವು, ಮುನಸಿಪಾಲ್ಟಿಯ ಸಭೆಯಲ್ಲಿ ಚರ್ಚೆಗಾಗಿ ಬಂದಾಗ್ಯೆ ಯಾರು ಏನೇನೆಂದು ತಲೆ ಒಡೆದುಕೊಳ್ಳುವರೋ ನೋಡಬೇಕು. ಇದೇ ಬಗೆಯಾಗಿ ರಾಷ್ಟ್ರಗೀತೆಯನ್ನು ಯೋಜಿಸುವ ಉಪಮಂಡಲವೂ ಏರ್ಪಾಡಾಗಿದೆ. ಅದರ ನಿರ್ಣಯವು ಏನೆಂದು ಆಗುವದೋ ಅದನ್ನೂ ನೋಡಬೇಕು.

ಕಾಲುಗಾಡಿಯಿಂದ ಭೂಪ್ರದಕ್ಷಿಣೆ.

ಮುಂಬೈಯಿಂದ ಮೂರು ವರ್ಷದ ಕೆಳಗೆ ಮೂವರು ಪಾರ್ಸೀ ತರುಣರು ಸಾಯಕಲ್ಲಿನ ಮೇಲಿಂದ ಹೊರಟು ಪೃಥ್ವಿಯನ್ನೆಲ್ಲ ಸುತ್ತಿ ಕಲಕತ್ತೆಗೆ ಬಂದಿರುವರು ಅಲ್ಲಿಂದ ಮದ್ರಾಸ, ಬೆಂಗಳೂರ, ಧಾರವಾಡಗಳ ಮೇಲಿಂದ ಹಾಯ್ದು ಮುಂಬೈಗೆ ಹೋಗುವರು. ಹೀಗೆ ಕಾಲುಗಾಡಿಯಿಂದ ಭೂಪ್ರದಕ್ಷಿಣೆಯಲ್ಲಿ ಜಯ ಸಂಪಾದಿಸಿದವರೆಂದರೆ ಇವರೇ ಜಗತ್ತಿನಲ್ಲಿ ಅಗ್ರಗಣ್ಯರು. ಪ್ರತಿಯೊಂದು ರಾಷ್ಟ್ರದವರು ಇವರನ್ನು ಅಭಿನಂದಿಸಿರುವರು. ಮುಂಬೈಯವರು ವಿಶೇಷ ಉತ್ಸಾಹದಿಂದ ಇವರನ್ನು ಬರಮಾಡಿಕೊಳ್ಳಬೇಕೆಂದು ಯೋಚಿಸುತ್ತಿರುವರು ಬೆಂಗಳೂರಿನಿಂದ ಪುಣೆಗೆ ಹೋಗುವ ರಾಜಮಾರ್ಗದಿಂದಲೇ ಇವರು ಪ್ರಯಾಣ ಮಾಡತಕ್ಕವರಿದ್ದಾರೆ. ಆದುದರಿಂದ ಈ ಬೀದಿಯಲ್ಲಿದ್ದ ಕರ್ನಾಟಕದ ಮುಖ್ಯ ಪಟ್ಟಣಗಳು ಇವರಿಗೆ ಸತ್ಕರಿಸುವವಾಗಿ ನಾವು ನಂಬುತ್ತೇವೆ.

ಸ್ತ್ರೀವೇಷದ ಗಂಡಸು!

ಅಹಮ್ಮದಾಬಾದದ ಮುನಸೀಪಾಲ್ಟಿಯ ಆರಿಸುವಿಕೆಯಲ್ಲಿ ತಾನು ಹುರಿಯಾಳಾಗಿ ನಿಲ್ಲುವೆನೆಂದು ಅರ್ಜಿಕೊಡುವಾಗ್ಯೆ ಗುಲಾಮಹುಸೇನ ಎಂಬುವನೊಬ್ಬನು ಸ್ತ್ರೀವೇಷದಲ್ಲಿ ಬಂದಿದ್ದನು! ಇವನು ಸೂಳೆಯರ ಕುಲದವನು. ಆದುದರಿಂದ ಸೂಳೆಯರಿಗೆ ಪ್ರಿಯನಾಗಿದ್ದ ವೇಷ ಧರಿಸಿ ಬಂದಿದ್ದನಂತೆ! ತಮ್ಮ ಪ್ರತಿನಿಧಿಯೊಬ್ಬನು ಮುನಸೀಪಾಲ್ಟಿಯಲ್ಲಿರುವದು ಆವಶ್ಯಕವೆಂದು ಪಾತರದವರಿಗೆ ಕಂಡು ಬಂದದ್ದರಿಂದ ಅವರೆಲ್ಲ ಕೂಡಿ ಗುಲಾಮ ಹುಸೇನನನ್ನು ನಿಲ್ಲಿಸಿರುವರು. ಇದರಿಂದ ಮುಸಲ್ಮಾನರು ಸಂತಾಪಗೊಂಡಿರುವರಂತೆ!

ಹಿಂದುಸ್ಥಾನ.

ಉತ್ಕಲ ದೇಶದಲ್ಲಿ ಭಯಂಕರವಾದ ನೆರೆ ಬಂದು ಅನೇಕರಿಗೆ ಹಾನಿಯಾಗಿದ್ದರೂ, ಇತಿಹಾಸ ದೃಷ್ಟಿಯಿಂದ ಈ ಮಹಾನದಿಯು ಬಂದುದು ಮಹತ್ವದ್ದಾಗಿದೆ. ಮಯೂರಭಂಗ ಸಂಸ್ಥಾನದ ಜಾಮುನ ಘಾಟಿಂಬಲ್ಲಿ ಮಹಾನದಿಯ ಸೆಳವಿನಿಂದ ಒಂದು ಭಾಗದಲ್ಲಿಯ ಭೂಮಿಯು ಒಳ್ಳೇ ಆಳವಾಗಿ ಕೊರಕಲಾಗಿದೆ. ಅಲ್ಲಿ ಹಳೆಯ ಕಟ್ಟಡಗಳಿದ್ದದು ಗೋಚರವಾಗಿದೆ ಆ ಕಟ್ಟಡದಲ್ಲಿ ೧೧-೧೨ ನೇ ಶತಮಾನದ ಶಿಲಾಲಿಪಿಗಳೂ, ೪ನೇ ಶತಮಾನದ ರೋಮ ದೇಶದ ನಾಣ್ಯಗಳೂ ದೊರೆತಿವೆ. ಇವೆಲ್ಲ ಮಹತ್ವದ್ದಾಗಿವೆಯೆಂದು ತಜ್ಞರ ಮತ. ಈಗ ಆ ಭೂಮಿಯ ಭಾಗವನ್ನು ಅಗಿಸುವ ಕಾರ್ಯವು ನಡೆದಿದೆ.

ಹಿಂದುಸ್ಥಾನದ ಅನೇಕ ಪಟ್ಟಣಗಳಲ್ಲಿ ಮಹಮ್ಮದ ಪೈಗಂಬರ ಜಯಂತ್ಯುತ್ಸವವು ಆಚರಿಸಲ್ಪಟ್ಟಿತು. ಕಾಶಿಯಲ್ಲಿ ಹಿಂದೂ ಜನರು ಸಹ ಈ ಸಭೆಗೆ ಹೋಗಿದ್ದರು. ಬಾಬೂ ಭಗವಾನದಾಸರ ವ್ಯಾಖ್ಯಾನವೂ ಆಯಿತು.

ಮದ್ರಾಸ ಕರ್ನಾಟಕ.

'ಪ್ರಜಾಬಂಧು'ವೆಂಬದೊಂದು ತೆಲಗು ಲಿಪಿ-ಕನ್ನಡ ಭಾಷೆಯ ವಾರ ಪತ್ರಿಕೆಯು 'ಕನ್ನಡಿಗ'ನ ಭೆಟ್ಟಿಗಾಗಿ ಬಂದಿದೆ. ಮದ್ರಾಸದ ಅದ್ಯಾರದಲ್ಲಿ ಮುದ್ರಿತವಾಗಿ, ಪ್ರಕಟವಾದುದು ಹಾಗೂ ಬಳ್ಳಾರಿಯಿಂದಲೇ ಪೋಷ್ಟ ಮಾಡಲ್ಪಡುತ್ತದೆ. ಅದರ ಮುಖಪತ್ರದ ಮೇಲೆ ಬಳ್ಳಾರಿಯೆಂದಿದೆ! ಆದುದರಿಂದ ಇದರ ಕುಲಗೋತ್ರಗಳು ನಮಗೆ ಚನ್ನಾಗಿ ತಿಳಿಯದು.

ಸೊಂಡೂರ ಸಂಸ್ಥಾನದ ಗಾದಿಗೆ ಮೃತ ರಾಜರ ಮಗನ ಹೊರ್ತಾಗಿ ಐದು ಜನರು ಬಾಧ್ಯರಿರುವರು. ಗಜೇಂದ್ರಗಡದ ಘೋರ್ಪಡೆ ಮನೆತನದವರಿಬ್ಬರು. ಕಾಪ್ಸೆಯ ಘೋರ್ಪಡೆ ಮನೆತನದವರೊಬ್ಬರು; ಹಾಗೂ ದತ್ತವಡ ಘೋರ್ಪಡೆ ಮನೆತನದವರಿಬ್ಬರು. ಇವರೆಲ್ಲ ತಮ್ಮ ತಮ್ಮ ಹಕ್ಕು ಬಾಧ್ಯಗಳ ಬಗ್ಗೆ ಬೇಗನೇ ಬರೆದುಕೊಳ್ಳಬೇಕೆಂದು, ಬ್ರಿಟೀಶ ಸರಕಾರದವರು ಸ್ಥಾನಿಕ [illegible] ತಿಳಿಸಿದ್ದಾರೆ. ಇದನ್ನು ಸರಕಾರದವರು ಬೇಗನೇ ಯೋಚಿಸತಕ್ಕವರಿದ್ದಾರೆ. ಏಜಂಟರು ಸೊಂಡೂರಿಗೆ ಬಂದು ಹೋದರು. ರಾಜರ ಮಗನನ್ನೇ ಆರಿಸಬೇಕೆಂದು ಪ್ರಜೆಗಳೆಲ್ಲ ಅರ್ಜಿಕೊಟ್ಟಿರುವರು.

ಮುಂಬೈ ಕರ್ನಾಟಕ.

ಕೊಲ್ಹಾಪುರದಲ್ಲಿ ಅನಂತ ಚತುರ್ದಶಿಯ ದಿನ ಸರಕಾರದ ಕಟ್ಟಳೆಗಳನ್ನನುಸರಿಸಿ ಗಣಪತಿಯ ಮೆರವಣಿಗೆ ಸಾಗಿದಾಗ್ಯೆ, ಜಾತಿಕ ಮಸೀದೆಯ ಹತ್ತರ ಅದು ಬಂದಾಕ್ಷಣವೇ ಮುಸಲ್ಮಾನರು ಕಲ್ಲು ಒಗೆಯಲಾರಂಭಿಸಿದರು, ಕೂಡಲೇ ಹಿಂದೂ—ಮುಸಲ್ಮಾನರಲ್ಲಿ ಕಲಹವುಂಟಾಗಿ, ೩೦ ಜನರು ಒಟ್ಟರೆ [illegible].

ಎರಡು ತಿಂಗಳಗಳ ಒಳಗೆ ಯಾವ ಬಗೆಯ ಧಾರ್ಮಿಕ [illegible] ಕೊಲ್ಹಾಪುರದಲ್ಲಿ ಹೊಂದದಾರದಾಗಿ ಮ್ಯಾಜಿಸ್ಟ್ರೇಟರು ಕೊಟ್ಟ ಆಜ್ಞೆಯನ್ನು ನಿಷೇಧಿಸಲಿಕ್ಕೆ ಕೊಲ್ಹಾಪುರದ ಹಿಂದೂ ನಾಗರಿಕರ ಪ್ರಚಂಡ ಸಭೆಯು ಕಳೆದ ವಾರದಲ್ಲಿ ನೇರಿದ್ದಿತು

ಕುರುಂದವಾಡದ (ಹಿರಿಯ ಮನೆತನದ) ಶ್ರೀಮಂತ ಸರಕಾರ ಅಣ್ಣಾಸಾಹೇಬ ಪಟವರ್ಧನರು ೧೦ನೇ ತಾ॥ ದಿನ ಬೆಳಗ್ಗೆ ಮೃತರಾದರು. ಮೂರು ವರ್ಷಗಳಿಂದ ಇವರು ಅರ್ಧಾಂಗವಾಯುವಿನಿಂದ ಕಷ್ಟಪಡುತ್ತಲೇಯಿದ್ದರು. ೧೯೦೭ ರಲ್ಲಿ ಇವರು ಪಟ್ಟವೇರಿದ್ದರು. ಆವರ ಚಿಕ್ಕ ಹೆಂಡತಿಗೂ, ೮ ವರ್ಷದ ಬಾಲಕನಿಗೂ, ಪ್ರಜೆಗಳಿಗೂ ಈ ದುಃಖದಲ್ಲಿ ನಾವು ಸಮಭಾಗಿಗಳಾಗಿರುವೆವೆಂದು ವಿಶ್ವಾಸಪೂರ್ವಕವಾಗಿ ತಿಳಿಸುತ್ತೇವೆ

ಅತಿ ಮಳೆಯಿಂದ ಹಳ್ಳಗಳು ತುಂಬಿದ್ದ ಮೂಲಕ ಅಳ್ನಾವರದ ಹತ್ತಿರ ೧೨ನೇ ತಾ॥ ದಿನ ಬೆಳಗಿನ ೬॥ ಗಂಟೆಗೆ ಪ್ರವಾಸಿಗಳಿದ್ದ ಮಿಕ್ಸ ರೇಲ್ವೇ ಗಾಡಿಯ ಇಂಜೀನು ಹಾಗೂ ೧೨ ಡಬ್ಬಗಳು ನೆಲಕ್ಕುರುಳಿದವು. ಮತ್ತು ೩ ಡಬ್ಬಿಗಳು ಹಳಿಬಿಟ್ಟು ಸರಿದವು. ಆರಿಗೂ ಅಪಾಯವಾಗಿಲ್ಲ

ಲಕ್ಷ್ಮೀನಗಡದಲ್ಲಿ ಇಲಿಗಳು ಬೀಳುತ್ತಲಿವೆ ಎಂಬ ವಾರ್ತೆಯಿದೆ. ಇಲ್ಲಿಯ ದನದ ಸಂತೆಗೆ ವಿಪರೀತವಾಗಿ ದನಗಳು ಮಾರಲಿಕ್ಕೆ ಬರುತ್ತಿವೆ. ದನಗಳಿಗೆ ಕೂಳಿಲ್ಲ! ಬೆಲೆಯು ಅರ್ಧಕ್ಕಿಂತಲೂ ಕಡಿಮೆ ಆಗಿದೆ

॥ ಶ್ರೀ ಸದ್ಗುರು ಪ್ರಸನ್ನ ॥

ವಿಜಾಪೂರ ಜಿಲ್ಲೆಯಲ್ಲಿಯ ಮತ್ತು ಸುತ್ತು ಮುತ್ತಲಿನ ಖಾಸಗಿ ವ ಸರ್ವಿಸಿನ ಮೋಟಾರ ಮಾಲಕರ ಗೈರಸೋಯ ದೂರವಾಗಬೇಕೆಂದು.



ಆರ್. ಜಿ. ಚವ್ಹಾಣ ಎಂಡ ಸನ್ಸ, ಬೆಳಗಾವ.

ಇವರು ತಮ್ಮ

ಧಿ ಜನರಲ ಮೋಟಾರ ಅಕ್ಸೆಸರಿ ಸ್ಟೋಅರ್ಸದ ಶಾಖೆಯನ್ನು ತಾ॥ ೧೦ ಸಪ್ಟೆಂಬರ ೧೯೨೭ನೇ ಇಸ್ವಿಯಿಂದ ಬಾಗಲಕೋಟೆಯಲ್ಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಶೆವ್ರಲೇಟ, ಓವ್ಹರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯೂಬ್ಸ, ಗ್ರೀಸ, ಮೋಬಿಲ ಆಇಲ್, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯ ದರದಿಂದ ಸಿಗುವವು. ಒಂದು ವೇಳೆ ವ್ಯಾಪಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರದಿಂದ,

ಚಾಲಕ:— ವಾಯ್. ಜಿ. ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಹಲ್ಕನಾಯಝಿಂಗ ಮಾಡಿ ಕೊಡುವೆವು.

☞ ಬಾಗಲಕೋಟೆ-ಬೆಳಗಾವಿ, ಬಾಗಲಕೋಟೆ-ಇಲಕಲ್ಲ ಸರ್ವಿಸ ಯಥಾಪ್ರಕಾರ ನಡೆದಿದೆ.

ಗುಣ ಬರದಿದ್ದರೆ ಹಣ ಪರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ'ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ಥ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇವಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿ ಮಾಂದ್ಯ, ಕ್ಷೀಣತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ (ಏಳೇ ದಿವಸ ತಕ್ಕೊಂಡು ಖಾತ್ರಿ ಮಾಡಿಕೊಳ್ಳಬಹುದು.) ಇದರಿಂದ್ರ ಮೈಯುರಿ ವಗೈರೆಯ ಎಲ್ಲಾ ಶರೀರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೆ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗೆ ೨-೪-೦, ೧೨ ಡಬ್ಬಿಗಳಿಗೆ ೭-೮-೦, ಇದಲ್ಲದೆ ೧ ಡಬ್ಬಿ ಕಮಿಶನ ಸಿಗುವದು. ಪೂರ್ಣ ಗುಣಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ:— **ಎಸ್. ಬಿ. ಕದಮ್ ಮತ್ತು ಸನ್ಸ್.**
ಮು. ಪೋಷ್ಟ ನಿಪ್ಪಾಣಿ (ಜಿ. ಬೆಳಗಾವ.)

S.U.N.&CO.
BENARES CITY.

ಬನಾರಸ್ ರೇಶ್ಮೀ ಶೀರೆಗಳು.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೀ ಮಾಲುಗಳನ್ನು ಕೋರುವವರಿಗೆ ವ್ಹಿ. ಪಿ. ಮೂಲಕ ಕಳಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕ ಉದ್ದ ಮೊಳ ೧೪ ಅಗಲ ಮೊಳ ೩, ಥಾನು ೧ಕ್ಕೆ ೧೫ ರಿಂದ ೫೦ ಜರಿ ಶೀರೆಗಳು ೧೬-೧೮ ಮೊಳ ಉದ್ದ ೧ಕ್ಕೆ ರೂ. ೨೫ ರಿಂದ ೫೦ ರವರೆಗೆ. ಬುಟ್ಟಿದಾರ್ ಬನಾರಸ್ ಶೀರೆ ೧೬-೧೮ ಉದ್ದ ಮೊಳ ೭ ೧ಕ್ಕೆ ರೂ. ೫ ರಿಂದ ೩೦೦ ರ ವರೆಗೆ ಉಡುವ ಮಗುಟ ಉದ್ದ ೬-೮ ಮೊಳ ೧ಕ್ಕೆ ರೂ ೧೦ ರಿಂದ ೩೦ ರ ವರೆಗೆ ಪಿರೇದ್ಮ ೬-೮ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೪೦ ರ ವರೆಗೆ. ಬಿಳಿ ರೇಶ್ಮೆ ಜರೀದುಪ್ಪಟೆ ೬ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೩೦ ರವರೆಗೆ ಸಾದಾ ಬಂಗಾಳ ರೇಶ್ಮಿ ಶಾಲು ೬ ಮೊಳ ಉದ್ದ ೩ ಮೊಳ ಅಗಲು ೧ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಫಟಿಕದ ೧೦೮ ರ ಸರ ೧ಕ್ಕೆ ರೂ. ೧ ರಿಂದ ೧೦ ರ ವರೆಗೆ ಸುದರ್ಶನ ೧ಕ್ಕೆ ಆಣೆ ೮ ರಿಂದ ರೂಪಾಯಿ $1\frac{1}{2}$ ರವರೆಗೆ ಜಗನ್ನಾಥಜಾಗಂಟೆ ೧ಕ್ಕೆ ರೂ. $2\frac{1}{2}$ರಿಂದ 15 ರ ವರೆಗೆ ಮತ್ತು ಬೇರೆ ಬೇರೆ ದಸ್ತಾನುಗಳ ಕೆಟಲಾಗ ಇನಾಂ

ವಿಳಾಸ:-ಶಿರೋಮಣಿ ನಾರಾಯಣಾಚಾರ್ಯ
ಕಂಪನಿ ಚೌಕಂಬಾ ಕಾಶಿ ಬನಾರಸ್

ಕರ್ನಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯೂಲರ ಸ್ಕೂಲಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರುವದಕ್ಕೆ ತಕ್ಕದ್ದಾದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಜರದ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು. ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು.

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಹೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ॥ ಲಕ್ಷ್ಮೀಬಾಯಿ ಕುಂಭಕೋಣಂ,
ವ್ಯವಸ್ಥಾಪಕರು, ಕ. ಮ. ವಿದ್ಯಾಲಯ, ಧಾರವಾಡ.

ಅತೀ ಸುಲಭ ಕಂತುಗಳು! ಫಲಿತಾಂಶವು ಹೆಚ್ಚು!

ದಿ. ಹಿಂದುಸ್ಥಾನ ಕೋಆಪರೇಟಿವ್ಹ

ಇನ್ಸುರೆನ್ಸ ಸೊಸೈಟಿ ಲಿಮಿಟೆಡ್.

(ಬ್ರ್ಯಾಂಚ್:- ಮುಂಬಯಿ) (ಹೆಡ್ ಆಫೀಸ:- ಕಲ್ಕತ್ತಾ)

ಈ ಕಂಪನಿಯು ಇಡೀ ಹಿಂದುಸ್ಥಾನದಲ್ಲೆಲ್ಲಾ ಪ್ರಾಮುಖ್ಯತೆಗೆ ಬಂದ ಸ್ವದೇಶಿ ಕಂಪನಿಗಳಲ್ಲಿ ಒಂದಾಗಿದೆ. ಜನರ ಸೌಕರ್ಯಕ್ಕಾಗಿ ಈ ವಿಜಾಪೂರ ಜಿಲ್ಹೆಯೊಳಗೆ ಇದರ ಒಂದು ಶಾಖೆಯನ್ನಿಟ್ಟಿರುವರು. ಕಂತುಗಳು ಅತೀ ಸುಲಭ ಇದ್ದು, ಧಾರಾಳವಾಗಿ ಈ ಕಂಪನಿಯಲ್ಲಿ ನಿಮ್ಮ ಜೀವ ವಿಮೆಯನ್ನು ಇಳಿಸಬಹುದು.

ಇದರ ಮೂಲಧನವು ೫೦,೦೦,೦೦೦ ವಿದೆ. ೧೯೩೫-೩೬ ನೇ ವರ್ಷದಲ್ಲಿ ಸಾಸರಿ ವರ್ಷಕ್ಕೆ ೧೦೦೦ ರೂ. ವಿಮೆಗೆ ರೂ. ೧೫ ರೂ. ದರ ಫಲಿತಾಂಶ ಕೊಟ್ಟಿರುವೆವು.

ಎಲ್ಲಾ ಕಡೆಯಲ್ಲಿ ಏಜಂಟರು ಬೇಕಿದ್ದಾರೆ.

ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿದಲ್ಲಿ ಹೆಚ್ಚಿನ ಮಾಹಿತಿ ತಿಳಿಯಬಹುದು.

ವಿಳಾಸ:—

ವಿಜಾಪೂರ. ೨೪—೭—೩೬ } **ಜಿ. ಆರ್. ಪಕ್ಕನಳ್ಳಿ ಆಂಡ ಬ್ರದರ್ಸ.**
ಚೀಫ ಏಜಂಟ್ಸ್,
ವಿಜಾಪೂರ ಜಿಲ್ಲಾ.

ಸ್ಟ್ಯಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಥಾರಿ, ಎಲೆಕ್ಟ್ರಿಕ್, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇರಿ) ೧ ಪೌಂಡಿಗೆ ರೂ. ೧—-
೨ ನೇ ,, ,, ,, ರೂ. ೧-೩-೦

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಶ್ರೀ ಭಾರತ ಜಗತ್ಪ್ರಸಿದ್ಧ ಜಗ ಜಾಹೀರ ನೋಟೀಸು.

ಮೃತ್ಯುಂಜಯ ಔಷಧದಿಂದ ಮೂರೇ ತಾಸಿನಲ್ಲಿ ಗುಣವಿಲ್ಲೆಂದು ಸಿದ್ಧ ಮಾಡಿದವರಿಗೆ-೫೦೦ ರೂ. ಬಕ್ಷೀಸ ಕೊಡುವೆವು ಮೂರೇ ತಾಸಿನಲ್ಲಿ ಗುಣ] ಕಲ್ಪಕಟಿತ್ತಿ ರಸಾಯನ ತಕ್ಕೊಂಡು ಸಾಯುವದೇಕೆ? **[ಮೂರೇ ದಿವಸಗಳಲ್ಲಿ ರೋಗಗಳು ಪೂರ್ಣ ಹೋಗುವದು.**

೫೭ ಶುದ್ಧ ವನಸ್ಪತಿಯಿಂದ ತಯಾರು ಮಾಡಿದ ಮೃತ್ಯುಂಜಯ ಔಷಧ.

ಉಪದಂಶ, ಗರ್ಮಿ (ಉಷ್ಣ) ಪರ್ಮಿ ಮುಂತಾದ ಪರು ಪ್ರಕಾರದ ರೋಗ ಬಹುದಿನ ನೆಲಗೊಂಡದ್ದು ಶರೀರ ಕತ್ತರಿಸಿ ಬಿದ್ದರೂ ಮೂರು ದಿವಸಗಳಲ್ಲಿ ಗುಣವಾಗುವದು.

ಇಂಥ ಪ್ರಕಾರ ರೋಗಗಳಿಂದ ಉತ್ಪನ್ನವಾಗುವ ವಿಕಾರ ಉಷ್ಣ ಪರಮಿ (ಉಪದಂಶ) ಗರ್ಮಿ ಚಟ್ಟೆ ಒದದ ಗಂಟು, ನಡಿನಲ್ಲಿಯ ಗಂಟು, (ವೃಡುಬು) ಅತಿಶಯ ಬಾವು, ಇಂದ್ರಿಯ ಮೇಗೆ ತಿಡಿಕೆ, ಹೊಡತು, ರಕ್ತ ಕೀವು ಸುರಿಯೋಣ ಅದರಂತೆ ಸ್ತ್ರೀಯರ ಪ್ರದರ (ಕೆಂಪು ಬಿಳಿ ಶೆರಗು) ಹೊಲೆ ಕುಷ್ಟರೋಗ ಬೆಳೆಯೋಣ, ಕಡಕಿ ವಿಕಾರಗಳಿಂದ ಗರ್ಭಾಶಯ ಕೆಡೋಣ, ಮೂತ್ರ ಕಣ್ಣು ಕಾಲು ಉರಿಯೋಣ, ಕಾವು ಹೆಚ್ಚಾಗಿ ಮಧುಮೇಹ ಮೈಮೇಲೆ ಗರ್ಮಿ (ಉಷ್ಣ) ಒಡೆದು ಕೀವು ಹೊರಬಿದ್ದು ಅದರಿಂದ ವ್ರಣ (ಘಾಯ) ವಾಗಿ ಅಂಗಳಕ್ಕೆ ತೂತು ಬಿದ್ದು ಮೂಗು ಕೂಡ್ರುವದೂ ಸೋರುವದೂ ಎಲ್ಲ ತರದ ಮೂಲವ್ಯಾಧಿ, ಹೊಟ್ಟೆ ಕಡತು ವಗೈರೆ ಕಾರಣಗಳಿಂದಾ ಜನನೇಂದ್ರಿಯ ಶಿಥಿಲತಾ ಅಥವಾ ನಪುಂಸಕತ್ವ ಮುಷ್ಟಿಮೈಥುನದಿಂದ ಆಗುವ ಪರಿಣಾಮ, ಸ್ವಪ್ನಾವಸ ಮೂತ್ರದಲ್ಲಿ ಧಾತು ಅಥವಾ ಖರ ಬೀಳೋಣ, ವೀರ್ಯ ತಿಳುವಾಗೋಣ, ಸ್ತ್ರೀಗಮನದಲ್ಲಿ ತೇಕು ಹತ್ತೋಣ. ಶೀಘ್ರ ವೀರ್ಯ ಪತನವಾಗೋಣ, ನಡಸೋವು (ಶೂಲಿ) ನೋಯೋಣ, ಬೆನ್ನು ಬಿಗಿಯೋಣ, ವಾತವಿಕಾರ ಅವಿಚಾರದಿಂದ ಮಾಡಿದ ವೀರ್ಯಪಾತ ವಗೈರೆ ರೋಗಗಳ ಮೇಲೆ ಅಶಿಕ್ಷಿತ ಅಡಾಣೀ ಜನರ ಕಡಿಯಿಂದ ಪಾರಜ ಮತ್ತು ರಸಕರ್ಪೂರ, ಇಂಗಳೀಕ ಮುಂತಾದ ಸವಿಷ ಮತ್ತು ಅಪಕ್ವ ಧಾತು ರೂಪ ಪದಾರ್ಥ (ರಸಾಯನ) ಮತ್ತು ಅಪಕಾರಕ ವಸ್ತು ಸೇವಿಸುವದರಿಂದ ಮೈಯೊಳಗೆ ರಸಾಯನ ನಿಂತು ಅದರಿಂದ ಕಾಲು ಕೈ ಮುಡವಾಗಿ ಮತ್ತು ಕೈ ಕಾಲುಗಳಲ್ಲಿ ರಸಾಯನ ಒಡೆದು ಸ್ವತಃ (ತನಗೆ) ಮತ್ತು ಮುಂದಾಗುವ ತನ್ನ ಸಂತತಿಗೆ ಅನೇಕ ರೋಗವು ಉತ್ಪನ್ನವಾಗಿ ಅದರಿಂದ ಭಯಂಕರ ಪರಿಣಾಮ ಭೋಗಿಸಬೇಕಾಗುವದು ಇಂಥ ಪ್ರಕಾರದ ರೋಗಗಳು ಬಹಳ ದಿವಸ ನೆಲಗೊಂಡಿದ್ದಾಗಲೀ ಅಥವಾ ಹೊಸದಾಗಿ ಆದುದ್ದಾಗಲೀ ಇಂಥ ರೋಗಗಳ ಮೇಲೆ ಈ ನಮ್ಮ **ಮೃತ್ಯುಂಜಯ ಔಷಧ** ಉಪಯೋಗ ಮಾಡಿದರೆ ತತ್ ಸಂಬಂಧಿ ಸಂಪೂರ್ಣ ರೋಗಗಳು ಶೀಘ್ರವಾಗಿ ಹೋಗಿ ಮೈಯೊಳಗೆ ಇದ್ದ ರಸಾಯನವು ನಾಶವಾಗುವದು ಮತ್ತು ಅಶಕ್ತಿ ಹೋಗಿ ಮೈಯೊಳಗೆ ಶಕ್ತಿ ಬಂದು ಪ್ರಕೃತಿ ಉತ್ತಮವಾಗುತ್ತದೆ ಒಂದು ಬಾಟ್ಲಿಗೆ [೫] ರೂಪಾಯಿ ಟಪಾಲು ಖರ್ಚ ಬೇರೆ ಅನುಪಾನ ಪತ್ರಿಕೆಯು ಔಷಧದ ಸಂಗಡ. ಲಾಭಕ್ಕೆ ಲಾಭ. ಒಂದು ಆಣೆ ಟಿಕಿಟು ಕಳಸಿದಲ್ಲಿ ನಮ್ಮ ಔಷಧದ ಪೂರ್ಣ ಕ್ಯಾಟಲಾಕ ಕಳಿಸುವೆವು. **(ತಮ್ಮ ಪತ್ತೆ:- ಪೂರ್ಣ ಬರೆಯಿರಿ.)**

ಸುಪ್ರಸಿದ್ಧ ಡಾ|| ಆರ್. ಎಲ್ ಹಿರೇಮಠ ಆರೋಗ್ಯ ಮಂದಿರ ಆಯುರ್ವನೌಷಧಿ ೫೦೦೦, ಸಾವಿರ ಕಾರಖಾನೆ ಕಮತನೂ ಪೋ|| ಶಂಕೇಶ್ವರ ಜಿ|| ಬೆಳಗಾಂವ

EAT KASHMIR FRUITS & NUTS !

ಕಾಶ್ಮೀರದ ಹಣ್ಣು ಹಂಪಲಗಳನ್ನು ಸೇವಿಸಿರಿ!

ತೆಳವಾದ ತೊಗಟೆಯ ತಾಜಾ **ಅಕ್ರೋಡ**ಗಳೂ, ಉರಿಸಿದ ಅಡವಿಯ ಸೇಂಗಳೂ, (Hazelnuts) ೧೧ ಪೌಂಡಿಗೆ ರೂ. ೫—೮—೦; ತಾಜಾ ಕಾಗದೀ ಬದಾಮು; ಹರಳಿಲ್ಲದ್ದೂ, ಒಲು ಸವಿಯಾದ **ಜಲ್ದ**ರು. (Apricots); ಅಂಜೂರಿ; ದ್ವೀಪದ್ರಾಕ್ಷಿ; **ಕಿಸಮಿಸು**, ೧೧ ಪೌ. ಗೆ ೧೩ ರೂ. ; ಕಮಲದ ಶುದ್ಧವಾದ **ಜೇನತುಪ್ಪ**, ೫|| ಪೌ. ಗೆ ೮ ರೂ. ; ಶುದ್ಧ ಕೇಶರ, ೧ ತೊಲೆಗೆ ೩ ರೂ. ಟಪಾಲ ಖರ್ಚ ಮಾಫ!

ಡಾರ ಬ್ರದರ್ಸ ಶ್ರೀನಗರ, ಕಾಶ್ಮೀರ.

Dar Bros Srinagar, Kashmir.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ –

ಕ್ರಯವು ಇನಾಂ!!! ಅಂ. ಹಾಸಲು ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಪ್ಪಾ ಚಾಲವಾದಿ ಸ್ಟೇಶನರ್ಸ ಬಾಗಲಕೋಟಿ.

ರಾಜವೈದ್ಯ ನಾರಾಯಣಜಿ ಕೇಶವಜಿ.

೫೭, ಚೀನಾಬಜಾರ್, ಮದ್ರಾಸು



ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

೧೯೨೭ನೇ ಜನವರಿ ೧೫ರಿಂದ ಪ್ರಾರಂಭ.



ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್ ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ-

೧. ನೀವು ನಮಗೆ ರೂ. ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್ ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧ ೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್ ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್ ಗಳನ್ನು ಕೊಡುತ್ತೇವೆಂಬದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪುವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ ಗೋಲ್ಡ" ರಿಸ್ಟ್ ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಜರ್ಮನದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ.

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ಚಕರು ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು. ಅಥವಾ ವಿ. ಪಿ ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಳೆದುಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಅಸೂಯೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಜರ್ಮನ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೬ ೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್ ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ. ಬೆಂಗಳೂರ ಸಿಟಿ

ಬಹಳ ಸುಂದರ { ಆಕಾರದ ನಕ್ಷೆಯ ನಂಬರಿನ } ಗಡಿಯಾರವನ್ನು

ಬರೀ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ ೭



ಒಂದೇ ಒಂದು ತಿಂಗಳ ಬಗ್ಗೆ ನಾವು ಈ ದಾವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿ ಸಹಿತ ಉಚಿತವಾಗಿ ಕೊಡುತ್ತೇವೆ. **ಬೆಲೆ ರೂ ೭**

ಸ್ವಲ್ಪವೇ ಇವೆ; ಈಗಲೇ ಬರೆಯಿರಿ.

ವಿಳಾಸ — ಸ್ವಾನ ಹೌಸ ಪಿ. ಬಿ. ೫೦೮ ಪಿ. ಟಿ ಮದ್ರಾಸ

ಅತ್ಯುತ್ತಮವಾದ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೊಕೆಟ್ ವಾಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಚ್ಚಳದ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ. ಪಿ, ಬಿ. ಮದ್ರಾಸ. ೨೬೫



ಕಿರ್ಲೋಸ್ಕರ

ಸೆಂಗಾ ಒಡೆಯುವ ಯಂತ್ರ.

ನಮ್ಮ ಕಾರ್ಖಾನೆಯಲ್ಲಿ ಎರಡು ಪ್ರಕಾರದ ಯಂತ್ರಗಳು ತಯಾರಾಗುತ್ತವೆ. ಒಂದು ಇಂಜಿನ ಶಕ್ತಿಯಿಂದಲೂ, ಇನ್ನೊಂದ ಕೈಯಿಂದಲೂ ನಡೆಯುತ್ತವೆ. ಇವುಗಳ ಯಾವತ್ತು ಭಾಗಗಳು ಕಬ್ಬಿಣದವು ಬೀಡಣಿಕೆಯಿರುವದರಿಂದ ಕಾಯಿಗಳು ಹಸನಾಗಿ ಬೀಳುವವು. ನುಚ್ಚಾಗುವದಿಲ್ಲ.

ಸೇಂಗಾದ ಎಣ್ಣೆಯನ್ನು ತೆಗೆಯುವವರೂ ಸೇಂಗಾ ಒತ್ತುವ ವರೂ ಕಾಳನ್ನು ಮಾಡಲಿಕ್ಕೆ ಈ ನಮ್ಮ ಯಂತ್ರಗಳನ್ನೇ ಉಪಯೋಗಿಸಬೇಕು. ಕಳೆದ ವರ್ಷಕ್ಕಿಂತಲೂ ಈ ವರ್ಷ ಇವುಗಳ ಬೆಲೆಯನ್ನು ಕಡಿಮೆ ಮಾಡಿರುತ್ತೇವೆ. ಬಿಡಿ ಭಾಗಗಳು ನಮ್ಮಲ್ಲಿ ದೊರೆಯುತ್ತವೆ. ಸವಿಸ್ತರ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ

ಕಿರ್ಲೋಸ್ಕರ ಬಂಧು. ಲಿಮಿಟೆಡ್

ಕಿರ್ಲೋಸ್ಕರ ವಾಡಿ,
ಜಿ ಸಾತಾರಾ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಅಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೭೩೭ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರೆಂಟೆಂಡಂಟ್ ಸೆಕ್ರೆಟರಿಏಟ್ ಹೈದರಾಬಾದ ಡೆಕ್ಕನ್ನ ರೂ.೧೦೦೦

(೨) ಎಲ್. ಬಿ. ಸಿ. ನಂ ೧೯೭೨ ನಾರಾಯಣ ವಿಠ್ಠಲ ಲೋಣಕರ. ಕೇರ್ ಆಫ್ ಡಿ. ಈ. ಪುರಾಣಿಕ ೧೦೭ ನಿಪಾಲಪುರ ಇಂದೂರ. ೧೨೦೦

(೩) ಎಲ್ ಬಿ. ಸಿ. ನಂ ೩೪೧ ರಾಮಚಂದ್ರ ಅನಂತ ಶಿರೋಳಿ. ಡಿವಿಜನಲ್ ಫಾರೆಸ್ಟ ಆಫೀಸರ ಧಕ್ಷೂರಾ. ಪಶ್ಚಿಮಖಾನದೇಶ ರೂ. ೬೦೦

(೪) ಬಾಂಡ ನಂಬರು ೭೫೦೭ ಕೇ. ಜಿ. ಫನಾರ್ಂಡೋ ವ್ಯಾಪಾರಸ್ಥ ಬ್ರುಕ್‌ಸಾಯಿಡ ಸಿಲೋನ, ಕೋಲಂಬೋ. ರೂ. ೧೦೦೦

(೫) ಬಾಂಡ ನಂಬರು ೧೩೭೩೪ ಎಸ್. ಜಿ. ಚವರೆ. ಅಶಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ. ಜಿಲ್ಲಾ ವಿಜಾಪುರ. ರೂ ೧೦೦೦

ಬಿ. ನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಜೀವ ವಿಮೆಯ ಕಾರ್ಯದಲ್ಲಿ

ಅದ್ಭುತವಾದ ಜಯವು !

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ರೂಪಾಯಿ ಲಾಭ ಹಂಚಿದ

ದಿ ಜನರಲ್ ಅಶ್ಯೂರನ್ಸ

ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ಸಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉಳಿತಾಯವಾದದ್ದು ರೂ. ೧,೦೯,೦೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್!

ಎಸ್. ಕೆಬ್ಬೂರ ಬಿ. ಎ. ಎಫ್. ಎಸ್. ಅಜಮೀರ.

Apply to:- A. Ramachandra Rao
Branch Secretary, opposit Minto Hospital,
Bangalore City
or
L. V Ramdurg. Chief Agent
Near Vitoba Temple Hubli.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ನಮ್ಮ ನಿಝಾಂ ಕರ್ನಾಟಕದ ಪತ್ರವು.

ಈ ವರುಷ ಶ್ರೀ ಗಜಾನನೋತ್ಸವಗಳು ಬಹು ಜೋರಿನಿಂದ ಸಾಗಿದವು. ಒಟ್ಟಿನಮೇಲೆ ಹಿಂದು ಜನರಲ್ಲಿ ಒಂದು ತರದ ಹುರುಪು ಬಂದು ಬಿಟ್ಟಂತಿತ್ತು. ಹೈದರಾಬಾದ ಹಾಗೂ ಕಲಬುರ್ಗಿಗಳ ಕನ್ನಡಿಗರು ಬಹು ಹುರುಪಿನಿಂದ ಶ್ರೀ ಗಜಾನನೋತ್ಸವವನ್ನು ನೆರವೇರಿಸಿ ಕನ್ನಡ ವ್ಯಾಖ್ಯಾನಗಳ ಏರ್ಪಾಡು ಮಾಡಿದ್ದರು. ಕನ್ನಡ ಹಾಡುಗಳನ್ನು ಬಹು ಇಂಪಾಗಿ ತಯಾರಿಸಿದ್ದರು.

ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರಾದ ಶ್ರೀಯುತ ಗರುಡರವರು ಗುಲಬುರ್ಗೆಯಲ್ಲಿ ತಮ್ಮ ಕನ್ನಡ ರಂಗ ಭೂಮಿಯ ಧ್ವಜವನ್ನೇರಿಸಿದ್ದಾರೆ. ಹೈದರಾಬಾದಿಗೆ ೨೭ ನೇ ತಾರೀಖಿಗೆ ಬರತಕ್ಕವರಿದ್ದಾರೆಂಬ ಸುದ್ದಿಯಿದೆ.

ಮಹಾರಾಜ ಸರ ಕಿಶನ ಪ್ರಸಾದ ಬಹದ್ದೂರ ಇವರ ಅಧ್ಯಕ್ಷತೆಯಲ್ಲಿ. ಗುಜರಾತ ಜನಪ್ರಳಯದ ಸಹಾಯಾರ್ಥವಾಗಿ, ನಗರ ಮಂದಿಯಲ್ಲಿ ಹೈದರಾಬಾದ ಮತ್ತು ಸಿಕಂದರಾಬಾದದ ನಿವಾಸಿಗಳ ಸಭೆಯಾಯಿತು. ಸುಲ್ತಾನ ಬಹದ್ದೂರರವರು ೧೫೦೦ ರ ಸಾಯಿಗಳನ್ನು ಕೊಟ್ಟರು. ಮತ್ತು ಅದೇ ಸಭೆಯಲ್ಲಿ ೧೫೦೦೦ ರುಪಾಯಿಗಳ ವಾಗ್ದಾನಗಳಾದವು. ಹೈದರಾಬಾದ ನಿವಾಸಿಗಳಿಗೆ ಜಲಪ್ರಳಯದ ಅನುಭವವು ಗೊತ್ತು ಇದ್ದುದರಿಂದ ಸಹಾಯಮಾಡುವಲ್ಲಿ ಹಿಂದೆ ಬೀಳಲಿಕ್ಕಿಲ್ಲೆಂಬಂತೆ ತೋರುತ್ತದೆ.

ಹೈದರಬಾದದ ಕರ್ನಾಟಕ ಸಂಘದ ಅಧ್ಯಕ್ಷಸ್ಥಾನಕ್ಕೆ ಇಲ್ಲಿಯ ಹಾಯಕೋರ್ಟ ವಕೀಲರಾದ ಶ್ರೀ ಗೋವಿಂದರಾವ ಕೋತಿ ಇವರನ್ನು ಆರಿಸುವರು. ವಕೀಲರು ಉತ್ಸಾಹಿಗಳಿರುವದರಿಂದ ಪ್ರಯೋಜನದ ಸಂಶಯವಿಲ್ಲ. ಹುರುಪಿನಿಂದ ಕೆಲಸವನ್ನು ಸಾಗಿಸುವರೆಂಬ ಆಶೆ ಇದೆ

ಹೈದರಾಬಾದದಿಂದ ೧೦-೧೨ ಮೈಲುಗಳ ಅಂತರದಲ್ಲಿರುವ ಘಟಕೇಸರ ಎಂಬ ಗ್ರಾಮದ ಹತ್ತರ ಕೆಲ ದಿನಗಳ ಕೆಳಗೆ ೧-೨ ನಂಬರುಗಳಲ್ಲಿ (ಹೊಲಗಳಲ್ಲಿ) ಮುತ್ತಿನ ಮಳೆಯಾಗಿರುವದು! ಎಷ್ಟೋ ಜನರು ನೋಡಲಿಕ್ಕೆ ಹೋಗಿದ್ದರು! ಮುತ್ತುಗಳು ಸಂಪೂರ್ಣ ಬೆಳಗನ್ನು ಹೊಂದಿರುವದಿಲ್ಲ. ಅಲ್ಲಿ ಪೋಲೀಸ ಕಾವಲವಿಟ್ಟಿಯೆಂದು ಸುದ್ದಿ ಇದೆ. ಹಿಂದಕ್ಕೆ ಶ್ರೀ ವಿದ್ಯಾರಣ್ಯ ಸ್ವಾಮಿಗಳು, ಬೇಡಿಕೊಂಡಂತೆ ಸುವರ್ಣ ವೃಷ್ಟಿಯಾಗಿರುವದರಲ್ಲಿ ಯೇನು ಸಂಶಯವಿದೆ? ಎಂದು ಜನರು ಆಡುತ್ತಿರುವರು. ಆದರೆ ಒಂದು ಬಗೆಯ ಪ್ರಾಣಿಗಳ ತತ್ತಿಗಳವು ಎಂಬದಾಗಿ ಇತ್ತೀಚೆ ಗೊತ್ತಾಗಿದೆ.

ಸಿಕಂದರಾಬಾದದ ಶ್ರೀಯುತ ರಂಗಾಚಾರ್ಯ ಎಮ್. ಎ. ಎಲ್. ಎಲ್. ಬಿ. ಇವರು ಲಕ್ಷ್ಮೀಶ ಕವಿಯ ಸ್ಥಾನವು ನಿಜಾಂ ಕರ್ನಾಟಕದಲ್ಲಿರುವ ಸುರಪುರ ಗ್ರಾಮ ವಿರಬಹುದೆಂದು ಕಂಡು ಹಿಡಿದಿರುವರೆಂದೂ ತೀವ್ರವೇ ಅಲ್ಲಿಗೆ ಸಂಶೋಧನೆಯ ಕೆಲಸಕ್ಕೆ ಹೋಗುವವರಿದ್ದಾರೆಂದೂ ಕೇಳಿದ್ದೇವೆ.

ಕಲಬುರ್ಗಿಯಲ್ಲಿ ಈ ಸಲ ಗಣೇಶೋತ್ಸವವು ನಡೆದಾಗ್ಗೆ ಕರ್ನಾಟಕದ ಅಭಿಮಾನವು ವಿಶೇಷವಾಗಿ ಉಕ್ಕಿಬಂದಿತು. ಧಾರವಾಡದ ಕರ್ನಾಟಕ ಸಿಂಹ ಮುದವೇಡಕರ ಕೃಷ್ಣರಾಯರು, ರಾಜಕಾರಣ ಧುರಂಧರ ದಿವಾಕರರು, ಗಾಯನಪಟು ಸುಬ್ಬಣ್ಣನವರು, ಇತಿಹಾಸ ಸಂಶೋಧನ ನಿಷ್ಣಾತ ರಾಜಪುರೋಹಿತರು ಒಂದದ್ದು, ಕರ್ನಾಟಕ ಕನ್ನಡ ಸಂಸ್ಕೃತಿಗಳ ಅರಿವನ್ನು ಅಲ್ಲಿಯ ನಾಗರಿಕರಿಗೆ ನೆನಪುಮಾಡಿಕೊಟ್ಟದ್ದು, ನಿಝಾಂ ಕರ್ನಾಟಕದ ಇತಿಹಾಸದಲ್ಲಿ ಮಹತ್ವವಾದವು. ಕರ್ನಾಟಕ ನಾಟಕಾಲಂಕಾರ ಗರುಡರು ಇದೇ ಸಮಯದಲ್ಲಿ ಅಲ್ಲಿದ್ದುದರಿಂದ ಕನ್ನಡಭಾಷೆಯ ಕರ್ನಾಟಕ ಕಲೆಯ ಸ್ವಾದವೂ ಕಲಬುರ್ಗಿಯವರಿಗೆ ದೊರಕಿದವು. (ಆದರೆ ನೂತನ ವಿದ್ಯಾಲಯಕ್ಕೆ ಕೊಟ್ಟ ಧಾರ್ಮಿಕ ನಾಟಕದ ಉತ್ಪನ್ನವನ್ನು ಕೇವಲ ಕನ್ನಡ ಗ್ರಂಥಗಳನ್ನು ತರಿಸುವದಲ್ಲಿ ವಿನಿಯೋಗಮಾಡಬೇಕೆಂಬ ಕಟ್ಟಳೆಯೊಂದಿಗೆ ಅದರ ಸ್ವಾಧೀನಪಡಿಸಿರೆಂದು ಜನರು ಆಗ್ರಹಪಟ್ಟರೂ, ಕರ್ನಾಟಕ ನಾಟಕಾಲಂಕಾರರು ಕರ್ನಾಟಕಕ್ಕಾಗಿ ಕರ್ನಾಟಕಾಭಿಮಾನವನ್ನು ವ್ಯಕ್ತಗೊಳಿಸುವ ಧೈರ್ಯವನ್ನು ತೋರಿಸದಿದ್ದುದು ಅತ್ಯಂತ ವಿಷಾದಕರವು!!!) ಈಗ್ಗೆ ಒದಗಿನಂತೆದ್ದಿದ್ದ ಕರ್ನಾಟಕಾಭಿಮಾನವೂ ಉತ್ಸಾಹವೂ ಕಲುಬುರ್ಗಿಯಲ್ಲಿ ಕೂಡಲೇ ಕರಗಿ ಮಾಯವಾಗಿ ಹೋಗದಂತೇರ್ಪಡಿಸುವ ಭಾರವು ಅಲ್ಲಿಯ ಮುಂದಾಳುಗಳ ತಲೆಯಮೇಲಿದೆಂಬುದನ್ನು ಅವರು ಮರೆಯಬಾರದು ಮಾತ್ರ. ಕಲ್ಬುರ್ಗಿಯ ಈ ಕರ್ನಾಟಕತ್ವದ ಪರವಣೆಯಲ್ಲಿ ಬ್ರಾಹ್ಮಣರು ಭಾಗವನ್ನು ತೆಗೆದುಕೊಳ್ಳಲಿಲ್ಲವೆಂಬುದಿಷ್ಟೇ ಅಲ್ಲದೇ ಇದಕ್ಕೆ ವಿರೋಧಿಗಳೂ ಆಗಿದ್ದರೆಂಬದು ಬ್ರಾಹ್ಮಣವರ್ಗಕ್ಕೆಲ್ಲ ಅತ್ಯಂತ ಲಾಂಛನಾಸ್ಪದವಾದ ಮಾತು !!!! ಮರಾಠಿಯ ಮೋಹಜಾಲದಲ್ಲಿ ಸಿಲುಕಿ ಒದ್ದಾಡುತ್ತಲಿರುವ ಈ ಬ್ರಾಹ್ಮಣ ಕನ್ನಡಿಗರು—ಹೇಸರ ಕನ್ನಡಿಗರೋ ಅಥವಾ ಹೇಸರಗತ್ತಿಗಳೋ ತಿಳಿಯದು ! — ಎಂದು ತಮ್ಮ ಬಣ್ಣವನ್ನು ತಾವು ಅರಿತುಕೊಳ್ಳುವರೋ ದೇವರೇ ಬಲ್ಲ! ಲಿಂಗಾಯತ ಬಂಧುಗಳೂ ಕಲ್ಬುರ್ಗಿಯ ಪೇಟೆಯ ಜನರೂ ಒಳ್ಳೇ ಅಭಿಮಾನದಿಂದ ಈ ಕರ್ನಾಟಕತ್ವದ ಕಾರ್ಯದಲ್ಲಿ ಭಾಗತೆಗೆದುಕೊಂಡದ್ದು ಅತ್ಯಂತ ಆನಂದದ ಸಂಗತಿಯು. ಒಳ್ಳೇ ಕಳವಳದಿಂದ ಪ್ರಯತ್ನಿಸಿದ ಶ್ರೀಯುತರುಗಳಾದ ಶಿವಶರಣಪ್ಪಾ ಸ್ವಾದಿ, ರೇವಪ್ಪಾ ಮಂಗಶೆಟ್ಟಿ, ರಾಮಚಂದ್ರಪ್ಪಾ ಜಾಜಿ, ರೆವರೆಂಡ ನಾನಪ್ಪಾ ದೇಸಾಯಿ, ಸಂಗನಬಸವ ಮಠ ಶಿವಶರಣಪ್ಪಾ ಗೌಂಡೀಗುಡಿ, ಮಹಾಲಿಂಬರ ಸಂಗನಬಸವ ಮಠ, ಮಹಿಬೂಬ ಒಜ ರ ಮೊದಲಾದವರನ್ನು ಎಷ್ಟು ಅಭಿನಂದಿಸಿದರೂ ಕಡಮೆಯೇ. ಈ ಉತ್ಸಾಹಕ್ಕೆಲ್ಲ ಶ್ರೀ. ಬನ್ನೂರ ಇವರೇ ಕಾರಣರೆಂಬುದನ್ನು ಮಾತ್ರ ಯಾರೂ ಮರೆಯಬಾರದು. ಒಳ್ಳೇ ಸ್ವಾರಸ್ಯವುಳ್ಳ ಕನ್ನಡ ಮೇಳಿಯ ಪದಗಳನ್ನು ಇವರೇ ಕಟ್ಟಿಕೊಟ್ಟದ್ದರಿಂದ, ಅವನ್ನು ಕೇಳಿದವರಿಗೆಲ್ಲ ಬಹು ಉತ್ಸಾಹವು ಬಂದಿತು ! ಅಂತೂ ಈ ಬಗೆಯಾಗಿ ಹುಟ್ಟಿದ ಕರ್ನಾಟಕತ್ವದ ವೃಕ್ಷವು ದಿನೇ ದಿನೇ ವೃದ್ಧಿಯಾಗುವಂತೆ ಮಾತ್ರ ಈ ಮುಂದಾಳುಗಳು ಏರ್ಪಡಿಸಬೇಕು. ಇಷ್ಟೇ ಬಿನ್ನಹ.

ಮುಂಬೈಯಲ್ಲಿ ಶುದ್ಧಿಯ ಉತ್ಸವವು.

ಎಚ್. ಡಿ. ವಿಟ್‌ಮನ್ನರೆಂಬ ೩೩ ವರ್ಷದ ಸುಶಿಕ್ಷಿತ ಆಂಗ್ಲೇಯನೂ ಕರಾಚಿಯ ಶೇಖಸಾದುಲ್ಲಾ ಎಂಬ ಮುಸಲ್ಮಾನನೂ (ತನ್ನ ಆರು ವರ್ಷದ ಮಗನೊಂದಿಗೆ) ಹಿಂದೂ ಧರ್ಮವನ್ನು ಸ್ವಸಂತೋಷದಿಂದ ಸ್ವೀಕರಿಸಿದರು. ವಿಟ್‌ಮನ್ನ ಸಾಹೇಬರು ಲಂಡನ್ನ ವಿಶ್ವವಿದ್ಯಾಲಯದ ಪದವೀಧರರು. ಇವರಿಗೆ ಆರ್ಯ ಧರ್ಮದಲ್ಲಿ ಬಹಳೇ ವಿಶ್ವಾಸವಿದೆ.

Dasara is Coming to Destroy the Demon of Evil!

WITH THE ARRIVAL OF THE DASARA SEASON A NEW FEE ING OF RELIEF COMES UPON THE PEOPLE ----- FREEDOM FROM ALL EVIL. AND JOY DAWNS UPON THEM.

That is the feeling which one has with the arrival of this gift.

Littles Oriental Balm.

IT IS THE GREAT AGENT OF RELIEF AND FREEDOM FROM ACHES AND PAINS---HEADACHES, NEURALGIA, RHEUMATISM, SCIATICA, PARALYSIS, LUMBAGO. SPRAINS AND STRAINS

ITS SOOTHING TOUCH PUTS AWAY THE AGONY OF PAIN AND BRINGS A WELCOME SENSE OF JOY

Get Your Bottle

TO DAY!

SOLD AT ALL CHEMISTS AND STORES.

ರ. ನಂಬಿ ೧೯೪೭ · ವಾ. ಚ. ... ಮಾತ್ರ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यत्र नार्यस्तु पूज्यन्ते रमन्ते तत्र देवताः । — मनु

ಸಂಪಾದಕರು — ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೫ | ... ಶಕೆ ... ಭಾದ್ರಪದ ... Date 25—9—1927. | ಸಂಚಿಕೆ ೩೫

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯ್ವಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ನುಡಿಯಲ್ಲಿ ಮೋಟಾರ ನಡಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ, ಪ್ರಕಾರದ ಮೋಟಾರುಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು ಅವುಗಳೊಳಗಿನ ಕೆಟ್ಟುಬಿಟ್ಟ ಮುರಿದ-ಒಡೆದ ಭಾಗಗಳ ದುರುಸ್ತಿಯನ್ನು ಮಾಡುವುದು. ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಪಸಿಬಿಸಿಯಾಗಿ ಉಳಿಯುವದಿಲ್ಲ. ನುರಿತವರಾಗುತ್ತಾರೆ. ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ ಹಿಂದುಸ್ತಾನದಲ್ಲೆಲ್ಲ ಮೋಟಾರ ನಡಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸರಾಸ್ತ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳ ಸುಲಭವಾಗಿದ್ದು, ಮನಸಿಗೆ ಸೊಗಸುವಂತೆ ಹಿಡಿಸುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ!

ವಿಳಾಸ:— ಕುಲಕರ್ಣಿ ಮೋಟಾರ ಸ್ಕೂಲ.

ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.

ಹೊಸ ಟ್ರೇಡಲ್.

ಈಗ ನಾವು ಯುರೋಪದಿಂದ ಹೊಸ ಟ್ರೇಡಲ್ ತರಿಸಿದ್ದೇವೆ. ಫುಲಸ್ಕ್ಯಾಪ ಹಾಪಶೀಟಿನ ಆಕಾರದ್ದು, ಬೆಲೆ ೬೫೦ ರೂ. ಮಾತ್ರ! ... ಯ ಮುದ್ರಕರಿಗೆ ಇವು ಬೇಕಿದ್ದರೆ ನಾವು ತರಿಸಿ ಕೊಡುವೆವು. ಯಂತ್ರವನ್ನು ನೋಡತಕ್ಕವರು ನಮ್ಮಲ್ಲಿಗೆ ಬಂದು ನೋಡಬಹುದು. ಇದಲ್ಲದೇ ರಾಯಲ್ ಆಕಾರದ ಒಂದು ಮುದ್ರಿಸುವ ಯಂತ್ರವು ನಮ್ಮಲ್ಲಿ ಮಾರಲಿಕ್ಕಿದೆ. ಇದು ಹಳೆಯದಾದರೂ ಉತ್ತಮ ಕೆಲಸ ಕೊಡುತ್ತದೆ.

ವ್ಯವಸ್ಥಾಪಕ

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ.

ಭಯಂಕರ ಗರ್ಮಿ.

ಪರಮ, ರಕ್ತವಿಕಾರ, ಕುಷ್ಟ, ಮಹಾರೋಗ; ಧಾತುವಿಕಾರ ಸರ್ವ ಸಂಕಟಗಳ ಮೇಲೆ ಖಂಡಿತವಾಗಿ ಗುಣ ಕೊಡುವ ದಿವ್ಯ ಔಷಧಿ ಬೆಲೆ ರೂ. ೫ ಪ್ರಕೃತಿಮಾನ ತಿಳುಹಿಸಿ ಔಷಧಿ ಪಡೆಯಬೇಕು.

ವೈದ್ಯ:— ವಾದಿರಾಜ ಜಹಗೀರದಾರ

ಮು. ಇಲಕಲ್ಲ (ವಿಜಾಪೂರ).

ಉತ್ತರ ಕನ್ನಡದ ಪುನರುದ್ಧಾರ.

ಉತ್ತರ ಕನ್ನಡದ ಪೂರ್ವ ಸ್ಥಿತಿಯನ್ನೂ ಸದ್ಯಸ್ಥಿತಿಯನ್ನೂ ತುಲನಾತ್ಮಕ ದೃಷ್ಟಿಯಿಂದ ವಿಮರ್ಶಿಸಿ ಅದನ್ನು ಈಗಣ ಹೀನ ಮತ್ತು ದಿವಾಳಿ ಸ್ಥಿತಿಯಿಂದ ಮೇಲಕ್ಕೆ ಉದ್ಧರಿಸಲು ಶಕ್ಯವಿರುವದೇ ಎಂಬುದು ಚರ್ಚಿಸುವದೇ ಈ ಲೇಖಮಾಲೆಯನ್ನು ಪ್ರಾರಂಭಿಸುವದರ ಮುಖ್ಯ ಉದ್ದೇಶವು.

ಉತ್ತರ ಕನ್ನಡದ ಪ್ರಾಚೀನ ಇತಿಹಾಸವು ಕನ್ನಡಿಗರ [illegible] ಲ್ಲ ಅದರ ಹೆಸರು ಉಜ್ವಲವಾಗಿರುವದು. ಉತ್ತರ ಕನ್ನಡಿಗರಿಗೆ ಅಭಿಮಾನಪಡಲಿಕ್ಕೆ ಯೋಗ್ಯವಾದುದು. ಈ ಜಿಲ್ಲೆಯ ಬನವಾಸಿಯನ್ನಾಳಿದ ಕದಂಬರು ದಕ್ಷಿಣ ಹಿಂದುಸ್ಥಾನದಲ್ಲಿ [illegible] ರಾಗಿದ್ದರು. ವಿಜಯನಗರದ ಅರಸರ ಕಾಲದ ಉತ್ತರ ಕನ್ನಡಕ್ಕೆ ಪ್ರಧಾನವಾದ [illegible] ರಾಜ್ಯದ [illegible] ಅಷ್ಟು ಕಾಲ ವೈಭವದಿಂದ ನಡೆಯಿತು ಸೋದೆ, ಬಿಳಗಿ, ಭಟ್ಕಳ ರಾಜ್ಯಗಳು ಈ ಜಿಲ್ಲೆಯಲ್ಲೇ ಮೆರೆದುವು.

ಉತ್ತರ ಕನ್ನಡದ ಐತಿಹಾಸಿಕ ಅವಶೇಷಗಳು ಇನ್ನೂ ಕಣ್ಣಮುಂದಿದ್ದು ಅವು ಪ್ರಾಚೀನ ಕಾಲದ ವೈಭವವನ್ನು ಸ್ಮರಣೆಗೆ ತಂದು ಕೊಡುತ್ತಿರುವವು. ಈ ಜಿಲ್ಲೆಯ ಪ್ರಾಚೀನ ರಾಜಕೀಯ ಮಹತ್ವದ ಕುರಿತು ಅನೇಕ ಐತಿಹಾಸಿಕ ಆಧಾರಗಳು ದೊರೆಯುತ್ತವೆ. ಈ ಜಿಲ್ಲೆಯೊಳಗೆ ಎಲ್ಲೆಲ್ಲಿ ಕಂಡುಬರುವ ಅನೇಕ ಕೋಟೆಕೊತ್ತಳಗಳೂ ದೇವಾಲಯ ಬಸ್ತಿಗಳೂ, ಶಾಸನಗಳೂ, ಶಿಲಾಲೇಖಗಳೂ ಆ ಪ್ರಾಚೀನ ರಾಜಕೀಯ ಮಹತ್ವದ ಪ್ರತ್ಯಕ್ಷ ನಿದರ್ಶನಗಳಾಗಿರುವವು.

ಉತ್ತರ ಕನ್ನಡದ ಬೇಸಾಯವು ಉತ್ಕರ್ಷಾವಸ್ಥೆಯಲ್ಲಿತ್ತೆಂಬುದು [illegible] ಪ್ರಮಾಣಗಳಿಂದಲೇ ಸ್ಪಷ್ಟವಾಗುತ್ತದೆ. [illegible] ಸುಪ್ರಸಿದ್ಧ ವಿಜಾಪುರ ದೇಶದ ವರ್ಣನೆಯನ್ನು ಗೆರಸಪ್ಪೆಯ ರಾಜ್ಯದ ಸಮೃದ್ಧಿಯನ್ನು ಉಲ್ಲೇಖಿಸಿದ್ದ ಶಾಸನವನ್ನೂ ನೋಡಿದರೆ ಆಗಿನ ಬೇಸಾಯದ ಸಂಪನ್ನ ಸ್ಥಿತಿಯು ಗೋಚರವಾಗುತ್ತದೆ. ಉತ್ತರ ಕನ್ನಡದಿಂದ ಉತ್ತಮವಾದ ಅಕ್ಕಿಯು ಪರದೇಶಕ್ಕೆ ಹೋಗುತ್ತಿತ್ತೆಂದು ಉಲ್ಲೇಖವಿದೆ. ಸೋದೆಯ ಅರಸರಾಗಿ ಮುಂಚಿನವರಿಂದಲೇ ಒಂದೊಂದರಿಂದ [illegible] ಉತ್ಕೃಷ್ಟವಾಗುತ್ತಿದ್ದಿತೆಂದು ಶಿವರಾಮ ಗ್ಯಾಝೆಟಿಯರಿನಲ್ಲೇ ಹೇಳಿದೆ. ಜಿಲ್ಲೆಗೆ, ಉತ್ತರ ಕನ್ನಡಕ್ಕೆ ಧಾನ್ಯಾಗಾರವೆಂಬ ಹೆಸರಿದ್ದು ಇದರ ವ್ಯಾಪಾರಕ್ಕಾಗಿಯೇ ವಿದೇಶೀಯರು ಮುಂದಾಗಿ ಈ ಜಿಲ್ಲೆಯ ಪಂಚೆಯ ಮೇಲೆ ಅಲ್ಲಲ್ಲಿ ಉಗ್ರಾಣಗಳನ್ನಿಟ್ಟುಕೊಂಡಿದ್ದರು.

ಅಷ್ಟೇ ಅಲ್ಲ. ಈ ಜಿಲ್ಲೆಯ ತೋಟಿಗರು ಸಮುದ್ರ ದಂಡೆಯಿಂದ ಬಹು ದೂರದಲ್ಲಿರುವ ಭಯಾನಕ ಕಾಡುಗಳ ಮಧ್ಯದ ಕೊಳ್ಳಗಳಲ್ಲಿ ಸಹ ವಲಸಿ ತಮ್ಮ ಕೃಷಿಯನ್ನು ಯಶಸ್ವಿಯಾಗಿ ನಡಿಸಿ ಸುಖಸಂಪನ್ನರಾಗಿದ್ದರೆಂಬುದರ ಮೇಲಿಂದ ಜನರು ಕೃಷಿಯಲ್ಲಿ ಎಷ್ಟು ಆಸಕ್ತರೂ ಉತ್ಸಾಹಿಗಳೂ ಸಾಹಸಿಗಳೂ ಆಗಿದ್ದರೆಂಬುದು ಸ್ಪಷ್ಟವಾಗುತ್ತದೆ. ಉತ್ತರ ಕನ್ನಡದಲ್ಲಿ ಬೇಸಾಯ ಕ್ಷೇತ್ರವು ೩ ಲಕ್ಷ ೩೦ ಸಾವಿರ ಎಕರೆಗಳ ವರೆಗಿತ್ತೆಂದು ಆಧಾರವು ದೊರೆಯುತ್ತದೆ. ಇಂದಿಗೆ ಅದು ಎರಡು ವರೆ ಲಕ್ಷಕ್ಕಿಂತ ಕಡಿಮೆಯಾಗಿದೆ. ೧೮೫೦ ರ ವರೆಗೂ ಈ ಕೃಷಿಯೂ ಭಾರಿ ಉನ್ನತಾವಸ್ಥೆಯಲ್ಲಿದ್ದಿತೆಂದು ಗೊತ್ತಾಗುತ್ತದೆ. ಆದರೆ ಮುಂದೆ ಮಾತ್ರ ಅದಕ್ಕೆ ಕ್ಷೀಣಾವಸ್ಥೆಯು ಪ್ರಾಪ್ತವಾಯಿತು.

ಉತ್ತರ ಕನ್ನಡದ ವ್ಯಾಪಾರದ ಇತಿಹಾಸವಾದರೂ ಘನವಾಗಿರುವುದು. ಸದಾಶಿವಗಡ, ಕಾರವಾರ, ಚೆಂಡಿಯೆ, ಬೇಲೆಕೇರಿ, ಅಂಕೋಲಾ, ಗಂಗಾವಳಿ, ತದಡಿ, ಕುಮಟಾ, ಮಿರ್ಜಾನ್, ಹೊನ್ನಾವರ, ಮುರ್ಡೇಶ್ವರ, ಮಂಕಿ, ಶಿರಾಲಿ, ಭಟ್ಕಳ ಇವೆಲ್ಲವೂ ಬಂದರಗಳಾಗಿದ್ದವು. ಇವುಗಳಲ್ಲಿ ಎಷ್ಟೋ ಬಂದರಗಳಲ್ಲಿ ವಿದೇಶೀಯರು ವ್ಯಾಪಾರಕ್ಕಾಗಿ ಕಟ್ಟಿಸಿದ ವಖಾರಿಗಳಿದ್ದವು. ಒಳದೇಶದ ವ್ಯಾಪಾರವು ಈ ಜಿಲ್ಲೆಯ ಬಂದರಗಳ ಮುಖಾಂತರವಾಗಿ ದೊಡ್ಡ ಪ್ರಮಾಣದಿಂದ ನಡೆಯುತ್ತಿತ್ತು. ೧೮೫೦ ರ ಅಂಕೆಯನ್ನು ನೋಡಿದರೆ ಇಲ್ಲಿಯ ಬಂದರಗಳಿಂದ ಸುಮಾರು ಒಂದುವರೆ ಕೋಟಿ ರೂ (ಈಗಿನ ದರದಂತೆ ೩೦ ಮೂರು ೪—೫ ಕೋಟಿ ರೂ) ಗಳ ಮಾಲು ನಿರ್ಯಾತವಾಗುತ್ತಿತ್ತೆಂದೂ ಸುಮಾರು ೭೦ ಲಕ್ಷ ರೂ, ಗಳ ಮಾಲು ಆಯಾತವಾಗುತ್ತಿದ್ದಿತೆಂದೂ ಗೊತ್ತಾಗುತ್ತದೆ. ಆದರೆ ಸದರ್ನ ಮರಾಠಾ ರೇಲ್ವೆಯಾಗಿ ಆರಳಿಯ ವ್ಯಾಪಾರವು ನಿಂತುಹೋದುದರಿಂದ ಉತ್ತರ ಕನ್ನಡದ ಬಂದರಗಳು ಪೂರಾಲಿಗೆ ಬಿದ್ದು ವ್ಯಾಪಾರ ನಷ್ಟವಾಯಿತು. ಈಗ ಅಳಿಕೆ, ಯಾಲಕ್ಕಿ, ಮೆಣಸುಗಳ ವ್ಯಾಪಾರವನ್ನು ಬಿಟ್ಟರೆ ಹೇಳತಕ್ಕಂಥ ವ್ಯಾಪಾರವೇ ಇಲ್ಲ.

ಉತ್ತರ ಕನ್ನಡದ ಕೈಗಾರಿಕೆಯಾದರೂ ವೃದ್ಧಿಯನ್ನು ಹೊಂದಿತ್ತೆಂಬುದು ಇತಿಹಾಸದಿಂದಲೇ ವ್ಯಕ್ತವಾಗುತ್ತದೆ. ೧೭ನೇ ಶತಮಾನದಲ್ಲಿ ಕಾರವಾರದ ಸುತ್ತಲೂ ೫೦ ಸಾವಿರ ಮಗ್ಗಗಳಿದ್ದವೆ ಹಾಗೂ ಅವುಗಳಿಂದ ಉತ್ತಮ ತರದ ನೂಲುಮಾಲು ಪರದೇಶಕ್ಕೆ ಹೋಗುತ್ತಿತ್ತೆಂದೂ ಉಲ್ಲೇಖವಿದೆ. ಗಂಧ ಮತ್ತು ದಂತಗಳನ್ನು ಕೊರೆಯುವುದು ಧಾತುವಿನ ಕೈಗಾರಿಕೆ ಕೋಲಿನ ಕೈಗಾರಿಕೆ, ಕಲ್ಲು ಒಡೆಯುವುದು ಇವೇ ಮೊದಲಾದ ಕೈಗಾರಿಕೆಗಳಿದ್ದುವೆಂಬುದು ಈಗಿದ್ದ ಆ ಕೈಗಾರಿಕೆಯ ಕೆಲವು ಅವಶೇಷಗಳಿಂದಲೂ ಐತಿಹಾಸಿಕ ಆಧಾರಗಳಿಂದಲೂ ತಿಳಿದು ಬರುತ್ತದೆ. ಒಟ್ಟಿಗೆ ಉತ್ತರ ಕನ್ನಡದ ಕೈಗಾರಿಕೆಯು ಪ್ರೇಕ್ಷಣೀಯವಾಗಿತ್ತೆಂಬುದು ಸ್ಪಷ್ಟವಿದೆ.

ಒಂದು ಕಾಲದಲ್ಲಿ ಉತ್ತರ ಕನ್ನಡದ ನಾವಿಕರು ತಮ್ಮ [illegible] ಯನ್ನು ಪಡೆದಿದ್ದರು. ಅವರು ಪರದೇಶಗಳೊಡನೆ [illegible] ನಡೆಸುತ್ತಿದ್ದರು. ಉತ್ತರ ಕನ್ನಡದ ವ್ಯಾಪಾರವು ದೊಡ್ಡದಿದ್ದುದರಿಂದ ಹಾಗೂ ಈಗಿನಂತೆ ಉಗಿಹಡಗುಗಳಿಲ್ಲದುದರಿಂದ ಅನೇಕರು ನಾವಿಕ ವೃತ್ತಿಯಿಂದ ಜೀವಿಸುತ್ತಿದ್ದರು. ಅದಕ್ಕೆ ಸರಿಯಾಗಿ ಹಡಗುಕಟ್ಟುವ ಕೆಲಸವೂ ಈ ಜಿಲ್ಲೆಯಲ್ಲಿ ನಡೆಯುತ್ತಿತ್ತೆಂಬುದು ಸ್ಪಷ್ಟವಿದೆ.

೧೮೫೦ ರ ವರೆಗೆ ಉತ್ತರ ಕನ್ನಡದ ಜನಸಂಪತ್ತು ವೃದ್ಧಿಹೊಂದುತ್ತಿದ್ದಿತೆಂಬುವದರ ಮೇಲಿಂದ ಜನರು ಆರೋಗ್ಯ ಸ್ಥಿತಿಯಲ್ಲಿದ್ದರೆಂದು ದರಿದ್ರ ವ್ಯಕ್ತಿಗಳೆಯಲು ಬರುವಂತಿಲ್ಲ.

ಈ ಮೇರೆಗೆ ಉತ್ತರ ಕನ್ನಡವು ಕೃಷಿ, ಕೈಗಾರಿಕೆ, ವ್ಯಾಪಾರ ನಾವಿಕತನ ಇತ್ಯಾದಿಗಳಿಂದ ಸಮೃದ್ಧವಾಗಿ ಸಾಂಪತ್ತಿಕ ದೃಷ್ಟಿಯಿಂದ ಉನ್ನತ ಸ್ಥಿತಿಯಲ್ಲಿತ್ತೆಂಬುದನ್ನು ಐತಿಹಾಸಿಕ ಆಧಾರಗಳಿಂದಲೇ ಸಿದ್ಧ ಮಾಡಬಹುದು.

ಇದೆಲ್ಲ ಸರಿ ಆದರೆ ಕಾಲಚಕ್ರವು ಬದಲಾಯಿತು. ಉತ್ತರ ಕನ್ನಡದ ಬಟ್ಟೆಯ ಕೈಗಾರಿಕೆಯು ನಾಮಶೇಷವಾಯಿತು ದಕ್ಷಿಣ ಮರಾಠಾ ರೇಲ್ವೆಯಾದಂದಿನಿಂದ ಉತ್ತರ ಕನ್ನಡದ ಆರಳಿಯ ಬಂದರಗಳು ಪಾಳುಬಿದ್ದವು. ಅನೇಕ ವ್ಯಾಪಾರಿಗಳ ಮತ್ತು ಅವರನ್ನವಲಂಬಿಸಿದ್ದವರ ವೃತ್ತಿಚ್ಛೇದವಾಯಿತು. ಆರಳಿಯ ವ್ಯಾಪಾರವು ನಿಂತದ್ದರಿಂದಲೂ ದಂಡೆಯ ಮೇಲಿನ ವ್ಯವಹಾರವು ಉಗಿಹಡಗುಗಳಿಂದ ನಡೆಯುತ್ತಿದ್ದುದರಿಂದಲೂ ನಾವಿಕವೃತ್ತಿಯೂ ನಷ್ಟವಾಯಿತು. ಇವಲ್ಲದೆ ಇನ್ನೂ ಅನೇಕರ ವೃತ್ತಿಗಳು ನಷ್ಟವಾದುವು.

ಉತ್ತರ ಕನ್ನಡದ ಅನೇಕ ಜನರ ವೃತ್ತಿಯು ಹೀಗೆ ಕ್ರಮೇಣ ನಷ್ಟವಾಗಿ ನಿರುದ್ಯೋಗ ವೃತ್ತಿಯು ಬೆಳೆಯಹತ್ತಿದುದರಿಂದ ದಾರಿದ್ರ್ಯವು ಶಾನಾಗಿ ಪ್ರವೇಶಿಸಿತು. ಉಳಿದ ವೃತ್ತಿಯು ಕೃಷಿಯೊಂದೇ ಆಯಿತು. ನಿರುದ್ಯೋಗಿಗಳಾದವರು ಕೃಷಿಯನ್ನು ಕೈಕೊಳ್ಳಬೇಕು ಇಲ್ಲವೆ ಜಿಲ್ಲೆಯನ್ನು ಬಿಟ್ಟುಹೋಗಬೇಕು. ಈ ಸ್ಥಿತಿಯು ಪ್ರಾಪ್ತವಾಯಿತು. ಉತ್ತರ ಕನ್ನಡದ ಕೃಷಿಯಾದರೂ ಮೊದಲಿನಂತೆ ಸಮೃದ್ಧ ಸ್ಥಿತಿಯಲ್ಲಿದ್ದರೆ ಈಗಿನಂತಹ ಕಂಗಾಲಸ್ಥಿತಿಯು ಬರುತ್ತಿರಲಿಲ್ಲ. ಉತ್ತರ ಕನ್ನಡಿಗರಿಗೆ ಹೊಟ್ಟೆಗಾಗಿ ಪರರ ಮುಖ ನೋಡಬೇಕಾದ ಪ್ರಸಂಗವು ಬರುತ್ತಿರಲಿಲ್ಲ. ಆದರೆ ಆ ಕೃಷಿಯೂ ಸಹ ಹೇಗೆ ಅಧಃಪಾತ ಹೊಂದಿತು, ಆದರಿಂದ ಉತ್ತರ ಕನ್ನಡವು ಎಂತಹ ಶೋಚನೀಯ ಸ್ಥಿತಿಯಲ್ಲಿದೆ ಎಂಬುದನ್ನು ಮುಂದಿನ ವಾರ ಚರ್ಚಿಸುವೆವು. —ಕಾನಡಾ ಧುರೀಣ

ಕನ್ನಡಿಗ.

ಬಾಗಲಕೋಟೆ ಭಾದ್ರಪದ ಬಹುಳ ೩೦ ಶಕೆ ೧೮೪೯.

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೋಹಪಾಡಿ ಕಟ್ಟುವೆನಾನು ।
ನಿನ್ನ ಬೆಸನವಮಾಡಿದಂಥ ಮಕ್ಕಳ ದೊಮ್ಮ!
ಚಿನ್ನ ದಾಸರು ಚಿನ್ನ ಮೋಹಬಸ್ತಿಯ ನೊಂದು ಚಿನ್ನಯಶಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೆ

— ಅಂಬಿಕಾತನಯ ದತ್ತ

ಹಿಂದುಸ್ಥಾನೀ ಸೇವಾದಲವು ಹಿಂದುಸ್ಥಾನದಲ್ಲಿ ಸ್ವಲ್ಪೇ ಕಾಲದಲ್ಲಿ ಒಳ್ಳೇ ಪ್ರಖ್ಯಾತಿಯನ್ನು ಹೊಂದಿದ್ದು ಕನ್ನಡಿಗರಿಗೆಲ್ಲ ಒಳ್ಳೇ ಅಭಿಮಾನದ ಸಂಗತಿ. ಸ್ವಯಂಸೇವಕರ ಚಳವಳಿ, ಕಾಂಗ್ರೆಸ್ಸ ಕಾರ್ಯ, ನೆರೆಹಾವಳಿ, ಉತ್ಸವಾದಿಗಳಲ್ಲಿ ಸಹಾಯ, ಇವೇ ಮೊದಲಾದ ರಾಷ್ಟ್ರನಿರ್ಮಾಣ ಕಾರ್ಯಗಳಲ್ಲಿ ಸೇವಾದಲವು ಸಂಪೂರ್ಣವಾಗಿ ತೊಡಗಿಕೊಂಡಿದೆ. ಚೀನ ದೇಶಕ್ಕೆ ಶುಶ್ರೂಷಾಪದಕವನ್ನು ಕಳುಹಿಸುವ ಬಗ್ಗೆ ಚಳವಳ ಮಾಡಿ, ಇದೊಂದು ಅಂತರರಾಷ್ಟ್ರೀಯ ಪ್ರಶ್ನೆಯಾಗುವಂತೆಯೂ ಈ ದಲವು ಪ್ರಯತ್ನಿಸಿದೆ. ಇದಕ್ಕೆಲ್ಲ ನಮ್ಮ ಕರ್ನಾಟಕದ ಇದೇ ನಮ್ಮ ಹರ್ಡೀಕರ ನಾರಾಯಣರಾಯರು ಕಾರಣರೆಂಬುದು ಎಲ್ಲರಿಗೂ ತಿಳಿದ ವಿಷಯ. ಈಗ್ಗೆ ಇವರು ಸಿತೀವ.ನೆಯಲ್ಲಿ ಸ್ವಯಂಸೇವಕರ ಶಿಕ್ಷಣಕ್ಕಾಗಿ ವರ್ಗವನ್ನು ತೆಗೆಯಬೇಕೆಂದು ಯೋಚಿಸಿದ ಸಂಗತಿಯು ಇದೇ ಸಂಚಿಕೆಯಲ್ಲಿ ಪ್ರಸಿದ್ಧವಾಗಿದೆ. ಡಾ. ಹರ್ಡೀಕರರಂತಹ ನಿಃಸ್ವಾರ್ಥ, ಹಾಗೂ ಸ್ವದೇಶಹಿತಚಿಂತನಾತತ್ಪರರಾದ ಮುಂದಾಳುಗಳ ಪ್ರೋತ್ಸಾಹನದಿಂದ ನಡೆಯುವ ಈ ವರ್ಗದಲ್ಲಿ ಕನ್ನಡ ತರುಣರು ತಂಡತಂಡವಾಗಿ ಸೇರಿ, ಶಿಕ್ಷಣ ಹೊಂದುವದು ಅತ್ಯವಶ್ಯವಾದ ಸಂಗತಿ. ಬಾಗಲಕೋಟೆಯ ಸಾರ್ವಜನಿಕಸೇವಾತತ್ಪರರೂ ಶಾಂತಸ್ವಭಾವದವರೂ ಆದ ತರುಣ ಹಾಗೂ ಉತ್ಸಾಹೀ ಶ್ರೀ. ಜೋರಾಪುರ ಕೃಷ್ಣರಾಯರೇ ಈ ವರ್ಗದ ಮುಖ್ಯಸ್ಥರಾಗುವದರಿಂದ ಈ ಸಲದ ವರ್ಗವು ಹಿಂದಿನ ವರ್ಗಗಳಿಗಿಂತ ಹೆಚ್ಚು ಶಿಸ್ತಿನಿಂದ ನಡೆಯುವದಾಗಿ ನಮ್ಮ ವಿಶ್ವಾಸವಿದೆ. ವಿಜಾಪುರ ಜಿಲ್ಲೆಯ ತರುಣರಂತೂ ಇದರ ಸಂಪೂರ್ಣ ಲಾಭ ಪಡೆಯಬೇಕಾಗಿ ನಮ್ಮ ಆಗ್ರಹವಿದೆ. ಕೃಷ್ಣಾನದಿಯ ಆಚೆಯ ದಂಡೆಯಲ್ಲಿ ಈ ಸಲ ಶ್ರೀ. ಮಂಚಪ್ಪ ಹರ್ಡೀಕರರು ಕನ್ನಡಿಗರಾದ ವೀರಶೈವ ಯುವಕರನ್ನು ರಾಷ್ಟ್ರಕಾರ್ಯಕ್ಕಾಗಿ ಸಿದ್ಧಪಡಿಸುತ್ತಲಿರುವರು. ಈಚೆಯ ದಂಡೆಗೆ ಶ್ರೀ. ನಾರಾಯಣಪ್ಪಾ ಹರ್ಡೀಕರರು ಳನೇ ಸಲ ಮತ್ತೆ ಕನ್ನಡ ತರುಣರನ್ನು ರಾಷ್ಟ್ರಕಾರ್ಯಕ್ಕೆ ಹಚ್ಚುವ ಪ್ರಯತ್ನವನ್ನು ಹೂಡಿದ್ದಾರೆ. ರಾಮಾಯಣದಂತಹ ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಿದ್ದ ವಿಜಾಪುರ ಜಿಲ್ಲೆಯ ಈ ಪವಿತ್ರವಾದ ಸ್ಥಾನದಲ್ಲಿ, ಪವಿತ್ರವಾದ ಕೃಷ್ಣಾ ನದಿಯ ದಂಡೆಯ ಎರಡೂ ಭಾಗಗಳಲ್ಲಿ, ಅತ್ಯುಚ್ಚವಾದ ಧ್ಯೇಯದಿಂದ ಪ್ರೇರಿತರಾಗಿ, ತಮ್ಮ ತಮ್ಮ ಶುದ್ಧ ಭಾವನೆಯಂತೆ, ಅತ್ಯಂತ ಉತ್ಸಾಹಿಗಳೂ, ತೇಜೋಮಯರೂ ಆದ ಈ ಹರ್ಡೀಕರ ದ್ವಯರು ನಡೆಸಿದ ರಾಷ್ಟ್ರಕಾರ್ಯವು ಭರದಿಂದ ಸಾಗಿ ಕರ್ನಾಟಕದ ಯುವಕರು ಈ ಕಾರ್ಯದಲ್ಲಿಯೇ ತತ್ಪರರಾಗುವಂತೆ ಪರಮೇಶ್ವರನು ಎಲ್ಲರಿಗೂ ಪ್ರೇರಿಸಲೆಂದು ಅವನಲ್ಲಿ ಮೊರೆಯಿಡುವೆವು.

'ಕರ್ನಾಟಕ ಭೂಷಣ'ರ ನಿಜರೂಪವು- ಕನ್ನಡಿಗರು ತಮ್ಮ ಭಾಷಾವಿಷಯದಲ್ಲಿ ಕಣ್ಣು ತೆರೆಯುತ್ತ ಸುಮಾರು ಇಪ್ಪತ್ತು ವರ್ಷಗಳಾದವಷ್ಟೆ! ಆರಂಭಕ್ಕೆ ಕನ್ನಡ ನಾಡಿನ ಸ್ವತ್ವವನ್ನು ಸರ್ವತೋಮುಖದಿಂದಲೂ ಸಂರಕ್ಷಿಸಿಕೊಳ್ಳಬೇಕೆಂಬ ಚಳವಳಿಯು ಪ್ರಾರಂಭವಾಗಿ ೮—೧೦ ವರ್ಷಗಳಾದವು. ಆ ವೇಳೆಯಿಂದಲೂ ಕನ್ನಡಿಗರಲ್ಲಿ ಯಾರಾದರೂ ನೈಜಸಿವಾಭಿಮಾನ ಪ್ರೇಮದಿಂದ ತಮ್ಮ ಭಾಷೆಯ ಉತ್ಕರ್ಷಕ್ಕಾಗಿ ಯತ್ನಿಸಿದರೆ, ಅವರು ಮರಾಟೆ ಭಾಷೆಯ ಪರಮ ವೈರಿಗಳೆಂದೂ ದ್ವೇಷಿಗಳೆಂದೂ ಇಲ್ಲಿಯ ಮರಾಟೆ ಪ್ರೇಮಿಗಳಿಂದ ದೂಷಿಸಲ್ಪಡುತ್ತಿದ್ದರು. ಆದರೆ ಇಂಥ ನರಿಗಳ ಕೂಗಿಗೆ ಸೊಪ್ಪು ಹಾಕದೆ ಆ ಕನ್ನಡಾಗ್ರೇಸರರು ತಮ್ಮ ಭಾಷಾಸುಂದರಿಯ ರಥವನ್ನು ಕ್ರಮದಿಂದ ಮುಂದಕ್ಕೆ ಸಾಗಿಸಿದರು. ಅವರ ಈ ಯತ್ನದಿಂದ ಸ್ವಭಾಷಾಭಿಮಾನವೂ ಅದರ ಜೊತೆಗೆ ಕರ್ನಾಟಕದ ಪ್ರಾಚೀನ ಸಂಸ್ಕೃತಿಯ ಬಗ್ಗೆ ಪ್ರೀತಿಯೂ ನಮ್ಮ ಪ್ರಾಂತದ ತರುಣರಲ್ಲಿ ಭರದಿಂದ ಬೆಳೆಯಹತ್ತಿ ಅವರು ಕನ್ನಡ ತಾಯಿಯ ಇತಿಹಾಸವನ್ನೂ ಅದರ ಸ್ವತಂತ್ರ ವೈಶಿಷ್ಟ್ಯವನ್ನೂ ಪುನರುಜ್ಜೀವಿಸುವದಕ್ಕೆ ಪ್ರಯತ್ನಿಸಹತ್ತಿರುವರು. ನಾವು ಮರಾಟೆಯ ದ್ವೇಷಿಕರೆಂದು ಕೂಗುವ ಕುಶ್ಚಿತರ ಸೊಲ್ಲು ಇನ್ನು ಅಡಗಿತೆಂದು ನಮಗೆ ಭಾಸವಾಗಿತ್ತು. ಆದರೆ ಕನ್ನಡನುಡಿಯ ಭಾಗ್ಯೋದಯದ ಇಷ್ಟೆಲ್ಲ ಲಕ್ಷಣಗಳನ್ನು ಅವರಾದರೂ ಸಹಿಸುವದೆಂತು!! 'ಭಾಸ್ಕರನ ಕಿರಣಗಳನ್ನು ಕತ್ತಲಡಗಿದ್ದ ಚೋರರು ತಿರಸ್ಕರಿಸುವಂತೆ' ಇಲ್ಲಿಯ ಮರಾಟೆ ಜೀವಿಯುಳ್ಳ ಮಾತೃವಂಚಕರಾದ ಕೆಲವು ವ್ಯಕ್ತಿ ವಿಶೇಷಗಳಿಗೆ ಇವೆಲ್ಲ ಅಪಥ್ಯವಾಗಿ ಪರಿಣಮಿಸಿದಂತೆ ತೋರುತ್ತದೆ. "ಎಲ್ಲಿ ಕನ್ನಡ ಪ್ರೇಮವೋ ಅಲ್ಲಿ ಮರಾಟೆ ದ್ವೇಷವಿರಲೇಬೇಕೆಂದು" ತರ್ಕಿಸುವ ಕುತ್ಸಿತರ ಕುಹಕತನವು ಅಡಗಿರದೆ ಅವರ ಕುತರ್ಕವು ಇನ್ನೂ ಒಂದು ಮಜಲು ಮುಂದೆ ಹೋದದ್ದು ನೋಡಿ ಮನಸ್ಸಿಗೆ ವ್ಯಸನವಾಗುತ್ತಿದೆ. ಇಷ್ಟು ದಿವಸ ಭಾಷೆಯ ಪೂರ್ತಿಯೇ ಇದ್ದ ನಮ್ಮ ಮೇಲಿನ ದ್ವೇಷದ ಆರೋಪವು(?) ಈಗ ಕರ್ನಾಟಕದ ಎಳ್ಳಿನ ಬಗ್ಗೆ ನಮಗಿರುವ ಉಳಿದ ವಿಚಾರಗಳಲ್ಲಿಯೂ ಇದೆಯೆಂದು ಸಾಧಿಸುವ ಸಂಭಾಗಾರರು ಹೊಗಬೀಳುತ್ತಿರುವರು. ಇದಕ್ಕೊಂದು ಉದಾಹರಣೆ- "ಇಂಥದೊಂದು ಉತ್ಸವವನ್ನು ಮಹಾರಾಷ್ಟ್ರಿಗರು ಮಾಡುತ್ತಬಂದಿಲ್ಲ, ಅದನ್ನು ಕನ್ನಡಿಗರು ಮಾಡಬೇಕೆಂದು ಬಯಿದಸಿರೆ ಕನ್ನಡಿಗರು ಮರಾಟಿಗರನ್ನು ದ್ವೇಷಿಸಿದಂತಾಯಿತು." ಎಂಬ ಕ್ಷುದ್ರವಾದವೊಂದು ಹೊಸದಾಗಿ ಉದಯಿಸಿದೆ. ಮಹಾರಾಷ್ಟ್ರ ತಂಗಿಯ ಮನೆಯಲ್ಲಿ ನವರಾತ್ರಿ ಉತ್ಸವವು ಜರಗಿಸಲ್ಪಡುವದಿಲ್ಲ; ಕನ್ನಡ ಅಕ್ಕನು ತನ್ನ ಮನೆಯಲ್ಲಿ ನವರಾತ್ರಿ ಮಹೋತ್ಸವವನ್ನು ಜರುಗಿಸಿದರೆ, 'ನನ್ನ ಮೇಲಿನ ಅಸೂಯೆಯಿಂದ ನೀನು ಮಾಡುತ್ತಿ'ಯೆಂದು ತಂಗಿಯು ಕೋಪಿಸಿಕೊಳ್ಳಬೇಕೆ? ಕೋಪಿಸಿಕೊಂಡರೂ, 'ತಂಗೀ ಇದರಲ್ಲಿ ಅಸೂಯೆಯೇನಿರದು ಇದು ನನ್ನ ಮನೆತನದ ಕುಲಾಚಾರವು ಪರಂಪರೆ ಬಂದದ್ದು'

ಎಂದು ತಂಗಿಯನ್ನು ಸಮಾಧಾನಮಾಡಬಹುದು. ಆದರೆ ಇಲ್ಲಿರುವ ಆ ತಂಗಿಯ ಶೋತೃಗಳನ್ನು ತೃಪ್ತಿಪಡಿಸುವದೆಂತು! "ಸತ್ಯದ ಧರ್ಮವ ನಿಶ್ಚಯದಿ ಬೋಧಿಸೆ! ಶೋತೃಗಳ ಮನಸಿಗೆ ಸೊಗಸೀತೆ" ಎಂದು ಕನಕನು ಅನ್ನುವಂತೆ ನಾವು ಗಂಟಲು ಸೀಳುವವರೆಗೆ ಒದರಿಕೊಂಡರೂ ಕೈ ಮೇಲಕ್ಕೆತ್ತಿ 'ನಮ್ಮ ಭಾವದಲ್ಲಿ ದ್ವೇಷವಿಲ್ಲ' ವೆಂದು ಸಾರಿ ಸಾರಿ ಹೇಳಿದರೂ ಈ ಹಂಡಬಂಡರಿಗೆ ಅದು ರುಚಿಸದು.

ಕರ್ನಾಟಕ ಭೂಷಣರೆಂದು ಮೆರೆಯುತ್ತಿರುವ ಕೌಜಲಗಿ ಶ್ರೀನಿವಾಸರಾಯರು ಮೊನ್ನೆ ಧಾರವಾಡದಲ್ಲಿಕ್ರೋಧಾವಿಷ್ಟರಾಗಿ ತಮ್ಮ ಅಮೋಘವಾಣಿಯಿಂದ ಕನ್ನಡಿಗರನ್ನೂ ಅವರ ಸಾಂಸ್ಕೃತಿಕ ಚಳವಳಿಗಳನ್ನೂ ಅಗ್ಗಳವಾಗಿ ಹಳಿದುಕೊಂಡಿರುವರು. ಏನನ್ನ ಬೇಕು ಇವರ ಈ ಬಾಯಿಬಡಕತನಕ್ಕೆ! ಕರ್ನಾಟಕಾಭಿಮಾನದ ಇವರ ಕವಚವು ಹೀಗೆ ಒಮ್ಮೆಲೆ ಕಳಚಿಬಿದ್ದುದೇಕೋ ತಿಳಿಯದು. ಇಲ್ಲದ ತರ್ಕ ಬೆಳೆಸಿ ಫಲವೇನು? "ವೃದ್ಧಾಸ್ತೇನ ವಿಚಾರಣೀಯ ಚರಿತಾಃ......' ಎಂದು ತಿಂದುಕೊಂಡು ತರುಣರಾದವರು ತಮ್ಮ ತಾಯ್ನಾಡಿನ ಸೇವೆಯನ್ನು ಭರದಿಂದಲೂ ಹೆಚ್ಚು ಜವಾಬದಾರಿಯಿಂದಲೂ ನಡಿಸಬೇಕು. ಏನಾದರೂ ಹಿರಿಯರೇ ಅವರು! ಅವರಿಗೆ ಹೆಸರಿಡುವದು ನಮಗೆಂತು ಒಪ್ಪೀತು!

ಇಹವೃತ್ತ.

ಇಲ್ಲಿ ತಾರೀಖು ೧೮ ೯–೨೭ ನೇ ದಿನಸ ೭೩ ಸೆಂಟು ಮತ್ತು ತಾ|| ೨೩–೯–೨೭ ನೇ ದಿವಸ ೧ ಇಂಚು ೮೫ ಸೆಂಟು ಮಳೆಯಾಗಿರುತ್ತದೆ. ಸುತ್ತಲಿನ ಸ್ಥಳಗಳಿಗೂ ಮಳೆಯಾಗಿದೆ.

ಇಂದೂರಿನ ಭಾಗೀರಥಿ ದೇವಾಸಕರ ಇವರ ಭಜನೆ, ಪುರಾಣ ಕೀರ್ತನಗಳ ಸಪ್ತಾಹವು ೨೨ನೇ ತಾ|| ದಿನ ಮುಗಿಯಿತು. ಶ್ರೀ ಸಂಗಮಲಾಲ ರಾಜಾರಾಮ ಇವರ ಬಂಗಲೆಯಲ್ಲಿ ಈಗ್ಗೆ ೧೫ ದಿನಗಳಿಂದ ಭಕ್ತಿಪರ ಉತ್ಸವವು ನಡೆದೇಯಿದೆ.

ಶ್ರೀ ಬಾಬೂಸೇಠ್ಜಿಗಳ ಗಣಪತ್ಯುತ್ಸವದ ವಿಸರ್ಜನೆಯ ಮೆರವಣಿಗೆಯ ದಿನ ಫತ್ತೇಸಾಬ ಮಸೀದೆಯ ಮುಂದೆ ವಾದ್ಯವನ್ನು ನಿಲ್ಲಿಸುವ ಪದ್ಧತಿಯು ಇಲ್ಲದಿದ್ದರೂ ಆ ದಿನ ಬೇಕೆಂದು ನಿಲ್ಲಿಸಿದರೆಂದೂ, ಭಜನೀ ಮೇಳೆಯವರು ತಮ್ಮ ಭಜನೆಯನ್ನು ಪದ್ಧತಿಗೆ ವಿರುದ್ಧವಾಗಿ ನಿಲ್ಲಿಸುವದಿಲ್ಲೆಂದು ಹೇಳಿದ ಕೂಡಲೇ ತಾವೇ ಆ ಮಂತ್ರಣ ಕೊಟ್ಟ ಆ ಮೇಳಿಗೆ ಮನೆಗೆ ಹೋಗಲು ಶೇಠ್ಜಿಗಳು ಔಧ್ಧತ್ಯದಿಂದ ಹೇಳಿದರೆಂದೂ ಕೇಳಿ ನೊಂದುಕೊಂಡ ಓರ್ವ ಹಿಂದೂ ಧರ್ಮೀಯನು "ಹಿಂದೂಗಳಾದ ಶೇಠ್ಜಿಗಳು ಹೀಗೆ ಆಚರಿಸಿದ್ದು ಭೂಷಣವೇ? ಮತ್ತೂ ಇದರ ಒಳಬಡತದ ಕಾರಣವನ್ನು ಶೇಠ್ಜಿಗಳು ಸಾರ್ವಜನಿಕವಾಗಿ ಹೇಳುವರೋ?" ಎಂಬದಾಗಿ ಕೇಳುತ್ತಾನೆ. ಆದರೆ ಪ್ರಾಕಾರದೊಳಗಿಂದ ಪ್ರವೇಶಿಸಿ ಪ್ರಾಸಾದದಲ್ಲಿ ಹೊಕ್ಕ ಶೇಠ್ಜಿಗಳ ದಿವ್ಯ ಚಿತ್ತಕ್ಕೆ ತಗಲಿ, ಇದಕ್ಕೆ ಉತ್ತರ ಬರುವದು ಎಂತಹ ಮಾತೋ!

ಯಶವಂತ ಸಂಗೀತ ನಾಟಕ ಮಂಡಳದವರ ೨ ಪ್ರಯೋಗಗಳು ಇಲ್ಲಿ ಆದವು. ನಾಳಿನ ವಾರದಲ್ಲಿಯೂ ಎರಡು ಆಗತಕ್ಕವಿವೆ. ಮರಾಟಿಗರನ್ನ ಅಭಿನಂದಿಸುವ ಸಮಯದಲ್ಲಿ ಇಲ್ಲಿಯ ಓರ್ವ ವಕೀಲರು ಕನ್ನಡಿಗರನ್ನು ಕೊಂಚ ಹಳಿದರಂತೆ! "ಅವ್ಯಾಪಾರೇಷು ವ್ಯಾಪಾರಃ"

ರಂಗಭೂಮಿಯ ಸಮಾಚಾರ.

ಧಾರವಾಡದ ಶ್ರೀ. ದೇಶಪಾಂಡೆ ಗುರುರಾಯರು ಶ್ರೀಕೃಷ್ಣ ಸಂಗೀತ ನಾಟಕ ಮಂಡಳವನ್ನು ಬಿಟ್ಟು ಧಾರವಾಡಕ್ಕೆ ಬಂದಿರುವರು. ಹೊಸನೊಂದು ನಾಟಕ ಕಂಪನಿಯನ್ನು ಹೊರಡಿಸುವ ವಿಚಾರದಲ್ಲಿರುವರಾಗಿ ತಿಳಿಯುತ

ವಿನೋದ ರತ್ನಾಕರ ವೀರಣ್ಣನವರ ಗುಬ್ಬಿಯವರ ಕಂಪನಿಯವರ ಕಾರ್ಯಕ್ರಮವು ಹುಬ್ಬಳ್ಳಿಯಲ್ಲಿ ನಡೆದಿದೆ. ಧಾರವಾಡಕ್ಕೂ ಮಧ್ಯೆ ಮಧ್ಯೆ ಹೋಗಿ ಆಡುತ್ತಲಿರುವರು. ಧಾರವಾಡಿಗರ ಪ್ರೋತ್ಸಾಹವು ಅವರಿಗೆ ಚನ್ನಾಗಿದೆ. ಬೆಳಗಾವಿಯಲ್ಲಿ ಪ್ಲೇಗು ಕಡಮೆಯಾದರೆ ಅಲ್ಲಿಗೆ ಹೋಗುವರು. ಇಲ್ಲವಾದರೆ ಬಾಗಲಕೋಟೆಗೆ ಬರುವರು.

ಶ್ರೀನಿವಾಸಪುರದ ಅನಂತನಾರಾಯಣ ನಾಟಕ ಸಭೆಯವರು ಗದುಗಿನ ಮಹಾಲಕ್ಷ್ಮೀ ನಾಟಕ ಶಾಲೆಯಲ್ಲಿ ತಮ್ಮ ಪ್ರಯೋಗಗಳನ್ನಾಡುತ್ತಲಿದ್ದಾರೆ.

ಸ್ವೀಕಾರ.

(೧) ತಾಯಿನಾಡು:—ಮೈಸೂರಲ್ಲಿ ಹೊರಟ ಇದೊಂದು ಹೊಸ ವಾರಪತ್ರಿಕೆ. ವಾರ್ಷಿಕ ಚಂದಾ ಪ್ರಸ್ಥಳಕ್ಕೆ ೨ ರೂ. ಕನ್ನಡಿಗರಿಗೆಲ್ಲ ಚಿರಪರಿಚಿತರಾದ ಶ್ರೀ ಪಾ. ರಾ ರಾಮಯ್ಯನವರೇ ಇದರ ಸಂಪಾದಕರು. "ನಿರ್ಭಯವಾಗಿಯೂ ನಿರ್ದಾಕ್ಷಿಣ್ಯವಾಗಿಯೂ ನಿಷ್ಪಕ್ಷಪಾತವಾಗಿಯೂ ಇದ್ದದ್ದನ್ನು ಹೇಳಿ ಜನಗಳಲ್ಲಿ ವ್ಯಾಪಿಸಿರುವ ಅಜ್ಞಾನವನ್ನು ಹೋಗಲಾಡಿಸುವದೂ ಅಧಿಕಾರಿಗಳಿಂದ ದುರ್ಬಲರಾದ ಪ್ರಜೆಗಳಿಗೆ ಸಂಭವಿಸುವ ಕಷ್ಟಗಳನ್ನು ಪ್ರಭುಗಳವರಿಗೂ ಮಹಾಜನಗಳಿಗೂ ತಿಳಿಸಿ, ಅದರ ನಿವಾರಣೋಪಾಯವನ್ನು ಸೂಚಿಸುವದೂ," ಈ ಪತ್ರಿಕೆಯ ಮುಖ್ಯೋದ್ದೇಶವು. ಶ್ರೀ. ರಾಮಯ್ಯನವರು ವೃತ್ತಪತ್ರಿಕಾ ವ್ಯವಸಾಯದಲ್ಲಿ ನುರಿತವರು ಕರ್ನಾಟಕತ್ವವನ್ನೂ ಅರಿತವರು. ಆದುದರಿಂದ ಈ ಪತ್ರಿಕೆಯು ಬೇಗನೇ ಜನಮಾನ್ಯವಾಗುವದಾಗಿ ನಾವು ನಂಬುತ್ತೇವೆ. ಕನ್ನಡಿಗರೆಲ್ಲ ಇದನ್ನು ಪ್ರೋತ್ಸಾಹಿಸಿ, ಈ ಪತ್ರಿಕೆಯನ್ನು ಮುಂದೆ ತಂದ ಶ್ರೇಯಸ್ಸಿಗೆ ಪಾತ್ರರಾಗುವರಾಗಿ ಕೋರುತ್ತೇವೆ.

ಉದಯಭಾರತ. ಮಂಗಳೂರಲ್ಲಿ ಹೊಸದಾಗಿ ಹೊರಟ ಸಚಿತ್ರ ತ್ರೈಮಾಸಿಕವು. ೨ ನೇ ಸಂಚಿಕೆಯು ಮಾತ್ರ ನಮ್ಮ ಕೈ ಸೇರಿದೆ. ವಾರ್ಷಿಕ ಚಂದಾ ಒಂದೇ ಒಂದು ರೂಪಾಯಿ. ವಿಮರ್ಶೆಯು ಮುಂದಿನ ಸಲ.

ನೋಟೀಸು.

ವಿಜಾಪೂರ ಜಿಲ್ಹಾ ಕೋಆಪರೇಟಿವ್ಹ ಇನ್‌ಸ್ಟಿಟ್ಯೂಟ ಬಾಗಲಕೋಟೆ ಇವರ ಕಚೇರಿಗೆ ಒಬ್ಬ ಕಾರಕೂನನು ಬೇಕಾಗಿರುತ್ತದೆ. ಆದ್ದರಿಂದ ಅಕ್ಟೋಬರ ೧೦ ನೇ ತಾರೀಖಿನವರೆಗೆ ಕೆಳಗೆ ಸಹಿ ಮಾಡಿದವರ ಕಡೆಗೆ ಉಮೇದವಾರರು ಅರ್ಜಿಮಾಡಿಕೊಳ್ಳಬೇಕು. ಉಮೇದವಾರರಿಗೆ ಚನ್ನಾಗಿ ಕನ್ನಡ ಮತ್ತು ಇಂಗ್ಲೀಷ ಓದಲಿಕ್ಕೂ ಮತ್ತು ಬರೆಯಲಿಕ್ಕೂ ಬರಬೇಕು. ಅರ್ಜಿಯಲ್ಲಿ, ವಯಸ್ಸು, ಜಾತಿ; ಶಿಕ್ಷಣ ವಗೈರೆ ತಿಳಿಸಬೇಕು. ಅವರಿಗೆ ತಿಂಗಳಾ ೨೫ ರು. ಕೊಡುವದರಲ್ಲಿ ಬರುವದು. ಮತ್ತು ರೂ. ೫೦ ವರೆಗೆ ಬಡತಿ ಆಗಬಹುದು. ಬಡತಿ ದರ ೨ ವರ್ಷಕ್ಕೆ ರು ೩-

ಆನರರಿ ಸೆಕ್ರೆಟರಿ
ಎಮ್. ಸಿ. ನಾಡಗೌಡಾ.
ಕೋ. ಆ. ಇನ್‌ಸ್ಟಿಟ್ಯೂಟ ಬಾಗಲಕೋಟೆ

ಶ್ರೀ. ಕೈಲಾಸಮ್ ಇವರ ಉಚ್ಚತರಗತಿಯ ನಾಟಕಗಳು ಧಾರವಾಡದ ಸುಶಿಕ್ಷಿತರಿಗೆ ಈಗೀಗ ರುಚಿಸುತ್ತಲಿವೆ.

ಕರ್ನಾಟಕ ಕಾಲೇಜದ ಕರ್ನಾಟಕ ಸಂಘದವರ ವೈ. ಕೆರೂರ ವಾಸುದೇವಾಚಾರ್ಯರ "ಸುರತನಗರದ ಶ್ರೇಷ್ಠಿ" ಈ ನಾಟಕವನ್ನು ನಳೆದಿನ ಧಾರವಾಡದ ಅನ್ನಪೂರ್ಣ ಶಾಲೆಯಲ್ಲಿ ಆಡತಕ್ಕವರಿದ್ದಾರೆ.

ಪತ್ರವ್ಯವಹಾರ.

ಶ್ರೀಮನ್ಮಧ್ವ ಜಯಂತ್ಯುತ್ಸವದ ಕಾರ್ಯದರ್ಶಿಗಳಿಗೆ ಒಂದು ಬಿನ್ನಹ.

ಬಾಗಲಕೋಟೆಯ ಶ್ರೀಮದಾನಂದತೀರ್ಥ ಜಯಂತ್ಯುತ್ಸವದ ಕಮಲವು ಈಸಾರೆ ಸಾಕಷ್ಟು ವಿಕಸಿತವಾಗುವದೆಂಬಲ್ಲಿ ಸಂದೇಹದವಿಲ್ಲ. ಆದರ ಸುಗಂಧವು ಸರ್ವರಿಗೂ ದೊರೆತು ಶ್ರೀಮದಾಚಾರ್ಯರ ಸೇವೆಯ ಲಾಭವು ಎಲ್ಲರಿಗೂ ದೊರೆಯಬೇಕೆಂಬ ನನ್ನ ಆಸೆ. ಜಯಂತ್ಯುತ್ಸವ ಮಂಡಲದವರು ಏರ್ಪಡಿಸುವ ವ್ಯಾಖ್ಯಾನ, ಕೀರ್ತನೆಗಳಿಗೆ ಮಾತ್ರ ಜನರು ಕಲೆತರೆ ಉತ್ಸವವು ಕಳೆ ಹೊಂದುವದಿಲ್ಲ. ಎಲ್ಲರೂ ತನು ಮನ ಧನಗಳಿಂದ ಸೇವೆಮಾಡಿದರೆ ಮಾತ್ರ ಶ್ರೀಮನ್ಮಧ್ವಮುನಿರಾಯನು ತುಷ್ಟನಾಗಿ ಹರಿಸುವನು. ಜನರು ಧನ ಸಹಾಯಮಾಡಬೇಕಾದರೆ ಮಂಡಲದ ವ್ಯವಸ್ಥೆಯ ಕಡೆಗೆ ಗಮನಕೊಡುವದು ಸಹಜವು. ಕಾರ್ಯಕಾರೀ ಮಂಡಲ ಇರುವದೋ? ಅದರಂತೆಯೇ ಸಾಧಾರಣ ಸದಸ್ಯರ ಮಂಡಲ ಇಹುದೇ? ಸಾಮಾನ್ಯ ಸಭಾಸದರಾಗಲು ಅಧಿಕಾರಿಗಳಾರು? ವಯಸ್ಸು ಎಷ್ಟಿರಬೇಕು? ವರ್ಗಣೀ ಹಣವನ್ನು ಎಷ್ಟು ಸಲ್ಲಿಸಬೇಕು? ಇವೇ ಮೊದಲಾದ ಪ್ರಶ್ನೆಗಳು ಹೊರಡುವವು. ಈ ಉತ್ಸವಕ್ಕೆ ಸಾರ್ವಜನಿಕ ಸ್ವರೂಪ ಬಂದದ್ದರಿಂದಲೂ ಕಾರ್ಯದರ್ಶಿಗಳು ಎಲ್ಲರೂ ಮುಕ್ತ ಹಸ್ತದಿಂದ ಸಹಾಯವನ್ನೀಯಬೇಕೆಂದು ವಿನಂತಿ ಮಾಡಿಕೊಂಡದ್ದರಿಂದಲೂ ಈ ಪ್ರಸ್ತಾಪವು ಪ್ರಸ್ತುತವಾಗಿದೆಯೆಂದು ನನ್ನ ತಿಳುವಳಿಕೆ. ಸಾಮಾನ್ಯ ಸಭಾಸದರ ವರ್ಗಣಿ ಹಣವು ನಾಲ್ಕಾಣೆ ಇರಬೇಕೆಂಬ ನಮ್ಮ ನಮ್ರ ಸೂಚನೆ. ಅಂದರೆ ಪಂಡಿತ ಪಾಮರರಿಗೂ ಶ್ರೀಮಂತ ದರಿದ್ರರಿಗೂ ಆಚಾರ್ಯರ ಸೇವೆಯ ಲಾಭವು ಅನಾಯಾಸವಾಗಿ ಲಭಿಸುವದೆಂದು ನನಗನ್ನಿಸುತ್ತದೆ. ಮಂಡಲದ ವ್ಯವಸ್ಥೆಯ ಬಗ್ಗೆ ಕಾರ್ಯದರ್ಶಿಗಳು ಸಾರ್ವಜನಿಕವಾಗಿ ಪವಾದರೂ ತಿಳಿಸಬೇಕೆಂದು ನನ್ನ ಪ್ರಾರ್ಥನೆ. —ಮಧ್ವ.

(ಟಿಪ್ಪಣಿ. ಈ ಪತ್ರವನ್ನು ನಾವು ಕಾರ್ಯದರ್ಶಿಗಳಿಗೆ ತೋರಿಸಿ, ಅವರಿಂದ ಬಂದ ಉತ್ತರವನ್ನೂ ಇಲ್ಲಿ ಪ್ರಕಟಿಸಿದ್ದೇವೆ. ಸಂ ಕ.)

ಬಿನ್ನಹಕಾರರಿಗೆ ಉತ್ತರವು.

ವೈಷ್ಣವ ಭೂಯಿಷ್ಠವಾದ ಈ ಬಾಗಲಕೋಟೆಯಲ್ಲಿ ಶ್ರೀಮದಾನಂದ ತೀರ್ಥರ ಜಯಂತಿ ಮಹೋತ್ಸವವು ಜರಗುವದು ಅತ್ಯಾವಶ್ಯಕವಾದದ್ದೆಂದು ಈಗ್ಗೆ ಎಂಟು ವರ್ಷಗಳ ಹಿಂದೆ ನಮ್ಮ ಸ್ನೇಹಿತರನೇಕರು ಒಂದು ಸಭೆಯನ್ನು ಕರೆದು ಉತ್ಸವವನ್ನು ನೆರವೇರಿಸಬೇಕೆಂದು ನಿರ್ಧರಿಸಿದರು.

ಈ ಉತ್ಸವಕ್ಕೆ ಬೇಕಾಗುವ ಹಣವನ್ನು ತಮ್ಮ ತಮ್ಮ ಸ್ನೇಹಿತರಲ್ಲಿ ಸಂಗ್ರಹಿಸುತ್ತ ನಡೆಸಬೇಕೆಂತಲೂ, ಅದು ವಿಶೇಷವಾಗಿ ಅಭಿವೃದ್ಧಿಯನ್ನು ಹೊಂದಿದ ಮೇಲೆ ಇತರ ಎಲ್ಲ ವೈಷ್ಣವರನ್ನು ಕೇಳಬೇಕೆಂತಲೂ ನಿರ್ಣಯಮಾಡಿದರು.

ಈ ಉತ್ಸವ ಕಾರ್ಯ ನಿರ್ವಹಣೆಕ್ಕಾಗಿ ಶ್ರೀಮದಾನಂದ ತೀರ್ಥ ಜಯಂತಿ ಮಹೋತ್ಸವ ಮಂಡಲವೆಂಬ ಒಂದು ಮಂಡಲವನ್ನಾದರೂ ಸ್ಥಾಪಿಸಿದರು. ಸರ್ವರೀತಿಯಿಂದಲೂ ಸದಭಿಮಾನದಿಂದ ಪ್ರೇರಿತರಾಗಿ ತನು ಮನಗಳ ಶ್ರಮಗಳನ್ನು ಲಕ್ಷಿಸದೇ ಹಣದ ಕೊರತೆಬಿದ್ದ ಪ್ರಸಂಗಬಿದ್ದಲ್ಲಿ ಅದರ ಭಾರವನ್ನು ಸಹಿಸಲು ಸಿದ್ಧರಾಗಿ ಸಪ್ರೇಮವುಳ್ಳ ವೈಷ್ಣವರು ಸಾಮಾನ್ಯ ಮಂಡಲದ ಸದಸ್ಯನಾಗಲು ಅರ್ಹನಾಗಿರುವನೆಂದು ನಿಯಮವು ಮಾಡಲಪಟ್ಟಿತು. ಮತ್ತು ಈ ಮಂಡಲದಲ್ಲಿ ಇಪ್ಪತ್ತು ಜನರೇ ಸದಸ್ಯರಾಗಿರಬೇಕೆಂತಲೂ ನಿರ್ಣಯವಾಯಿತು. ಯಾವ ಕಾರಣದಿಂದಲಾಗಲೀ ಇಪ್ಪತ್ತು ಜನರಲ್ಲಿ ಯಾರಾದರೂ ಕಡಿಮೆಯಾದರೆ ಮೇಲೆ ತೋರಿಸಿದ ನಿಯಮಕ್ಕನುಸರಿಸಿದ ಯಾವ ವೈಷ್ಣವನಿಗಾದರೂ ಈ ಮಂಡಲದಲ್ಲಿ ಸೇರಲು ಅವಕಾಶವುಂಟು. ಹೀಗೆ ಆ ಸಭೆಯಲ್ಲಿ ನಿರ್ಣಯವಾದನಂತರ ಈ ನಿಯಮಕ್ಕನುಸರಿಸಿಯೇ ಸಿದ್ಧರಿರುವ ಇಪ್ಪತ್ತು ಜನರದೊಂದು ಸಾಮಾನ್ಯ ಸದಸ್ಯಮಂಡಲವು ನಿರ್ಮಾಣವಾಯಿತು. ಆ ನಂತರ ಈ ಇಪ್ಪತ್ತು ಜನರಿಂದಲೇ ಆರಿಸಲ್ಪಟ್ಟ ಎಂಟು ಜನರದೊಂದು ಕಾರ್ಯನಿರ್ವಾಹಕ ಮಂಡಲವಾದರೂ ನಿರ್ಧಾರಿತವಾಯಿತು. ಈ ಎಂಟು ಜನರಲ್ಲಿಯೇ ಒಬ್ಬರು ಅಧ್ಯಕ್ಷರಾಗಿಯೂ ಇಬ್ಬರು ಕಾರ್ಯದರ್ಶಿಗಳಾಗಿಯೂ ಉಳಿದವರು ಕಾರ್ಯಕಾರೀ ಮಂಡಲದ ಸದಸ್ಯರಾಗಿ ನಿಯಮಿಸಲ್ಪಟ್ಟರು. ಸಾಮಾನ್ಯ ಮಂಡಲದ ಸದಸ್ಯರು ಮೂರು ಮೂರು ವರ್ಷಕ್ಕೊಮ್ಮೆ ಕಾರ್ಯಕಾರೀ ಮಂಡಲದ ಈ ಎಂಟು ಜನರನ್ನು ಆರಿಸತಕ್ಕದ್ದೆಂದು ನಿಯಮವಾದರೂ ಮಾಡಲ್ಪಟ್ಟಿತು. ಇಂತಿಷ್ಟು ವರ್ಗಣೀ ಹಣವನ್ನು ಸಲ್ಲಿಸುವವರೇ ಸಾಮಾನ್ಯ ಮಂಡಲದ ಸದಸ್ಯರಾಗಬೇಕೆಂದು ನಿಯಮವನ್ನು ಮಾಡದೇ ಹಿಂದೆ ತೋರಿಸಿದ ನಿಯಮವನ್ನೇ ಸ್ಥಿರವಾಗಿ ಮಾಡಿದರು. ಶ್ರೀಮದಾಚಾರ್ಯರ ಭಕ್ತರಿಂದ ಅವರು ಎಷ್ಟೇ ಅಲ್ಪ ಸಹಾಯವನ್ನು ಮಾಡಿದರೂ ಸಹ ಅದನ್ನು ನಾವು ಪರಮಾನಂದದಿಂದ ಸ್ವೀಕರಿಸುವೆವು.

ಈ ಉತ್ಸವವು ಮೊದಲು ಮೊದಲು ಉಪನ್ಯಾಸ ಪುರಾಣ ಕೀರ್ತನೆ ಇವು ನಡೆಸಲ್ಪಡುತ್ತಿತ್ತು. ಮುಂದೆ ಶ್ರೀ ಶ್ರೀ ಆನಂದತೀರ್ಥ ವ್ಯಾಕರಣಯುತ ಮಠದ ಸ್ವಾಮಿಗಳವರ ಅಧ್ಯಕ್ಷತೆಯಾಗ ಜರಗಿದ ಉತ್ಸವದಲ್ಲಿ ಸಂಧ್ಯಾದಿ ವಿಷಯಗಳಲ್ಲಿ ಬಾಲಕರನ್ನು ಪರೀಕ್ಷಿಸಿ ಪಾರಿತೋಷಕ ಕೊಡುವದನ್ನು ಸಹ ಪ್ರಾರಂಭಿಸಿತು.

ಹೋದ ವರ್ಷದಲ್ಲಿ ಶ್ರೀ ಸುಬ್ರಹ್ಮಣ್ಯ ಮಠದ ಸ್ವಾಮಿಗಳವರ ಅಧ್ಯಕ್ಷತೆಯಿಂದ ಜರಗಿದ ಉತ್ಸವದಲ್ಲಿ ಉತ್ಸವವನ್ನು ಬೆಳೆಸುವದಕ್ಕಾಗಿ ಪ್ರೋತ್ಸಾಹನವನ್ನು ಕೊಟ್ಟಿದ್ದರಿಂದ ಹೆಚ್ಚಿನ ಪರೀಕ್ಷೆಗಳನ್ನು ಮಾಡಿ ಪಾರಿತೋಷಕವನ್ನಾದರೂ ಹೆಚ್ಚಿಗೆ ಬೆಳೆಸಿದ್ದೇವೆ. ಸ್ಥಳದ ಬಗ್ಗೆ ಪಂಡಿತರ ವಿದ್ವಜ್ಜನರ ಉಪನ್ಯಾಸಗಳನ್ನು ಜರಗಿಸಬೇಕೆಂದು ಮಾಡಿದ್ದೇವೆ. ಅವರವರ ಕಡೆಯಿಂದ ಉತ್ತರ ಬಂದ ನಂತರ ಕಾರ್ಯಕ್ರಮಗಳನ್ನು ನಿರ್ಧಾರಮಾಡಿ, ಉತ್ಸವದ ಸುಮಾರಿಗೆ ಪ್ರಸಿದ್ಧಪಡಿಸುವೆವು. ಆದ್ದರಿಂದ ಈ ಪರಿಯಿಂದ ಶ್ರೀಮದಾನಂದತೀರ್ಥರ ಸೇವೆ ಮಾಡಲು ಸಿದ್ಧರಾದ ನಮಗೆ ಪ್ರತಿಯೊಬ್ಬ ವೈಷ್ಣವನು ಮುಕ್ತಹಸ್ತದಿಂದ ಸಹಾಯ ಮಾಡಬೇಕಾಗಿ ಪ್ರಾರ್ಥಿಸುತ್ತೇವೆ.

ಇನ್ನೇನಾದರೂ ವಿಶೇಷಾಂಶಗಳನ್ನು ತಿಳಿಯಬೇಕೆನ್ನಿಸಿದವರು ಕಾರ್ಯಕಾರಿ ಮಂಡಲದ ಅಧ್ಯಕ್ಷರಿಗೆ ಸಮಕ್ಷಮ ಭೆಟ್ಟಿಯಾದಲ್ಲಿ ಸಂಶಯಗಳು ದೂರಾಗಬಹುದು. ಈ ಉತ್ಸವಕ್ಕೆ ಹೆಚ್ಚಿನ ಸ್ವರೂಪವು ಈ ವರೆಗೂ ಇಲ್ಲದ್ದರಿಂದ ನಾವು ವಿಶೇಷವಾಗಿ ಪ್ರಕಟಿಸಿದ್ದಿಲ್ಲ, ಆದರೆ ಈಗ್ಗೆ ನಾವೇ ಪ್ರಕಟಿಸಬೇಕೆಂಬುವ ಪ್ರಸಂಗದಲ್ಲಿಯೇ ಬಿನ್ನಹಕಾರರು ಬಿನ್ನಹವನ್ನು ಮಾಡಿಕೊಂಡದ್ದಕ್ಕೆ ಕನ್ನಡಿಗ ಸಂಪಾದಕರು ನಮಗೆ ತೋರಿಸಿದ್ದಕ್ಕೂ ನಾವು ಧನ್ಯವಾದಗಳನ್ನು ಸಮರ್ಪಿಸಿ, ಈ ವಿಷಯವನ್ನು ಮುಗಿಸುವೆವು.

श्री. स. त. मं. कार्यदर्शी

कृष्णाचार्य नागसंपिगि

श्रीनिवासाचार्य जनवाडि

ವೈ॥ ಕೆರೂರ ವಾಸುದೇವಾಚಾ-
-ರ್ಯರೂ ಕ್ರಮಿಕ ಪುಸ್ತಕಗಳೂ.

ಕನ್ನಡ ಐದನೇ ಪುಸ್ತಕವು.

(ಲೇಖಾಂಕ—೪)

ಪಾಠ ೨. ಪ್ರಸಂಗಾವಧಾನವು—

ಇಲ್ಲಿಯಾದರೂ ಪ್ರಸಂಗಾವಧಾನವೆಂದರೇನೆಂಬದನ್ನು ಹೇಳುವ ಸಾಹಸವನ್ನು ಗ್ರಂಥಕರ್ತರು ಮಾಡಿಲ್ಲ. ದೊಡ್ಡದಾದ ಗಂಡಾಂತರವು ಅಕಸ್ಮಾತ್ತಾಗಿ ಬಂದೊದಗಿದಾಗ ತತ್ಕಾಲದಲ್ಲಿ ವಿದ್ಯುತ್ ಛಟೆಯಂತೆ ಮನಸ್ಸಿಗೆ ಹೊಳೆದ ಅಪೂರ್ವವಾದ ಯುಕ್ತಿಯಿಂದ ಮನುಷ್ಯನು ಆ ಗಂಡಾಂತರದೊಳಗಿಂದ ಒಮ್ಮೊಮ್ಮೆ ಪಾರಾಗುವದುಂಟು. ಅಂಥ ಯುಕ್ತಿಯನ್ನು ಪ್ರಸಂಗ ವಿಶೇಷಗಳಲ್ಲಿ ಕಾಣುವ ಚಾತುರ್ಯಕ್ಕೆ ಪ್ರಸಂಗಾವಧಾನವೆಂದು ಹೇಳಬಹುದು. ಪ್ರಸಂಗಾವಧಾನದ ವಿಶಿಷ್ಟವಾದ ಚಮತ್ಕೃತಿಯಿಂದ ಮನುಷ್ಯನು ಒಮ್ಮೆ ಸಂಕಟವನ್ನು ದೂರ ಮಾಡಿಕೊಂಡನೆಂದು ಅಂಥದೇ ಸಂಕಟವು ಮತ್ತೊಮ್ಮೆ ಒದಗಿದಾಗ ಅದೇ ಯುಕ್ತಿಯು ಉಪಯೋಗಿಸುವದೆಂಬದು ಸರ್ವಥಾ ತಪ್ಪು. ಅನ್ಯರ ಪ್ರಸಂಗಾವಧಾನದ ಕಥೆಗಳನ್ನು ಬರೆದಿಟ್ಟುಕೊಂಡು ಅದರಂತೆ ನಾನಾದರೂ ಮಾಡುವೆನೆಂಬ ಮನುಷ್ಯನಂತೂ ಶುದ್ಧ ಮೂರ್ಖನು.

ಈ ಪಾಠದಲ್ಲಿಯ ಹುಲಿಯ ಕಥೆಯನ್ನೇ ತೆಗೆದುಕೊಳ್ಳೋಣ! ಸಣ್ಣಪ್ಪನಾಯಕನು ಯುಕ್ತಿಯನ್ನು ಹುಡುಕಿಕೊಂಡು ಸಿದ್ಧನಾಗಿ ಬರುವವರೆಗೆ ಹುಲಿಯು ಯಾರಿಗೂ ಏನೂ ಮಾಡದೆ ಸುಮ್ಮನಿದ್ದಿತು. ಅದಕ್ಕಾಗಿ ಅದರ ಉಪಕಾರವನ್ನು ನಾವು ಸ್ಮರಿಸಬೇಕು! ನಾಯಕರವರು ಅವಸರದಿಂದ ಬಂದೂಕು ಕೊಡಲಿ ಬಡಿಗೆ ಮುಂತಾದವುಗಳನ್ನು ಬಿಟ್ಟು ಕೊಡೆಯನ್ನೇ ಹುಡುಕಿಕೊಂಡು ಬಂದು ಅದನ್ನು ಛಕ್ಕನೆ ತೆರೆದಾಕ್ಷಣವೇ ಹುಲಿಯು ಓಡಿ ಹೋಯಿತಂತೆ! ಸಣ್ಣಪ್ಪನಾಯಕರು ಎಲ್ಲವುಗಳನ್ನು ಬಿಟ್ಟು ಕೊಡೆಯನ್ನೇ ಏಕೆ ತೆಗೆದುಕೊಂಡರೆಂದು, ಮಕ್ಕಳೇ, ನೀವು ಕೇಳುವಿರಾ? ಅದರ ಇಂಗಿತವು ನಮಗೊಂದು ಗೊತ್ತು, ಸಣ್ಣಪ್ಪನಾಯಕರಿಗೊಂದು ಗೊತ್ತು! ಗಂಗಾಧರ ಮಡಿವಾಳೇಶ್ವರರ ಕಾಲಕ್ಕೆ ಕ್ರಮಿಕ ಪುಸ್ತಕಗಳಲ್ಲೊಂದರಲ್ಲಿ ಪ್ರಸಂಗಾವಧಾನದ ಕಥೆಯಿತ್ತು! ಅದೆಂತೆನೆ:-

"ಬಂಗಾಳ ದೇಶದಲ್ಲಿ ಒಬ್ಬ ದೊರೆಯೂ ದೊರೆಸಾನಿಯೂ (ಇಂಗ್ಲಿಶ್ ಗೃಹಸ್ಥನೂ ಅವನ ಹೆಂಡತಿಯೂ) ತಿರುಗಾಡಲಿಕ್ಕೆ ಅಡವಿಗೆ ಹೋದಾಗ ಅವರ ಇದಿರಿನಲ್ಲಿಯೇ ಒಂದು ಹುಲಿಯು ಛಕ್ಕನೆ ಬಂದು ನಿಂತಿತು! ಆ ಸಮಯದಲ್ಲಿ ಆ ದೊರೆಸಾನಿಗೆ ಏನು ತಿಳಿಯಿತೋ ಏನೋ ಅವಳು ಛಕ್ಕನೆ ತನ್ನ ಕೊಡೆಯನ್ನು ತೆರೆದು ಹಿಡಿದಳು. ಅದನ್ನು ಕಂಡು ಆ ಹುಲಿಯು ಬೆದರಿ ಓಡಿಹೋಯಿತು"

ಈ ಕಥೆಯನ್ನು ಓದಿಕೊಂಡವನಾದ ಸಣ್ಣಪ್ಪನಾಯಕನು ಕೊಡೆಯಂಥ ವ್ಯಾಘ್ರಸಂಹಾರಕವಾದ ಸುಲಭವಾದ ಶಸ್ತ್ರವು ತನ್ನ ಬಳಿಯಲ್ಲಿ ಇರಲು, ಹುಲಿಯು ಬಗರವಾಗಿರುವ ತನ್ನ ತೋಟಕ್ಕೆ ಹೋಗುವಾಗ ಬಂದೂಕದಂಥ ತುಟ್ಟಿಯ ಆಯುಧವನ್ನೇಕೆ ಹೊತ್ತುಕೊಂಡು ಹೋಗುವನು?

ತೆರೆದ ಕೊಡೆಯನ್ನು ನೋಡಿ ಬೆದರಿ ಓಡಿಹೋದ ಹುಲಿಯು ಅಡವಿಯೊಳಗಿನ ಹುಲಿಯಾಗದೆ, ಸಣ್ಣಪ್ಪನಾಯಕರಲ್ಲಿ ಸಾಲ ತೆಗೆದುಕೊಂಡ ಮೋಹರದೊಳಗಿನ ಹುಲಿಯಾಗಿರಬೇಕೆಂದು ನಾವು ತರ್ಕಿಸುತ್ತೇವೆ.

ಹುಲಿಯು ಅಲ್ಲಿದ್ದವರೆಲ್ಲರನ್ನೂ ಕೊಂದು ತಿನ್ನುವದಿಲ್ಲವೆ? ಅವರೆಲ್ಲರನ್ನೂ ಅಲ್ಲಿಯೇ ಮುರುಕೊಂಡು ನುಂಗುತ್ತಿತ್ತಂತೆ! ಯುದ್ಧ ಮಾಡಲಿಕ್ಕೆ ಹುಲಿಯು ಅಲ್ಲಿಗೆ ಬಂದಿತ್ತೇ? ಅಲ್ಲಿಯೇ ಮುರುಕೊಂಡು ನುಂಗಿ ಬಿಡಲಿಕ್ಕೆ ಅವರೆಲ್ಲರೂ ಸವತೇಕಾಯಿಯ ಹೋಳುಗಳೇ? ಮೇಲಾಗಿ ಇದು ಹುಲಿಯ ಸ್ವಭಾವವೇ?

ಮನೆಗೆ ಬೆಂಕಿಹತ್ತಿದ ಕಥೆಯಲ್ಲಿ ಜಾಣತನವೂ ಇಲ್ಲ ಪ್ರಸಂಗಾವಧಾನವೂ ಇಲ್ಲ!

ಆ ಮಗನು ಕೈಗೆ ಕುಡುಗೋಲು ಹಚ್ಚಿಕೊಂಡ ಕಥೆ ಕೇಳಿದವನು ಬೆಣ್ಣೆಯ ಮುದ್ದಿಯಿಂದ ತಲೆಯೊಡೆಸಿಕೊಳ್ಳಬೇಕು! ಶಾವಿಗೆಯಿಂದ ಉರುಲು ಹಾಕಿಕೊಳ್ಳಬೇಕು!! ಕುಡುಗೋಲು ಒಕ್ಕಲಿಗರ ಕೈಯಲ್ಲಿಯ ನಿತ್ಯದ ಶಸ್ತ್ರವು. ಅದು ಕೈಗೆ ಹತ್ತಿದರೆ ಏನು ಮಾಡಬೇಕೆಂಬದು ಒಬ್ಬರಿಗೆ ತಿಳಿಯಲಿಲ್ಲ? ಅಲ್ಲಿ ಅನೇಕ ಜನ ಒಕ್ಕಲಿಗರಿದ್ದರೆಂದು ಗ್ರಂಥಕರ್ತರೇ ಹೇಳುತ್ತಾರೆ. ಸಣ್ಣಪ್ಪನಾಯಕರು ಓಡಿ ಒಂದೇನು ಮಾಡಿದರು? ದೋತರ ಹರಿದು ಕೊಯಿದುಕೊಂಡವನ ಕೈಗೆ ಅರಿವೆ ಸುತ್ತಿದರು!! ಹೊಸ ಶೋಧವಿದು!!! ಸಣ್ಣಪ್ಪನಾಯಕರು ಆ ಪ್ರಾಂತದಲ್ಲಿಲ್ಲದಿದ್ದರೆ ಅಲ್ಲಿಯ ಜನರೆಲ್ಲ ಕುಡುಗೋಲು ಹಚ್ಚಿಕೊಂಡು ಸತ್ತೇ ಹೋಗುತ್ತಿದ್ದರಲ್ಲ ಕಂಡಿರೋ? ಸಣ್ಣಪ್ಪನಾಯಕರ ಪ್ರಸಂಗಾವಧಾನದ ಕಥೆ ಇನ್ನೊಂದಿರುವದು. ಅದನ್ನು ಗ್ರಂಥಕರ್ತರು ಹೇಳದಿದ್ದರೂ ನಾವು ಹೇಳುತ್ತೇವೆ:- ಒಂದಾನೊಂದು ಸಮಯದಲ್ಲಿ ಸಣ್ಣಪ್ಪನಾಯಕರೂ ನಾಲ್ಕಾರು ಜನರೂ ರಾತ್ರಿಯಲ್ಲಿ ಮಾತಾಡುತ್ತ ಕುಳಿತಿದ್ದರು. ಆಗ ಛಕ್ಕನೆ ಗಾಳಿಗೆ ದೀಪವು ಹೋಯಿತು. ಎಲ್ಲರೂ ಇನ್ನೇನು ಮಾಡಬೇಕೆಂದು ಹುಚ್ಚರಾಗಿ ಕುಳಿತರು. ಸಣ್ಣಪ್ಪನಾಯಕರು ಅಷ್ಟರಲ್ಲಿ ಚರಕ್ಕನೆ ದೀಪದ ಕಡ್ಡಿಯನ್ನು ಕೊರೆದು ಸಮಯಕ್ಕೆ ದೀಪವನ್ನು ಹಚ್ಚಿದರು. ಕೂಡಲೆ ಮತ್ತೆ ಅಲ್ಲೆಲ್ಲ ಪ್ರಕಾಶವಾಗಿ ಕುಳಿತವರೆಲ್ಲರ ಜೀವಕ್ಕೆ ಸಮಾಧಾನವೆನಿಸಿತು!!!

ಹಾಗಾದರೆ, ಪ್ರಸಂಗಾವಧಾನದ ಕಥೆಗಳಾದರೂ ಹೇಗಿರುತ್ತವೆಂದು ಯಾರಾದರೂ ಶಂಕಿಸಬಹುದು. ಅವರ ಶಂಕೆಯ ನಿವಾರಣಾರ್ಥವಾಗಿ ನಾವು ಓದಿದ ಅಂಥ ಕಥೆಗಳೊಳಗಿನ ಒಂದೆರಡು ಕಥೆಗಳನ್ನು ಇಲ್ಲಿ ಉದಹರಿಸುತ್ತೇವೆ.

ರೋಮದ ಪ್ರಖ್ಯಾತನಾದ ಚಿತ್ರಕಾರನೊಬ್ಬನು ತಾನು ಬರೆದ ಚಿತ್ರವನ್ನು ಸಂತೋಷದಿಂದ ನೋಡನೋಡುತ್ತ ಹಿಂದೆ ಹಿಂದಕ್ಕೆ ಸರಿಯುವಾಗ ಇನ್ನೊಂದು ಹೆಜ್ಜೆ ಹಿಂದಕ್ಕೆ ಹೋಗಿದ್ದರೆ ಅವನು ಅಟ್ಟದಿಂದ ಕೆಳಗೆ ಬೀಳುತ್ತಿದ್ದನು. ಆ ಸಮಯದಲ್ಲಿ ಅವನ ಪರಿಚಾರಕನೊರ್ವನು ಜಾಣತನದಿಂದ ಆ ಚಿತ್ರಕ್ಕೆ ಮಸಿಯುಗ್ಗಿದ್ದರಿಂದ ಚಿತ್ರಕಾರನು ಸಿಟ್ಟಾಗಿ ಅದೇ ಕಾಲಿಲೆ ಮುಂದಕ್ಕೆ ಬಂದು ಪರಿಚಾರಕನನ್ನು ಹೊಡೆಯಹೋದ್ದರಿಂದ ಅವನು ಬದುಕಿದನು. ಇದು ಪರಿಚಾರಕನ ಪ್ರಸಂಗಾವಧಾನದ ಉದಾಹರಣವು.

ನೆಪೋಲಿಯನನೂ ಅವನ ಇಬ್ಬರು ಸರದಾರರೂ ಕೂಡಿ ನಾಳಿನ ಯುದ್ಧಭೂಮಿಯ ನಿರೀಕ್ಷಣವನ್ನು ಮಾಡುತ್ತಿರುವಾಗ ಅವರು ಅಕಸ್ಮಾತ್ತಾಗಿ ಶತ್ರುಗಳ ಗುಂಪಿನ ಇದಿರಿನಲ್ಲಿಯೇ ಬಂದು ನಿಂತರು. ಆ ಈರ್ವರು ಸರದಾರರು ಬೆದರಿದರು. ನೆಪೋಲಿಯನನೋರ್ವನೇ ಧೈರ್ಯದಿಂದ ತನ್ನ ಕುದುರೆಯನ್ನೋಡಿಸಿಕೊಂಡು ಶತ್ರುಗಳ ಮುಂದೆಯೇ ಬಂದು ನಿಂತು "ನಾನು ನೆಪೋಲಿಯನ್ನನಿದ್ದೇನೆ;

ನೀವು ಸುಮ್ಮನೆ ಶಸ್ತ್ರಗಳನ್ನಿಟ್ಟು ಶರಣಾಗತರಾಗುವಿರೋ ನಿಮ್ಮ ಮೇಲೆ ತೋಪುಗಳನ್ನು ಹಾರಿಸಲು ನನ್ನ ಸೈನ್ಯಕ್ಕೆ ಅಪ್ಪಣೆ ಕೊಡಲೋ” ಎಂದು ಗರ್ಜಿಸಿ ಕೇಳಿದಾಕ್ಷಣವೇ ಶತ್ರುಗಳು ಹೆದರಿ ಶಸ್ತ್ರಗಳನ್ನಿಟ್ಟು ಶರಣಾಗತರಾದರು.

ಈ ಕಥೆಗಳಂಥ ಕಥೆಗಳನ್ನು ಪರಿಷ್ಕರಿಸಿ ಹೇಳಿದ್ದಾದರೆ ಪ್ರಸಂಗಾವಧಾನವೆಂದರೇನೆಂಬುದರ ಜ್ಞಾನವು ಹುಡುಗರಿಗಾಗುತ್ತಿತ್ತು.

ನನಗೆ ತೋಚಿದಂತೆ

ದಾನದ ವಸ್ತುಗಳ ಮೇಲೆ ತಮ್ಮ ತಮ್ಮ ಹೆಸರುಗಳನ್ನು ಕೆತ್ತಿಸುವದೇಕೆ? ನಾಲ್ಕು ಜನರಿಗೆ ತಮ್ಮ ಹೆಸರು ಗೊತ್ತಾಗಬೇಕೆಂದೋ? ಇಹಲೋಕದಲ್ಲಿ ನಾಲ್ಕು ಜನರಿಗೆ ತಮ್ಮ ಹೆಸರು ಗೊತ್ತಾಗಬೇಕೆಂದಿದ್ದರೆ ಪುಣ್ಯ ಪಡೆದು ಪರಲೋಕದಲ್ಲಿ ಉಚ್ಚಸ್ಥಾನವನ್ನು ಹೊಂದುವ ಇಚ್ಛೆಯಿಂದ ದಾನ ಕೊಟ್ಟಿದ್ದರ ಸಾರ್ಥಕ್ಯವೇನು? ಇತ್ತಿತ್ತ ಹೆಸರು ಕೆತ್ತಿಸುವ ಪದ್ಧತಿಯ ವಿಚಿತ್ರ ರೂಪತಾಳುತ್ತಿದೆ! ಮುನಿಸಿಪಾಲ್ಟಿ ಲೋಕಲ್ ಬೋರ್ಡುಗಳ ಆವಾರದ ಮೇಲೆ ಸಹ ಹೆಸರು ಬರೆಸಿಕೊಟ್ಟವರು ತಮ್ಮ ಹಣವನ್ನುದರೂ ವೆಚ್ಚಮಾಡುವರು! ಆದರೆ ಈ ಸ್ಥಾನಿಕ ಸಂಸ್ಥೆಗಳಲ್ಲಿ ಹಣವು ಜೋರೇ ಗೌಡನದು! ಹೆಸರಿನ ಪ್ರಾಧಾನ್ಯವು ಮಾತ್ರ ಮೆಂಬರ ಜನರದು! ಕೆಲವು ಕಡೆಯಲ್ಲಂತೂ, ಮೆಂಬರರು ಆ ಕಟ್ಟಡಗಳನ್ನು ಕಟ್ಟಿಸುವಾಗ್ಗೆ, ಹಣ ನುಂಗಲಿಕ್ಕೂ ಮರೆಯರು! ಅಥವಾ ನಿರ್ಮಿಸಿದ ಕಟ್ಟಡದ ತಮ್ಮ ಮನೆಗೆ ಜೋರೇ ಗೌಡನ ದುಡ್ಡಿನಿಂದ ಹೆಚ್ಚು ಸೌಕರ್ಯಗಳನ್ನು ಮಾಡಿಸಿಕೊಳ್ಳುವದನ್ನೂ ಮರೆಯರು! ನಮಃಸ್ತಸ್ಮೈ ವಿಭೂತಯೇ!!

‡ ‡ ‡ ‡

ಶಿವಾನುಭವದ (ತ್ರೈಮಾಸಿಕ) ೬ನೇ ಸಂಚಿಕೆಯಲ್ಲಿ ಶ್ರೀ ಚಂದ್ರಶೇಖರ ಶಾಸ್ತ್ರಿಗಳು ಲಿಂಗಧಾರಣವು ವೇದ ವಿಹಿತವೆಂದು ಬರೆಯುವಲ್ಲಿ ಒಂದು ಅಪೂರ್ವವಾದ ವಿಧಾನ ಮಾಡಿದ್ದಾರೆ. ಒಂದು ಋಗ್ವೇದ ಮಂತ್ರಕ್ಕೆ ಸಂಪ್ರದಾಯದವರು ತಪ್ತಮುದ್ರಾಧಾರಣ ಪರವಾಗಿ ಅರ್ಥ ಮಾಡಿರುವದನ್ನು ರಾಮಾನುಜಾಚಾರ್ಯರು ಖಂಡಿಸಿರುವರಂತೆ! ಇದಲ್ಲದೆ ಮಧ್ವಾಚಾರ್ಯರ ಮತವನ್ನೇ ರಾಮಾನುಜಾಚಾರ್ಯರು ಖಂಡಿಸಿರುವರಂತೆ. ರಾಮಾನುಜಾಚಾರ್ಯರ ತರುವಾಯದಲ್ಲಿಯೇ ಅನೇಕ ವರ್ಷಗಳ ಮೇಲೆ ಮಧ್ವಾಚಾರ್ಯರು ಅವತರಿಸಿದ ಸಂಗತಿಯು ಒಂದು ಕಾಲೇಜದ ವಿದ್ಯಾರ್ಥಿಗೆ ಗೊತ್ತಿರದಿರುವದು ಸರ್ವಥಾ ಅಕ್ಷಮ್ಯವೇ ಸರಿ.

— ಓದುಗ

“ನನ್ನ ತುಣುಕು ಪಡಿಯಿಂದ.”

ಚೀನೀಯರ ಕೆಲವು ಪದ್ಧತಿಗಳು ಬಹಳ ವಿನೋದಕರವಾಗಿವೆ.

ಹೋಣಿಗಳು ಬಡುರಿಗಳಿಂದ ಎಳೆಯಲ್ಪಡುವವು. ವೃದ್ಧೆಯರೇ ಸಮಾಜದ ಆರಾಧಕ ವಸ್ತುಗಳು ವೃದ್ಧರು ಗಾಳಿಪಟವನ್ನು ಹಾರಿಸುವರು, ಚೆಂಡು ಮುಂತಾದ ಆಟಗಳನ್ನಾಡುತ್ತಾರೆ.

ಚೀನೀಯನ ಮುಖ್ಯ ಆಕಾಂಕ್ಷೆಯೇನೆಂದರೆ ತಾನು ಮೃತನಾದ ಮೇಲೆ ಹೆಣವನ್ನು ತುಂಬಲಿಕ್ಕೆ ಒಂದು ಒಳ್ಳೆಯ ಪೆಟ್ಟಿಗೆ ಇರಬೇಕು. ಮತ್ತು ಜನರು ತನಗೆ ವಿಜೃಂಭಣೆಯಿಂದ ಭೂಸ್ಥಾಪನೆ ಮಾಡಬೇಕು.

ಗಂಡಸರು ಉದ್ದವಾದ ಜಾಕೀಟುಗಳನ್ನು ಧರಿಸಿ ಕೈಯಲ್ಲಿ ಬೀಸಣಿಗೆಗಳನ್ನು ಹಿಡಿಯುತ್ತಾರೆ. ಹೆಂಗಸರು ಸಣ್ಣ ಅಂಗಿಗಳನ್ನು ಧರಿಸಿ ಚೀಲಗಳನ್ನು ಹಿಡಿಯುತ್ತಾರೆ. ಗಂಡಿಗೂ ಹೆಣ್ಣಿಗೂ ಪೂರ್ವಪರಿಚಯವಿಲ್ಲದ್ದಲ್ಲಿ ವಿವಾಹವು ನಿಶ್ಚಯಿಸಲ್ಪಡುತ್ತದೆ. ಇದಕ್ಕೆ ಚೀನೀಯನು ತನ್ನಾರಿನ ಹುಡುಗಿಯನ್ನು ಮದುವೆಯಾಗುವದಿಲ್ಲ ತಾನು ಬಾಳಿ ಪ್ರಹಣವಾಗಲಿಕ್ಕೆ ಆ ಹುಡುಗಿಯನ್ನು ಚೀನೀಯನು ವಿವಾಹಕ್ಕೆ ಮೊದಲೇ ದಿವಸಗಳ ಮುಂಚೆ ಪ್ರೀತಿ ಮಾಡುವನು. ಚೀನೀಯನು ಮತ್ತೊಬ್ಬನನ್ನು ಸಂಧಿಸಿದರೆ ತನ್ನ ಕೈಯನ್ನೇ ಅಳ್ಳಾಡಿಸಿಕೊಂಡು ಹಸ್ತಕೊಳ್ಳುತ್ತಾನೆ, ಬಹಳ ದಿನ ಸ್ನೇಹಿತನನ್ನು ಕಂಡರೆ ಇಬ್ಬರೂ ಬೇಸರವಾಗುವವರೆಗೆ ಬಾಹುಗಳನ್ನು ಜಗ್ಗಿಕೊಳ್ಳುತ್ತಾರೆ

ಮನೆಗೆ ಬಂದವರನ್ನು ಊಟಕ್ಕೆ ಎಬ್ಬಿಸಲು ಚೀನೀಯನು ಇಷ್ಟಪಟ್ಟರೆ “ಊಟಕ್ಕೆ ಏಳಿ” ಎಂದು ಹೇಳುವದಿಲ್ಲ ಅವನು ತನಗೆ ಬೇಕಾಗಿದ್ದರೆ “ದಯವಿಟ್ಟು ಭೋಜನಕ್ಕೇಳಿ” ಎಂದು ಕೇಳುತ್ತಾನೆ. ಅವನನ್ನು ಗ್ರಹಿಸಿ ಬಂದವನು ಹೊರಟು ಹೋಗುತ್ತಾನೆ. [illegible] ತನ್ನ ಸೇವಕರಿಗೆ ಬೇಸಾದೇಶದಲ್ಲಿ ಸಂಬಳವನ್ನು ಕೊಡುವದಿಲ್ಲ. ಅವರೂ ಅಲ್ಲಿ ಕೆಲಸಕ್ಕೆ ಹಾತೊರೆಯುತ್ತಾರೆ. ಆ ಧಾರಣ ಆವರಿಗೆ ಸೇವಕರು ಬೇಕಾದಲ್ಲಿ ಅವರು ಯಥೇಚ್ಛವಾದ ಸಂಬಳ ಕೊಡಬೇಕಾಗುವದು. ಚೀನೀಯನು ತನ್ನ ಗಂಡು ಮಗನ ಆಧಾರದ ಮೇಲೆ ಬೇಕಾದಷ್ಟು ಹಣವನ್ನು ಸಾಲ ಪಡೆಯಬಹುದು. ಆದರವನು ತನ್ನ ಸೋದರರು ಹೆಣ್ಣು ಮಕ್ಕಳನ್ನು ಆಧಾರವಿಡುತ್ತೇನೆಂದರೂ ಒಬ್ಬನೂ ಮೂರು ಕಾಸನ್ನೂ ಸಾಲ ಕೊಡುವದಿಲ್ಲ.

—“ವಿಶ್ವಮಿತ್ರ”

ಸೋಜಿಗದಸುದ್ದಿಗಳು.

ಸಮುದ್ರದ ತಳದಲ್ಲಿ ದೊರೆಯುವ ಮಣ್ಣು ಹಾಗೂ ಉಸುಕಿನಿಂದ ಎಣ್ಣೆ ಹೊರಡುವದೆಂದೂ, ಅದು ಒಳ್ಳೆಯಂತೆ ಉಪಯೋಗವಾಗುವದೆಂದೂ, ಕ್ಯಾಲಿಫೋರ್ನಿಯಾದ ಡಾ. ಟ್ರಾಸ್ಕರು ಶೋಧಿಸಿದ್ದಾರೆ. ಅದ್ದರಿಂದ ಇದು ವ್ಯಾಪಾರ ದೃಷ್ಟಿಯಿಂದ ಆ ಭಾಗ ಎವದೋ ಇಲ್ಲವೋ ಎನ್ನುವದನ್ನು ಪರೀಕ್ಷಿಸಲು “ಅಮೇರಿಕನ್ ಪೆಟ್ರೋಲಿಯಮ್ ಇನ್‌ಸ್ಟಿಟ್ಯೂಟ್‌ದವರು ಆ ಡಾಕ್ಟರರಿಗೆ ಹಣದ ಸಹಾಯ ಮಾಡುತ್ತಿರುವರು. ಪ್ರಯೋಗಶಾಲೆಯ [illegible] ನಿರೀಕ್ಷಿಸುವಾ, ನನೇ ಆಗಲಿ ಉಸುಕಿನಲ್ಲಿ ಸಹ ಎಣ್ಣೆ ಹೊರಡುತ್ತಿದೆಂದರೆ “ಸಿಕತಾಸು ತೈಲಮಪಿ” ಎಂಬ ಭರ್ತೃಹರಿಯ ಉಕ್ತಿಯನ್ನು ತಿದ್ದಬೇಕಾಗುವದು. ಇದನ್ನು ತಿದ್ದಲಿಕ್ಕೆ ವೈ. ವಾಸುದೇವಾಚಾರ್ಯರ ಗ್ರಂಥಗಳನ್ನು ತಿದ್ದಿದ ಎದೆಗಾರರೂ ಸಿನ್ಮಾಡಿದಾರರೂ ಈ ಧಾರವಾಡದ “ರಂಗಪ್ಪನ”ವರು ಸಿದ್ಧರೇ ಇರಬಹುದು!

ಮಾದರಿಯ ಸುದ್ದಿ

ಮೈಸೂರ ಪ್ರಾಂತದಲ್ಲಿ ಮಹಾತ್ಮರಿಗೆ ಒಟ್ಟು ೫೦ ಸಾವಿರ ರೂ. ಹರಿಜನೋದ್ಧಾರಕ್ಕಾಗಿ ಅರ್ಪಿಸಲ್ಪಟ್ಟಿದೆ. ಈ ಹಣವೆಲ್ಲ ಕರ್ನಾಟಕದಲ್ಲಿಯ ಹರಿಜನೋದ್ಧಾರಕ್ಕಾಗಿ ವಿನಿಯೋಗವಾಗುವದು.

ಮೈಸೂರ ಪ್ರಾಂತದ ಚಾಮರಾಜ ನಗರ ತಾಲೂಕು ನಂಜನಗೂಡ ತಾಲೂಕುಗಳಲ್ಲಿ ಖಾದಿ ಉತ್ಪತ್ತಿಯು ಬೆಳೆಯುತ್ತದೆ, ಕೋಯಿಮುತ್ತೂರ ಜಿಲ್ಲೆಯ ತಿರುಪೂರವು ಚಾಮರಾಜನಗರದಿಂದ ದೂರವಿಲ್ಲ ನೂಲುವವರೂ ಈ ತಾಲೂಕುಗಳಲ್ಲಿರುವರು, ಆದುದರಿಂದ ನಂಜನಗೂಡದಲ್ಲಿ ಖಾದಿ ಕೇಂದ್ರವನ್ನು ಹೊಸದಾಗಿ ಸ್ಥಾಪಿಸಬೇಕಾಗಿ ಅಖಿಲ ಭಾರತ ನೂಲುವ ಸಂಘದವರು ನಿಶ್ಚಯಿಸಿದ್ದಾರೆ. ಕೆಲಸವೂ ಮೊದಲಿನ ಮೇಲೆ ಈ ಭಾಗದಲ್ಲಿ ಉಂಟಾಗುವದು, ಆದುದರಿಂದ ಈ ಕೇಂದ್ರದಿಂದ ಬಡವರಿಗೆ ಬಹಳೇ ಕಲ್ಯಾಣವಾಗುವದು.

ಸ್ವಲ್ಪ ವಿನೋದ,

“ನಿನ್ನೆ ರಾತ್ರಿ ಮನೆ ಬರುವಾಗ್ಗೆ ಗುಡುಗು—ಮಿಂಚುಗಳ ಆರ್ಭಟವಿತ್ತಲ್ಲವೆ?”

“ನನಗದು ತಿಳಿಯಲೇ ಇಲ್ಲ! ಸಾಯಂಕಾಲದಿಂದ ನಾನು ಆ ಬಳಿಕ ಮಾತನಾಡುವವರಲ್ಲಿ ತೊಡಗಿದ್ದೆನು!”

ಪರದೇಶ.

ವಿಯನ್ನಾದಲ್ಲಿ ‘ಅಲ್ಯೂಮಿನಿಯಮ್’ ಹಾಗೂ ‘ಸಿಲೋಲಾಯಿಡ್’ಗಳಿಂದ ಇಸ್ಪೀಟಿಗಳನ್ನು ಸಿದ್ಧಪಡಿಸಿರುವರು. ಇವು ಬಹುದಿನ ಬಾಳುವವು. ಮತ್ತೂ ನೋಡಲು ಬಹು ಅಂದವಾಗಿವೆ, ಅವು ಮಾಸಿದರೆ ಸ್ವಚ್ಛ ಮಾಡುವ ಏರ್ಪಾಟೂ ಆಗಿದೆ. ಇದರಿಂದ ಕಾಗದಗಳಿಂದ ಮಾಡುತ್ತಿರುವ ಇಸ್ಪೀಟಿನ ಕಾರಖಾನೆದಾರರಿಗೆ ತಮ್ಮ ವ್ಯವಸಾಯವು ಹಾಳಾಗುವದೆಂಬ ಭಯವಾಗಿದೆ. ಈ ಹೊಸ ಇಸ್ಪೀಟುಗಳು ಬಹು ದಿನ ಬಾಳುವದರಿಂದ ಸರಕಾರದ ಉತ್ಪನ್ನವು ಕಡಿಮೆಯಾಗುವದೆಂದೂ, ಆದಕ್ಕಾಗಿ ಹೆಚ್ಚಿನ ತೆರಿಗೆಯನ್ನು ಹೇರಬೇಕೆಂದೂ ಈ ಕಾರಖಾನೆದಾರರು ಸರಕಾರಕ್ಕೆ ತಿಳಿಸಿದ್ದಾರೆ! ಅಂತೂ ಇಸ್ಪೀಟಾಡುವ ಶೋಕಿಗಾರರಿಗೆ ಮತ್ತಷ್ಟು ಸೊಗಸಾಯಿತಲ್ಲವೇ? ಇವು ಹಿಂದುಸ್ಥಾನಕ್ಕೆ ಯಾವಾಗ್ಗೆ ಬರುವವೋ ನೋಡಬೇಕು.

ಹಿಂದುಸ್ಥಾನ

ಪುಣೆಯ ದೆಕ್ಕನ್ನ ಕಾಲೇಜದಲ್ಲಿ ಲೋಕಮಾನ್ಯರ ಭಾವಚಿತ್ರ ಅವರ ಸ್ಮರಣಾರ್ಥ ಕಳೆದವಾರದಲ್ಲಿ ಇಡಲ್ಪಟ್ಟಿತು. ಶಿಕ್ಷಣ ಮಂತ್ರಿಗಳಾದ ದಾಭಾಡೆಯವರ ಹಸ್ತದಿಂದ ಇದು ನೆರವೇರಿತು. ಒಂದು ಕಾಲೇಜದ ಪುಸ್ತಕಾಲಯವೂ, ತೆರೆಯಲ್ಪಟ್ಟಿದೆ. ಹಾಗೆಯೇ, ಟ್ರೈನಿಂಗ ಕಾಲೇಜುಗಳಲ್ಲಿ ಮೇಲಾದ ಜಾಣತನವನ್ನು ತೋರಿಸಿದವರಿಗೆ ಲೋಕಮಾನ್ಯರ ಸ್ಮರಣಾರ್ಥ ಪಾರಿತೋಷಕವನ್ನು ಪ್ರತಿ ವರ್ಷ ಹಂಚುವ ವಿಚಾರಮಾಗಿದೆ. ಅಂತೂ ಅವರ ಜೀವಮಾನದಲ್ಲಿ ಅವರು ಕಲಿತ ದೆಕ್ಕನ ಕಾಲೇಜಿನಲ್ಲಿ ಅವರಿಗೆ ಸನ್ಮಾನವು ದೊರೆಯದಿದ್ದರೂ, ಈಗ ದೊರೆತದ್ದು ಶ್ಲಾಘನೀಯವು.

೨ ನೇ ಮಹಾರಾಷ್ಟ್ರ ವ್ಯಾಪಾರೀ ಪರಿಷತ್ತು ಪುಣೆಯಲ್ಲಿ ಶ್ರೀ ವಾಲಚಂದ ಹಿರಾಚಂದ ಅಧ್ಯಕ್ಷತೆಯಲ್ಲಿ ಕಳೆದವಾರದಲ್ಲಿ ಕೂಡಿತ್ತು.

ಪಂಡಿತ ಮೋತಿಲಾಲ ನೆಹರೂ ಇವರ ಪ್ರಸಿದ್ಧವೂ ವಿಶಾಲವೂ ಆದ 'ಆನಂದ ಭವನ' ಮನೆಯನ್ನು ಅಲಹಾಬಾದ ವಿಶ್ವವಿದ್ಯಾಲಯದವರು ಸ್ತ್ರೀಯರ ಕಾಲೇಜಿಗಾಗಿ ಕೊಂಡುಕೊಳ್ಳಲಿಕ್ಕೆ ಯೋಚಿಸಿದ್ದಾರೆ.

ಕೊಂಡಬಿಟ್ಟು ಪ್ರವಾಸಮಾಡಿದರೆ ಗಾಂಧಿ ಮಹಾತ್ಮರ ದೇಹಸ್ಥಿತಿಯು ಕೆಡುವದೆಂದು ಡಾಕ್ಟರರ ಅಭಿಪ್ರಾಯವಾಗಿದೆ. ಆದ್ದರಿಂದ ದಿವಾಲು ಒಂದು ತಿಂಗಳು ಮಾತ್ರ ಪ್ರವಾಸಮಾಡಬೇಕೆಂದು ಗೊತ್ತಾಗಿದೆ. ತಮಿಳನಾಡಿನ ಮಹಾತ್ಮರ ಪ್ರವಾಸವು ಆರಂಭದಿಂದ ಸಾಗಿದೆ. ಜನರ ಉತ್ಸಾಹ ನಿರೀಕ್ಷೆಗೆ ಕೊರತೆಯಿಲ್ಲ.

ಮೈಸೂರ ಕರ್ನಾಟಕ

ದಿವಾನ ಮಿರ್ಜಾ ಇಸ್ಮಾಯಿಲ್ ಸಾಹೇಬರು ರಜೆಯಿಂದ ಬಂದುದರಿಂದ ಮೈಸೂರು ಸರಕಾರದವರು. ಬೆಂಗಳೂರ ಪಾಲಿಕೆಯಲ್ಲಿ ಅಗ್ರೇಸರರಾದ ಶ್ರೀ. ರಾ. ರಾಮಚಂದ್ರರಾಯರನ್ನು (ಶ್ರೀ ವಿಶ್ವೇಶ್ವರಯ್ಯನವರ ತಮ್ಮಂದಿರು) ಕಸ್ಟೋಡಿಯನ್ನಾಗಿ ನೇಮಿಸಿದ್ದಾರೆ.

ಮೋಟಾರುಗಳು ಬಳಕೆಗೆ ಬಂದಾಗಿನಿಂದ, ಅವರು ತಮ್ಮ ದರಗಳನ್ನು ಕಡಿಮೆಮಾಡಿದ್ದರಿಂದ ಮೈಸೂರ ರೇಲ್ವೇ ಇಲಾಖೆಯ ಉತ್ಪನ್ನವು ಕಡಿಮೆಯಾಗಿದೆ. ಆದುದರಿಂದ ರೇಲ್ವೇಗೆ ಹಾನಿತಟ್ಟುವ ಮಾರ್ಗಗಳಲ್ಲಿಯ ಮೋಟಾರ ದರಗಳು ಹೆಚ್ಚಾಗುವಂತೆ ಮಾಡಬೇಕಾಗಿ ಸರಕಾರದ ವಿಚಾರ ನಡೆದಿದೆ.

ಕಳೆದ ವರ್ಷ ಮೈಸೂರ ಸಂಸ್ಥಾನದಲ್ಲಿ ೭ ಹೊಸ ಮುನಿಸಿಪಾಲಿಟಿಗಳು (೫ ಬೆಂಗಳೂರಲ್ಲಿ ೨ ಮೈಸೂರಲ್ಲಿ) ಹೊಸದಾಗಿ ಆಸ್ಪತ್ರೆಗಳಲ್ಲಿ 'ಸ್ಟಾಂಡರ್ಡ ಟೂಬುಲ ಅಡ್ವಾನ್ಸ ಪತ್ರಿಕೆ' ಇದೇ ದೊಡ್ಡದು. ೩೦ ಲಕ್ಷ ಭಾಂಡವಲವುಳ್ಳದ್ದು. ಇದಕ್ಕೆ ಒಟ್ಟು ೧೨೩ ಶಂಗಳಿವೆ.

ವಿಜಾಪುರ ಜಿಲ್ಹೆಯ ಸುದ್ದಿಗಳು

(ನಮ್ಮ ಸ್ವಂತ ಸುದ್ದಿಗಾರರಿಂದ)

ವಿಜಾಪುರ. ನವರಾತ್ರಿಯನ್ನು ಕರ್ನಾಟಕದ ರಾಷ್ಟ್ರೀಯ ಉತ್ಸವವನ್ನಾಗಿ ಮಾಡಬೇಕೆಂದು ನಿರ್ಧರಿಸಿದಂತೆ ಆ ಬಗ್ಗೆ ಒಳ್ಳೇ ಉತ್ಸಾಹದಿಂದಲೂ, ರಥಸ್ಥಿತಿಯಿಂದಲೂ ಪೂರ್ಣ ಸಿದ್ಧತೆ ನಡೆದಿದೆ. ಪ್ರತಿಪದೆಯಿಂದ ದಶಮಿಯವರೆಗೆ ದಿನಾಲು ವ್ಯಾಖ್ಯಾನಗಳ ಸಮಾರಂಭವು ಆಗುತ್ತಲಿದೆ. ಜಿಲ್ಹೆಯಲ್ಲಿರುವಷ್ಟು ಮಳೆ ಕಾಲಕ್ಕೆ ಆಗದ ಕಾರಣ ಕೆಲಸವೂ ನಡೆದಿದೆ. ಗುಜರಾತದ ನೀರಾಶ್ರಿತರ ಸಹಾಯಾರ್ಥ ಸ್ಥಾನಿಕರು ಅವಶ್ಯವಾಗಿ ಸಹಾಯಮಾಡಬಹುದೆಂದೂ ಇದು ಕಾರ್ಯದೇಶೀಯವಾಗಿಯೇ ಇದೆ ಎಂದೂ ಈ ಜಿಲ್ಹೆಯ ಅಧಿಕಾರಿಗಳು ಅಪ್ಪಣೆಕೊಡಿಸಿದ್ದಾರೆ.

ಬೀಳಗಿ— ಈವರೆಗೆ ಮನೆಗಳ ಕಡೆಗೆ ಎಂತೆ ವಿಶ್ರಾಂತವಾಗಿ ಬೀಳಗಿ ಗಲಗಲಿಗಳ ಭಾಗಗಳು ಸಾಧಾರಣ. ಸರ್ಕಾರದ ಪಟ್ಟಿಯಾಗ್ರದ ಪ್ರಕರಣದಲ್ಲಿ ಅನ್ಯಾಯದಿಂದ ಸಿಡಿಲು ಬಿದ್ದಂತೆ ಗೊತ್ತಾಗಿದೆ.

ಸಿಂದಗಿ, ಬಾಗೇವಾಡಿ, ಮುದ್ದೇಬಿಹಾಳದ ಸುದ್ದಿಗಾರರು ಎಚ್ಚತ್ತು ಸುದ್ದಿಗಳನ್ನು ಕಳಿಸುವರೋ?

ಇಂಡಿ

ಈ ತಾಲೂಕಿಗೆ ಮಳೆ ಕಡಿಮೆ. ಅಲ್ಲಲ್ಲಿ ದನಗಳ ಕೆಲಸ ಸಾಗಿದೆ. ಬಡಜನರ ಸಂಖ್ಯೆಯು ಹೆಚ್ಚು ಆದರೂ ಇದು, ತನ್ನ ಪ್ರಯತ್ನದಿಂದ ನಗರವಾಗುತ್ತಿದೆ. ೪-೫ ಚಹಾದ ಅಂಗಡಿಗಳ ಭಾರಾಟೆಯೂ, ೨-೩ ಮೋಟಾರುಗಳ ತುಂಬ ಜನರ ಹೋಗಬರುವಿಕೆಯೂ ಸಾಕ್ಷಿ! ನೀರಿನಂಥ ಉದ್ಯೋಗಗಳ ಊರು! ಬಡ ಮುದಿಕೆಯರು, ಒಂದೆರಡು ದುಡ್ಡುಗಳಿಸಲಿಕ್ಕೆ ಹೀಗೆ ಸಾಕುವ ಉದ್ಯೋಗ ಸಿಕ್ಕುತ್ತಿತ್ತು. ಈಗೇನಾಯ್ತೆನ್ನುವಿರೋ? ಊರ ಸಾಹುಕಾರರು, ಹೀಗೆ ಸಾಕುವ ಗಿರಣಿಯನ್ನು ಹಾಕಿ, ಬಡವರ ಹೊಟ್ಟೆಯನ್ನು ಹೊಡೆಯುತ್ತಲಿದ್ದರು. ಒಂದು ಬಂದೇ— ಬೀಸಿಸ್ಗಳನ್ನು ಜಡೆಯುತ್ತಿದ್ದರು. ಮೊದಲೇ—ಹಿಟ್ಟಿನ ಗಿರಣಿಯನ್ನು ಹಾಕಿ, ಬೀಸುಗಲ್ಲುಗಳನ್ನು ನುಂಗಿ, ಬಡವರ ಹೊಟ್ಟೆಕಳ್ಳತನಕ್ಕೆ ಪಾತ್ರರಾಗಿರುವರು. ಬಡವರ ದಾರಿದ್ರ್ಯವನ್ನು ಹೆಚ್ಚಿಸಿ, ಒಬ್ಬಿಬ್ಬರು ಮಾತ್ರ ಸಿರಿವಂತಿಕೆಯನ್ನು ಪಡೆಯುವುದೇ ನಾಗರಿಕತೆಯೋ!!

ಬದಾಮಿ— ಮಳೆ ಚನ್ನಾಗಿ ಆಗಿದೆ. ಜನರಿಗೆ ಒಂದು ದೊಡ್ಡ ಚಿಂತೆಯು ತಪ್ಪಿದಂತಾಗಿದೆ. ಪ್ರಾಥಮಿಕ ಶಾಲಾ ಶಿಕ್ಷಕರ ಪಗಾರದ ಬಗ್ಗೆ ಲೋ. ಬೋ. ನವರು ತಾಲೂಕಿನಲ್ಲಿ ೪-ನೇ ತಾರೀಖಿನೊಳಗಾಗಿ ಬಿಲ್ಲು ತಯಾರಿಸಿ, ಹುಜೂರಿಗೆ ಕಳಿಸಬೇಕು. ಹುಜೂರರಿಂದ ೮-೧೦ ದಿನ್ನದಲ್ಲಿ ತಾಲೂಕಿಗೆ ಮುಟ್ಟುವಂತೆ ವ್ಯವಸ್ಥೆಮಾಡಿದ್ದಾರೆ. ಇದು ಸುಸಂಗತಿಯ ಸುದ್ದಿಯು.

॥ ಶ್ರೀ ಸದ್ಗುರು ಪ್ರಸನ್ನ ॥

ವಿಜಾಪೂರ ಜಿಲ್ಹೆಯಲ್ಲಿಯ ಮತ್ತು ಸುತ್ತು ಮುತ್ತಲಿನ ಖಾಸಗಿ ವ ಸರ್ವಿಸಿನ ಮೋಟಾರ ಮಾಲಕರ ಗೈರಸೋಯ ದೂರವಾಗಬೇಕೆಂದು.

ಆರ್. ಜಿ. ಚವ್ಹಾಣ ಎಂಡ ಸನ್ಸ, ಬೆಳಗಾವ.

ಇವರು ತಮ್ಮ

ಧಿ ಜನರಲ ಮೋಟಾರ ಅಕ್ಸೆಸರಿ ಸ್ಟೋಅರ್ಸದ ಶಾಖೆಯನ್ನು

ತಾ॥ ೧೦ ಸಪ್ಟೆಂಬರ ೧೯೨೭ನೇ ಇಸ್ವಿಯಿಂದ ಬಾಗಲಕೋಟೆಯಲ್ಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಶೆವ್ರಲೇಟ, ಓವ್ಹರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯೂಬ್ಸ, ಗ್ರೀಸ, ಮೋಬಿಲ ಆಇಲ್, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯ ದರದಿಂದ ಸಿಗುವವು. ಒಂದು ವೇಳೆ ವ್ಯಾಪಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರದಿಂದ,

ಚಾಲಕ:— **ವಾಯ್. ಜಿ. ಚವ್ಹಾಣ.**

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಹಲ್ಕನಾಯಝಿಂಗ ಮಾಡಿ ಕೊಡುವೆವು

ಬಾಗಲಕೋಟೆ-ಬೆಳಗಾವಿ, ಬಾಗಲಕೋಟೆ-ಇಲಕಲ್ಲ ಸರ್ವಿಸ ಯಥಾಪ್ರಕಾರ ನಡೆದಿದೆ.

ಶ್ರೀ ಭಾರತ ಜಗತ್ಪ್ರಸಿದ್ಧ ಜಗ ಜಾಹೀರ ನೋಟೀಸು.

ಮೃತ್ಯುಂಜಯ ಔಷಧದಿಂದ ಮೂರೇ ತಾಸಿನಲ್ಲಿ ಗುಣವಿಲ್ಲೆಂದು ಸಿದ್ಧ ಮಾಡಿದವರಿಗೆ ೧೦೦೦ ರೂ. ಬಕ್ಷೀಸ ಕೊಡಲ್ಪಡುವವು ಮೂರೇ ತಾಸಿನಲ್ಲಿ ಗುಣ] ಕಲ್ಪವೃಕ್ಷ ರಸಾಯನ ತಕ್ಷಣದಿಂದ [ಮೂರೇ ದಿವಸಗಳಲ್ಲಿ ರೋಗ ಪ್ರಾಣ ಹೋಗುವದು. ಸಾಯುವದೇಕೆ?

೫೬ ಶುದ್ಧ ವನಸ್ಪತಿಯಿಂದ ತಯಾರು ಮಾಡಿದ ಮೃತ್ಯುಂಜಯ ಔಷಧ.

ಉಪದಂಶ, ಗರ್ಮಿ (ಉಷ್ಣ) ಪರಮ ಮುಂತಾದ ಎಲ್ಲ ಪ್ರಕಾರದ ರೋಗ ಬಹುದಿನ ನೆಲಗೊಂಡದ್ದು ಶರೀರ ಕೆಟ್ಟಿಹೋಗಿ ಬಿದ್ದರೂ ಮೂರು ದಿವಸಗಳಲ್ಲಿ ಗುಣವಾಗುವದು.

ಇಂಥ ಪ್ರಕಾರ ರೋಗಗಳಿಂದ ಉತ್ಪನ್ನವಾಗುವ ವಿಕಾರ ಉಷ್ಣ ಪರಮ (ಉಪದಂಶ) ಗರ್ಮಿ ಚಟ್ಟಿ ಒಡೆದ ಗಂಟು, ಸಂದಿನಲ್ಲಿಯ ಗಂಟು, (ವೃಷಣ) ಅತಿಶಯ ಬಾವು, ಇಂದ್ರಿಯಕ್ಕೆ ಗಾಯ, ತಿಡಿಕೆ, ಮೊಡವು, ರಕ್ತ, ಕೀವು ಸುರಿಯೋಣ ಅದರಂತೆ ಸ್ತ್ರೀಯರ ಪ್ರದರ (ಕೆಂಪು ಬಿಳಿ ಸೆರಗು) ಹೊಲೆ ಕುಟ್ಟರೋಗ ಬೆಳೆಯೋಣ, ಕಡಕಿ ವಿಕಾರಗಳಿಂದ ಗರ್ಭಾಶಯ ಕೆಡೋಣ, ಮೂತ್ರ ಕಣ್ಣು ಕಾಲು ಉರಿಯೋಣ, ಕಾವು ಹೆಚ್ಚಾಗಿ ಮಧುಮೇಹ ಮೈಮೇಲೆ ಗರ್ಮಿ (ಉಷ್ಣ) ಒಡೆದು ಕೀವು ಹೊರಬಿದ್ದು ಇದರಿಂದ ವ್ರಣ (ಗಾಯ) ವಾಗಿ ಅಂಗಳಕ್ಕೆ ತೂತು ಬಿದ್ದು ಮೂಗು ಕೂಡ್ರುವದು ಸೋರುವದೂ ಎಲ್ಲ ತರದ ಮೂಲವ್ಯಾಧಿ, ಹೊಟ್ಟೆ ಕಡಿತ ವಗೈರೆ ಕಾರಣಗಳಿಂದಾ ಜನನೇಂದ್ರಿಯ ಶಿಥಿಲತಾ ಅಥವಾ ನಪುಂಸಕತ್ವ ಮುಷ್ಟಿಮೈಥುನದಿಂದ ಆಗುವ ಪರಿಣಾಮ, ಸ್ವಪ್ನಾವಸ್ಥೆ ಮೂತ್ರದಲ್ಲಿ ಧಾತು ಅಥವಾ ಬಿಳಿ ಹೋಗೋಣ, ವೀರ್ಯ ತೆಳುವಾಗೋಣ, ಸ್ತ್ರೀಗಮನದಲ್ಲಿ ತೀಕ್ಷ ಹತ್ತೋಣ. ಶೀಘ್ರ ವೀರ್ಯ ಪತನವಾಗೋಣ, ನರಸೋವು (ಚಳಿ) ಸೋರೋಣ, ಬೆನ್ನು ಬಿಗಿಯೋಣ, ವಾತವಿಕಾರ ಅವಿಚ್ಛಾರದಿಂದ ಮಾಡಿದ ನಿರ್ಬಲತಾ ವಗೈರೆ ರೋಗಗಳ ಮೇಲೆ ಅಶಿಕ್ಷಿತ ಅಡಾಣಿ ಜನರ ಕಡಿಯಿಂದ ಪಾರಾ ಮತ್ತು ರಸಕರ್ಪೂರ, ಇಂಗಳೀಕ ಮುಂತಾದ ಸವಿಷ ಮತ್ತು ಅಪಕ್ವ ಧಾತು ರೂಪ ಪದಾರ್ಥ (ರಸಾಯನ) ಮತ್ತು ಅಪಕಾರಿಕ ವಸ್ತು ಸೇವಿಸುವದರಿಂದ ಮೈಯೊಳಗೆ ರಸಾಯನ ನಿಂತು ಅದರಿಂದ ಕಾಲು ಕೈ ಮುಡವಾಗಿ ಮತ್ತು ಕೈ ಕಾಲುಗಳಲ್ಲಿ ರಸಾಯನ ಒಡೆದು ಸ್ವತಃ (ತನಗೆ) ಮತ್ತು ಮುಂದಾಗುವ ತನ್ನ ಸಂತತಿಗೆ ಅನೇಕ ರೋಗವು ಉತ್ಪನ್ನವಾಗಿ ಅದರಿಂದ ಭಯಂಕರ ಕಷ್ಟ ಭೋಗಿಸಬೇಕಾಗುವದು. ಇಂಥ ಪ್ರಕಾರದ ರೋಗಗಳು ಬಹಳ ದಿವಸ ನೆಲಗೊಂಡಿದ್ದಾಗ್ಯೂ ಅಥವಾ ಹೊಸದಾಗಿ ಆದದ್ದಾಗಲಿ ಇಂಥ ರೋಗಗಳ ಮೇಲೆ ಈ ನಮ್ಮ **ಮೃತ್ಯುಂಜಯ ಔಷಧ** ಉಪಯೋಗ ಮಾಡಿದರೆ ತತ್ ಸಂಬಂಧಿ ಸಂಪೂರ್ಣ ರೋಗಗಳು ಶೀಘ್ರವಾಗಿ ಹೋಗಿ ಮೈಯೊಳಗೆ ಇದ್ದ ರಸಾಯನವು ನಾಶವಾಗುವದು. ಮತ್ತು ಅಶಕ್ತಿ ಹೋಗಿ ಮೈಯೊಳಗೆ ಶಕ್ತಿ ಬಂದು ಪ್ರಕೃತಿ ಉತ್ತಮವಾಗುತ್ತದೆ. ಒಂದು ಬಾಟ್ಲಿಗೆ [೫] ರೂಪಾಯಿ ಟಪಾಲು ಖರ್ಚ ಬೇರೆ ಅನುಪಾನ ಪತ್ರಿಕೆಯು ಔಷಧದ ಸಂಗಡ. ಲಾಭಕ್ಕೆ ಲಾಭ. ಒಂದು ಆಣೆ ಟಿಕೀಟು ಕಳಿಸಿದಲ್ಲಿ ನಮ್ಮ ಔಷಧದ ಪೂರ್ಣ ಕ್ಯಾಟಲಾಕ ಕಳಿಸುವೆವು. (ತಮ್ಮ ಪತ್ತೆ:- ಪೂರ್ಣ ಬರೆಯಿರಿ.)

ಸುಪ್ರಸಿದ್ಧ ಡಾ॥ ಆರ್. ಎಲ್. ಹಿರೇಮಠ ಆರೋಗ್ಯ ಮಂದಿರ ಆಯುರ್ವನೌಷಧಿ ೫೦೦೦, ಸಾವಿರ ಕಾರಖಾನೆ. ಕಮತನೂರ ಪೋ॥ ಶಂಕೇಶ್ವರ ಜಿ॥ ಬೆಳಗಾಂವ.

EAT KASHMIR FRUITS & NUTS!

ಕಾಶ್ಮೀರದ ಹಣ್ಣು ಹಂಪಲಗಳನ್ನು ಸೇವಿಸಿರಿ!

ತೆಳುವಾದ ತೊಗಟೆಯ ತಾಜಾ ಅಕ್ರೋಡಗಳೂ, ಬರಿಸಿದ ಬಡವಿಯ ಸೇಂಗಳೂ, (Hazelnuts) ೧೧ ಪೌಂಡಿಗೆ ರೂ. ೬—೮—೦; ತಾಜಾ ಕಾಗದೀ ಬದಾಮು; ದರಳಿಲ್ಲದ್ದು, ಒಲು ಸವಿಯಾದ ಜರ್ದಾಲು (Apricots); ಅಂಜೂರ; ದ್ರಾಕ್ಷಿ; ಕಿಸಮಿಸು, ೧೧ ಪೌ. ಗೆ ೧೪ ರೂ.; ಕಮಲದ ಶುದ್ಧವಾದ ಜೇನತುಪ್ಪ, ೫, ಪೌ. ಗೆ ೮ ರೂ.; ಶುದ್ಧ ಕೇಶರ, ೧ ತೋಲೆಗೆ ೩ ರೂ. ಟಪಾಲು ಖರ್ಚ ಮಾಫ!

ದಾರ ಬ್ರದರ್ಸ ಶ್ರೀನಗರ, ಕಾಶ್ಮೀರ.

Dar Bros Shrinagar,

Kashmir.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು ಇಲ್ಲದೆ ಸರ್ವರಿಗೂ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಪ್ಪಾ ಜಾಲವಾದಿ. ಸ್ಟೇಶನರ್ಸ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ, ೫೨, ಚೀನಾಬಜಾರ್, ಮದ್ರಾಸು



ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

೧೯೨೭ನೇ ಜನವರಿ ೧೫ರಿಂದ ಪ್ರಾರಂಭ

ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ-

೧. ನೀವು ನಮಗೆ ರೂ. ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪುವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ್ ಗೋಲ್ಡ್" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ.

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ವಿಕರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು. ಅಥವಾ ವಿ. ಪಿ. ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಳೆದುಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಆಶ್ಚರ್ಯಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೬-೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್. ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರ ಸಿಟಿ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೀ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೀ ಒಂದ ತಿಂಗಳ ಬಗ್ಗೆ ನಾವು ಈ ದಾನವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. **ಬೆಲೆ ರೂ ೭**

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ— ಸ್ವಾನ ಹೌಸ ಪಿ. ಬಿ. ೫೦೪. ಪಿ. ಟಿ. ಮದ್ರಾಸ

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ ರಜಿಸ್ಟರ್ಡ್ ಪೊಕೆಟ್ ವಾಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖವಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ. ಪಿ, ಬಿ. ಮದ್ರಾಸ. ೨೬೫

ಗುಣ ಬರದಿದ್ದರೆ ಹಣ ಪರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ ' ಬಲವಂತ ಗುಟಿಕೆ ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು ಹಾಗೂ ಮೂತ್ರ ಬಿಡುವ ಮುಂಚೆ ಆಗಲಿ ನಂತರ ಧಾತು ಸೋರುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ, ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ (ಏಳೇ ದಿವಸ ತೆಗೆದುಕೊಂಡು [illegible]) ಇದರಿಂದ ವೈದ್ಯರು [illegible] ಎಲ್ಲ [illegible] ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೆ ಯೋಗ್ಯತೆಯು ಸೇವಿಸಿ ನೋಡಿದರೆ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗೆ [illegible] ೧೨ ಡಬ್ಬಿಗಳಿಗೆ ೭-೦-೦, ಇದಲ್ಲದ ೧ ಡಬ್ಬಿ ಕಮಿಶನು [illegible] ಪೂರ್ಣ ಗುಣಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ:— ಎಸ್ ಬಿ ಕಡಸಾಗ್ [illegible] ಸನ್ಸ್ [illegible] ಪೋಷ್ಟ ನಿಪ್ಪಾಣಿ (ಜಿ ಬೆಳಗಾಂವ)

ಬನಾರಸ್ ರೇಶ್ಮೆ ಶೀರೆಗಳು.

ನಮ್ಮಲ್ಲಿ ಉತ್ತಮವಾದ [illegible] ರೇಶ್ಮೆ [illegible] ಕಳುಹಿಸಲ್ಪಡುವದು [illegible] ಉದ್ದ ಮೊಳ [illegible] ಧಾನು ೧೫ ೧೫ ರಿಂದ ೫೦ ಜರಿ ಶೀರೆಗಳು [illegible] ಉದ್ದ ೧೪ [illegible] ರಿಂದ ೫೦ ರವರೆಗೆ. ಬುಟ್ಟಿದಾರ್ ಬನಾರಸ್ ಶೀರೆ ೧೬-೧೮ ಉದ್ದ ಮೊಳ [illegible] ೫೧ ರಿಂದ ೩೦೦ ರ ವರೆಗೆ ಉಡುವ ಮಗುಟ ಉದ್ದ [illegible] ಮೊಳ ೧೩ ರೂ ೧೦ ರಿಂದ ೩೦ ರ ವರೆಗೆ [illegible] ಉದ್ದ ೧೫ ರೂ ೧೧ ರಿಂದ ೪೦ ರ ವರೆಗೆ. ಬಿಳಿ ರೇಶ್ಮೆ ಜರಿ ದುಪ್ಪಟಿ [illegible] ಮೊಳ ಉದ್ದ ೧೩ ರೂ. ೧೧ ರಿಂದ ೩೦ [illegible] ಮೊಳ [illegible] ಸ್ಪೆಷಲ ೧೦ ರ ಸರ [illegible] ರಿಂದ [illegible]

[illegible] ಬನಾರಸ್

ಕರ್ನಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ಪಬ್ಲಿಕ್ ಸ್ಕೂಲ ಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರುವದಕ್ಕೆ ಶಿಕ್ಷಣ [illegible] ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಕಸೂತಿ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ [illegible] ಅನುಕೂಲವಾದ ವಸತಿಗೃಹವೂ ಇರುತ್ತದೆ. ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು [illegible] ಶಿಕ್ಷಣವನ್ನು ಕೊಡಲಾಗುವದು

ವಿಜಾಪೂರ, ಧಾರವಾಡ [illegible] ಮೊದಲಾದ ಜಿಲ್ಲೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ

ಸೌ॥ ಲಕ್ಷ್ಮೀಬಾಯಿ [illegible],
ವ್ಯವಸ್ಥಾಪಕ [illegible] ವಿದ್ಯಾಲಯ, ಧಾರವಾಡ.

ಅತೀ ಸುಲಭ ಕಂತುಗಳು ! ಫಲಿತಾಂಶವು ಹೆಚ್ಚು!

ಹಿಂದುಸ್ಥಾನ [illegible]

ಇನ್ಸುರೆನ್ಸ ಸೊಸೈಟಿ ಲಿಮಿಟೆಡ್.

(ಬ್ರಾಂಚ್:— [illegible]) (ಹೆಡ್ ಆಫೀಸ:— ಕಲ್ಕತ್ತಾ)

ಈ ಕಂಪನಿಯು ಇಡೀ ಹಿಂದುಸ್ಥಾನದಲ್ಲಿ [illegible] ತೆಗೆ ಬಂದ ಸ್ವದೇಶಿ ಕಂಪನಿಗಳಲ್ಲಿ ಒಂದಾಗಿದೆ [illegible] ಈ ವಿಜಾಪೂರ ಜಿಲ್ಲೆಯಲ್ಲಿ ಇದರ ಒಂದು [illegible] ನೇಮಿಸಿರುವರು. ಕಂತುಗಳು ಅತೀ ಸುಲಭ ಇದ್ದು, ಧಾರಾಳವಾಗಿ ಈ ಕಂಪನಿಯಲ್ಲಿ ನಿಮ್ಮ ಜೀವ ವಿಮೆಯನ್ನು ಇಳಿಸಬಹುದು.

ಇದರ [illegible] ೧೯೩೧-೩೩ ನೇ ವರ್ಷದಲ್ಲಿ [illegible] ರೂ. [illegible] ರೂ. ದಂತೆ ನಫಾ [illegible]

ಎಲ್ಲ ಕಡೆಯಲ್ಲಿ ಏಜಂಟರು ಬೇಕಾಗಿದ್ದಾರೆ.

[illegible]

ವಿಳಾಸ —

ವಿಜಾಪೂರ [illegible] } ಜಿ ಆರ್ ಪತ್ತಾರ [illegible] ಬ್ರದರ್ಸ.
ಚೀಫ ಏಜಂಟ್ಸ,
ವಿಜಾಪೂರ ಜಿಲ್ಹಾ

ಸ್ಟ್ಯಾಂಡರ್ಡ ಕಾಫಿಪುಡಿ.

[illegible] ಉತ್ತಮವಾದ [illegible] ತಯಾರಾದ ಅತ್ಯುತ್ತಮ ಕಾಫಿಪುಡಿ. [illegible] ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆಗಿದೆ

ನಾಲ್ಕು ಪಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದು ಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು

[illegible]

ದಿ ಸ್ಟ್ಯಾಂಡರ್ಡ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

INDIA'S GREATEST GIFT

ಹಿಂದುಸ್ಥಾನದ ಅತ್ಯುತ್ತಮವಾದ
ಪಾರಿತೋಷಕವು.

Comes with appropriate significance and grace in the Dasara Season.

ದಸರೆಯ ಸಮಯಕ್ಕೆ ಅನುರೂಪವಾದ ಅರ್ಥದಿಂದಲೂ ಆದರದಿಂದಲೂ ಇದು ನಿಮಗೆ ಬರುವ ತಕ್ಕುದು.

Littles Oriental Balm

ಲಿಟ್ಲ್ ಓರಿಯಂಟಲ್ ಬಾಮು.

OBTAINABLE AT ALL CHEMISTS AND STORES.

ಎಲ್ಲ ಔಷಧಿ ವ್ಯಾಪಾರಿಗಳಲ್ಲಿ ದೊರೆಯುತ್ತೆ.

Buy Your Gift
TO-DAY!

BRINGS HOPE AND RELIEF AND FREEDOM FROM PAIN TO ALL SUFFERERS OF HEADACHES, NEURALGIA, RHEUMATISM, SCIATICA, LUMBAGO, PARALYSIS, SPRAINS AND STRAINS

ತಲೆನೋವು, ಸಂಧಿವಾತ, ಅರ್ಧಾಂಗವಾಯು, ಟೊಂಕಶೂಲಿ, ನರಗಳ ಅಶಕ್ತತೆ ಮೊದಲಾದ ಎಲ್ಲ ವಾತವಿಕಾರಗಳಿಗೆ ಗುಣವನ್ನು ತರುವದಲ್ಲದೇ ಆಶಾಜನಕವಾಗಿರುವದು.

ಈ ದಿನವೇ
ನಿಮ್ಮ ಪಾರಿತೋಷಕವನ್ನು ಕೊಳ್ಳಿ!

ಹಿಂದುಸ್ಥಾನೀ ಸೇವಾದಲ.

ಸ್ವಯಂಸೇವಕರ ಶಿಕ್ಷಣ ಶಿಬಿರವು.

ಈ ಶಿಬಿರವು ವಿಜಾಪೂರ ಜಿಲ್ಹೆಯ ಬಾಗಲಕೋಟೆಯಲ್ಲಿ ಶ್ರೀ. ಕೆ. ವ್ಹಿ. ಜೋರಾಪೂರ ಇವರ ಶಿಬಿರನಾಯಕತ್ವದಲ್ಲಿ ಇದೇ ಬರುವ ಅಕ್ಟೋಬರ ೩ನೇ ತಾರೀಖಿನಿಂದ ಒಂದು ತಿಂಗಳು ನಡೆಯತಕ್ಕದ್ದದೆ.

ಪ್ರವೇಶ ಶರ್ತುಗಳು.

೧ (ಅ) ಈ ಮೊದಲು ದಲದ ನಿಯಮಗಳಿಗನುಸಾರವಾಗಿ ಶಿಕ್ಷಣವನ್ನು ಹೊಂದಿದವರಲ್ಲಿ ಇನ್ನು ಮುಂದಾದರೂ ದಲದಬಗ್ಗೆ ಕೆಲಸ ಮಾಡಲು ತಯಾರಿರುವವರೂ,

(ಬ) ಇದಕ್ಕೆ ಮೊದಲು ದಲದ ಶಿಕ್ಷಣವನ್ನು ಪಡೆಯದೆ ಇರುವವರು ಯಾರೇ ಆದರೂ, ತಮ್ಮ ಊರಿನ ಒಬ್ಬಿಬ್ಬರು ಪ್ರಮುಖ ಗ್ರಹಸ್ಥರ ಶಿಫಾರಸುಪತ್ರಗಳೊಡನೆ ಅರ್ಜಿ ಮಾಡಿದಲ್ಲಿ, ಹಾಗೆ ಅರ್ಜಿಮಾಡಿದವರಲ್ಲಿ ದಲದಿಂದ ಆರಿಸಲ್ಪಟ್ಟು, ತಾವು ಶಿಕ್ಷಣವನ್ನು ಹೊಂದಿ, ತಮ್ಮೂರಿಗೆ ಹೋದ ಮೇಲೆ ಅಲ್ಲಿ ವ್ಯಾಯಾಮ ಶಾಲೆಗಳನ್ನು ಸುರುಮಾಡುವ ಶರ್ತಕ್ಕೆ ಒಪ್ಪಿಗೆ ಕೊಡುವವರೂ ಈ ಶಿಬಿರದಲ್ಲಿ ಪ್ರವೇಶಕ್ಕೆ ಅರ್ಹರಾಗುತ್ತಾರೆ

೨ ಶಿಬಿರಕ್ಕೆ ಸೇರುವವರೆಲ್ಲರೂ ತಮ್ಮ ತಮ್ಮ ಪ್ರವಾಸದ ಹಾಗೂ ಇತರ ಖರ್ಚುಗಳನ್ನು ತಾವೇ ನೋಡಿಕೊಳ್ಳತಕ್ಕದ್ದು. ಮತ್ತು ಶಿಬಿರದಲ್ಲಿ ಊಟದ, ಇರುವ, ಮತ್ತು ಇತರ ಖರ್ಚಿನ ಬಗ್ಗೆ ೨೦ ರೂಪಾಯಿಗಳನ್ನು ಮುಂಗಡವಾಗಿ ಕಳುಹಿಸಿಕೊಡತಕ್ಕದ್ದು.

ಶಿಬಿರದಲ್ಲಿ ಕಲಿಸಲ್ಪಡುವ ವಿಷಯಗಳು.

೧ ಲಾಠಿ	೧೦ ಈಜುವದು
೨ ದಾಂಡಪಟ್ಟಾ.	೧೧ ಲೇಝಿಮ್.
೩ ಭಾಲಾ	೧೨ ಗದೆ ತಿರುಗಿಸುವದು.
೪ ಫರೀಗದಕಾ.	೧೩ ಹಿಂದುಸ್ಥಾನದ ಇತಿಹಾಸ.
೫ ಮಲಖಂಬ.	೧೪ ವ್ಯಾಯಾಮ ಶಾಲೆಗಳನ್ನು
೬ ಕುಸ್ತಿ ಹಿಡಿಯುವದು.	ನಡಿಸುವ ಮತ್ತು ನಿರ್ವಾಹ
೭ ಪ್ರಥಮ ಚಿಕಿತ್ಸೆ.	ಸಂಬಂಧದ ಮಾಹಿತಿ.
೮ ರಾಷ್ಟ್ರೀಯಸಭೆಯ ಇತಿಹಾಸ	೧೫ ನಿಶಾನೆಗಳ ಸಂಕೇತ ಮಾಹಿತಿ.
೯ ಹಿಂದೀ ಡ್ರಿಲ್	

ಈ ಶಿಬಿರಕ್ಕೆ ಸೇರಬಯಸುವ ಉಮೇದವಾರರು ತಮ್ಮ ಅರ್ಜಿಗಳನ್ನು ೨೦ ರೂಪಾಯಿಗಳನ್ನು ಹುಬ್ಬಳ್ಳಿಯಲ್ಲಿರುವ ದಲದ ಮುಖ್ಯ ಕಾರ್ಯಾಲಯಕ್ಕೆ ಅಕ್ಟೋಬರ ೨ ನೇ ತಾರೀಖಿನೊಳಗಾಗಿ ಮುಟ್ಟುವಂತೆ ಕಳುಹಿಸಿ ಕೊಡತಕ್ಕದ್ದು.

ಪ್ರತಿಯೊಬ್ಬ ಉಮೇದವಾರನು ತನ್ನ ಸಾಗಡ ಖಾಕಿ ಖಾದಿಯಿಂದ ಮಾಡಿದ ಎರಡು ಸ್ವಯಂಸೇವಕರ ಪೋಷಾಕು (uniforms) ಮಲಗಿಕೊಳ್ಳುವ ಹಾಸಿಗೆ ಮತ್ತು ನೀರುಕುಡಿಯುವ ತಂಬಿಗೆ ಮೊದಲಾದವುಗಳನ್ನು ತರತಕ್ಕದ್ದು.

ಹುಬ್ಬಳ್ಳಿ. ೧೮-೯-೩೭. } ನಾ. ಸು. ಹರ್ಡೀಕರ. ಕಾರ್ಯದರ್ಶಿ.

ತಪ್ಪು ಒಪ್ಪಿಗೆ.

ಹೋದ ವಾರದಲ್ಲಿ, 'ಗುಳೇದಗುಡ್ಡದಲ್ಲಿ ಶ್ರೀಗುರು ಬಸವೇಶ್ವರ ಲಾಯಬ್ರರಿ' ಎಂದಿದ್ದಿತು. ಆದರೆ ಅದು ಶ್ರೀಗುರು ಸಿದ್ಧೇಶ್ವರ ಲಾಯಬ್ರರಿಯೆಂದಿರುತ್ತದೆ.

ನಮ್ಮ ಬೆಳಗಾವಿಯ ಪತ್ರವು-

ಹುದಲಿಯ (ಬೆಳಗಾವಿ) ಕನ್ನಡ ಶಾಲೆಗೆ ಒಕ್ಕಲತನದ ವರ್ಗವನ್ನು ಜೋಡಿಸಿ ಒಂದು ವರ್ಷವಾಯಿತು. ಈ ವರ್ಗದಲ್ಲಿ ೨೫ ಹುಡುಗರಿದ್ದು, ಅದರಲ್ಲಿ ೪ ಹುಡುಗರು ಹರಿಜನರಿದವರು. ಇಲ್ಲಿಯ ಕೆಲಸವು ಒಳ್ಳೇ ಸಮಾಧಾನಕಾರಕವಾಗಿದೆ. ಹುಡುಗರು ಒಳ್ಳೇ ಉತ್ಸಾಹದಿಂದ ತೋಟದ ಕೆಲಸ ಮಾಡುತ್ತಿರುವದನ್ನು ನೋಡಿದರೆ ಒಕ್ಕಲತನದ ಹುಡುಗರಿಗೆ ಇದು ಒಳ್ಳೇ ಪರಿಣಾಮಕಾರಕವಾಗುವದೆಂದು ಹೇಳಲಿಕ್ಕೆ ಆನಂದವೆನಿಸುತ್ತದೆ.

ಇಜಲಕರಂಜಿಯ ಅಸ್ಪೃಶ್ಯರ ೮ ಕುಟುಂಬಗಳ ೫೦ ಜನರು ತಮ್ಮ ಧರ್ಮವನ್ನು ಬಿಟ್ಟು ಕ್ರಿಸ್ತೀ ಧರ್ಮವನ್ನು ಸೇರಿದರು! ಹಿಂದೂ ಸಂಘಟನವು ಈ ಭಾಗದಲ್ಲಿ ನಡೆದೂ ಈ ಸ್ಥಿತಿ!

ಬೆಳಗಾವಿ ಗಣಪತಿ ಉತ್ಸವಗಳು ಅಲ್ಲಲ್ಲಿ ಪ್ರತಿವರ್ಷದಂತೆ ನಡೆದು ಶ್ರೀ ಗಂಗಾಧರರಾವ ದೇಶಪಾಂಡೆ, ಶ್ರೀ ಮೋರೋಪಂತ ಮರಾಠೆ, ಶ್ರೀ ಜೀವನರಾವ ಯಾಳಗಿ, ಶ್ರೀ ಪುರಾಣಿಕ, ಶ್ರೀ ಜೋಗ ವಕೀಲ, ಶ್ರೀ ಕೇಶವರಾವ ಗೋಖಲೆ, ಮತ್ತು ಪ್ರೊಫೆಸರ ಸಾಖರೆಯವರ ಅಧ್ಯಕ್ಷತೆ ಕೆಳಗೆ ಧಾರವಾಡ ಕರ್ನಾಟಕ ಕಾಲೇಜದ ಪ್ರೊಫೆಸರರಾದ ಚನ್ನಕೇಶವ ಅಯ್ಯಂಗಾರರವರ ("ಕರ್ನಾಟಕ ಏಕೀಕರಣ"ದ ವಿಷಯಕ್ಕೆ) ವ್ಯಾಖ್ಯಾನಗಳಾದವು. ಮೇಲೆ ಕೊಟ್ಟ ಜನರಲ್ಲಿ (ಸಾಖರೇ ಅಯ್ಯಂಗಾರ ಪ್ರಭೃತಿಗಳ ಹೊರತು) ಒಬ್ಬರಾದರೂ ಕನ್ನಡದಲ್ಲಿ ಮಾತನಾಡಲಿಲ್ಲ! ಕನ್ನಡವು ಬೆಳಗಾವಿಯ ಮುಖಂಡರ ಕನಸಿನಲ್ಲಿ ಸಹ ಇಲ್ಲವೆಂದನ್ನಲಿಕ್ಕೆ ಏನೂ ಆತಂಕವಿಲ್ಲ!

ಇಲ್ಲಿಯ ಭಾತಖಂಡೆಯ ಬೀದಿಯಲ್ಲಿಯ ಗಣಪತಿಯನ್ನು ಸೊಂಡಿಲಿನ ವಿಜಯನಗರದಲ್ಲಿಯ ಕಡ್ಡಿಕಾಲು, ಮತ್ತು ನಾಸಿಕಾಳು ಗಣಪತಿಗಳ ಸ್ಮರಣೆಯಾಗುತ್ತದೆ. ಅನಂತಚತುರ್ದಶಿ ದಿವಸ ವಿಸರ್ಜನ ಮಾಡುವ ಕಾಲಕ್ಕೆ ಗಣಪತಿಯನ್ನು ಗಾಡಿಯಲ್ಲಿ ಕೂಡ್ರಿಸುವ ಕಾಲಕ್ಕೆ ಅರ್ಧಭಾಗವು ಮುರಿಯಿತು! ಆ ಗಣಪತಿಯನ್ನು ಮಾಡಿದವನಿಗೆ ಅದೇ ದಿವಸ ರಾತ್ರಿ ಪ್ಲೇಗ ಬಂದು, ಮೂರನೇ ದಿವಸ ಮಡಿದನು! ಅವನ ಮನೆಯಲ್ಲಿ ಇನ್ನೂ ಕೆಲವು ಜನರು ಮಲಗಿರುವರು! ಭಾತಖಂಡೆಗಲ್ಲಿಯ ಜನರು ಚಿಂತಾದಾಯಕ ಸ್ಥಿತಿಯಲ್ಲಿರುವರು. ದೇವರ ಇಚ್ಛೆ ಏನಿರುವದೋ ತಿಳಿಯದು!

'ರೇಲ್ವೆ ಗಾಯಿಡು' ಇಂಗ್ರೇಜಿಯಲ್ಲಿದ್ದ ಮೂಲಕ ಪ್ರವಾಸಿಕರಿಗೆ ರೇಲ್ವೆಯ ನಿಯಮಗಳು ತಿಳಿಯದೆ ಬಹಳ ತೊಂದರೆಯಾಗುತ್ತಿತ್ತು. ಆದರೆ ಅದು ಈಗ ರೇಲ್ವೆ ಮಂಡಳದವರ ವತಿಯಿಂದ ಹೊರಟ ರೇಲ್ವೆ ಪ್ರವಾಸಿಕರ "ಮಿತ್ರ" ಎಂಬ ಪುಸ್ತಕದಿಂದ ದೂರಾಗಿದೆಯಷ್ಟೇ? ಇದರಂತೆಯೇ "ಗುತ್ತಿಗೆ" ನೇಮಗಳು ಇಂಗ್ರೇಜಿಯಲ್ಲಿದ್ದ ಮೂಲಕ ವ್ಯಾಪಾರಸ್ಥರಿಗೆ ಬಹಳ ತೊಂದರೆಯಾಗುತ್ತಿತ್ತು. ಆದಪ್ರಯುಕ್ತ ಆ ನೇಮಗಳನ್ನು ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ಮುದ್ರಿಸಿ, ಅವಷ್ಟು ಅಲ್ಪ ಕಿಮ್ಮತ್ತಿಗೆ ಮಾರುವದು ಗೊತ್ತಾಗಿದೆ. ಈ ಕೆಲಸವು ಧುಳೆಯ ಪ್ರಸಿದ್ಧ ವಕೀಲರಾದ ಜಾವಡೇಕರರವರ ಸಹಾಯದಿಂದ ನಡೆದಿದೆ.



ಕಿರ್ಲೋಸ್ಕರ

ಸೇಂಗಾ ಒಡೆಯುವ ಯಂತ್ರ.

ನಮ್ಮ ಕಾರ್ಖಾನೆಯಲ್ಲಿ ಎರಡು ಮಾದರಿಯ ಯಂತ್ರಗಳು ತಯಾರಾಗುತ್ತವೆ. ಒಂದು ಇಂಜಿನ ಶಕ್ತಿಯಿಂದಲೂ, ಇನ್ನೊಂದು ಕೈಯಿಂದಲೂ ನಡೆಯುತ್ತವೆ. ಇವುಗಳ ಯಾವತ್ತೂ ಭಾಗಗಳು ಕಬ್ಬಿಣದವು. ಜಾಣಿಕೆಯಿರುವದರಿಂದ ಕಾಳುಗಳು ಹಸನಾಗಿ ಬೀಳುವವು. ನುಚ್ಚಾಗುವದಿಲ್ಲ.

ಸೇಂಗಾದ ಬೆಳೆಯನ್ನು ತೆಗೆಯುವವರೂ ಸೇಂಗಾ ಬಿತ್ತುವವರೂ ಕೂಲಿಗಳನ್ನು ನಡಿಸದೆ ಈ ನಮ್ಮ ಯಂತ್ರಗಳನ್ನೇ ಉಪಯೋಗಿಸಬೇಕು. ಕಳೆದ ವರ್ಷಕ್ಕಿಂತಲೂ ಈ ವರ್ಷ ಇವುಗಳ ಬೆಲೆಯನ್ನು ಕಡಿಮೆ ಮಾಡಿರುತ್ತೇವೆ. ಬಿಡಿ ಭಾಗಗಳು ನಮ್ಮಲ್ಲಿ ದೊರೆಯುತ್ತವೆ. ಸವಿಸ್ತರ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ವಾಡಿ,

ಜಿ. ಸಾತಾರಾ.

ಕಿರ್ಲೋಸ್ಕರ ಬಂಧು. ಲಿಮಿಟೆಡ್

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೭೭೭ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರೆಂಟೆಂಡಂಟ್ ಸೆಕ್ರೆಟರಿಏಟ್ ಹೈದರಾಬಾದ ದಕ್ಷಿಣ ರೂ.೧೦೦೦

(೨) ಎಲ್. ಬಿ. ಸಿ. ನಂ. ೧೯೬೩ ನಾರಾಯಣ ವಿಠ್ಠಲ ಶೋಣಕರ. ಕೇರ್ ಆಫ್ ಡಿ ಈ ಪುರಾಣಿಕ ೧೧೭ ನಿಪಾಲಪುರ ಇಂದೂರ ೧೦೦೦

(೩) ಎಲ್ ಬಿ. ಸಿ. ನಂ. ೩೪೧ ರಾಮಚಂದ್ರ ಅನಂತ ಶಿರೋಳೆ. ಡಿವಿಜನಲ್ ಫಾರೆಸ್ಟ ಆಫೀಸರ ಧಮ್ತರಿ. ಮಧ್ಯಪ್ರದೇಶ ರೂ ೮೦೦

(೪) ಬಾಂಡ ನಂಬರು ೭೫೧೭ ಕೇ. ಜಿ. ಫನಾ೯ಂಡೀಸ ಮ್ಯಾನೇಜರ ಬ್ರಿಸ್ ಸಾಯಿಬ ಸಿಲೋನ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೯೬೩೪ ಎಸ್. ಜಿ. ಚವರೆ. ಆಸಿಸ್ಟಂಟ ಸ್ಟೇಶನ ಮಾಸ್ತರ ತೆಲಗಿ. ಜಿಲ್ಲಾ ವಿಜಾಪುರ.

ಸ್ಥಳ ೧೦೦೦ ಟಿ. ಸ್. ಆರಾಧ್ಯ

ಬ್ರಾಂಚ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ)

ಜೀವ ವಿಮೆಯ ಕಾರ್ಯದಲ್ಲಿ

ಅದ್ಭುತವಾದ ಜಯವು!

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ರೂಪಾಯಿ ಲಾಭ ಹಂಚಿದೆ.

ದಿ ಜನರಲ್ ಅಶ್ಯೂರನ್ಸ

ಸೋಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲ ಎಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ಸಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉತ್ಪನ್ನವಾದದ್ದು ರೂ. ೧,೭೯,೦೦೦

ಏಜಂಟರು ಬೇಕು! ಧಾರಾಳವಾದ ಕಮೀಶನ್!

ಎಸ್. ಕಬ್ರಾರ ಪಿ. ಎ. ಎಫ್. ಎಸ್. ಅಜಮೀರ.

Apply to:- A. Ramachandra Rao
Branch Secretary, opposit Minto Hospital,
Bangalore City.
or
I. V Ramdurg. Chief Agent
Near Vitoba Temple Hubli

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ ೧೯೪೭

ವಾ. ಚಂದಾ ೧—೧೪—೦ ಮಾತ್ರ

(ಅವ್ವ ಕನ್ನಡ ನವಜೀವನವು ಸಂಜಾವಿಷ್ಟವಾಗಿದೆ)

ಶಬ್ದಾ ಧಾರಣಾ ಕ್ಷಮಾ । ಶಬ್ದಾತ್ಮಧರ್ಮ ಸ್ತುತಾ ॥ — ಮನು

ಸಂಪಾದಕರು— ಮಂಗಳವೇಢೆ ರಾಜೆ: ರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮತಿ ಅಶ್ವೀನ ಶುದ್ಧ ೭ ಶಕೆ ೧೮೪೯ ತಾ॥ ೨-೧೦-೧೯೨೭. Date 2-10 1927. | ಸಂಚಿಕೆ ೨೬

ಭೂಮಂಡಲದ ತಿಲಕರೂ, ೩೩ ಕೋಟಿ ಭಾರತೀಯರಿಗೆಲ್ಲ ಪ್ರಿಯರೂ, ಹಿಂದೀ ರಾಷ್ಟ್ರದಲ್ಲಿ ನವಚೈತನ್ಯವನ್ನು ಹುಟ್ಟಿಸಿದವರೂ ಆದ

ಮಹಾತ್ಮಾ ಗಾಂಧಿಯವರ

೫೯ನೇ ಹುಟ್ಟಿದ ಹಬ್ಬವು ಈ ದಿನವೇಯಿದೆ!

ಅಮೃತ-ವಚನ

ಪ್ರಾರ್ಥನೆ.

ಸಾರ್ವಜನಿಕ ಕೆಲಸದಲ್ಲಿ ತೊಡಗುವರು ಕಂಡದ್ದನ್ನೆಲ್ಲ ಕೂಡಲೇ ನಂಬಕೂಡದು; ಮತ್ತೂ ಒಳಗೆ ಹುಟ್ಟಿದೆಯೆನ್ನುವ ಸಂಗತಿಗಳನ್ನು ಪ್ರಕಟಿಸಕೂಡದು. ‡ ‡ ‡

"ಅಗ್ನಿದೇವರು ಎಲ್ಲ ವಸ್ತುಗಳನ್ನು ಪರಿಶುದ್ಧವಾಗಿ ಮಾಡುವಂತೆ" ಸತ್ಯಾಗ್ರಹವು ಎಲ್ಲ ಕೊಂದರೆ-ತೊಡಕು; ಕಷ್ಟ-ಸಂಕಷ್ಟಗಳಲ್ಲಿರುವ ಮನುಷ್ಯನನ್ನು ಶುದ್ಧ ಮಾಡುವದು...... ಎಲ್ಲ ಅರಿಷ್ಟಗಳಿಗೂ ಅದು ರಾಮಬಾಣವಾಗಿದೆ

‡ ‡ ‡

ಭಾರತೀಯರ ಧರ್ಮವೃತ್ತಿಯದೇ ಉಳಿಯಬೇಕಾದ್ದರೆ, ಸ್ವದೇಶೀವ್ರತದ ಅರ್ಥವನ್ನೆಲ್ಲರೂ ತಿಳಿದುಕೊಂಡು, ಕೂಡಲೇ ಅದನ್ನು ಕೃತಿಯಲ್ಲಿ ತರಬೇಕು

‡ ‡ ‡

"ಅಸ್ಪೃಶ್ಯ ಗವನಿಕ್ಕಿಂತ ಅತ್ಯಸ್ಪೃಶ್ಯ ಕಳಕ್ಕ ಪಟ್ಟಿ ಮೇಲಾದದ್ದಾಗಿದೆ."

‡ ‡ ‡

ಬಾಲ್ಯವಿವಾಹದಿಂದ ಟಿಕ್ಕೊಂದನಲ್ಲಿಯೇ ಪೀಯೂಷಾಶವಾಗಲಾರಂಭವಾಗುತ್ತವೆ.

‡ ‡ ‡

"ಹನ್ನೆರಡು ವರ್ಷಗಳ ಬಾಲಕಿಗೆ ಮಕ್ಕಳಾದರೆ ನಾವೇಕೆ ಸಂತೋಷಪಡಬೇಕು? ಅದು ದೇವರ ಮಹಾ ಕೋಪವೆಂದೇಕೆ ತಿಳಿಯಬಾರದು? ಬಾಲಸ್ತ್ರೀಯರಿಗೆ ಬಾಲ ಪತಿಯಿಂದಾಗುವ ಬಲಹೀನ ಸಂತತಿಯು ಇರುವೆಗಳಂತೆ ಹಿಂದುಸ್ಥಾನದಲ್ಲಿ ಎಷ್ಟು ಹೆಚ್ಚಿದರೇನು ಫಲ? ಅದರಿಂದ ಹಿಂದುಸ್ಥಾನಕ್ಕಾಗಲಿ, ಅಥವಾ ಜಗತ್ತಿಗಾಗಲಿ, ಯಾವ ಪ್ರಯೋಜನವುಂಟು?"

— ಮಹಾತ್ಮಾ ಗಾಂಧಿ

ಮನುಷ್ಯರು ಅಂದರೆ ... ಹೋಗಬೇಕೆನ್ನುವರೆ, ಮತ್ತೂ ಕಿಪ್ಪರ ರಾಮರಾಜ್ಯವು ನೆಲೆಗೊಳ್ಳಬೇಕಿದ್ದರೆ, ಭಾರತೀಯರೆಲ್ಲ ಸ್ವದೇಶೀವ್ರತವನ್ನು ಸ್ವೀಕರಿಸಬೇಕು.

—ಮಹಾತ್ಮಾ ಗಾಂಧಿ

ಚಹಾಪಾನದ ದುಷ್ಪರಿಣಾಮ.

ಚಹಾಪಾನವು ದಿನೇದಿನೇ ಬೆಳೆಯುತ್ತ ನಡೆದುದು ಮಾತ್ರವಲ್ಲ, ಅದು ಅನೇಕರಲ್ಲಿ ಶಿಷ್ಟಾಚಾರವಾಗಿ ಪರಿಣಮಿಸಹತ್ತಿದೆ. ಅಮೇರಿಕೆಯಲ್ಲಿ ಈ ಪಾನವು ವಿಶೇಷವಾಗಿ ಬೆಳೆಯಹತ್ತಿರುವದರಿಂದ ಚಹದ ಗುಣಾವಗುಣಗಳನ್ನು ಶೋಧಿಸಹತ್ತಿರುವರು. ಡಾಲ್ಟನ್ ಸ್ಮಿತ್ ನವರು ಚಹದ ಬಗ್ಗೆ ಅಭಿಪ್ರಾಯ ಕೊಡುವದೇನಂದರೆ—"ಚಹದಲ್ಲಿ ಆಹಾರದ ಅಂಶವು ಸ್ವಲ್ಪವೂ ಇಲ್ಲ; ಅದಕ್ಕೆ ಬದಲು ವಿಷದಂಥ ಪದಾರ್ಥವು ಬೆರೆತಿರುವದು. ಚಹದಲ್ಲಿ ಜ್ಞಾನತಂತುಗಳಲ್ಲಿ ವಿಕಾರವನ್ನುಂಟು ಮಾಡುವ ಗುಣವಿದೆ. ಆದರಿಂದ ಚಹವು ಮನುಷ್ಯನ ಸುಧಾರಣೆಯ ಪರಮಾವಧಿಗೆ ಒಂದು ಶಾಪವು."

ಅದೇ ಡಾಕ್ಟರರು ಮತ್ತೂ ಅನ್ನುವದೇನಂದರೆ—"ಚಹವು ಪ್ರಕೃಷ್ಟ ವಿಷ. ಮನುಷ್ಯನ ಶರೀರಕ್ಕೆ ಬೇಕಾದ ೧೪ ದ್ರವ್ಯಗಳಲ್ಲಿ ಒಂದೂ ಚಹದಲ್ಲಿಲ್ಲದುದರಿಂದ ಅದು ನಿರುಪಯೋಗವಾದ ಚಹದಿಂದ ಪ್ರಕೃತಿಯೊಂದು ಇಂದ್ರಿಯ ಶಕ್ತಿಯು ಕ್ಷೀಣವಾಗುತ್ತದೆ. ಮೂತ್ರದ ಯಂತ್ರದ ಮೇಲೆ ದುಷ್ಪರಿಣಾಮವಾಗಿ ಅದರ ನೈಸರ್ಗಿಕ ಶಕ್ತಿಯು ನಷ್ಟವಾಗುತ್ತದೆ. ಚಹಾಪಾನದಿಂದ ಮಿದುಳಿನ ಶಕ್ತಿಯು ಕಡಿಮೆಯಾಗಿ ಸ್ಮರಣ ಶಕ್ತಿಯು ಕ್ಷೀಣವಾಗುತ್ತದೆ. ಮುಪ್ಪು ಬರುವದಕ್ಕಿಂತ ಮುಂಚೆಯೇ ಕರ್ಣೇಂದ್ರಿಯ ಜ್ಞಾನೇಂದ್ರಿಯಗಳು ಕೆಲಸ ಮಾಡದಂತಾಗುತ್ತವೆ."

ಹೀಗಿದ್ದರೂ ಚಹದ ಪ್ರಚಾರವು ಬೆಳೆವದೆಂತು?

ಹಿಂದುಸ್ಥಾನಕ್ಕೆ ಇಲ್ಲಿ ಹುಟ್ಟುವ ಚಹದಲ್ಲಿಯ ಆದಾಯದಿಂದ ೬೦ ಲಕ್ಷ ರೂಪಾಯಿಗಳ ಚಹವು ಬರುತ್ತಿದೆ. ಅದರ ಸಂಗಡ ೧೬ ಕೋಟಿ ರೂ.ಗಳ ಸಕ್ಕರೆಯು ಬರುತ್ತಿರುವದು. ಅದರೊಡನೆ ೨ ಕೋಟಿ ರೂಪಾಯಿಗಳ ತಂಬಾಕು ಬರುತ್ತಿದೆ. ಅದರ ಸಂಗಡ ವಿದೇಶೀ ಮದ್ಯ ಈ ಮದ್ಯದ ಬೆಲೆ ೨೩ ಕೋಟಿ ಇದೆ. ಅಂದರೆ ಚಹ, ಸಕ್ಕರೆ, ತಂಬಾಕು, ವಿದೇಶೀ ಮದ್ಯ ಇವು ಸೇರಿ ೪೧ ಕೋಟಿ ರೂಪಾಯಿ ಪರದೇಶಕ್ಕೆ ಹೋಗುತ್ತಿರುವದು. ಹಿಂದುಸ್ಥಾನದಂತಹ ಬಡದೇಶದಿಂದ ಇಷ್ಟು ದುಡ್ಡಿನ ಪ್ರವಾಹವು ಅದರ ಸಂಗಡ ದುರ್ವ್ಯಸನದ ವೃದ್ಧಿ ಇವು ಭಯಂಕರಗಳೇ ಸರಿ. —ಕಾನಡಾ ಧುರೀಣ

ಗದಗಿನ ಸ್ಥಳಪುರಾಣ.

ಲೇ:—ಎಸ್. ಎಸ್. ದಬಳ, ಗದಗ-ಬೆಟಗೇರಿ.

ತಾಲೂಕಿನ ಮುಖ್ಯಸ್ಥಳವೂ ಮುಂಬಯಿ ಇಲಾಖೆಯ ದೊಡ್ಡ ಪಟ್ಟಣವೆಂದು ಬಹು ಪ್ರಸಿದ್ಧಿಯನ್ನು ಪಡೆದದ್ದು ಆದ "ಗದಗ"ವೆಂಬ ಪಟ್ಟಣವು ಪ್ರಾಚೀನ ಕಾಲದಲ್ಲಿ "ಕೃತಪುರ"ವೆಂಬ ಅಭಿಧಾನದಿಂದ ತೇಜೋಮಯವಾಗಿ ಪ್ರಸಿದ್ಧಿ ಪಡೆದಿತ್ತು.

ಚತುರ್ಮುಖನ ಮಾನಸ ಪುತ್ರರು ತಪಶ್ಚರ್ಯೆಕ್ಕಾಗಿ ತಮತಮಗೆ ಇಷ್ಟವಾದ ಸ್ಥಳಕ್ಕೆ ಹೋಗಿ ತಮ್ಮ ತಮ್ಮ (ತಪ) ಕಾರ್ಯವನ್ನು ಸಾಗಿಸಿದ್ದರು. ಅವರಲ್ಲಿ ಹಿರಿಯನಾದ ಕೃತುವು ಶ್ರೋಣಪರ್ವತ ಅಥವಾ ಸಿದ್ಧಪರ್ವತಕ್ಕೆ ಬಂದಿದ್ದನು. ಅದೇ ಪರ್ವತಕ್ಕೆ ಕಪ್ಪತಗುಡ್ಡವೆಂಬ ಹೆಸರು. ಈ ಪರ್ವತದಲ್ಲಿ ಮಾಡಿದ ಸಮಸ್ತ ಕಾರ್ಯಗಳು ಸಿದ್ಧಿಯನ್ನು (ಫಲವನ್ನು) ಹೊಂದುತ್ತಿದ್ದದರಿಂದ ಈ ಪರ್ವತಕ್ಕೆ ಸಿದ್ಧೇಪರ್ವತವೆಂಬ ಹೆಸರು.

ಈ ಕೃತುಋಷಿಗೆ ಬೆಳಧಡಿ ಎಂಬಲ್ಲಿ ವೆಲ್ಲಧರನೆಂಬವನೂ, ಕಳಸಾಪುರದಲ್ಲಿ ಕಳಸಾಖ್ಯನೆಂಬವನೂ, ಲಕ್ಕುಂಡಿಯಲ್ಲಿ ಲೋಹಕಾಂತ ಎಂಬವನೂ ಹೀಗೆ ಮೂವರು ದೈತ್ಯರು, ಇವನ ತಪಶ್ಚರ್ಯೆಯನ್ನು ಭಂಗಮಾಡಬೇಕೆಂದು ಇವನಿಗೆ ಬಹಳ ತೊಂದರೆಯನ್ನು ಕೊಡಹತ್ತಲು ಆ ಋಷಿಯು ಅವನ್ನು ತಾಳಲಾರದೆ ಬದರಿಕಾಶ್ರಮದಲ್ಲಿರುವಂಥ ಯೋಗಿರೂಪಿಯಾದ ಶ್ರೀಮನ್ನಾರಾಯಣನನ್ನು ಧ್ಯಾನಮಾಡಲು ತನ್ನ ಭಕ್ತನನ್ನು ಕಾಪಾಡಬೇಕೆಂದು ಶ್ರೀ ಪರಮಾತ್ಮನು ಗರುಡಾರೂಢನಾಗಿ ದೈತ್ಯರ ಸಂಹಾರಾರ್ಥವಾಗಿ ಇತ್ತ ಕಡೆಗೆ ಸಾಗಿಬಂದನು. ಆಗ ತನ್ನ ಈ ಯೋಗರೂಪದಿಂದ ದೈತ್ಯರ ಸಂಹಾರವು ಯೋಗ್ಯವಲ್ಲೆಂದು ಆ ರೂಪವನ್ನು "ಅಡೋಬಲ"ವೆಂಬ ಪಟ್ಟಣದಲ್ಲಿ ಬಿಟ್ಟನು; ಆ ಪಟ್ಟಣಕ್ಕೆ ಈಗ "ಹೊಂಬಳ"ವೆಂಬ ಹೆಸರು. ಈ ಶ್ರೀಯೋಗಿ ನಾರಾಯಣನ ಮೂರ್ತಿಯು 'ಹೊಂಬಳ'ದಲ್ಲಿ ಈಗಲೂ ಇದ್ದು ದೇವಾಲಯವನ್ನು ಕಟ್ಟಿಸಿರುವರು. ಮತ್ತು ಪೂಜೆ, ನೈವೇದ್ಯಾದಿ ಸೇವೆಗಳು ನಡೆದಿರುವವು.

ಪರಮಾತ್ಮನು ತನ್ನ ಯೋಗರೂಪವನ್ನು ಬಿಟ್ಟು, ನಂತರ ವೀರರೂಪವನ್ನು ಧರಿಸಿ ಮಾಡಿ ಬಂದು, ಋಷಿಯು ಹೇಳಿಕೆಯ ಪ್ರಕಾರ ವೆಲ್ಲಧರ, ಕಳಸಾಖ್ಯ, ಲೋಹಕಾಂತ ಈ ಮೂವರು ದೈತ್ಯರನ್ನು ಪರಾಜಯಿಸಿ ನದಿಯ ಹತ್ತರ ಇರುವ ರಣಾಂಗಣದಲ್ಲಿ ಯುದ್ಧಮಾಡಿ ಸಂಹರಿಸಿದನು. ಈಗಲೂ ಆ ನಾಲಾದ ನದಿಗೆ "ಹರಿನದಿ" ಎಂದೂ ಕರೆಯುವರು. ಆ ಕಾಲದಲ್ಲಿರುವ ಹಳ್ಳಿಗೆ ಕದಾಂಪುರ (ಕದನಪುರ) ವೆಂತಲೂ ಅನ್ನುವರು.

ಈ ಪ್ರಕಾರವಾಗಿ ತನ್ನ ಭಕ್ತನಿಗೆ ತೊಂದರೆಕೊಟ್ಟ ದೈತ್ಯರನ್ನು ಸಂಹಾರ ಮಾಡಿ ಋಷಿಗೆ ಇಷ್ಟಾರ್ಥಸಿದ್ಧಿಯನ್ನು ಮಾಡಿ ಸಕಲ ಜನರಿಗೆ ಸಂತಸವನ್ನು ತೋರಿ, ಶ್ರೀಹರಿಯು ಬದರಿಕಾಶ್ರಮಕ್ಕೆ ಹೊರಡಲು ಸಿದ್ಧನಾಗಲು ಋಷಿಯು ಮಹೇಶ್ವರನ ನ್ನು ಬಂದೊಡನೆ, "ತಾವು ಬಂದು ದೈತ್ಯರ ಸಂಹಾರ ಮಾಡಿ ಭಕ್ತರುಗಳಾದ ನಮಗೆ ಅಭಯವಿತ್ತಿರಿ. ಮುಂದೆಯೂ ಸರ್ವಕಾಲದಲ್ಲಿ ಸರ್ವರಿಗೂ ಜ್ಞಾನಕ್ಕೆ ಬರುವಹಾಗೆ ತಮ್ಮ ಸನ್ನಿಧಾನವು ಇಲ್ಲಿಯೇ ನೆಲಸಬೇಕು" ಎಂದು ಬೇಡಿಕೊಳ್ಳಲು ಅದೇ ವೇಳೆಗೆ ಭಕ್ತಪರಾಧೀನನಾದ ಪರಮಾತ್ಮನು ಸಮ್ಮತಿಗೊಟ್ಟು ಹಾಗೇ ಆಗಲೆಂದು ವರವನ್ನಿತ್ತು ತತ್ಕ್ಷಣವೇ ಅಂತರ್ಧಾನನಾದನು. ಬಳಿಕ "ಕೃತು" ಋಷಿಯು ವಿಶ್ವಕರ್ಮನನ್ನು ಕರಿಸಿ ವೀರರೂಪಿಯಾದ ಶ್ರೀಮನ್ನಾರಾಯಣನ ಮೂರ್ತಿಯನ್ನು ಮಾಡಿಸಿ ಹೊಡದಲು ಶ್ರೀ ನಾರಸಿಂಹನು ಇದ್ದ ದೇವಾಲಯದ ಹತ್ತರವೇ ಬ್ರಹ್ಮದೇವರಿಂದ ಪ್ರತಿಷ್ಠೆ ಮಾಡಿಸಿದನು. —ಕರ್ನಾಟಕ ವೈಭವ.

ಸೋಜಿಗದಸುದ್ದಿಗಳು.

ಲಂಡನ್ನಿನ ಪ್ರಾಣಿಸಂಗ್ರಹಾಲಯದಲ್ಲಿ ಹಾವುಗಳ ಮನೆಯು ಸಿದ್ಧವಾಗಿದೆ, ಸುತ್ತಲೆಲ್ಲ ಮನೋಹರವಾದ ಕಾಜುಗಳಿವೆ. ಹೊಲಸಾದರೆ ಒಳಗಿನ ಭಾಗವನ್ನು ಹಾವುಗಳು ಅಲ್ಲಿರುವದರಿಂದ ಸ್ವಚ್ಛಮಾಡಲಿಕ್ಕೆ ಬರುವದಿಲ್ಲವಾದ್ದರಿಂದ ಹೊಲಸು ಕೂಡಲಿಕ್ಕೆ ಬಾರದಂತೆ ವಿದ್ಯುತ್ತಿನಿಂದ ಉಷ್ಣವಾದ ಕರೆಯ ಪ್ರಕಾರಗಳು, ಅಲ್ಲಿಡಲ್ಪಟ್ಟಿವೆ. ಹಾವುಗಳು ಕೂಡಲು, ಹೊದರು, ಬಂಡೆ ಕಲ್ಲುಗಳೂ ಒಳಗೆ ಇವೆ. ಅತಿ ಥಂಡಿಯಿಂದ ಸರ್ಪಗಳು ಸಾಯುವದರಿಂದ, ಅವು ಜೀವಿಸಲು ಬೇಕಾಗುವಷ್ಟು ಉಷ್ಣತೆಯು ವಿದ್ಯುತ್ತಿನಿಂದ ಯಾವಾಗಲೂ ಆ ಮನೆಯಲ್ಲಿ ಉತ್ಪನ್ನವಾಗುವ ವ್ಯವಸ್ಥೆಮಾಡಿದೆ. ರಾತ್ರಿ ಜನರು ನೋಡಲಿಕ್ಕೆ ಹೋಗುವದರಿಂದ ವಿದ್ಯುತ್ ಪ್ರಕಾಶವು ಮನೆಯ ಎಲ್ಲ ಭಾಗಗಳಲ್ಲಿಯೂ ಬೀಳುತ್ತಿರುವಂತೆ ಮಾಡಿದ್ದಾರೆ. ಹಾವುಗಳ ಸಂಗ್ರಹಾಲಯದ ಬಳಿ ಇದು ಬಗೆಬಗೆಯ ವಿದ್ಯುದ್ದೀಪಗಳ ಸಂಗ್ರಹಾಲಯವಾಗಿದೆಯೆಂದು ಜನರು ಹೇಳುತ್ತ, ತಮ್ಮ ತಮ್ಮ ಮನೆಗಳಿಗೆ ವಿದ್ಯುದ್ದೀಪಗಳನ್ನು ಹಚ್ಚಿಕೊಳ್ಳುವಾಗ್ಗೆ, ಹಾವುಗಳ ಮನೆಗೆ ಹೋಗಿ, ಅಲ್ಲಿ ನೋಡಿಕೊಂಡು, ಅದರ ಅನುಕರಣಮಾಡುತ್ತಿರುವರು!

ಸ್ವಲ್ಪೇ ವಿನೋದ.

"ನನ್ನ ಮಗನು ಬಿ. ಏ. ದಲ್ಲಿ ೧ ನೇ ನಂಬರು ಬಂದಿದ್ದಾನೆ. ಸರಕಾರೀ ವೇತನವೂ ದೊರೆತಿದೆ. ಆದುದರಿಂದ ಅವನನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿಲಾಯತಿಗೆ ಕಳಿಸಬೇಕಾಗಿದೆ. ಆದರೆ ಸಮುದ್ರಯಾನಕ್ಕೆ ಶ್ರೀಗಳವರ ಅಪ್ಪಣೆ ದೊರೆಯುವದು ಹೇಗೆ?"

"ಶ್ರೀಗಳನ್ನು ಕೇಳಬೇಡಿ! ಸಮುದ್ರಯಾನದ ವಿಚಾರವನ್ನು ಮಾಡಬೇಡಿ. ಆಕಾಶಯಾನದಿಂದೇ ನಿಮ್ಮ ಮಗನು ವಿಲಾಯತಿಗೆ ಹೋಗಲಿ!"

ಕನ್ನಡಿಗ.

ಬಾಗಲಕೋಟೆ:-ಕನ್ನಡಿಗ ಆಶ್ವೀನ ಶುದ್ಧ ೬ ಶಕೆ ೧೮೪೯

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು ।
ನಿನ್ನ ಬೆಸನವಮಾಡಿದಂಥ ಮುಕ್ಕಳ ದೊಮ್ಮ ।
ಚಿನ್ನದಾದರು ಚಿನ್ನ ಮೇಣಬತ್ತಿಯು ನೊಂದು ಚಿನ್ [illegible] ॥
ನನ್ನ ದೇಹವು ನಿನ್ನ ಮೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ಚಿಲ್ಲಿಸಲು ಸಿದ್ಧವಿದೆ ।
ನನ್ನಪ್ರಾಣವು ನಿನ್ನ ಗಂಧವನು ಕೀರಬಹ ಗಂಧ [illegible]
—ಅಂಬಿಕಾತನಯ ದತ್ತ

ಈ ದಿನ ಗಾಂಧಿಯವರು ಹುಟ್ಟಿದ ದಿವಸ. ಆತ್ಮೋನ್ನತಿಗಾಗಿ ತೊಳಲಾಡುತ್ತಿರುವ ಈ ಭೂಮಂಡಲದೊಳಗಿನ ಸಕಲ ಸಾತ್ವಿಕ ಜೀವಿಗಳೆಲ್ಲರೂ ಈ ಪುಣ್ಯಾತ್ಮನ ಚರಿತ್ರೆಯ ಮನನದಿಂದ, ಪರೀಕ್ಷಾತ್ಮಕ ಪತ್ರಿಪುಗಳನ್ನು ಜಯಿಸುವ ಈ ನರವೀರನ ಬಗೆಯನ್ನು ನೆನೆದು, ತಾವೂ ಧೈರ್ಯಗೊಂಡು, ದ್ವೀಪಾಂತರದಲ್ಲಿರುವವರು ಸಹ ಇವನ ಧನ್ಯವಾದವನ್ನೂ ಮಾಡುವರೆಂಬದರಲ್ಲಿ ಸಂದೇಹವಿಲ್ಲ. 'ಕಿಂತ್ರೂ ತ್ರೈಲೋಕಶಿಖಾಮಣಿನಾಂ ಮನೋವಿಶುದ್ಧ್ಯೈ ಚರಿತ್ರಾನುವಾದಃ' ಎಂಬಂತೆ ಇಂಥ ಸಾಧು ಪುರುಷರ ಉದಾತ್ತ ಚರಿತ್ರೆಯ ಶ್ರವಣದಿಂದ ಮನಸ್ಸು ಪರಿಶುದ್ಧವಾಗುವದೆಂಬ ಮಾತು ಸುಳ್ಳಲ್ಲ. ಮಹಾತ್ಮಾ ಗಾಂಧಿಯವರಂತೂ ತಮ್ಮ ಆತ್ಮ ಚರಿತ್ರೆಯನ್ನು ಪ್ರಕಟಿಸಲಾರಂಭಿಸಿರುವದರಿಂದ ಇವರ ಉನ್ನತಿಯ ಗುಟ್ಟನ್ನು ಸಕಲರೂ ಅರಿತುಕೊಳ್ಳುವಂತಿದೆ. ಈ ಪದವಿಗೆ ಹೋಗಬೇಕಾದರೆ ಅವರು ಎಷ್ಟು ಜಿಗುಟುತನದಿಂದ ಹೋರಾಡಿರುವರೆಂಬದು ಒಡೆದು ಕಾಣಿಸುತ್ತಿದೆ. ಮಾನವ ಜನ್ಮಕ್ಕೆ ಸಾಮಾನ್ಯವಾಗಿರುವ ಮದಮತ್ಸರಕ್ರೋಧ ಮೊದಲಾದ ಅರಿಷಡ್ವರ್ಗಗಳು ಇವರನ್ನೂ ಹೆಜ್ಜೆಜ್ಜೆಗೆ ಅಡ್ಡಗಟ್ಟುತ್ತ ಬಂದಿರುವದನ್ನು ಅವರೇ ಬಿಚ್ಚಿ ಹೇಳುತ್ತಿರುವರು. ಇದರಿಂದ ಸಾಮಾನ್ಯ [illegible] ಮಾರ್ಗವನ್ನು ಕೈಕೊಳ್ಳಲು ಉತ್ತೇಜನಗೊಳ್ಳುವಂತಿದೆ. ವಿವಿಧ ಮನೋವಿಕಾರಗಳನ್ನು ಜಯಿಸಲಿಕ್ಕೆ ಇವರಿಗೆ ಸಹ ಬಹಳ ಕಾಲಾವಧಿಯೂ ಹತ್ತಿರುವದು; ಇವರಾದರೂ ಹುಟ್ಟಿದಾಗಿನಿಂದಲೇ ಮಹಾತ್ಮರಾಗಿರಲಿಲ್ಲ. ಎಲ್ಲರಂತೆ ಈ ಮಹಾತ್ಮರನ್ನೂ ದಂಭ ಲೋಭ ಮೊದಲಾದವುಗಳು ಆವರಿಸಿಕೊಂಡೆ ಇದ್ದವು. ಇವರ ಮನಸ್ಸಾದರೂ ಸ್ವಭಾವಸಿದ್ಧವಾದ ಚಾಂಚಲ್ಯದಿಂದ ನಾಟಕ ಕವಗೆ ಒಳಗಾಗುತ್ತಿತ್ತು. ಅಂದ ಮೇಲೆ ನಾವೂ ಯತ್ನ ಮಾಡಿ ನೋಡಿದರೆ ಇಂದಲ್ಲ ನಾಳೆ ಕೆಲವು ಸತ್ವ ಪ್ರಧಾನ ಜೀವಿಗಳಾದರೂ ಸಿದ್ಧಿ ಹೊಂದುವದರಲ್ಲಿ ಸಂದೇಹವಿಲ್ಲ. ಗಾಂಧಿಯವರು ಅಸಾಧಾರಣವಾದ ತಮ್ಮ ನಿಗ್ರಹ ಶಕ್ತಿಯಿಂದ ಮನಸ್ಸನ್ನು ಸ್ವಾಧೀನಪಡಿಸಿಕೊಂಡು ಸರ್ವರಿಗೂ ಸಾಮಾನ್ಯವಾಗಿರುವ ರಜಸಗುಣಗಳನ್ನು ಒಂದೊಂದಾಗಿ ಜಯಿಸಿ ಈಗ ದೇವಾಂಶಸಂಭವರೆಂಬ ಖ್ಯಾತಿಯಿಂದ ಮೆರೆಯುತ್ತಿರುವರು. ಇವರು ಏರಿದ ಶಿಖರವು ಅತೀವ ಉನ್ನತವಾಗಿದ್ದರೂ, ತಮ್ಮ ಆತ್ಮಚರಿತ್ರೆಯ ಕಥನದಿಂದ ತಾವು ಏರಿದ ನಿಚ್ಚಣಿಕೆಯ ಮೆಟ್ಟಿಲುಗಳೆಲ್ಲ ಆಕಾಂಕ್ಷಿಗಳಿಗೆ ಸ್ಪಷ್ಟವಾಗಿ ಕಾಣುವಂತೆ ಮಾಡಿರುವರೆಂದೆನ್ನಬೇಕು. ಈ ಹೊತ್ತಿಗೂ ಆರ್ಯರ ಕೀರ್ತಿಯನ್ನು ಬೆಳಗಿಸುತ್ತಿರುವ ಪ್ರಲ್ಹಾದ, ಧ್ರುವ, ಹರಿಶ್ಚಂದ್ರ ಮೊದಲಾದ ಸತ್ಯಸಂಧರ ಮಾಲಿಕೆಯಲ್ಲಿ ಗಾಂಧಿಯವರು ಸೇರತಕ್ಕವರೇ. ಈ ಭಾರತವರ್ಷದ ತಾತ್ಕಾಲಿಕ ಸಾಂಪತ್ತಿಕ ಲಾಭಗಳಿಗೆ ಹೋರಾಡುವ ಮಹಾತ್ಮರುಗಳಲ್ಲಿ ಇವರನ್ನು ಸೇರಿಸಿ ಇವರ ದೋಷ ಎಣಿಸುತ್ತ ಕೂಡ್ರುವದು ಮೂರ್ಖತನವೇ ಸರಿ. ಉನ್ನತವಾದ ದೀಪಸ್ತಂಭದ ಮೇಲಿಂದ ಬಹಳ ಕಾಂತಿಯಿಂದ ಮಿನುಗುತ್ತಿರುವ ದೀಪದ ಪ್ರಕಾಶವು ಆ ಸ್ತಂಭದ ಬುಡದಲ್ಲಿರುವ ತಾವರೆಗಿಡದ ಮನೆ ಕೆಲಸಗಳಿಗೆ ಯದ್ಯಪಿ, ಉಪಯೋಗವಾಗದಿದ್ದರೂ ಅದೇ ಆ ಪ್ರಕಾಶವು ಗಂಡಾಂತರಕ್ಕೆ ಈಡಾಗಿ ಸಾಗರದ ಬಹುದೂರದಲ್ಲಿರುವ ಹಡಗುಗಳನ್ನು ತನ್ನ ದಿವ್ಯ ಪ್ರಕಾಶದಿಂದ ಎಚ್ಚರಗೊಳಿಸಿ ಸಂರಕ್ಷಿಸುತ್ತಿರುವಂತೆ, ಇಂಥ ಮನೋನ್ನತಿಯನ್ನು ಹೊಂದಿದ ಮಹಾ ಪುರುಷರ ಆಚರಣೆಯೂ ಅವರ ಉಪದೇಶವೂ, ಯುಗಾಂತರದಲ್ಲಿ ಜನಿಸಿ, ಬರುವವರಾದ ಜನರಿಗೂ, ಮಾರ್ಗದರ್ಶಕವಾಗುವದಲ್ಲದೆ, ಆರ್ಯಾವರ್ತದ ಉದಾತ್ತ ಸಂಸ್ಕೃತಿಯ ಕೀರ್ತಿಯನ್ನು ಅಜರಾಮರ ಮಾಡಿ ಉಳಿದ ರಾಷ್ಟ್ರಗಳು ಹಿಂದುಸ್ಥಾನದ ನೈತಿಕ ಉನ್ನತಿಗೆ ತಲೆಬಾಗಿ ನಮಿಸಲಿಕ್ಕೆ ಹಚ್ಚುವವು.



ನೇಕಾರರು ಹೊಟ್ಟೆಗೆ ಬರೆಹಾಕಿಕೊಳ್ಳುವ ಪ್ರಸಂಗವು ಬಂದಿದೆಂದು ಅಲ್ಲಲ್ಲಿ ಕೇಳಬರುತ್ತಲಿದೆ. ಯಾಕಂದರೆ ಹಿಂದುಸ್ಥಾನ ಸರಕಾರದವರು ಪರದೇಶದಿಂದ ಬರುವ ನೂಲಿನ ಮೇಲೆ ೧ ಪೌಂಡಿಗೆ ೧॥ ಆಣೆಯಂತೆ ಹೊಸದಾಗಿ ತೆರಿಗೆಯನ್ನು ಹೇರಿದ್ದಾರೆ. ಇದರಿಂದ ನೂಲು ಪುಟ್ಟಿಯಾಗಿ ಹಿಂದಿನ ಗಿರಣಿಗಳ ಸಂಗಡ ಭಯಂಕರವಾಗಿ ಹೋರಾಡುವ ಪ್ರಸಂಗವು ಬರುವದು. ಅದರ ಒಡನೆ ನೇಕಾರರು ಬಲಾಢ್ಯ ಧಂಡವಲುಗಾರರ ಸಂಗಡ ಕುಸ್ತಿ ಹಿಡಿಯುವದು ಅಶಕ್ಯ ಕೋಟಿಯು ಮಾತಾಗಿದ್ದರಿಂದ ಅವರ ವ್ಯವಸಾಯಕ್ಕೆ ಇದರಿಂದ ಸಿಡ್ಲು ಬಡಿದಂತಾಗಿದೆ; ಇನ್ನು ಅವರು ಮೇಲಕ್ಕೇಳುವದೇ ಶಕ್ಯವಿಲ್ಲೆಂಬ ವಿಧಾನಗಳೂ ಮುಂದೆ ಬಂದಿವೆ. ಈ ವಿಧಾನಗಳಲ್ಲಿ ತಥ್ಯಾಂಶವು ಹೆಚ್ಚಿದೆಂಬದರಲ್ಲಿ ಸಂದೇಹವಿಲ್ಲ. ಆದರೆ ಭಾರತೀಯ ಮುಂದಾಳುಗಳು ವಿಶೇಷ ಪರಿಶ್ರಮಬಟ್ಟರೆ ಈ ತೆರಿಗೆಯು "ಪ್ರಚ್ಛನ್ನಗುಪ್ತಂ ಧನಂ" ಎಂದಾಗಿ ಪರಿಣಮಿಸಬಹುದು.

ಬ್ರಿಟಿಶ್ ಸರಕಾರವು ಏನು ಮಾಡಿದರೂ ಕೇವಲ ಭಾರತೀಯರ ಕಲ್ಯಾಣಕ್ಕಾಗಿ, ಅದು ಇರುವದಿಲ್ಲವೆಂಬದು ಅನುಭವಸಿದ್ಧವಾದ ಮಾತಾಗಿದೆ. ಯಂತ್ರಗಳ ಮೇಲಿನ ಕರದಿಂದ ಹಿಂದುಸ್ಥಾನ ಸರಕಾರಕ್ಕೆ ೮೦ ಲಕ್ಷ ರೂಪಾಯಿಗಳ ಉತ್ಪನ್ನವಿದ್ದರೂ, ವಿಲಾಯತಿಯಲ್ಲಿ ಮಾರಾಟವಾಗದೇ ಇದ್ದ ಯಂತ್ರಗಳಿಗೆ ಹಿಂದುಸ್ಥಾನದ ಪೇಟೆಯಲ್ಲಿ ಸ್ಥಳ ದೊರೆಯಬೇಕಾಗಿಯೆಂದು ಕಂಡುಬಂದಕೂಡಲೇ, ಹಿಂದುಸ್ಥಾನ ಸರಕಾರದವರು ತಮಗಾಗುವ ೮೦ ಲಕ್ಷ ರೂ. ಹಾನಿಯನ್ನು ಲೆಕ್ಕಿಸದೇ, ಪರದೇಶದಿಂದ ಬರುವ ಯಂತ್ರಗಳ ಮೇಲಿನ ಕರವನ್ನು ತೆಗೆದುಹಾಕಿದರು! ಅದರಂತೆ ಪರದೇಶದಿಂದ ನೂಲು ಹೆಚ್ಚಾಗಿ ಬರುವದರಿಂದ ಪರದೇಶದ ಬಟ್ಟೆಗಳು ಹೇರಳವಾಗಿ ಹಿಂದುಸ್ಥಾನದಲ್ಲಿ ಮಾರಾಟವಾಗುವದಿಲ್ಲ. ನೂಲು ಹಾಗೂ ಬಟ್ಟೆಗಳ ಮೇಲಿನ ಎರಡೂ ಲಾಭವು ವಿಲಾಯತಿಯ ವ್ಯಾಪಾರಸ್ಥರಿಗೆ ಬೇಕಾಗಿದೆ. ಪರದೇಶದಿಂದ ನೂಲು ತಂದು ಹಿಂದುಸ್ಥಾನದಲ್ಲಿ ಬಟ್ಟೆಯನ್ನು ಸಿದ್ಧಪಡಿಸಿ ಈಗ ಮಾರುತ್ತಿರುವದರಿಂದ, ಇಲ್ಲಿಯ ನೇಕಾರರಿಗೆ ಬಟ್ಟೆ ನೇಯುವದಕ್ಕಾಗಿ ಸ್ವಲ್ಪ ಕೂಲಿ ದೊರೆತು, ಹೊಟ್ಟೆ ಹೊರೆಕೊಳ್ಳಲು ಅನುಕೂಲವಾಗುವದು; ಅರ್ಥಾತ್ ವಿಲಾಯತಿಯ ನೇಕಾರರಿಗೆ ದೊರೆಯುವ ಕೂಲಿಯು ಹಿಂದೀ ನೇಕಾರರಿಗೆ ದೊರೆ

"ಕನ್ನಡಿಗ"ನಿಗೆ ರಜೆ.

ವಾಡಿಕೆಯಂತೆ, ದಸರೆಯ ಹಬ್ಬದ ರಜೆಯನ್ನು 'ಕನ್ನಡಿಗ'ನು ತೆಗೆದುಕೊಳ್ಳುವವರಿಂದ, ಮುಂದಿನ ವಾರದಲ್ಲಿ ಸಂಚಿಕೆಯು ಹೊರಡುವದಿಲ್ಲ. ೩ನೇ ಸಂಚಿಕೆಯು ಗುರುವಾರ ದಿನ ಪ್ರಕಟವಾಗುವದು.

—ವ್ಯವಸ್ಥಾಪಕ.

ಯುವದು. ಹಿಂದೀ ನೇಕಾರರಿಗಿಂತ ವಿಲಾಯತಿಯ ನೇಕಾರರ ಯೋಗಕ್ಷೇಮದ ಭಾರವು ಭಾರತೀಯ ಸರಕಾರದ ತಲೆಯ ಮೇಲೆ ಹೆಚ್ಚಾಗಿದ್ದದರಿಂದ, ಅವರು ಹೀಗೆ ನೂಲಿನ ಮೇಲಿನ ಕರವನ್ನು ವಿಧಿಸಿದ್ದು ಸ್ವಾಭಾವಿಕವೇ. ಹಿಂದೀ ಗಿರಣಿಗಳಿಗೂ ಇದರಿಂದ ಹೆಚ್ಚು ಲಾಭವೆಂಬದೂ ಸರಿಯಾಗಿದೆ. ಇದಕ್ಕಾಗಿಯೇ ತಾವು ಯಂತ್ರಗಳ ಮೇಲಿನ ಕರವನ್ನು ರದ್ದುಪಡಿಸಿರುವೆವೆಂದೂ, ನೂಲಿನ ಕರವನ್ನು ಹೆಚ್ಚಿಸಿದೆವೆಂದೂ ಹಿಂದುಸ್ಥಾನ ಸರಕಾರವು ಸಾರಿ ಹೇಳಿದ್ದರೂ, ಅದರಲ್ಲಿ ಎಷ್ಟರ ಮಟ್ಟಿಗೆ ವಿಶ್ವಾಸವನ್ನಿಡಬೇಕೋ ತಿಳಿಯದು. ಹಿಂದುಸ್ಥಾನದಲ್ಲಿ ೬೦ ಲಕ್ಷ ನೇಕಾರರಿದ್ದಾರೆ. ಇವರು ಪರದೇಶದಿಂದ ನೂಲನ್ನು ತರಿಸಿ, ಕೋಯಿಮತ್ತೂರದ ಜೇನಗು ರುಮಾಲು-ವಸ್ತ್ರಗಳ, ಇಲಕಲ್ಲದ ತಿಳುವಾದ ಸೀರೆಗಳ, ಗುಳೇದಗುಡ್ಡದ ಅಂದವಾದ ಖಣಗಳ ಸವಿಯನ್ನು ನಮಗೆ ಹಚ್ಚಿ, ಅಸಂಖ್ಯವಾದ ಹಣವನ್ನು ಪರದೇಶಕ್ಕೆ ಕಳುಹಿಸಿ, ಅದರ ಅಲ್ಪಾಂಶವನ್ನು ಮಾತ್ರ ತಾವು ಪಡೆಯುತ್ತಿದ್ದಾರೆ; ಆದರೆ ಈಗ್ಗೆ ನೂಲಿನ ಕರವು ಹೆಚ್ಚಾಗಿದ್ದರಿಂದ, ಇವರ ಈ ಪರದೇಶದ ನೂಲಿನ ಮೋಹವು ನಿಜವಾಗಿಯೂ ಕಡಿಮೆಯಾದರೆ ಅದೊಂದು ಲಾಭವೇ. ೬೦ ಲಕ್ಷ ಜನರ ವ್ಯವಸಾಯವಂತೂ ಸಾಗಬೇಕು. ಇವರಿಗೆ ಪರದೇಶದ ನೂಲಿನ ಬೆಲೆಯು ಇನ್ನು ಮೇಲೆ ಪೂರೈಸುವದಿಲ್ಲ. ಹಾಗಾದರೆ ಇವರು ಮಾಡತಕ್ಕದ್ದೇನು? ಈಗ್ಗೆ ೭ ವರ್ಷಗಳಿಂದ ದಿನೇ ದಿನೇ ವೃದ್ಧಿ ಹೊಂದುತ್ತ ಬಂದಿರುವ ಕೈ ನೂಲಿನ ವ್ಯವಸಾಯದ ಕಡೆಗೆ ಈ ೬೦ ಲಕ್ಷ ನೇಕಾರರು ಹೊರಳಿ ತಿರುವಿ, ಕೈನೂಲನ್ನೇ ಕೊಂಡು ಬಟ್ಟೆಗಳನ್ನು ಸಿದ್ಧಪಡಿಸುತ್ತ ಹೋಗಬೇಕು. ಈ ವಿಚಾರವೇನೋ ತಾತ್ವಿಕ ದೃಷ್ಟಿಯಿಂದಲೂ, ವಿಚಿಯ ಬಳವಳ ದೃಷ್ಟಿಯಿಂದಲೂ ಸರಿಯಾಗಿರಬಹುದು. ಆದರೆ ಪ್ರತ್ಯಕ್ಷವಾಗಿ ಪರದೇಶದ ಹಾಗೂ ಹಿಂದುಸ್ಥಾನದ ಧಂಡವಲುಗಾರರಾದ ಗಿರಣಿಗಳ ಒಡೆಯರ ಸಂಗಡ ಸಂಗ್ರಾಮದಲ್ಲಿ ಸಡ್ಡು ಹೊಡೆದು ನಿಲ್ಲುವಷ್ಟು ಶಕ್ತಿಯು ಈಗ್ಗೆ ನಮ್ಮ ನೇಕಾರರಲ್ಲುಂಟೇ?" ಎಂಬವಾಗಿ ಆಕ್ಷೇಪ ತೋರಬಹುದು. ಕೈನೂಲಿನಿಂದಲೂ, ಕೈಮಗ್ಗದಿಂದಲೂ ಬಟ್ಟೆಯು ವಿಪುಲವಾಗಿ ಸಿದ್ಧವಾಗುತ್ತ ಹೋದರೆ, ಹಿಂದುಸ್ಥಾನದಿಂದ ಪರದೇಶಕ್ಕೆ ಸೋರಿ ಹೋಗುತ್ತಿರುವ ೬೦ ಕೋಟಿ ರೂಪಾಯಿಗಳ ಉಳಿತಾಯವು ನಮಗೆ ಆಗಿ, ಅರೆಹೊಟ್ಟೆಯಿಂದ ಕಾಲಕಳೆಯುತ್ತಿರುವ ಬಡವರಿಗೆ ಹಿಡಿ ಹಿಟ್ಟು ದೊರೆಯುವದೆಂಬದನ್ನು ಯಾರೂ ಮರೆಯಕೂಡದು. ಹಿಂದೀ ಗಿರಣಿಗಳಲ್ಲಿ ಹುಟ್ಟುವ ಬಟ್ಟೆಯು ಸಂಪೂರ್ಣವಾಗಿ ಇಲ್ಲಿಯ ಜನರಿಂದ ಕೊಳ್ಳಲ್ಪಡುತ್ತಿದ್ದರೂ, ೬೦ ಕೋಟಿ ರೂಪಾಯಿಗಳ ಬಟ್ಟೆಯು ಪರದೇಶದಿಂದ ಬರುತ್ತದೆ. ಆದುದರಿಂದ ಖಾದೀ ಪ್ರಸಾರದಲ್ಲಿ ತೊಡಗಿದವರು ಈ ೬೦ ಲಕ್ಷ ನೇಕಾರರಲ್ಲಿ ನಿಜವಾದ ಜ್ಞಾನವನ್ನುಂಟು ಮಾಡಿ, ಅವರು ಕೈನೂಲನ್ನೇ ಕೊಂಡು, ಅದರಿಂದಲೇ ಬಟ್ಟೆಯನ್ನು ಸಿದ್ಧಪಡಿಸಲು ಅವರಿಗೆ ಎಲ್ಲ ರೀತಿಯಿಂದಲೂ ಸಹಾಯ ಮಾಡಿದರೆ, ಹಿಂದುಸ್ಥಾನಕ್ಕೆ ಈ ನೂಲಿನ ತೆರಿಗೆಯಿಂದ ಲಾಭವೇ ಆಗಿ, ಅದು ಪ್ರಚ್ಛನ್ನಗುಪ್ತಂ ಧನಂ ದಂತೆ ಪರಿಣಮಿಸಲಾರದೇನೋ?

ವೀರಶೈವ ಕಾಲೇಜಿಯನ್ನು ಬೆಳಗಾವಿಯಲ್ಲಿ ಗಡಿಬಿಡಿಲನೇ ಜೂನದಿಂದ ಪ್ರಾರಂಭಿಸಬೇಕೆಂದು ಗಿಲಗಂಚಿ-ಅರಟಾಳ ಹೈಸ್ಕೂಲಿನ ಚಾಲಕರು ನಿಶ್ಚಯಿಸಿರುವರಂತೆ. ಮುಂಬೈ ಗವರ್ನರರು ಬೆಳಗಾವಿಗೆ ಕ್ಷಿಪ್ರದಲ್ಲಿ ಬರತಕ್ಕವರಿದ್ದಾರೆ. ಆ ಸಮಯದಲ್ಲಿ ಈ ಕಾಲೇಜಿಯ ಕಟ್ಟಡದ ಅಡಿಗಲ್ಲನ್ನು ಅವರ ಹಸ್ತದಿಂದ ಇಡಿಸುವರೆಂದೂ ಪ್ರಕಟವಾಗಿದೆ. ಈ ಸಂಸ್ಥೆಯವರು ಹಣ ಕೂಡಿಸಲಿಕ್ಕೂ ಹೊರಟಿದ್ದಾರೆ. ಇವರು ಶಿಕ್ಷಣ ವಿಷಯದಲ್ಲಿ ಹೀಗೆ ಪ್ರಗತಿ ಹೊಂದುತ್ತಿರುವದು ಕನ್ನಡಿಗರಿಗೆಲ್ಲ ಅತ್ಯಂತ ಆನಂದದ ಹಾಗೂ ಅಭಿಮಾನದ ಸಂಗತಿಯು. ಬೆಳಗಾವಿಯು ಮರಾಟಿಗರ ವರ್ಚಸ್ಸಿಗೆ ಒಳಪಟ್ಟಿರುವದರಿಂದ, ಕನ್ನಡಿಗರಿಂದ ಸ್ಥಾಪಿಸಲ್ಪಡುವ ಕಾಲೇಜಿಯು ಬೆಳಗಾವಿಯಲ್ಲಿರುವದು ಒಂದು ದೃಷ್ಟಿಯಿಂದ ಹಿತಕರವಾಗಿಯೂ ಅವಶ್ಯವಾಗಿಯೂ ನಮಗೆ ತೋರಿತು. ಆದುದರಿಂದ "ಆರ್ಟ್ಸ್ ಕಾಲೇಜಿಯ"ನ್ನು ಮಾತ್ರ ಬೆಳಗಾವಿಯಲ್ಲಿ ಈ ಸಂಸ್ಥೆಯವರು ತೆಗೆಯಬಹುದೆಂದು ನಾವು ಸುಮ್ಮನಿದ್ದೆವು. ಆದರೆ ಒಕ್ಕಲತನ, ವೈದ್ಯಕಿ, ವಕೀಲಿ ಮೊದಲಾದ ಕಾಲೇಜಿಗಳನ್ನೂ ಮುಂದೆ ಹೊರಡಿಸುವ ವಿಚಾರವು ಈ ಸಂಸ್ಥೆಯವರಲ್ಲಿದೆಯೆಂದೂ, ಆ ಬಗ್ಗೆ ಈಗ್ಗೆ ಹಣ ಕೂಡಿಸಲು ಹೊರಟವರು ಅಭಿವಚನವನ್ನು ಕೊಡುತ್ತಿರುವರೆಂದೂ ನಮ್ಮ ಕೇಳಿಕೆಯಲ್ಲಿ ಬಂದಿದೆ. ಈ ಸುದ್ದಿಯು ನಿಜವಿದ್ದರೆ, ಈ ಸಂಸ್ಥೆಯವರೂ, ಅವರಿಗೆ ಸಹಾಯ ಮಾಡುವ ಮಹಾಜನಗಳೂ ಕೊಂಚ ವಿಚಾರ ಮಾಡಬೇಕಾಗಿ ನಮ್ಮ ಸೂಚನೆಯಿದೆ. ಬೆಳಗಾವಿಗಿಂತ ಧಾರವಾಡವು ಕರ್ನಾಟಕಕ್ಕೆಲ್ಲ ಮಧ್ಯವರ್ತಿಯಾಗಿದೆ. ಬೆಳಗಾವಿಯ ಹವೆಗಿಂತ ಧಾರವಾಡದ ಹವೆಯು ಎಲ್ಲ ಕನ್ನಡಿಗರಿಗೂ ಹೆಚ್ಚು ಮಾನಿಸುವದು. ಕರ್ನಾಟಕ ಕಾಲೇಜಿಯೂ ಧಾರವಾಡದಲ್ಲಿದೆ. ಗಿಲಗಂಚಿ ಅರ

ಟಾಳ ಹೈಸ್ಕೂಲಿನ ಸಂಸ್ಥೆಯವರಿಗೆ ಧಾರವಾಡದಲ್ಲಿಯೂ ಅವರ ದೊಂದು ಹೈಸ್ಕೂಲಿರುವದರಿಂದ, ಧಾರವಾಡದಲ್ಲಿರುವದು ಯಾವ ರೀತಿಯಿಂದಲೂ ಅನಾನುಕೂಲವಿಲ್ಲ. ಆದುದರಿಂದ "ಆರ್ಟ್ಸ"ದ ಹೊರತಾಗಿ ಇನ್ನಿತರ ಕಾಲೇಜುಗಳನ್ನು ತೆರೆಯುವದಿದ್ದರೆ ಅವನ್ನೆಲ್ಲ ಧಾರವಾಡದಲ್ಲಿಯೇ ತೆಗೆದು, ಧಾರವಾಡವೇ ಶಿಕ್ಷಣದ ಕೇಂದ್ರವಾಗಿ, ಆ ನಗರವು ಕರ್ನಾಟಕದ ಆಕ್ಸ್‌ಫೋರ್ಡ್, ಕೇಂಬ್ರಿಜ್ಜ ಆಗುವ ಹಾಗೆ ದೃಷ್ಟಿಯನ್ನಿಡುವದು ಅಖಂಡ ಕರ್ನಾಟಕ ದೃಷ್ಟಿಯಿಂದ ಅತ್ಯಾವಶ್ಯಕ. ನಮ್ಮ ವೀರಶೈವ ಬಂಧುಗಳು ಈ ಕಾರಣಗಳಿಗಾಗಿ ಈ ವಿಷಯವನ್ನು ಸಂಪೂರ್ಣವಾಗಿ ಚರ್ಚಿಸಿ, ಆ ಮೇಲೆ ಏನನ್ನಾದರೂ ಸಿದ್ಧಾಂತಿಸುವರೆಂದು ನಂಬುತ್ತೇವೆ!

ಬಳ್ಳಾರಿ ಬೆಳಗಾವಿಗಳೆಂದರೆ ಆಂಧ್ರ-ಮರಾಠರಿಗೆ ಬಲು ಉಪ್ಪಿನಸ್ಥಾನಗಳಾಗಹತ್ತಿವೆ! ಕನ್ನಡಿಗರಿಗೆ ಮಾತ್ರ ಅವು ಅಷ್ಟೇ ಔದಾಸೀನ್ಯವಾದವುಗಳಾಗಿವೆ! ಇದರಿಂದ ಈ ಗಡಿನಾಡುಗಳಲ್ಲಿ ಪರಭಾಷೆಯವರು ಇಲ್ಲದ ಸಲ್ಲದ ಹುಯಿಲೆಯನ್ನೆಬ್ಬಿಸಿ, ಈ ಭಾಗಗಳನ್ನು ತಮ್ಮ ತಮ್ಮ ದವಡಿಗಳಲ್ಲಿ ಹಾಕಿಕೊಳ್ಳಬೇಕೆಂದು ಹಲಬತ್ತಾಗಿ ಹಲ್ಲಿಳಿಯುತ್ತಿರುವರು. ಇಂತಹ ಕಠಿಣ ಪ್ರಸಂಗಗಳಲ್ಲಿ ನಾವು ಉಂಗುಷ್ಟವನ್ನು ಕಟ್ಟಿಕೊಂಡು ಕುಳಿತುಕೊಳ್ಳಬೇಕಾಗಿ ಬಂದಿದ್ದು ಶಿಕ್ಷಣದ ಚಳವಳಿಗೆ ಮೂರ್ತಸ್ವರೂಪವನ್ನು ಕೊಡಲು ಕಾಯದೇ ಮಂಡಳಿಯಲ್ಲಿಯ ಕರ್ನಾಟಕದ ಪ್ರತಿನಿಧಿಗಳು ಪ್ರಯತ್ನಿಸರು! ಈಗ್ಗೆ ಆಂಧ್ರರು ಬಳ್ಳಾರಿಯಲ್ಲಿ ತಮ್ಮ ಚಳವಳಿಯನ್ನು ಮತ್ತೆ ಚಕ್ಕಂದದಿಂದ ನಡೆಸುತ್ತಲಿದ್ದಾರೆ. ಆಂಧ್ರ ವಿಶ್ವವಿದ್ಯಾಲಯಕ್ಕೆ ಬಳ್ಳಾರಿ ಜಿಲ್ಲೆಯು ಸೇರಿಕೊಂಡದ್ದನ್ನೇ ಆಧಾರವಾಗಿಟ್ಟುಕೊಂಡು, ಆಂಧ್ರರಿಗೆ ದೊರೆಯುವ ಪ್ರತ್ಯೇಕ ಪ್ರಾಂತಕ್ಕೆ ಬಳ್ಳಾರಿಯನ್ನು ಸೇರಿಸಿಕೊಳ್ಳಬೇಕೆಂದು ಆಂಧ್ರರು ಹಾತೊರೆಯುತ್ತಿರುವರು! ಕನ್ನಡ ಮಹಾಮಂಡಲದ ಶ್ರೀ ಟಿ. ಭೀಮರಾಯರಿಗೆ ಆಸ್ಪಟಿಕಾಯಿ ಕೊಡಲು ಚಳ್ಳದವನೊಬ್ಬನು ಪ್ರಯತ್ನಿಸಿದನಂತೆ! ಇದರಿಂದ ಚಿಂತಿತರಾದ ಬಳ್ಳಾರಿಯ ಕನ್ನಡಿಗರು ಸಾರ್ವಜನಿಕ ಸಭೆ ಸೇರಿ, ಆಂಧ್ರರ ಉಪಟಳವನ್ನು ಖಂಡಿಸಿ, ಕರ್ನಾಟಕತ್ವವು ಬಳ್ಳಾರಿಯಲ್ಲಿ ನೆಲೆಗೊಳ್ಳಲು ಅವಶ್ಯವಿರುವ ಕಾರ್ಯಗಳನ್ನೆಲ್ಲ ಕೈಗೊಳ್ಳಬೇಕೆಂದು ನಿರ್ಧರಿಸಿರುವರು! ಬಳ್ಳಾರಿಯ ಮಹಾಜನಗಳ ಈ ಉತ್ಸಾಹವು ಭೂಬ್ರೆಂದು ಹಾರಿಹೋಗದೇ ಕೂಡಲೇ ಅದು ಕೃತಿಯಲ್ಲಿ ಅವತರಿಸುವಂತೆ ಮಾಡಬೇಕಾಗಿ ಅಲ್ಲಿಯ ಮುಂದಾಳುಗಳಲ್ಲಿ ನಮ್ಮ ಬಿನ್ನವಿದೆ.

ರಾಣೇಬಿನ್ನೂರದ ಶ್ರೀ ವೆಂಕಣ್ಣನಾಯಕರು ಅಕಸ್ಮಾತ್ತಾಗಿ ಹೃದಯರೋಗದಿಂದ ಕಳೆದ ವಾರದಲ್ಲಿ ಮಡಿದರೆಂದ ಅರುಹಲು ನಮಗೆ ಅತ್ಯಂತ ವಿಷಾದವಾಗುತ್ತದೆ. ಇವರು ಸ್ವಭಾವದಿಂದ ಬಹು ಶಾಂತರು. ಆಗರ್ಭಶ್ರೀಮಂತರಿದ್ದರೂ ಸಾರ್ವಜನಿಕ ಕಾರ್ಯಗಳಲ್ಲಿ ಬಹು ದಿನಗಳಿಂದ ತೊಡಗಿಕೊಂಡಿದ್ದರು. ಕರ್ನಾಟಕ ಕನ್ನಡಿಗರ ಅಭಿಮಾನವು ಅವರಿಗೆ ಹೆಚ್ಚಾಗಿದ್ದಿತು. ಇತ್ತೀಚೆ ಸರ ಲೋಕಶಿಕ್ಷಣಯ ಸಂಪಾದನೆಯಲ್ಲಿ ಅವರು ಹೆಚ್ಚು ಮನಸ್ಸು ಹಾಕಿದ್ದರು. ಶ್ರೀಮಂತರೆಂದರೆ ಕೇವಲ ವಿಲಾಸದಲ್ಲಿ ಕಾಲ ಕಳೆಯಬೇಕೆಂಬ ವಿಪರೀತ ಕಲ್ಪನೆಯನ್ನು ದೂಡಿ, ಲೋಕಕಲ್ಯಾಣದ ಕಾರ್ಯಗಳಲ್ಲಿ ತಮ್ಮ ಉತ್ಸಾಹದ ಪ್ರವಾಹವನ್ನು ಸೇರಿಸಿದ್ದೇ ಇವರಲ್ಲಿಯ ದೊಡ್ಡ ಗುಣವು. ರಾವಬಹದ್ದೂರರಿದ್ದರೂ ಬೆಳಗಾವಿಯ ಕಾಂಗ್ರೆಸ್ಸಿಗೆ ಬಂದಿದ್ದರು! ಇವರ ಅಕಾಲ ಮೃತ್ಯುವಿನಿಂದ ಅನೇಕರಿಗೆ ದುಃಖವಾದುದು ಸ್ವಾಭಾವಿಕವು. ಶ್ರೀಹರಿಯು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ತಪ್ಪು ತಿದ್ದುವಿಕೆ

೩೦. ನೇ ದಳದ ಶಿಕ್ಷಣದ ಶಿಬಿರವು ಬಾಗಲಕೋಟೆಯಲ್ಲಿಯೇ ಪ್ರಾರಂಭವಾಗತಕ್ಕದ್ದಿದೆ. ಆದರೆ ಕಳೆದ ಸಲ "ವಿಜಾಪುರದಲ್ಲಿ" ಎಂದು ತಪ್ಪಾಗಿ ಉಲ್ಲೇಖವಾದುದಕ್ಕಾಗಿ ನಾವು ವಿಷಾದಿಸುತ್ತೇವೆ.

ನಮ್ಮ ಬೆಳಗಾವಿಯ ಪತ್ರದಲ್ಲಿ ಶ್ರೀ ಜೋಗ ವಕೀಲರ ವ್ಯಾಖ್ಯಾನವಾಯಿತೆಂದು ಕಳೆದ ವಾರ ಪ್ರಕಟವಾಗಿತ್ತಷ್ಟೇ? ಆದರೆ ಗಣೇಶೋತ್ಸವದಲ್ಲಿ ಶ್ರೀ ಜೋಗರ ವ್ಯಾಖ್ಯಾನವು ಆಗಲೇಯಿಲ್ಲವಾಗಿ ಈಗ್ಗೆ ತಿಳಿಯುತ್ತದೆ. — ಸಂ. 'ಕನ್ನಡಿಗ'

ಪತ್ರವ್ಯವಹಾರ.

ಅನೇಕ ಪತ್ರಗಳು ಜನರಿಂದ ಬರುತ್ತಲಿವೆ. ಆದರೆ, ವ್ಯಾಕರಣ ಶುದ್ಧವಾಗಿ, ಒಂದೇ ಮಗ್ಗುಲಲ್ಲಿ, ಹಿಡಿದ ವಿಷಯದಿಂದ ಅತ್ತಿತ್ತ ಅಲೆದಾಡದೇ, ಉಪ್ಪುಕಾರವಿಲ್ಲದೇ ಸಂಕ್ಷಿಪ್ತವಾಗಿ ಬರೆಯುವದರ ಕಡೆಗೆ ಲೇಖಕರು ಗಮನ ಕೊಡಬೇಕು. ಅಂದರೆ ಮಾತ್ರ ಅವನ್ನು 'ಕನ್ನಡಿಗ'ದಲ್ಲಿ ಪ್ರಕಟಿಸಲನುವಾಗುವದು. ಈ ವಾರದಲ್ಲಿ ಸ್ಥಳಾಭಾವವಿದ್ದ ಮೂಲಕ ನಮ್ಮೆಡೆಗೆ ಬಂದ ಪತ್ರಗಳಲ್ಲಿಯ ಕೆಲವುಗಳ ಸಾರಾಂಶವನ್ನು ಕೊಟ್ಟಿರುವೆವು. — ಸಂ. 'ಕನ್ನಡಿಗ'

(೧) **ಒಬ್ಬ ವೈಷ್ಣವ ಬಾಗಲಕೋಟೆ ಮತ್ತು ಓರ್ವ ಬ್ರಾಹ್ಮಣ ಕೊಪ್ಪಳ** ಈ ಪತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಸಂಪೂರ್ಣವಾಗಿ ಪ್ರಕಟಿಸುವೆವು.

(೨) **ಗುರುನಾಥ ದೀಕ್ಷಿತ ಹಾನಗಲ್ಲ** ವಿಜಯಾದಶಮಿಯು ಗುರುವಾರವೇ ಇದೆಂದು ಸಪ್ರಮಾಣವಾಗಿ ಮಂಡಿಸಿದ್ದಾರೆ. ಇದು ಕಳೆದ ವಾರದಲ್ಲಿಯೇ ಅವಶ್ಯವಾಗಿ ಪ್ರಕಟವಾಗಬೇಕಿದ್ದಿತು. ಆದರೆ ಅದು ತೀರ ತಡವಾಗಿ ನಮ್ಮ ಕೈಸೇರಿದ್ದರಿಂದ, ಹಾಗೆ ಮಾಡುವದು ಶಕ್ಯವಿರಲಿಲ್ಲ. ಮುಂದೆ ಇಂತಹ ಪ್ರಸಂಗಗಳು ಬಂದಾಗ್ಗೆ ಸಮಯೋಚಿತವಾಗಿ ಲೇಖಗಳನ್ನು ಕಳುಹಿಸಬೇಕಾಗಿ ಪ್ರಾರ್ಥನೆ.

(೩) **ಅಸುಭವಿಸುವವ.** ಕೊಪ್ಪಳ. ಇಲ್ಲಿ ಪ್ಲೇಗು ಪ್ರಾರಂಭವಾಗಿದೆ. ಜನರು ಊರು ಬಿಡುವಂತೆ ಅಧಿಕಾರಿಗಳು ಪ್ರಯತ್ನಿಸರು, ತಾವೇ ಎಲ್ಲರ ಮೊದಲು ಕಚೇರಿಯನ್ನು ಕಿತ್ತು, ಊರ ಹೊರಗಿನ ಇಂಗ್ಲೀಷ ಶಾಲೆಯಲ್ಲಿ ಹಾಕಿರುವರು! ಇದರಿಂದ ಶಾಲೆಯಲ್ಲಿ ಅಭ್ಯಾಸವೇ ಇಲ್ಲ. ಜೊತೆಗೆ ಫೋರ್ಥ ಇಯತ್ತೆ ವರ್ಗಗಳನ್ನು ಹಾಕಬೇಕೆಂದು ಅಧಿಕಾರಿಗಳ ಅಪ್ಪಣೆ! ಗಾಳಿ ಮಳೆಗಳಿಂದ ಹುಡುಗರು ನೆನೆದು ನಡುಗುತ್ತಿದ್ದರೂ, ಅಧಿಕಾರಿಗಳು ಕುರುಡರಂತೆ ನಟಿಸುತ್ತಿರುವರು. ಅಧಿಕಾರದ ದರ್ಪವು! ಹೇಳಿ ಕೇಳಿ ಮೊಗಲಾಯಿ! ಹೇಳುವವರಾರು? ಕೇಳುವವರಾರು?

(೪) **ತಿಸೇ ಲಂಬಾಣಿ ಸಂಘಾಸಭೆಯನ್ನು** ಕರೆಯುವ ಬಗ್ಗೆ ವಿಜಾಪುರದ ಕಾನಕಾನ ಹಳ್ಳಿಯಲ್ಲಿ ೧೪—೯—೩೭ ರಲ್ಲಿ ಸಭೆ ಜರುಗಿತು. ೧ ಸಾವಿರ ಲಂಬಾಣಿಗಳು ಸಭೆಗೆ ಬಂದಿದ್ದರು. ಹೆಚ್ಚಿನ ವೃತ್ತಾಂತ ಮುಂದಿನ ಸಲ.

(೫) **ಸಾಂಗಲಿ ಯಕ್ಕುಂಡಿ ಹಣಮಂತರಾಯರು** ವಿಲಿಂಗ್ಡನ್ ಕಾಲೇಜಿನಲ್ಲಿ ಕರ್ನಾಟಕ ಸಂಘವು ಸ್ಥಾಪಿತವಾಗಿದೆಯಷ್ಟೇ? ಕನ್ನಡ ಕರುಣರಾದ ಶ್ರೀ ಟಿ. ಕೆ. ಪಾಟೀಲರು (ಬಿ. ಎ. ಆನರ್ಸ) ಆಯ್. ಸಿ. ಎಸ್. ಪರೀಕ್ಷೆಗಾಗಿ ವಿಲಾಯತಿಗೆ ಹೋಗತಕ್ಕವರಿದ್ದಾರೆ. ಆದುದರಿಂದ ಅವರ ಸನ್ಮಾನಾರ್ಥ ಒಂದು ಸಭೆಯಾಯಿತು. ಪ್ರೊ. ಅಯ್ಯರವರು ಅಧ್ಯಕ್ಷರಿದ್ದರು. ಪ್ರಿನ್ಸಿಪಾಲ ಭಾಟೇ ಪ್ರೊ. ಸಪ್ರೆ. ಬೊಂದಾಳೆಯವರು ಸಹ ಶ್ರೀ ಪಾಟೀಲರನ್ನು ಗೌರವಿಸಿದರು.

(೬) **ಬೆಳಗಾವಿ-ಹುಬ್ಬಳ್ಳಿ ರೇಲ್ವೆ.** ಮುಂದಿನ ಸಲ ಸಾರಾಂಶವನ್ನು ಕೊಡುವೆವು.

(೭) **ಕುಕನೂರದ ನಿಜಾಮು-ಕರ್ನಾಟಕ-ನೂತನ ಪಾಠ-ಶಾಲೆಯ ಮುಖ್ಯಾಧ್ಯಾಪಕರು** ಬ್ರಹ್ಮಚರ್ಯದ ಬಗ್ಗೆ ಒಂದೇ ಸವನೆ ವ್ಯಾಖ್ಯಾನಗಳನ್ನು ಕೊಟ್ಟು, ತಾವು ಅವಿವಾಹಿತರಾಗಿಯೇ ಕಡೆಯವರೆಗೆ ಉಳಿಯುವೆವೆಂದೂ, ವಿದ್ಯಾರ್ಥಿಗಳು ಲಗ್ನವಾಗಬಾರದೆಂದೂ ಯಾವಾಗಲೂ ಬಲು ಉತ್ಸಾಹದಿಂದ ಕೂಗಿ ಕೂಗಿ ಹೇಳುತ್ತಲಿದ್ದರು! ಆದರೆ ಈಗ್ಗೆ ಇದೇ ಮಹಾಶಯರು (?) ನೆನ್ನೆ ಲಗ್ನವಾದರು! ನಿಜವಾದ ಬಣ್ಣವು ಈಗ ಮಾತ್ರ ಹೊರಬಿದ್ದಂತಾಯಿತು!

ಖಾದಿಯೂ ಧರ್ಮಾಧರ್ಮದ ಪ್ರಶ್ನೆಯೂ.

ಪ್ರಶ್ನೆ—ಆಚಾರಧರ್ಮಗಳಲ್ಲಿ ಇಂಥಾದ್ದನ್ನು ಸೇವಿಸುವುದು ಧರ್ಮವೆಂತಲೂ, ಇಂಥಾದ್ದನ್ನು ಸೇವಿಸುವುದು ಅಧರ್ಮವೆಂತಲೂ, ಹೇಳಿರುವುದನ್ನು ನಾನು ಈ ವರೆಗೂ ಕೇಳಿದ್ದೆನು. ಆದರೆ ಈ ಪ್ರಕಾರ ಇಂಥ ಬಟ್ಟೆಯನ್ನು ಉಪಯೋಗಿಸುವುದು ಧರ್ಮವೆಂತಲೂ, ಅಂಥ ಬಟ್ಟೆಯನ್ನು ಧರಿಸುವುದು ಅಧರ್ಮವೆಂತಲೂ ಹೇಳಿರುವುದನ್ನು ನಾನು ಯಾವ ಧರ್ಮಕಟ್ಟಳೆಗಳಲ್ಲಿಯೂ ನೋಡಿಲ್ಲ. ನಮ್ಮ ಪ್ರಾಚೀನರು ಗಾಂಧಿಯವರಿಗಿಂತ ದಡ್ಡರಾಗಿದ್ದರೇ? ಅವರು ಧರ್ಮಾಚರಣೆಗಳಲ್ಲಿಯೇ ಏಕೆ ಸೇರಿಸುತ್ತಿರಲಿಲ್ಲ?

ಉತ್ತರ—ಮಹಾತ್ಮಾ ಗಾಂಧಿಯವರು ಧರ್ಮಸ್ಥಾಪಕರಿಗಿಂತಲೂ ಬುದ್ಧಿವಂತರೆಂದು ನಾನೆಲ್ಲಿ ಹೇಳಿದೆ? ಅವರು ನಮಗಿಂತಲೂ ಬುದ್ಧಿವಂತರೆಂದು ಮಾತ್ರ ಸಿದ್ಧವಾಗುತ್ತದೆ. ಏಕೆಂದರೆ, ನಮ್ಮ ಧರ್ಮಸ್ಥಾಪಕರ ಪ್ರಾಚೀನಾಚಾರಗಳನ್ನೇ ತಾವು ಆಚರಿಸುವುದಲ್ಲದೆ ನಮ್ಮ ಆಚರಣೆಯಲ್ಲಿಯೂ ತರಲೆಂದು ಪ್ರಯತ್ನಿಸುತ್ತಿದ್ದಾರೆ. ಈಗಿನಂತೆ ಪ್ರಾಚೀನ ಕಾಲದಲ್ಲಿ ಮಿಲ್ಲಿನಿಂದ ಬಟ್ಟೆಯಾಗುತ್ತಿರಲಿಲ್ಲ. ಆದುದರಿಂದ ಧರ್ಮಶಾಸ್ತ್ರಜ್ಞರು ಇಂಥ ಬಟ್ಟೆಯನ್ನು ನಿಷೇಧಿಸುವ ಸಂಭವವೇ ಇರಲಿಲ್ಲ. ಆದಾಗ್ಯೂ ಬಟ್ಟೆಯ ವಿಷಯದಲ್ಲಿ ಎಷ್ಟೋ ನಿರ್ಬಂಧಗಳಿದ್ದಂತೆ ಸ್ಪಷ್ಟವಾಗಿ ಗೊತ್ತಾಗುತ್ತಲಿದೆ. ಇಂಥ ವಸ್ತ್ರವನ್ನೇ ಧರಿಸಬೇಕೆಂದು ಯಾವ ಧರ್ಮದಲ್ಲಿಯೂ ಕಟ್ಟಳೆಯಿಲ್ಲವೆಂದು ನೀವು ತಿಳಿದಿರುವಿರಷ್ಟೆ. ಇದು ನಿಮ್ಮ ತಪ್ಪು ತಿಳುವಳಿಕೆಯು. ಏಕೆಂದರೆ, ವೀರಶೈವ ಮತದ ಒಳ ಶೀಲಗಳಲ್ಲಿ ಒಂದನೆಯ ಶೀಲವು ಈ ಪ್ರಕಾರ ಇದೆ.



"ನಿಹತ ನೂಲಿನಿಂದೆ ಕೊಂಬಿನ ಲಾಳಿಯಂ ಮುಟ್ಟಿಸದೆ ಲಿಂಗವಂತರಿಂದೆ ರುಚಿರತರವಾದ ಪೊದಕೆಯಂ ನೇಯಿಸಿಕೊಳ್ವುದೆ ನಿರಂತರಮೊಳಿರ್ಪತ್ತೊಂದನೆಯ ಶೀಲ." ಸೋಮೇಶ್ವರ ಪುರಾಣ ೨ನೆಯ ಸಂಧಿ.

ವೀರಶೈವರು ನೂತು ನೇಯುದು ಮಾಡಿದ ಬಟ್ಟೆಯನ್ನೇ ವೀರಶೈವರು ಉಪಯೋಗಿಸಬೇಕೆಂದು ಹೇಳಿರುವುದನ್ನು ನೋಡಿದರೆ ಧರ್ಮಾಚರಣೆಗಳಲ್ಲಿಯೂ ಇಂಥ ವಸ್ತ್ರವನ್ನೇ ಧರಿಸಬೇಕೆಂಬ ಕಟ್ಟಳೆಯುಂಟೆಂದು ಗೊತ್ತಾಗುವುದಿಲ್ಲವೇ? ಈ ದೇಶದ ಅನೇಕ ಸದಾಚಾರಶೀಲರು ರೇಶ್ಮೆ ಬಟ್ಟೆಯನ್ನು ಉಪಯೋಗಿಸುವುದಿಲ್ಲ. ಏಕೆಂದರೆ, ಅದು ಪ್ರಾಣಿಹಿಂಸೆಯಿಂದುಂಟಾಗುತ್ತದೆ. ಇದರಂತೆಯೇ ಚರ್ಮದ ಸಾಮಾನುಗಳನ್ನು ಚರ್ಮಮಿಶ್ರವಾದ ಟೊಪ್ಪಿಗೆ ಮೊದಲಾದ ಉಡುಪುಗಳನ್ನೂ ಆಚಾರಶೀಲರಾದ ಅನೇಕ ಜನಗಳು ಉಪಯೋಗಿಸುವುದಿಲ್ಲ. ಏಕೆಂದರೆ, ಚರ್ಮವು ಹಿಂಸಾಮೂಲಕ ಬರುವ ಸಂಭವವಿದೆ. ಇಷ್ಟೇ ಅಲ್ಲ, ಚರ್ಮದ ಉಪಯೋಗವು ಹೆಚ್ಚಾದಂತೆ ಪ್ರಾಣಿಹಿಂಸೆಯು ಕೂಡಾ ಹೆಚ್ಚುತ್ತದೆ. ಆ ಪ್ರಾಣಿಹಿಂಸೆಗೆ ತಾವು ಕಾರಣರಾಗಬಾರದೆಂದೇ ಅಪವಿತ್ರವಾದ ಪದಾರ್ಥಗಳೆಂದು ಪ್ರಾಚೀನರು ಗೊತ್ತು ಮಾಡಿದ್ದಾರೆ. ಇದು ನಮ್ಮ ಭಾರತೀಯರ ವಿಚಾರಸರಣಿಯು.

ಆದರೆ ಯುರೋಪ್ ಖಂಡದಲ್ಲಿ ಅಸಂಖ್ಯ ಸ್ತ್ರೀಯರು ಉಡುಪು ಸುಂದರವಾಗಿ ಕಾಣಬೇಕೆಂಬ ಉದ್ದೇಶದಿಂದಲೇ ಚಿಕ್ಕ ಚಿಕ್ಕ ಪಕ್ಷಿಗಳನ್ನು ಕೊಂದು ಅವುಗಳ ರೆಕ್ಕೆಗಳಿಂದ ತಮ್ಮ ಉಡುಪನ್ನು ಅಲಂಕರಿಸಿಕೊಳ್ಳುತ್ತಿರುವರು. ಚರ್ಮವಂತೂ ಆ ಜನಗಳಿಗೆ ಅಪವಿತ್ರವಾದುದಲ್ಲವೇ? ಅಸ್ತು. ಇಂಥ ಪಾಶ್ಚಾತ್ಯ ವಿಚಾರಗಳೇ ಯಾರ ತಲೆಯಲ್ಲಿ ತುಂಬಿವೆಯೋ ಅವರಿಗೆ ಯಾಂತ್ರಿಕಬಟ್ಟೆಯಲ್ಲಿ ಹಿಂಸಾಮೂಲವಾದ ಪಾಪವಿದೆಯೆಂಬುದು ಹೇಗೆ ತಾನೆ ಗೊತ್ತಾಗುವುದು.

—ಮುಳ್ಳು ಪರೀಕ್ಷಕ.

ಖಾದಿಯು ಅಗ್ಗವೂ ಅಲ್ಲ; ಚಂದವೂ ಅಲ್ಲ!!

ಪ್ರಶ್ನೆ—ಈಗ ಪರದೇಶಗಳಿಂದ ಬರುವ ಬಟ್ಟೆಯು ಬಹು ಶೀಘ್ರಗಾಗಿಯೂ, ಅಂದವಾಗಿಯೂ, ಮುಟ್ಟುವುದಕ್ಕೆ ಮೃದುವಾಗಿಯೂ ಇರುತ್ತದಲ್ಲದೆ ಸುಲಭವಾಗಿಯೂ ದೊರೆಯುತ್ತದೆ. ಇನ್ನು ಮೇಲೆ ಇದಕ್ಕೂ ಬಹು ಅಗ್ಗವಾಗಿ ದೊರೆಯಬಹುದು. ಹೀಗಿರುವಾಗ ಈ ನಿಮ್ಮ ದಪ್ಪವಾದ ಬಿರಟು ಖಾದಿಯನ್ನು ಹೆಚ್ಚು ಬೆಲೆಕೊಟ್ಟು ಎಲ್ಲರೂ ಯಾವಾಗಲೂ ತೆಗೆದುಕೊಳ್ಳುವುದುಂಟೇ? ಈಗೇನೋ ಚಳವಳಿ ನಡೆದಿದೆ. ಆದರೂ ಇದು ದಿನೇದಿನೇ ತಣ್ಣಗಾಗಿ ಹೋಗುವುದಿಲ್ಲವೆ?

ಉತ್ತರ—ಕಣ್ಣಿನ ಮೋಹದಿಂದ ಪತಂಗವು ದೀಪದಲ್ಲಿ ಬಿದ್ದು ಸಾಯುತ್ತದೆ. ಆನೆಯು ಸೈತಿಂಡಿಗೆ ಮನಸೋತು ಪರಾಧೀನವಾಗುತ್ತದೆ. ನಾವು ಕೂಡಾ ಕಣ್ಣಿಗೆ ಚಂದ ಕಾಣುತ್ತದೆಂದೂ, ಮೈಯಿಗೆ ಮೆತ್ತಗಾಗುತ್ತದೆಂದಾಗಲಿ ಮೋಹದಿಂದ ಮೋಸಹೋಗಿ ಪರದೇಶದ ಬಟ್ಟೆಯ ಜಾಲದಲ್ಲಿ ಸಿಕ್ಕಿದರೆ ಖಂಡಿತವಾಗಿಯೂ ಹಾಳಾಗುತ್ತೇವೆ. ಮೊದಲು ಈ ಪ್ರಕಾರ ಮೋಹಕ್ಕೆ ಬಿದ್ದೇ ಈಗ ಈ ದುಸ್ಥಿತಿಗೀಡಾಗಿದ್ದೇವೆ. ಎಲ್ಲಿಯವರೆಗೂ ಬಟ್ಟೆಯ ಈ ಮೋಹವು ನಮ್ಮನ್ನು ಬಿಡುವದಿಲ್ಲವೋ ಅಲ್ಲಿಯವರೆಗೂ ದರಿದ್ರ ಲಕ್ಷ್ಮಿಯು ನಮ್ಮನ್ನು [illegible] ಹೋಗುವುದೇ ಇಲ್ಲ. ನಾವು ಇದೇ ಪ್ರಕಾರ ನಾನಾ ದುಃಖಗಳನ್ನು ಬಳಲುತ್ತಲೇ ಇರಬೇಕಾಗುವುದು. ಏಕೆಂದರೆ, ನಮ್ಮ [illegible] ಬಾಂಧವರ ಹೊಟ್ಟೆಯಮೇಲೆ ಹೊಡೆದು ಪ್ರಪಂಚದಲ್ಲಿ ನಾನಾ ಹಿಂಸೆಗಳನ್ನು ಮಾಡಲು ಸಹಾಯ ಮಾಡಿದ ಘೋರ ಪಾತ[illegible]

ಹಾಗುತ್ತಿದ್ದೇವೆ. ಏಂದರೇಲೆ, ರಾಷ್ಟ್ರಕ್ಕೆ ನಿಜವಾದ ಸುಖವು ಹೇಗೆ ಕಾನೆ ದೊರೆಯುವುದು ? ಆದುದರಿಂದ ಅವರು ಪುನಃ ಮೋಹಕ್ಕೆ ಬಿದ್ದು ಖಾದಿಯನ್ನು ಬಿಡುವುದಿಲ್ಲ. ಇಷ್ಟೇ ಅಲ್ಲ; ಈ ತಮ್ಮ ತಿಳುವಳಿಕೆಯನ್ನು ಜನಗಳಲ್ಲಿ ಪ್ರಸಾರ ಮಾಡುತ್ತಿರುವುದರಿಂದ ದಿನೇದಿನೇ ಖಾದಿಯನ್ನುಪಯೋಗಿಸುವವರು ಹೆಚ್ಚುತ್ತ ಹೋಗುವುದರಲ್ಲಿ ಸಂದೇಹವೇ ಇಲ್ಲ.

ಖಾದಿಯಲ್ಲಿ ಜಿನುಗಾದ ಬಟ್ಟೆಗಳಿಲ್ಲವೆಂದು ನೀವು ತಿಳಿದಿರುವಿರೇನು ? ಬೇಕಾದಷ್ಟು ಜಿನುಗಾದ ಖಾದಿಯು ದೊರೆಯುತ್ತದೆ. ಆದರೆ, ಅದು ಪರದೇಶಗಳ ಬಟ್ಟೆಯಷ್ಟು ಕಡಿಮೆ ಕ್ರಯಕ್ಕೆ ದೊರೆಯುವುದಿಲ್ಲ. ಈ ದೇಶದ ಖಾದಿಗೆ ಹೆಚ್ಚು ಬೆಲೆಕೊಟ್ಟು ತೆಗೆದುಕೊಂಡರೂ ಅದು ಪರದೇಶಗಳ ಬಟ್ಟೆಗಿಂತಲೂ ಸುಲಭವಾಗಿಯೇ ದೊರೆತಂತಾಯಿತೆಂಬುದು ಜನಸಾಮಾನ್ಯರಿಗೆ ಇನ್ನೂ ಗೊತ್ತಾಗಿಲ್ಲ. ಪರದೇಶಗಳ ಬಟ್ಟೆಗೆ ಎಷ್ಟೇ ಕಡಿಮೆ ಕ್ರಯವಿದ್ದರೂ ಅದಕ್ಕೆ ಕೊಟ್ಟ ಹಣವೆಲ್ಲ ಪರದೇಶದವರ ಪಾಲಾಗುತ್ತದೆ. ಅದರಲ್ಲಿ ಒಂದು ಕಾಸಾದರೂ ಈ ದೇಶದಲ್ಲುಳಿಯುವದಿಲ್ಲ. ಆದರೆ ಈ ಖಾದಿಗೆ ಹೆಚ್ಚಿಗೆ ಬೆಲೆಯನ್ನು ಕೊಟ್ಟರೂ ಅದೆಲ್ಲ ಈ ದೇಶದಲ್ಲಿಯೇ ಉಳಿಯುತ್ತದೆ. ಆದುದರಿಂದ ಆ ಹಣವು ಅಪ್ರತ್ಯಕ್ಷವಾಗಿ ನಮ್ಮ ಸಂಪದಭಿವೃದ್ಧಿಗೇನೇ ಸಾಧನವಾಗುತ್ತದೆ. ಆದಕಾರಣ ಪರದೇಶದವರು ಎಷ್ಟೇ ಅಗ್ಗವಾಗಿ ತಮ್ಮ ಬಟ್ಟೆಯನ್ನು ಕೊಟ್ಟರೂ ಬುದ್ಧಿವಂತರು ಅದನ್ನು ಕೊಂಡುಕೊಳ್ಳದೆ ತಮ್ಮ ದೇಶದ ಖಾದಿಯನ್ನೇ ಕೊಂಡುಕೊಳ್ಳುವರು.

ನೀವು ಪಾಲಿನಿಂದ ಒಂದು ಅಂಗಡಿಯನ್ನಿಟ್ಟಿರುವಿರೆಂದು ತಿಳಿಯಿರಿ. ಒಂದು ಪದಾರ್ಥವು ಬೇರೆಯವರ ಅಂಗಡಿಗಿಂತ ನಿಮ್ಮ ಪಾಲಿನ ಅಂಗಡಿಯಲ್ಲಿ ತುಟ್ಟಿಯಾಗಿದ್ದರೂ ಅದನ್ನು ನೀವು ಪಾಲಿನ ಅಂಗಡಿಯಲ್ಲಿಯೇ ತೆಗೆದುಕೊಳ್ಳುವುದು ಯುಕ್ತವಲ್ಲವೇ ? ಏಕೆಂದರೆ ಅದರ ಲಾಭಾಂಶವು ಪುನಃ ನಿಮಗೆ ಬಂದೇ ಬರುತ್ತದೆ. ಆದುದರಿಂದ ಖಾದಿಯು ತುಟ್ಟಿಯಾಗಿದ್ದರೂ ಬಲ್ಲವರು ಅದು ಸುಲಭವೆಂದೇ ತಿಳಿದು ಅದನ್ನೇ ಕೊಂಡುಕೊಳ್ಳುತ್ತಾರೆ. ಏಕೆಂದರೆ ಆ ಹಣವು ನಮ್ಮ ದೇಶಬಾಂಧವರಿಂದ ಪುನಃ ನಮ್ಮಲ್ಲಿಯೇ ಹಂಚಲ್ಪಡುತ್ತದೆ.

ಖಾದಿಯು ಸುಲಭವೆಂಬುದಕ್ಕೆ ಈ ಪ್ರಮಾಣಗಳು ಈಗ ಕಷ್ಟಕರ ಣವಿದ್ದರೂ ಅದನ್ನು ಹಾಕಿಕೊಂಡೊಡನೆಯೇ ಗೊತ್ತಾಗುತ್ತದೆ. ಹೇಗೆಂದರೆ, ಖಾದಿಯನ್ನು ಹಾಕಿಕೊಳ್ಳುವುದರಿಂದ ಸಾದಾತನವು ಬರುತ್ತದೆ. ಪರದೇಶಗಳ ನಾನಾ ತರದ ಹೆಚ್ಚು ಹೆಚ್ಚು ಕ್ರಯದ ಬಟ್ಟೆಗಳನ್ನು ತೆಗೆದುಕೊಳ್ಳುವದು ನಿಲ್ಲುತ್ತದೆ. ಪರದೇಶಗಳ ಬಟ್ಟೆಯನ್ನು ಹಾಕಿಕೊಳ್ಳುವುದರಿಂದ ಒಬ್ಬನಿಗೆ ಒಂದು ವರ್ಷಕ್ಕೆ ಬಟ್ಟೆಗಾಗಿ ಒಟ್ಟು ಎಷ್ಟು ಹಣವು ವೆಚ್ಚವಾಗುತ್ತಿತ್ತೋ ಆತನು ಖಾದಿಯನ್ನು ಹಾಕಿಕೊಳ್ಳಲಾರಂಭಿಸಿದರೆ ಬಟ್ಟೆಯ ವಾರ್ಷಿಕ ವೆಚ್ಚವು ಅದಕ್ಕೂ ಕಡಮೆಯಾಗುತ್ತದೆ. ಅಫಗಾನಿಸ್ಥಾನದ ಅಮೀರ ಸಾಹೇಬರವರು ಈಗ ಖಾದಿಯನ್ನು ಧರಿಸುತ್ತಿರುವದು ನಿಮಗೆ ಗೊತ್ತಿಲ್ಲವೇ? ಅವರಿಗೆ ವರ್ಷಕ್ಕೆ ಬಟ್ಟೆಗಾಗಿ ಹನ್ನೆರಡು ಸಾವಿರ ರೂ. ಗಳು ಬೇಕಾಗುತ್ತಿದ್ದವು. ಈಗ ಖಾದಿಯನ್ನು ಹಾಕಿಕೊಳ್ಳುವದರಿಂದ ವರ್ಷಕ್ಕೆ ಆರುನೂರು ರೂ. ಗಳು ಸಾಕಾಗುತ್ತವೆ! ಎಂದ ಮೇಲೆ ಯಾವದು ಸುಲಭವಾಯಿತು?

ಈಗ ಅನೇಕ ಕುಟುಂಬಗಳಲ್ಲಿ ಖಾದಿಯನ್ನೇ ಉಪಯೋಗಿಸುತ್ತಿರುವದರಿಂದ ಅವರು ಮೊದಲು ಬಟ್ಟೆಗಾಗಿ ವರ್ಷಕ್ಕೆ ಎಷ್ಟು ಹಣವನ್ನು ವೆಚ್ಚ ಮಾಡುತ್ತಿದ್ದರೋ ಅದರ ಹತ್ತನೆಯ ಒಂದು ಭಾಗದಷ್ಟು ಹಣವು ಈಗ ಬಟ್ಟೆಗೆ ವೆಚ್ಚವಾಗುತ್ತಲಿದೆಯೆಂದು ಹೇಳುತ್ತಿದ್ದಾರೆ. ನೀವು ನಿಮ್ಮ ಅನುಭವದಿಂದಲೂ ಇದರ ನಿಜಸ್ಥಿತಿಯನ್ನು ತಿಳಿದುಕೊಳ್ಳಬಹುದು. ಬರೇ ಕಾರಣ ಒಂದು ಗಜ ಬಟ್ಟೆ ಕ್ರಯದ ವ್ಯತ್ಯಾಸದ ಮೇಲಿಂದಲೇ ಖಾದಿಯು ತುಟ್ಟಿಯೆಂದು ಹೇಳುವದು ಸರಿಯಲ್ಲ. ಅದರ ಪರಿಣಾಮದ ಕಡೆಗೆ ನೋಡಿದರೆ ಖಾದಿಯೇ ಬಹು ಸುಲಭವೆಂದು ಸ್ಪಷ್ಟವಾಗುತ್ತದೆ.

—ಪುಂಡಲೀಕಪ್ಪಾ ಪರ್ವತೀಕರ

ವ್ಯಾಯಾಮ.

(ಲೇ-ಗುರುಬಸಪ್ಪಾ ಗಾಳಿ.)

'ವ್ಯಾಯಾಮ'- ಈ ಶಬ್ದವು ಬಹು ದಿವಸಗಳಿಂದಲೂ ನಮ್ಮ ಜನರ ಬಳಕೆಯಲ್ಲಿರುವದು. ಇತ್ತೀಚೆಗೆ ಜನರ ಲಕ್ಷ್ಯವು ಹೋಗಿರುವದಿಲ್ಲ. ಪರಂಪರೆಯಾಗಿ ನಡೆದು ಬಂದ ನಮ್ಮ ಮೊದಲಿನ ಪದ್ಧತಿಯು ಮೂಲೆಗೊತ್ತಲ್ಪಟ್ಟಿದೆ. ಟೆನಿಸ್, ಕ್ರಿಕೆಟ, ಫುಟಬಾಲ್ ಮೊದಲಾದ ವಿದೇಶೀಯ ಆಟಗಳ ಪ್ರಾಬಲ್ಯವೇ ಹೆಚ್ಚಾಗಿದೆ. ಮೇಲಿನ ಈ ಮೂರು ಆಟಗಳಲ್ಲಿ ಒಂದು ಬಗೆಯ ಉಲ್ಲಾಸವಿರುವದೇನೋ ನಿಜವು. ಆದರೆ ವಿದೇಶೀಯ ವಸ್ತುಗಳ ವಿಷಯಕ್ಕಿರುವ ಮೋಹವನ್ನು ಬದಿಗೊತ್ತಿದರೆ, ಇಷ್ಟೇ ಉಲ್ಲಾಸಕರವಾಗಿಯೂ ಕಡಮೆ ವೆಚ್ಚದವೂ ಆದ ಚಿಣಿ-ಫಣಿ, ತಿಳ್ಳಿ, ಖೋ ಮೊದಲಾದ ಆಟಗಳು ನಮ್ಮಲ್ಲಿ ಹೇರಳವಾಗಿರುವದು ಕಂಡುಬರುತ್ತದೆ. ಶರೀರದ ಎಂಟೂ ಅವಯವಗಳಿಗೂ ಪರಿಶ್ರಮವಾಗುವ ಅನೇಕ ಆಟಗಳೂ ಕುಸ್ತಿಗಳನ್ನಾಡುವ ಗರಡೀ ಮನೆಗಳೂ ಬಹುತೇಕವಾಗಿ ನಾಮಶೇಷವಾಗಿವೆ. ಪಾಶ್ಚಾತ್ಯರಿಂದ ಕಲಿಯಬೇಕಾದ ಸಂಗತಿಯೇನಾದರೂ ಇದ್ದರೆ ಅದು 'ಕವಾಯಿತು' (ಡ್ರಿಲ್) ಎಂದು ನನಗನಿಸುತ್ತದೆ. ನಮಗೆ ನಡೆಯಲಿಕ್ಕೆ ಬರುವದಿಲ್ಲೆಂದು ನಮ್ಮ ಗೆಳೆಯರೊಬ್ಬರು ಹಾಸ್ಯಮಾಡುವರು. ಗುಂಪು ಗುಂಪಾಗಿ ಪದ್ಧತಿಗನುಸಾರವಾಗಿ ನಡೆಯುವದಂತೂ ದೂರವೇ ಉಳಿಯಿತು. ಸಾವಿರಾರು ಜನರು ಇಬ್ಬರ ನಾಲ್ವರ ಗುಂಪಾಗಿ ನಿರ್ದಿಷ್ಟ ದಿಕ್ಕಿನಲ್ಲಿ ಸಾಲು ಹಿಡಿದು ಒಂದೇ ತಾಲದಲ್ಲಿ ನಡೆಯುವ ಶಕ್ತಿಯು ನಮ್ಮಲ್ಲಿ ಕಾಣ ಬರುವದಿಲ್ಲ. ಯುದ್ಧ ಭೂಮಿಯಲ್ಲಿಯೇ ಮಾತ್ರ ಈ ಕವಾಯಿತಿನ ಉಪಯೋಗವಾಗುವದೆಂದು ತಿಳಿಯಕೂಡದು. ಪರೋಪಕಾರದ ಅನೇಕ ಕಾರ್ಯಗಳಲ್ಲಿ ಅದರ ಉಪಯೋಗವಾಗುವದು. ಬೆಂಕಿ ನಂದಿಸುವದು, ನೀರಲ್ಲಿ ಮುಳಗುವವರಿಗೆ ನೆರವಾಗುವದು, ಗಾಯ ಹೊಂ

ಹಿಡಿದವರನ್ನು ಡೋಲಿ ಕಲ್ಲಿ ತೆಗೆದುಕೊಂಡು ಹೋಗುವದು-ಇವೇ ಮೊದಲಾದ ಕೆಲಸಗಳಲ್ಲಿ ಡ್ರಿಲ್ಲಿನ ಉಪಯೋಗವು ಹೆಚ್ಚಾಗಿ ಕಂಡುಬರುವದು. ಹೀಗಿರುವದರಿಂದ ನಮ್ಮ ಶಾಳೆಗಳಲ್ಲಿ ದೇಶೀಯ ಆಟಗಳನ್ನೂ ಅನೇಕ ತರದ ದೇಶೀಯ ಕಸರತ್ತುಗಳನ್ನೂ ಹಾಗೆಯೇ ಪಾಶ್ಚಾತ್ಯ ಪದ್ಧತಿಯ ಡ್ರಿಲ್ಲನ್ನು ಕಲಿಸುವದು ಅವಶ್ಯಕವಾಗಿರುವದು.

ಸುರತ ನಗರದ ಶ್ರೇಷ್ಠಿಯು.

[ನಮ್ಮ ಸ್ವಂತ ಪ್ರತಿನಿಧಿಯಿಂದ]

ಕರ್ನಾಟಕ ಕಾಲೇಜಿನ ಅಮೇಚೂರ ನಾಟಕ ಸಂಘದವರು ೨೬ ನೇ ತಾರೀಖಿನ ದಿವಸ ಧಾರವಾಡದಲ್ಲಿ ವೈ. ವಾಸುದೇವಾಚಾರ್ಯರು ರೂಪಾಂತರಿಸಿದ "ಸುರತನಗರದ ಶ್ರೇಷ್ಠಿ" ಯೆಂಬ ಪ್ರಯೋಗವನ್ನು ಅಭಿನಯಿಸಿದರು. ಇವರೇನು ನಾಟಕ ಮಂಡಳಿಯವರಂತೆ ರೊಕ್ಕವನ್ನು ಹೀರಿಕೊಳ್ಳುವದಕ್ಕಾಗಿ ಹೊರಟವರಲ್ಲ; ನಾಟ್ಯದೇವಿಯ ನಿಜಸ್ವರೂಪವನ್ನು ಹಾವಭಾವಗಳಿಂದಲೂ, ಕನ್ನಡದ ಇಂಪಾದ ನುಡಿಗಳಿಂದಲೂ ನೋಟಕರ ನಿದರ್ಶನಕ್ಕೆ ತಂದುಕೊಡಲು ಹೊರಟವರು. ಕೇವಲಾಗಿ ವಿಮರ್ಶನಾತ್ಮಕ ದೃಷ್ಟಿಯಿಂದ ನಾಟಕಗಳನ್ನು ಅಭಿನಯಿಸುವವರು. ನಾಟಕಕಾರರೂ ಕವಿಗಳೂ ಎಂಬುವಾಗಿ ಪ್ರಸಿದ್ಧಿಯನ್ನು ಪಡೆಯಬೇಕೆಂಬ ಮಹತ್ವಾಕಾಂಕ್ಷೆಯುಳ್ಳವರು. ಇಂತಹ ಪ್ರೌಢ ವಿದ್ಯಾರ್ಥಿಗಳು ಅಭಿನಯಿಸಿ ತೋರಿಸುವ ವೈ. ವಾಸುದೇವಾಚಾರ್ಯರ ನಾಟಕವು ಬಹು ಪ್ರೇಕ್ಷಣೀಯವಾಗುವದೆಂದು ತಿಳಿದು ಜನರು ಕಿಕ್ಕಿರಿದು ಬಂದಿದ್ದರಲ್ಲಿ ಆಶ್ಚರ್ಯವೇನು? ಆದುದರಿಂದಲೇ ನಾವು ವಿಮರ್ಶೆಯನ್ನು ಕೊಂಚ ವಿಸ್ತರಿಸಿ ಬರೆಯಬೇಕಾಗಿದೆ.

ಈ ಗದ್ಯ ನಾಟಕವು ಪಾಶ್ಚಾತ್ಯ ಪದ್ಧತಿಯಂತೆ ನಾಂದಿಯಿಲ್ಲದೆ ಪ್ರಾರಂಭಿಸಲ್ಪಟ್ಟು ಮಂಗಳವಿಲ್ಲದೆ ಮುಗಿಸಲ್ಪಟ್ಟಿತು. ನಾಟಕದ ನಾಯಿಕೆಯು, ಶಾರದಾದೇವಿಯು. ನಾಟಕಕ್ಕೆ ಕಳೆತರುವದು ನಾಯಿಕೆಯ ಕೈಯಲ್ಲಿಯದು. ಆದರೆ ಈ ಪ್ರಯೋಗದಲ್ಲಿ ಸ್ತ್ರೀಯರಿಗೆ ತಕ್ಕಂತೆ ನಡೆಯುವದೂ, ಹಾವಭಾವಗಳನ್ನು ತೋರಿಸಿ ಜನರ ಚಿತ್ತಾಕರ್ಷಣ ಮಾಡುವದೂ ಅವರಲ್ಲಿ ಸ್ವಲ್ಪವೂ ಕಂಡುಬರಲಿಲ್ಲ! ಯಾವಾಗಲೂ ಒಂದೇ ಧ್ವನಿಯಲ್ಲಿ ಮಾತಾಡುವದೂ, ಮುಖಚರ್ಯೆಯ ಸ್ವಲ್ಪವೂ ಬದಲಿಸದಿರುವದೂ, ಅಭಿನಯ ಶಾಸ್ತ್ರದ ಲಕ್ಷ್ಯವೆಂದು ಇವರು ತಿಳಿದಿರದಂತೆ ತೋರುತ್ತಿತ್ತು.

ಸಂತೋಷಪ್ರಸಾದನಂತೂ ಯಾವಾಗಲೂ ಸಂತುಷ್ಟನೇ. ಮಾತುಗಳನ್ನು ನುಡಿಯುವ ಪದ್ಧತಿಯನ್ನು ಬದಲಿಸದೆ, ಕಟ್ಟಿ ಮೋರೆಯನ್ನು ಮಾಡಿಕೊಂಡು ನಿಂತರೆ ಸಂತೋಷಭಾವವನ್ನು ತೋರಿಸಿದಂತಾಗುವದೆಂದು ಇವನು ತಿಳಿದುಕೊಂಡಂತೆ ತೋರಿತು. ನ್ಯಾಯಾಧೀಶರು ತನ್ನಂತೆ ನಿರ್ಣಯಿಸಿದಾಗ ಅಸಂತೋಷವನ್ನು ತೋರಿಸಿದ್ದರೆ ಎಷ್ಟು ಒಳಿತಾಗುತ್ತಿತ್ತು?

ಬಸಂತ ಕುಮಾರನು ತನ್ನ ಮಾತಿನ ಶೈಲಿಯನ್ನೂ ಹಾವಭಾವಗಳನ್ನೂ ಸನ್ನಿವೇಶಕ್ಕನುಸರಿಸಿ ಬದಲಿಸುತ್ತಿದ್ದರೂ, ಅದೆಲ್ಲ ಸ್ವಾಭಾವಿಕವಾಗಿ ತೋರುವದು ಕಂಡುಬರಲಿಲ್ಲ. ಅವನಲ್ಲಿ ಕೃತ್ರಿಮತೆಯು ಹೆಚ್ಚು ತೋರುತ್ತಿತ್ತು. ಅವನ ನ್ಯಾಯಸಭೆಯಲ್ಲಿಯ ಅಭಿನಯವು ಹೊಗಳತಕ್ಕಂತಹದಾಗಿತ್ತು. ಮಿತ್ರನಿಗೆ ಪ್ರಾಣದ ಸಂಕಟಕ್ಕಾಗಿ ತೋರಿಸುವಾಗ ಅವನು ಆ ಸಮಯಕ್ಕೆ ಒಪ್ಪುವಂತೆ ತನ್ನ ಮುಖಮುದ್ರೆಯನ್ನು ಬದಲಿಸಿದ್ದನು.

ಶತೋದರಮಲ್ಲನು ಬಸಂತ ಕುಮಾರನಿಗಿಂತಲೂ ತನ್ನ ಭೂಮಿಕೆಯನ್ನು ಚನ್ನಾಗಿ ಮಾಡಿದನು. ಬೇರೆ ಬೇರೆ ರಸಗಳನ್ನು ಆಗಾಗ್ಗೆ ಚನ್ನಾಗಿ ವ್ಯಕ್ತಪಡಿಸಿ, ಪ್ರೇಮ, ಚಿಂತೆ, ಕ್ರೋಧ, ಮತ್ಸರ ಮೊದಲಾದ ಭಾವನೆಗಳಿಂದ ಬೇರೆಯಾಗುವ ಜನರ ಮುಖವನ್ನು ಚನ್ನಾಗಿ ಅಭಿನಯಿಸಿ ತೋರಿಸುತ್ತಿದ್ದನು. ಭಾವಗಳಂತೆ ಮಾತಾಡುವ ಶೈಲಿಯು ಯಾರಲ್ಲಿಯಾದರೂ ಇದ್ದುದಾದರೆ, ಅದು ಶತೋದರ ಮಲ್ಲನಲ್ಲಿಯೇ! ಒಟ್ಟಿನಲ್ಲಿ ನಾಟಕಕ್ಕೆ ಸ್ವಲ್ಪವಾದರೂ ಕಳೆ ಬಂದಿದ್ದು ಇವನಿಂದಲೇ.

ನರ್ಮದೆಯ ಮಾತಿನ ಸರಣಿಯೂ, ಮುಖಮುದ್ರೆಯೂ, ಹಾವಭಾವಗಳೂ ಸ್ತ್ರೀ ಭೂಮಿಕೆಗೆ ತಕ್ಕಂತೆ ಚಿತ್ತಾಕರ್ಷಕಗಳಾಗಿದ್ದವು. ರಂಗಭೂಮಿಯಲ್ಲಿ ಇವನು ಇದೇ ಸಲ ಕಾಲಿಟ್ಟಿದ್ದರೂ, ನಾಟ್ಯಕಲಾ ಕೋವಿದನಂತೆ ಕಂಗೊಳಿಸಿ, ಆಗಾಗ್ಗೆ ಪ್ರೇಕ್ಷಕರಿಗೆ ಪ್ರಮೋದವನ್ನೀಯುತ್ತಿದ್ದನು. ಇವನೇ ಮುಖ್ಯ ಭೂಮಿಕೆಯನ್ನು ವಹಿಸಿದ್ದರೆ ನಾಟಕವು ಬಹು ಪ್ರೇಕ್ಷಣೀಯವಾಗುತ್ತಿತ್ತು!

ಪ್ರೇಮಚಂದನ ಪಾತ್ರವನ್ನು ವಹಿಸಿದವರು ರಂಗಭೂಮಿಯ ಮೇಲೆ ಬಂದು ನಿಲ್ಲಲು ಹೇಗೆ ಧೈರ್ಯ ಮಾಡಿದರೋ ತಿಳಿಯದು! ಆ ಕಾಲಕ್ಕೆ ಒಪ್ಪುವ ಭಾಷಾಶೈಲಿಯು ಕೂಡ ಇವರಲ್ಲಿ ಇರಲಿಲ್ಲ. ಅಭಿನಯವನ್ನಾದರೂ ತೋರಿಸುತ್ತಿದ್ದರೆನ್ನಬೇಕೇ, ಅದೂ ಶೂನ್ಯ!

ಸಂಗನು ತನ್ನ ಭೂಮಿಕೆಯನ್ನು ಚನ್ನಾಗಿ ಕೊನೆಗಾಣಿಸಿದನು. ಅವನಲ್ಲಿ ಸ್ವಾಭಾವಿಕವಾದ ವಿನೋದವು ಕಾಣುತ್ತಿತ್ತು. ಅವನ ಮುಖಚರ್ಯೆಯು ರಸಕ್ಕನುಗುಣವಾಗಿ ಬದಲುಬದಲಾಗುತ್ತಿತ್ತು.

ಉಳಿದವರು ತಮ್ಮ ತಮ್ಮ ಪಾತ್ರಗಳನ್ನು ಸರ್ವಸಾಧಾರಣವಾಗಿ ಮಾಡಿದರು. ಅವರಲ್ಲಿ ಯಾವರೂ ಇನ್ನೂ ಹೆಚ್ಚು ಕಲಾಪ್ರವೀಣ್ಯವು ಬೇಕಾಗಿದ್ದಿತು. ಸ್ವಾಭಾವಿಕ ಗುಣಗಳು ಯಾರಲ್ಲಿಯೂ ತೋರಲಿಲ್ಲ. ಸಮಯಾಸಮಯಗಳನ್ನು ನೋಡದೆ ಕೈಕಾಲುಗಳನ್ನು ಅಲ್ಲಾಡಿಸಿ ಮಾಡಿದರೆ ಅಭಿನಯವಾಯಿತೆಂದು ಇವರು ತಿಳಿದುಕೊಂಡಂತೆ ತೋರಿತು. ಕೆಲವರಂತೂ, ತಾವು ಎಲ್ಲಿ ನಿಂತರೆ ಮತ್ತು ಹೇಗೆ ನಿಂತರೆ ತಮ್ಮ ಭೂಮಿಕೆಯು ಒಪ್ಪಬಹುದೆಂಬುದನ್ನು ಮರೆತೇಬಿಟ್ಟಿದ್ದರು.

ಕಟ್ಟಕಡೆಯಲ್ಲಿ ನರ್ಮದೆಯ ಪಾತ್ರವನ್ನು ವಹಿಸಿದವರಿಗೂ, ಮತ್ತು ಶಾರದಾದೇವಿಯ ಭೂಮಿಕೆಯನ್ನು ಮಾಡಿದವನಿಗೂ ಬಹುಮಾನವನ್ನು ಕೊಡಲ್ಪಟ್ಟವು. ಶಾರದಾದೇವಿಯಿಂತಲೂ ಉತ್ತಮವಾಗಿ ಅಭಿನಯಿಸಿ ತೋರಿಸಿದ ಶತೋದರಮಲ್ಲನಿಗೆ ಪದಕವು ದೊರೆಯಲಿಲ್ಲ. ಪ್ರಥಮ ಸನ್ಮಾನವು ಸ್ತ್ರೀಯರಿಗೇ ಸಲ್ಲತಕ್ಕದ್ದೆಂಬುದೇ ಇದಕ್ಕೆ ಕಾರಣವಾಗಿರಬಹುದೋ?

ವಿಶೇಷವೆಂದ ಸಂಗತಿಗಳೆಂದರೆ ಪಾತ್ರಗಳನ್ನು ವಹಿಸಿದವರೆಲ್ಲರೂ ಬಹುಶಃ ವಿಜಾಪುರ ಜಿಲ್ಲೆಯವರೇ ಆಗಿದ್ದರು. ವಿಜಾಪುರ ಜಿಲ್ಲೆಯಲ್ಲಿಯೇ ಹುಟ್ಟಿ ಬೆಳೆದು, ವಿಜಾಪುರ ಜಿಲ್ಲೆಯಲ್ಲಿಯೇ ದೇಹವನ್ನಿಟ್ಟ ವೈ. ವಾಸುದೇವಾಚಾರ್ಯರ ನೆನಪನ್ನು ಸ್ವಲ್ಪ ದಿವಸಗಳ ವರೆಗೆ ಅವರ ವಾಸಸ್ಥಳವೂ ಕಾರ್ಯಕ್ಷೇತ್ರವೂ ಆದ ಧಾರವಾಡದ ಕನ್ನಡಿಗರಿಗೆ ಮಾಡಿಕೊಟ್ಟದ್ದಕ್ಕಾಗಿ ಈ ತರುಣ ಹಾಗೂ ಉತ್ಸಾಹೀ ವಿದ್ಯಾರ್ಥಿಗಳನ್ನು ಎಷ್ಟು ಕೊಂಡಾಡಿದರೂ ಸಾಲದು.

ಜಾಹೀರ ನೋಟೀಸು

ಈ ಜಾಹೀರ ನೋಟೀಸಿನಿಂದಾ ಯಾವತ್ತೂ ಜನರಿಗೆ ತಿಳಿಸುವದೇನಂದರೆ —

ನಮ್ಮ ಜ್ಯೇಷ್ಠರಾದ ವಿಠ್ಠಲರಾವ ಮುರಹರರಾವ ಕುಲಕರ್ಣಿ ಡಾಕ್ಟರ ಸಾ|| ಇಲಕಲ್ಲ ಇವರಿಗೆ ಅಜಾರಿಯಾಗಿದ್ದರಿಂದ ಇವರ ಮೆಂದೂಕ್ಕೆ ತ್ರಾಸ ಆಗಿ ಇವರ ಮಾನಸಿಕ ಸ್ಥಿತಿಯು ಬರೋಬರಿ ಇಲ್ಲ. ಇಲಕಲ್ಲದಲ್ಲಿ ಇವರದೂ ನಮ್ಮದೂ ಕೂಡಿ ಏಕತ್ರ ಘರಾಣೇದ ಸ್ಥಾವರ ವ ಜಂಗಮ ಇಸ್ಟೇಟ ಇರುತ್ತದೆ. ಇವರ ಕಡೆಯಿಂದಾ ಸದರ ಇಸ್ಟೇಟನ್ನೂ ಯಾರೂ ಖರೀದಿ, ವಕ್ತಿ, ಬಕ್ಷೀಸ ಅಗೈರ ಮುಕ್ಯಾವ ರೀತಿಯಿಂದಾ ಬರಿಸಿಕೊಳ್ಳಬಾರದು. ಯಾರಾದರೂ ಬರಿಸಿಕೊಂಡರೆ ಅದು ಕಾಯದೇಶೀರ ಆಗಲಾರದು. ವ ನಮ್ಮ ಘರಾಣೇದ ಮೇಲೆ ಬದ್ಧ ಇರುವದಿಲ್ಲ. ತಾ|| ೨೭-—-೨೭

ನರಸಿಂಹರಾವ ಮುರಹರರಾವ ವಕೀಲ

ಇಲಕಲ್ಲ.

ಗುಣ ಬರದಿದ್ದರೆ ಹಣ ಪರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ

ಈ 'ಬಲವಂತ ಗುಟಿಕೆ'ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ (ಏಳೇ ದಿವಸ ತಕ್ಕೊಂಡು ಖಾತ್ರಿ ಮಾಡಿಕೊಳ್ಳಬಹುದು.) ಇದರಿಂದ ಮೈಯ ವಿವಗೆರೆಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೆ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿ ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ:— **ಎಸ್ ಬಿ. ಕದಮ್ ಮತ್ತು ಸನ್ಸ್.**
ಮು. **ಪೋಸ್ಟ** ನಿಪ್ಪಾಣಿ (ಜಿ. ಬೆಳಗಾವ.)

S.U.N. & CO.
BENARES CITY.

ಬನಾರಸ್ ರೇಶ್ಮೀ ಶೀರೆಗಳು.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೀ ಮಾಲುಗಳನ್ನು ಕೋರುವವರಿಗೆ ವ್ಹಿ. ಪಿ. ಮೂಲಕ ಕಳುಹಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕ ಉದ್ದ ಮೊಳ ೧೪ ಅಗಲ ಮೊಳ ೩, ಥಾನು ೧ಕ್ಕೆ ೧೫ ರಿಂದ ೫೦ ಜರಿ ಶೀರೆಗಳು ೧೬ ೧೮ ಮೊಳ ಉದ್ದ ೧ಕ್ಕೆ ರೂ. ೨೫ ರಿಂದ ೫೦ ರವರೆಗೆ. ಬುಟ್ಟಿದಾರ ಬನಾರಸ್ ಶೀರೆ ೧೬-೧೮ ಉದ್ದ ಮೊಳ ೭ ೧ಕ್ಕೆ ರೂ. ೫ ರಿಂದ ೩೦೦ ರ ವರೆಗೆ ಉಡುವ ಮಗುಟ ಉದ್ದ ೬-೮ ಮೊಳ ೧ಕ್ಕೆ ರೂ ೧೦ ರಿಂದ ೩೦ ರ ವರೆಗೆ ಜರೀದುಪ್ಪ ೬-೮ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೪೦ ರ ವರೆಗೆ. ಬಿಳಿ ರೇಶ್ಮಿ ಜರೀದುಪ್ಪಟೆ ೬ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೩೦ ರವರೆಗೆ ಸಾದಾ ಬಂಗಾಳ ರೇಶ್ಮಿ ಶಾಲು ೬ ಮೊಳ ಉದ್ದ ೩ ಮೊಳ ಅಗಲು ೧ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಪಟಿಕದ ೧೦೮ ರ ಸರ ೧ಕ್ಕೆ ರೂ. ೧ ರಿಂದ ೧೦ ರ ವರೆಗೆ ಸುದರ್ಶನ ೧ಕ್ಕೆ ಆಣೆ ೮ ರಿಂದ ರೂಪಾಯಿ 1¼ ರವರೆಗೆ ಜಗನ್ನಾಥ ಘಾಗಂಟೆ ೧ಕ್ಕೆ ರೂ. 2½ ರಿಂದ 15 ರ ವರೆಗೆ ಮತ್ತು ಬೇರೆ ಬೇಕಾದವುಗಳ ಕೆಟಲಾಗ ಇನಾಂ

ವಿಳಾಸ:- ಶಿರೋ ಎಸ್ ನಾರಾಯಣಾಚಾರ್ಯ
ಕಂಪನಿ ಚೌಕಂಬಾ ಕಾಶಿ ಬನಾರಸ್

ಕರ್ನಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ಸರಕಾರಿ ಸ್ಕೂಲಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡುವದಕ್ಕೆ ತಕ್ಕದ್ದಾದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಚರಖ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು. ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಲೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ॥ ಲಕ್ಷ್ಮೀಬಾಯಿ ಕುಂಭಕೋಣಂ,
ವ್ಯವಸ್ಥಾಪಕರು, ಕ ಮ. ವಿದ್ಯಾಲಯ, ಧಾರವಾಡ

ಅತೀ ಸುಲಭ ಕಂತುಗಳು! **ಫಲಿತಾಂಶವು ಹೆಚ್ಚು!**

ದಿ. ಹಿಂದುಸ್ಥಾನ ಕೋಆಪರೇಟಿವ್ಹ

ಇನ್ಸುರೆನ್ಸ ಸೊಸೈಟಿ ಲಿಮಿಟೆಡ್.

(ಬ್ರಾಂಚ್:- ಮುಂಬಯಿ) (ಹೆಡ್ ಆಫೀಸು:- ಕಲ್ಕತ್ತಾ)

ಈ ಕಂಪನಿಯು ಇಡೀ ಹಿಂದುಸ್ಥಾನದಲ್ಲೆಲ್ಲಾ ಪ್ರಾಮುಖ್ಯತೆಗೆ ಬಂದ ಸ್ವದೇಶಿ ಕಂಪನಿಗಳಲ್ಲಿ ಒಂದಾಗಿದೆ. ಜನರ ಸೌಕರ್ಯಕ್ಕಾಗಿ ಈ ವಿಜಾಪೂರ ಜಿಲ್ಹೆಯೊಳಗೆ ಇದರ ಒಂದು ಶಾಖೆಯನ್ನಿಟ್ಟಿರುವರು. ಕಂತುಗಳು ಅತೀ ಸುಲಭ ವಿದ್ದು, ಧಾರಾಳವಾಗಿ ಈ ಕಂಪನಿಯಲ್ಲಿ ನಿಮ್ಮ ಜೀವ ವಿಮೆಯನ್ನು ಇಳಿಸಬಹುದು.

ಇದರ ಮೂಲಧನವು ೩೭,೦೦೦,೦೦ ವಿದೆ. ೧೯೨೫-೨೬ ನೇ ವರ್ಷದಲ್ಲಿ ಸರಾಸರಿ ವರ್ಷಕ್ಕೆ ೧೦೦೦ ರೂ. ವಿಮೆಗೆ ರೂ. ೧೫ ರೂ. ದಂತೆ ಫಲಿತಾಂಶ ಕೊಟ್ಟಿರುವರು.

ಎಲ್ಲಾ ಕಡೆಯಲ್ಲಿ ಏಜಂಟರು ಬೇಕಿದ್ದಾರೆ.

ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿದಲ್ಲಿ ಹೆಚ್ಚಿನ ಮಾಹಿತಿ ತಿಳಿಯಬಹುದು,

ವಿಳಾಸ:—

ವಿಜಾಪೂರ. ೨೪—೭—೨೭ | **ಜಿ. ಆರ್. ಪಕ್ಕನಳ್ಳಿ ಆಂಡ ಬ್ರದರ್ಸ.**
ಚೀಫ ಏಜಂಟ್ಸ,
ವಿಜಾಪೂರ ಜಿಲ್ಹಾ.

ಸ್ಟ್ಯಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ಪಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸಹಿತ) ೧ ಪೌಂಡಿಗೆ ರೂ. ೧——
೨ ನೇ ,, ,, ,, ರೂ. ೧-೩-೦

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಶ್ರೀ ಭಾರತ ಜಗಪ್ರಸಿದ್ಧ ಜಗ ಜಾಹೀರ ನೋಟೀಸು.

ಮೃತ್ಯುಂಜಯ ಔಷಧದಿಂದ ಮೂರೇ ತಾಸಿನಲ್ಲಿ ಗುಣವಿಲ್ಲೆಂದು ಸಿದ್ಧ ಮಾಡಿದವರಿಗೆ-೫೦೦ ರೂ. ಬಕ್ಷೀಸ ಕೊಡುವೆವು.

ಮೂರೇ ತಾಸಿನಲ್ಲಿ ಗುಣ] ಅಶ್ಚರ್ಯಶಕ್ತಿ ರಸಾಯನ ತಕ್ಕೊಂಡು ಸಾಯುವವರೇ? **[ಕೆಲವೇ ದಿವಸಗಳಲ್ಲಿ ರೋಗಗಳು ಪೂರ್ಣ ಹೋಗುವದು.**

೫೭ ಶುದ್ಧ ವನಸ್ಪತಿಯಿಂದ ತಯಾರು ಮಾಡಿದ ಮೃತ್ಯುಂಜಯ ಔಷಧ.

ಉಪದಂಶ, ಗರ್ಮಿ (ಉಷ್ಣ) ಪರ್ಮೆ ಮುಂತಾ ಏಳು ಪ್ರಕಾರದ ರೋಗ ಬಹುದಿನ ನೆಲಗೊಂಡದ್ದು ಶರೀರ ಕತ್ತರಿಸಿ ಬಿದ್ದರೂ ಮೂರು ದಿವಸಗಳಲ್ಲಿ ಗುಣವಾಗುವದು.

ಇಂಥ ಪ್ರಕಾರ ರೋಗಗಳಿಂದ ಉತ್ಪನ್ನವಾಗುವ ವಿಕಾರ ಬಿಷ್ಣ ಪರಮಿ (ಉಪದಂಶ) ಗರ್ಮಿ ಚಟ್ಟಿ ಒದದ ಗಂಟು, ನಡಿನಲ್ಲಿಯ ಗಂಟು, (ವೃಷುಭು) ಅತಿಶಯ ಬಾವು, ಇಂದ್ರಿಯದ ಮೇಗೆ ತಿಡಿಕೆ, ಹೊಡತು, ರಕ್ತ ಕೀವು ಸುರಿಯೋಣ ಅದರಂತೆ ಸ್ತ್ರೀಯರ ಪ್ರದರ (ಕೆಂಪು ಬಿಳಿ ಸೆರಗು) ಹೊಲೆ ಕುಟ್ಟರೋಗ ಬೆಳೆಯೋಣ, ಕಡಕಿ ವಿಕಾರಗಳಿಂದ ಗರ್ಭಾಶಯ ಕೆಡೋಣ, ಮೂತ್ರ ಕಣ್ಣು ಕಾಲು ಉರಿಯೋಣ, ಕಾವು ಹೆಚ್ಚಾಗಿ ಮಧುಮೇಹ ಮೈಮೇಲೆ ಗರ್ಮಿ (ಉಷ್ಣ) ಒಡೆದು ಕೀವು ಹೊರಬಿದ್ದು ಅದರಿಂದ ವ್ರಣ (ಘಾಯ) ವಾಗಿ ಅಂಗಳಕ್ಕೆ ತೂತು ಬಿದ್ದು ಮೂಗು ಕೂದಲುವದೂ ಸೋರುವದೂ ಎಲ್ಲ ತರದ ಮೂಲವ್ಯಾಧಿ, ಹೊಟ್ಟೆ ಕಡತು ವಗೈರೆ ಕಾರಣಗಳಿಂದಾ ಜನನೇಂದ್ರಿಯ ಶಿಥಿಲತಾ ಅಥವಾ ನಪುಂಸಕತ್ವ ಮುಷ್ಟಿಮೈಥುನದಿಂದ ಆಗುವ ಪರಿಣಾಮ, ಸ್ವಪ್ನಾವಸ ಮೂತ್ರದಲ್ಲಿ ಧಾತು ಅಥವಾ ಬಿಳಿ ಬೀಳೋಣ, ವೀರ್ಯ ತೆಳುವಾಗೋಣ, ಸ್ತ್ರೀಗಮನದಲ್ಲಿ ಬೇಗ ಜಾರೋಣ. ತೀವ್ರ ವೀರ್ಯ ಪತನವಾಗೋಣ, ನಡಸೋಂಪು (ಸೂಲಿ) ನೋಯೋಣ, ಬೆನ್ನು ಬಿಗಿಯೋಣ, ವಾತವಿಕಾರ ಅವಿಚಾರದಿಂದ ಮಾಡಿದ ವೀರ್ಯನಾಶ ವಗೈರೆ ರೋಗಗಳ ಮೇಲೆ ಅಶಿಕ್ಷಿತ ಅಡಾಣೀ ಜನರ ಕಡೆಯಿಂದ ಪಾರಜ ಮತ್ತು ರಸಕಪೂರ, ಇಂಗಳೀಕ ಮುಂತಾದ ಸವಿಷ ಮತ್ತು ಅಪಕ್ವ ಧಾತು ರೂಪ ಪದಾರ್ಥ (ರಸಾಯನ) ಮತ್ತು ಅಪಕಾರಕ ವಸ್ತು ಸೇವಿಸುವದರಿಂದ ಮೈಯೊಳಗೆ ರಸಾಯನ ನಿಂತು ಅದರಿಂದ ಕಾಲು ಕೈ ಮುಡವಾಗಿ ಮತ್ತು ಕೈ ಕಾಲುಗಳಲ್ಲಿ ರಸಾಯನ ಒಡೆದು ಸ್ವತಃ (ತನಗೆ) ಮತ್ತು ಮುಂದಾಗುವ ತನ್ನ ಸಂತತಿಗೆ ಅನೇಕ ರೋಗವು ಉತ್ಪನ್ನವಾಗಿ ಅದರಿಂದ ಭಯಂಕರ ಪರಿಣಾಮ ಭೋಗಿಸಬೇಕಾಗುವದು. ಇಂಥ ಪ್ರಕಾರದ ರೋಗಗಳು ಬಹಳ ದಿವಸ ನೆಲಗೊಂಡಿದ್ದಾಗಲೀ ಅಥವಾ ಹೊಸದಾಗಿ ಆದುದ್ದಾಗಲೀ ಇಂಥ ರೋಗಗಳ ಮೇಲೆ ಈ ನಮ್ಮ ಮೃತ್ಯುಂಜಯ ಔಷಧ ಉಪಯೋಗ ಮಾಡಿದರೆ ತತ್ ಸಂಬಂಧಿ ಸಂಪೂರ್ಣ ರೋಗಗಳು ಶೀಘ್ರವಾಗಿ ಹೋಗಿ ಮೈಯೊಳಗೆ ಇದ್ದ ರಸಾಯನವು ನಾಶವಾಗುವದು. ಮತ್ತು ಆಶಕ್ತಿ ಹೋಗಿ ಮೈಯೊಳಗೆ ಶಕ್ತಿ ಬಂದು ಪ್ರಕೃತಿ ಉತ್ತಮವಾಗುತ್ತದೆ. ಒಂದು ಬಾಟ್ಲಿಗೆ [೫] ರೂಪಾಯಿ ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆಯು ಔಷಧದ ಸಂಗಡ ಉಚಿತ. ಒಂದು ಆಣೆ ಟಿಕೀಟು ಕಳಿಸಿದಲ್ಲಿ ನಮ್ಮ ಔಷಧದ ಪೂರ್ಣ ಕ್ಯಾಟಲಾಕ ಕಳಿಸುವೆವು.

(ತಮ್ಮ ಪತ್ತೆ:- ಪೂರ್ಣ ಬರೆಯಿರಿ.)

ಸುಪ್ರಸಿದ್ಧ ಡಾ|| ಆರ್. ಎಲ್ ಹಿರೇಮಠ ಆರೋಗ್ಯ ಮಂದಿರ ಆಯುರ್ವೇದ ವನೌಷಧಿ ೫೦೦೦, ಸಾವಿರ ಕಾರಖಾನೆ ಕಮತನೂರ ಪೋ|| ಶಂಕೇಶ್ವರ ಜಿ|| ಬೆಳಗಾಂವ

EAT KASHMIR FRUITS & NUTS!

ಕಾಶ್ಮೀರದ ಹಣ್ಣು ಹಂಪಲಗಳನ್ನು ಸೇವಿಸಿರಿ!

ತೆಳುವಾದ ತೊಗಟೆಯ ತಾಜಾ ಅಕ್ರೋಡಗಳೂ, ಹುರಿಸಿದ ಅಡವಿಯ ಸೇಬುಗಳೂ, (Hazelnuts) ೧೧ ಪೌಂಡಿಗೆ ರೂ. ೫—೮—೦; ತಾಜಾ ಕಾಗದೀ ಬದಾಮು; ಹರಳಿಲ್ಲದ್ದೂ, ಬಲು ಸವಿಯಾದ ಜಲ್ದಾರು (Apricots); ಅಂಜೂರಿ; ದ್ರಾಕ್ಷಿ; ಕಿಸಮಿಸು, ೧೧ ಪೌ. ಗೆ ೧೪ ರೂ.; ಕಮಲದ ಶುದ್ಧವಾದ ಜೇನತುಪ್ಪ, ೫|| ಪೌ ಗೆ ೮ ರೂ ; ಶುದ್ಧ ಕೇಶರ, ೧ ತೊಲೆಗೆ ೩ ರೂ. ಮಾಲು ಖರ್ಚ ಮಾಫ!

ಡಾರ ಬ್ರದರ್ಸ ಶ್ರೀನಗರ, ಕಾಶ್ಮೀರ.

Dar Bros Shrinagar, Kashmir.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! (ಟಪಾಲು ಹಾಸಲು ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಪ್ಪ ಜಾಬಶೆಟ್ಟಿ ಸ್ಟೇಶನರ್ಸ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ

೫೬. ಚಿನಾಬಜಾರ್. ಮದ್ರಾಸು



ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

೧೯೨೭ನೇ ಜನವರಿ ೧೫ರಿಂದ ಪ್ರಾರಂಭ.



ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ-

೧. ನೀವು ನಮಗೆ ರೂ ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್‌ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪುವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ್ ಗೋಲ್ಡ್" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ.

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ವಿಕರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು. ಅಥವಾ ವಿ. ಪಿ ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಳೆದುಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಅಸೂಯೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇವಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೬-೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್. ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರ ಸಿಟಿ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದ ತಿಂಗಳ ಬಗ್ಗೆ ನಾವು ಈ ದಾವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!!. ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂ. ೭

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ— ಸ್ವಾನ ಹೌಸ. ಪಿ. ಬಿ. ೫೦೮. ಪಿ. ಟಿ. ಮದ್ರಾಸ

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ ರಜಿಸ್ಟರ್ಡ್ ಪೋಕೆಟ್ ವ್ಹಾಚ್ ೧೫ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೇ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಜಿಸ್ಟರ್ಡ್ ೧೫ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವ್ಹಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ■

ಕ್ಯಾಪ್ಟನ್ ವಾಚ್ ಕಂ. ಪಿ, ಬಿ. ಮದ್ರಾಸ. ೨೨೫

ಇದೀಗ ಸಂತೋಷದ ಸಮಯ ! ಮಿತ್ರರು ಮಿತ್ರರಿಗೆ ಪಾರಿತೋಷಕಗಳನ್ನು ಕಳುಹಿಸುವರು ! ಮತ್ತು ಆನಂದದ ಉದ್ವೇಶಗಳನ್ನು ಹೊರಗೆಡುವರು!!

ಈ ಸಕಾಲದಲ್ಲಿಯ ಮಹತ್ವವಾದ ಪಾರಿತೋಷಕವೇ ಹಿಂದುಸ್ಥಾನದಲ್ಲಿಯ ಅತ್ಯಂತ ಮಹತ್ವದ ಪಾರಿತೋಷಕವು !

ದಸರೆಯ ಪಾರಿತೋಷಕವು !

Littles Oriental Balm.

ಲಿಟ್ಲರ ಓರಿಯಂಟ್ಲ ಬಾಮು.

ನೋವುಗಳಿಂದ ಬಳಲುವವರಿಗೆ ಇದೊಂದು ಒಳ್ಳೇ ಆಶಾಜನಕವಾ ಹಾಗೂ ಕಷ್ಟನಿವಾರಣೆಯ ಉಪಾಯವು !

ತಲೆನೋವು, ಕಸ, ಸಂಧಿವಾತ, ಅರ್ಧಾಂಗವಾಯು, ಟೊಂಕಶೂಲೆ, ನರಗಳ ಅಶಕ್ತತೆ ಮೊದಲಾದ ಎಲ್ಲ ವಾತವಿಕಾರಗಳೆಂಬ ರಾಕ್ಷಸರನ್ನು ಧ್ವಂಸಮಾಡಿ ಅವುಗಳ ಪೀಡೆಯಿಂದ ಮುಕ್ತಮಾಡುವ ವಜ್ರಾಯುಧವೆಂದರೆ ಇದೇ!

OBTAINABLE AT ALL CHEMISTS AND STORES.

ಎಲ್ಲ ಔಷಧಿ ವ್ಯಾಪಾರಿಗಳಲ್ಲಿ ದೊರೆಯುತ್ತದೆ.

Buy Your Gift
TO-DAY!

ಈ ದಿನವೇ
ನಿಮ್ಮ ಪಾರಿತೋಷಕವನ್ನು ಕೊಳ್ಳಿ!

(ಇದು ಶ್ರೀ ಕನ್ನಡ ನವಜೀವನಪ್ರವರ್ತಕ ಪತ್ರವಾಗಿದೆ)

[illegible] — ಮನು

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ಅಶ್ವಿನ ಬದ ೧೬ ಶಕೆ ೧೮೪೯ ತಾ॥ ೧೬-೧೦-೧೯೨೭. Date 16—10—1927. | ಸಂಚಿಕೆ ೨೭.

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಚ್ಚುವುದು ಮತ್ತು ಜೋಡಿಸುವುದು ಅವುಗಳೊಳಗಿನ ಕೆಟ್ಟುಹೋದ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಿಂಜರಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತೆ ಇದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೇ ಬರೆದುಕೊಳ್ಳಿರಿ!

ವಿಳಾಸ—ಕುಲಕರ್ಣಿ ಮೋಟಾರ ಸ್ಕೂಲ.
೪೯೫ ರವಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.

ಹೊಸ ಟ್ರೇಡಲ್.

ಇದೀಗ ನಾವು ಯುರೋಪದಿಂದ ಹೊಸ ಟ್ರೇಡಲ್ ತರಿಸಿದ್ದೇವೆ ಇದು ಫೂಲಸ್ಕ್ಯಾಪ ಹಾಳೆಯ ಆಕಾರದ್ದು, ಬೆಲೆ ೬೫೦ ರೂ. ಮಾತ್ರ! ಕರ್ನಾಟಕದಲ್ಲಿಯ ಮುದ್ರಕರಿಗೆ ಇವು ಬೇಕಿದ್ದರೆ ನಾವು ತರಿಸಿ ಕೊಡುವೆವು! ಈ ಯಂತ್ರವನ್ನು ನೋಡತಕ್ಕವರು ನಮ್ಮಲ್ಲಿಗೆ ಬಂದು ನೋಡಬಹುದು. ಇದಲ್ಲದೇ ರಾಯಲ್ ಆಕಾರದ ಒಂದು ಮುದ್ರಣದ ಯಂತ್ರವು ನಮ್ಮಲ್ಲಿ ಮಾರಲಿಕ್ಕಿದೆ ಇದು ಹಳೆಯದಾದರೂ ಉತ್ತಮ ಕೆಲಸ ಕೊಡುತ್ತದೆ.

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಮಯೂರ ಶಿಖಾ

ದುರ್ಲಭವಾದ ವನಸ್ಪತಿಯು. ೨೦ ತೋಲೆಗೆ ೧ ರೂ. ವೈದ್ಯರಿಗೂ, ವ್ಯಾಪಾರಸ್ಥರಿಗೂ, ಅನೇಕ ಅಪೂರ್ವವಾದ ವನಸ್ಪತಿಗಳು ದೊರಕುವವು.

ವೈದ್ಯ—ವಾದಿರಾಜ ಜಹಗೀರದಾರ
ಮು. ಇಲಕಲ್ಲ (ವಿಜಾಪೂರ).

ವಾಙ್ಮಯ ಪರಿಚಯ.

ಕನ್ನಡ ಶಾಲಾ ಪತ್ರಕದ ವಿಮರ್ಶೆ.

(ಲೇಖಕ:-ಗಂಗಾಧರ)

ಈಗ ೬೪ ವರುಷಗಳಿಂದ "ಕನ್ನಡ ಶಾಲಾ ಪತ್ರಕ"ವೆಂಬ ಹೆಸರಿನದೊಂದು ಮಾಸಪತ್ರಿಕೆಯು ಧಾರವಾಡ ಗಂಡುಮಕ್ಕಳ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರಿಂದ ಪ್ರಸಿದ್ಧಿಸಲ್ಪಡುತ್ತಿರುವದಷ್ಟೇ? ಈ ಪತ್ರಿಕೆಯು ಸರಕಾರದಿಂದ ಪ್ರಸಿದ್ಧಿಸಲ್ಪಡುವದೆಂದೂ, ಅದನ್ನು ಪ್ರತಿಯೊಂದು ಶಾಲೆಯ ಮಾಸ್ತರರು ತರಿಸಿಕೊಂಡು ವರ್ಗಣಿಯನ್ನು ಕೊಡಲಿಕ್ಕೆ ಬೇಕೆಂದೂ ಸಾಧಾರಣವಾಗಿ ತಿಳುವಳಿಕೆಯು ಮೊದಲು ಇದ್ದಿತು. ನಮಗೆ ತಿಳಿದ ಮಟ್ಟಿಗೆ, ಅದರಲ್ಲಿ ಈಗ ೫—೬ ವರ್ಷಗಳ ಹಿಂದೆ ಶಿಕ್ಷಣ ಸುಧಾರಣೆ, ಶಿಕ್ಷಣ ಪದ್ಧತಿ, ಭಾಷೆಯ ಅಭಿವೃದ್ಧಿ ಮೊದಲಾದ ವಿಷಯಗಳೂ, ನುರಿತ ಶಾಲಾಧ್ಯಾಪಕರ ಚರ್ಚಾತ್ಮಕ ಲೇಖನಗಳೂ ಪ್ರಕಟವಾಗುತ್ತಿದ್ದವು. ಶ್ರೀ. ಜೋಶಿ ವಿನಾಯಕರಾಯರು ಕಾಲೇಜದ ಪ್ರಿನ್ಸಿಪಾಲರಿದ್ದಾಗ್ಗೆ ಈ ಪತ್ರಿಕೆಯು ಒಳ್ಳೇ ಅಭಿವೃದ್ಧಿಯಲ್ಲಿತ್ತು. ಕನ್ನಡ ಭಾಷಾಭಿವೃದ್ಧಿಯ ಕಡೆಗೆ ಅವರ ದೃಷ್ಟಿಯು ವಿಶೇಷವಾಗಿದ್ದದರಿಂದ, ಉತ್ತಮೋತ್ತಮವಾದ ಲೇಖನಗಳನ್ನು ಅವರು ಪ್ರಕಟಿಸುತ್ತಿದ್ದರು. ಶ್ರೀ ಮಹಿಷಿಯವರ ಕಾಲದಲ್ಲಿಯೂ ಕೆಲಮಟ್ಟಿಗೆ ಅದರಲ್ಲಿ ಜೀವಕಳೆಯು ಇತ್ತು.

ಆದರೆ, ಇಂದಿನ "ಶಾಲಾಪತ್ರಿಕೆ"ಯನ್ನು ನೋಡಿದರೆ ನಮಗೆ ತೀರ ನಿರಾಶೆಯುಂಟಾಗುತ್ತದೆ. ಶಿಕ್ಷಣ, ಭಾಷಾ ವಿಷಯಗಳ ಸುಧಾರಣೆಯ ಬಗ್ಗೆ ಅದರಲ್ಲಿ ಮಾತುಕಥೆಗಳೇ ಇರುವದಿಲ್ಲ. ಕೆಲವು ಪ್ರಕಟಣೆಗಳು, ಸಂಪಾದಕರ ಪುಸ್ತಕಗಳ "ಜಾಹೀರಾತು", ಮುಲ್ಕೀಪರೀಕ್ಷೆಯ ಪರಿಣಾಮ, ಟ್ರೇ. ಕಾಲೇಜಿನ ವಿದ್ಯಾರ್ಥಿಗಳ ಪರೀಕ್ಷೆಯ ಪರಿಣಾಮ, ಬಹಳಾದರೆ ಯಾವದೊಂದು ಪುಸ್ತಕದ (ಮುಂದೆ ಪ್ರಕಟಿಸಲಿರುವ ಹಾಗೂ ಗ್ರಂಥಕಾರರಿಗೆ ಅನುಕೂಲವಾಗುವ) ಕೆಲವು ಪುಟಗಳು, ಈ ವಿಷಯಗಳಿಂದ ಅದು ತುಂಬಿಹೋಗಿರುತ್ತದೆ ಇಂಥ ಪತ್ರಿಕೆಯನ್ನು ಶಿಕ್ಷಕರು ಓದಿ ಏನು ಲಾಭ ಹೊಂದಬೇಕೆಂಬುದನ್ನು ಈಗಿನ ಸಂಪಾದಕರು ಹೇಳುವರೋ? ಆದರೂ, ವರುಷಕ್ಕೊಮ್ಮೆ ೨ ರೂಪಾಯಿ ವರ್ಗಣಿಯನ್ನು ಮಾತ್ರ ಜಡಿಬಡಿದು ತೆಗೆದುಕೊಳ್ಳುವರು, ಇದೆಲ್ಲಿಯ ನ್ಯಾಯವು?

ಮಾದರಿಗಾಗಿ ೧೯೨೭ನೇ ಆಗಷ್ಟ ತಿಂಗಳ ಶಾಲಾಪತ್ರಿಕೆಯನ್ನು ನಾವು ವಿಮರ್ಶಿಸುವಾ. ಅದರಲ್ಲಿ (೧) ಸ್ಫುಟವಿಚಾರ, (೨) ಹೊಸ ಶೋಧಗಳ ಅಗತ್ಯ, (೩) ಹಿಂದುಸ್ತಾನದ ಇತಿಹಾಸ- ಎಂಬ ಮೂರು ವಿಷಯಗಳು ಕಂಡುಬರುತ್ತವೆ. ಸ್ಫುಟವಿಚಾರದಲ್ಲಿ ಏನಾದರೂ ಸಂಪಾದಕರ ವಿಶೇಷ ವಿಚಾರಗಳಿರಬಹುದೆಂದು ನಾವು ತೆರೆದು ನೋಡಿದೆವು! ಅದರಲ್ಲೇನಿದೆ! ಕೇವಲ ಸ್ವಾರ್ಥಪರವಾದ ನಾಲ್ಕು ಮಾತುಗಳು!! ಟ್ರೇನಿಂಗ ಕಾಲೇಜವು ಉಳಿಯಬೇಕೆಂದು, ಸಂಪಾದಕರು ಪ್ರಯತ್ನಪಟ್ಟು ನಿರಾಶರಾಗಿ, ದಿ|| ಬ|| ರೊದ್ದರಾಯರು ಸರಕಾರಕ್ಕೆ ಒಂದು ಪತ್ರವನ್ನು ಬರೆದಿದ್ದರಿಂದಲೇ ಟ್ರೇನಿಂಗ ಸ್ಕೂಲು ಪುನಃ ಪ್ರಾರಂಭವಾಯಿತೆಂಬ ಸಂಗತಿಯು! ಪ್ರಾರಂಭವಾಗಲೆಂದೇ ನಾವಾದರೂ ಅನ್ನುತ್ತಿದ್ದೆವು; ಅದರಂತೆ ಪ್ರಾರಂಭವಾದ ಬಗ್ಗೆ ನಮಗೂ ಅತಿಶಯ ಆನಂದವಾಗಿದೆ. ಆದರೆ ನಮಗಿಂತಲೂ, ಅಲ್ಲಿ ಕಲಿಯುವ ವಿದ್ಯಾರ್ಥಿಗಳಿಗಿಂತಲೂ ಹೆಚ್ಚು ಆನಂದವು ಈ ಸಂಪಾದಕ ಮಹಾಶಯರಿಗೆ ಆಗಿರುವದೆಂಬುದು ಕಳೆದ ಹಾಗೂ ಈಗಿನ ಸಂಚಿಕೆಗಳ ಮೇಲಿಂದ ಸ್ಪಷ್ಟವಾಗಿ ಕಂಡು ಬರುವದು. ದಿ|| ಬ|| ರೊದ್ದರಾಯರ ಸ್ತುತಿಯೆಷ್ಟು? ತಮ್ಮ ಮಿತ್ರರಿಂದ ಬಂದ ಪತ್ರಗಳ ಅಭಿನಂದನವೆಷ್ಟು? ಗುರುತಿಲ್ಲದ ಶಿಕ್ಷಕ ಮಂತ್ರಿಗಳನ್ನು ಹೊಗಳುವದೆಷ್ಟು? ಮುಂದೆ ಮಾಡಬೇಕಾದ ಕೆಲಸಗಳ ಬಗ್ಗೆ ಸ್ಕೂಲು ಬೋರ್ಡುಗಳಿಗೆ ಉಪದೇಶವೆಷ್ಟು? ಆದರೆ, ರೊದ್ದರಾಯರ ಪತ್ರವು "...ಚಿಪುಟ ನೈವೇದ್ಯ ತೋರಿಸಿದಂತೆ" ಇರುವದರಿಂದ, ಅವರ ಮತದ ನಿಷೇಧವನ್ನು ಅನೇಕ ಕಡೆಗಳಲ್ಲಿ ಶಿಕ್ಷಕರೂ ಜನರೂ ಕೂಗಿಯೇ ಮಾಡುತ್ತಿರುವರು. ಇದು ಸಂಪಾದಕರ ಕಿವಿಯಲ್ಲಿ ಇನ್ನೂ ವರೆಗೂ ಬಂದಂತೆ ಕಾಣುವದಿಲ್ಲ. ಬಂದು ಮೇಲೆ ಬಂದಿದ್ದು, ಅದನ್ನು ಬುದ್ಧಿ ಪುರಸ್ಸರವಾಗಿ ಪ್ರಕಟ ಮಾಡದೇ ಇರುವದಾದರೆ, ಇದರಲ್ಲಿ ಏನೋ ಚಮತ್ಕಾರವಿರಬಹುದೆಂದು ತೋರುತ್ತದೆ. ಬಹುಜನ ಸಮಾಜಕ್ಕೆ ಅದರಲ್ಲಿ ಬಹಿಷ್ಕಾರಂತಿದ್ದ ಬಡ ಶಿಕ್ಷಕರಿಗೆ ಅಕಲ್ಯಾಣವಾಗುವಂಥ ಕೆಲಸವನ್ನು ದಿ|| ಬ|| ರೊದ್ದರಾಯರು ಹಿಂದಕ್ಕೆ ಎಂದೂ ಮಾಡಿರುವದಿಲ್ಲ. ಆದರೆ ಈಗ ಶಿಕ್ಷಕರ ಪಗಾರವನ್ನು ಕಡಿಮೆ ಮಾಡಿ ದುಡ್ಡು ಉಳಿಸಿಕೊಂಡು, ಆ ದುಡ್ಡಿನಿಂದ ಟ್ರೇನಿಂಗ ಕಾಲೇಜವನ್ನು ಪುನಃ ಪ್ರಾರಂಭ ಮಾಡಬೇಕೆಂದು ಅವರು ಯಾರಾದರೂ ಕೆಲವು ಮಿತ್ರರ ಅಥವಾ ಅಪ್ತೇಷ್ಟರ ಜುಲುಮೆಯಿಂದ ಹೀಗೆ ತಮ್ಮ ಮತವನ್ನು ಸರಕಾರಕ್ಕೆ ತಿಳಿಸಿರಬಹುದೆಂದು ಅನುಮಾನವಾಗುತ್ತದೆ. ಅವರ ಈ ಮತವನ್ನು ಜನರು ನಿಷೇಧ ಮಾಡಿದ ಬಗ್ಗೆ ಸಂಪಾದಕರು ಚಕಾರ ಶಬ್ದವನ್ನು ಬರೆಯದಿರುವದನ್ನು ನೋಡಿದರೆ, ಸಂಪಾದಕರಿಗೂ, ರೊದ್ದರಾಯರ ಪತ್ರಕ್ಕೂ ಏನೋ ಸಂಬಂಧವಿರಬಹುದೆಂಬ ಅನುಮಾನವು ಹೊರಡುತ್ತದೆ.

ಸ್ಥಿತಿಯು ಏನೇ ಇರಲಿ; ಶಾಲಾಪತ್ರಕದ ಸಂಪಾದಕರಿಗೆ ಇದೊಂದು ವಿಷಯದ ಹೊರತು ಬೇರೆ ಮಹತ್ವದ ವಿಷಯಗಳನ್ನು ಬರೆಯಲು ಏಕೆ ಅವಕಾಶವಾಗಲಿಲ್ಲವೋ ತಿಳಿಯದು! ಪ್ರಾಥಮಿಕ ಶಿಕ್ಷಣ, ಕನ್ನಡ ಭಾಷೆಯ ಅಭಿವೃದ್ಧಿ, ಕರ್ನಾಟಕದ ಏಕೀಕರಣ, ಇವೇ ಮೊದಲಾದ ಅನೇಕ ಮಹತ್ವದ ವಿಷಯಗಳನ್ನು ಕುರಿತು ಸ್ಫುಟವಿಚಾರಗಳನ್ನು ಬರೆದು, ತನ್ಮೂಲಕ ಶಿಕ್ಷಕರಲ್ಲಿ ಶಿಕ್ಷಣ ಜಾಗ್ರತಿ, ಭಾಷಾಭಿಮಾನ ಇವುಗಳನ್ನು ಹುಟ್ಟಿಸಲಿಕ್ಕೆ ಯತ್ನ ಮಾಡುವದು ಅವರ ಕರ್ತವ್ಯವಲ್ಲವೇ?

ನವಕರ್ನಾಟಕ— ವಿಜಾಪುರದಲ್ಲಿ ದಸರೆಯ ಸುಮುಹೂರ್ತದಲ್ಲಿ ಜನಿಸಿದ ಹೊಸ ವಾರಪತ್ರಿಕೆ. ಅನುಭವಿಕರೂ, ಕರ್ನಾಟಕದ ನಿಸ್ಸೀಮ ಭಕ್ತರೂ, ಕನ್ನಡ ಸಂಸ್ಕೃತಿಯ ಹೊಸ ಚಳವಳದ ಪುರಸ್ಕರ್ತರೂ ಆದ ರಾವಸಾಹೇಬ ಹಳಕಟ್ಟಿಯವರು ಇದರ ಸಂಪಾದಕರು. ಮುನಸಿಪಾಲಿಟಿ, ಲೋಕಲ್‌ಬೋರ್ಡ, ಕಾಯಿದೆ ಮಂಡಲ ಮೊದಲಾದವುಗಳು ಸಾರ್ವಜನಿಕ ಕಲ್ಯಾಣ ಮಾಡಲು ಎಷ್ಟೊಂದು ಯೋಗ್ಯವಾದ ಸ್ಥಾನಗಳಲ್ಲವೆಂಬುದನ್ನು ಸ್ವತಃ ತಮ್ಮ ಅನುಭವದಿಂದ ಕಂಡು ಹಿಡಿದು, "ನವಕರ್ನಾಟಕ"ದ ಮುಖಾಂತರವಾಗಿ ಕರ್ನಾಟಕದ ಸೇವೆಯನ್ನು ಮಾಡಲು ಬದ್ಧಕಂಕಣರಾಗಿದ್ದುದು ಹೆಚ್ಚಿನ ಸಂತೋಷದ ಮಾತು. ರಾವಸಾಹೇಬ ಹಳಕಟ್ಟಿಯವರಂತಹ ನಿಸ್ಪೃಹರಾದ ವಯೋವೃದ್ಧ ಹಾಗೂ ಜ್ಞಾನವೃದ್ಧರ ಸಂಪಾದಕತ್ವದಲ್ಲಿಯ ಈ ಪತ್ರಿಕೆಯು ಕನ್ನಡಿಗರ ಪ್ರೀತಿ ವಿಶ್ವಾಸಗಳಿಗೆ ಪಾತ್ರವಾಗಿ ಕರ್ನಾಟಕಕ್ಕೆ ಕಲ್ಯಾಣವನ್ನುಂಟು ಮಾಡುವದಾಗಿ ಆಶಿಸುತ್ತೇವೆ. ಈ ಪತ್ರಿಕೆಯ ವಾ|| ಚಂದಾ ೩—೧೨—೦. ಪ್ರತಿ ಗುರುವಾರ ಪ್ರಕಟವಾಗುತ್ತದೆ. ಈಗಂತೂ ಹೊಳಪಿನ ಕಾಗದಗಳಿವೆ. ಭಾಷೆಯ ಶುದ್ಧತೆಯ ಕಡೆಗೆ 'ನವಕರ್ನಾಟಕ'ವು ಅಲಕ್ಷ ಮಾಡಬಾರದಾಗಿ ನಮ್ಮ ಸೂಚನೆ.

ಕರ್ನಾಟಕ ಧುರೀಣ:— ಕುಮಟೆಯ 'ಕಾನಡಾ ಧುರೀಣ'ನ ಹೊಸ ನಾಮಕರಣವಿದು. ಕನ್ನಡಿಗರು ಅನೇಕ ದಿವಸಗಳಿಂದ ಸೂಚಿಸುತ್ತ ಬಂದುದನ್ನು ಈಗ್ಗೆ ಈ ಪತ್ರಿಕೆಯ ಚಾಲಕರು ಕೃತಿಯಲ್ಲಿ ತಂದಿದ್ದಾರೆ, ಕನ್ನಡಿಗರಿಗೆಲ್ಲ ಇದರಿಂದ ಆನಂದವಾಗುವದರಲ್ಲಿ ಸಂದೇಹವಿಲ್ಲ. ಅಖಂಡ ಕರ್ನಾಟಕದ ಜನತೆಯ ಸೇವೆಯಲ್ಲಿ ಈಗಾಗಲೇ ನಿರತನಾದ ಈ 'ಧುರೀಣ'ನು ಇನ್ನೂ ಹೆಚ್ಚಾಗಿ ಕನ್ನಡಿಗರ ಪ್ರೀತಿಗೆ ಪಾತ್ರನಾಗುವನಾಗಿ ಕೋರುತ್ತೇವೆ ಉತ್ತರ ಕರ್ನಾಟಕದ ಯಾವ ಪತ್ರಿಕೆಗಳೂ ಸಂಪಾದಕರ ಹೊಟ್ಟೆಗೆ ಹಿಡಿ ಹಿಟ್ಟನ್ನು ಕೊಡುವದಿಲ್ಲ! ಹಾನಿಯೂ ಅವುಗಳಿಗೆ ತಪ್ಪಿಲ್ಲ ಆದರೆ 'ಕರ್ನಾಟಕ ಧುರೀಣ'ನು ಇದಕ್ಕೆ ಅಪವಾದವಾಗಿರುವನೆಂಬುದನ್ನು ಅವನ ಮುಖದಿಂದಲೇ ಕೇಳಿ, 'ಕನ್ನಡಿಗ'ನು ಹಿರಿ ಹಿರಿ ಹಿಗ್ಗಿರುವನು,

ಕನ್ನಡಿಗ.

ಬಾಗಲಕೋಟೆ:- ಕನ್ನಡಿಗ ಆಶ್ವೀನ ಬಹುಳ ೬ ಶಕೆ ೧೮೪೯

ಸಂಪಾದಕರ ಭೂಮಿಕೆ

(೬೦)

ನನ್ನ ಮನಸಿನ ಮೋಣಮಾಡಿ ಕಟ್ಟುವೆನಾನು ।
ನಿನ್ನ ಬೆಸನಮಾಡಿದಂಥ ಮುಕ್ಕಳ ಬೊಮ್ಮ।
ಚಿನ್ನದಾದರು ಚಿನ್ನ ಮೋಣಬಸ್ತಿಯ ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ಪೀಠಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹನೆಂದು ತಿಳಿಯೊ
—ಅಂಬಿಕಾತನಯ ದತ್ತ

ಹಿಂದುಸ್ಥಾನೀ ಸೇವಾದಲದ ಶಿಕ್ಷಣ ಶಿಬಿರವು ಇದೇ ತಾ॥ ೩೦ ರಲ್ಲಿ ಬಾಗಲಕೋಟೆಯಲ್ಲಿ ಪ್ರಾರಂಭವಾಗುವದಷ್ಟೇ? ಆ ಬಗ್ಗೆ ಪೂರ್ವಸಿದ್ಧತೆಯು ಬಹು ದಕ್ಷತೆಯಿಂದ ಸಾಗಿದೆ. ಈ ಶಿಬಿರದಲ್ಲಿ ಕರ್ನಾಟಕದ ತರುಣರು ಹೆಚ್ಚಾಗಿ ಸೇರಿ ತಮ್ಮ ಶರೀರ ಸಾಮರ್ಥ್ಯವನ್ನು ಬೆಳಿಸಿ, ಅಚ್ಚುಕಟ್ಟಾದ ಶಿಸ್ತಿನ ಪದ್ಧತಿಯನ್ನೂ ಕಲಿತುಕೊಳ್ಳಬೇಕು. ಈಗಿನ ತರುಣರಲ್ಲಿ ದೌರ್ಬಲ್ಯವು ಮನೆ ಮಾಡಿಕೊಂಡಿದೆ. ಚಹ-ಸಿಗರೇಟ-ಚುಟ್ಟಾ-ಬೀಡಿ-ತಂಬಾಕುಗಳಿಗೆ ಮನಸೋತ ಈಗಿನ ತರುಣರಲ್ಲಿ ಸಾರ್ವಜನಿಕ ಕಲ್ಯಾಣದ ಕಾರ್ಯಕ್ಕಾಗಿ ಅಷ್ಟೊಂದು ಲವಲವಿಕೆಯಿಲ್ಲ. ಲವಲವಿಕೆಯುಳ್ಳ ಕೆಲವರಲ್ಲಿ ಅಚ್ಚುಕಟ್ಟಾದ ಕಾರ್ಯ ಮಾಡುವ ಶಿಸ್ತಿಯಿಲ್ಲ. ಈ ಬಗೆಯ ಪರಿಸ್ಥಿತಿಯು ಅಳಿದುಹೋಗಿ, ಸಮಾಜ, ದೇಶಸೇವೆಗಳಿಗಾಗಿ ತರುಣರು ಶಿಸ್ತು ಹೊಡೆದು ನಿಲ್ಲಬೇಕು; ಹಾಗೂ, ಹೀಗೆ ನಿಲ್ಲುವ ಬಂಟರು ಎಲ್ಲ ರೀತಿಯಿಂದಲೂ ಸಜ್ಜಾಗಿರಬೇಕು. ಎಂಬ ಪವಿತ್ರೋದ್ದೇಶದಿಂದ ಈ ಶಿಬಿರವು ಪ್ರಾರಂಭಿಸಲ್ಪಡುವದು. ಸಾರ್ವಜನಿಕ ಕಾರ್ಯಮಾಡಬೇಕೆನ್ನುವ ತರುಣರೆಲ್ಲರೂ ಈ ಶಿಕ್ಷಣ ಹೊಂದತಕ್ಕದ್ದು ಅವಶ್ಯವಾದುದು. ಬಾಗಲಕೋಟೆಯ ತರುಣರಿಗಂತೂ ಎಲ್ಲ ಸೌಕರ್ಯವಿದೆ ಯಾರಿಗೆ ೨೦ ರೂ. ಕೊಟ್ಟು, ಅಲ್ಲಿ ಮುಂಜಾವಿನಿಂದ ಸಂಜೆಯವರೆಗಿರುವದು ಶಕ್ಯವಿಲ್ಲವೋ, ಅವರಿಗೆ ಸಹ ಅನುಕೂಲವಾಗಬೇಕೆಂದು, ಪ್ರತ್ಯೇಕವಾದ ವರ್ಗಗಳನ್ನು ತೆರೆಯುವ ಏರ್ಪಾಡಾಗಿದೆ. ಈ ವರ್ಗಕ್ಕೆ ಒಂದೇ ರೂಪಾಯಿ ಕೊಟ್ಟರೆ ತೀರಿತು. ಆದುದರಿಂದ ಬಾಗಲಕೋಟೆಯಲ್ಲಿಯ ಹುಡುಗರೂ ಪ್ರಬುದ್ಧರೂ ಈ ಸೌಕರ್ಯಗಳ ಲಾಭವನ್ನು ಸಂಪೂರ್ಣವಾಗಿ ಪಡೆದುಕೊಳ್ಳಬೇಕು

ಕರ್ನಾಟಕ ಭೂಷಣ ರಾಜಲಗಿ ಶ್ರೀನಿವಾಸರಾಯರು ವಿಜಾಪುರದಲ್ಲಿ ನವರಾತ್ರಿಯ ಉತ್ಸವದಲ್ಲಿ ಮಾತನಾಡುವಾಗ "**ನಿಮ್ಮ** ಕರ್ನಾಟಕ" "**ನಿಮ್ಮ** ಕನ್ನಡ ಭಾಷೆ" "ನಿಮ್ಮ ಕನ್ನಡದ ರಾಜರು" ಎಂಬದಾಗಿ ಹೇಳಿದರೆಂದು ಪ್ರಕಟವಾಗಿದೆ. **ಸ್ವತಃ ತಾವೇ ಕನ್ನಡಿಗರೂ** ಕರ್ನಾಟಕದಲ್ಲಿ ಹುಟ್ಟಿಬೆಳೆದವರೂ ಆದ ಶ್ರೀನಿವಾಸರಾಯರು ಹೀಗೆ ಸಂಭೋದಿಸುವದನ್ನು ಕಂಡು ಆರಿಗೂ ಆಶ್ಚರ್ಯವಾಗದೇ ಇರದು. ಕರ್ನಾಟಕದ ಇತಿಹಾಸ, ಸಂಸ್ಕೃತಿ, ಮಹಾತ್ಮೆಗಳ ಅರಿವು ಚನ್ನಾಗಿ ತಮಗಿಲ್ಲದಿದ್ದರೆ, ಅದನ್ನು ಸಂಪಾದಿಸುವದರ ಬದಲು, ತಮ್ಮ ಕರ್ನಾಟಕದ ಇತಿಹಾಸದ ಅಜ್ಞಾನದ ಮೂಲಕ ಇತರರ ಮೇಲೆ ಹರಿಹಾಯುವದು ಮಾಯಿಂದರಿಗೆ ಭೂಷಣವಲ್ಲ. ಯಾವ ವಿಷಯದಲ್ಲಿ ನೋಡಿದರೂ ಶ್ರೀ ಶ್ರೀನಿವಾಸರಾಯರಿಗೆ ಅನ್ಯರ ಸಂಗಡ ಮತೈಕ್ಯವಿಲ್ಲ ಅವರು ಒಳಗಣ್ಣಿನಿಂದ ಕೊಂಚ ಆತ್ಮನಿರೀಕ್ಷಣವನ್ನು ಮಾಡಿಕೊಂಡರೆ ಈ ಮಾತು ಸ್ಪಷ್ಟವಾಗಿ ಅವರಿಗೆ ಕಾಣಿಸದೇ ಹೋಗದು. ರಾಜಕಾರಣದ ವಿಚಾರದಲ್ಲಿ ಅನ್ಯರ ಸಂಗಡ ಮತಭೇದ! ಈ ಮತಭೇದದಿಂದ ತಮ್ಮ ಮಿತ್ರರ ಹಾಗೂ ಅನುಯಾಯಿಗಳ ಸಂಗಡ ಜಗಳಾಡಿ, ಅವರಿಂದ ಸಿಡಿದುನಿಂತರು! ಬ್ರಾಹ್ಮಣರ ಸಭೆಯಲ್ಲಿ ಮತಭೇದ! ಇದಕ್ಕಾಗಿ ಅಲ್ಲಿಯೂ ಗೊಂದಲವೆದ್ದಿತು! ವೀರಶೈವರಲ್ಲಿ ತಮ್ಮ ವರ್ಚಸ್ಸು ಹೇರಳವಾಗಿದೆಂದು ತಿಳಿದಿದ್ದರು! ಅಲ್ಲಿಯೂ ನಿರಾಶೆಯಾಯಿತು! ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿಯೂ ಅದೇ ಹಾಡ! ಇವೆಲ್ಲ ಹೇಗಿದ್ದರೂ ಅವರು ಕರ್ನಾಟಕತ್ವದ ಪುರಸ್ಕರ್ತರಾಗಿದ್ದಾರೆ. ಕರ್ನಾಟಕ ಭೂಷಣರೆಂದೂ ಕನ್ನಡಿಗರು ಅಭಿಮಾನದಿಂದ ಅವರನ್ನು ಕರೆಯುತ್ತಾರೆ ಈ ವಿಷಯದಲ್ಲಿಯಾದರೂ ಅವರು ಮತೈಕ್ಯದಿಂದ ಕಾರ್ಯಮಾಡಿ, ಕರ್ನಾಟಕತ್ವದ ಚಳವಳವನ್ನು ವೃದ್ಧಿಗೆ ತರುವರಾಗಿ ಕನ್ನಡಿಗರೆಲ್ಲ ಈಗ್ಗೆ ೪—೬ ವರ್ಷಗಳಿಂದ ಭಾವಿಸುತ್ತ ಬಂದಿದ್ದರು. ಅವರ ಭಾವನೆಗೆ ಶ್ರೀ ಶ್ರೀನಿವಾಸರಾಯರಿಂದ ಮೊನ್ನೆಮೊನ್ನೆಯ ವರೆಗೆ ಸ್ಫೂರ್ತಿಯೂ ದೊರೆಯುತ್ತಲಿದ್ದಿತು. ಆದರೆ ಈಗ ಒಂದು ತಿಂಗಳಿನಿಂದ ಎಲ್ಲವೂ ಬದಲಾಗಿ ಹೋಗಿದೆ. ಪುಣೆಗೆ ಲೋಕಮಾನ್ಯರ ಪುಣ್ಯತಿಥಿಗೆಂದು ಹೋದಾಗ ಅಲ್ಲಿ ಯಾವ ಬಗೆಯ ಯಕ್ಷಿಣಿಯ ಮಂತ್ರವು ಇವರ ಮೇಲೆ ಪ್ರಯೋಗಿಸಲ್ಪಟ್ಟಿತೋ ತಿಳಿಯದು. ಅಲ್ಲಿನಿಂದ ಇವರ ಕರ್ನಾಟಕತ್ವದ ಕಲ್ಪನೆಗಳೆಲ್ಲ ಕಳಚಿ ಬೀಳುತ್ತಲಿವೆ. ಈಗಲಾದರೂ ಕರ್ನಾಟಕದ ನಿಜಸ್ಥಿತಿಯನ್ನೂ, ಸಂಸ್ಕೃತಿಯನ್ನೂ, ತರುಣರ ಮನವನ್ನೂ ತಿಳಿದು, ಕರ್ನಾಟಕ ಭೂಷಣರು "ಸಮಯಕ್ಕಾದವನೇ ನೆಂಟ ಕೆಲಸಕ್ಕಾದಗಿದವನೇ ಬಂಟ"ರಾಗುವರೆಂದು ಆಶಿಸುತ್ತೇವೆ.

ಕರ್ನಾಟಕದ ಗಡಿನಾಡುಗಳಲ್ಲಿ ಪರಪ್ರಾಂತೀಯರು ನಡೆಸಿದ ಆಘಾತದ ಸಮಾಚಾರವೂ ಕನ್ನಡಿಗರ ಔದಾಸೀನ್ಯವೂ ಬೇರೆ ಕಡೆಗೆ ಪ್ರಕಟವಾಗಿವೆ. ಬೆಳಗಾವಿಯಲ್ಲಿ ಮರಾಟರು ಒಳ್ಳೇ ಜಿಗಟಿನಿಂದ ತಮ್ಮ ಕಾರ್ಯ ಸಾಧಿಸಿಕೊಳ್ಳುತ್ತಿರುವರು. ಧಾರವಾಡದಲ್ಲಿ ಸಹ "ಮಹಾರಾಷ್ಟ್ರ" ಸಂಘವೊಂದು ಸ್ಥಾಪನೆಯಾಗಿದೆಯಂತೆ. ಇದರ ಕುಲಗೋತ್ರಗಳು ನಮಗೆ ಚನ್ನಾಗಿ ಗೊತ್ತಿರದಿದ್ದರೂ, ಕರ್ನಾಟಕದಲ್ಲಿಯ ಮರಾಟಿಗರು ಈಗ ತಮ್ಮ ಬಲವನ್ನು ಹೆಚ್ಚಿಸಲು ಹೆಣಗಾಡುತ್ತಿರುವದು ಸ್ಪಷ್ಟವಿದೆ ವಿಜಾಪುರದಲ್ಲಿ "ದಕ್ಷಿಣ ಮಹಾರಾಷ್ಟ್ರ"ವೆಂಬದೊಂದು ಮರಾಟಿ ಪತ್ರಿಕೆಯು ಜನ್ಮತಳೆಯಲಿದ್ದದೆಯಂತೆ. ಬೆಳಗಾವಿಯಿಂದ ನಾಗಪುರದ ವರೆಗೆ ಮರಾಟಿಯೇ ಸ್ಥಾಪಿಸಲ್ಪಡಬೇಕೆಂದು ಡಾ. ಮುಂಜೆಯವರು ಪಣತೊಟ್ಟಿರುವರು. ಇನ್ನು ಅತ್ತ ಆಂಧ್ರರ ಚಲ್ಲಾಟವನ್ನಿಷ್ಟು ನೋಡಿ! ಬಿಝವಾಡವೇ ಆಂಧ್ರದೇಶಕ್ಕೆ ಮಧ್ಯವರ್ತಿಯಾಗಿದೆ. ಹೀಗಿದ್ದರೂ ಅಲ್ಲಿಂದ ವಿಶ್ವವಿದ್ಯಾಲಯವನ್ನು ಕಿತ್ತಿ, ತೀರ ಗಡಿನಾಡಾಗಿದ್ದ ಅನಂತಪುರದಲ್ಲಿ ವಿಶ್ವವಿದ್ಯಾಲಯದ ಮುಖ್ಯ ಕಚೇರಿಯನ್ನು ಸ್ಥಾಪಿಸಬೇಕೆಂದು ನಿಶ್ಚಯಿಸಿದ್ದರಲ್ಲಿ, ಬಳ್ಳಾರಿ, ಅನಂತಪುರ ಜಿಲ್ಲೆಗಳ

ಲ್ಲಿಯ ಕನ್ನಡಿಗರನ್ನು ತಮ್ಮ ಕಡೆಗೆ ಆಕರ್ಷಿಸಿಕೊಳ್ಳಬೇಕೆಂಬ ಆಶೆಯು ಅವರಿಗಿದ್ದುದು ಸ್ಪಷ್ಟವಿದೆ. ತೀರ ದಕ್ಷಿಣದಲ್ಲಿಯ ಸೇಲಂ, ಕೊಯಿಮುತ್ತೂರ, ನೀಲಗಿರಿ ಜಿಲ್ಲೆಗಳಲ್ಲಿಯ ಕನ್ನಡಿಗರಿಗೆ ತಾವು ಕನ್ನಡಿಗರೆಂಬ ಸ್ಮೃತಿಯೇ ಇಲ್ಲ. ಹೀಗೆ ಕರ್ನಾಟಕದ ಗಡಿನಾಡಿನಲ್ಲೆಲ್ಲ ಬಲ್ಲಿದವರ ಆಕ್ರಮಣವು ಜಾಸ್ತಿಯಾಗಿರುವಾಗ ಕನ್ನಡಿಗರು ಆಲಸ್ಯದಿಂದಲೂ, ಔದಾಸೀನ್ಯದಿಂದಲೂ ಕುಳಿತುಕೊಳ್ಳುವದು ಸರಿಯೇ?

ಹಿಂದುಳಿದ ಜಾತಿಯವರೆಲ್ಲ ತಮ್ಮ ತಮ್ಮ ಪರಿಷತ್ತುಗಳನ್ನು ಕಟ್ಟಿ ತಮ್ಮ ಸಮಾಜ ಬಾಂಧವರಲ್ಲಿ ಜಾಗ್ರತಿಯನ್ನುಂಟು ಮಾಡುತ್ತಿರುವದು ಒಳ್ಳೇ ಲಕ್ಷಣವೆನ್ನುವದರಲ್ಲಿ ಸಂದೇಹವಿಲ್ಲ. ಆದರೆ ಜಾತಿ ಮಾತ್ರದಿಂದ ಬಂದ ಈ ಸಂಸ್ಥೆಗಳಲ್ಲಿ ಅವರಲ್ಲಿ ಬೇರೂರಿದ ಅಂಧಶ್ರದ್ಧೆಯು ದೂಷಿತ ಧ್ಯೇಯದ ಪದ್ಧತಿಯೂ ನುಸುಳಿ ಸೇರಿಕೊಂಡು ರಾಷ್ಟ್ರಕ್ಕೆ ಹಾನಿಯನ್ನುಂಟು ಮಾಡುತ್ತಿರುವದು ಅನುಭವದಿಂದ ಎಲ್ಲರಿಗೂ ಗೊತ್ತಾಗಿದೆ. ಆದುದರಿಂದ ಪಾರ್ಟಿತ್ವ ಸಂಸ್ಥೆಗಳಲ್ಲಿದ್ದ ಕೊಬ್ಬಿಯನ್ನು ಮಾತ್ರ ಹೇಳಿ, ಹಾನಿಯನ್ನು ಬಿಸುಟಲಿಕ್ಕೆ ಆ ಆ ಸಮಾಜಗಳ ಮುಖಂಡರು ಯಾವ ಮುಂದ ನೋಡಬಾರದು. ಇರಲಿ ಮೊನ್ನೆ ಲಂಬಾಣಿ ಮಹಾಸಭೆಯನ್ನು ಕೂಡಿಸುವ ಪೂರ್ವಸಿದ್ಧತೆಗಾಗಿ ಶಾಕಸಕಳ್ಳಿಯಲ್ಲಿ ಸಭೆ ಸೇರಿದಾಗ್ಯೆ ತೀರ ಹಿಂದುಳಿದವರಾದಾಗ್ಯೂ ಆ ಸಾವಿರ ಲಂಬಾಣಿಗರು ಅಲ್ಲಿ ನೆರೆದದ್ದು ಒಳ್ಳೇ ಮಹತ್ವದ ಮಾತು. ಮತ್ತು ಇವರಿಗೆ ಮುಂದಾದ ಸಮಾಜಗಳ ಧುರೀಣರು ಎಲ್ಲ ಬಗೆಯಿಂದಲೂ ಸಹಾಯ ಮಾಡಿ, ಅವರಲ್ಲಿ ಬೆಳಕಿನ ಕಿರಣಗಳನ್ನು ಮೂಡಿಸಲು ಹಾತೊರೆಯುವಾದರೂ ಸಂತೋಷದ ಮಾತಾಗಿದೆ. ಕಂಕನಹಳ್ಳೀ ತಾಲೂಕಿನಲ್ಲಿರುವ ೪ ಸಾವಿರ ಲಂಬಾಣಿಗರು ಸಿಸಿ ಕುಡಿಯುವದನ್ನು ಸಂಪೂರ್ಣವಾಗಿ ಬಿಟ್ಟದ್ದೂ, ಕೈದಾಟಿಗಳನ್ನಿಟ್ಟು ಉದ್ಯೋಗಶೀಲರಾದದ್ದೂ, ರಾಷ್ಟ್ರೀಯ ದೃಷ್ಟಿಯಿಂದ ಆಶ್ವಂತ ಮಹತ್ವದ ವಿಷಯಗಳು. ನಾವು ಮುಂದಾದ ಸಮಾಜದವರೆಂದು ಹೇಳಿ ಸೆರೆ ಕುಡಿಕುಡಿದು ದಂದು ಮಾಡಿ ರಾಟಿಗಳನ್ನು ಒಳಿಸುತ್ತಿರುವ ಸಿಂಧೀ ಮಾರಾಟದ ಮುಸನೀಸರು ಈ ಲಂಬಾಣಿಗರಿಂದ ಬುದ್ಧಿಗಲಿಯುವವನ್ನು ಬಿಟ್ಟು, ಪಾದ್ರಿಗಳಂತೆ "ಲಂಬಾಣಿಗರೇ ತಲೆತಲೆಗಳಿಂದ ಬಂದ ಕುಡಿಯುವ ಪದ್ಧತಿಯನ್ನು ಬಿಟ್ಟರೆ ನೀವು ಜೀವಂತ ಉಳಿಯುವಿರಾ? ರೋಗ ಬಂದ್ಯ ಸತ್ತೇ ಹೋಗುವಿರೆಂ"ದು ಉಪದೇಶಿಸಲು ಹೊರಟಿರುವರಂತೆ! ಇದಲ್ಲದೇ ಮತ್ತೂ ಒಂದು ಸೋಜಿಗದ ಸಂಗತಿ! ಮೈಸೂರ ಸರ್ಕಾರದವರು ಈ ಜನರಿಗೆ ೫೦೦ ಎಕರೆ ಭೂಮಿಯನ್ನು ಸಾಗುವಳಿಗಾಗಿ ಪುಕ್ಕಟೆ ಕೊಟ್ಟಿರುವರು, ೫೦೦ ಎಕರೆ ಮತ್ತೆ ಕೊಡತಕ್ಕವರೂ ಇದ್ದಾರೆ ಈ ಭೂಮಿಯನ್ನು ಹಂಚುವಾಗ್ಗೆ ೧೫೦ ರೂ. ಕೊಟ್ಟರೆ ಸಾಗುವಳಿ ಚೀಟಿ" ಕೊಡುವೆನೆಂದು ಅಧಿಕಾರಿಗಳು ಬಡ ಲಂಬಾಣಿಗರನ್ನು ಪೀಡಿಸುತ್ತಿರುವರಂತೆ! ಇಂಥ ಸ್ವಾರ್ಥಿಗಳಾದ ಸ್ವಪ್ರತಿಷ್ಠಿತ ಕಿಡಿಗೇಡಿಗಳಿಗೆ ಕೊಂಚಾದರೂ ನಾಚಿಕೆಯಿರಬಾರದೇ?

ಹಿಂ. ಸೇ. ದಲದವರು ಕಾಂಗ್ರೆಸ್ಸಿಗೆ ಸಭಾಸದರನ್ನು ಕೂಡಿಸಿ ಮಾಡುವರೇನು? ಕಳೆದ ವರ್ಷದಲ್ಲಿ ಕೂಡಿಸಿದ ಸಭಾಸದರ ಹಣವು ಎಲ್ಲಿದೆ? ಎಂಬದಾಗಿ ಪ್ರಾಂತಿಕ ಕಾಂಗ್ರೆಸ್ಸ ಕಮಿಟಿಯ ಕಾರ್ಯದರ್ಶಿಗಳೊಬ್ಬರು ಪ್ರಶ್ನೆ ಮಾಡಿರುವರಂತೆ! ಕಾರ್ಯದರ್ಶಿಗಳೇ ಕುಳಿತು ಹೀಗೆ ಪ್ರಶ್ನೆ ಮಾಡಿದ್ದನ್ನು ಕಂಡು ನಮಗೆ ಆಶ್ಚರ್ಯವೆನಿಸುತ್ತದೆ. ಸಂಪೂರ್ಣವಾಗಿ ವರ್ಷದ ವರೆಗೆ ಸುಮ್ಮನಿದ್ದು, ಈಗ್ಗೆ ಕಾರ್ಯಕ್ಕೆ ಪ್ರವೃತ್ತರಾದಾಗ್ಯೆ ಹಿಂ. ಸೇ. ದಲದ ಸ್ವಯಂಸೇವಕರಿಗೆ ಹೀಗೆ ಕಾರ್ಯದರ್ಶಿಗಳು ಕೇಳುವದು ಸರಿಯಲ್ಲ. ಹಣವನ್ನು ಆಗಿಂದಾಗ್ಯೆ ಕಾಂಗ್ರೆಸ್ಸ ಕಚೇರಿಗಳಲ್ಲಿ ಜಮೆ ಮಾಡಿಸಿ, ಅವರಿಂದ ಹಿಂ. ಸೇ. ದಲದವರು ಪಾವತಿಗಳನ್ನು ಪಡೆದಿದ್ದರೂ ಟೀಕಿಸುವದೆಂದರೆ ವ್ಯರ್ಥವೇ ಸರಿ. ಇನ್ನು, ಕಾಂಗ್ರೆಸ್ಸಿಗೆ ಸಭಾಸದರನ್ನು ಹೊಸದಾಗಿ ಸೇರಿಸುವ ಬಗ್ಗೆ ಕಾರ್ಯವರ್ತಿಗಳೆಂಬ ಹೆಸರು ಪಡೆದವರು, "ದರ್ಶಿ"ಗಳಾಗದೇ ಕಾರ್ಯಕ್ಕೆ ನಿರುತ್ಸಾಹವನ್ನುಂಟು ಮಾಡುವದು ಸರಿಯಲ್ಲ. ಪ್ರಾಂತಿಕ ಕಾಂಗ್ರೆಸ್ಸ ಮಂಡಲದ ಮುಂದೆ ಯಾವದೊಂದೂ ಕಾರ್ಯಕ್ರಮವಿಲ್ಲವಂತೆ! ಆದುದರಿಂದ ಹೊಸದಾಗಿ ಸಭಾಸದರನ್ನು ಸೇರಿಸಬಾರದಂತೆ! ಸಭಾಸದರನ್ನು ಸೇರಿಸುವಂತಹ ಒಂದು ಕಠಿಣ ಹಾಗೂ ಜವಾಬ್ದಾರಿಯ ಕಾರ್ಯಕ್ರಮವು ಸ್ವತಃ ಕಾರ್ಯದರ್ಶಿಗಳಿಂದಲೇ ಸಾಗಿರಬೇಕು. ಆದರೆ ತಮ್ಮಿಂದ ಆ ಕಾರ್ಯವು ಸಾಗದಿರುವಾಗ್ಯೆ ಅನ್ಯರು ಅದರಿಗೆ ಸಹಾಯ ಮಾಡಲು ಮುಂದೊಡದು ಒಂದರೆ ಅವರನ್ನು ಬರಿಯುವದೋ? ಕಾರ್ಯಕ್ರಮವು ಇಲ್ಲವಿದ್ದರೆ ಅದನ್ನು ಸಿದ್ಧಪಡಿಸುವದೂ, ಅದಕ್ಕೆ ಅನುಕೂಲವಾಗುವಂತಹ ವಾತಾವರಣವನ್ನು ಹುಟ್ಟಿಸುವದೂ ಕಾರ್ಯದರ್ಶಿಗಳ ಕೆಲಸವು. ಪ್ರಾಂತಿಕ ಕಾಂಗ್ರೆಸ ಕಮಿಟಿಯ ವಶದಲ್ಲಿ ಕರ್ನಾಟಕದ ಭಾಗಗಳೆಲ್ಲ ಇನ್ನೂ ಸೇರಿಲ್ಲ. ಸೇಲಂ, ಕೊಯಿಮುತ್ತೂರ, ನೀಲಗಿರಿ, ಅನಂತಪುರಗಳ ಕರ್ನಾಟಕದ ಭಾಗಗಳನ್ನು ತಮ್ಮ ವಶದಲ್ಲಿ ತೆಗೆದುಕೊಳ್ಳುವ, ಕರ್ನಾಟಕದ ಗಡಿನಾಡುಗಳಲ್ಲಿ ಪರಪ್ರಾಂತೀಯರು ನಡೆಸಿದ ಅತಿಕ್ರಮಣದ ಪ್ರಯತ್ನಗಳನ್ನು ತಡೆದು ನಿಲ್ಲಿಸುವ, ಕರ್ನಾಟಕ ಏಕೀಕರಣದ, ಇವೇ ಮೊದಲಾದ ಕರ್ನಾಟಕಕ್ಕೆ ಅತ್ಯವಶ್ಯವಾಗಿ ಈಗ್ಗೆ ಬೇಕಾದ ಚಳವಳಗಳನ್ನು ಪ್ರಾರಂಭಿಸುವ ಕಾರ್ಯಕ್ರಮವನ್ನು ಸಿದ್ಧಪಡಿಸಿ ಪ್ರಾಂತಿಕ ಮಂಡಲಗೆ ಕಾರ್ಯವನ್ನು ಒಪ್ಪಿಸುವ ಬದಲು, ಕಾರ್ಯದರ್ಶಿಗಳೇ ಸುಮ್ಮನೆ ಕುಳಿತು, ಹೀಗೆ ನಿರುತ್ಸಾಹದ ಉದ್ಗಾರಗಳನ್ನು ಹೊರಡಿಸುವದು ವಿಹಿತವೋ ಹೇಗೆಂಬುದನ್ನು ಅವರೇ ಪ್ರಕಟಿಸಲಿ.

ಅಣ್ಣೀಗೇರಿಯ ಶ್ರೀ ಮುತಾಲೀಕ ಶೇಷಗಿರಿರಾಯರು ೧೯ನೇ ತಾ|| ದಿನ ವೈಕುಂಠವಾಸಿಗಳಾದರೆಂದು ತಿಳಿಸಲಿಕ್ಕೆ ವಿಷಾದವಾಗುತ್ತದೆ. ಇವರು ಕರ್ನಾಟಕದ ಪ್ರಾಚೀನ ತರದ ಪದ್ಧತಿಯ ಆಚರಣೆಯುಳ್ಳವರೂ, ದೊಡ್ಡ ಮನಸ್ಸಿನವರೂ ಆಗಿದ್ದರು. ಧರ್ಮ ಕೆಲಸಗಳಲ್ಲಿ ಆಸಕ್ತಿಯುಳ್ಳವರಿದ್ದರು. ಮಧ್ವಮತದ ಒಳ್ಳೇ ಅಭಿಮಾನಿಗಳು. ಬಡಬಗ್ಗರಿಗೆ ಯಾವಾಗಲೂ ಸಹಾಯ ಮಾಡುತ್ತಲಿದ್ದರು. ಬಡ ವಿದ್ಯಾರ್ಥಿಗಳೂ, ಸಾರ್ವಜನಿಕ ಸಂಸ್ಥೆಗಳೂ ಇವರನ್ನು ಬಲು ಕೊಂಡಾಡುತ್ತಾರೆ. ದೇವರು ಇವರ ಚಿತ್ತಕ್ಕೆ ಶಾಂತಿಯನ್ನೀಯಲಿ!

ಉದಯ ಭಾರತ.

(-'ಮಿತ್ರ'- ಸಚಿತ್ರ). ಶ್ರೀ. ಭಟ ಹಾಗು ಶ್ರೀ. ಜಾಳ' ಇವರು ಸಂಪಾದಕರು. ವಾ. ವರ್ಗಣಿ ೧-೦-೦

ಇದೊಂದು ಮಂಗಳೂರದ 'ಸಚಿತ್ರ' ತ್ರೈಮಾಸಿಕವು. 'ಸಚಿತ್ರ'ವೆಂಬ ಬಿರುದು ಸಾರ್ಥಕವಾಗಬೇಕಾದರೆ ಸದ್ಯದಕಿಂತ ಹೆಚ್ಚು ಚಿತ್ರಗಳಿರುವದು ಅವಶ್ಯ. ಅನೇಕ ಮನೋರಂಜನವಾದ ಕಥೆ-ಕವಿತೆ-ಲೇಖನಗಳಿಂದೊಡಗೂಡಿದ ಈ ತ್ರೈಮಾಸಿಕವು ನಿಜವಾಗಿ ಆದರಣೀ

ಯವಾಗಿದೆ ಜನರ ಭಿನ್ನರುಚಿಗಳನ್ನರಿತುಕೊಂಡು ವಿಷಯ-ವಿವಿಧತೆಯನ್ನೇರ್ಪಡಿಸುವರು. ಕನ್ನಡ ಸಾಹಿತ್ಯ ಸೇವಕರಲ್ಲಿ ಹೆಸರು ಪಡೆದವರೂ 'ಕಾಣಿಕೆ'ಯ ಕರ್ತರೂ ಆದ ಶ್ರೀ ಗಳಗನಾಥರು ಶಂಕರಭಟ್ಟರಂಥ ನುರಿತ ಲೇಖಕರ ಬೆಂಬಲವು ಇದಕ್ಕಿದೆ. ಕಥಾಪ್ರಿಯರಿಗೆ 'ಸನ್ಯಾಸಿ' 'ಕಚದೇವಯಾನಿ'ಯಂಥ ಕಥೆಗಳೂ, ವಿಚಾರಶೀಲರಿಗೆ ವಿವಾಹ ವಿಚಾರ ಮೊದಲಾದ ಲೇಖಗಳೂ ಕಾವ್ಯಪ್ರಿಯರಿಗೆ ಪ್ರಕೃತಿ ಮೊದಲಾದ ಕವಿತೆಗಳೂ ಸಾಕಷ್ಟು ದೊರೆಯುವವು. ಧಾರವಾಡದ 'ಗೆಳೆಯರ' ಕವ್ಯಂದಿರಾದ 'ಚಿಕ್ಕಮಕ್ಕಳ' ಕವಿತೆಗಳೂ ಬಂದಿವೆ. 'ಚಿಕ್ಕಮಕ್ಕಳ'ದರೂ ಚಾಣಾಕ್ಷರವರು. 'ಬಾಳಂತಿಯ ಹಾಡು' 'ಮೋಹದೂತನೆ!' ಮೊದಲಾದ ಕವಿತೆಗಳಲ್ಲಿ ಇದೇ ಹಲ್ಲುಕಿಸುವ ಪ್ರತಿಭೆಯು ಕಂಡುಬರುವದು ಕನ್ನಡ ವೃತ್ತಪತ್ರ ಮಾಸಿಕಗಳಿಗೆ ಬಂದು ಕೊಂಡಿರುವ ಅಳಿಗಾಲವು ಇದಕ್ಕೆ ಬಾರದಂತೆ ತಪ್ಪಿಸುವದು ಲೋಕಾಶ್ರಯವನ್ನ ಕೂಡಿದೆ — ಶ್ಯಾಮ.

ಮುಂಬೈ ಸರಕಾರದ ಗ್ಯಾಝೇಟ.

(೧) ಅಸುಂಡಿಯವರು ಅ| ಜಜ್ಜರಾಗಿದ್ದಾರೆ. (೨) ಡಿ. ವಿ. ವ್ಯಾಸರು ಕಾರವಾರ ಜಿಲ್ಹೆಯ ಆ ಕಲೆಕ್ಟರರಾಗಿದ್ದಾರೆ (೩) ಮರ್ಡೇಕರರು ತಾತ್ಪೂರ್ತಿಕ ಧಾರವಾಡದ ಕಲೆಕ್ಟರಾಗಿದ್ದವರು. (೪) ಭಾಗವತರು ಬೆಳಗಾವಿ ಭಾಗದ ಆ| ರಜಿಸ್ಟ್ರರಾಗುವರು. (೫) ವೀರ ಜಂದಾನಿಯವರು ಕಾರವಾರದ ತಾತ್ಪೂರ್ತಿಕ ಕಲೆಕ್ಟರರಾಗುವರು.

ಕರ್ನಾಟಕ ಏಕೀಕರಣದ ಸುದ್ದಿ.

ನವರಾತ್ರಿಯ ಉತ್ಸವದಲ್ಲಿ ಧಾರವಾಡಿಗರು ಎಲ್ಲ ಮನೆಗಳನ್ನು ಸಂದರ್ಶಿಸಿ, ಏಕೀಕರಣ ಸಭೆಯ ವಿನಂತಿ ಪತ್ರಿಕೆಗೆ ಸಹಿ ದೊರಕಿಸಿದರು

ಶ್ರೀ ಕರ್ಕಿ, ಜೋಗ, ಅಂಗಡಿ, ಹಾಗೂ ಪಂಡಿತಪ್ಪಾ, ಇವರು ಏಕೀಕರಣದ ಠರಾವಿನ ಸೂಚನೆಯನ್ನು ಮುಂಬೈ ಕಾಯದೇ ಮಂಡಲಕ್ಕೆ ಕೊಟ್ಟಿದ್ದಾರೆ.

ಪತ್ರವ್ಯವಹಾರ

ಇದೊಂದು ದಬ್ಬಾಳಿಕೆಯೋ.

ಶ್ರೀಮದಾನಂದ ತೀರ್ಥರ ಹೆಸರಿನಿಂದ ನಡೆಯುವ ಯಾವದೇ ಉತ್ಸವವಿರಲಿ ಅದರೊಳಗೆ ಭಾಗತೆಗೆದುಕೊಳ್ಳಲು ಪ್ರತಿಯೊಬ್ಬ ಮಾಧ್ವನಿಗೆ ಅಧಿಕಾರ ಉಂಟು. ಸಾಮಾನ್ಯ ಮಂಡಲದಲ್ಲಿ ಸೇರಿ, ಆರಿಸಿ ಬಂದರೆ, ಕಾರ್ಯಕಾರಿ ಸದಸ್ಯನೂ ಆಗಿ, ಶ್ರೀಮದಾಚಾರ್ಯರ ಪ್ರತ್ಯಕ್ಷ ಸೇವೆಯ ಸೌಖ್ಯ ಸಂಪಾದಿಸಲು ಪ್ರತಿಯೊಬ್ಬನೂ ಅಧಿಕಾರಿಯು ಸರ್ವ ಸಮ್ಮತವಾದ ನಿಯಮವಿದ್ದು ಇಂತು ಬರೆಯಲಿಕ್ಕೆ ಕಾರಣವೇನೆಂದರೆ, ಬಾಗಲಕೋಟೆಯ ಶ್ರೀಮಉ. ಮಂ. ಕಾರ್ಯದರ್ಶಿಗಳು ಸಾಮಾನ್ಯ ಸದಸ್ಯರು ೨೦ ಜನರು ಇರಬೇಕಾಗಿ ಒಂದು (?) ಸಭೆಯಲ್ಲ ನಿರ್ಣಯವಾಗಿದೆಯೆಂದು ಯಾವ ಲೆಕ್ಕಣಿಕೆಯಿಂದ ಬರೆದರೋ ಕಾಣೆ. ಈಗಲ ವರ್ಷಗಳ ಹಿಂದೆ ಸಾರ್ವಜನಿಕ ಸ್ಥಳದಲ್ಲಿ ಈ ಬಗ್ಗೆ ಮಾಧ್ವರ ಯಾವ ಸಭೆಯೂ ಕೂಡಿಲ್ಲೆಂದು ಎಲ್ಲರ ಅನುಭವದ ಮಾತು ಹಾಗೆ ಸಭೆ ಕೂಡಿದ್ದರೆ, ತಮಗೆ ಯಾರಿಗೂ ಈ ಮಹಾರಾಯನ ಜಯಂತ್ಯುತ್ಸವಕ್ಕೆ ಧನ ಕೇಳಲು ಮನವಿಲ್ಲೆಂದು ಅಧ್ಯಕ್ಷರು ಕೂಗಿ ಹೇಳಿದ ಮೇಲೆ, ಈ ಸತ್ಪಶೀಲರಾದ ಧನಾಢ್ಯರು (೨೦ ಜನರು ಮಾತ್ರ) ಮುಂದೆ ಬಂದು ಅಧಿಕಾರದ ಸೂತ್ರಗಳನ್ನು ಒಪ್ಪಿಕೊಂಡರೋ,?

ಇನ್ನು ಹಿಂಸಗಿ ರೀತಿಯಿಂದಲೂ ಜನ ಸ್ವೀಕಿತರು ಆದರೆ. ಏನಾದರೂ ನಿರ್ಣಯವಾಡಿಕೊಂಡಿದ್ದರೆ, ಇತರ ಸರ್ವಜನರಿಗೂ ಮಾನ್ಯವಾಗುವ ಬಗೆಯೆಂತು ? ಇರಲಿ. ಕಾರ್ಯದರ್ಶಿಗಳು ನಾಳಿನ ದಿವಸವೇ ಜಾಹೀರ ಸಭೆಕರೆದು, ಈ ವಿಷಯವನ್ನು ಪ್ರತ್ಯಕ್ಷ ಬರ್ಚಿಸಿ, ಸರ್ವರಿಗೂ ಪ್ರವೇಶಿಸಲಿಕ್ಕೆ ಮಂಡಲದ ಬಾಗಿಲುಗಳನ್ನು ಸತತ ತೆರವಿಡದಿದ್ದರೆ, ಮಂಡಲದ ತೀರ ಸಂಕುಚಿತವಾದ ದೃಷ್ಟಿಕೋನವು, ಕೇವಲ ಸ್ವಾರ್ಥ ಮತ್ತು ಬಣಪ್ರತಿಷ್ಠಿತೆಗಳ ಕಡೆಗೆ ಒಲಿದಿರುವದೆಂದು ಡಂಗುರ ಬಾರಿಸಿದಂತೆಯೇ. —ಒಬ್ಬ ವೈಷ್ಣವ

ನಮ್ಮ ಕಡೆಗೆ ಬಂದ ಪತ್ರಗಳು.

(೧) **ಓರ್ವ ಬ್ರಾಹ್ಮಣ ಕಲ್ಪಗೇರ.** ನಿಮ್ಮ ಲೇಖವು 'ಕರ್ಮವೀರ'ದಲ್ಲಿ ಪ್ರಕಟವಾಗಿರುವದರಿಂದ ಮತ್ತೆ 'ಕನ್ನಡಿಗ'ನಲ್ಲಿ ಪ್ರಕಟಿಸುವ ಅವಶ್ಯಕತೆಯಿಲ್ಲ. ಬ್ರಾಹ್ಮಣರೆಲ್ಲರೂ ನಿಜವಾಗಿಯೂ ಕನ್ನಡದ ಅಭಿಮಾನಿಗಳಾಗಿದ್ದರೆ, ಅಲ್ಲಿಯ ನ್ಯೂ ಇಂಗ್ಲೀಷ ಸ್ಕೂಲಿನಲ್ಲಿ ಕನ್ನಡಕ್ಕೆ ಮನ್ನಣೆಯಿಲ್ಲದಿರುವ ಕಾರಣವೇನು ? ಆ ಬಗ್ಗೆ ಬ್ರಾಹ್ಮಣರು ಯಾವ ರೀತಿಯಿಂದ ಪ್ರಯತ್ನಿಸಿರುವರು ? ಒಬ್ಬಿಬ್ಬರು ಕನ್ನಡದ ಅಭಿಮಾನಿಗಳಾಗಿರುವದು ಸರಿಯಾಗಿದ್ದರೂ, ಬ್ರಾಹ್ಮಣ ಸಮಾಜದ ಬಹು ಜನರು ಕನ್ನಡದ ಬಗ್ಗೆ ಯಾವ ಬಗೆಯ ಅಭಿಮಾನವನ್ನೂ ತಳೆದಿರುವದಿಲ್ಲೆಂಬುದು ಅನುಭವಸಿದ್ಧ.

(೨) **ಓರ್ವ ನಾಗರಿಕ ಬಾಗಲಕೋಟೆ** ನೀವು ಮುನಸಿಪಾಲ್ಟಿಯ ಬಗ್ಗೆ ಬರೆದುದು ಸರಿಯಾಗಿದೆ. ಆದರೆ ನೀವು ನಿಮ್ಮ ಹೆಸರನ್ನು ನಮಗೆ ತಿಳಿಸಿಲ್ಲವಾದ.ದರಿಂದ ನಿಮ್ಮ ಪತ್ರವನ್ನು ಪ್ರಕಟಿಸಲಾರೆವು.

(೩) **ವೆ. ರಾ. ನಗರ.** ನಿಮ್ಮ ಪತ್ರವು ಈಗಾಗಲೇ 'ಕರ್ಮವೀರ'ದಲ್ಲಿ ಪ್ರಕಟವಾಗಿದೆಯಾದ್ದರಿಂದ ಮತ್ತೆ ಅದನ್ನೇ 'ಕನ್ನಡಿಗ'ದಲ್ಲಿ ಪ್ರಕಟಿಸುವದು ಅನಾವಶ್ಯಕ.

ಮುಂಬೈ ಕರ್ನಾಟಕ

ವಿಶ್ವಬ್ರಾಹ್ಮಣ ಸಮಾಜದ ೩. ನೇ ಪರಿಷತ್ತನ್ನು ಹುಬ್ಬಳ್ಳಿಯಲ್ಲಿ ಇದೇ ದಸೆಂಬರ ತಿಂಗಳ ಕಡೆಯ ವಾರದಲ್ಲಿ ಕೂಡಿಸಬೇಕೆಂದು ನಿಶ್ಚಯವಾಗಿದೆ. ಸ್ವಾಗತ ಕಮೀಟಿ ಸಭಾಸದರು ೧೦ ರೂ. ಪ್ರತಿನಿಧಿ ೪ ರೂ. ಪ್ರೇಕ್ಷಕರು ೨ ರೂ ಕೊಡಬೇಕು. ಹೆಚ್ಚಿನ ಸಂಗತಿಗಳನ್ನು ಕಾರ್ಯದರ್ಶಿ ಶ್ರೀ. ಸಿದ್ಧರಾವ ಗುರುನಾಥ ಮಾಲಿಂಗಪೂರ ಹುಬ್ಬಳ್ಳಿ ಇವರಿಂದ ತಿಳಿದುಕೊಳ್ಳಬಹುದು.

ರಾ. ರಾ ಚಂದಪ್ಪ ಹುನಗುಂದ ಪೋ. ಸ. ಇ ಬದಾಮಿ ಇವರು ತಮ್ಮ ಚಿರಂಜೀವರ ಲಗ್ನಕಾಲಕ್ಕೆ ಧಾರವಾಡದ ಚಿದಾನಂದ ಆಶ್ರಮದ ಫಂಡಿಗಾಗಿ ೩೦ ರೂಪಾಯಿ ಕಾಣಿಕೆ ಕೊಟ್ಟರು

ಆಯ್. ಸಿ. ಎಸ್. ಪರೀಕ್ಷೆಗಾಗಿ ಶ್ರೀಯುತ ಶಾಂತಪ್ಪ ಪಾಟೀಲ ಇವರು ಇಂಗ್ಲಂಡಕ್ಕೆ ಪ್ರಯಾಣ ಬೆಳೆಸಿದರು. ಇವರು ರಡ್ಡೀ ಸಮಾಜದ ಒಬ್ಬ ತರುಣ ಪದವೀಧರರು. ಇದೇ ೧೯೨೭ ನೇ ಇಸ್ವಿಯಲ್ಲಿ ಬಿ ಎ. ಪರೀಕ್ಷೆಯಲ್ಲಿ ಗಣಿತ ವಿಷಯವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡು, ಮೊದಲನೇ ವರ್ಗದಲ್ಲಿ ಪಾಸಾಗಿದ್ದಾರೆ. ಮುಂಬೈ ಪ್ರಾಂತದ ರಡ್ಡೀ ಸಮಾಜದಲ್ಲಿ ವಿಲಾಯತಿಗೆ ಹೋದವರೆಂದರೆ ಇವರೇ ಮೊದಲಿನವರು. ಇವರು ಔಂಧಸಂಸ್ಥಾನ ಪೈಕಿ ಗುಣದಾಳ ತಾಲೂಕ ಶಿರಬೂರ ಗ್ರಾಮದ ವತನದಾರ ಪಾಟೀಲ ಮನೆತನದವರು.

ಕನ್ನಡಿಗರ ಮೇಲೆ ಆಘಾತ.

ಅತ್ತ ಗಡಿನಾಡುಗಳಲ್ಲಿ ಪರಭಾಷೆಯವರ ಕಿಡಿಗೇಡಿತನವು!

ಇತ್ತ ಕನ್ನಡಿಗರ ಔದಾಸ್ಯತನವು!

(೧) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಹಾಗೂ ಬೆಳಗಾವಿ ಕೋರ್ಟುಗಳ ಭಾಷೆಯು ಈ ವರೆಗೆ ಕೇವಲ ಕನ್ನಡವಾಗಿದ್ದಿತು. ಈಚೆ ಅಲ್ಲಿಯ ಮರಾಟೀ ಪ್ರೇಮಿಗಳಾದ ವಕೀಲರು ಪ್ರಯತ್ನಿಸಿದ್ದರಿಂದ ಈಗ್ಗೆ ಮರಾಟಿಯು ಕೋರ್ಟ ಭಾಷೆಯಾಗಿದೆ.

(೨) ಪಿರಿಯಮ್ಮನ ಚಾಳಿ ಮನೆಯವರಿಗೆಲ್ಲ ಎಂಬಂತೆ, ಗೋಕಾವಿ ಹಾಗೂ ಹುಕ್ಕೇರಿ ತಾಲೂಕಿನ ವಕೀಲರು ಸಹ ತಮ್ಮ ಕೋರ್ಟುಗಳ ಭಾಷೆಯೂ ಮರಾಟಿಯಾಗಿರಬೇಕೆಂದು ಪ್ರಯತ್ನಿಸಲು ಹೊರಟಿರುವರಂತೆ!

(೩) ಬೆಳಗಾವಿ ಜಿಲ್ಲೆಯ ಪ್ರಾಥಮಿಕ ಶಾಲೆಗಳು ಮರಾಟಿಯಾಗಿರಬೇಕೆಂದೂ, ಕನ್ನಡವು ಬೇಡೆಂದೂ, ಅಲ್ಲಿಯ ಮರಾಟಿಗರು, ಅಜ್ಞಾನಿಗಳಾದ ಕನ್ನಡಿಗರಿಂದ ಸಹ ಸಹಿ ತೆಗೆದುಕೊಳ್ಳುತ್ತಿರುವರು.

(೪) ಬಳ್ಳಾರಿಯನ್ನು ನುಂಗಬೇಕೆಂದು ಆಂಧ್ರರ ಪ್ರಯತ್ನಗಳು ಇನ್ನೂ ಸಾಗಿವೆ.

(೫) ಅನಂತಪುರ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿಯ ಕನ್ನಡಿಗರ ಮೇಲೆ ಆಂಧ್ರರ ವರ್ಚಸ್ಸು ಸಂಪೂರ್ಣವಾಗಿ ಬೀಳಬೇಕೆಂದೂ, ಕ್ರಮೇಣ ಆ ಜಿಲ್ಲೆಗಳಲ್ಲಿ ಆಂಧ್ರವೇ ಸಂಪೂರ್ಣವಾಗಿ ನೆಲಗೊಳ್ಳಬೇಕೆಂದೂ, ಆಂಧ್ರ ವಿಶ್ವವಿದ್ಯಾಲಯದ ಮುಖ್ಯ ಕಚೇರಿಯು ಬಿಝವಾಡದಿಂದ ಅನಂತಪುರಕ್ಕೆ ಬರಬೇಕೆಂದಾಗಿ ಆಂಧ್ರರು ನಿಶ್ಚಯಿಸಿದ್ದಾರೆ!

(೬) ಸೇಲಮ್, ಕೊಯಿಮುತ್ತೂರ ನೀಲಗಿರಿ ಜಿಲ್ಲೆಗಳಲ್ಲಿ ತಮಿಳರ ಪ್ರಾಬಲ್ಯಕ್ಕೀಡಾದ ಕನ್ನಡಿಗರಿಗೆ ತಾವು ಕನ್ನಡಿಗರೆಂಬ ಅರಿವು ಸಹ ಇಲ್ಲ.

(೧) ಕನ್ನಡಿಗರ ಬಗ್ಗೆ ಕರ್ನಾಟಕ ಏಕೀಕರಣ ಸಭೆಗೆ ತಗಲಿದ ಜಾಡ್ಯವೂ ನಿದ್ರೆಯೂ ಹೋಗಲೊಲ್ಲದು!

(೨) ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಕಾರ್ಯಕ್ರಮವೇ ಇಲ್ಲವೆಂದು ಈಗ್ಗೆ ಸಹ ನುಡಿಯುತ್ತಿರುವದು!

(೩) ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಮೇ ತಿಂಗಳಲ್ಲಿ ಪರಿಷತ್ತನ್ನು ಕೂಡಿಸುವದರ ಹೊರತಾಗಿ ಅನ್ಯ ಸಂಗತಿಗಳಾವೂ ನೆನಪಾಗುವದಿಲ್ಲ!

(೪) ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಈ ಆಘಾತದ ಸುದ್ದಿಯು ತಿಳಿದೇಯಿಲ್ಲ!

(೫) ಕರ್ನಾಟಕ ಭೂಷಣರಾದ ಶ್ರೀಮಾನ್ ಕೌಜಲಗೀಯವರು ಕನ್ನಡಿಗರ ಮೇಲೆಯೇ ಕೋಪಿಸಿ ಬಿಟ್ಟಿದ್ದಾರೆ.

(೬) ಕರ್ನಾಟಕ ಸಿಂಹರೆಂದು ಹೆಸರಾದ ಶ್ರೀಮಾನ್ ದೇಶಪಾಂಡೆ ಗಂಗಾಧರರಾಯರಿಗೆ ರಾಷ್ಟ್ರಸೇವೆಗಾಗಿ ಸಂಸ್ಕೃತಿ ಭಾಷೆಗಳ ಅವಶ್ಯಕತೆಯೇ ತೋರುವದಿಲ್ಲ!

ಶ್ರೀ ರಂಗನಾಥರೂ ವಾಸುದೇವನ ಕೌಸ್ತುಭಗಳೂ.

ಗ್ರಾಂಥಿಕ ಭಾಷೆಯನ್ನು ಏಕರೂಪತೆಗೆ ತರುವ ವಿಚಾರವು ಈಗ ಬಹು ದಿವಸಗಳಿಂದ ನಡೆದಿದ್ದರೂ, ಆ ಏಕರೂಪತೆಯೆಂದರೆ ಎಂಥದು, ಅದನ್ನು ಸಾಧಿಸುವ ಬಗ್ಗೆ ಹೇಗೆ, ಎಂಬದನ್ನು ಅಷ್ಟೊಂದು ನಿಶ್ಚಿತವಾಗಿ ಯಾರೂ ಗೊತ್ತು ಮಾಡಿದಂತೆ ತೋರುವದಿಲ್ಲ. ಈಗ ರೂಢಿಯಲ್ಲಿ ಪ್ರಚಲಿತವಾಗಿರುವ ಹೊಸಗನ್ನಡದ ಶಬ್ದಗಳಿಗೆ ಹಳೆಗನ್ನಡದ ವ್ಯಾಕರಣದ ಪ್ರತ್ಯಯಗಳನ್ನು ತಗಲಿಸುವ ಜಾತ-ಬಾಲಿಕಾವಿವಾಹದಂಥ ಪದ್ಧತಿಯಿಂದ, ಪ್ರಯೋಗಗಳನ್ನು ಸಿದ್ಧಮಾಡಿ, ಅವುಗಳನ್ನು ವಾಕ್ಯಗಳಲ್ಲಿ ಉಪಯೋಗಿಸಿ, ಕೆಲವರು ಇಷ್ಟಾರ್ಥವನ್ನು ಸಾಧಿಸಿಕೊಳ್ಳುತ್ತಿರುವರು. ಈ ಪ್ರಕಾರದ ಜನರಲ್ಲಿ ಶ್ರೀಯುತ ಪೋದ್ದಾರ ರಂಗನಾಥರೂ ಒಬ್ಬರಾಗಿದ್ದಾರೆಂದು ಹೇಳಿದರೆ ಅಷ್ಟೇನೂ ತಪ್ಪಾಗಲಿಕ್ಕಿಲ್ಲ.

ಸಾಹಿತ್ಯ ಸಮ್ರಾಟರಾದ ಕೆರೂರ ವಾಸುದೇವಾಚಾರ್ಯರ ಗ್ರಂಥಗಳನ್ನು ಪ್ರಕಟಿಸುವ ಪ್ರಯತ್ನವನ್ನು ಕೈಕೊಂಡ ಶ್ರೀಯುತ ರಂಗನಾಥರ ಉದ್ಯಮವು ಸ್ತುತ್ಯವಾಗಿದ್ದರೂ, ಆಚಾರ್ಯರ ಕೃತಿಗಳಲ್ಲಿ ತಮ್ಮ ಸ್ವಂತ ಮತವನ್ನು ಬೆರಿಸಿ ಅವುಗಳನ್ನು ತಿದ್ದಹೋದದ್ದರಿಂದ ಶ್ರೀ ರಂಗನಾಥರು ವಿಶೇಷವಾಗಿ ವಾಚಕ ವರ್ಗದ

ಕೋಪಕ್ಕೆ ಗುರಿಯಾಗಿದ್ದಾರೆಂದು ವಿಷಾದದೊಂದಿಗೆ ಹೇಳಬೇಕಾಗುತ್ತದೆ. ಲೋಕಮಾನ್ಯರು ಜೀವಿಸಿದ್ದರೆ ಅವರಾದರೂ ಪ್ರತಿಯೋಗೀ ಸಹಕಾರಿತೆಯನ್ನೇ ಬೋಧಿಸುತ್ತಿದ್ದರೆಂದು ಅವರ ಶಿಷ್ಯರಾದ ತಾತ್ಯಾಸಾಹೇಬ ಕೇಳಕರರು ಹೇಳುತ್ತಿರುವಂತೆ ಶ್ರೀ ರಂಗನಾಥರಾದರೂ 'ಹೀಗೇಕೆ ಬದಲಾವಣೆಗಳನ್ನ ಮಾಡಿದಿರಿ' ಎಂದು ಕೇಳಿದವರಿಗೆ, ಆಚಾರ್ಯರು ಜೀವಿಸಿದ್ದರೆ ಅವರಾದರೂ ಏಕೀಕರಣದ ಅವಶ್ಯಕತೆಗಾಗಿ ಹೀಗೆಯೇ ತಿದ್ದುಪಡೆಗಳನ್ನು ಮಾಡುತ್ತಿದ್ದರೆಂದು ಹೇಳುತ್ತಿರುವರಂತೆ! ಮತ್ತು ಮೈಸೂರ ಕಡೆಯವರಿಗೆ ಆಚಾರ್ಯರ ಕೃತಿಗಳು ಚನ್ನಾಗಿ ಅವಗತವಾಗಬೇಕೆಂಬುದೂ ಒಂದು ರಂಗನಾಥರ ಉದ್ದೇಶವಾಗಿದೆಯಂತೆ!

ಇನ್ನ ಆಚಾರ್ಯರು ಜೀವಿಸಿದ್ದರೆ ಹೀಗೆಯೇ ಮಾಡುತ್ತಿದ್ದರೆಂಬದನ್ನು ಯಾರೂ ಈಗ್ಗೆ ನಿಶ್ಚಿತವಾಗಿ ಹೇಳಲಾರರು. ಅವರ ಕೃತಿಗಳಲ್ಲಿ ರಂಗನಾಥರು ಬದಲು ಮಾಡಿದವುಗಳೇ ಆದ 'ಆದುದರಿಂದ' 'ಬರುವುದು' 'ಇಂತಹ' ಮುಂತಾದ ಶಬ್ದಗಳ ಮೇಲೆ, ತೀಕ್ಷ್ಣವಾಗಿಯೂ ಸಶಾಸ್ತ್ರವಾಗಿಯೂ ಟೀಕೆ ಮಾಡಿದ ಆಚಾರ್ಯರು ಪುನಃ ಭಿನ್ನಾಭಿಪ್ರಾಯವನ್ನು ತಳೆದು ಹೆಚ್ಚು ಕಡಿಮೆ ಮಾಡಲು ಒಪ್ಪುತ್ತಿದ್ದರೆಂದು ನಂಬುವದು ಕಲ್ಲಿನಲ್ಲಿ ಮಾತನಾಡುವ ಸಮವಾದ ಮಾತೇ ಸರಿ! ಅದರೂ (ರಂಗನಾಥರು ಹೇಳುತ್ತಾರೆಂದ ಮೇಲೆ) ಏಕೀಕರಣದ ಭಾವನೆಯಿಂದ ಪ್ರೇರಿತರಾಗಿ ಆಚಾರ್ಯರು ತಮ್ಮ ಗ್ರಂಥಗಳಲ್ಲಿ ಹೆಚ್ಚು ಕಡಿಮೆ ಮಾಡಲು ಒಪ್ಪುತ್ತಿದ್ದರೆಂಬ ಅಭಿಪ್ರಾಯವನ್ನು ಕಟ್ಟಿಕೊಂಡರೂ, ಅವರು ಸಾಯುವಾಗ ಅದರ ಸಂಪೂರ್ಣಾಧಿಕಾರವನ್ನು ರಂಗನಾಥರಿಗೆ ಒಪ್ಪಿಸಿ ಹೋಗಿಲ್ಲವೆಂಬದು ಮಾತ್ರ ಸ್ಪಷ್ಟವಿದೆ. ತಮ್ಮ ಮರಣದ ನಂತರ ರಂಗನಾಥರಂಥವರು ತಮ್ಮ ಕೃತಿಗಳಲ್ಲಿ ಕೈಹಾಕಿ ಅವುಗಳ ಅಂದವನ್ನು ಕಳೆದ್ದು ಬಿಡುವರೆಂಬ ಭೀತಿಯು ಆಚಾರ್ಯರಿಗಿದ್ದೇ ಇತ್ತೆಂದು ತೋರುತ್ತದೆ. ಅಂತೆಯೇ ಅವರು ಪರಲೋಕಕ್ಕೆ ಹೋಗುವ ಪೂರ್ವದಲ್ಲಿಯೇ ಶ್ರೀಯುತ, ರಂಗನಾಥರಂಥವರನ್ನು ಕುರಿತು ಈ ಪ್ರಕಾರವಾಗಿ ಬರೆದಿಟ್ಟಿದ್ದಾರೆ. "ಪೂರ್ವಕಾಲದ ಗ್ರಂಥಗಳಲ್ಲಿಯಾಗಲೀ ಮೃತರಾಗಿ ಹೋಗಿರುವ ಆಧುನಿಕ ಗ್ರಂಥಕಾರರ ಕೃತಿಗಳಲ್ಲಿಯಾಗಲೀ ನಾವು ನಮ್ಮ ಪಾಂಡಿತ್ಯವನ್ನು ಕಲಿಸಿ ತಿದ್ದುಪಡೆ ಮಾಡುವ ಪ್ರಯತ್ನವು ವಾಙ್ಮಯಕ್ಕೆ ಅತ್ಯಂತವಾಗಿ ಹಾನಿಯನ್ನುಂಟು ಮಾಡುವದು. ಇತಿಹಾಸದ ದೃಷ್ಟಿಯಿಂದಾಗಲೀ ವಾಙ್ಮಯ ಪ್ರಭೇದ ದೃಷ್ಟಿಯಿಂದಾಗಲೀ ಗ್ರಂಥಗಳನ್ನೋದುವವರ ಮಾರ್ಗದಿಂದಾಗುವ ಈಗಿನ ಗ್ರಂಥಪರಿಶೋಧನ ಕ್ರಿಯೆಯು ದೊಡ್ಡ ವಿಘ್ನವನ್ನು ತರುವದಲ್ಲವೇ? ಗ್ರಾಂಥಿಕ ಭಾಷೆಗೆ ಏಕರೂಪವನ್ನು ಕೊಡುವ ವಿಚಾರವು ಇನ್ನು ಮುಂದೆ ಪ್ರಸಿದ್ಧಿಯನ್ನು ಹೊಂದಬೇಕಾಗಿದ್ದ ಗ್ರಂಥಗಳಿಗೆ ಮಾತ್ರ ಸಲ್ಲತಕ್ಕದ್ದು." (ಶುಭೋದಯ.)

ಆಚಾರ್ಯರೇನು ಹೀಗೆ ನಿದ್ರೆಗಣ್ಣಿನಲ್ಲಿದ್ದಾಗ ಬರೆದಿಲ್ಲವಷ್ಟೇ! ತಮ್ಮ ಗ್ರಂಥಗಳಲ್ಲಿ ತಿದ್ದುಪಡೆಯಾಗುವದು ಆಚಾರ್ಯರ ಮನೀಷೆಯಾಗಿತ್ತೆಂದು ಹೇಳುವ ರಂಗನಾಥರು, ಸ್ವತಃ ಆಚಾರ್ಯರೇ "ಮೃತರಾದ ಗ್ರಂಥಕಾರರ ಕೃತಿಗಳಲ್ಲಿ ತಿದ್ದುಪಡೆ ಮಾಡುವದು ವಾಙ್ಮಯಕ್ಕೆ ಹಾನಿಯನ್ನುಂಟು ಮಾಡುವದೆಂ"ದು ಬರೆಯುತ್ತಿರಲು ಅದಕ್ಕೇನು ಉತ್ತರ ಹೇಳುವರು? ಮತ್ತು ಗ್ರಾಂಥಿಕ ಭಾಷೆಗೆ ಏಕರೂಪವನ್ನು ಕೊಡುವ ವಿಚಾರವು ಇನ್ನು ಮುಂದೆ ಪ್ರಸಿದ್ಧಿಯನ್ನು ಹೊಂದಬೇಕಾಗಿದ್ದ ಗ್ರಂಥಗಳಿಗೆ ಮಾತ್ರ ಸಲ್ಲತಕ್ಕದ್ದೆಂದು ಅಭಿಪ್ರಾಯಪಡುವ ಆಚಾರ್ಯರ ಗ್ರಂಥಗಳಿಗೆ ಏಕರೂಪವನ್ನು ಕೊಡಲು ಯತ್ನಿಸಿದ ರಂಗನಾಥರು ಗಟ್ಟಿಗರಲ್ಲವೇ!

ಸ್ವತಃ ಗ್ರಂಥಗಳನ್ನು ಬರೆದು ಅವುಗಳಲ್ಲಿ ತಮ್ಮ ಪಾಂಡಿತ್ಯವನ್ನು ಬೇಕಾದಷ್ಟು ರಂಗನಾಥರು ಬೆಳಕಿಗೆ ತರಲಿ, ತಮ್ಮವೇ ಆದ ಗ್ರಂಥಗಳಲ್ಲಿ ತಮಗೆ ಇಷ್ಟವಿದ್ದಂಥ ಶಬ್ದಯೋಜನೆಯನ್ನು ಮಾಡಿಕೊಳ್ಳಲಿ. ಯಾರೂ ಬೇಡೆನ್ನಲಾರರು. ಆದರೆ ಅನ್ಯರ ಕೃತಿಗಳಲ್ಲಿ ಕೈಹಾಕಿ ಗ್ರಂಥಕರ್ತರ ವೈಶಿಷ್ಟ್ಯವನ್ನು ಕೂಡ ಕಳೆಯುವ ಉದ್ಯೋಗಕ್ಕೆ ಇನ್ನು ಮುಂದೆಯಾದರೂ ಕೈಹಾಕಬಾರದೆಂದು ರಂಗನಾಥರಿಗೆ ನಮ್ಮ ಸವಿನಯ ಪ್ರಾರ್ಥನೆಯಿದೆ.

—ಸೀತಾತನಯ

ಪತ್ರವ್ಯವಹಾರ.

ಕುಕನೂರ ಪಾಠಶಾಲೆ

(ಈ ವಿಷಯದ ಬಗ್ಗೆ ನಮ್ಮ ಕಡೆಗೆ ೩-೪ ಪತ್ರಗಳು ಬಂದಿವೆ. ಆ ಎಲ್ಲ ಪತ್ರಗಳ ನೋಡಲಾಗಿ ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಹಿರೇ ಸುದ್ದಿಗಾರನ ಪತ್ರವು ದ್ವೇಷಪೂರಿತವಾಗಿದ್ದಿತೆಂದು ತೋರುತ್ತದೆ. ಪತ್ರಕರ್ತರು ಸರಿಯಾದ ಸುದ್ದಿಗಳನ್ನು ತಿಳಿಸಬೇಕಲ್ಲದೇ ಕಿಡಿಗೇಡಿತನದ ಕೃತ್ಯಗಳ ಬಗ್ಗೆ ಪತ್ರವ್ಯವಹಾರ ಮಾಡುವದರಲ್ಲಿ ಏನೂ ಅರ್ಥವಿಲ್ಲವೆಂಬದನ್ನು ಪತ್ರ ಬರೆದವರು ತಿಳಿದುಕೊಂಡು ಈ ನಾಚರಣೆ ಎಚ್ಚರಿಸುಬೇಕು. ಸಂ. ಕ.)

ಬಂಧುಗಳಾದ 'ಕನ್ನಡಿಗ'ದ ಸಂಪಾದಕರಿಗೆ—

ತಮ್ಮ ಆ ೫. ೬ ಯ 'ಕನ್ನಡಿಗ'ದ ಪತ್ರಗಳ ಸಾರಾಂಶದಲ್ಲಿ ಕುಕನೂರ ಪಾಠಶಾಲೆಯ ಮುಖ್ಯಾಧ್ಯಾಪಕರ ವಿಷಯದ ವಿಧಾನವನ್ನ ನೋಡಿ ಸಖೇದ ಸೋಜಿಗವೆನಿಸಿತು. ಅದರಲ್ಲಿ ಹೇಳಿಯಬ್ಬಟ್ಟ ಶ್ರೀ. ರಾಘವೇಂದ್ರರಾಯರು ಮೊನ್ನಿನ ವರೆಗೆ ಶ್ರುತಿಸ್ಮೃತ್ಯಾದಿಗಳಲ್ಲಿ ವಿಧಿಸಿದ ಸಂಧ್ಯೆ, ಅಗ್ನ್ಯುಪಾಸನೆ ಇತ್ಯಾದಿ ನಿತ್ಯನೈಮಿತ್ತಿಕ ಕರ್ತವ್ಯಗಳನ್ನಾಚರಿಸುವದಲ್ಲದೆ, ಸಾತ್ವಿಕ ಆಹಾರ ವಿಹಾರಗಳಿಂದಿದ್ದು ನೈಷ್ಠಿಕ ಬ್ರಹ್ಮಚರ್ಯದ ಮೇಲ್ಪಂಕ್ತಿಯನ್ನು ಹಾಕಿಕೊಟ್ಟದ್ದು ನಿಜ. ಹಾಗೂ ತಮ್ಮ ಶಾಲೆಯಲ್ಲಿ, ಕೇವಲ ೧೩—೧೪ ವರ್ಷದ ಹುಡುಗರ ಉಚ್ಚ ವರ್ಣದ ಒಬ್ಬಿಬ್ಬ ಪಾಲಕರು ತಮ್ಮ ಬಾಲಕರ ಮನಸಿನ ವಿರುದ್ಧವಾಗಿ ಲಗ್ನದ ಯತ್ನ ಮಾಡಿದಲ್ಲಿ ಯುಕ್ತ ಉಪದೇಶವನ್ನು ಮಾಡಿದಷ್ಟು ನಿಜ. ಆದರೆ, ಅವರು ತಮ್ಮ ಆಜನ್ಮ ಬ್ರಹ್ಮಚರ್ಯ ವ್ರತದ ಪ್ರತಿಜ್ಞೆಯನ್ನು ಇಲ್ಲವೆ ಸಹಜ ಮಾತಿನಲ್ಲಿ ಯಾರ ಮುಂದಾದರೂ ಆ ತರಹದ ವಿಚಾರವನ್ನು ವ್ಯಕ್ತಪಡಿಸಿದ್ದರೆ ಅಂಥ ಸಭ್ಯರು ಅದನ್ನು ಜಾಹೀರ ಮಾಡಿದರೆ ನೆಟ್ಟಗಾಗುವದು.

ಅವರು ತಮ್ಮ ಬೀ. ಏ. ದ ವರೆಗಿನ ಅಭ್ಯಾಸವನ್ನು ಮುಗಿಸಿ, ನವನೋಹಕ ತಾರುಣ್ಯದ ೨೪ನೇ ವಯಸ್ಸಿನಲ್ಲಿ, ಸುಲಭ ಸ್ವಾರ್ಥದ ತುಳಿದ ಹಾದಿಯನ್ನು ಬಿಟ್ಟು, ನಿಜವಾದ ಕರ್ನಾಟಕದ ಜಾಗೃತಿಗಾಗಿ ಕುಕನೂರದಲ್ಲಿ ಪಾಠಶಾಲೆಯನ್ನು ಸ್ಥಾಪಿಸಿ, ಅದಕ್ಕೆ ವಹಿಸಿಕೊಂಡು ಕಾರ್ಯ ನಡೆಸಿದರು. ಲಗ್ನವಾಗುವ ವರೆಗೆ, ತಮ್ಮ ವಿದ್ಯಾರ್ಥಿದಶೆಯಲ್ಲಿ ಕೂಡ ಸಹಜ ಆಚರಣೆಯಲ್ಲಿದ್ದ ವ್ರತಗಳನ್ನು ಹೆಚ್ಚೆಚ್ಚು ಆಚರಣೆಯಲ್ಲಿ ತಂದು, ತಮ್ಮ ಸಂಸ್ಥೆಯಲ್ಲಿ, ಆಗಣ ವಿದ್ಯಾರ್ಥಿಗಳಲ್ಲಿನ ಸಾವರ್ತ್ರಿಕ ಬ್ರಹ್ಮಚರ್ಯಹ್ರಾಸಕಾಲದಲ್ಲಿ, ಬ್ರಹ್ಮಚರ್ಯಕ್ಕೆ ಪೋಷಕವಾಗುವಂಥ ಯೋಗಾಸನ ನಮಸ್ಕಾರಾದಿ ಕ್ರಮಗಳನ್ನು ಏರ್ಪಡಿಸಿ, ಉಪನೀತರಾದವರಿಗೆ ಸಂಧ್ಯಾ, ಅಗ್ನಿಕಾರ್ಯ, ವ್ಯಾಯಾಮ ಮುಂತಾದವುಗಳನ್ನು ಮಾಡಹೇಳಿ, ನಾಟಕ, ಹೋಳೀ ಹುಣ್ಣಿವೆಯ ಬೀಭತ್ಸ ಪ್ರಕಾರ, ದಶೀಯಾದಿ ದುಷ್ಟಚಟಿಗಳು, ಹುಡುಗರ ಬ್ರಹ್ಮಚರ್ಯಕ್ಕೆ ವಿಘಾತಕವೆಂದು ಅವರು ಮೇಲೆ ಮೇಲೆ 'ಉಬ್ಬಿಬ್ಬಿ ಹಿಗಿಹಿಗಿದು' ಹೇಳಿರು

ವರು ಮತ್ತು ಯೌವನಶ್ರೀವ ಅದನ್ನೇ ಮಾಡಲು ಟೊಂಕಕಟ್ಟುವರು. ಇದರಿಂದ ಅವರು ಆಜನ್ಮ ಅವಿವಾಹಿತ ಬ್ರಹ್ಮಚಾರಿಗಳೆಂದು ಭಾವಿಸಿದ್ದು ಎಂಥ ವಿಚಿತ್ರ? ಇಂದಿನವರಿಗೆ ಬೇಬಸ್ಸ ಸಮಾಜದಿಂದ ದೂರಿದ ಹೇಳಿದ ಶಾಸ್ತ್ರದಿಂದ ವಿದ್ಯಾರ್ಥಿಗಳು ಆಜನ್ಮ ಅವಿವಾಹಿತ ಬ್ರಹ್ಮಚಾರಿಗಳಾಗಿಯೇ ಇರಲಿಕ್ಕೆ ಉಪದೇಶಿಸಿದರೆಂದು ವಿನಾಕಾರಣ ತಿಳಕೊಂಡದ್ದಕ್ಕೆ ಅವರೇನು ಮಾಡಬೇಕು? ಇಂಥ ತಪ್ಪು ತಿಳುವಳಿಕೆಯನ್ನು ಮಾಡಿಕೊಂಡ ಮಹನೀಯರೇ (!) ತಮ್ಮ ಕಿವಿಗಳನ್ನು ಒತ್ತಿ ಹಿಂಡಿಕೊಳ್ಳುವುದೇ ಹೊರತು ಬೇರೆ ಯಾವ ಉಪಾಯವೂ ತೋರದು.

ಕೇವಲ ಒರಿವಲಂಬಯಾಗದೆ, ವ್ಯಾಕರಣ ಕಾರ್ಯ ಕ್ಷೇತ್ರಕ್ಕೆ ಎಡೆ ಮಾಡಿಕೊಡುವ ಮೂಲಕ, ಎಲ್ಲ ಆಶ್ರಮಗಳಿಗೆ ಆಧಾರಭೂತವಾಗಿ, ಸಕಲ ಋಷಿಮುನಿಗಳಿಂದ, ಉಪದೇಶ ಮಾರ್ಗ ಆಚರಿಸಲ್ಪಟ್ಟು, 'ಧನ್ಯ'ನೆಂದು ಹೊಗಳಿದಂಥ ಗೃಹಸ್ಥಾಶ್ರಮದ ಸ್ವೀಕಾರ ಶಾಸ್ತ್ರದಿಂದಲೇ 'ನಿಜವಾದ ಬಣ್ಣ ಹೊರಬಿದ್ದಂತಾಯಿತು' ಎಂದು ಕೆಲವು ನಾಸ್ತಿಕ ಶಿಖಾಮಣಿಗಳ ಹೃದಯದ್ದೇ ನಿಜವಾದ ಬಣ್ಣ ಹೊರಬೀಳುವ ದಂಭವನ್ನು ಸುಜ್ಞರು ಎಂದಿಗೂ ಅರಿಯದಿರಲಾರರು!

— ಸತ್ಯವಕ್ತಾ

ಹುಗಿದ ಕೂಸು ಜೀವಂತ ಎದ್ದಿತು!!

ಬದಾಮಿ ತಾಲೂಕದ ಕಟಗೇರಿ ಗ್ರಾಮದಲ್ಲಿ ಓರ್ವ ಲಿಂಗವಂತ ಸ್ತ್ರೀಯು ಹಡೆದ ಕೂಡಲೇ ತನ್ನ ಕೂಸನ್ನು ಅದೇ ಕೋಣೆಯ ಒಂದೆಡೆಗೆ ಮಾಡಿ, ಹುದಿ ಕಟ್ಟಿ ಹುಗಿದಳು. ಮುಂದೆ ಫೌಜದಾರ ರೊಟ್ಟೀಯವರು ಗಣೇ ತಾ|| ದಿನ ಈ ಸುದ್ದಿಯನ್ನು ಕೇಳಿ ಕಟಗೇರಿಗೆ ಆಗಮಿಸಿ ಗೆಳೆಯಂದ ಹೋಗಿ ಹುಗಿದ ಸ್ಥಾನವನ್ನು ಶೋಧಿಸಿ, ಅಗೆಸುತ್ತಿರುವಾಗ್ಗೆ ಕೂಸು ಅಳುವ ಧ್ವನಿಯು ಕೇಳಿಸಿತು! ಎಲ್ಲರಿಗೂ ಆಶ್ಚರ್ಯವಾಯಿತು! ಇಲಿಗಳ ಧ್ವನಿಯಿರಬಹುದೆಂದು ಜನರು ತರ್ಕಿಸಿದರು! ಆದರೆ ಪೂರ್ಣ ಅಗೆದು ನೋಡುವಾಗ್ಗೆ ಹುಗಿದು ೨೦ ತಾಸಿನ ವರೆಗೆ ಕೂಸು ಜೀವಂತವಾಗಿದ್ದು ಅಳುವದನ್ನು ಕಂಡು ಎಲ್ಲರೂ ಅತ್ಯಂತ ಆಶ್ಚರ್ಯಚಕಿತರಾದರು! ದೇವರ ಅಗಾಧ ಲೀಲೆಯನ್ನು ಕಂಡರು! ಈ ಕೂಸು ಈಗ್ಗೆ ಬದಾಮಿಯ ಸರಕಾರಿ ದವಾಖಾನೆಯಲ್ಲಿ ಕೈದಿಯಿಷ್ಟ ದಾಯಿಯೊಂದಿಗೆ ಆರೈಕೆ ಹೊಂದುತ್ತಲಿದೆ. ಗರ್ಭಾಶಯದಿಂದ ಹೊರಬಿದ್ದ ಕೂಡಲೇ ಉಸುರಾಡಿಸುವ ಮೊದಲು ಕೂಸುಗಳನ್ನು ಹುಗಿದರೆ ಮಾಂಸಗಳ ಸಹಿತ ಕೆಲಕಾಲ ಹುಗಿದರೂ ಗರ್ಭದಲ್ಲಿರುವ ತೆ ಜೀವಂತ ಉಳಿಯುವದು ಶಕ್ಯವಿದೆಯೆಂದು ಡಾಕ್ಟರರ ಮತ. ಹುಗಿಯುವಾಗ್ಗೆ ಗಡಿಬಿಡಿಯಿಂದ ಮನಬಂದಂತೆ ಕಲ್ಲು ಮಣ್ಣುಗಳನ್ನು ಕೂಸಿನ ಮೇಲೆ ಸುರಿವಿದ್ದರೂ, ಆದರಿಂದ ಕೂಸಿಗೆ ಏನೂ ಘಾಯತಗಲದಿದ್ದುದು ಈಶ ಲೀಲೆಯೇ. ಶ್ರೀ ರೊಟ್ಟಿಯವರಂತೆ ಪೋಲೀಸರು ಜಾಗ್ರತರಾಗಿ ಅಗೆದಾಗ್ಗೆ ಗುದ್ದಲಿಗಳನ್ನು ಶೋಧಿಸುವದಲ್ಲದೇ, ಜೀವಂತ ಉಳಿಯುವಂತೆ ತತ್ಕಾಲದಲ್ಲಿ ಗಾಯ ಹೊಂದಿದವನನ್ನು ದವಾಖಾನೆಗೆ ಕಳಿಸುತ್ತ ಹೋದರೆ ಜನರು ಪೋಲೀಸರಿಗೆ ಧನ್ಯರೆಂದಾರು.

ನಮ್ಮ ದಕ್ಷಿಣ ಕನ್ನಡದ ಪತ್ರ.

(ತಾ|| ೯—೧೦—೩೭)

ನಮ್ಮ ಅಧಿಪತ್ಯದ ಗವರ್ನರರಾದ ಲೊರ್ಡ ಗೋಶೆನ್‌ರೂ ಅವರ ಪತ್ನಿಯವರೂ ಇನ್ನು ಒಂದೆರಡು ದಿನಗಳಲ್ಲಿ ಮಂಗಳೂರನ್ನು ಸಂದರ್ಶಿಸಲಿಕ್ಕಿರುವರು. ಸಾರ್ವಜನಿಕ ಸ್ವಾಗತ ಸಮಾರಂಭಕ್ಕಾಗಿ ಪಟ್ಟಣದ ನಾಗರೀಕರು ನಗರ ಶೃಂಗಾರದ ಕಾರ್ಯದಲ್ಲಿ ಬಹಳ ಪ್ರಮ ತತ್ಪರರಾಗಿರುವರು. ಗವರ್ನರರು ಬರುವ ತಾ|| ೧೦ನೇ ಸೋಮವಾರ ಪುತ್ತೂರು ಮಾರ್ಗವಾಗಿ ಮೋಟಾರಿನಿಂದ ಮಂಗಳೂರಿಗೆ ಬರುವರು. ಅವರ ನಿರೀಕ್ಷಿಸಿದ ಆಗಮನದಿಂದ ನಮ್ಮ ಜಿಲ್ಲೆಯಲ್ಲೇನು ಸುಧಾರಣೆಗಳು ನಡೆಯಲಿಕ್ಕಿವೆಯೋ ನೋಡಬೇಕು.

ನಮ್ಮ ಜಿಲ್ಲೆಯ ಈ ವರ್ಷದ ಪೈರು ಎಷ್ಟೋ ತೃಪ್ತಿಕರವಾಗಿರುವದು. ಪೈರು ನೆಟ್ಟಂದಿನಿಂದ ಇತರ ವರ್ಷಗಳಂತೆ ಅತಿವೃಷ್ಟಿಯಿಂದದೆ ಪೈರು ಬೆಳವಣಿಗೆಗೆ ತಕ್ಕ ಪ್ರಮಾಣದಲ್ಲಿ ಮಳೆಗರೆಯುತ್ತಿತ್ತು. ಪೈರು ಹಣ್ಣಾಗಿ ಕೊಯ್ಯಲಿಕ್ಕೆ ಬಂದ ಸಮಯದಲ್ಲಿ ಬಿಸಿಲು ಬೇಕಾದ್ದಲ್ಲಿ ೫—೬ ದಿನ ಮಳೆ ಬಂದು ಜನರಲ್ಲಿ ಹಾಹಾಕಾರವೆದ್ದಿತಾದರೂ, ಬಡವರು ಒಪ್ಪೊತ್ತಾದರೂ ಉಣ್ಣಲೆಂದೋ ಏನೋ, ದೇವರ ದಯೆಯಿಂದ ಮಳೆಯು ಮುಂದರಿಸಿದೆ, ಬೆಳೆಗೂ ಯಾವ ಅಪಾಯವೂ ತಟ್ಟದೆ ಪೈರು ಬೆಳೆಯುತ್ತ ಬಂತು. ಕಳೆದ ವರ್ಷಕ್ಕಿಂತಲೂ ಈ ವರ್ಷದ ಪೈರು ಉತ್ತಮವಾಗಿದೆ. ‡ ‡ ‡ ‡ ‡

ದಕ್ಷಿಣ ಕನ್ನಡದಿಂದ ಇಂಗ್ಲಂಡದಲ್ಲಿ ಐ. ಸಿ. ಎಸ್. ಪರೀಕ್ಷೆಗೆ ನಿಂತ ಹಲವು ಮಂದಿ ಉಮೇದ್ವಾರರಲ್ಲಿ, ಮಿ ಜೋಸೆಫ್ ಲೋಬೋ, ಶ್ರೀ. ಎನ್. ಡಿ ಕೃಷ್ಣರಾವ್ ಮತ್ತು ಎಚ್. ಶ್ರೀನಿವಾಸ ಕಾಮತ್ ಈ ಮೂವರು ಪಾಸಾಗಿರುವರೆಂದು ತಿಳಿಯುತ್ತೇನೆ. (ಹಿಂದುಸ್ಥಾನದಲ್ಲಿ ಒಟ್ಟು ಪಾಸಾದ ಹಿಂದೀಯರು ೧೪ ಮಂದಿ.)

ಇಹವೃತ್ತ.

ಈ ೧೫ ದಿನಗಳಲ್ಲಿ ಮಳೆ ಮತ್ತೆ ಆಗಿದೆ. ಹತ್ತಿ—ಗೋದಿಗಳ ಬಿತ್ತಿಕೆಯು ಮುಗಿದಿದೆ.

“ಬೋಧಾಮೃತ” ಪತ್ರಿಕೆಯ ಪ್ರಕಟಣೆಗಳನ್ನು ಈ ವಾರದಲ್ಲಿ ಹಂಚಿದ್ದೇನೆ.

ನವರಾತ್ರಿಯ ಕರ್ನಾಟಕ ರಾಷ್ಟ್ರೀಯ ಉತ್ಸವವು ಬಲಭೀಮ ವ್ಯಾಯಾಮಶಾಲೆಯ ಉತ್ಸಾಹಿ ತರುಣರಿಂದ ಬಾಗಲಕೋಟೆಯಲ್ಲಿಯೂ ನೆರವೇರಿತು.

ಶ್ರೀ ಮಹಾನಂದತೀರ್ಥರ ಜಯಂತ್ಯುತ್ಸವವು ದಶಮಿಯಿಂದ ತ್ರಯೋದಶಿಯವರೆಗೆ ಬಲು ಉತ್ಸಾಹದಿಂದಲೂ ವಿಜೃಂಭಣೆಯಿಂದಲೂ ನೆರವೇರಿತು. ಈ ಸಲ ಆರು ರೂ. ಗಳು ವಿದ್ಯಾರ್ಥಿಗಳಿಗೆ ಪಾರಿತೋಷಕವಾಗಿ ಹಂಚಲ್ಪಟ್ಟವು. ಶ್ರೀ ಸುಬ್ರಹ್ಮಣ್ಯದ ಶ್ರೀಗಳು ಸಮೀಪದಲ್ಲಿ ಆಗಮಿಸಿದ್ದುದು ವಿಶೇಷ ಸಂಗತಿ. ಕಡೆಯ ದಿನದ ಮೆರವಣಿಗೆಯೂ ವೈಭವದಿಂದ ಸಾಗಿತು. ಆದರೆ ಮತಭೇದಗಳೆತರ ವಿಷಯಗಳಲ್ಲಿ ಎಷ್ಟೇಯಿದ್ದರೂ, ಸರ್ವಮತಾನುಯಾಯಿಗಳೆಲ್ಲ ಅವನ್ನು ಲೆಕ್ಕಿಸದೆ ಒಟ್ಟಾಗಿ ಕೂಡಿಕೊಂಡು ಇಂತಹ ಉತ್ಸವಗಳನ್ನು ಜರುಗಿಸಿದರೆ, ಉತ್ಸವದ ಆರಾಧ್ಯ ದೇವತೆಗೆ ನಿಜವಾದ ಆನಂದವಾಗುವದಿಲ್ಲವೆ?

ಮೈನಪೇಟೆಯ ಪಲ್ಲಕ್ಕಿಯ ಪ್ರಕರಣದ ವಿಚಾರಣೆಯು ಕಳೆದ ವಾರದಲ್ಲಾಯಿತು. ಬೀದಿಗಳಲ್ಲಿಯ ಸಾರ್ವಜನಿಕ ಮೆರವಣಿಗೆಗಳು ಹಿಂದೂ ಧರ್ಮಕ್ಕೆ ಆವಶ್ಯಕವಾದವುಗಳೆಂದು ಹಿಂದೂ ಮತೀಯರ ಸಾಕ್ಷಿಗಳಾದವು. ಹಿಂದೂ ಧರ್ಮಕ್ಕೆ ಅನಾವಶ್ಯಕವೆಂದು ಮಹಮ್ಮದೀಯರ ಸಾಕ್ಷಿಗಳಾದವು! ಮಹಮ್ಮದೀಯರ ಪರವಾಗಿ ಓರ್ವ ಬ್ರಾಹ್ಮಣ ವಕೀಲರು ಕೆದರಿ ಕೆದರಿ ಪ್ರಶ್ನೆಗಳನ್ನು ಕೋರ್ಟಿನಲ್ಲಿ ಕೇಳುತ್ತಿದ್ದುದು ಹಿಂದೀಯರಿಗೆಲ್ಲ ಆಶ್ಚರ್ಯವನ್ನುಂಟು ಮಾಡಿತು. ವೇ|| ಮಾಗೀ ಕೃಷ್ಣಾಚಾರ್ಯರ ಸಮರ್ಪಕವಾದ ಉತ್ತರಗಳಿಂದ ಬ್ರಾಹ್ಮಣ ವಕೀಲರ ದೃಷ್ಟಿಯಿಂದ ಗಡಚಿಸಿದ ಪ್ರಶ್ನೆಗಳೆಲ್ಲ ಕೋರ್ಟಿನಲ್ಲಿ ಧಾರ್ಭುಸ್ಸೆಂದು ಹಾರಿಹೋದವು.

ಡಾ ಹರ್ಡೀಕರ ನಾರಾಯಣರಾಯರು ೩—೪ ದಿನಗಳ ವರೆಗೆ ಇಲ್ಲಿದ್ದು, ವ್ಯಾಯಾಮ ಶಾಲೆ ಹಾಗೂ ಶಿಕ್ಷಣ ಶಿಬಿರಗಳ ವ್ಯವಸ್ಥೆಯು ಸರಿಯಾಗಿ ಸಾಗಬೇಕೆಂದು ಒಂದು ಮಂಡಳವನ್ನು ಸ್ಥಾಪಿಸಿ, ಈ ಕಾರ್ಯಕ್ಕೆ ಚಲನವನ್ನು ಕೊಟ್ಟು ಹೋದರು.

ನಮ್ಮ ಬೆಳಗಾವಿಯ ಪತ್ರ.

ಪ್ಲೇಗಿನ ಪ್ರಮಾಣವು ಬೆಳೆಯುತ್ತಿದೆ. ಆಗಸ್ಟ ತಿಂಗಳಲ್ಲಿ ೨೩ ಜನರಿಗೆ ಪ್ಲೇಗವು ಬಂದಿತು ೨೦ ಮರಣಗಳಾದವು. ಸಪ್ಟಂಬರದಲ್ಲಿ ೬೦ ಜನರಿಗೆ ಪ್ಲೇಗವು ಬಂದು ೩೮ ಜನರು ಮರಣ ಹೊಂದಿದರು. ಇನಾಕ್ಯುಲೇಶನ್ನವು ಸಾಗಿದೆ. ಈಗಾಗಲೇ ೫೦೦೦ ಜನರು ಇನಾಕ್ಯುಲೇಶನ್ನ ಮಾಡಿಸಿಕೊಂಡಿರುವರು.

ರೇಲ್ವೆ ಸಲಹಾಗಾರ ಕಮಿಟಿಯನ್ನು ಹುಬ್ಬಳ್ಳಿಯಲ್ಲಿ ಸ್ಥಾಪನೆ ಮಾಡಲಿಕ್ಕೆ ರೇಲ್ವೆ ಬೋರ್ಡದ ಮಂಜೂರಿ ಸಿಕ್ಕಿದೆ ಎಂದು ಮುಂಬಯಿ ಸರಕಾರದವರು ಬೆಳಗಾವಿ ರೇಲ್ವೆ ಮಂಡಳಕ್ಕೆ ತಿಳಿಸಿದ್ದಾರೆ. ರೇಲ್ವೆ ಮಂಡಳದಿಂದ ಒಬ್ಬ ಮೆಂಬರ ಹೆಸರನ್ನು ಸೂಚಿಸಬೇಕೆಂದೂ ಬರೆದಿದ್ದರು. ಆ ಪ್ರಕಾರ ಶ್ರೀ ಪಂಡಿತಪ್ಪ ಚಿಕ್ಕೋಡಿಯವರು ಆರಿಸಲ್ಪಟ್ಟರು.

ಗುಣ ಒದಗದಿದ್ದರೆ ಹಣ ಪರತ!

ರಕ್ತಶುದ್ಧಿ ಪತ್ತು ಧಾತುಪುಷ್ಟಿಕಾರಕ

ಬಲವಂತ ಗುಟಿಕಾ

ಈ 'ಬಲವಂತ ಗುಟಿಕೆ'ಯು ಉತ್ತಮ ವನಸ್ಪತಿ ಚೂರ್ಣದಿಂದ ಪುಷ್ಟಿಕ ಮತ್ತು ಕಾಮೋತ್ತೇಜಕ ಪದಾರ್ಥಗಳನ್ನು ಕೂಡಿಸಿ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ಥ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಮೇಹಾದ್ರೋ, ಅಗ್ನಿ ಮಾಂದ್ಯ ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ವೃದ್ಧಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ (ವಿಶೇಷ ವಿವರ ಬೇಕಾದರೆ ಖಾತ್ರಿ ಮಾಡಿಕೊಳ್ಳಬಹುದು.) ಇದರಿಂದ ವೈದ್ಯರಿಗೆ ಸಂಬಂಧಿಸಿದ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುಪುಷ್ಟಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೆ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿ ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸಃ— ಎಸ್ ಬಿ. ಕಗನರ್ ಮತ್ತು ಸನ್ಸ್. ಮು. ಪೋಷ್ಟ ನಿಪ್ಪಾಣಿ (ಜಿ. ಬೆಳಗಾವ.)

ಬನಾರಸ್ ರೇಶ್ಮೀ ಶೀರೆಗಳು.

S.U.N.&CO. BENARES CITY.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೀ ಮಾಲುಗಳನ್ನು ಕೊಳ್ಳುವವರಿಗೆ ವ್ಹಿ. ಪಿ. ಮೂಲಕ ಕಳುಹಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕು ಉದ್ದ ಮೊಳ ೧೪ ಅಗಲಿ ಮೊಳ ೩, ಥಾನು ೧ಕ್ಕೆ ೧೫ ರಿಂದ ೫೦ ಜರಿ ಶೀರೆಗಳು ೧೭-೧೮ ಮೊಳ ಉದ್ದ ೧ಕ್ಕೆ ರೂ. ೨೫ ರಿಂದ ೫೦ ರವರೆಗೆ. ಬುಟ್ಟೆದಾರ್ ಬನಾರಸ್ ಶೀರೆ ೧೭-೧೮ ಉದ್ದ ಮೊಳ ೭ ೧ಕ್ಕೆ ರೂ. ೫ ರಿಂದ ೩೦೦ ರ ವರೆಗೆ ಉಡುವ ಮಗುಟ ಉದ್ದ ೭-೮ ಮೊಳ ೧ಕ್ಕೆ ರೂ. ೧೦ ರಿಂದ ೩೦ ರ ವರೆಗೆ ಜರೀದುಪ್ಪಟಿ ೭ ೮ ಮೊಳ ಉದ್ದ ೧ಕ್ಕೆ ರೂ. ೧೧ ರಿದ ೪೦ ರ ವರೆಗೆ. ಬಿಳಿ ರೇಶ್ಮಿ ಜರೀದುಪ್ಪಟಿ ೭ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೩೦ ರವರೆಗೆ ಸಾದಾ ಬಂಗಾಳ ರೇಶ್ಮಿ ಶಾಲು ೬ ಮೊಳ ಉದ್ದ ೩ ಮೊಳ ಅಗಲು ೧ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಫಟಿಕದ ೧೦೮ ರ ಸರ ೧ಕ್ಕೆ ರೂ. ೧ ರಿಂದ ೧೦ ರ ವರೆಗೆ ಸುದರ್ಶನ ೧ಕ್ಕೆ ಆಣೆ ೮ ರಿಂದ ರೂಪಾಯಿ 1½ ರವರೆಗೆ ಜಗನ್ನಾಥಜಾಗಂಟೆ ೧ಕ್ಕೆ ರೂ. 2½ ರಿಂದ 15 ರ ವರೆಗೆ ಮತ್ತು ಬೇರೆ ಬೇಕಾದವುಗಳ ಕೆಟಲಾಗ ಇನಾಂ

ವಿಳಾಸಃ-ಶಿರೋಮಣಿ ನಾರಾಯಣ ಆಚಾರ್ಯ ಕಂಪನಿ ಚೌಕಂಬಾ ಕಾಶಿ ಬನಾರಸ್

ಕರ್ನಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯುಲರ ಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರುವದಕ್ಕೆ ತಕ್ಕದಾದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಚಿತ್ರ ಕಲೆ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು ಹೊರಗಿನವರಿಗೆ ಅನುಕೂಲವಾದ ವಸತಿಗೃಹವೂ ಇರುವದು ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು.

ವಿಜಾಪೂರ, ಧಾರವಾಡ. ಕಾರವಾರ ಮೊದಲಾದ ಜಿಲ್ಲೆಗಳ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ॥ ಲಕ್ಷ್ಮೀಬಾಯಿ ಕುಂಭಕೋಣಂ,

ವ್ಯವಸ್ಥಾಪಕರು, ಕ ಮ ವಿದ್ಯಾಲಯ, ಧಾರವಾಡ

ಅತೀ ಸುಲಭ ಕಂತುಗಳು! ಫಲಿತಾಂಶವು ಹೆಚ್ಚು!

ದಿ. ಹಿಂದುಸ್ಥಾನ ಕೋಆಪರೇಟಿವ್ಹ

ಇನ್ಸುರೆನ್ಸ ಸೊಸೈಟಿ ಲಿಮಿಟೆಡ್.

(ಬ್ರಾಂಚ್ ಆ- ಮುಂಬಯಿ) (ಹೆಡ್ ಆಫೀಸು- ಕಲ್ಕತ್ತಾ)

ಈ ಕಂಪನಿಯು ಇಡೀ ಹಿಂದುಸ್ಥಾನದಲ್ಲೆಲ್ಲಾ ಪ್ರಾಮುಖ್ಯತೆಗೆ ಬಂದ ಸ್ವದೇಶಿ ಕಂಪನಿಗಳಲ್ಲಿ ಒಂದಾಗಿದೆ. ಜನರ ಸೌಕರ್ಯಕ್ಕಾಗಿ ಈ ವಿಜಾಪೂರ ಜಿಲ್ಹೆಯೊಳಗೆ ಇದರ ಒಂದು ಶಾಖೆಯು ಸ್ಥಾಪಿಸಿಟ್ಟಿರುವರು. ಕಂತುಗಳು ಅತೀ ಸುಲಭ ಇದ್ದು, ಧಾರಾಳವಾಗಿ ಈ ಕಂಪನಿಯಲ್ಲಿ ನಿಮ್ಮ ಜೀವ ವಿಮೆಯನ್ನು ಇಳಿಸಬಹುದು.

ಇದರ ಮೂಲಧನವು ೮೫,೦೦೦,೦೦ ವಿರಿದೆ. ೧೯೨೫-೨೬ ನೇ ವರ್ಷದಲ್ಲಿ ಸಾವಿರ ವರ್ಷಕ್ಕೆ ೧೦೦೦ ರೂ. ವಿಮೆಗೆ ರೂ. ೧೫ ರೂ. ರಂತೆ ಫಲಿತಾಂಶ ಕೊಟ್ಟಿರುತ್ತಾರೆ.

ಎಲ್ಲಾ ಕಡೆಯಲ್ಲಿ ಏಜಂಟರು ಬೇಕಿದ್ದಾರೆ.

ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿದಲ್ಲಿ ಹೆಚ್ಚಿನ ಮಾಹಿತಿ ತಿಳಿಯಬಹುದು.

ವಿಳಾಸಃ—

ವಿಜಾಪೂರ. ೨೪—೭—೨೭ } ಜಿ. ಆರ್. ಪಕ್ಕನಳ್ಳಿ ಅಂಡ ಬ್ರದರ್ಸ. ಚೀಫ ಏಜಂಟ್ಸ, ವಿಜಾಪೂರ ಜಿಲ್ಹಾ.

ಸ್ಟಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ಪಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇರಿ) ೧ ಪೌಂಡಿಗೆ ರೂ. ೧-—-

೨ ನೇ ,, ,, ,, ರೂ. ೧-೩-೦

ದಿ ಸ್ಟಾಂಡರ್ಡ್ ಕಾಫಿ ಕಂಪನಿ

ಚಿಕ್ಕಪೇಟ ಬೆಂಗಳೂರು ಸಿಟಿ.

ಶ್ರೀ ಭಾರತ ಜಗಪ್ರಸಿದ್ಧ ಜಗ ಜಾಹೀರ ನೋಟೀಸು.

ಮೃತ್ಯುಂಜಯ ಔಷಧದಿಂದ ಮೂರೇ ತಾಸಿನಲ್ಲಿ ಗುಣವಿಲ್ಲೆಂದು ಸಿದ್ಧ ಮಾಡುವವರಿಗೆ-೫೦೦ ರೂ. ಬಕ್ಷೀಸ ಕೊಡುವೆವು

ಮೂರೇ ತಾಸಿನಲ್ಲಿ ಗುಣ] ಕಳ್ಳಬಟ್ಟಿ ರಸಾಯನ ತಕ್ಕೊಂಡು [ಮೂರೇ ದಿವಸಗಳಲ್ಲಿ ರೋಗವು ಪೂರ್ಣ ಹೋಗುವದು.
ಸಾಯುವದೇಕೆ?

೫೬ ಶುದ್ಧ ವನಸ್ಪತಿಯಿಂದ ತಯಾರು ಮಾಡಿದ ಮೃತ್ಯುಂಜಯ ಔಷಧ.

ಉಪದಂಶ, ಗರ್ಮಿ (ಉಷ್ಣ) ಪರ್ಮಿ ಮುಂತಾದ ಏಳು ಪ್ರಕಾರದ ರೋಗ ಬಹುದಿನ ನೆಲಗೊಂಡದ್ದು ಶರೀರ ಕತ್ತರಿಸಿ ಬಿದ್ದರೂ ಮೂರು ದಿವಸಗಳಲ್ಲಿ ಗುಣವಾಗುವದು.

ಇಂಥ ಪ್ರಕಾರ ರೋಗಗಳಿಂದ ಉತ್ಪನ್ನವಾಗುವ ವಿಕಾರ ಉಷ್ಣ [illegible] (ಉಪದಂಶ) ಗರ್ಮಿ ಚಟ್ಟಿ ಒದದ ಗಂಟು, ನಡಿಸಲ್ಲಿಯ ಗಂಟು, (ವೃಷಣ) ಅತಿಶಯ ಬಾವು, ಇಂದ್ರಿಯದ ಮೇಗೆ ತಿಡಿಕ, ಸೂಜಕು, ರಕ್ತ ಕೀವು ಸುರಿಯೋಣ ಆದರಂತೆ ಸ್ತ್ರೀಯರ ಪ್ರದರ (ಕೆಂಪು ಬಿಳಿ ಶೆರಗು) ಹೊಲೆ ಕುಟ್ಟಿಹೋಗ ಬೆಳೆಯೋಣ, ಕಡಕಿ ವಿಕಾರಗಳಿಂದ ಗರ್ಭಾಶಯ ಕೆಡೋಣ, ಮೂತ್ರ ಕಣ್ಣು ಕಾಲು ಉರಿಯೋಣ, ಕಾವು ಹೆಚ್ಚಾಗಿ ಮಧುಮೇಹ ಮೈಮೇಲೆ ಗರ್ಮಿ (ಉಷ್ಣ) ಒಡೆದು ಕೀವು ಹೊರಬಿದ್ದು ಆದರಿಂದ ವ್ರಣ ಘಾಯ ವಾಗಿ ಅಂಗಳಕ್ಕೆ ತೂತು ಬಿದ್ದು ಮೂಗು ಕೊಡ್ರುವದೂ ಸೋರುವದೂ ಎಲ್ಲ ತರದ ಮೂಲವ್ಯಾಧಿ, ಹೊಟ್ಟೆ ಕಡತು ವಗೈರೆ ಕಾರಣಗಳಿಂದಾ ಜನನೇಂದ್ರಿಯ ಶಿಥಿಲತಾ ಅಥವಾ ನಪುಂಸಕತ್ವ ಮುಷ್ಟಿಮೈಥುನದಿಂದ ಆಗುವ ಪರಿಣಾಮ, ಸ್ವಪ್ನಾವಸ ಮೂತ್ರದಲ್ಲಿ ಧಾತು ಅಥವಾ ಖರ ಬೀಳೋಣ, ವೀರ್ಯ ತಿಳುವಾಗೋಣ, ಸ್ತ್ರೀಗಮನದಲ್ಲಿ ಶೀಘ್ರ ಪತನ. ತೀವ್ರ ವೀರ್ಯ ಪತನವಾಗೋಣ, ನಪಸೋವು (ಶೂಲಿ) ನೋಯೋಣ, ಬೆನ್ನು ಬಿಗಿಯೋಣ, ವಾತವಿಕಾರ [illegible] ದಿಂದ ಬಾಧಿಸಿದ ವೀರ್ಯಪಾತ ವಗೈರೆ ರೋಗಗಳ ಮೇಲೆ ಅಶಿಕ್ಷಿತ ಅಡಾಣೀ ಜನರ ಕಡಿಯಿಂದ ಪಾರಜ ಮತ್ತು ರಸಕಪುರ, ಇಂಗ್ಲೀಷ ಮುಂತಾದ ಸವಿಷ ಮತ್ತು ಅಪಕ್ವ ಧಾತು ರೂಪ ಪದಾರ್ಥ (ರಸಾಯನ) ಮತ್ತು ಅಪಕಾರಕ ವಸ್ತು ಸೇವಿಸುವದರಿಂದ [illegible] ರಸಾಯನ ಸಿಂತು ಆದರಿಂದ ಕಾಲು ಕೈ ಮೊದಲಾಗಿ ಮತ್ತು ಕೈ ಕಾಲುಗಳಲ್ಲಿ ರಸಾಯನ ಒಡೆದು ಸ್ವತಃ (ತನಗೆ) ಮತ್ತು ಮುಂದಾಗುವ ತನ್ನ ಸಂತತಿಗೆ ಅನೇಕ ರೋಗವು ಉತ್ಪನ್ನವಾಗಿ ಆದರಿಂದ ಭಯಂಕರ ಪರಿಣಾಮ ಭೋಗಿಸಬೇಕಾಗುವದು ಇಂಥ ಪ್ರಕಾರದ ರೋಗಗಳು ಬಹಳ ದಿವಸ ನೆಲಗೊಂಡಿದ್ದಾಗಲೀ ಅಥವಾ ಹೊಸದಾಗಿ ಆದುದ್ದಾಗಲೀ ಇಂಥ ರೋಗಗಳ ಮೇಲೆ ಈ ನಮ್ಮ ಮೃತ್ಯುಂಜಯ ಔಷಧ ಉಪಯೋಗ ಮಾಡಿದರೆ ತತ್ ಸಂಬಂಧಿ ಸಂಪೂರ್ಣ ರೋಗಗಳು ತೀವ್ರವಾಗಿ ಹೋಗಿ ಮೈಯೊಳಗ ಇದ್ದ ರಸಾಯನವು ನಾಶವಾಗುವದು ಮತ್ತು ಅಶಕ್ತಿ ಹೋಗಿ ಮೈಯೊಳಗೆ ಶಕ್ತಿ ಬಂದು ಪ್ರಕೃತಿ ಉತ್ತಮವಾಗುತ್ತದೆ ಒಂದು ಬಾಟ್ಲಿಗೆ [೫] ರೂಪಾಯಿ ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆಯು ಔಷಧದ ಸಂಗಡ ಅಲ್ಪಮೂಲ್ಯ ಲಾಭಃ . ಒಂದು ಆಣೆ ಟಿಕಿಟು ಕಳಿಸಿದಲ್ಲಿ ನಮ್ಮ ಔಷಧದ ಪೂರ್ಣ ಕ್ಯಾಟಲಾಗ ಕಳಿಸುವೆವು. (ತಮ್ಮ ಪತ್ತೆ:- ಪೂರ್ಣ ಬರೆಯಿರಿ.)

ಸುಪ್ರಸಿದ್ಧ ಡಾ|| ಆರ್. ಎಲ್. ಹಿರೇಮಠ ಆರೋಗ್ಯ ಮಂದಿರ ಆಯುರ್ ವನೌಷಧಿ ೫೦೦೦, ಸಾವಿರ
ಕಾರಖಾನೆ ಕಮತನೂರ ಪೋ|| ಶಂಕೇಶ್ವರ ಜಿ|| ಬೆಳಗಾಂವ

EAT KASHMIR FRUITS & NUTS!

ಕಾಶ್ಮೀರದ ಹಣ್ಣು ಹಂಪಲಗಳನ್ನು ಸೇವಿಸಿರಿ!

ತೆಳುವಾದ ತೊಗಟೆಯ ತಾಜಾ ಅಕ್ರೋಡಗಳೂ, ಅರಿಸಿದ ಅಡವಿಯ ಸೇಬುಗಳೂ, (Hazelnuts) ೧೧ ಪೌಂಡಿಗೆ ರೂ. ೫—೮—೦; ತಾಜಾ ಕಾಗದೀ ಬದಾಮು; ಹರಳೆಲ್ಲದ್ದು, ಬಲು ಸವಿಯಾದ ಜಲ್ದರು (Apricots); ಅಂಜೂರಿ; ಮ್ಲೀಸದ್ರಾಕ್ಷಿ; ಕಿಸಮಿಸು, ೧೧ ಪೌ. ಗೆ ೧೩ ರೂ. ; ಕಮಲದ ಶುದ್ಧವಾದ ಜೇನತುಪ್ಪ, ೫|| ಪೌ. ಗೆ ೮ ರೂ. ; ಶುದ್ಧ ಕೇಶರ, ೧ ತೊಲೆಗೆ ೩ ರೂ. ಟಪಾಲ ಖರ್ಚ ಮಾಫ!

ಡಾರ ಬ್ರದರ್ಸ ಶ್ರೀನಗರ, ಕಾಶ್ಮೀರ.

Dar Bros Shrinagar,

Kashmir.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದ ಮನ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಮವು ಇನಾಂ!!! ಅಂ. ಹಾಸಲು ಅಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಪ್ಪ. ಜಾಲವಾದಿ.
ಸ್ಟೇಶನರ್ಸ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ.
೫೭, ಚೀನಾಬಜಾರ್, ಮದ್ರಾಸು



ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

ಗಿ೯೨೭ ನೇ ಜನವರಿ ೧೫ರಿಂದ ಪ್ರಾರಂಭ.



ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ-

೧. ನೀವು ನಮಗೆ ರೂ. ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ. ೨. ಈ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ರೊಖಗಳನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್‌ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪುವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ ಗೋಲ್ಡ" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ.

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ಬಿಕರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು. ಅಥವಾ ವಿ. ಪಿ ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಳೆದುಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಅಸೂಯೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೭-೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್. ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರ ಸಿಟಿ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದ ತಿಂಗಳ ಬಗ್ಗೆ ನಾವು ಈ ದಾವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. **ಬೆಲೆ ರೂ. ೭**

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ— ಸ್ವಾನ ಹೌಸ. ಪಿ. ಬಿ. ೫೦೮. ಪಿ. ಟಿ. ಮದ್ರಾಸ

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೊಕೆಟ್ ವಾಚ್ ೧೪ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳವೇ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ್ ೧೪ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ. ಪಿ, ಬಿ. ಮದ್ರಾಸ. ೨೫೫

ನೋವು ಬಾಧೆಗಳ ನಿವಾರಣಾರ್ಥ!

ನಿಮ್ಮ ಬಾಧೆಗಳ ನಿವಾರಣಾರ್ಥವಾಗಿ ಅತ್ಯುತ್ತಮವಾದ ಹಾಗೂ ಒಳ್ಳೇ ಶುದ್ಧವಾದ ರಾಮಬಾಣ ಉಪಾಯವು ಬೇಕಾಗಿದ್ದರೆ, ಈ ಹೆಸರನ್ನು ಲಕ್ಷ್ಯದಲ್ಲಿಡಿರಿ.

Little's Oriental Balm.

ಲಿಟ್ಲರ ಓರಿಯಂಟಲ್ ಬಾಮು.

ಕೆಳಗಿನ ವ್ಯಾಧಿಗಳ ನಿವಾರಣಕ್ಕಾಗಿ
ಹಿಂದುಸ್ಥಾನದ ದಿವ್ಯೌಷಧಿ.

ತಲೆಶೂಲೆ, ಸಂಧಿವಾತ, ಎಲ್ಲ ತರದ ಕಸ. ನರತೊಡಕು ಪಕ್ಷವಾತ, ಟೊಂಕನೋವು, ಅರ್ಧಾಂಗವಾಯು ಉಳುಕು
(ವಗೈರೆ)

ಎಲ್ಲ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುತ್ತದೆ,
ಈ ದಿವಸವೇ
ಒಂದು ಬಾಟ್ಲಿ ಕೊಳ್ಳಿರಿ !

Buy a bottle

TO-DAY!

೬೦ ವರ್ಷಗಳಿಂದ ಈ ಔಷಧವು ಜಗತ್ಪ್ರಸಿದ್ಧವಾಗಿದೆ.

ಸ್ವಲ್ಪದರಿಂದಲೇ ಗುಣವಾಗುವದು——ಒಂದೇ ಕ್ಷಣದಿಂದ ಅದ್ಭುತ ಗುಣವು !

ಉರಿಯುವದಿಲ್ಲ ಅಥವಾ ಗುಳ್ಳೆ ಏಳುವದಿಲ್ಲ.

ತಾವು ಸುಖವಾಗಿ ಉಪಶಮನ ವಾಗುವದು.

ಮತ್ತು ಸೀಸ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲ...

ತೆಲಗಿಯಲ್ಲಿ ರೇಲ್ವೆ ನೌಕರರ ಉದ್ಧಾಮತನವು.

ಕಳೆದವಾರದಲ್ಲಿ ವಿಜಾಪುರದಿಂದ ಬಾಗಲಕೋಟೆಗೆ ರೇಲ್ವೆ ಗಾಡಿಯಲ್ಲಿ ಶ್ರೀ. ದಂಡಾವತಿ ಬಸಯ್ಯನವರೂ, ಮುರಿಗೆಯ್ಯಾಸ್ವಾಮೀ ಜಂಗೀನರೂ ಪ್ರವಾಸಮಾಡುತ್ತಿರುವಾಗ್ಗೆ, ಇವರು ಕುಳಿತ ಡಬ್ಬಿಯಲ್ಲಿದ್ದ ಮೂವರು ಹಳ್ಳಿಗಾಡಿನವರು (ತಿ. ನಂ. ೬೮೦೬– ೬೮೦೭ ೬೮೦೯) ತಮ್ಮ ಸಾಮಗ್ರಿಗಳೊಂದಿಗೆ ಸೀತೀಮನೆಗೆ ಹೊರಟಿದ್ದರು. ತೆಲಗೀ ಸ್ಟೇಶನ್‌ದಲ್ಲಿ ತಿಕೀಟ ಕಲೆಕ್ಟರರು ಆ ಹಳ್ಳಿಗಾಡಿನ ಸರಳ ಸ್ವಭಾವದ ಜನರನ್ನು ಬೆದರಿಸಿ, ಆ ಗಂಟುಕಡಿಗಳನ್ನು ತೂಕಕ್ಕೆ ಹಚ್ಚಬೇಕೆಂದು ಹೇಳಿ ಗಾಡಿಹೊರಡುವ ಸಮಯದಲ್ಲಿ, ಅವರನ್ನು ಹೊರಕ್ಕೆಳೆಯ ಹತ್ತಲು, ಶ್ರೀ ಬಸಯ್ಯನವರು “ ಹೀಗೆ ಮಾಡಬೇಡಿ; ಅಶಿಕ್ಷಿತರಾದ ಹಳ್ಳಿಗಾಡಿನವರಿಗೆ ಗಾಡಿಹೊರಡುವಾಗ್ಗೆ ಹೋಗಗೊಳಿಸಿದರೆ, ಅವರು ಇಲ್ಲದ ತೊಂದರೆಗಳಿಗೀಡಾಗುವರೆಂದು ಹೇಳಿದರು ಆದರೆ ಅಧಿಕಾರಿಗಳು ಉದ್ಧಾಮತನದಿಂದ ಅವರ ಮಾತನ್ನು ಲಕ್ಷ್ಯಕ್ಕೆ ಹಾಕಿ ಒಪ್ಪದೇ ಪೋರ್ಟರರನ್ನು ಸಹಾಯಕ್ಕಾಗಿ ಕರೆಯಲು ಮತ್ತೆ ಬಸಯ್ಯನವರು, “ನಿಮ್ಮ ನಿಯಮಗಳನ್ನು ತೋರಿಸಿರಿ ಹೀಗೆ ಕಸಬೇಕೆಂದಿದೆಯೋ? ನಾವಿವರನ್ನು ಇಳಿಯಗೊಡುವದಿಲ್ಲ. ನಿಮ್ಮ ಇಷ್ಟವಿದ್ದರೆ ಸೀತೀಮನೆಗೆ ತಂತಿ ಕೊಡಿರಿ. ಅಲ್ಲಿ ಅವರ ಸಾಮಾನು ತೂಕಕ್ಕೆ ಹಚ್ಚಬಹುದು” ಎಂದು ಕಾಯದೆಯಿಂದ ಗಟ್ಟಿಸಿ ಮಾತನಾಡಲು ಅಧಿಕಾರಿಗಳು ಈ ಉಪಕ್ರಮವನ್ನು ಬಿಟ್ಟುಬಿಟ್ಟರಂತೆ! ರೇಲ್ವೆಯ ಉದ್ಧಾಮ ನೌಕರರಿಂದ ಹಳ್ಳಿಗಾಡಿನವರಿಗೆ ಆಗುವ ತೊಂದರೆಗಳನ್ನು ಇದೇಬಗೆಯಾಗಿ ಸುಶಿಕ್ಷಿತರು ಹೊರಗೆಡಹುತ್ತಿರಬೇಕು.

ಸ್ವಧರ್ಮದ ವಾಚಕರಲ್ಲಿ

ಬಿನ್ನಹ.

ಗುಂಪಿನವರಿಲ್ಲದೂ ನವರಾತ್ರಿಯ ಉತ್ಸವದಲ್ಲಿ ತೊಡಗಿದ್ದರಿಂದ ಭಾದ್ರಪದದ ಸಂಚಿಕೆಯು ಹೊರಡಲಿಲ್ಲ. ಭಾದ್ರಪದ ಹಾಗೂ ಅಶ್ವಿಜ ಸಂಚಿಕೆಗಳನ್ನು ಕೂಡಿಸಿ.

ಕರ್ನಾಟಕ ರಾಷ್ಟ್ರೀಯ ಮಹೋತ್ಸವ ಸಂಚಿಕೆ

ಎಂಬ ದೊಡ್ಡಸಂಚಿಕೆಯನ್ನು ತೆಗೆಯುವದು ಗೊತ್ತಾಗಿದೆ. ಅದರಲ್ಲಿ ಚಿತ್ರಗಳು ಬರತಕ್ಕವಿವೆ.

ಬಿಡಿಸಂಚಿಕೆಗಳು ಬೇಕಾದವರೂ, ಜಾಹೀರಾತುಗಳನ್ನು ಕೊಡುವವರೂ ಸ್ವಧರ್ಮದ ಚಾವಡಿಗೆ ಬರೆಯಬೇಕು, ಬೆಲೆ-೦-೧೦-೦, ಬೇರೆ.

ಶಂ ಬಾ ಜೋಶಿ.

ವ್ಯವಸ್ಥಾಪಕ “ ಸ್ವಧರ್ಮ ” ಧಾರವಾಡ.

ನಮ್ಮ ಹುಬ್ಬಳ್ಳಿಯ ಹತವು.

ತಾ|| ೫–೧೦–೨೭ ನೇ ಬುಧವಾರ ರಾತ್ರಿ ೧೦|| ಘಂಟೆಯ ಸುಮಾರಕ್ಕೆ ಛಂಡಿವಾಡ ಅಗಸಿಯ ಮಸೀದಿಯ ಮುಂದೆ ಒಬ್ಬ ಮೌಲವಿ ಸಾಹೇಬರ ವ್ಯಾಖ್ಯಾನವಾಡುತು. ಹಿಂದು ಮುಸಲ್ಮಾನರಲ್ಲಿ ಜಗಳ ಹಚ್ಚುವ ಪೂರ್ವತಯಾರಿಯೇ ಅದರ ಉದ್ದೇಶವು. ಸಾರ್ವಜನಿಕ ರಸ್ತೆಯ ಮೇಲೆ ಆ ಪಕ್ಕದಲ್ಲಿ ಹಿಂದುಗಳ ಮನೆಗಳಿದ್ದು ಆ ಸ್ಥಳದಲ್ಲಿ ಹಿಂದುಗಳ ವಿರುದ್ಧಮಾತಾಡುವದು ನಡೆದಿತ್ತು. ಅಲ್ಲಿ ಯಾವ ಅಧಿಕಾರಿಗಳೂ ರಿಪೋರ್ಟನ್ನು ತೆಗೆದುಕೊಳ್ಳುವದಕ್ಕೆ ಇದ್ದಿಲ್ಲವೆಂದು ತೋರಿತು. ಇವರ ಅಧಿಕಾರವು ಗಾಂಧಿ ಟೊಪ್ಪಿಗೆಯವರ ಮೇಲೆಯೇ ಮಾತ್ರ!

ಅಚ್ಚಾಗಿವೆ! **ತರಿಸಿರಿ !!**

ವಾಸುದೇವನ

ಕೌಸ್ತುಭಗಳು.

೧. ಇಂದಿರಾ. ೨–೮–೦

(ಸಚಿತ್ರ ಸಾಮಾಜಿಕ ಕಾದಂಬರಿ.)

೨. ಯದು ಮಹಾರಾಜ. ೧–೦–೦

(ಎಂಬ ವಿನೂತನ ಐತಿಹಾಸಿಕ ಕಾದಂಬರಿ.)

೩. ನೀಳ್ಗತೆಗಳು ಭಾಗ ೧ ೧–೪–೦

“ ವಸಂತಯಾಮಿನಿ ಸ್ವಪ್ನಚಮತ್ಕಾರ ” ನಾಟಕದ ಪ್ರತಿಗಳೆಲ್ಲವೂ ತೀರಿಹೋಗಿವೆ. ಉಳಿದವುಗಳು ಅಚ್ಚಿನಲ್ಲಿವೆ. ತ್ವರೆಮಾಡಿರಿ! ಬೇಕಾದವುಗಳನ್ನು ಬೇಗನೇ ತರಿಸಿಕೊಳ್ಳಿರಿ.

ಪುಸ್ತಕ ವ್ಯಾಪಾರಿಗಳಿಗೆ ಯೋಗ್ಯ ಕಮಿಶನ್. ಅಂಚೆವೆಚ್ಚ ಬೇರೆ.

ಸ್ವಾಮಿ, ರಾ, ಕೆರೂರ.

ಬಾಗಲಕೋಟೆ (ಜಿ|| ವಿಜಾಪೂರ)

ಬಾಗಲಕೋಟೆ, ವಿಜಾಪುರ ಮೋಟಾರ ಸರ್ವಿಸ ಪ್ರಾರಂಭವಾಗಿದೆ!

ಬೆಳಗಾವಿಗೆ ಬಾಗಲಕೋಟೆಯಿಂದ ೩|| ರೂ ಹಾಸಲು ಮುಕ್ಕಾಂ ಮಾಡಲ್ಪಟ್ಟಿದೆ.

ವಿಜಾಪೂರ ಜಿಲ್ಲೆಯಲ್ಲಿಯ ಮತ್ತು ಸುತ್ತುಮುತ್ತಲಿನ ಖಾಸಗಿ ಸರ್ವೀಸಿನ ಮೋಟಾರ ಮಾಲಕರ ಗೈರಸೋಯ ದೂರವಾಗಬೇಕೆಂದು.

ಆರ್. ಜಿ. ಚವ್ಹಾಣ ಎಂಡ ಸನ್ಸ, ಬೆಳಗಾವ. ಇವರು ತಮ್ಮ

ಧಿ ಜನರಲ ಮೋಟಾರ ಅಕ್ಸೆಸರಿ ಸ್ಟೋಅರ್ಸದ ಶಾಖೆಯನ್ನು

ತಾ|| ೧೦ ಸಪ್ಟೆಂಬರ ೧೯೨೭ನೇ ಇಸ್ವಿಯಿಂದ ಬಾಗಲಕೋಟೆಯಲ್ಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಶೆವ್ರಲೇಟ, ಓವ್ಹರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯೂಬ್ಸ, ಗ್ರೀಸ, ಮೋಬಿಲ ಆಯಿಲ್, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯದರದಿಂದ ಸಿಗುವವು ಒಂದು ವೇಳೆ ವ್ಯಾಪಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು ವೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರದಿಂದ,

ಚಾಲಕ:— ನಾಯಕ್. [illegible] ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತ ಯೋಗ್ಯ ದರದಿಂದ ವಲ್ಕನಾಯಝಿಂಗ ಮಾಡಿ ಕೊಡುವೆವು

[illegible]



ಕಿರ್ಲೋಸ್ಕರ

ಸೇಂಗಾ ಒಡೆಯುವ ಯಂತ್ರ.

ನಮ್ಮ ಕಾರ್ಖಾನೆಯಲ್ಲಿ ಎರಡು ಮಾದರಿಯ ಯಂತ್ರಗಳು ತಯಾರಾಗುತ್ತವೆ. ಒಂದು ಇಂಜಿನ ಶಕ್ತಿಯಿಂದಲೂ, ಇನ್ನೊಂದು ಕೈಯಿಂದಲೂ ನಡೆಯುತ್ತವೆ. ಇವುಗಳ ಯಾವತ್ತು ಭಾಗಗಳು ಕಬ್ಬಿಣದವು. ಬೀಸಣಿಕೆಯುವದರಿಂದ ಕಾಳುಗಳು ಹಸನಾಗಿ ಬೀಳುವವು. ನುಚ್ಚಾಗುವದಿಲ್ಲ.

ಸೇಂಗಾದ ಬುಡ್ಡಿಯನ್ನು ತೆಗೆಯುವವರೂ ಸೇಂಗಾ ಬಿತ್ತುವವರೂ ಕಾಳನ್ನು ಮಾಡಲಿಕ್ಕೆ ಈ ನಮ್ಮ ಯಂತ್ರಗಳನ್ನೇ ಉಪಯೋಗಿಸಬೇಕು. ಕಳೆದ ವರ್ಷಕ್ಕಿಂತಲೂ ಈ ವರ್ಷ ಇವುಗಳ ಬೆಲೆಯನ್ನು ಕಡಿಮೆ ಮಾಡಿರುತ್ತೇವೆ. ಬಿಡಿ ಭಾಗಗಳು ನಮ್ಮಲ್ಲಿ ದೊರೆಯುತ್ತವೆ. ಸವಿಸ್ತರ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು. ಲಿಮಿಟೆಡ್

ಕಿರ್ಲೋಸ್ಕರ ವಾಡಿ,
ಜಿ. ಸಾತಾರಾ.

ದಿ ಏಶಿಯಾಟಿಕ್ ಗವರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ:

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಭಾಗ್ಯವಂತರಿಗೆ ಬಡ್ಡಿ ಮತ್ತು ವಟ್ಟಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಪಿ. ಸಿ. ನಂ. ೨೭೬೭ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರಿಂಟೆಂಡೆಂಟ ಸೆಕ್ರೆಟರಿಯಟ್ ಹೈದರಾಬಾದ ಡೆಕ್ಕನ್ ರೂ.೧೦೦೦

(೨) ಎಲ್. ಪಿ. ಸಿ. ನಂ. ೧೯೬೨ ನಾರಾಯಣ ವಿಠ್ಠಲ ಲೋಣಕರ, ಕೇರ್ ಆಫ್ ಡಿ. ಟಿ. ಪುರಾಣಿಕ ೧೦೭ ಸಿಹಾಲಪುರ ಇಂದೂರ. ೧೦೦೦

(೩) ಎಲ್. ಪಿ. ಸಿ. ನಂ ೩೪೧ ರಾಮಚಂದ್ರ ಅನಂತ ಶಿರೋಳಿ. ಡಿವಿಜನಲ್ ಫಾರೆಸ್ಟ ಆಫೀಸರ ಧತ್ತೂರು. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೧೭ ಕೇ. ಜಿ. ಘನಾಂಡೇ ವ್ಯಾಪಾರಸ್ಥ ಬ್ರಾಹ್ಮಣ ಸಿಲೋನ, ಕೋಲಂಬೋ. ರೂ. ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜಿ. ಚವರೆ. ಅಸಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ. ಜಿಲ್ಹಾ ವಿಜಾಪುರ. ರೂ ೧೦೦೦

ಬಿ. ಸ್. ಆರಾಸ್ಯ,
ಚೀಫ ಏಜಂಟ ಹುಬ್ಬಳ್ಳಿ, (ಮುಂಬಯಿ ಇಲಾಖಾ.)

ಜೀವ ವಿಮೆಯ ಕಾರ್ಯದಲ್ಲಿ ಮತ್ತೊಂದು ಅದ್ಭುತವಾದ ಜಯವು !

ಯಾಕಂದರೆ ತನ್ನ ೨೦ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ಮುದತಾವಧಿ ವಿಮೆಯ ಮೇಲೆ ೧೦೦೦ ಕ್ಕೆ ೧ ವರ್ಷಕ್ಕೆ ೨೨! ರೂ ನಂತೆಯೂ, ಎಂಡೋವ್ಮೆಂಟ್ ವಿಮೆಯ ಮೇಲೆ ೧೮ ರೂ. ನಂತೆಯೂ ಲಾಭ ಹಂಚಿದೆ

ದಿ ಜನರಲ್ ಅಶ್ಯೂರನ್ಸ

ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಬಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ನಾನಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

೧೨ ತಿಂಗಳಲ್ಲಿ
ಹೆಚ್ಚಾಗಿ ಉಳಿತಾಯವಾದದ್ದು ರೂ. ೮೫,೦೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್!

Apply to:- *M. Ramachandra Rao*
Branch Secretary, opposit Minto Hospital,
Bangalore City.
or
L. V Ramdurg. Chief Agent
Near Vitoba Temple Hubli.



ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ, ಅವರ ಸ್ವಂತ ವಿದ್ಯಾರಣ್ಯ ಮುದ್ರಣ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ ೧೯೪೭   ವಾ. ಚಂದಾ ೧—೧೩—೦ ಮಾತ್ರ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಯತ್ರ ನಾರ್ಯಸ್ತು ಪೂಜ್ಯಂತೇ । ರಮಂತೇ ತತ್ರ ದೇವತಾಃ ॥ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮುಖ್ಯರಾದ ಶ್ರೀನಿವಾಸರಾಯರು.

ವರ್ಷ ೩ } ಬಾಗಲಕೋಟೆ ರವಿವಾರ ಮಿತಿ ಆಶ್ವೀನ ಬಹ. ೪ ೧೩ ಶಕೆ ೧೮೪೯ ತಾ|| ೨೩-೧೦-೧೯೨೭.
Date 23—10—1927. { ಸಂಚಿಕೆ ೨೮

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಚ್ಚುವದು ಮತ್ತು ಜೋಡಿಸುವದು ಅವುಗಳೊಳಗಿನ ಕೆಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಿಚಿಬಿಚಿಯುಳ್ಳವರಿರುವದಿಲ್ಲ. ಸುರಿತರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ!

ವಿಳಾಸ— ಕುಲಕರ್ಣಿ ಮೋಟಾರ ಸ್ಕೂಲ.
೪೯೩ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ.

ಹೊಸ ಟ್ರೇಡಲ್.

ಇದೀಗ ನಾವು ಯುರೋಪದಿಂದ ಹೊಸ ಟ್ರೇಡಲ್ ತರಿಸಿದ್ದೇನೆ ಅದು ಫುಲಸ್ಕ್ಯಾಪ ಹಾಳೆಯ ಆಕಾರದ್ದು. ಬೆಲೆ ೫೦೦ ರೂ. ಮಾತ್ರ! ಕರ್ನಾಟಕದಲ್ಲಿಯ ಮುದ್ರಕರಿಗೆ ಇದು ಬೇಕಿದ್ದರೆ ನಾವು ತರಿಸಿ ಕೊಡುವೆವು! ಯಂತ್ರವನ್ನು ಕೊಳ್ಳುವವರು ನಮ್ಮಲ್ಲಿಗೆ ಬಂದು ನೋಡಬಹುದು ಇದಲ್ಲದೇ ರಾಯಲ್ ಆಕಾರದ ಒಂದು ಮುದ್ರಿಸುವ ಯಂತ್ರವು ನಮ್ಮಲ್ಲಿ ಮಾರಲಿಕ್ಕಿದೆ ಇದು ಹಳೆಯದಾದರೂ ಉತ್ತಮ ಕೆಲಸ ಕೊಡುತ್ತದೆ.

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಮಯೂರ ಶಿಖಾ

ದುರ್ಲಭವಾದ ವನಸ್ಪತಿಯು. ೨೦ ತೋಲೆಗೆ ೧ ರು ಫ್ರೀ. ಗೂ, ವ್ಯಾಪಾರಸ್ಥರಿಗೂ, ಅನೇಕ ರೀತಿಯ ವನಸ್ಪತಿಗಳು ದೊರಕುವವು.

ವೈದ್ಯ— ವಾದಿರಾಜ ಜಹಗೀರದಾರ
ಮು. ಇಳಕಲ್ಲ (ವಿಜಾಪೂರ).

ಕರ್ನಾಟಕದ ಅಭಿಮಾನವಿರಲಿ.

ಕೆಳಕ್ಕೆ ಕಾಣಿಸಿದ ಸಾಮಾನುಗಳು ಬೇಕಾದಲ್ಲಿ ಕನ್ನಡಿಗರು ಮುಂಬೈ ಮದ್ರಾಸಗಳಿಗೆ ಹೋಗುವ ಕಾರಣವಿಲ್ಲ. ಕನ್ನಡಿಗರ ಸೇವೆಗಾಗಿ ಸಿದ್ಧರಾಗಿಪ್ಪ ನಮ್ಮನ್ನು ಕನ್ನಡಿಗರು ಅವಶ್ಯವಾಗಿ ಪ್ರೋತ್ಸಾಹಿಸಬೇಕು.



ಚಲೋ ಬೆಳ್ಳಿಯಿಂದಲೂ, ಚೊಕ್ಕ ಭಂಗಾರದಿಂದಲೂ ತಯಾರಿಸಿರುವ ಬಗೆಬಗೆಯ ಮಾದರಿ ಒಡವೆಗಳೂ ಯಾವಾಗಲೂ ದೊರೆಯುತ್ತವೆ

ಬಹುಮಾನ ಕೊಡಲು ಬೇಕಾಗುವ ಬೆಳ್ಳಿಯ ಕಾಸ್ಕೆಟ್ಸು ಪೆಟ್ಟಿಗೆಗಳೂ, ಜರಾಣಿಗಳೂ, ಟೋರ್ನಮೆಂಟು ಕಪ್ಪುಗಳೂ, ಬೆಳ್ಳಿಯ ಮತ್ತು ಭಂಗಾರದ ಮೆಡಲುಗಳೂ (ಪದಕಗಳು) ಬಿಕರಿಗೆ ಸಿದ್ಧವಾಗಿರುವವು. ಹಾಗೂ ಬೇಕುಬೇಕಾದ ಹೊಸ ಹೊಸ ನಮೂನೆಗಳಲ್ಲಿ ಅಗ್ಗದರಿಗೂ ಮಾಡಿಕೊಡುವೆವು. ಕ್ಯಾಟಲಾಗನ್ನು ತರಿಸಿಕೊಳ್ಳಿ.

ನಮ್ಮ ಕಂಪನಿಯು ಹಳೆಯದು, ಮೈಸೂರ ಮಹಾರಾಜರೂ, ತ್ರಾವಣಕೋರದ ಮಹಾರಾಜರೂ, ದೊಡ್ಡ ದೊಡ್ಡ ಸಂಸ್ಥೆಗಳೂ, ಕ್ಲಬ್ಬುಗಳೂ ನಮ್ಮನ್ನು ಪ್ರೋತ್ಸಾಹಿಸುತ್ತಿರುವರು.

ಬೆಲೆಯು ಸುಲಭ! [ಒಂದು ವೇಳೆ ಪರೀಕ್ಷಿಸಿ.] ಕೆಲಸ ಬಹು ನಾಣ್ಯ!!

ದಿ ಇಂಡಿಯನ್ ಜ್ಯೂವೆಲರಿ ಮಾರ್ಟ ನಗರ್ತಪೇಟೆ, ಬೆಂಗಳೂರ ಸಿಟಿ.

ಕನ್ನಡಿಗ.

ಬಾಗಲಕೋಟೆ:-ಕನ್ನಡಿಗ ಆಶ್ವೀನ ಬಹುಳ ೧೩ ಶಕೆ ೧೮೪೯.

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೇಣಮಾಡಿ ಕಟ್ಟುವೆನಾನು ।
ನಿನ್ನ ಬೆಸನಮಾಡಿದಂಥ ಮಕ್ಕಳ ದೊಷ್ಟು!
ಚಿನ್ನದಾದರು ಚಿನ್ನ ಮೇಣಬತ್ತಿಯ ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೆ

—ಅಂಬಿಕಾತನಯ ದತ್ತ

ಕರ್ನಾಟಕದ ಏಕೀಕರಣದ ಪ್ರಶ್ನೆಯೆಂದರೆ ಅದೊಂದು ಕೇವಲ ವೃತ್ತಪತ್ರಗಳಲ್ಲಿ ನಡೆವ ಗಳವಳಿಯೆಂದು ಸರಕಾರದ ಭಾವನೆ. ಶ್ರೀ ಕರ್ಕಿಯವರು ಮುಂಬೈ ಕಾಯದೇ ಮಂಡಲದಲ್ಲಿ ಕೇಳಿದ ಪ್ರಶ್ನೆಗೆ ಸರಕಾರವು ಹೀಗೆಯೇ ಸ್ಪಷ್ಟವಾಗಿ ಹೇಳಿ, ತಾವು ಈ ವಿಷಯದಲ್ಲಿ ಯಾವ ಬಗೆಯ ವಿಚಾರಣೆಯನ್ನು ಮಾಡುವದೂ ಅವಶ್ಯವಾಗಿಲ್ಲವೆಂದು ತಿಳಿಸಿವರು! ಕರ್ನಾಟಕದಲ್ಲಿ ಸ್ಥಾನಿಕ ಸ್ವರಾಜ್ಯದ ಸಂಸ್ಥೆಗಳು ಈ ಬಗ್ಗೆ ಠರಾವುಗಳನ್ನು ಮಾಡಿ, ಅವನ್ನೆಲ್ಲ ಸರಕಾರಕ್ಕೆ ಕಳುಹಿಸಿದ್ದಾರೆ. ಈ ವಿಷಯವು ತಮಗೆ ಗೊತ್ತಿದೆಯೆಂದೂ ಸರಕಾರವು ಕಳೆದ ಸಲ ಕಾಯದೇ ಮಂಡಲದಲ್ಲಿ ಶ್ರೀಮಂತ ರಕ್ಕಸಗೀ ದೇಸಾಯರ ಪ್ರಶ್ನೆಗೆ ಉತ್ತರವನ್ನು ಹೇಳಿದ್ದಾರೆ. ಅಲ್ಲಲ್ಲಿ ಸಾರ್ವಜನಿಕ ಸಭೆಗಳಾಗಿ, ಅವುಗಳ ಠರಾವುಗಳಾದರೂ ಸರಕಾರಕ್ಕೆ ಹೋಗಿವೆ. ಹಾಗೆ ಅವರಿಗೆ ತಲ್ಪಿದ ಬಗ್ಗೆ ಸರಕಾರದಿಂದ ಬಂದ ಪಾವತಿಗಳು ಕೂಡ ಕನ್ನಡಿಗರ ಹತ್ತಿರ ಇವೆ. ರಾಜಕೀಯ ಪರಿಷತ್ತು, ಸಾಹಿತ್ಯ ಪರಿಷತ್ತು, ರಡ್ಡಿ, ಹಾಲುಮತ, ಮೊದಲಾದ ಜಾತೀಯ ಪರಿಷತ್ತುಗಳಲ್ಲಿಯೂ ಈ ಬಗ್ಗೆ ಠರಾವುಗಳಾಗಿವೆ. ಕರ್ನಾಟಕದ ಪ್ರತಿಯೊಂದು ಜಿಲ್ಲೆಯಿಂದ ಬಂದ ಪ್ರತಿನಿಧಿಗಳು ಸೇರಿ ಬೆಳಗಾವಿ ಕಾಂಗ್ರೆಸ್ಸಿನ ಸಮಯದಲ್ಲಿ ಏಕೀಕರಣ ಸಭೆಯನ್ನು ಸ್ಥಾಪಿಸಿದ್ದಾರೆ ಅಲ್ಲಲ್ಲಿ ಏಕೀಕರಣ ಸಭೆಯ ಶಾಖೆಗಳೂ ಇವೆ. ಕರ್ನಾಟಕದ ಕಾಯದೇ ಮಂಡಳದ ಪ್ರತಿನಿಧಿಗಳೆಲ್ಲ ಹಿಂದೂ ಮುಸಲ್ಮಾನ, ಬ್ರಾಹ್ಮಣ-ಬ್ರಾಹ್ಮಣೇತರಗಳೆಂಬ ಭೇದ ಇಲ್ಲದೇ, ತಮ್ಮ ಸಮ್ಮತಿಯನ್ನು ಏಕೀಕರಣದ ಬಗ್ಗೆ ಕೊಟ್ಟಿದ್ದಾರೆ. ಕನ್ನಡ ನಾಡಿನಲ್ಲಿ ಎಲ್ಲಿ ಹುಡುಕಿದರೂ, ಏಕೀಕರಣದ ಬಗ್ಗೆ ವಿರೋಧ ಭಾವವುಳ್ಳ ಒಬ್ಬನಾದರೂ ಮನುಷ್ಯನು ದೊರೆಯುವುದಿಲ್ಲ. ಜನರ ಈ ಮತೈಕ್ಯದ ಹೃದಯವು ಕನ್ನಡ ಪತ್ರಿಕೆಗಳಲ್ಲಿ ಒಡಮೂಡುತ್ತ ಬಂದಿವೆ. ಹೀಗೆ ಮಹಾ ಜನರಿಗೆ ಸಮ್ಮತವಾದ ವಿಷಯವನ್ನು ವರ್ತಮಾನ ಪತ್ರಗಳು ಎತ್ತಿ ವಿವೇಚಿಸುತ್ತಿರುವಾಗ್ಗೆ, ಏಕೀಕರಣವೆಂದರೆ ಕೇವಲ ವೃತ್ತಪತ್ರಿಕೆಗಳ ಗಳವಳಿಯೆಂದು ಉಸುರುವದು ಅಜ್ಞಾನದ ಪರಮಾವಧಿಯು. ಕರ್ನಾಟಕದ ಪ್ರತಿಯೊಂದು ಜಿಲ್ಲೆಯ ಪತ್ರಿಕೆಗಳೂ, ಎಲ್ಲ ಪಂಗಡಗಳ ಪತ್ರಿಕೆಗಳೂ, ಏಕೀಕರಣಕ್ಕೆ ಸಮ್ಮತಿಸಿವೆ. ವಸ್ತುಸ್ಥಿತಿಯು ಹೀಗಿದ್ದರೂ, ಸರಕಾರ ಇದಕ್ಕೆ ತೀರ ವಿಪರೀತವಾದ ಭಾವನೆಯನ್ನು ತಳೆದಿರುವಂತೆ ಕಾಣುವದನ್ನು ನೋಡಿದರೆ, ಸರಕಾರದ ಬಣ್ಣವು ಹೇಗಿದೆಂಬದು ಸ್ಪಷ್ಟವಾಗಿ ಗೋಚರವಾಗುವದು. ಶ್ರೀ ಕರ್ಕಿಯವರು ಈ ಪ್ರಶ್ನೆಯನ್ನು ಕಾಯದೇ ಮಂಡಲದಲ್ಲಿ ಮಾಡಿದ್ದೇನೋ ಸರಿ. ಆದರೆ ಸರಕಾರದ ಸೋಗಿನ ಉತ್ತರವನ್ನು ಕೇಳಿ, ಆಗಿಂದಾಗ್ಗೆ ಉಪಪ್ರಶ್ನೆಗಳನ್ನು ಹಾಕಬಹುದಾಗಿತ್ತು! ಈಗಲಾದರೂ ಈ ಬಗ್ಗೆ ನಾವು ಮೇಲೆ ಬರೆದವುಗಳು ಸರಕಾರಕ್ಕೆ ಗೊತ್ತಿದ್ದ ಬಗ್ಗೆ ಪ್ರಶ್ನೆಗಳನ್ನು ಮತ್ತೆ ಹಾಕಬೇಕು, ಮತ್ತೂ ಠರಾವುಗಳನ್ನು ಎಲ್ಲ ಕರ್ನಾಟಕದ ಪ್ರತಿನಿಧಿಗಳೂ ಈ ಪ್ರತಿನಿಧಿಗಳ ಮಿತ್ರರೂ ಮುಂದಿನ ಕಾಯದೇ ಮಂಡಲದ ಸಲುವಾಗಿ ಈಗಲೇ ಕಳಿಸುವಂತೆ ಏರ್ಪಾಡು ಮಾಡಬೇಕೆಂದು ಶ್ರೀ ಕರ್ಕಿಯವರಲ್ಲಿ ಬಿನ್ನಹವಿದೆ.

ಭೂಮಿ ವಿಭಾಗ ಪ್ರತಿಬಂಧಕ ಕಾನೂನು ಮುಂಬೈ ಪ್ರಾಂತಿಕ ಮಂಡಲದಿಂದ ಒಂದನೇ ವಾಚನದಲ್ಲಿ ಸ್ವೀಕರಿಸಲ್ಪಟ್ಟಿದೆ. ಈ ಬಗ್ಗೆ ಬೇರೆ ಬೇರೆ ಬಗೆಯ ಅಭಿಪ್ರಾಯಗಳು ಪ್ರಕಟವಾಗಿವೆ. ಇದರಿಂದ ದೇಶಕ್ಕೆ ಅಕಲ್ಯಾಣವೇ ಹೆಚ್ಚಿದೆಯೆಂದು ಕೆಲವರ ಮತ. ಕಾಯದೇಯಲ್ಲಿ ಈಗ್ಗೆ ಕಾಣಿಸಿದ ಕಲವು ಹಾಗಿರುವದೇನೋ ನಿಜ. ಆದರೆ ಇವುಗಳನ್ನು ವಿಚಾರಿಸಲು ಒಂದು ಉಪಮಂಡಲವು ನೇಮಕವಾಗಿದೆ; ಮತ್ತು ಲೋಕಮತದಂತೆ ಇದರಲ್ಲಿ ಅದಲು ಬದಲು ಮಾಡಲು ಸರಕಾರವು ಸಿದ್ಧವಿದ್ದುದೂ ಪ್ರಕಟವಾಗಿದೆ. ಆದುದರಿಂದ ಈಗಿನ ಕಲಮುಗಳಲ್ಲಿ ಹೆಚ್ಚು ಕಡಿಮೆಯಾದರೆ ಇದರಿಂದ ಅಷ್ಟೊಂದು ಅಂಜುವ ಕಾರಣವಿಲ್ಲ. ಸಧ್ಯದ ಪರಿಸ್ಥಿತಿಯನ್ನು ನೋಡಿದರೆ ಈ ಕಾನೂನು ಅವಶ್ಯವಾಗಿರುವದೆಂಬದು ಗೊತ್ತಾಗುತ್ತದೆ. ಪಿತ್ರಾರ್ಜಿತವಾದ ಭೂಮಿಗಳನ್ನು ವಂಶಾನುವಂಶದಿಂದ ಹಂಚುತ್ತ ಬಂದಿರುವದರಿಂದ ಅನೇಕ ಕಡೆಗೆ, ಭೂಮಿಗಳಲ್ಲಿ ತೀರ ಸಣ್ಣ ಸಣ್ಣ ಭಾಗಗಳಾಗಿವೆ. ಈ ತುಣಕುಗಳು ಅರ್ಧ ಎಕರೆ, ಕಾಲು ಎಕರೆಗಳ ವರೆಗೂ ಬಂದಿಳಿದಿವೆ. ಇಂಥ ತುಣಕುಗಳಲ್ಲಿ ಬೆಳೆ ಬರುವದೆಂತು? ಬಂದರೂ ಆ ಕಾಳುಗಳು ಒಂದು ಕುಟುಂಬದ ಹೊಟ್ಟೆಯನ್ನು ತುಂಬಲಾರವು. ಹೀಗಾಗಿ ಈ ಚಿಕ್ಕ ತುಂಡುಗಳಲ್ಲಿ ಪ್ರಯತ್ನ ಬಟ್ಟು, ಹರಗಿ, ಬಿತ್ತಿ ಬೆಳೆದುದೆಲ್ಲ ಶ್ರಮಕ್ಕೆ ತಕ್ಕಷ್ಟು ಲಾಭಕರವಾಗುವದಿಲ್ಲ. ಆದುದರಿಂದ ಒಂದು ಸರ್ವಸಾಧಾರಣ ಕುಟುಂಬಕ್ಕೆ ಕನಿಷ್ಟ ಪಕ್ಷದಲ್ಲಿ ಇಂತಿಷ್ಟು ಎಕರೆ ಭೂಮಿ ಬೇಕೆಂಬದನ್ನು ನಿರ್ಧರಿಸಬೇಕು. ೫ ಎಕರೆ ಭೂಮಿಯು ಕನಿಷ್ಟ ಪಕ್ಷಕ್ಕೆ ಬೇಕೆಂಬದು ನಿರ್ಧಾರವಾಗಿದೆಯೆಂದು ಕಟ್ಟಿಕೊಳ್ಳುವಾ. ೫ ಎಕರೆಗೆ ಬರುವ ವರೆಗೆ ಅಣ್ಣತಮ್ಮಂದಿರಲ್ಲಿ ಭೂಮಿಯನ್ನು ಹಂಚಬಹುದು. ಈ ೫ ಎಕರೆಯಲ್ಲಿ ಮತ್ತೆ ಹಂಚಲಿಕ್ಕೆ ಆಸ್ಪದವಿರದಂತೆ ಕಾನೂನಿದ್ದರೆ ವಿಹಿತವೇ. ಇನ್ನು ವಿಲಾಯತಿಯಲ್ಲಿ ಹಿರಿಯ ಮಗನಿಗೆ ಮಾತ್ರ, ಭೂಮಿಯೆಲ್ಲ ಹೋಗುವದು. ಬಂಗಮ ಬೆಂದಿಗೆಯು ತಂದೆಯ ಮೃತ್ಯುಪತ್ರದಂತೆ ಹಂಚಲ್ಪಡುವದು. ಈ ಪದ್ಧತಿಯು ನಮ್ಮ ಹಿಂದುಸ್ಥಾನಕ್ಕೆ ಸರಿಹೋಗದು. ನಮ್ಮ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು ಬೇರೆ. ಇಂಗ್ಲಂಡದ ಸ್ಥಿತಿಗತಿಗಳು ಬೇರೆ. ವಿಲಾಯತಿಯಲ್ಲಿ ಯಾಂತ್ರಿಕ ಶಕ್ತಿಯ ಸಹಾಯವು ರೈತರಿಗಿದ್ದುದರಿಂದ ಭೂಮಿಯ ಭಾಗವು ದೊಡ್ಡದಾಗಿ ಒಬ್ಬನ ವಶಕ್ಕಿದ್ದಷ್ಟು ಯಜಮಾನನಿಗೆ ಅನುಕೂಲವೇ. ಆದರೆ ಪ್ರಾಚೀನ ಕಾಲದಿಂದ ಸಾಗಿ ಬಂದ ನಮ್ಮ ರಂಟೆ ಕುಂಟೆಗಳು ನಮ್ಮ ದೇಶದ ಪರಿಸ್ಥಿತಿಗೆ ಸಂಪೂರ್ಣವಾಗಿ ಅನುಕೂಲವಾಗಿವೆ. ಪರದೇಶದ ತಜ್ಞರು ಸಹ ನಮ್ಮ

ಒಕ್ಕಲುದ ಸಾದಾ ಉಪಕರಣಗಳನ್ನು ಹೊಗಳಿದ್ದಾರೆ. ಈ ಸುಲಭವಾದ ಉಪಕರಣಗಳೆಲ್ಲ ನಮ್ಮ ಹಳ್ಳಿಗಳಲ್ಲಿಯೇ ಸಿದ್ಧವಾಗುವವು. ಇದರಿಂದ ಉದ್ಯೋಗಗಳೂ ಅಲ್ಲಲ್ಲಿ ಇವೆ. ಯಾಂತ್ರಿಕ ಉಪಕರಣಗಳು ಪರದೇಶದಿಂದಲೇ ಬರುವದರಿಂದ, ನಮ್ಮಲ್ಲಿಯ ದುಡ್ಡು ಮತ್ತಷ್ಟು ಹೊರಗೆ ಹೋಗುತ್ತದೆ. ಇಲ್ಲಿಯ ಉದ್ಯೋಗಗಳೂ ಲುಪ್ತವಾಗುತ್ತವೆ. ಆದುದರಿಂದ ಭೂಮಿಯ ದೊಡ್ಡ ಭಾಗವು ಒಬ್ಬನ ವಶದಲ್ಲಿ ಹೋಗುವದೂ, ಯಾಂತ್ರಿಕ ಉಪಕರಣಗಳ ಸಹಾಯದಿಂದ ಅವನು ದೇಶದ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದೂ ನಮಗೆ ಬೇಕಿಲ್ಲ. ವಿಲಾಯತಿಯಲ್ಲಿಯ ಯಂತ್ರಗಳು ಹಿಂದುಸ್ಥಾನದಲ್ಲಿ ಹೆಚ್ಚಾಗಬೇಕೆಂಬ ಉದ್ದೇಶದಿಂದ ಸರಕಾರವು ಶ್ರೀ ಮೆಹತಾ ಇವರನ್ನು (ಈ ಮರುಳ ಶಂಕರರಿಗೆ ಅದು ಹೊಳೆಯದಂತೆ !) ಪ್ರೇರಿಸಿ ದೊಡ್ಡ ಭೂಭಾಗವು ಶ್ರೀಮಂತರ ವಶಕ್ಕೆ ಹೋಗಬೇಕು; ಮತ್ತೂ ಅವರು ಯಂತ್ರಗಳನ್ನು ಪ್ರಸಾರ ಮಾಡಬೇಕು ಎಂಬದಾಗಿ ಕಲ್ಪಿಸಿ, ನೆರೆಹೊರೆಯ ಸಣ್ಣ ಭೂಭಾಗಗಳನ್ನು ಈ ಕಾಯಿದೆಯಿಂದ ಒಬ್ಬ ದೊಡ್ಡ ಶ್ರೀಮಂತನಿಗೆ ಕೊಡಿಸಬೇಕೆಂದು ಹಂಚಿಕೆ ಹಾಕಿದ್ದರೆ ಎಲ್ಲರೂ ಸರಕಾರದ ಧೋರಣವನ್ನು ನಿಷೇಧಿಸಲೇ ಬೇಕು. ನಾವು ಊಹಿಸಿದ ಕನಿಷ್ಠ ಪರಿಮಿತಿಯ ೫ ಎಕರೆ ಭೂಮಿಯನ್ನು ಪುನಃ ಅಣ್ಣತಮ್ಮಂದಿರಲ್ಲಿ ಹಂಚಬಾರದೆಂದರೆ, ತಮ್ಮನಿಗೆ ಪಿತ್ರಾರ್ಜಿತ ಆಸ್ತಿಯು ಇಂಗ್ಲಂಡದ ಪದ್ಧತಿಯಂತೆ ದೊರೆಯಬಾರದೆಂತಲ್ಲ. ಆದರೆ ಈ ೫-ಎಕರೆಯ ಬೆಲೆಕಟ್ಟಿ, ಈ ಬೆಲೆಯ ಭಾಗವು ನಗದು ಹಣದಲ್ಲಿಯಾಗಲಿ, ಅನ್ಯ ಮನೆ ಹೊಲಗಳಿದ್ದರೆ ಅವುಗಳಲ್ಲಿಯಾಗಲಿ; ಎಲ್ಲ ಬಂಧುಗಳಲ್ಲಿಯೂ ಸಮನಾಗಿ ಹಂಚಲ್ಪಡುವ ಏರ್ಪಾಡಿಸಿರಬೇಕು. ಅಂದರೆ ನಮ್ಮ ಪರಿಸ್ಥಿತಿಗೆ ವಿರುದ್ಧವಾದ ವಿಲಾಯತಿಯ ಪದ್ಧತಿಯೂ ನಮಗೆ ಗಂಟು ಬೀಳುವದಿಲ್ಲ. ಇತ್ತ ಸಣ್ಣ ಸಣ್ಣ ತುಣುಕುಗಳೂ ಆಗುವದಿಲ್ಲ.

'ಕನ್ನಡಿಗ'ನ ೩ನೇ ರಜೆ

ವರ್ಷದಲ್ಲಿ 'ಕನ್ನಡಿಗ'ನಿಗಿದ್ದ ನಾಲ್ಕು ರಜೆಗಳಲ್ಲಿ ಮೂರನೆಯದಾದ ದೀಪಾವಳಿಯ ರಜೆಯು ಮುಂದಿನ ವಾರದಲ್ಲಿದ್ದುದರಿಂದ, ೨೯ ನೇ ಸಂಚಿಕೆಯು, ನವಂಬರ ೭ನೇ ತಾ|| ನಲ್ಲಿ ಹೊರಡುವದು.

—ವ್ಯವಸ್ಥಾಪಕ.

ಹಿಂದೂ-ಮುಸಲ್ಮಾನರ ಕಲಹವು ಈಗ್ಗೆ ಅತ್ಯಂತ ವಿಕೋಪಕ್ಕೆ ಹೋಗಿದೆ. ಉತ್ತರ ಹಿಂದುಸ್ಥಾನದಲ್ಲಿ ತಾಳಗೆಟ್ಟ ಈ ಭೂತವು ತನ್ನ ಚೇಷ್ಟೆಗಳನ್ನು ಸಾಗಿಸಿದೆ. ಹಿಂದುಗಳನ್ನು ಕಂಡಲ್ಲಿ ಹೊಡೆಯುವದು ಹಿಂದೂ ಸ್ತ್ರೀಯರನ್ನು ಕೆಣಕುವದು; ಹಿಂದೂ ಮುಖಂಡರಿಗೆ ನಿಮ್ಮ ಪ್ರಾಣವನ್ನು ತೆಗೆದುಕೊಳ್ಳುವೆವೆಂದು ಬೆದರಿಕೆಯ ಪತ್ರಗಳನ್ನು ಕಳಿಸುವದು, ಅವ್ಯಾಹತವಾಗಿ ಸಾಗಿವೆ. ಉತ್ತರ ಹಿಂದುಸ್ಥಾನದಲ್ಲಿಯ ಈ ಕುಚೇಷ್ಟೆಯು ಮುಂಬೈಗೆ ಸಹ ಬಂದಿಳಿದಿದೆ. ''ಶ್ರದ್ಧಾನಂದ'' ಪತ್ರಿಕೆಯ ಸಂಪಾದಕರಾದ ಡಾ. ಸಾವರಕರ ಇವರಿಗೆ ಕೂಡ 'ನಿಮ್ಮನ್ನು ಕೊಲ್ಲುವೆವು ಜೋಕೆ' ಎಂಬ ಬೆದರಿಕೆಯ ಪತ್ರ ಬಂದಿದೆ. ಹಿಂದೂ ಜನರು ಈ ಬಗೆಯ ಕ್ರೂರವಾದ ಆಚರಣೆಗಳಲ್ಲಿ ತೊಡಗಿಕೊಂಡಿರುವದಿಲ್ಲ. ಆದರೆ ಮುಸಲ್ಮಾನರು ಮಾತ್ರ ಹೀಗೆ ಚಲ್ಲಾಟವನ್ನೆಬ್ಬಿಸಿದ್ದೇಕೋ ತಿಳಿಯದು. ಮುಸಲ್ಮಾನ ಮುಖಂಡರಿಗೆ ತಿಳಿಯದಂತೆ ಕುಚೇಷ್ಟಿತರಾದ ಕೆಲವರು ಈ ನಿಂದ್ಯವಾದ ಕಾರ್ಯದಲ್ಲಿ ತೊಡಗಿಕೊಂಡಿರಬಹುದೆಂದು ನಮ್ಮ ಭಾವನೆ. ಆದರೆ ಈಗ್ಗೆ ಪ್ರಕಟಿತವಾಗಿ ನಡೆದ ಪ್ರಕಾರವನ್ನು ಮುಸಲ್ಮಾನ ಮುಂದಾಳುಗಳು ನಿಷೇಧಿಸಲೊಲ್ಲರು. ಹಕೀಮ ಅಜಮಲ ಖಾನರೊಬ್ಬರು ಮಾತ್ರ ತಾವು ನಾಚಿಕೆಯಿಂದ ತಲೆ ಬಾಗಿಸಬೇಕಾಗಿದೆಯೆಂದು ಸಾರಿದ್ದಾರೆ. ಉಳಿದ ಮುಸಲ್ಮಾನ ಮುಖಂಡರು ಸುಮ್ಮನಿದ್ದದೇಕೆ ? ಇತ್ತ ಸರಕಾರದ ವೃತ್ತಿಯನ್ನು ನೋಡಿದರೆ, ಈ ಗುಂಡಾಳತನದ ಕಾರ್ಯಕ್ಕೆ ಅವರ ಸಮ್ಮತಿ ಇರುವದೇನೋ ಎಂಬಂತೆ ಭಾಸವಾಗುತ್ತದೆ. ಎಲ್ಲಿಯಾದರೂ ಎಂತಹ ಮೂಲೆಯಲ್ಲಿಯೂ ರಾಜ್ಯಕ್ರಾಂತಿಯ ಚಕಾರ ಶಬ್ದವು ಹೊರಬಿದ್ದರೆ ಗಮ್ಮನೆ ಅದು ಸರಕಾರದ ಕಿವಿಗೆ ತಗಲುತ್ತದೆ. ವೇಳಾಗಿ ಅದಕ್ಕೆ ಸಾಕಷ್ಟು ಸಾಕ್ಷಿ ಪುರಾವೆಗಳಿಲ್ಲದಿದ್ದರೂ ಕಠೋರವಾದ ಶಿಕ್ಷೆ ವಿಧಿಸಲು ಸರಕಾರಕ್ಕೆ ಬರುತ್ತದೆ. ಆದರೆ ಅವ್ಯಾಹತವಾಗಿಯೂ ಪ್ರಕಟಿತವಾಗಿಯೂ ನಡೆದ ಈ ಮುಸಲ್ಮಾನರ ಪ್ರಕಾರವನ್ನು ಪ್ರತಿಬಂಧಿಸಲು ಸರಕಾರಕ್ಕೆ ಬರುವದಿಲ್ಲವೇ ? ಬರದೇ ಏನು ಮಾಡಿತು ? ಆದರೆ ಹಿಂದೂ ಮುಸಲ್ಮಾನರಲ್ಲಿ ಕಲಹವು ಬೆಳೆದಷ್ಟು ಸರಕಾರಕ್ಕೆ ಆನಂದವೇ ಆಗುತ್ತದೆ. ಆದರಿಂದ ಅವರ ರಾಜ್ಯದಾಡಳಿತೆಯು ಬಲವಾಯೂ ಬೆಳೆಯುತ್ತದೆ. ಅಂದ ಮೇಲೆ, ರಾಜಕೀಯ ಅಪರಾಧಗಳನ್ನು ಶೋಧಿಸುವದರಲ್ಲಿ ವೆಚ್ಚವಾಗುವ ಜಾಣತನ, ಹಣ, ಉತ್ಸಾಹಗಳನ್ನು ಇಲ್ಲಿ ಸೂರೆಮಾಡುವದೇಕೆಂಬ ಕಲ್ಪನೆಯು ಸರಕಾರದಲ್ಲಿರಬೇಕೆಂಬ ತಿಳುವಳಿಕೆಯು ದಿನಾಲು ಜನರಲ್ಲಿ ಹಬ್ಬುತ್ತಿರುವದು. ಈ ತಿಳುವಳಿಕೆಯು ಇಷ್ಟಕ್ಕೆ ತಡೆದು ನಿಲ್ಲಬೇಕು, ಜನರಲ್ಲಿ ಸರಕಾರದ ಧೋರಣದ ಬಗ್ಗೆ ಸಂಶಯವು ಬರಬಾರದು ಎಂಬ ಇಚ್ಛೆಯು ಸರಕಾರದಲ್ಲಿದ್ದರೆ, ಈಗಲಾದರೂ ಅಧಿಕಾರಿಗಳು ಎಚ್ಚರಿಯಬೇಕು.

ಕರ್ನಾಟಕ ಏಕೀಕರಣ.

" ಮುಂಬಯಿ ಕ್ರಾನಿಕಲ್ " ಪತ್ರಿಕೆಯಲ್ಲಿ ಸರ. ಹರೀಸಿಂಘರು " ಭರತಖಂಡದ ಭವಿತವ್ಯತೆ " ಎಂಬ ಲೇಖ ಬರೆದಿದ್ದಾರೆ. ಭಾಷಾನ್ವಯ ಪ್ರಾಂತ ರಚನೆಯು ಆಗಬೇಕೆಂದು ಅವರ ಮತ. ತಮ್ಮ ಯೋಜನೆಯಂತೆ ಹಿಂದುಸ್ಥಾನದಲ್ಲಿ ೧೨-೧೩ ಭಾಷೆಗಳ ಪ್ರಾಂತಗಳಾಗುವವೆಂದು ಹೇಳಿದ್ದಾರೆ. ಆದರೆ ಅವುಗಳಲ್ಲಿ ಕರ್ನಾಟಕ ಪ್ರಾಂತದ ಉಲ್ಲೇಖವೇ ಇಲ್ಲ! ಕನ್ನಡ ಭಾಷೆಯು ಹಿಂದುಸ್ಥಾನದಲ್ಲಿರುವದು ಸಹ ಅವರಿಗೆ ಗೊತ್ತಿದ್ದಂತೆ ಕಾಣಲಿಲ್ಲ! " ಸರ "ರ ಜ್ಞಾನಭಾಂಡಾರವು ಹೇಗಿದೆ ?

ಇದಕ್ಕೆ ಉತ್ತರವೆಂದು ಅದೇ ಪತ್ರಿಕೆಯಲ್ಲಿ ಸೊಲ್ಲಾಪುರದ ಕನ್ನಡ ಭಕ್ತರಾದ ಬ್ಯಾರಿಸ್ಟರ ಸರದಾರರು ಒಂದು ಲೇಖ ಬರೆದಿರುವರು. ಸರದಾರರ ಲೇಖದಿಂದಲಾದರೂ " ಸರ "ರ ಕಣ್ಣು ಕೊಂಚ ತೆರೆಯಲಿ!

ಇದನ್ನೂ, ಸರಕಾರದವರು ಶ್ರೀ. ಕರ್ಕಿಯವರಿಗೆ ಕೊಟ್ಟ ನಿರಾಶಜನಕವಾದ ಉತ್ತರವನ್ನೂ, ನೋಡಿ, ಏಕೀಕರಣ ಸಭೆಯು ಎಚ್ಚತ್ತು, ಕಾರ್ಯಕ್ಕೆ ಹತ್ತುವದೋ ?

"ಕನ್ನಡಿಗ"ನಿಗೆ ಸಹಾಯ.

ಈ ವಾರದಲ್ಲಿ ಶ್ರೀ ಡಿ. ಆರ್. ಶಾಳೇ ಸಾ|| ಕೋಸಗಾಂವ ಜಿ. ಅಹಮ್ಮದನಗರ ಇವರು ಹಾಗೂ ಶ್ರೀ ಕುಲಕರ್ಣಿ ವೆಂಕಟರಾವ ಸಾ|| ಬಾಗಲಕೋಟೆ ಇವರು ಒಬ್ಬೊಬ್ಬ ಚಂದಾದಾರರನ್ನು ಕಳಿಸಿ ಕೊಟ್ಟಿದ್ದಾರೆ

ಪತ್ರವ್ಯವಹಾರ.

ಪ್ರಾಥಮಿಕ ಶಿಕ್ಷಕರ ದುರ್ದೆಶೆ.

[ಲೇಖಕ- ಹಳ್ಳಿಯ ಅಂಗಡಿಕಾರ]

ಪ್ರಾಥಮಿಕ ಶಿಕ್ಷಕರ ಈಗಿನ ಸಂಬಳವು ಅವರಿಗೆ ಸಾಲುವದಿಲ್ಲವೆಂದೂ ಸಾತೆ ಪರಾಂಜಪೆ ಯೋಜನೆಯಂತೆ ಅವರಿಗೆ ಸಂಬಳ ಕೊಡಬೇಕೆಂದೂ ಮುಂಬಯಿಯ ಕಾಯದೆ ಮಂಡಲದಲ್ಲಿ ಅನೇಕ ಸಾರೆ ಗೊತ್ತುವಳಿಯಾಗಿರುವದು. ಬಡ ಶಿಕ್ಷಕರ ಆರ್ತಧ್ವನಿಯು ಕರ್ಣಪಟಲಕ್ಕೆ ಎಷ್ಟು ಕರ್ಕಶವಾಗಿ ಬಡಿಯುತ್ತಿದ್ದರೂ ನಮ್ಮ ಮುಂಬಯಿ ಸರಕಾರಕ್ಕೆ ಕನಿಕರವು ಉಂಟಾಗಲೊಲ್ಲದು. ಅಂದರೆ ಮೇಲೆ ಕಾಣಿಸಿದ ಯೋಜನೆಯಂತೆ ಸಂಬಳ ಕೊಡಲಿಕ್ಕೆ ಸರಕಾರಕ್ಕೆ ಮನಸ್ಸೇ ಆಗಲೊಲ್ಲದು.

ಕಾಯದೇ ಮಂಡಲದಲ್ಲಿ ಸೇರುವ ಕಾಲಕ್ಕೆ ಆಯಾ ನಾಡಿನ ಹುರಿಯಾಳುಗಳು "ಸಾತೆ ಪರಾಂಜಪೆ ಯೋಜನೆಯಂತೆ ಸಂಬಳ ಕೊಡುವಂತೆ ಮಾಡುವೆ"ವೆಂದು ಶಿಕ್ಷಕರಿಗೆ ಕೊಟ್ಟ ವಚನವನ್ನು ನೆನಪಿಗೆ ತಂದು ಈ ವಿಷಯದಲ್ಲಿ ಸರಕಾರದವರನ್ನು ಎಚ್ಚರಗೊಳಿಸಿ ಗೊತ್ತುವಳಿಯಾದಂತೆ ಸಂಬಳ ಕೊಡಿಸಬೇಕು. ಮತ್ತು "ಆಡಿ ಮಾಡುವವನು ಮಧ್ಯಮನು" ಈ ತರಗತಿಯವರಾದರೂ ಆಗಬೇಕು.

ಲೋಕ ಪ್ರತಿನಿಧಿಗಳು ಮಾಡಿದ ಎಷ್ಟೋ ಗೊತ್ತುವಳಿಗಳನ್ನು ಸರಕಾರವು ಮೂಲೆಗುಂಪು ಮಾಡಿದೆ. ಅದರಂತೆ ಈ ಶಿಕ್ಷಕರ ಸಂಬಳದ ಗೊತ್ತುವಳಿಯಾದರೂ ಗತಿಗಾಣಿದೆ. ಅಂದ ಬಳಿಕ ಈ ಹುರಿಯಾಳುಗಳು ಮಾಡಿದ ಗೊತ್ತುವಳಿಗಳನ್ನು ಸರಕಾರವು ಎಷ್ಟರಮಟ್ಟಿಗೆ ಮನ್ನಿಸುವದೆಂಬುದು ಸಹಜವಾಗಿಯೇ ತೋರಿಬರುತ್ತದೆ. ಆದರೆ ಹುರಿಯಾಳುಗಳು ತಮ್ಮ ಗೊತ್ತುವಳಿಯಂತೆ ಕಾರ್ಯಗಳನ್ನು ಪ್ರಚಾರದಲ್ಲಿ ತರಬೇಕು. ಅಥವಾ ಕಾಯದೇ ಮಂಡಲದಲ್ಲಿ ಸೇರುವದರಲ್ಲಿ ಅರ್ಥವಿಲ್ಲವೆಂದು ಹೇಳುತ್ತ ಅವುಗಳಿಂದ ಒಮ್ಮೆಲೆ ಹೊರಬೀಳಬೇಕು.

ಇನ್ನು ಈಗಿದ್ದ ಸಂಬಳವಾದರೂ ಶಿಕ್ಷಕರಿಗೆ ಹೊತ್ತಿಗೆ ಸರಿಯಾಗಿ ಮುಟ್ಟುವದೆನ್ನಬೇಕೋ ಅದೂ ಇಲ್ಲ. ಶಾಲಾ ಮಂಡಲಗಳ ವಶಕ್ಕೆ ಶಾಲೆಗಳು ಹೋದಂದಿನಿಂತೂ ಅವ್ಯವಸ್ಥೆಯು ಮೇರೆದಪ್ಪಿದೆ. ಅದರಲ್ಲಿಯೂ ನಮ್ಮ ವಿಜಾಪುರ ನಾಡಿನ ಶಾಲಾ ಮಂಡಲದ ಅವ್ಯವಸ್ಥೆಗಂತೂ ಅಳವೇ ಇಲ್ಲ. ಕಳೆದ ಜನವರಿ ತಿಂಗಳಿಂದ ಈ ವರೆಗೆ ಪ್ರತಿಯೊಂದು ತಿಂಗಳ ಸಂಬಳವು ಆ ತಿಂಗಳವು ಮುಗಿದು ಮುಂದಿನ ಮೂರನೆಯ ತಿಂಗಳಾದರೂ ಕೂಡ ಮುಟ್ಟುತ್ತಿರುವದಿಲ್ಲ. ಸದ್ಯಕ್ಕೆ ಅಕ್ಟೋಬರ ತಿಂಗಳು ಅರ್ಧಗಳೆಯುತ್ತ ಬಂದರೂ ಆಗಸ್ಟ ತಿಂಗಳ ಸಂಬಳವು ತಾಲೂಕಿಗೆ ಕೂಡ ಬಂದಿಲ್ಲ. ಹೀಗಾದ ಬಳಿಕ ಪರಿಸ್ಥಿತಿಯಲ್ಲಿ ಅದರಲ್ಲಿಯೂ ಹಬ್ಬಗಳಲ್ಲಿ ಶಿಕ್ಷಕರು ಉಪವಾಸ ಬಿದ್ದರೆ ಏನು ಆಶ್ಚರ್ಯ? ಶಿಕ್ಷಕನ ಮನಸ್ಸು ಶಾಂತವಿರದಿದ್ದರೆ ಅವನಿಂದ ಶಿಕ್ಷಣದ ಕೆಲಸವು ಚನ್ನಾಗಿ ಸಾಗುವ ಬಗೆ ಹೇಗೆ ಎಂಬದನ್ನಾದರೂ ಶಾಲಾ ಮಂಡಲದವರು ವಿಚಾರ ಮಾಡಬಾರದೇ? ತಿಂಗಳಿಗೊಮ್ಮೆ ಬಂದರೂ ತಾಸು ಮಾತಾಡಿ ಬಾಯ್ತುಂಡಿಯನ್ನು ತೀರಿಸಿಕೊಂಡರೆ ಸದಸ್ಯರ ಇತಿಕರ್ತವ್ಯವಾದಂತಾಯಿತೇ? ತಮ್ಮ ಕೈಯಲ್ಲಿದ್ದ ಕೆಲಸವನ್ನು ಮಾಡಲಿಕ್ಕೆ ಇವರಿಗೆ ಅಸಾಧ್ಯವಾದರೆ ಇವರು ಮಾಡುವದಾದರೂ ಏನು?

ಎಲ್ಲ ಶಿಕ್ಷಕರು ಕಲಿಸುವದಕ್ಕಾಗಿ ನಿಯಮಿಸಲ್ಪಟ್ಟಿರುವರು. ಆದರೆ ತಾಲೂಕ ಶಾಲೆಯ ಶಿಕ್ಷಕನ ಕೊರಳಿಗೆ ತಾಲೂಕಿನ ಕೆಲಸದ ಬಿಟ್ಟಿಯೇಕೆ? ಹಿಂದೆ ತಾಲೂಕಿನ ಕೆಲಸ ಮಾಡಲಿಕ್ಕೆ ಒಬ್ಬ ಸಹಾಯಕ ಬರಹಗಾರನಿರುತ್ತಿದ್ದನು. ಆದರೆ ಈಗ ಆ ವ್ಯವಸ್ಥೆಯಂತೂ ಇಲ್ಲವೇ ಇಲ್ಲ. ಇಷ್ಟೇ ಅಲ್ಲ ತಾಲೂಕಿನ ಶಿಕ್ಷಕನ ಕೆಲಸವು ಮೇರೆದಪ್ಪಿ ಬೆಳೆಯುತ್ತಿದೆ. ಈ ತಾಲೂಕಿನ ಕೆಲಸದ ಸಂಬಂಧವಾಗಿ ತಾಲೂಕ ಶಿಕ್ಷಕನಿಗೆ ಹೆಚ್ಚಿನ ಸಂಬಳವೇನೂ ಇಲ್ಲ. ಅಂದ ಬಳಿಕ ತಾಲೂಕ ಶಿಕ್ಷಕನು ಉಳಿದ ಶಿಕ್ಷಕರಿಗಿಂತ ಹೆಚ್ಚು ದುರ್ದೈವಿಯೆಂದು ಹೇಳಬಹುದಲ್ಲವೇ.

ಯಾರಾದರೂ ಶಿಕ್ಷಕರ ಮೊರೆಯನ್ನು ಕೇಳುವರೋ?

ರಂಗಭೂಮಿಯ ಸಮಾಚಾರ.

ಮದ್ರಾಸು ಸುಗುಣವಿಲಾಸ ಸಭೆ ಎಂಬ ಲಲಿತ ಕಲಾ ಪ್ರೇಮಿಗಳ ಸಂಘದವರು ವರ್ಷಂಪ್ರತಿ ನವರಾತ್ರಿಯ ಉತ್ಸವವನ್ನು ಹತ್ತು ದಿನಗಳ ಪರ್ಯಂತರ ನಡೆಸಿ, ಪ್ರತಿಸಂಜೆಗೆ ಯಾವುದಾದರೊಂದು ನಾಟಕವನ್ನಾಡುವದು ವಾಡಿಕೆಯಾಗಿದೆ. ಅದರಂತೆ ಈ ವರ್ಷ ನಡೆದ ಉತ್ಸವದಲ್ಲಿ ಕಳೆದ ಸಪ್ಟಂಬರು ೩೦ನೇ ತಾರೀಖಿನ ಸಾಯಂಕಾಲ ಸಭೆಯ ಕನ್ನಡ ಶಾಖೆಯ ಅಧಿಕಾರಿಗಳಾದ ಶ್ರೀಮಾನ್ ಬಿ. ರಾಮರಾವ್ ಎಂ. ಎ. ಎಲ್. ಎಲ್. ಬಿ. ಯವರ ಮೇಲ್ವಿಚಾರಕ್ಕೊಳಪಟ್ಟು ಹೊಸಪೇಟೆಯ ರಾವ್ ಬಹದ್ದೂರ್ ಸಿ. ಹನುಮಂತಗೌಡರವರಿಂದ ನೂತನವಾಗಿ ಬರೆಯಲ್ಪಟ್ಟು ಪ್ರಚುರವಾಗಿರುವ 'ಪುರಂದರದಾಸ ಚರಿತ್ರೆ' ಎಂಬ ಭಕ್ತಿರಸ ಪರಿಪೂರ್ಣವಾದ ಸಾಂಘಿಕ ನಾಟಕವನ್ನು ಆಡಿ ತೋರಿಸಿದರು. ನಾಟಕಕ್ಕೆ ದಯಮಾಡಿಸಿದ ಬಹಳ ಮಂದಿ ಕನ್ನಡ ಸ್ತ್ರೀ ಪುರುಷರೂ ಇತರರೂ ಸಹ ನಾಟಕವನ್ನು ನೋಡಿ ಆತ್ಮಾನಂದಪಟ್ಟರು. ಮುಖ್ಯವಾಗಿ ಹೈಕೋರ್ಟು ವಕೀಲರು ಶ್ರೀ ಎಚ್. ರಾಮರಾಯರವರ 'ತಿಮ್ಮಪ್ಪನಾಯಕ'ನ ಭೂಮಿಕೆಯೂ, ಗವರ್ನಮೆಂಟ್ ಆಯುರ್ವೇದಿಕ್ ಕಾಲೇಜು ವಿದ್ಯಾರ್ಥಿ ಶ್ರೀ ಬಿ. ವೆಂಕಟಕೃಷ್ಣ ಬಲ್ಲಾಳರ 'ಲಕ್ಷ್ಮೀಬಾಯಿ'ಯ ವೇಷವೂ, ಮದ್ರಾಸ್ ಬ್ಯಾಂಕಿಗೆ ಸೇರಿದ ಶ್ರೀ ಎಂ. ಎಸ್. ಶ್ರೀನಿವಾಸಯ್ಯಂಗಾರ್ಯರವರ 'ದಾಸಯ್ಯ' ಮತ್ತು 'ಭಜನೆಯ ಮುಕುಂದ'ನ ಪಾತ್ರಗಳೂ ಉತ್ತಮೋತ್ತಮವಾಗಿ ನಟಿಸಲ್ಪಟ್ಟು ಸಮಸ್ತ ಪ್ರೇಕ್ಷಕರ ಶ್ಲಾಘನೆಯನ್ನು ಹೊಂದಿದುವು

—ಕಂಠೀರವ.

ರಾಗಿಣೀ ದೇವಿಯೆಂಬ ಹಿಂದೂ ಲಲಿತ ಕಲಾಪ್ರಿಯರು ಅಮೇರಿಕೆಗೆ ಹೋಗಿದ್ದು, ಅಲ್ಲಿಯ ನಾಟಕಶಾಲೆಗಳಲ್ಲಿ, ತಮ್ಮ ಇಂಪಾದ ಗಾಯನ ಹಾಗೂ ಮನೋಹರವಾದ ನರ್ತನಗಳನ್ನು ಪ್ರದರ್ಶಿಸುತ್ತಿರುವರು. ಅಮೇರಿಕನ್ನರಿಗೆ ಈ ಕಾರ್ಯಕ್ರಮವು ಒಳ್ಳೇ ರುಚಿಸಿದ್ದು, ಹಿಂದೂ ಜನರ ನರ್ತನ ಪದ್ಧತಿಯನ್ನು ತಾವು ಅನುಸರಿಸಬೇಕೆಂದೂ ಯೋಚಿಸುತ್ತಲಿರುವರು

ಗರುಡರು ರಾಯಚೂರದಲ್ಲಿಯೂ, ಹಾಗೇರಿ ನಾಟಕ ಮಂಡಳಿಯವರು ದಾವಣಗೇರಿಯಲ್ಲಿಯೂ, ವಾಮನರಾಯರು ಮೈಸೂರಲ್ಲಿಯೂ ಶ್ರೀಕೃಷ್ಣ ಸಂಗೀತದವರು ಬೆಂಗಳೂರಲ್ಲಿಯೂ, ಅಂಬಾಪ್ರಸಾದಿಕರು ಶಿವಮೊಗ್ಗೆಯಲ್ಲಿಯೂ, ಗುಬ್ಬಿಯವರು ಧಾರವಾಡದಲ್ಲಿಯೂ, ವೆಂಕೋಬರಾಯರು ಹಾವೇರಿಯಲ್ಲಿಯೂ ಇರುವರು. ವೆಂಕೋಬರಾಯರ "ದಕ್ಷಕನ್ಯೆ"ಯೆಂಬ ಹೊಸ ನಾಟಕವು ಸವಣೂರ ಮಹಾಜನಗಳಿಂದ ಚನ್ನಾಗಿ ಪ್ರೋತ್ಸಾಹಿಸಲ್ಪಟ್ಟಿತಂತೆ! 'ಲಂಕಾದಹನ' ನಾಟಕವನ್ನು ಮೆಹರ್ಬಾನ ಕ್ಯಾಪ್ಟನ್ ನವಾಬ ಸಾಹೇಬರು ಸಂಪೂರ್ಣವಾಗಿ ನೋಡಿ, ಬಹು ಸಂತೋಷಪಟ್ಟರು! ಆ ದಿನದ ಉತ್ಪನ್ನದಲ್ಲಿಯ ೩೦೦ ರೂಗಳನ್ನು ವೆಂಕೋಬರಾಯರು ಗುಜರಾತ ನೆರೆಹಾವಳಿಯ ಸಹಾಯಕ್ಕಾಗಿ ಕೊಟ್ಟರು

ಶ್ರೀ ದೇಶಪಾಂಡೆ ಗುರುರಾಯರು ವಾಮನರಾಯರ ನಾಟಕ ಕಂಪನಿಗೆ ಹೋಗಿರುವರಾಗಿ ಕೇಳುತ್ತೇವೆ

ಅಲಹಾಬಾದದ ವಕೀಲರಾದ ಶ್ರೀ ಕೈಲಾಸನಾಥ ಕಟ್ಜೂ ಇವರು ಖಾದಿಯ ನಿಧಿಗೆ ಪ್ರತಿ ತಿಂಗಳು ೧೦೦ ರೂಪಾಯಿಗಳನ್ನು ಕೊಡಲು ಒಪ್ಪಿರುವರು.

—: ಒಡಪು. :—

ಭಾ. ಷ॥ ಮೊದಲಿನರ್ಧವು 'ಲೋಕಮಾತೆಯು'।
ತುದಿಯು 'ಮಹಿಳಾಜನರಿಗಾಶ್ರಯು'।
ಒಡಲಿಲ್ಲವ 'ಕ್ಷೀರಸಾಗರ ಕನ್ನಿಕಾಪತಿಯು'
ಆದಿ-ತುದಿ ಕೂಡಿಸಲು 'ಪಪ್ಪಳ'
ಇದು ನಾರಾಯಣನ ವಾಸನ॥
ನೋದದೀ ಬೆಡಗನ್ನು ಹೇಳಿರಿ ನಾಲ್ಕು ವರ್ಣಗಳ॥

— ನಾರಾಯಣದಾಸ.

ನನ್ನ ಹೆಸರೇನು?

ರುಚಿಯುಳ್ಳಿಲ್ಲದಿದ್ದರೂ ಸ್ವಾದದಲ್ಲಿ ಅದೆ.
ಸಮೀರನಲ್ಲಿದ್ದರೂ ವಾಯುವಿನಲ್ಲಿಲ್ಲ.
ಶ್ರಮದಲ್ಲಿದ್ದರೂ ಕಷ್ಟದಲ್ಲಿಲ್ಲ
ಭಕ್ತಿಯಲ್ಲಿಲ್ಲದಿದ್ದರೂ ಶ್ರದ್ಧಾದಲ್ಲಿದೆ.
ಅನಂಗನಲ್ಲಿದ್ದರೂ ಕಾಮನಲ್ಲಿಲ್ಲ
ಕದನದಲ್ಲಿದ್ದರೂ ಜಗಳದಲ್ಲಿಲ್ಲ.

ಆರು ಅಕ್ಷರಗಳ ಮಹಾಪುರುಷನು ನಾನು ಆದರೆ ನನ್ನ ಹೆಸರೇನು? —ಹನುಮಂತಾಚಾರ್ಯ ಅಡ್ಡಿಗಿ.

(ಸೂಚನೆ:— ಈ ಬಗ್ಗೆ ಸಮರ್ಪಕವಾದುತ್ತರವನ್ನು ಕೊಟ್ಟ ವಿದ್ಯಾರ್ಥಿಗಳ ಹೆಸರನ್ನು ನಾವು ಮುಂದಿನ ಸಲ ಪ್ರಕಟಿಸುವೆವು. ಮತ್ತು ಇದೇ ಬಗೆಯ ಒಗಟೆಗಳನ್ನು ಜೋಡಿಸಿ ಕಳುಹಿಸಿದರೆ ಅವನ್ನೂ ಪ್ರಕಟಿಸುವೆವು. ಸಂ. ಕನ್ನಡಿಗ.)

ದ್ವೀಪಾಂತರದಲ್ಲಿ ಓರ್ವ ಕನ್ನಡಿಗನ ಗೌರವ.

ಕೊಡಗದ ಮೇ॥ ಕೊರವಂಡ ಯಂ. ಕಾರ್ಯಪ್ಪನವರು ಮಲಯಾದ್ವೀಪದ ಪೆರಾಕಿನ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ೩೧॥ ವರ್ಷ ಕೆಲಸ ಮಾಡಿ, ಅಸಿ॥ ಇಂಜನಿಯರ ಪದವಿಯಿಂದ ನಿವೃತ್ತರಾದಾಗ್ಯೆ ಐಪ್ಪೋ ಎಂಬಲ್ಲಿ ರೆಂಟಾ ಆರೋಗ್ಯ ಮಂಡಲದವರು ಅವರಿಗೊಂದು ಮಾನಪತ್ರವನ್ನು ಬೆಳ್ಳಿಯ ಕರಡಿಕೆಯೊಂದಿಗೆ ಅರ್ಪಿಸಿದರು. ಯುರೋಪಿಯ ಸದ್‌ಗೃಹಸ್ಥರೂ, ಚೀನದ ರೆಸಿಡೆಂಟರೂ, ಶ್ರೀ ಕಾರ್ಯಪ್ಪನವರನ್ನು ಅವರ ಕೌಶಲ್ಯಕ್ಕಾಗಿ ಕೊಂಡಾಡಿದರು. ಕರ್ನಾಟಕದ ಸಾಹಸಿಯೋರ್ವನು ಮಲಯದಂಥ ಪರದೇಶದಲ್ಲಿ ಕೂಡ ಕರ್ನಾಟಕದ ಕೀರ್ತಿಯನ್ನು ಹರಡಿದ್ದುದು ಕನ್ನಡಿಗರಿಗೆಲ್ಲ ಅಭಿಮಾನದ ಸಂಗತಿಯಲ್ಲವೇ?

—: ಮೂರು ಪ್ರಶ್ನೆಗಳು. :—

(೧) ಕರ್ನಾಟಕ ಏಕೀಕರಣ ಸಭೆಯು ಸ್ಥಾಪನೆಯಾಗಿ ೧॥ ವರ್ಷವಾಯಿತು! ಈ ಅವಧಿಯಲ್ಲಿ ಎಷ್ಟು ಕೆಲಸವಾಗಿದೆ? ಇನ್ನು ಮುಂದಾದರೂ ಕೆಲಸವು ಭರದಿಂದ ಸಾಗಬಲ್ಲದೋ?

(೨) ವಿಜಾಪೂರದ ಮುಖಂಡರು ವಿಜಾಪೂರದಲ್ಲಿ ಬ್ರಾಹ್ಮಣ ಸಂಘವನ್ನು ಸ್ಥಾಪಿಸಿ ಸುಮಾರು ಕಾಲವಾಯಿತು. ಇದಕ್ಕೆ ಪ್ರಬಲವಾದ ಮೂರ್ಛೆಯು ಒಂದಂತಾಗಿದೆ! ಅದೇಕೆ?

(೩) ಕರ್ನಾಟಕ ಆಯುರ್ವೇದ ಸಂಘದವರ ಹುರುಪು ಅಡಗಿರುವದಲ್ಲ! ವಿಜಾಪುರದಲ್ಲಿ ಆದ ಗೊತ್ತುವಳಿಗಳು ವಿಸ್ಮರಣವಾಗಿಯೇ?

ಈ ಈ ಸಭೆಗಳಿಗೆ ಸಂಬಂಧಪಟ್ಟವರು ಉತ್ತರ ಹೇಳಬಲ್ಲರೇ!

—ಮಧ್ಯಸುತ.

ನನಗೆ ತೋಳಿದಂತೆ

ಬೆಳಗಾಂವಿಯಲ್ಲಿ ಕಾಂಗ್ರೆಸ್ಸ ಕಮೀಟಿಯಿಂದ ಹೊರಡುವ ಹಸ್ತಪತ್ರಿಕೆಗಳು ಮರಾಠಿಯಲ್ಲಿರತಕ್ಕವು. ಅವರೆ ಅಪವಾದವಾಗಿ ಕನ್ನಡದಲ್ಲಿ ಅದು ಹೊರಟಿತ್ತು. ಆದರೆ ಅದರಲ್ಲಿ ತಪ್ಪುಗಳಿಗೆ ಮಿತಿಯೇ ಇರುವದಿಲ್ಲ. ಅದೇ ಮರಾಠಿಯಲ್ಲಿ ಪ್ರಕಟವಾಗಿದ್ದರೆ ಶುದ್ಧ-ಪರಿಶುದ್ಧವಾಗಿರುವವು! ಇದು ಕಾಲಮಹಿಮೆಯೋ? ಅಥವಾ ಮತಾಂತರವಾದರೂ ಒಳಬಿತ್ತದ ಮಹಿಮೆಯೋ? * *

ವಿಜಾಪುರಕ್ಕೆ ಕ್ಷಿಪ್ರದಲ್ಲಿ ಗವರ್ನರರು ಬರುತ್ತಾರೆ! ಈಗಾಗಲೇ ರಾವಸಾಹೇಬರಿದ್ದವರಿಗೆ ರಾವಬಹದ್ದೂರಿಯ ಪದವಿಯು ಬೇಕೆಂದೂ, ಯಾವ ಪದವಿಯೂ ಇರದವರಿಗೆ, ಹೊಸ ಹೊಸ ಪದವಿಗಳು ಬೇಕೆಂದೂ, ಆನರರಿ ಮ್ಯಾಜಿಸ್ಟ್ರೇಟರಾಗಬೇಕೆಂದೂ, ಸರದಾರರಾಗಬೇಕೆಂದೂ, ಗವರ್ನರ ಮಹಾಪ್ರಭುಗಳ ಹಸ್ತಾಂದೋಲನ, ಅವರ ದಿವ್ಯ ದೃಷ್ಟಿಯು ಮಹಾಪ್ರಸಾದ, ಅವರಾಗದಿದ್ದರೆ ಕಡೆಗೆ, ಕಲೆಕ್ಟರ ಸಾ॥ ಅನುಗ್ರಹ ಇವೆಲ್ಲ ದೊರೆಯಬೇಕೆಂದೂ ನಗರದ ಅನೇಕ ಉತ್ಸಾಹಿಗಳು ಒಳ್ಳೇ ಸಡಗರದಿಂದಲೂ ಗಡಬಡಿಯಿಂದಲೂ ನಡೆದಾಡುತ್ತಿರುವರಂತೆ. ಮಾನಂದ ಗವರ್ನರ ಮಹಾಸ್ವಾಮಿಗಳು ವಿಜಾಪುರವನ್ನು ಸಂದರ್ಶಿಸುವದಲ್ಲದೆ, ಉತ್ತರ ಕರ್ನಾಟಕದ, ಬೆಳಗಾವಿ, ಧಾರವಾಡ, ಹುಬ್ಬಳ್ಳಿ ಮೊದಲಾದ ಪಟ್ಟಣಗಳನ್ನೂ ಸಂದರ್ಶಿಸುವರಾದುದರಿಂದ ಉ. ಕರ್ನಾಟಕದಲ್ಲಿ ಅನೇಕರ ಅಭಿಲಾಷೆ, ಮಹಾಭಿಲಾಷೆಗಳೆಲ್ಲವೂ ಪೂರ್ತಿಯಾಗುವವಾಗಿ ಭರವಸೆಯಿದೆ. ಆದರೆ ಈ ಅಭಿಲಾಷೆಗಳು, ಕರ್ನಾಟಕ ವಿಶ್ವವಿದ್ಯಾಲಯ, ಏಕೀಕರಣ, ಬರಗಾಲನಿವಾರಣೆ, ಬಣೆವಾರಿಯ ಅಪದ್ಧ ಪದ್ಧತಿಗಳ ಬಗ್ಗೆ ಸರ್ವಥಾ ಇರುವದಿಲ್ಲ. ಇವು ಕೇವಲ ಆತ್ಮೋನ್ನತಿಯ ಬಗ್ಗೆ! ಅಸ್ತು! ಇತಿ. ಸರ್ವಾಭಿಲಾಷ ಪೂರ್ತ್ಯರ್ಥಂ ಪ್ರಾರಬ್ಧಂ ಆಧುನಿಕ ಪದ್ಧತೀಯ ಯಜ್ಞಮಿದಮ್ ಸಂಪೂರ್ಣಂ ಭವತು!! ಇತಿ. ಓಂ ಶ್ರೀಃ

ಮುಂಬಯಿದ ಗವರ್ನರರು ಮಂಗಳೂರ ಜಿಲ್ಲೆಯನ್ನು ಸಂದರ್ಶಿಸಿಹೋದರು. ಉಬ್ಬುಬ್ಬಿನಿಂದ ಕೆಲಸಮಾಡಿದವರಿಗೂ ಮಹಾದೊರೆಗಳ ದಿವ್ಯ ದೃಷ್ಟಿಗೆ ಬಿದ್ದವರಿಗೂ ಅವ ಫಲಗಳು ದೊರೆಯುವವೋ ನೋಡಬೇಕು! ಸದ್ಯದಲ್ಲಿ ಗ್ಯಾಝೆಟ ನಿರೀಕ್ಷಿಸಬೇಕು! ಅಲ್ಲಿ ನಿರಾಶೆಯಾದರೆ ಜನೇವರಿ ಒಂದನೇ ತಾ॥ ವರೆಗೆ ಸಮಾಧಾನವನ್ನು ತಾಳಬೇಕು! ಓದುಗ.

ಸೋಜಿಗದ ಸುದ್ದಿ.

ಪೋಲಂಡದಲ್ಲಿ ಒಂದು ನಾಯಿಯಿದೆ. ಪಶುಗಳಿಗೆ ಸರ್ಕಸ್ಸಗಳಲ್ಲಿ ಶಿಕ್ಷಣ ಕೊಟ್ಟಂತೆ ಇದಕ್ಕೂ ಓರ್ವನು ಬಹು ಶ್ರಮದಿಂದ ಶಿಕ್ಷಣಕೊಟ್ಟದ್ದರಿಂದ ಅದು ಮನುಷ್ಯರ ಮಾತುಗಳನ್ನೆಲ್ಲ ತಿಳಿದುಕೊಂಡು, ಶಿಕ್ಷಕನು ಕಲಿಸಿದಂತೆ ಒಂದು ಪದ್ಧತಿಯ ಹಾಳೆವನ್ನು ಸರಿಸಿ, ಅಷ್ಟಷ್ಟಕ್ಕೆ ನಿಂತು ಬೊಗಳಲಾರಂಭಿಸುವದು. ಈ ಸಂಜ್ಞೆಯಿಂದ ಮನುಷ್ಯರು ಕೇಳಿದ ಪ್ರಶ್ನೆಗಳಿಗೆ ಅದು ಸಮರ್ಪಕವಾದ ಉತ್ತರವನ್ನು ಕೊಡುವದು. ಸೋರ್ಬೋನ್ನಿ ಎಂಬಲ್ಲಿ ಅಂತರರಾಷ್ಟ್ರೀಯ ಆತ್ಮವಿದ್ಯೆಯ ಪರಿಷತ್ತು ಪ್ರಾರಂಭವಾಗಿದ್ದು ಅಲ್ಲಿಗೆ ಈ ನಾಯಿಯನ್ನು ಪೋಲಂಡಿನಿಂದ ವಿಮಾನಿನಲ್ಲಿ ಕುಳ್ಳಿರಿಸಿ ಒಯ್ದಿರುವರು. ೫೦ ತಜ್ಞರು ಇದನ್ನು ಪರೀಕ್ಷಿಸತಕ್ಕವರಿದ್ದಾರೆ.

ಸ್ವಲ್ಪೇ ವಿನೋದ

ನ್ಯಾಯಾಧೀಶರು:— ನೀನು ಈ ಹರಿವಾಗಿ ಕಳ್ಳನನ್ನು ಹೇಗೆ ಹೊಡೆದಿಯೋ ನನಗೆ ತಿಳಿಯದು.

ತ್ರಾಟಿಕ:— ಅವನು ಕಳ್ಳನೆಂಬದು ನನಗೆ ತಿಳಿದಿರಲಿಲ್ಲ ನನ್ನ ಪತಿರಾಯರೆಂದು ನಾನು ಭಾವಿಸಿದ್ದೆ!

ಪರದೇಶ.

ಪಂಡಿತ ಮೋತೀಲಾಲ ನೆಹರೂ ಇವರ ಸ್ವಿಝರಲಂಡದ ಪ್ರವಾಸಕ್ರಮವು ಮುಗಿದಿದ್ದು, ಅವರು ಇದೇ ತಾ|| ೨೫ ರಲ್ಲಿ ಲಂಡನ್ನಿಗೆ ಹೋಗುವರು.

ಜನರಲ ಡಾಯರರು ತಮ್ಮ ಎಲ್ಲ ಸಂಪಾದನೆಯನ್ನು [illegible] ಪೌಂಡುಗಳನ್ನು ತಮ್ಮ ಹೆಂಡತಿಗೆ ಕೊಟ್ಟಿರುವರು.

ಹಿಂದುಸ್ಥಾನ.

ಕ್ರಾಫ್ಟ್ ಎಂಬ ಯುರೋಪಿಯನ ಸದ್ಗ್ರಹಸ್ಥರು, ಹಿಂದೂ ಧರ್ಮವನ್ನು ಸ್ವೀಕರಿಸಿದ್ದಾರೆ. ಇವರು ಕಾನಪುರದಲ್ಲಿ ಒಂದು ದೊಡ್ಡ ಬ್ಯಾಂಕಿನ ವ್ಯವಸ್ಥಾಪಕರು. ಮಹಾರಾಷ್ಟ್ರ ಮಂಡಲದಿಂದ ಇವರು ಶುದ್ಧೀಕರಿಸಲ್ಪಟ್ಟದ್ದರಿಂದ ಇವರ ಹೊಸ ಹೆಸರು ವಿಷ್ಣು ಪಂತ ಎಂದಿದೆ. ಕ್ಷೌರ, ಗೋಪಾದ ಜಾಡಿಕೆ, ಪಂಚಗವ್ಯ ಸೇವನ, ಹವನ ಹೋಮಗಳಿಂದ ಇವರು ಸನಾತನ ಧರ್ಮದ ದೀಕ್ಷೆ ಪಡೆದರು.

ಇಂದೂರನಲ್ಲಿ ಬಲವಂತನೆಂಬ ಹಿಂದೂ ತರುಣನು ಲಾಠೀ ತಿರುವದರಲ್ಲಿ ನಿಷ್ಣಾತನಿದ್ದನು. ಇಂದೂರಲ್ಲಿ ೪ ತಿಂಗಳ ಹಿಂದಾದ ಹಿಂದೂ-ಮುಸಲ್ಮಾನರ ದಂಗೆಯಲ್ಲಿ ಭಾಗ ತೆಗೆದುಕೊಂಡ ಅನೇಕ ಮುಸಲ್ಮಾನರನ್ನು ಇವನು ಗುರ್ತಿಸಿದ್ದರಿಂದ, ಮುಸಲ್ಮಾನ ಅಪರಾಧಿಗಳನ್ನು ಬಂಧಿಸುವದು ಅನುಕೂಲವಾಯಿತು. ಇದರಿಂದ ಕುಪಿತರಾದ ೮ ಜನ ಮುಸಲ್ಮಾನರು ಬಲವಂತನನ್ನು ಬಹು ಕ್ರೂರವಾದ ರೀತಿಯಿಂದ ಕೊಂದಿದ್ದಾರೆ. ಸ್ಮಶಾನ ಯಾತ್ರೆಗಾಗಿ ಸಾವಿರಾರು ಹಿಂದೂ ಜನರು ನೆರೆದಿದ್ದರು. ಊರಲ್ಲೆಲ್ಲ ಹಾಹಾಕಾರವೆದ್ದಿದೆ.

ಮಹಾರಾಷ್ಟ್ರದ ನಿಸ್ಸೀಮ ವಾಙ್ಮಯ ಭಕ್ತರೂ, ಅಸಹಕಾರಿಗಳೂ ಆದ ದೇಶಭಕ್ತ ಸೀತಾರಾಮ ಕೇಶವ ದಾಮಲೇ ಇವರು ೧೬ನೇ ತಾ|| ದಿನ ಪುಣೆಯಲ್ಲಿ ಕೈಲಾಸವಾಸಿಗಳಾದರೆಂದು ತಿಳಿಸಲು ವಿಷಾದಗೊಳ್ಳುತ್ತೇವೆ

ಮಹಮ್ಮದೀಯ ೧೨ನೇ ಶಿಕ್ಷಣ ಪರಿಷತ್ತು, ಹಾಗೂ ೪ನೇ ಸ್ತ್ರೀಯರ ಪರಿಷತ್ತು, ಪುಣೆಯಲ್ಲಿ ಕಳೆದವಾರ ಜರುಗಿದವು.

ಹಿಂದುಸ್ಥಾನ, ಬ್ರಹ್ಮದೇಶ ಹಾಗೂ ಸಿಲೋನದ ರಾಷ್ಟ್ರೀಯ ಕ್ರಿಶ್ಚನ್ ಸಂಘದವರು ಒಂದು ಪ್ರಕಟನೆಯನ್ನು ಹೊರಡಿಸಿದ್ದಾರೆ. ಕುಮಾರಿ ಮೇಯೋಳು ಬರೆದ ಗ್ರಂಥಕ್ಕೆ ಮಿಶನರಿ ಜನರು ಸಹಾಯ ಮಾಡಿಲ್ಲವೆಂದೂ, ಆ ಗ್ರಂಥದಲ್ಲಿಯ ವಿಧಾನಗಳೆಲ್ಲ ಕಿಡಿಗೇಡಿತನದವು ಆಗಿರುವವೆಂದೂ ಅವರು ತಮ್ಮ ಮತವನ್ನು ಪ್ರಕಟಿಸಿದ್ದಾರೆ.

ಪುಣೆಯ ಪ್ರಾರ್ಥನಾ ಸಮಾಜದ ಪ್ರಾಕಾರದಲ್ಲಿ ಕೈ. ಡಾ. ಭಾಂಡಾರಕರರ ಸ್ಮರಣಾರ್ಥ ೧೭ನೇ ತಾ|| ಒಂದು ಸ್ತೂಪವನ್ನು ನಿಲ್ಲಿಸಿದರು. ಡಾಕ್ಟರರ ಮೃತದೇಹದ ಬೂದಿಯನ್ನು ಒಂದು ಕರಂಡಕದಲ್ಲಿ ಹಾಕಿ, ಸ್ತೂಪದ ಬುಡದಲ್ಲಿ ಆ ಕರಂಡಕವನ್ನಿಟ್ಟಿರುವರು.

ಖಾದಿಯ ಸುದ್ದಿಗಳು

ತ್ರಿಜೋರದ ಸಂಸ್ಥಾನದ ಎಲ್ಲ ಶಾಲೆಗಳಲ್ಲಿ ನೂಲುವದು ಅವಶ್ಯವಾದ ವಿಷಯವಾಗಿಡಲ್ಪಟ್ಟಿದೆ. ಈ ಸಂಸ್ಥಾನದ ಮಹಾರಾಜರು ತಮ್ಮ ಅರಮನೆಯನ್ನು ಮಹಾತ್ಮಾ ಗಾಂಧಿಯವರಿಗಿಳಿಯಲು ಕೊಟ್ಟದ್ದಲ್ಲದೆ, ೫೦೦ ರೂ. ಖಾದಿ ನಿಧಿಗೆ ಅರ್ಪಿಸಿದರು. ಶಿಕ್ಷಣ ಖಾತೆಯ ಮುಖ್ಯಾಧಿಕಾರಿಗಳು ಮಹಾತ್ಮರ ಸಂಗಡ ಬಹುಕಾಲದ ವರೆಗೆ ಖಾದೀ ಪ್ರಚಾರದ ಬಗ್ಗೆ ಮಾತನಾಡಿ, ಅವರ ಸೂಚನೆಗಳನ್ನು ತಿಳಿದುಕೊಂಡರು.

ಖಾದೀ ನಿಧಿಗೆ ಸರಕಾರೀ ನೌಕರರು ಹಣ ಕೊಡಬಾರದಾಗಿ ಮದ್ರಾಸ ಸರಕಾರದ ಅಪ್ಪಣೆಯಿದೆ. ಆದರೆ ಮದ್ರಾಸ ಕಾಂಗ್ರೆಸ್ಸದ ಸಮಯದಲ್ಲಿ ಜರಗುವ ಖಾದಿಯನ್ನೊಳಗೊಂಡ ಔದ್ಯೋಗಿಕ ಪ್ರದರ್ಶನಕ್ಕೆ ಗವರ್ನರರೇ ದ್ರವ್ಯದ ಸಹಾಯ ಮಾಡಿರುವರು.

ಮುಂಬೈ ಕರ್ನಾಟಕ.

ಗದಗಿನಲ್ಲಿ ಪ್ಲೇಗು ಹೆಚ್ಚುತ್ತಲಿದೆ.

ವಿಜಾಪುರದಲ್ಲಿ ಅನೇಕ ವ್ಯಾಪಾರಸ್ಥರು ಇದೇ ದೀಪಾವಳಿಯಿಂದ ತಮ್ಮ ಲೆಕ್ಕಪತ್ರಗಳನ್ನೆಲ್ಲ ಮರಾಟಿಯ ಬದಲು ಕನ್ನಡದಲ್ಲಿಡಲು ಸಿದ್ಧರಾಗಿರುವರು. ವಿಜಾಪುರದ ಈ ಕನ್ನಡಿಗರ ಮೇಲ್ಪಂಕ್ತಿಯನ್ನು ಉ. ಕರ್ನಾಟಕದ ಎಲ್ಲ ವ್ಯಾಪಾರಸ್ಥರೂ ಅನುಸರಿಸುವರೊ ?

ಹೊನ್ನಾವರದ ಶ್ರೀ ಟಿಗ್ಗರಸಿಯವರು ಪಕ್ಷಿಗಳ ಸಂಗ್ರಹದ ಕಾರ್ಯದಲ್ಲಿ ಬಹು ನೆರವಾಗಿರುವರೆಂದೂ, ಇವರ ಪ್ರಯತ್ನದಿಂದ ಗರುಡ ಪಕ್ಷಿಗಳೂ ಅವುಗಳ ಗೂಡುಗಳೂ ದೊರೆತದ್ದರಿಂದ, ಇವುಗಳನ್ನೂ ಇವು ಗೂಡುಹಾಕುವ ಬಗೆಯನ್ನೂ ನೋಡಬಹುದೆಂದೂ ಮುಂಬೈಯಿಯ ಪ್ರಿನ್ಸ ಆಫ್ ವೇಲ್ಸ ವಸ್ತು ಸಂಗ್ರಹಾಲಯದ ೧೯೨೬-೨೭ ನೇ ಇಸ್ವಿಯ ವರದಿಯಲ್ಲಿ ಪ್ರಕಟವಾಗಿದೆ.

ಮುಂಬೈ ಸರಕಾರದ ಗ್ಯಾಝೇಟ.

ರಾ. ಬ. ಕೋಯೀಮತ್ತೂರರು ರಜೆಯ ಮೇಲೆ ಹೋಗಿದ್ದರಿಂದ, ಶ್ರೀ ಸಲಿತಾಳರು ಬೆಳಗಾವಿಯ ಡಿ. ಡಿ. ಕಲೆಕ್ಟರರಾಗಿದ್ದಾರೆ. ಅವರ ಸ್ಥಾನಕ್ಕೆ ಶ್ರೀ ಅಕ್ಟಂ ಹರಹಾಳರು ಸಂಪಗಾವಿಯ ಮಾಮಲೇದಾರರಾಗಿದ್ದಾರೆ.

ಶ್ರೀ ಆರ್. ಬಿ ಖುದಾನಪುರ ಆಡಿಟರ ಕೋ. ಆ. ಸೊಸಾಯಿಟಿ ಸಾತಾರೆ ಇವರಿಗೆ ೨ ತಿಂಗಳ ರಜೆ ದೊರೆತಿದೆ

ಶ್ರೀ ದಾರೂವಾಲಾ ಇವರು ಕರ್ನಾಟಕ ಕಾಲೇಜದಲ್ಲಿ ತಾತ್ಪೂರ್ತಿಕ ಇಂಗ್ಲೀಷ ಪ್ರೊಫೆಸರರಾಗಿದ್ದಾರೆ.

ವಿಚಿತ್ರವಾದ ಗುಹೆ!

ಮಂಗ್ರೋಳ ಸಂಸ್ಥಾನದಲ್ಲಿ ಒಂದು ಬಾವಿಯನ್ನು ಅಗಿಯುತ್ತಿರುವಾಗ್ಗೆ, ೩೦ ಫೂಟು ಆಳವಾಗಿದ್ದಾಗ್ಗೆ, ಒಂದು ಭವ್ಯವಾದ ಗುಹೆಯು ಕಾಣಬಂದಿತು. ಇದು ಬಂಡೆಗಲ್ಲಿನಲ್ಲಿ ಕೆತ್ತಿದಂತೆ ತೋರುತ್ತದೆ. ೨ ಸಾವಿರ ಜನರನ್ನು ಹಿಡಿಯುವಷ್ಟು ಅದು ವಿಶಾಲವಾಗಿದೆ. ೧೮ ಫೂಟ ಆಳವಾಗಿಯೂ, ೧೨ ಫೂಟು ಅಗಲವಾಗಿಯೂ ಇರುವ ಒಂದು ಪ್ರವಾಹವು ರಭಸದಿಂದ ಅದರ ಮಧ್ಯದಲ್ಲಿ ಹರಿಯುತ್ತಲಿದೆ! ಕೊಗಲುಬಾವಲಿಗಳ ಹೊರ್ತಾಗಿ ಆವ ಪ್ರಾಣಿಗಳೂ ಅಲ್ಲಿ ಕಾಣಬರುವದಿಲ್ಲ. ಈ ಗುಹೆಯನ್ನು ಶೋಧಿಸಿ ತೆಗೆಯಬೇಕೆಂದು ಮಂಗ್ರೋಳ ಸಂಸ್ಥಾನದ ರಾಜರು ನಿಶ್ಚಯಿಸಿದ್ದಾರೆ.

ಇಹವೃತ್ತ.

ಈ ವಾರದಲ್ಲಿ ಮಳೆಯಿಲ್ಲ. ದೀಪಾವಳಿ ಹಬ್ಬದ ಸಿದ್ಧತೆಯು ಎಲ್ಲ ಕಡೆ ಸಾಗಿದೆ.

ಬಸವೇಶ್ವರ ಹೈಸ್ಕೂಲಿನಲ್ಲಿ ಇತ್ತಿತ್ತ ನಡೆದ ಅವ್ಯವಸ್ಥೆಯ ಬಗ್ಗೆ, 'ಕನ್ನಡಿಗ'ನ ಸಂಪಾದಕರು ಚಾಲಕರನ್ನು ಭೆಟ್ಟಿಯಾಗಿ ಕೇಳಿದರು. ಎಲ್ಲರಿಗೂ ಸಮಾಧಾನವಾಗುವಂತೆ ಸುವ್ಯವಸ್ಥೆಯನ್ನು ಮಾಡುವದರಲ್ಲಿ ತೊಡಗಿರುವೆವೆಂದೂ, ಶಾಲೆಯು ಪ್ರಾರಂಭವಾಗುತ್ತಲೇ, ಎಲ್ಲವು ಕೃತಿಯಲ್ಲಿ ಬರುವದೆಂದೂ, ಚಾಲಕರು ಆಶ್ವಾಸನ ಕೊಟ್ಟಿದ್ದಾರೆ. ಈ ಆಶ್ವಾಸನವು ಕ್ಷಿಪ್ರದಲ್ಲಿಯೇ ನಿಜವಾಗಿ ಪರಿಣಮಿಸುವದಾಗಿ ನಾವು ಆಶಿಸುತ್ತೇವೆ.

ನಮ್ಮ ದಕ್ಷಿಣ ಕನ್ನಡದ ಪತ್ರ

ಮಂಗಳೂರು—

ಮದ್ರಾಸದ ಗವ್ಹರ್ನರರೂ ಅವರ ಧರ್ಮಪತ್ನಿಯವರೂ ತಾ|| ೧೦ ರಲ್ಲಿ ಮಡಿಕೇರಿಯಿಂದ ಪುತ್ತೂರಿಗೆ ಬಂದು, ರೋಮನ್ ಕೆಥೊಲಿಕ್ ಸಮಾಜದ ಕಡೆಯಿಂದ ಸ್ವಾಗತವನ್ನು ಸ್ವೀಕರಿಸಿ, ಸಾಯಂಕಾಲಕ್ಕೆ ಮಂಗಳೂರಿಗೆ ಬಂದರು. ೧೧ ನೇ ತಾರೀಖಿನ ಬೆಳಗ್ಗೆ ಗಂಟೆ ೭|| ಗೆ ಇಲ್ಲಿನ ಗವ್ಹರ್ನಮೆಂಟ ಸೆಕಂಡರಿ ಶಾಲೆಯಲ್ಲಿ ಬಿನ್ನವತ್ತಳೆಗಳನ್ನು ಸ್ವೀಕರಿಸಿ, ಡಾ. ಫರ್ನಾಂಡಿಸರಿಗೆ ಕೈಸರ್-ಇ-ಹಿಂದ್ ಮೆಡಲನ್ನೂ, ಮೆ|| ಗಳಾದ ಎಸ್. ಸುಬ್ಬರಾವ್‌ರವರಿಗೆ ದಿವಾನ್ ಬಹದ್ದೂರ್ ಪದವಿಯನ್ನೂ, ಜೆ. ಜೆ. ಫರ್ನಾಂಡಿಸ್ ಮತ್ತು ಜೆ. ಎಸ್. ಲೋಬೋ ಇವರಿಗೆ ರಾವ್ ಸಾಹೇಬ ಸನದುಗಳನ್ನು ಹಂಚಿದರು. ಬಿನ್ನವತ್ತಳೆಗಳಿಗೆ ಉತ್ತರವನ್ನೂ ಆಗಲೇ ದಯಪಾಲಿಸಿದರು.

ತಾ|| ೧೨ ನೇ ಬುಧವಾರ ಬೆಳಿಗ್ಗೆ ೭|| ಗಂಟೆಗೆ ಲೇಡಿಗೋಶೆನ್ನರು ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಯ 'ಒಪರೇಶನ್' ಕಟ್ಟಡದ ತಳಕಲ್ಲಿನ ಸ್ಥಾಪನೆಯನ್ನು ಮಾಡಿದರು. ೧೧ ಗಂಟೆಗೆ ಲೋರ್ಡ್ ಗೋಶೆನ್‌ರು ಸೈಂಟ್ ಎಲೋಶಿಯಸ್ ಕಾಲೇಜಿನಲ್ಲಿ ವಿಜ್ಞಾನ ಶಾಸ್ತ್ರದ ಕ್ಲಾಸನ್ನು ತೆರೆಯುವ ಸಮಾರಂಭವನ್ನು ನೆರವೇರಿಸಿ ಅಲ್ಲಿಂದ ಹೊರಟು ಅಸ್ಪೃಶ್ಯರ ಮಿಶ್ಯನನ್ನು ಸಂದರ್ಶಿಸಿದರು. ಸಾಯಂಕಾಲ ಮೈದಾನಿನಲ್ಲಿ ಸ್ಕೌಟುಗಳ ಮತ್ತು ಪೋಲಿಸರ ಆಟಗಳೂ, ರಾತ್ರಿ ೯ ಕ್ಕೆ ತ್ರಿಚನ್ನಾಪಳ್ಳಿಯವರ ನವೀನ ಬಾಣಬಿರುಸುಗಳ ಪ್ರದರ್ಶನವೂ ನಡೆದುವು. ಸುಮಾರು ೨೦ ಸಾವಿರದಮೇಲೆ ಜನಸಂಖ್ಯೆಯು ನೆರೆದಿತ್ತು !

ತಾ|| ೧೩ ನೇ ಗುರುವಾರ ಗವ್ಹರ್ನರರು ಪರಿವಾರದೊಡನೆ ಮಂಗಳೂರಿನಿಂದ ಹೊರಟು ಮೂಡಬಿದರೆಗೆ ಸೇರಿ ಅಲ್ಲಿನ ಪ್ರಸಿದ್ಧ ಬಸದಿಗಳನ್ನೂ ಅರಮನೆಯನ್ನೂ ನೋಡಿ, ಕಾರ್ಕಳಕ್ಕೆ ತೆರಳಿ ಅಲ್ಲಿನ ಗುಮ್ಮಟವಿಗ್ರಹವನ್ನೂ ಮಾನಸ್ತಂಭವನ್ನೂ ಕಂಡು, ರಾತ್ರಿ ೭ ಕ್ಕೆ ಮಂಗಳೂರಿಗೆ ಹಿಂತಿರುಗಿದರು.

ಬಿನ್ನವತ್ತಳೆಗಳ ಕುರಿತು,—ಕೆಲವುಗಳ ವಿಷಯ ಆಲೋಚಿಸಲಾಗುವುದೆಂದರು. ಕೆಲವುಗಳನ್ನು ನಿರಾಕರಿಸಿ ತಕ್ಕಷ್ಟು ಯೋಗ್ಯ ಕಾರಣಗಳನ್ನು ಕೊಟ್ಟರು. ಮಂಗಳೂರು ಮ್ಯುನಿಸಿಪಲ್ ಕೌನ್ಸಿಲಿನವರು ತಮ್ಮ ಬಿನ್ನವತ್ತಳೆಯಲ್ಲಿ, ಪಟ್ಟಣಿಗರ ಉಪಯೋಗಕ್ಕಾಗಿ ಒಂದು ಪುರ ಮಂದಿರವೂ (Town-Hall) ಮ್ಯುನಿಸಿಪಲ್ ಆಫೀಸೂ ಕೂಡಿದ ಒಂದು ಕಟ್ಟಡವನ್ನು ಕಟ್ಟಿಸಬೇಕಾಗಿದೆಯೆಂದು ಹೇಳಿಕೊಂಡಲ್ಲಿ, ಅದು ಅಗತ್ಯವೆಂದಾದರೆ ಮ್ಯುನಿಸಿಪಾಲಿಟಿಯು ಆ ಕುರಿತು ಸಾಲಕೇಳಬಹುದೆಂದು ಸೂಚಿಸಿರುತ್ತಾರೆ. ಡಿಸ್ಟ್ರಿಕ್ಟ ಬೋರ್ಡಿನ ಬಿನ್ನವತ್ತಳೆಯಲ್ಲಿ, ಮಲಬಾರನ್ನೂ ದಕ್ಷಿಣ ಕನ್ನಡವನ್ನೂ ಸೇರಿಸುವ ಕರಾವಳಿ ರಸ್ತೆಯ ಕುರಿತು, ಮಲಬಾರಿನ ಭಾಗದ ಅಂದಾಜು ಪಟ್ಟಿ ಈ ವರದಿಯೇ ಬಂದಿರುವದರಿಂದ ಇಲ್ಲಿನ ಎಸ್ಟಿಮೇಟನ್ನು ಕೂಡಲೇ ಕಳುಹಿಸಬೇಕೆಂದು ಬರೆದಿದ್ದಾರೆ. ಕೇಳಿದ ಅನೇಕ ಕೇಳಿಕೆಗಳ ಕುರಿತು ಸಹಾನುಭೂತಿಪೂರ್ವಕ ಆಲೋಚಿಸಲಾಗುವುದೆಂದು ಹೇಳಿರುತ್ತಾರೆ.

ಉಡುಪಿ—

ಮಹಾತ್ಮರಿಗೆ ಸುಸ್ವಾಗತವನ್ನೀಯಲು ಸ್ವಾಗತ ಮಂಡಲಿಯೊಂದು ಸ್ಥಾಪಿತವಾಗಿ, ಶ್ರೀ. ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಸಾಹೇಬರು ಸ್ವಾಗತಾಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುತ್ತಾರೆ. ಶ್ರೀ. ಸಾಂತಯ್ಯರು ಅನಂತಪದ್ಮನಾಭ ಭಟ್ಟರೆಂಬವರೇ ಕಾರ್ಯದರ್ಶಿಗಳು. ಈ ತಾಲೂಕಿನಿಂದ ಕನಿಷ್ಟ ಪಕ್ಷಕ್ಕೆ ೫ ಸಾವಿರ ರೂಪಾಯಿಗಳನ್ನಾದರೂ ಖಾದಿನಿಧಿಗೆ ಅರ್ಪಿಸಬೇಕೆಂದು ನಿರ್ಧರಿಸಿರುವರು.

ಉಡುಪಿಯಿಂದ ಹೊರಡುತ್ತಿದ್ದ "ಸದ್ಗುರು ಪಾದಸೇವೆ" ಎಂಬ ಮಾಸಿಕ ಪತ್ರಿಕೆಯು ಒಮ್ಮೆಯೇ ತಟಸ್ಥತೆಯನ್ನು ಹೊಂದಿದ್ದು ಶೋಚನೀಯವಾಗಿ ಕಾಣುತ್ತದೆ. ಪ್ರೋತ್ಸಾಹಕರ ಅಭಾವವೇ ಕಾರಣವಲ್ಲದೆ ಮತ್ತೇನು ?

ನೀಲೇಶ್ವರ—

ಇಲ್ಲಿ ಕೆಲವು ದಿನಗಳಹಿಂದೆ ಗಾಂಧಿ ಸ್ವಾಗತ ಕಮಿಟಿಯ ಸಭೆಯೊಂದು ಸೇರಿ, ತೆಂಗಿನ ಎಲೆಗಳ ಮೇಲೊಂದು ಬಿನ್ನಹ ಪತ್ರವನ್ನು ಬರೆದು ತೆಂಗಿನ ಚಿಪ್ಪಿನಿಂದ ಮಾಡಿದ ಪೆಟ್ಟಿಗೆಯಲ್ಲಿ ಅದನ್ನಿಟ್ಟು ಮಹಾತ್ಮಾಜೀಯವರಿಗದನ್ನು ಸಮರ್ಪಿಸಬೇಕೆಂದು ಸರ್ವಸಮ್ಮತಿಯಿಂದಲೇ ತೀರ್ಮಾನಿಸಿರುವರು.

ನಮ್ಮ ಹುಬ್ಬಳ್ಳಿಯ ಪತ್ರ.

ಇಲ್ಲಿಯ ನಾರಾಯಣ ವ್ಯಾಯಾಮ ಶಾಲೆಯ ವಿದ್ಯಾರ್ಥಿಗಳು ಕೂಡಿಕೊಂಡು ನಾರಾಯಣ ವ್ಯಾಯಾಮ ಶಾಲಾ ತ್ರೈಮಾಸಿಕವನ್ನು ಹಸ್ತಲಿಖಿತದಲ್ಲಿ ದಸರೆಯಂಥ ಶುಭ ದಿವಸದಲ್ಲಿ ಪ್ರಸಿದ್ಧಿಸಿ ಅದನ್ನು ಶ್ರೀ ಸರಸ್ವತಿ ವಿದ್ಯಾರಣ್ಯ ಧರ್ಮಾರ್ಥ ವಾಚನಾಲಯದಲ್ಲಿ ಇಟ್ಟಿರುವರು. ಅದರಲ್ಲಿ ಕನ್ನಡ ಮತ್ತು ಮರಾಠಿ ಭಾಷೆಗಳುಂಟು. ಶ್ರೀ. ಕಾರಂತರ "ಕನ್ನಡಿಗರ ಮರಣವು" ಎಂಬ ಲೇಖವು ಬಂದಿರುವದು. ಆಬಾಲ ವೃದ್ಧರಲ್ಲಿ ವ್ಯಾಯಾಮದ ಅಭಿರುಚಿಯನ್ನು ಹುಟ್ಟಿಸುವದೇ ಇದರ ಧ್ಯೇಯವು.

ಇಲ್ಲಿಯ ಕಾಂಗ್ರೆಸ ಕಮಿಟಿಯವರು ಮಳೆಯ ಹಾನಿಯ ಬಗ್ಗೆ ಒಂದು ರಿಪೋರ್ಟ ತಯಾರಿಸಿರುತ್ತಾರೆ. ಒಟ್ಟು ೪೧ ಸಾವಿರ ರೂ. ಹಾನಿಯಾಗಿದೆ.

ಇಲ್ಲಿಯ ಲಿಂಗಾಯತ ವಿದ್ಯಾವರ್ಧಕ ಸಂಘದವರು ಸಂಘದಲ್ಲಿಯ ವಿದ್ಯಾರ್ಥಿಗಳಿಂದ ರಾಟಿಯ ಶಿವಧಾರವನ್ನು ಸಿದ್ಧಪಡಿಸಿ ಮಾರುವದಕ್ಕೆ ಇಡುವವರಿದ್ದಾರೆ. ಎಲ್ಲ ವಿದ್ಯಾರ್ಥಿಗಳು ನೂಲಬೇಕೆಂದೂ ಖಾದಿಯನ್ನೇ ಧರಿಸಬೇಕೆಂದೂ ನೇಮವನ್ನು ಮಾಡಿರುತ್ತಾರೆ.

ಇಲ್ಲಿಯ ನಗರ ಸಭೆಯವರು ಊರೊಳಗೆ ಮಾಯರ್ಸ ಪಂಪನ್ನು ಹಚ್ಚಿ ೬-೭ ತಿಂಗಳಾದರೂ ಒಂದನ್ನೂ ಉಪಯೋಗಕ್ಕೆ ಬಿಟ್ಟಿರುವದಿಲ್ಲ.

ಇಲ್ಲಿಗೆ ಡಾ. ನಾತಗೇರ ಇವರು ಬಂದಿರುವರು. ಶಸ್ತ್ರಕ್ರಿಯೆಗಳು ನಡೆದಿರುತ್ತವೆ.

ಸೋಮವಾರ ೧೦-೧೧-೨೭ ದಿವಸ ಇಲ್ಲಿಯ ಒಬ್ಬ ವ್ಯಾಪಾರಿಯು ಶರೆಯನ್ನು ಕುಡಿದು ಸಿನೇಮಾಕ್ಕೆ ಹೋಗಿದ್ದನು. ಸಿನೇಮಾ ಬಿಟ್ಟ ಬಳಿಕ ಆದಮೇಲೆ ಅವನನ್ನು ಒಬ್ಬ ಮುಸಲ್ಮಾನ ಜೂಗಾರನು ಟಾಂಗಾದಲ್ಲಿ ಹಾಕಿಕೊಂಡು ಅಂಗಡಿಗೆ ಕರೆದುಕೊಂಡು ಹೋಗಿ ರಾತ್ರಿ ೧೨ ಘಂಟೆಯ ಸುಮಾರಕ್ಕೆ ಮತ್ತೊಂದು ಟಾಂಗಾದಲ್ಲಿ ಅವನನ್ನು ಹಾಕಿಕೊಂಡು ಶ್ರೀ ಸಿದ್ಧಾರೂಢ ಮಠದಕಡೆಗೆ ಕರಕೊಂಡುಹೋಗಿ ಅಲ್ಲಿ ಒಂದು ಹೊಲದಲ್ಲಿ ಅವನನ್ನು ಕೊಂದಿರುವನು. ಅವನಲ್ಲಿ ಅಜಮಾಸ ೧೫೦ ರೂಪಾಯಿಗಳೂ ೯ ತೊಲೆಯ ಭಂಗಾರದ ಕಡಗವೂ ಒಂದು ಚಿನ್ನದ ಗಂಟೂ ಇತ್ತು. ಚಿನ್ನದ ಗಂಟನ್ನು ಬಿಟ್ಟು ಉಳಿದದ್ದನ್ನು ತೆಗೆದುಕೊಂಡು ಹೋಗಿದ್ದನು. ಈಗ್ಗೆ ಅವನನ್ನು ಹಿಡಿದಿರುತ್ತಾರೆ. ಎರಡು ತಿಂಗಳಲ್ಲಿ ೭-೮ ಮಾರಾಮಾರಿಗಳಾದವು. ಇಷ್ಟು ಹೊಗಲಾಡಿಸಲಿಲ್ಲದರೂ ಆಗುವದೋ ?

ಕರ್ನಾಟಕ ಏಕೀಕರಣ ಸಭೆ. ಬಳ್ಳಾರಿ.

ರಾಯದುರ್ಗ (ಜಿಲ್ಲಾ ಬಳ್ಳಾರಿ) ಪುರವಾಸಿಗಳ ಜಾಹೀರ ಸಭೆಯು ೧೫—೧೦—೨೬ ತಾರೀಖಿನ ದಿನ ಸಂಜೆಯ ೫॥ ಗಂಟೆಗೆ ಶ್ರೀ. ಕೆ. ಗುರುರಾಜರಾವ ಬಿ ಎ ಬಿ ಎಲ್ ವಕೀಲ ಇವರ ಅಧ್ಯಕ್ಷತೆಯ ಕೆಳಗೆ ಕರ್ನಾಟಕ ಏಕೀಕರಣದ ವಿಷಯಕ್ಕೆ ಚರ್ಚಿಸುವ ಕುರಿತು ಕೂಡಿತ್ತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕರ್ನಾಟಕದ ಸದ್ಯಸ್ಥಿತಿಯನ್ನು ತಿಳಿಹೇಳಿ ಕರ್ನಾಟಕ ಏಕೀಕರಣವಾಗುವದು ಅವಶ್ಯವೆಂದೂ ಅದಕ್ಕೋಸುಗ ಕನ್ನಡಿಗರು ಪ್ರಯತ್ನ ಪಡಬೇಕೆಂದೂ ಜನರಿಗೆ ಮನರಂಜನವಾಗುವಂತೆ ತಿಳಿಹೇಳಿದರು. ಬಳಿಕ ಶ್ರೀ ರಂಗನಾಥನಾಯಕರೂ, ಶ್ರೀ ಹರಿಬಸವಶಾಸ್ತ್ರಿಗಳೂ, ಶ್ರೀ ಎಚ್ ಎನ್. ಹನುಮಂತ ಬಿ. ಎ. ಬಿ. ಇ. ಡಿ. ಇವರ ಸ್ಫೂರ್ತಿದಾಯಕ ಭಾಷಣಗಳಾದಬಳಿಕ ಸರ್ವಾನುಮತದಿಂದ ಕೆಳಗಿನ ಠರಾವುಗಳು ಪಾಸಾದವು. ಕಡೆಗೆ ಅಧ್ಯಕ್ಷರ ಉಪಸಂಹಾರಾತ್ಮಕ ಭಾಷಣದೊಡನೆ ಸಭೆಯು ವಿಸರ್ಜನವಾಯಿತು.

(೧) ಕರ್ನಾಟಕವು ಹರಿದು ಹಂಚಿ ಹೋದದ್ದರಿಂದ ಅದರ ಬೆಳವಣಿಗೆ ಎಲ್ಲರೀತಿಯಿಂದಲೂ ಕುಗ್ಗಿದೆ. ರಾಜಕೀಯ, ವ್ಯಾಪಾರ, ಶಿಕ್ಷಣ, ಮುಂತಾದ ವಿಷಯಗಳಲ್ಲಿ ಪ್ರಗತಿ ಪಡೆಯಬೇಕಾದರೆ ಕರ್ನಾಟಕ ಏಕೀಕರಣವು ಅವಶ್ಯವೆಂದು ಈ ಸಭೆಯು ನಿರ್ಧರಿಸುತ್ತದೆ.

(೨) (ಅ) ಕನ್ನಡ ನಾಡಾದ ಬಳ್ಳಾರಿ ಜಿಲ್ಲೆಯಲ್ಲಿಯ ರಾಯದುರ್ಗ, ಆಲೂರ, ಆದವಾನಿ ತಾಲೂಕುಗಳನ್ನು ಕನ್ನಡವಿದ್ಯಾಗೂ ಆಂಧ್ರರಿಗೆ ಕೊಟ್ಟದ್ದು ಅನುಚಿತವು. ಈ ಮೇಲ್ಕಂಡ ತಾಲೂಕುಗಳನ್ನು ಕರ್ನಾಟಕಕ್ಕೇ ಸೇರಿಸಬೇಕೆಂದು ಈ ಸಭೆಯು ಅಖಿಲ ಭಾರತ ಕಾಂಗ್ರೆಸ ಸಭೆಯವರನ್ನು ಬೇಡಿಕೊಳ್ಳುತ್ತದೆ.

(೩) ಠರಾವುಗಳನ್ನ ಗಣಿಸಿದಂತೆ ಕರ್ನಾಟಕ ಕಾಂಗ್ರೆಸ್ ಕಮೀಟಿಯವರು ಬಳ್ಳಾರಿ ಜಿಲ್ಲೆಯ ಪೂರ್ಣ ಕನ್ನಡವಿದ್ಯಾಗೂ, ಅದರಲ್ಲಿಯ ೫ ತಾಲೂಕುಗಳನ್ನು ಕರ್ನಾಟಕಕ್ಕೆ ಕೊಟ್ಟಂತೆ ಉಳಿದ ರಾಯದುರ್ಗ, ಆಲೂರ, ಆದವಾನಿಗಳನ್ನು ಆಂಧ್ರರಿಗೆ ಕೊಟ್ಟದ್ದು ಅನುಚಿತವು, ನಾವು ಕನ್ನಡಿಗರಿದ್ದು ಕರ್ನಾಟಕಕ್ಕೆ ಸೇರುವದು ನಮ್ಮ ಜನ್ಮಸಿದ್ಧಹಕ್ಕು ಇರುವದರಿಂದ, ಕರ್ನಾಟಕ ಕಾಂಗ್ರೆಸ ಕಮೀಟಿಯವರು ನಮ್ಮನ್ನು ತಮ್ಮ ಆಡಳಿತಕ್ಕೆ ಸೇರಿಸಿಕೊಳ್ಳಬೇಕೆಂದು ಈ ಸಭೆಯು ಬೇಡುತ್ತದೆ.

(೪) ರಾಯದುರ್ಗ ತಾಲೂಕು ಬೋರ್ಡಿಗೂ ಮತ್ತು ಬಳ್ಳಾರಿ ಜಿಲ್ಲಾ ಬೋರ್ಡಿಗೂ ಈ ತಾಲೂಕಿನಲ್ಲಿ ಕನ್ನಡಿಗರ ಸಂಖ್ಯೆಯು ಹೆಚ್ಚಿದ್ದುದರಿಂದ ಕನ್ನಡಿಗರಿಗಾಗಿ ಕನ್ನಡ ಪಾಠಶಾಲೆಗಳನ್ನೇ ತೆರೆಯಬೇಕೆಂದು ಈ ಸಭೆಯು ಸೂಚಿಸುತ್ತದೆ

(೫) ಈ ಜಿಲ್ಲೆಯ ಎಲ್ಲ ಕೋರ್ಟ ಕಚೇರಿಗಳಲ್ಲಿ ಕನ್ನಡಭಾಷೆಯೇ ನಡೆಯುವಂತೆ ಮಾಡಬೇಕೆಂದು ಈ ಸಭೆಯು ಮುದ್ರಾಸ ಸರಕಾರಕ್ಕೆ ಸೂಚಿಸುತ್ತದೆ.

(೬) ಮುದ್ರಾಸ ಸರಕಾರಕ್ಕೆ ಒಳಪಟ್ಟ ಕರ್ನಾಟಕ ಭಾಗವನ್ನೂ ಬೇರೆ ಬ್ರಿಟಿಶ್ ಕರ್ನಾಟಕದ ಭಾಗಗಳನ್ನೂ ಒಂದುಗೂಡಿಸಿ ಬೇರೆ ಕರ್ನಾಟಕ ಪ್ರಾಂತವನ್ನು ಮಾಡಬೇಕೆಂದು ಈ ಸಭೆಯು ಗವ್ಹರನ್ ಮೆಂಟ ಅಫ್ ಇಂಡಿಯಾ ಸರಕಾರಕ್ಕೆ ಸೂಚಿಸುತ್ತದೆ.

ತಾ॥ ೧೭-೧೦-೨೬ } ಕಾರ್ಯದರ್ಶಿ,
ಕರ್ನಾಟಕ ಏಕೀಕರಣ ಸಂಘ ಬಳ್ಳಾರಿ.

ಕಲ್ಬುರ್ಗಿಯೂ, ಕರ್ನಾಟಕವೂ.

ರಾಗ, ಜಿಹಾನ (ಮನ್ಸು ಮಧುರ ಓ! ಮುರಲಿವಾಲೆ ಪ್ರಗಟಿಸಿತ್ಯಾದಿ) ಯಂತೆ.

ನೋಡು ನೋಡು ಕನ್ನಡಿಗನೆ ತವ ಜನನಿಯ ಈ ಪಾಡು ।
ಮಾಡು ಮಾಡು ಮನದೊಳು ಬಂಧು ಕರುಣವಿ ಕಾಪಾಡು ॥ಪ॥
ಒಂದು ಕಡೆ ಮರಾಠೆ ಜನರು ಮತ್ತೊಂದು ಕಡೆ ಆಂಧ್ರರ್ ।
ಒಂದೊಂದಾಗಿ ಅಂಗವ ಛೇದಿಸಿ ಭಂಗಪಡಿಸುತಿಹರು ॥ ೧ ॥
ಕಲುಬುರಗಿ ಕಲ್ಯಾಣ ಪ್ರಾಂತವು ನಿಲಯು ಬಸವನಿಗೆ ।
ಹುಲಿಯು ಬಾಯಿಗೆ ತುತ್ತಾಗುವದು ಚಲುವಜನನಿರವು ॥ ೨ ॥
ವೀರನರಪತಿ ಕೃಷ್ಣನ ಪಡೆದ ವೀರ ನಿನ್ನ ಜನನಿ ।
ಮಾರಿಗೆ ಬಲಿ ಬದ್ದಂತೆಯಾಗ್ತದು ಬಳ್ಳಾರಿ ಎದಗ್ಯ ॥ ೩ ॥
ಮರೆಯದಿರು ತವಜನನಿಯನಿಂಥಾ ಉರುತರ ದುಃಖದಲಿ ।
ಧುರೀಣನಾಗು ರಾಮನ ಸ್ಮರಿಸು ಕರದಿ ಶಸ್ತ್ರ ಹಿಡಿದು ॥ ೪ ॥

— ರಾಮಾಚಾರ್ಯ ಬಂಡಿಬೆಂಬ್ರಿ.

ವಾಙ್ಮಯ ಪರಿಚಯ.

ವಿಚಿತ್ರ ಘಟನೆ— ಶಾರದೆಯ ಮುತ್ತಿನ ಸರದಲ್ಲಿಯ ಮೊದಲನೆಯ ಮುತ್ತು. ಮುತ್ತುಗಳನ್ನು ಸರವಾಗಿ ಪೋಣಿಸುವ ಕೆಲಸವನ್ನು ಧಾರವಾಡದ ಶ್ರೀ॥ ಹುಲಕವಿಯವರು ಕೈಕೊಂಡಿರುವರು. ಕವಿಗಳ ಕೃತಿಗಳನ್ನು ಬೈಲಿಗೆ ತರುವ 'ಕಾವ್ಯ ಕಲಾಪ'-ವನ್ನು ಹೊರಡಿಸುವ ವಿಚಾರವನ್ನಾದರೂ ಇವರು ಮಾಡಿರುವರು. ಈ ಸಂದರ್ಭದಲ್ಲಿ ನಮಗೆ ತೋಚಿದ ಒಂದೆರಡು ಮಾತುಗಳನ್ನು ಹೇಳಬಿರೆವು. ಹಿಂದಕ್ಕೆ ಶಾರದೆಯ ಉಪಾಸಕರನೇಕರು ಆವಳಿಗೆ ಹೂ ಮಾಲೆ- 'ರತ್ನ' ಹಾರಗಳನ್ನರ್ಪಿಸಲು ಮನಸ್ಸುಮಾಡಿದರು. ಶಾರದೆಯ ದುರ್ದೈವ! ಒಂದು ಮಾಲೆಯೂ ಮುಗಿಯಲಿಲ್ಲ. ಒಂದೂ ಸರವು ಸಂಪೂರ್ಣವಾಗಲಿಲ್ಲ. ಪೋಣಿಸಿದ ಮೊದಲಿನ ಹೂ- ರತ್ನಗಳೇ ಸರಿ. ಮುಂದೆ ಹಾರ- ಮಾಲೆಗಳು ಹರಿದು- ಮುಗಿಯದೆ ಹೋದವು. ಈ ಅವಸ್ಥೆಗೆ ಆಶ್ರಯದ ಕೊರತೆಯು ಕಾರಣವೇನೋ ಹರಿ. ಆದರೆ ಪ್ರಕಾಶಕರ ಅಲ್ಪತೆಯು ಕೆಲವಂಶದಿಂದ ಕಾರಣವಾಗಿರುವದು. ಮೊದಲಿನ ಹುರುಪು ಕಡೆಯವರೆಗೆ ಉಳಿಯುವದಿಲ್ಲ. ಸದ್ಯಕ್ಕೆ ಸಾಹಿತ್ಯ ಸೇವೆಯಂಬರೆ ಅದೊಂದು ಸಾಹಸವಾಗಿದೆ. ಸಾಹಸದ ಹಾದಿಯು ಸಂಕಟಗಳಲ್ಲಿ. ಕೊನೆಯು ಕೀರ್ತಿಯಲ್ಲಿ ಈ ಸಂಗತಿಯನ್ನರಿತು ಶ್ರೀ ಹುಲಕವಿಗಳು ಜಾಣ್ಣಾಗಿ ಲಕ್ಷದಲ್ಲಿಡಬೇಕೆಂದು ನಮ್ಮ ಕೋರಿಕೆ.

ಸದ್ಯದ ಪುಸ್ತಕವು ಚಿಕ್ಕದೊಂದು ಕಥೆಯಾಗಿದೆ. ವಧೂವರರ ಮನೋಗತವನ್ನುಪಲಕ್ಷಿಸದೆ ಒತ್ತಾಯದಿಂದ ಮಾಡುವ ವಿವಾಹಗಳ ನಿಷೇಧವು ಇದರ ಉದ್ದೇಶವಾಗಿದೆ. ಕಥೆಯು ಬಹು ಮನೋರಂಜಕವಾಗಿದೆ. ಆದರೆ ಅದರಲ್ಲಿ ಒಂದು ಕೊಂಗು ಮಾತ್ರ ಆಗಿದೆ. ಕೇವಲ ಬ್ರಾಹ್ಮಣ ಸಮಾಜದಲ್ಲಿ ರೂಢವಾಗಿರುವ 'ಅಪ್ಪೋಜಿ'- 'ಭೂಮ' ಮೊದಲಾದವುಗಳನ್ನು ಪಾಪ! ಕೇಡಜೇಯವರ ಕೊರಳಿಗೇಕೆ ಕಟ್ಟಿರುವರು! ಭಾಷೆಯು ಸರಳವೂ ಶುದ್ಧವೂ ಸ್ವಾರಸ್ಯವುಳ್ಳವೂ ಆಗಿದೆ- ಮುದ್ರಣವಾದರೂ ಮುದ್ದಾಗಿದೆ. ವರ್ಷದ ಚಂದಾ ಹಣವು ತೀರ ಕಡಿಮೆ ೧-೮-೦ ಮಾತ್ರ. ಸರ್ವರೂ ಆಶ್ರಯ ಕೊಡಬೇಕು.

— ಶ್ಯಾಮ.

ಜನರಲ್ ಅಶ್ಯೂರನ್ಸ ಸೊಸಾಯಿಟಿ ಅಜಮೀರ.

ಸನ್ ೧೯೨೬ ನೆಯ ಇಸವಿಗೆ ಅಖೈರಾದ ಅವಧಿಗೆ ನಮ್ಮ ಸೊಸೈಟಿಯ ಅಸ್ತಿಪಾಸ್ತಿಗಳ ಆರಸೆಯ ಸಲದ ಅಂದಾಜು ತಯಾರಾಗಿದೆ. ೧೯೨೬ ನೆಯ ಸಾಲಿಗೆ ೮೫,೦೦೦ ರೂಪಾಯಿಗಳಿಗೆ ಮೇಲ್ಪಟ್ಟ ಹೆಚ್ಚು ಆದಾಯವು ಬಂದಿರುವುದೆಂದು ಮೇಲ್ಕಂಡ ಸಾವಿರಕ್ಕೆ ಜೀವಾವಧಿಯ ಪಾಲಿಸಿಗಳ ಮೇಲೆ ೨೨॥ ರೂಪಾಯಿಗಳಂತೆಯೂ, ಎಂಡೋವ್ಮೆಂಟ್ ಪಾಲಿಸಿಗಳ ಮೇಲೆ ೧೮ ರೂಪಾಯಿಗಳಂತೆಯೂ ಬೋನಸ್ಸನ್ನು ಕೊಡಬಹುದೆಂದು ನಮ್ಮ ಆಕ್ಚ್ಯುರಿಯವರು ಸಲಹೆ ಮಾಡಿರುತ್ತಾರೆ. ಇಂಥಾ ಉತ್ಕೃಷ್ಟವಾದ ಫಲಿತಾಂಶವನ್ನು ಯಾವುದೊಂದು ಹಳೆಯ ಕಂಪನಿಯಾಗಲಿ ಹೊಸ ಕಂಪನಿಯಾಗಲಿ ಸಾಧಿಸಿರುವದಿಲ್ಲ.

— ಬ್ರಾಂಚ ಸೆಕ್ರೆಟರಿ ಬೆಂಗಳೂರಸಿಟಿ

ಪತ್ರವ್ಯವಹಾರ.

ಭಾಷಾ ಸೇವೆ.

ಪುರಾತನ ಪದ್ಯ ಕಾವ್ಯಗಳಲ್ಲಿ ಕನ್ನಡ ಭಾರತ ಮತ್ತು ಜೈಮಿನಿ ಇವುಗಳು ಪ್ರಸಿದ್ಧವಾಗಿರುವುದು ಸಕಲರಿಗೂ ವೇದ್ಯವಾಗಿರುವ ಅಂಶವೇ ಆಗಿರುತ್ತದೆ. ಈ ನಿಯಮವನ್ನು ಅನುಸರಿಸಿ ಮೇಲ್ಕಂಡ ಸದ್ಗ್ರಂಥಗಳನ್ನು ರಸವತ್ತಾಗಿ ಓದುವುದರಲ್ಲಿ ಸುಪ್ರಸಿದ್ಧರಾಗಿರುವ ಮೈಸೂರಿನ ಶ್ರೀಮಾನ್ ಎ. ಎಸ್. ಗುಂಡಪ್ಪನವರು ಮೈಸೂರುದೇಶದ ಅನೇಕ ಕಡೆಗಳಲ್ಲಿಯೂ ಮತ್ತು ಧಾರವಾಡ, ಗದಗು, ಬಾಗಲಕೋಟೆ ಮುಂತಾದ ಸ್ಥಳಗಳಲ್ಲಿಯೂ ಕನ್ನಡ ಭಾರತವನ್ನು ಓದಿದರು.

ಈ ಮಹಾಶಯರು, ಕವಿಸಮಯವನ್ನು ಅನುಸರಿಸಿ ನವರಸಯುಕ್ತವಾಗಿಯೂ, ಸುಸ್ವರ ಯುಕ್ತವಾಗಿಯೂ ಗಾಯನಪದ್ಧತಿಯಾಗಿ ಓದಿ ಬಹಳ ಆಶ್ಚರ್ಯವನ್ನುಂಟುಮಾಡಿದರು. ಅನೇಕ ಕಡೆಗಳಲ್ಲಿ ಅಸಂಖ್ಯಾತವಾಗಿ ನೆರೆದಿದ್ದ ಭಕ್ತಶ್ರೋತೃಗಳು ಸಾವಧಾನ ಚಿತ್ತದಿಂದ ಕೇಳಿ ತುಂಬಾ ಚಿತ್ತ ಸಂತೋಷಪಡುವವರಾದರು. ಕನ್ನಡಿಗರಿಗೆ ಕನ್ನಡ ಭಾಷಾ ಪರಿಚಯವನ್ನುಂಟುಮಾಡಿಕೊಡುವುದೇ ಇವರ ಮುಖ್ಯ ಕರ್ತವ್ಯವುಳ್ಳವರಾಗಿ ಈ ಕಾರ್ಯಸಿದ್ಧಿಯ ದೇಶ ಸಂಚಾರಮಾಡುತ್ತಿರುವುದು ಸ್ತೋತ್ರಾರ್ಹವಾಗಿದೆ.

ದೇಶ ಮತ್ತು ಭಾಷಾಭಿಮಾನಿಗಳಾದ ಬಾಂಧವರೆಲ್ಲರೂ ಸುಶ್ರಾವ್ಯವಾಗಿ ಇವರಿಂದ ಹೇಳಲ್ಪಡತಕ್ಕ ಪ್ರಾಚೀನ ಪುರಾಣವನ್ನು ಶ್ರವಣಮಾಡುವುದರ ಮೂಲಕ ತಾವು ಆನಂದ ಹೊಂದಿ ಈ ಪುರಾಣಿಕರಿಗೆ ಉತ್ತೇಜನ ಕೊಡಬೇಕೆಂದು ಪ್ರಾರ್ಥನೆ.

- ಓರ್ವ ಭಾಷಾಭಿಮಾನಿ.

ವ್ಯಾಪಾರ ವಿಷಯ

ಮುಂಬೈ ತಾ ೨೦-೧೦-೨೭.

ಬಂಗಾರ, ೫೧, ಟೆಸ್ಟ ಬಾರ = ಸರಕಾರೀ ೪॥ ರೂ. ಬಡ್ಡಿಯ ಪ್ರಮಾಣ ನೋಟಿನ ಬೆಲೆ ೭೬ ೩. ೫॥ ರೂ ಬಡ್ಡಿಯ. ವಾರದಿಂದ (೧೯೨೮), ೧೦೫॥೩. ೬॥ ರೂ ಬಡ್ಡಿಯ ಮುಂಬೈ ಪೌಲಬಮೆಂಟ ಬ್ರಾಂಡ ೧೧೨. ಅರಳೆ ಉಮರಾ, ೪೦೭ ಭಡೋಚ (ಉತ್ತಮ) ಕೈದಾಸ್ ಕ್ಯಾಂಡೋ, ೪೪೦. ಅಲಕತ್ತಾ ಕಳ್ಳೆದು (ಅಲಾಯನ್ಸ) ೬೭೪॥. ಕೊಬ್ಬರೀ ಎಣ್ಣೆ (ಕೊಚೀನ) ೧೭೦॥. ಹಿಂಡಿ, ೪೧ ಕಾಟ ಬೇಲಿ) ೧೦೬ ರೂ ಮಣಕ್ಕೆ, ಹತ್ತಿ ಜಾವಾ ಕಲ್ಲುಸಕ್ಕರೆ ೬೨ ರೂ. ಅಕ್ಕಿ ೧೧। ಛತ್ತ ೯.

ಮಾಧ್ಯಮಿಕ ಶಿಕ್ಷಕರ ಪರಿಷತ್ತು ಧಾರವಾಡ.

(ನಮ್ಮ ಸ್ವಂತ ಪ್ರತಿನಿಧಿಯಿಂದ)

ಮೈಸೂರಿನ ಶ್ರೀ. ಎನ್. ಎಸ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಮುಂಬೈ ಇಲಾಖೆಯ ಈ ಪರಿಷತ್ತು ಕೂಡಿತ್ತು. ಸ್ವಾಗತಾಧ್ಯಕ್ಷರಾದ ಶ್ರೀ ಸಾಖರೆಯವರು ಕರ್ನಾಟಕದ ಇತಿಹಾಸದಲ್ಲಿಯ ಸಂಗತಿಗಳನ್ನು ವಿವರಿಸಿ ಕರ್ನಾಟಕ ವಿಶ್ವವಿದ್ಯಾಲಯ, ಕರ್ನಾಟಕ ಏಕೀಕರಣಗಳೇ ಕರ್ನಾಟಕ ಪ್ರಾಂತದ ಉದ್ಧಾರಕ್ಕೆ ತರಣೋಪಾಯಗಳೆಂದು ಸೂಚಿಸಿದರು. ಮುಂಬೈ ಸರಕಾರದವರು ಇದಕ್ಕೆ ಗಮನ ಕೊಡದಿರುವದನ್ನು ನಿಷೇಧಿಸಿದರು. ಬಳಿಕ ಪರಿಷತ್ತಿನ ಅಧ್ಯಕ್ಷರು ನೌಕರಿಯು ಶಿಕ್ಷಣದ ಧ್ಯೇಯವಾಗಿರಕೂಡದೆಂದೂ, ನೈತಿಕ, ಮಾನಸಿಕ ಉನ್ನತಿಗಳೇ ನಿಜವಾದ ಶಿಕ್ಷಣದ ಧ್ಯೇಯಗಳೆಂದೂ, ಮಾತೃ ಭಾಷೆಯ ಮುಖಾಂತರ ಶಿಕ್ಷಣ ಕೊಡಬೇಕೆಂದೂ ಹೇಳಿದರು. ಇವರು ಬಹು ಹಾಸ್ಯಯುಕ್ತವಾಗಿಯೂ ತಾತ್ವಿಕವಾಗಿಯೂ ವಿಷಯ ವಿವೇಚನೆ ಮಾಡಿದರು.

ಈ ಪರಿಷತ್ತಿನಲ್ಲಿ ತೀರ್ಮಾನಿಸಲ್ಪಟ್ಟ ಠರಾವುಗಳಲ್ಲಿ ಮುಖ್ಯವಾದವುಗಳೆಂದರೆ—

(೧) ಧರ್ಮವೀರ ಶ್ರದ್ಧಾನಂದ ಹಾಗೂ ಇತಿಹಾಸಾಚಾರ್ಯ ರಾಜವಾಡೆ ಇವರ ನಿಧನದಬಗ್ಗೆ ಈ ಸಭೆಯು ದುಃಖವನ್ನು ವ್ಯಕ್ತಪಡಿಸುತ್ತದೆ.

(೨) ಗಜತೋತ್ಸವಕ್ಕಾಗಿ ಮೈಸೂರ ಮಹಾರಾಜರನ್ನು ಅಭಿನಂದಿಸಿದರು.

(೩) ಬೆಳಗಾವಿಯಲ್ಲಿ ಹೊಸ ವಿದ್ಯಾಲಯವನ್ನು ಸ್ಥಾಪಿಸಲು ಮುಂದೆಬಂದ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಯವರನ್ನು ಸಭೆಯು ಮನಃಪೂರ್ವಕವಾಗಿ ಅಭಿನಂದಿಸುತ್ತದೆ.

(೪) ಕರ್ನಾಟಕ ಮತ್ತು ಸಿಂಧಗಳಲ್ಲಿ ವೈದ್ಯಕೀಯ ಮತ್ತು ಔದ್ಯೋಗಿಕ ಶಾಲೆಗಳನ್ನು ಸ್ಥಾಪಿಸಲು ಈ ಸಭೆಯು ಸರಕಾರಕ್ಕೆ ಕೇಳಿಕೊಳ್ಳುತ್ತದೆ.

(೫) ಹಿಂದಿನ ಕಾಯಿದೆ ಮಂಡಳದಲ್ಲಿ ತೀರ್ಮಾನಿಸಲ್ಪಟ್ಟ ಶಾಸನ ಪ್ರಾರಂಭಿಕ ಪಗಾರದ ಯೋಜನೆಯನ್ನು ಬೇಗನೆ ಅಮಲಿನಲ್ಲಿ ತರಲು ಈ ಸಭೆಯು ಸರಕಾರವನ್ನೂ, ಕಾಯಿದೆ ಮಂಡಳದ ಸಭಾಸದರನ್ನೂ ಕೇಳಿಕೊಳ್ಳುತ್ತದೆ.

(೬) ಪ್ರಾಥಮಿಕ ಶಿಕ್ಷಣ ವಿಚಾರಣೆ ಮತ್ತು ಶಾರೀರಿಕ ಶಿಕ್ಷಣ ವಿಚಾರಣೆ ಮಂಡಳಿಗಳಲ್ಲಿ, ಕರ್ನಾಟಕಸ್ಥರು ಯಾರೂ ಇಲ್ಲದ್ದನ್ನು ಕಂಡು ಈ ಸಭೆಗೆ ಅತ್ಯಂತ ಖೇದವಾಗುತ್ತದೆ, ಹಾಗೂ ಸರಕಾರದವರ ಈ ಕೃತಿಯನ್ನು ನಿಷೇಧಿಸುತ್ತದೆ.

(೭) ಭಾಷಾದ್ವಾರ ಪ್ರಾಂತಿಕ ವಿಶ್ವವಿದ್ಯಾಲಯಗಳನ್ನು ಬೇಗನೆ ಸ್ಥಾಪಿಸಲು ಈ ಸಭೆಯು ಸರಕಾರಕ್ಕೆ ವಿನಯಿಸಿಕೊಳ್ಳುತ್ತದೆ.

(೮) ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಕೂಡಲು ಬಯಸುವ ಟ್ರೇಯಿಂಡ್ ಶಿಕ್ಷಕರನ್ನು ನಿಯಮಿತ ದಿನಗಳ ಹಾಜರಿಯಿಂದ ಬಂಧಿಸಕೂಡದೆಂದು ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಈ ಸಭೆಯು ಬೇಡಿಕೊಳ್ಳುತ್ತದೆ.

(೯) ನೆರೆಹಾವಳಿಯಿಂದ ಪೀಡಿತರಾದ ಗುಜರಾತದ ವಿದ್ಯಾರ್ಥಿಗಳಿಂದ ಪರೀಕ್ಷೆಯ ಫೀಗಳನ್ನು ತೆಗೆದುಕೊಳ್ಳದೆ ಪರೀಕ್ಷೆಗೆ ಕೂಡಲು ಅಪ್ಪಣೆಯನ್ನು ಕೊಟ್ಟು, ಕಷ್ಟನಿವಾರಣೆಯನ್ನು ಮಾಡಬೇಕೆಂದು ಈ ಸಭೆಯು ವಿಶ್ವವಿದ್ಯಾಲಯದವರಿಗೆ ಬೇಡಿಕೊಳ್ಳುತ್ತದೆ.

ಈ ಪರಿಷತ್ತಿನ ಜೊತೆಯಲ್ಲಿ ಶಿಕ್ಷಣ ಪ್ರದರ್ಶನವೂ ಏರ್ಪಡಿಸಲ್ಪಟ್ಟಿತು. ಇದು ಅತ್ಯಂತ ಮಹತ್ವದ್ದೂ, ಮನೋರಂಜಕವಾದುದೂ, ಬೋಧಪ್ರದವಾದುದೂ ಆಗಿತ್ತು. 'ಕರ್ನಾಟಕದಿಂದ' ವಿಶೇಷತಃ ಮೈಸೂರಿನಿಂದ ಪ್ರದರ್ಶನ ವಸ್ತುಗಳು ವಿಶೇಷವಾಗಿ ಬಂದಿದ್ದವು. ಕರ್ನಾಟಕದ ಇತಿಹಾಸ ಸಂಬಂಧದ "ಮ್ಯಾಜಿಕ್ ಲ್ಯಾಂಟರ್ನ"ಗ ತೋರಿಸಲ್ಪಡುವವೆಂದು ಪ್ರಕಟಿತವಾಗಿದ್ದರೂ, ಆ ಕಾರ್ಯಕ್ರಮವು ಏರ್ಪಡಾಗಲೇ ಇಲ್ಲ. ಕ್ಯಾಪ್ಟನ್ ಮೋಡಕ್ ಇವರ ವ್ಯಾಖ್ಯಾನವು ಅತ್ಯಂತ ಬೋಧಪ್ರದವಾಗಿದ್ದಿತು. ಇದು ಜನರ ಮೇಲೆ ಒಳ್ಳೆ ಪರಿಣಾಮಮಾಡಿದೆ. "ರೇಡಿಯೋ" ಯಂತ್ರದಿಂದ ದಿನಾಲು ಮುಂಬೈಯಲ್ಲಿ ಆಗುವ ಕಾರ್ಯಕ್ರಮವು ಧಾರವಾಡಿಗರಿಗೆ ಕೇಳಲು ದೊರೆಯುತ್ತಲಿದ್ದಿತು. ಪಂಢರಕರ, ಗೋವರ್ಧನ ಮೊದಲಾದವರ ಗಾಯನ ಕೇಳಲು ಅಸಂಖ್ಯರಾದ ಜನರು ನೆರೆಯುತ್ತಲಿದ್ದರು. ಒಟ್ಟಿನ ಮೇಲೆ ಈ ಪರಿಷತ್ತು ಅತ್ಯಂತ ಯಶಸ್ವಿಯಾಗುವಂತೆ ಕನ್ನಡಿಗರು ಪ್ರಯತ್ನಿಸಿದ್ದಕ್ಕಾಗಿ ನಮಗೆ ಆನಂದವಾಗುತ್ತದೆ. ಮುಂದಿನ ಅಧಿವೇಶನವು ಮುಂಬೈಯಲ್ಲಿ ಜರಗುವದು.



ಕಿರ್ಲೋಸ್ಕರ
ಸೇಂಗಾ ಒಡೆಯುವ ಯಂತ್ರ.

ನಮ್ಮ ಕಾರಖಾನೆಯಲ್ಲಿ ಎರಡು ಮಾದರಿಯ ಯಂತ್ರಗಳು ತಯಾರಾಗುತ್ತವೆ. ಒಂದು ಇಂಜಿನ ಶಕ್ತಿಯಿಂದಲೂ, ಇನ್ನೊಂದು ಕೈಯಿಂದಲೂ ನಡೆಯುತ್ತವೆ. ಇವುಗಳ ಯಾವತ್ತೂ ಭಾಗಗಳು ತಪ್ಪಿಣದವು. ಬೀಸಣಿಕೆಯಿರುವದರಿಂದ ಕಾಳುಗಳು ಹಸನಾಗಿ ಬೀಳುವವು. ಸುಚ್ಚಾಗುವದಿಲ್ಲ.

ಸೇಂಗಾದ ಯಣ್ಣೆಯನ್ನು ತೆಗೆಯುವವರೂ ಸೇಂಗಾ ಬಿತ್ತುವವರೂ ಕಾಳನ್ನು ಮಾಡಲಿಕ್ಕೆ ಈ ನಮ್ಮ ಯಂತ್ರಗಳನ್ನೇ ಉಪಯೋಗಿಸಬೇಕು. ಕಳೆದ ವರ್ಷಕ್ಕಿಂತಲೂ ಈ ವರ್ಷ ಇವುಗಳ ಬೆಲೆಯನ್ನು ಕಡಿಮೆ ಮಾಡಿರುತ್ತೇವೆ. ಬಿಡಿ ಭಾಗಗಳು ನಮ್ಮಲ್ಲಿ ದೊರೆಯುತ್ತವೆ. ಸವಿಸ್ತರ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು. ಲಿಮಿಟೆಡ್

ಕಿರ್ಲೋಸ್ಕರ ವಾಡಿ,
ಜಿ ಸಾತಾರಾ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ತರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಸ್. ಬಿ. ಸಿ. ನಂ. ೨೭೩೭ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರೆಂಟೆಂಡಂಟ್ ಸೆಕ್ರೆಟರಿಏಟ್ ಹೈದರಾಬಾದ ಡೆಕ್ಕನ್ನ ರೂ.೧೦೦೦

(೨) ಎಸ್. ಬಿ. ಸಿ. ನಂ. ೧೯೬೨ ನಾರಾಯಣ ವಿಠ್ಠಲ ಲೋಣಕರ. ಕೇರ್ ಆಫ್ ಡಿ. ಈ. ಪುರಾಣಿಕ ೧೦೭ ನಿಹಾಲಪುರ ಇಂದೂರ. ೧೦೦೦

(೩) ಎಸ್. ಬಿ. ಸಿ. ನಂ. ೩೪೧ ರಾಮಚಂದ್ರ ಅನಂತ ಶಿರೋಳೆ. ಡಿವಿಜನಲ ಫಾರೆಸ್ಟ ಆಫೀಸರ ಧಸ್ತೂರಾ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೨೬ ಕೇ. ಜೆ. ಫರ್ನಾಂಡೋ ವ್ಯಾಪಾರಸ್ಥ. ಬ್ರಿಕ್‌ಸಾಯಿಡ ಸಿಲೋನ, ಕೋಲಂಬೋ. ರೂ. ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜಿ. ಚವರೆ. ಅಸಿಸ್ಟಂಟ ಸ್ಟೇಶನ್ ಮಾಸ್ತರ ತೆಲಗಿ. ಜಿಲ್ಹಾ ವಿಜಾಪುರ. ರೂ ೧೦೦೦

ಬಿ. ನ್. ಆರಾಧ್ಯ,
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಜೀವ ವಿಮೆಯ ಕಾರ್ಯದಲ್ಲಿ ಮತ್ತೊಂದು ಅದ್ಭುತವಾದ ಜಯವು !

ಯಾಕಂದರೆ ತನ್ನ ೨೦ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ಮರಣಾವಧಿ ವಿಮೆಯ ಮೇಲೆ ೧೦೦೦ ಕ್ಕೆ ೧ ವರ್ಷಕ್ಕೆ ೨೨½ ರೂ ನಂತೆಯೂ, ಎಂಡೋವೆಂಟ್ ವಿಮೆಯ ಮೇಲೆ ೧೮ ರೂ, ನಂತೆಯೂ ಲಾಭ ಹಂಚಿದೆ.

ದಿ ಜನರಲ್ ಅಶ್ಯೂರನ್ಸ ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ಸಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

೧೨ ತಿಂಗಳಲ್ಲಿ
ಹೆಚ್ಚಾಗಿ ಉಳಿತಾಯವಾದದ್ದು ರೂ. ೮೫,೦೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್!

Apply to:- A. Ramachandra Rao
Branch Secretary, opposit Minto Hospital,
Bangalore City.
or
L. V. Ramdurg. Chief Agent
Near Vitoba Temple Hubli.

GENERAL ASSURANCE SOCIETY AJMER



ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

೧೯೨೭ನೇ ಜನವರಿ ೧೫ರಿಂದ ಪ್ರಾರಂಭ.



ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್ ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ-

೧. ನೀವು ನಮಗೆ ರೂ. ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್‌ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪುವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ್ ಗೋಲ್ಡ್" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ.

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ಬಿಕರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು. ಅಥವಾ ವಿ. ಪಿ. ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಳೆದುಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಅಸೂಯೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೭-೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್. ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರ ಸಿಟಿ.

ಯಾವದೇ {ಆಕಾರದ / ನಕ್ಷೆಯ / ನಂಬರಿನ} ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ ೭



ಬರೇ ಒಂದ ತಿಂಗಳ ಬಗ್ಗೆ ನಾವು ಈ ದಂವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. **ಬೆಲೆ ರೂ. ೭**

ಅಲ್ಪವೇ ಇವೆ; ಈಗಲೇ ಬರೆಯಿರಿ

ಪತ್ತೆ:— ಸ್ವಾನ ಹೌಸ್, ಪಿ. ಬಿ. ೫೦೪. ಪಿ. ಟಿ. ಮದ್ರಾಸ

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೊಕೆಟ್ ವಾಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ ಪಿ. ಬಿ. ಮದ್ರಾಸ. ೨೬೫

ಕರ್ನಾಟಕ ಮಹಿಳಾ ವಿದ್ಯಾಲಯ
ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯುಲರ ಸ್ಕೂಲಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕಳುಹುವದಕ್ಕೆ ತಕ್ಕದ್ದಾದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಜರದ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು.

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಹೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ॥ ಲಕ್ಷ್ಮಿಬಾಯಿ ಕುಂಭಕೋಣಾ,
ವ್ಯವಸ್ಥಾಪಕರು, ಕ. ಮ. ವಿದ್ಯಾಲಯ, ಧಾರವಾಡ.

ಅಚ್ಚಾಗಿವೆ! **ತರಿಸಿರಿ!**

ವಾಸುದೇವನ
ಕೌಸ್ತುಭಗಳು.

೧. ಇಂದಿರಾ. ೨-೮-೦
(ಸಚಿತ್ರ ಸಾಮಾಜಿಕ ಕಾದಂಬರಿ.)

೨. ಯದು ಮಹಾರಾಜ. ೧-೦-೦
(ಎಂಬ ವಿನೋದನ ಐತಿಹಾಸಿಕ ಕಾದಂಬರಿ.)

೩. ನೀಳ್ಗತೆಗಳು ಭಾಗ ೧ ೧-೪-೦

"ವಸಂತಯಾಮಿನಿ ಸ್ವಪ್ನಚಮತ್ಕಾರ" ನಾಟಕದ ಪ್ರತಿಗಳೆಲ್ಲವೂ ತೀರಿಹೋಗಿವೆ. ಉಳಿದವುಗಳು ಅಚ್ಚಿನಲ್ಲಿವೆ. ತ್ವರೆಮಾಡಿರಿ! ಬೇಕಾದವುಗಳನ್ನು ಬೇಗನೇ ತರಿಸಿಕೊಳ್ಳಿರಿ.

ಪುಸ್ತಕ ವ್ಯಾಪಾರಿಗಳಿಗೆ ಯೋಗ್ಯ ಕಮಿಶನ್. ಅಂಚೆವೆಚ್ಚ ಬೇರೆ.

ಸ್ವಾಮಿ, ರಾ, ಕೆರೂರ.
ಬಾಗಲಕೋಟೆ (ಜಿ॥ ವಿಜಾಪೂರ)

ಸಹಕಾರ ಸಂಘ.

ಈ ಸಹಕಾರ ಸಂಘಗಳಿಗೆ ಬೇಕಾಗುವ ನಮೂನೆಗಳನ್ನು ಅಚ್ಚುಹಾಕಿಸಿ ನಮ್ಮಲ್ಲಿ ಮಾರಲಿಕ್ಕೆ ಇಟ್ಟಿರುವೆವು. ಸಾವತಿ ಮೆಂಬರರಾಗಲಿಕ್ಕೆ ಮಾಡುವ ಅರ್ಜಿ ಸಾಲ ಬೇಡುವ ಅರ್ಜಿ ಮುದ್ದತ ಬೇಡುವ ಅರ್ಜಿ ಮೊದಲಾದ ಎಲ್ಲ ನಮೂನೆಗಳೂ ಇವೆ.

ವ್ಯವಸ್ಥಾಪಕಃ— **ವಿದ್ಯಾರಣ್ಯ ಮುದ್ರಾ ಮಂದಿರ**
ಬಾಗಲಕೋಟೆ.

S.U.N.& CO.
BENARES CITY.

ಬನಾರಸ್ ರೇಶ್ಮೀ ಶೀರೆಗಳು.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೀ ಮಾಲುಗಳನ್ನು ಕೊಳ್ಳುವವರಿಗೆ ವ್ಹಿ. ಪಿ. ಮೂಲಕ ಕಳುಹಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕ ಉದ್ದ ಮೊಳ ೧೪ ಅಗಲಿ ಮೊಳ ೩, ಥಾನು ೧ಕ್ಕೆ ೧೫ ರಿಂದ ೫೦ ಜರಿ ಶೀರೆಗಳು ೧೭-೧೮ ಮೊಳ ಉದ್ದ ೧ಕ್ಕೆ ರೂ. ೨೫ ರಿಂದ ೫೦ ರವರೆಗೆ. ಬುಟ್ಟೆದಾರ್ ಬನಾರಸ್ ಶೀರೆ ೧೭-೧೮ ಉದ ಮೊಳ ೭ ೧ಕ್ಕೆ ರೂ. ೫ ರಿಂದ ೩೦೦ ರ ವರೆಗೆ ಉಡುವ ಮಗುಟ ಉದ್ದ ೭-೮ ಮೊಳ ೧ಕ್ಕೆ ರೂ. ೧೦ ರಿಂದ ೩೦ ರ ವರೆಗೆ ಜರೀದ್ದು ೭-೮ ಮೊಳ ಉದ್ದ ೧ಕ್ಕೆ ರೂ. ೧೧ ರಿದ ೪೦ ರ ವರೆಗೆ. ಬಿಳಿ ರೇಶ್ಮಿ ಜರೀದುಪ್ಪಟಿ ೭ ಮೊಳ ಉದ್ದ ೧ಕ್ಕೆ ರೂ ೧೧ ರಿಂದ ೩೦ ರವರೆಗೆ ಸಾದಾ ಬಂಗಾಳ ರೇಶ್ಮಿ ಶಾಲು ೭ ಮೊಳ ಉದ್ದ ೩ ಮೊಳ ಅಗಲು ೧ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಪಟಿಕದ ೧೦೮ ರ ಸರ ೧ಕ್ಕೆ ರೂ. ೧ ರಿಂದ ೧೦ ರ ವರೆಗೆ ಸುದರ್ಶನ ೧ಕ್ಕೆ ಆಣೆ ೮ ರಿಂದ ರೂಪಾಯಿ 1½ ರವರೆಗೆ ಜಗನ್ನಾಥಜಾಗಂಟೆ ೧ಕ್ಕೆ ರೂ. 2½ ರಿಂದ 15 ರ ವರೆಗೆ ಮತ್ತು ಬೇರೆ ಬೇರೆ ಸಾಮಾನುಗಳ ಕೆಟಲಾಗ ಇನಾಂ

ವಿಳಾಸ:- ಶಿರೋಮಣಿ ನಾರಾಯಣಾಚಾರ್ಯ
ಕಂಪನಿ ಚೌಕಂಬಾ ಕಾಶಿ ಬನಾರಸ್

'ಕನ್ನಡಿಗ'ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ ಉಪಕಾರಕರ್ತೃಗಳಿಗೆ ವಾ. ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೯೦೦೦ ಯಾರ್ಡ ಕೈನೂಲು
ಪರಸ್ಥಳದವರಿಗೆ	ಮನಿಯಾರ್ಡರದಿಂದ ೧-೧೩-೦ ವ್ಹಿ. ಪಿ. ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ ಯಾರ್ಡ ಕೈನೂಲು
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ-	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦ ,, ವ್ಹಿ. ಪಿ ಯಿಂದ ೩-೧-೦
ಸರಕಾರ, ಮುನಸಿಪಾಲಿಟಿ, ಲೋಕಲ್ ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವ್ಹಿ. ಪಿ ಯಿಂದ ೫-೧-೦

ಬಿಡಿ ಸಂಚಿಕೆಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡಿಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ. —**ವ್ಯವಸ್ಥಾಪಕ.**

ಪ್ರಾಣಿದಯೆ.
ಸಚಿತ್ರ ಮಾಸಪತ್ರಿಕೆ.

ಚಿಕ್ಕಪೇಟೆ, **ಬೆಂಗಳೂರುಸಿಟಿ.**

ಅಹಿಂಸಾ ಪ್ರಚಾರಕ್ಕಾಗಿಯೇ ಕಂಕಣಬದ್ಧವಾಗಿ ಪ್ರಾಣಿದಯಾ ಸಂಬಂಧವಾದ ಲೇಖಗಳನ್ನೇ ಸೇಖರಿಸಿ ಕರ್ನಾಟಕಮಾತೆಯ ಸೇವೆಮಾಡುವ ಮುಖ್ಯೋದ್ದೇಶದಿಂದ ಹೊರಟಿರುವ ಕನ್ನಡ ಪತ್ರಿಕೆಯು, "ಇದು ಒಂದೇ."

ಸಮಸ್ತ ಕನ್ನಡಿಗರ ಕರಗತವಾಗಬೇಕೆಂಬ ಧ್ಯೇಯದಿಂದ ವಾರ್ಷಿಕ ಚಂದಾ ಎಂಟೇ ಆಣೆ ಇಟ್ಟಿರುತ್ತದೆ.

ವರ್ಷಕ್ಕೆ 5/- ರೂಪಾಯಿಗಳನ್ನು ಕೊಡುವವರನ್ನು ಪ್ರಧಾನ ಪೋಷಕರಾಗಿಯೂ 2/- ರೂಪಾಯಿ ಕೊಡುವವರನ್ನು ಪೋಷಕರಾಗಿಯೂ ಪರಿಗಣಿಸಲ್ಪಟ್ಟು, ಪ್ರತಿಸಂಚಿಕೆಯಲ್ಲಿಯೂ ಆ ಮಹನೀಯರ ಹೆಸರುಗಳು ಪ್ರಕಟಿಸಲ್ಪಡುವವು-

ಶ್ರೀ ಭಾರತ ಜಗಪ್ರಸಿದ್ಧ ಜಗ ಜಾಹೀರ ನೋಟೀಸು.

ಮೃತ್ಯುಂಜಯ ಔಷಧದಿಂದ ಮೂರೇ ತಾಸಿನಲ್ಲಿ ಗುಣವಿಲ್ಲೆಂದು ಸಿದ್ಧ ಮಾಡಿದವರಿಗೆ-೫೦೦ ರೂ. ಬಕ್ಷೀಸ ಕೊಡುವೆವು

ಮೂರೇ ತಾಸಿನಲ್ಲಿ ಗುಣ] ಕಣ್ಣಡಬತ್ತಿ ರಸಾಯನ ತಕ್ಕೊಂಡು ಸಾಯುವದೇಕೆ? **[ಮೂರೇ ದಿವಸಗಳಲ್ಲಿ ರೋಗವು ಪೂರ್ಣ ಹೋಗುವದು.**

೫೭ ಶುದ್ಧ ವನಸ್ಪತಿಯಿಂದ ತಯಾರು ಮಾಡಿದ ಮೃತ್ಯುಂಜಯ ಔಷಧ.

ಉಪದಂಶ, ಗರ್ಮಿ (ಉಷ್ಣ) ಪರ್ಮಿ ಮುಂತಾ ಎಲ್ಲ ಪ್ರಕಾರದ ರೋಗ ಬಹುದಿನ ನೆಲಗೊಂಡದ್ದು ಶರೀರ ಕತ್ತರಿಸಿ ಬಿದ್ದರೂ ಮೂರು ದಿವಸಗಳಲ್ಲಿ ಗುಣವಾಗುವದು

ಇಂಥ ಪ್ರಕಾರ ರೋಗಗಳಿಂದ ಉತ್ಪನ್ನವಾಗುವ ವಿಕಾರ ಉಷ್ಣ ಪರಮಿ (ಉಪದಂಶ) ಗರ್ಮಿ ಜಟ್ಟಿ ಒದರ ಗಂಟು, ನಡಿನಲ್ಲಿಯ ಗಂಟು, (ವೃಷಣ) ಅತಿಶಯ ಬಾವು, ಇಂದ್ರಿಯವಳಗೆ ತಿಡಿಕೆ, ಜೊಡತು, ರಕ್ತ ಕೀವು ಸುರಿಯೋಣ ಆದರಂತೆ ಸ್ತ್ರೀಯರ ಪ್ರದರ (ಕೆಂಪು ಬಿಳಿ ಶೆರಗು) ಹೊಲೆ ಕುಟ್ಟರೋಗ ಜಳಿಯೋಣ, ಕಡಕಿ ವಿಕಾರಗಳಿಂದ ಗರ್ಭಾಶಯ ಕೆಡೋಣ, ಮೂತ್ರ ಕಣ್ಣು ಕಾಲು ಉರಿಯೋಣ, ಕಾವು ಹೆಚ್ಚಾಗಿ ಮಧುಮೇಹ ಮೈಮೇಲೆ ಗರ್ಮಿ (ಉಷ್ಣ) ಒಡೆದು ಕೀವು ಹೊರಬಿದ್ದು ಅದರಿಂದ ವ್ರಣ ಘಾಯ ವಾಗಿ ಅಂಗಳಕ್ಕೆ ತೂತು ಬಿದ್ದು, ಮೂಗು ಕೂಡ್ರುವದೂ ನೋಯುವದೂ ಎಲ್ಲ ತರದ ಮೂಲವ್ಯಾಧಿ, ಹೊಟ್ಟೆ ಕಡತು ವಗೈರೆ ಕಾರಣಗಳಿಂದಾ ಜನನೇಂದ್ರಿಯ ಶಿಥಿಲತಾ ಅಥವಾ ನಪುಂಸಕತ್ವ, ಮುಷ್ಟಿಮೈಥುನದಿಂದ ಆಗುವ ಪರಿಣಾಮ, ಸ್ವಪ್ನಾವಸ ಮೂತ್ರದಲ್ಲಿ ಧಾತು ಅಥವಾ ಖರ ಬೀಳೋಣ, ವೀರ್ಯ ತಿಳುವಾಗೋಣ, ಸ್ತ್ರೀಗಮನದಲ್ಲಿ ಶೀಘ್ರ ಹತ್ತೋಣ. ತೀವ್ರ ವೀರ್ಯ ಪತನವಾಗೋಣ, ನಡನೋವು (ಶೂಲಿ) ನೋಯೋಣ, ಬೆನ್ನು ಬಿಗಿಯೋಣ, ವಾತವಿಕಾರ ಅವಿಚಾರದಿಂದ ಮಾಡಿದ ವೀರ್ಯಪಾತ ವಗೈರೆ ರೋಗಗಳ ಮೇಲೆ ಅಶಿಕ್ಷಿತ ಅಡಾಣೀ ಜನರ ಕಡಿಯಿಂದ ಪಾರಜ ಮತ್ತು ರಸಕರ್ಪೂರ, ಇಂಗಳೀಕ ಮುಂತಾದ ಸವಿಷ ಮತ್ತು ಅಪಕ್ವ ಧಾತು ರೂಪ ಪದಾರ್ಥ (ರಸಾಯನ) ಮತ್ತು ಅಪಕಾರಕ ವಸ್ತು ಸೇವಿಸುವದರಿಂದ ಮೈಯೊಳಗೆ ರಸಾಯನ ನಿಂತು ಅದರಿಂದ ಕಾಲು ಕೈ ಮುಡಮಾಗಿ ಮತ್ತು ಕೈ ಕಾಲುಗಳಲ್ಲಿ ರಸಾಯನ ಒಡೆದು. ಸ್ವತಃ (ತನಗೆ) ಮತ್ತು ಮುಂದಾಗುವ ತನ್ನ ಸಂತತಿಗೆ ಅನೇಕ ರೋಗವು ಉತ್ಪನ್ನವಾಗಿ ಅದರಿಂದ ಭಯಂಕರ ಪರಿಣಾಮ ಭೋಗಿಸಬೇಕಾಗುವದು ಇಂಥ ಪ್ರಕಾರದ ರೋಗಗಳು ಬಹಳ ದಿವಸ ನೆಲಗೊಂಡಿದ್ದಾಗಲೀ ಅಥವಾ ಹೊಸದಾಗಿ ಆದುದ್ದಾಗಲೀ ಇಂಥ ರೋಗಗಳ ಮೇಲೆ ಈ ನಮ್ಮ **ಮೃತ್ಯುಂಜಯ ಔಷಧ** ಉಪಯೋಗ ಮಾಡಿದರೆ ತತ್ ಸಂಬಂಧಿ ಸಂಪೂರ್ಣ ರೋಗಗಳು ತೀವ್ರವಾಗಿ ಹೋಗಿ ಮೈಯೊಳಗೆ ಇದ್ದ ರಸಾಯನವು ನಾಶವಾಗುವದು. ಮತ್ತು ಅಶಕ್ತಿ ಹೋಗಿ ಮೈಯೊಳಗೆ ಶಕ್ತಿ ಬಂದು ಪ್ರಕೃತಿ ಉತ್ತಮವಾಗುತ್ತದೆ ಒಂದು ಬಾಟ್ಲಿಗೆ [೫] ರೂಪಾಯಿ ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆಯು ಔಷಧದ ಸಂಗಡ ಲಾಭಕ್ಕೆ ಲಾಭವು. ಒಂದು ಆಣೆ ಟಿಕಿಟು ಕಳಿಸಿದಲ್ಲಿ ನಮ್ಮ ಔಷಧದ ಪೂರ್ಣ ಕ್ಯಾಟಲಾಕ ಕಳಿಸುವೆವು. (ತಮ್ಮ ಪತ್ತೆ:- ಪೂರ್ಣ ಬರೆಯಿರಿ.)

ಸುಪ್ರಸಿದ್ಧ ಡಾ॥ ಆರ್. ಎಲ್ ಹಿರೇಮಠ ಆರೋಗ್ಯ ಮಂದಿರ ಆಯುರ್ವೆದ ವನೌಷಧಿ ೫೦೦೦, ಸಾವಿರ ಕಾರಖಾನೆ ಕಮತನೂರ ಪೋ॥ ಶಂಕೇಶ್ವರ ಜಿ॥ ಬೆಳಗಾಂವ.

ಸ್ಟಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕಿ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇರಿ) ೧ ಪೌಂಡಿಗೆ ರೂ. ೧-೨-೦
೨ ನೇ ,, ,, ,, ರೂ. ೧-೩-೦

ದಿ ಸ್ಟಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಭೂಲೋಕದ ಕಾಮಧೇನು:

ದೇವಲೋಕದ ಕಾಮಧೇನುವು ಹೇಗೆ ಬೇಡಿದ ವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವರಿಗೂ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಪ್ಪಾ ಜಾಲವಾದಿ. ಸ್ಟೇಶನರ್ಸ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ. ೫೭. ಚೀನಾಬಜಾರ್, ಮದ್ರಾಸು

ಗುಣ ಬರದಿದ್ದರೆ ಹಣ ಪರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ ಗುಟಿಕಾ

ಈ 'ಬಲವಂತ ಗುಟಿಕ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣಿ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿ ಮಾಡಿಕೊಳ್ಳಬಹುದು.) ಇದರಿಂದ ಪ್ರಮೇಹ ವಗೈರೆಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೆ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗೆ ೨-೪-೦, ೧೨ ಡಬ್ಬಿಗಳಿಗೆ ೭-೮-೦, ಇದಲ್ಲದೆ ೧ ಡಬ್ಬಿ ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸಃ— ಎಸ್ ಬಿ. ಕದಮ್ ಮತ್ತು ಸನ್ಸ್.
ಮು. ಪೋಸ್ಟ ನಿಪ್ಪಾಣಿ (ಜಿ. ಬೆಳಗಾವ.)

EAT KASHMIR FRUITS & NUTS.

ಕಾಶ್ಮೀರದ ಹಣ್ಣು ಹಂಪಲಗಳನ್ನು ಸೇವಿಸಿರಿ!

ತೀವಾದ ತೊಗಟೆಯ ತಾಜಾ ಅಕ್ರೋಡಗಳೂ, ಆರಿಸಿದ ಆಡವಿಯ ಸೇಂಗಳೂ, (Hazelnuts) ೧೧ ಪೌಂಡಿಗೆ ರೂ. ೫—೮—೦; ತಾಜಾ ಕಾಗದೀ ಬದಾಮು; ಹರಳಿಲ್ಲದ್ದೂ, ಬಲು ಸವಿಯಾದ ಜಲ್ದರು (Apricots); ಅಂಜೂರಿ; ದ್ವೀಪದ್ರಾಕ್ಷಿ; ಕಿಸಮಿಸು, ೧೧ ಪೌಂ ಗೆ ೧೩ ರೂ.; ಕಮಲದ ಶುದ್ಧವಾದ ಜೇನತುಪ್ಪ, ೫|| ಪೌಂ. ಗೆ ೮ ರೂ.; ಶುದ್ಧ ಕೇಶರ, ೧ ತೊಲಿಗೆ ೩ ರೂ. ಟಪಾಲು ಖರ್ಚ ಮಾಫ!

ಡಾರ ಬ್ರದರ್ಸ ಶ್ರೀನಗರ, ಕಾಶ್ಮೀರ.
DAR BROS SHRINAGAR, KASHMIR.

ಅತೀ ಸುಲಭ ಕಂತುಗಳು! ಫಲಿತಾಂಶವು ಹೆಚ್ಚು!

ದಿ. ಹಿಂದುಸ್ಥಾನ ಕೋ-ಆಪರೇಟಿವ್ಹ

ಇನ್ಸುರೆನ್ಸ ಸೊಸೈಟಿ ಲಿಮಿಟೆಡ್.

(ಬ್ರಾಂಚ:- ಮುಂಬಯಿ) (ಹೆಡ್ ಆಫೀಸ:- ಕಲ್ಕತ್ತಾ)

ಈ ಕಂಪನಿಯು ಇಡೀ ಹಿಂದುಸ್ಥಾನದಲ್ಲೆಲ್ಲಾ ಪ್ರಾಮುಖ್ಯತೆಗೆ ಬಂದ ಸ್ವದೇಶಿ ಕಂಪನಿಗಳಲ್ಲಿ ಒಂದಾಗಿದೆ. ಜನರ ಸೌಕರ್ಯಕ್ಕಾಗಿ ಈ ವಿಜಾಪೂರ ಜಿಲ್ಹೆಯೊಳಗೆ ಇದರ ಒಂದು ಶಾಖೆಯನ್ನಿಟ್ಟಿರುವರು. ಕಂತುಗಳು ಅತೀ ಸುಲಭ ವಿದ್ದು, ಧಾರಾಳವಾಗಿ ಈ ಕಂಪನಿಯಲ್ಲಿ ನಿಮ್ಮ ಜೀವ ವಿಮೆಯನ್ನು ಇಳಿಸಬಹುದು.

ಇದರ ಮೂಲಧನವು ೫೦,೦೦,೦೦೦ ಇರುವದು. ೧೯೨೧-೨೨ ನೇ ವರ್ಷದಲ್ಲಿ ಸರಾಸರಿ ವರ್ಷಕ್ಕೆ ೧೦೦೦ ರೂ. ವಿಮೆಗೆ ರೂ. ೧೫ ರೂ. ದರ ಫಲಿತಾಂಶ ಕೊಟ್ಟಿರುವೆವು.

ಎಲ್ಲಾ ಕಡೆಯಲ್ಲಿ ಏಜಂಟರು ಬೇಕಿವ್ವಾರೆ.

ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿದಲ್ಲಿ ಹೆಚ್ಚಿನ ಮಾಹಿತಿ ತಕ್ಕೊಳ್ಳಬಹುದು.

ವಿಳಾಸಃ—

ವಿಜಾಪೂರ. ೨೪—೭—೨೨ } ಜಿ. ಆರ್. ವಕ್ಕನಳ್ಳಿ ಆಂಡ ಬ್ರದರ್ಸ.
ಚೀಫ ಏಜಂಟ್ಸ,
ವಿಜಾಪೂರ ಜಿಲ್ಹಾ.

ಬಾಗಲಕೋಟಿ, ವಿಜಾಪುರ ಮೋಟಾರ ಸರ್ವೀಸ ಪ್ರಾರಂಭವಾಗಿದೆ!

ಬೆಳಗಾವಿಗೆ ಬಾಗಲಕೋಟೆಯಿಂದ ೩॥ ರೂ. ಹಾಸಲು ಮುದ್ದಾಂ ಮಾಡಲ್ಪಟ್ಟಿದೆ.

ವಿಜಾಪೂರ ಜಿಲ್ಹೆಯಲ್ಲಿಯ ಮತ್ತು ಸುತ್ತು ಮುತ್ತಲಿನ ಖಾಸಗಿ ವ ಸರ್ವ್ಹೀಸಿನ ಮೋಟಾರ ಮಾಲಕರ ಗೈರಸೋಯ ದೂರವಾಗಬೇಕೆಂದು.
ಆರ್. ಜಿ. ಚವ್ಹಾಣ ಎಂಡ ಸನ್ಸ, ಬೆಳಗಾವ. ಇವರು ತಮ್ಮ

ಜನರಲ ಮೋಟಾರ ಅಕ್ಸೆಸರಿ ಸ್ಟೋಅರ್ಸದ ಶಾಖೆಯನ್ನು

ತಾ|| ೧೦ ಸಪ್ಟೆಂಬರ ೧೯೨೭ನೇ ಇಸ್ವಿಯಿಂದ ಬಾಗಲಕೋಟೆಯಲ್ಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಶೆವ್ರಲೇಟ, ಓವ್ಹರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯುಬ್ಸ, ಗ್ರೀಸ, ಮೋಬಿಲ ಆಇಲ್, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯ ದರದಿಂದ ಸಿಗುವವು. ಒಂದು ವೇಳೆ ವ್ಯಾಪಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರದಿಂದ,

ಚಾಲಕಃ— ವಾಯ್. ಜಿ. ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂ [illegible] ಯೋಗ್ಯ ದರದಿಂದ ವ್ಹಲ್ಕನಾಯಝಿಂಗ ಮಾಡಿ ಕೊಡುವೆವು

☞ ಬಾಗಲಕೋಟೆ-ಬೆಳಗಾವಿ, ಬಾಗಲಕೋಟೆ-ಇಳಕಲ್ಲ ಸರ್ವೀಸ ಯಥಾಪ್ರಕಾರ ನಡೆದಿದೆ

ನೋವು ಬಾಧೆಗಳ ನಿವಾರಣಾರ್ಥ!

೫೦ ವರ್ಷಗಳಿಂದ ಜಗತ್ತಿನ ತುಂಬ ಖ್ಯಾತಿಯನ್ನು ಪಡೆದ ಉಪಾಯವೆಂದರೆ ಇದೇ.

Little's Oriental Balm.

ಲಿಟ್ಲರ ಓರಿಯಂಟ್ಲ ಬಾಮು.

ಎಲ್ಲ ಔಷಧಿ ವ್ಯಾಪಾರಿಗಳ ಲ್ಲಿಯೂ ದೊರೆಯುತ್ತೆ.

ಈ ದಿವಸವೆ ಒಂದು ಬಾಟ್ಲ ಕೊಳ್ಳಿ !

Buy a bottle

TO-DAY!

ಹಿಂದುಸ್ಥಾನದ ಅದ್ಭುತವಾದ ವೇದನಾಶಾಮಕವಾದ ಉಪಾಯವು !

ಕೆಳಗಿನ ವ್ಯಾಧಿಗಳಿಗೆ ತತ್ಕಾಲಿಕ ಗುಣ ಬೇಕಾಗಿದ್ದರೆ ಇದನ್ನೇ ಉಪಯೋಗಿಸಿರಿ:—

ತಲೆಶೂಲೆ, ಸಂಧಿವಾತ, ಎಲ್ಲ ತರದ ಕಸ, ನರತೊಡಕು ಹವಾಸ, ಟೊಂಕನೋವು, ಅರ್ದಾಂಗವಾಯು ಉಳುಕು (ವಗೈರೆ)

ಸ್ವಲ್ಪೇ ಮಲಮಿನಿಂದ ಬಹಳೇ ಗುಣ. ಉರುಪು ಇಲ್ಲವೇ ಇಲ್ಲ. ಗುಳ್ಳೆಗಳೂ ಏಳುವದಿಲ್ಲ ಸುಖವಾಗಿ ಗುಣ ಕೊಡುತ್ತದೆ.

ಹಿಂದುಸ್ಥಾನದಲ್ಲಿಯೇ ಹಿಂದೀಯರಿಂದ ತಯಾರಾದದ್ದು.

ನೆಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲವೇ ಇಲ್ಲ!

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿ ಸಲ್ಪಟ್ಟಿತು.

ರ. ನಂ ಬಿ ೧೯೪೭   ವಾ. ವರ್ಗಣಿ ೧-೧೩-೦ ಮಾತ್ರ

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं सर्वमात्मवशं सुखम् । — मनु

ಸಂಪಾದಕರು — ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ } ಬಾಗಲಕೋಟೆ ರವಿವಾರ ಮಿತಿ ಕಾರ್ತಿಕ ಶುದ್ಧ ೧೨ ಶಕೆ ೧೮೪೯ ತಾ|| ೬-೧೧-೧೯೨೭. { ಸಂಚಿಕೆ ೨೯

Date 6—11 1927.

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಚ್ಚುವದು ಮತ್ತು ಜೋಡಿಸುವದು ಅವುಗಳೊಳಗಿನ ಕೆಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯಾಗಿರದೆ ನಿಷ್ಣಾತರಾಗುತ್ತಾರೆ. ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ!

ವಿಳಾಸ:— ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಿಂಡಿಕರ ವಾಡ ಪುಣೆ ಸಿಟಿ.

ಹೊಸ ಟ್ರೇಡಲ್.

ಇದೀಗ ನಾವು ಯುರೋಪದಿಂದ ಹೊಸ ಟ್ರೇಡಲ್ ತರಿಸಿದ್ದೇವೆ ಇದು ಫೂಲಸ್ಕ್ಯಾಪ ಹಾಫಶೀಟಿನ ಆಕಾರದ್ದು ಬೆಲೆ ೬೫೦ ರೂ. ಮಾತ್ರ! ಕರ್ನಾಟಕದಲ್ಲಿಯ ಮುದ್ರಕರಿಗೆ ಇವು ಬೇಕಾದರೆ ನಾವು ತರಿಸಿ ಕೊಡುವೆವು! ಯಂತ್ರವನ್ನು ನೋಡತಕ್ಕವರು ನಮ್ಮಲ್ಲಿಗೆ ಬಂದು ನೋಡಬಹುದು ಇದಲ್ಲದೇ ರಾಯಲ್ ಆಕಾರದ ಒಂದು ಮುದ್ರಣದ ಯಂತ್ರವು ನಮ್ಮಲ್ಲಿ ಮಾರಲಿಕ್ಕಿದೆ. ಇದು ಹಳೆಯದಾದರೂ ಉತ್ತಮ ಕೆಲಸಕೊಡುತ್ತದೆ.

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಮಯೂರ ತೈಲ

ದುರ್ಲಭವಾದ ವನಸ್ಪತಿಯು. ೩೦ ತೋಲೆಗೆ ೧ ರು ಮಾತ್ರ, ಗೂ, ವ್ಯಾಪಾರಸ್ಥರಿಗೆ, ಅನೇಕ ರೀತಿಯ ಪ್ರಕಾರದ ವನಸ್ಪತಿಗಳು ದೊರಕುವವು

ವೈದ್ಯ:— ವಾದಿರಾಜ ಜಹಗೀರದಾರ
ಮು ಇಂಗಳಗಿ (ವಿಜಾಪೂರ).

ಕರ್ನಾಟಕದ ಅಭಿಮಾನವಿರಲಿ.



ಬಹುಮಾನ ಕೊಡಲು ಬೇಕಾಗುವ ಬೆಳ್ಳಿಯ ಕಾಸ್ಕೆಟ್ಟು ಪೆಟ್ಟಿಗೆಗಳೂ, ಪತಾಕೆಗಳೂ, ಟೋರ್ನಮೆಂಟು ಕಪ್ಪುಗಳೂ, ಬೆಳ್ಳಿಯ ಮತ್ತು ಭಂಗಾರದ ಮೆಡಲುಗಳೂ (ಪದಕಗಳು) ಬಿಕರಿಗೆ ಸಿದ್ಧವಾಗಿರುವವು. ಹಾಗೂ ಬೇಕುಬೇಕಾದ ಹೊಸ ಹೊಸ ನಮೂನೆಗಳಲ್ಲಿ ಆರ್ಡರಿಗೂ ಮಾಡಿಕೊಡುವೆವು. ಕ್ಯಾಟಲಾಗನ್ನು ತರಿಸಿಕೊಳ್ಳಿ.

ನಮ್ಮ ಕಂಪನಿಯು ಹಳೆಯದು. ಮೈಸೂರ ಮಹಾರಾಜರೂ, ತ್ರಾವಣಕೋರದ ಮಹಾರಾಜರೂ, ದೊಡ್ಡ ದೊಡ್ಡ ಸಂಸ್ಥೆಗಳೂ, ಕ್ಲಬ್ಬುಗಳೂ ನಮ್ಮನ್ನು ಪ್ರೋತ್ಸಾಹಿಸುತ್ತಿರುವರು.

ಬೆಲೆಯು ಸುಲಭ! [ಒಂದು ವೇಳೆ ಪರೀಕ್ಷಿಸಿ.] **ಕೆಲಸ ಬಹು ನಾಣ್ಯ!!**

ದಿ ಇಂಡಿಯನ್ ಜ್ಯುವೆಲರಿ ಮಾರ್ಟ್ ನಗರ್ತಪೇಟೆ, ಬೆಂಗಳೂರ ಸಿಟಿ.

ಕನ್ನಡಿಗ.

ಬಾಗಲಕೋಟೆ:- ಕನ್ನಡಿಗ ಕಾರ್ತೀಕ ಶುದ್ಧ ೧೨ ಶಕೆ ೧೮೪೯.

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೋಹವಾಡಿ ಕಟ್ಟುವೆನಾನು।
ನಿನ್ನ ಬೆಸಕವಮಾಡಿಪಂಥ ಮಕ್ಕಳ ದೊಮ್ಮ।
ಚಿನ್ನದಾದರು ಬಿನ್ನ ಮೋಹಪಿಸ್ತಿಯ ನೊಂದು ಚಿನ್ಮಯಾಕಾಶದಲ್ಲಿ!
ನನ್ನ ದೇಹವು ನಿನ್ನ ವೀರಶಾಸನಕಾಗಿ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೆ

—ಅಂಬಿಕಾತನಯ ದತ್ತ

ಮುಂಬೈ ಗವರ್ನರರು ಉತ್ತರ ಕರ್ನಾಟಕದಲ್ಲಿ ಸಂಚರಿಸತಕ್ಕವರಿದ್ದಾರೆ. ಇವರಿಗೆ ಮಾನಪತ್ರಗಳ ಸಮರ್ಪಣೆಯೇನೋ ಸಾಗತಕ್ಕದ್ದೇ, ಇದನ್ನರಿಯುವಾಗ್ಯೆ, ಅಲ್ಲಲ್ಲಿಯ ಸ್ಥಾನಿಕ ಮುಖಂಡರು ಗವರ್ನರರ ಭೆಟ್ಟಿತೆಗೆದುಕೊಂಡಾಗ್ಯೆ, ಮತ್ತೂ ಇತರ ಎಲ್ಲ ಪ್ರಸಂಗಗಳುಪ್ಸ್ಥಿತಿಸಿದಾಗೆ, ಕರ್ನಾಟಕ ಏಕೀಕರಣದ ವಿಷಯವನ್ನು ಅವರ ಮುಂದಿಡಲು ಜನರು ಮರೆಯಬಾರದು. ಹೀಗೆ ಗವರ್ನರರಿಗೆ ಈ ವಿಷಯವಾಗಿ ಹೇಳಿದರೆ ನಮಗೆ ಪ್ರತ್ಯೇಕ ಪ್ರಾಂತವು ದೊರೆಯುವದೆಂಬ ಮಾತನ್ನು ನಾವು ಹೇಳುವದಿಲ್ಲ ಆದರೆ ಕನ್ನಡ ಜನರಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ಕಳವಳವಿದೆಂಬದು ಗವರ್ನರರ ನಿದರ್ಶನಕ್ಕೆ ಬರಲು ಇದರಿಂದ ಅನುಕೂಲವಾಗುವದು; ಮತ್ತೂ ಈ ಏಕೀಕರಣ ಚಳವಳಿಯೆಂದರೆ ಅದು ಕೇವಲ ವೃತ್ತಪತ್ರಗಳ ಚಳವಳಿಯೆಂದು ಸರಕಾರವು ಸೋಗಿನಿಂದ ನುಡಿಯುತ್ತಿರುವದು ಅಸಮಂಜಸವೆಂಬುದೂ ಅವರಿಗೆ ತಿಳಿಯುವದು. ಗವರ್ನರರಂತೆ ಮುಂಬೈ ಇಲಾಖೆಯ ಶಿಕ್ಷಣ ಮಂತ್ರಿಗಳಾದರೂ ಕರ್ನಾಟಕದಲ್ಲಿ ಸಂಚರಿಸುತ್ತಲಿರುವರು. ಇವರ ಮುಂದೆ ಕರ್ನಾಟಕ ಏಕೀಕರಣದ ವಿಷಯವನ್ನಿಡುವದಲ್ಲದೇ, ಕರ್ನಾಟಕ ವಿಶ್ವವಿದ್ಯಾಲಯ, ಅಖಂಡ ಕನ್ನಡನಾಡಿನ ಪ್ರಾಥಮಿಕ ಶಾಲೆಗಳಲ್ಲಿ ಒಂದೇ ಬಗೆಯ ಕ್ರಮಿಕ ಪುಸ್ತಕಗಳನ್ನಿಡುವ ಅವಶ್ಯಕತೆಗಳನ್ನು ಈ ಮಂತ್ರಿಗಳ ಗಮನಕ್ಕೆ ಕನ್ನಡಿಗರು ತಂದುಕೊಡಬೇಕು.

ಇಲ್ಲಿಯ ಬಸವೇಶ್ವರ ಹೈಸ್ಕೂಲಿನಲ್ಲಿಯ ಅವ್ಯವಸ್ಥೆಯಿಲ್ಲದಾಗುವ ಬಗ್ಗೆ ನಾವು ಕಳೆದ ಸಲ ಬರೆದಿದ್ದೆವಷ್ಟೇ! ಆಗ್ಯಚಾಲಕರು ನಮಗೆ ವಚನವಿತ್ತಂತೆ, ಹೊಸ ಏರ್ಪಾಡು ಹೇಗೆ ಮಾಡಿರುವರು? ಏನೇನು ಮಾಡಿ ಎವರು? ಎಂಬುದೆಲ್ಲ ಈ ವರೆಗೂ ತಿಳಿಯಲಿಲ್ಲ. ಈ ವಿಷಯವು ಅನೇಕ ದಿನಗಳಿಂದ ನೆನೆಗುದಿಗೆ ಬಿದ್ದಿಯೇ ಇದೆ ಇದರಿಂದ ಶಾಲೆಗೂ ಅಪಾಯವಾಗಿದೆಂಬುದು ಚಾಲಕರಿಗೆ ತಿಳಿದೇಯಿದೆ. ಆದುದರಿಂದ ಈಗಲಾದರೂ ಈ ಶಾಲೆಯ ಚಾಲಕರು ಎಚ್ಚತ್ತು, ಸಮಾಧಾನಕರವಾದ ಏರ್ಪಾಡುಗಳನ್ನು ಮಾಡಬೇಕಾಗಿ ಆಗ್ರಹ ಪಡುತ್ತೇವೆ

ವೀರಶೈವರಿಗೂ ಶುದ್ಧಿ ಹಾಗೂ ಹಿಂದೂ ಸಂಘಟನೆಯ ಪ್ರಶ್ನೆಗೂ ವಿಶೇಷ ಸಂಬಂಧವಿದೆಂದು ಕೆಲವರ ಮತವಿದೆ. ಕರ್ನಾಟಕದಲ್ಲಿ ಶುದ್ಧಿಯ ಕಾರ್ಯವು ಬಸವೇಶ್ವರನ ಕಾಲದಿಂದ ನಡೆದೇಯಿದೆ. ಈಗಲೂ ಶುದ್ಧಿಯ ಕಾರ್ಯವು ಗೋಚರವಾಗುತ್ತಲಿದೆ ಮೊನ್ನೆ ಮೊನ್ನೆ ಹಾನಗಲ್ಲಿಯಲ್ಲಿ ಒಬ್ಬ ಕ್ರಿಶ್ಚನ್ ಸ್ತ್ರೀಯಳನ್ನು ಹಿಂದೂ ಮತಕ್ಕೆ ಸೇರಿಸಿದ್ದೂ, ವೀರಶೈವ ತರುಣನೊಬ್ಬನು ಅವಳಿಗೆ ಲಿಂಗ ಕಟ್ಟಿ ಆವಳನ್ನು ಲಗ್ನವಾದದ್ದೂ ಮಹತ್ವದವೆಂದು ಕೆಲವರ ಮತ. ಆದರೆ ಶುದ್ಧಿಯ ನಂತರ ಆರ್ಯ ಸಮಾಜದಲ್ಲಿ, ಊಟ, ಲಗ್ನಗಳ ವ್ಯವಹಾರವು ಎಲ್ಲರ ಸಂಗಡ ಕೂಡಿಯೇ ನಡೆಯುವಂತೆ ಲಿಂಗಾಯತರಲ್ಲಿ ನಡೆಯುವದಿಲ್ಲ. ಆದುದರಿಂದಲೇ ನೂರಾರು ವರ್ಷಗಳಿಂದ ಶುದ್ಧಿಯ ಕಾರ್ಯವು ವೀರಶೈವರಿಂದ ನಡೆದಿದ್ದರೂ, ಅದಕ್ಕೆ ಅಷ್ಟೊಂದು ಶಕ್ತಿಯೂ ತೇಜವೂ ಬಂದಿರುವದಿಲ್ಲ. ಮತ್ತು "ರೋಟಿ- ಬೇಟಿ"ಗಳ ವ್ಯವಹಾರಗಳಿಗೆ ಪ್ರಾಶಸ್ತ್ಯವನ್ನು ಲಿಂಗಾಯತರು ಕೊಡದೇ ಹೋದರೆ, ಈ ಇವರ ಶುದ್ಧಿಯ ಕಾರ್ಯವು ಕಡೆತನಕ ಮೂಲೆಗುಂಪಾಗಿ ಉಳಿಯುವದರಲ್ಲಿ ಸಂದೇಹವಿಲ್ಲ. ವೀರಶೈವರ ಮತವು ಬಹು ದಿನಗಳಿಂದ ನಡೆದು ಬಂದುದಾದರೂ ಹಿಂದುಸ್ಥಾನದಲ್ಲಿ ಎಲ್ಲರಿಗೂ ಈ ಮತದ ಅಸ್ತಿತ್ವವು ಸಹ ಗೊತ್ತಿಲ್ಲ. ಆದರೆ ಆರ್ಯ ಸಮಾಜವು ಮೊನ್ನೆ ಮೊನ್ನೆ ಉದ್ಭವಿಸಿದ್ದರೂ, ಅದು ತನ್ನ ತೇಜಸ್ಸಿನಿಂದ ಭರತಖಂಡದಲ್ಲೆಲ್ಲ ಪ್ರಸಿದ್ಧವಾಗಿದೆ. ವೀರಶೈವರು ಒಳ್ಳೇ ಜಿಗಟಿನಿಂದ ಧರ್ಮಪ್ರಚಾರದಲ್ಲಿ ತಮ್ಮ ರಥವನ್ನು ಹೊಡೆದಿದ್ದರೆ, ಹಿಂದುಸ್ಥಾನದಲ್ಲಿಯ ೭ ಕೋಟಿ ಅಸ್ಪೃಶ್ಯರೂ ೭ ಕೋಟಿ ಮುಸಲ್ಮಾನರೂ ವೀರಶೈವ ಮತದ ದೀಕ್ಷೆಯನ್ನು ಹೊಂದಬಹುದಾಗಿತ್ತು. ಕೇವಲ ಧಾರ್ಮಿಕ ಕಟ್ಟಳೆಗಳನ್ನು ನೋಡಿದರೆ, "ರೋಟಿ- ಬೇಟಿ" ವ್ಯವಹಾರವು ವೀರಶೈವ ಮತದ ದೀಕ್ಷೆಯನ್ನು ಹೊಂದಿದವರಲ್ಲೆಲ್ಲ ನಿರ್ವ್ಯಾಜ್ಯವಾಗಿ ನಡೆಯತಕ್ಕದ್ದು ಆದರೆ ಬಸವೇಶ್ವರರ ಮೂಲ ಧರ್ಮಕ್ರಾಂತಿಯ ವಿಚಾರಗಳನ್ನೂ ಕಟ್ಟಳೆಗಳನ್ನೂ ವೀರಶೈವರು ದುರ್ಲಕ್ಷಿಸಿ, ಅವುಗಳ ವಿರುದ್ಧವಾಗಿ ಆಚರಿಸುತ್ತಲಿರುವದರಿಂದ ಅನೇಕ ಶತಮಾನಗಳಿಂದ ಸಾಗಿಬಂದ ಇವರ ಸಮಾಜವು ಹಿಂದೆ ಬಿದ್ದಿದೆ, ಆದರೆ ಒಂದೇ ಶತಮಾನದಲ್ಲಿ ಆರ್ಯ ಸಮಾಜವು ಅರ್ಭಟಿಯಿಂದ ಮೊಗವೆತ್ತಿ ನಿಂತುಕೊಂಡಿದೆ. ವೀರಶೈವ ಮತೀಯರು ಈ ಚಿತ್ರವನ್ನು ಚನ್ನಾಗಿ ನಿರೀಕ್ಷಿಸಬೇಕು; ಮತ್ತು ಕಳೆದ ಶತಮಾನದಿಂದ ಈಗಿನವರೆಗೆ ಅನೇಕ ವೀರಶೈವರು ತಮ್ಮ ಮತವನ್ನು ತೊರೆದು ಕ್ರಿಶ್ಚನ್ನ ಹಾಗೂ ಇಸ್ಲಾಮೀ ಧರ್ಮಗಳನ್ನು ಸೇರಿರುವದನ್ನೂ, ಈಗಲೂ ಸೇರುತ್ತಿರುವದನ್ನೂ ಕೊಂಚ ಒಳಗಣ್ಣಿನಿಂದ ತಿಳಿದು ನೋಡಬೇಕು. ಅಂದರೆ ಆರ್ಯ ಸಮಾಜಕ್ಕೂ ವೀರಶೈವ ಮತಕ್ಕೂ ಶುದ್ಧಿ ಸಂಘಟನೆಗಳ ವಿಷಯದಲ್ಲಿ ಎಷ್ಟೊಂದು ವ್ಯತ್ಯಾಸವಿದೆಂಬುವದು ತಾನೇ ಒಡೆದು ಕಾಣುವದು. ಕಂಡಮೇಲಾದರೂ ಐಕ್ಯದಿಂದ ವೀರಶೈವರೆಲ್ಲ ಸ್ವಮತೋದ್ಧಾರಕ್ಕಾಗಿ ಟೊಂಕಕಟ್ಟಿದರೆ, ಅವರಮತದ ಸಂಖ್ಯೆಯು ಮಿತಿ ಮೀರಿ ಬೆಳೆಯುವದರಲ್ಲಿ ಸಂದೇಹವಿಲ್ಲ.

ಸಾಹೇಬರಂತೆ ಆಚರಿಸಬೇಕೆಂಬುದೊಂದು ನಮ್ಮ ಭಾರತೀಯರಲ್ಲಿ ಅನೇಕರಿಗೆ ಹುಚ್ಚು. ಇಷ್ಟುದಿನ ಈ ಹುಚ್ಚು ಪುರುಷರಲ್ಲಿ ಮಾತ್ರ ಹೆಚ್ಚಾಗಿದ್ದಿತು. ರಾಜರು ಮಹಾರಾಜರುಗಳಲ್ಲಿಯಂತೂ ಈ ಹುಚ್ಚು ಹೆಚ್ಚೆದ್ದು ಹಾರಾಡುತ್ತಲಿದೆ. ಪ್ರಜೆಗಳಿಗೆ ಎಷ್ಟು ತೊಂದರೆಯಾದರೂ ಅದನ್ನು ರವಷ್ಟಾದರೂ ಚಿಂತಿಸದೇ,

ಮತ್ತೆ ಮತ್ತೆ ಅವರ ಮೇಲೆ ಹೊಸ ಹೊಸ ತೆರಿಗೆಗಳನ್ನು ಹೇರಿ, ಹಣ ಹರಿದುಕೊಂಡು, ತಮ್ಮ ವಿಲಾಸಗಳಿಗಾಗಿ ಆ ಹಣವನ್ನು ವ್ಯಯಮಾಡುವರು. ಪರದೇಶಕ್ಕೆ ಹೋಗಿ ಅಲ್ಲಿ ಈ ಬಡ ರೈತರ ಹಣವನ್ನು ಸೂರೆ ಸೂರೆ ಮಾಡುವರು. ಕೆಲ ಮಹಾರಾಜರಿಗಂತೂ ವಿಲಾಯತಿ ಹಿಂದುಸ್ಥಾನಗಳೆಂದರೆ ಅಡಿಗೆ ಮನೆ ಪಡಸಾಲೆಗಳು. ಹತ್ತತ್ತು ಇಪ್ಪತ್ತು ಸಲ ವಿಲಾಯತಿಗೆ ಕೇವಲ ತಮ್ಮ ವಿಲಾಸಕ್ಕಾಗಿ ಹೋಗಿಬಂದರೂ ಮನಸ್ಸಿಗೆ ತೃಪ್ತಿಯಿಲ್ಲ! ಏನೇ ಇದ್ದರೂ ಈ ಚಟವು ಮಹಾರಾಜರಲ್ಲಿ ಮಾತ್ರವಿರುತ್ತಲಿದ್ದಿತು. ಆದರೆ ಈಗೀಗ ಮಹಾರಾಣಿಯವರಲ್ಲಿಯೂ ಈ ದುಶ್ಚಟವು ಸೇರುತ್ತಲಿರುವದನ್ನು ಕಂಡು ಬಹು ವಿಷಾದವಾಗುತ್ತದೆ. ಕೂಚಬಿಹಾರದ ಇಂದಿರಾ ಮಹಾರಾಣಿಯವರು ಈಗ್ಗೆ ಇದಕ್ಕೆ ಪ್ರತ್ಯಕ್ಷವಾದ ಉದಾಹರಣೆಯಾಗಿದ್ದಾರೆ. ಪತಿಗಳಿಂದ ವಿರಹವಾದ ಈ ಮಹಾರಾಣಿಯವರು, ವಿಲಾಯತಿಯಲ್ಲಿ ವಿಲಾಸಿಗಳ ಸಂಗಡ ಮೆರೆಯುತ್ತಿರುವರು. ಯುರೋಪಿಯರ ಪೋಷಾಕನ್ನು ಕೂಡ ಪ್ರಸಂಗಗಳಲ್ಲಿ ಅವರು ಧರಿಸುವರು. ಯುರೋಪಿಯರ ಗಾಯನ ನರ್ತನಗಳಲ್ಲಿ ಒಳ್ಳೇ ಪ್ರಖ್ಯಾತಿಯನ್ನು ಹೊಂದಿರುವರಂತೆ. ಇದಕ್ಕಾಗಿ ಅವರನ್ನು ಇಂಗ್ಲಂಡದಲ್ಲಿಯ ಪತ್ರಿಕೆಗಳು ಸಾರ್ವಜನಿಕವಾಗಿ ಹೊಗಳುತ್ತಲಿವೆ! ಅವರ ಚಿತ್ರಗಳೂ ನರ್ತನದ ವೇಷ ಭೂಷಣಗಳೂ ಸಹ ಪ್ರಕಟವಾಗುತ್ತಲಿವೆ!! ಭಾರತೀಯ ವಿಧವೆಯರು ವಿಲಾಯತಿಗೆ ಹೋಗಿ ಅಲ್ಲಿಯ ವಿಲಾಸಗಳಲ್ಲಿ ಹೀಗೆ ಲೋಲಾಡುವದೆಂದರೆ ನಮ್ಮ ಸಂಸ್ಕೃತಿಗೆ ಎಷ್ಟೊಂದು ಕುಂದು ತರುವಂತಹದು! ಸ್ವತಃ ರಾಜರೂ ಮಹಾರಾಜರೂ ಹೀಗೆ ಆಚರಿಸುವದರಿಂದ ಅವರ ಮನೆಯ ಸ್ತ್ರೀಯರು ಸಹ ಹಾಗೇ ಆಚರಿಸಲು ಹಾತೊರೆಯುವದು ಸ್ವಭಾವಿಕವು. ಈಗ್ಗೆ ಅಲ್ಲಲ್ಲಿ ಸಂಸ್ಥಾನಿಕರ ಪ್ರಜಾಪರಿಷತ್ತುಗಳುದ್ಭವಿಸಿವೆ. ಅವು ಈ ವಿಷಯವನ್ನು ಕೊಂಚ ಧೈರ್ಯಮಾಡಿ ಕೂಡ ಚರ್ಚಿಸುವದು ವಿಹಿತವಾಗಿ ತೋರುತ್ತದೆ.

ರಾಯಬಾಗ- ಜಮಖಂಡಿ ರೇಲ್ವೆಯನ್ನು ಪ್ರಾರಂಭಿಸುವದಿಲ್ಲವಾಗಿ ಮುಂಬೈ ಗವರ್ನರರು ಮೊನ್ನೆ ಜಮಖಂಡಿಗೆ ಬಂದಾಗ್ಯೆ ಸ್ಪಷ್ಟವಾಗಿ ಹೇಳಿಬಿಟ್ಟರು! ಅನೇಕ ವರ್ಷಗಳಿಂದ ಈ ರೇಲ್ವೆಯ ಮಾತುನಡೆದು ಕಡೆಗೆ ಅಕಸ್ಮಾತ್ತಾಗಿ ಅದು ಹೀಗೆ ಬಂದಾಗುವದೆಂಬ ಕಲ್ಪನೆ ಆರಿಗೂ ಇರಲಿಲ್ಲ. ೧೯೦೪ ನೇ ಇಸ್ವಿಯಲ್ಲಿ ಈ ಯೋಜನೆಯು ಮೊದಲು ಸಿದ್ಧವಾಯಿತು. ಅಂದಿನಿಂದ ಇಂದಿನವರೆಗೆ ಕೇವಲ ಬಾಯಿಬಡಕರಂತೆ ಮಾತನಾಡಿ ಕಡೆಗೆ ರೇಲ್ವೆ ಕಂಪನಿಯವರು ಹೀಗೆ ನಿರ್ಧರಿಸಿದ್ದನ್ನು ನಾವು ನಿಷೇಧಿಸದೇ ಇರೆವು. ತೇರದಾಳ, ರಬಕವಿ, ಬನಹಟ್ಟಿ, ಜಮಖಂಡಿ, ಮುಧೋಳ, ಕಲಾದಗಿಗಳ ಮೇಲೆ ಹಾಯ್ದು ಬಾಗಲಕೋಟೆಗೆ ಈ ರೇಲ್ವೆಯು ಬರತಕ್ಕದ್ದಿದ್ದಿತು. ಇವೆಲ್ಲ ಮುಖ್ಯವಾದ ಪಟ್ಟಣಗಳು ಮೇಲೆ ವ್ಯಾಪಾರದ ಊರುಗಳು. ಇವುಗಳ ಸುತ್ತಲಿರುವ ಹಳ್ಳಿಗಳಿಗೂ ಈ ರೇಲ್ವೇ ಯೋಜನೆಯಿಂದ ಬಹು ಅನುಕೂಲವಾಗುತ್ತಲಿದ್ದಿತು. ಇವನ್ನೆಲ್ಲ ದುರ್ಲಕ್ಷಿಸಿ, ರೇಲ್ವೇ ಕಂಪನಿಯವರು ಇದರಿಂದ ಲಾಭವಾಗುವದಿಲ್ಲವೆಂದು ಹೇಳಿ ಈ ಯೋಜನೆಯನ್ನು ಸಂಪೂರ್ಣವಾಗಿ ಬಿಟ್ಟದ್ದು, ಬಹು ಸೋಜಿಗವಾಗಿದೆ. ಸಾಂಗಲಿ, ಕೊಲ್ಹಾಪುರ, ಜಮಖಂಡಿ ಮುಧೋಳ ಸಂಸ್ಥಾನಿಕರಿಗೆ ಇದರ ಸಂಬಂಧವಿದೆ. ಆದುದರಿಂದ ಈ ರಾಜರುಗಳಾದರೂ, ಐಕ್ಯದಿಂದ ಕೂಡಿ, ಸರಕಾರಕ್ಕೆ ಒತ್ತಾಯಪಡಿಸಿ, ಈ ಯೋಜನೆಗೆ ಮತ್ತೆ, ಜೀವಕಳೆ ತುಂಬುವಂತೆ ಮಾಡಬೇಕಾಗಿ ಆಗ್ರಹಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಲದ ಸಭೆಯು ಕಳೆದವಾರ ಕಲಕತ್ತೆಯಲ್ಲಿ ಕೊನೆಗಂಡಿತು. ಈ ಸಭೆಯು ಚರ್ಚಿಸಿದ ಸಂಗತಿಗಳಲ್ಲಿ ಎಲ್ಲಕ್ಕೂ ಮುಖ್ಯವಾದುದೆಂದರೆ ಹಿಂದೂ-ಮುಸಲ್ಮಾನರ ಐಕ್ಯದ್ದು. ಗೋವಧೆ ಹಾಗೂ ಮಸೀದೆಗಳ ಮುಂದೆ ವಾದ್ಯ ಬಾರಿಸುವದು ಇವೆರಡೇ ವಿಷಯಗಳು ಹಿಂದೂ- ಮುಸಲ್ಮಾನರಲ್ಲಿ ಭೇದವನ್ನು ಹುಟ್ಟಿಸಿವೆಯೆಂದು ತಿಳಿದು, ಆ ಪ್ರಕಾರ ಅವುಗಳ ಬಗ್ಗೆ ಹೀಗೆ ತೀರ್ಮಾನಿಸಿದ್ದಾರೆ- "(೧) ಆಕಳಗಳನ್ನು ಮುಸಲ್ಮಾನರು ಸಾರ್ವಜನಿಕವಾಗಿ ಕೊಲ್ಲಬಾರದು; ಅಥವಾ ಕೊಲ್ಲಲು ಮೆರವಣಿಗೆಯಿಂದ ಒಯ್ಯಬಾರದು; ಹಿಂದೂ ಜನರ ಮಂದಿರಗಳ ಸಮೀಪದಲ್ಲಿ ಎಂದಿಗೂ ಗೋವಧೆ ಮಾಡಬಾರದು (೨) ಮಸೀದೆಗಳ ಮುಂದೆ ವಾದ್ಯಗಳನ್ನು ಹಿಂದೂ ಜನರು ಬಾರಿಸಿದರೆ ಮುಸಲ್ಮಾನರು ಅದನ್ನು ವಿರೋಧಿಸಬಾರದು. ಹಿಂದೂ ಜನರು ಎಲ್ಲ ಸಾರ್ವಜನಿಕ ಸ್ಥಳಗಳಲ್ಲಿ ವಾದ್ಯ ಬಾರಿಸುವಂತೆಯೇ ಮಸೀದೆಗಳ ಮುಂದೆಯೂ ಬಾರಿಸಬೇಕಲ್ಲದೇ, ಬೇಕೆಂದು ಮಸೀದೆಗಳ ಮುಂದೆಯೇ ಹೆಚ್ಚು ಉತ್ಸಾಹದಿಂದ, ಆಗ್ರಹದಿಂದ, ಅಥವಾ ಹೆಚ್ಚು ಜಯಜಯಕಾರಗಳಿಂದ ಬಾರಿಸಕೂಡದು. ಮಸೀದೆಯಲ್ಲಿ ಪ್ರಾರ್ಥನೆಯು ಪ್ರತ್ಯಕ್ಷವಾಗಿ ನಡೆವ ಸಮಯದಲ್ಲಿ, ಭಕ್ತರಿಗೆ ತೊಂದರೆಯಾಗದಂತೆ ಹಿಂದೂ ಜನರು ಜಾಗರೂಕತೆಯಿಂದ ನಡೆಯುವದು ವಿಹಿತ." ಈ ನಿರ್ಣಯಗಳು ಹೊರಬಿದ್ದ ಮಾತ್ರಕ್ಕೆ ಹಿಂದೂ- ಮುಸಲ್ಮಾನರೆಲ್ಲರೂ ಕಾಂಗ್ರೆಸ್ಸನ್ನು ಈ ವಿಷಯದಲ್ಲಿ ಹಿಂಬಾಲಿಸುವರೆಂದು ಹೇಳಲಿಕ್ಕಾಗದೆಂಬದನ್ನು ಕಾಂಗ್ರೆಸ್ಸದ ಮುಂದಾಳುಗಳು ಚನ್ನಾಗಿ ಅರಿತವರಾಗಿದ್ದಾರೆ. ಆದ್ದರಿಂದ ಈ ಬಗ್ಗೆ ಜನರಲ್ಲಿ ನಿಜವಾದ ಕಲ್ಪನೆಯನ್ನು ಹರಡಲು ಕೆಲಜನ ಮುಂದಾಳುಗಳು ಭರತಖಂಡವನ್ನು ಸಂಚರಿಸಬೇಕೆಂದೂ ಗೊತ್ತುಮಾಡಿದ್ದಾರೆ. ಬಲು ತೊಡಕಿನ ಪ್ರಶ್ನೆಯಾದ ಹಿಂದೂ- ಮುಸಲ್ಮಾನರ ಬಡಿದಾಟದ ಈ ಪ್ರಶ್ನೆಯನ್ನು ಬಿಡಿಸುವದಕ್ಕೆ ಈ ಸೂಚನೆಗಳೆರಡೂ ತರಣೋಪಾಯಗಳಾಗಿರದಿದ್ದರೂ, ಒಂದು ಬಗೆಯಿಂದ ಕಾಂಗ್ರೆಸ್ಸವು ಜಗಳವನ್ನು ಬಡಿದೋಡಿಸಲು ಹೊರಟದ್ದು ಸಮಾಧಾನಕರವಾಗಿದೆ. ಈ ಬಗ್ಗೆ ಹಿಂದಕ್ಕೆ ಕೆಲ ಸಲ ಪ್ರಯತ್ನಗಳಾಗಿದ್ದರೂ, ಅವೆಲ್ಲ ನಿಷ್ಫಲವಾಗಿದ್ದವು. ಈ ಸಲ ಕೊಂಚಾದರೂ ಕಾರ್ಯವಾದದು ಸಮಾಧಾನಕರವಾಗಿದೆ. ಆದರೆ ಕೃತಿಯಲ್ಲಿ ಈ ನಿರ್ಣಯಗಳು ಎಂದು ಬರುವವೋ ನೋಡಬೇಕು.

ಉತ್ತರ ಕರ್ನಾಟಕದಲ್ಲಿ ಕೆರೆಕಾಲಿವೆಗಳನ್ನು ಕಟ್ಟಿಸಿ, ಬರಗಾಲವನ್ನು ಹೊಡೆದೋಡಿಸುವಂತೆ ಮಾಡಲು ನಮ್ಮ ಮುಂಬೈ ಸರಕಾರಕ್ಕೆ ಅಷ್ಟೊಂದು ಮನಸ್ಸಿಲ್ಲ. ಆದ್ದರಿಂದಲೇ ಈ ಪ್ರಶ್ನೆಯು ಮುಂದೆ ಬಂದಾಗೆಲ್ಲ ಇಲ್ಲದ ಕುಂಟ ನೆವಗಳನ್ನು ಹೇಳುತ್ತ ಸರಕಾರವು ಈ ವಿಷಯವನ್ನು ಹಾಗೆಯೇ ಮುಂದೆ ಮುಂದೆ ಹಾಕುತ್ತಲಿದೆ. ಇವರು ಬಿಕಾನೇರ ಮಹಾರಾಜರ ಮೇಲ್ಪಂಕ್ತಿಯನ್ನು ಕೊಂಚಾದರೂ ತೀಡಬೇಕಾಗಿ ನಮ್ಮ ಸೂಚನೆ. ಬಿಕಾನೇರ ಸಂಸ್ಥಾನವೆಂದರೆ ಮಳಲು ಮಿಶ್ರಿತವಾದ ಪ್ರದೇಶವು; ಮಳೆಯೂ ಇಲ್ಲ. ನೈಸರ್ಗಿಕವಾಗಿ ಇಷ್ಟೊಂದು ಅನನುಕೂಲತೆಗಳಿದ್ದರೂ, ಮಹಾರಾಜರು ತಮ್ಮ ಪ್ರಜೆಗಳ ಮೇಲಿನ ಮಮತೆಯಿಂದ ನೂರಾರು ಮೈಲುಗಳ ಅಂತರದಲ್ಲಿರುವ ಸತಲಜ ನದಿಗೆ ಬಹುದೊಡ್ಡದಾದ ಅಣೆಕಟ್ಟು ಹಾಕಿ; ಅಲ್ಲಿಂದ ತಮ್ಮ ಸಂಸ್ಥಾನದ ಭೂಮಿಗಳಿಗೆ ಕಾಲುವೆಗಳಿಂದ ನೀರನ್ನು ಪೂರೈಸುವ ಏರ್ಪಾಡು ಮಾಡಿದ್ದಾರೆ. ಈ ಸಂಸ್ಥಾನದ ಇಳ ಭೂಮಿಗಳಿಗೆಲ್ಲ ಈ ಕಾಲುವೆಗಳಿಂದ ನೀರಿನ ಪೂರೈಕೆಯಾಗುವದು. ೩ ಕೋಟಿ ರೂಪಾಯಿ ಹಣವು ಈಗಾಗಲೇ ವೆಚ್ಚವಾಗಿದೆ. ಇನ್ನೂ ಹೆಚ್ಚಾಗಿ ವೆಚ್ಚಮಾಡಲು ಮಹಾರಾಜರು

ನಿದ್ದರಿರುವರು. ಮಳಲು ಮಿಶ್ರಿತ ಪ್ರದೇಶವಿದ್ದರೂ, ವಿಪುಲವಾಗಿ ನೀರು ದೊರೆಯುವದರಿಂದ ಇನ್ನು ಮೇಲೆ ಅಲ್ಲಿ ಭೂಮಿಗಳು ಫಲದ್ರೂಪವಾಗುವವು. ಅನೇಕ ಜಗೆಯ ಸೌಕರ್ಯಗಳನ್ನು ಕೊಟ್ಟು, ಹೊರಗಿನಿಂದ ರೈತರು ಬಂದು ಬಿಕಾನೇರದಲ್ಲಿ ವಾಸಿಸುವ ಏರ್ಪಾಡು ಸಹ ಅಲ್ಲಿಯ ಮಹಾರಾಜರು ಮಾಡಿದ್ದಾರೆ! ಅದು ಪ್ರಜೆಗಳಲ್ಲಿ ರಾಜರಿಗಿರತಕ್ಕ ನಿಜವಾದ ಮಮತೆಯ ಲಕ್ಷಣವು. ಆದರೆ ಇತ್ತ ನಮ್ಮ ಬ್ರಿಟಿಶ್ ಸರಕಾರವನ್ನು ನೋಡಿರಿ! ಕರ್ನಾಟಕದಲ್ಲಿ ಫಲವತ್ತಾದ ಭೂಮಿಗಳಿವೆ. ಅನೇಕ ನದಿ ಹಳ್ಳಗಳಿವೆ. ಕರ್ನಾಟಕದಲ್ಲಿ ಹಿಂದಕ್ಕಾಳಿದ ರಾಜವಂಶಗಳು ಕೆರೆಕಾಲುವೆಗಳನ್ನು ಮಾಡಿಸಿದ ಪ್ರತ್ಯಕ್ಷ ಉದಾಹರಣೆಗಳು ಈಗಲೂ ಇವೆ. ನೀರು ನೀರೆಂದು ಜನರು ಬಾಯಿ ಬಿಡುತ್ತಲೂ ಇದ್ದಾರೆ! ಇಷ್ಟಾದರೂ ನಮ್ಮ ಮುಂಬೈ ಸರಕಾರದ ಮನವು ಕರಗದು! ದಡ್ಡಿಯಲ್ಲಿ ಘಟಪ್ರಭೆಗೆ ಒಡ್ಡು ಹಾಕುವೆವೆಂಬ ಸೋಗು ಮಾಡಿ, ಅನೇಕ ವರ್ಷಗಳ ವರೆಗೆ ಜನರಿಗೆ ಆಶೆ ತೋರಿಸಿ, ಕಟ್ಟಕಡೆಗೆ (ಅಲ್ಲಿಯ ಕೆಲ ಜನ ಮರಾಠಾ ಶ್ರೀಮಂತರು ತಮ್ಮ ಭೂಮಿಗಳು ಮುಳುಗುವವೆಂದು ಹೇಳಿ, ಈ ವಿಚಾರವನ್ನು ಬಿಡಿರೆಂದು ಆಗ್ರಹಪಟ್ಟದ್ದರಿಂದ) ಫಲವತ್ತಾದ ಭೂಮಿಗಳೂ, ಹಳ್ಳಿಗಳೂ ಮುಳುಗುವದರಿಂದ ಈ ಯೋಜನೆಯನ್ನು ಬಿಟ್ಟಿರುವೆವೆಂದು ಮುಂಬೈ ಸರಕಾರವು (ಕೆಲ ಜನ ಶ್ರೀಮಂತರನ್ನು ಸಂತೋಷಗೊಳಿಸಲು) ಹೇಳಿ ಬಡವರ ಕಲ್ಯಾಣವನ್ನು ಮತ್ತೆ ದುರ್ಲಕ್ಷಿಸಿದರು! ಉತ್ತರ ಕರ್ನಾಟಕದಲ್ಲಿ ಭೂಮಿಗಳು ಫಲವತ್ತಾಗಿವೆ; ಅನೇಕ ನದಿಗಳಿವೆ; ಒಕ್ಕಲಿಗರೂ ಇಲ್ಲಿ ಇದ್ದಾರೆ, ಇಷ್ಟೊಂದು ಸೌಕರ್ಯಗಳಿಲ್ಲಿದ್ದರೂ ಇಂಥ ಯಾಂತ್ರಿಕ ಶಕ್ತಿಯ ಸುಧಾರಣೆಯ ೨೦ನೆಯ ಶತಮಾನದ ಕಾಲದಲ್ಲಿ, ಭೂಮಿಯೊಳಗಿಂದ ಹರಿದು ವ್ಯಯವಾಗಿ ಹೋಗುವ ನೀರನ್ನು ತಡೆದು ಹೊಲಗಳಿಗೆ ಪೂರೈಸುವ ಏರ್ಪಾಡು ಮಾಡುವ ಕಾರ್ಯವು ನಮ್ಮ ಸರಕಾರಕ್ಕೆ ಬಲು ಕಠಿಣ ಪ್ರಶ್ನೆಯಾಗಿದೆ. ಬ್ರಿಟಿಶ್ ಸರಕಾರದ ಬದಲು, ಬಿಕಾನೇರ ಮಹಾರಾಜರೇ ಇಲ್ಲಿದ್ದರೆ, ನಮ್ಮ ಬಡಜನರ ಗೋಳು ಎಂದಿಗೋ ದೂರಾಗಿ ಹೋಗುತ್ತಲಿದ್ದಿತು. ಮಳಲು ಮಿಶ್ರಿತವಾದ ಕನಿಷ್ಠ ಪ್ರತಿಯ ಭೂಮಿಗೆ, ಆ ಭೂಮಿಯಲ್ಲಿ ಒಂದಾದರೂ ನದಿಯಿಲ್ಲದಿದ್ದರೂ, ನೂರಾರು ಮೈಲಿನಲ್ಲಿರುವ ಸಟ್ಲೆಜ ನದಿಯಿಂದ ನೀರು ತಂದು ಪೂರೈಸಿ ಕೊಟ್ಟ ಪ್ರಜಾವತ್ಸಲನಾದ ಮಹಾರಾಜನಿಗೆ, ಉತ್ತರ ಕರ್ನಾಟಕದಂಥ ಸೃಷ್ಟಿಸೌಕರ್ಯಗಳಿರುವ ನಾಡಿನ ಆಧಿಪತ್ಯವಿದ್ದರೆ, ಆವನ ಸಂತೋಷ, ಕಾರ್ಯತತ್ಪರತೆಗಳಿಗೆ ಮಿತಿಯೇ ಇರುತ್ತಿರಲಿಲ್ಲ. ಆದರೆ ಕಠೋರ ಮಲ್ಲನಂತೆ ಕಠೋರ ಹೃದಯರಾದ ನಮ್ಮ ಮುಂಬೈ ಸರಕಾರಕ್ಕೆ ಇದಾವದೂ ಹೊಳೆಯುವದೇಯಿಲ್ಲ! ಈ ರಾಜರುಗಳಲ್ಲಿರುವ ಪ್ರಜಾವಾತ್ಸಲ್ಯದ ಚಿತ್ರವನ್ನು ಕನ್ನಡಿಗರು ಚನ್ನಾಗಿ ನೋಡಿಕೊಳ್ಳಬೇಕು!

ಬಾಗಲಕೋಟೆಯ ಜನರು ವಾಕ್‌ಶ್ರೀ-ಸುಭಗನಾದ **ಪಂಪನ ಮಹೋತ್ಸವವನ್ನು** ಪ್ರಾರಂಭ ಮಾಡಿರುವರು. ಕನ್ನಡ ಸಾಹಿತ್ಯದ ದೃಷ್ಟಿಯಿಂದಲೂ, ನಾಡಿನ ಏಳ್ಗೆಯ ಬಗೆಯಿಂದಲೂ ಬಹಳ ಮಹತ್ವವುಳ್ಳ ಮಾತಿದು. ದೇಶಾಭಿಮಾನದ ಜ್ಯೋತಿಯು ನಾಡಿನ ಹಾಡುಗಾರರಲ್ಲಿ ನಿಚ್ಚಳವಾಗಿ ಬೆಳಗುತ್ತಿರುವದು. ಬಿದ್ದ ನಾಡನ್ನು ಎತ್ತಿ ಹಿಡಿಯುವ ಮತ್ತು ಎದ್ದ ನಾಡನ್ನು ಮತ್ತಷ್ಟು ಊರ್ಜಿತ ಸ್ಥಿತಿಗೆ ತರುವ ಸಾಮರ್ಥ್ಯವು ಕವಿಕುಲತಿಲಕರ ಸವಿಯಾದ ನುಡಿಗಳಲ್ಲಿರುವದು. ಪಂಪನ ಮಹೋಮುಂದುಭಿಯು ಇನ್ನೂ ದಿಗಂತಗಳಲ್ಲಿ ಮೊಳಗುತ್ತಿರುವದರಿಂದಲೇ ನಮ್ಮ ನುಡಿಯು ಅಥವಾ ನಮ್ಮ ನಾಡು ಜೀವಂತವಾಗಿರುವದು. ಕನ್ನಡ ನುಡಿಯಲ್ಲಿ ಬೆಡಗಿದೆ, ಸೊಬಗಿನ ಸುಗ್ಗಿಯಿದೆ, ಜ್ವಲಜ್ಜ್ಯೋತಿಯಿದೆಂಬ ಮಾತನ್ನು ಪಂಪನ ನುಡಿಗಳಲ್ಲಿ ಚನ್ನಾಗಿ ಕಾಣಬಹುದು. ಪಂಪರನ್ನರಂಥ ಚುಕ್ಕೆಗಳು ಸಾಹಿತ್ಯನಭೋಮಂಡಲದಲ್ಲಿ ಇನ್ನೂ ಚೊಕ್ಕಾಗಿ ಹೊಳೆಯುವವರೆಗೆ, ಕನ್ನಡಿಗರಿಗೆ ಭಯಪಡುವ ಕಾರಣವಿಲ್ಲ. ಇಂಥವರ ಮಹೋತ್ಸವಗಳನ್ನು ತಪ್ಪದೆ ಪ್ರತಿವರ್ಷ ಕನ್ನಡಿಗರು ಮಾಡುತ್ತ ನಡೆದರೆ, ರಕ್ತದ ಕಣಕಣಗಳಲ್ಲಿ ಸ್ಫೂರ್ತಿಯ ಸೆಲೆಗಳು ಒಸರುವವು ತದ್ಭಾವನೆಯ ಅಮೃತವು ನಾಡಿನ ಒಡಲನ್ನು ಚೈತನ್ಯಮಯವಾಗಿ ಮಾಡಿಬಿಡುವುದು; ಹೇಡಿತನವು ಅಳಿಯುವುದು; ಕ್ರೂರತನದ ಕಿಡಿಯು ಮೂಡುವುದು. ಮನುಷ್ಯನಲ್ಲಿ 'ತನ್ನ ನುಡಿ, ತನ್ನ ನಾಡು' ಎಂಬ ಕುದಿಯು ಬೇಕೇ ಬೇಕು. ಈ ಕುದಿಯಲ್ಲಿಯೇ ಅವನ ಇರವಿನ ಜೀವವಿದೆ; ಈ ಕುದಿಯಲ್ಲಿಯೇ ಅವನ ಜೀವದ ಜೀವಾಳವಿದೆ. ಹೀಗಿದ್ದ ಮೇಲೆ ಈ ಕುದಿಯನ್ನು ಪೋಷಿಸಿ ಕಾಯ್ದಂಥ ವಿಭೂತಿಗಳ ಸ್ಮರಣೆಯನ್ನು ಮಾಡುವದು ನಮ್ಮ ಕರ್ತವ್ಯ. ಪಂಪನು ಕನ್ನಡಕ್ಕೆ ಆದಿ ಕವಿಯೆಂದು ಈಗಂತೂ ಹೆಸರು ಪಡೆದಿದ್ದಾನೆ. ಅವನ ಉತ್ಸವವನ್ನು ಮಾಡುತ್ತ ಹೋಗುವದು ನಮ್ಮ ನಾಡಿಗೆ ಭೂಷಣ. ಅವನು ನಮ್ಮ ನಾಡಿನ ಪುರಾಣ ಪುರುಷನು. ಅವನು 'ಆದಿಪುರಾಣ'ವನ್ನು ಬರೆದು ಈ ಕಾರ್ತಿಕಕ್ಕೆ ೯೮೬ ವರುಷಗಳಾದವು. ಈ ಗ್ರಂಥರತ್ನವು ಕಾರ್ತಿಕದಲ್ಲಿ ಹುಟ್ಟಿರುವದರಿಂದ, ಅದೇ ಮಾಸವು ಅವನ ಸ್ಮಾರಕಕ್ಕಾಗಿ ನಮಗೆ ಪವಿತ್ರವಾದುದೂ ಪ್ರಶಸ್ತವಾದುದೂ ಆಗಿರುತ್ತದೆ

“ಕನ್ನಡಿಗ”ನಿಗೆ ಸಹಾಯ.

ಗದಗಿನ ಶ್ರೀ. ಪಂಡಿತ ಶಂಕರರಾಯರು ೫ ರೂ, ಕೊಟ್ಟು ಉಪಕಾರಕರ್ತೃಗಳಾಗಿದ್ದಾರೆ; ಸೋಮವಾರ ಪೇಟೆಯ ಶ್ರೀ. ಜಿ. ಎಸ್. ರಘುನಾಥಯ್ಯನವರೂ ದೇವಕೋಟೆಯ ಶ್ರೀ. ಸಿ ದೇವಪ್ಪ ಹೆಗಡೆಯವರೂ, ನರಗೂರದ ಸಬ್‌ಡಿವಿಜಿಯರ ಶ್ರೀ. ನಂಜಪ್ಪನವರೂ ಒಬ್ಬೊಬ್ಬ ಚಂದಾದಾರನನ್ನು “ಕನ್ನಡಿಗ”ನಿಗಾಗಿ ಕೂಡಿಸಿಕೊಟ್ಟಿರುವರು

ಸ್ವೀಕಾರ.

ಪರಿವಾರ ಪತ್ರಿಕೆ:—ಶ್ರೀ ಬಿ ಆರ್. ಚಕ್ರವರ್ತಿಯವರು ಇದರ ಸಂಪಾದಕರು ಮೈಸೂರು ಪರಿವಾರ ಸಂಘದವರು ಪ್ರಕಾಶಕರು. ವಾ. ವರ್ಗಣಿ- ೧-೪-೦ ಶ್ರೀಮನ್ಮೈಸೂರ ಮಹಾರಾಜರ ರಜತ ಮಹೋತ್ಸವದ ಜ್ಞಾಪಕಾರ್ಥವಾಗಿ ಹೊರಟ ಈ ಮಾಸ ಪತ್ರಿಕೆಯ ಮೊದಲನೇ ಸಂಚಿಕೆಯು ಕೈ ಸೇರಿದೆ. ವಿದ್ಯಾ- ಕೃಷಿ ಮೊದಲಾದ ವಿಷಯಗಳೂ ವಿಶೇಷತಃ ಸಂಸ್ಥಾನದ ವರ್ಗಾವರ್ಗಗಳೂ ಇದರಲ್ಲಿ ಬರುವವೆಂದು ಹೇಳಿರುವರು. ಸದ್ಯದ ಸಂಚಿಕೆಯ ಪುಟಗಳನ್ನು ತಿರುವಿ ಹಾಕಿದರೆ, ಸ್ಥಾನಿಕ ವಿಷಯಗಳ ಕಡೆಗೆ ಹೆಚ್ಚು ಗಮನಕೊಡುವಂತೆ ತೋರುತ್ತದೆ. ಅಖಿಲ ಭಾರತಕ್ಕೆ ಸಂಬಂಧಿಸಿದ ವಿಷಯಗಳನ್ನು ಸೇರಿಸಿ ವಿಷಯ- ವಿವಿಧತೆಯನ್ನು ಹೆಚ್ಚಿಸಬೇಕು. ಏಕೀಕರಣ- ವಿಶ್ವವಿದ್ಯಾಲಯ ಇವೇ ಮೊದಲಾದ ಕರ್ನಾಟಕದ ಹಿತಕ್ಕೆ ನಿಕಟವಾಗಿ ಸಂಬಂಧಿಸಿದ ವಿಷಯಗಳಿಗಾದರೂ ಆಸ್ಪದಕೊಡಬೇಕು. 'ಮೊ [illegible]' 'ಹರಾಜಿ'- 'ಬೆಲಾವತ್'- 'ಶೆರಫಿನ್'- ಮೊದಲಾದ ಅಪರಿಚಿತ ಅಸಾಧು ಪ್ರಯೋಗಗಳಿಗೆ ಕೊರತೆಯಿಲ್ಲ. ಭಾಷೆಯು ಹೆಚ್ಚು ಶುದ್ಧವಾಗಿಯೂ ವಿಶೇಷತಃ ಶೈಲಿಯು ಹೆಚ್ಚು ಮನೋಹರವಾಗುವಂತೆಯೂ ಯತ್ನ ಮಾಡುವದು ಅವಶ್ಯವೆಂದು ತೋರುವದು. ಸುಲಭ ಬೆಲೆಯ ಈ ಮಾಸಿಕಕ್ಕೆ ಭಾಷಾಭಿಮಾನಿಗಳು ಆಶ್ರಯಕೊಡುವರೆಂದು ನಮ್ಮ ನಂಬಿಗೆ.

— ಶಾ

(೧) ವ್ಯಾಪಾರ ಅಂದರೇನು? (೨) ಲಕ್ಷ್ಮೀಬಾಯಿ (೩) ಸುದಾಮ ಚರಿತ್ರೆ (೪) ಬನಶಂಕರಿ. (೫) ಎಮ್. ಸಿದ್ದಪ್ಪ ಇವರ ಕ್ಯಾಲೆಂಡರ ಇವುಗಳ ವಿಮರ್ಶೆ ಯಥಾವಕಾಶವಾಗಿ.

ಪ್ರಾರ್ಥನಾ— (ಸಂಪಾದಕ, ಶ್ರೀ. ಬಿ. ದೇಶಪಾಂಡೆ ಬಿ. ಎ. ಎಲ್. ಎಲ್. ಬಿ. ವಾ. ವ. ೨ ರೂ. ಅಂಚೆ ವೆಚ್ಚ ಸಹ.)

'ಪ್ರಾರ್ಥನಾ' ಎಂಬ ನೂತನ ವಾರಪತ್ರಿಕೆಯ ಮೊದಲನೆಯ ಸಂಚಿಕೆಯು ನಮ್ಮ ಕೈಸೇರಿದೆ. ಅದರ ಉದ್ದೇಶವು ಆಧ್ಯಾತ್ಮಿಕದ ತಳಹದಿಯ ಮೇಲೆ ನಮ್ಮ ನಾಡಿನ ಕಟ್ಟಡವನ್ನು ಕಟ್ಟುವದಿದೆ ಈ ಗುರಿಯೇನು ಹೊಸದಲ್ಲವೆಂದು ನಾವು ಹೇಳಬಲ್ಲೆವು. ಆದರೆ ಇದೇ ಉದ್ದೇಶದಿಂದಲೇ ಹೊರಟ ಪತ್ರಿಕೆಗಳಿಲ್ಲವಾದುದರಿಂದ, ಇದಕ್ಕೆ ಇದ್ದು, ಬಾಳಿ ಬೆಳೆಯಲು ಅವಕಾಶವಿದೆ. ಭಾಷೆಯ ತಪ್ಪುಗಳು ಬಹಳವಾಗಿರುವವು ನಮ್ಮ ನಾಡಿನ ಏಳಿಗೆಗೆ ಸುಂದರವಾದ ನುಡಿಯು ಬೇಕೆಂಬ ಮಾತನ್ನು ಸಂಪಾದಕರು ಮರೆಯತಕ್ಕದಲ್ಲ. ಬೆಳಗಾವಿಯಲ್ಲಿ ಕನ್ನಡ ಪತ್ರ ಹೊರಡಿಸಿದ್ದಕ್ಕಾಗಿ ಸಂಪಾದಕರನ್ನು ನಾವು ಮನಮುಟ್ಟಿ ಅಭಿನಂದಿಸುತ್ತೇವೆ. ಕನ್ನಡ ಚಳವಳಿಯನ್ನು ಬೆಳಗಾವಿಯಲ್ಲಿ ನಡೆಯಿಸಿ, ಅದನ್ನು ಫಲದ್ರೂಪಿಯಾಗಿ ಮಾಡಲು ಸಂಪಾದಕರು ಕಂಕಣಬದ್ಧರಾಗಬೇಕೆಂದು ನಮ್ಮ ಸೂಚನೆ

ರಾಜಕೀಯ ಸುಧಾರಣಾ ಮಂಡಳದಲ್ಲಿ ಭಾರತೀಯರಿಗೆ ಪ್ರವೇಶವಿಲ್ಲ!

೧೦ ವರ್ಷಗಳಲ್ಲಿ ಕಾಯದೇ ಮಂಡಲಗಳು ಮಾಡಿದ ಕಾರ್ಯವೆಂದರೆ ಗಾಳಿಗೆ ಗುದ್ದಿ ಮೈ ನೋಯಿಸಿಕೊಂಡಂತೆ!

ಹಿಂದೀ ಮುಖಂಡರನ್ನು ವ್ಹಾಯಿಸರಾಯರು ಆಮಂತ್ರಿಸಿದರು.

ಭಾರತೀಯರ ರಾಜಕೀಯ ಆಕಾಂಕ್ಷೆಗಳನ್ನು ವಿಚಾರಿಸಲು ರಾಯಲ್ ಕಮೀಶನ್ (ಬಾದಶಹರ ವಿಚಾರಣಾ-ಮಂಡಲ) ಬೇಗನೇ ಕೂಡತಕ್ಕದ್ದಿದೆಯಷ್ಟೇ? ಆದರೆ ಈ ಮಂಡಲದಲ್ಲಿ ಭಾರತೀಯರು ನ್ಯಾಯಾಧೀಶರಾಗಿ ಕೂಡುವ ಅವಶ್ಯವಿಲ್ಲವಂತೆ! ಕೇವಲ ಪಾರ್ಲಮೆಂಟದ ಸಭಾಸದರು ಅದರಲ್ಲಿರಬೇಕಂತೆ! ಹೀಗೆ ಮಾಡಿದರೆ ಹಿಂದೀಯರು ಈ ಮಂಡಲಕ್ಕೆ ಬಹಿಷ್ಕಾರ ಹಾಕುವರೋ ಏನೋ ಎಂಬ ಹೆದರಿಕೆಯು ಸರಕಾರಕ್ಕೆ ಬಂದಿದೆ ಆದುದರಿಂದ ಭಾರತೀಯ ಮುಂದಾಳುಗಳನ್ನು ವ್ಹಾಯಿಸರಾಯರು ಆಮಂತ್ರಿಸಿ, ದಿಲ್ಲಿಯಲ್ಲಿ ಅವರೊಡನೆ ರಹಸ್ಯವಾಗಿ ಆಲೋಚನೆ ಮಾಡಿದರು. ಈ ಬಗ್ಗೆ ವಿಶದವಾದ ಸಂಗತಿಗಳು ಪ್ರಕಟವಾಗಿಲ್ಲ. ಆದರೂ ಭಾರತೀಯರು ಈ ಮಂಡಳದಲ್ಲಿ ಇರದಿದ್ದರೂ ಯಾರೂ ಆ ಬಗ್ಗೆ ಕೋಪಗೊಳ್ಳಬಾರದೆಂದೂ, ಹೀಗೆ ಕೋಪಗೊಳ್ಳದಿದ್ದರೆ, ಸಂಯುಕ್ತ ಮತದಾರ ಪದ್ಧತಿಯು ಆಚರಣೆಯಲ್ಲಿ ಬರುವಂತೆ ಪ್ರಯತ್ನಿಸುವೆವೆಂದೂ ವ್ಹೈಸರಾಯರು ಮುಂದಾಳುಗಳಿಗೆ ಹೇಳಿ, ಅಂತೆ ಕೋರಿಸಿ, ಅವರ ಮನವನ್ನೊಲಿಸಿಕೊಳ್ಳಲು ಪ್ರಯತ್ನಿಸಿದರಂತೆ! ಇದು ಸಾಧ್ಯವಾಗದಿದ್ದರೆ ಮುಸಲ್ಮಾನರನ್ನು ಹಿಂದೂ ಜನರಿಂದ ವಿಂಗಡಿಸಿ, ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುವ ವಿಚಾರವನ್ನೂ ಸರಕಾರವು ಮಾಡಿದೆಯಂತೆ! ಕಡೆಗೆ ಏನೇನಾಗುವದೋ ನೋಡಬೇಕು.

ಬಾಗಲಕೋಟೆ ಕೋ. ಅ ಪರಿಷತ್ತಿನ ಲೆಕ್ಕ!

ದಿ ಬಾಂಬೆ ಕೋ ಆಪರೇಟಿವ್ಹ ಇನ್‌ಸ್ಟಿಟ್ಯೂಟ ಬ್ರ್ಯಾಂಚ ಬಾಗಲಕೋಟೆ ಇವರ ನೇತೃತ್ವದ ಕೆಳಗೆ ಕಳೆಗಿಯಲ್ಲಾದ ಬಾಗಲಕೋಟೆ ಕೋ ಆಪರೇಟಿವ್ಹ ಪರಿಷತ್ತಿನ ಸಂಬಂಧದಿಂದ ಆದ ಖರ್ಚಿನ ವಿಶದವಾದ ಜಮಾಖರ್ಚವನ್ನು ಜಾಹೀರ ರೀತಿಯಿಂದ ಪ್ರಸಿದ್ಧ ಮಾಡಬೇಕೆಂತ ವಿನಂತಿ ಅದೆ. ಒಬ್ಬ ಓದುಗ

ನಮ್ಮ ನಿರ್ಭಾಗ್ಯ ಕರ್ನಾಟಕದ ಪತ್ರವು.

ದೀಪಾವಳಿಯ ಪೂಜಾ ಪತ್ರಿಕೆಗಳು ಹೆಚ್ಚಾಗಿ ಮರಾಠಿಯವರದ್ದವರೂ, ಕೆಲವರು ಕನ್ನಡದಲ್ಲಿ ಮುದ್ರಿಸಲು ಉಪಕ್ರಮಿಸಿದ್ದು ಸಂತೋಷ. ಕರ್ನಾಟಕದ ಉತ್ಸವಗಳು ಇತ್ತಿತ್ತ ಹೆಚ್ಚುತ್ತಲಿದ್ದುದು ಅಭಿಮಾನದ ಸಂಗತಿಯಾಗಿದ್ದರೂ, ಆ ಉತ್ಸವದ ಕಾರ್ಯಕ್ರಮಗಳೆಲ್ಲ ಮರಾಠಿಯಲ್ಲಿ ಪ್ರಕಟವಾಗುತ್ತಿರುವದು ವಿಚಿತ್ರವೇ ಸರಿ. ಕನ್ನಡ ಮುಖಂಡರು ಇತ್ತ ಗಮನಿಸುವರೋ?

ಹೈದ್ರಾಬಾದಿಗೆ ಕನ್ನಡ ನಾಟಕಗಳು ಬಂದಿರಲೇಯಿಲ್ಲ. ಆದರೆ ದತ್ತಾತ್ರೇಯ ನಾಟಕ ಮಂಡಲದವರು ಕನ್ನಡ ಅಭಿಮಾನದಿಂದ ಇಲ್ಲಿಯ ಕನ್ನಡಿಗರ ಆಮಂತ್ರಣವನ್ನು ಸ್ವೀಕರಿಸಿ, ಬಂದು ನಾಲ್ಕು ನಾಟಕಗಳನ್ನು ಆಡಿದರು. ಕರ್ನಾಟಕ ಸಂಘಕ್ಕೆ ಒಂದು ನಾಟಕವನ್ನು ಧರ್ಮಾರ್ಥವಾಗಿ ಆಡಿದರು. ಆಗ ೭೦೦ ರೂ. ಆದಿನ ಉತ್ಪನ್ನವಾಯಿತು. ಕನ್ನಡಿಗರಲ್ಲಿ ಈ ಕನ್ನಡ ನಾಟಕಗಳಿಂದ ಕನ್ನಡಾಭಿಮಾನವು ಹೆಚ್ಚಾಗಿದೆ. ಮರಾಠಿಗರು ಸಹ ಕನ್ನಡ ನಾಟಕಗಳನ್ನು ನೋಡಹತ್ತಿದ್ದಾರೆ. ಉರ್ದೂ, ತೆಲಗು ಜನರು ಸಹ ಕಿಕ್ಕಿರಿದು ನೆರೆಯುತ್ತಲಿದ್ದರು. ಕರ್ನಾಟಕತ್ವದ ವಾತಾವರಣವನ್ನು ಹೈದರಾಬಾದದಲ್ಲಿ ಹೆಚ್ಚಿಸಿದ್ದಕ್ಕಾಗಿ ಕರ್ನಾಟಕ ಸಂಘದವರು ನಾಟಕಾಲಂಕಾರ ಸದಾಶಿವರಾಯರಿಗೆ ಒಂದು ಮಾನಪತ್ರವನ್ನು ಸಮರ್ಪಿಸಿದರು ಹೈದ್ರಾಬಾದಿನಲ್ಲಿಯೂ, ಕಲ್ಬುರ್ಗಿಯಲ್ಲಿಯೂ ನಮ್ಮ ಮಿತ್ರರಾದ ಕೊಪ್ಪಳ ಜಯರಾಮಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಕರ್ನಾಟಕ ಸಂಘಗಳಿಗೆ, ಗರುಡರು ಕೀರ್ತಿ ತಂದುದು ಒಳ್ಳೇ ಅಭಿಮಾನದ ಮಾತು.

ನಮ್ಮ ಮುದ್ದೇಬಿಹಾಳ ಪತ್ರವು.

ವಿಜಾಪುರ ಜಿಲ್ಲೆಯಲ್ಲಿ ಸುಶಿಕ್ಷಿತ ಜನವಸತಿಯುಳ್ಳ ಊರುಗಳಲ್ಲಿ ಮುದ್ದೇಬಿಹಾಳವು ಒಂದಾಗಿರುವದು. ಆದರೆ ಸಾರ್ವಜನಿಕ ಕಾರ್ಯಗಳಲ್ಲಿ ಮಾತ್ರ ಇದರ ನಂಬರವು ಕಡೆಯದಿರುವದು. ಇಲ್ಲಿಯ ವಕೀಲರು ಯಾವ ಪ್ರಕಾರದ ಸಾರ್ವಜನಿಕ ಕಾರ್ಯಗಳಲ್ಲಿಯೂ ಮುಂದಾಗುವದಿಲ್ಲ ಅಧಿಕಾರಿಗಳಲ್ಲಿ ಲಾಂಗೂಲ ಚಾಲನಮಾಡುವದರಲ್ಲಿ ಮಾತ್ರ ನಾಮುಂದೆ ನೀಮುಂದೆ ಎಂದು ಹೆಣಗಾಡುತ್ತಿರುವರು. ಇದಕ್ಕಾಗಿ ಈ ವಕೀಲರ ಸಮೂಹದಲ್ಲಿ ಮನಸ್ತಾಪ ಬೆಳೆದಿರುವದು. ಈ ಮನಸ್ತಾಪವು ಹಿಂದೆ ಲೋಕಲಬೋರ್ಡದ ಇಲೆಕ್ಷನದಲ್ಲಿ ಸೇರಿ ಮಿ॥ ದೊಡ್ಡಿಹಾಳರವರ ವಿರುದ್ಧವಾಗಿ ತಾಲೂಕ ಲೋಕಲ್ ಬೋರ್ಡಿನ ಪ್ರೆಸಿಡೆಂಟ ಸ್ಥಳಕ್ಕೆ ನಿಂತ ರಾ॥ ಸಾ॥ ಮೊಟಗಿಮಠರ ಕೊರಳಲ್ಲಿ ವಿಜಯದ ಮಾಲೆಯನ್ನು ಹಾಕಿ ಮಿ॥ ದೊಡ್ಡಿಹಾಳರವರ ಎಲ್. ಎಲ್. ಬಿ. ಪದವಿಯ ಮಾನವನ್ನು ಕಳೆಯಿತು. ಆದರೆ ತನ್ನ ವ್ಯವಸಾಯ ಬಂಧುವಿನ ಎಲ್. ಎಲ್. ಬಿ. ಯನ್ನು ನಿಸ್ತೇಜಮಾಡುವ ಕಾರ್ಯದಲ್ಲಿ ಟೊಂಕಕಟ್ಟಿದ ವಕೀಲ ಮಹಾಶಯರ ಕೈಯಲ್ಲಿಯೇ ಇಲ್ಲಿಯ ಸಾರ್ವಜನಿಕ ವಾಚನಾಲಯದ ಸೂತ್ರಗಳು ಈಗ ನಾಲ್ಕಾರು ವರ್ಷಗಳಿಂದ ಇದ್ದರೂ ಆ ವಾಚನಾಲಯದ ವ್ಯವಸ್ಥೆಯಲ್ಲಿ ಸುಧಾರಣೆಯನ್ನು ಮಾಡದಿದ್ದರೂ ತಮ್ಮ ಕಡೆಗೆ ತೆಗೆದುಕೊಳ್ಳುವಾಗ ಇದ್ದ ವ್ಯವಸ್ಥೆಯನ್ನು ಸಹ ಕಾಯುವದಾಗಲಿಲ್ಲದು.

ಕರ್ನಾಟಕದಲ್ಲಿ ಅತಿ ಹೆಸರು ಹೊಂದಿ ಮೆರೆದ ವಿಜಯನಗರದ ಸಾಮ್ರಾಜ್ಯದ ಸಮಾಧಿಯು (ಸುಪ್ರಸಿದ್ಧ ತಾಳೀಕೋಟೆ ಕಾಳಗದಿಂದ) ರಕ್ಕಸಗಿ ತಂಗಡಗಿ ಈ ಗ್ರಾಮಗಳ ನಡುವೆ ಆಗಿರುವದು. ಮತ್ತು ತಾಳೀಕೋಟೆ ರಕ್ಕಸಗಿ ತಂಗಡಗಿ ಈ ಸ್ಥಳಗಳ ನಡುವಿನ ಎಲ್ಲ ಸೀಮೆಯು ಮುದ್ದೇಬಿಹಾಳ ತಾಲೂಕಿನಲ್ಲಿರುವದು. ಅದ್ದರಿಂದ ಈ ತಾಲೂಕವು ಕರ್ನಾಟಕದ ಸ್ಮಶಾನದಂತಿರುವದು ಮತ್ತು ಈ ತಾಲೂಕಿನಲ್ಲಿ ಸ್ಮಶಾನಕ್ಕೆ ತಕ್ಕಂತೆ ಜನರಲ್ಲಿ ಸಾರ್ವಜನಿಕ ಕಾರ್ಯಗಳಲ್ಲಿ ಚಟುವಟಿಕೆಗಳು ಕಂಡು ಬರುವವು ಆದರೆ ಈಗೀಗ ತಮ್ಮ ಸೀಮೆಯು ಕರ್ನಾಟಕದ ಸ್ಮಶಾನವೆಂದು ಹೇಳಿಕೊಳ್ಳುವದಕ್ಕೆ ಯಾಗಲೊಲ್ಲರು. ಇಲ್ಲಿಯ ಜನರಿಗೆ ಕರ್ನಾಟಕದ ಗತ ಇತಿಹಾಸದ ನೆನಪು ಆಗಹತ್ತಿರುವದು. ಈ ತಾಲೂಕಿನ ಜನರಲ್ಲಿ ನವ ಚೈತನ್ಯವನ್ನು ಹುಟ್ಟಿಸಬಾರದೇಕೆ? ನೋಡಬೇಕು. ಶ್ರೀಹರಿಯು ಬೇಗ ಮಾಡಿಸುವನೆಂಬದನು.)

ಕರ್ನಾಟಕವೂ ಬಾಗಲಕೋಟೆಯೂ

ಕರ್ನಾಟಕ ಏಕೀಕರಣ ಪರಿಷತ್ತು ಬಾಗಲಕೋಟೆಯಲ್ಲಿ ಕೂಡುವದು!

ಮಹಾಕವಿ ಪಂಪನ ಸ್ಮಾರಕೋತ್ಸವವು ಬಾಗಲಕೋಟೆಯಲ್ಲಿ ನೆರವೇರಿತು!

ಕನ್ನಡ ಯುವಕರ ಶಿಕ್ಷಣಕ್ಕಾಗಿ ಸ್ವಯಂಸೇವಕರ ಶಿಬಿರವು ಬಾಗಲಕೋಟೆಯಲ್ಲಿ ಪ್ರಾರಂಭವಾಗಿದೆ!

ಪ್ರಭವ ಸಂವತ್ಸರವು ಪ್ರಾರಂಭವಾದಾಗಿನಿಂದ ಬಾಗಲಕೋಟೆಯಲ್ಲಿ ಹೊಸ ಚೈತನ್ಯವು ತುಂಬಿ ಬರುತ್ತಲಿದೆ! ಕರ್ನಾಟಕದ ಸೇವೆಯಲ್ಲಿ ಬಾಗಲಕೋಟೆಯು ಹೆಚ್ಚು ಹೆಚ್ಚು ಕಂಕಣಬದ್ಧವಾಗುತ್ತಲಿದೆ! ಹೊಸ ಸಂವತ್ಸರದಿಂದ ಬಾಗಲಕೋಟೆಯಲ್ಲಿಯ ವಾಙ್ಮಯಭಂಡಾರ ಸಹಾಯದಿಂದ "ಕನ್ನಡಿಗ"ನು ಬಿದಿಗೆಯ ಚಂದ್ರನಂತೆ ಬೆಳೆಯುತ್ತಲಿರುವನು! ಶಿವಾಜಿಯ ತ್ರಿಶತಮಾನದ ಹಾಗೂ ಬಸವೇಶ್ವರರ ಉತ್ಸವಗಳಾದವು. ವಾಙ್ಮಯ ಸಮ್ರಾಟ್ ಕೆರೂರ ವಾಸುದೇವಾಚಾರ್ಯರ ಸ್ಮಾರಕವು ನಡೆಯಿತು! ಬಲಭೀಮ ವಾಚನಾಲಯವು ಕನ್ನಡ ಬಾಲವೀರರಿಂದ ಸ್ಥಾಪಿಸಲ್ಪಟ್ಟಿತು. ವಾಸುದೇವನ ಭಕ್ತರಿಂದ ವಾಸುದೇವ ಆಮೋಘಾರ ನಾಟಕ ಸಂಘವೂ ಸ್ಥಾಪಿಸಲ್ಪಟ್ಟಿತು. ಗಜಾನನೋತ್ಸವವು ವಿಜೃಂಭಣೆಯಿಂದ ನೆರವೇರಿತು! ನವರಾತ್ರಿಯ ಉತ್ಸವವು ಸಾಗಿತು! ಪ್ರಾಣೇಶ ವಿಠ್ಠಲರ ಪುಣ್ಯತಿಥಿಯೂ ಮಧ್ವಜಯಂತಿಯೂ ಬಹಳ ಉತ್ಸಾಹದಿಂದ ಕೊನೆಗೊಂಡವು! ಈ ವರ್ಷ ನಡೆದ ಈ ಎಲ್ಲ ಉತ್ಸವಗಳಿಗೆ ಹೆಚ್ಚು ಶೋಭೆ ಬರುವಂತೆ, ಈ ವಾರದಲ್ಲಿ ಮತ್ತೆ ಕೆಲವು ಸಾರ್ವಜನಿಕ ಕಾರ್ಯಕ್ರಮಗಳಾದವು.

ರವಿವಾರ ಕಾರ್ತಿಕ ಶುದ್ಧ ೫ ದಿನ ನಾಟ್ಯ ಪ್ರೇಮೀ ವಾಸುದೇವ ಆಮೋಘಾರ ನಾಟಕ ಸಭೆಯವರಿಂದ ಶ್ರೀ ಮಹಾಕವಿ ಪಂಪನ ಸ್ಮಾರಕೋತ್ಸವವು ವೆಂಕಟಪೇಟೆಯಲ್ಲಿರುವ ಇವರ ಸಭೆಯ ಕಟ್ಟಡದಲ್ಲಿ ನೆರವೇರಿಸಲ್ಪಟ್ಟಿತು. ಬಾಗಲಕೋಟೆಯಲ್ಲಿ ಕನ್ನಡ ವಾಙ್ಮಯ ಪ್ರೇಮಿಗಳು ಬ್ರಾಹ್ಮಣ ಬ್ರಾಹ್ಮಣೇತರವೆಂಬ ಭೇದವನ್ನು ಬಿಟ್ಟು ಸಭೆಯನ್ನು ಅಲಂಕರಿಸಿದ್ದರು. ಕಾಲಪರಿಸ್ಥಿತಿಯಿಂದ ತಮಗೆ ಅಪರಿಚಿತವಾಗಿದ್ದರೂ ಕನ್ನಡ ವಾಙ್ಮಯ, ಶಿಲಾಶಾಸನ, ಕರ್ನಾಟಕ ಇತಿಹಾಸ, ಕರ್ನಾಟಕ ಸಂಸ್ಕೃತಿಗಳಲ್ಲಿ ಹೆಚ್ಚು ಹೆಚ್ಚು ಮನಸ್ಸು ಹಾಕಿ, ಅವನ್ನೆಲ್ಲ ಅಭ್ಯಾಸಿಸುತ್ತಿರುವ ಶ್ರೀ ಕೌಜಲಗಿ ಹಣಮಂತರಾಯರೂ, ಚಾಲಕರ ಆಮಂತ್ರಣಕ್ಕೆ ಮನ್ನಣೆಕೊಟ್ಟು, ಸಭೆಗೆ ಬಂದಿದ್ದರು. ಬಾಗಲಕೋಟೆಯ ವಾಙ್ಮಯ ಭಕ್ತರಲ್ಲಿ ಹಿರಿಯರಾದ ಶ್ರೀ ಧಾರವಾಡ ವಕೀಲರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಶ್ರೀ ಕೌಜಲಗಿ ಗಜೇಂದ್ರಗಡ ಮೊದಲಾದವರ ಭಾಷಣಗಳಾದವು. ಮುಂದಿನ ಉತ್ಸವದೊಳಗಾಗಿ ಪಂಪನ ಗ್ರಂಥಗಳನ್ನೋದಿ ಅವುಗಳಲ್ಲಿಯ ಸ್ವಾದವನ್ನು ಕನ್ನಡಿಗರಿಗುಣಿಸಲು ಕೆಲ ಭಕ್ತರು ಸ್ವಯಂ ಸ್ಫೂರ್ತಿಯಿಂದ ಸಿದ್ಧರಾಗಿ ಮುಂದೆ ಬಂದುದೇ, ಈ ಉತ್ಸವದ ಪ್ರತ್ಯಕ್ಷ ಫಲವು! ಕಡೆಗೆ ಆಮೋಘಾರ ಸಭೆಯವರು ವಾಸುದೇವಾಚಾರ್ಯರ "ಪತಿವಶೀಕರಣ" ನಾಟಕದಲ್ಲಿಯ ಕೆಲವು ನೋಟಗಳನ್ನು ಸಭಿಕರೆದುರಿನಲ್ಲಿ ಅಭಿನಯಿಸಿ ತೋರಿಸಿದರು.

× × ×

ಬಾಗಲಕೋಟೆಯ ಕರ್ನಾಟಕ ಏಕೀಕರಣ ಸಭಾಚಾಲಕರು ಕಾರ್ಯಕಾರೀ ಮಂಡಲದವರು ಬುಧವಾರ ದಿನ "ಕನ್ನಡಿಗ"ನ ಕಾರ್ಯಾಲಯದಲ್ಲಿ ಸಭೆಸೇರಿ, ಕರ್ನಾಟಕದ ಗಡಿನಾಡಿನಲ್ಲಿ ಅನ್ಯಭಾಷೆಯವರಿಂದ ನಡೆದ ಚಳುವಳಿಯನ್ನೂ, ಮುಂಬೈ ಸರಕಾರದವರು ಏಕೀಕರಣವು ಕೇವಲ ವೃತ್ತಪತ್ರದ ಚಳವಳಿಯೆಂದು ನುಡಿದುದನ್ನೂ, ಹಿಂದುಸ್ಥಾನದ ರಾಜಕೀಯ ಸುಧಾರಣೆಗಾಗಿ ರಾಯಲ್ ಕಮೀಶನ್ನವು ಬೇಗನೆ ನೇಮಿಸಲ್ಪಡುವದನ್ನೂ, ಈ ವರ್ಷದಲ್ಲಿ ಕನ್ನಡಿಗರು ಕರ್ನಾಟಕ ಏಕೀಕರಣದ ಬಗ್ಗೆ ಪ್ರಚಂಡವಾದ ಚಳವಳಿಯನ್ನು ಹೂಡದಿದ್ದರೆ, ಕರ್ನಾಟಕ ಏಕೀಕರಣ ಪ್ರಶ್ನೆಯು ಮತ್ತೆ ೧೦ ವರ್ಷಗಳ ವರೆಗೆ ಹಿಂದೆ ಬೀಳುವದೆಂಬುದನ್ನೂ ನೆನೆದು, ಈ ಚಳವಳಿಯನ್ನು ಬಾಗಲಕೋಟೆಯಲ್ಲಿ ರಭಸದಿಂದ ಸಾಗಿಸಬೇಕು; ಹಾಗೂ ಕರ್ನಾಟಕ ಏಕೀಕರಣ ಪರಿಷತ್ತನ್ನು ಜನವರಿ ೧೯೨೮ ರಲ್ಲಿ ಬಾಗಲಕೋಟೆಯಲ್ಲಿ ಕೂಡಿಸಬೇಕು; ಎಂಬದಾಗಿ ನಿರ್ಧರಿಸಿದ್ದಾರೆ. ಈ ಬಗ್ಗೆ ಪೂರ್ವ ಸಿದ್ಧತೆಯೂ ಸಾಗಿದೆ. ಈ ವಿಷಯದಲ್ಲಿಯೂ ಬಾಗಲಕೋಟೆಯಲ್ಲಿಯ ಬ್ರಾಹ್ಮಣ ಬ್ರಾಹ್ಮಣೇತರ ಮುಂದಾಳುಗಳು ಕೂಡಿಯೇ ಕಾರ್ಯಮಾಡುತ್ತಲಿರುವದು ವಿಶೇಷ ಆನಂದ ಸಂಗತಿಯು!!

† † † †

ಮಂಗಳವಾರ ೧ ನೇ ತಾರೀಖಿನಲ್ಲಿ ಕರ್ನಾಟಕ ಸ್ವಯಂಸೇವಕರ ಶಿಕ್ಷಣ ಶಿಬಿರವು ಪ್ರಾರಂಭವಾಯಿತು. ಧಾರವಾಡದ ಸುಪ್ರಸಿದ್ಧ ಮುಂದಾಳುಗಳಾದ ಶ್ರೀ ಜೋಗ ವಿಶ್ವನಾಥರಾಯರು ಈ ಉತ್ಸವಕ್ಕಾಗಿ ಆಮಂತ್ರಿಸಲ್ಪಟ್ಟಿದ್ದರು. ಸಾಯಂಕಾಲದಲ್ಲಿ ಸೇವಾದಲದ ಮೆರವಣಿಗೆಯಾಯಿತು. ಕಲಾದಗಿ ಬೀದಿಯಲ್ಲಿಯ ಭಾಟಿಯಾ ಪರ್ತಕರ ಹೊಸ ಕಟ್ಟಡಗಳಲ್ಲಿ ಜನರೆಲ್ಲ ಕೂಡಿದರು. ಈ ಕಾರ್ಯಕ್ಕೆಸಹ ಬ್ರಾಹ್ಮಣ ಬ್ರಾಹ್ಮಣೇತರವೆಂಬ ಭೇದವನ್ನು ಮುರಿದು ಹಾಕಿ ಎಲ್ಲರೂ ಬಂದಿದ್ದರು! ರಾಷ್ಟ್ರಧ್ವಜವು ಏರಿಸಲ್ಪಟ್ಟ ನಂತರ ಈ ಶಿಬಿರದ ಕಾರ್ಯಕ್ಕೆ ಉತ್ಸಾಹದಿಂದ ಸಹಾಯಮಾಡುತ್ತಲಿದ್ದ ಶ್ರೀ ನರಗುಂದ ವಕೀಲರು ಅಧ್ಯಕ್ಷರ ಪರಿಚಯವನ್ನು ಮಾಡಿಕೊಟ್ಟರು. ಡಾ. ಹರ್ಡೀಕರರು ಸೇವಾದಲದ ಇತಿಹಾಸವನ್ನು ಸಂಕ್ಷಿಪ್ತವಾಗಿ ಹೇಳಿ, ಸದ್ಯದ ಶಿಬಿರದ ಶಿಕ್ಷಣಕ್ರಮವನ್ನು ಜನರಿಗೆ ತಿಳಿಸಿದರು. ಶ್ರೀ. ಆಣಬೂರ, ಮುರಗಯ್ಯಾ ಸ್ವಾಮಿ ಜಂಗಿನ ಹುನಗುಂದದ ದೇಸಾಯಿ ವಕೀಲ ಮೊದಲಾದವರ ಭಾಷಣಗಳಾದವು. ಈ ಸೇವಾದಲದ ವತಿಯಿಂದ ಬಾಗಲಕೋಟೆಯಲ್ಲಿ ಬೇಗನೇ ಸ್ಥಾಪಿಸಲ್ಪಡತಕ್ಕ ವ್ಯಾಯಾಮ ಶಾಲೆಯ ಕಟ್ಟಡಕ್ಕಾಗಿ, ತಾವು ದ್ರವ್ಯಸಹಾಯವನ್ನು ಧಾರವಾಡದ ಜಿಲ್ಲೆಯಿಂದ ಪೂರೈಸಿ

ಕೊಡುವೆವಾಗಿ ಅಧ್ಯಕ್ಷರಾದ ಶ್ರೀ ಜೋಗರು ಹೇಳಿದರು. ಕಡೆಗೆ ಶ್ರೀ ಧಾರವಾಡ ವಕೀಲರು ಆಭಾರಮನ್ನಿಸುವಾಗ್ಗೆ, ಇಷ್ಟೊಂದು ಆಸ್ಥೆಯಿಂದ ಬಾಗಲಕೋಟಿಯಲ್ಲಿ ಈ ಶಿಬಿರವು ಪ್ರಾರಂಭವಾದುದನ್ನು ನೋಡಿ, ತಾವೂ ಈ ಶಿಬಿರದಲ್ಲಿ ಶಿಕ್ಷಣ ಪಡೆದುಕೊಳ್ಳಬೇಕೆಂಬ ವಿಚಾರವು ಒಂದರೂ, ಅದು ಸ್ಥೂಲ ದೇಹದ ಮೂಲಕ ತಮಗೆ ಅಶಕ್ಯವಾಗಿದೆಯೆಂದು ಹೇಳಿ, ಬಾಗಲಕೋಟಿಯ ಜನರು ಕಿಕ್ಕಿರಿದು ಅಲ್ಲಿ ನೆರೆಯದಿದ್ದುದ್ದಕ್ಕಾಗಿ ಖೇದವನ್ನು ಪ್ರಕಟಮಾಡಿದರು.

ಕೆಳಗೆ ಕಾಣಿಸಿದ ಪ್ರತಿಜ್ಞೆಯನ್ನು ಮಾಡಿ ಈ ಶಿಬಿರವನ್ನು ತರುಣರು ಸೇರಿರುವರು:—

ಹಿಂದುಸ್ಥಾನಿ ಸೇವಾದಲದ

ಪ್ರತಿಜ್ಞೆಯು

ಯಾವ ಆರ್ಯಾವರ್ತದಲ್ಲಿ ಹುಟ್ಟಿ, ಎಲ್ಲಿಯ ಅನ್ನವನ್ನು ಸೇವಿಸುತ್ತ, ನಾನು ಜೀವಿಸುತ್ತಿರುವೆನೋ ಮತ್ತು ಯಾವ ಭೂಮಿಯ ಮಣ್ಣಿನಲ್ಲಿಯೇ ನಾನು ಕೂಡಿ ಹೋಗುವವನಿರುವೆನೋ ಆ ದೇಶದಲ್ಲಿ ಹುಟ್ಟಿ ಬೆಳೆಯುತ್ತಿರುವ ಎಲ್ಲ ಪ್ರಾಣಿಮಾತ್ರದ ಸೌಖ್ಯದ ಸಲುವಾಗಿ ಯಾವದೇತರದ ಸ್ವಾರ್ಥವನ್ನು ಲಕ್ಷಿಸದೆ, ಹಿಂದುಸ್ಥಾನಿ ಸೇವಾದಲದ ವತಿಯಿಂದ ಹೆಣಗಾಡಲಿಕ್ಕೆ ನಾನು ಸಿದ್ಧನಿದ್ದೇನೆ. ಇಂತು ಹೋರಾಡಲಿಕ್ಕೆ ಬೇಕಾಗುವ ನೈತಿಕ, ಮಾನಸಿಕ ಮತ್ತು ಶಾರೀರಿಕ ಸಾಮರ್ಥ್ಯವನ್ನು ದಯಪಾಲಿಸೆಂದು ಸರ್ವಶಕ್ತಿಯುಳ್ಳ ಪರಮಾತ್ಮನನ್ನು ಅನನ್ಯಭಾವದಿಂದ ಬೇಡಿಕೊಳ್ಳುತ್ತೇನೆ. ಮತ್ತು ಅವನನ್ನೇ ಸಾಕ್ಷಿಯಾಗಿಟ್ಟು ಇಂಥ ಸಾಮರ್ಥ್ಯವನ್ನು ಬೆಳಸಿಕೊಳ್ಳಲಿಕ್ಕೂ ಧರ್ಮಕ್ಕೆ ಹಾಗೂ ದೇಶಕ್ಕೆ ಅವಶ್ಯವಾಗಿರುವ ನಿಷ್ಕಾಮ ಸೇವೆಯನ್ನು ಮಾಡಲಿಕ್ಕೂ ನಾನು..........

....

ಸಿದ್ಧನಿದ್ದೇನೆಂದು ಈ ರಾಷ್ಟ್ರಧ್ವಜದ ಕೆಳಗೆ ನಿಂತು ನಿಮ್ಮೆಲ್ಲರ ಎದುರಿನಲ್ಲಿ ಈ ಪ್ರತಿಜ್ಞೆಯನ್ನು ಮಾಡುತ್ತೇನೆ.

ಸ್ಥಳ:— ....

ತಾರೀಖು:— ....

ಶಿಬಿರದಲ್ಲಿ ೨೪ ತಾಸುಗಳವರೆಗೆ ಶಿಕ್ಷಣ ಪಡೆಯತಕ್ಕವರ ಹೆಸರು:—

೧ ಕೃಷ್ಣರಾವ ಜೋರಾಪೂರ (ಶಿಬಿರಾಧಿಪತಿ) ೨ ಮಂತ್ರಿ ಮುಂಬಯಿ ೩ ರವಿಶಂಕರ ಅಯ್ಯರ ಬೆಂಗಳೂರ ೪ ರಾಜಗುರುಜಿ ಕಾಶಿ ೫ ಕುಂದಾಪೂರ ಹಾನಗಲ್ಲ ೬ ದೇಸಾಯಿ ಹಾನಗಲ್ಲ ೭ ದೇಶಪಾಂಡೆ ಹಾನಗಲ್ಲ ೮ ಮಹಾಶಬ್ದೆ ಹುಬ್ಬಳ್ಳಿ ೯ ಶರ್ಮಾ ಮೈಸೂರ ೧೦ ಮಹಿಷಿ ಶಿಂಹಟ್ಟಿ ೧೧ ಹಳ್ಳೆಪ್ಪನವರ ಕಲಘಟಗಿ ೧೨ ಪದಕಿ ಬಾಗಲಕೋಟಿ ೧೩ ಸೋಲಾಪೂರ ಬೆಳಗಾಂವ ೧೪ ದೆಶಪಾಂಡೆ ಕೊಲ್ಲಾಪುರ ೧೫ ಕಿಣಗೀಕರ ಅಕ್ಕಲಕೋಟೆ ೧೬ ಜೋರಾಪೂರ ಬಾಗಲಕೋಟಿ ೧೭ ಮಂಗಳವೇಢೆ ಬಾಗಲಕೋಟಿ ೧೮ ಕುಲಕರ್ಣಿ ಬಾಗಲಕೋಟಿ.

ಶಾರೀರಿಕ ಶಿಕ್ಷಣದ ಬಗ್ಗೆ ಮಾತ್ರ ಶಿಕ್ಷಣ ಪಡೆಯಲು ಒಟ್ಟು ಬಾಗಲಕೋಟೆಯ ೫೦ ಜನರು ಹೋಗುತ್ತಲಿರುವರು. ಅವರಲ್ಲಿ ೬ ವರ್ಷದಿಂದ ೪೫ ವಯಸ್ಸಿನವರಗೂ ಜನರಿರುವರು. ಇಲ್ಲಿಯ ವ್ಯಾಪಾರಸ್ಥರಾದ ಮುರಗಯ್ಯಾ ಸ್ವಾಮಿ ಜಂಗಿನ, (ತಮ್ಮ ಪುತ್ರನೊಂದಿಗೆ) ನಾಗಪ್ಪಾ ಬ್ಯಾಳಿ, ವಕೀಲರಾದ ಕಣಬೂರ ಗೋವಿಂದರಾವ, ಭಬ್ಬೀ ಶ್ರೀನಿವಾಸರಾವ ಬಸವೇಶ್ವರ ಹೈಸ್ಕೂಲದ ಶಿಕ್ಷಕರಾದ ದೇವೂರ ಕಲ್ಲಪ್ಪಾ ಹಾಗೂ ಗಜೇಂದ್ರಗಡ ಶ್ಯಾಮರಾವ ಇವರೇ ಮೊದಲಾದವರು ಸಹ ಬಹಳ ಆಸ್ಥೆಯಿಂದ ಶಿಕ್ಷಣ ಹೊಂದುತ್ತಲಿದ್ದುದು ವಿಶೇಷ ಆನಂದದ ಸಂಗತಿ!

ವ್ಯಾಯಾಮ ಶಾಲೆಯ ಕಟ್ಟಡದ ತಳಹದಿಯ ಸಮಾರಂಭವನ್ನು ಇದೇ ೨೦ ನೇ ತಾ|| ನೊಳಗಾಗಿ ನೆರವೇರಿಸಬೇಕೆಂದೂ, ಅದಕ್ಕೆ ಹೈದ್ರಾಬಾದದ ಸುಪ್ರಸಿದ್ಧ ರಾಷ್ಟ್ರೀಯ ಸೇವಕರಾದ ಶ್ರೀ. ವಾಮನ ನಾಯಕರನ್ನು ಆಮಂತ್ರಿಸಬೇಕೆಂದೂ ನಿರ್ಧಾರವಾಗಿದೆ. ಕಟ್ಟಡಕ್ಕಾಗಿ ಕನಿಷ್ಟ ೪ ಸಾವಿರ ರೂ. ಗಳು ಬೇಕಾಗುವವು ಈ ಕಾರ್ಯಕ್ಕೆ ಕರ್ನಾಟಕದ ಮುಖಂಡರೆಲ್ಲ ನೆರವಾಗುವರಾಗಿ ನಮ್ಮ ವಿಶ್ವಾಸವಿದೆ.

ನಮ್ಮ ಹುಬ್ಬಳ್ಳಿಯ ಪತ್ರ.

ಶ್ರೀ ಸರಸ್ವತಿ ವಿದ್ಯಾರಣ್ಯ ಧರ್ಮಾರ್ಥ ವಾಚನಾಲಯದ ೫ನೇ ವಾರ್ಷಿಕ ಉತ್ಸವವು ಧಾರವಾಡದ ಕರ್ನಾಟಕ ಟಾಯಿಮ್ಸದ ಸಂಪಾದಕರಾದ ಶ್ರೀ. ಶಿವಲಿಂಗ ಶಾಸ್ತ್ರಿಗಳ ಅಧ್ಯಕ್ಷತೆಯ ಕೆಳಗೆ ನೆರವೇರಿತು. ಅಧ್ಯಕ್ಷರು ವಾಚನಾಲಯವನ್ನು ನೋಡಿ ಸಂತೋಷಿಸಿ, ವಾಚನಾಲಯದವರು ಯಾವದಾದರೊಂದು ಪುಸ್ತಕವನ್ನು ಮುದ್ರಿಸುವದಾದರೆ ಅದರಲ್ಲಿ ೮೦ ರೂಪಾಯಿಗಳ ವರೆಗೆ ಬಿಟ್ಟು ಮುದ್ರಿಸಿ ಕೊಡುವೆನೆಂದು ಅಭಿವಚನವನ್ನು ಕೊಟ್ಟಿರುವರು.

ಇಲ್ಲಿಯ ಭಾರತ ಸಂಗೀತ ಶಾಲೆಯ ೩ ನೇ ವಾರ್ಷಿಕ ಉತ್ಸವವು ಧಾರವಾಡದ ಶ್ರೀ. ಪಿತ್ರೆ ಯವರ ಅಧ್ಯಕ್ಷತೆ ಕೆಳಗೆ ವಿಠೋಬನ ಮಂದಿರದಲ್ಲಿ ನೆರವೇರಿತು.

ಭಾರತ ಮಿಲ್ಲಿನ ೩೦೦ ನೌಕರರು ಪಗಾರವನ್ನು ಹೆಚ್ಚಿಸಬೇಕೆಂದು ಕಟ್ಟುಮಾಡಿರುವರು. ಅವರಲ್ಲಿ ಸೆಟಲ್‌ಮೆಂಟಿನ ೩೦ ಜನರಷ್ಟೆ ಕೆಲಸಕ್ಕೆ ಹೋಗುತ್ತಿರುವರು.

ಪುಣೆಯ ಸೇವಾಸದನದ ವತಿಯಿಂದ ಶ್ರೀ. ಪುಟ್ಟಮ್ಮ ನಾಯುಡು ಇವರು ದೀಪಾವಳಿ ಫಂಡನ್ನು ಕೂಡಿಸುವದಕ್ಕೆ ಬಂದಿರುತ್ತಾರೆ.

ನಮ್ಮ ಬೆಳಗಾಂವಿಯ ಪತ್ರ.

ಇಲ್ಲಿಯ ಮರಾಠಾ ಸುಧಾರಣಾ ಮಂಡಳದವರು ಸಭೆಕೂಡಿಸಿ ಗೊತ್ತುವಳಿಯನ್ನು ಮಾಡಿದ್ದು ಹೀಗಿದೆ.— ಬೆಳಗಾಂವಿ ಮತ್ತು ಚಿಕ್ಕೋಡಿ ತಾಲೂಕಗಳಲ್ಲಿಯ ಕೋರ್ಟಿನಲ್ಲಿಯ ಭಾಷೆಯು ಮರಾಠಿಯಲ್ಲಿ ಇರಬೇಕೆಂದು ಅಪ್ಪಣೆ ಕೊಡಿಸಿದ ನ್ಯಾಯಮೂರ್ತಿ ಮಡಗಾಂವಕರರವರ ಅಭಿನಂದನ; ಇದರಂತೆ ಹುಕ್ಕೇರಿ ಮತ್ತು ಅಥಣಿ ತಾಲೂಕಗಳಲ್ಲಿಯ ಕೋರ್ಟಿನಲ್ಲಿಯೂ ಮರಾಠಿ ನಡೆಯಬೇಕೆಂದು ವಿನಂತಿ. ಆದರೆ ಇಲ್ಲಿಯ ಕನ್ನಡಿಗರು ಏನುಮಾಡುತ್ತಲಿದ್ದಾರೆ?

ಖಾನಾಪುರದಲ್ಲಿ (ಬೆಳಗಾಂವಿ) "ಲೋಕಮಿತ್ರ" ಮಾಸಿಕದ ಸಂಪಾದಕರಾದ ಮಿ|| ಸಡೇಕರರ ಅಧ್ಯಕ್ಷತೆಯಲ್ಲಿ "ನಾಗರಿ ಲಿಪಿಯ ಸುಧಾರಕ ಸಂಘ"ವು ಸ್ಥಾಪಿತವಾಗಿರುತ್ತದೆ.

ಕುರಂದವಾಡ ಸಂಸ್ಥಾನದಲ್ಲಿಯ ಪ್ರಮುಖ ಜನರು ಕೂಡಿ ನೇಕನಾಮದಾರ ಸಾಹೇಬರ ಕಡೆಗೆ ಶಿಷ್ಟಮಂಡಳ ಒಯ್ದು, ಕುರಂದವಾಡ ಸಂಸ್ಥಾನದ ಅಜ್ಞಾನ ರಾಜನ ಆಡಳಿತದಲ್ಲಿ "ಕೌನ್ಸಲ್ ಆಫ ರಿಜನ್ಸಿ" ಸ್ಥಾಪನೆ ಮಾಡಬೇಕೆಂದು ಪ್ರಾರ್ಥಿಸುವವರಿದ್ದಾರೆ.

ಕರ್ನಾಟಕದ ತರುಣರ ಶರೀರಬಲವನ್ನು ಬೆಳಸುವ ಸಂಸ್ಥೆಗಳನ್ನು ಸ್ಥಾಪಿಸಲು ಶ್ರೀ. ಜಮುನಾಲಾಲ ಬಜಾಜರಿಂದ ೧೪ ಸಾವಿರ ರೂಪಾಯಿಗಳು ದೇ. ಗಂಗಾಧರರಾವ ದೇಶಪಾಂಡೆಯವರ ಕಡೆಗೆ ಬಂದಿರುವವೆಂದು ವರ್ತಮಾನ. ೧೪ ಸಾವಿರ ರೂ. ಗಂಗಾಧರರಾಯರ ಕಡೆಗೆ ಹೇಗೆ ಬಂದವು? ಅವುಗಳ ವಿನಿಯೋಗವು ಹೇಗಾಗುವದು? ಕರ್ನಾಟಕ ಸಿಂಹವು ಇದನ್ನು ಹೇಳಬಲ್ಲದೊ?

ಮೈ. ದಿವಾನ ಸಾಹೇಬರೂ, ಹಿಂದೂ- ಮುಸಲ್ಮಾನರ ಪ್ರಶ್ನೆಯೂ.

ದೆಹಲಿಯ "ಯಂಗ್ ಮುಸ್ಲಿಮ್" ಪತ್ರಿಕೆಯ ಸಂಪಾದಕರು ಅಪೇಕ್ಷಿಸಿದ ಮೇರೆ ಮುಸ್ಲಿಮ್ ಯುವಕರಿಗೆ ನಮ್ಮ ದಿವಾನ್ ಸಾಹೇಬರು ಒಂದು ಸಂದೇಶವನ್ನು ಕಳುಹಿಸಿರುವರು ಅದರಲ್ಲಿ ಅವರು ಹೇಳಿರುವ ಬುದ್ಧಿವಾದ.—

ನನ್ನ ಬುದ್ಧಿವಾದವು ಮುಖ್ಯವಾಗಿ ಮುಸ್ಲಿಮ್ ಯುವಕರಿಗಾದರೂ, ಹಿಂದೂದೇಶದ ಎಲ್ಲಾ ಯುವಕರಿಗೂ ಇದು ಅನ್ವಯಿಸುತ್ತದೆ. ಏಕೆಂದರೆ, ಭಾರತಭೂಮಿಯಲ್ಲಿ ಜೀವಿಸುವ ಪ್ರತಿಯೊಂದು ಪಂಗಡದವರೂ ಭಾರತಭೂಮಿಯ ಉದ್ಧಾರವಿಷಯದಲ್ಲಿ ಒಂದೇಪಂಗಡದವರಾಗಿದ್ದಾರೆಂಬುದೇ ನನ್ನ ಭಾವನೆ.

ಈಗ ದೇಶವನ್ನುದ್ಧಾರಮಾಡುವ ಕಾರ್ಯವು ಹಿಂದೂ ದೇಶದ ಯುವಕರಮೇಲೆ ಬಿದ್ದಿದೆ ಎಂಬ ಅಭಿಮಾನವು ವೃದ್ಧರ ಮನಸ್ಸಿನಲ್ಲಿ ತುಂಬಿಕೊಂಡಿದೆ. ಈ ಅಭಿಮಾನದಿಂದ, ಕಳೆದ ಶತಮಾನಗಳ ಅನುಭವವನ್ನು ತಿಳಿದು ಅದರ ಮೇರೆ ಕೆಲಸಮಾಡುತ್ತಿರುವವರು ಮುಂದಿನ ಜನಾಂಗಕ್ಕೆ ತಮ್ಮ ಕಾರ್ಯಭಾರವನ್ನು ವಹಿಸಬೇಕು. ಹಿಂದುಸ್ಥಾನದ ಇಂಥಾ ಕಾರ್ಯಭಾರವನ್ನು ವಹಿಸಿಕೊಳ್ಳಲಿಕ್ಕೆ ನಿಮ್ಮಲ್ಲಿ ಧೈರ್ಯ, ಸ್ಥೈರ್ಯ, ಪರಸ್ಪರಾನುರಾಗ, ಬೇರೆ ಮತಗಳಲ್ಲಿ ತಾಳ್ಮೆ, ಇವೆಲ್ಲವೂ ಇವೆಯೋ? ಇದೆಲ್ಲವನ್ನೂ ನೀವು ಆಲೋಚಿಸಬೇಕು.

ಈ ದೇಶವು ತಮ್ಮ ಮತದ ಮತ್ತು ತಮ್ಮ ಪಂಗಡವನ್ನೇ ಉಳಿಸಿಕೊಳ್ಳುವ ಅಲ್ಪಬುದ್ಧಿಯ ಮಾನವರ ಕಾರ್ಯಗಳಿಂದ ಬೇಸತ್ತುಹೋಗಿದೆ. ಈ ಕಾರಣದಿಂದ ಹೇಗೆ ಒಬ್ಬನು ಸ್ವಾರ್ಥಪರತೆಯಿಂದ ದೊಡ್ಡವನಾಗುವದಿಲ್ಲವೋ, ಹಾಗೆಯೇ ಯಾವ ಪಂಗಡವೂ ಸ್ವಾರ್ಥತೆಯಿಂದ ಹೋರಾಡಿ ಖ್ಯಾತಿಹೊಂದಿರುವುದಿಲ್ಲ.

ಯಾವನು ಮಾತೃಭೂಮಿಯುದ್ಧಾರವನ್ನು ಮುಂದಿಟ್ಟು ಶ್ರದ್ಧೆಯಿಂದ ಕೆಲಸಮಾಡುತ್ತಾನೋ ಅತನೇ ತನ್ನ ಪಂಗಡದ ಸೇವೆಯನ್ನೂ ಚೆನ್ನಾಗಿ ಮಾಡಿದಂಥವನಾಗುವನು. ಈ ಅಭಿಪ್ರಾಯಗಳನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು, ಮುಸ್ಲಿಮ್ ಯುವಕರನ್ನು ಪರೀಕ್ಷಿಸಿದರೆ, ಇವರು ಹಿಂದೆ ಬೀಳಲಿಕ್ಕಿಲ್ಲವೆಂದೇ ನನ್ನ ಪೂರ್ಣನಂಬಿಕೆ.

—ಒಕ್ಕಲಿಗರ ಪತ್ರಿಕೆ.

ನನಗೆ ಹೊಳೆವಂತೆ

ಶ್ರೀ ಶೃಂಗೇರಿಯ ಜಗದ್ಗುರುಗಳು ಬೆಂಗಳೂರಿಗೆ ಕಳೆದ ರವಿವಾರ ಆಗಮಿಸಿದಾಗ್ಯೆ, ಮೈಸೂರ ದಿವಾಣರಾದ ಶ್ರೀ ಮಿರ್ಝಾ ಇವರು, ಧೋತರವನ್ನುಟ್ಟು, ಶ್ರೀಗಳ ಆಗಮನ ಕಾಲಕ್ಕೆ ಹೋಗಿ, ಹಾರತುರಾಯಿಗಳನ್ನು ಸಮರ್ಪಿಸಿದರಂತೆ! ಶ್ರೀ ಗುರುಗಳನ್ನು ತಮ್ಮ ಮನೆಗೆ ಪಾದಪೂಜೆಗಾಗಿ ಕರೆಯುವರೆಂಬ ವರ್ತಮಾನವಿದೆ ಹಿಂದೂ-ಮುಸಲ್ಮಾನರಲ್ಲಿ ಐಕ್ಯವೂ ಪ್ರೇಮವೂ ಹೀಗೆ ಮೈಸೂರಲ್ಲಿ ವೃದ್ಧಿಯಾಗುವದೇಕೆ? ಬ್ರಿಟಿಶ್ ಹಿಂದುಸ್ಥಾನದಲ್ಲಿ ಕಲಹವೇ ಹೆಚ್ಚಾಗುವದೇಕೆ? ರಾಜಾಕಾಲಸ್ಯ ಕಾರಣಂ! ಅಷ್ಟೇ!! † ‡ ‡

ಈ ಶ್ರೀಗಳ ಪುರಪ್ರವೇಶ ನಡೆದಾಗ, ವೇಶ್ಯೆಯರು ಮೆರವಣಿಗೆಯಲ್ಲಿ ನೃತ್ಯಗಾಯನಗಳನ್ನು ಹೂಡಿದ್ದರು! ಸನ್ಯಾಸಿಗಳ ಸುಸ್ವಾಗತವನ್ನು ವೇಶ್ಯೆಯರಿಂದ ಮಾಡಿಸಬಹುದೇ ಎಂಬದಾಗಿ ಬೆಂಗಳೂರಲ್ಲಿ ಕೆಲವರು ಕೇಳತೊಡಗಿದರು! "ಶ್ರೀಗಳ ದರ್ಶನಕ್ಕಿಂತ ಹೆಚ್ಚಾಗಿ ಈ ವೇಶ್ಯಾ ಸುಮಂಗಲೆಯರ ದರ್ಶನಕ್ಕಾಗಿ ಜನರು ಬಹಳ ಹೋರಾಡುತ್ತಿದ್ದರಂತೆ!! ಕಾಲಮಹಿಮೆಯಂತೆ ಎಲ್ಲವೂ ಸಾಗಬೇಕೆಂದು ಈ ವಿಚಾರ ಹೋ?

—ಓದುಗ.

ಹಿಂದುಸ್ಥಾನ.

ಹಿಂದುಸ್ಥಾನದ ರಾಷ್ಟ್ರೀಯ ಕ್ರಿಶ್ಚನ್ನ ಮಿಶನ್‌ದವರು, ಹಿಂದುಸ್ಥಾನದ ಔದ್ಯೋಗಿಕ ಪರಿಸ್ಥಿತಿಯನ್ನು ನಿರೀಕ್ಷಿಸಿ, ಅದಕ್ಕೆ ಉಪಾಯಗಳನ್ನು ಗೊತ್ತು ಹಚ್ಚಬೇಕೆಂದು ನಿರ್ಧರಿಸಿದ್ದಾರೆ.

"ಕನ್ನಡಿಗ" ನಿಂದ ದೊರೆಯುವ ಬಹುಮಾನದ ಕೂಟ-ಪ್ರಶ್ನೆ.

ಬಿಡಿಸುವವರಿಗೆ ೨ ರೂಪಾಯಿ ನಗದು ಬಹುಮಾನ.

ಈ ಬಹುಮಾನ ಪಡೆಯಲಿಚ್ಛಿಸುವವರು ಕೆಳಗಿನ ನಿಯಮಗಳಿಗೆ ಬದ್ಧರಾಗಿರಬೇಕು.

(೧) ಬಹುಮಾನೇಚ್ಛುಗಳು 'ಕನ್ನಡಿಗ'ನ ಚಂದಾದಾರರಿರಬೇಕು.

(೨) ಉತ್ತರದೊಡನೆ ಚಂದಾನಂಬರನ್ನು ತಿಳುಹಬೇಕು.

(೩) ಬಂದ ಉತ್ತರಗಳಲ್ಲಿ ನಮಗೆ ಶ್ರೇಷ್ಠನೆಂದು ತೋರಿಬಂದ ಉತ್ತರಕ್ಕೇ ಬಹುಮಾನ ದೊರೆಯುವದು.

(೪) ಶ್ರೇಷ್ಠತೆಯನ್ನು ನಿರ್ಣಯಿಸುವ ಕೆಲಸವು ನಮ್ಮದೇ ಇದ್ದು, ನಮ್ಮ ನಿರ್ಣಯವೇ ಕೊನೆಯ ನಿರ್ಣಯವೆಂದು ತಿಳಿಯತಕ್ಕದ್ದು.

(೫) ಉತ್ತರದೊಡನೆ ೨ ಆಣೆಯ ಪೋಸ್ಟ ಟಿಕೇಟುಗಳನ್ನು ಕಳುಹಿಸತಕ್ಕದ್ದು.

ಕೂಟ ಪ್ರಶ್ನೆಯ ಶಬ್ದ.

ವಿ-ಜ-ಯ-ನ-ಗ-ರ.

ಈ ಶಬ್ದದ ಒಂದೊಂದು ಅಕ್ಷರದಿಂದ ಒಂದೊಂದು ಶಬ್ದವನ್ನು ಮಾಡಿ ಆರು ಶಬ್ದಗಳಲ್ಲಿ ವಿನೋದ ಪೂರ್ಣವಾದ ಒಂದೇ ವಾಕ್ಯವನ್ನು ಮಾಡಬೇಕು. ಮಾದರಿಗಾಗಿ ಒಂದು ಶಬ್ದವನ್ನು ಕೆಳಗೆ ಬಿಡಿಸಿ ತೋರಿಸಿದ್ದೇವೆ.

ಮಾದರಿಯ ಶಬ್ದ.

ವಿ—ಮಾ—ನ—ಪ್ರ—ವಾ—ಸ.

ವಿ- ವಿಶೇಷ, ಮಾ- ಮಾತಾಡುವವರು, ನ- ನಗೆಗಾರರಿದ್ದರೂ, ಪ್ರ-ಪ್ರಮುಖವಾಗಿ ವಾ- ವಾಚಾಲರೇ ಸ- ಸರಿ. ವಿಶೇಷ ಮಾತಾಡುವವರು ನಗೆಗಾರರಿದ್ದರೂ ಪ್ರಮುಖವಾಗಿ ವಾಚಾಲರೇ ಸರಿ.

ಉತ್ತರಗಳನ್ನು ಡಿಸೆಂಬರ ೬ ನೇ ತಾ॥ ನೊಳಗಾಗಿ ಕೆಳಗಿನ ವಿಳಾಸಕ್ಕೆ ಕಳುಹತಕ್ಕದ್ದು:— ಕೂಟ ಪ್ರಶ್ನೆಯ ಸಂಪಾದಕರು.

"ಕನ್ನಡಿಗ" ಕಾರ್ಯಾಲಯ ಬಾಗಲಕೋಟೆ.

ನನ್ನ ಹೆಸರೇನು?

ಕರ್ನಾಟಕದಲ್ಲಿದ್ದರೂ ಜಪಾನಿನಲ್ಲಿಲ್ಲ.
ಕನ್ನಡಿಯಲ್ಲಿದ್ದದೂ ದರ್ಪಣದಲ್ಲಿಲ್ಲ.
ತುದಿಯಲ್ಲಿರದಿದ್ದರೂ ಕುಡಿಯಲ್ಲಿ ಅದೆ.
ಗಗನದಲ್ಲಿದ್ದರೂ ಆಕಾಶದಲ್ಲಿಲ್ಲ.
ನಾಲ್ಕು ಅಕ್ಷರಗಳುಳ್ಳ ನಾನೊಬ್ಬ ಕರ್ನಾಟಕದ ಸೇವಕನಾದ್ದೇನೆ ನನ್ನ ಹೆಸರೇನು?

—ಹಣಮಂತ ನಾಗಪ್ಪಾ ರಡ್ಡೇರ. ಚಿಕ್ಕೋಡಿ.

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಒಡಪುಗಳ ಉತ್ತರ:—

(೧) ರಮಾಧವ

(೨) ಸ್ವಾಮೀಶ್ರದ್ಧಾನಂದ

ಇವನ್ನು ಬಿಡಿಸಿದವರು:—

(೧) ಆರ್. ನರಸಿಂಗಯ್ಯಾ ನಾಗಸಂದರ ೧-೨. (೨) ವಾ. ಭೀ. ಕುಲಕರ್ಣಿ, ಕೊಂಡಾಪ್ಪುರ ೧-೨. (೩) ವೀರಭದ್ರಪ್ಪಾ ಗಂಗಪ್ಪಾ

ಹಾದುಗೊಪ್ಪ ಬೈಲಹೊಂಗಲ ೧-೨ (೪) ಸಿ ಮಹಾದೇವಪ್ಪಾ ಬಾಗಲಕೋಟೆ ೧-೨ (೫) ಜಯತೀರ್ಥ ಹುಸಗೇರಿಯವರ ಬಾಗಲಕೋಟೆ ೧-೨ (೬) ಶ್ರೀನಿವಾಸ ಬಾಗಲಕೋಟೆ ೧-೨ (೭) ಕೃಷ್ಣ ಪುರಾಣಿಕ ಬಾಗಲಕೋಟೆ ೧-೨ (೮) ರಾಚಪ್ಪ ಬಸಪ್ಪಾ ಕನತ ಗದಗ ಬೆಟಗೇರಿ ೧-೨ (೯) ಚಿದಂಬರ ಶರ್ಮಾ ರ ಜ ಜೋಶಿ ಸಾರಪುರ, ೧-೨. (೧೦) ಶ್ರೀನಿವಾಸಾಚಾರ್ಯ ದಂಬಳ ಗದಗ ೧-೨. (೧೧) ಪಿ ಟಿ ಕುಲಕರ್ಣಿ. ವಿಜಾಪುರ ೧-೨ (೧೨) ವೆಂ ಗೋ. ಶೆಟ್ಟಿ ಬಸಾಪುರ, ೧-೨. (೧೩) ಟಿ ಯಲ್. ಜೋಶಿ ಕಾರವಾರ. ೧-೨ (೧೪) ಕೃಷ್ಣಾ ಕೊಲ್ಹಾರ ಬಾಗಲಕೋಟೆ ೧-೦ (೧೫) ಶಿವಮಪ್ಪಾ ಶಿವಸಪ್ಪಾ ಹಂಜಿ ಚಿಕ್ಕೋಡಿ ೦-೨ (೧೬) ಶೇಷಗಿರಿ ಹವಾಲದಾರ ಬಾಗಲಕೋಟೆ ೦-೨. (೧೭) ಶ್ರೀನಿವಾಸ ಕೃಷ್ಣ ಗದಗ- ಬೆಳಗಾವಿ ೦-೨.

ವಿಶೇಷ ಸೂಚನೆ:- (೧) ಒಗಟುಗಳನ್ನು ರಚಿಸುವವರು ಹಳೆಯವುಗಳನ್ನು ಅಂದರೆ ಅನೇಕದಿನಗಳಿಂದ ಜನ್ನತುಕ್ಕಳ ಬಾಯಲ್ಲಿ ರೂಢವಾಗಿದ್ದವನ್ನು ಕಳಿಸಿದಾಗ್ಯೂ, ಅವು ತಮ್ಮವೇ ಎಂದು ಕೆಲವರು ಬರೆದಿರುವರು ಹಾಗೆ ಮಾಡಕೂಡದು ಒಳಿಯವು ಎಂದು ಬರೆದು ಕಳಿಸಿದರೂ ನಾವು ಅವನ್ನು ಅವರ ಹೆಸರಿನಲ್ಲಿ ಪ್ರಕಟಿಸಬಲ್ಲೆವು. ಬರೆ ಹೊಸವನ್ನು ರಚಿಸುವದುತ್ತಮ (೨) ಉತ್ತರವನ್ನು ಕಳಿಸತಕ್ಕವರು ಪತ್ರದಲ್ಲಿ ಇಲ್ಲದ ಬೇರೆ ಹರಟೆಯು ಬರೆಯದೇ ಒಡಪಿನ ಉತ್ತರ, ಕಳಿಸುವವರ ವಿಳಾಸಗಳನ್ನು ಮಾತ್ರ ಬರೆಯಬೇಕು. (೩) ಸ್ತ್ರೀಯರಿಗಾಗಿಯೂ ಬಾಲಕರಿಗಾಗಿಯೂ ಪ್ರತ್ಯೇಕವಾದ ಒಡಪುಗಳನ್ನೂ, ಸ್ತ್ರೀಯರೂ ಬಾಲಕರೂ ಕಳಿಸಿದರೆ, ಅವನ್ನೂ ಪ್ರಕಟಿಸುವೆವು (೪) ನಮ್ಮಲ್ಲಿ ಬಂದ ಒಡಪುಗಳು ಸ್ಥಳಾನುಕೂಲತೆಯ ಪ್ರಕಾರ ಮಾತ್ರ ಪ್ರಕಟಿಸಲ್ಪಡುವವು. —ಸಂ ಕ.

ಮುಂಬೈ ಸರಕಾರದ ಗ್ಯಾಝೇಟ

ರಾವಸಾಹೇಬ ಉಗ್ರಾಣಕರರು ದಕ್ಷಿಣಭಾಗದ ಎಜ್ಯುಕೇಶನಲ್ ಇನ್ಸ್‌ಪೆಕ್ಟರರಾಗಿದ್ದಾರೆ.

ಮೈಸೂರ ಕರ್ನಾಟಕ

ಚಾಮರಾಜ ನಗರದಿಂದ ಕೊಯಿಮತ್ತೂರ ವರೆಗೆ ರೇಲ್ವೇ ಜೋಡಿಸುವದನ್ನು ಮೈಸೂರ ಸರಕಾರದವರು ಬಹು ರಭಸದಿಂದ ಸಾಗಿಸಿದ್ದಾರೆ ಹೀಗಾದಲ್ಲಿ ಮುಂಬೈಯಿಂದ ರಾಮೇಶ್ವರ, ಸಿಲೋನ ಗಳಿಗೆ ಹೋಗಲು ತೀರ ಸಮೀಪದಮಾರ್ಗವು ದೊರೆಯುತ್ತದೆ. ಉದಕ ಮಂಡಲಕ್ಕೆ ಹೋಗುವವರಿಗೂ ಬಹು ಅನುಕೂಲವಾಗುವದು. ಮುಂಬೈ ಬಿ.ಎಸ್. ಎಮ್ ರೇಲ್ವೆ ಕಂಪನಿಯವರು ಉದಕ ಮಂಡಲವನ್ನು ಸೇರುವದು. ಹರಿಹರದಿಂದ ಬೆಂಗಳೂರವರೆಗಿನ ರೇಲ್ವೆಯು ಮೈಸೂರ ಸರಕಾರಕ್ಕೆ ಸೇರುವದು. ಒಟ್ಟು ೬೪೪ ಮೈಲುಗಳು ಮೈಸೂರ ರೇಲ್ವೆಯವರ ವಶಕ್ಕೆ ಬಂದಂತಾಯಿತು ಇದರಿಂದ ೮೭ ಲಕ್ಷ ರೂ ಗಳ ಉತ್ಪನ್ನವು ಸರಕಾರಕ್ಕೆ ಬರುವದು

ಪರದೇಶ.

ಇಂಗ್ಲಂಡದಲ್ಲಿ ಕಳೆದವಾರ ಭಯಂಕರವಾದ ಬಿರುಗಾಳಿ ಬೀಸಿತು ಒಂದು ತಾಸಿಗೆ ೯೨ ಮೈಲಿನ ವೇಗವು ಅದಕ್ಕಿದ್ದಿತು ಅನೇಕ ಜನರು ಸತ್ತಿದ್ದಾರೆ ಕಟ್ಟಡಗಳು ನಾಶಹೊಂದಿವೆ ವ್ಯವಹಾರವು ಕೆಟ್ಟಿದೆ.

ಇತರವೃತ್ತ

ಮಂಗಳವಾರ ದಿನ ಸ್ವಯಂ ಸೇವಕರ ಶಿಕ್ಷಣ ಶಿಬಿರದವರಿಂದ ರಾಷ್ಟ್ರೀಯ ಧ್ವಜಾರೋಹಣವು ಆದಕಾರಣ ೨ ವಳಿಸನಿಗಳಿದರಿದವು ಮರುದಿನದಿಂದ ಮಳೆ ಚೆನ್ನಾಗಿ ಆಗದೆ ಇನ್ನೂ ಮಳೆಯಾಗುವಲಕ್ಷಣವಿದೆ ಸುತ್ತಲಿನ ಸ್ಥಳಗಳಿಗೂ ಮಳೆಯಾಗಿದೆ.

ನಿನ್ನೆ ಕಾರ್ತೀಕ ಏಕಾದಶಿಯಾಗುದರಿಂದ ಭರತಖಂಡದಲ್ಲೆಲ್ಲ ಶಾಲೆ, ಕಾಲೇಜ, ಕಚೇರಿ, ಬ್ಯಾಂಕುಗಳಿಗೆ ರಜೆಯಿದ್ದ ಆದರೆ ಇಲ್ಲಿಯ ಬಸವೇಶ್ವರ ಹೈಸ್ಕೂಲು ನಿನ್ನಿನ ದಿನವೇ ಪ್ರಾರಂಭವಾಗಬೇಕೆಂಬ ಹುಕುಂ ಇದ್ದಿತು! ಹೀಗಿದೆ ಹೆಡ್ ಮಾಸ್ತರರ "ಮಹಿಮೆ"!

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯನ್ನು ಈ ತಿಂಗಳ ಕೊನೆಯಲ್ಲಿ ಇಲ್ಲಿಗೆ ಆಮಂತ್ರಿಸಬೇಕೆಂಬ ವಿಚಾರ ನಡೆದಿದೆ

ಕರ್ನಾಟಕದಲ್ಲಿ ವಿಭಾಗಗಳನ್ನು ಸಂಗ್ರಹಿಸುವ ಕಾರ್ಯವನ್ನು ಭರದಿಂದಲೂ ಚೊಕ್ಕಟವಾಗಿಯೂ ಸಾಗಿಸಲು, ಪ್ರತ್ಯೇಕವಾದ ವಿಭಾಗಶಾಸನ ಕಚೇರಿಯನ್ನು ಕರ್ನಾಟಕದಲ್ಲಿ ಸ್ಥಾಪಿಸಬೇಕೆಂದು ಹುಬ್ಬಳ್ಳಿ ಮಿತ್ರರಾದ ವಾರ್ಧಾಸರಕಾರಕ್ಕೆ ಪ್ರಾರ್ಥಿಸಿದ್ದಾರೆ ಕರ್ನಾಟಕದಲ್ಲಿಯ ಎಲ್ಲ ಸಂಸ್ಥೆಗಳೂ ಹೀಗೆ ಪ್ರಾರ್ಥಿಸುವದು ಅವಶ್ಯವಾಗಿರುವದರಿಂದ, ಎಲ್ಲರೂ ಇತ್ತಕಡೆಗೆ ಲಕ್ಷ್ಯಕೊಡುವದು ಹಿತವು

ಒದಗಾಲ ಸಿನಾರಣೆ ಸಭೆಗೆ ಶೇಟ ಬಾಳಕೃಷ್ಣದಾಸರು ೨೦ ಸಾವಿರ ರೂಪಾಯಿ ದಾನ ಮಾಡಿರುವರಂತೆ !

ಅಕ್ಕೋಟೆಯಿಂದು ಒಣ್ಣಿ ಮಕ್ಕಳು ದೀಪಾವಳಿಯಲ್ಲಿ ಆಡುತ್ತಿರುವರಷ್ಟೇ? ಈ ಸಲ ಈ ಆಟದ ಹಾಡುಗಳಲ್ಲಿ ಕೋಲು ಹಾಕುತ್ತ ಬೀದಿಬೀದಿಗಳಲ್ಲಿ ಹಾಡುತ್ತ ಹೋಗುತ್ತಿದ್ದದು ಒಂದು ವಿಶೇಷ.

ಕರ್ನಲ್ ನಾಯಿಕ ಸಾ|| ಹಸ್ತದಿಂದ ಸೆಂಟ್ರಲ್ ಕೋ ಆ. ಬ್ಯಾಂಕದ ಶಾಖೆಯು ಇಲ್ಲಿ ಸ್ಥಾಪಿಸಲ್ಪಟ್ಟಿದೆ

ಪತ್ರವ್ಯವಹಾರ.

ಕರ್ನಾಟಕ ಆಯುರ್ವೇದವೂ ಮಧ್ವಸುತರೂ

"ಕನ್ನಡಿಗ" ದ ೨೮ ನೇ ಸಂಚಿಕೆಯ ೬ ನೇ ಪುಟದ ೧ನೇ ಕಾಲಂನಲ್ಲಿ ಮಧ್ವಸುತರೆಂಬುವವರು "ಕರ್ನಾಟಕಾಯುರ್ವೇದದ ಕೆಲಸವು ಕಡಿಮೆಯಾಗಿರುವದಲ್ಲ"? ಎಂದು ಪ್ರಶ್ನೆಮಾಡಿದ್ದಾರೆ.

ಭಾರತ ದೇಶದ ಯಾವ ಪ್ರಾಂತೀಯ ವೈದ್ಯಮಂಡಲಗಳಲ್ಲಿಯೂ ನಡೆಯದಿರುವ ಮತ್ತು ಕರ್ನಾಟಕಾಯುರ್ವೇದ ಮಂಡಲವು ಸ್ಥಾಪನೆಯಾದಲಾಗಾಯಿತು ನಡೆಯುದ ಇದ್ದ ಕಾರ್ಯವನ್ನು ಈ ಪುರುಷ ಮಾಡಿದ್ದಾರೆಂಬ ವಿಚಾರ ಮಧ್ವಸುತರಿಗೆ ಗೊತ್ತಿಲ್ಲವೆಂದು ಭಾಸವಾಗುತ್ತದೆ.

ಮ|| ರಾ|| ಡಾ|| ಹಚ್ ಪ್ರಿ. ಸವಣೂರರೂ ಮ|| ರಾ|| ಶಾಸ್ತ್ರೀ ಜಿ. ಶ್ರೀನಿವಾಸಮೂರ್ತಿಗಳೂ ಮತ್ತು ಪ್ರಿಂ ಶ್ರೀ. ವಿದ್ವಾನ್ ಕ ಶಾಸ್ತ್ರಿಗಳವರೂ ಸೇರಿ ಅನೇಕ ದಿವಸಗಳಿಂದ ಇಷ್ಟಪಟ್ಟು ಸ್ಥಾಪಿಸಿಮಾಡಿದ ವಿದ್ಯಾಪೀಠವ ಕರ್ನಾಟಕ ತಾ|| ೧೫-೯-೩೭ ನೇ ಕಮಿಟಿ ಮೀಟಿಂಗಿನಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಸೇರಿ ಮನಬಂದಂತೆ ತಿದ್ದುಪಡಿ ಮಾಡಿ ಕರ್ನಾಟಕ ವೈದ್ಯರ ಅಧೋಗತಿಗೆ ಎಷ್ಟು ಬೇಕೋ ಅಷ್ಟು ಮಾಡಿದ್ದಾರಲ್ಲವೆ ೯-೯-೩೭ ರಲ್ಲಿ ಡಾ|| ಶಿರಹಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ೮ ನೇ ಠರಾವು ಸಪತಿದ್ದಲ್ಪಟ್ಟಿರುವುದ. ಇದು ವೃತ್ತಪತ್ರಗಳಲ್ಲಿ ಪ್ರಸಿದ್ಧಿಯಾಗಿದೆ.

ಇದಕ್ಕಿಂತಲೂ ಹೆಚ್ಚು ಕಾರ್ಯವೇನಾಗಬೇಕು? ಅಧ್ಯಕ್ಷರಿಗೆ ಬಹುದಿನ ತಮ್ಮ ಪದವಿಯಲ್ಲಿರಬೇಕೆಂಬ ಆಶೆ ಇದ್ದರೆ ಹೀಗೆ ತಿದ್ದುಪಡಿ ಮಾಡಿದ ಕ್ರಮ ಸರಿಯಿಲ್ಲ.

ಯಾವ ಕಾರಣಕ್ಕೂ ಆಗದೇ ಇರತಕ್ಕ ವಸ್ತು ಕನ್ನಡ ತಿಳಿಯದ ಮನುಷ್ಯರನ್ನು ಕನ್ನಡ ವಿದ್ಯಾಪೀಠದ ಉಪಾಧ್ಯಕ್ಷರನ್ನಾಗಿ ನೇಮಿಸಿದ್ದು ಪ್ರತಿಫಲವಿಸಲ್ಲವೇ? —ಚಾಣಕ್ಯ



ಕಿರ್ಲೋಸ್ಕರ

ಸೇಂಗಾ ಒಡೆಯುವ ಯಂತ್ರ.

ನಮ್ಮ ಕಾರ್ಖಾನೆಯಲ್ಲಿ ಎರಡು ಮಾದರಿಯ ಯಂತ್ರಗಳು ತಯಾರಾಗುತ್ತವೆ. ಒಂದು ಇಂಜಿನ ಶಕ್ತಿಯಿಂದಲೂ, ಇನ್ನೊಂದು ಕೈಯಿಂದಲೂ ನಡೆಯುತ್ತವೆ. ಇವುಗಳ ಯಾವತ್ತೂ ಭಾಗಗಳು ಕಬ್ಬಿಣದವು. ಬೀಸಣಿಕೆಯಿರುವದರಿಂದ ಕಾಳುಗಳು ಹಸನಾಗಿ ಬೀಳುವವು. ನುಚ್ಚಾಗುವದಿಲ್ಲ.

ಸೇಂಗಾದ ಯಣ್ಣೆಯನ್ನು ತೆಗೆಯುವವರೂ ಸೇಂಗಾ ಬಿತ್ತುವವರೂ ಕಾಳನ್ನು ಮಾಡಲಿಕ್ಕೆ ಈ ನಮ್ಮ ಯಂತ್ರಗಳನ್ನೇ ಉಪಯೋಗಿಸಬೇಕು. ಕಳೆದ ವರ್ಷಕ್ಕಿಂತಲೂ ಈ ವರ್ಷ ಇವುಗಳ ಬೆಲೆಯನ್ನು ಕಡಿಮೆ ಮಾಡಿರುತ್ತೇವೆ. ಬಿಡಿ ಭಾಗಗಳು ನಮ್ಮಲ್ಲಿ ದೊರೆಯುತ್ತವೆ. ಸವಿಸ್ತರ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು. ಲಿಮಿಟೆಡ್ } **ಕಿರ್ಲೋಸ್ಕರ ವಾಡಿ, ಜಿ ಸಾತಾರಾ.**

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟಣೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ॥ ದಿವಸ ೧೧-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಸ್. ಬಿ. ಸಿ. ನಂ. ೨೭೩೭ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರೆಂಟೆಂಡಂಟ್ ಸೆಕ್ರೆಟರಿಯಟ್ ಹೈದರಾಬಾದ ಡೆಕ್ಕನ್ನ ರೂ.೧೦೦೦

(೨) ಎಸ್. ಬಿ. ಸಿ. ನಂ. ೧೯೬೨ ನಾರಾಯಣ ವಿಠ್ಠಲ ಲೋಣಕರ ಕೇರ್ ಆಫ್ ಡಿ. ಈ. ಪುರಾಣಿಕ ೧೦೭ ನಿಹಾಲಪುರ ಇಂದೂರ. ೧೦೦೦

(೩) ಎಸ್. ಎ. ಸಿ. ನಂ. ೩೪೧ ರಾಮಚಂದ್ರ ಅನಂತ ಶಿರೋಳೆ. ಡಿವಿಜನಲ್ ಫಾರೆಸ್ಟ ಆಫೀಸರ ಧತ್ತೂರಾ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೭ ಕೇ. ಜೆ. ಫರ್ನಾಂಡೋ ವ್ಯಾಪಾರಸ್ಥ. ಬ್ರಿಕ್‌ಸಾಯಿಡ ಸಿಲೋನ, ಕೋಲಂಬೋ. ರೂ. ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜೆ. ಚವರೆ. ಅಸಿಸ್ಟಂಟ ಸ್ಟೇಶನ್‌ಮಾಸ್ತರ ಕೆಲಗಿ. ಜಿಲ್ಲಾ ವಿಜಾಪುರ. ರೂ ೧೦೦೦

ಬಿ. ನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ)

ಅತೀ ಸಲುಭ ಕಂತುಗಳ! **ಫಲಿತಾಂಶವು ಹೆಚ್ಚು!**

ದಿ. ಹಿಂದುಸ್ಥಾನ ಕೋಆಪರೇಟಿವ್ಹ

ಇನ್ಸುರೆನ್ಸ ಸೊಸೈಟಿ ಲಿಮಿಟೆಡ್.

(ಬ್ರಾಂಚ್ — ಮುಂಬಯಿ) (ಹೆಡ್ ಆಫಿಸು— ಕಲ್ಕತ್ತಾ)

ಈ ಕಂಪನಿಯು ಇಡೀ ಹಿಂದುಸ್ಥಾನದಲ್ಲಿಲ್ಲಾ ಪ್ರಾಮುಖ್ಯತೆಗೆ ಬಂದ ಸ್ವದೇಶಿ ಕಂಪನಿಗಳಲ್ಲಿ ಒಂದಾಗಿದೆ. ಜನರ ಸೌಕರ್ಯಕ್ಕಾಗಿ ಈ ವಿಜಾಪೂರ ಜಿಲ್ಲೆಯೊಳಗೆ ಇದರ ಒಂದು ಶಾಖೆಯನ್ನಿಟ್ಟಿರುವರು. ಕಂತುಗಳು ಅತೀ ಸುಲಭ ವಿದ್ದು, ಧಾರಾಳವಾಗಿ ಈ ಕಂಪನಿಯಲ್ಲಿ ನಿಮ್ಮ ಜೀವ ವಿಮೆಯನ್ನು ಇಳಿಸಬಹುದು.

ಇದರ ಮೂಲಧನವು ೫೦,೦೦೦,೦೦ ಮೀರಿದೆ. ೧೯೨೫—೨೬ ನೇ ವರ್ಷದಲ್ಲಿ ಸರಾಸರಿ ವರ್ಷಕ್ಕೆ ೧೦೦೦ ರೂ. ವಿಮೆಗೆ ರೂ. ೧೮ ರೂ. ದರ ಫಲಿತಾಂಶ ಕೊಟ್ಟಿರುವವು.

ಎಲ್ಲಾ ಕಡೆಯಲ್ಲಿ ಏಜಂಟರು ಬೇಕಿವ್ಹಾರೆ.

ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿದಲ್ಲಿ ಹೆಚ್ಚಿನ ಮಾಹಿತಿ ತಿಳಿಯಬಹುದು.

ವಿಳಾಸ:—

ವಿಜಾಪೂರ. ೨೪—೭—೨೭ } **ಜಿ. ಆರ್. ಪಕ್ಕನಳ್ಳಿ ಆಂಡ ಬ್ರದರ್ಸ.**
ಚೀಫ ಏಜಂಟ್ಸ,
ವಿಜಾಪೂರ ಜಿಲ್ಲಾ.



ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

೧೯೨೭ನೇ ಜನವರಿ ೧೫ರಿಂದ ಪ್ರಾರಂಭ.



ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ-

೧. ನೀವು ನಮಗೆ ರೂ. ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್‌ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪುವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ ಗೋಲ್ಡ" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ.

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ಬಿಕರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು. ಅಥವಾ ವಿ. ಪಿ ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಳೆದುಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಅಸೂಯೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೬-೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್ ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅತ್ಯಲ್ಪವಿನ್ನೆ ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೊಕೆಟ್ ವೊಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳವೇ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವೊಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾ ೮ ೫

ಕ್ಯಾಪ್ಟನ್ ವಾಚ್ ಕಂ ಪಿ, ಬಿ. ಮದ್ರಾಸ. ೨೩೫

ಸಲುವಾಗಿ-

ಕರ್ನಾಟಕ ಮಹಿಳಾವಿದ್ಯಾಲಯ
ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯೂಲರ ಸ್ಕೂಲಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರುವದಕ್ಕೆ ತಕ್ಕದ್ದಾದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಜರದ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು.

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಹೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ॥ ಲಕ್ಷ್ಮಿ ಬಾಯಿ ಕುಂಭಕೋಣಂ,
ವ್ಯವಸ್ಥಾಪಕರು, ಕ. ಮ. ವಿದ್ಯಾಲಯ, ಧಾರವಾಡ.

ಅಚ್ಚಾಗಿವೆ! ತರಿಸಿರಿ!

ವಾಸುದೇವನ
ಕೌಸ್ತುಭಗಳು.

೧. ಇಂದಿರಾ. ೨-೮-೦
(ಸಚಿತ್ರ ಸಾಮಾಜಿಕ ಕಾದಂಬರಿ.)

೨. ಯದು ಮಹಾರಾಜ. ೧-೦-೦
(ಎಂಬ ವಿನೋದ ಐತಿಹಾಸಿಕ ಕಾದಂಬರಿ.)

೩. ನೀಳ್ಕತೆಗಳು ಭಾಗ ೧ ೧-೪-೦

"ವಸಂತಯಾಮಿನಿ ಸ್ವಪ್ನಚಮತ್ಕಾರ" ನಾಟಕದ ಪ್ರತಿಗಳೆಲ್ಲವೂ ತೀರಿಹೋಗಿವೆ. ಉಳಿದವುಗಳು ಅಚ್ಚಿನಲ್ಲಿವೆ. ತ್ವರೆಮಾಡಿರಿ! ಬೇಕಾದವುಗಳನ್ನು ಬೇಗನೇ ತರಿಸಿಕೊಳ್ಳಿರಿ.

ಪುಸ್ತಕ ವ್ಯಾಪಾರಿಗಳಿಗೆ ಯೋಗ್ಯ ಕಮೀಶನ್. ಅಂಚೆವೆಚ್ಚ ಬೇರೆ.

ಸ್ವಾಮಿ, ರಾ, ಕೆರೂರ.
ಬಾಗಲಕೋಟ. (ಜಿ॥ ವಿಜಾಪೂರ)

ಸಹಕಾರ ಸಂಘ.

ಈ ಸಹಕಾರ ಸಂಘಗಳಿಗೆ ಬೇಕಾಗು ನಮೂನೆಗಳನ್ನು ಅಚ್ಚುಹಾಕಿಸಿ ನಮ್ಮಲ್ಲಿ ಮಾರಲಿಕ್ಕೆ ಇಟ್ಟಿರುವೆವು. ಪಾವತಿ ಮೆಂಬರರಾಗಲಿಕ್ಕೆ ಮಾಡುವ ಅರ್ಜಿ ಸಾಲ ಬೇಡುವ ಅರ್ಜಿ ಮುದ್ದತ ಬೇಡುವ ಅರ್ಜಿ ಮೊದಲಾದ ಎಲ್ಲ ನಮೂನೆಗಳೂ ಇವೆ.

ವ್ಯವಸ್ಥಾಪಕ— ವಿದ್ಯಾರಣ್ಯ ಮುದ್ರಾ ಮಂದಿರ
ಬಾಗಲಕೋಟೆ.

S.U.N.&CO.
BENARESCITY.

ಬನಾರಸ್ ರೇಶ್ಮೀ ಸೀರೆಗಳು.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೀ ಮಾಲುಗಳನ್ನು ಕೇಳುವವರಿಗೆ ವ್ಹಿ. ಪಿ. ಮೂಲಕ ಕಳುಹಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕ ಉದ್ದ ಮೊಳ ೧೪ ಅಗಲಿ ಮೊಳ ೩, ಥಾನು ೧ಕ್ಕೆ ೧೫ ರಿಂದ ೫೦ ಜರಿ ಸೀರೆಗಳು ೧೭ ೧೮ ಮೊಳ ಉದ್ದ ೧ಕ್ಕೆ ರೂ. ೨೫ ರಿಂದ ೫೦ ರವರೆಗೆ. ಬುಟ್ಟಿದಾರ್ ಬನಾರಸ್ ಶೀರೆ ೧೭-೧೮ ಉದ್ದ ಮೊಳ ೭ ೧ಕ್ಕೆ ರೂ. ೫ ರಿಂದ ೩೦೦ ರ ವರೆಗೆ ಉಡುವ ಮಗುಟ ಉದ್ದ ೬-೮ ಮೊಳ ೧ಕ್ಕೆ ರೂ ೧೦ ರಿಂದ ೩೦ ರ ವರೆಗೆ ಜರೀದುಪ್ಪ ೬-೮ ಮೊಳ ಉದ್ದ ೧ಕ್ಕೆ ರೂ. ೧೧ ರಿದ ೪೦ ರ ವರೆಗೆ. ಬಿಳಿ ರೇಶ್ಮೆ ಜರೀದುಪ್ಪಟೆ ೬ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೩೦ ರವರೆಗೆ ಸಾದಾ ಬಂಗಾಳ ರೇಶ್ಮಿ ಶಾಲು ೬ ಮೊಳ ಉದ್ದ ೩ ಮೊಳ ಅಗಲು ೧ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಪಟಿಕದ ೧೦೮ ರ ಸರ ೧ಕ್ಕೆ ರೂ. ೧ ರಿಂದ ೧೦ ರ ವರೆಗೆ ಸುದರ್ಶನ ೧ಕ್ಕೆ ಆಣೆ ೮ ರಿಂದ ರೂಪಾಯಿ 1½ ರವರೆಗೆ ಜಗನ್ನಾಥಜಾಗಂಟೆ ೧ಕ್ಕೆ ರೂ. 2½ ರಿಂದ 15 ರ ವರೆಗೆ ಮತ್ತು ಬೇರೆ ಬೇಕಾದವುಗಳ ಕೆಟಲಾಗ ತರಿಸಿರಿ.

ವಿಳಾಸ:-ಶಿರೋಮಣಿ ನಾರಾಯಣಾಚಾರ್ಯ
ಕಂಪನಿ ಚೌಕಂಬಾ ಕಾಶಿ ಬನಾರಸ್

'ಕನ್ನಡಿಗ'ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ. ೧೦ ರೂ ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆ ಯಾಗದಂಥ ೯೦೦೦ ಯಾರ್ಡ ಕೈನೂಲು
ಪರಸ್ಥಳದವರಿಗೆ	ಮನಿಯಾರ್ಡರದಿಂದ ೧-೧೩-೦ ವಿ. ಪಿ. ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ ಯಾರ್ಡ ಕೈನೂಲು
ವಾಚನಾಲಯ ಸಭೆ, ಸ್ಮೃತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ-	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦ ,, ವಿ. ಪಿ ಯಿಂದ ೩-೧-೦
ಸರಕಾರ, ಮುನಸೀಪಾಲಿಟಿ, ಲೋಕಲ್ ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ. ಯಿಂದ ೫-೧-೦

ಬಿಡಿ ಸಂಚಿಕೆಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ —ವ್ಯವಸ್ಥಾಪಕ

ಪ್ರಾಣಿದಯೆ.
ಸಚಿತ್ರ ಮಾಸಪತ್ರಿಕೆ.

ಚಿಕ್ಕಪೇಟೆ. ಬೆಂಗಳೂರುಸಿಟಿ.

ಅಹಿಂಸಾ ಪ್ರಚಾರಕ್ಕಾಗಿಯೇ ಕಂಕಣಬದ್ಧವಾಗಿ ಪ್ರಾಣಿದಯಾ ಸಂಬಂಧವಾದ ಲೇಖಗಳನ್ನೇ ಸೇರಿಸಿ ಕರ್ನಾಟಕಮಾತೆಯ ಸೇವೆಮಾಡುವ ಮುಖ್ಯೋದ್ದೇಶದಿಂದ ಹೊರಟಿರುವ ಕನ್ನಡ ಪತ್ರಿಕೆಯು, "ಇದು ಒಂದೇ."

ಸಮಸ್ತ ಕನ್ನಡಿಗರ ಕರಗತವಾಗಬೇಕೆಂಬ ಧ್ಯೇಯದಿಂದ ವಾರ್ಷಿಕ ಚಂದಾ ಎಂಟೇ ಆಣೆ ಇಟ್ಟಿರುತ್ತದೆ.

ವರ್ಷಕ್ಕೆ 5/- ರೂಪಾಯಿಗಳನ್ನು ಕೊಡುವವರನ್ನು ಪ್ರಧಾನ ಪೋಷಕರಾಗಿಯೂ 2/- ರೂಪಾಯಿ ಕೊಡುವವರನ್ನು ಪೋಷಕರಾಗಿಯೂ ಪರಿಗಣಿಸಲ್ಪಟ್ಟು, ಪ್ರತಿಸಂಚಿಕೆಯಲ್ಲಿಯೂ ಆ ಮಹನೀಯರ ಹೆಸರುಗಳು ಪ್ರಕಟಿಸಲ್ಪಡುವವು-

ಬೇಕಾಗಿದ್ದಾರೆ.

ಏಜಂಟರು, ಟ್ರಾವಲಿಂಗ ಏಜಂಟರು, ಹಾಗೂ ಚೀಫ ಏಜಂಟರೂ ಬೇಕಾಗಿದ್ದಾರೆ. ಇನ್ಶೂರನ್ಸ ಕೆಲಸದ ಅನುಭವವಿದ್ದವರೂ, ಹೊಸ ಹೊಸ ಕೆಲಸವನ್ನು ಹುಟ್ಟಿಸಿ ತೆಗೆದುಕೊಂಡು ಬರುವವರೂ ಬೇಕಾಗಿದ್ದಾರೆ. ನಗದು ಹಣದ ಜಾಮೀನು ಕೊಡತಕ್ಕದ್ದು. ಯೋಗ್ಯತೆಯ ಪ್ರಕಾರ ಪಗಾರ. ಕೆಳಗಿನ ವಿಳಾಸಕ್ಕೆ ಬರೆಯಿರಿ.

WANTED.

Agents, Travelling Agents and Chief Agents. Men with experience of Insurance work, capable of bringing business, required. Cash security. Salary according to qualifications.

Apply to:— Mr S Kabboor, B. A., F. S. S. (Lond) Asst. Manager (on deputation) General Assurance Society Ltd 44, Linggi Chetty street, Madras.

ನೋಟೀಸ

ಮುಚಖಂಡಿ ಕೆರೆಯ ಅಜಮಾಸ ೭೦ ಎಕರೆ ಭೂಮಿಯನ್ನು ಸಾಗುವಳಿ ಸಲುವಾಗಿ ೩೧ನೇ ಮಾರ್ಚ್ ೧೯೩೦ ವರೆಗೆ ಒಂದು ವರ್ಷದ ಪೂರ್ತೆ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ತಾ। ೧೮-೧೧-೨೯ನೇ ದಿವಸ ಮಧ್ಯಾಹ್ನ ೪ ಘಂಟೆಗೆ ಲಿಲಾವ ಮಾಡಲ್ಪಡುವದು. ಕಚೇರಿ ವೇಳೆಯಲ್ಲಿ ಲಿಲಾವದ ಶರ್ತುಗಳನ್ನು ಬೇಕಾದಾಗ್ಗೆ ನೋಡಬಹುದು.

ಬಾಗಲಕೋಟ ೩-೧೧-೨೯ — ಎಲ್. ವ್ಹಿ. ಗಡಕರಿ. ಅಸಿಸ್ಟಂಟ ಇಂಜನಿಯರ.

ಟೇಬಲ್ ಟೈಂಪೀಸ್ ಇನಾಂ.

ಈ ನಕ್ಷೆಯಲ್ಲಿ ಕಂಡ ಫೌನ್‌ಟೆನ್ ಪೇನಾವು ಇಂಗ್ಲಂಡಿನಲ್ಲಿ



ತಯಾರಾದದ್ದು. ಇದಕ್ಕೆ ೧೪ ಕೆರೆಟಿನ ಭಂಗಾರದ ನಿಬ್ಬು ಹಾಕಿದೆ. ಈ ಪೇನಾವಿನಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ತಿಂಗಳೊಳಗಾಗಿ ಈ ಪೇನಾವನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೇಬಲ್ ಟೈಂಪೀಸ್ ಸಹಿತ ಪೇನಾ ೧ಕ್ಕೆ ೩-೮-೦

ವಿಳಾಸ- ಪೀಟರ್ ವಾಚ್ ಕಂಪನಿ

ಪೋ। ಬಾಕ್ಸ ನಂ. ೨೦. ಮದರಾಸು

ಸ್ಟಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲೆಕ್ಟ್ರಿಕ್, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ಪಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸಹಿತ) ೧ ಪೌಂಡಿಗೆ ರೂ. ೧-೨-೦
೨ ನೇ ,, ,, ,, ರೂ. ೧-೩-೦

ದಿ ಸ್ಟಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:— ಜಂಟಲಿಂಗಪ್ಪಾ ಜಾಲವಾದಿ.
ಸ್ಟೇಶನರ್ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ.
೫೭, ಚೀನಾಬಜಾರ್, ಮದ್ರಾಸು

ಗುಣ ಬರದಿದ್ದರೆ ಹಣ ಪರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ ಗುಟಿಕಾ

ಈ 'ಬಲವಂತ ಗುಟಿಕ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿಮಾಂದ್ಯ ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ಷಂಢತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿ ಮಾಡಿಕೊಳ್ಳಬಹುದು.) ಇದರಿಂದ ಮೈಯಲ್ಲಿರುವ ಎಲ್ಲ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೆ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗೆ ೨-೮-೦, ... ೬-೦-೦, ಇದಲ್ಲದೆ ೧ ಡಬ್ಬಿ ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸಃ— ಎಸ್ ಬಿ. ಕದಮ್ ಮತ್ತು ಸನ್ಸ್.
ಮು. ಪೋಸ್ಟ ನಿಪ್ಪಾಣಿ (ಜಿ. ಬೆಳಗಾವ.)

EAT KASHMIR FRUITS & NUTS.

ಕಾಶ್ಮೀರದ ಹಣ್ಣು ಹಂಪಲಗಳನ್ನು ಸೇವಿಸಿರಿ!

ತೆಳುವಾದ ತೊಗಟೆಯ ತಾಜಾ ಅಕ್ರೋಡಗಳೂ, ಆರಿಸಿದ ಅಡವಿಯ ಸೇಂಗಗಳೂ, (Hazelnuts) ೧೧ ಪೌಂಡಿಗೆ ರೂ. ೫—೮—೦; ತಾಜಾ ಕಾಗದೀ ಬದಾಮು; ಹರಳಿಲ್ಲದ್ದೂ, ಬಲು ಸವಿಯಾದ ಜರ್ದಾಲೂ (Apricots); ಅಂಜೂರಿ; ದ್ರಾಕ್ಷಿ; ಕಿಸಮಿಸು, ೧೧ ಪೌ. ಗೆ ೧೩ ರೂ.; ಕಮಲದ ಶುದ್ಧವಾದ ಜೇನತುಪ್ಪ, ೫|| ಪೌ. ಗೆ ೮ ರೂ.; ಶುದ್ಧ ಕೇಶರ, ೧ ತೊಲೆಗೆ ೩ ರೂ. ಟಪಾಲು ಖರ್ಚ ಮಾಫ!

ಡಾರ ಬ್ರದರ್ಸ ಶ್ರೀನಗರ, ಕಾಶ್ಮೀರ.

DAR BROS SHRINAGAR, KASHMIR.

ಬೈಂಡಿಂಗದ

ಹೊಸ ಉತ್ತಮ ವ್ಯವಸ್ಥೆ!

ನಾವು ಮಂಗಳೂರಿನಿಂದ ನುರಿತಂತಹ ಓರ್ವ ಬಾಯಿಂಡರನನ್ನು ಕರೆಸಿದ್ದೇವೆ. ಮುಂಬೈ, ಮದ್ರಾಸ, ಮಂಗಳೂರ, ಬೆಂಗಳೂರಗಳಲ್ಲಾಗುವ ಎಲ್ಲ ನಮೂನೆಯ ಬಾಯಿಂಡಿಂಗ ಕೆಲಸವು ನಮ್ಮಲ್ಲಿ ಒಳ್ಳೇ ಅಚ್ಚುಕಟ್ಟಾಗಿ ಮಾಡಲ್ಪಡುತ್ತವೆ. ಎಲ್ಲ ಬಗೆಯ ಗೋಲ್ಡ ಗಿಲ್ಟ ಕೆಲಸವೂ ಆಗುತ್ತದೆ. ಇನ್ನು ಮೇಲೆ ಇತ್ತಕಡೆಯ ಜನರು ಮುಂಬೈ, ಬೆಂಗಳೂರ, ಅಥವಾ ಮಂಗಳೂರಿಗೆ ಹೋಗುವ ಕಾರಣವಿಲ್ಲ! ಒಮ್ಮೆ ಅನುಭವ ತೆಗೆದುಕೊಂಡು ನೋಡಬೇಕು.

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟ

ಬಾಗಲಕೋಟ, ವಿಜಾಪುರ ಮೋಟಾರ ಸರ್ವೀಸ ಪ್ರಾರಂಭವಾಗಿದೆ!

ಬೆಳಗಾವಿಗೆ ಬಾಗಲಕೋಟೆಯಿಂದ ೩॥ ರೂ. ಹಾಸಲು ಮುಕ್ರರ ಮಾಡಲ್ಪಟ್ಟಿದೆ.



ವಿಜಾಪೂರ ಜಿಲ್ಹೆಯಲ್ಲಿಯ ಮತ್ತು ಸುತ್ತು ಮುತ್ತಲಿನ ಖಾಸಗಿ ವ ಸರ್ವೀಸಿನ ಮೋಟಾರ ಮಾಲಕರ ಗೈರಸೋಯ ದೂರವಾಗಬೇಕೆಂದು, ಆರ್. ಜಿ. ಚವ್ಹಾಣ ಎಂಡ ಸನ್ಸ, ಬೆಳಗಾವ. ಇವರು ತಮ್ಮ

ಜನರಲ ಮೋಟಾರ ಅಕ್ಸೆಸರಿ ಸ್ಟೋಅರ್ಸದ ಶಾಖೆಯನ್ನು

ತಾ॥ ೧೦ ಸಪ್ಟೆಂಬರ ೧೯೨೭ನೇ ಇಸ್ವಿಯಿಂದ ಬಾಗಲಕೋಟೆಯಲ್ಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಬಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಶೆವ್ರಲೇಟ, ಓವ್ಹರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯೂಬ್ಸ, ಗ್ರೀಸ, ಮೋಬಿಲ ಆಯಿಲ, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯ ದರದಿಂದ ಸಿಗುವವು. ಒಂದು ವೇಳೆ ವ್ಯಾಪಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರ ದ್ವಾರದಿಂದ,

ಚಾಲಕಃ— ವಾಯ್. ಜಿ. ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಹಲ್ಕನಾಯಝಿಂಗ ಮಾಡಿ ಕೊಡುವೆವು

☞ ಬಾಗಲಕೋಟೆ-ಬೆಳಗಾವಿ, ಬಾಗಲಕೋಟೆ-ಇಳಕಲ್ಲ ಸರ್ವೀಸ ಯಥಾಪ್ರಕಾರ ನಡೆದಿದೆ

ನೋವು ಬಾಧೆಗಳ ನಿವಾರಣಾರ್ಥ!

೬೨ ವರ್ಷಗಳಿಂದ ಜಗತ್ತಿನ ತುಂಬ ಖ್ಯಾತಿಯನ್ನು ಪಡೆದ ಉಪಾಯವೆಂದರೆ ಇದೇ.

Little's Oriental Balm.

ಲಿಟ್ಲರ ಓರಿಯಂಟ್ಲ ಬಾಮು.

ಎಲ್ಲ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ.
ಈ ದಿವಸವೆ
ಒಂದು ಬಾಟ್ಲಿ ಕೊಳ್ಳಿ !

Buy a bottle

TO-DAY!

ಹಿಂದುಸ್ಥಾನದ ಅದ್ಭುತವಾದ ವೇದನಾಶಾಮಕವಾದ ಉಪಾಯವು !

ಕೆಳಗಿನ ವ್ಯಾಧಿಗಳಿಗೆ ತತ್ಕಾಲಿಕ ಗುಣ ಬೇಕಾಗಿದ್ದರೆ ಇದನ್ನೇ ಉಪಯೋಗಿಸಿರಿ:—

ತಲೆಶೂಲಿ, ಸಂಧಿವಾತ, ಎಲ್ಲತರದ ಕಸ. ನರತೊಡಕು ಹುವಾತ, ಟೊಂಕನೋವು, ಅರ್ಧಾಂಗವಾಯು ಉಳುಕು (ವಳದದ್ದು)

ಸ್ವಲ್ಪೇ ಮಲಮಿನಿಂದ ಒಹಳೇ ಗುಣ. ಉರುವು ಇಲ್ಲವ ಇಲ್ಲ. ಗುಳ್ಳೆಗಳೂ ಏಳುವದಿಲ್ಲ ಸುಖವಾಗಿ ಗುಣ ಕೊಡುತ್ತದೆ

ಹಿಂದುಸ್ಥಾನದಲ್ಲಿಯೇ ಹಿಂದೀಯರಿಂದ ತಯಾರಾದದ್ದು.

ನೆಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲವೇಯಿಲ್ಲ !

ಪತ್ರಿಕೆಯು ಪಂಗಳಸೇಧೆ ರಾಜೇರಾಯರ ಮಕ್ಕಳಾದ ಶ್ರೀನಿವಾಸ ರಾಯರಿಂದ ಬಾಗಲಕೋಟೆಯಲ್ಲಿಯ
ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರೆ. ನಂ ಬಿ ೧೯೪೭
ವಾ. ಚಂದಾ ೧—೧೪—೦ ಮಾತ್ರ

ಕರ್ನಾಟಕ ವೃತ್ತ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಕವಾಡುತ್ತಾಗಿದೆ)
यावत् परवशं दुःखं । सर्वमात्मवशं सुखम् ॥ — मनु
ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ಕಾರ್ತಿಕ ಬಹುಳ ೫ ಶಕೆ ೧೮೪೯ ತಾ. ೧೩ ೧೧-೧೯೨೭
Date 13—11—1927 | ಸಂಚಿಕೆ ೩೦

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಚ್ಚುವದು ಮತ್ತು ಜೋಡಿಸುವದು ಅವುಗಳೊಳಗಿನ ಕೆಟ್ಟ ಮುರಿದ-ಹರಿದ ಭಾಗಗಳ ದುರಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಸಿಕ್ಕಿಬಿದ್ದಲ್ಲೆಲ್ಲ ನುರಿತರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೇರಿಸುವಂತೆ ಮಾಡುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವುಳ್ಳ ಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೇ ಬರೆದುಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ

ಹೊಸ ಟ್ರೆಡಲ್.

ಈದೀಗ ನಾವು ಯುರೋಪದಿಂದ ಹೊಸ ಟ್ರೆಡಲ್ ತರಿಸಿದ್ದೇವೆ ಇದು ಫುಲಸ್ಕ್ಯಾಪ ಹಾಳೆಯ ಅರ್ಧದಷ್ಟು ಆಕಾರದ್ದು. ಬೆಲೆ ಏಳು ಸಾವಿರ ಮಾತ್ರ! ಕರ್ನಾಟಕದಲ್ಲಿಯ ಮುದ್ರಕರಿಗೆ ಇವು ಬೇಕಿದ್ದರೆ ನಾವು ತರಿಸಿ ಕೊಡುವೆವು! ಈ ಯಂತ್ರವನ್ನು ಸ್ವೀಕತಕ್ಕವರು ನಮ್ಮಲ್ಲಿಗೆ ಬಂದು ನೋಡಬಹುದು ಇದಲ್ಲದೇ ರಾಯಲ್ ಆಕಾರದ ಒಂದು ಮುದ್ರಣಯಂತ್ರವು ನಮ್ಮಲ್ಲಿ ಮಾರಲಿಕ್ಕಿದೆ. ಇದು ಹಳೆಯದಾದರೂ ಉತ್ತಮ ಕೆಲಸ ಕೊಡುತ್ತದೆ.

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಣ ಮಂದಿರ ಬಾಗಲಕೋಟೆ

ಮಯೂರ ತೈಲ

ದುರ್ಲಭವಾದ ವನಸ್ಪತಿಯು. ೫೦ ತೊಲೆಗೆ ೧ ರು. ವೈದ್ಯರಿಗೂ, ವ್ಯಾಪಾರಸ್ಥರಿಗೂ, ಅನೇಕ ರೀತಿಯ ಉಪಯುಕ್ತ ವನಸ್ಪತಿಗಳು ದೊರಕುವವು

ವೈದ್ಯ—ವಾದಿರಾಜ ಜಹಗೀರದಾರ
ಮು. ಇಲಕಲ್ಲ (ವಿಜಾಪೂರ)

ಕರ್ನಾಟಕದ ಅಭಿಮಾನವಿರಲಿ.

ಮೇಲಕ್ಕೆ ಕಾಣಿಸಿದ ಸಾಮಾನುಗಳು ಬೇಕಾದಲ್ಲಿ ಕನ್ನಡಿಗರು ಮುಂಬೈ ಮದ್ರಾಸಗಳಿಗೆ ಹೋಗುವ ಕಾರಣವಿಲ್ಲ. ಕನ್ನಡಿಗರ ಸೇವೆಗಾಗಿ ಸಿದ್ಧರಾಗಿದ್ದ ನಮ್ಮನ್ನು ಕನ್ನಡಿಗರು ಅವಶ್ಯವಾಗಿ ಪ್ರೋತ್ಸಾಹಿಸಬೇಕು.



Presented to H E. the Viceroy at Bangalore City

Presented to H. H. the Maharaja at Bangalore City.

ಚಲೋ ಬೆಳ್ಳಿಯಿಂದಲೂ, ಚೊಕ್ಕ ಭಂಗಾರದಿಂದಲೂ ತಯಾರಿಸಿರುವ ಬಗೆಬಗೆಯ ಮಾದರಿ ಒಡವೆಗಳೂ ಯಾವಾಗಲೂ ದೊರೆಯುತ್ತವೆ.

ಬಹುಮಾನ ಕೊಡಲು ಬೇಕಾಗುವ ಬೆಳ್ಳಿಯ ಕಾಸ್ಕೆಟ್ಸ್ ಪೆಟ್ಟಿಗೆಗಳೂ, ಹರಿವಾಣಗಳೂ, ಟೋರ್ನಮೆಂಟು ಕಪ್ಪುಗಳೂ, ಬೆಳ್ಳಿಯ ಮತ್ತೂ ಭಂಗಾರದ ಮೆಡಲುಗಳೂ (ಪದಕಗಳು) ಬಿಕರಿಗೆ ಸಿದ್ಧವಾಗಿರುವವು. ಹಾಗೂ ಬೇಕುಬೇಕಾದ ಹೊಸ ಹೊಸ ನಮೂನೆಗಳಲ್ಲಿ ಆರ್ಡರಿಗೂ ಮಾಡಿಕೊಡುವೆವು. ಕ್ಯಾಟಲಾಗನ್ನು ತರಿಸಿಕೊಳ್ಳಿ.

ನಮ್ಮ ಕಂಪನಿಯು ಹಳೆಯದು, ಮೈಸೂರ ಮಹಾರಾಜರೂ, ತ್ರಾವಣಕೋರದ ಮಹಾರಾಜರೂ, ದೊಡ್ಡ ದೊಡ್ಡ ಸಂಸ್ಥೆಗಳೂ, ಪ್ರಭುಗಳೂ ನಮ್ಮನ್ನು ಪ್ರೋತ್ಸಾಹಿಸುತ್ತಿರುವರು.

ಬೆಲೆಯು ಸುಲಭ! [ಒಂದು ವೇಳೆ ಪರೀಕ್ಷಿಸಿ.] ಕೆಲಸ ಬಹು ನಾಣ್ಯ!!

ದಿ ಇಂಡಿಯನ್ ಜ್ಯೂವೆಲರಿ ಮಾರ್ಟ್ ನಗರ್ತಪೇಟೆ, ಬೆಂಗಳೂರ ಸಿಟಿ.

ಕನ್ನಡಿಗ.

ಬಾಗಲಕೋಟೆ:- ಕನ್ನಡಿಗ ಕಾರ್ತೀಕ ಬಹುಳ ೫ ಶಕೆ ೧೮೪೯.

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು ।
ನಿನ್ನ ಬೆಸನವಮಾಡಿದಂಥ ಮಕ್ಕಳ ದೊಮ್ಮು ।
ಚಿನ್ನದಾದರು ಚಿನ್ನ ಮೇಣಬತ್ತಿಯು ನೊಂದು ಚಿನ್ಮಯಾಕಾಶದಲ್ಲಿ ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ಕಣ್ಣನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೆ

—ಅಂಬಿಕಾ ತನಯ ದತ್ತ

ಮುಂಬೈ ಕರ್ನಾಟಕದ ಅಂಚೆಮನೆಗಳಲ್ಲಿ ಕನ್ನಡ ನಮೂನೆಗಳು 'ಕನ್ನಡಿಗ'ನ ಪ್ರಯತ್ನದಿಂದ ಪ್ರಚಾರದಲ್ಲಿ ಬಂದದ್ದಾಯಿತು. ತದನಂತರದಲ್ಲಿ ನಾವು ಮತ್ತೆ ಅಧಿಕಾರಿಗಳ ಸಂಗಡ ಪತ್ರವ್ಯವಹಾರ ನಡೆಸಿ, ಪ್ರಕಟನೆಗಳೂ, ಕಾಲಸೂಚೀ ಹಲಿಗೆಗಳೂ ಕನ್ನಡದಲ್ಲಿ ಇಲ್ಲವೆಂಬುದನ್ನು ಇವರ ಲಕ್ಷ್ಯಕ್ಕೆ ತಂದು ಕೊಟ್ಟೆವು. ಈಗ್ಗೆ ಅಂಚೆ ಖಾತೆಯಲ್ಲಿ ಆ ಬಗ್ಗೆಯೂ ಏರ್ಪಾಡು ಆಗುತ್ತಲಿದೆಯೆಂದು ಅಧಿಕಾರಿಗಳಿಂದ ನಮಗೆ ಬರೆದು ಬಂದುದನ್ನು ಕನ್ನಡಿಗರಿಗೆ ಅರುಹಲು ನಾವು ಸಂತೋಷಗೊಳ್ಳುತ್ತೇವೆ. ವರ್ಷದ ಕೊನೆಯಲ್ಲಿ ಕನ್ನಡ ವೃತ್ತಪತ್ರಿಕಾಕರ್ತರು ತಮ್ಮ ತಮ್ಮ ಚಂದಾದಾರರಿಗೆ ಸಂಚಿಕೆಗಳನ್ನು ವಿ. ಪಿ. ಮಾಡಬೇಕಾಗುತ್ತದೆಯಷ್ಟೇ? ಆದರೆ ಒಂದೇ ಕಾಲದಲ್ಲಿ ಎಲ್ಲ ಸಂಚಿಕೆಗಳನ್ನು ವಿ. ಪಿ. ಮಾಡಲು ಅಂಚೆಖಾತೆಯಲ್ಲಿಯ ಸ್ಥಾನಿಕ ಅಧಿಕಾರಿಗಳು ನಿರಾಕರಿಸುತ್ತಿದ್ದದರಿಂದ ವೃತ್ತಪತ್ರಿಕಾಕರ್ತರಿಗೆ ಬಹು ತೊಂದರೆಯಾಗುತ್ತಲಿದ್ದಿತು. ದಿನಕ್ಕೆ ೨೦-೩೦ ಸಂಚಿಕೆಗಳನ್ನು ಮಾತ್ರ ಅವರು ಸ್ವೀಕರಿಸುತ್ತಿದ್ದದರಿಂದ, ತಿಂಗಳಗಟ್ಟಲೆ ವಿ. ಪಿ. ಕಳಿಸುವ ಕೆಲಸವು ನಡೆಯಬೇಕಾಗುತ್ತಿದ್ದಿತು. ಈ ಬಗ್ಗೆಯೂ ನಾವು ಅಧಿಕಾರಿಗಳಿಗೆ ಬರೆದುದರಿಂದ ಅವರಿಂದ ಸಮಾಧಾನಕರವಾದ ಉತ್ತರಬಂದಿದೆ. ಒಂದು ವಾರ ಮುಂಚಿತವಾಗಿ ಅಧಿಕಾರಿಗಳಿಗೆ ತಿಳಿಸಿದರೆ, ಎಲ್ಲ ಸಂಚಿಕೆಗಳನ್ನು ಏಕಕಾಲದಲ್ಲಿ ಸ್ವೀಕರಿಸುವ ಏರ್ಪಾಡುಮಾಡಲ್ಪಡುವದೆಂದು ನಮಗೆ ಅಂಚೆ ಇಲಾಖೆಯವರು ಆಶ್ವಾಸನವನ್ನಿತ್ತಿರುವರು. ಆದುದರಿಂದ ಕನ್ನಡ ಪತ್ರಿಕಾಕರ್ತರುಗಳು ಅವಶ್ಯವಾಗಿ ಇದರ ಲಾಭ ಹೊಂದಬಹುದು.

ಗದಗ-ಹುಟಗಿ ರೇಲ್ವೆ ಮಾರ್ಗದಲ್ಲಿಯ ತೊಂದರೆ, ಅವ್ಯವಸ್ಥೆ, ಅನಾನುಕೂಲತೆಗಳ ಬಗ್ಗೆ ನಾವು ಅನೇಕ ಸಲ ಬರೆದುದಾಯಿತು. ಆದರೆ ಎಲ್ಲವೂ ಬೋರ್ಕಲ್ಲ ಮೇಲೆ ಮಳೆಗರೆದಂತಾಗಿದೆ. ರೇಲ್ವೆಯವರು ಸಾರ್ವಜನಿಕ ಅನುಕೂಲತೆಗಳಿಗಾಗಿ ಅಷ್ಟೊಂದು ಲಕ್ಷ್ಯ ಕೊಡುವದಿಲ್ಲವೆನ್ನುವದು ಸ್ವಯಂಸಿದ್ಧವಾದುದು. ಆದುದರಿಂದ ಸರಕಾರದ ಲಕ್ಷ್ಯವು ಅತ್ತ ಹೋಗಿ, ಸರಕಾರದಿಂದ ಕಿವಿ ಹಿಂಡಿಸಿಕೊಂಡ ಮೇಲಾದರೂ, ರೇಲ್ವೆಯವರಿಗೆ ಬುದ್ಧಿ ಬರುವದೆಂದು ಭಾವಿಸಿ, ಕಾಯದೇ ಮಂಡಲಗಳಲ್ಲಿ ಕೆಲವು ಪ್ರಶ್ನೆಗಳನ್ನು ನಾವು ಹಾಕಿಸಿದ್ದಾಯಿತು. ಆದರೆ ಸರಕಾರವು ಸಹ ಈ ಬಗ್ಗೆ ಅಷ್ಟೊಂದು ಆಸ್ಥೆಯನ್ನು ತಳೆದಿಲ್ಲವೆಂಬುದು ಅವರಿಂದ ಬಂದ ಉತ್ತರಗಳಿಂದ ಸ್ಪಷ್ಟವಾಗುತ್ತದೆ. ಆದರೂ ಮತ್ತೆ ಮತ್ತೆ ಪ್ರಯತ್ನ ಮಾಡಬೇಕಾದುದರಿಂದ ಈ ಬಗ್ಗೆ ಬರೆಯಬೇಕಾಗಿದೆ. ಡಿಸೆಂಬರದಲ್ಲಿ ಸವಲತ್ತಿನ ತಿಕೀಟುಗಳನ್ನು ಮೂರನೇ ವರ್ಗದ ಪ್ರವಾಸಿಕರಿಗೆ ಈಗೀಗ ರೇಲ್ವೆಯವರು ಕೊಡುತ್ತಲಿರುವರು. ಆದರೆ ಕೆಲವು ವಿಶಿಷ್ಟ ಸ್ಟೇಶನ್ನುಗಳಲ್ಲಿಯೇ ಈ ತಿಕೀಟುಗಳು ದೊರೆಯುತ್ತವೆ. ಗದಗ-ಹುಟಗಿ ಮಾರ್ಗದಲ್ಲಿಯ ವಿಜಾಪುರ ಹಾಗೂ ಬಾಗಲಕೋಟೆಗಳಲ್ಲಿಯೂ ಈ ತಿಕೀಟುಗಳು ದೊರೆಯುವಂತೆ ಏರ್ಪಾಡಿರಬೇಕೆಂದು ನಾವು ಬರೆದುದಾಯಿತು. ಬೆಳಗಾವಿಯ ರಾಷ್ಟ್ರ ಮಂಡಳದವರೂ ಬರೆದಿದ್ದರು. ಈಗ್ಗೆ ಮುಕ್ತಿ ಮಂಡಳದವರು ಕಂಪನಿಗೆ ಬರೆದಿರುವರು. ಆದರೆ ರೇಲ್ವೆಯವರು ಆ ಬಗ್ಗೆ ಈ ವರ್ಷವೂ ಏರ್ಪಾಡು ಮಾಡಿಲ್ಲ. ಈ ಸಲ ತಿರುಪತಿಗೆ, ಮದ್ರಾಸದ ಕಾಂಗ್ರೆಸ್ಸಿಗೆ, ಹಾಗೂ ಬೆಂಗಳೂರಲ್ಲಿ ಸೇರಯುವ ವೀರಶೈವ ಮಹಾಸಭೆಗೆ, ಅನೇಕ ಜನ ಕನ್ನಡಿಗರು ಈ ಜಿಲ್ಲೆಯಿಂದ ಹೋಗಲಿಕ್ಕಿದ್ದಾರೆ. ಆದುದರಿಂದ ರೇಲ್ವೆ ಕಂಪನಿಯವರು ಈಗಲಾದರೂ ವಿಚಾರ ಮಾಡಿ, ವಿಜಾಪುರ ಬಾಗಲಕೋಟೆಗಳಲ್ಲಿಯೂ ಈ ಸವಲತ್ತಿನ ತಿಕೀಟುಗಳು ದೊರೆಯುವಂತೆ ಮಾಡಬೇಕು. ಇನ್ನು, ಎರಡನೇ ಸೂಚನೆಯೊಂದಿದೆ. ಹುಟಗಿ-ಮಿರಜ, ಹುಟಗಿ-ಹರಿಹರ, ಹುಟಗಿ-ಗುಂತಕಲ್ಲಗಳ ನಡುವೆ, ಬದಲು ಮಾಡದಂತೆ ಗಾಡಿಗಳನ್ನು ಓಡಿಸುವ ವ್ಯವಸ್ಥೆಯಾಗಬೇಕೆಂದು ಕೇಳಿದ್ದಕ್ಕೆ "ಅಷ್ಟು ದೂರ" ಹೋಗುವ ಪ್ರವಾಸಿಕರು ಹುಟಗಿ ಮಾರ್ಗದಲ್ಲಿ ದೊರೆಯುವದಿಲ್ಲವೆಂದು ಸರಕಾರವು ಕಾಯದೇ ಮಂಡಲದಲ್ಲಿ ಉತ್ತರಕೊಟ್ಟಿದೆ. ಹಾಗೆ ಮಾಡುವದು ಅಶಕ್ಯವೇ ಆಗಿದ್ದರೆ, ಸಧ್ಯದಲ್ಲಿ ಧಾರವಾಡದವರೆಗಾದರೂ ಹುಟಗಿಯಿಂದ ಹೊರಟ ಗಾಡಿಗಳು ಹೋಗುವಂತೆ ಮಾಡಬೇಕಾಗಿ ನಮ್ಮ ಸೂಚನೆಯಿದೆ. ಹುಟಗಿಯಿಂದ ಹೊರಟ ಗಾಡಿಗಳ ಡಬ್ಬಿಗಳು ಗದಗಿನಲ್ಲಿ ನಿಂತು, ಅವೇ ಮುಂದೆ, ಧಾರವಾಡಕ್ಕೆ ಕೆಲವು ಕಾಲದ ಮೇಲೆ ಹೋಗುತ್ತವೆ. ಹೀಗೆ ಸುಮ್ಮನೇ ಆ ಡಬ್ಬಿಗಳನ್ನು ಗದಗಿನಲ್ಲಿ ನಿಲ್ಲಿಸಿ, ಪ್ರವಾಸಿಕರಿಗೆ ತೊಂದರೆ ಕೊಡುವದರ ಬದಲು, ಆಗಿಂದಾಗ್ಗೆ ಅವೇ ಡಬ್ಬಿಗಳು ಧಾರವಾಡದವರೆಗೆ ಹೋಗುವಂತೆ ಏರ್ಪಾಡಾದರೆ ಪ್ರವಾಸಿಕರಿಗೆ ಅತ್ಯಂತ ಅನುಕೂಲವಾಗುವದು. ಆದರೆ ಪ್ರವಾಸಿಕರ ಅನುಕೂಲತೆಗಳನ್ನು ಕಂಪನಿಯವರೂ, ಸರಕಾರದವರೂ ಲಕ್ಷಿಸಿದರಷ್ಟೇ?

ಆಂಧ್ರರು ಬಳ್ಳಾರಿಯಲ್ಲಿ ನಡೆಸಿದ ಗಲಭೆಯಿಂದ ಅಲ್ಲಿಯ ಕನ್ನಡಿಗರು ಕೊಂಚ ಎಚ್ಚತ್ತಂತೆ ಕಾಣುತ್ತದೆ. ಕರ್ನಾಟಕ ಏಕೀಕರಣ, ಕನ್ನಡಶಾಲೆಗಳನ್ನೇ ಜಿಲ್ಹೆಗಳಲ್ಲೆಲ್ಲ ಪ್ರಾರಂಭಿಸುವ, ಆದವಾನಿ ರಾಯದುರ ತಾಲೂಕುಗಳು ಕನ್ನಡವಿದ್ದುದರಿಂದ ಕರ್ನಾಟಕ ಪ್ರಾಂತದಲ್ಲಿಯೇ ಅವನ್ನು ಗಣಿಸುವ, ಇವೇ ಮೊದಲಾದ ಠರಾವುಗಳು ಬಳ್ಳಾರಿ ಜಿಲ್ಹೆಯಲ್ಲಿ ಕೆಲವು ಕಡೆಗಾಗಿವೆ. ಅಲ್ಲಿಯ ಕನ್ನಡ ಚಳವಳಿಗಳ ಮುಮುಂದಾದ ಶ್ರೀ. ಕೇ. ಗುರುರಾಜರಾಯರು ಈ ಬಗ್ಗೆ ಪ್ರಯತ್ನಿಸುತ್ತಿರುವುದು ಶ್ಲಾಘ್ಯವಾಗಿದೆ. ಬಳ್ಳಾರಿಯ ಜಿಲ್ಹೆಗೆ ಕನ್ನಡ ವಾರಪತ್ರಿಕೆಯೊಂದು ಅವಶ್ಯವಾಗಿ ಬೇಕಾಗಿದೆ. ಅಂದರೆ ಆ ಜಿಲ್ಹೆಯಲ್ಲಿ ಕನ್ನಡದ ಚಳವಳನ್ನು ಹೆಚ್ಚಿಸಲು ಅನುಕೂಲವಾಗುವದು. ಆಂಧ್ರರು ಹೊಂಚು ಹಾಕಿಕೊಂಡು, ಅನಂತಪುರದಲ್ಲಿ ವಿಶ್ವವಿದ್ಯಾಲಯದ ತಳವನ್ನೂರುವ

ನಿಶ್ಚಯವನ್ನು ಮಾಡಿದ್ದನ್ನು ಸ್ಮರಿಸಿ, ಬಳ್ಳಾರಿಯ ಮುಖಂಡರು ಕರ್ನಾಟಕಪಕ್ಷದ ಚಳವಳವನ್ನು ಜಿಲ್ಲೆಯ ತುಂಬೆಲ್ಲ ಹಬ್ಬಿಸಬೇಕಾಗಿ ಆಗ್ರಹಪೂರ್ವಕವಾಗಿ ಸೂಚಿಸುತ್ತೇವೆ. ಈ ಜಿಲ್ಹೆಗಾಗಿ ಒಂದು ಕನ್ನಡ ವಾರಪತ್ರಿಕೆಯು ಬೇಗನೇ ಹೊರಡುವಂತೆ ಮಾಡಿ, ಏಕೀಕರಣ ಸಭೆಯನ್ನು ಎಲ್ಲ ತಾಲೂಕುಗಳಲ್ಲಿಯೂ ಸ್ಥಾಪಿಸಬೇಕು. ಬಳ್ಳಾರಿಯಲ್ಲಿ ಕೊಂಚಾದರೂ ಕನ್ನಡ ಚಳವಳವು ಉಸುರು ಆಡುತ್ತದೆ. ಆದರೆ ಬೆಳಗಾವಿ ಜಿಲ್ಲೆಯಲ್ಲಿ ಕೋರ್ಟ ಭಾಷೆಯು ಹೊಸದಾಗಿ ಮರಾಟಿಯಾಗಿದೆ; ಪ್ರಾಥಮಿಕ ಶಾಲೆಗಳೆಲ್ಲ ಮರಾಟಿಯಲ್ಲಾಗಬೇಕೆಂಬ ಪ್ರಯತ್ನ ನಡೆದಿದೆ. ಇವಕ್ಕೆಲ್ಲ ತಡೆಹಾಕಲು ಅಲ್ಲಿಯ ಕನ್ನಡ ಮುಖಂಡರು ಯಾವ ಬಗೆಯಿಂದಲೂ ಪ್ರಯತ್ನಿಸದಿದ್ದುದನ್ನು ಕಂಡು ಬಹು ವಿಷಾದವಾಗುತ್ತದೆ.

ಭಾರತೀಯರ ಮಾನವನ್ನಪಹರಿಸುವ ನೀಲ್ ಸಾಹೇಬನ ಪುತ್ಥಳಿಯನ್ನು ಸಾರ್ವಜನಿಕ ಸ್ಥಳದಿಂದ ತೆಗೆಯಬೇಕೆಂದು ಸ್ವರಾಜ್ಯಪಕ್ಷದ ಜನರು ಮದ್ರಾಸ ಶಾಸನ ಸಭೆಯಲ್ಲಿ ಒಂದು ಠರಾವನ್ನು ತಂದರು. ಈ ಠರಾವು ಅಕಸ್ಮಾತ್ ಸ್ವೀಕೃತವಾಗಿದ್ದರೂ ಸಹ ಅದು ಕೃತಿಯಲ್ಲಿ ಬರುತ್ತಿರಲಿಲ್ಲವೆಂಬುದಂತೂ ಸಿದ್ಧವೇ. ಇರಲಿ. ಈ ಠರಾವನ್ನು ಅಲ್ಲಿಯ ಬಹುಮತೀಯರು ವಿರೋಧಿಸಿದರು. ಸರಕಾರದವರು ವಿರೋಧಿಸಿದ್ದು ಸ್ವಾಭಾವಿಕವೇ. ಯುರೋಪೀಯ ಮೆಂಬರರು ವಿರೋಧಿಸದಿದ್ದರೆ ಅದೊಂದು ಆಶ್ಚರ್ಯಕರವಾದ ಸಂಗತಿಯಾಗಿ ಜಗತ್ತಿನ ೧ನೆಯ ಆಶ್ಚರ್ಯದ ಮಾತಾಗುತ್ತಿತ್ತು! ಇನ್ನುಳಿದವರೆಂದರೆ ಕೇವಲ ನಮ್ಮ ದೇಶಬಾಂಧವರು! ಇವರಲ್ಲಿ ಅನೇಕರು ಗವರ್ನರರ, ಸರಕಾರೀ ಅಧಿಕಾರಿಗಳ ಹಾಗೂ ಯುರೋಪೀಯ ಸಭಾಸದರ ಒಲವನ್ನು ನೋಡಿ, ಅವರು ಹೇಳಿಕೊಟ್ಟಂತೆ ನಡಿಯುವರು, (ಯುರೋಪಿಯರು ಮುಸುಕಿನಲ್ಲಿಯೇ ಇವರ ಹೇಡಿತನಕ್ಕೆ ನಗಲಿಕ್ಕಿಲ್ಲವೇಕೆ?) ಇವರೆಲ್ಲ ಈ ಠರಾವನ್ನು ವಿರೋಧಿಸಿದರು; ಇದರಿಂದ ಮೂರು ಮಾತುಗಳು ಒಡೆದು ತೋರುವವು:— (೧) ಭಾರತೀಯರಿಗೆ ಅಪಮಾನವಾಗುವಂಥ ಸರಕಾರದ ಧೋರಣ. (೨) ನಮ್ಮಲ್ಲಿಯ ಬಹುಮತೀಯರ ಸ್ವಾಭಿಮಾನ ಶೂನ್ಯತೆ ಮತ್ತು (೩) ಸ್ವರಾಜ್ಯಪಕ್ಷದವರ ವೀರವೃತ್ತಿ. ಎಲ್ಲಿಯ ವರೆಗೆ ಮೂಲತಃ ನಮ್ಮಲ್ಲಿಯೇ ಸ್ವಾಭಿಮಾನ ಇರುವದಿಲ್ಲವೋ ಅಲ್ಲಿಯ ವರೆಗೆ ನಾವು ಸ್ವರಾಜ್ಯಕ್ಕೆ ಅಪಾತ್ರರೇ ಸರಿ. ಹೇಡಿಗಳು ಎಂಥ ಉಚ್ಚಸ್ಥಾನದಲ್ಲಿದ್ದರೂ ಅವರಿಗೆ ಸ್ವಾಭಿಮಾನವಿರುವದಿಲ್ಲ ಯೂನಿಯನ್ ಜಾಕಕ್ಕೆ ಯಾರಾದರೂ ಅಪಮಾನ ಮಾಡಿದರೆ ಸಾಕು; ಓರ್ವ ಸೋಟ್ಟ ಯುರೋಪಿಯ ಸಿಪಾಯಿಯ ತಲೆಗೆ ಪಿತ್ತವೇ ಏರುತ್ತದೆ! ಈ ತರದ ಸಿಟ್ಟು ಇದ್ದ ಸದಭಿಮಾನಿಗಳೇ ಸ್ವರಾಜ್ಯ ಸಂಪಾದನೆಗೆ ಯೋಗ್ಯರು. ಯಾಕಂದರೆ ಈ ತರದ ಕೋಪವು ಸ್ವಾಭಿಮಾನಪೂರ್ವಕವಾದ ವೀರವೃತ್ತಿಯ ಹೆಗ್ಗುರುತು. ನಮ್ಮಲ್ಲಿ ಇಂಥ ಜನರಿಲ್ಲದ್ದರಿಂದ ಸ್ವರಾಜ್ಯಸಾಧನವಾಗುವದು ಕಠಿಣವಾಗಿದೆ. ಇನ್ನು, ಸರಕಾರದ ಧೋರಣವನ್ನು ಕೊಂಚ ನಿರೀಕ್ಷಿಸುವಾ. ಸ್ವರಾಜ್ಯವನ್ನು ಕೊಡುತ್ತೇವೆಂದು ಬಣ್ಣದ ಮಾತುಗಳನ್ನು ಹೇಳುತ್ತಾರೆ; ಆದರೆ ಇಂಥ ಅಪಮಾನಗಳು ನಡೆಯುವಂತೆ ಯಾವಾಗಲೂ ಅವರು ಎಚ್ಚರದಿಂದಿರುತ್ತಾರೆ! ಅಂದಮೇಲೆ ಸರಕಾರದ ಸವಿಸವಿ ಮಾತುಗಳಿಗೆ ನಾವು ಲಕ್ಷ್ಯಗೊಡುವದೇಕೆ? ವಿರೋಧಿಸುವ ಮಹಾನುಭಾವರು ಹೇಳುವದೇನಂದರೆ— "ನೀಲ್ ಸಾಹೇಬರು ಒಳ್ಳೇ ಸಮಯದಲ್ಲಿ ಸಾಮ್ರಾಜ್ಯವನ್ನು ಸಂರಕ್ಷಿಸಿದರು! ಅವರು ಬಹಳ ಯೋಗ್ಯರು. ೧೮೫೭ ರ ಬಂಡಾಯವು ಮುಗಿದು, ೨ ವರುಷಗಳಾದ ಮೇಲೆ, ಮದ್ರಾಸದ ೧೧೧ ಮಹನೀಯರು ಅವರಿಗೆ ಮಾನಪತ್ರಕೊಟ್ಟು ಗೌರವಿಸಿದರು! ಅಂದಬಳಿಕ ಸಾರ್ವಜನಿಕ ಸ್ಥಳದಲ್ಲಿ ಅವರ ಪುತ್ಥಳಿ ಇರಲೇಬೇಕೆಂದು ಸಿದ್ಧವಾಗಲಿಲ್ಲವೇ?" ಎಂದು. ನಿಲ್ ಸಾಹೇಬರು ಮಾಡಿದ ರಾಕ್ಷಸೀ ಕೃತ್ಯಗಳನ್ನು ಇಂಗ್ಲೀಷಗ್ರಂಥಕಾರರೇ ನಿಷೇಧಿಸಿರುವರು! ಇಂಥವರಿಗೆ ಮಾನಪತ್ರಕೊಟ್ಟ ಆ ೧೧೧ ಮದ್ರಾಸದ ಮಹನೀಯರ ಮಾರ್ಮಿಕತೆಯನ್ನೂ ಸ್ವಾಭಿಮಾನವನ್ನೂ ಹೊಗಳಲಿಕ್ಕೆ ಸಹಸ್ರ ನಾಲಿಗೆಯ ಆದಿಶೇಷನೇ ಎದ್ದು ಬರಬೇಕು!! ಇನ್ನು ಮಾನಪತ್ರದ ಸಮಾಚಾರ; ಅಮೃತಸರದಲ್ಲಿ ಕೊಲೆಮಾಡಿದ ಡಾಯರ ಸಾಹೇಬರಿಗೂ ಅದು ಸಿಕ್ಕಿರುವದಿಲ್ಲವೇ? ಅಂದಮೇಲೆ ಮೇಲ್ಪಂಕ್ತಿಯಲ್ಲಿದ್ದ ನಿಲ್ ಸಾಹೇಬರಿಗೇಕೆ ಮಾನಪತ್ರದೊರೆತಿರಬಾರದು? ಇಂಥ ಮಾನಪತ್ರಗಳ ಬೆಲೆ ಎಷ್ಟಿದೆ, ಈ ಮಾನಪತ್ರವನ್ನರ್ಪಿಸುವ ಭಾರತೀಯರ ವೀರಧೈರ್ಯಾದಿಗಳೆಷ್ಟೆನೆಂಬುದನ್ನು ನಾವು ಚನ್ನಾಗಿ ಅರಿತುಕೊಳ್ಳಬೇಕು ಮತ್ತೂ ಸ್ವರಾಜ್ಯ ಪ್ರಾಪ್ತಿಯ ಹೋರಾಟಕ್ಕೆ ಸಿದ್ಧರಾಗಬೇಕು.

ಮುಂಬೈ ಇಲಾಖೆಯ ಶಿಕ್ಷಣ ಮಂತ್ರಿಗಳು ಉತ್ತರಕರ್ನಾಟಕದಲ್ಲಿ ಸಂಚಾರ ಮಾಡಿ,ಮರಳಿ ಮುಂಬೈ ಸೇರಿದ್ದಾಯಿತು. ಕರ್ನಾಟಕದಲ್ಲಿ ಶಿಕ್ಷಣದ ಕೊರತೆಗಳನೇಕವಾಗಿರುವದು ಅವರಿಗೆ ತಿಳಿದು ಬಂದಿದೆಯಂತೆ! ಹುಬ್ಬಳ್ಳಿಗೆ ಒಂದು ವೈದ್ಯಕಿ ಶಾಲೆಯನ್ನೂ, ಹಳ್ಳಿಯ ಪ್ರಾಥಮಿಕ ಶಾಲೆಗಳಲ್ಲಿ ಒಕ್ಕಲತನದ ಶಿಕ್ಷಣವನ್ನೂ, ನಗರದ ಪ್ರಾಥಮಿಕ ಶಾಲೆಗಳಲ್ಲಿ ಔದ್ಯೋಗಿಕ ಶಿಕ್ಷಣವನ್ನೂ, ಕೊಡುವ ಏರ್ಪಾಡು ಮಾಡುವೆವೆಂದೂ ಅವರು ಹೇಳಿದ್ದಾಯಿತಂತೆ! ಮಹಾರಾಷ್ಟ್ರದ ಡಾ. ಪರಾಂಜಪೆಯವರು ಶಿಕ್ಷಣಮಂತ್ರಿಗಳಿದ್ದಾಗ್ಯೆ, ವೈದ್ಯಕಿಶಾಲೆಯ ಕಲ್ಪನೆಯು ಹಿಂದಕ್ಕೆ ಅಟ್ಟಲ್ಪಟ್ಟಿತು. ಟಿಟ್ಟೀ ಕಾಲೇಜಿಗೆ ಬಹು ಅನಾಮತವು ದೊರೆತಿತು! ಈಗ್ಗೆ ಗುಜರಾತದ ಮಂತ್ರಿಗಳಾದರೂ ಕರ್ನಾಟಕದ ಬಗ್ಗೆ ಏನೇನು ಮಾಡುವರೋ ನೋಡಬೇಕು. ಸವಿಮಾತುಗಳಲ್ಲಿಯೇ ಅವರ ಸಹಾನುಭೂತಿಯು ಕರಗದೇ, ಕರ್ನಾಟಕದ ಬಗ್ಗೆ ನಿಜವಾದ ಕಳವಳಿಯು ಹುಟ್ಟಿ, ತಮ್ಮ ಅಧಿಕಾರದಲ್ಲಿರುವಾಗ ಕನ್ನಡಿಗರಿಗೆ ಕಲ್ಯಾಣವಾಗುವಂಥ ಕಾರ್ಯಗಳನ್ನು ಮಾಡುವರಾಗಿ ಆಶಿಸುತ್ತೇವೆ. ಶಿಕ್ಷಣಮಂತ್ರಿಗಳು ಕಳೆದ ವಾರ ಈ ನಾಡನ್ನು ಸುತ್ತಿದ್ದಾಯಿತು; ಗವರ್ನರರು ಈ ವಾರದಲ್ಲಿ ಸುತ್ತುತ್ತಲಿದ್ದಾರೆ. ಕರ್ನಾಟಕದ ಬಗ್ಗೆ ಇವರ ಮುಕ್ತಾಫಲಗಳು ಏನೇನು ಹೊರಗೆ ಬೀಳುವವೋ ನೋಡುವಾ.

ಜಮಖಂಡಿಯ ತರುಣ ರಾಜರು ಪಟ್ಟಕ್ಕೆ ಕುಳಿತಾಗಿನಿಂದ ಪ್ರಜೆಗಳ ಕಲ್ಯಾಣದ ಕಾರ್ಯದಲ್ಲಿ ತೊಡಗಿಕೊಂಡಿದ್ದು ಮೇಲಿಂದ ಮೇಲೆ ನಮ್ಮ ನಿದರ್ಶನಕ್ಕೆ ಬಂದಿದೆ. ಇದು ಈ ತರುಣ ರಾಜರಿಗೆ ಭೂಷಣವೇ. ತಮ್ಮ ಪ್ರಜೆಗಳಲ್ಲಿ ಉಚ್ಚತರದ ಶಿಕ್ಷಣವು ಹೆಚ್ಚಾಗಿ ಪ್ರಸಾರವಾಗಬೇಕೆಂದು, ಜಮಖಂಡಿಯಲ್ಲಿ ೨ ನೇ ವರ್ಗದ ಕಾಲೇಜನ್ನು ಪ್ರಾರಂಭಿಸಬೇಕೆಂದು, ಈಗ್ಗೆ ರಾಜರು ಯೋಚಿಸಿ, ಆ ಪ್ರಕಾರ ಮುಂಬೈ ವಿಶ್ವವಿದ್ಯಾಲಯಕ್ಕೆ ವಿನಂತಿಯನ್ನೂ ಮಾಡಿಕೊಂಡಿರುವರು. ಪ್ರಜೆಗಳಲ್ಲಿ ಉಚ್ಚ ಶಿಕ್ಷಣಪ್ರಸಾರವಾಗಬೇಕೆಂಬ ಉದ್ದೇಶವೇನೋ ಸ್ತುತ್ಯವಾದುದು. ಆದರೆ ಬಿ. ಎ. ಪರೀಕ್ಷೆಯ ಕೇವಲ ಬೌದ್ಧಿಕ ಶಿಕ್ಷಣವು ಈಗ್ಗೆ ನಮ್ಮ ಜನರಿಗೆ ಬೇಕಾಗಿಲ್ಲ. ಬಿ. ಎ. ಎಮ್. ಎ. ಪರೀಕ್ಷೆಗಳನ್ನು ಕೊಟ್ಟು ಹೊಟ್ಟೆಗೆ ಕೂಳಿಲ್ಲದೇ, ಬೀದಿ ಬೀದಿ ತಿರುಗುವವರು ಪ್ರತ್ಯಕ್ಷವಾಗಿ ನಮ್ಮ ಕಣ್ಣೆದುರಿನಲ್ಲಿರುವಾಗ್ಯೆ, ಮತ್ತೆ ಈ ಪರೀಕ್ಷೆಗಳಗಾಗಿ

ಯೋ ಹೆಚ್ಚು ಸೌಕರ್ಯಗಳನ್ನು ಕಲ್ಪಿಸಿ ಕೊಡುವದೇಕೆ? ಔದ್ಯೋಗಿಕ ಶಿಕ್ಷಣದ ಕೊರತೆಯು ಭರತಖಂಡದಲ್ಲಿ ಬಹಳೇ ಇದೆ. ಆದುದರಿಂದ ಈ ಶ್ರೀಮಂತರು, ಔದ್ಯೋಗಿಕ ಕಾಲೇಜನ್ನೇ ಜಮಖಂಡಿಯಲ್ಲಿ ಹೊರಡಿಸಿದರೆ, ದೇಶಕ್ಕೆ ದೊಡ್ಡ ಕಲ್ಯಾಣ ಮಾಡಿದಂತಾಗುವದು. ಈಗಿನ ಶ್ರೀಮಂತರ ಹಿರಿಯರ ಸ್ಮಾರಕಕ್ಕಾಗಿ ೧ ಲಕ್ಷ ರೂ. ನಿಧಿ ಕೂಡಿದೆ. ಇದರ ಹೊರತಾಗಿ ಹೆಚ್ಚಿನ ಭಾರವನ್ನು ಹೊರಲು ದಯಾಳುಗಳಾದ ಶ್ರೀಮಂತರೂ ಸಿದ್ಧರಿದ್ದಾರೆ ಆದುದರಿಂದ "ಆರ್ಟ್ಸ ಕಾಲೇಜ"ದ ಬದಲು ಔದ್ಯೋಗಿಕ ಕಾಲೇಜನ್ನೇ ಹೊರಡಿಸುವ ವಿಚಾರ ಮಾಡಬೇಕಾಗಿ ನಾವು ಶ್ರೀಮಂತರಲ್ಲಿ ಅತ್ಯಾಗ್ರಹ ಪೂರ್ವಕವಾಗಿ ಪ್ರಾರ್ಥಿಸುತ್ತೇವೆ. ಜಮಖಂಡಿಯ ಪ್ರಜೆಗಳಾದರೂ ಈ ನಮ್ಮ ಪ್ರಾರ್ಥನೆಗೆ ಬೆಂಬಲವನ್ನೀಯುವರಾಗಿ ನಮ್ಮಲ್ಲಿ ಪೂರ್ಣ ಭರವಸೆಯಿದೆ. ಈ ಬಗ್ಗೆ ಜಮಖಂಡಿ ಪ್ರಜೆಗಳು ಲೇಖಗಳನ್ನು ಬರೆದು ಕಳಿಸಿದರೆ ನಾವು ಆನಂದದಿಂದ ಅವನ್ನು ಪ್ರಕಟಿಸುವೆವು.

ಓಂ ಫಸ್!

ಹೂರಣವು ಹೊರಬಿದ್ದಿತು!!

ಬಾದಶಹರ ಚೌಕಶೀ ಮಂಡಲದ ಬುರುಗು ಒಡೆಯಿತು !

ಭಾರತೀಯರಿಗೆ ಪ್ರವೇಶವಿಲ್ಲ !!

ಹಿಂದುಸ್ಥಾನವು ಸ್ವರಾಜ್ಯವನ್ನು ಉಪಭೋಗಿಸಲಿಕ್ಕೆ ಯೋಗ್ಯವಿರುವದೋ ಇಲ್ಲವೋ ಎಂಬದನ್ನು ಪರೀಕ್ಷಿಸಲಿಕ್ಕೆ ಇಂಗ್ಲಂಡದ ಪಾರ್ಲಿಮೆಂಟ ಸಭೆಯವರು ತಮ್ಮ ಸಭಾಸದರೊಳಗಿನ ಕೆಲವರನ್ನು ಆರಿಸಿ, ಒಂದು ಮಂಡಲವನ್ನುಂಟುಮಾಡಿದ್ದಾರೆ. ಈ ಮಂಡಲದವರು ಸಪ್ತಸಮುದ್ರಗಳನ್ನು ದಾಟಿಬಂದು, ಬಹು ಕಷ್ಟಬಟ್ಟು, ಹಿಂದುಸ್ಥಾನಕ್ಕೆ ಬೇಗನೆ ತಲ್ಪುವರು! ಅವರು ಹಿಂದುಸ್ಥಾನದಲ್ಲಿಯ ಒಂಬತ್ತು ಶಾಸನ ಸಭೆಗಳನ್ನು (ಕೌನ್ಸಿಲ್ಲುಗಳನ್ನು) ಪರೀಕ್ಷಿಸಿ, ತಮಗೆ ಯೋಗ್ಯಕಂಡರೆ, ಸಣ್ಣ ಬಿನ್ನ ಇಯತ್ತೆಯಿಂದ ದೊಡ್ಡ ಬಿನ್ನ ಇಯತ್ತೆಗೆ ಹಿಂದೀಯರನ್ನು ಹಾಕುವರು!! ಆದರೆ ಒಂದು ವೈಚಿತ್ರ್ಯ! ಪರೀಕ್ಷೆ ಮಾತ್ರ ೧೦ ತಿಂಗಳಮೇಲೆ! ದೊಡ್ಡ ಪರೀಕ್ಷೆಯಾಗುವದಕ್ಕಿಂತ ಪೂರ್ವದಲ್ಲಿ "ಪುರ್ಲಿಂಗ ಮರಿ" (ಪ್ರಿಲಿಮಿನರಿ) ಪರೀಕ್ಷೆಯೂ ನಡೆದಿರುವದು! ನಮ್ಮ ಹಿಂದುಸ್ಥಾನದ "ಹೆಡ್ ಮಾಸ್ತರ"ರಾದ ವ್ಹಾಯಿಸರಾಯ ಸಾಹೇಬರೂ ಮತ್ತು ಅವರ "ಅಸಿಸ್ಟಂಟ ಮಾಸ್ತರ"ರಾದ ಪ್ರಾಂತಿಕ ಗವ್ಹರ್ನರರೂ ತಮ್ಮ ತಮ್ಮ ಶಾಲೆಗಳಲ್ಲಿಯ, ಮತ್ತು ಕೆಲವು ಯೋಗ್ಯರಾದ ಹೊರಗಿನ ಉಡಾಳ ಹುಡುಗರ ಪರೀಕ್ಷೆಯನ್ನು ತೆಗೆದುಕೊಳ್ಳಹತ್ತಿದ್ದಾರೆ. ಕೆಲವು ಸೇನಗುಪ್ತರಂಥ ಅಡನಾಡಿ ಹುಡುಗರು ಪರೀಕ್ಷೆಯೇ ಬೇಡೆನ್ನಹತ್ತಿದ್ದಾರೆ! ಮಹಾತ್ಮಾ ಗಾಂಧಿಯೆಂಬ ಒಳ್ಳೇ ಸಜ್ಜನನಾದ ಹುಡುಗನು ಸಹ ಪರೀಕ್ಷೆಗೆ ಕೂಡ ನಿರಾಶನಾಗಿ, ಬಾಯಿಮುಚ್ಚಿಕೊಂಡು ಸುಮ್ಮನೆಹೋದನು! ಲೋಕಮಾನ್ಯ ಟಿಳಕ ಮತ್ತು ದೇಶಬಂಧು ದಾಸ ಎಂಬ ಹುಡುಗರು ೭೦೦೦ ಮೈಲು ದೂರದಿಂದ ಬಂದ ಈ ಪಂಡಿತೋತ್ತಮರ ದಿವ್ಯತಮವಾದ ಪರೀಕ್ಷೆಯ ಸಂಭ್ರಮವನ್ನು ನೋಡದೇ ಹೋದರು! ಪಾಪ! ಅವರ ದುರ್ದೈವ! ಅದಕ್ಕೆ ಯಾರೇನು ಮಾಡಬೇಕು!!!

ವ್ಹಾಯಿಸರಾಯರು ಒಬ್ಬೊಬ್ಬರನ್ನೇ ಕರೆದು ಏನು ಹೇಳಿದರು? ಏನು ಕೇಳಿದರು? ಕಿವಿಮಾತುಗಳಲ್ಲಿ ಏನಾದರೂ ಮಹತ್ವ ಇರಬಹುದು! ಎಂದು ರಹಸ್ಯವನ್ನು ತಿಳಿಯಲು ಅನೇಕರು ಆತುರರಾಗಿದ್ದರು! ಆದರೆ ಎಲ್ಲವೂ ಭುರ್ ಭುಸ್! ಹೋದ ಮುಂದಾಳುಗಳು ತಮ್ಮ ತಮ್ಮ ಮಹತ್ವದ ಕೆಲಸಬಿಟ್ಟು, ತಮ್ಮ ಕಿಸೆಯ ಹಣವೆಚ್ಚಮಾಡಿ, ನೂರಾರು ಮೈಲು (ಕೆಲವರು ಸಾವಿರಾರು) ಪ್ರವಾಸಮಾಡಿ, ವ್ಹಾಯಿಸರಾಯರ ಯೋಗಕ್ಷೇಮ ಕೇಳಲಿಕ್ಕೆ ಹೋದಂತಾಯಿತು! ಬಾಯಿ ಮುಚ್ಚಿಕೊಂಡು ಹೋದರು! ಬಾಯಿ ಮುಚ್ಚಿಕೊಂಡು ಬಂದರು! ಎಲ್ಲವೂ "ಗಪ್ಚಿಪ್ ಫಜಲ್!"ದಂತೆ ಹುಡುಗರ ಆಟವಾಯಿತು! ಓರ್ವ ತುಂಟ ಹುಡುಗನು, ಉಳಿದ ಹುಡುಗರು ಆಡುತ್ತಿರುವವರನ್ನು ಕಂಡು, ಕರೆದು, "ತಮ್ಮಗಳಿರಾ, ಒಂದು ಚಲೋ ಸುದ್ದಿಯನ್ನು ಹೇಳುತ್ತೇನೆ, ಬರ್ರಿ! ಒಬ್ಬೊಬ್ಬರೇ ಬರ್ರಿ! ಕಿವಿಯಲ್ಲಿ ಹೇಳುತ್ತೇನೆ;" ಎಂದು ಆಡುವವರ ಆತುರತೆಯನ್ನು ಬೆಳೆಸಿ ಆ ಹುಡುಗರು ಒಬ್ಬೊಬ್ಬರೇ ಬಂದಮೇಲೆ, "ಇಕೊ ತಮ್ಮಾ, ೧ ದುಡ್ಡಿಗೆ ಮೂರು ಪೈ ಇದನ್ನು ಯಾರಿಗೂ ಹೇಳಬೇಡ" ಎಂದು ಕುಚೇಷ್ಟೆ ಮಾಡಿದಂತೆಯೇ, ವ್ಹಾಯಿಸರಾಯರ ಭೆಟ್ಟಿಯು ಸಂಗತಿಯಾಗಿದೆ! ಎಲ್ಲ ಪಕ್ಷದ ಮುಖಂಡರು ಬಾದಶಹರ ಚೌಕಶೀ ಮಂಡಲಕ್ಕೆ ಬಹಿಷ್ಕಾರ ಹಾಕಬೇಕೆನ್ನುತ್ತಿರುವರು! ಕಾಂಗ್ರೆಸ ಪಕ್ಷದವರು ಬಹಿಷ್ಕಾರ ಹಾಕಬೇಕೆಂದರೆ ಯಾರಿಗೂ ಮಹತ್ವವೆನಿಸಲಿಕ್ಕಿಲ್ಲ! ಪ್ರಾಗತಿಕ ಪಕ್ಷದವರೂ, ಸ್ವತಂತ್ರ ಪಕ್ಷದವರೂ, ಮುಸ್ಲಿಮ್ ಲೀಗದವರೂ ಐಕಮತ್ಯವನ್ನೇ ಉಚ್ಚರಿಸಹತ್ತಿದ್ದಾರೆ! ಚೌಕಶೀ ಮಂಡಲದಮೇಲೆ ಯಾವ ಹಿಂದೀ ಜನರೂ ಇಲ್ಲದ್ದರಿಂದ ಹಿಂದೀ ಮುಖಂಡರಿಗೆ ಇಷ್ಟು ಕೋಪಬಂದಿದೆ. ಬರದ್ವಾನದ ಮಹಾರಾಜರಂಥ ರಾಜನಿಷ್ಠ ಸಾಮ್ರಾಜ್ಯನಿಷ್ಠ ಮಹಾನುಭಾವರು ಈ ಜಗತ್ತಿನಲ್ಲಿ ಎಷ್ಟು ಪಾತಾಳಗರಡಿ ಹಚ್ಚಿ ಹುಡುಕಿದರೂ, ಸಿಗರು. ಅಂಥವರೂ ಕೂಡ ಈ ಬಾದಶಹರ ಮಂಡಲವನ್ನು ನಿಷೇಧಿಸುವರು. ಪಾರ್ಲಮೆಂಟದವರ ಈ ಕೃತಿಯನ್ನು ಇಂಗ್ಲಂಡದ ವೃತ್ತಪತ್ರಗಳು ಕೂಡ ನಿಷೇಧಿಸಿರುವವು.

ಇಂಥ "ಮಂಡಲ"ಗಳಿಂದ ಲಾಭದೊರೆಯುವದಿಲ್ಲವೆಂಬುದು ವೀರ ರಾಜಕಾರಣಪಟುಗಳಿಗೆ ಗೊತ್ತು. ಆದರಲ್ಲಿ ಅಲ್ಪ ಸ್ವಲ್ಪ ಲಾಭತಕ್ಕೀತೆಂದು ಯಾರಾದರೂ ಆಶೆಮಾಡಿದರೆ ಅವರೂ ನಿರಾಶರಾಗಬೇಕಾಗುತ್ತದೆ. ಅದೇ ಪ್ರಕಾರ ಪ್ರಾಗತಿಕರ ಸ್ಥಿತಿ ಈಗಾಗಿದೆ. ಪರೀಕ್ಷೆ ಮಂಡಲದರೆಂದು ಹೇಳಿಕೊಳ್ಳುವವರು ಶುದ್ಧ ಹೃದಯದಿಂದ ಒರಲು ಶಕ್ಯವೇ ಇಲ್ಲ. ಯಾಕಂದರೆ ಇಲ್ಲಿಯ ಅಳರಸರ ತಂತ್ರಗಳು ಬಹಳ ವಿಚಿತ್ರವಾಗಿರುತ್ತವೆ. ಹಿಂದಕ್ಕೆಮಾಂಟ-ಫೋರ್ಡ ಸುಧಾರಣೆಗಳು ಬರುವದಕ್ಕಿಂತ ಪೂರ್ವದಲ್ಲಿ, ರೌಲೆಟ್ ಕಾಯದೆಯನ್ನು ಮಾಡಿ, ಹಿಂದುಸ್ಥಾನದ ಮೇಲೆ ವಿಷದ ಗಾಳಿಯು ಬೀಸುವಂತೆ ಏರ್ಪಡಿಸಿ ಜನರಲ್ಲಿದ್ದ ಸರಕಾರದ ಮೇಲಿನ ವಿಶ್ವಾಸವನ್ನು ಅಮೃತಸರದಂಥ ಕೊಳೆಗಳಿಂದ ಹಾರಿಸಿಬಿಟ್ಟರು. ಇದರಿಂದ ಜನರಲ್ಲಿ ಜಾಗ್ರತೆಯಾಗಿ, ಭಯಂಕರ ಆಂದೋಲನವು ನಡೆದು, ಇಪ್ಪತ್ತು ಇಪ್ಪತ್ತೈದು ಸಾವಿರ ಜನರು ಆನಂದದಿಂದ ಸೆರೆಮನೆಗೆ ಹೋದರು! ಇದರಿಂದ ಬುದ್ಧಿಗಲಿತ ಸರಕಾರದವರು ಈ ಸಾರೆ ನಮ್ಮಲ್ಲಿಯೇ ಒಡಕು ಹುಟ್ಟಿಸಿದ್ದಾರೆ. ಹಿಂದೂ ಮು

ಸಲ್ಮಾನರ ಬಡೆಬಾಟಗಳು ತೀಕ್ಷ್ಣಸ್ವರೂಪವನ್ನು ಹೊಂದಲು ಅತ್ತ ಅವಕಾಶವನ್ನುಂಟು ಮಾಡಿದ್ದಾರೆ! ಇತ್ತ ಒಕ್ಕಟ್ಟಿನ ಸಲುವಾಗಿ ವ್ಹಾಯಿಸರಾಯರ ದೊಡ್ಡ ದೊಡ್ಡ ಬಣ್ಣದ ಮಾತುಗಳು ಹೊರಬೀಳುವಂತೆ ಮಾಡಿದ್ದಾರೆ! ಒಬ್ಬರನ್ನು ವಿಶೇಷವಾಗಿ ಏರಿಸುವದು ಮತ್ತೊಬ್ಬರಿಗೆ ಸಹಾಯ ಮಾಡದೇ ಇರುವದು! ಹಿಂದೀ ಸರಕಾರದಿಂದ ಪ್ರೋತ್ಸಾಹಿಸಲ್ಪಟ್ಟ ಕುಮಾರಿ ಮೇಯೋಳಂಥವಳು ಬಂದು, ಹಿಂದುಸ್ಥಾನದಲ್ಲಿ ಸಂಚರಿಸಿ ಇಲ್ಲದ ದೋಷಗಳನ್ನು ನಮ್ಮಲ್ಲಿ ಕಲ್ಪಿಸಿ, ಅವನ್ನು ಗ್ರಂಥರೂಪವಾಗಿ ಪ್ರಕಟಿಸಿ, ಹಿಂದುಸ್ಥಾನದ ಅವಮಾನ ಮಾಡಿ, ಆಂಗ್ಲರ ಮನಸ್ಸನ್ನು ಕಲುಷಿತವಾಗಿ ಮಾಡಿರುವಳು! ಅವಳ ಪುಸ್ತಕದ ಪ್ರತಿಗಳು ಎಲ್ಲ ಪರದೇಶಿಯರ ಹಸ್ತಗತವಾಗಬೇಕೆಂದು ಸರಕಾರದ ಎಷ್ಟೊಂದು ಪ್ರಯತ್ನ! ಮೇಲೆ ಗುಪ್ತಸಹಾಯ! ಲಂಡನ್ನಿನಲ್ಲಿ ಹಿಂದೀಯರ ಯೋಗಕ್ಷೇಮಕ್ಕಾಗಿದ್ದ "ಇಂಡಿಯಾ ಆಫೀಸ"ದವರೂ ಆ ಪುಸ್ತಕದ ಅನೇಕ ಪ್ರತಿಗಳನ್ನು ಕೊಂಡಂತೆ ವೃತ್ತಪತ್ರಿಕೆಗಳಲ್ಲಿ ಪ್ರಸಿದ್ಧವಾಗಿರುವದು! ಈ ಪ್ರಕಾರದ ವಿಷದ ಹವೆಯನ್ನು ಮೊದಲು ಹುಟ್ಟಿಸಿ, ಅದರಿಂದ ಕಲುಷಿತರಾದ ಜನರಲ್ಲಿ ತಮ್ಮದೊಂದು ಪರೀಕ್ಷಕ ಮಂಡಲವನ್ನು ನೇಮಿಸಿದರೆ ಆಗುವ ಲಾಭವೇನು? ಸೈನಿಕರಿಗಾಗಿ ಸರಕಾರದು ವೆಚ್ಚಮಾಡುವ ಅಸಂಖ್ಯವಾದ ಹಣದ, ವಿಚಾರಣೆಯಿಲ್ಲದೆ ಬಂದೀಖಾನೆಗಳಲ್ಲಿ ಕೊರಗುತ್ತ ಬಿದ್ದಿರುವ ಬಂಗಾಲದ ತರುಣರ ಇವೇ ಮೊದಲಾದ ಮಹತ್ವದ ಸಂಗತಿಗಳನ್ನು ಚರ್ಚಿಸಲು ಅವಕಾಶವಿರದ ಪರೀಕ್ಷಕರಲ್ಲಿ ಹಿಂದೀಯರು ವಿಶ್ವಾಸವಿಡುವದು ಶಕ್ಯವೇ? ವ್ಹಾಯಿಸರಾಯರು ಬೇಕಾದಷ್ಟು ಸುಣ್ಣ ಬಳಿದರೂ ಬಾದಶಹರ ಮಂಡಲವು ಬೆಳ್ಳಗೆ ಕಾಣದು.

ನಮ್ಮಲ್ಲಿ ನಿಜವಾಗ ಸಾಮರ್ಥ್ಯ ಬರುವ ವರೆಗೆ ಇಂಥ ಫಾರ್ಸುಗಳು ನಡೆದೇ ತೀರುವವು. ಇಂಥ 'ಮಂಡಲ'ಗಳಿಂದ ಸ್ವರಾಜ್ಯದ ಪಾವಟಿಗೆಗಳು ಕಟ್ಟಲ್ಪಡಲಾರವು. ಇಂಥ 'ಮಂಡಲ'ಗಳಿಂದ ಸರಕಾರದ ಬಾಹ್ಯರೂಪಗಳು ಬದಲಾದರೂ ಒಳಗಿನ ಸ್ವರೂಪವು ವ್ಯತ್ಯಾಸವನ್ನು ಹೊಂದಲಾರದು. ಸ್ವರಾಜ್ಯವೆಂದರೆ ಹೀಗಿರಬೇಕು.— ಹಿಂದೀ ಜನರ ಕೈಯಲ್ಲಿಯೇ ಹಿಂದುಸ್ಥಾನದ ಬೊಕ್ಕಸದ ಅಧಿಕಾರ ಬೇಕು. ಬೊಕ್ಕಸದ ಸಂರಕ್ಷಣಕ್ಕಾಗಿ ಭಾರತೀಯರ ಸೈನ್ಯವು ಬೇಕು, ಅದೂ ಭಾರತೀಯರ ಕೈಯಲ್ಲಿ ಬೇಕು; ಪರದೇಶದ ರಾಜಕಾರಣದ ತಂತ್ರಗಳೂ ನಮ್ಮ ಕೈಯಲ್ಲಿ ಬೇಕು. ಇಷ್ಟು ಇದ್ದರೇ ಸ್ವರಾಜ್ಯ. ಇಷ್ಟು ಇಲ್ಲದಿದ್ದರೆ, ಬೇಕಾದಷ್ಟು ಪ್ರತಿನಿಧಿಗಳನ್ನು ಆರಿಸಿ, ದಿಲ್ಲಿಗೆ ಕಳುಹಿಸಿದರೂ ಅದು ಸ್ವರಾಜ್ಯವೆನಿಸಲಾರದು. ಸರಕಾರದ ಮನಸ್ಸಿನಲ್ಲಿ ಹಿಂದುಸ್ಥಾನಕ್ಕೆ ಶಾಶ್ವತವಾಗಿ ನಿಜವಾದ ಹಿತ ಮಾಡುವ ಅಪೇಕ್ಷೆ ಇದ್ದರೆ, ಹಿಂದುಸ್ಥಾನದ ಪ್ರತಿನಿಧಿಗಳ ಹಾಗೂ ಇಂಗ್ಲಂಡದ ಪ್ರತಿನಿಧಿಗಳು ಒಂದು 'ರಾವುಂಡ ಟೇಬಲ್' ಸಭೆ ಮಾಡಿ, ಆ ಸಭೆಯ ನಿರ್ಣಯಗಳನ್ನು ಕೂಡಲೇ ಕೃತಿಯಲ್ಲಿ ತರಬೇಕು ನಮ್ಮಲ್ಲಿ ಸಾಮರ್ಥ್ಯ ಬರಬೇಕಾದರೆ ದೇಶದಲ್ಲಿ ಎಷ್ಟೇ ಮತಭೇದವಿದ್ದರೂ ನಾವು ಕಾಂಗ್ರೆಸ್ಸಕ್ಕೆ ಬಂದು ಸೇರಿ ರಾಜಕಾರಣದಲ್ಲಿ ಐಕ್ಯಮತ್ಯವನ್ನುಂಟು ಮಾಡಬೇಕು ಎಂಬದನ್ನು ಭಾರತೀಯರೆಲ್ಲ ಈಗಲಾದರೂ ತಿಳಿದುಕೊಂಡರೆ, ಈ ಚೌಕಶಿ ಮಂಡಲದ ಗೊಂದಲದಿಂದ ಭರತಖಂಡಕ್ಕೆ ಕಲ್ಯಾಣವೇ ಆಗುವದು.

ಕಾಂಗ್ರೆಸದ ನಿಸ್ಸೀಮ ಭಕ್ತರಾದ ಶ್ರೀ. ಪುರೋಹಿತ ತಮ್ಮಣ್ಣಾಚಾರ್ಯರ ಹಿರಿಯರು ಅಕಸ್ಮಾತ್ತಾಗಿ ವೈಕುಂಠವಾಸಿಗಳಾದ್ದರಿಂದ (ದೇವರು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ!) ಶ್ರೀ. ತಮ್ಮಣ್ಣಾಚಾರ್ಯರ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಲೆಕ್ಕ ಪರೀಕ್ಷಿಸುವ ಕಾರ್ಯವು ನಿಲ್ಲಿಸಲ್ಪಟ್ಟಿದೆ.

'ಸರಿ ಅತ್ತ; ದೂರ ನಿಲ್ಲು!'

(ಪುಣ್ಯಸ್ಮರಣೀಯರಾದ ಚಿತ್ತರಂಜನದಾಸರಿಂದ ಪ್ರಸ್ಥಾಪಿತವಾದ ಕಲಕತ್ತೆಯ 'ಫಾರವರ್ಡ' ಪತ್ರದ ಸಂಪಾದಕರು ಬಾದಶಹರ ಚೌಕಶಿ ಮಂಡಲದ ಬಗ್ಗೆ ಬರೆಯುವಾಗ್ಗೆ ತಮ್ಮ ಹೃದಯ ಕ್ಷೋಭೆಯನ್ನು ಕೆಳಗೆ ಕಾಣಿಸಿದಂತೆ ವ್ಯಕ್ತಪಡಿಸಿದ್ದಾರೆ.)

ಹಿಂದೀ ಜನಾಂಗವನ್ನು ನಾಗರಿಕ ಪದಕ್ಕೆ ಮುಟ್ಟಿಸುವ ಪವಿತ್ರ ಕಾರ್ಯದಲ್ಲಿಯೇ ತಾನು ತೊಡಗಿರುವಳೆಂಬ ಇಂಗ್ಲಂಡದ ಹೇಳಿಕೆಯು ಒಂದು ದೊಡ್ಡ ಸುಳ್ಳು! ಸುಳ್ಳೆಂದರೆ ಅತಿ ಅವಮಾನಾಸ್ಪದವಾದ ಸುಳ್ಳು!! ಹಿಂದುಸ್ಥಾನವೆಂದರೆ ತನ್ನ ವಶಕ್ಕೆ ಒಪ್ಪಿಸಲ್ಪಟ್ಟ ಒಂದು ಅತಿ ಪವಿತ್ರವಾದ ನಿಧಿ....ನಿಕ್ಷೇಪವಾಗಿದ್ದು, ಇಂದಿಲ್ಲ ನಾಳೆಗೆ ಅದು ಬುದ್ಧಿ ಕಲಿತ ಮೇಲೆ, ಅದಕ್ಕೆ ಸ್ವಾತಂತ್ರ್ಯವನ್ನು ದಯಪಾಲಿಸತಕ್ಕವಳೆಂದು ಅವಳು ದೇವರ ಕಡೆಗೆ ಕಣ್ಣು ತಿರುವಿ ಹೇಳುತ್ತಿರುವದಾದರೂ ತೀರ ನಿರ್ಲಜ್ಜತನದ, ಕುಹಕ ಯುಕ್ತಿಯಲ್ಲದೆ ಮತ್ತಿನ್ನೇನು? ತನ್ನ ಶಸ್ತ್ರಾಸ್ತ್ರಗಳ ಬಲಾಬಲಿಕೆಯಿಂದಲೇ ನಮ್ಮನ್ನು ಆಳಬೇಕೆಂದು ಇಂಗ್ಲಂಡದ ವಿಚಾರವಿದ್ದರೆ. ನಮ್ಮ (ಪ್ರಜಾಜನರ) ಇಚ್ಛಾನುಸಾರ ಆಳುತ್ತಿರುವನೆಂಬ ದೊಡ್ಡಸ್ತಿಕೆಯ ತೋರಿಕೆಯ ಹವ್ಯಾಸವನ್ನು ಇನ್ನಾದರೂ ಅವಳು ಬಿಟ್ಟುಬಿಡುವದೊಳ್ಳೆಯದು. ನಮ್ಮ ರಾಜ್ಯತಂತ್ರವನ್ನು ನಾವೇ ನಡಿಸಬೇಕೆಂಬ ಕುತೂಹಲವು ಅವಳಿಗೆ ಇದ್ದದ್ದೇ ನಿಜವಾದರೆ, ತನ್ನ ಚತುರಂಗ ಸೇನೆಯನ್ನೂ, ತನ್ನ ರಾಜ್ಯಶಕಟಕ್ಕೆ 'ಉಕ್ಕಿನ ಚೌಕಟ್ಟಿನಂತಿ'ರುವ ತನ್ನ ಈ ಆಳರಸರನ್ನೂ, ಹಗಲು ಹಾದಿ ಬಡಿಯಲಿಕ್ಕಾಗಿಯೇ ತಾನು ನಿರ್ಮಿಸುತ್ತಿರುವ ತನ್ನ ಈ ಕಮಿಟಿ ಕಮೀಶನ್‌ಗಳನ್ನೂ ಎಲ್ಲವನ್ನೂ ಒತ್ತಟ್ಟಿಗೆ ಕಟ್ಟಿಡಲು ಒಪ್ಪಿ, ತನ್ನ ಪ್ರಾಮಾಣಿಕತೆಯನ್ನು ಸಿದ್ಧಮಾಡಿ ತೋರಿಸಲಿ. ಒದ್ದು ಕೆಡಹಿ ನಮ್ಮನ್ನು ಮೆಟ್ಟಿ ಆಳುವಂಥ ತ್ರಾಣವು ಅವಳಲ್ಲಿರಬಹುದು; ಆದರೆ ನಮ್ಮ ದೈವಗತಿಯನ್ನು ಗೊತ್ತು ಹಚ್ಚುವ ಅಧಿಕಾರವು ತನಗುಂಟೆಂಬ ಅವಳ ವಿಧಾನಕ್ಕೆ ನಮ್ಮಿಂದೆಂದಿಗೂ ಸಮ್ಮತಿ ಸಿಕ್ಕದು.

ಹಿಂದುಸ್ಥಾನವನ್ನೂ, ಇಡೀ ಭೂಮಂಡಲವನ್ನೂ ಅದೇಕೆ ತನ್ನನ್ನೂ ಸಹ ಅವಳು ಇಂದಿನ ವರೆಗೆ ಮೋಸದಿಂದ ವಂಚಿಸುತ್ತ ಬಂದದ್ದು ಸಾಕಿನ್ನು. 'ಸರಿ ಅತ್ತ; ದೂರ ನಿಲ್ಲು, ನಮ್ಮ ಬಾಧ್ಯಾಬಾಧ್ಯತೆಯನ್ನು ನಿರ್ಣಯಿಸಲಿಕ್ಕೆ ನೀನೆಲ್ಲಿಯವಳು? ನಿನ್ನಷ್ಟಕ್ಕೆ ನೀನೇ ಕಲ್ಪಿಸಿಕೊಂಡಿರುವ ನಿನ್ನ ಈ ಅಧಿಕಾರವನ್ನು ನಾವು ಎಳ್ಳಷ್ಟಾದರೂ ಲೆಕ್ಕಿಸುವವರಲ್ಲ; ಅನ್ಯಾಯದ ನಿನ್ನ ಈ ಅಧಿಕಾರವನ್ನೂ ಶಕ್ತಿಯನ್ನೂ, ತಪ್ಪಿಸಿಕೊಳ್ಳಲಿಕ್ಕೆ ನಾವು ಅಸಮರ್ಥರಿರಬಹುದು; ಆದರೆ ನಮ್ಮ ಉದಾರ ಭಾವದ ತರುಣ ವೀರರನ್ನು ಸುಮ್ಮಸುಮ್ಮನೆ ಕಡುತರ ಕಾರಾಗೃಹದಲ್ಲಿ ತುರುಕಿ, ಅವರ ಸತ್ವಹರಣ ಮಾಡಿ ಹೀಗೆ ಮಾಡಬೇಕಾದದ್ದು ಕೇವಲ ನಮ್ಮ ಕಲ್ಯಾಣದ ಸಲುವಾಗಿಯೇ ಎಂದು ನಟಿಸುತ್ತಿರುವದನ್ನು ನಾವಿನ್ನು ಎಂದೂ ನಡೆಯಗೊಡಲಿಕ್ಕಿಲ್ಲ! ಬೇಕಾದರೆ ನಮ್ಮನ್ನು ಹಗಲೇ ಸುಲಿದುಕೊಳ್ಳಿರಿ, ಆದರೆ ನಮ್ಮ ಆಯವ್ಯಯದ ಮೇಲು ಕೂಡ್ರಿಸುವ ಯೋಜನೆ ಮಾಡುತ್ತಿರುವೆವೆಂಬ ನಿಮ್ಮ ವಂಚನೆಯ ಮಾತಿಗೆ ಎಂದಿಗೂ 'ಹೂಂ' ಅನ್ನಲಿಕ್ಕಿಲ್ಲ. ನಿಮ್ಮ ಇಚ್ಛೆ ಇದ್ದರೆ ನಮ್ಮನ್ನು ಪಟಪಟನೆ ಒಡೆದು ಕೊಲ್ಲಿರಿ; ಆದರೆ ಹೀಗೆ ಕೊಲ್ಲುವದರಿಂದಲೇ ನಮಗೆ ಬದುಕಿ ಬಾಳುವ ದಾರಿಯನ್ನು ತೋರಿಸುತ್ತಿರುವಿರೆಂಬ ನಿಮ್ಮ ಕಾಪಟ್ಯದ ಸ್ನೇಹಕ್ಕೆ ನಾವೆಂದಿಗೂ ಸಹಕಾರಿಯಾಗಲಿಕ್ಕಿಲ್ಲೆಂದು ಹಿಂದೀ ಮುಖಂಡರೆಲ್ಲರೂ, ಒಮ್ಮನಸ್ಸಿನಿಂದಲೂ ಏಕಸ್ವರದಿಂದಲೂ ಅವಳಿಗೆ ಕೂಗಿ ಹೇಳುವ ಹೊತ್ತು ಒದಗಿಬಂದಿಲ್ಲವೇ? ಈ ಸಂಪಾದಕರ ದರ್ಪವೂ ಅಭಿಮಾನವೂ ಆತ್ಮವಿಶ್ವಾಸವೂ ಪ್ರತಿ ಒಬ್ಬ ಹಿಂದೀ ಮುಖಂಡನಿಗಿದ್ದರೆ ಹಿಂದುಸ್ಥಾನಕ್ಕೆ ಇಷ್ಟೊಂದು ಅಪಮಾನದ ಪ್ರಸಂಗವೇ ಬರುತ್ತಿರಲಿಲ್ಲ. ಈಗಾದರೂ ಬುದ್ಧಿ ಕಲಿತುಕೊಳ್ಳಬಾರದೇ?

ಕನ್ನಡ ಶಿಲಾಲೇಖಗಳ ದುರವಸ್ಥೆ!

ಸರಕಾರದಿಂದ ಕನ್ನಡ ಶಿಲಾಲೇಖಗಳೆಲ್ಲ ಸಂಶೋಧಿತವಾಗಬೇಕಾದರೆ ೧೦೦ ವರ್ಷಗಳು ಬೇಕು!

ವಿಜಾಪುರ ಜಿಲ್ಲೆಯಲ್ಲಿ ಸುಸಂಘಟಿತವಾದ ಕಾರ್ಯದ ಯೋಜನೆ.

ಬ್ರಿಟಿಶ ಕರ್ನಾಟಕದಲ್ಲಿ ಶಿಲಾಲೇಖಗಳ ಮುದ್ರಣ ಕಾರ್ಯವು ಹಿಂದುಸ್ಥಾನ ಸರಕಾರದಿಂದ ನಡೆಯುತ್ತದೆ. ಇವರು ಒಂದು ವರ್ಷದಲ್ಲಿ ಒಂದೇ ತಾಲೂಕನ್ನು ಮಾತ್ರ ಶೋಧಿಸುವರು. ಬ್ರಿಟಿಶ್ ಕರ್ನಾಟಕದಲ್ಲಿ ಇನ್ನೂ ೫೪ ತಾಲೂಕುಗಳಲ್ಲಿ ಹೀಗೆ ಸಂಶೋಧನವಾಗಬೇಕಾಗಿದೆ. ಅಂದರೆ ಸರಕಾರದಿಂದ ನಡೆದಂತೆ ಮುದ್ರಣ ಕಾರ್ಯವು ನಡೆದರೆ ಬ್ರಿಟಿಶ್ ಕರ್ನಾಟಕದಲ್ಲಿಯ ೫೪ ತಾಲೂಕುಗಳಲ್ಲಿಯ ಶಿಲಾಲೇಖ ಮುದ್ರಣ ಕಾರ್ಯವು ಮುಗಿಯಲು ೫೪ ವರ್ಷಗಳು ಬೇಕೆಂಬುದು ಸ್ಪಷ್ಟವಿದೆ! ಹೀಗೆ ಮುದ್ರಣ ಕಾರ್ಯಕ್ಕೇ ಮೊದಲು ೫೪ ವರ್ಷಗಳು ಸಂದಿದರೆ, ಮುಂದೆ ಅವನ್ನೆಲ್ಲ ಓದಿ, ಯಾದಿ ಮಾಡಿ, ಪ್ರಕಟಿಸಲು ಮತ್ತೆ ೫೪ ವರ್ಷಗಳು ಬೇಕು! ಹೀಗೆ ಇನ್ನೂ ೧೦೦ ವರ್ಷಗಳ ವರೆಗೆ ಸರಕಾರದ ಕಾರ್ಯವು ಶೋಣನ ಹೆಜ್ಜೆಯಂತೆ ಸಾವಕಾಶವಾಗಿ ಹೆಜ್ಜೆಗಳನ್ನಿಡುತ್ತ ಸಾಗಬೇಕಾಗುವದು! ಆದ್ದರಿಂದ ಕರ್ನಾಟಕಕ್ಕಾಗಿ ಸರಕಾರದವರು ಪ್ರತ್ಯೇಕವಾದ ಶಿಲಾಶಾಸನ ಶಾಖೆಯನ್ನು ಸ್ಥಾಪಿಸಿ, ಅಲ್ಲಿ ಸಾಕಷ್ಟು ಜನರನ್ನಿಟ್ಟು ಈ ಕಾರ್ಯವನ್ನು ಸಾಗಿಸುವಂತೆ ಹಿಂದುಸ್ಥಾನ ಸರಕಾರಕ್ಕೆ ಕನ್ನಡಿಗರೆಲ್ಲ ಒತ್ತಾಯಪಡಿಸಲಿಕ್ಕೇಬೇಕು. ಈ ವಿಷಯದಲ್ಲಿ, ಧಾರವಾಡದ ಕರ್ನಾಟಕ ಇತಿಹಾಸ ಮಂಡಲದವರೂ, "ಕನ್ನಡಿಗ"ನೂ ಒಂದೇಸವನೆ ಹಿಂದುಸ್ಥಾನ ಸರಕಾರದ ಸಂಗಡ ಪತ್ರವ್ಯವಹಾರ ನಡೆಸಿ ದಿಲ್ಲಿಯ ಕಾಯದೇ ಮಂಡಲಗಳಲ್ಲಿ ಪ್ರಶ್ನೆಗಳನ್ನು ಕೇಳಿಸಿ, ಈ ವಿಷಯವು ಹಿಂದುಸ್ಥಾನ ಸರಕಾರದ ಲಕ್ಷ್ಯಕ್ಕೆ ಬರುವಂತೆ ಪ್ರಯತ್ನಿಸಿದ್ದಾರೆ. ನಾಮದಾರ ಡಾ. ಯೂ. ರಾಮರಾಯರೂ ಶ್ರೀಯುತ ಬೆಳವೀಯವರೂ ಸಹ ಈ ಕಾರ್ಯದಲ್ಲಿ ಒಳ್ಳೇ ಆಸಕ್ತಿಯಿಂದ ಕಾರ್ಯ ಮಾಡುತ್ತಲಿರುವರು. ಸರಕಾರವು ಈ ವಿಷಯವನ್ನು ಈಗ್ಗೆ ಪುನಃ ವಿಚಾರಿಸುತ್ತಲಿದೆ. "ಹಲ್ಲಿದ್ದಾಗಲೇ ಕಡಲೆ ತಿನ್ನಬೇಕು" ಎಂಬಂತೆ ಈ ಸಮಯದಲ್ಲಿಯೇ ಕರ್ನಾಟಕದಲ್ಲಿಯ ಸಾರ್ವಜನಿಕ ಸಂಸ್ಥೆಗಳೂ, ಮಹನೀಯರೂ, ಹಿಂದುಸ್ಥಾನ ಸರಕಾರಕ್ಕೆ ಒತ್ತಾಯಪಡಿಸಬೇಕು. ಇಲ್ಲದಿದ್ದರೆ "ಕನ್ನಡನಾಡಿನಲ್ಲಿ ಈ ಬಗ್ಗೆ ಚಳವಳಿಯೇ ಇಲ್ಲ! ಕನ್ನಡಿಗರಿಗೆ ಶಿಲಾಲೇಖಗಳೂ ಬೇಡ" ಎಂಬದಾಗಿ, ಏಕೀಕರಣ ವಿಷಯದಲ್ಲಿ ಮುಂಬೈ ಸರಕಾರವು ಕೊಟ್ಟ ಉತ್ತರವನ್ನೇ, ಹಿಂದುಸ್ಥಾನ ಸರಕಾರವೂ ಕೊಡುವ ಸಂಭವವಿದೆ. ಆದುದರಿಂದ ಕೆಳಗೆ ಕಾಣಿಸಿದ ನಿರ್ಣಯವನ್ನು, ಕರ್ನಾಟಕದ ಸಾರ್ವಜನಿಕ ಸಂಸ್ಥೆಗಳೆಲ್ಲ, ದಿಲ್ಲಿಯಲ್ಲಿದ್ದ ಹಿಂದುಸ್ಥಾನ ಸರಕಾರದ ಜನರಲ್ ಸೆಕ್ರೆಟರಿಯವರಿಗೆ ಕೂಡಲೇ ಕಳಿಸಬೇಕು:—

"As the History of Karnatak has received a severe set-back, on account of the Kannada Inscriptions not being fully surveyed & deciphered .... (ಇಲ್ಲಿ ಸಂಸ್ಥೆಯ ಹೆಸರನ್ನು ಬರೆಯಬೇಕು) urges the Government of India, to create a separate Epigraphy Circle for the British Karnatak"

"ಕನ್ನಡ ಶಿಲಾಲೇಖಗಳು ಸಂಪೂರ್ಣವಾಗಿ ಶೋಧಿಸಲ್ಪಡದೇ ಇರುವದರಿಂದ, ಕರ್ನಾಟಕ ಇತಿಹಾಸವು ಕುಂಠಿತವಾಗಿದೆ ಆದುದರಿಂದ, ಕೇವಲ ಕರ್ನಾಟಕಕ್ಕಾಗಿಯೇ ಕರ್ನಾಟಕ ಶಿಲಾಶಾಸನ ಖಾತೆಯನ್ನೊಂದು ಸ್ಥಾಪಿಸಬೇಕಾಗಿ ಈ .... (ಇಲ್ಲಿ ಸಂಸ್ಥೆಯ ಪೂರ್ಣ ಹೆಸರನ್ನು ಬರೆಯಿರಿ) ಸಂಸ್ಥೆಯು ಹಿಂದುಸ್ಥಾನ ಸರಕಾರಕ್ಕೆ ಆಗ್ರಹಪೂರ್ವಕವಾಗಿ ಪ್ರಾರ್ಥಿಸುತ್ತದೆ"

ಹೀಗೆ ಠರಾವನ್ನು ಹಿಂದುಸ್ಥಾನ ಸರಕಾರದ ಕಡೆಗೆ ಬಾಗಲಕೋಟೆಯ ಹಾರ್ಡಿಂಜ ಲೈಬ್ರರಿಯವರು ಈಗಾಗಲೇ ಕಳಿಸಿದ್ದಾರೆ. ಇವರ ಮೇಲ್ಪಂಕ್ತಿಯನ್ನು ಬ್ರಿಟಿಶ್ ಕರ್ನಾಟಕದಲ್ಲಿಯ ಎಲ್ಲ ಸಾರ್ವಜನಿಕ ಸಂಸ್ಥೆಗಳು ತೀಡಬೇಕಾಗಿ ಅತ್ಯಾಗ್ರಹದ ಬಿನ್ನಹವಿದೆ. ಈ ಬಗ್ಗೆ ಕಳಿಸಿದ ಸುದ್ದಿಯನ್ನು 'ಕನ್ನಡಿಗ'ನಿಗೆ ತಿಳಿಸಿದರೆ, ನಾವದನ್ನು ಆನಂದದಿಂದ ಪ್ರಕಟಿಸುವೆವು.

ಇನ್ನು ಸರಕಾರಕ್ಕೆ ಹೀಗೆ ತಿಳಿಸಿದ ಮಾತ್ರಕ್ಕೆ ಎಲ್ಲ ಕಾರ್ಯವೂ ಮುಗಿದಂತಾಯಿತೆಂದಲ್ಲ! ಸರಕಾರವು ಪ್ರತ್ಯೇಕವಾದ ಶಾಖೆಯನ್ನು ಸ್ಥಾಪಿಸಬಹುದು ಅಥವಾ ಸ್ಥಾಪಿಸಲಿಕ್ಕಿಲ್ಲ. ಆದ್ದರಿಂದ ನಾವು ಸರಕಾರದ ಮೇಲೆಯೇ ಅವಲಂಬಿಸಿ ಸುಮ್ಮನೇ ಕೂಡ್ರಬಾರದು. ಆದಷ್ಟು ಕಾರ್ಯವನ್ನು ನಾವು ಮಾಡಲೇಬೇಕು. ಆದ್ದರಿಂದ ವಿಜಾಪೂರ ಜಿಲ್ಲೆಯ ಮಟ್ಟಿಗೆ, ಈ ಶಿಲಾಶಾಸನ ಸಂಗ್ರಹದ ಕಾರ್ಯವನ್ನು ಸುಸಂಘಟಿತವಾಗಿ ಮಾಡಬೇಕೆಂದು ಗೊತ್ತಾಗಿದೆ. ಈ ಪವಿತ್ರ ಕಾರ್ಯದಲ್ಲಿ ಈ ಜಿಲ್ಲೆಯ ಕನ್ನಡಾಭಿಮಾನಿ ಕಲೆಕ್ಟರರಾದ ಶ್ರೀ ನಾಯಕರೂ ಸಹಾಯ ಮಾಡಲು ಸಿದ್ಧರಿದ್ದಾರೆ. ವಿಜಾಪುರದ ರಾವಸಾಹೇಬ ಹಳಕಟ್ಟಿಯವರು ಈ ಕಾರ್ಯದಲ್ಲಿ ಮುಖ್ಯ ದತ್ತವನ್ನು ವಹಿಸಿದ್ದಾರೆ. ಶ್ರೀಮಾನ್ ಕೌಜಲಗೀ ಹಣಮಂತರಾಯರು ಪ್ರಚಾರಕ ಕಾರ್ಯವನ್ನು ಮಾಡತೊಡಗಿದ್ದಾರೆ. ವಿಜಾಪೂರ ಜಿಲ್ಲೆಯ ಯಾವ ಯಾವ ಹಳ್ಳಿಗಳಲ್ಲಿ ಎಷ್ಟೆಷ್ಟು ಶಿಲಾಲೇಖಗಳಿವೆಂಬದನ್ನು ಶೋಧಿಸುವ ಕಾರ್ಯ ಈಗ್ಗೆ ನಡೆದಿದೆ. ಡಿಸೆಂಬರ ತಿಂಗಳ ಕೊನೆಯೊಳಗಾಗಿ ಈ ಕೆಲಸವು ಮುಗಿಯುವದು. ಈ ಮೇಲೆ ಈ ಸಂಗತಿಗಳನ್ನೊಳಗೊಂಡ ಒಂದು ಚಿಕ್ಕ ಪುಸ್ತಕವು ಪ್ರಕಟಿಸಲ್ಪಡುವದು, ಅದರಲ್ಲಿ ಶಿಲಾಶಾಸನಗಳ ಮುದ್ರಣಗಳನ್ನು ಹೇಗೆ ತೆಗೆದುಕೊಳ್ಳಬೇಕೆಂಬುದೂ, ಅವನ್ನು

ಓದುವ ಕ್ರಮವೂ ನಿರೂಪಿಸಲ್ಪಡುವವು. ಇವನ್ನು ಓದಿಕೊಂಡು ಹಳ್ಳಿಗಳಲ್ಲಿ ತಿರುಗಾಡಿ, ಶಿಲಾಶಾಸನಗಳ ಮುದ್ರಣವನ್ನು ತೆಗೆದುಕೊಂಡು ಕಳಿಸುವಂತಹ ಉತ್ಸಾಹೀ ಜನರು ಈಗ್ಗೆ ಬೇಕಾಗಿದ್ದಾರೆ. ಈ ಕಾರ್ಯವನ್ನು ಮೈಮೇಲೆ ತೆಗೆದುಕೊಳ್ಳುವಂಥ ಇತಿಹಾಸ ಪ್ರೇಮೀ ಕನ್ನಡಿಗರು ತಮ್ಮ ತಮ್ಮ ಹೆಸರುಗಳನ್ನು ಕೂಡಲೇ ಅರುಹಬೇಕಾಗಿ ಬಿನ್ನಹ. ಈ ಬಗ್ಗೆ ಪತ್ರವ್ಯವಹಾರವನ್ನು ಕೆಳಗಿನವರಲ್ಲಿ ಬೇಕಾದವರ ಸಂಗಡ ನಡಿಸಿ, ತಮ್ಮ ತಮ್ಮ ಹೆಸರುಗಳನ್ನು ಉತ್ಸಾಹಿಗಳು, ನೋಂದಾಯಿಸಬಹುದು:— (೧) ರಾವಸಾಹೇಬ ಹಳಕಟ್ಟೀ ಫಕ್ಕೀರಪ್ಪನವರು ಸಂಪಾದಕರು "ನವಕರ್ನಾಟಕ" ವಿಜಾಪೂರ (೨) ಕೌಜಲಗಿ ಹಣಮಂತರಾಯರು, ಖಾದೀ ಪ್ರಚಾರಕರು. ಗಲಗಲಿ (೩) ಮಂಗಳವೇಢೇ ಶ್ರೀನಿವಾಸರಾಯರು "ಕನ್ನಡಿಗ"ನ ಸಂಪಾದಕರು, ಬಾಗಲಕೋಟೆ.

ಕಾಲೇಜದ ವಿದ್ಯಾರ್ಥಿಗಳು ಬೇಸಿಗೆಯ ರಜೆಯಲ್ಲಿ ಊರಿಗೆ ಹೋದಾಗ್ಗೆ ತಮ್ಮ ಸುತ್ತಲಿನ ಹಳ್ಳಿಗಳಲ್ಲಿ ತಿರುಗಾಡಿ, ಈ ಸಣ್ಣದಾದರೂ ಮಹತ್ವದ ಕೆಲಸವನ್ನು ಮಾಡಿ, ಪುಣ್ಯವನ್ನು ಕಟ್ಟಿಕೊಳ್ಳಬೇಕು.

ಹಿಂದುಸ್ಥಾನೀ ಸೇವಾದಲ.

ವ್ಯಾಯಾಮಶಾಲೆಯ ಥರ ತೆಗೆಯುವ ಸಮಾರಂಭದ ಬೆಡಗು!!

ವ್ಯಾಯಾಮ ವಿಷಯದಲ್ಲಿ ಕರ್ನಾಟಕದ ಪ್ರಗತಿ !!

ಮಂಗಳವಾರ ತಾ॥ ೮ನೇ ದಿನವು ಕರ್ನಾಟಕದ ವ್ಯಾಯಾಮಾಭಿವೃದ್ಧಿಯ ಇತಿಹಾಸದಲ್ಲಿ ಮಹತ್ವವಾದುದು. ಯಾಕೆಂದರೆ ಕನ್ನಡ ತರುಣರ ವ್ಯಾಯಾಮಾಭಿವೃದ್ಧಿಗಾಗಿ ಕನ್ನಡ ನಾಡಿನ ಪ್ರತಿ ಜಿಲ್ಲೆಯಲ್ಲಿ ಒಂದೊಂದು ವ್ಯಾಯಾಮಶಾಲೆಯನ್ನು ಕಟ್ಟಿಸಬೇಕೆಂದು ಹಿಂ. ಸೇ. ದಲದ ಕರ್ನಾಟಕ ಶಾಖೆಯವರು ನಿಶ್ಚಯಿಸಿದಂತೆ, ಅದರ ಕಾರ್ಯಕ್ರಮವು ಬಾಗಲಕೋಟೆಯಲ್ಲಿ ಆ ದಿನ ಮೊದಲುಗೊಂಡಿತು. ಬಾಗಲಕೋಟೆಯ ಎಲ್ಲ ಜಾತಿ, ಎಲ್ಲ ಪಂಗಡಗಳ ನಾಗರಿಕರು ಆ ದಿನ ಕೂಡಿಕೊಂಡು ಕಟ್ಟಡದ ಥರವನ್ನು ಸುಮುಹೂರ್ತದಲ್ಲಿ ಅಗಿದರು! ಲಕ್ಷ್ಮೀಪುತ್ರರಾದ ಶೇಟ ಬಾಳಕೃಷ್ಣ ದಾಸರನ್ನು ಹಿಡಿದು, ಊರಲ್ಲಿಯ ವಕೀಲರು, ಡಾಕ್ಟರರು, ವ್ಯಾಪಾರಸ್ಥರು, ಶಿಕ್ಷಕರು, ವಿದ್ಯಾರ್ಥಿಗಳು ಇವರೇ ಮೊದಲಾದವರು ಗುರಿಯು ದೊರೆಯು ರೆಂಬ ದನ್ನು ಲಕ್ಷಿಸದೇ, ಕೈಯಲ್ಲಿ ಸಲಿಕೆ ಗುದ್ದಲಿಗಳನ್ನು ಹಿಡಿದು, ನೆಲ ಅಗೆಯುತ್ತಿರುವ ಆ ಉತ್ಸಾಹಪೂರ್ವವಾದ ನೋಟವು ಚಂದವೆ! ನೂರಾರು ಜನ ಸ್ವಯಂಸೇವಕರು ತಮ್ಮ ಅಚ್ಚುಕಟ್ಟಾದ ಉಡಿಪನ್ನು ಧರಿಸಿ, ಸಾಲಾಗಿ ಶಿಸ್ತಿನಿಂದ ಬದಿಯಲ್ಲಿ ನಿಂತು, ತುತೂರಿಗಳೊಂದಿಗೆ ಜಯ ಜಯಕಾರ ಮಾಡುತ್ತಿದ್ದುದು ಮತ್ತೊಂದೆಡೆ! ಇದನ್ನೆಲ್ಲ ನೋಡಿ, ಅಲ್ಲಿ ನೆರೆದಿದ್ದ ಮಹಾಜನರೆಲ್ಲ ಆನಂದಸಾಗರದಲ್ಲಿ ಮುಳುಗಿದರು! ಕರ್ನಾಟಕದ ಬೇರೆ ಜಿಲ್ಲೆಗಳಲ್ಲಿ ಹೊರಡಿಸತಕ್ಕ ವ್ಯಾಯಾಮಶಾಲೆಗಳ ಚಳವಳಿಯ ಮುಖ್ಯಸ್ಥಳವಾದ ಬಾಗಲಕೋಟೆಯೇ ಕರ್ನಾಟಕಕ್ಕೆ ಶಿಕ್ಷಕರನ್ನು ಇನ್ನು ಮೇಲೆ ಒದಗಿಸಿಕೊಡುವ ಕಾರ್ಯಕ್ರಮವನ್ನು ಇದೇ ಕಟ್ಟಡದಲ್ಲಿ ಪ್ರಾರಂಭಿಸತಕ್ಕದಿದ್ದುದರಿಂದ, ಇಷ್ಟೊಂದು ಉತ್ಸಾಹವು ಅಲ್ಲಿ ಕಂಗೊಳಿಸುತ್ತಿದ್ದುದು ಆಶ್ಚರ್ಯವಲ್ಲ!

ಈ ಥರ ಹಾಕುವ ಕಾರ್ಯ ಮುಗಿದ ಮೇಲೆ, ಈಗ್ಗೆ ಶಿಬಿರದಲ್ಲಿ ಶಿಕ್ಷಣ ಹೊಂದುತ್ತಿರುವ ಸ್ವಯಂಸೇವಕರ, ಹಾಗೂ ಅವರ ಶಿಕ್ಷಕರ, ಅನೇಕ ಬಗೆಯ ಆಟಗಳಾದವು! ಇವು ಬಹು ಪ್ರೇಕ್ಷಣೀಯವೂ ಆದವು, ಇವನ್ನೆಲ್ಲ ನೋಡಿದವರು ಡಾ. ಹರ್ಡೀಕರರ ಕರ್ತೃತ್ವಶಕ್ತಿಯನ್ನೂ, ಹಿಂದುಸ್ಥಾನೀ ಸೇವಾದಲದ ಕಾರ್ಯವನ್ನೂ ಕೊಂಡಾಡದೇ ಇರಲಿಲ್ಲ. ಇವೆಲ್ಲ ಆದ ಮೇಲೆ ಡಾಕ್ಟರ ಹರ್ಡೀಕರರು, ಸೇವಾದಲದ ಭಾವೀ ಕನಸುಗಳ ದಿಗ್ದರ್ಶನವನ್ನು ಮಾಡಿ, ಬಾಗಲಕೋಟೆಯಲ್ಲಿಯ ತರುಣರೆಲ್ಲರೂ ಶರೀರ ವರ್ಧನ ಕಾರ್ಯದಲ್ಲಿ ತೊಡಗಿಕೊಳ್ಳಬೇಕಾದರೆ, ನಗರದ ಹಿರಿಯರೆಲ್ಲ ತಾವೇ ವ್ಯಾಯಾಮ ಕಾರ್ಯಕ್ರಮಗಳಲ್ಲಿ ಭಾಗ ತೆಗೆದುಕೊಳ್ಳುವದು ಅವಶ್ಯವಾಗಿದೆಯೆಂದು ಹೇಳಿ, ಹಿರಿಯರಿಗಾಗಿ ಕೆಲವು ಪಂದ್ಯಾಟಗಳನ್ನು ರಚಿಸಿರುವ ಕಾರ್ಯಕ್ರಮವನ್ನು ಓದಿ ತೋರಿಸಿದರು; ಮತ್ತು ಬಾಗಲಕೋಟೆಯಲ್ಲಿಯ ಕೆಲ ಪ್ರಮುಖ ನಾಗರಿಕರು, ಈಗಾಗಲೇ ಶಿಬಿರದಲ್ಲಿ ಸಾಗಿದ ಶಾರೀರಿಕ ಶಿಕ್ಷಣವನ್ನು ಪಡೆಯಲು ಸ್ವಯಂಸ್ಫೂರ್ತಿಯಿಂದ ಮುಂದೊರೆದು ಬಂದುದರಿಂದ ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿ, ಉಳಿದವರಾದರೂ ಹೀಗೆ ಬಂದೇ ಬರುವರೆಂಬ ತಮ್ಮ ವಿಶ್ವಾಸವನ್ನು ತೋರ್ಪಡಿಸಿದರು. ಬಳಿಕ ರಾಷ್ಟ್ರೀಯ ಧ್ವಜಾವರೋಹಣದ ಕಾರ್ಯವು ಬಹು ವಿಜೃಂಭಣೆಯಿಂದ ನಡೆದು, ಕಡೆಗೆ ಅತ್ಯಂತ ಬೆಡಗಿನ ಈ ಕಾರ್ಯಕ್ರಮವು ಉತ್ಸಾಹದಿಂದ ಕೊನೆಗಂಡಿತು.

ಶಿಬಿರದ ಸುದ್ದಿಗಳು.

ಹಿಂ. ಸೇ. ದಲದ ಒಬ್ಬ ಉತ್ಸಾಹಿ ಹಾಗೂ ಕರ್ತೃತ್ವಶಾಲೀ ಸಭಾಸದರಾಗಿದ್ದ ಹುಬ್ಬಳ್ಳಿಯ ಜೋಶೀ ನಾರಾಯಣರಾಯರ ೩ನೇ ಸ್ಮಾರಕ ದಿನವು ೯ನೇ ತಾ॥ ದಿನ ಶಿಬಿರದಲ್ಲಿ ಆಚರಿಸಲ್ಪಟ್ಟಿತು.

ಈಗ್ಗೆ ಬಾಗಲಕೋಟೆಯ ೮೦ ಜನರೂ, ಶಿಬಿರದಲ್ಲಿಯ ೨೦ ಜನರೂ ಶಿಕ್ಷಣಹೊಂದುತ್ತಲಿದ್ದಾರೆ.

ಶಿಬಿರದ ಮೇಲ್ವಿಚಾರಕ ಮಂಡಲದವರಿಂದ ಆಮಂತ್ರಿಸಲ್ಪಟ್ಟಂತೆ, ಹೈದರಾಬಾದದ ಸುಪ್ರಸಿದ್ಧ ಶ್ರೀ ವಾಮನ ನಾಯಿಕರು, ಇದೇ ೨೦ನೇ ತಾ॥ ದಿನ ಜರಗುವ ಕಟ್ಟಡದ ತಳಹದಿಯ ಕಲ್ಲನ್ನು ಕೂಡಿಸುವ ಸಮಾರಂಭದ ಮುಖ್ಯ ಅರ್ಚಕರಾಗಿ ಬರಲು ಒಪ್ಪಿದ್ದಾರೆ. ಆ ದಿನ ವಿಶೇಷ ಕಾರ್ಯಕ್ರಮವಾಗುವದಾಗಿ ಜನರು ಕೋರುತ್ತಲಿರುವರು.

ನನಗೆ ಹೊಳೆದಂತೆ

ಕರ್ನಾಟಕ ಏಕೀಕರಣದ ಬಗ್ಗೆ ಕನ್ನಡಿಗರೆಲ್ಲ ಆತುರರಾಗಿರುವದು ಸರಕಾರಕ್ಕೆ ತಿಳಿದಿಲ್ಲವಂತೆ! ಅದನ್ನು ತಿಳಿದುಕೊಳ್ಳಲಿಕ್ಕೆ ಸರಕಾರದ ಪ್ರಯತ್ನವು ಸಹ ಇಲ್ಲ! ಆದರೆ ಡಾ. ಹರ್ಡೀಕರರು ಏನು ಊಟ ಮಾಡುತ್ತಾರೆ? ಹೇಗೆ ಕೆಮ್ಮುತ್ತಾರೆ? ಬಾಗಲಕೋಟೆಯಲ್ಲಿ ನಡೆದ ಶಿಬಿರದಲ್ಲಿ ಯುವಕರು ಬಹಿರ್ದೇಶಕ್ಕೆ ಹೋಗುವದೆಲ್ಲಿ? ಎಂಬುದನ್ನೆಲ್ಲ ತಿಳಿದುಕೊಳ್ಳಲಿಕ್ಕೆ ಸರಕಾರದಲ್ಲಿ ಹಣವಿದೆ; ಉತ್ಸಾಹವಿದೆ; ಚಿತ್ರಗುಪ್ತರೂ ಬೇಕಾದಷ್ಟಿದ್ದಾರೆ!! ನಮ್ಮ ದಯಾಳು ಮಹಾದಯಾಳು ಬ್ರಿಟಿಶ ಸರಕಾರವು ನಮ್ಮನ್ನಾಳುವ ಪದ್ಧತಿಯು ಹೀಗಿದೆ ನೋಡಿ!!!

ಹಿಂದುಸ್ಥಾನೀ ಸೇವಾದಲದಲ್ಲಿ ಶಿಕ್ಷಣಹೊಂದಿದ ಸ್ವಯಂಸೇವಕರಲ್ಲಿಯೂ, ಬೇರೆ ಸ್ವಯಂಸೇವಕರಲ್ಲಿಯೂ ಭೇದವೇನೆಂಬುದು ತಿಳಿಯಬೇಕಾಗಿದ್ದರೆ ಗುಜರಾತಿಗೆ ಕರ್ನಾಟಕದ ದಲದಿಂದ ಹೋದ ಸ್ವಯಂಸೇವಕರು, ಗುಜರಾತದಲ್ಲಿಯ ಎಲ್ಲ ಮುಖಂಡರಿಂದಲೂ ಪ್ರಶಂಸೆಯನ್ನು ಪಡೆದು ಬಂದುದನ್ನು ಎಲ್ಲರೂ ಲಕ್ಷ್ಯದಲ್ಲಿಡಬೇಕು. ಶ್ರೀ. ವಲ್ಲಭಭಾಯಿ ಪಟೇಲರು ಸಹ ಈ ಕನ್ನಡ ಯುವಕರನ್ನು (ಶ್ರೀಯುತರುಗಳಾದ ಮಾರ್ತಾಂಡ, ಏಕಾಂಬರ ಅಯ್ಯರ ಹಾಗೂ ಲಕ್ಷ್ಮೀವರದ) ಹೊಗಳಿದ್ದಾರೆ. ಗುಜರಾತದಲ್ಲಿ ಕೂಡಿದ ಪ್ರಾಂತಿಕ ಸ್ವಯಂಸೇವಕರ ಪರಿಷತ್ತಿನವರು ಸಹ ಈ ಕನ್ನಡ ಸ್ವಯಂಸೇವಕರ ಕೀರ್ತಿಯನ್ನು ಎಲ್ಲರೂ ತಿಳಬೇಕಾಗಿ ಹೇಳಿದ್ದಾರೆ!

ಓದುಗ.

ಇಹವೃತ್ತ.

ಮಳೆ ಮತ್ತೆ ಚನ್ನಾಗಿ ಆಗಿದೆ. ರೈತರೆಲ್ಲ ಸುಖಿಗಳಾಗುವ ಲಕ್ಷಣ ತೋರುತ್ತಲಿದೆ.

ಶ್ರೀ. ಹಿರೇಮಠರು ಬಸವೇಶ್ವರ ಹೈಸ್ಕೂಲಿನ ಹೆಡ್ ಮಾಸ್ತರರಾಗಿದ್ದಾರೆ. ಆದರೆ ಅವರಿಗೆ ಅಧಿಕಾರ ಎಷ್ಟರಮಟ್ಟಿಗಿದೆ? ಎಲ್ಲಿಯವರೆಗೆ ಅವರು ಈ ಕೆಲಸ ನೋಡತಕ್ಕದ್ದೆಂಬ ವಿಷಯವು ಗೊತ್ತಿಲ್ಲ.

ಜಾಹೀರ ವಿಜ್ಞಾಪನೆಯು.

ಬಾಗಲಕೋಟೆ ಮ್ಯುನಿಸಿಪಾಲಿಟಿಯ ಸ್ಕೂಲಬೋರ್ಡಿನವರು ಪ್ರಾಥಮಿಕ ಶಾಲೆಗಳ ಅಭ್ಯಾಸ ಪತ್ರಿಕೆಯಲ್ಲಿ ಇದ್ದಿಉ ಪರಿಸ್ಥಿತಿಗೆ ಯೋಗ್ಯವಾದ ಸುಧಾರಣೆಗಳನ್ನು ಮಾಡತಕ್ಕವರಿದ್ದು, ಆದಕ್ಕಾಗಿ ಸ್ಕೂ. ಬೋ. ಮೆಂಬರರ ಹಾಗು ಕೆಲವು ಶಾಲಾಧ್ಯಾಪಕರ ಒಂದು ಉಪಸಭೆಯನ್ನು ನಿಯಾಮಿಸಿದ್ದಾರೆ. ಉಪಸಭೆಯವರು ಬೇಗನೇ ಈ ವಿಷಯವನ್ನು ಚರ್ಚಿಸಿ, ಸುಧಾರಣೆಗಳನ್ನು ಸೂಚಿಸತಕ್ಕವರಿರುವರು.

ಅದ್ದರಿಂದ, ಪ್ರಾಥಮಿಕ ಶಾಲೆಗಳ ಅಭ್ಯಾಸಪತ್ರಿಕೆಯಲ್ಲಿ ಮಾಡತಕ್ಕ ಹೆಚ್ಚು ಕಡಿಮೆಗಳನ್ನೂ, ಹೊಸದಾಗಿ ಸೇರಿಸಬೇಕಾದ ವಿಷಯಗಳನ್ನೂ ಕುರಿತು ಯಾರಾದರೂ ಸೂಚನೆಗಳನ್ನು ಮಾಡತಕ್ಕದ್ದಿದ್ದರೆ ಅವರು ಅವುಗಳನ್ನು ಸೂಚಿಸುವ ಯೋಜನೆಯನ್ನು ತಯಾರಿಸಿ, ಅದನ್ನು ನಮ್ಮ ಕಡೆಗೆ ಇದೇ ತಿಂಗಳ ೧೫ ನೇ ತಾರೀಖಿನೊಳಗಾಗಿ ಕಳಿಸಿಕೊಡಬೇಕೆಂದು ವಿನಂತಿಯದೆ. ಉಪಸಭೆಯವರು ಅವುಗಳ ಯೋಗ್ಯ ವಿಚಾರವನ್ನು ಮಾಡುವರು

ಬಾಗಲಕೋಟೆ.
ತಾ|| ೮-೧೧-೧೯೨೭

ಅನಂತ ಬಳವಂತರಾವ ಜೋಶಿ.
ಉಪಸಭೆಯ ಕಾರ್ಯದರ್ಶಿ
ಹಾಗೂ ಕನ್ನಡ ಶಾಲಾಧ್ಯಾಪಕ.

ವಾಙ್ಮಯ ಪರಿಚಯ.

ವ್ಯಾಪಾರ ಅಂದರೇನು?:—ಮೈಸೂರಿನ ಜೀ. ಆರ್. ಜೋಸ್ಯರ- ಎಂ. ಎ. ಯವರಿಂದ ರಚಿತವಾದುದು ಪುಟ ೪೬ ಬೆಲೆ ೦-೧೨-೦

ವಿಲಾಯತಿಯ ವೃತ್ತಪತ್ರಿಕೆಗಳಲ್ಲಿ ವ್ಯಾಪಾರ ವಿಷಯದ ಮೇಲೆ ಪ್ರಕಟಿಸಿದ ಉಪನ್ಯಾಸಗಳ ಆಧಾರದ ಮೇಲೆ ಬರೆದ ಚಿಕ್ಕ ಪುಸ್ತಕವಿದು. ನಮ್ಮ ದೇಶ ಪರಿಸ್ಥಿತಿಗೆ ಅನುಕೂಲವಾಗುವಂತೆ ವಿಶೇಷವಾಗಿ ಮೈಸೂರಿನವರಿಗೆ ಅನುರೂಪವಾಗುವಂತೆ ವಿಷಯ ವಿವೇಚನೆಯಾಗಿರುವದು. ವಿಶೇಷವಾಗಿ ಓದುಗಲಿಯದ ಜನರೇ ವ್ಯಾಪಾರವನ್ನು ಕೈಕೊಳ್ಳುವರೆಂದು ಸಾಮಾನ್ಯವಾದ ತಿಳುವಳಿಕೆಯಾಗಿರುವದು. ಇದರಲ್ಲಿ ಸ್ವಲ್ಪ ತಥ್ಯವೂ ಇದೆ ತಾವು ಕೈಕೊಂಡ ವ್ಯವಸಾಯದ 'ಓ-ನಾಮಾ-ಸಿ'- ಯಾದರೂ ಗೊತ್ತಿರದ ಜನರು ಅನೇಕರಿರುವರು. ಅಂಥವರಿಗೆ ಈ ಪುಸ್ತಕವು ಸಹಕಾರಿಯಾಗುವದರಲ್ಲಿ ಸಂದೇಹವಿಲ್ಲ,

ಇಂಗ್ಲೀಷಭಾಷೆಯಲ್ಲಿಯ ವ್ಯಾಪಾರದ ಮೇಲಿನ ಪಠ್ಯ ಪುಸ್ತಕಗಳಂತೆ ವಿಸ್ತೃತವಾದ ವಿವೇಚನೆಯಾಗಲಿ. ವ್ಯವಹಾರದಲ್ಲಿ ತಾತ್ಕಾಲಿಕವಾಗಿ ಉಪಯೋಗವಾಗುವ ಸಲಹೆಗಳಾಗಲಿ ಇದರಲ್ಲಿ ಕಂಡುಬರುವದಿಲ್ಲ ವ್ಯಾಪಾರದ ಸತ್ಯಸ್ವರೂಪವೇನು? ಅದರ ಅಂಗಗಳಾಗಿರುವ 'ಮಾರುವವರು'-'ಸರಕುಗಳು'-'ಬೆಲೆ'- ಮುಂತಾದವುಗಳ ಸ್ಥಿತಿಗತಿಗಳು ಹೀಗಿರಬೇಕು? ಇವೇ ಮೊದಲಾದ ಸಾಮಾನ್ಯ ಹಾಗೂ ತಾತ್ವಿಕ ವಿವೇಚನೆಗಳನ್ನೊಳಗೊಂಡ ಈ ಪುಸ್ತಕವು 'ವ್ಯಾಪಾರ- ಬಾಲಬೋಧ'- ಯಾಗಿರುವದೆಂದರೆ ತಪ್ಪಾಗದು ಪೂರ್ವಕಾಲ ಹಾಗೂ ಸದ್ಯಸ್ಥಿತಿಯ ತುಲನಾತ್ಮಕ ನಿರೀಕ್ಷಣವೂ, ಮೈಸೂರಿನ ಸಚಿತ್ರವಾದ ವ್ಯಾಪಾರದ ನಕಾಶವೂ ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಿರುವವು.

ಶ್ರೀಮನ್ಮಹಾರಾಜರ ಭಾವಚಿತ್ರದಿಂದ ಕೂಡಿದ ಪುಸ್ತಕದ ಕಟ್ಟೂ ಹೊರಮೈಯೂ ಅಂದವಾಗಿವೆ. ಹೊಳಪಿನ ಕಾಗದಮೇಲಿನ ಬೆಂಗಳೂರು ಪ್ರೆಸ್ಸಿನ ಮುದ್ರಣವೂ ಮುದ್ದಾಗಿಯೂ ನಿರ್ದೋಷವೂ ಆಗಿದೆ.

— ಶ್ಯಾಮ.

ಸತ್ಯಮಂಗಲಂ.

ಕೊಯಿಮತ್ತೂರ ಜಿಲ್ಲೆಯಲ್ಲಿ ಸತ್ಯಮಂಗಲಂ ಎಂಬ ತಾಲೂಕು ಇತ್ತು. ಈ ತಾಲೂಕು ಮೈಸೂರ ಪ್ರಾಂತದ ಸೀಮೆಗೆ ಹತ್ತಿದ್ದು ಇಲ್ಲಿಯ ಜನರಲ್ಲಿ ಮೂರು ನಾಲ್ಕಾಂಶ ಜನರು ಕನ್ನಡಿಗರಿರುವರು. ಸತ್ಯಮಂಗಲದಲ್ಲಿ ತಾಲೂಕು ಇರುವ ವರೆಗೆ ಕೋರ್ಟಭಾಷೆಯು ವಿಶೇಷವಾಗಿ ಕನ್ನಡವೇ ಇತ್ತು. ಆದರೆ ಈಗ ಈ ತಾಲೂಕನ್ನು ತೆಗೆದು ಗೋಪಿಚೆಟ್ಟಿಪಾಲಯಂ ಎಂಬಲ್ಲಿಗೆ ತಾಲೂಕಿನ ಕಚೇರಿಯನ್ನು ಒಯ್ದಿರುವರು ಅಂದಿನಿಂದ ಕನ್ನಡವು ನಾಮಶೇಷವಾಗತೊಡಗಿದೆ. ವ್ಯವಹಾರದಲ್ಲಿ ತಮಿಳ ಮಿಶ್ರಿತ ಕನ್ನಡವು ಇನ್ನೂ ಮನೆಗೆ ರೂಢಿಯಲ್ಲಿದ್ದರೂ ಕನ್ನಡ ಶಾಲೆಗಳು ಇಲ್ಲದ್ದರಿಂದಲೂ ಕೋರ್ಟಿನ ಭಾಷೆಯು ತಮಿಳು ಇರುವದರಿಂದಲೂ ಕನ್ನಡವನ್ನು ಜನರು ಮರೆಯತೊಡಗಿದ್ದಾರೆ ಹಿಂದಕ್ಕೆ ಕೊಳ್ಳೇಗಾಲ ತಾಲೂಕಿನ ವಿಷಯವಾಗಿ ಕರ್ಮವೀರದಲ್ಲಿ ಲೇಖಗಳು ಪ್ರಸಿದ್ಧವಾಗಿದ್ದವಷ್ಟೇ ಸತ್ಯಮಂಗಲವು ಆ ತಾಲೂಕಿನ ನೆರೆಯಲ್ಲಿಯೇ ಇರುವದು ಅಲ್ಲಿಗೆ ಕರ್ನಾಟಕ ಏಕೀಕರಣ ಮುಂದಾಳುಗಳು ಹೋಗಿ ಜಾಗೃತಿಯನ್ನುಂಟು ಮಾಡಿದರೆ ಇನ್ನೂ ಅಲ್ಲಿಯ ಜನರು ಕನ್ನಡದ ಅಭಿಮಾನವನ್ನು ಹಿಡಿಯಬಹುದೆಂದು ಆಶೆಯದೆ ಆದರೆ ಹೀಗೆಯೇ ಕೆಲವು ದಿನಗಳ ವರೆಗೆ ದುರ್ಲಕ್ಷ್ಯಮಾಡಿದರೆ ಆ ತಾಲೂಕು ಸಂಪೂರ್ಣ ತಮಿಳವಾಗಿ ಹೋಗುವ ಅಂಜಿಕೆಯದೆ ಸತ್ಯಮಂಗಲವು ನೇಕಾರರ ಕೇಂದ್ರವಾಗಿರುವದು, ಅವರೆಲ್ಲರೂ ಉಳಿದ ನೇಕಾರರಂತೆ ಗಿರಣಿಯ ಇಲ್ಲವೇ ವಿದೇಶಿ ನೂಲನ್ನೇ ಉಪಯೋಗಿಸುತ್ತಿರುವರು, ತಮಿಳ ನಾಡಿನವರು ಇಲ್ಲಿ ಖಾದಿಯ ಕೇಂದ್ರವನ್ನು ಸ್ಥಾಪಿಸುವ ಪ್ರಯತ್ನವನ್ನು ಮಾಡಿದಂತೆ ತೋರುವದಿಲ್ಲ. ಆದರೆ ಗೋಪಿಚೆಟ್ಟಿಪಾಲಯಂ ದಲ್ಲಿ ಮಾತ್ರ ಅವರದೊಂದು ಕೇಂದ್ರವಿರುವದು ಹೀಗಾಗಿ ಜನರ ಲಕ್ಷ್ಯವೆಲ್ಲ ಗೋಪಿಚೆಟ್ಟಿಪಾಲಯಾರ ಕಡೆಗೇ ಹೊರಳಹತ್ತಿದೆ, ಅದ್ದರಿಂದ ಕನ್ನಡಿಗರು ಬೇಗನೇ ಚಳವಳಿಯನ್ನು ಮಾಡಲಿಕ್ಕೆ ಬೇಕು. ಇತ್ತ ಏಕೀಕರಣ ಸಂಘದವರಾಗಲಿ, ಪ್ರಾಂತಿಕ ಸಮಿತಿಯವರಾಗಲಿ ಗಮನಕೊಡಬೇಕೆಂದು ವಿನಂತಿಯದೆ. ಇಲ್ಲಿಗೆ ಹೋಗಲಿಕ್ಕೆ ಚಾಮರಾಜ ನಗರದಿಂದ ದಿನಾಲು ಮೋಟರುಗಳು ದೊರೆಯುತ್ತವೆ.

ತ ಬ. ಪುರೋಹಿತ.

—ಕರ್ಮವೀರ.

ಗಬ್ಬೂರಲ್ಲಿಯ ಶಿಲಾಲೇಖಗಳು.

(ಲೇ:— ಕಟ್ಟೀ ಗಮನಾಚಾರ್ಯರು,

ನಿಝಾಂ ಕರ್ನಾಟಕದ ರಾಯಚೂರಿಗೆ ಉತ್ತರದಲ್ಲಿ ೧೮ ಮೈಲುಗಳ ಮೇಲೆ ಗಬ್ಬೂರು ಎಂಬ ಗ್ರಾಮವಿರುವದು. ಅಲ್ಲಿಯ ಜನರು ಅದು ಬಭ್ರುವಾಹನನ ಪಟ್ಟಣವೆಂದು ಹೇಳುವರು. ಅದು ದ್ವಾಪರಯುಗದ ಪಟ್ಟಣವೆಂಬುದನ್ನು ಯಾರಾದರೂ ನಂಬದಿದ್ದರೂ, ೭-೮ ನೂರು ವರುಷಗಳಹಿಂದೆ ಗಬ್ಬೂರು ಒಂದು ರಾಜಧಾನಿಯಾಗಿದ್ದಿತೆಂದು ಧಾರಾಳವಾಗಿ ಹೇಳಬಹುದು. ಸುಲಿನ ಪ್ರದೇಶವು ಎರೆಭೂಮಿಯು ಆ ಭಾಗದ ಹಳ್ಳಿಗಳು ಬಹು ಧನಿಕವಾಗಿರುವವು. ರೈತರ ಮನೆಗಳೆಂದರೆ ದೊಡ್ಡ ದೊಡ್ಡ ಊರುಗಳ ವಕೀಲರ ಚಾಳಗಳೆಂದೇ ಅನ್ನಬಹುದು. ದನಕರುಗಳು ಪುಷ್ಟವಾಗಿಯೂ ವಿಪುಲವಾಗಿಯೂ ಇವೆ. ಅಲ್ಲಲ್ಲಿಗೆ ಪೂರ್ವದ ದೊಡ್ಡ ದೊಡ್ಡ ಕೆರೆಗಳಿವೆ ಗಬ್ಬೂರಿಗೆ ೨-೩ ಮೈಲುಗಳ ಅಂತರದಲ್ಲಿ ಒಂದು ದೊಡ್ಡ ಕೆರೆಯಿದ್ದು, ಅದರ ಒಡ್ಡು ಅಜಮಾಸ ೨ ಮೈಲು ಇರುವದು. ಇಂಥ ಉತ್ಕೃಷ್ಟ ಭೂಮಿಯಲ್ಲಿ, ಗಬ್ಬೂರಂಥ ಪ್ರಾಚೀನಕಾಲದ ಹೆಸರಾದ ಊರುವದು ಆಶ್ಚರ್ಯವಲ್ಲ. ಅಲ್ಲಿ ಉತ್ತಮವಾದ ಕಲ್ಲುಗಳೂ ದೊರೆಯುತ್ತವೆ. ದೊಡ್ಡ ದೊಡ್ಡ ಕಲ್ಲುಬಂಡೆಗಳಿಂದ ಕಟ್ಟಿದ ಕೋಟೆಯು ಊರನ್ನು ಸುತ್ತುಹಾಕಿದೆ. ಊರಲ್ಲಿ ೨ ದೊಡ್ಡ ಹೊಂಡಗಳಿವೆ. ಈ ಊರಲ್ಲಿ ಪ್ರಾಚೀನ ಕಾಲದ ಅನೇಕ ಸುಂದರವಾದ ಗುಡಿಗಳಿರುತ್ತವೆ. ಈ ಗುಡಿಗಳನ್ನು ಕಟ್ಟಿ ಉಪಯೋಗಿಸಿದ ಕಲ್ಲುಗಳು ಎಂಟೆಂಟು ಮೊಳದ ವರೆಗೆ ಉದ್ದವಾಗಿ



ಕಿರ್ಲೋಸ್ಕರ

ಸೇಂಗಾ ಒಡೆಯುವ ಯಂತ್ರ.

ನಮ್ಮ ಕಾರ್ಖಾನೆಯಲ್ಲಿ ಎರಡು ಮಾದರಿಯ ಯಂತ್ರಗಳು ತಯಾರಾಗುತ್ತವೆ. ಒಂದು ಇಂಜಿನ ಶಕ್ತಿಯಿಂದಲೂ, ಇನ್ನೊಂದು ಕೈಯಿಂದಲೂ ನಡೆಯುತ್ತವೆ. ಇವುಗಳ ಯಾವತ್ತೂ ಭಾಗಗಳು ಕಬ್ಬಿಣದವು. ಬೀಸಣಿಕೆಯಿರುವದರಿಂದ ಕಾಳುಗಳು ಹಸನಾಗಿ ಬೀಳುವವು. ನುಚ್ಚಾಗುವದಿಲ್ಲ.

ಸೇಂಗಾದ ಯಣ್ಣೆಯನ್ನು ತೆಗೆಯುವವರೂ ಸೇಂಗಾ ಬಿತ್ತುವವರೂ ಕಾಳನ್ನು ಮಾಡಲಿಕ್ಕೆ ಈ ನಮ್ಮ ಯಂತ್ರಗಳನ್ನೇ ಉಪಯೋಗಿಸಬೇಕು. ಕಳೆದ ವರ್ಷಕ್ಕಿಂತಲೂ ಈ ವರ್ಷ ಇವುಗಳ ಬೆಲೆಯನ್ನು ಕಡಿಮೆ ಮಾಡಿರುತ್ತೇವೆ. ಬಿಡಿ ಭಾಗಗಳು ನಮ್ಮಲ್ಲಿ ದೊರೆಯುತ್ತವೆ. ಸವಿಸ್ತಾರ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್ } ಕಿರ್ಲೋಸ್ಕರ ವಾಡಿ, ಜಿ. ಸಾತಾರಾ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ॥ ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ತರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೩೨೭ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರೆಂಟೆಂಡಂಟ್ ಸೆಕ್ರೆಟರಿಯಟ್ ಹೈದರಾಬಾದ ಡೆಕ್ಕನ್ನ ರೂ.೧೦೦೦

(೨) ಎಲ್. ಬಿ. ಸಿ. ನಂ. ೧೯೬೨ ನಾರಾಯಣ ವಿಠ್ಠಲ ಲೋಣಕರ. ಕೆರ್ ಆಫ್ ಡಿ ಈ. ಪುರಾಣಿಕ ೧೦೭ ನಿಹಾಲಪುರ ಇಂದೂರ. ೧೦೦೦

(೩) ಎಲ್. ಬಿ. ಸಿ. ನಂ. ೩೧೧ ರಾಮಚಂದ್ರ ಅನಂತ ಶಿರೋಳಿ. ಡಿವಿಜನಲ್ ಫಾರೆಸ್ಟ ಆಫೀಸರ ಧತ್ತೂರಾ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೭ ಕೇ. ಜಿ. ಫರ್ನಾಂಡೋ ವ್ಯಾಪಾರಸ್ಥ ಬ್ರುಕ್‌ಸಾಯಿಡ ಸಿಲೋನ, ಕೋಲಂಬೋ. ರೂ. ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜಿ. ಚವರೆ. ಅಶಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ. ಜಿಲ್ಲಾ ವಿಜಾಪುರ. ರೂ ೧೦೦೦

ಬಿ. ನ್. ಆರಾಧ್ಯ
ಚೀಫ ಏಜಂಟ ಹುಬಳ್ಳಿ (ಮುಂಬಯಿ ಇಲಾಖಾ.)

ಅತ್ಯಲ್ಪವಿವೆ ! ಉಚಿತ!
ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೊಕೆಟ್ ವೊಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಆಜ್ಞಾ ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳವೇ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವೊಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ. ಪಿ, ಬಿ. ೭೨೩೫ ಮದ್ರಾಸ.



ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

೧೯೨೭ನೇ ಜನವರಿ ೧೫ರಿಂದ ಪ್ರಾರಂಭ.



ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್ ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ-

೧ ನೀವು ನಮಗೆ ರೂ. ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಹಣವನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬುದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪುವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ್ ಗೋಲ್ಡ್" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ.

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ಬಿಕರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು. ಅಥವಾ ವಿ. ಪಿ ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಳೆದುಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಅಪೇಕ್ಷಿಸುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೬-೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್. ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಜಾಹೀರ ನೋಟೀಸು.

ನಾನು ಅಯ್ಯನಗೌಡಾ ತಂದಿ ಕರಿಗೌಡಾ ಪಾಟೀಲ ಸಾ. ಭದ್ರನಾಯಕನ ಜಾಲೀಹಾಳ ತಾಲೂಕ ಬದಾಮಿ. ಯಾವತ್ತೂ ಜನರಿಗೆ ಈ ಜಾಹೀರ ನೋಟೀಸಿನಿಂದ ಕೆಳಗೆ ನಮೂದಿಸಿದ ಮಿಳಕತ್ತಿಯ ವಿಷಯವಾಗಿ ತಿಳಿಯಪಡಿಸುವದೇನಂದರೆ—

ನಮ್ಮ ಖಾಸ ತಂದಿ ಕರಿಗೌಡಾ ತಂದಿ ಅಯ್ಯನಗೌಡಾ ಪಾಟೀಲ ಸಾ|| ಭದ್ರನಾಯಕನ ಜಾಲೀಹಾಳ ತಾಲೂಕ ಬದಾಮಿ ಇವರ ಹೆಸರಿನ ಇದ್ದ ಮಿಳಕತ್ತು ತಪಶೀಲು ಕೆಳಗೆ ಬರೆದಪ್ರಕಾರ

೧ ಮೌಜೆ ಭದ್ರನಾಯಕನ ಜಾಲೀಹಾಳ ಗ್ರಾಮದಲ್ಲಿ ಇದ್ದ ಸ್ಥಾವರ ವ ಜಂಗಮ ಆಸ್ತಿಗಳು.

೨ ಸದರ ಗ್ರಾಮದ ೦-೨-೦ ಎಂಟು ಆಣೆ ಗೌಡಕೀ ವಾಳೀ

೩ ಸದರ ಗ್ರಾಮದ ಲಗ್ನ ವಗೈರೆ ಸಮ್ಮಂಧಿ ಬಾಬುಗಳು

ಮೇಲೆ ನಮೂದಿಸಿದ ಮಿಳಕತ್ತುಗಳು ನಮ್ಮ ತಂದೆ ಕರಿಗೌಡಾ ಅಯ್ಯನಗೌಡಾ ಪಾಟೀಲ ಸಾ|| ಭದ್ರನಾಯಕನಜಾಲೀಹಾಳ ಇವರ ಹೆಸರಿನ ಹಕ್ಕು ಇದ್ದು ಈತನು ಅಜಮಾಸ ೮೦-೮೫ ವರ್ಷದ ಮುದುಕನಾಗಿದ್ದು ಚಿತ್ತ ಬದಲಾಯಿಸಿ ಯಾವ ವೇಳೆಗೆ ಏನು ವ್ಯವಹಾರ ಮಾಡುತ್ತಾನೆ ಇದು ನೇಮ ತಿಳಿಯುವಂತೆ ಇಲ್ಲಾ ಕಾರಣ ಸದರ ಮಿಳಕತ್ತಿಗೆ ಇವನೇ ಮಾಲಿಕನೆಂದು ತಿಳಿದು ಯಾರಾದರೂ ಈತನ ಸಂಗಡ ನನ್ನ ಮುಖಾಂತರವಿಲ್ಲದೆ ಕೊಡುವ ವ ತಕ್ಕೊಳ್ಳುವ ವ ಖರೀದಿ ವ ವಿಕ್ರಿ ಯಾವತ್ತಿನದ್ದು ವ್ಯವಹಾರ ಮಾಡತಕ್ಕದ್ದಿಲ್ಲಾ ಮತ್ತೂ ಈ ವಳಗಾಗಿ ಮನೆತನದ ವಿಷಯದಿಂದಾ ಯಾವತ್ತೂ ಕೂಡತಗೊಳ್ಳುವ ವಗೈರೆ ವ್ಯವಹಾರ ಗಳು ಹನ್ನೆರಡು ವರ್ಷದಿಂದ ಈಚೆಗೆ ನನ್ನ ಸಮ್ಮತಿವಿಲ್ಲದೆ ಆದ ವ್ಯವಹಾರದ ಸಮ್ಮಂಧ ಕಾಗದ ಪತ್ರಗಳು ನನ್ನಲ್ಲಿ ಇದ್ದು ಇದರ ಹೊರ್ತಾಗಿ ಬೇರೆ ಕಾಗದಗಳು ನನ್ನ ನಜರಿಗೆ ಬಂದಲ್ಲಿ ಅದರ ಜವಾಬದಾರ ನನ್ನ ಮೇಲೆ ವ ಸದರ ಮಿಳಕತ್ತಿನಮೇಲೆ ಯಾವತರದ್ದೂ ಬೋಜಾ ನಡೆಯಲಿಕ್ಕಿಲ್ಲಾ. ಅಂತಾ ನಾನು ಕೊಟ್ಟ ಜಾಹೀರ ನೋಟೀಸ ಸಹಿ ತಾ|| ೧೦-೧೧-೧೯೨೭ ಇಸ್ವಿ.

ಅಯ್ಯನಗೌಡಾ ಕರಿಗೌಡಾ ಪಾಟೀಲ ದ|| ಖು|

ಜಾಹೀರಾತ ಸಲುವಾಗಿ-

ಕರ್ಣಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯೂಲರ ಸ್ಕೂಲಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರುವದಕ್ಕೆ ತಕ್ಕದ್ದಾದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಜರದ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು.

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಲೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ॥ ಲಕ್ಷ್ಮಿ ಬಾಯಿ ಕುಂಭಕೋಣಂ,
ವ್ಯವಸ್ಥಾಪಕರು, ಕ. ಮ. ವಿದ್ಯಾಲಯ, ಧಾರವಾಡ.

ಅಚ್ಚಾಗಿವೆ ! ತರಿಸಿರಿ !!

ವಾಸುದೇವನ

ಕೌಸ್ತುಭಗಳು.

೧. ಇಂದಿರಾ. ೨—೮—೦

(ಸಚಿತ್ರ ಸಾಮಾಜಿಕ ಕಾದಂಬರಿ.)

೨. ಯದು ಮಹಾರಾಜ. ೧—೦—೦

(ಎಂಬ ವಿನೂತನ ಐತಿಹಾಸಿಕ ಕಾದಂಬರಿ.)

೩. ನೀಳ್ಗತೆಗಳು ಭಾಗ ೧ ೧—೪—೦

"ವಸಂತಯಾಮಿನಿ ಸ್ವಪ್ನಚಮತ್ಕಾರ" ನಾಟಕದ ಪ್ರತಿಗಳೆಲ್ಲವೂ ತೀರಿಹೋಗಿವೆ. ಉಳಿದವುಗಳು ಅಚ್ಚಿನಲ್ಲಿವೆ. ತ್ವರೆಮಾಡಿರಿ! ಬೇಕಾದವುಗಳನ್ನು ಬೇಗನೇ ತರಿಸಿಕೊಳ್ಳಿರಿ.

ಪುಸ್ತಕ ವ್ಯಾಪಾರಿಗಳಿಗೆ ಯೋಗ್ಯ ಕಮಿಶನ್. ಅಂಚೇವೆಚ್ಚ ಬೇರೆ.

ಸ್ವಾಮಿ, ರಾ, ಕೆರೂರ.
ಬಾಗಲಕೋಟೆ (ಜಿ॥ ವಿಜಾಪೂರ)

ಸಹಕಾರ ಸಂಘ.

ಈ ಸಹಕಾರ ಸಂಘಗಳಿಗೆ ಬೇಕಾಗು ನಮೂನೆಗಳನ್ನು ಅಚ್ಚುಹಾಕಿಸಿ ನಮ್ಮಲ್ಲಿ ಮಾರಲಿಕ್ಕೆ ಇಟ್ಟಿರುವೆವು- ಪಾವತಿ ಮೆಂಬರರಾಗಲಿಕ್ಕೆ ಮಾಡುವ ಅರ್ಜಿ ಸಾಲ ಬೇಡುವ ಅರ್ಜಿ ಮುದ್ದತ ಬೇಡುವ ಅರ್ಜಿ ಮೊದಲಾದ ಎಲ್ಲ ನಮೂನೆಗಳೂ ಇವೆ.

ವ್ಯವಸ್ಥಾಪಕ:— ವಿದ್ಯಾರಣ್ಯ ಮುದ್ರಾ ಮಂದಿರ
ಬಾಗಲಕೋಟೆ.

S.U.N & CO.
BENARES CITY.

ಬನಾರಸ್ ರೇಶ್ಮೀ ಶೀರೆಗಳು.

ನಮ್ಮಲ್ಲಿ ಉತ್ತಮತರದ ಎಲ್ಲಾವಿಧವಾದ ರೇಶ್ಮೀ ಮಾಲುಗಳನ್ನು ಕೋರುವವರಿಗೆ ವಿ. ಪಿ. ಮೂಲಕ ಕಳುಹಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕು ಉದ್ದ ಮೊಳ ೧೪ ಅಗಲಿ ಮೊಳ ೩, ಥಾನು ೧ಕ್ಕೆ ೧೫ ರಿಂದ ೫೦ ಜರಿ ಶೀರೆಗಳು ೧೬-೧೮ ಮೊಳ ಉದ್ದ ೧ಕ್ಕೆ ರೂ. ೨೫ ರಿಂದ ೫೦ ರವರೆಗೆ. ಬುಟ್ಟೆದಾರ್ ಬನಾರಸ್ ಶೀರೆ ೧೬-೧೮ ಉದ್ದ ಮೊಳ ೭ ೧ಕ್ಕೆ ರೂ. ೫ ರಿಂದ ೩೦೦ ರ ವರೆಗೆ ಉಡುವ ಮಗುಟ ಉದ್ದ ೬-೮ ಮೊಳ ೧ಕ್ಕೆ ರೂ ೧೦ ರಿಂದ ೩೦ ರ ವರೆಗೆ ಜರೀದುಪ್ಪಟೆ ೬-೮ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೪೦ ರ ವರೆಗೆ. ಬಿಳಿ ರೇಶ್ಮಿ ಜರೀದುಪ್ಪಟೆ ೭ ಮೊಳ ಉದ್ದ ೧ಕ್ಕೆ ರೂ ೧೧ ರಿಂದ ೩೦ ರವರೆಗೆ ಸಾದಾ ಬಂಗಾಳ ರೇಶ್ಮಿ ಶಾಲು ೭ ಮೊಳ ಉದ್ದ ೩ ಮೊಳ ಅಗಲು ೧ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಫಟಿಕದ ೧೦೮ ರ ಸರ ೧ಕ್ಕೆ ರೂ. ೧ ರಿಂದ ೧೦ ರ ವರೆಗೆ ಸುದರ್ಶನ ೧ಕ್ಕೆ ಆಣೆ ೮ ರಿಂದ ರೂಪಾಯಿ 1½ ರವರೆಗೆ ಜಗನ್ನಾಥಜಾಗಂಟೆ ೧ಕ್ಕೆ ರೂ. 2½ ರಿಂದ 15 ರ ವರೆಗೆ ಮತ್ತು ಬೇರೆ ಬೇಕಾದವುಗಳ ಕೆಟಲಾಗ ಇನಾಂ

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ
ಕಂಪನಿ ಚೌಕಂಬಾ ಕಾಶಿ ಬನಾರಸ್

'ಕನ್ನಡಿಗ'ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ. ೧೦ ರೂ ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೯೦೦೦ ಯಾರ್ಡ ಕೈನೂಲು
ಪರಸ್ಥಳದವರಿಗೆ	ಮನಿಯಾರ್ಡರದಿಂದ ೧—೧೩—೦ ವಿ. ಪಿ. ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ ಯಾರ್ಡ ಕೈನೂಲು
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ-	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦ ,, ವಿ. ಪಿ ಯಿಂದ ೩-೧-೦
ಸರಕಾರ, ಮುನಸೀಪಾಲಿಟಿ, ಲೋಕಲ್ ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ. ಯಿಂದ ೫-೧-೦

ಬಿಡಿ ಸಂಚಿಕೆಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ —ವ್ಯವಸ್ಥಾಪಕ

ಪ್ರಾಣಿದಯೆ.

ಸಚಿತ್ರ ಮಾಸಪತ್ರಿಕೆ.

ಚಿಕ್ಕಪೇಟೆ. ಬೆಂಗಳೂರುಸಿಟಿ.

ಅಹಿಂಸಾ ಪ್ರಚಾರಕ್ಕಾಗಿಯೇ ಕಂಕಣಬದ್ಧವಾಗಿ ಪ್ರಾಣಿದಯಾ ಸಂಬಂಧವಾದ ಲೇಖಗಳನ್ನೇ ಸೇಖರಿಸಿ ಕರ್ನಾಟಕಮಾತೆಯ ಸೇವೆಮಾಡುವ ಮುಖ್ಯೋದ್ದೇಶದಿಂದ ಹೊರಟಿರುವ ಕನ್ನಡ ಪತ್ರಿಕೆಯು, "ಇದು ಒಂದೇ."

ಸಮಸ್ತ ಕನ್ನಡಿಗರ ಕರಗತವಾಗಬೇಕೆಂಬ ಧ್ಯೇಯದಿಂದ ವಾರ್ಷಿಕ ಚಂದಾ ಎಂಟೇ ಆಣೆ ಇಟ್ಟಿರುತ್ತದೆ.

ವರ್ಷಕ್ಕೆ 5/- ರೂಪಾಯಿಗಳನ್ನು ಕೊಡುವವರನ್ನು ಪ್ರಧಾನ ಪೋಷಕರಾಗಿಯೂ 2/- ರೂಪಾಯಿ ಕೊಡುವವರನ್ನು ಪೋಷಕರಾಗಿಯೂ ಪರಿಗಣಿಸಲ್ಪಟ್ಟು, ಪ್ರತಿಸಂಚಿಕೆಯಲ್ಲಿಯೂ ಆ ಮಹನೀಯರ ಹೆಸರುಗಳು ಪ್ರಕಟಿಸಲ್ಪಡುವವು-

ಬೇಕಾಗಿದ್ದಾರೆ.

ಏಜಂಟರು, ಟ್ರಾವಲಿಂಗ ಏಜಂಟರು, ಹಾಗೂ ಚೀಫ ಏಜಂಟರೂ ಬೇಕಾಗಿದ್ದಾರೆ. ಇನ್ಸೂರನ್ಸದ ಕೆಲಸದ ಅನುಭವವಿದ್ದವರೂ, ಹೊಸ ಹೊಸ ಕೆಲಸವನ್ನು ಹುಟ್ಟಿಸಿ ತೆಗೆದುಕೊಂಡು ಒರುವವರೂ ಬೇಕಾಗಿದ್ದಾರೆ. ನಗದು ಹಣದ ಜಾಮೀನು ಕೊಡತಕ್ಕದ್ದು. ಯೋಗ್ಯತೆಯ ಪ್ರಕಾರ ಪಗಾರ. ಕೆಳಗಿನ ವಿಳಾಸಕ್ಕೆ ಬರೆಯಿರಿ.

WANTED.

Agents, Travelling Agents and Chief Agents. Men with experience of Insurance work, capable of bringing business, required. Cash security. Salary according to qualifications.

Apply to:— *Mr. S. Rabbocr*, B. A., F. S. S. (Lond) Asst. Manager (on deputation) *General Assurance Society Ltd.* 44, Linggi Chetty street, Madras.

ಸ್ಥಳಾಂತರ!

ಪೋಸ್ಟ ಆಫೀಸದ ಹತ್ತಿರವಿದ್ದ

ಬಾಗಲಕೋಟೆ ಕಮರ್ಶಿಯಲ್ ಬ್ಯಾಂಕವು

ಇನ್ನು ಮೇಲೆ ಕೈ. ಡಾಕ್ಟರ ಜಠಾರ ಶಂಕರರಾವ ಇವರ ಮನೆಗೆ ಹೋಗುವದು. ಸೋಮವಾರ ತಾ|| ೧೪ ನವಂಬರದಿಂದ ಸ್ಥಳಾಂತರವಾಗುವದು.

ಬಾಗಲಕೋಟೆ
ತಾ' ೧೨—೧೧ ೨೭

ಎಸ್ ಶಿವರಾವ.
ಮ್ಯಾನೇಜರ

ಟೇಬಲ್ ಟೈಂಪೀಸ್ ಇನಾಂ.

ಈ ಪಕ್ಕದಲ್ಲಿ ಕಂಡ ಫೌನ್‌ಟನ್ ಪೇನಾವು ಇಂಗ್ಲಂಡಿನಲ್ಲಿ ತಯಾರಾದದ್ದು. ಇದಕ್ಕೆ ೧೪ ಕರೆಟಿನ ಭಂಗಾರದಂಥ ನಿಬ್ಬು ಹಾಕಿದೆ. ಈ ಪೇನಾವಿನಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚಂದಾಗಿ ಕಾಣುವವು. ಈ ತಿಂಗಳೊಳಗಾಗಿ ಈ ಪೇನಾವನ್ನು ತರಿಸಿಕೊಳ್ಳುವವರಿಗೆ ಸುಲ್ಪಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.



ಟೇಬಲ್ ಟೈಂಪೀಸ್ ಸಹಿತ ಪೇನಾ ೧ ಕ್ಕೆ ೨-೮-೦

ವಿಳಾಸ- ಪೀಟರ್ ವಾಚ್ ಕಂಪನಿ
ಪೋ|| ಬಾಕ್ಸ ನಂ. ೨೨, ಮದರಾಸು

ಸ್ಟಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲೆಕ್ಟ್ರಿಕ್, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕ್ಷಿಪ್ರಕಾಲದಲ್ಲಿ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದು.

ನಾಲ್ಕು ಪಾಲು ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇರಿ) ೧ ಪೌಂಡಿಗೆ ರೂ. ೧-೨-೦
೨ ನೇ ,, ,, ,, ರೂ. ೧-೩-೦

ದಿ ಸ್ಟಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಭೂಲೋಕದ ಕಾಮಧೇನು

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಶ್ರಮವು ಇನಾಂ!! ಅಂ. ಹಾಸಲು
ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು—ಜಂಬುಲಿಂಗಪ್ಪಾ ಚಾಲವಾದಿ.
ಸ್ಟೇಶನರ್ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ,
೫೭, ಚೀನಾಬಜಾರ್, ಮದ್ರಾಸು

ಗುಣ ಬರದಿದ್ದರೆ ಹಣ ಪರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ

ಈ 'ಬಲವಂತ ಗುಟಿಕೆ'ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ಥ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿ ಮಾಡಿಕೊಳ್ಳಬಹುದು.) ಇದರಿಂದ ವೈಯುರಿವ ಗರಮಿಯು ಎಲ್ಲ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೆ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗೆ ೨-೪-೦, ... ೬-೦-೦, ಇದಲ್ಲದೆ ೧ ಡಬ್ಬಿ ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸಃ— ಎಸ್ ಬಿ ಕದಮ್ ಮತ್ತು ಸನ್ಸ್.
ಮು. ಪೋಷ್ಟ ನಿಪ್ಪಾಣಿ (ಜಿ. ಬೆಳಗಾವ.)

EAT KASHMIR FRUITS & NUTS.

ಕಾಶ್ಮೀರದ ಹಣ್ಣು ಹೂವಲಗಳನ್ನು ಸೇವಿಸಿರಿ!

ತಿಳವಾದ ತೊಗಟೆಯ ತಾಜಾ ಅಕ್ರೋಡಗಳೂ, ಆರಿಸಿದ ಅಡವಿಯ ಸೇಬುಗಳೂ, (Hazelnuts) ೧೧ ಪೌಂಡಿಗೆ ರೂ. ೫—೮—೦; ತಾಜಾ ಕಾಗದೀ ಬದಾಮು; ಹರಳಿಲ್ಲದ್ದು, ಬಲು ಸವಿಯಾದ ಜಲ್ದರು. (Apricots); ಅಂಜೂರಿ; ದ್ವೀಪದ್ರಾಕ್ಷಿ; ಕಿಸಮಿಸು, ೧೧ ಪೌ. ಗೆ ೧೩ ರೂ. ; ಕಮಲದ ಶುದ್ಧವಾದ ಜೇನತುಪ್ಪ, ೫॥ ಪೌ. ಗೆ ೮ ರೂ. ; ಶುದ್ಧ ಕೇಶರ, ೧ ತೊಲೆಗೆ ೩ ರೂ. ಟಪಾಲು ಖರ್ಚ ಮಾಫ!

ಡಾರ ಬ್ರದರ್ಸ ಶ್ರೀನಗರ, ಕಾಶ್ಮೀರ.

DAR BROS SHRINAGAR, KASHMIR.

ಬೈಂಡಿಂಗದ

ಹೊಸ ಉತ್ತಮ ವ್ಯವಸ್ಥೆ!

ನಾವು ಮಂಗಳೂರಿನಿಂದ ನುರಿತಂತಹ ಓರ್ವ ಬಾಯಿಂಡರನನ್ನು ಕರೆಸಿದ್ದೇವೆ. ಮುಂಬೈ, ಮದ್ರಾಸ, ಮಂಗಳೂರ, ಬೆಂಗಳೂರಗಳಲ್ಲಾಗುವ ಎಲ್ಲ ನಮೂನೆಯ ಬಾಯಿಂಡಿಂಗ ಕೆಲಸವು ನಮ್ಮಲ್ಲಿ ಒಳ್ಳೇ ಅಚ್ಚುಕಟ್ಟಾಗಿ ಮಾಡಲ್ಪಡುತ್ತದೆ. ಎಲ್ಲ ಬಗೆಯ ಗೋಲ್ಡ ಗಿಲ್ಟ ಕೆಲಸವೂ ಆಗುತ್ತದೆ. ಇನ್ನು ಮೇಲೆ ಇತ್ತಕಡೆಯ ಜನರು ಮುಂಬೈ, ಬೆಂಗಳೂರ, ಅಥವಾ ಮಂಗಳೂರಿಗೆ ಹೋಗುವ ಕಾರಣವಿಲ್ಲ! ಒಮ್ಮೆ ಅನುಭವ ತೆಗೆದುಕೊಂಡು ನೋಡಬೇಕು.

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಬಾಗಲಕೋಟೆ, ವಿಜಾಪುರ ಮೋಟಾರ ಸರ್ವೀಸ ಪ್ರಾರಂಭವಾಗಿದೆ!

ಬೆಳಗಾವಿಗೆ ಬಾಗಲಕೋಟೆಯಿಂದ ೩॥ ರೂ. ಹಾಸಲು ಮುಕ್ರಾಂ ಮಾಡಲ್ಪಟ್ಟಿದೆ.



ವಿಜಾಪೂರ ಜಿಲ್ಹೆಯಲ್ಲಿಯ ಮತ್ತು ಸುತ್ತು ಮುತ್ತಲಿನ ಖಾಸಗಿ ವ ಸರ್ವೀಸಿನ ಮೋಟಾರ ಮಾಲಕರ ಗೈರಸೋಯ ದೂರವಾಗಬೇಕೆಂದು:
ಆರ್. ಜಿ. ಚವ್ಹಾಣ ಎಂಡ ಸನ್ಸ, ಬೆಳಗಾವ. ಇವರು ತಮ್ಮ
ಜನರಲ ಮೋಟಾರ ಅಕ್ಸೆಸರಿ ಸ್ಟೋಅರ್ಸದ ಶಾಖೆಯನ್ನು
ತಾ॥ ೧೦ ಸಪ್ಟೆಂಬರ ೧೯೨೭ನೇ ಇಸ್ವಿಯಿಂದ ಬಾಗಲಕೋಟೆಯಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ್, ಶೆವ್ರಲೇಟ, ಓವ್ಹರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯೂಬ್ಸ, ಗ್ರೀಸ, ಮೋಬಿಲ ಆಇಲ್, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯ ದರದಿಂದ ಸಿಗುವವು ಒಂದು ವೇಳೆ ವ್ಯಾಪಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರದಿಂದ,

ಚಾಲಕಃ— ವಾಯ್. ಜಿ. ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಹಲ್ಕನಾಯಝಿಂಗ ಮಾಡಿ ಕೊಡುವೆವು

☞ ಬಾಗಲಕೋಟೆ-ಬೆಳಗಾವಿ, ಬಾಗಲಕೋಟೆ-ಇಲಕಲ್ಲ ಸರ್ವೀಸ ಯಥಾಪ್ರಕಾರ ನಡೆದಿದೆ

ಎಲ್ಲ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ.
ಈ ದಿವಸವೇ
ಒಂದು ಬಾಟ್ಲ ಕೊಳ್ಳಿ !

Buy a bottle

TO-DAY!

ಹಿಂದುಸ್ಥಾನದ ಅದ್ಭುತವಾದ ವೇದನಾಶಾಮಕವಾದ ಉಪಾಯವು !

ಕೆಳಗಿನ ವ್ಯಾಧಿಗಳಿಗೆ ತತ್ಕಾಲಿಕ ಗುಣ ಬೇಕಾಗಿದ್ದರೆ ಇದನ್ನೇ ಉಪಯೋಗಿಸಿರಿ:—

ತಲೆಶೂಲಿ, ಸಂಧಿವಾತ, ಎಲ್ಲತರದ ಕಸ. ನರತೊಡಕು, ಹುವಾತ, ಟೊಂಕನೋವು, ಅರ್ಧಾಂಗವಾಯು ಉಳುಕು (ವಳದದ್ದು)

ಸ್ವಲ್ಪೇ ಮಾಲಿಶಿನಿಂದ ಒಡನೇ ಗುಣ. ಉರುಪು ಇಲ್ಲವೇ ಇಲ್ಲ. ಗುಳ್ಳೆಗಳೂ ಏಳುವದಿಲ್ಲ, ಸುಖವಾಗಿ ಗುಣ ಕೊಡುತ್ತದೆ.

ಹಿಂದುಸ್ಥಾನದಲ್ಲಿಯೇ ಹಿಂದೀಯರಿಂದ ತಯಾರಾದದ್ದು.

ನೆಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲವೇ ಇಲ್ಲ!

Little's Oriental Balm.

ಲಿಟ್ಲರ ಓರಿಯಂಟ್ಲ ಬಾಮು.

ನೋವು ಬಾಧೆಗಳ ನಿವಾರಣಾರ್ಥ!

ನಿಮ್ಮ ಬಾಧೆಗಳ ನಿವಾರಣಾರ್ಥವಾಗಿ ಅತ್ಯುತ್ತಮವಾದ ಹಾಗೂ ಒಳ್ಳೇ ಶುದ್ಧವಾದ ರಾಮಬಾಣ ಉಪಾಯವು ಬೇಕಾಗಿದ್ದರೆ, ಈ ಹೆಸರನ್ನು ಲಕ್ಷ್ಯದಲ್ಲಿಡಿರಿ.

ಅದಿರಲಿ. ಇನ್ನು ಮುಂದೆ ಹಿಂದೀ ಜನಾಂಗದಲ್ಲಿ ನವಚೈತನ್ಯವನ್ನು ತರಲಿಚ್ಛಿಸುವವರು ಈ ಕೆಳಗಿನ ನಾಲ್ಕಾರು ಮಾತುಗಳನ್ನು ಯಾವಾಗಲೂ ಲಕ್ಷ್ಯದಲ್ಲಿಡುವದು ಒಳ್ಳೆಯದು.

೧ ಇಂಗ್ಲಿಶ ಜನರು ನಮ್ಮ ಬಿನ್ನಹ ಪ್ರಾರ್ಥನೆಗಳಿಗೆ ಎಂದಿಗೂ ಮನಸೋಲತಕ್ಕವರಲ್ಲ. ಇದೊಂದು ಶತಸಿದ್ಧಾಂತದ ಮಾತು

೨ ಇಂಗ್ಲಿಶ ಜನರೆಂದರೆ ರಾಜ್ಯತಂತ್ರದ ಕುಟಿಲತನದಲ್ಲಿ ಮೀರಿನಿಂತವರು; ಅವರನ್ನು ಈ ವಿದ್ಯೆಯಲ್ಲಿ ಸರಿಗಟ್ಟುವದು ನಮ್ಮಲ್ಲಿಯ ಒಳ್ಳೇ ನಾರದ ಮುನಿಗೂ ಕೌಟಿಲ್ಯನಿಗೂ ಅಸಾಧ್ಯವಾದ ಮಾತು.

೩ ಅವರು ನಮ್ಮನ್ನು ಈಗಿನಂತೆಯೇ, ನಿರಂತರ ಮನಬಂದಂತೆ ಸುಲಿಕೊಳ್ಳಬೇಕೆಂದು ನಾವು ಒಪ್ಪಿದರೆ ಮಾತ್ರ, 'ಹಾಳಾಗಿ ಬೀಳಲೊಲ್ಲರೇಕೆ ನಮಗೇನು' ಎಂದು ಉಳಿದ ಬೇಕಾದ ರಾಜ್ಯಸೂತ್ರವನ್ನು ಒಪ್ಪಿಸಲು ಸಿದ್ಧರಾಗಬಹುದು,

೪ ಸ್ವರಾಜ್ಯ ಸಂಪಾದನೆಯ ಮಾರ್ಗವು ಯಮಯಾತನೆಯದ್ದಾಗಿದೆ; ಹಾದಿಯೆಲ್ಲ ಕಲ್ಲುಮುಳ್ಳು ತೆಗ್ಗು ದಿನ್ನಿಗಳಿಂದ ಆಚ್ಛಾದಿತವಾಗಿದೆ; ಅಲ್ಲದೆ ಹೆಜ್ಜೆಹೆಜ್ಜೆಗೆ ಹಾವು ಚೇಳು ಅಜಗರಾದಿ ವಿಷಾರಿ ಪ್ರಾಣಿಗಳ ಅಂಜಿಕೆ; ಕಟ್ಟಡವಿಯಲ್ಲಿ ಹಾಯ್ದು ಹೋಗಬೇಕಾದ್ದರಿಂದ ಅಲ್ಲಲ್ಲಿಗೆ ಕ್ರೂರವಾದ ಶ್ವಾಪದಗಳ ಭೀತಿಯೆಂತೂ ಬೆನ್ನುಹತ್ತಿದ್ದೇ. ಇವೆಲ್ಲ ಸಂಕಟಗಳನ್ನು ಸಹಿಸಲಿಕ್ಕೆ ಅಸಮರ್ಥರಾದವರು ಈ ಸ್ವರಾಜ್ಯ ಯಾತ್ರೆಯ ಗೋಜಿಗೆ ಹೋಗದಿರುವದೊಳ್ಳೇದು. ಪ್ರತಿಹೆಜ್ಜೆಗೂ ಗಿಡಗಂಟಿಗಳನ್ನು ಸವರಿಸುತ್ತಲೂ ಕಲ್ಲುಮುಳ್ಳುಗಳನ್ನು ಬದಿಗೆ ಸರಿಸುತ್ತಲೂ ತಮ್ಮ ಹಾದಿಯನ್ನು ನಾವೇ ಮಾಡಿಕೊಳ್ಳುತ್ತ ನೋಡಿಕೊಳ್ಳುತ್ತ ಮಾರ್ಗಕ್ರಮಣ ಮಾಡಬೇಕಾಗಿದೆ. ಅನಾವು ಆಪತ್ತು ಬಂದ ಬಂದಹಾಗೆ ಹಾದಿಯನ್ನೂ ದಿಕ್ಕನ್ನೂ ಅನೇಕ ಸಲ ಬದಲಾಯಿಸಬೇಕಾದೀತು. ಒಂದೇ ಪಂಥದಿಂದ ಹೋದೇನೆಂದರೆ ಸಾಧ್ಯವಿಲ್ಲ.

೫ ಕಾಯಿದೆ ಮಂಡಲಗಳಲ್ಲಿ ಹೋರಾಡುವದರಿಂದ ಕಿಂಚಿತ್ ಕಾರ್ಯವಾಗಬಹುದು, ಅಂಥ ಕಾರ್ಯವನ್ನು ಗಾದಿ ಕುರ್ಚಿಗಳಲ್ಲಿ ಲೋಲಾಡಲಿಚ್ಛಿಸುವ ವಿಲಾಸಿ ಜನರಿಗೆ ಮಾತ್ರ ಬಿಟ್ಟುಕೊಡಬೇಕು.

೬ ನಿಜವಾದ ಸ್ವರಾಜ್ಯ ಸಂಗ್ರಾಮವು ಈ ಕೌನ್ಸಿಲಗಳ ಹೊರಗೆ ಜರಗತಕ್ಕದ್ದಿದ್ದು; ಇದಕ್ಕೆ ಕೌನ್ಸಿಲ್ಲಗಳನ್ನು ಪ್ರವೇಶಿಸಬೇಕೆನ್ನುವದು

ಟನ್ನು ಬಿಟ್ಟು ಉಳಿದ ಕಟ್ಟಿದೆಯವರು ತಲೆಕೊಟ್ಟು ನಿಲ್ಲಬೇಕು ಒಂದೇ ಪಕ್ಷದವರೇ ಈ ರಣರಂಗದಲ್ಲಿ ಎರಡೂ ಕಡೆಗೆ ಕಾದಾಡುವದೆಂದರೆ ಅಗಸ ಬಹಾತು ಪಾರ್ಲಮೆಂಟಿನ ರೀತಿ ಭಾಷಣ ಮಾಡುವದರಲ್ಲಿಯೇ ಖ್ಯಾತಿಯನ್ನು ಪಡೆಯಲಿಚ್ಛಿಸುವವರೂ ನಮ್ಮನ್ನಾಳುತ್ತಿರುವ ಈ ಆಂಗ್ಲ ದೇವತೆಗಳ ಸ್ನೇಹದಿಂದಲೇ ಧನ್ಯರೆಂದೆನಿಸಿಕೊಳ್ಳುವವರೂ ಈ ಹೋರಿಗಿನ ಘೋರತರವಾದ ಸಂಗ್ರಾಮದಲ್ಲಿ ಅಗ್ರೇಸರರಾಗಲು ಸರ್ವಥಾ ಅಸಮರ್ಥರು. ಅವರ ಸ್ವಭಾವ, ಅವರ ಬುದ್ಧಿ, ಅವರ ವೃತ್ತಿ, ಅವರ ವಿಚಾರಗಳ ಪ್ರವಾಹ ಎಲ್ಲವೂ ವಿಚಿತ್ರವಾಗಿದ್ದು ತಾನು ದುಃಖ ಅನುಭವಿಸಿಯಾದರೂ ಜನರ ಸೇವೆ ಮಾಡುವೆನೆಂಬವನ ಮನೋವೃತ್ತಿಯಿಂದ ತೀರ ಭಿನ್ನವಾಗಿರುತ್ತವೆ. ಹೀಗಿದ್ದ ಮಾತ್ರಕ್ಕೆ ಅವರಿಬ್ಬರೂ ತಮ್ಮ ತಮ್ಮೊಳಗೆ ವೈಮನಸ್ಸಿನಿಂದ ನಡೆಕೊಳ್ಳಬಾರದು. ಅವರಿಬ್ಬರ ಮಾರ್ಗವೇ ಬೇರೆ; ಮಾಡತಕ್ಕ ಕಾರ್ಯವೂ ಭಿನ್ನ; ಆದಾಗ್ಯೂ ಒಬ್ಬನನ್ನು ಮತ್ತೊಬ್ಬನು ತಿರಸ್ಕರಿಸಲಾಗದು ಇಷ್ಟೇ ಅಲ್ಲ ಒಬ್ಬರಿಗೊಬ್ಬರು ಸಹಾಯ ಮಾಡುತ್ತಲೇ ಇರಬೇಕು. ಕಾಯಿದೆ ಮಂಡಲಗಳಲ್ಲಿ ಕುಳಿತುಕೊಂಡು ನಾನು ಸರಕಾರದೊಡನೆ ಅಸಹಕಾರ ಮಾಡುತ್ತೇನೆಂಬುವದು ಕೆಚ್ಚಿನ ಭ್ರಮವೇ ಸರಿ

ಪ್ರಾಮಾಣಿಕತನದಿಂದ ಮನಃಪೂರ್ವಕವಾಗಿ ಈ ಸ್ವರಾಜ್ಯ ಸಂಗ್ರಾಮದಲ್ಲಿ ಯಾರು ಹೋರಾಡಲಿಚ್ಛಿಸುವರೋ ಅವರು ಈ ಕೌನ್ಸಿಲ್‌ಗಳ ಹಾದಿಯನ್ನೇ ಬಿಟ್ಟುಕೊಡಬೇಕು ಅಂಥವರು ಯಾವಾಗಲೂ ಬಡಬಗ್ಗರ ಸಹವಾಸದಲ್ಲಿ ಬೆರೆತುಕೊಂಡು ಅವರ ಮನೋಬಲವನ್ನು ಈ ಯುದ್ಧ ಸನ್ನಾಹಕ್ಕೆ ಸಜ್ಜುಗೊಳಿಸುತ್ತಿರಬೇಕು ಶ್ರೀಮಂತಿಕೆಯಲ್ಲಿ ಹುಟ್ಟಿ ಬೆಳೆದವರಾದ ಬುದ್ಧಿಶಾಲಿಗಳಿಂದ ದೇಶದ ಉದ್ಧಾರವು ಎಂದಿಗೂ ಆಗುವದಿಲ್ಲವೆಂಬುದನ್ನು ಪದರಿಗೆ ಗಂಟು ಹಾಕಿಕೊಳ್ಳಬೇಕು; ದೇಶದ ಅಖಂಡ ಕಲ್ಯಾಣವನ್ನು ಇಚ್ಛಿಸುವವರೆಲ್ಲರೂ ನಗ್ನ ಜೀವನದಿಂದಲೆ ಕಾಲಕಳೆಯಲಿಕ್ಕೆ ಟೊಂಕ ಕಟ್ಟಬೇಕು; ಎಲ್ಲ ತರದ ಸೌಖ್ಯಸಾಲಭ್ಯಗಳಿಗೆ ತಿಲಾಂಜಲಿಯನ್ನೀಯಬೇಕು ದ್ರವ್ಯಸಂಪಾದನ ಮಾರ್ಗದಿಂದ ವಿಮುಖರಾಗಬೇಕು. ಕೀರ್ತಿ ಕಿತಾಬು ಮಾನ ಸನ್ಮಾನಗಳ ಆಶೆಗೆ ಎರಡು ಹೊಡೆದಿರಬೇಕು; ಯಾಕೆಂದರೆ ಪ್ರಸಂಗ ಹೇಗೆ ಬಂದೀತೆಂಬುವದರ ನಿಯಮವಿಲ್ಲ. ಜೋಳದ ಭಕ್ರಿಯನ್ನೇ ತಿಂದುಕೊಂಡಿರಬೇಕಾದೀತು! ಬರಿ ನೆಲದ ಮೇಲೆಯೇ ಅಡ್ಡಾಗಿ ನಿದ್ರಿಸಬೇಕಾದೀತು ಉರುಟು ಬಟ್ಟೆಯಿಂದಲೆ (ಅದೂ ಮರ್ಯಾದೆಯ ಪೂರ್ತಿ ಮಾತ್ರ!) ಶರೀರವನ್ನು ಆಚ್ಛಾದಿಸಿಕೊಂಡಿರಬೇಕಾದೀತು! ಅಂತೂ ಉಳಿದವರ ಸುಖಕ್ಕಾಗಿಯೇ ಅವರು ಜೀವಿಸಿಕೊಂಡಿರಬೇಕು. ಹೆಸರುವಾಸಿಯಾಗಬೇಕೆಂಬ ಮನೀಷೆಯನ್ನು ಅವರು ತಮ್ಮೊಳಗಿಂದ ಹೊಡೆದೋಡಿಸಬೇಕು ಇವರು ಯಾವಾಗಲೂ ನಿಶ್ಚಯಪೂರ್ವಕವಾಗಿ ದೇಶದ ಸಲುವಾಗಿಯೇ ದುಡಿಯುತ್ತಿರಬೇಕು ರಾಷ್ಟ್ರದ ಭಾವೀ ಸೌಖ್ಯಸ್ವಾತಂತ್ರ್ಯವನ್ನು ಚಿಂತಿಸುತ್ತಲೇ ತಮ್ಮ ಈಗಿನ ಯಾತನೆಗಳನ್ನು ಸಹಿಸುತ್ತಿರಬೇಕು. ಕಾಯಿದೆ ಮಂಡಲಗಳು ತಮ್ಮ ಧ್ಯೇಯ ಸಲುವಾಗಿ ಅಲ್ಲವೆಂಬ ಭಾವನೆಯು ಅವರಲ್ಲಿ ದೃಢವಾಗಿ ನೆಲೆಗೊಂಡಿರಬೇಕು ಅವುಗಳನ್ನು ತಿರಸ್ಕಾರ ಬುದ್ಧಿಯಿಂದ ನೋಡುತ್ತಿದ್ದು ಅಲ್ಲಿ ಏನು ನಡೆದಿದೆ ಎಂಬುದರ ಬಗೆ ವಿಶೇಷವ್ಯಾಕುಲರಾಗಕೂಡದು. ಇಂಥ ವೀರರೆ ಸ್ವರಾಜ್ಯಕ್ಕಾಗಿ ಪ್ರಾರಬ್ಧವಾದ ಈ ಘನಘೋರ ಸಂಗ್ರಾಮವನ್ನು ಜಯಿಸತಕ್ಕವರು. ಈಗಿನವು ಬಲು ದಿನಸ ಬಾಳುವಂಥದೂ ದುಃಖಮಯವೂ ಆಗಿದೆ ಎಂಬುದನ್ನು ಪೂರ್ಣವಾಗಿ ಯೋಚಿಸಿ ಜನರು ಅತ್ಯಂತ ತಾಳ್ಮೆಯಿಂದಲೂ ವಿಶ್ವಾಸದಿಂದಲೂ ಕಾದುತ್ತಿರಬೇಕು ನನ್ನ ಈ ಮುಪ್ಪಿನ ವಯಸ್ಸಿನಲ್ಲಿ ಇಂಥ ಕಷ್ಟನಷ್ಟಗಳಿಗೆ ಎದೆಗೊಟ್ಟು ನಿಲ್ಲಲಾರದಕ್ಕೆ ಮಾತ್ರ ನಾನು ಕೌನ್ಸಿಲ್ ಸೇರಿಕೊಂಡಿರುವೆನು.

ಸೂಚನೆ.

ಬಾಗಲಕೋಟೆ ತಾಲೂಕ ಕಾಂಗ್ರೆಸ್ ಕಮಿಟಿಯ ಸಾಧಾರಣ ಸಭೆಯು ಕಾಂ. ಕಮಿಟಿಯ ಕಾರ್ಯಾಲಯದಲ್ಲಿ ತಾ॥ ೫-೧೨-೧೯೨೭ ನೇ ದಿವಸ ಕೆಳಗಿನ ವಿಷಯಗಳ ವಿಚಾರಣೆಗಾಗಿ ಕೂಡುವದು ಎಲ್ಲರೂ ಅವಶ್ಯವಾಗಿ ಸಭೆಗೆ ಬರಬೇಕೆಂದು ವಿನಂತಿಯದೆ

(೧) ಬಾಗಲಕೋಟೆಯಲ್ಲಿ ಕಟ್ಟಲ್ಪಡುತ್ತಿರುವ ಹಿಂದುಸ್ಥಾನೀ ಸೇವಾದಲದ ವ್ಯಾಯಾಮ ಮಂದಿರದ ಕಟ್ಟಡದ ನಿಧಿಗಾಗಿ ಈ ಕಮಿಟಿಯು ಒಂದುನೂರು ಒಂದು ರೂಪಾಯಿಗಳನ್ನು ಕೊಡುವ ಬಗ್ಗೆ

(೨) ಬಾಗಲಕೋಟೆಯಲ್ಲಿಯ ಅಖಿಲ ಭಾರತ ಚರಖಾ ಸಂಘದ ಖಾದಿ ಅಂಗಡಿಗೆ (೭೨) ಎಪ್ಪತ್ತೆರಡು ರೂಪಾಯಿಗಳನ್ನು ಕೊಡುವ ಬಗ್ಗೆ

(೩) ಬಾದಶಹರ ವಿಚಾರಣೆ ಮಂಡಲಕ್ಕೆ ಹಿಂದೀಯರು ಸಂಪೂರ್ಣ ಬಹಿಷ್ಕಾರವನ್ನು ಹಾಕಬೇಕೆಂಬ ವಿಚಾರ

ಬಾಗಲಕೋಟೆ
೨೧-೧೧-೨೭

ಕೆ. ಬ. ಪುರೋಹಿತ
ಕಾರ್ಯದರ್ಶಿ
ಬಾಗಲಕೋಟೆ ತಾಲೂಕ ಕಾಂಗ್ರೆಸ್ ಕಮಿಟಿ

॥ಶ್ರೀ ಬಲಭೀಮ ಸಮರ್ಥ॥

ಬಲಭೀಮ ಧಾರ್ಮಿಕ ವಾಚನಾಲಯಕ್ಕೆ ಸಹಾಯವು

ನವ್ಹಂಬರ ೨೨ ನೇ ತಾರೀಖಿನ ದಿವಸ ಬಾಗಲಕೋಟೆಯಲ್ಲಿ ಆಗಿದ ಹಿಂ. ಸೇ. ದಲದ ವ್ಯಾಯಾಮ ಶಾಲೆಯ ಕಳಸದಿಯ ಕಲ್ಲನ್ನು ಕೂಡ್ರಿಸುವ ಸಮಾರಂಭಕ್ಕೆ ಬಂದ ದ ಹೈದರಾಬಾದದ ಸುಪ್ರಸಿದ್ಧ ದೇಶಭಕ್ತರಾದ ಶ್ರೀಮಂತ ವಾಮನರಾವ ನಾಯಿಕ ಇವರು ಬಾಲಕರಿಂದ ಸ್ಥಾಪಿಸಲ್ಪಟ್ಟ ಬಲಭೀಮ ಧಾರ್ಮಿಕ ವಾಚನಾಲಯವನ್ನು ಸಂದರ್ಶಿಸಿ ಸಂತೋಷಪಟ್ಟು ವಾಚನಾಲಯಕ್ಕೆ ೫೦ ರೂ ಗಳನ್ನು ಕಾಣಿಕೆಯಾಗಿ ಕೊಟ್ಟರು! ಈ ಮಹನೀಯರ ಈ ವಾಙ್ಮಯ ಸೇವೆಯು ಚಿರಸ್ಮರಣೀಯವಾದದ್ದು; ಮತ್ತು ಇಂಥ ಮಹನೀಯರನ್ನು ಎಷ್ಟು ಅಭಿನಂದಿಸಿದರೂ ಸ್ವಲ್ಪವೇ ಸರಿ!

ಕಾರ್ಯಕಾರೀ ಮಂಡಳ
ಬಲಭೀಮ ಧಾರ್ಮಿಕ ವಾಚನಾಲಯ ಬಾಗಲಕೋಟೆ

ಒಡಪುಗಳ ಬಗ್ಗೆ—

ಇವುಗಳಿಗೆ ಉತ್ತರವನ್ನು ಮರುವಾರದಲ್ಲಿಯೇ ಪ್ರಕಟಿಸಲು ಅನುಕೂಲವಾಗುವಂತೆ ಉತ್ತರಗಳನ್ನು ದೂರಿನ ಊರಿನವರು ಕಳಿಸುವದು ಶಕ್ಯವಿಲ್ಲ. ಆದುದರಿಂದ ಒಂದು ವಾರ ಬಿಟ್ಟು ಮತ್ತೊಂದು ವಾರದಲ್ಲಿ ಉತ್ತರಗಳನ್ನೂ ಹೆಸರುಗಳನ್ನೂ ಪ್ರಕಟಿಸುವೆವು.

ಈ ವಾರದ ಒಡಪು—

೧ ಒಂದು ಸಂಖ್ಯೆಗೆ ೨:೩:೪:೫:೬ ಈ ಸಂಖ್ಯೆಗಳಿಂದ ಭಾಗಿಸಿದರೆ ೧ ಉಳಿಯುತ್ತದೆ ಆದರೆ ೭ರಿಂದ ಭಾಗಿಸಿದರೆ ಮಾತ್ರ ಏನೂ ಉಳಿಯುವದಿಲ್ಲ ಆದರೆ ಆ ಸಂಖ್ಯೆ ಯಾವದು?

೨ ಒಬ್ಬ ಸಾವಕಾರನ ಹತ್ತರ, ಒಬ್ಬನು ೧ ಮುತ್ತು ೩೨ ರೂ ಗೆ. ಮತ್ತೊಬ್ಬನು ೨ ಮುತ್ತು ೪೦೦ ರೂ ಗೆ ಒತ್ತೀ ಇಟ್ಟರು. ಮುಂದೆ ಅವರಿಬ್ಬರು ಸಾವಕಾರನಿಗೆ ನಮ್ಮ ಕೈಯಿಂದ ರೂಪಾಯಿ ಕೊಡುವದಾಗುವದಿಲ್ಲ ಆದ್ದರಿಂದ ಆ ಮುತ್ತುಗಳನ್ನು ಮಾರಿ ನಮ್ಮ ರೂ [೩೦,೪೦೦] ಗಳನ್ನು ಮುರಕೊಂಡು ಉಳಿದ [illegible] ತಿರುಗಿ ಕೊಡು ಎಂದು ಹೇಳಿದರು. ಆಗ ಸಾವಕಾರನು ಆ ಮುತ್ತುಗಳನ್ನು ಒಂದೇ ಧಾರಣೆಯಿಂದ ಮಾರಿ ಅವರವರ (೩೦,೪೦೦) ಗಳನ್ನು ಮುರಕೊಂಡು ಅವರಿಗೆ ಸರಿಯಾಗಿ ರೂ. ಕೊಟ್ಟನು ಆದರೆ ಪ್ರತಿಯೊಂದು ಮುತ್ತಿನ ಬೆಲೆ ಏನು?

ಅಲ್ಲೀಸಾ ದಾವಲಸಾ ಪಿಂಜಾರ. ಬಡಜಣ.

ಕನ್ನಡಿಗರ ವ್ಯಾಯಾಮ ಶಾಲೆ.

ಅಡಿಗಲ್ಲಿನ ಸಮಾರಂಭ!

ವೃದ್ಧರಲ್ಲಿಯೂ ತರುಣರಲ್ಲಿಯೂ ಮಿತಿಮೀರಿದ ಉತ್ಸಾಹ!

ಶ್ರೀ ವಾಮನ ನಾಯಕ, ಕರ್ನಾಟಕ ಭೂಷಣ ಹಾಗೂ ದಿವಾಕರರ ಭಾಷಣಗಳ ಸುಪ್ರಸಂಗ!

ಶ್ರೀ ವಾಮನ ನಾಯಕರು ೫೦೦ ರೂ. ಧನ ಸಹಾಯ ಮಾಡುವೆವೆಂದು ಅಭಿವಚನವನ್ನಿತ್ತರು!

ಬಾಗಲಕೋಟೆಯ ಶ್ರೀ ನರಗುಂದ ಬಿಂದೂರಾಯರು ಹಿಂ. ಸೇ. ದಲಕ್ಕೆ ಅಭಿಮಾನದಿಂದ ಭೂಮಿಯನ್ನು ದಾನವಾಗಿ ಕೊಟ್ಟ ಕಾಲವು ಒಳ್ಳೇ ಸುಮುಹೂರ್ತದ್ದಿರಲಿಕ್ಕೆ ಸಾಕು! ಅಂತೆಯೇ ಈ ಸ್ವಲ್ಪಾವಧಿಯಲ್ಲಿಯೇ ಆ ಸ್ಥಳದಲ್ಲಿ ಕನ್ನಡಿಗರಿಗಾಗಿ ವ್ಯಾಯಾಮಶಾಲೆಯ ಕಟ್ಟಡವನ್ನು ಪ್ರಾರಂಭಿಸುವ ಸುಪ್ರಸಂಗವು ಒಂದಿದೆ! ಬಾಗಲಕೋಟೆಯಲ್ಲಿ ಒಂದು ವ್ಯಾಯಾಮಶಾಲೆಯು ಸಿದ್ಧವಾದರೆ ಕನ್ನಡಿಗರಿಗೆಲ್ಲ ಅದರಿಂದಾಗುವ ಲಾಭವೆಂಥದು? ಎಂಬದಾಗಿ ಅನೇಕರು ಯೋಚಿಸಿರಬಹುದು. ಕರ್ನಾಟಕದ ಹಲಕೆಲವು ಮಹತ್ವದ ವೃತ್ತಪತ್ರಿಕೆಗಳಲ್ಲಿ ಈ ಬಗ್ಗೆ ಉಲ್ಲೇಖವು ಈ ವರೆಗೆ ಒಂದಿಲ್ಲ. ಆದುದರಿಂದ ಈ ವ್ಯಾಯಾಮ ಶಾಲೆಯ ಮಹತ್ವವು ಕನ್ನಡಿಗರಿಗೆಲ್ಲ ಚನ್ನಾಗಿ ತಿಳಿದಿಲ್ಲವೆಂಬದು ಸ್ಪಷ್ಟ. ಈ ಕಾರಣಕ್ಕಾಗಿ ಈ ಸಂಸ್ಥೆಯ ಉದ್ದೇಶದ ಬಗ್ಗೆ ಕೊಂಚ ಬರೆಯಬೇಕಾಗಿದೆ. ಈಗಿನ ನಮ್ಮ ಕನ್ನಡ ಯುವಕರೆಂದರೆ ದುರ್ಬಲರು. ಶಾರೀರಿಕ ಬಲದ ಸಂವರ್ಧನೆಯ ಕಡೆಗೆ ಅವರ ಲಕ್ಷ್ಯವೇ ಇಲ್ಲ. ಇಲ್ಲದ ಸಲ್ಲದ ದುರ್ಘಟಗಳಿಗೆ ಈಡಾಗಿದ್ದದರಿಂದ ಧೀರಗಂಭೀರವ ಭಾವೀ ನಾಗರಿಕರಾಗಿ ಮಹತ್ವದ ಕಾರ್ಯಗಳನ್ನು ಮಾಡಲು ಅವರು ಅಸಮರ್ಥರಾಗಿದ್ದಾರೆ. ಆದುದರಿಂದ ಕರ್ನಾಟಕದ ಎಲ್ಲ ಭಾಗಗಳ ಪ್ರತಿ ಜಿಲ್ಲೆಯಲ್ಲಿಯೂ ಕನಿಷ್ಟ ಒಂದಾದರೂ ವ್ಯಾಯಾಮ ಶಾಲೆಯನ್ನು ತೆರೆದು, ಕನ್ನಡ ತರುಣರನ್ನು ಸಧೃಢಕಾಯರನ್ನಾಗಿ ಮಾಡಬೇಕೆಂಬ ಮಹತ್ವಾಕಾಂಕ್ಷೆಯೊಂದು ಹಿಂದುಸ್ಥಾನೀ ಸೇವಾದಲದವರಲ್ಲಿದೆ. ಇದಕ್ಕಾಗಿ ವ್ಯಾಯಾಮ ವಿಷಯದಲ್ಲಿ ನುರಿತಂಥ ಶಿಕ್ಷಕರು ಮೊದಲು ಬೇಕು. ಇಂಥ ಶಿಕ್ಷಕರನ್ನು ಸಿದ್ಧಪಡಿಸುವದೇ ಬಾಗಲಕೋಟೆಯಲ್ಲಿ ಸ್ಥಾಪಿತವಾದ ವ್ಯಾಯಾಮ ಶಾಲೆಯ ಸಧ್ಯದ ಆಕಾಂಕ್ಷೆ. ಈ ವ್ಯಾಯಾಮ ಶಾಲೆಯಲ್ಲಿ ಈಗ್ಗೆ ೧೦೦ ಕ್ಕಿಂತಲೂ ಹೆಚ್ಚು ಜನರು ಶಿಕ್ಷಣಹೊಂದುತ್ತಲಿದ್ದಾರೆ. ಈಗಿನ ಜನರಲ್ಲಿ ವ್ಯಾಯಾಮದ ಅಭಿರುಚಿಯು ಇದ್ದದ್ದರಿಂದ ಬಾಗಲಕೋಟೆಯ ತರುಣರಲ್ಲಿ ೧೦ ಜನರಾದರೂ ಶಿಕ್ಷಣಕ್ಕಾಗಿ ಬರುವರೋ ಇಲ್ಲವೋ ಎಂಬ ಸಂಶಯವು ಮೊದಲಿಗಿದ್ದಿತು. ಆದರೆ ವ್ಯಾಯಾಮ ಶಾಲೆಯಲ್ಲಿಯ ಒಳ್ಳೇ ಮೋಹಕವಾದ ಶಿಕ್ಷಣ ಕ್ರಮವನ್ನು ಪ್ರತ್ಯಕ್ಷ ನೋಡಿ, ಸ್ಫೂರ್ತಿಗೊಂಡು, ಬಾಗಲಕೋಟೆಯಲ್ಲಿಯ ೬ ವರ್ಷದಿಂದ ೬೫ ವರ್ಷದ ವರೆಗಿನ ಎಲ್ಲ ಜಾತಿಯ ಉತ್ಸಾಹಿಗಳು ಮುಂದೊರೆದು ಬಂದು ಶಿಕ್ಷಣಪಡೆಯುತ್ತಿರುವ ಸಂಗತಿಯು ಮಹತ್ವದ್ದಾಗಿದೆ. ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಇದೇ ಮಾದರಿಯ ಶಿಕ್ಷಣಕ್ರಮವು ನಡೆದರೆ, ಅಲ್ಲಲ್ಲಿಯ ಬಲಹೀನ ತರುಣರು ಬಾಗಲಕೋಟೆಯಂತೆಯೇ ಸ್ಫೂರ್ತಿಗೊಂಡು, ವ್ಯಾಯಾಮಕ್ಕಾಗಿ ಕಿಕ್ಕಿರಿದು ಮುಕರುವರೆಂದು ನಿರಾತಂಕವಾಗಿ ಹೇಳಬಹುದು. ಆದುದರಿಂದ ಕನ್ನಡನಾಡಿನ ವ್ಯಾಯಾಮ ವಿಷಯಕವಾದ ಚಳವಳಿಗೆ ಮುಖ್ಯಸ್ಥಳವಾಗುವ ಬಾಗಲಕೋಟೆಯ ಈ ವ್ಯಾಯಾಮ ಶಾಲೆಯ ಸ್ಥಾಪನೆಗೆ ಇಷ್ಟೊಂದು ಮಹತ್ವವನ್ನು ಕೊಟ್ಟದ್ದು! ಈ ಮಹತ್ವಕ್ಕಾಗಿಯೇ ಧಾರವಾಡ ಜಿಲ್ಲೆಯ ಶ್ರೀ ಜೋಗಳೇರರೂ, ದಿವಾಕರರೂ, ಶೀವಡೆಯವರೂ, ವಿಜಾಪುರ ಜಿಲ್ಲೆಯ ಕರ್ನಾಟಕ ಭೂಷಣ ಕೌಜಲಗಿಯವರೂ, ಕೆಂಭಾವಿ ಮಧ್ವರಾಯರೂ ಬಾಗಲಕೋಟೆಗೆ ಬಂದುದು ಮತ್ತು, ಮೈಸೂರು ಕೊಡಗು ದೇಶಗಳ ವಿದ್ಯಾರ್ಥಿಗಳೂ ಗುರುಗಳೂ ಇಲ್ಲಿದ್ದುದಾದರೂ ಇದೇ ಮಹತ್ವವನ್ನು ಸೂಚಿಸುತ್ತದೆ.

ಈ ಮಹತ್ವದ ವ್ಯಾಯಾಮಶಾಲೆಯ ಕಟ್ಟಡದ ಅಡಿಗಲ್ಲನ್ನು ಕೂಡಿಸುವ ಸಮಾರಂಭವು ಕಳೆದ ರವಿವಾರ ಹೈದ್ರಾಬಾದದ ಸುಪ್ರಸಿದ್ಧ ಮುಖಂಡರಾದ ಶ್ರೀ. ವಾಮನ ನಾಯಕರ ಹಸ್ತದಿಂದ ನೆರವೇರಿತು. ಮೊದಲು ೧೦೦ ಜನ ವಿದ್ಯಾರ್ಥಿಗಳೂ ಹಾಗೂ ಮುಖಂಡರೂ ಕೂಡಿ ಮೆರವಣಿಗೆಯಿಂದ ಊರನ್ನು ಸುತ್ತಿ ಬಂದರು! ಬಾಗಲಕೋಟೆಯ ಎಲ್ಲ ಜಾತಿಯ ಈ ಹೊಸ ಹುರುಪಿನ ಹುಡುಗರ ಹುಬ್ಬುಗೆಯನ್ನೂ ಉತ್ಸಾಹವನ್ನೂ ಶಿಸ್ತಿನಿಂದ ನಡೆದ ಅವರ ಮೆರವಣಿಗೆಯನ್ನೂ ಕಂಡು, ನಾಗರಿಕರೆಲ್ಲ ಆನಂದಿತರಾಗಿ ಕಿಕ್ಕಿರಿದು ಸಾಯಂಕಾಲದಲ್ಲಿ ಅಡಿಗಲ್ಲಿನ ಸಮಾರಂಭಕ್ಕೆ ಧಾವಿಸಿ ಬಂದಿದ್ದರು. ಅಸಹಕಾರ ಚಳವಳದ ನಂತರ ಇಂಥ ಮಹಾಜನರ ಸಮ್ಮರ್ದವು ಬಾಗಲಕೋಟೆಯಲ್ಲಿ ಕೂಡಿದ್ದೆಂದರೆ ಇದೇ ಮೊದಲು. ಸುತ್ತಲಿನ ಹಳ್ಳಿಗಳಿಂದ ಸಹ ಕಾಲು ನಡಿಗೆಯಿಂದಲೂ, ಮೋಟಾರಿನಿಂದಲೂ ಜನರು ಬಂದಿದ್ದರು! ಪೂಜೆ, ಪುನಃಸ್ಥಾಪನ, ಸ್ವಯಂಸೇವಕರ ಜಯಜಯಕಾರ, ತುತೂರಿಗಳ ನಿನಾದ, ಮಹಾಜನರ ಕರತಾಡನೆಗಳಲ್ಲಿ ಶ್ರೀ ವಾಮನ ನಾಯಕರು ತಳಹದಿಯ ಕಲ್ಲನ್ನು ತಮ್ಮ ಸ್ವಂತ ಹಸ್ತದಿಂದ ಕೂಡಿಸಿದರು! ಆ ಮೇಲೆ ಸಭೆಯ ಕಾರ್ಯಕ್ರಮವು ಪ್ರಾರಂಭವಾಯಿತು. ಮೊದಲಿಗೆ ವಿದ್ಯಾರ್ಥಿಗಳು ತಾವು ಕಲಿತಂಥ ಭಲ್ಲೆ, ಕಿರಗತ್ತಿ, ಲೇಝಿಮು, ದೊಣ್ಣೆ (ಲಾಠಿ), ಬಡಿಗೆ, ತಿರುವು ಬಡಿಗೆ, (ಗದಗಾಘೇರಿ) ಆಸನ, ಲೋಡು, ಇವೇ ಮೊದಲಾದ ಆಟಗಳನ್ನಾಡಿ ತೋರಿಸಿದರು. ಕೂಡಿದ ಜನರೆಲ್ಲ ಇವನ್ನು ನೋಡಿ ಅತ್ಯಂತ ಅಭಿಮಾನವನ್ನೂ ಆನಂದವನ್ನೂ ತಳೆದರು.

ಆ ಮೇಲೆ ಕೆಳಗೆ ಕಾಣಿಸಿದವರಿಂದ ಬಂದ ತಂತಿಗಳೂ ಪತ್ರಗಳೂ ಸಭೆಯಲ್ಲಿ ಓದಲ್ಪಟ್ಟವು. (೧) ಟಿ. ಸಿ. ಗೋಸ್ವಾಮಿ ಕಲಕತ್ತಾ, ಅಧ್ಯಕ್ಷರು ಹಿಂ. ಸೇ. ದಲ. (೨) ಹರಿಸರ್ವೋತ್ತಮರಾವ ಕರ್ನೂಲ. (೩) 'ಮುಂಬೈ ಕ್ರಾನಿಕಲ್'ದ ಸಂಪಾದಕರಾದ ಬ್ರೇಲ್ವಿ (೪) ಡಾ. ಸಾವರಕರ (೫) ದೇಶಪಾಂಡೆ ಗಂಗಾಧರರಾವ (೬) ಹೊಸಕೊಪ್ಪ ಕೃಷ್ಣರಾವ (೭) ಕರ್ನಾಡ ಸದಾಶಿವರಾವ (೮) ಮುದವಡೇ ಕೃಷ್ಣರಾವ (೯) ದೇಸಾಯಿ ಪಾಂಡುರಂಗರಾವ (೧೦) ಮಹಿಷಿ ಬಸ್ತಿ ಸ್ಥಿರರಾವ ಇತ್ಯಾದಿ.

ನಂತರ ಶ್ರೀ. ಧಾರವಾಡ ವಕೀಲರು ವ್ಯಾಯಾಮ ಶಾಲೆಯ ಮಹತ್ವವನ್ನು ಹೇಳಿ, ತನುಮನಧನದಿಂದ ಎಲ್ಲರೂ ಇದಕ್ಕೆ ಅವಶ್ಯವಾಗಿ ಸಹಾಯವನ್ನು-ವಿಶೇಷವಾಗಿ ಈಗ್ಗೆ ಬೇಕಾದ ದ್ರವ್ಯ ಸಹಾಯವನ್ನು-ಮಾಡಬೇಕಾಗಿ ಒತ್ತಿ ಒತ್ತಿ ಹೇಳಿದರು.

ನಂತರ ಶ್ರೀ ದಿವಾಕರರು ತಮ್ಮ ಭಾಷಣದಲ್ಲಿ ಈಗಿನ ತರುಣರ ದೇಹಸ್ಥಿತಿಯ ಬಗ್ಗೆಯೂ, ಅವರಿಗೆ ವ್ಯಾಯಾಮ ತೆಗೆದುಕೊಳ್ಳುವ ಅವಶ್ಯಕತೆಯ ಬಗ್ಗೆಯೂ ಒಳ್ಳೇ ಮಾರ್ಮಿಕವಾಗಿ ವಿವೇಚಿಸಿದರು. ವ್ಯಾಯಾಮ ಮಾಡುವದೆಂದರೆ ಕಡಮೆ ಪ್ರಕಾರದ್ದು; ಎಂಬ ದುಷ್ಟ ಭಾವನೆಯು ತರುಣರಲ್ಲಿ ಸೇರಿದ್ದನ್ನು ನಾವು ಕಿತ್ತಿಹಾಕಬೇಕು; ಮತ್ತೂ ನಮ್ಮ ಶರೀರ ಬಲವನ್ನು ಬೆಳಿಸಿ ರಾಷ್ಟ್ರಕಾರ್ಯಕ್ಕಾಗಿ ಸಿದ್ಧರಾಗಿರಬೇಕು; ಗ್ಲ್ಯಾಡಸ್ಟನ್‌ರು ೭೦ ವರ್ಷದ ಮುದಕರಾಗಿದ್ದರೂ ಮನೆಯಲ್ಲಿ ಕಟ್ಟಿಗೆ ಕಡೆದು, ದೇಹಬಲವನ್ನು ಕಾಯ್ದುಕೊಂಡು, ಪಾರ್ಲಮೆಂಟದಲ್ಲಿ ತಮ್ಮ ಬೌದ್ಧಿಕ ಶಕ್ತಿಯಿಂದ ಎಲ್ಲರನ್ನೂ ಆಶ್ಚರ್ಯಗೊಳಿಸುತ್ತಿದ್ದರು. ಜರ್ಮನಿಯಲ್ಲಿ ಲಿಟ್ಕ್ನನು ೭೦ ವರ್ಷದವನಾಗಿದ್ದರೂ, ಯುದ್ಧ ಪ್ರಸಂಗದಲ್ಲಿ ಎಲ್ಲರಕಿಂತ ಮೊದಲು ಮುಂದೆ ಬಂದು ಸೆಡ್ಡು ಹೊಡೆದು ನಿಂತು, ಯುದ್ಧದ ಜವಾಬದಾರಿಯನ್ನು ಹೊತ್ತನು. ನಾನು ದೊಡ್ಡವನಾದೆನು; ವ್ಯಾಯಾಮ ಮಾಡುವದು ಹೇಗೆ ಎಂಬದಾಗಿ ಯಾರೂ ನಾಚಕೂಡದು. ಈ ಬಗೆಯ ದುಷ್ಟ ಕಲ್ಪನೆಗಳನ್ನು ಸಮಾಜದಿಂದ ಕಿತ್ತಿ ಹಾಕಲು ಪ್ರಸ್ತುತದಂಥ ವ್ಯಾಯಾಮ ಶಾಲೆಗಳು ಅವಶ್ಯವಾಗಿ ನಮಗೆ ಬೇಕು. ಪರರಾಷ್ಟ್ರಗಳಲ್ಲಿ ಮನುಷ್ಯನ ಆಯುಷ್ಯಕ್ರಮವು ೩೦-೪೦ ರ ವರೆಗೆ ಇರುವಾಗ್ಗೆ ಭಾರತೀಯರ ಆಯುರ್ಮರ್ಯಾದೆಯು ಕೇವಲ ೨೩ ಇರುವದನ್ನು ಕಂಡರೆ ಮನವು ತಲ್ಲಣಗೊಳ್ಳುತ್ತದೆ. ನಾನೀಗ ೨೩ ವರ್ಷವನ್ನು ಮೀರಿದವನಾಗಿದ್ದೇನೆ. ಆದರೂ ಜೀವಿಸಿದ್ದೆಂದರೆ ಒಂದು ಬಗೆಯ ಭೂತಪಿಶಾಚದಿಂದಲೇ ಸರಿ. ಎಂಬದಾಗಿ ಶ್ರೀ ದಿವಾಕರರು ವಿಸ್ತರಿಸಿ ಮುಕ್ಕಾಲು ಗಂಟೆಯ ವರೆಗೆ ಭಾಷಣ ಮಾಡಿದರು.

ಕಡೆಗೆ ಅಂದಿನ ಮುಖ್ಯ ಆರ್ಕಕರಾದ ಶ್ರೀ. ವಾಮನ ನಾಯಕರು ಬಹು ಸುಲಭವಾದ ಹಿಂದೀ ಭಾಷೆಯಲ್ಲಿ ಸರಸವಾಗಿ ಮಾತನಾಡಿದರು. ತಾವು ಕರ್ನಾಟಕಸ್ಥರಿದ್ದರೂ, ಕನ್ನಡದಲ್ಲಿ ಚನ್ನಾಗಿ ಮಾತನಾಡಲು ಬಾರದ್ದಕ್ಕೆ ವಿಷಾದವನ್ನು ವ್ಯಕ್ತಗೊಳಿಸಿ, ರಾಷ್ಟ್ರಸೇವೆಯೇ ಹಿಂ. ಸೇ. ದಲದ ಉದ್ದೇಶವಾಗಿದ್ದರಿಂದ ರಾಷ್ಟ್ರಸೇವೆಯಲ್ಲಿ ಕಂಕಣಬದ್ಧರಾಗಲು, ಕರ್ನಾಟಕದ ತರುಣರನ್ನು ಸಜ್ಜುಗೊಳಿಸುತ್ತಿರುವದು ಬಹು ಸಂತೋಷದ ಮಾತಾಗಿದೆಂದು ಹೇಳಿ, ಸಧ್ಯದ ರಾಜಕೀಯ ಪರಿಸ್ಥಿತಿಯನ್ನು ಚನ್ನಾಗಿ ವಿವೇಚಿಸಿದರು. ಬಾದಶಹರ ವಿಚಾರಣೆಯ ಮಂಡಲದ ನಿಯೋಜನೆಯಲ್ಲಿ ಭಾರತೀಯರನ್ನು ಯಾವ ಬಗೆಯಿಂದ ಧಿಕ್ಕರಿಸಿರುವರೆಂಬದನ್ನು ನೆನೆದು ಭಾರತೀಯರೆಲ್ಲ ಅದಕ್ಕೆ ಬಹಿಷ್ಕಾರ ಹಾಕಲೇಬೇಕೆಂದೂ, ಈ ಬಗೆಯ ಬಹಿಷ್ಕಾರದ ಕಾರ್ಯದ ಚಳವಳಿಗಳನ್ನು ಕೊನೆಗಾಣಿಸಲು ನಮ್ಮಲ್ಲಿ ಶಾರೀರಿಕ ಬಲವೂ ಅತ್ಯವಶ್ಯವಾಗಿ ಬೇಕೆಂದೂ ನುಡಿದು, ಹಿಂದೂ-ಮುಸಲ್ಮಾನರು ತಮ್ಮ ತಮ್ಮಲ್ಲಿಯ ಕಲಹವನ್ನು ಬಿಡಬೇಕೆಂದು ಸಾರಿದರು. ಬ್ರಿಟಿಶ್ ಲಷ್ಕರೀ ಜನರಿಗಾಗಿ ಸಾವಿರಾರು ಆಕಳುಗಳು ಕೊಲ್ಲಲ್ಪಡುತ್ತವೆ; ಅದನ್ನು ಮಾತ್ರ ಹಿಂದೂ ಮತೀಯರು ವಿರೋಧಿಸುವದಿಲ್ಲ! ಆದರೆ ಮುಸಲ್ಮಾನರು ಆಕಳನ್ನು ಕೊಂದರೆ ಅವರ ಮೇಲೆ ಕುಪಿಸುವದೇಕೆ? ಇತ್ತ ಮುಸಲ್ಮಾನರಾದರೂ ಒಕ್ಕಲತನಕ್ಕೆ ಆಕಳು ಮುಖ್ಯ ಪ್ರಾಣಿಯಾದುದನ್ನು ಸ್ಮರಿಸಿ, ತಮ್ಮ ಹೊಟ್ಟೆಗೆ ದಿನಾಲು ಹಿಡಿ ಹಿಟ್ಟು ಹಾಕುವಂಥ ಗೋವನ್ನು ಕೊಲ್ಲುವದನ್ನು ಬಿಡತಕ್ಕದ್ದು. ಮಸೀದೆಯ ಮುಂದೆ ನಾಲ್ಕು ಹೆಜ್ಜೆ ವಾದ್ಯ ಬಾರಿಸದಿದ್ದರೆ ಅದಾವ ಧರ್ಮಗ್ಲಾನಿಯು ಹಿಂದೂ ಮತೀಯರಿಗಾಗುವದೋ ನಾ ಕಾಣೆ! ಅದೇ ಪ್ರಕಾರ ಸುತ್ತಲೆಲ್ಲ ಗದ್ದಲ ನಡೆದಿರುವಾಗ್ಗೆ ಒಂದೆರಡು ನಿಮಿಷ ವಾದ್ಯಗಳು ಮಸೀದೆಯ ಮುಂದೆ ಬಾರಿಸಲ್ಪಟ್ಟರೆ, ಮುಹಮ್ಮದೀಯರ ಧರ್ಮಕ್ಕೆ ಯಾವ ಬಗೆಯಿಂದ ಆಘಾತವಾಗುವದೋ ನಾ ಕಾಣೆ; ಎಂಬದಾಗಿ ಎಲ್ಲರಿಗೂ ಚನ್ನಾಗಿ ಉಪದೇಶಿಸಿದರು. ಕಡೆಗೆ ಈ ವ್ಯಾಯಾಮ ಶಾಲೆಯ ಕಟ್ಟಡದ ಪೂರ್ತಿಗಾಗಿ ಬೇಕಾದ ೧೦ ಸಾವಿರ ರೂಪಾಯಿಗಳನ್ನು ಸಧನಿಕವಾದ ಬಾಗಲಕೋಟೆಯೂ ಕರ್ನಾಟಕವೂ ಪೂರೈಸಿಕೊಡಬೇಕೆಂದು ಒಲವತ್ತರವಾಗಿ ತಿಳಿಹೇಳಿ, ಇಲ್ಲಿಯವರಿಂದ ಇದಾಗದಿದ್ದರೆ ತಾವೇ ಸ್ವತಃ ಜೋಳಿಗೆಯನ್ನು ಹಿಡಿದು ಹೈದರಾಬಾದದಲ್ಲಿ ಹಣ ಕೂಡಿಸುವೆವಾಗಿ ಆಶ್ವಾಸನ ಕೊಟ್ಟರು. ಸ್ವತಃ ತಮ್ಮ ಕಾಣಿಕೆಯೆಂದು ೫೦೦ ರೂ. ಗಳ ವರೆಗೆ ಧನಸಹಾಯ ಮಾಡಲು ತಾವು ಸಿದ್ಧರಿರುವದನ್ನು ಪ್ರಕಟಗೊಳಿಸಿ ಜನರ ಆನಂದೋದ್ರೇಕದ ಕರತಾಡನೆಯಲ್ಲಿ ತಮ್ಮ ಭಾಷಣವನ್ನು ಮುಗಿಸಿದರು.

ಅಧ್ಯಕ್ಷರ ಆಭಾರ ಮನ್ನಿಸುವ ಕಾರ್ಯಕ್ಕೆ ಕರ್ನಾಟಕ ಭೂಷಣ ಕೌಜಲಗಿ ಶ್ರೀನಿವಾಸರಾಯರೆದ್ದು, ಅಧ್ಯಕ್ಷರ ಚರಿತ್ರೆಯನ್ನಲ್ಪದರಲ್ಲಿ ಹೇಳಿದರು:— "ಸರಸ್ವತಿ ಲಕ್ಷ್ಮಿಯರು ಒಂದೆಡೆಗೆ ಕಲೆಯುವದು ಅಪರೂಪ. ಆದರೆ ಶ್ರೀ ವಾಮನ ನಾಯಕರಲ್ಲಿ ಈ ಅತ್ತೆ ಸೊಸೆಯಂದಿರು ಅಕ್ಕರದಿಂದ ನೆಲಸಿದ್ದಾರೆ. ಇವರಿಬ್ಬರೂ ಯಾರಲ್ಲಿಯಾದರೂ ಇದ್ದರೂ, ಸತ್ಕಾರ್ಯಕ್ಕೆ ಆ ಮಹನೀಯರ ಮನಸ್ಸು ಸಿದ್ಧವಾಗುವದೂ ಅಪರೂಪ. ಆದರೆ ಶ್ರೀ ನಾಯಕರು ರಾಷ್ಟ್ರಸೇವೆಗಾಗಿ ಸೊಂಟ ಕಟ್ಟಿ ನಿಂತಿರುವರು! ಆದುದರಿಂದ ಈ ತ್ರಿವೇಣಿ ಸಂಗಮದ ಫಲವು ನಮಗಿಂದು ದೊರೆತುದು ನಮ್ಮ ಪುಣ್ಯವೇ ಸರಿ. ಅಧ್ಯಕ್ಷರು ಒಂದು ಹಕ್ಕಿಯ ಕಥೆಯನ್ನು ಹೇಳಿದರು. ಅದು ಹಿಂದೀ ಭಾಷೆಯಲ್ಲಿ ಹೇಳಲ್ಪಟ್ಟದ್ದರಿಂದ ನಿಮಗೆಲ್ಲ ಚನ್ನಾಗಿ ತಿಳಿದಿರಲಿಕ್ಕಿಲ್ಲ. ಆದ್ದರಿಂದ ಕನ್ನಡದಲ್ಲದನ್ನು ಪುನಃ ಹೇಳುತ್ತೇನೆ. ಒಂದು ಉರಿಯುವ ಗಿಡದಲ್ಲಿ ಒಂದು ಹಕ್ಕಿ ಇದ್ದಿತು. ಅದನ್ನು ಕಂಡು ಓರ್ವ ದಾರಿಕಾರನಂದದ್ದು:— "ಎಲೇ, ಹಕ್ಕಿಯೇ ನೀನೇನು ಗಿಡದಂತೆ ಹಾರದಿರಲು ಅಸಮರ್ಥನಲ್ಲ. ರೆಕ್ಕೆಗಳಿವೆ! ಅವುಗಳನ್ನೇ ಸಂಕಟ ಸಮಯದಲ್ಲಿ ಉಪಯೋಗಿಸು; ಹಾರಿಹೋಗಿ ಜೀವವನ್ನು ರಕ್ಷಿಸಿಕೋ. ಹೀಗೇಕೆ ಹುಚ್ಚನಂತೆ ಕುಳಿತಿರುವೆ?" ಇದಕ್ಕೆ ಪಕ್ಕಿಯು ಅಂದುದೇನಂದರೆ:—"ನನ್ನಿಂದದಾಗದು; ನಾನು ಹುಟ್ಟಿ ಬೆಳೆದುದು ಇದೇ ಗಿಡದಲ್ಲಿ. ಇದೇ ಗಿಡದ ಹಣ್ಣು ಹಂಪಲಗಳನ್ನು ತಿಂದಿರುವೆನು. ಆದ್ದರಿಂದ ಈ ಗಿಡವು ಸಂಕಟಕ್ಕೊಳಗಾದಾಗ್ಯೆ, ನಾನೊಬ್ಬನೇ ಹಾರಿ ಹೋಗಲಾರೆ! ಇಲ್ಲಿಯೇ ಸುಟ್ಟುಗೊಂಡು ಸಾಯುವೆನು!" ಇದೇ ಪ್ರಕಾರವಾಗಿ ಕರ್ನಾಟಕದಲ್ಲಿ ವಾಸಿಸುವ ಮರಾಟಿಗರು ತಾವು ಕರ್ನಾಟಕದ ಭೂಮಿಯಲ್ಲಿ ಹುಟ್ಟಿ, ಇಲ್ಲಿಯೇ ಬೆಳೆದು, ಈ ಭೂಮಿಯ ಉಪ್ಪನ್ನೇ ತಿಂದಿರುವದನ್ನು ಮರೆಯದೇ, ಕನ್ನಡ ನಾಡು ನುಡಿಗಳ ಬಗ್ಗೆ ನಿಜವಾದ ಪ್ರೇಮವನ್ನೇ ಅಂತಃಕರಣಪೂರ್ವಕವಾಗಿ ತೋರಿಸಬೇಕೆಂಬದನ್ನು ನಾನು ಸಾರಿ ಸಾರಿ ಹೇಳುತ್ತೇನೆ. ಇತ್ತ ಕನ್ನಡಿಗರಿಗಾದರೂ ನಾನು ಕೊಂಚ ಉಪದೇಶಿಸದೇ ಇರಲಾರೆ. ಕನ್ನಡ ನುಡಿಯ ಸೇವೆ ಮಾಡಬೇಕೆನ್ನುವವರು ವಾಙ್ಮಯ ಕ್ಷೇತ್ರದಲ್ಲಿ ಚನ್ನಾಗಿ

ನವುಟ್ಟಿ ದುಡಿಯಲಿ: ಆದರೆ ರಾಜಕಾರಣದಲ್ಲಿ ಮಾತ್ರ ಈ ಭಾಷೆಯ ಗೊಂದಲವು ಬೇಡ. ರಾಜಕಾರಣಕ್ಕೆ ಯಾವ ಭಾಷೆಯಾದರೂ ಅಷ್ಟೇ ಇದೆ. ರಾಷ್ಟ್ರದ ಏಳ್ಗೆಯನ್ನು ಸಂಪಾದಿಸುದೇ ನಮ್ಮ ಉದ್ದೇಶವಿರುವದರಿಂದ ಭಾಷೆಯ ಬಾದರಾಯಣ ಸಂಬಂಧವನ್ನು ನಾವು ರಾಜಕಾರಣಕ್ಕೆ ಹಚ್ಚಕೂಡದು. ನಾನು ಈ ದಿನ ಎದ್ದುದು ಒಂದು ಕೆಲಸಕ್ಕೆ; ಆದರೆ ಈಗ್ಗೆ ಮಾತಾಡಿದ್ದು ಕೊಂಚ ಬೇರೆಯಾಯಿತೆನ್ನುವದೇನೋ ನಿಜ. ನಾನು ಎಷ್ಟೆಂದರೂ ಮುಪ್ಪಿನವನು. ಮೇಲೆ ಶ್ರೀ ದಿವಾಕರರ ಲೆಕ್ಕದಂತೆ ಎರಡು ಸಲ ಜೀವಂತ ಭೂತನಾಗಿರುವೆನು! ಯಾಕೆಂದರೆ ನಾನು ಹಿಂದೀಯರ ಆಯುಷ್ಯ ಪ್ರಮಾಣದ ೨೩ ವಯಸ್ಸನ್ನು ಎರಡು ಸಲ ದಾಟಿರುವೆನು!!" ಎಂಬದಾಗಿ ವಿನೋದದಿಂದ ಹೇಳಿ ಕರ್ನಾಟಕ ಭೂಷಣರು ತಮ್ಮ ಭಾಷಣವನ್ನು ಮುಗಿಸಿದರು. ರಾಷ್ಟ್ರೀಯ ಧ್ವಜಾರೋಹಣವಾದ ಮೇಲೆ ಆ ದಿನದ ಕಾರ್ಯಕ್ರಮವು ಸಮಾಪ್ತಿಯನ್ನು ಹೊಂದಿತು.

ಕರ್ನಾಟಕ ಏಕೀಕರಣ ಪರಿಷತ್ತು.

ಕರ್ಮವೀರದ ಮತ.

ಏಕೀಕರಣ ಚಳವಳಿಯು ಸಾಕಷ್ಟು ಬಲವುಳ್ಳದ್ದಿಲ್ಲವೆಂದು ಸರಕಾರದವರಂತೂ ನಿಶ್ಚಯಿಸಿದಂತಾಯಿತು. ಗವ್ಹರ್ನರ ಸಾಹೇಬರು ಮೊನ್ನೆ ಕರ್ನಾಟಕಕ್ಕೆ ಬಂದಾಗ ಶ್ರೀ. ಬೆಳವಿ, ಶ್ರೀ. ಚಿಕ್ಕೋಡಿ, ಶ್ರೀ. ಕಂಬಳಿ ಇವರು ಆ ಪ್ರಶ್ನೆಯಂನು ಕುರಿತು ಪ್ರಶ್ನೆ ಮಾಡಿರುವರೆಂದು ಕೇಳಿದ್ದೇವೆ. ಆದರೆ ಆ ವಿಷಯದಲ್ಲಿ ಏನು ಕೆಲಸವು ಮಾಡಲ್ಪಟ್ಟಿದೆ. ಮತ್ತು ನಾನು ಏನು ಮಾಡಬಹುದು ಎಂದು ಮರಳಿ ಗವ್ಹರ್ನರ ಸಾಹೇಬರು ಕೇಳಿದರಂತೆ! ಬಲವುಳ್ಳ ಚಳವಳಿಯೆಂದರೇನು ಇದಂನು ನಮ್ಮಷ್ಟಕ್ಕೆ ನಾವೇ ನಿಶ್ಚಯಿಸಿ ಆ ಪ್ರಕಾರ ಲೋಕ ಜಾಗೃತಿಯಂನು ಮಾಡದಿದ್ದರೆ ಇನ್ನು ಮುಂದೆ ಈ ಕಾರ್ಯವು ಸಾಗದೆಂಬದು ಸ್ಪಷ್ಟವಿದೆ. ಈ ಲೋಕಜಾಗೃತಿಯ ಸ್ಪಷ್ಟವಾದ ಸ್ವರೂಪವನ್ನು ಮತ್ತು ಅದಂನು ಮಾಡುವ ಕಾರ್ಯಕ್ರಮವಂನು ವಿವರವಾಗಿ ನಾವು ಮುಂದಿನ ವಾರ ಉಲ್ಲೇಖಿಸುವೆವು. ಈಗ ಬಾಗಲಕೋಟೆಯವರು ಏಕೀಕರಣದ ಪರಿಷತ್ತನ್ನು ಕರೆಯುವದಂನಂತೂ ನಿಶ್ಚಯಿಸಿದ್ದಾರೆ. ಆ ಪರಿಷತ್ತಿನಲ್ಲಿ ಈ ವಿಷಯವಂನು ಚರ್ಚಿಸಿ ಅದನ್ನು ಮುಂದುವರಿಸುವದು ಎಲ್ಲರ ಕರ್ತವ್ಯವಾಗಿದೆ, ಆ ಏಕೀಕರಣ ಪರಿಷತ್ತೇ ಹೆಚ್ಚು ಲೋಕಪ್ರಿಯವೂ ಮನೋವೇಧಕವೂ ಆಗಬೇಕಾಗಿದ್ದರೆ ಕರ್ನಾಟಕದ ಎಲ್ಲ ಬಗೆಯ ಕುಂದ ಕೊರತೆಗಳನ್ನು ಕುರಿತು ವಿಚಾರ ಮಾಡುವ ಅಖಿಲ ಕರ್ನಾಟಕ ಪರಿಷತ್ತೆಂನ್ನಾಗಿ ಮಾಡಬೇಕೆಂದು ರಾ|| ಸಾ|| ಹಳಕಟ್ಟೀ, ಶ್ರೀ. ವೆಂಕಟರಾವ ಆಲೂರ ಮುಂತಾದ ಮಹನೀಯರ ವಿಚಾರವಿದೆ. ಇದಾದರೂ ಸ್ತುತ್ಯ ಕಲ್ಪನೆಯು. ಹಾಗೆ ಆಯಿತೆಂದರೆ ಕ. ಏಕೀಕರಣ, ವಿಶ್ವವಿದ್ಯಾಲಯದ ಪ್ರಶ್ನೆಗಳು ಆ ಸರ್ವ ಕರ್ನಾಟಕ ವ್ಯಾಪೀ ಪರಿಷತ್ತಿನ ಒಂದು ಅಂಗಗಳಾಗುವವು. ಈ ವಿಷಯವಂನಾದರೂ ಪರಿಷತ್ತಿನವರು ವಿಚಾರಿಸಬೇಕು. —ಕರ್ಮವೀರ.

ಏಕೀಕರಣದ ಸುದ್ದಿಗಳು.

ಧಾರವಾಡದಲ್ಲಿರುವ ಮುಖ್ಯ ಏಕೀಕರಣ ಸಭೆಯ ಕಾರ್ಯಕಾರೀ ಮಂಡಲವು ಬಾಗಲಕೋಟೆಯಲ್ಲಿ ನಾಳಿನ ರವಿವಾರ ತಾ|| ೪ನೇ ದಿನ ಮಧ್ಯಾಹ್ನದ ೨|| ಗಂಟೆಗೆ ಕೂಡುವದು.

ಮೊನ್ನಿನ ಸೋಮವಾರ ತಾ|| ೨೧ನೇ ದಿನ ಸೊಲ್ಲಾಪುರ ಬ್ಯಾಂಕದಲ್ಲಿ ಬಾಗಲಕೋಟೆಯ ವ್ಯಾಪಾರಸ್ಥರು ಸಭೆಸೇರಿದ್ದರು. ಆಗ ಶ್ರೀಯುತರುಗಳಾದ ಮಂಗಳವೇಢೆ ಶ್ರೀನಿವಾಸರಾಯರೂ ದಿವಾಕರ ರಂಗರಾಯರೂ ಕರ್ನಾಟಕ ಏಕೀಕರಣಕ್ಕೂ ವ್ಯಾಪಾರಕ್ಕೂ ಇರುವ ಸಂಬಂಧವನ್ನು ವಿವರಿಸಿ ಹೇಳಿದರು. ಕರ್ನಾಟಕದ ಯಾವ ಭಾಗದಲ್ಲಿಯ ವ್ಯಾಪಾರಸ್ಥರೂ ಈ ವಿಷಯವನ್ನು ತಿಳಿದುಕೊಳ್ಳಲು ಇಚ್ಛಿಸಿಲ್ಲ. ಆದರೆ ಬಾಗಲಕೋಟೆಯವರು ಈ ವಿಷಯದಲ್ಲಿ ಮುನಸ್ಸು ಹಾಕಿದುದು ಸ್ತುತ್ಯವಾದುದು. ಕರ್ನಾಟಕದಲ್ಲಿ ಉಳಿದ ವ್ಯಾಪಾರಸ್ಥರು ಬಾಗಲಕೋಟೆ ವರ್ತಕರ ಈ ಮೇಲ್ಪಂಕ್ತಿಯನ್ನು ಈಗಲಾದರೂ ತಿಳಿಬೇಕು.

ಸತೀ ಸಖೂದೇವಿ.

ಬಾಗಲಕೋಟೆಯ ಶ್ರೀಕೃಷ್ಣ ಕನ್ನಡ ಸಂಗೀತ ನಾಟಕ ಮಂಡಳಿಯು ಹೊಸದಾಗಿಹೊರಟದ್ದು ಕರ್ನಾಟಕ ರಂಗಭೂಮಿಯ ಪ್ರಗತಿಯನ್ನಾಶಿಸುವವರೆಲ್ಲರೂ ಈ ಮಂಡಳಿಯವರ ಕಡೆ ದೃಷ್ಟಿಯಿಟ್ಟು, ಅಭಿವೃದ್ಧಿಗವರಿಗೆ ಮಾರ್ಗವನ್ನು ತೋರಿಸಿಕೊಟ್ಟು ಪ್ರೋತ್ಸಾಹಿಸಬೇಕಾದುದು ಕರ್ತವ್ಯವಾಗಿದೆ. ಸಾಧುಸಂತಳಾದ ಸಖೂದೇವಿಯ ಮಹಿಮಾತಿಶಯವಾದ ಚರಿತ್ರೆಯನ್ನು ಅರಿಯದವರಿಲ್ಲ. ಸಖೂದೇವಿಯ ಅಂತರಂಗದಲ್ಲಿದ್ದ ಭಕ್ತಿ ಪ್ರೇಮ ಗುಣಗಳನ್ನು ರಸವತ್ತಾಗಿ ಆಡಿತೋರಿಸಬೇಕಾದರೆ ಒಂದು ಸಾಹಸವೇ ಸರಿ. ಈ ಸಾಹಸೋದ್ಯಮದಲ್ಲಿ ಕೈಹಾಕಿ ಜಯಭಾಗಿಗಳಾಗಿ ಬಂದಿರುವ ಶ್ರೀಮತಿ ಗಂಗೂಬಾಯಿಯವರು ಅಭಿನಂದನೀಯರೇ ಸರಿ. ತಮ್ಮ ಸರಳವಾದ ಅಭಿನಯ, ಮನೋಹರವಾದ ಗಾಯನ ಹಾಗೂ ಚಿತ್ತಾಕರ್ಷರೂಪು ಇವುಗಳಿಂದ ಕೃಷ್ಣನ ಕಮಲ ಪದ್ಮ ಆಶ್ರಯಿಯಾಗಿರುವ ಸಖೂದೇವಿಗೆ ಪುನಃ ಜೀವಕಳೆಯನ್ನು ಕೊಟ್ಟಿದ್ದಾರೆಂದಲ್ಲಿ ಅತಿಶಯೋಕ್ತಿಯಾಗಲಾರದು. ನಾಟಕದಲ್ಲೊದಗುವ ಕೆಲವು ಸಂದಿಗ್ಧ ಸನ್ನಿವೇಶಗಳ ಪರಿಸ್ಥಿತಿಯನ್ನೂ, ವಿರೂಪಹೊಂದಿದಾನಂತರ ಬರುವ ಭಾವನೆಗಳನ್ನೂ, ಇಹಜೀವನದಲ್ಲನುಭವಿಸುತ್ತಿರುವ ಹಿಂಸೆಗಳನ್ನೂ ಹೀನವಾಗೆಣಿಸಿ ಪರಮಾತ್ಮನ ಧ್ಯಾನಾನಂದವೇ ಹಿರಿಯದಾಗಿ ಭಾವಿಸುವ ಭಾವನಾ ಪ್ರಪಂಚದ ಬ್ರಹ್ಮಾನಂದವನ್ನು ಅಭಿಮಾನದಿಂದ ಅಭ್ಯಸಿಸಿ ಶ್ರೀಮತಿಯವರೇ ಪ್ರದರ್ಶಿಸಹತ್ತಿದರೆ ಕನ್ನಡ ರಂಗಭೂಮಿಯ ಸೇವೆಯನ್ನು ಯುಕ್ತರೀತಿಯಲ್ಲಿ ಮಾಡಿದಂತಾಗುತ್ತದೆ.

ನಾಯಕ ಪಾತ್ರದಲ್ಲಿನ ಅಂತರಂಗಿಕ ಅಭಿಪ್ರಾಯ, ನಾಯಕನ ನಡೆನುಡಿ, ವ್ಯವಹಾರ, ಇವುಗಳೊಂದನ್ನೂ ಅರ್ಥಮಾಡಿಕೊಳ್ಳದೆ ನಾಯಕ ಪಾತ್ರಾಭಿನಯವನ್ನು ಮಾಡಬರುವುದು ವಿನೋದಾಸ್ಪದವಾಗಿದೆ. ಶ್ರೀ. ಗುರುಸಿಂಗಪ್ಪಾ ಗುಳೇದಗುಡ್ಡ ಇವರೊಬ್ಬರನ್ನುಳಿದು ಉಚಿತಭಿನಯ ಮತ್ತು ಭಾವನಾ ಪ್ರದರ್ಶನೆಗಳ ಕನಸೂ ಮಿಕ್ಕಯಾರಿಗೂ ಇಲ್ಲವೆಂದು ಧೈರ್ಯವಾಗಿ ಹೇಳಬಹುದು. ಕೆಲವು ನಟರು ಹಲ್ಲುಬಿಟ್ಟು ಮಾತನಾಡಲಾರರು! ಮತ್ತೆ ಕೆಲವರು "ಬಡ ಬಡಾ" ಎಂದು ಸೀರುಕುಡಿಯುವ ಧ್ವನಿಯನ್ನು ಬಿಟ್ಟು ಅರ್ಥವಾಗುವಂತೆ ಮಾತನಾಡುವ ಪದವನ್ನರಿಯೇ ಅರಿಯರು; ಇಂತಹರೆಲ್ಲ ರಂಗಭೂಮಿಯ ಮೇಲೆ ಬಂದು ವೃಥಾ ಕೆಟ್ಟ ಹೆಸರನ್ನು ತಂದುಕೊಳ್ಳುವದರ ಬದಲು ಈ ವೃತ್ತಿಗೆ ಶರಣು ಹೊಡೆಯುವುದು ಯೋಗ್ಯವಾಗಿ ಕಾಣುತ್ತದೆ. ಶ್ರೀ. ಸಂಗನ ಬಸಪ್ಪನವರು ಚೆನ್ನಾಗಿ ಹಾಡಬಲ್ಲವರು. ಆದರೆ ಸ್ತ್ರೀಪಾತ್ರಕ್ಕೆ ಎಂದೆಂದಿಗೂ ಅರ್ಹರಲ್ಲ. ಸ್ತ್ರೀ ಪಾತ್ರಕ್ಕೆ ಅತ್ಯವಶ್ಯಕವಾದ

ವಿನಯ, ಮೃದುನುಡಿ, ಗಾಂಭೀರ್ಯಗಳೊಂದೂ ಇವರಭಿನಯಿಸಿದ "ಗಿರಿಜಾಬಾಯಿ" ಯ ಪಾತ್ರದಲ್ಲಿ ಕಾಣಬರಲಿಲ್ಲ ಕೃತ್ರಿಮವಲ್ಲದ ಸರಳಾಭಿನಯದ ಅಗ್ರಗಣ್ಯರೆಂದರೆ ಶ್ರೀ ವಾತಿ ಎಲ್ಲವ್ವ ಗುಳೇದಗುಡ್ಡ ಇವರು. ಪಾತ್ರಕ್ಕೆ ತಕ್ಕ ಮುದ್ರಾ ಪ್ರದರ್ಶನವಿಲ್ಲ ರಸವೈವಿಧ್ಯವನ್ನು ತೋರಿಸುವ ಕುಶಲತೆಯಿಲ್ಲ.

ಇನ್ನು ನಾಟಕ ಗ್ರಂಥದ ವಿಚಾರವಾಗಿ ಒಂದು ಮಾತು. ನಾಟಕವನ್ನು ಬರೆದವರು 'ವಿಶ್ವಗುಣಾದರ್ಶ ನಾಟಕ ಮಂಡಳಿ'ಯ ಚಾಲಕರಾದ ಶ್ರೀಯುತ ವಾಮನರಾಯರಂತೆ. ಭಕ್ತಿಯುತವಾದ ಈ ನಾಟಕದಲ್ಲಿ "ಜೋಡಿನೇಟು- ಒಜಾರಿ- ಪರಕೆ ಯೇಟು"- ಮುಂತಾದ ಅಸಭ್ಯ ಪದಗಳು ಹೇರಳವಾಗಿವೆ. ವ್ಯಾಕರಣ ಪರಿಶುದ್ಧತೆಯ ಲೋಪವು ಕಣ್ಣಿಗೆ ಕಟ್ಟಿದಂತೆ ಕಾಣಬರುತ್ತದೆ. "ಗಚ್ಚಲಕ್ಷ- ಚಮತ್ಕರ- ನಮ್ಮ ಸವಾರಿ- ಭಯಂಕರ" ಈ ಪದಗಳ ರಿಯಾದರ್ಥಗಳನ್ನು ತಿಳಿದ ಕೊಳ್ಳದೆ ಮನಸ್ಸು ಬಂದೆಡೆಗಳಲ್ಲಿ, ನಾಟಕದ ವಚನವು ಮರೆತುಹೋದೆಡೆಗಳಲ್ಲಿ ನಟರು ಪ್ರಯೋಗಿಸುವುದು ಖೇದಾಸ್ಪದವಾಗಿದೆ ನಾಟಕದಿಂದಂತ್ಯದವರೆಗೂ ಮಾಧವನಿಗೆ- ಸುಭದ್ರೆಯಮೇಲಿರತಕ್ಕದ್ದು ಕಾಮಭಾವನೆಯೊಂದ್ಯ ಸ್ಪಷ್ಟವಾಗುತ್ತದೆಯೇ ವಿನಾ ಪ್ರೇಮಭಾವನೆ ಯೆಂದೂ ಗೊತ್ತಾಗುವುದಿಲ್ಲ. ಪ್ರೇಮರಸ ಪುಷ್ಟಿಗೊಳಿಸುವದು ಸುಲಭ ಸಾಧ್ಯವಾಗಿದೆ. ಆದರೆ ಮಾಧವನಬಾಯಲ್ಲಿ ತಾಯಿಯ ಕೊಂದರೆಯಿಂದ ಸುಭದ್ರೆಯೊಡನೆ ವಿಹಾರಮಾಡಲು, ಅವಕಾಶಸಿಗದೆಂದು ಕಾಮುಕನ ಆಕ್ರಲಾಪವನ್ನು ಪುನಃ ಪುನಃ ಹಾಕಿರುವುದು ನಾಟಕದ ಆದರ್ಶವನ್ನೇ ವಿನಾಶಗೊಳಿಸುತ್ತದೆಂದು ನಾನು ಧೈರ್ಯವಾಗಿಹೇಳುತ್ತೇನೆ. ಇದು ಅತ್ಯಂತ ಅವಶ್ಯವಾಗಬೇಕಾದ್ದ...

ಈ ಕೆಲವು ದೋಷಗಳನ್ನೂ, ಮತ್ತೆ ಕೆಲವು ನಾ... ವ್ಯಾಖ್ಯಾನಗಾರರ ದೇಷನಾತ್ಮಕ ಟೀಕೆಗಳನ್ನೂ ಅರಿಸಿ ಬರ... ಕೊಂಡು ಅವುಗಳಲ್ಲಿ ಸೂಚಿತವಾಗುವ ದೋಷಗಳನ್ನು ನಿ... ಕೊಂಡರೆ ನಾಟಕವು ಸರ್ವ ಜನಾದರಣೀಯವಾಗುವುದ... ಅಖಿಲ ಕರ್ನಾಟಕವು ಹೆಮ್ಮೆಪಡುವಂತೆ ಆಗುವದರಲ್ಲಿ ... ಸಂದೇಹವೂ ಇಲ್ಲ

"ವಿಶ್ವಭ್ರ..."

ಜಾಹೀರ ನೋಟೀಸು.

ಕೆಳಗೆ ಸಹಿ ಮಾಡಿದ ನಾನು ಯಾವತ್ತುಬಗೂ ಜಾ... ನೋಟೀಸಿನಿಂದ ತಿಳಿಸುವದೇನಂದರೆ:—

ನನ್ನ ಖಾಸ ಮಗನಾದ ಅಮಂಗೌಡ ತಂದಿ ಬಸನಗೌ... ರಾಮನಗೌಡರ ಸಾಕೀನ ನಾಗೂರ (ತಾ|| ಹುನಗುಂದ) ಈ... ಅಜಮಾಸ ೨೧-೨೨ ವರ್ಷದವನಿದ್ದು, ಅವನು ನಮ್ಮ ಮನೆ... ಹೋಗಿ ೩ ವರ್ಷಗಳಾದವು. ಇತ್ತೀಚೆಗೆ ಅವನು ದುಷ್ಟ ... ಸಹವಾಸದಿಂದ ಉಡಾಳತನಕ್ಕೆ ಬಿದ್ದು, ತಲೆಕೆಟ್ಟು ಊ... ತಿರುಗಾಡುತ್ತಿರುವನು. ಅವನು ಹೋದ ಹೋದಲ್ಲಿ ನಮ್ಮ ಮ... ಹೆಸರು ಹೇಳಿ ಸಾಲಾವಗೈರೆ ಬೇಡಿದರೆ ಕೊಡಬಾರದು. ಒಂ... ವೇಳೆ ಯಾರಾದರೂ ಕೊಟ್ಟರೆ ಅದಕ್ಕೆ ನಾವು ಹೊಣೆಗಾರ... ಎಂದು ತಿಳಿಸಿದ ನೋಟೀಸು. ತಾ|| ೨೪-೧೧-೨೭ ಸಹಿ

ಬಸನಗೌಡಾ. ದ|| ...

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ ಸಿ. ನಂ ೨೭೩೭ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರೆಂಟೆಂಡಂಟ್ ಸೆಕ್ರೆಟರಿಏಟ್ ಹೈದರಾಬಾದ ಡೆಕ್ಕನ್ನ ರೂ.೧೦೦೦

(೨) ಎಲ್. ಬಿ ಸಿ ನಂ. ೧೯೬೨ ನಾರಾಯಣ ವಿಠ್ಠಲ ಲಿಖೀಣಕರ ಕೇರ್ ಆಫ್ ಡಿ. ಈ. ಪುರಾಣಿಕ ೧೦೭ ನಿಹಾಲಪುರ ಇಂದೂರ ೧೦೦೦

(೩) ಎಲ್ ಬಿ. ಸಿ. ನಂ. ೩೪೧ ರಾಮಚಂದ್ರ ಅನಂತ ಶಿರೋಳೆ: ಡಿವಿಜನಲ್ ಫಾರೆಸ್ಟ ಆಫೀಸರ ಧತ್ತೂರಾ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೧೭ ಕೇ. ಜೆ. ಫರ್ನಾಂಡೋ ವ್ಯಾಪಾರಸ್ಥ ಬ್ರಿಕ್‌ಸಾಯಿಡ ಸಿಲೋನ, ಕೋಲಂಬೋ. ರೂ. ೧೦೦೦

(೫) ಬಾಂಡ ನಂಬರು ೧೩೭೩೪ ಎಸ್. ಜಿ. ಚವರೆ. ಅಶಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ. ಜಿಲ್ಲಾ ವಿಜಾಪುರ. ರೂ ೧೦೦೦

ಬಿ. ಎಸ್. ಆರಾಧ್ಯ,
ಚೀಫ ಏಜಂಟ ಹುಬಳ್ಳಿ, (ಮುಂಬಯಿ ಇಲಾಖಾ.)

ಬೇಕಾಗಿದ್ದಾರೆ.

ಏಜಂಟರು, ಟ್ರಾವಲಿಂಗ ಏಜಂಟರು, ಹಾಗೂ ಚೀಫ ಏಜಂಟರೂ ಬೇಕಾಗಿದ್ದಾರೆ. ಇನ್ಸೂರನ್ಸ ಕೆಲಸದ ಅನುಭವವಿದ್ದವರೂ, ಹೊಸ ಹೊಸ ಕೆಲಸವನ್ನು ಹುಟ್ಟಿಸಿ ತೆಗೆದುಕೊಂಡು ಬರುವವರೂ ಬೇಕಾಗಿದ್ದಾರೆ. ನ... ದು ಹಣದ ಜಾಮೀನು ಕೊಡತಕ್ಕದ್ದು. ಯೋಗ್ಯತೆಯ ಪ್ರಕಾರ ಪಗಾರ. ಕೆಳಗಿನ ವಿಳಾಸಕ್ಕೆ ಬರೆಯಿರಿ.

WANTED.

Agents, Travelling Agents and Chie... Agents. Men with experience of Insuranc... work, capable of bringing business, re... quired. Cash security. Salary accordin... to qualifications.

Apply to:— *Mr. S. Rabboo...* B. A., F. S. S (Lond.) Asst. Manager (on deputation) *General Assurance Society Ltd.* 44, Linggi Chetty street, Madras

ನಮ್ಮ ಧಾರವಾಡದ ಪತ್ರ

ಶ್ರೀ ದೇವಿ ಎಲ್ಲಮ್ಮನ ಯಾತ್ರಿಕ ಸಂಘದವರು, ಎಲ್ಲಮ್ಮನ ಗುಡ್ಡಕ್ಕೆ ರೇಲ್ವೆ ಯಾಗಬೇಕೆಂಬ ಉದ್ದೇಶ ಪತ್ರಿಕೆಯಮೇಲೆ ರುಜುಗಳನ್ನು ತಕ್ಕೊಳ್ಳುತ್ತಿದ್ದಾರೆ

೩೨ ನೇ ತಾರೀಖಿನ ದಿವಸ ನ್ಯೂ ಇಂಗ್ಲಿಷ ಸ್ಕೂಲ ಕಟ್ಟಡದಲ್ಲಿ ಧನ್ವಂತರಿಯ ಮಹೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು ಡಾ|| ನಾಡಗೀರ ಯಶವಂತರಾಯರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು ಪಾಟೀಲ ವೈದ್ಯರು ಮೊದಲು ವನಸ್ಪತಿಗಳ ಉಪಯೋಗವನ್ನು ತಿಳಿಸಿ ಹೇಳಿದರು ಬಳಿಕ ಯಶವಂತರಾಯರು ಆಯುರ್ವೇದದ ಮಹತ್ವವನ್ನು ಹೊಗಳಿ ಕರ್ನಾಟಕದಲ್ಲಿ ಆಯುರ್ವೇದ ಶಾಲೆಯೊಂದನ್ನು ಸ್ಥಾಪಿಸುವದು ಎಷ್ಟು ಅವಶ್ಯವಾಗಿದೆ ಯೆಂಬದನ್ನು ತಿಳಿಸಿಕೊಟ್ಟರು ವನಸ್ಪತಿಗಳ ಪ್ರದರ್ಶನದಲ್ಲಿ ತರತರದ ನೂರಾರು ವನಸ್ಪತಿಗಳನ್ನು ವರೂ ಇಟ್ಟಿದ್ದರು

ಇಲ್ಲಿಯ ಪ್ರಸಿದ್ಧ ಹಕೀಮರಾದ ಖಾ. ಬೇಸಾಹೇಬರೂ ಮತ್ತು ಮರಾಠಿ ಸದ್ಗೃಹಸ್ಥರಾದ ಪಾಕಶೀಕರರೂ ಬೆಂಚ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ.

ಬೆಂಗಳೂರಿನಲ್ಲಿ ಸೇರುವ ೧೦ ನೇ ಅಖಿಲ ವೀರಶೈವ ಮಹಾಸಭೆಗೆ ಹುಬ್ಬಳ್ಳಿಯ ಕಂಬಳಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ

ನಮ್ಮ ಮುದ್ದೇಬಿಹಾಳದ ಪತ್ರ

ತಾ|| ೧೧ ನೇ ನವ್ಹಂಬರ ದಿವಸ ಈ ತಾಲೂಕಿನ ಎಲ್ಲ ಭಾಗದೊಳಗೆ ಉತ್ತಮ ಮಳೆಯಾಯಿತು. ಈ ಮಳೆಯಿಂದ ಮುಂಗಾರಿಯ ಬೆಳೆಗೆ ಅಲ್ಪ ಸ್ವಲ್ಪ ಹಾನಿ ತಟ್ಟಿದ್ದರೂ ಹಿಂಗಾರಿಗೆ ಬಹಳೇ ಆಧಾರವಾಯಿತು,

ಈಗ ೩೦ ವರ್ಷಗಳಿಂದ ತನ್ನ ಹೆಸರು ಊರುಗಳನ್ನು ತಿಳಿಸದೆ ತಂಗಡಗಿ ಗಡ್ಡೆಯೊಳಗೆ ಗುಡಿಸಲ ಹಾಕಿಕೊಂಡು ವಾಸವಾಗಿದ್ದ ಮತ್ತು ಮಹಾಪೂರದ ನದಿ ಬಂದಾಗಲೂ ಉತ್ತಮವಾಗಿ ಈಸಬಲ್ಲ ಆಯ್ಯನವರು ತಾ|| ೧೪—೧೧—೨೭ ನೇ ದಿವಸ ನದಿಯ ನೀರಿನೊಳಗೆ ಸೆಳವಿಗೆ ಸಿಕ್ಕು ಪ್ರಾಣಕ್ಕೆರವಾಗಿ 'ಕಟ್ಟಿ ತಂದಿದ ಮೇಲೆ ಸ್ನಾನಮಾತ್ರವಿರಲಿಲ್ಲ' ವೆಂಬ ಪುರಂದರದಾಸರ ವಚನವನ್ನು ಜನರ ಅನುಭವಕ್ಕೆ ತಂದು ಕೊಟ್ಟರು

ಇಲ್ಲಿಯ ಸಾರ್ವಜನಿಕ ವಾಚನಾಲಯದ ಬಗ್ಗೆ ಕಳೆದವಾರದಲ್ಲಿ 'ಕನ್ನಡಿಗ'ದಲ್ಲಿ ಟೀಕೆಮಾಡಿದುದರಿಂದ ಕಾರ್ಯದರ್ಶಿ ಮಹಾಶಯರು ಮುನಿದುಕೊಂಡು, ಯಾರಮೇಲೆಯೋ ಟೀಕೆಮಾಡಿದ ದೋಷ ಹೊರಿಸುತ್ತಲಿದ್ದಾರಂತೆ! ಇದು ಸಟಿಯಿರಲಿ ದಿಟವಿರಲಿ! ಕಾರ್ಯದರ್ಶಿಗಳು ಒಂದು ಮಾತನ್ನು ಮರೆಯಕೂಡದು. ಇದ್ದ ದೋಷಗಳು ದೂರಾಗಿ, ಅಲ್ಲಿ ಸರಿಯಾದ ವ್ಯವಸ್ಥೆಯಾಗಬೇಕೆಂಬ ಉದ್ದೇಶದಿಂದಲೇ ಯಾವಾಗಲೂ ವೃತ್ತಪತ್ರಿಕೆಗಳಲ್ಲಿ ಟೀಕೆ ಬರುತ್ತವೆ ಆದ್ದರಿಂದ ಅನ್ಯರ ಮೇಲೆ ಕೋಪಿಸುವದರ ಬದಲು, ವಾಚನಾಲಯದ ಏರ್ಪಾಟು ಸರಿಯಾಗಿರುವಂತೆ ಕಾರ್ಯದರ್ಶಿಗಳು ಮಾಡಲಿ! ಸಂಸ್ಥೆಗಳ ದೋಷವನ್ನು ಬೆನ್ನಹಿಂದೆ ಎಲ್ಲರೂ ಮಾಡುವರು ಆದರೆ ಇದು ಕ್ಷುಲ್ಲಕವಾದ ಮಾರ್ಗ. ಹೀಗೇ ಈ ದೋಷಗಳನ್ನು ತೋರಿಸಿಕೊಡುವದು ಉತ್ತಮ ಪಕ್ಷ. ಹೀಗೆ ತೋರಿಸಿಕೊಟ್ಟವರಿಗೆ "ನಿನಗೇಕೆ ಬೇಕಾಗಿತ್ತೆಂದು" ಕೇಳಕೂಡದು ಹಾಗೆಯೇ "ನನಗೇಕೆ ಬೇಕೆಂದು" ಸಾರ್ವಜನಿಕ ಕೆಲಸವಿದ್ದವರು ಅಂಜಿ ಹಿಂದೆಯೂ ನಿಲ್ಲಬಾರದು ಈಗಿನ ೨೦ ನೇ ಶತಮಾನದಲ್ಲಿ ಎಲ್ಲ ಕಡೆಗೂ ರೂಢವಾಗಿರುವ ಈ ತತ್ವವನ್ನು ನಾವು ಅನುಸರಿಸಿದ್ದರೆ, ಮುದ್ದೇಬಿಹಾಳವಾಗಲಿ ಕರ್ನಾಟಕವಾಗಲಿ, ಮುಂದೆ ಬರಲಾರವು

ನಮ್ಮ ಬಾದಾಮಿಯ ಪತ್ರ.

ಮೊ|| ಕಮಿಶನರ ಸಾ|| ದಕ್ಷಿಣ ಭಾಗ ಇವರು ತಾ|| ೨೧ ನೇ ದಿವಸ ಬಂದಿರುವರು. ಅವರ ಆಗಮನದಿಂದ ಊರಲ್ಲಿ ಒಳ್ಳೇ ಗಡಬಡಿ ಎದ್ದಿದೆ. ಮೋಟಾರಗಳ ಓಡಾಟಕ್ಕಂತೂ ಕೊರತಿಲ್ಲ ಇದಕ್ಕನುಗುಣವಾಗಿ ಚಹದ ಅಂಗಡಿಗಳಲ್ಲಿಯೂ, ಬೀಡೀ ಅಂಗಡಿಗಳಲ್ಲಿಯೂ, ಗಲಾಟೆ ನಡೆದಿದೆ! ಕಮೀಶನರರ ಆಗಮನದಿಂದ ಕೆರೆ ಶಾಲೆ ಸಗರಂಥ ಕಲ್ಯಾಣದ ಕೆಲಸಗಳು ರೈತರ ಹಿತಕ್ಕಾಗಿ ಆಗದಿದ್ದರೂ, ಬೀಡಿ, ಚಹದ ಅಂಗಡಿಗಳಿಗಾದರೂ ನಾಲ್ಕು "ಕಾಸು ದೊರೆ" ಯಲಿ! ಮೋಟಾರುಗಳು ಬಹಳವಾಗಿ ಓಡಾಡಿದರೂ, ಅವರಿಗೆಷ್ಟು ಲಾಭವೊ ತಿಳಿಯದು ಯಾಕೆಂದರೆ ಬಿಟ್ಟಿಯೊಂದಿದೆಯಲ್ಲ ಅವರಿಗೆ!

ಶಾಲಾ ಖಾತೆಯು ಪಗಾರದ ಬಗ್ಗೆ ಸುವ್ಯವಸ್ಥೆ ಮಾಡುವರೆಂದು ಹಿಂದೆ ಹೇಳಿತಷ್ಟೇ? ನವಂಬರವು ಮುಗಿಯುತ್ತ ಬಂದಿದ್ದರೂ ಸಪ್ಟಂಬರ ಪಗಾರವು ಬರಲಿಲ್ಲ ಇದು ಎಂಥ ವ್ಯವಸ್ಥೆಯೊ? ಎಲ್ಲ ಖಾತೆಗಳ ಪಗಾರವು ೧ ನೇ ತಾರೀಖು ಅಥವಾ ಹೆಚ್ಚಾದರೆ ಅಂದರೆ ೧೦ ತಾರೀಖಿನೊಳಗಾಗಿ ದೊರೆಯುವವು ಆದರೆ ಶಾಲಾಖಾತೆಯ ಪಗಾರವು ದೊರೆಯಬೇಕಾದರೆ ಎಷ್ಟು ತಿಂಗಳ ಹತ್ತನೇ ತಾರೀಖುಗಳಾದವೊ ನೋಡಿರಿ ಇದರ ಬಗ್ಗೆ ಮಹಾರಾಯರಾದರೂ ಲಕ್ಷ್ಯಕೊಟ್ಟು ನೋಡಿ ಪ್ರತಿ ತಿಂಗಳ ೧೦ ನೇ ತಾರೀಖಿನೊಳಗಾಗಿ ಪಗಾರವು ಸಿಗುವಂತೆ ಮಾಡಿದರೆ ಅವನ ಹೊಟ್ಟೆ ತಣ್ಣಗಾದೀತು! ಹಳ್ಳಿಯಲ್ಲಿದ್ದ ಜನರು ಮಾಸ್ತರರ ಪಗಾರವೆಂದರೆ ಚಪ್ಪಲಿಯನ್ನು ಹೊಲೆದು ನಗುವರು ಹೀಗೆ ನಗಿಸಿಕೊಳ್ಳುವ ಖಾತೆಯು ಇನ್ನಾವುದೂ ಇಲ್ಲ. ಹಳ್ಳಿಯಲ್ಲಿದ್ದ ಮಾಸ್ತರರ ಗತಿ ಏನೆಂಬ ವಿಚಾರವು ಯಾವ ಪುಣ್ಯಾತ್ಮನ ಮನಸ್ಸಿನಲ್ಲಿಯೂ ಹೊರಡುವದಿಲ್ಲವೇ !

"ರಾಯಚೂರ ವಿದ್ಯಾರ್ಥಿ ಸಂಘ"

ಶ್ರೀ ಸರಸ್ವತಿ ತಾಯಿಯ ಕರುಣದಿಂದ, ನಮ್ಮ ವಾಚನಾಲಯದ ಪ್ರಥಮ ಸಂವತ್ಸರ ಪೂರ್ಣವಾಗುವದರೊಳಗೆ, ಎಷ್ಟೋ ಮಹನೀಯರು ತಮ್ಮ ಪಾದಧೂಳಿಯಿಂದ ಈ ನಮ್ಮ ವಾಚನಾಲಯವನ್ನು ಪಾವನವಾಗಿ ಮಾಡಿದರು ಎಷ್ಟೋ ವಿದ್ವನ್ಮಣಿಗಳು ತಮ್ಮ ಪಾಂಡಿತ್ಯದಿಂದ, ವಿದ್ಯಾರ್ಥಿ ಸಂಘದ ಕರ್ಣಗಳನ್ನು ಆನಂದ ಪೂರ್ಣಗಳನ್ನಾಗಿ ಮಾಡಿದರು ಅದೆಲ್ಲ ವೃತ್ತಾಂತವನ್ನು ಇನ್ನು ಸ್ವಲ್ಪ ದಿನಗಳಲ್ಲಿಯೇ ಜಯಕರ್ನಾಟಕ ಅಥವಾ ಮತ್ತಾವುದಾದರೊಂದು ಪ್ರಸಿದ್ಧ ಮಾಸಪತ್ರಿಕೆಯಲ್ಲಿ ಕೊಡುವ ಯತ್ನವನ್ನು ಈ ಬಾಲಕರು ಮಾಡುತಿರುವೆವು ಪ್ರಸ್ತುತ ಇಲ್ಲಿಗೆ ಕರ್ನಾಟಕ ನಾಟಕಾಲಂಕಾರ ಅಭಿನಯ ಕೇಸರಿ ಶ್ರೀಯುತ ಸದಾಶಿವರಾವ ಗರೂಡರು ಬಂದಿದ್ದು, ತಮ್ಮ ನಾಟಕಗಳಿಂದ ನಾಗರೀಕರ ಕಣ್ಮನಗಳನ್ನು ತಣಿಸುತ್ತಿರುವರು. ಅವರಿಗೆ ನಮ್ಮ ಎಳೆಗುಂಪು ತಾ|| ಗುರುವಾರ ೧೭ ೧೧ ೨೭ ದಿವಸ ಮಾನಪತ್ರವನ್ನು ಕೊಟ್ಟಿತು. ಅದನ್ನು ಅವರು ಬಹು ಪ್ರೇಮದಿಂದ ಅಂಗೀಕರಿಸಿದ್ದಕ್ಕಾಗಿ ನಮ್ಮ ರಾಯಚೂರ ಈ ವಿದ್ಯಾರ್ಥಿ ಸಂಘಕ್ಕೆ ಅತ್ಯಂತ ಆನಂದವಾಗಿರುತದೆ. ಇದಲ್ಲದೆ ಶ್ರೀಯುತ ಗರೂಡರು ತಮ್ಮ ಐನೂರು ಪುಸ್ತಕಗಳಿರುವ ಭಾಂಡಾರದಿಂದ ಅಮೂಲ್ಯ ಪುಸ್ತಕಗಳನ್ನು ನಮ್ಮ ಪುಸ್ತಕ ಸಂಗ್ರಹವನ್ನು ವಿಶೇಷ ಅಭಿವೃದ್ಧಿಗೈಸಿ ಸಂಘವನ್ನು ಮುಂದಕ್ಕೆ ತರುವದಕ್ಕಾಗಿ ಕೊಡುವೆವೆಂದು ಮನಃಪೂರ್ವಕವಾಗಿ ವಚನದಾನ ಮಾಡಿರುವದಕ್ಕಾಗಿ ಅವರಿಗೆ ಚಿಕ್ಕವರಾದ ನಾವು ಯಾವರೀತಿಯಿಂದ ಆಭಾರ ಮನ್ನಿಸಬೇಕೋ ತಿಳಿಯದಾಗಿದೆ ಏನೇ ಆಗಲಿ ಶ್ರೀ ಗುರುಹಿರಿಯರ ಅಂತಃಕರಣದಿಂದ ವಿದ್ಯಾರ್ಥಿ ಸಂಘದ ವಾಚನಾಲಯವು ವಿದ್ವಾನ ಸಂಚಿಕೆಯು ಕೂಡ ಗೊತ್ತಾಗುವ ಯೋಗವು ಬಂದದ್ದರಿಂದ ಇತ್ತಕಡೆಗೆ ಇದೊಂದು ಶುಭ ಸೂಚನೆಯು.

ನಾವು ಮಾನಪತ್ರವನ್ನು ಅರ್ಪಿಸುವ ದಿವಸ ಹಮುದರ್ಶ ಶಾಲೆಯವರು ನಾಟಕವನ್ನು ತೆಗೆದುಕೊಂಡಿದ್ದು ನಡುವಿನ ವೇಳೆಯಲ್ಲಿ ನಮಗೆ ಅರ್ಧ ತಾಸು ಅವಧಿಯನ್ನು ಕೊಟ್ಟದ್ದಕ್ಕಾಗಿ ಶಾಂತಿಯ ಬೋಧಿಸಿದವರೆ ಹಾಗೂ ಮಾನಪತ್ರ ಬರೆಯುವ ಕಾಲಕ್ಕೆ ಸಹಾಯ ಮಾಡಿದ ಶ್ರೀಯುತ ನಿಲೋಗಲ್ಲ ಕೃಷ್ಣರಾವ ಮಾಸ್ತರರ ಆಭಾರವನ್ನು ಮನ್ನಿಸದೆ ಇರಲಾರೆವು

ಸೇಕ್ರೆಟರಿ

ವಿದ್ಯಾರ್ಥಿ ಸಂಘದ ವಾಚನಾಲಯ.

ಕರ್ನಾಟಕದ ಅಭಿಮಾನವಿರಲಿ.

ಕೆಳಕ್ಕೆ ಕಾಣಿಸಿದ ಸಾಮಾನುಗಳು ಬೇಕಾದಲ್ಲಿ ಕನ್ನಡಿಗರು ಮುಂಬೈ ಮದ್ರಾಸಗಳಿಗೆ ಹೋಗುವ ಕಾರಣವಿಲ್ಲ. ಕನ್ನಡಿಗರ ಸೇವೆಗಾಗಿ ಸಿದ್ಧರಾಗಿದ್ದ ನಮ್ಮನ್ನು ಕನ್ನಡಿಗರು ಅವಶ್ಯವಾಗಿ ಪ್ರೋತ್ಸಾಹಿಸಬೇಕು.



ಜತೆಗೆ ಬೆಳ್ಳಿಯಿಂದಲೂ, ಚೊಕ್ಕ ಬಂಗಾರದಿಂದಲೂ ತಯಾರಾಗಿರುವ ಬಗೆಬಗೆಯ ಮಾದರಿ ಒಡವೆಗಳೂ ಯಾವಾಗಲೂ ದೊರೆಯುತ್ತವೆ

ಬಹುಮಾನ ಕೊಡಲು ಬೇಕಾಗುವ ಬೆಳ್ಳಿಯ ಕಾಸ್ಕೆಟ್ಟು ಪೆಟ್ಟಿಗೆಗಳೂ, ಹೂದಾನಿಗಳೂ, ಟೋರ್ನ್ನಮೆಂಟು ಕಪ್ಪುಗಳೂ, ಬೆಳ್ಳಿಯ ಮತ್ತು ಬಂಗಾರದ ಮೆಡಲುಗಳೂ (ಪದಕಗಳು) ಬಿಕರಿಗೆ ಸಿದ್ಧವಾಗಿರುವವು. ಹಾಗೂ ಬೇಕುಬೇಕಾದ ಹೊಸ ಹೊಸ ನಮೂನೆಗಳಲ್ಲಿ ಆರ್ಡರಿಗೂ ಮಾಡಿಕೊಡುವೆವು. ಕ್ಯಾಟಲಾಗನ್ನು ತರಿಸಿಕೊಳ್ಳಿ.

ನಮ್ಮ ಕಂಪನಿಯು ಹಳೆಯದು ಮೈಸೂರ ಮಹಾರಾಜರೂ, ತ್ರಾವಣಕೋರದ ಮಹಾರಾಜರೂ ದೊಡ್ಡ ದೊಡ್ಡ ಸಂಸ್ಥೆಗಳೂ, ಕ್ಲಬ್ಬುಗಳೂ ನಮ್ಮನ್ನು ಪ್ರೋತ್ಸಾಹಿಸುತ್ತಿರುವರು.

ಬೆಲೆಯು ಸುಲಭ! [ಒಂದು ವೇಳೆ ಪರೀಕ್ಷಿಸಿ.] ಕೆಲಸ ಬಹು ನಾಣ್ಯ!!

ದಿ ಇಂಡಿಯನ್ ಜ್ಯುವೆಲರಿ ಮಾರ್ಟ ನಗರ್ತಪೇಟೆ, ಬೆಂಗಳೂರ ಸಿಟಿ.

ಬನಾರಸ್ ರೇಶ್ಮೀ ಶೀರೆಗಳು.

S.U.N.&CO.
BENARES CITY.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೀ ಮಾಲುಗಳನ್ನು ಕೋರುವವರಿಗೆ ವ್ಹಿ. ಪಿ. ಮೂಲಕ ಕಳಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕ ಉದ್ದ ಮೊಳ ೧೪ ಅಗಲಿ ಮೊಳ ೩, ಥಾನು ೧ಕ್ಕೆ ೧೫ ರಿಂದ ೫೦ ಜರಿ ಶೀರೆಗಳು ೧೬ ೧೮ ಮೊಳ ಉದ್ದ ೧ಕ್ಕೆ ರೂ. ೨೫ ರಿಂದ ೫೦ ರವರೆಗೆ. ಬುಟ್ಟೆದಾರ್ ಬನಾರಸ್ ಶೀರೆ ೧೬-೧೮ ...ದ ಮೊಳ ೭ ೧ಕ್ಕೆ ರೂ. ೨೫ ರಿಂದ ೩೦೦ ರ ವರೆಗೆ ಉಡುವ ...ಗುಟ ಉದ್ದ ೬-೮ ಮೊಳ ೧ಕ್ಕೆ ರೂ ೧೦ ರಿಂದ ೩೦ ರ ವರೆಗೆ ...ರೀದ್ದು ೬-೮ ಮೊಳ ಉದ್ದ ೧ಕ್ಕೆ ರೂ ೧೧ ರಿಂದ ೪೦ ರ ವರೆಗೆ. ...ಳಿ ರೇಶ್ಮೆ ಜರಿ ದುಪ್ಪಟಿ ೬ ಮೊಳ ಉದ ೧ಕ್ಕೆ ರೂ ೧೨ ರಿಂದ ೩೦ ...ವರೆಗೆ ಸಾದಾ ಬಂಗಾಳ ರೇಶ್ಮಿ ಶಾಲು ೬ ಮೊಳ ಉದ್ದ ೩ ಮೊಳ ...ಗಲು ೧ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಫಟಿಕದ ೧೦೮ ರ ಸರ ...ಕ್ಕೆ ರೂ. ೧ ರಿಂದ ೧೨ ರ ವರೆಗೆ ಸುದರ್ಶನ ೧ಕ್ಕೆ ಆಣೆ ೪ ರಿಂದ ...ಪಾಯಿ 1½ ರವರೆಗೆ ಜಗನ್ನಾಥ ಜಾಗಂಟೆ ೧ಕ್ಕೆ ರೂ. 2½ ರಿಂದ 5 ರ ವರೆಗೆ ಮತ್ತು ಬೇರೆ ಬೇರೆ ಸಮಾನುಗಳ ಕೆಟಲಾಗ ಇನಾಂ

ವಿಳಾಸ:-ಶಿರೋಮಣಿ ನಾರಾಯಣಾಚಾರ್ಯ

ಕಂಪನಿ ಚೌಕಂಬಾ ಕಾಶಿ ಬನಾರಸ್

For Insurance.

OF

Ladies' and Gents' Lives.

in the

General and Bharat.

Insurance Societies, Ltd.

and

Wholesale Dealers in:—

(೧) ಎಲ್ಲ ಮೋಕರದ ಮೋಟಾರ ಗಾಡಿಗಳು ಹೊಸ ಮತ್ತು ಹಳೆಯವು ಕಂತಿನ ಪ್ರಕಾರ ಬೆಲೆ ಮುಟಿಸಬಹುದು.
(೨) ಆಟದ ಸಾಮಾನುಗಳು.
(೩) ಮೋಲ್ತರದ ಚಹ ಮತ್ತು ಕಾಫಿ
(೪) ಸಿಗಾರುಗಳು ಮತ್ತು ಸಿಗರೇಟುಗಳು.
(೫) ಶಸ್ತ್ರಕಿಯೆಯ ಸಾಮಾನುಗಳು ಮತ್ತು ಔಷಧಗಳು.
(೬) 'ಹಿಜ ಮಾಸ್ಟರ್ಸ ವ್ಹಾಯಿಸ'ದ ಫೋನೋಗಳು ಮತ್ತು ರಿಕಾರ್ಡಗಳ, ಹಳೆ ಹೊಸ ಕನ್ನಡ, ಮರಾಠಿ, ಹಿಂದುಸ್ಥಾನಿ ಹಾಡ ಗಳನ್ನು ನಮಲ್ಲಿ ಕೇಳಬಹುದು.
(೭) ಸಾಯಿಕಲ್ಲುಗಳು, ಸ್ಟೌವ್ಹ ಗಳು, ಗ್ಯಾಸ್ ಲಾಯಿಟಗಳು, ಮತ್ತು ಸೋಡಾಯಂತ್ರದ ಸಾಮಾನುಗಳು.
(೮) ಹೊಸ ಹೊಸ ಬುಕ್ಕುಗಳು ಸಿಗುತ್ತವೆ.

Apply to:—

B. S. Tantry. B. A.

BAGALKOT.

ಬೈಂಡಿಂಗದ

ಹೊಸ ಉತ್ತಮ ವ್ಯವಸ್ಥೆ!

ನಾವು ಮಂಗಳೂರಿನಿಂದ ನುರಿತಂತಹ ಓರ್ವ ಬಾಯಿಂಡರ ನನ್ನು ಕರೆಸಿದ್ದೇವೆ. ಮುಂಬೈ, ಮದ್ರಾಸ, ಮಂಗಳೂರ, ಬೆಂಗಳೂರಗಳಲ್ಲಾಗುವ ಎಲ್ಲ ನಮೂನೆಯ ಫುಲ್ ಲೆದರ, ಹಾಫ್ ಲೆದರ ಫುಲ್ ಕೆಲಿಕೋ, ಹಾಫ್ ಕೆಲಿಕೋ, ಸಿಫ್ಟ ಕವರ ಮುಂತಾದ ಇನ್ನೂ ಅನೇಕ ನಮೂನೆಯ ಬೈಂಡಿಂಗ ಕೆಲಸವು ನಮ್ಮಲ್ಲಿ ಒಳ್ಳೇ ಅಚ್ಚುಕಟ್ಟಾಗಿ ಮಾಡಲ್ಪಡುತ್ತದೆ. ಲೆದರ ಬೈಂಡಿನ ಮೇಲೆ ಎಲ್ಲ ಬಗೆಯ ಗೋಲ್ಡಗಿಲ್ಟ ಕೆಲಸವೂ ಮಾಡಲ್ಪಡುತ್ತದೆ.

ಪ್ರಯಾಣಿಕರಿಗೆ ಬೇಕಾಗುವ ಎಲ್ಲ ನಮೂನೆಯ ಟ್ರಾವ್ಹೆಲಿಂಗ ಬ್ಯಾಗುಗಳೂ (ಕೈಪೆಟ್ಟಿಗೆ) ಕಾಗದ ಪತ್ರಗಳನ್ನು ಇಡುವ ಮತ್ತು ದುಡ್ಡು ಹಾಕುವಂಥ ಪಾಕೀಟುಗಳೂ, ಲೆದರಿನಿಂದಲೂ, ಒಟ್ಟೆಯಿಂದಲೂ, ಕೃಷ್ಣಾಂಜನದಿಂದಲೂ ನಮೂನೆವಾರು ತಯಾರ ಮಾಡಲ್ಪಡುವದು.

ನಾದುರಸ್ತಿಯಾದ ಹಾರ್ಮೋನಿಯಮ್ ಪೆಟ್ಟಿಗೆಯನ್ನು ದುರಸ್ತಿಮಾಡಿ ಒಳಗಿನ ಮತ್ತು ಹೊರಗಿನ ಗಾಳಿಯ ತಿದಿಯನು ಹೊಸದಾಗಿ ಕಪನಿಯ ನಮೂನೆಯಲ್ಲಿ ಹೆಚ್ಚು ಸಮಯ ಬಾಳಿಕೆ ಬರುವಂತೆ ತಯಾರುಮಾಡಿ ಚಲೋ ರೀತಿಯಿಂದ ದುರಸ್ತಿ ಮಾಡಲ್ಪಡುವದು.

ಇನ್ನು, ಕೋರ್ಟ ಮತ್ತು ಕಚೇರಿಗಳಿಗೆ ಬೇಕಾಗುವ ಎಲ್ಲ ನಮೂನೆಯ ಪೋರ್ಟಫೊಲಿಯೋಗಳನ್ನೂ, ಫೈಲುಗಳನೂ ತಯಾರುಮಾಡಿ ಕೊಡಲ್ಪಡುವದು.

ಇನ್ನು ಮೇಲೆ ಇತ್ತಕಡೆಯ ಜನರು ಮುಂಬೈ, ಬೆಂಗಳೂರ, ಅಥವಾ ಮಂಗಳೂರಿಗೆ ಹೋಗುವ ಕಾರಣವಿಲ್ಲ! ಒಮ್ಮೆ ಅನುಭವ ತೆಗೆದುಕೊಂಡು ನೋಡಬೇಕು.

ವ್ಯವಸ್ಥಾಪಕ

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ.

'ಕನ್ನಡಿಗ'ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ. ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೯೦೦೦ ಯಾರ್ಡ ಕೈನೂಲು
ಪರಸ್ಥಳದವರಿಗೆ	ಮನಿಯಾರ್ಡರದಿಂದ ೧-೧೩-೦ ವಿ. ಪಿ. ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ ಯಾರ್ಡ ಕೈನೂಲು
ವಾಚನಾಲಯ ಸಭೆ, ಸಮ್ಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ–	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦ ,, ವಿ. ಪಿ ಯಿಂದ ೩-೧-೦
ಸರಕಾರ, ಮುನಸೀಪಾಲಿಟಿ, ಲೋಕಲ್ ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ. ಯಿಂದ ೫-೧-೦

ಬಿಡಿ ಸಂಚಿಕೆಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ. —ವ್ಯವಸ್ಥಾಪಕ

GRAMAPHONE COMPLETE Rs. 10.

ಗ್ರಾಮೊಫೋನ್.

ಎಂಬ ಹಾಡುಗಾರಿಕೆಯ ಯಂತ್ರವು.

ಮೊದಲಿನ ಕ್ರಯ ರೂ. ೩೫-೦-೦. **ಈಗಿನ ಕ್ರಯ ರೂ. ೧೦-೦-೦**

ಈ ಯಂತ್ರವು ವಿಲಾಯತಿಯಲ್ಲಿ ತಯಾರಾದದ್ದು. ಇಂಗ್ಲೀಷು, ಕನ್ನಡ, ಹಿಂದುಸ್ಥಾನಿ, ಇಂಗ್ಲೀಷು ವಾದ್ಯ ಮುಂತಾದ ಪದಗಳನ್ನು ಹೇಳುವದು. ಲಗ್ನದ ಮನೆ, ನಾಟಕಶಾಲೆ ಮುಂತಾದ ಜನಕೂಡುವ ಸ್ಥಳದಲ್ಲಿ ಉಪಯೋಗಿಸಲು ಬಹು ಚನ್ನಾಗಿದೆ ನೋಟಕ್ಕೆ ಲಕ್ಷಣವಾಗಿರುವಂತೆಯೂ, ಕ್ರಯದಲ್ಲಿ ಸುಲಭವಾಗಿಯೂ ಇರುವಂತೆ ಬಹು ಬಲಿಷ್ಟವಾದ ಸಾಮಾನುಗಳಿಂದ ಈ ಯಂತ್ರವನ್ನು ತಯಾರಿಸಿದೆ ಸುಂದರವಾದ ಹಾರನ್ ಎಂಬ ಪದ ಹೇಳುವ ಕೊಳವೆ ಇದೆ. ನಿಧಾನವಾಗಿಯೂ ಜಾಗ್ರತೆಯಾಗಿಯೂ, ಪದ ಕೇಳಿಸಲು ಕೀಲು ಇದೆ. ಈ ಯಂತ್ರವನ್ನು ಎಲ್ಲಿ ಬೇಕಾದರೂ ಕೈಯಲ್ಲಿ ಹಿಡಿದುಕೊಂಡು ಹೋಗಲು ಅನುಕೂಲವಾದಂಥ ಸುಂದರವಾದ ಕೈ ಪೆಟ್ಟಿಗೆಯಲ್ಲಿಟ್ಟಿವೆ

ಡಬಲ್ ಸೈಡ್ ಎರಡು ಕಡೆಯೂ ಪದವಿರುವ

೧ ರೆಕಾರ್ಡ ಸಹಿತ ಗ್ರಾಮೋಫೋನ್ ಯಂತ್ರದ ಪೆಟ್ಟಿಗೆ ಕ್ರಯ ರೂ. ೧೦-೦-೦

ಹೆಚ್ಚಿಗೆ ರೆಕಾರ್ಡ ಬೇಕಾದರೆ, ಪ್ರತ್ಯೇಕ ರೆಕಾರ್ಡಗೆ ರೂ. ೧-೪-೦.

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಮತ್ತು ಟಪಾಲು ಖರ್ಚ ಮುಫತ್ತಾಗಿ ಕಳಿಸುವೆವು

ವಿಳಾಸ:— ಬ್ರಿಟಿಷ್ ಟ್ರೆಡಿಂಗ್ ಕಂಪನಿ,

ಪೋಸ್ಟ ಬಾಕ್ಸ ನಂ ೧೭೩, ಮದರಾಸು

ಸ್ಟಾಂಡರ್ಡ್ ಕಾಫಿಪುಡಿ.

ಅಖಿಲಭಾರತ ಸಕಲ ಕಲಾವಸ್ತು ಪ್ರದರ್ಶನದಲ್ಲಿ ರಜತ ಪದಕವನ್ನೂ, ಸರ್ಟಿಫಿಕೇಟುಗಳನ್ನು ಬಹುಮಾನವಾಗಿ ಪಡೆದ **ಸ್ಟ್ಯಾಂಡರ್ಡ ಕಾಫಿಪುಡಿಯು** ಅತ್ಯಂತ ಮನೋಹರವೂ, ರುಚಿಕರವೂ ಆದದ್ದು ತರಿಸಿ ಪರೀಕ್ಷಿಸಿ ನೋಡಿ

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

ಪೌಂಡ ೧ಕ್ಕೆ ೧-೪-೦ ಮತ್ತು ೧-೨-೦

ದಿ ಸ್ಟಾಂಡರ್ಡ್ ಕಾಫಿ ಕಂಪನಿ

ಚಿಕ್ಕಪೇಟೆ ಬೆಂಗಳೂರು ಸಿಟಿ.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವರಿಗೂ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಪ್ಪಾ ಚಾಲವಾದಿ.

ಸ್ಟೇಶನರ್ಸ ಬಾಗಲಕೋಟಿ.

ರಾಜವೈದ್ಯ ನಾರಾಯಣಜಿ ಕೇಶವಜಿ.

೫೭. ಚೀನಾಬಜಾರ್, ಮದ್ರಾಸು

ಗುಣ ಬರದಿದ್ದರೆ ಹಣ ಮರತ!

ಕ್ಷಶುದ್ಧಿ ವತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ

ಈ ' ಬಲವಂತ-ಗುಟಿಕ ' ಯು ಉತ್ತಮ ವನಸ್ಪತಿ ಚೂರ್ಣ ಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ೀಶಪದ್ಧತಿಯಿಂದ ತಯಾರಿಸಲ್ಪಟ್ಟದೆ. ಇದರ ಸೇವನೆಯಿಂದ ವಾತ, ಪಿತ್ಥ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಅದಲ್ಲದೆ ಅಶಕ್ತಿ, ಸಂಗ್ರಹಿಣಿ, ಜೀರ್ಣಜ್ವರ, ಅಗ್ನಿ ಮಾಂದ ಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶ ವಾಗುವವು. ಹಾಗೂ ಮೂತ್ರ ಬಿಸುವ ಮುಂಚೆ ಅಥವಾ ಂತರ ದಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗು ವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ಸವುಂ ಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕೆಡ್ಕೊಂಡು ಖಾತ್ರಿ ಮಾಡಿಕೊಳ್ಳಬಹುದು)ಇದರಿಂದ ಮೈಯಾರಿ ವಗೈರೆಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌ ಷ್ಟಿಕತ್ವವು ಪ್ರಾಪ್ತವಾಗುತ್ತದೆ ಇದರ ಖರೆ ಯೋಗ್ಯತೆಯು ಸೇ ವಿಸಿ ನೋಡಿದರೆ ತಾನೇತಿಳಿಯುವದು.

೧ ಡಬ್ಬಿಗೆ ಕಿಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗೆ ೨-೪-೦, [illegible] ೭-೦-೦, ಇದಲ್ಲದೆ ೧ ಡಬ್ಬಿ ಕಮಿಶನ ಸಿಗುವದು. ಪೂರ್ಣ ಗುಣ ಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ:— ಎಸ್ ಬಿ ಕದಮ್ ಮತ್ತು ಸನ್ಸ್.
ಮು. ಪೋಷ್ಟ ನಿಪ್ಪಾಣಿ (ಜಿ. ಬೆಳಗಾವ.)

ಕರ್ಣಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ಪಬ್ಲಿಕ್ ಸ್ಕೂಲ ಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡುವದಕ್ಕೆ ಶಕ್ಯವಾದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಜರದ ಕೆಲಸ ಮುಂ ತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನು ಕೂಲವಾದ ವಸತಿಗೃಹವೂ ಇರುವದು ಯೋಗ್ಯರಾದ ಬಡವಿದ್ಯಾ ರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾ ಗುವದು.

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಹೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ॥ ಲಕ್ಷ್ಮೀಬಾಯಿ ಕೋಣಕರಿಣಿ,
ವ್ಯವಸ್ಥಾಪಕರು, ಕ. ಮ. ವಿದ್ಯಾಲಯ, ಧಾರವಾಡ.

ಟೇಬಲ್ ಟೈಂಪೀಸ್ ಇನಾಂ.

ಈ ನಕ್ಷೆಯಲ್ಲಿ ಕಂಡ ಫೌಂಟೇನ್ ಪೇನಾವು ಇಂಗ್ಲಂಡಿನಲ್ಲಿ



ತಯಾರಾದದ್ದು ಇದಕ್ಕೆ ೧೪ ಕೆರೆಟಿನ ಬಂಗಾರದಂಥ ನಿಬ್ಬು ಹಾಕಿದೆ. ಈ ಪೇನಾವಿನಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚಂದಾಗಿ ಕಾಣುವವು. ಈ ತಿಂಗಳೊಳಗಾಗಿ ಈ ಪೇನಾವನ್ನು ಖರಿದಿಸುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೇಬಲ್ ಟೈಂಪೀಸ್ ಸಹಿತ ಪೇನಾ ೧ ಕ್ಕೆ ೨-೮-೦

ವಿಳಾಸ:- ಪೀಟರ್ ವಾಚ್ ಕಂಪನಿ.
ಪೋ॥ ಬಾಕ್ಸ ನಂ. ೨೭, ಮದರಾಸು.

ಬಾಗಲಕೋಟೆ, ವಿಜಾಪುರ ಮೋಟಾರ ಸರ್ವೀಸ ಪ್ರಾರಂಭವಾಗಿದೆ!

ಬೆಳಗಾವಿಗೆ ಬಾಗಲಕೋಟೆಯಿಂದ ೩॥ ರೂ. ಹಾಸಲು ಮುಕ್ರಾಂ ಮಾಡಲಾಗಿದೆ.



ವಿಜಾಪೂರ ಜಿಲ್ಹೆಯಲ್ಲಿಯು ಮತ್ತು ಸುತ್ತು ಮುತ್ತಲಿನ ಖಾಸಗಿ ವ ಸರ್ವೀಸಿನ ಮೋಟಾರ ಮಾಲೀಕರ ಸೋಯಿ ದೂರವಾಗಬೇಕೆಂದು:
ಆರ್. ಜಿ. ಚವ್ಹಾಣ ಎಂಡ ಸನ್ಸ, ಬೆಳಗಾವ: ಇವರು ತಮ್ಮ
ಜನರಲ ಮೋಟಾರ ಅಕ್ಸೆಸರಿ ಸ್ಟೋಅರ್ಸದ ಶಾಖೆಯನ್ನು
ತಾ॥ ೧೦ ಸಪ್ಟೆಂಬರ ೧೯೨೭ನೇ ಇಸ್ವಿಯಿಂದ ಬಾಗಲಕೋಟೆಯಲ್ಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಪೋರ್ಡ, ಶೆವ್ರಲೇಟ, ಓವ್ಹರಲೆಂಡ ಮುಂತಾದ ಮೋಟಾರುಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯೂಬ್ಸ, ಗ್ರೀಸ, ಮೋಬಿಲ ಆಯಿಲ್, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯ ದರದಿಂದ ಸಿಗುವವು. ಒಂದು ವೇಳೆ ವ್ಯಾಪಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರದಿಂದ,

ಚಾಲಕ:— ವಾಯ್. ಜಿ. ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಹಲ್ಕನಾಯಿಝಿಂಗ ಮಾಡಿ ಕೊಡುವೆವು

☞ ಬಾಗಲಕೋಟೆ-ಬೆಳಗಾವಿ, ಬಾಗಲಕೋಟೆ-ಇಲಕಲ್ಲ ಸರ್ವಿಸ ಯಥಾಪ್ರಕಾರ ನಡೆದಿದೆ

ಕಿರ್ಲೋಸ್ಕರ ನೇಗಿಲು ನಂ ೯



ಉಪಯೋಗ:— ನಮ್ಮ ಯಾವತ್ತೂ ನೇಗಿಲುಗಳಲ್ಲಿ ಈ ನೇಗಿಲು ಮಿಗಿಲಾದದ್ದು. ಎರಿಯ ಭೂಮಿ, ಮಡ ಭೂಮಿಗಳನ್ನು ಸಾಗುವಳಿ ಮಾಡಲಿಕ್ಕೆ ಕಾಲುವೆಗಳಿಂದ ತೋಂಟ್ಯಾಪ ಭೂಮಿಗೂ ಇದರ ಉಪಯೋಗ ಬಹಳ. ಇದು ನಮ್ಮ ನೇಗಿಲು ನಂ ೧೦೦ ನೆಯದರಂತೆ ಮಿಕ್ಕ ಉಪಯೋಗಕ್ಕೂ ಬರುವದು. **ರಚನೆ:**— ಇದರ ಕುಳಗಳು ಹಾಗೂ ಸವೆಯುವ ಭಾಗಗಳು ಸವೆಯದಂತೆ 'ಚಿಲಿಂಗ ಪ್ರೊಸೆಸ್ಸಿನಿಂದ' ಗಟ್ಟಿಮುಟ್ಟು ಮಾಡಲ್ಪಟ್ಟಿರುತ್ತವೆ. ಮೋಳೆಗಳು ಕವಣೆ ಇರುತ್ತವೆ. ಇದಕ್ಕೆ ತಿರುಗುವ ಕುಳವಿರುತ್ತದೆ. **ಎಳೆಯುವ ಶಕ್ತಿ:**— ೬ ರಿಂದ ೮ ಎತ್ತುಗಳು ಬೇಕು. **ಸಾಲಿನ ಆಳಗಲ:**— ೮ ರಿಂದ ೧೦ ಇಂಚು ಆಳ; ೧೨ ರಿಂದ ೧೪ ಇಂಚು ಅಗಲ. **ತೂಕ:**— ಸರಾಸರಿ ೩೦೦ ಪೌಂಡು ವಿಸ್ತಾರ ಸಂಗತಿಯ ಬಗ್ಗೆ ಇವರ ಹಸ್ತಪತ್ರಿಕೆಯನ್ನು ನೋಡಿರಿ. ಬೆಲೆ ೩೩ ರೂಪಾಯಿ

ಕಿರ್ಲೋಸ್ಕರ ಬಂಧು: ಲಿಮಿಟೆಡ್ ಕಿರ್ಲೋಸ್ಕರವಾಡಿ. ಜಿ ಸಾತಾರಾ.

Little's Oriental Balm.

ನೋವು ಬಾಧೆಗಳ ನಿವಾರಣಾರ್ಥ!

ನಿಮ್ಮ ಬಾಧೆಗಳ ನಿವಾರಣಾರ್ಥವಾಗಿ ಅತ್ಯುತ್ತಮವಾದ ಹಾಗೂ ಒಳ್ಳೇ ಶುದ್ಧವಾದ ರಾಮಬಾಣ ಉಪಾಯವು ಬೇಕಾದ್ದರೆ, ಈ ಹೆಸರನ್ನು ಲಕ್ಷ್ಯದಲ್ಲಿ ಇಡಿರಿ

ಕೆಳಗಿನ ವ್ಯಾಧಿಗಳ ನಿವಾರಣಕ್ಕಾಗಿ ಹಿಂದುಸ್ಥಾನದ ದಿವ್ಯೌಷಧಿ.

ತಲೆಶೂಲಿ, ಸಂಧಿವಾತ, ಎಲ್ಲತರದ ಕಸ ನರ ಶೋಷಕು, ಚರಿವಾತ, ಟೊಂಕನೋವು, ಅರ್ಧಾಂಗವಾಯು ಉಳುಕು (ವಗೈರೆ)

೪೦ ವರ್ಷಗಳಿಂದ ಈ ಔಷಧವು ಜಗತ್ಪ್ರಸಿದ್ಧವಾಗಿದೆ.

ಸ್ವಲ್ಪದರಿಂದಲೇ ಗುಣ ಬರುವದು—ಒಂದೇ ಕ್ಷಣದಿಂದ ಅದ್ಭುತ ಗುಣವು!

ಉರಿಯುವದಿಲ್ಲ ಅಥವಾ ಗುಳ್ಳೆ ಏಳುವದಿಲ್ಲ.

ತಾವು ಸುಖವಾಗಿ ಉಪಶಮನವಾಗುವದು.

ಮಾಂಸ, ನೆಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲ.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ

Buy a bottle

TO-DAY!

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ನಂ ಬಿ ೧೯೪೭ ವಾ. ಚಂದಾ ೧-೧೩-೦ ಮಾತ್ರ

ಕನ್ನಡಿಗ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् । — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ } ಬಾಗಲಕೋಟೆ ರವಿವಾರ ತಿಥಿ ಮಾರ್ಗಶಿರ ಶುದ್ಧ ೧೧ ಶಕೆ ೧೮೪೯ ತಾ|| ೪ ೧೨ ೧೯೨೭. Date 4—12 1927. { ಸಂಖ್ಯೆ ೩೩

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯ್ವಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ ಜಾರೆ ಬೇರೆ, ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವದು ಅವುಗಳೊಳಗಿನ ಕೆಟ್ಟ-ಜಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು. ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯದಿಲ್ಲ. ಸುರಿತರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸ್ಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದ ಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.

೪೯೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ

WANTED.

Wanted Candidates for Telegraph and [Stat]ion Master's Classes. Full particulars and [Rail]way Fare Certificate on 2 annas stamp

Apply to.-

Imperial Telegraph College, Delhi.

ಮಯೂರ ಶಿಖಾ

ದುರ್ಲಭವಾದ ವನಸ್ಪತಿಯು. ೫೦ ತೋಲೆಗೆ ೧ ರು ಸ್ವರ್ಗ ಗೂ, ವ್ಯಾಪಾರಸ್ಥರಿಗೂ, ಅನೇಕ ರೀತಿಯ ಔಷಧದ ವನಸ್ಪತಿಗಳು ದೊರಕುವವು

ವೈದ್ಯ:—ವಾದಿರಾಜ ಜಹಗೀರದಾರ

ಮು. ಇಲಕಲ್ಲ (ವಿಜಾಪೂರ)







[redacted]

FLASH NO.3









ಕಿರ್ಲೋಸ್ಕರ ನೇಗಿಲು ನಂ ೯



ಉಪಯೋಗ:— ನಮ್ಮ ಯಾವತ್ತು ನೇಗಿಲುಗಳಲ್ಲಿ ಈ ನೇಗಿಲು ಮಿಗಿಲಾದದ್ದು. ಎರಿಯ ಭೂಮಿ, ಮಡ ಭೂಮಿಗಳನ್ನು ಸಾಗುವಳಿ ಮಾಡಲಿಕ್ಕೆ ಕಾಲುವೆಗಳಿಂದ ತೋಯ್ಯಪ ಭೂಮಿಗೂ ಇದರ ಉಪಯೋಗ ಬಹಳ. ಇದು ನಮ್ಮ ನೇಗಿಲು ನಂ ೧೦೦ ನೆಯದಂತೆ ಎಲ್ಲಕ್ಕೂ ಉಪಯೋಗಕ್ಕೆ ಬರುವದು. ರಚನೆ:— ಇದು ಕುಳಗಳು ಹಾಗೂ ಸವೆಯುವ ಭಾಗಗಳು ಸವೆಯದಂತೆ 'ಚಿಲಿಂಗ ಪ್ರೊಸೆಸ್ಸಿನಿಂದ' ಗಟ್ಟಿಮುಟ್ಟು ಮಾಡಲ್ಪಟ್ಟಿರುತ್ತವೆ. ಮೇಳಿಗಳು ಕವಣಿ ಇರುತ್ತವೆ. ಇದಕ್ಕೆ ತಿರುಗುವ ಕುಳವಿರುತ್ತದೆ. **ಎಳೆಯುವ ಶಕ್ತಿ:**— ೬ ರಿಂದ ೮ ಎತ್ತುಗಳು ಬೇಕು. **ಸಾಲಿನ ಆಳಗಲ:**— ೮ ರಿಂದ ೧೦ ಇಂಚು ಆಳ; ೧೩ ರಿಂದ ೧೪ ಇಂಚು ಅಗಲ. **ತೂಕ:**—ಸುಮಾರು ೨೦೦ ಪೌಂಡು ಸವಿಸ್ತರ ಸಂಗತಿಯ ಬಗ್ಗೆ ಇದರ ಹಸ್ತಪತ್ರಿಕೆಯನ್ನು ನೋಡಿರಿ. ಬೆಲೆ ೩೩ ರೂಪಾಯಿ

ಕಿರ್ಲೋಸ್ಕರ ಬಂಧು. ಲಿಮಿಟೆಡ್ ಕಿರ್ಲೋಸ್ಕರವಾಡಿ. ಜಿ ಸಾತಾರಾ.

Little's Oriental Balm.

ನೋವು ಬಾಧೆಗಳ ನಿವಾರಣಾರ್ಥ!

ನಿಮ್ಮ ಬಾಧೆಗಳ ನಿವಾರಣಾರ್ಥವಾಗಿ ಅತ್ಯುತ್ತಮವಾದ ಹಾಗೂ ಒಳ್ಳೇ ಶುದ್ಧವಾದ ರಾಮಬಾಣ ಉಪಾಯವು ಬೇಕಾದ್ದರೆ, ಈ ಹೆಸರನ್ನು ಲಕ್ಷ್ಯದಲ್ಲಿ ಇಡಿರಿ

ಕೆಳಗಿನ ವ್ಯಾಧಿಗಳ ನಿವಾರಣಕ್ಕಾಗಿ ಹಿಂದುಸ್ಥಾನದ ದಿವ್ಯೌಷಧಿ

ತಲೆಶೂಲಿ, ಸಂಧಿವಾತ, ಎಲ್ಲತರದ ಕಸ ನರ ಸೆಳಕು, ಚರಿವಾತ, ಬೆನ್ನುನೋವು, ಅರ್ಧಾಂಗವಾಯು ಉಳುಕು (ಮಳದಡ್ಡು)

೪೦ ವರ್ಷಗಳಿಂದ ಈ ಔಷಧವು ಜಗತ್ಪ್ರಸಿದ್ಧವಾಗಿದೆ.

ಸ್ವಲ್ಪದರಿಂದಲೇ ಗುಣ ಬರುವದು--ಒಂದೇ ಕ್ಷಣದಿಂದ ಅದ್ಭುತ ಗುಣವು!

ಉರಿಯುವದಿಲ್ಲ ಅಥವಾ ಗುಳ್ಳಿ ಏಳುವದಿಲ್ಲ.

ತಾಪವು ಸುಖವಾಗಿ ಉಪಶಮನವಾಗುವದು.

ಮೆತ್ತು, ನೆಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲ.

ಎಲ್ಲ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ.

Buy a bottle

TO-DAY!

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ ೧೮೪೭ ವಾ. ಚಂದಾ ೧—೧೩—೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಂಗ್ರಹಿಸಲ್ಪಡುತ್ತಿದೆ)

यद्यत् परवशं दुःखं । यद्यदात्मवशं सुखम् । — मनु

ಸಂಪಾದಕರು— ಮಂಗಳವೇಢೇ ರಾಜೇಶ್ವರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟಿ ರವಿವಾರ ಮಿತಿ ಮಾರ್ಗಶಿರ ಶುದ್ಧ ೧೧ ಶಕೆ ೧೮೪೯ ತಾ. ೪ ೧೨ ೧೯೨೭.
Date 4—12 1927. | ಸಂಚಿಕೆ ೩೩

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ವಿರ್ಚಾಡು ಮಾಡಿದೆ. ಜೇರೆ ಜೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಚ್ಚಿಸುವುದು ಮತ್ತು ಜೋಡಿಸುವದು, ಆ ಯಂತ್ರಗಳೊಳಗಿನ ಕಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು. ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವುಳ್ಳದ್ದು ಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದ ಕೊಳ್ಳಿರಿ!

ವಿಳಾಸ: -ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ

WANTED.

Wanted Candidates for Telegraph and ...tion Master's Classes. Full particulars and ...ilway Fare Certificate on 2 annas stamp

Apply to:-

Imperial Telegraph College, Delhi.

ಮಯೂರ ಶಿಖಾ

ದುರ್ಲಭವಾದ ವನಸ್ಪತಿಯು. ೨೦ ತೊಲೆಗೆ ೧ ರು ವೈದ್ಯರಿಗೂ, ವ್ಯಾಪಾರಸ್ಥರಿಗೂ, ಅನೇಕ ವಿಧವಾದ ವನಸ್ಪತಿಗಳು ದೊರೆಯುವವು

ವೈದ್ಯ:—ವಾದಿರಾಜ ಜಹಗೀರದಾರ
ಮು. ಇಲಕಲ್ಲ (ನಿಜಾಮ)

ಕರ್ನಾಟಕದ ಅಭಿಮಾನವಿರಲಿ.

ಕೆಲಕ್ಕೆ ಕಾಣಿಸಿದ ಸಾಮಾನುಗಳು ಬೇಕಾದಲ್ಲಿ ಕನ್ನಡಿಗರು ಮುಂಬೈ ಮದ್ರಾಸಗಳಿಗೆ ಹೋಗುವ ಕಾರಣವಿಲ್ಲ. ಕನ್ನಡಿಗರ ಸೇವೆಗಾಗಿ ಸಿದ್ಧರಾಗಿದ್ದ ನಮ್ಮನ್ನು ಕನ್ನಡಿಗರು ಅವಶ್ಯವಾಗಿ ಪ್ರೋತ್ಸಾಹಿಸಬೇಕು.



Presented to H. E. the Viceroy at Bangalore City

Presented to H. H. the Maharaja at Bangalore City.

ಚಲೋ ಬೆಳ್ಳಿಯಿಂದಲೂ, ಚೊಕ್ಕ ಭಂಗಾರದಿಂದಲೂ ತಯಾರಿಸುವ ಬಗೆಬಗೆಯ ಮಾದರಿ ಒಡವೆಗಳೂ ಯಾವಾಗಲೂ ದೊರೆಯುತ್ತವೆ.

ಬಹುಮಾನ ಕೊಡಲು ಬೇಕಾಗುವ ಬೆಳ್ಳಿಯ ಕಾಸ್ಕೆಟ್ಸು ಪೆಟ್ಟಿಗೆಗಳೂ, ಹೂದಾನಿಗಳೂ, ಟೋರ್ನಮೆಂಟು ಕಪ್ಪುಗಳೂ, ಬೆಳ್ಳಿಯ ಮತ್ತೂ ಭಂಗಾರದ ಮೆಡಲುಗಳೂ (ಪದಕಗಳು) ಬೇಕಾದಾಗ ಸಿದ್ಧವಾಗಿರುವವು. ಹಾಗೂ ಬೇಕು.ಬೇಕಾದ ಹೊಸ ಹೊಸ ನಮೂನೆಗಳಲ್ಲಿ ಆರ್ಡರಿಗೂ ಮಾಡಿಕೊಡುವೆವು. ಕ್ಯಾಟಲಾಗನ್ನು ತರಿಸಿಕೊಳ್ಳಿ.

ನಮ್ಮ ಕಂಪನಿಯು ಹಳೆಯದು, ಮೈಸೂರ ಮಹಾರಾಜರೂ, ತ್ರಾವಣಕೋರದ ಮಹಾರಾಜರೂ, ದೊಡ್ಡ ದೊಡ್ಡ ಸಂಸ್ಥೆಗಳೂ, ಕ್ಲಬ್ಬುಗಳೂ ನಮ್ಮನ್ನು ಪ್ರೋತ್ಸಾಹಿಸುತ್ತಿರುವರು.

ಬೆಲೆಯು ಸುಲಭ! [ಒಂದು ವೇಳೆ ಪರೀಕ್ಷಿಸಿ.] ಕೆಲಸ ಒಹು ನಾಜೂಕು!!

ದಿ ಇಂಡಿಯನ್ ಜ್ಯುವೆಲರಿ ಮಾರ್ಟ ನಗರ್ತಪೇಟೆ, ಬೆಂಗಳೂರ ಸಿಟಿ.

ಕನ್ನಡಿಗ.

ಬಾಗಲಕೋಟೆ:- ಕನ್ನಡಿಗ ಮಾರ್ಗಶಿರ ಶುದ್ಧ ೧೧ ಶಕೆ ೧೮೪೯

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೋಹವಮಾಡಿ ಕಟ್ಟುವೆನಾನು।
ನಿನ್ನ ಬೆಸನವಮಾಡಿದಂಥ ಮಕ್ಕಳ ದೂವು।
ಚಿನ್ನದಾದರು ಚಿನ್ನವು ಮೋಹಬಿಟ್ಟಿಯು ನೊಂದು ಚಿನ್ನಯಾ ಕಾಲದ
ನನ್ನ ದೇಹವು ನಿನ್ನ ವೀರಶಾಸನಕಾಗಿ।
ಕಣ್ಣನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನಘ್ರಾಣವು ನಿನ್ನ ಗಂಧವನು ಬೀರಬಹ ಗಂಧವಹನೆಂದು ತಿಳಿಯೆ

—ಅಂದಿಕಾತನಯ ದತ್ತ

ಕಳೆದ ವಾರದಲ್ಲಿ ಬಾಗಲಕೋಟೆಯು ಕರ್ನಾಟಕವನ್ನೆಲ್ಲ ತನ್ನೆಡೆಗೆ ಎಳೆದುಕೊಂಡಿದ್ದ. ಕರ್ನಾಟಕದ ಪ್ರಾಮುಖ್ಯವಾದ ಚಳವಳಿಗಳ ಸೇವೆಯಲ್ಲಿ ಬದ್ಧವಾಗಿದ್ದರಿಂದ, ಈ ಸಲದ 'ಕನ್ನಡಿಗ'ನಲ್ಲಿ ಈ ಚಳವಳಿಗಳ ಸಮಾಚಾರವೇ ಹೆಚ್ಚಾಗಿ ಬಂದುದು ಆಶ್ಚರ್ಯವಲ್ಲ. ಈಗ್ಗೆ ಈ ಕರ್ನಾಟಕದ ಆಂದೋಲನಗಳ ಬಗ್ಗೆ ಬರೆಯುವದು ಆವಶ್ಯವಾಗಿದ್ದರಿಂದ ನಾವು ಅವುಗಳನ್ನು ಕೊಂಚ ಪರೀಕ್ಷಿಸುವೆವು. ವ್ಯಾಯಾಮ ಮಂದಿರದ ಕಟ್ಟಡದ ನಿರ್ಮಾಣಕಾರ್ಯದಲ್ಲಿಯೂ, ಶಿಬಿರದ ಕಾರ್ಯಕ್ರಮದಲ್ಲಿಯೂ, ಏಕೀಕರಣ ವಿಷಯದಲ್ಲಿಯೂ, ಕಡೆಗೆ ಸಾಯಮನ್ ಕಮೀಶನ್‌ದಂಥ ಪ್ರಚಲಿತ ರಾಜಕೀಯ ವಿಷಯದಲ್ಲಿ ಸಹ ಬ್ರಾಹ್ಮಣ-ಬ್ರಾಹ್ಮಣೇತರವೆಂಬ ಭೇದವನ್ನು ಯಾರೂ ಎಣಿಸದೇ, ಒಮ್ಮನಸ್ಸಿನಿಂದ ಹಗಲಿಗೆ ಹಗಲು ಹಚ್ಚಿ ಕಾರ್ಯ ಮಾಡಿದ್ದು ಅತ್ಯಂತ ಮಹತ್ವದ್ದು! ಭಾವೀ ಕರ್ನಾಟಕದ ಭಾಗ್ಯೋದಯದ ಚಿನ್ಹವು! ಭಾರತ ರಾಷ್ಟ್ರ ನಿರ್ಮಾಣದ ಅಡಿಗಲ್ಲು! ಕರ್ನಾಟಕದಲ್ಲಿ ಎತ್ತ ನೋಡಿದರೂ ಬ್ರಾಹ್ಮಣರೇ ಆಗಲಿ, ಬ್ರಾಹ್ಮಣೇತರರೇ ಆಗಲಿ, ತಮ್ಮ ತಮ್ಮಲ್ಲಿಯ ಅಂತರಿಕ ಕಲಹಗಳ ಬಗ್ಗೆ ಬೇಸತ್ತಿರುವದು ಸ್ಪಷ್ಟವಾಗಿ ಕಂಡು ಬರುತ್ತಲಿದೆ. ಈ ಪರಿಸ್ಥಿತಿಯಲ್ಲಿ ವಿಜಾಪುರ ಜಿಲ್ಹೆಯು ವಿಶೇಷತಃ ಬಾಗಲಕೋಟೆಯು ಅಖಂಡ ಕರ್ನಾಟಕಕ್ಕೇ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದೆ! ಒಂದೆಡೆ ರಾವಸಾಹೇಬ ಹಳಕಟ್ಟಿ, ಮುರಗಯ್ಯಸ್ವಾಮಿ ಜಂಗಿನ, ಡಾ. ಬಸಪ್ಪಾ ಪಾಟೀಲರು, ಮತ್ತೊಂದೆಡೆ ಕರ್ನಾಟಕಭೂಷಣ ಕೌಜಲಗಿ ಶ್ರೀನಿವಾಸರಾವ, ಹರ್ಡೀಕರ, ದಿವಾಕರರೂ ಬಾಗಲಕೋಟೆಯಲ್ಲಿ ಸಖ್ಯದಿಂದ ನೆರೆದು ಮತ್ತ ಕಾರ್ಯಭಾರವನ್ನು ಜರುಗಿಸಿದರು! ಪರಸ್ಥಳದ ಬ್ರಾಹ್ಮಣ-ಬ್ರಾಹ್ಮಣೇತರ ಮುಖಂಡರಿಗೆ ಸಹ ಕೂಡಿ ಕೆಲಸ ಮಾಡಲು ಬಾಗಲಕೋಟೆಯು ಅನುಕೂಲ ಕ್ಷೇತ್ರವಾಗಿದೆ. ಇತ್ತ ಬೇರೆ ಬೇರೆ ಜಾತಿಯ ಚಿಕ್ಕ ಚಿಕ್ಕ ಬಾಲಕರೂ, ಯುವಕರೂ ಪ್ರೇಮದಿಂದಲೂ ಬಂಧು ಭಾವದಿಂದಲೂ ಕೂಡಿ, ಆಟಗಳನ್ನು ಕಲಿತು, ಪರಸ್ಪರರಲ್ಲಿಯ ಆದರ ವಿಶ್ವಾಸಗಳನ್ನು ಹೆಚ್ಚಿಸಿಕೊಂಡದ್ದು ಅತ್ಯಂತ ಮಹತ್ವದ್ದಾಗಿದೆ! ಕರ್ನಾಟಕದ ಭಾವೀ ನಾಗರಿಕರಾಗತಕ್ಕ ಈ ಎಳೆಮಕ್ಕಳ ಮನಸ್ಸು ಪ್ರೀತಿ ವಿಶ್ವಾಸಗಳಿಂದ ಒದ್ಧವಾದುದು ಆ ರಾಷ್ಟ್ರೀಯ ಉತ್ಕರ್ಷದ ದ್ಯೋತಕವು! ಇದು ಹಿಂ. ಸೇ. ದಳದ ಚಟುವಟಿಕೆಗಳ [illegible] ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯು [illegible] ಕಮೀಶನಕ್ಕೆ ಬಹಿಷ್ಕಾರ ಹಾಕುವ ಬಗ್ಗೆ ತೀರ್ಮಾನಿಸಿದು. ತನ್ನ ಹಿಂದಿನ ಬಾಕೀ ಹಣವನ್ನು ಆ ಆ ಜಿಲ್ಹಾ ಕಾಂಗ್ರೆಸ ಕಮಿಟಿ[illegible]ದ ವಸೂಲ ಮಾಡ ವಲಕ್ಕೆ ಕೋರಿಸಿದ ದಕ್ಷತೆಯೂ, ಕರ್ನಾಟಕದ ಜೀವನಾಡಿ ಏಕೀಕರಣ ಪ್ರಶ್ನೆಗಾಗಿ ೧೫೦೦ ರೂ. ಗಳನ್ನು ತೆಗೆದಿಟ್ಟುದೂ, ಹಾರ್ಡೀಕರರನ್ನು ಕರ್ನಾಟಕದ ಪತಿಯಿಂದ ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಗೆ ಆರಿಸಿ, ಅವರ ಸಹಾನುಭೂತಿಯನ್ನು ಕರ್ನಾಟಕಕ್ಕೆ ಸಂಪೂರ್ಣವಾಗಿ ಸಂಪಾದಿಸಿದ್ದೂ ಮಹತ್ವದ ಸಂಗತಿಗಳು. ಕರ್ನಾಟಕ ಏಕೀಕರಣ ಪರಿಷತ್ತಿನ [illegible] ಗೊಂಡಿದವರು, ಐತಿಹಾಸಿಕ, ಔದ್ಯೋಗಿಕ, ಒಕ್ಕಲುತನದ, ಚಿತ್ರ ವಿದ್ಯೆ, ಹಾಗೂ ದನಗಳ ಪ್ರದರ್ಶನವು, ಹಾಗೂ ಕರ್ನಾಟಕದಲ್ಲಿಯ ಕಲಾಭಿಜ್ಞರಾದ ಗಾಯಕರನ್ನೂ, ಲಾವಣಿ ಹಾಡುವವರನ್ನೂ, ಬೇರೆ ಬೇರೆ ಬಗೆಯ ವಾದ್ಯಗಳನ್ನು ಬಾರಿಸುವವರನ್ನು ಕರೆಯುವ ವ್ಯವಸ್ಥೆಯನ್ನು ಮಾಡಬೇಕೆಂಬ ಸೂಚನೆಗಳು ಬಂದದ್ದರಿಂದ. ಜನರಲ್ಲಿ ಈ ಬಗ್ಗೆ ಎಷ್ಟೊಂದು ಉತ್ಸಾಹವು ತುಂಬಿ ತುಳುಕುತ್ತಿರುವದೆಂಬುದು ಸಿದ್ಧವಾಗುತ್ತದೆ. ಬಸವೇಶ್ವರ ಹೈಸ್ಕೂಲದ ಮುಚ್ಚುಗಳನ್ನು ಬಹುಕಾಲದಿಂದ ಹತ್ತುವ ಪ್ರಸಂಗವೇ ಬ್ರಾಹ್ಮಣ ಮುಖಂಡರಿಗಿರಲಿಲ್ಲ. ಆದರೆ ಈ ರಾಷ್ಟ್ರನಿರ್ಮಾಣದ ವಾರದಲ್ಲಿ ಆತ್ತ ದಿವಾಕರ, ಧಾರವಾಡ, ಕಿರಸೂರ, ಮಂಗಳವೇಢೆ ಮೊದಲಾದ ಬ್ರಾಹ್ಮಣ ಮುಖಂಡರು ಬಸವೇಶ್ವರ ಶಾಲೆಗೆ ಹೋಗಿ, ಅಲ್ಲಿ ವೀರಶೈವ ಬಂಧುಗಳ ಜೊತೆಯಲ್ಲಿ ಕಾರ್ಯ ಮಾಡುವ ಸುಪ್ರಸಂಗವು ಒಂದೊದಗಿತು! ಇತ್ತ ರಾವಸಾಹೇಬ ಹಳಕಟ್ಟಿ ಹಾಗೂ ಡಾ. ಬಸಪ್ಪಾ ಪಾಟೀಲರಂಥ ಅನುಭವಿಕ ವೀರಶೈವ ಮುಂದಾಳುಗಳು ಸಾಯಮನ್ ಕಮಿಶನ್ ಬಹಿಷ್ಕಾರದ ಕಾರ್ಯದಲ್ಲಿ ಬ್ರಾಹ್ಮಣರ ಜೊತೆಯಲ್ಲಿ ಪ್ರಮುಖ ಭಾಗ ತೆಗೆದುಕೊಂಡದ್ದನ್ನು ಪ್ರತ್ಯಕ್ಷವಾಗಿ ನೋಡುವ ಸುಪ್ರಸಂಗವು ಬಂದೊದಗಿತು! ಇವೆಲ್ಲ ಕರ್ನಾಟಕದ ಪ್ರಗತಿಪರವಾದ ಅಂಗಗಳಾಗಿದ್ದರಿಂದ ಆ ವಿಷಯವಾಗಿ ಈ ಸಲದ ಸಂಚಿಕೆಯಲ್ಲಿ ಹೆಚ್ಚಾಗಿ ಬರೆದುದನ್ನು ಕಂಡು ಕರ್ನಾಟಕದ ಹಿತಚಿಂತಕರೆಲ್ಲ ಆನಂದಿತರಾಗುವರೆಂದೂ ಈ ಬಗ್ಗೆ ಬಾಗಲಕೋಟೆಗರ ಮೇಲ್ಪಂಕ್ತಿಯನ್ನು ತೀಡಲು ಪ್ರಯತ್ನಿಸುವರೆಂದೂ ನಂಬುತ್ತೇವೆ.

ಮಹತ್ವದ ಸೂಚನೆ

ಬಾಗಲಕೋಟೆಯವರಿಗಾಗಿ ವ್ಯಾಯಾಮದ ಶಿಕ್ಷಣ ಕ್ರಮವು ಸೋಮವಾರ ೧೨ನೇ ತಾ|| ನಿಂದ ಒಂದು ತಿಂಗಳ ವರೆಗೆ ವತ್ತ ಶಿಸ್ತಿನಿಂದ ನಡೆಯುವದು. ಈಗಾಗಲೇ ಅಲ್ಲಿ ಶಿಕ್ಷಣ ಹೊಂದಿದ ವಿದ್ಯಾರ್ಥಿಗಳು ಕೇವಲ ೮ ಆಣೆಗಳನ್ನೂ ಹೊಸದಾಗಿ ಬರುವವರು ೧ ರೂ. ಯನ್ನೂ ಕೊಡಬೇಕಾಗುವದು. ಈ ಶಿಕ್ಷಣ ಪಡೆಯಲಿಚ್ಛಿಸುವವರು ತ್ವರೆಯಿಂದ ತಮ್ಮ ತಮ್ಮ ಹೆಸರುಗಳನ್ನು ನೊಂದಾಯಿಸಬೇಕು.

ತಾ|| ೬—೧೨—೨೭] ಕೃಷ್ಣರಾವ ಜೋರಾಪೂರ

ಕರ್ನಾಟಕದ ಅಭಿಮಾನವಿರಲಿ.

ಕೆಳಕ್ಕೆ ಕಾಣಿಸಿದ ಸಾಮಾನುಗಳು ಬೇಕಾದಲ್ಲಿ ಕನ್ನಡಿಗರು ಮುಂಬೈ ಮದ್ರಾಸಗಳಿಗೆ ಹೋಗುವ ಕಾರಣವಿಲ್ಲ. ಕನ್ನಡಿಗರ ಸೇವೆಗೆ ಸಿದ್ಧರಾಗಿದ್ದ ನಮ್ಮನ್ನು ಕನ್ನಡಿಗರು ಅವಶ್ಯವಾಗಿ ಪ್ರೋತ್ಸಾಹಿಸಬೇಕು.


Presented to H. E. the Viceroy at Bangalore City

Presented to H. H. the Maharaja at Bangalore City.

ಚಲೋ ಬೆಳ್ಳಿಯಿಂದಲೂ, ಚೊಕ್ಕ ಭಂಗಾರದಿಂದಲೂ ತಯಾರಿಸಿರುವ ಬಗೆಬಗೆಯ ಮಾದರಿ ಒಡವೆಗಳೂ ಯಾವಾಗಲೂ ದೊರೆಯುತ್ತವೆ.

ಬಹುಮಾನ ಕೊಡಲು ಬೇಕಾಗುವ ಬೆಳ್ಳಿಯ ಕಾಸ್ಕೆಟ್ಟು ಪೆಟ್ಟಿಗೆಗಳೂ, ಹುರಾಜೆಗಳೂ, ಟೋರ್ನಮೆಂಟು ಕಪ್ಪುಗಳೂ, ಬೆಳ್ಳಿಯ ಮತ್ತು ಭಂಗಾರದ ಮೆಡಲುಗಳೂ (ಪದಕಗಳು) ದಿಳರಿಗೆ ಸಿದ್ಧವಾಗಿರುವವು. ಹಾಗೂ ಬೇಕಾದ ಹೊಸ ಹೊಸ ನಮೂನೆಗಳಲ್ಲಿ ಆರ್ಡರಿಗೂ ಮಾಡಿಕೊಡುವೆವು. ಕ್ಯಾಟಲಾಗನ್ನು ತರಿಸಿಕೊಳ್ಳಿ.

ನಮ್ಮ ಕಂಪನಿಯು ಹಳೆಯದು, ಮೈಸೂರ ಮಹಾರಾಜರೂ, ತ್ರಾವಣಕೋರದ ಮಹಾರಾಜರೂ, ದೊಡ್ಡ ದೊಡ್ಡ ಸಂಸ್ಥೆಗಳೂ, ಕ್ಲಬ್ಬುಗಳೂ ನಮ್ಮನ್ನು ಪ್ರೋತ್ಸಾಹಿಸುತ್ತಿರುವರು.

ಬೆಲೆಯು ಸುಲಭ! [ಒಂದು ವೇಳೆ ಪರೀಕ್ಷಿಸಿ.] ಕೆಲಸ ಒಪ್ಪು ನಾಣ್ಯ!!

ದಿ ಇಂಡಿಯನ್ ಜ್ಯುವೆಲರಿ ಮಾರ್ಟ ನಗರ್ತಪೇಟೆ, ಬೆಂಗಳೂರ ಸಿಟಿ.

ಕನ್ನಡಿಗ.

ಬಾಗಲಕೋಟೆ: ಕನ್ನಡಿಗ ಮಾರ್ಗಶಿರ ಶುದ್ಧ ೧೧ ಶಕೆ ೧೮೪೯

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮಣಿಮಾಡಿ ಕಟ್ಟುವೆನಾನು ।
ನಿನ್ನ ಬೆಸನವಮಾಡಿದಂಥ ಮಕ್ಕಳ ದೊಮ್ಮು।
ಚಿನ್ನದಾದರು ಚಿನ್ನವು ಮಣಿಬಸ್ತಿಯು ನೊಂದು ಚಿನ್ಮಯಾಕಾಶದ
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೆ

—ಅಂಬಿಕಾತನಯ ದತ್ತ

ಕಳೆದ ವಾರದಲ್ಲಿ ಬಾಗಲಕೋಟೆಯು ಕರ್ನಾಟಕವನ್ನೆಲ್ಲ ತನ್ನೆಡೆಗೆ ಎಳೆದುಕೊಂಡಿದ್ದು, ಕರ್ನಾಟಕದ ಪ್ರಾಮುಖ್ಯವಾದ ಚಳವಳಿಗಳ ನೆಲೆಯಲ್ಲಿ ಬದ್ಧವಾಗಿದ್ದರಿಂದ, ಈ ಸಲದ 'ಕನ್ನಡಿಗ'ನಲ್ಲಿ ಈ ಚಳವಳಿಗಳ ಸಮಾಚಾರವೇ ಹೆಚ್ಚಾಗಿ ಬಂದುದು ಆಶ್ಚರ್ಯವಲ್ಲ. ಈಗ್ಗೆ ಈ ಕರ್ನಾಟಕದ ಆಂದೋಲನಗಳ ಬಗ್ಗೆ ಬರೆಯುವದು ಅವಶ್ಯವಾಗಿದ್ದರಿಂದ ನಾವು ಅವುಗಳನ್ನು ಕೊಂಚ ನಿರೀಕ್ಷಿಸುವೆವು. ವ್ಯಾಯಾಮ ಮಂದಿರದ ಕಟ್ಟಡದ ನಿರ್ಮಾಣಕಾರ್ಯದಲ್ಲಿಯೂ, ಶಿಬಿರದ ಕಾರ್ಯಕ್ರಮದಲ್ಲಿಯೂ, ಏಕೀಕರಣ ಪಕ್ಷದಲ್ಲಿಯೂ, ಕಡೆಗೆ ಸಾಯಮನ್ ಕಮೀಶನ್‌ದಂಥ ಪ್ರಚಲಿತ ರಾಜಕೀಯ ವಿಷಯದಲ್ಲಿ ಸಹ ಬ್ರಾಹ್ಮಣ-ಬ್ರಾಹ್ಮಣೇತರವೆಂಬ ಭೇದವನ್ನು ಯಾರೂ ಎಣಿಸದೇ, ಒಮ್ಮನಸ್ಸಿನಿಂದ ಹೆಗಲಿಗೆ ಹೆಗಲು ಹಚ್ಚಿ ಕಾರ್ಯ ಮಾಡಿದ್ದು ಅತ್ಯಂತ ಮಹತ್ವದ್ದು! ಭಾವೀ ಕರ್ನಾಟಕದ ಭಾಗ್ಯೋದಯದ ಚಿನ್ಹವು! ಭಾರತ ರಾಷ್ಟ್ರ ನಿರ್ಮಾಣದ ಅಡಿಗಲ್ಲು! ಕರ್ನಾಟಕದಲ್ಲಿ ಎತ್ತ ನೋಡಿದರೂ ಬ್ರಾಹ್ಮಣರೇ ಆಗಲಿ, ಬ್ರಾಹ್ಮಣೇತರರೇ ಆಗಲಿ, ತಮ್ಮ ತಮ್ಮಲ್ಲಿಯ ಆಂತರಿಕ ಕಲಹಗಳ ಬಗ್ಗೆ ಬೇಸತ್ತಿರುವದು ಸ್ಪಷ್ಟವಾಗಿ ಕಂಡು ಬರುತ್ತಲಿದೆ. ಈ ಪರಿಸ್ಥಿತಿಯಲ್ಲಿ ವಿಜಾಪುರ ಜಿಲ್ಲೆಯು ವಿಶೇಷತಃ ಬಾಗಲಕೋಟೆಯು ಅಖಂಡ ಕರ್ನಾಟಕಕ್ಕೇ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದೆ! ಒಂದೆಡೆ ರಾವಸಾಹೇಬ ಹಳಕಟ್ಟಿ, ಮುರಗಯ್ಯಸ್ವಾಮಿ ಜಂಗಿನ, ಡಾ. ಬಸಪ್ಪಾ ಪಾಟೀಲರು, ಮತ್ತೊಂದೆಡೆ ಕರ್ನಾಟಕಭೂಷಣ ಕೌಜಲಗಿ ಶ್ರೀನಿವಾಸರಾವ, ಹರ್ಡೀಕರ, ದಿವಾಕರರೂ ಬಾಗಲಕೋಟೆಯಲ್ಲಿ ಸಖ್ಯದಿಂದ ನೆರೆದಾಯುಕ್ತ ಕಾರ್ಯಭಾರವನ್ನು ಜರುಗಿಸಿದರು! ಪರಸ್ಥಳದ ಬ್ರಾಹ್ಮಣ-ಬ್ರಾಹ್ಮಣೇತರ ಮುಖಂಡರಿಗೆ ಸಹ ಕೂಡಿ ಕೆಲಸ ಮಾಡಲು ಬಾಗಲಕೋಟೆಯು ಅನುಕೂಲ ಕ್ಷೇತ್ರವಾಗಿದೆ. ಇತ್ತ ಬೇರೆ ಬೇರೆ ಜಾತಿಯ ಚಿಕ್ಕ ಚಿಕ್ಕ ಬಾಲಕರೂ, ಯುವಕರೂ ಪ್ರೇಮದಿಂದಲೂ ಬಂಧು ಭಾವದಿಂದಲೂ ಕೂಡಿ, ಆಟಗಳನ್ನು ಕಲಿತು, ಪರಸ್ಪರರಲ್ಲಿಯ ಆದರ ವಿಶ್ವಾಸಗಳನ್ನು ಹೆಚ್ಚಿಸಿಕೊಂಡದ್ದು ಅತ್ಯಂತ ಮಹತ್ವದ್ದಾಗಿದೆ! ಕರ್ನಾಟಕದ ಭಾವೀ ನಾಗರಿಕರಾಗತಕ್ಕ ಈ ಎಳೆಮಕ್ಕಳ ಮನಸ್ಸು ಪ್ರೀತಿ ವಿಶ್ವಾಸಗಳಿಂದ ಒದ್ದವಾದುದು ಆ ರಾಷ್ಟ್ರೀಯ ಉತ್ಕರ್ಷದ ದ್ಯೋತಕವು! ಇದು ೩೦. ನೇ ದಳದ ಚಟುವಟಿಕೆಗಳ ೧ ... ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಸಾ... ಆಯೋಗಕ್ಕೆ ಬಹಿಷ್ಕಾರ ಹಾಕುವ ಬಗ್ಗೆ ತೀರ್ಮಾನಿಸಿದರು. ಅವರು ಹಿಂದಿನ ಬಾಕೀ ಹಣವನ್ನು ಆ ಆ ಜಿಲ್ಲಾ ಕಾಂಗ್ರೆಸ ಕಮಿಟಿ ... ದ ಮೂಲಕ ನೂರ ವರೆಗೆ ಕೂಡಿಸಿದ ದಕ್ಷತೆಯೂ, ಕರ್ನಾಟಕದ ಜಿವಾಳವಾದ ಏಕೀಕರಣ ಪ್ರಶ್ನೆಗಾಗಿ ೧೫೦೦ ರೂ. ಗಳನ್ನು ತೆಗೆದಿಟ್ಟದ್ದೂ, ಹಾಗೂ ವಸ್ತುಗಳನ್ನು ಕರ್ನಾಟಕದ ವತಿಯಿಂದ ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಗೆ ಆರಿಸಿ, ಅವರ ಸಹಾನುಭೂತಿಯನ್ನು ಕರ್ನಾಟಕಕ್ಕೆ ಸಂಪೂರ್ಣವಾಗಿ ಸಂಪಾದಿಸಿದ್ದು ಮಹತ್ವದ ಸಂಗತಿಗಳು. ಕರ್ನಾಟಕ ಏಕೀಕರಣ ಪರಿಷತ್ತಿನ ಸದಸ್ಯರ ಎಂದರಿಂದಲೂ, ಐತಿಹಾಸಿಕ, ಔದ್ಯೋಗಿಕ, ಒಕ್ಕಲುತನದ, ಚಿತ್ರ ಪ್ರದರ್ಶನದ, ಹಾಗೂ ಕರ್ನಾಟಕದಲ್ಲಿಯ ಕಲಾಭಿಜ್ಞರಾದ ಗಾಯಕರನ್ನೂ, ಲಾವಣಿ ಹಾಡುವವರನ್ನೂ, ಬೇರೆ ಬೇರೆ ಬಗೆಯ ವಾದ್ಯಗಳನ್ನು ಬಾರಿಸುವವರನ್ನು ಕರೆಸುವ ವಿಚಾರವನ್ನು ಮಾಡಬೇಕೆಂಬ ಸೂಚನೆಗಳು ಬಂದದ್ದರಿಂದ, ಜನರಲ್ಲಿ ಈ ಬಗ್ಗೆ ಎಷ್ಟೊಂದು ಉತ್ಸಾಹವು ತುಂಬಿ ತುಳುಕುತ್ತಿರುವದೆಂಬುದು ಸಿದ್ಧವಾಗುತ್ತದೆ. ಬಸವೇಶ್ವರ ಹೈಸ್ಕೂಲದ ಮುಖ್ಯಾಂಗಗಳನ್ನು ಬಹುಕಾಲದಿಂದ ಹತ್ತುವ ಪ್ರಸಂಗವೇ ಬ್ರಾಹ್ಮಣ ಮುಖಂಡರಿಗಿರಲಿಲ್ಲ. ಆದರೆ ಈ ರಾಷ್ಟ್ರನಿರ್ಮಾಣದ ವಾರದಲ್ಲಿ ಅತ್ತ ದಿವಾಕರ, ಧಾರವಾಡ, ಕರಮರ, ಮಂಗಳವೇಢೇ ಮೊದಲಾದ ಬ್ರಾಹ್ಮಣ ಮುಖಂಡರು ಬಸವೇಶ್ವರ ಶಾಲೆಗೆ ಹೋಗಿ, ಅಲ್ಲಿ ವೀರಶೈವ ಬಂಧುಗಳ ಜೊತೆಯಲ್ಲಿ ಕಾರ್ಯ ಮಾಡುವ ಸುಪ್ರಸಂಗವು ಒದಗಿತು! ಇತ್ತ ರಾವಸಾಹೇಬ ಹಳಕಟ್ಟಿ ಹಾಗೂ ಡಾ. ಬಸಪ್ಪಾ ಪಾಟೀಲರಂಥ ಅನುಭವಿಕ ವೀರಶೈವ ಮುಂದಾಳುಗಳು ಸಾಯಮನ್ ಕಮಿಶನ್ ಬಹಿಷ್ಕಾರದ ಕಾರ್ಯದಲ್ಲಿ ಬ್ರಾಹ್ಮಣರ ಜೊತೆಯಲ್ಲಿ ಪ್ರಮುಖ ಭಾಗ ತೆಗೆದುಕೊಂಡದ್ದನ್ನು ಪ್ರತ್ಯಕ್ಷವಾಗಿ ನೋಡುವ ಸುಪ್ರಸಂಗವು ಒದಗಿತು! ಇವೆಲ್ಲ ಕರ್ನಾಟಕದ ಪ್ರಗತಿಪರವಾದ ಅಂಗಗಳಾಗಿದ್ದರಿಂದ ಈ ವಿಷಯವಾಗಿ ಈ ಸಲದ ಸಂಚಿಕೆಯಲ್ಲಿ ಹೆಚ್ಚಾಗಿ ಬರೆದುದನ್ನು ಕಂಡು ಕರ್ನಾಟಕದ ಹಿತಚಿಂತಕರೆಲ್ಲ ಆನಂದಿತರಾಗುವರೆಂದೂ ಈ ಬಗ್ಗೆ ಬಾಗಲಕೋಟೆಗರ ಮೇಲ್ಪಂಕ್ತಿಯನ್ನು ತಿಳಿದು ಪ್ರಯತ್ನಿಸುವರೆಂದೂ ನಂಬುತ್ತೇವೆ.

ಮಹತ್ವದ ಸೂಚನೆ

ಬಾಗಲಕೋಟೆಯವರಿಗಾಗಿ ವ್ಯಾಯಾಮದ ಶಿಕ್ಷಣ ಕ್ರಮವು ಸೋಮವಾರ ೧೫ನೇ ತಾ|| ನಿಂದ ಒಂದು ತಿಂಗಳ ವರೆಗೆ ವತ್ತ ಶಿಸ್ತಿನಿಂದ ನಡೆಯುವದು. ಈಗಾಗಲೇ ಅಲ್ಲಿ ಶಿಕ್ಷಣ ಹೊಂದಿದ ವಿದ್ಯಾರ್ಥಿಗಳು ಕೇವಲ ಆಟಗಳನ್ನೂ ಹೊಸದಾಗಿ ಬರುವವರು ೧ ರೂ. ಯನ್ನು ಕೊಡಬೇಕಾಗುವದು. ಈ ಶಿಕ್ಷಣ ಪಡೆಯಲಿಚ್ಛಿಸುವವರು ತ್ವರೆಯಿಂದ ತಮ್ಮ ತಮ್ಮ ಹೆಸರುಗಳನ್ನು ನೊಂದಾಯಿಸಬೇಕು.

ತಾ|| ೬—೧೨—೨೭]   ಕೃಷ್ಣರಾವ ಜೋರಾಪೂರ

[೬ನೇ ಪುಟದಿಂದ ಬಂದದು]

ಗಳನ್ನು ಮಾಡಿಸಿದ್ದಾಯಿತು ಇನ್ನೂ ಹಲವು ಕಾರ್ಯಕ್ರಮಗಳು ಆಗತಕ್ಕವಿವೆ. ಇದೆಲ್ಲ ಇಲ್ಲಿಯ ಶಾಖೆಯವರಿಗೆ ಭೂಷಣವಾಗಿದೆ ಏಕೀಕರಣ ಪರಿಷತ್ತಿನ ದಿನಗಳ ಸಮೀಪಿಸಿದ ಬಳಿಕ ವರ್ತಿಂದ ಬಾಗಲಕೋಟೆಯಲ್ಲಿ ಸ್ವಾಗತ ದಳವನ್ನು ಸ್ಥಾಪಿಸುವದಕ್ಕಾಗಿ ಸೋಮವಾರ ತಾ|| ೫ ನೇ ದಿನ ಸಾಯಂಕಾಲಕ್ಕೆ ಬಾಗಲಕೋಟೆ ನಾಗರಿಕರ ಸಾರ್ವಜನಿಕ ಸಭೆಯು ಹಿಂ ನೇ ... ಪ್ರೈಲಿನಲ್ಲಿ ಸೇರಿದ್ದಿತು. ರಾವಸಾಹೇಬ ಹಳಕಟ್ಟಿಯವರೇ ಆ ದಿನವೂ ಅಧ್ಯಕ್ಷರಾಗಿದ್ದರು ಮೊದಲಿಗೆ ಶ್ರೀಯುತ ... ಗಳ ... ಕೌಜಲಗಿ ಹನುಮಂತರಾವ, ದಿವಾಕರ ಇವರ ... ಭಾಷಣಗಳಾದವು ಏಕೀಕರಣದ ಅವಶ್ಯಕತೆಯ ಬಗ್ಗೆ ಜನರ ... ಮನಗಾಣುವಂತೆ ಅವರು ಭಾಷಣ ಮಾಡಿದರು ಪರಿಷತ್ತನ್ನು ಬಾಗಲಕೋಟೆಯಲ್ಲಿ ಕೂಡಿಸುವದು ಅತ್ಯವಶ್ಯವಿದೆಂದು ಮೊದಲು ಶ್ರೀ ... ಯಲಗುದ್ರ ರಾವರು ಸೂಚಿಸಿದರು ಶ್ರೀ ... ಸ್ವಾಮಿ ... ಅದನ್ನು ಪುಷ್ಟೀಕರಿಸಿದರು. ಇದಕ್ಕೆ ಶ್ರೀ ಜೈನಾಪುರ ವಕೀಲರು ವಿರೋಧಿಸಿದರು ಅಗ್ಗೆ ಅವರಂದದ್ದು ... ದವರು ... ಕಾಲದಲ್ಲಿ ಏಕೀಕರಣಕ್ಕೆ ಒಪ್ಪಿದರೂ ... ಪ್ರತ್ಯಕ್ಷವಾಗಿ ನಮ್ಮ ಬೇಡಿಕೆಗಳನ್ನು ಕೊಡುವಷ್ಟು ಉದಾರರಾಗಿಲ್ಲ ... ನೀತಿಯು ನಮಗೆಲ್ಲ ಗೊತ್ತಿದೆ ಅದರಿಂದ ಸ್ವರಾಜ್ಯ ಸಂಪಾದನೆಯೇ ನಮ್ಮ ಧ್ಯೇಯವಾಗಿರಬೇಕಲ್ಲದೇ, ಉಳಿದ ಯಾವ ಚಳವಳಿಗಳಲ್ಲಿಯೂ ನಮ್ಮ ಉತ್ಸಾಹ ... ಹೋಗಬಾರದು ನಾನು ಏಕೀಕರಣಕ್ಕೆ ವಿರೋಧಿಯಾಗಿಲ್ಲ ಆದರೆ ಸಧ್ಯದಲ್ಲಿ ಅದನ್ನು ಗಳಿಸುವದರಲ್ಲಿ ತೊಡಗಿಕೊಂಡು, ಸ್ವರಾಜ್ಯ ಸಂಪಾದನೆಯ ಚಟುವಟಿಕೆಯನ್ನು ಹಿಂದಕ್ಕಿಟ್ಟಬಾರದೆಂಬ ಉದ್ದೇಶದಿಂದ ಮಾತ್ರ ನಾನು ಈಗ್ಗೆ ಈ ಪರಿಷತ್ತನ್ನು ಕೂಡ್ರಿಸಬಾರದೆಂದು ಹೇಳುತ್ತೇನೆ,

ಇದಕ್ಕೆ ಶ್ರೀ ದಿವಾಕರರು ಬಹು ಸಮರ್ಪಕವಾದ ಉತ್ತರ ಕೊಟ್ಟರು ... ಏಕೀಕರಣದಂಥ ಸಣ್ಣ ಪುಟ್ಟ ಸಂಗತಿಗಳು ಸರಕಾರದಿಂದ ದೊರೆಯುವವೆಂದು ವಿಶ್ವಾಸವಿದ್ದವರು ಅವಶ್ಯವಾಗಿ ಚಳವಳ ಮಾಡಬೇಕು ಇನ್ನು ಶ್ರೀ ಜೈನಾಪುರದವರು ಹೇಳಿದಂತೆ ಸರಕಾರದಲ್ಲಿ ವಿಶ್ವಾಸವಿಲ್ಲದವರಿಗೆ ಸ್ವರಾಜ್ಯ ಸಂಪಾದನೆಯೇ ಮೂಲ ಮಂತ್ರವೆನ್ನುವದರಲ್ಲಿ ಎಳ್ಳಷ್ಟು ಸಂದೇಹವಿಲ್ಲ ಆದರೆ ಸ್ವರಾಜ್ಯವನ್ನು ಗಳಿಸಲು ಸಾಧನಗಳು ಬೇಕೆಂಬದನ್ನು ನಾವು ಮರೆಯಕೂಡದು ಕರ್ನಾಟಕ ಏಕೀಕರಣವು ಒಂದು ಸಾಧನವೇ ಆಗಿದೆ. ನಮ್ಮ ಸಂಸ್ಕೃತಿ, ನಮ್ಮ ಇತಿಹಾಸ ನಮ್ಮ ಶಕ್ತಿ, ನಮ್ಮ ತೇಜಸ್ಸು. ನಮ್ಮ ರಾಷ್ಟ್ರಗಳ ಜ್ಞಾನವು ನಮಗೆ ಈಗ್ಗೆ ಇರುವದಿಲ್ಲ. ಅದ್ದರಿಂದಲೇ ನಾವು ನಮ್ಮೊಳಗೆಯೇ ಬಡಿದಾಡಿ, ಸ್ವರಾಜ್ಯವನ್ನು ಹಿಂದಕ್ಕೊತ್ತುವದು. ಈ ಪರಿಸ್ಥಿತಿಯು ಬದಲಾಗಲಿಕ್ಕೆ ಏಕೀಕರಣವು ಕರ್ನಾಟಕದಲ್ಲಿ ಒಳ್ಳೇ ಅನುಕೂಲವಾದ ಸಾಧನವಾಗಿದೆ. ಏಕೀಕರಣದಲ್ಲಿ ಎಲ್ಲರ ಐಕ್ಯಮತ್ಯವಿರುವದರಿಂದ, ಅದನ್ನು ದೊರಕಿಸುವ ಕಾರ್ಯದಲ್ಲಿ ಸರಕಾರದಲ್ಲಿ ವಿಶ್ವಾಸವಿದ್ದವರೂ ವಿಶ್ವಾಸವಿಲ್ಲದವರೂ ಕೂಡಿಯೇ ಕೆಲಸ ಮಾಡಬೇಕು. ಇದರಿಂದ ನಮ್ಮಲ್ಲಿ ಐಕ್ಯವು ಬೆಳೆದು, ನಮ್ಮ ಸಂಸ್ಕೃತಿ ಭಾಷೆ ಶಕ್ತಿ ಮೊದಲಾದವುಗಳ ಜ್ಞಾನವು ವಿಕಾಸ ಹೊಂದುವದು. ನಾವು ವಿಕಾಸ ಹೊಂದಿದವೆಂದರೆ ಸ್ವರಾಜ್ಯ ಸಾಧನವೊಂದು ನಮಗೆ ದೊರೆತಂತಾಯಿತು. ಅದ್ದರಿಂದ ಶ್ರೀ ಜೈನಾಪುರರು ಇದಕ್ಕೆ ವಿರೋಧಿಸುವ ಕಾರಣವಿಲ್ಲ" ಆ ಮೇಲೆ ಈ ಠರಾವು ಸರ್ವಾನುಮತದಿಂದ ಸಭೆಯಲ್ಲಿ ಸ್ವೀಕರಿಸಲ್ಪಟ್ಟಿತು,

ಸ್ವಾಗತ ಕಮಿಟಿಯ ಫೀ ಕನಿಷ್ಠ ೩ ರೂ ಇರಬೇಕು; ಪ್ರತಿನಿಧಿಗಳ ಫೀ ೧ ರೂ ಇರಬೇಕು; ಶ್ರೀ ಮಂಗಳವೇಢೆ ... ಇವರು ತಾತ್ಪೂರ್ತಿಕ ಸ್ವಾಗತ ಮಂಡಲದ ಕಾರ್ಯದರ್ಶಿಗಳಾಗಿರಬೇಕು; ... ಜನರು ಸಭಾಸದರಾಗಿರಬೇಕು; ಎಂಬ ... ಶ್ರೀ ಮಂಗಳವೇಢೆ ಶ್ರೀನಿವಾಸರಾಯರು, ೩ ನೇ ಸೂಚನೆಯನ್ನು ತಂದರು. ಚೌಧರಿ ವಕೀಲರು ಅದನ್ನು ಅನುಮೋದಿಸಿದರು- ಶ್ರೀ ಜೈನಾಪುರ ಗೋವಿಂದರಾಯರೂ ಈ ಮಂಡಲದ ಸಭಾಸದರಾದರು.

ರಾವಸಾಹೇಬ ಹಳಕಟ್ಟಿಯವರು ಏಕೀಕರಣದ ಅವಶ್ಯಕತೆಯ ಬಗ್ಗೆ ನುಡಿದು, ಈ ಪರಿಷತ್ತನ್ನು ಕೂಡಿಸಲು ಬಾಗಲಕೋಟೆಯವರು ಮುಂದೆ ಬಂದರು, ಅಷ್ಟೊಂದು ಉತ್ಸಾಹದಿಂದ ಈ ಕಾರ್ಯದಲ್ಲಿ ... ದ್ದಕ್ಕಾಗಿ ಅವರನ್ನು ಅಭಿನಂದಿಸಿ, ಈ ಪರಿಷತ್ತಿನ ಜತೆಯಲ್ಲಿ, ಒಕ್ಕಲತನದ, ದನಗಳ, ... ಉದ್ಯೋಗದ ಪ್ರದರ್ಶನಗಳನ್ನಾದರೂ ಕೂಡಿಸಿ, ಕರ್ನಾಟಕದ ... ಸ್ವಾಗತವನ್ನು ಬಾಗಲಕೋಟೆಯರು ಪ್ರಶಂಸನೀಯವಾಗಿ ಸಾಗಿಸಿದರು. ಇದರಂತೆ ಹಾಗೂ ಉತ್ಸಾಹೀ ವಕೀಲರಾದ ಶ್ರೀ ಜೈನಾಪುರ ಗೋವಿಂದರಾಯರು ಅಭಾರವನ್ನು ಮನ್ನಿಸಲಿದ್ದು, ರಾವಸಾಹೇಬ ಹಳಕಟ್ಟಿಯವರು ಬಾಗಲಕೋಟೆಗೆ ಬಂದು, ಪರಿಷತ್ತಿನ ಕಾರ್ಯಕ್ಕೆ ... ಟ್ಟು, ನಮ್ಮನ್ನು ಕಾರ್ಯಕ್ಕೆ ಹಚ್ಚಿದ್ದಕ್ಕೆ, ಬಾಗಲಕೋಟೆಯವರೆಲ್ಲ ಅವರಿಗೆ ಅತ್ಯಂತ ಋಣಿಯಾಗಿರುವೆವೆಂದು ಹೇಳಿದರು

ಸೈಮನ್ ಕಮಿಶನಕ್ಕೆ ಬಹಿಷ್ಕಾರವು

ಬಾಗಲಕೋಟೆ ಪ್ರಾಂತ್ಯದ ಒಪ್ಪಿಗೆಯು.

ಬಾಗಲಕೋಟೆಯಲ್ಲಿ ದಿಂಬರ ೫ ನೇ ತಾರೀಖಿನ ದಿವಸ ... ಸೇವಾದಲದ ಶಿಬಿರದ ಬೈಲಿನಲ್ಲಿ ಕರ್ನಾಟಕದ ... ಮುಂದಾಳುಗಳಾದ ರಾವಸಾಹೇಬ ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ ಸಭೆಗೂಡಿತ್ತು. ಶ್ರೀ. ಕಿ ಸೂರ ಮರೀಲ ... ರು ಕೆಳಗಿನ ಠರಾವನ್ನು ಸೂಚಿಸಿದರು.

"ಪ್ರತಿಯೊಂದು ರಾಷ್ಟ್ರದ ಜನ್ಮಸಿದ್ಧ ಹಕ್ಕಾದ ಸ್ವಯಂ ನಿರ್ಣಯತತ್ವದ ... ಕಾಂಗ್ರೆಸ್ಸು ... ರಾಷ್ಟ್ರೀಯ ಬೇಡಿಕೆಗಳನ್ನು ಧಿಕ್ಕರಿಸಿಯೂ ಬ್ರಿಟಿಶ ಪಾರ್ಲಮೆಂಟದವರು ನಿಯಮಿಸಿದ ಸೈಮನ್ನ ಕಮೀಶನವನ್ನು ಸಂಪೂರ್ಣ ಬಹಿಷ್ಕರಿಸಬೇಕೆಂದು ಈ ಸಭೆಯು ಖಂಡಿತವಾಗಿ ಅಭಿಪ್ರಾಯಪಡುತ್ತದೆ." ಮತ್ತು ರಾಷ್ಟ್ರದಲ್ಲಿಯ ಎಲ್ಲ ಪಂಗಡಗಳು ಒಕ್ಕಟ್ಟಾಗಿ ಈ ಕಮಿಶನವನ್ನು ಬಹಿಷ್ಕರಿಸಬೇಕೆಂದು ಎಲ್ಲರನ್ನು ಪ್ರಾರ್ಥಿಸುತ್ತದೆ. ಶ್ರೀ ಕಿ ಸೂರ ಇವರು ೧೯೧೯ ನೇ ಇಸ್ವಿಯ ಸುಧಾರಣೆಯ ಇತಿಹಾಸವನ್ನು ಹೇಳಿ ಬ್ರಿಟಿಶ ಪಾರ್ಲಮೆಂಟದವರ ಕಪಟತನವನ್ನು ಉದಾಹರಣೆಗಳಿಂದ ತೋರಿಸಿಕೊಟ್ಟರು ಬ್ರಿಟಿಶರಿಂದ ಯಾವ ಹಕ್ಕನ್ನು ಪಡೆಯುವದೂ ಶಕ್ಯವಿಲ್ಲೆಂದು ಹೇಳಿದರು ನಂತರ ಡಾ. ಬಸಪ್ಪಾ ಪಾಟೀಲ ಇವರು ಈ ಠರಾವನ್ನು ಸಮರ್ಥಿಸಲಿಕ್ಕೆ ಎದ್ದು ನಿಂತರು. ನಾನು ಈ ಠರಾವನ್ನು ವಿರೋಧಿಸಲಿಕ್ಕೆ ಎದ್ದು ನಿಂತಿರುವೆನೆಂದು ಕೆಲವರು ತಿಳಿದುಕೊಂಡಿರಬಹುದು. ಆದರೆ ನಾನು ಈ ಠರಾವನ್ನು ಸಮರ್ಥಿಸಲಿಕ್ಕೆ ನಿಂತಿರುತ್ತೇನೆ ಕೇವಲ ಬಾಯಿಂದ ಸ್ವರಾಜ್ಯವು ಎಂದೂ ಸಿಗಲಾರದು. ಅಥವಾ ವಿನಂತಿ ಅರ್ಜಿಗಳಿಂದಲೂ ಸಿಗಲಾರದು ನಾವೆಲ್ಲರೂ ಕೂಡಿ ಕೆಲಸವನ್ನು ಮಾಡಿದರೆ ಮಾತ್ರ ಸಿಗುವದು. ಚುನಾವಣೆಗಳಲ್ಲಿ ಮೂರು ವರ್ಷಕ್ಕೊಮ್ಮೆ ನಾವಿ ... ರೂಪಾಯಿಗಳನ್ನು ವೆಚ್ಚ ಮಾಡುವದರಿಂದ ಯಾವ ಲಾಭವೂ ಆಗದು ಕೌನ್ಸಿಲ ಪ್ರವೇಶದಿಂದ ಯಾವ ಕೆಲಸವೂ ಆಗದು. ಈಗ ಕಮೀಶನಕ್ಕೆ ಬಹಿಷ್ಕಾರ ಹಾಕಬೇಕೆಂದು ದೇಶದಲ್ಲೆಲ್ಲ ಚಳವಳಿಯು ಎದ್ದಿದೆ. ಅದನ್ನು ಪರಿಣಾಮಕಾರಕವಾಗಿ ಮಾಡುವದೇ ನಮ್ಮ ಕರ್ತವ್ಯ. ನಾವು ಕೇವಲ ಮಾತಾಡುವವರೆಂದು ಸರಕಾರದವರು ನಮ್ಮ ಮಾತಿಗೆ ಬೆಲೆಕೊಡುವದಿಲ್ಲ ಸಾಹಸದಿಂದ ಕೃತಿ ನಡೆದರೆ ಮಾತ್ರ ನಮ್ಮ ಉದ್ದೇಶವು ಸಾಧಿಸುತ್ತದೆ. ಈ ಸಾಯಮನ ಕಮಿಶನಕ್ಕೆ ನಾವೆಲ್ಲರೂ ಬಹಿಷ್ಕಾರ ಹಾಕುವದು ಅವಶ್ಯವಿರುತ್ತದೆ. ಇಂಥ ಕಮಿಶನಗಳಿಂದ ಯಾವ ಲಾಭವೂ ಆಗದು. ಈ ಪ್ರಕಾರ ಶ್ರೀ. ಪಾಟೀಲರು ಭಾಷಣ ಮಾಡಿದ ಮೇಲೆ ಶ್ರೀ. ಹಣಮಂತರಾವ ಕೌಜಲಗಿ ಇವರು ಈ ವಿಷಯವನ್ನು ಸವಿಸ್ತರ ಎದ್ದು ಪ್ರಸ್ತುತ ರಾಜ್ಯಪದ್ಧತಿಯನ್ನು ಟೀಕಿಸಿದರು. ಆ ಮೇಲೆ ಆ ಠರಾವು ಸ್ವೀಕೃತವಾಯಿತು. ಶ್ರೀ. ಯಲಗುದ್ರ ರಾವ ಧಾರವಾಡ ಇವರು ಅಧ್ಯಕ್ಷರ ಉಪಕಾರ ಮನ್ನಿಸಿ ಈ ಕಮೀಶನವನ್ನು ನಿಯಮಿಸಿದ್ದರಲ್ಲಿ ಅಧಿಕಾರಿಗಳು ಹಿಂದೀ ಜನರ ಅಭಿಪ್ರಾಯವನ್ನು ಹೇಗೆ ಧಿಕ್ಕರಿಸುತ್ತಿದ್ದಾರೆಂಬುದನ್ನು ಒಳ್ಳೇ ವಿನೋದಾತ್ಮಕ ಉಪಮೆಗಳಿಂದ ಹೇಳಿದರು.

ಬಾಗಲಕೋಟೆಯಲ್ಲಿ

ಕರ್ನಾಟಕದ ಚಟುವಟಿಕೆಗಳು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಯಶಸ್ವಿ ಕಾರ್ಯಕ್ರಮ!

ಹನುಮಾನ್ ಶಿಬಿರದ ಅತ್ಯಂತ ಉತ್ಸಾಹಪೂರ್ವಕ ಹಾಗೂ ಪ್ರೇಕ್ಷಣೀಯ ಸಮಾಪ್ತಿ ಸಮಾರಂಭ!

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು.

ಮೊದಲಿಗೆ ಗೊತ್ತಾದಂತೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧಿವೇಶನವು ಶನಿವಾರ ಹಾಗು ರವಿವಾರ ಎರಡು ದಿವಸಗಳವರೆಗೆ ನಡೆಯಿತು. ಕರ್ನಾಟಕ ಪ್ರಾಂತಿಕ ಮಂಡಲವು ಬಾಗಲಕೋಟೆಯಲ್ಲಿ ಕೂಡಿದ್ದು ಇದೇ ಮೊದಲನೇ ಸಾರೆ ಯಾದ್ದರಿಂದ ಜನರಲ್ಲಿ ಉತ್ಸಾಹವು ವಿಶೇಷವಾಗಿತ್ತು. ಸಭೆಗಾಗಿ ಮಂಡಪವೊಂದನ್ನು ಏರ್ಪಾಟು ಮಾಡುವದರಲ್ಲಿ ಬಂದಿತ್ತು. ಸಭಾಮಂಡಪದ ಎದುರಿನಲ್ಲಿ ಕಾರಂಜಿಯನ್ನು ಕೂಡಿಸಿದ್ದರಿಂದ ವಿಶೇಷ ಶೋಭೆಯೂ ಬಂದಿತ್ತು. ದೇ. ಭ. ಶ್ರೀನಿವಾಸರಾವ ಕೌಜಲಗಿ, ದತ್ತೋಪಂತ ಬೆಳವಿ, ರಂಗರಾವ ದಿವಾಕರ ಹಣಮಂತರಾವ ಕೌಜಲಗಿ, ಮಧ್ವರಾವ ಕೆಂಭಾವಿ, ಹೊಸಕೊಪ್ಪ ಕೃಷ್ಣರಾವ, ಕೇ. ಟೀ. ಭಾಷ್ಯಂ, ಕೇ. ಗುರುರಾಜರಾವ, ವಸುಪಾಲಪ್ಪ ಮೊದಲಾದ ಮಹನೀಯರು ಈ ಸಭೆಗಾಗಿ ಬಂದಿದ್ದರು:- ದೇ. ಭ. ಶ್ರೀನಿವಾಸರಾವ ಕೌಜಲಗಿಯವರು ಅಧ್ಯಕ್ಷರಾಗಿಯೂ ಶ್ರೀ. ಬೆಳವಿ, ಬೆಲ್ಲೋಣಿ ಭೀಮರಾವ, ಶ್ರೀಮತೀ ಉಮಾಬಾಯಿ ಕುಂದಾಪುರ ಇವರು ಉಪಾಧ್ಯಕ್ಷರಾಗಿಯೂ ದೇ. ಭ. ರಂಗರಾವ ದಿವಾಕರ, ಮಧ್ವರಾವ ಕೆಂಭಾವಿ, ಡಾ. ವೆಂಕಟರಾವ ಹಯಿಲಗೋಳ ಇವರು ಕಾರ್ಯದರ್ಶಿಗಳಾಗಿಯೂ ಡಾ. ವಾಸುದೇವರಾವ ಉಮಚಗಿಯವರು ಕೋಶಾಧ್ಯಕ್ಷರಾಗಿಯೂ ಶ್ರೀ. ಕಮಲಾಚಾರ್ಯ ಪುರೋಹಿತ ಇವರು ಲೆಕ್ಕ ಪರಿಶೋಧಕರಾಗಿಯೂ ನಿಯಮಿಸಲ್ಪಟ್ಟರು. ಆ ಮೇಲೆ ಕೆಲ ಸಭಾಸದರನ್ನು ಸೇರಿಸಿಕೊಳ್ಳುವದೂ ಕಾರ್ಯಕಾರೀಮಂಡಲದ ಚುನಾವಣೆಯೂ ಜರಗಿದನಂತರ ಅಖಿಲ ಭಾರತ ಕಾಂಗ್ರೆಸ್ ಕಮಿಟಿಗೆ ಪ್ರತಿನಿಧಿಗಳ ಚುನಾವಣೆಯು ಕೆಲಸವು ನಡೆಯಿತು. ಭೋಜನವಾದನಂತರ ಪುನಃ ಸಭೆಸೇರಿ ಹೋದ ವರ್ಷದ ಲೆಕ್ಕವನ್ನು ಸ್ವೀಕರಿಸಿದ್ದೂ ಹೊಸ ವರ್ಷದ ಅಂದಾಜ ಪತ್ರಿಕೆಯನ್ನು ಚರ್ಚಿಸುವ ಕಾರ್ಯಗಳೂ ನಡೆದವು. ಕರ್ನಾಟಕ ಏಕೀಕರಣ ಕಾರ್ಯಕ್ಕೆ (ಒಂದು ಪುಸ್ತಕವನ್ನು ಅಚ್ಚು ಹಾಕಿಸಿ ಪ್ರಸಿದ್ಧಿಸುವ ಕಾರ್ಯವನ್ನು ಸಹ ಕೂಡಿಸಿ) ೧೫೦೦ ರುಪಾಯಿಗಳನ್ನು ಹಿಂದುಸ್ಥಾನೀ ಸೇವಾದಲದವರು ಕೈಕೊಂಡ ವ್ಯಾಯಾಮ ಮುಂತಾದ ಸ್ವಾತ್ಮ್ಯ ಕಾರ್ಯಕ್ಕೆ ೫೦೦ ರು|| ಗಳನ್ನೂ ಕೊಟ್ಟರು. ನಿಪ್ಪಾಣಿ ರಾಷ್ಟ್ರೀಯ ಶಾಲೆಗೆ ೧೫೦ ರು|| ಗಳನ್ನು ಲೆಕ್ಕ ಪರಿಶೋಧಕರ ವರದಿಯು ಬಂದನಂತರ ಕೊಡಬೇಕೆಂದು ನಿರ್ಣಯಿಸಲ್ಪಟ್ಟಿತು.

ಕಾಂಗ್ರೆಸಿನ ಪ್ರಚಾರ ಕಾರ್ಯಕ್ಕಾಗಿ ೧೦೦೦ ರು|| ಗಳನ್ನು ವೆಚ್ಚಮಾಡಬಹುದೆಂದು ಗೊತ್ತಾಯಿತು. ಸರ್ಕಾರದಿಂದ ನಿಯಮಿಸಲ್ಪಟ್ಟ ಸಾಯಮನ್ ಕಮಿಶನ್‌ವು ಸ್ವಯಂನಿರ್ಣಯತತ್ವಕ್ಕೆ ಸಂಪೂರ್ಣ ವಿರುದ್ಧವಾದ್ದರಿಂದ ಹಿಂದೀಯರು ಅದಕ್ಕೆ ಬಹಿಷ್ಕಾರ ಹಾಕಬೇಕೆಂಬ ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ಕಾಂಗ್ರೆಸ್‌ದ ಘಟನೆಯಲ್ಲಿ ಹಿಂದೀ ಸಂಸ್ಥಾನಗಳಿಗೆ ಸ್ವತಂತ್ರ ಸ್ಥಾನವು ಇಲ್ಲದೆ ಇರುವದು ಯೋಗ್ಯವಲ್ಲವೆಂದೂ ಅವುಗಳಿಗೆ ಸ್ವತಂತ್ರ ಅಸ್ತಿತ್ವವನ್ನು ಕೊಡಬೇಕೆಂದೂ ಅಖಿಲ ಭಾರತ ಮಂಡಲಕ್ಕೆ ಬಿನ್ನವಿಸುವ ನಿರ್ಣಯವಾಯಿತು. ಕರ್ನಾಟಕ ಏಕೀಕರಣ ಉಪಮಂಡಲದ ಹಾಗು ಕರ್ನಾಟಕ ಶಿಕ್ಷಣ ಸಮಿತಿಯ ವರದಿಗಳು ಸ್ವೀಕರಿಸಲ್ಪಟ್ಟವು. ದೇ. ಭ. ಶ್ರೀನಿವಾಸರಾವ ಕೌಜಲಗಿ, ರಂಗರಾವ ದಿವಾಕರ, ಹೊಸಕೊಪ್ಪ ಕೃಷ್ಣರಾವ ಇವರು ಕರ್ನಾಟಕ ಪ್ರಾಂತಿಕ ಮಂಡಲದ ಪರಿಯಿಂದ ಹಿಂದುಸ್ಥಾನೀ ಸೇವಾದಲದ ಕಾರ್ಯಕಾರೀಮಂಡಲದ ಸದಸ್ಯರಾಗಿ ಆರಿಸಲ್ಪಟ್ಟರು. ಕರ್ನಾಟಕ ಏಕೀಕರಣ ಉಪಮಂಡಲಕ್ಕೆ ದೇ. ಭ. ರಂಗರಾವ ದಿವಾಕರ, ಹಣಮಂತರಾವ ಮೊಹರೆ, ಶ್ರೀನಿವಾಸರಾವ ಮಂಗಳವೇಢೆ, ಕೃಷ್ಣರಾವ ಮುದವೇಡಕರ, ಕೇ. ಗುರುರಾಜರಾವ ಇವರು ಆರಿಸಲ್ಪಟ್ಟರು. ಇನ್ನು ಕೆಲವು ಬೇರೆ ನಿರ್ಣಯಗಳು ಪಾಸಾಗಿ ಸಭೆಯು ವಿಸರ್ಜನೆಯಾಯಿತು. ಇಲ್ಲಿಯ ಸ್ವಾಗತ ಮಂಡಲದವರೂ ಶ್ರೀ. ಕೃಷ್ಣರಾವ ಜೋರಾಪುರ ಹಾಗೂ ಶ್ರೀನಿವಾಸರಾವ ನಿರಲಕೇರಿಯವರೊಂದಿಗೆ ಹಿಂದುಸ್ಥಾನೀ ಸೇವಾದಲದ ಸ್ವಯಂಸೇವಕರೂ ಎಲ್ಲ ವ್ಯವಸ್ಥೆಯನ್ನು ಒಳ್ಳೇ ಅಚ್ಚುಕಟ್ಟಾಗಿ ಇಟ್ಟದ್ದು ಬಾಗಲಕೋಟೆಯವರಿಗೆ ಭೂಷಣವು. ಈ ಕಮಿಟಿಯ ವ್ಯವಸ್ಥೆಯು ಇಷ್ಟು ಚನ್ನಾಗಿ ಆದದ್ದನ್ನು ಕಂಡು ಕರ್ನಾಟಕ ಪ್ರಾಂತಿಕ ಪರಿಷತ್ತನ್ನು ಇಲ್ಲಿಗೆ ನಿಮಂತ್ರಿಸಬೇಕೆಂದು ಕೆಲವರು ಹುರುಪುಗೊಂಡಿದ್ದಾರೆ.

ಹಿಂ. ಸೇ. ದಲದ ಕಾರ್ಯಕ್ರಮ.

ರವಿವಾರ ತಾ|| ೪ ನೇ ದಿನ ಮಧ್ಯಾಹ್ನದ ೩|| ಗಂಟೆಗೆ ವಾದ್ಯಗಳೊಂದಿಗೆ ಸ್ವಯಂಸೇವಕರ ಮೆರವಣಿಗೆಯಾಯಿತು. ಕೂಡಲೇ ರಾವಸಾಹೇಬ ಹಳಕಟ್ಟಿ ಸಂಪಾದಕರು 'ನವಕರ್ನಾಟಕ' ವಿಜಾಪುರ ಇವರ ಅಧ್ಯಕ್ಷತೆಯಲ್ಲಿ ಬಾಗಲಕೋಟೆಯ ನಾಗರೀಕರ ಸಭೆ ಸೇರಿತು. ೩ ಸಾವಿರ ಜನರು ಆದಿನ ಸಭೆಗೆ ಬಂದಿದ್ದರು. ೩-೪ ನೂರ ಜನ ಸ್ತ್ರೀಪುರುಷರು ಸಭೆಗೆ ಬಂದಿದ್ದರು. ಬಾಗಲಕೋಟೆಯಲ್ಲಿ ವಿಶೇಷವಾದ ಹೆಚ್ಚಿನ ಸಂಗತಿ. ಇದೊಂದೇ ಸಂಗತಿಯಿಂದ ಬಾಗಲಕೋಟೆಯಲ್ಲಿ ಈ ವ್ಯಾಯಾ

ವ.ದ ಚಟುವಟಿಕೆಗಳಿಂದ ಎಲ್ಲರಲ್ಲಿಯೂ ಎಷ್ಟು ಉತ್ಸಾಹವು ಬಂದಿರುವದೆಂಬುದನ್ನು ಕಂಡು ಹಿಡಿಯಬಹುದಾಗಿದೆ ಇರಲಿ. ಆದಿನ ಸ್ವಯಂಸೇವಕರ ಆಟಗಳು ಅತ್ಯಂತ ಪ್ರೇಕ್ಷಣೀಯವಾಗಿದ್ದವು. ಭಲ್ಲೆ, ಕಿಂಗತ್ತಿ, ಲೇಝಿಮು, ಗಳನ್ನು ಚಿಕ್ಕ ಚಿಕ್ಕ ಬಾಲಕರೂ ದೊಡ್ಡವರೂ ಕೂಡಿಯೇ ತಿರವಿದರು. ಡೊಣ್ಣೆಯ ಭಯಂಕರವಾದ ಒಡಿದಾಟವೂ, ಆ ಕಾಲಕ್ಕೆ ಆದ ತುಕಡಿಗಳ ವಿವಾದವೂ ಸಣ್ಣ ಬಾಲಕರು ಸಹ ಧೈರ್ಯದಿಂದ ಒಡಿದಾಟದಲ್ಲಿ ಒಳಸೇರಿದರೂ, ಜನರಲ್ಲಿ ಅತ್ಯಂತ ಕೌತುಕವನ್ನೂ ತಮ್ಮ ತಮ್ಮ ಹುಡುಗರ ಬಗ್ಗೆ ಅಭಿಮಾನವನ್ನೂ ತಂದು ಕೊಟ್ಟವು. ಈ ಬಡಿದಾಟವು ಮುಗಿದರೂ ಕೂಡಿದ ಜನರಿಗೆ ತೃಪ್ತಿಯಾಗಲಿಲ್ಲ! ಆದ್ದರಿಂದ ಸೇನಾಧಿಪತಿಗಳ ಅಪ್ಪಣೆಯಿಂದ ಈ ಭಯಂಕರ ಬಡಿದಾಟವು ಮತ್ತೆ ಪ್ರಾರಂಭವಾಯಿತು! ಕೊನೆಗೂ ಬಡಿದಾಟದಲ್ಲಿ ಹೊಂದಿತಿಂದವರು ತಮ್ಮ ನೋವುಗಳನ್ನು ಲೆಕ್ಕಿಸದೇ ಸಹ, ಬಡಿದಾಟದಲ್ಲಿ ಜಯ ಜಯಕಾರ ಮಾಡುತ್ತ ಧುಮ್ಮಿಕ್ಕಿ, ಈ ಬಡಿದಾಟವಲ್ಲಿ ಸೇರಿ ಡೊಣ್ಣೆಯನ್ನು ತಿರುವುತಿರುವದನ್ನು ನೋಡಿದರೆ ಕರ್ನಾಟಕದ ತರುಣರಲ್ಲಿ ಹೊಸ ಕಳೆ ರುಷ್ಟ ಒಂದಿರುವದಿಲ್ಲೆಂದು ಯಾರೂ ಹೇಳಬಹುದು? ಈ ಬಡಿದಾಟದಲ್ಲಿ ನೂರಾರು ಸ್ವಯಂಸೇವಕರು ಸುತ್ತಲಿನಿಂದ ಡೊಣ್ಣೆ ತಿರುವುತ್ತ ವೈರಿಯ ಮೇಲೆ ಏರಿ ಬರುತ್ತಿರುವಾಗ್ಯೂ, ಮಧ್ಯದಲ್ಲಿ ನಿಂತು ಶ್ರೀ. ಮಂತ್ರಿ, ಅಯ್ಯರ ಹಾಗೂ ಮಾರ್ಥಂಡರು ಆವೇಶದಿಂದ ಡೊಣ್ಣೆ ತಿರುವುತ್ತ ತಮ್ಮನ್ನು ಸಂರಕ್ಷಿಸಿ ಕೊಳ್ಳುತ್ತಿರುವಾಗ್ಗೆ ಎಲ್ಲರೂ ಅವರ ಧೈರ್ಯ ಚಾತುರ್ಯಗಳನ್ನು ಹೊಗಳಿದರು! ಶ್ರೀ. ಶರ್ಮಾ ಇವರೊಬ್ಬರೇ ಡೊಣ್ಣೆಯನ್ನು ತಿರವಿದಾಗ್ಯೆ ಶ್ರೀ. ಅಯ್ಯರರು ತಮ್ಮ ಕೈಯಲ್ಲಿ ಡೊಣ್ಣೆಯಿಲ್ಲದಿದ್ದರೂ, ಯುಕ್ತಿಯಿಂದ, ಅವರ ಮೈಮೇಲೆ ಸಾಗಿ, ಅವರ ಕೈಯಲ್ಲಿಯ ಡೊಣ್ಣೆಯನ್ನು ಕಸಿದುಕೊಂಡದ್ದನ್ನು ನೋಡಿ ಎಲ್ಲರೂ ಆಶ್ಚರ್ಯಚಕಿತರಾದರು! ಹಾನಗಲ್ಲದ ಸಣ್ಣ ಒಟುಗಳಾದ ದೇಸಾಯಿ ಹಾಗೂ ದೇಶಪಾಂಡೆಯವರ ಬಡಿಗೆಯ ಬಡಿದಾಟವು ಪ್ರೇಕ್ಷಣೀಯವಾಯಿತು. ಶ್ರೀ. ಜಟ್ಟರ ಹನುಮಾನ್ ದಂಡ "ಲೈತಕ"ಗಳನ್ನು ನೋಡಿ ಜನರು ಕೌತುಕ ಬಟ್ಟರು. ಉರಿಯುವ ಲೋಡುಗಳನ್ನು ಕೈಯಲ್ಲಿ ಹಿಡಿದು ಸ್ವಯಂಸೇವಕರು ಕವಾಯತು ಮಾಡುತ್ತಿರುವದನ್ನು ಆನಂದದಿಂದ ಎಲ್ಲರೂ ನೋಡಿದರು! ಆಸನಗಳಲ್ಲಿ ಶ್ರೀ. ನರಗುಂದ ಜಯರಾಯರಂಥ ವಯೋವೃದ್ಧ ವಕೀಲರು ಸಹ ಭಾಗ ತೆಗೆದುಕೊಂಡದ್ದೂ, ಶ್ರೀ. ಮಂಗಳವೇಢೆ ಶ್ರೀನಿವಾಸರಾಯರೂ, ಡಾ. ಳ ಹಾಗೂ ಹಳ್ಳಿಕೇರಿಯ ವಿಶೇಷ ಪ್ರಾವಿಣ್ಯವನ್ನು ತೋರಿಸಿದ್ದೂ, ಸಣ್ಣ ಹುಡುಗರು ಸ್ಕೌಟ ಚಟವಟಿಕೆಯಿಂದ ಕವಾಯತವಲ್ಲಿ ಆಸನಗಳನ್ನು ಹಾಕಿದ್ದೂ, ಎಲ್ಲರಲ್ಲಿಯೂ ಒಳ್ಳೇ ಅಭಿಮಾನ ಆನಂದಗಳನ್ನು ಹುಟ್ಟಿಸಿದವು! ಅನೇಕ ವಯೋವೃದ್ಧ ತರುಣ ಹಾಗೂ ಚಿಕ್ಕ ಹುಡುಗರು ಸಹ ತಾವೂ ಆಸನಗಳನ್ನು ಇನ್ನುಮೇಲೆ ಕಲಿಯಬೇಕೆಂದು ನಿಶ್ಚಯಿಸಿ, ತಮ್ಮ ಹೆಸರುಗಳನ್ನು ನೊಂದಾಯಿಸುತ್ತಲಿದ್ದಾರೆ! ಇದೆಲ್ಲ ಭಾವೀ ತರುಣರು ಸನ್ಮಾರ್ಗಕ್ಕೆ ಹತ್ತಿದ ಸುಲಕ್ಷಣವಲ್ಲವೇ? ಇದರಿಂದ ಹಿಂ. ಸೇ. ದಳದ ಚಟವಟಿಕೆಗಳೂ, ವ್ಯಾಯಾಮ ಮಂದಿರದ ಕಾರ್ಯಕ್ರಮವೂ ರಾಷ್ಟ್ರ-ಸಂಘಟನೆಯ ಆಗಿವೆಯೆಂಬುದು ಸಿದ್ಧವಾಗುವದಿಲ್ಲವೇ?

ಡಾ. ಹರ್ಡೀಕರರು ಸಹಾಯಕರ ಹಾಗೂ ಗುರುಗಳ ಪರಿಚಯವನ್ನು ಅಲ್ಲಿಯ ಜನರಿಗೆ ಮಾಡಿಕೊಟ್ಟು ಶಾರೀರಿಕ ಸಂವರ್ಧನೆಯ ಬಗ್ಗೆಯೂ ಸೇವಾದಲದವರು ಈ ಭಾರವನ್ನು ಹೊತ್ತ ಬಗ್ಗೆಯೂ ಹೇಳಿದರು. ಸಹಾಯಕರಿಗೆ ಪ್ರಶಸ್ತಿ ಪತ್ರಿಕೆಗಳನ್ನು ಕೊಟ್ಟಮೇಲೆ ರಾವಸಾಹೇಬ ಹಳಕಟ್ಟಿಯವರು ಆ ದಿನದ ಕಾರ್ಯಕ್ರಮವನ್ನು ನೋಡಿ ತಮಗೆ ಅತ್ಯಂತ ಆನಂದವೂ ಅಭಿಮಾನವೂ ಆಗಿತ್ತೆಂದೂ, ದೇಶದಲ್ಲೆಲ್ಲ ತರುಣರು ಅವ್ಯವಸ್ಥೆಯಿಂದ ಪಕ್ಷಗಳಿಗೆ ಬಿದ್ದು ಶಕ್ತಿಹೀನರಾಗಿರುವ ಇಂಥ ಸಮಯದಲ್ಲಿ ಒಗ್ಗಟ್ಟಾಗಿ ಕೊಟಿಸು ತರುಣರು ಉತ್ಸಾಹದಿಂದ ಶಕ್ತಿಸಂಘಟನೆಯಲ್ಲಿ ತೊಡಗಿಕೊಳ್ಳುವಂತೆ ಡಾ. ಹರ್ಡೀಕರರು ಏರ್ಪಡಿಸಿದ್ದು ಪ್ರಶಂಸನೀಯವೆಂದೂ ಹೇಳಿ, ಹಿಂ. ಸೇ. ದಲದ ಕಾರ್ಯದಬಗ್ಗೆ ವಿಸ್ತಾರವಾಗಿ ಭಾಷಣ ಮಾಡಿದರು. ಕಡೆಗೆ ದಳಪತಿ ಹೊಸಕೊಪ್ಪ ಕೃಷ್ಣರಾಯರ ಅಭಿನಂದನಪರವಾದ ಭಾಷಣ ವಾಯಿತು. ಆವೇಳೆ ಅಧ್ಯಕ್ಷರು ವಿದ್ಯಾರ್ಥಿಗಳ ವಿನಂತಿಯ ಮೇರೆಗೆ, ಶಿಕ್ಷಕರಾದ, ರಾಜಗುರು, ಮಂತ್ರಿ, ಅಯ್ಯರ, ಹಾಗೂ ಮಾರ್ಥಂಡ ಇವರಿಗೆ ಪದಕಗಳನ್ನು ಅರ್ಪಿಸಿದರು. ರಾಷ್ಟ್ರಗೀತೆಯೊಂದಿಗೆ, ಧ್ವಜಾವರೋಹಣದ ಸಮಾರಂಭವು ಒಳ್ಳೇ ವೈಭವದಿಂದಸಾಗಿ, ಆದಿನದ ಕಾರ್ಯಕ್ರಮವು ಸಮಾಪ್ತಿ ಹೊಂದಿತು.

ಕರ್ನಾಟಕ ಏಕೀಕರಣ ಪರಿಷತ್ತಿನ ಪೂರ್ವದ ಸಿದ್ಧತೆ!

ಬಾಗಲಕೋಟಗರ ಕಾರ್ಯದಕ್ಷತೆ!

ಸ್ವಾಗತ ಕಮೀಟಿಯ ನಿರ್ಮಾಣದ ಏರ್ಪಾಡು!

ಏಕೀಕರಣ ಪರಿಷತ್ತಿನ ವಾತಾವರಣವು ಊರೆಲ್ಲೆಲ್ಲ ಹಬ್ಬುವದಕ್ಕಾಗಿ ಬಾಗಲಕೋಟೆಯ ಏಕೀಕರಣ ಶಾಖಾ ಸಭೆಯು ಈ ೧೫-೨೦ ದಿನಗಳಲ್ಲಿ ಚನ್ನಾಗಿ ಪ್ರಯತ್ನಿಸಿದೆ. ಇದೇ ಉದ್ದೇಶದಿಂದ ಬಾಗಲಕೋಟೆಯ ವ್ಯಾಪಾರಸ್ಥರಸಭೆ ಸೇರಿಸಿ, ಏಕೀಕರಣಕ್ಕೂ ವ್ಯಾಪಾರಕ್ಕೂ ಇರುವ ಸಂಬಂಧವನ್ನೂ, ಕರ್ನಾಟಕದ ವ್ಯಾಪಾರಕ್ಕೆ ಏಕೀಕರಣದಿಂದಾಗುವ ಲಾಭವನ್ನೂ ಅವರಿಗೆ ತಿಳಿಸಿ ಕೊಟ್ಟದ್ದಾಯಿತು! ಬಸವೇಶ್ವರ ಹೈಸ್ಕೂಲಿನಲ್ಲಿ ಇದೇ ಉದ್ದೇಶದಿಂದ ಸಭೆ ಏರ್ಪಾಡುಮಾಡಿ ಅಲ್ಲಿಯೂ, ರಾವಸಾಹೇಬ ಹಳಕಟ್ಟಿ, ದಿವಾಕರ, ಧಾರವಾಡ ವಕೀಲರ ಭಾಷಣ

[೪ ನೇ ಪುಟಕ್ಕೆ ನೋಡಿರಿ]

ಗುಣ ಎದಿದ್ದರೆ ಹಣ ಪರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ ಗುಟಿಕಾ

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಂಗಳೂ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕೆಕೊಂಡು ಖಾತ್ರಿ ಮಾಡಿಕೊಳ್ಳಬಹುದು) ಇದರಿಂದ ಮೈಯೊಳಗಿನ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೆ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗೆ ೨-೪-೦, ೬ ಡಬ್ಬಿಗೆ ೬-೦-೦, ಇದಲ್ಲದೆ ೧ ಡಬ್ಬಿ ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ:— **ಎಸ್ ಬಿ ಕದಮ್ ಮತ್ತು ಸನ್ಸ್**
ಮು. ಪೋಸ್ಟ ನಿಪ್ಪಾಣಿ (ಜಿ. ಬೆಳಗಾವ.)

ಕರ್ನಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯುಲರ ಸ್ಕೂಲಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರುವದಕ್ಕೆ ಶಕ್ಯವಾದ್ದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಜರದ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು.

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಲೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ॥ ಲಕ್ಷ್ಮೀಬಾಯಿ ಕೋಣಣ್ಣೂರ,
ವ್ಯವಸ್ಥಾಪಕರು, ಕ. ಮ. ವಿದ್ಯಾಲಯ, ಧಾರವಾಡ.

ಟೇಬಲ್ ಟೈಂಪೀಸ್ ಇನಾಂ.

ಈ ನಕ್ಷೆಯಲ್ಲಿ ಕಂಡ ಫೌಂಟನ್ ಪೇನಾವು ಇಂಗ್ಲಂಡಿನಲ್ಲಿ



ತಯಾರಾದದ್ದು ಇದಕ್ಕೆ ೧೪ ಕರೆಟಿನ ಭಂಗಾರದಂಥ ನಿಬ್ಬು ಹಾಕಿದೆ ಈ ಪೇನಾವಿನಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚೆನ್ನಾಗಿ ಕಾಣುವವು ಈ ತಿಂಗಳೊಳಗಾಗಿ ಈ ಪೇನಾವನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೇಬಲ್ ಟೈಂಪೀಸ್ ಸಹಿತ ಪೇನಾ ೧ಕ್ಕೆ ೨-೮-೦

ವಿಳಾಸ- **ಓರಿಯಂಟಲ್ ವಾಚ್ ಕಂಪನಿ.**
ಪೋ॥ ಬಾಕ್ಸ ನಂ. ೨೭, ಮದರಾಸು.

ಬಾಗಲಕೋಟಿ, ವಿಜಾಪುರ ಮೋಟಾರ ಸರ್ವಿಸ ಪ್ರಾರಂಭವಾಗಿದೆ!

ಬೆಳಗಾವಿಗೆ ಬಾಗಲಕೋಟಿಯಿಂದ ೩॥ ರೂ. ಹಾಸಲು ಮುಕ್ರರ ಮಾಡಲ್ಪಟ್ಟಿದೆ.



ವಿಜಾಪೂರ ಜಿಲ್ಲೆಯಲ್ಲಿಯ ಮತ್ತು ಸುತ್ತು ಮುತ್ತಲಿನ ಖಾಸಗಿ ವ ಸರ್ವೀಸಿನ ಮೋಟಾರ ಮಾಲಿಕರ ತೊಂದರೆಯು ದೂರವಾಗಬೇಕೆಂದು:
ಆರ್. ಜಿ. ಚವ್ಹಾಣ ಎಂಡ ಸನ್ಸ, ಬೆಳಗಾವ. ಇವರು ತಮ್ಮ
ಜನರಲ ಮೋಟಾರ ಅಕ್ಸೆಸರಿ ಸ್ಟೋರ್ಸದ ಶಾಖೆಯನ್ನು
ತಾ॥ ೧೦ ಸಪ್ಟೆಂಬರ ೧೯೨೭ನೇ ಇಸ್ವಿಯಿಂದ ಬಾಗಲಕೋಟಿಯಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಶಿವ್ರಲೇಟ, ಓವ್ಹರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯೂಬ್ಸ, ಗ್ರೀಸ, ಮೋಬಿಲ ಆಯಿಲ್, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯ ದರದಿಂದ ಸಿಗುವವು ಒಂದು ವೇಳೆ ವ್ಯಾಪಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರದಿಂದ,

ಚಾಲಕ:— **ವಾಯ್. ಜಿ. ಚವ್ಹಾಣ.**

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಹಲ್ಕನಾಯಝಿಂಗ ಮಾಡಿ ಕೊಡುವೆವು

☞ ಬಾಗಲಕೋಟಿ-ಬೆಳಗಾವಿ, ಬಾಗಲಕೋಟಿ-ಇಳಕಲ್ಲ ಸರ್ವೀಸ ಯಥಾಪ್ರಕಾರ ನಡೆದಿದೆ

ಎಲ್ಲ ಕರ್ನಾಟಕಸ್ಥರಿಗೆ—

ಹಿಂದುಸ್ಥಾನಿ ಸೇವಾ ದಲದ ಕರ್ನಾಟಕ ಶಾಖೆಯ ವರು ನಿರ್ಣಯಿಸಿದ ೧೯೨೮ನೇ ಇಸ್ವಿಯ ಕಾರ್ಯಕ್ರಮವು

ಬರುವ ವರ್ಷ (೧೯೨೮) ದಲ್ಲಿ ನಾವು, ಕೆಳಗೆ ಸಹಿ ಮಾಡಿದ ಹಿಂದುಸ್ಥಾನೀ ಸೇವಾ ದಲದ ಕೆಲಸಗಾರರು, ನಾನಾ ಕಾರ್ಯಗಳ ರೂಪದಿಂದ ಕರ್ನಾಟಕಮಾತೆಯ ಸೇವೆಯನ್ನು ಮಾಡಬೇಕೆಂದು ಇಚ್ಛಿಸುತ್ತೇವೆ ಈ ಕಾರ್ಯದಲ್ಲಿ ರಾಷ್ಟ್ರದ ಏಳ್ಗೆಗಾಗಿ ಪ್ರಯತ್ನಿಸುವ ಬಂಧು ಭಗಿನಿಯರೆಲ್ಲರೂ ತಮ್ಮ ತಮ್ಮ ಜಿಲ್ಲೆಗಳಲ್ಲಿ ಎಲ್ಲ ರೀತಿಯಿಂದ ನಮಗೆ ಸಹಾಯ ಮಾಡಿ ನಮ್ಮಿಂದ ಸೇವೆಯನ್ನು ತೆಗೆದುಕೊಳ್ಳಬೇಕೆಂದು ಬೇಡಿಕೊಳ್ಳುತ್ತೇವೆ ನಾವು ನಮ್ಮ ಕಾರ್ಯವನ್ನು ೧೯೨೮ನೇ ಇಸ್ವಿಯ ಜನವರಿಯಿಂದ ಪ್ರಾರಂಭಿಸುವೆವು

ನಾವು ಮಾಡಬೇಕೆಂದಿರುವ ಕೆಲಸಗಳು

೧ (ಅ) ಕಾಂಗ್ರೆಸದ ಹಾಗೂ ಸೇವಾ ದಲದ ಉದ್ದೇಶಗಳನ್ನೂ ಕಾರ್ಯಕ್ರಮಗಳನ್ನೂ ಜನರಲ್ಲಿ ವ್ಯಾಖ್ಯಾನಗಳಿಂದಲೂ ಹಸ್ತಪತ್ರಿಕೆಗಳಿಂದಲೂ ಪ್ರಚಾರ ಮಾಡುವದು, (ಬ) ಕಾಂಗ್ರೆಸದ ಮೆಂಬರರನ್ನು ಮಾಡುವದು, (ಕ) ರೈತರ ತೊಂದರೆಗಳನ್ನು ವಿಚಾರಿಸಿ ವರದಿಗಳನ್ನು ಸಿದ್ಧ ಮಾಡುವದು, (ಡ) ಖಾದೀ ಪ್ರಸಾರದ ಬಗ್ಗೆ ಪ್ರಯತ್ನಿಸುವದು, (ಈ) ಹಳ್ಳಿಗಳ ಸಂಪೂರ್ಣ ಸಿದ್ಧತೆಯನ್ನು ತಿಳಿದುಕೊಂಡು ಸೇವಾ ದಲದ ಕಚೇರಿಗೆ ತಿಳಿಸುವದು.

ಈ ರೀತಿಯಿಂದ ಪ್ರತಿಯೊಂದು ಜಿಲ್ಲೆಯ ೨೦ ಹಳ್ಳಿಗಳಲ್ಲಾದರೂ ಕೆಳಗೆ ಸಹಿ ಮಾಡಿದ ಪ್ರತಿಯೊಬ್ಬನು ಕಾರ್ಯ ಮಾಡಬೇಕೆಂದು ನಿರ್ಣಯಿಸಿದ್ದೇವೆ.

೨ ಕರ್ನಾಟಕದಲ್ಲಿ ರಾಷ್ಟ್ರೀಯ ಭಾವನೆಯುಳ್ಳ ಮತ್ತು ಒಂದೇ ಶಿಸ್ತಿನಿಂದ ಕಾರ್ಯ ಮಾಡುವ ಕಲ್ಪನೆಯುಳ್ಳ ೧,೦೦೦ ಜನರನ್ನಾದರೂ ಶಾರೀರಿಕ ಮತ್ತು ಮಾನಸಿಕ ಶಿಕ್ಷಣವನ್ನು ಕೊಟ್ಟು ಸಿದ್ಧ ಮಾಡುವದು.

೩ ೧೯೨೮ರಲ್ಲಿ, ಬೇರೆ ಬೇರೆ ಕಡೆಗೆ, ಮೂರು ಸ್ವಯಂಸೇವಕ ಶಿಬಿರಗಳನ್ನು ತೆಗೆದು, ಶಿಬಿರಸ್ಥರಿಗೆ ದೊಣ್ಣೆ, ಭಲ್ಲೆ, ಮೊದಲಾದ ದೇಹಿಕ ಶಿಕ್ಷಣವನ್ನು ಕೊಡುವದಲ್ಲದೆ, ಪ್ರಥಮ ಚಿಕಿತ್ಸೆ (First aid) ಶರೀರ ಶಾಸ್ತ್ರದ ಮೂಲತತ್ವಗಳು (Principles of Physiology), ಹಿಂದುಸ್ಥಾನದ ಇತಿಹಾಸ, ಕರ್ನಾಟಕ ಇತಿಹಾಸ ಮತ್ತು ಭೂಗೋಲ, ಕರ್ನಾಟಕ ಏಕೀಕರಣ, ಕಾಂಗ್ರೆಸದ ಇತಿಹಾಸ, ರಾಷ್ಟ್ರಧ್ವಜದ ಮಹತ್ವ, ಗ್ರಾಮ ಪಂಚಾಯತಿ ಲೋಕಲ್ ಬೋರ್ಡ ಮ್ಯುನಿಸಿಪಾಲ್ಟಿಗಳ ಕರ್ತವ್ಯ ಹಾಗೂ ಕಾಯಿದೇಗಳ ಜ್ಞಾನ, ಇವೇ ಮೊದಲಾದವುಗಳ ಬೌದ್ಧಿಕ ಶಿಕ್ಷಣವನ್ನ ಕೊಡುವೆವು.

೪ ಕರ್ನಾಟಕದಲ್ಲಿ ಈ ವರ್ಷ ಮೂರಾದರೂ ಹೊಸತರದ ವ್ಯಾಯಾಮ ಮಂದಿರಗಳನ್ನು ತೆಗೆಯಲು ಪ್ರಯತ್ನಿಸುವದು; ಅಥವಾ, ಹಳೆಯ ಗರಡೀ ಮನೆಗಳಿಗೆ ಹೊಸ ಸ್ವರೂಪವನ್ನು ಕೊಡುವದು.

೫ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ನಿರ್ಣಯಿಸಿದ ಏಕೀಕರಣಕ್ಕೆ ಹಾಗೂ ೧೯೨೮ನೇ ವರ್ಷದ ಅವರ ಕಾರ್ಯಕ್ರಮಕ್ಕೆ ಶಕ್ಯವಿದ್ದಮಟ್ಟಿಗೆ ಸೇವಾ ದಲದವರು ಸಹಾಯ ಮಾಡುವದು.

೬ ಅಖಿಲ ಭಾರತ ಚರಕಾ ಸಂಘದವರು ನಮಗೆ ಹೇಳಿದ ಪಕ್ಷದಲ್ಲಿ ಕೇವಲ ಖಾದೀ ಪ್ರಸಾರದ ಕಾರ್ಯವನ್ನೇ ಒಂದು ತಿಂಗಳವರೆಗೆ ಮಾಡುವದು.

ಈ ಕಾರ್ಯದ ಪ್ರಸಾರದಲ್ಲಿ ನಮಗೆ ತಗಲುವ ಪ್ರವಾಸ, ಮುದ್ರಣ, ಶಿಬಿರಗಳು, ಟಪಾಲು ಇವೇ ಮೊದಲಾದವುಗಳ ವೆಚ್ಚಕ್ಕಾಗಿ ಏನಿಲ್ಲವೆಂದರೂ ೪,೦೦೦ ರೂಪಾಯಿಗಳು ಬೇಕಾಗಬಹುದೆಂದು ಅನಿಸುತ್ತದೆ ಈ ಧನ ಸಹಾಯವನ್ನು ಕನ್ನಡಿಗರು ಮುಕ್ತ ಹಸ್ತದಿಂದ ಮಾಡುವರೆಂಬ ನಂಬಿಗೆಯಿಂದ ನಾವು ಕಾರ್ಯಪ್ರವೃತ್ತರಾಗಿದ್ದೇವೆ.

ಈ ಕಾರ್ಯಕ್ರಮವು ಕೊನೆಗಾಣಬೇಕಾದರೆ ನಮಗೆ ಎಲ್ಲ ಕರ್ನಾಟಕಸ್ಥರ ಸಂಪೂರ್ಣ ಸಹಾಯವು ಬೇಕು. ನಾವು ತೀರ ಸಣ್ಣವರು; ಅನನುಭವಿಕರು; ದರಿದ್ರರು; ಕೇವಲ ರಾಷ್ಟ್ರಪ್ರೀತಿಯಿಂದಲೇ ಈ ಕೆಲಸಕ್ಕೆ ಹಾಕಿದ್ದೇವೆ ದೇವರ ಮೇಲೆ ವಿಶ್ವಾಸವಿಟ್ಟು ಬಂದೆಡರುಗಳಿಗೆ ಎದೆಗೊಟ್ಟು ಕೈಕೊಂಡ ಕಾರ್ಯವನ್ನು ಪೂರ್ಣಗೊಳಿಸಲು ಯತ್ನಿಸುವೆವು. ನಮಗೆ ಹಿರಿಯರ ಅನುಭವ, ಆಶೀರ್ವಾದ, ಶ್ರೀಮಂತರ ಧನಸಹಾಯವು ದೊರೆತ ಒಂದು ವರ್ಷದೊಳಗಾಗಿ ಕರ್ನಾಟಕದ ತರುಣರಲ್ಲಿ ಒಂದು ತರದ ನವಶಕ್ತಿಯನ್ನು ಹುಟ್ಟಿಸುವೆವೆಂಬ ಪೂರ್ಣ ನಂಬಿಗೆಯು ನಮಗಿದೆ.

ಕರ್ನಾಟಕಸ್ಥರ ಸೇವಕರಾದ,

೧ ದಾಮೋದರ ಮಲ್ಲಪ್ಪ ಲೇಂಗಡೆ, ಬೆಳಗಾವ
೨ ಕೃಷ್ಣರಾವ ಜಹಗೀರದಾರ, ಬಾಗಲಕೋಟೆ
೩ ಶ್ರೀನಿವಾಸರಾವ ನೀರಲಕೇರಿ, ,,
೪ ರಘುನಾಥ ಗೋಪಾಲ ಜೋಶಿ, ಆಥಣಿ
೫ ಮಂದಪ್ಪ ಕಾರ್ಯಪ್ಪ ಮಾಧಂಡ, ಕೊಡಗು
೬ ವಿಶಂಬರಯ್ಯರ್, ಬೆಂಗಳೂರ
೭ ಸುಬ್ರಮ್ಹಣ್ಯ ಶರ್ಮಾ, ಮೈಸೂರ
೮ ನಾಗೇಂದ್ರ ಕೆರೂರ, ಬಾಗಲಕೋಟೆ
೯ ರಂಗನಾಥ ನಾಯಿಕ, ರಾಣೆಬೆನ್ನೂರ
೧೦ ರಾಮಚಂದ್ರ ವೆಂಕಟೇಶ ಕರಗುದರಿ, ಹಾನಗಲ್ಲ
೧೧ ಅನಂತಭಟ್ಟ ಕಂಚಿ, ,,
೧೨ ಶಂಕರ ರಾಮಚಂದ್ರ ದೆಶಪಾಂಡೆ, ಕೊಲ್ಹಾರ
೧೩ ಅಣ್ಣಾಜಿ ಬಾಳಕೃಷ್ಣ ಮಹಾಶಬ್ದೆ, ಹುಬ್ಬಳ್ಳಿ
೧೪ ಬಿಂದು ಮಾಧವ ಬುರ್ಲಿ, ಧಾರವಾಡ
೧೫ ಶ್ರೀಕೃಷ್ಣ ರಾಮಚಂದ್ರ ಪದಕಿ, ಬಾಗಲಕೋಟೆ
೧೬ ಸೀತಾರಾಮ ಮುರಳಿ, ಹೊಸಕೊಪ್ಪ

ಈ ಪ್ರಕಾರ ವಿವರಿಸಿದ ಕಾರ್ಯಕ್ರಮವು ನಮಗೆ ಸಂಪೂರ್ಣ ಮಾನ್ಯವಿದ್ದು ಅದನ್ನು ಕೊನೆಗಾಣಿಸುವದಕ್ಕೋಸ್ಕರ ಮೇಲೆ ಸಹಿ ಮಾಡಿದವರ ಸಂಗಡ ನಾವು ಅತ್ಯಂತ ಆನಂದದಿಂದ ಕಾರ್ಯಮಾಡಲಿಕ್ಕೆ ಸಿದ್ಧರಿದ್ದೇವೆ

ಮೇಲ್ಕಾಣಿಸಿದ ಕಾರ್ಯಕ್ರಮದ ಜೊತೆಗೆ ದಲದ ಪರವಾಗಿ ಬಾಗಲಕೋಟೆ (ವಿಜಾಪೂರ ಜಿಲ್ಲೆ) ಯಲ್ಲಿ ವ್ಯಾಯಾಮ ಮಂದಿರ (Academy of Physical Culture) ದ ಕಟ್ಟಡದ ಕೆಲಸವು ನಡೆದಿದ್ದು ಅದು ೧೯೨೮ ನೇ ಜೂನ ತಿಂಗಳ ಅಖೇರದೊಳಗಾಗಿ ಮುಗಿಯಬೇಕಾಗಿದೆ. ಅದಕ್ಕೆ ಹತ್ತುವ ಹದಿನೈದು ಸಾವಿರ (೧೫,೦೦೦) ರೂಪಾಯಿಗಳನ್ನು ಕೂಡಿಸುವದಕ್ಕೆ ಎಲ್ಲ ಕರ್ನಾಟಕಸ್ಥರು ಉದಾರ ಬುದ್ಧಿಯಿಂದ ಧನಸಹಾಯ ಮಾಡುವರೆಂದು ನಾವು ಪೂರ್ಣ ನಂಬಿದ್ದೇವೆ.

ರಾ ಕೃ. ಶೆವಡೆ — ಕೋಶಾಧ್ಯಕ್ಷ

ಹೊಸಕೊಪ್ಪ ಕೃಷ್ಣರಾವ — ದಲಪತಿ

ನಾ. ಸು. ಹರ್ಡೀಕರ — ಕಾರ್ಯದರ್ಶಿ

ಪತ್ರವ್ಯವಹಾರ

೧ ಆಯುರ್ವೇದವೂ ಅಮಾತ್ಯ ಚಾಣಕ್ಯರು.

ಕನ್ನಡಿಗನ ೨೯ನೇ ಸಂಚಿಕೆಯಲ್ಲಿ ಒಬ್ಬ ಚಾಣಕ್ಯರು ೧೮-೯-೨೭ ಕಮಿಟಿ ಮೀಟಿಂಗಿನಲ್ಲಿ ಅಧ್ಯಕ್ಷರು ಉಪಾಧ್ಯಕ್ಷರು ಸೇರಿ ಮನ ಬಂದಂತೆ ತಿದ್ದುಪಡಿ ಮಾಡಿದ್ದಾರೆಂದು ಪ್ರಕಟಪಡಿಸಿದ್ದಾರೆ.

ಹಿಂದಿನ ಠರಾವುಗಳನ್ನೇನೂ ತಿದ್ದಿರುವುದು ನಿಶ್ಚಯ. ಆದರೆ? ಆ ಕಾಲದಲ್ಲಿ ಹಾಜರಿದ್ದವರು ಟೀಕಿಸಲಿಲ್ಲವೇಕೆ? ಹಾಜರಿದ್ದ ಮ|| ರ|| ರಾ|| ಸವಣೂರವರು ಮತ್ತು ವಿದ್ವಾನ್ ಶೇಷಶಾಸ್ತ್ರಿಗಳವರೇ ಕರ್ನಾಟಕದಲ್ಲಿ ಆಯುರ್ವೇದದ ಚಳವಳಿಯನ್ನೆಬ್ಬಿಸಿದ ಮುಂದಾಳುಗಳು ಎಂದರಿಂದಲೂ; ಮ|| ರಾ|| ಲಕ್ಷ್ಮೀನರಸಿಂಹಯ್ಯಂಗಾರರು ಪರೀಕ್ಷಾಧಿಕಾರಿಗಳಾದುದರಿಂದಲೂ; ಇವರೆಂದಿಗೂ ತಿದ್ದಲಿಕ್ಕೆ ಮತಕೊಡಲಾರರೆಂದು ಚಾಣಕ್ಯರ ಆಶಯವಿರಬಹುದು.

ಆಯುರ್ವೇದ ಭೂಷಣ ಎಂ. ವಿ. ಶಾಸ್ತ್ರಿಗಳಾದರೂ? ಬದಲಾವಣೆಗೆ ಸ್ವತಂತ್ರಿಸಿಕ್ಕೆ ಹಾಕಲಾರರೆಂಬುದು ನನ್ನ ಆಶಯವಿದೆ. ಹಾಗಾದರೆ ಉಳಿದ ಒಬ್ಬ ವ್ಯಕ್ತಿಯ ಮಾತಿನಿಂದಲೇ ಬದಲಾವಣೆಗೆ ಅವಕಾಶವಾಗಿರಬಹುದೆ? ಆಶ್ಚರ್ಯ! ಹಾಗಾದರೆ ಮುಂದಾಳುಗಳೇಕೆ ಸುಮ್ಮನೆ ಕುಳಿತಿದ್ದರು.

ಅಧ್ಯಕ್ಷರು ತಮ್ಮ ಪದವಿಯಲ್ಲಿ ಇರಲು ಲಕ್ಷ ಇಲ್ಲವಂತೆ! ಇರುವುದರಿಂದ ಅವರಿಗೆ ಆಗಬೇಕಾದ್ದೇನು "ಉಪಾಧ್ಯಕ್ಷರಿಗೆ ಯಾವ ಪಾಸು ಆಗಿಲ್ಲವಂತೆ" ಇದರ ಗೊಡವೆ ಚಾಣಕ್ಯರಿಗೇಕೆ ಮರಾಠಿಗರನ್ನು ಸೇರಿಸಕೂಡದಿತ್ತಂತೆ. ಮರಾಠಿಗರು ಕನ್ನಡಿಗರನ್ನೆಲ್ಲಿಯೂ ಸೇರಿಸಿಕೊಂಡಿಲ್ಲವೋ? ಇದೆಂಥ ಭೇದಭಾವ! ಒಬ್ಬನಲ್ಲಿ ಭಾರತ ಸಮ್ಮೇಳನದ ಭಿಷಕ್ ಪರೀಕ್ಷೆ ಇರುವ ವರೆಗೂ ನಮಗೆ ವಿದ್ಯಾಪೀಠದಿಂದ ಆಗಬೇಕಾದ್ದೇನು ಇಲ್ಲ. ಇದಕ್ಕೆ ಚಾಣಕ್ಯರು ಏನು ಹೇಳುವರು

ಅಮಾತ್ಯ.

ಶಿಕ್ಷಕರೂ ವ್ಯಾಯಾಮಶಾಲೆಯೂ.

ಈ ಊರಲ್ಲಿ ಇಡೀ ಕರ್ನಾಟಕದ ಪೈಕಿಯಿಂದ ಹಿಂದುಸ್ಥಾನೀ ಸೇವಾದಳದ ಕರ್ನಾಟಕ ಶಾಖೆಯವರು ಒಂದು ವ್ಯಾಯಾಮ ಮಂದಿರವನ್ನು ಕಟ್ಟಿಸುವ ನಿರ್ಧಾರ ಮಾಡಿರುವರಷ್ಟೇ? ಇದನ್ನು ಈ ಊರಲ್ಲಿ ಕಟ್ಟಿಸಬೇಕೆಂದು ನಿರ್ಣಯಿಸಿದ್ದಕ್ಕಾಗಿ ನಾವೆಲ್ಲರೂ ಶ್ರೀ ಹರ್ಡೀಕರ ನಾಯಕರಿಗೆ ಚಿರ ಋಣಿಯಾಗಿದ್ದೇವೆ. ಆದರೆ ಇಲ್ಲಿಯ ಪ್ರಾಥಮಿಕ ಶಿಕ್ಷಕರು ಈ ವ್ಯಾಯಾಮಶಾಲೆಯ ಕಡೆಗೂ ಹಾಗೂ ಅದರಲ್ಲಿ ನಡೆಯುವ ವ್ಯಾಯಾಮ ಶಿಕ್ಷಣದ ಕಡೆಗೂ ಅನಾಸ್ಥೆಯನ್ನು ತೋರಿಸುತ್ತಿರುವುದು ಅತಿಶಯ ಆಶ್ಚರ್ಯದ ಮಾತಾಗಿದೆ. ಈ ವ್ಯಾಯಾಮ ಮಂದಿರದ ಲಾಭವು ನಮ್ಮಲ್ಲಿಯ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಆಗತಕ್ಕದ್ದಿರುವದರಿಂದ, ಈ ವಿಷಯದಲ್ಲಿ ಶಿಕ್ಷಕರು ಮುಂದಾಗಿ ಯತ್ನಮಾಡುವದು ಅವರ ಕರ್ತವ್ಯವಾಗಿದೆ. ಹೀಗಿದ್ದು, ಕೆಲವು ಶಿಕ್ಷಕರು ಅವಿಚಾರದಿಂದ ಈ ಸತ್ಕಾರ್ಯಕ್ಕೆ ವಿಘ್ನ ಉಂಟಾಗುವಂತೆ ಆಚರಿಸುತ್ತಿರುವರೆಂತಲೂ, ಈ ಕಾರ್ಯಕ್ಕೆ ಸಹಾಯ ಮಾಡುವವರನ್ನು ದೂಷಿಸುತ್ತ ತಿರುಗುವರೆಂದೂ ನಮ್ಮ ಕೇಳಿಕೆಯಲ್ಲಿ ಬಂದಿರುವದು. ಇದು ನಿಜವಿದ್ದರೆ, ಇಂಥ ಶಿಕ್ಷಕರು ಕೂಡಲೇ ತಮ್ಮ ವೃತ್ತಿಗೆ ರಾಜೀನಾಮೆಯನ್ನು ಕೊಡಬೇಕೆಂದೂ ಅಥವಾ ಮುನಿಸಿಪಾಲಿಟಿಯವರು ಇಂಥ ಶಿಕ್ಷಕರನ್ನು ಚನ್ನಾಗಿ ಬುದ್ಧಿಗಲಿಸಬೇಕೆಂದೂ ನಾವು ಹೇಳಬಲ್ಲೆವು. ವ್ಯಾಯಾಮ ಶಿಕ್ಷಣದ ಕೆಲಸದಕ್ಕ ಹೀಗೆ ವರ್ತಿಸುವವರು ವಿದ್ಯಾರ್ಥಿಗಳ ಶಿಕ್ಷಣ ಕಾರ್ಯಕ್ಕೆ ನಿರುಪಯೋಗಿಯಾಗಿರುವರೆಂದು ಬೇರೆ ಹೇಳುವ ಕಾರಣವಿಲ್ಲ. ಕೆಲ ಜನ ಇಂಥ ಶಿಕ್ಷಕರ ವರ್ತನದಿಂದ ಡಾ|| ಹರ್ಡೀಕರರು ಬಹಳವಾಗಿ ನೊಂದುಕೊಂಡಿರುವರೆಂದೂ ಸುದ್ದಿಯುಂಟು. ಏನೇ ಇರಲಿ. ವಿದ್ಯಾರ್ಥಿಗಳ ವ್ಯಾಯಾಮ ಶಿಕ್ಷಣದ ಕಡೆಗೆ ಲಕ್ಷ್ಯಗೊಡದಿದ್ದ ಶಿಕ್ಷಕರು ಮ್ಯುನಿಸಿಪಾಲಿಟಿಯನ್ನು, ಜನರನ್ನು ವಂಚಿಸಿ ಪಗಾರ ತೆಗೆದುಕೊಳ್ಳುತ್ತಿರುವರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇನ್ನು ಮುಂದಾದರೂ ಇವರು ತಮ್ಮ ವರ್ತನವನ್ನು ತಿದ್ದಿಕೊಳ್ಳುವರೋ ಇಲ್ಲವೋ ಎಂಬುದನ್ನು ನಾವು ನಿರೀಕ್ಷಿಸುತ್ತಿರುವೆವು.

—ನಗರವಾಸಿ

೩. ಪಾಟೀಲರ ಸಂಘವು ಎಲ್ಲಿದೆ?

ವಿಜಾಪೂರ ಜಿಲ್ಲೆಯ ಪಾಟೀಲರ ಸಂಘವು ೧೯೨೨ ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿರುವದೆಂದು ಕೇಳಿಕೆಯಲ್ಲಿರುವದೇ ಹೊರತು ಕಾರ್ಯವೇನೂ ಕಂಡು ಬರುವದಿಲ್ಲ. ಈ ಸಂಘದ ಉದ್ದೇಶ ವ್ಯವಹಾರಗಳನ್ನು ತಿಳಿದುಕೊಳ್ಳಬೇಕೆಂದು ನಮ್ಮ ತಾಲೂಕಿನ ಪಾಟೀಲರು ಮುಂದಾಳುಗಳು ಸಾರ್ವಜನಿಕ ಸಂಸ್ಥೆಯ ಉಪಾಧ್ಯಕ್ಷರೂ ಲೋಕಲ್ ಬೋರ್ಡ ವ್ಹಾಯಿಸ ಪ್ರೆಸಿಡೆಂಟರೂ ಆದ ಪಾಟೀಲ ಬಾಬಾಸಾಹೇಬ ಗೌಡರನ್ನು ಕಂಡು ವಿಚಾರಿಸಲಾಗಿ ಅವರು "ಪಾಟೀಲರ ಸಂಘದ ಅಸ್ತಿತ್ವದ ಬಗೆಗೆ ನನಗೆ ಏನೂ ಗೊತ್ತಿಲ್ಲ. ಯಾವದಾದರೊಂದು ಪತ್ರಿಕೆಯ ಮುಖದಿಂದ ಕೇಳಿಕೊಳ್ಳಬೇಕು. ಮತ್ತು ನಾವೂ ಅದನ್ನೇ ವಿಚಾರಿಸುವೆವು" ಎಂದು ಹೇಳಿದರು. ಇಂಥ ಮುಂದಾಳುಗಳಿಗೂ ಅರಿಯದಂತೆ ನಡೆಯುವ ಸಂಸ್ಥೆಯಿಂದ ಯಾರಿಗೆ ಏನಾಗಬೇಕು? ಇರಲಿ. ಪಾಟೀಲರ ಸಂಘವು ಈ ವರೆಗೆ ಅಸ್ತಿತ್ವದಲ್ಲಿದ್ದುದಾದರೆ ಕೆಳಗಿನ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಗಳನ್ನು ಕೊಡಬೇಕಾಗಿ ಕೇಳಿಕೆ.

೧ ಪಾಟೀಲರ ಸಂಘವು ಎಂದು; ಯಾರಿಂದ; ಯಾವ ಉದ್ದೇಶದಿಂದ ಸ್ಥಾಪಿಸಲ್ಪಟ್ಟಿತು?

೨ ಅಧ್ಯಕ್ಷ ಉಪಾಧ್ಯಕ್ಷ, ಕೋಶಾಧ್ಯಕ್ಷರು ಯಾರು?

೩ ಸಂಘವು ಸ್ಥಾಪಿಸಲ್ಪಟ್ಟಮೇಲೆ ಸಂಘಕ್ಕಾಗಿ ವರ್ಗಣಿರೂಪದಿಂದ ಹಣವನ್ನು ಕೂಡಿಸಲು ಪ್ರಯತ್ನಪಟ್ಟಿರುವದೇನು? ಹಣಕೂಡಿಸಿದ್ದರೆ ಎಷ್ಟು? ಅದರ ಆಯವ್ಯಯಗಳ ವಿವರವೇನು?

೪ ಪಾಟೀಲ ಸಂಘದವರು ತಮ್ಮ ಸಂಘಶಕ್ತಿಯಿಂದ ಬ್ರಿಟಿಷ ಸರಕಾರಕ್ಕೆ ಯಾವ ಯಾವ ಸಹಾಯವನ್ನು ಮಾಡಿರುವರು? ಮತ್ತು ಸರಕಾರದವರಿಂದ ಯಾವ ಯಾವ ಸವಲತ್ತುಗಳನ್ನು ದೊರಕಿಸಿಕೊಂಡಿರುವರು?

೫ ಹಳ್ಳಿಗಾಡದ ಪಾಟೀಲರು ಪರವ ತೊಂದರೆಗಳನ್ನು ತಪ್ಪಿಸಲು ಸಂಘವು ಏನು ಯೋಜನೆ ಮಾಡಿರುವದು?

೬ ಪಾಟೀಲರ ಮಕ್ಕಳು ಸಾಕಷ್ಟು ಜ್ಞಾನಾರ್ಜನಗಳನ್ನು ಅಭ್ಯಾಸ ಮಾಡಲು ಏನಾದರೂ ಸಹಾಯ ಸೌಕರ್ಯಗಳನ್ನು ಸಂಘದವರು ಕಲ್ಪಿಸಿರುವರೇನು?

ಪಾಟೀಲರ ಸಂಘವು ಈಗ ಅಸ್ತಿತ್ವದಲ್ಲಿರದಿದ್ದರೆ—

೭ ಈ ಸಂಘವು ಸ್ಥಾಪಿಸಲ್ಪಡದೆ ಬರೀ ಪಾಟೀಲರು ಸಭೆಸೇರಿ ಬಿಟ್ಟದುದಾಯಿತೇ ಹೇಗೆ?

೮ ಸ್ಥಾಪಿಸಲ್ಪಟ್ಟಿದ್ದರೆ ಹೀಗೆ ಹೇಳಹೆಸರಿಲ್ಲದೆ ಮಾಯವಾಗಲು ಕಾರಣವೇನು?

೯ ಈ ಸಂಘವನ್ನು ಸ್ಥಾಪಿಸಲು ಸಭೆಸೇರಿದ ಮುಂದಾಳುಗಳು ಯಾರು? ಮತ್ತು ಈ ಕಾರ್ಯವನ್ನು ಅಲಕ್ಷ್ಯಿಸಲು ಕಾರಣವೇನು?

೧೦ ಪುನಃ ಪಾಟೀಲರ ಸಂಘವು ಅಸ್ತಿತ್ವದಲ್ಲಿ ಬರಲು ಏನು ಪ್ರಯತ್ನ ನಡೆಸಿರುವರು? ಇತ್ಯಾದಿ ಸಂಪೂರ್ಣವಾಗಿ ಸಂಘದ ಸಂಗತಿಯನ್ನು "ಕನ್ನಡಿಗ" ನ ಮುಖದಿಂದ ಪ್ರಸಿದ್ಧಪಡಿಸಬೇಕು.

ಈ ಪಾಟೀಲರ ಸಂಘದ ಸ್ಥಾಪನೆಗಾಗಿ ಹಸ್ತಪತ್ರಗಳನ್ನೂ ಸಂಘದ ನಿಯಮಾವಲಿಯನ್ನೂ ಅಚ್ಚು ಹಾಕಿಸಿ ಹಂಚಲ್ಪಟ್ಟಿದ್ದರೆ, ಅವುಗಳ ಒಂದೊಂದು ಪ್ರತಿಗಳನ್ನು ಶ್ರೀ ಪಾಟೀಲ ಬಾಬಾಸಾಹೇಬ ಗೌಡರು ಇಂಡಿ ಈ ವಿಳಾಸಿಗೆ ರವಾನಿಸಬೇಕು. ಅವರು ಅವುಗಳನ್ನು ನೋಡಿಕೊಂಡು ಸಂಘಶಕ್ತಿಯನ್ನು ಬೆಳೆಯಿಸಲು ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ವತನದಾರರ ಕಲ್ಯಾಣಕ್ಕಾಗಿ ಅವರು ಹೆಚ್ಚಿನ

ನಿರ್ಧಾರವನ್ನು ಮಾಡಲು ವತನದಾರರ ಮುಂದಾಳುಗಳಾಗಿ ಬೇಗನೆ ಪಾಟೀಲರ ಸಂಘವನ್ನು ಸುವ್ಯವಸ್ಥಿತರೀತಿಯಿಂದ ನಡೆಯಿಸಲು ಸಿದ್ಧರಿದ್ದಾರೆ. ಎಲ್ಲ ಪಾಟೀಲ ಬಂಧುಗಳು ಇತ್ತಕಡೆಗೆ ಹೆಚ್ಚಾಗಿ ಲಕ್ಷ್ಯ ಕೊಟ್ಟು ಪಾಟೀಲರ ಸಂಘದ ಬೆಳವಣಿಗೆಯನ್ನು ಮಾಡಿ ತಮ್ಮ ಕುಂದು ಕೊರತೆಗಳನ್ನು ದೂರಮಾಡಿಕೊಳ್ಳಲು ಪ್ರಯತ್ನ ಮಾಡಬೇಕೆಂದು ನನ್ನ ವಿನಯದ ಸೂಚನೆಯನ್ನು ನಿಮ್ಮಮುಂದೆ ಇಟ್ಟಿರುತ್ತೇನೆ.

ವತನದಾರರ ಬಂಧು,

ಎನ್. ಪಾಟೀಲರು.

ಯೋಗಾಸನಗಳು.

ಲೇ:— ವೈ. ವಂ. ಮಠದ.

आसनस्य फलान्वीक्ष्य प्रथमं नाडिशोधनं ॥
द्वितीयं शारीरारोग्यं तृतीयं चांगलाघवं ॥

ಅರ್ಥವು— " ಆಸನಗಳಿಂದ ನಾಡಿಗಳ ಸಂಶೋಧನವೂ ಆರೋಗ್ಯವೂ ಚಾಂಚಲ್ಯವೂ ಪ್ರಾಪ್ತವಾಗುವವು "

ವ್ಯಾಯಾಮದ ಮುಖ್ಯೋದ್ದೇಶವು ಶರೀರದೊಳಗಿನ ರಕ್ತನಾಳಗಳೂ ಸ್ನಾಯುಗಳೂ ಶುದ್ಧವಾಗಿ, ರಕ್ತಾಭಿಸರಣವು ಜೋರಿನಿಂದ ಸಾಗಿ, ಹೃದಯವೂ (ಹಾರ್ಟವೂ) ಪುಪ್ಪುಸವೂ (ಲಂಗ್ಸಗಳೂ) ಆರೋಗ್ಯವನ್ನು ಹೊಂದಲೆಂದಿರುವದು. ಇದು ಸ್ಮರಿಸಬೇಕಾದದ್ದು. ನಾವು ಮಾಡುವ ವ್ಯಾಯಾಮದಿಂದ ರಕ್ತಾಭಿಸರಣಕ್ಕೆ ಉತ್ತೇಜನವು ದೊರೆತು, ಅದು ಜೋರಿನಿಂದ ಶರೀರದೊಳಗಿನ ಎಲ್ಲ ಅವಯವಗಳಲ್ಲಿ ಹರಿದಾಡಬೇಕು. ಸೂಕ್ಷ್ಮ ರಕ್ತವಾಹಿನಿಗಳೆಂದು ಕರೆಯಲ್ಪಡುವ " ಕ್ಯಾಪಲರಿ " ಗಳಲ್ಲಿಯೂ ರಕ್ತಾಭಿಸರಣವು ಜೋರಿನಿಂದ ನಡೆಯಬೇಕು. ಸ್ನಾಯುಗಳಿಗೆ ಗತಿಯನ್ನು ಕೊಡುವ ವ್ಯಾಯಾಮಕ್ಕಿಂತ ಸ್ನಾಯುಗಳ ದೀರ್ಘೀಕರಣವನ್ನು ಮಾಡುವ ವ್ಯಾಯಾಮದಿಂದಲೇ ರಕ್ತಾಭಿಸರಣಕ್ಕೆ ಉತ್ತೇಜನವು ದೊರೆತು ಸ್ನಾಯುಗಳ ಬುದ್ಧೀಕರಣಕ್ಕೆ ಸಹಾಯವಾಗುವದು. ಶರೀರಾವಯವಗಳ ಚಲನವನು ಆಸನದಿಂದ ಮಾಡಿದರೆ ಸ್ನಾಯುಗಳಿಗೆ ಗತಿಯು ಹುಟ್ಟುವದು. ಉದಾಹರಣೆಗೆ ಸ್ನಾಯುಗಳಿಗೆ ಗತಿಯನ್ನು ಕೊಡುವ ವ್ಯಾಯಾಮಗಳಾಗಿವೆ. ಶರೀರದ ಎಲ್ಲ ಅವಯವಗಳನ್ನು ಒಂದು ವಿಶಿಷ್ಟವಾದ ಸ್ಥಿತಿಯಲ್ಲಿ ಚಲಿಸದಿರುವಂತೆ ಸ್ಥಿರವಾಗಿಟ್ಟರೆ ಸ್ನಾಯುಗಳ ದೀರ್ಘೀಕರಣವಾಗುವದು. ಈ ಪದ್ಧತಿಯಂತೆ ವ್ಯಾಯಾಮವನ್ನು ಮಾಡುವದಕ್ಕೆ ಯೋಗಾಸನಗಳೆನ್ನುವರು. ಯೋಗಾಸನಗಳನ್ನೇ ಮೇಲಿಂದ ಮೇಲೆ ಹಾಗೂ ಅವಸರದಿಂದ ಮಾಡಿದರೆ ಅದರಿಂದ ಸ್ನಾಯುಗಳ ದೀರ್ಘೀಕರಣವಾಗದೆ ಅವುಗಳಿಗೆ ಗತಿಯು ಹುಟ್ಟುವದು. ಕಾರಣ ಯಾವದೊಂದು ಆಸನವನ್ನು ಒಂದೆರಡು ಸೆಕೆಂಡುಗಳಲ್ಲಿ ಮುಗಿಸಿದರೆ ತೀರಲಿಲ್ಲ. ಅದನ್ನು ೫ ರಿಂದ ೧೫ ಮಿನಿಟುಗಳ ವರೆಗೆ ಮಾಡಬೇಕು. ಆಸನಗಳ ಅಭ್ಯಾಸವನ್ನು ಮಾಡುವವರು ಪ್ರಾರಂಭಕ್ಕೆ ೪-೬ ಸೆಕೆಂಡುಗಳವರೆಗೆ ಒಂದೊಂದು ಆಸನವನ್ನು ಮಾಡಬೇಕು. ರೂಢಿಯಾದಂತೆ ವೇಳೆಯನ್ನು ಹೆಚ್ಚಿಸಬೇಕು. ಯಾವದೊಂದು ಆಸನದಿಂದ ಶರೀರದೊಳಗಿನ ಎಲ್ಲ ಸ್ನಾಯುಗಳೂ ರಕ್ತನಾಳಗಳೂ ಉತ್ತೇಜಿತವಾಗುವದಿಲ್ಲ. ಕಾರಣ ಹಲವು ಬಗೆಯ ಆಸನಗಳನ್ನು ಮಾಡಬೇಕು. ಅಶಕ್ತವಾದ ಹೃದಯವುಳ್ಳವರು (ಹಾರ್ಟ ವೀಕವಿದ್ದವರು) ಹಾಸಿಗೆಯಲ್ಲಿ ಮಲಗಿಕೊಂಡ ಸ್ಥಿತಿಯಲ್ಲಿಯೇ ಶಕ್ಯವಿದ್ದ ಆಸನಗಳನ್ನು ಮಾಡಬೇಕು. ಅಂಥವರು ಶೀರ್ಷಾಸನದಂಥ ಆಸನಗಳನ್ನು ಮಾಡಕೂಡದು. ಯೋಗಾಸನಗಳನ್ನು ಎಲ್ಲ ವರ್ಣದವರೂ, ಎಲ್ಲ ಅವಸ್ಥೆಗಳುಳ್ಳವರೂ (ಬಾಲಕರೂ, ತರುಣರೂ, ವೃದ್ಧರೂ) ಸ್ತ್ರೀಪುರುಷರೆಂಬ ಭೇದವಿಲ್ಲದೆ ಮಾಡಬಹುದು. ಸ್ತ್ರೀಯರು ಗರ್ಭಧಾರಣೆಯ ಪೂರ್ವದಿಂದ ಆಸನಗಳನ್ನು ಮಾಡುತ್ತಿದ್ದರೆ ಅವರಿಗೆ ಪ್ರಸೂತಿಯ ಕಾಲದಲ್ಲಿ ಬಹಳ ಕಷ್ಟವಾಗುವದಿಲ್ಲವೆಂದು ತಜ್ಞರು ಹೇಳುವರು.

ನಮ್ಮ ಪೂರ್ವಜರಾದ ಋಷಿವರ್ಯರು ಸ್ನಾಯುಗಳ ದೀರ್ಘೀಕರಣವನ್ನು ಮಾಡುವ ಯೋಗಾಸನಗಳನ್ನು ಗೊತ್ತು ಹಚ್ಚಿದರು. ಹಾಗು ಯಾವ ಆಸನದಿಂದ ಶರೀರದೊಳಗಿನ ಯಾವ ಸ್ನಾಯುಗಳೂ ರಕ್ತನಾಳಗಳೂ ಉತ್ತೇಜಿತವಾಗುವವು? ಅದರಿಂದ ಶರೀರದ ವ್ಯಾಪಾರದ ಮೇಲೆ ಯಾವ ಪರಿಣಾಮಗಳಾಗುವವು? ಎಂಬುದನ್ನು ಸೂಕ್ಷ್ಮವಾಗಿ ಪರಿಶೋಧಿಸಿ ಹಲವು ಬಗೆಯ ವ್ಯಾಧಿಗಳನ್ನು ಹೋಗಲಾಡಿಸುವ ಆಸನಗಳನ್ನು ಗೊತ್ತುಹಚ್ಚಿದರು. ಔಷಧಗಳಿಂದ ವ್ಯಾಧಿಗಳ ನಿವಾರಣವಾಗುವದೇನೋ ನಿಜ. ಆದರೆ ಯೋಗಾಸನಗಳಿಂದ ವ್ಯಥಿತವಾದ ಅವಯವಗಳು ಬಲವುಳ್ಳವುಗಳಾಗಿ ಅವುಗಳಲ್ಲಿ ರೋಗನಿವಾರಕಶಕ್ತಿಯು ಹುಟ್ಟುವದು. ಅದ್ದರಿಂದಲೇ ಔಷಧಿಯನ್ನು ಸ್ವೀಕರಿಸುವದನ್ನು ಬಿಟ್ಟ ಕೂಡಲೇ ಅಲ್ಪ ಸ್ವಲ್ಪ ಕಾರಣದಿಂದ ಸಹ ಅದೇ ಬೇನೆಯು ಮರಳಿ ಬರುವದು. ಇದಲ್ಲದೆ ಯಾವದೊಂದು ಔಷಧಿಯನ್ನು ಬಹುಕಾಲ ಸೇವಿಸಿದರೆ ಅದರೊಳಗಿನ ರೋಗನಿವಾರಕ ಶಕ್ತಿಯು ಕಡಿಮೆಯಾಗಿ ಅದು ಆ ಮನುಷ್ಯನ ಆಹಾರವಾಗುವದು. ಇದಲ್ಲದೆ ಔಷಧಗಳಿಗೆ ಬೆಲೆ ಕೊಡುವದು. ಕಾರಣ ಬಡವರಿಗೆ ಔಷಧಗಳನ್ನು ಕೊಳ್ಳಲು ಕಷ್ಟವೆನಿಸುವದು. ಆಸನಗಳಿಂದ ರೋಗಯುಕ್ತ ಅವಯವಗಳ ಶುದ್ಧೀಕರಣವಾಗಿ ಅವು ಬಲಪಡುವವು. ಕಾರಣ ಯೋಗಾಭ್ಯಾಸಿಗಳು ನಿರೋಗಿಗಳೂ ದೀರ್ಘಾಯುಷಿಗಳೂ ಆಗಿರುವರು. " ಥೈರಾಯಿಡ್ ಗ್ಲಾಂಡ " (Thyroid Gland) ಎಂಬ ಗ್ರಂಥಿಗಳು ನಮ್ಮ ಕುತ್ತಿಗೆಯಲ್ಲಿರುವವು. ಈ ಗ್ರಂಥಿಗಳಿಂದ (ಗಂಟಗಳಿಂದ) ಹೊರಡುವ ರಸದಿಂದ ರಕ್ತವು ಶುದ್ಧವಾಗಿ ರೋಗನಿವಾರಕ ಶಕ್ತಿಯು ಹೆಚ್ಚುವದು. ಈ ಗ್ರಂಥಿಗಳೊಳಗಿಂದ ರಸವು ಹೋಗದಿದ್ದರೆ ಅಥವಾ ಅಲ್ಲದೆ ಕಡಿಮೆಯಾಗಲು ರೋಗಗಳು ಹುಟ್ಟುವವು. ಕಾರಣ ಮಂಗಗಳ ಕೊರಳಲ್ಲಿದ್ದ " ಥೈರಾಯಿಡ್ ಗ್ಲಾಂಡ್ಸ "ಗಳನ್ನು ತೆಗೆದು ಅದರ ಸತ್ವದಿಂದ ಇಂಜಕ್ಶನ್ನು ಮಾಡಿದರೆ ವಾರ್ಧಕ್ಯವು ನಾಶವಾಗಿ ತಾರುಣ್ಯವು ಪ್ರಾಪ್ತವಾಗುವದೆಂದು ಆಧುನಿಕ ಪಾಶ್ಚಾತ್ಯ ಶಾಸ್ತ್ರಜ್ಞರು ಹೇಳುವರು. ಆದರೆ " ಥೈರಾಯಿಡ್ ಗ್ಲಾಂಡ್ಸ "ಗಳನ್ನು ಸಂಘರ್ಷಿಸಿ ಅವುಗಳಿಂದ ರಸಹೋಗುವಂತೆ ಮಾಡುವ ಉಪಾಯವನ್ನು ಆಧುನಿಕ ಶಾಸ್ತ್ರಜ್ಞರು ಹೇಳುವದಿಲ್ಲ. ಯೋಗಾಸನದಲ್ಲಿಯ " **ಸರ್ವಾಂಗ** " ಎಂಬ ಆಸನದಿಂದ " ಥೈರಾಯಿಡ್ ಗ್ಲಾಂಡ್ಸ "ಗಳು ಬಲವುಳ್ಳವುಗಳಾಗಿ ಮನುಷ್ಯನಿಗೆ ತಾರುಣ್ಯವು ಪ್ರಾಪ್ತವಾಗುವದು. ಕೆಲವು ಯೋಗಾಸನಗಳಿಂದ ಮಜ್ಜಾತಂತುಗಳು (ನರವ್ಹ್ಸ್‌ಗಳು) ಬಲವುಳ್ಳವುಗಳಾಗುವವು. ಕಾರಣ ಯೋಗಾಸನಿಗಳು ಬುದ್ಧಿವಂತರಾಗಿದ್ದು ಏಕಾಗ್ರಚಿತ್ತದಿಂದ ಬಹಳ ಹೊತ್ತು ಕೆಲಸ ಮಾಡಲು ಸಮರ್ಥರಾಗುವರು.

ಜಟ್ಟಿಗಳು ಮಾಡುವ ವ್ಯಾಯಾಮದಿಂದ ಶರೀರದೊಳಗಿನ ಕೆಲವು ಸ್ನಾಯುಗಳಿಗೆ ಮಾತ್ರ ಹಲವು ಸಾರೆ ಗತಿಯು ಕೊಡಲ್ಪಡುವದು. ಆದರಿಂದ ಅಲ್ಲಿ ರಕ್ತದ ಆಧಿಕ್ಯವಾಗುವದು. ಕಾರಣ ರಕ್ತದ ಒತ್ತುವಿಕೆಯಿಂದ (Blood pressure) ಅಲ್ಲಿನ ಸೂಕ್ಷ್ಮ ರಕ್ತನಾಳಗಳೂ ಮಜ್ಜಾತಂತುಗಳೂ ಹರಿದು ಗಂಟುಗಟ್ಟುವವು. ಕಾರಣ ಜಟ್ಟಿಗಳ ಬಾಹುಗಳು ದೊಡ್ಡವಾಗಿ ಬಲವುಳ್ಳವುಗಳಾಗುವವು. ಆದರೆ ಅವರಲ್ಲಿ ಆರೋಗ್ಯವು ಹೆಚ್ಚುವದಿಲ್ಲ. ಅದಲ್ಲದೆ ಸ್ನಾಯುಗಳಿಗೆ ಗತಿಯನ್ನು ಕೊಡುವ ಈ ವ್ಯಾಯಾಮದಿಂದ ಅವರ ಹೃದಯವು (ಹಾರ್ಟವು) ಅಶಕ್ತವಾಗುವದು. ರಕ್ತನಾಳಗಳು ಶುದ್ಧವಾಗಬೇಕಾದರೆ ಅವುಗಳಲ್ಲಿ ರಕ್ತದ ಪ್ರವಾಹವು ಜೋರಿನಿಂದ ಹರಿಯಲಿಕ್ಕೇ ಬೇಕು. ಸ್ನಾಯುಗಳ ದೀರ್ಘೀಕರಣವನ್ನು ಮಾಡುವ ಆಸನಗಳ ವ್ಯಾಯಾಮದಿಂದ ರಕ್ತನಾಳಗಳೊಳಗಿನ ರಕ್ತದ ಪ್ರವಾಹಕ್ಕೆ ಉತ್ತೇಜನವು ದೊರೆಯುವದು. ಆದರೆ ಜಟ್ಟಿಗಳ ವ್ಯಾಯಾಮದಿಂದ (ಸ್ನಾಯುಗಳಿಗೆ ಗತಿಯನ್ನು ಕೊಡುವ ವ್ಯಾಯಾಮದಿಂದ) ಸ್ನಾಯುಗಳಲ್ಲಿ ರಕ್ತಸಂಚಯವಾಗುವದು. ಕಾರಣ ಶರೀರದ ಆ ಭಾಗವು ದೊಡ್ಡದಾಗಿಯೂ ಗಟ್ಟಿಯಾಗಿಯೂ ಇರುವದು. ಆದುದರಿಂದ ವ್ಯಾಯಾಮವನ್ನು ಹೊಂದಿದ

ಸ್ನಾಯುಗಳು ಮಾತ್ರ ಬೆಳೆಯುವವು. ಉಳಿದವು ಹಾಗೆಯೇ ಇರುವವು. ಆಸನಗಳ ವ್ಯಾಯಾಮದಲ್ಲಿ ರಕ್ತಪ್ರವಾಹಕ್ಕೆ ಉತ್ತೇಜನವು ದೊರೆಯುವದರಿಂದ ಶರೀರದೊಳಗಿನ ಎಲ್ಲ ಅವಯವಗಳು ಅಭಿವೃದ್ಧಿಯನ್ನು ಹೊಂದುವವು. **ಜಟ್ಟಿಗಳ ವ್ಯಾಯಾಮದಿಂದ ಹೃದಯವು** ಅಶಕ್ತವಾಗುವದು. ಕಾರಣ ಅವರು ಅಲ್ಪಾಯುಗಳು ಇರುವರು. ರೋಗನಿವಾರಕ ಶಕ್ತಿಯು ಅವರಲ್ಲಿ ಬೆಳೆದಿರುವದಿಲ್ಲ. ಕಾರಣ ಪ್ಲೇಗು ಕಾಲರಾ, ಈ ಮೊದಲಾದ ರೋಗಗಳ ಪ್ರಾರಂಭಕ್ಕೆ ಜಟ್ಟಿಗಳೇ ತುತ್ತಾದದ್ದು ಅನೇಕರ ನೋಡುವಿಕೆಯಲ್ಲಿ ಬಂದಿದೆ

ಯೋಗಾಸನದಲ್ಲಿ ಸ್ನಾಯುಗಳ ದೀರ್ಘೀಕರಣವಾಗುವದು ಅಂದರೆ ಸ್ನಾಯುಗಳು ರಬ್ಬರದಂತೆ ಉದ್ದಾಗುವವು. ಕಾರಣ ರಕ್ತಾಭಿಸರಣವು ಸ್ವಲ್ಪ ಕಡಿಮೆಯಾಗುವದು. ಆಸನವನ್ನು ನಿಲ್ಲಿಸಿದ ಕೂಡಲೆ ಸ್ನಾಯುಗಳ ಶಿಥಿಲೀಕರಣದ ಪ್ರಕ್ರಿಯೆಗೆ ಪ್ರಾರಂಭವಾಗಿ ರಕ್ತವು ಜೋರಿನಿಂದ ಹರಿಯುವದು. ಆಸನಗಳ ವ್ಯಾಯಾಮದಿಂದ ಪೂರ್ಣ ಲಾಭವನ್ನು ಹೊಂದುವದಾದರೆ ಆಸನಗಳು ಮುಗಿದ ಕೂಡಲೆ ಸ್ವಲ್ಪ ಕಾಲ ಅಂದರೆ ೧೦-೧೫ ಮಿನಿಟುಗಳ ವರೆಗೆ ಸ್ವಸ್ಥವಾಗಿ ಮಲಗಬೇಕು. ಆಗ ಕೈಕಾಲುಗಳ ಬೆರಳುಗಳನ್ನಾದರೂ ಅಲುಗಿಸದೆ ಸ್ವಸ್ಥವಾಗಿರಬೇಕು. ಕೂಸುಗಳು ಮಲಗಿದಾಗ ಕೈಕಾಲುಗಳನ್ನು ಸ್ವಾಭಾವಿಕವಾಗಿ ಹಾಸಿಗೆಯ ಮೇಲೆ ಚಲ್ಲಿ ನಿದ್ರಿಸುವ ಹಾಗೆ ಮಾಡುವಂತೆ ಸ್ವಸ್ಥವಾಗಿ ಮಲಗಬೇಕು. ಆಗ ಮನಸ್ಸಿನಲ್ಲಾದರೂ ಯಾವದೊಂದು ಸಂಗತಿಯ ವಿಚಾರವನ್ನು ತರಬಾರದು. ಮನಸ್ಸಿನಲ್ಲಿ ಕ್ರೋಧಾದಿ ವಿಕಾರಗಳು ಹುಟ್ಟಿದರೆ ಗಾತ್ರಶಿಥಿಲೀಕರಣದ ಕ್ರಿಯೆಗೆ ಪ್ರತಿಬಂಧವಾಗಿ ಸ್ನಾಯುಗಳ ಆಕರ್ಷಣವಾಗುವದು. ಗಾತ್ರಶಿಥಿಲೀಕರಣದ ಈ ಆಸನಕ್ಕೆ 'ಶವಾಸನ' ಎಂಬ ಹೆಸರುಂಟು. ಶವದಂತೆ (ಹೆಣದಂತೆ) ಎಲ್ಲ ಗಾತ್ರಗಳನ್ನು ಶಿಥಿಲವಾಗಿ ಬಿಡಬೇಕು. ಆಸನಗಳ ವ್ಯಾಯಾಮದ ನಂತರ ಶವಾಸನದ ಮಹತ್ವವು ಬಹಳ ಇರುವದು. ಶವಾಸನದಿಂದ ವಿಶ್ರಾಂತಿಯನ್ನು ತೆಗೆದುಕೊಳ್ಳದೆ ಬೇರೆ ಕೆಲಸಗಳಿಗೆ ಹತ್ತಿದರೆ ಮನುಷ್ಯನು ಸಂತಾಪಿಯೂ ಶೀಘ್ರಕೋಪಿಯೂ ತಾಮಸಿಕನೂ ಆಗುವನು. ಜ್ಞಾನತಂತುಗಳು ಪ್ರಕ್ಷುಬ್ಧವಾಗಿ [illegible] ಅನೇಕ ರೋಗಗಳು ಹುಟ್ಟುವವು

ಯೋಗಾಸನಗಳನ್ನು ಸಂಜೆ ಮುಂಜಾವಿನಲ್ಲಿ ಮಾಡಬಹುದು. ಆಸನಗಳನ್ನು ಮಾಡುವ ಸ್ಥಳದಲ್ಲಿ ಶುದ್ಧವಾದ ಹವೆಯೂ ಪ್ರಕಾಶವೂ ಇರಬೇಕು. ಸಮವಾದ ನೆಲದ ಮೇಲೆ ಮೆತ್ತನ್ನ ಹಾಸಿಗೆಯನ್ನು ಹಾಸಬೇಕು. ಹಾಸಿಗೆಯ ಉದ್ದಗಲುಗಳು ಸಾಧಾರಣವಾಗಿ ೩-೪ ಫೂಟು ಇರಬೇಕು. ಈ ಹಾಸಿಗೆಯ ಸುತ್ತಲು ಗಾಜು, ಕಲ್ಲು, ಈ ಮೊದಲಾದ ಪದಾರ್ಥಗಳಿರಕೂಡದು. ಯಾಕೆಂದರೆ ಒಲವು ಆಸನಗಳನ್ನು ಮಾಡುವಾಗ ಜೋಲು ಹೋಗಿ ಬೀಳುವ ಭಯವಿರುವದರಿಂದ ಗಾಯವಾಗುವ ಸಂಭವವದೆ. ಇದಕ್ಕಿಂತ ಹೆಚ್ಚಿನ ಉಪಕರಣಗಳು ಬೇಡ. ಶಾಸ್ತ್ರಜ್ಞರ ಶೋಧಗಳು ಬೆಳೆದಂತೆ ಸ್ನಾಯುಗಳ ದೀರ್ಘೀಕರಣ ವ್ಯಾಯಾಮಕ್ಕೆ ಹೆಚ್ಚು ಮಹತ್ವವು ಬರುವದು. ಅಂಥ ಕಾಲವು ಬೇಗನೆ ಬಂದು ಯೋಗಾಸನಗಳ ಪ್ರಸಾರವು ಬೇಗನೆ ಆಗಲೆಂದು ಬಯಸುತ್ತೇವೆ

—ಕರ್ನಾಟಕ ಸ್ಕೌಟ.

ಬದಾಮಿಯ ಸುದ್ದಿಯು.

ಮೆ|| ಆಸಿ. ಕಮಿಶನರಾದ ಕುರ್ತಕೋಟಿ ಇವರಿಗೆ ನಿನ್ನೆ ಅಂದರೆ ತಾರೀಖು ೨೯-೧೧-೨೭ನೇ ದಿವಸ ಇಲ್ಲಿಯ ತಾಲೂಕ ಲೋ. ಬೋ. ಪ್ರೆಸಿಡೆಂಟ ಶ್ರೀಮಾಂತ ದೇಸಾಯಿ ನೀರಬೂದಿಹಾಳ ಇವರು ತಾಂಬೂಲ ಸಮಾರಂಭವನ್ನು ಮಾಡಿದರು. ಈ ತಾಲೂಕಿನೊಳಗಿನ ಮತ್ತು ಬಾಗಲಕೋಟೆ ತಾಲೂಕಿನೊಳಗಿನ ಪ್ರಮುಖರೂ ಈ ಸಮಾರಂಭಕ್ಕೆ ಬಂದಿದ್ದರು. ಇಲ್ಲಿಯ ಸ್ಕೌಟ ವಿದ್ಯಾರ್ಥಿಗಳು ಸುಸ್ವರದಿಂದ ಸ್ವಾಗತ ಪದವನ್ನು ಹಾಡಿದರು. ಆ ಮೇಲೆ ವ್ಯಾಖ್ಯಾನಗಳಾಗಿ ಹಾರ; ತುರಾಯಿ; ತಾಂಬೂಲ ಸಮರ್ಪಣೆಯಾಗಿ ಸಭಾವಿಸರ್ಜನೆಯಾಯಿತು

ಒಡಪಿನ ಉತ್ತರಗಳು.

೩೧ ನೇ ಸಂಚಿಕೆಯಲ್ಲಿಯ ಒಗಟಗಳಿಗೆ ಉತ್ತರ ಮತ್ತು ಅವನ್ನು ಬಿಡಿಸಿದವರು:—

೧

ಭ	ರ	ತ
ರ		ನ
ಟ	ಗ	ಮು

೨

ಮತ್ತು "ಕರ್ಮವೀರ"

(೧) ಗುರೇಂದ್ರಾಚಾರ್ಯ ಮಳಗಿ ಬಾಗಲಕೋಟೆ ೧ (೨) ಗುರುನಾಥ ಕೃಷ್ಣ ದೇಶಪಾಂಡೆ ಬಾಗಲಕೋಟೆ ೨ (೩) ಬಿ. ಡಿ. ಕುಲಕರ್ಣಿ ಭಗವತಿ ೧ ೨ (೪) ಹ. ನಾ. ರಬ್ಬೇರ ಚಿಕ್ಕೋಡಿ ೨ (೫) ನಾ. ಪ್ಲೀ. ನಾಕಾಡೋಜಿ ಚಿಕ್ಕೋಡಿ ೧ (೬) ಜಿ. ಆರ್. ಮಹಾಬಲ ಭಟ್ಟ ಶೃಂಗೇರಿ ೨ (೭) ಹಣಮಂತ ಗೋವಿಂದ ಕುಲಕರ್ಣಿ ಬಲಕುಂದಿ ೨ (೮) ಶಾಮರಾವ ದಂಡಿ ಕಾಗಲಿ ೧ (೯) ಸಿ. ಎ. ಪಡನೂರ ಹುಬ್ಬಳ್ಳಿ ೧ (೧೦) ಪಿ. ವೆಂಕೋಬಾಚಾರ್ಯ ಮಾನವಿ ೨ (೧೧) ಬಿ. ಡಿ. ರಾಘವೇಂದ್ರ ಪವಾರ ಹುಬ್ಬಳ್ಳಿ ೨ (೧೨) ಸಾಂಬಭಟ್ಟ ನಾರಾಯಣ ಭಟ್ಟ ಜೋಶಿ ಮೈಸೂರ ೨ (೧೩) ಜಿ. ಎಂ. ಕುಲಕರ್ಣಿ ಧಾರವಾಡ ೧-೨ (೧೪) ಬಿ. ಎಸ್. ಹೊಸೂರ ಬದಾಮಿ ೨ (೧೫) ಗೋಪಾಲ ಎಸ್. ಎಸ್. ವಿಜಾಪೂರ ೨ (೧೬) ಎಚ್. ಎಸ್. ರಾಘವೇಂದ್ರರಾವ ಬೆಂಗಳೂರ ೨. (೧೭) ಗೋ. ಹ. ಕಾಳಗಿ ಹೆರ್ಕಲ್ ೨ (೧೮) ಗು. ಗು. ಚವಟಿ ಹಾವೇರಿ ೨ (೧೯) ಮ್ಯಾ. ವಾ. ಕರ್ಪೂರ ಆಡಾರ ೧ (೨೦) ಎ. ಎಸ್. ಪುರಾಣಿಕ ಬಾಗಲಕೋಟೆ ೨ (೨೧) ಶ್ರೀನಿವಾಸ ನಾರಾಯಣ ತೊರ್ವಿ ವಿಜಾಪೂರ ೧-೨ (೨೨) ಸಿ. ಎಸ್. ಗುಡೂರ ವಿಜಾಪೂರ ೧-೨ (೨೩) ಬಿ. ವಿ. ನಾಯಕ ವಿಜಾಪೂರ ೧-೨ (೨೪) ಆ. ವಿ. ಹಿರೇಕೆರೂರ ವಿಜಾಪೂರ ೧-೨ (೨೫) ಎ. ಆರ್. ಪಾಟೀಲ ಹೂಲಿ ೧-೨ (೨೬) ರಮಾಕಾಂತ ಬಾಗಲಕೋಟೆ ೧-೨ (೨೭) ಪ. ಶಾ. ಜಹಗೀರದಾರ ಹೈದರಾಬಾದ (ದ) ೨ (೨೮) ಮಹಾಬಲ ಭಟ್ಟ ಹೊಬಳಿ ನೀಲವಾಪು ೨ (೨೯) ಕೃಷ್ಣಾ ಪುರಾಣಿಕ ಬೀಳಗಿ ಬಾಗಲಕೋಟೆ ೧-೨ (೩೦) ಜಯತೀರ್ಥ ಜಹಗೀರದಾರ ಬಾಗಲಕೋಟೆ ೧-೨ (೩೧) ಎಸ್. ಕೆ. ಕುಲಕರ್ಣಿ ೨ (೩೨) ಸಂಪಾದಕ 'ಬಡಿಶಂಕರಿ' ಧಾರವಾಡ ೨ (೩೩) ಯಲಗುರ್ದ ತುಳಜೋ ವಾಳವೇಕರ ಲಕ್ಷ್ಮಂಡಿ ೨ (೩೪) ಜಂಬಣ್ಣ ಕಲಪೀರಪ್ಪ ಹಾವೇರಿ ೨.

ಹೊಸ ಒಡಪು

೧) ಒಬ್ಬ ಸಾವುಕಾರನು ೨ ಜನ ಬ್ರಾಹ್ಮಣರಿಗೆ ತನ್ನಲ್ಲಿದ್ದ ಕೆಲವು ರೂಪಾಯಿಗಳನ್ನು ದಾನ ಮಾಡಿದನು. ಅವನು ದಾನ ಮಾಡುವಾಗ ಆ ರೂಪಾಯಿಗಳನ್ನು ಸರಿಯಾಗಿ ೩ ಭಾಗವನ್ನು ಮಾಡಿ ಒಬ್ಬನಿಗೆ ೨ ಭಾಗವನ್ನೂ ಇನ್ನೊಬ್ಬನಿಗೆ ಒಂದು ಭಾಗವನ್ನೂ ಕೊಟ್ಟನು. ಒಂದು ಭಾಗವನ್ನು ದಾನ ತಕ್ಕೊಂಡವನು ಎರಡು ಭಾಗ ದಾನ ತಕ್ಕೊಂಡವನ ಹತ್ತರ 'ನಿನಗೆ ದಾನ ಬಂದದ್ದರಲ್ಲಿ ಒಂದು ರೂಪಾಯಿಯನ್ನು ನೀನು ನನಗೆ ಕೊಟ್ಟರೆ ನನಗೂ ನಿನಗೂ ಸರಿಯಾಗುತ್ತದೆ' ಎಂದು ಕೇಳಿದನು. ಆಗ ಅವರು ಅದರಂತೆ ಮಾಡಲು ಇಬ್ಬರಿಗೂ ಸರಿಯಾದವು. ಆದರೆ ಆ ಸಾವುಕಾರನು ದಾನ ಕೊಟ್ಟ ರೂಪಾಯಿಗಳೆಷ್ಟು?

—ಮಹಾಬಲೇಶ್ವರ ಭಟ್ಟ ಹೋಬಳಿ

ನನ್ನ ಹೆಸರೇನು ?

(ವ್ಯಾಕರಣ ನಿಯಮದಂತೆ)

೧ನೇ ಅಕ್ಷರದ ಮುಂದೆ ೨ನೇ ಅಕ್ಷರದ ಕಡೆಯ ಸ್ವರ ಲೋಪ ಮಾಡಿ ಪ್ರಥಮ ಸ್ವರ ಕೂಡಿಸಿ ಬರೆದರೆ ಲೋಹಗಳ ಪೈಕಿ ಒಂದು ಆಗುತ್ತೇನೆ. ಮತ್ತು ಒಟ್ಟು ಹೆಸರು ಬಿಡಿಸಿದರೆ ಆಗುವ ೩ನೇ ೪ನೇ ಅಕ್ಷರಗಳನ್ನು ಕೂಡಿಸಿದರೆ ಯಾವಾಗಲೂ ಜನರು ನನ್ನ ನಾಮಸ್ಮರಣ ಮಾಡುತ್ತಾರೆ. ೧ನೇ ೩ನೇ ಅಕ್ಷರಗಳನ್ನು ಕೂಡಿಸಲು ನಾಶವೆಂದು ಅರ್ಥವಾಗುತ್ತದೆ. ಆದರೆ ನಾನು ಯಾರು ನನ್ನ ಹೆಸರೇನು?

—ನಾಗೇಶ ಈಶ್ವರಪ್ಪ ಮನುವಾಚಾರ್ಯ
ಸಾ|| ಬೆನಕನಕೊಪ್ಪ.

GRAMAPHONE COMPLETE Rs. 10.

ಗ್ರಾಮೊಫೋನ್.

ಎಂಬ ಹಾಡುಗಾರಿಕೆಯ ಯಂತ್ರವು.

ಮೊದಲಿನ ಕ್ರಯ ರೂ. ೩೫—೦—೦ **ಈಗಿನ ಕ್ರಯ ರೂ. ೧೦—೦—೦.**

ಈ ಯಂತ್ರವು ವಿಲಾಯತಿಯಲ್ಲಿ ತಯಾರಾದದ್ದು. ಇಂಗ್ಲೀಷು, ಕನ್ನಡ, ಹಿಂದುಸ್ಥಾನಿ, ಇಂಗ್ಲೀಷು ವಾದ್ಯ ಮುಂತಾದ ಪದಗಳನ್ನು ಹೇಳುವದು. ಲಗ್ನದ ಮನೆ, ನಾಟಕಶಾಲೆ ಮುಂತಾದ ಜನಕೂಡುವ ಸ್ಥಳದಲ್ಲಿ ಉಪಯೋಗಿಸಲು ಬಹು ಚನ್ನಾಗಿದೆ. ನೋಟಕ್ಕೆ ಲಕ್ಷಣವಾಗಿರುವಂತೆಯೂ, ಕ್ರಯದಲ್ಲಿ ಸುಲಭವಾಗಿಯೂ ಇರುವಂತೆ ಬಹು ಬಲಿಷ್ಟವಾದ ಸಾಮಾನುಗಳಿಂದ ಈ ಯಂತ್ರವನ್ನು ತಯಾರಿಸಿದೆ. ಸುಂದರವಾದ ಹಾರ್ನ್ ಎಂಬ ಪದ ಹೇಳುವ ಕೊಳವೆ ಇದೆ ನಿಧಾನವಾಗಿಯೂ ಜಾಗ್ರತೆಯಾಗಿಯೂ, ಪದ ಕೇಳಿಸಲು ಕೀಲು ಇದೆ. ಈ ಯಂತ್ರವನ್ನು ಎಲ್ಲಿ ಬೇಕಾದ ಊ ಕೈಯಲ್ಲಿ ಹಿಡಿದುಕೊಂಡು ಹೋಗಲು ಅನುಕೂಲವಾದಂಥ ಸುಂದರವಾದ ಕೈ ಪೆಟ್ಟಿಗೆಯಲ್ಲಿಟ್ಟಿದೆ.

ಡಬಲ್ ಸೈಡ್ ಎರಡು ಕಡೆಯೂ ಪದವಿರುವ

೧ ರೆಕಾರ್ಡ್ ಸಹಿತ ಗ್ರಾಮೋಫೋನ್ ಯಂತ್ರದ ಪೆಟ್ಟಿಗೆ ಕ್ರಯ ರೂ. ೧೦—೦—೦

ಹೆಚ್ಚಿಗೆ ರೆಕಾರ್ಡ್ ಬೇಕಾದರೆ, ಪ್ರತ್ಯೇಕ ರೆಕಾರ್ಡ್ ೧ಕ್ಕೆ ರೂ. ೧—೪—೦.

ಈ ತಿಂಗಳೊಳಗಾಗಿ ಕರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಮತ್ತು ಟಪಾಲು ಖರ್ಚು ಮುಫತ್ತಾಗಿ ಕಳಿಸುವೆವು.

ವಿಳಾಸ:— ಬ್ರಿಟಿಷ್ ಟ್ರೆಡಿಂಗ್ ಕಂಪನಿ,

ಪೋಸ್ಟ್ ಬಾಕ್ಸ ನಂ. ೧೨೬೩, ಮದರಾಸು

ಸ್ಟಾಂಡರ್ಡ್ ಕಾಫಿಪುಡಿ.

ಅಖಿಲಭಾರತ ಸ್ಥಲ ಕಲಾವಸ್ತು ಪ್ರದರ್ಶನದಲ್ಲಿ ರಜತ ಪದಕವನ್ನೂ, ಸರ್ಟಿಫಿಕೇಟುಗಳನ್ನು ಬಹುಮಾನವಾಗಿ ಪಡೆದ **ಸ್ಟ್ಯಾಂಡರ್ಡ ಕಾಫಿಪುಡಿಯು** ಅತ್ಯಂತ ಮನೋಹರವೂ, ರುಚಿಕರವೂ ಆದದ್ದು ತರಿಸಿ ಪರೀಕ್ಷಿಸಿ ನೋಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ್, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

ಪೌಂಡ ೧ಕ್ಕೆ ೧-೪-೦ ಮತ್ತು ೧-೨-೦.

ದಿ ಸ್ಟಾಂಡರ್ಡ್ ಕಾಫಿ ಕಂಪನಿ

ಚಿಕ್ಕಪೇಟೆ ಬೆಂಗಳೂರು ಸಿಟಿ.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದ ವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಪ್ಪಾ ಜಾಲವಾದಿ.

ಸ್ಟೇಶನರ್ಸ ಬಾಗಲಕೋಟಿ.

ರಾಜವೈದ್ಯ ನಾರಾಯಣಜಿ ಕೇಶವಜಿ,

೫೭. ಚೀನಾಬಜಾರ್, ಮದ್ರಾಸು

ಬನಾರಸ್ ರೇಶ್ಮೇ ಶೀರೆಗಳು.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೇ ಮಾಲುಗಳನ್ನು ಕೊಳ್ಳುವವರಿಗೆ ವಿ. ಪಿ. ಮೂಲಕ ಕಳಿಸಲ್ಪಡುವದು. ಬಿಳೀ ರೇಶ್ಮೇ ಕೊಟಿಂಗ್ ಶಿಲ್ಕ ಉದ ಮೊ ನ ೧೪ ಅಗಲಿವೊಳ ೩, ಥಾನು ೧೫ ೧೫ ರಿಂದ ೫೦ ಜರಿ ಶೀರೆಗಳು ೧೬ ೧೮ ಮೊಳ ಉದ್ದ ೧೫ ೧೨. ೫೯ ರಿಂದ ೫೦ ರವರೆಗೆ ಬ್ರಿಸ್ಪಾನ್ ನಾರಸ್ ಶೀರೆ ೧೬-೧೮ ಉದ ನೊಳ ೭ ೧೫ ರ ೫೯ ರಿಂದ ೫೦೦ ರ ವರೆಗೆ ಉದ ವ ಮಗುಟ ಉದ ೬-೮ ನೊಳ ೧೫ ರೂ ೧೦ ರಿಂದ ೩೦ ರ ವರೆಗೆ ಜರಿಂದ್ದು ೬-೮ ಮೊಳ ಉದ ೧೫ ರೂ ೧೧ ರಿಂದ ೪೦ ರ ವರೆಗೆ ಬಳಿ ರೇಶ್ಮೆ ಜರಿ ದ ಪಟಿಕ ಮೊಳ ಉದ ೧೫, ರೂ ೧೧ ರಿಂದ ೩೦ ರವರೆಗೆ ನಾನಾ ಬಂಗಾ ರ ಕಾಯ ೬ ಮೊಳ ಉದ ೩ ಮೊಳ ಅಗಲು ೧೫ ರೂ. ೭ ರಿಂದ ೧೫ ರವರೆಗೆ ಪಟಿಕದ ೧೦ ರ ಸರ ೧೫ ರೂ. ೧ ರಿಂದ ೧೦ ರ ವರೆಗೆ ಸುದರ್ಶನ ೧೫ ಅಣೆ ರಿಂದ ರೂಪಾಯಿ 11 ರವರೆಗೆ ಜಗನ್ನಾಥ ಚಾಗಂಟಿ ೧೫ ರೂ 2½ ರಿಂದ 15 ರವರೆಗೆ ಮತ್ತು ಬೆರೆಬೆರೆ ನಮೂನೆಗಳ ಕಟಗಳನಾಂ

ವಿಳಾಸ:-ಶಿರೋ ಮಣಿ ನಾರಾಯಣಾಚಾರ್ಯ
ಕಂಪನಿ ಚೌಕಂಬಾ ಕಾಶಿ ಬನಾರಸ್

For Ladi s and Gents' Insurance

in

The Genor. l nd ha at Insura..c Socteties, ' t.l.

and for

Wholesale Supply of :—

(1) Automodiles
(2) Sporting Materirls
(3) High-Class Tea and Coffee
(4) Cigars and Cigarettes
(5) Surgical Instruments, and Drugs
(6) His Master's Voice Phones, and Records
(7) Cyles, Stoves and Gas Lights

and

(8) Up-to-date Books

Apply to:—

B. S. Tantry. B. A.
BAGALKOT.

ವರರು ಬೇಕಾಗಿರುವರು!

ದೇಸ್ವಾ ಸಂಗದಲ್ಲಿ ವಿವಾಹಕ್ಕೆ ಸಿದ್ಧರಾಗಿರುವ, ವಿದ್ಯಾವಂತರೂ, ಯೋಗ್ಯ ಜೀವನ ನಡೆಸುತ್ತಿದ್ದು ಕುಟುಂಬ ನಿರ್ವಾಹಕ್ಕೆ ಶಕ್ತಿಯುಳ್ಳ ತರುಣರು.

ಮೂವರು ಬಾಲೆಯರ ವಯಸ್ಸು ೧೪-೧೬. II. III. VI Form ತನಕ ಓದಿದವರು. ಗುಣವತಿಯರೂ ರೂಪವತಿಯವರು. ಹೆಚ್ಚಿನ ವಿವರಕ್ಕೆ ಪತ್ರವ್ಯವಹಾರ ಮಾಡಿರಿ.

ಕೌಶಿಕ C/o. ಕನ್ನಡಿಗ.

ನಮ್ಮ ಮುದ್ದೇಬಿಹಾಳದ ಪತ್ರ.

ಇಲ್ಲಿಯು ದವಾಖಾನೆಯ ಸ್ಥಳದ ಮೇಲೆ ಅಲ್ಲಾಪೂರ ಇವರ ನೇಮಣೂಕ ಆಗಿರುತ್ತದೆ ಚಳಿ ಜೋರದ ಬೆಳೆಗಳು ಸ ರಿದ್ದು ಕೆಡಹತ್ತಿರುವವು.

ಈ ತಾಲೂಕಿನಲ್ಲಿ ಒಬ್ಬ ಲಿಂಗವಂತರು ಧರ್ಮೋಪದೇಶವನ್ನು ಹೇಳುವ ನಿಮಿತ್ತವಾಗಿ ಹಳ್ಳಿಗಳಲ್ಲಿ ಸಂಚರಿಸಿ ಜನರಿಗೆ ಯಾವತರದ ಫಂಡು ನೇಮಗಳಾದವುಗಳನ್ನು ಕೊಡತೀರಿ. ನಮ್ಮ ಊರಲ್ಲಿಯೋ ಫಂಡ ಕೊಡಿಸಿರಿ ಇವರು ಸ್ವಲ್ಪ ದಿನಗಳ ಮಹಾತ್ಮಾ ಗಾಂಧಿ ಅಧಿಕಾರ ಯಜ್ಞಕರರು ಫಂಡ ಬೇಕಾಗಿ ಬರುವರು ಅವರಿಗೆ ಹಣ ಕೊಡಬೇಕೆಂದು ಬೋಧಿಸುತ ನಡೆದಿರುವರು

ಬೆಳಗಾವಿಯ ಒಬ್ಬ ಜೈನ ಗೃಹಸ್ಥರು ಖಾದಿಯ ಖಾದಿ ಬಟ್ಟೆ ಗಳನ್ನು ಧರಿಸಿ ಹಿಂದುಸ್ಥಾನೀ ಸೇವಾದಳದ ವಿಷಯವಾಗಿ ವ್ಯಾಖ್ಯಾನ ಕೊಡುತ್ತ ನಡೆದಿರುವರು

ಮೇಲೆ ಬರೆದ ಇಬ್ಬರ ಕಾರ್ಯವು ಜನರ ತರ್ಕ ಕಾರಣಗಳು ನಡೆದಿರುವವು ಅದ್ದರಿಂದ ಇದರ ಬಗ್ಗೆ ಯೋಗ್ಯ ಜನರು ಸ್ಪಷ್ಟೀಕರಿಸಬೇಕು

॥ ಶ್ರೀ ಬಲಭೀಮ ಪ್ರಸನ್ನ ॥

ಶ್ರೀ ಬಲಭೀಮ ವಾಚನಾಲಯಕ್ಕೆ ಸಹಾಯವು.

ತಾ॥ ೪-೧೨-೨೫ ನೇ ಆದಿತ್ಯವಾರ ದಿವಸ ಕೆಳಗಿನ ಸದ್ಗೃಹಸ್ಥರು ವಾಚನಾಲಯವನ್ನು ಸಂದರ್ಶಿಸಿ ಹಣಕೊಟ್ಟು ವಾಚನಾಲಯಕ್ಕೆ ಪ್ರೋತ್ಸಾಹನ ಕೊಟ್ಟರು. ಶ್ರೀಯುತ, ಹೊಸಕೋಟ್ಟೆ ಕೃಷ್ಣರಾಯರು (೫) ರೂ ಪಾಯಿಗಳನ್ನೂ, ಒಳ್ಳಾರಿಯ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಸಭಾಸದರಾದ ಶ್ರೀಯುತರುಗಳಾದ, ವಸುವಾಲಪ್ಪನವರೂ, ಕೆ ಟಿ ಶ್ರೀನಿವಾಸರಾಯರೂ, ಹಿ ವೆಂಕೋಬಾಚಾರ್ಯರೂ, ಸುಬ್ರಹ್ಮಣ್ಯಯ್ಯನವರೂ (೫) ರೂ ಗಳನ್ನೂ ಮತ್ತು ಹುಬ್ಬಳ್ಳಿಯ ಭಗಿನೀ ಮಂಡಳದ ಸಭಾಸದರಾದ, ಶ್ರೀಮತಿ ಉಮಾಬಾಯಿ ಕುಂದಾಪೂರ, ಮತ್ತು ಶ್ರೀಮತಿ ಗಂಗೂಬಾಯಿ ಶೇಷಸೆಯವರು ೨ ರೂ ಗಳನ್ನೂ ಕಾಣಿಕೆಯಾಗಿ ಕೊಟ್ಟಿರುವರು. ಮತ್ತು ವಾಚನಾಲಯವು ಹೀಗೆಯೇ ತನ್ನ ಲೋಕಸೇವೆಯ ಕಾರ್ಯದಲ್ಲಿ ಹೆಚ್ಚು ಹೆಚ್ಚಾಗಿ ಉತ್ಸಾಹವನ್ನು ವ್ಯಕ್ತಮಾಡುತ್ತಿರಲೆಂದು ಆಶೀರ್ವದಿಸಿದರೆಂದು ತಿಳಿಸಲು ನಮಗೆ ಅತ್ಯಂತ ಆನಂದವಾಗುತ್ತದೆ

ಚಿಕ್ಕವರಾದ ನಮಗೆ ಈ ರೀತಿಯಾಗಿ ಪ್ರೋತ್ಸಾಹಿಸಿದ್ದಕ್ಕೆ ಮೇಲಿನ ಸದ್ಗೃಹಸ್ಥರಿಗೂ, ಶ್ರೀಮತಿಯರಿಗೂ ನಾವು ತುಂಬಾ ಕೃತಜ್ಞತರಾಗಿದ್ದು, ಇಂಥ ಮಹನೀಯರನ್ನು ಎಷ್ಟು ಅಭಿನಂದಿಸಿದರೂ ಸ್ವಲ್ಪವೇ ಸರಿ.

ಕಾರ್ಯವಾಹೀ ಮಂಡಳ
ಬಲಭೀಮ ವಾಚನಾಲಯ
ಬಾಗಲಕೋಟೆ.

ಸಹಕಾರ ಸಂಘ

ಈ ಸಹಕಾರ ಸಂಘಗಳಿಗೆ ಬೇಕಾಗು ನಮೂನೆಗಳನ್ನು ಅಚ್ಚುಹಾಕಿಸಿ ನಮ್ಮಲ್ಲಿ ಮಾರಲಿಕ್ಕೆ ಇಟ್ಟಿರುವೆವು. ಪಾವತಿ ಮೆಂಬರಾಗಲಿಕ್ಕೆ ಮಾಡುವ ಅರ್ಜಿ ಸಾಲ ಬೇಡುವ ಅರ್ಜಿ ಮುದ್ದತ ಬೇಡುವ ಅರ್ಜಿ ಮೊದಲಾದ ಎಲ್ಲ ನಮೂನೆಗಳೂ ಇವೆ.

ವ್ಯವಸ್ಥಾಪಕ:— ವಿದ್ಯಾರಣ್ಯ ಮುದ್ರಾ ಮಂದಿರ
ಬಾಗಲಕೋಟೆ.

ಬನಾರಸ್ ರೇಶ್ಮೀ ಶೀರೆಗಳು.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೀ ಮಾಲುಗಳನ್ನು ಕೇಳುವವರಿಗೆ ವಿ. ಪಿ. ದಿಂದ ಕಳುಹಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕ ಉದ್ದ ಮೊಳ ೧೪ ಅಗಲಿ ಮೊಳ ೩. ಥಾನು ೧ಕ್ಕೆ ೧೫ ರಿಂದ ೫೦ ಜರಿ ಶೀರೆಗಳು ೧೭ ೧೮ ಮೊಳ ಉದ್ದ ೧ಕ್ಕೆ ರೂ. ೨೫ ರಿಂದ ೫೦ ರವರೆಗೆ ಬುಟ್ಟೆದಾರ ಬನಾರಸ್ ಶೀರೆ ೧೭-೧೮ ಉದ ಮೊಳ ೭ ೧ಕ್ಕೆ ರೂ ೫೦ ರಿಂದ ೩೦೦ ರ ವರೆಗೆ ಉಡುವ ಮಗುಟ ಉದ್ದ ೬-೮ ಮೊಳ ೧ಕ್ಕೆ ರೂ ೧೦ ರಿಂದ ೩೦ ರ ವರೆಗೆ ಜರೀದ್ದು ೬-೮ ಮೊಳ ಉದ್ದ ೧ಕ್ಕೆ ರೂ ೧೧ ರಿಂದ ೪೦ ರ ವರೆಗೆ ಬಿಳಿ ರೇಶ್ಮೆ ಜರದ ಪಟ್ಟೆ ಮೊಳ ಉದ ೧ಕ್ಕೆ ರೂ ೧೧ ರಿಂದ ೩೦ ರವರೆಗೆ ಸಾದಾ ಬಂಗಾಳ ರೇಶ್ಮಿ ಶಾಲು ೬ ಮೊಳ ಉದ ೩ ಮೊಳ ಅಗಲು ೧ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಫಟಿಕದ ೧-೮ ರ ವರ ೧ಕ್ಕೆ ರೂ. ೧ ರಿಂದ ೧೦ ರ ವರೆಗೆ ಸುದರ್ಶನ ೧ಕ್ಕೆ ಆಣೆ ೮ ರಿಂದ ರೂಪಾಯಿ 1½ ರವರೆಗೆ ಜಗನ್ನಾಥಬಾಗಂಟೆ ೧ಕ್ಕೆ ರೂ. 2½ರಿಂದ 15 ರವರೆಗೆ ಮತ್ತು ಬೇರೆ ಬೇರೆ ನಮೂನೆಗಳ ಕೆಟಲಾಗ ಇನಾಂ

ವಿಳಾಸ:—ಶಿರೋಮಣಿ ನಾರಾಯಣಾಚಾರ್ಯ

ಕಂಪನಿ ಚೌಕಂಬಾ ಕಾಶಿ ಬನಾರಸ್

For Ladi s and Gents' Insurance

in

The Genor.l nd ha at Insura..c

Socisties, ' t.l.

and for

Wholesale Supply of :—

(1) Automodiles
(2) Sporting Materirls
(3) High-Class Tea and Coffee
(4) Cigars and Cigarettes
(5) Surgical Instruments, and Drugs
(6) His Master's Voice Phones, and Records
(7) Cyles, Stoves and Gas Lights
and
(8) Up-to-date Books

Apply to:—

***B. S. Tantry.* B. A.**

BAGALKOT.

ವಧುಗಳು ಬೇಕಾಗಿರುವವು!

ವೇಸ್ಯಾ ಪಂಗಡದಲ್ಲಿ ವಿವಾಹಕ್ಕೆ ಸಿದ್ಧರಾಗಿರುವ, ವಿದ್ಯಾವಂತರೂ, ಯೋಗ್ಯ ಜೀವನ ನಡೆಸುತ್ತಿದ್ದು ಕುಟುಂಬ ನಿರ್ವಾಹಕ್ಕೆ ಶಕ್ತಿಯುಳ್ಳ ತರುಣರು.

ಮೂರು ಬಾಲೆಯರ ವಯಸ್ಸು ೧೪-೧೬ II. III. VI Form ತನಕ ಓದಿದವರು. ಗುಣವತಿಯರೂ ರೂಪವತಿಯರು— ಹೆಚ್ಚಿನ ವಿವರಕ್ಕೆ ಪತ್ರವ್ಯವಹಾರಮಾಡಿರಿ.

ಕೌಶಿಕ C/o- ಕನ್ನಡಿಗ.

ನಮ್ಮ ಮುದ್ದೇಬಿಹಾಳದ ಪತ್ರ.

ಇಲ್ಲಿಯ ಮಾವ ಲೇವಾರ ಸ್ಥಳದಮೇಲೆ ಅಲ್ಲಾಪೂರ ಇವರ ನೇಮಣೂಕ ಆಗಿರುತ್ತದೆ. ದಳಿ ಜೋಳದ ಬೆಳೆಗಳು ಸಂಕಟದಲ್ಲಿ ಕೆಡಹತ್ತಿರುವವು.

ಈ ತಾಲೂಕಿನಲ್ಲಿ ಒಬ್ಬ ಲಿಂಗವಂತರು ಧರ್ಮೋಪದೇಶವನ್ನು ಹೇಳುವ ನಿಮಿತ್ತನಾಗಿ ಹಳ್ಳಿಗಳಲ್ಲಿ ಸಭೆಗೂಡಿಸಿ ಜನರಿಗೆ ಯಾವಕರದ ಫಂಡು ಮೊದಲಾದವುಗಳನ್ನು ಕೊಡಬೇಡಿರಿ. ನಮ್ಮ ಊರಲ್ಲಿಯೇ ಫಂಡ ಕೂಡಿಸಿರಿ ಇನ್ನು ಸ್ವಲ್ಪ ದಿನಗಳಲ್ಲಿ ಮಹಾತ್ಮಾ ಗಾಂಧಿ ಅವರು ಹಣಕ್ಕಾಗಿ ಬೇಡಲಿಕ್ಕೆ ಬರುವರು ಅವರಿಗೆ ಹಣ ಕೊಡಬೇಡಿರೆಂದು ಹೇಳುತ್ತ ನಡೆದಿರುವರು.

ಬೆಳಗಾವಿಯ ಒಬ್ಬ ಜೈನ ಗೃಹಸ್ಥರು ಖಾದಿಯ ಬಟ್ಟೆಗಳನ್ನು ಧರಿಸಿ ಹಿಂದುಸ್ತಾನೀ ಸೇವಾದಲದ ವಿಷಯವಾಗಿ ವ್ಯಾಖ್ಯಾನ ಕೊಡುತ್ತ ನಡೆದಿರುವರು.

ಮೇಲೆ ಬರೆದ ಇಬ್ಬರ ಸಂಬಂಧವಾಗಿಯೂ ಜನರಲ್ಲಿ ತರ್ಕವಿತರ್ಕಗಳು ನಡೆದಿರುವವು ಆದ್ದರಿಂದ ಇದರ ಬಗ್ಗೆ ಯೋಗ್ಯ ಜನರು ಸ್ಪಷ್ಟೀಕರಿಸಬೇಕು.

॥ ಶ್ರೀ ಬಲಭೀಮ ಸಮರ್ಥ ॥

ಶ್ರೀ ಬಲಭೀಮ ವಾಚನಾಲಯಕ್ಕೆ ಸಹಾಯವು.

ತಾ|| ೮-೧೨-೨೫ ನೇ ಆದಿತ್ಯವಾರದಿವಸ ಕೆಳಗಿನ ಸದ್ಗೃಹಸ್ಥರು ವಾಚನಾಲಯವನ್ನು ಸಂದರ್ಶಿಸಿ ಆನಂದಪಟ್ಟು ವಾಚನಾಲಯಕ್ಕೆ ಪ್ರೋತ್ಸಾಹನ ಕೊಟ್ಟರು. ಶ್ರೀಯುತ, ಹೊಸಕೋಟೆ ಕೃಷ್ಣರಾಯರು (೮) ರೂಪಾಯಿಗಳನ್ನೂ, ಒಕ್ಕಾರಿಯ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಸಭಾಸದರಾದ ಶ್ರೀಯುತರುಗಳಾದ, ವಸುದೇವಪ್ಪನವರೂ, ಕೆ. ಟಿ ಶ್ರೀನಿವಾಸರಾಯರೂ, ಹಿ ವೆಂಕೋಬಾಚಾರ್ಯರೂ, ಸುಬ್ರಹ್ಮಣ್ಯಯ್ಯನವರೂ (೫) ರೂ. ಗಳನ್ನೂ ಮತ್ತು ಹುಬ್ಬಳ್ಳಿಯ ಭಗಿನೀ ಮಂಡಳದ ಸಭಾಸದರಾದ, ಶ್ರೀಮತಿ ಉಮಾಬಾಯಿ ಕುಂದಾಪೂರ, ಮತ್ತು ಶ್ರೀಮತಿ ಗಂಗೂಬಾಯಿ ಶೇವಡೆಯವರು ೨ ರೂ. ಗಳನ್ನು ಕಾಣಿಕೆಯಾಗಿ ಕೊಟ್ಟಿರುವರು. ಮತ್ತು ವಾಚನಾಲಯವು ಹೀಗೆಯೇ ತನ್ನ ಲೋಕಸೇವೆಯ ಕಾರ್ಯದಲ್ಲಿ ಹೆಚ್ಚು ಹೆಚ್ಚಾಗಿ ಉತ್ಸಾಹವನ್ನು ವ್ಯಕ್ತಮಾಡುತ್ತಿರಲೆಂದು ಆಶೀರ್ವದಿಸಿದರೆಂದು ತಿಳಿಸಲು ನಮಗೆ ಅತ್ಯಂತ ಆನಂದವಾಗುತ್ತದೆ.

ಚಿಕ್ಕವರಾದ ನಮಗೆ ಈ ರೀತಿಯಾಗಿ ಪ್ರೋತ್ಸಾಹಿಸಿದ್ದಕ್ಕೆ ಮೇಲಿನ ಸದ್ಗೃಹಸ್ಥರಿಗೂ, ಶ್ರೀಮತಿಯರಿಗೂ ನಾವು ತುಂಬಾ ಕೃತಜ್ಞತರಾಗಿದ್ದು, ಇಂಥ ಮಹನೀಯರನ್ನು ಎಷ್ಟು ಅಭಿನಂದಿಸಿದರೂ ಸ್ವಲ್ಪವೇ ಸರಿ.

ಕಾರ್ಯನಿರ್ವಾಹಕ

ಬಲಭೀಮ ವಾಚನಾಲಯ

ಬಾಗಲಕೋಟೆ.

ಸಹಕಾರ ಸಂಘ

ಈ ಸಹಕಾರ ಸಂಘಗಳಿಗೆ ಬೇಕಾಗುವ ನಮೂನೆಗಳನ್ನು ಅಚ್ಚುಹಾಕಿಸಿ ನಮ್ಮಲ್ಲಿ ಮಾರಲಿಕ್ಕೆ ಇಟ್ಟಿರುವೆವು. ಪಾವತಿ ಮೆಂಬರರಾಗಲಿಕ್ಕೆ ಮಾಡುವ ಅರ್ಜಿ ಸಾಲ ಬೇಡುವ ಅರ್ಜಿ ಮುದ್ದತ ಬೇಡುವ ಅರ್ಜಿ ಮೊದಲಾದ ಎಲ್ಲ ನಮೂನೆಗಳೂ ಇವೆ.

ವ್ಯವಸ್ಥಾಪಕ— ವಿದ್ಯಾರಣ್ಯ ಮುದ್ರಾ ಮಂದಿರ

ಬಾಗಲಕೋಟೆ.



ಉಚಿತ! ಉಚಿತ!! ಕೇವಲ ಪುಗಸಟ್ಟೆ!!

೧೯೨೭ ನೇ ಜನವರಿ ೧೫ರಿಂದ ಪ್ರಾರಂಭ.



ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್ ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ:

೧. ನೀವು ನಮಗೆ ರೂ ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಹೊಣಲಗನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ಪಡೆದುಕೊಂಡ ಕೂಪನ್ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್ಗಳನ್ನು ಕೊಡುತ್ತೇವೆಂಬುದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ್ ಗೋಲ್ಡ್" ರಿಸ್ಟ್ ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ಏನೂ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು ಅಥವಾ ವಿ. ಪಿ ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿ

ಇದು ಲಾಟರಿಯಲ್ಲದ್ದರಿಂದ ಕೆಡಿಸಿಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಅಸೂಯೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟೆಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೬-೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್. ರಿಪೇರರ್ ಮತ್ತು ಡೀಲರ್ ೨೫೬, ಚಿಕ್ಕಪೇಟೆ. ಬೆಂಗಳೂರು ಸಿಟಿ

ಅಚ್ಚಾಗಿವೆ! **ತರಿಸಿರಿ!!**

ವಾಸುದೇವನ

ಕೌಸ್ತುಭಗಳು.

೧. ಇಂದಿರಾ ೨-೮-೦

(ಸಚಿತ್ರ ಸಾಮಾಜಿಕ ಕಾದಂಬರಿ.)

೨. ಯದು ಮಹಾರಾಜ. ೧-೦-೦

(ಎಂಬ ವಿನೋದದ ಐತಿಹಾಸಿಕ ಕಾದಂಬರಿ.)

೩. ನೀಳ್ಗತೆಗಳು ಭಾಗ ೧ ೧-೪-೦

"ವಸಂತಯಾಮಿನಿ ಸ್ವಪ್ನಚಮತ್ಕಾರ" ನಾಟಕದ ಪ್ರತಿಗಳೆಲ್ಲವೂ ತೀರಿಹೋಗಿವೆ. ಉಳಿದವುಗಳು ಅಚ್ಚಿನಲ್ಲಿವೆ. ತ್ವರೆಮಾಡಿರಿ! ಬೇಕಾದವುಗಳನ್ನು ಬೇಗನೇ ತರಿಸಿಕೊಳ್ಳಿರಿ.

ಪುಸ್ತಕ ವ್ಯಾಪಾರಿಗಳಿಗೆ ಯೋಗ್ಯ ಕಮಿಷನ್. ಅಂಚೆಯವೆಚ್ಚ ಬೇರೆ.

ಸ್ವಾಮಿ, ರಾ, ಕೆರೂರ.
ಬಾಗಲಕೋಟೆ (ಜಿ| ವಿಜಾಪೂರ)

ಅತ್ಯಪೂರ್ವ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೊಕೆಟ್ ವಾಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಚ್ಚಳದ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫.

ಕ್ಯಾಕ್ಸನ್ ವಾಚ್ ಕಂ. ಪಿ, ಬಿ. ೭೩೩ ಮದ್ರಾಸು

Three Successive Valuation Results Unsurpassed

The General Assurance Society Ltd

AJMER.

Assets Exceed **BONUS** Claims Paid Over

Rs 20,00,000 Rs. 10,00,000

Equal to the Highest ever Declared by any Indian Life Office.

31st March 1924 Whole Life (Deferred)
Rs. 12%. per year.

31st December 1925 Whole Life (Immediate)
Rs. 20%. per year.

31st December 1926 Whole Life (Immediate)
Rs. 22/8/- %. per year.

OFFICES AT

Agra,	Benares,	Lucknow,
Ajmer,	Colombo,	Lahore,
Allahabad,	Calcutta,	Madras,
Beawar,	Gujranwala,	Madura,
Bangalore,	Hubli	Patna,
Baroda	Hyderabad Sind,	Rangoon,
Bellary,	Indore,	Rawalpindi.
Bombay,	Jullunder	

Place your Assurance with this sound and progressive Office To-day You will be benefitted by the low premiums and the exceptionally high bonus additions.

WANTED AGENTS ON MOST LIBERAL TERMS.

Please Apply to:—P. D. BHARGOVA, F. S. S (Lon) Manager Ajmer.
OR
L. V. RAMDURG Chief Agent, Hubli

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಆಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ಪತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೭೪೭ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರಿಂಟೆಂಡೆಂಟ್ ಸೆಕ್ರೆಟರಿಏಟ್ ಹೈದರಾಬಾದ ಡೆಕ್ಕನ್ನ ರೂ.೧೦೦೦

(೨) ಎಲ್. ಬಿ. ಸಿ. ನಂ. ೧೯೬೨ ನಾರಾಯಣ ವಿಠ್ಠಲ ಶೋಣಕರ ಕೇರ್ ಆಫ್ ಡಿ. ಈ. ಪುರಾಣಿಕ ೧೯೭ ನಿಹಾಲಪುರ ಇಂದೂರ. ೧೦೦೦

(೩) ಎಲ್ ಬಿ. ಸಿ. ನಂ. ೩೪೧ ರಾಮಚಂದ್ರ ಅನಂತ ಶಿರೋಳಿ. ಡಿವಿಜನಲ್ ಫಾರೆಸ್ಟ ಆಫೀಸರ ಧಕ್ಷಿಣರಾ. ಪತ್ತಿ ಮುಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೭ ಕೇ. ಜೆ. ಫರ್ನಾಂಡೋ ವ್ಯಾಪಾರಸ್ಥ. ಬ್ರಿಕ್‌ಸಾಯಿಡ ಸಿಲೋನ, ಕೋಲಂಬೋ. ರೂ. ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜಿ. ಚವರೆ. ಅಸಿಸ್ಟಂಟ ಸ್ಟೇಶನ್ ಮಾಸ್ತರ ತೆಲಗಿ. ಜಿಲ್ಲಾ ವಿಜಾಪುರ. ರೂ ೧೦೦೦

ಬಿ. ನ್. ಆರಾಧ್ಯ
ಚೀಫ ಏಜಂಟ ಹುಬಳ್ಳಿ (ಮುಂಬಯಿ ಇಲಾಖಾ.)

ಉಬ್ಬಸ ಸಂಹಾರಿ.

ROWJEE'S

ASTHMA SPECIFIC

ಉಬ್ಬಸವು ಬಹಳ ಕಠಿಣವಾದ ವ್ಯಾಧಿ. ಶುರುವಾದರೆ ಸೌಖ್ಯಪಡಿಸುವುದು ಬಹುಕಷ್ಟ. ಇದು ಹೆಚ್ಚಾಗಿ ತಂದೆ ತಾಯಿಗಳಿಂದ ಮಕ್ಕಳಿಗೆ ಬರುವುದು ಸಹಜ. ಶುರುವಾದಾಗ ೭ ೧ಳ ಭಯಂಕರವಾಗಿ ಕಾಣಿಸುವುದು. ಶ್ವಾಸ ಸರಿಯಾಗಿ ಬಿಡಲಿಕ್ಕೆ ಆಗದೆ ಗಂಟ್ಲು ಹಿಡಿದಂತೆ ಆಗಿ ಈಗಲೋ ಇನ್ನೊಂದು ಕ್ಷಣಕ್ಕೋ ಪ್ರಾಣಹೋಗುವಂತೆ ಕಾಣಿಸುವುದು. ಯೆದೆಯಲ್ಲಿ ಬೆಕ್ಕು ಕೂಗಿದಂತೆ ಗೊಯಿ ಗೊಯಿ ಯೆಂಬ ಶಬ್ದವು ಕೇಳಿಸುವುದು. ಹಾಸಿಗೆಯಮೇಲೆ ಮೈಚಾಚಿ ಮಲಗಲಾಗದು. ಸಾಧಾರಣದ ಚಿಕಿತ್ಸೆಗೆ ಕೇಳದು. ಇಂಥಾ ಹಿಂಸೆಗಳನ್ನು ಕೊಡುವ ವ್ಯಾಧಿಯು, ನಮ್ಮ 'ಉಬ್ಬಸ ಸಂಹಾರಿ' ಯೆಂಬ ಔಷಧಿಯಿಂದ ಸೂರ್ಯನು ಉದಯಿಸುವಾಗಲೇ ಮಂಜುಗಳು ಅದೃಶ್ಯವಾಗುತ್ತಾ ಬರುವ ಹಾಗೆಯೇ ಬಹು ಶೀಘ್ರದಲ್ಲಿಯೇ ಉಬ್ಬಸವ್ಯಾಧಿಯು ಪರಿಪೂರ್ಣವಾಗಿ ಗುಣವಾಗುವದು. ಸಂದೇಹವೇ ಇಲ್ಲ. ಅನುಪಾನಕ್ರಮ ಕನ್ನಡದಲ್ಲಿ ಔಷಧದ ಕೂಡೆ ಕಳುಹಿಸಲ್ಪಡುವದು.

ಬಾಟ್ಲಿ ೧ಕ್ಕೆ ರೂ ೨-೮-೦ ವಿ. ಪಿ. ಖರ್ಚು ಪ್ರತ್ಯೇಕ.

ಶ್ರೀ ಕೃಷ್ಣನ್ ಬ್ರದರ್ಸ್ ಪೋಸ್ಟು ಬಾಕ್ಸ ನಂ. ೧೭೭. ಮದ್ರಾಸು.

ಕಿರ್ಲೋಸ್ಕರ ನೇಗಿಲು ನಂ ೯



ಉಪಯೋಗ:— ನಮ್ಮ ಯಾವತ್ತು ನೇಗಿಲುಗಳಲ್ಲಿ ಈ ನೇಗಿಲು ಹಿರಿದಾದದ್ದು. ಎರೆಯ ಭೂಮಿ, ಪಡ ಭೂಮಿಗಳನ್ನು ಸಾಗುವಳಿ ಮಾಡಲಿಕ್ಕೂ ಕಾಲುವೆಗಳಿಂದ ತೋಯ್ಯುವ ಭೂಮಿಗೂ ಇದರ ಉಪಯೋಗ ಬಹಳ. ಇದು ನಮ್ಮ ನೇಗಿಲು ನಂ ೧೦ ನೆಯದಂತೆ ಮಿಕ್ಕ ಉಪಯೋಗಕ್ಕೂ ಬರುವದು. ರಚನೆ:— ಇದರ ಕುಳಗಳು ಹಾಗೂ ಸವೆಯುವ ಭಾಗಗಳು ಸವೆಯದಂತೆ 'ಚಿಲಿಂಗ ಪ್ರೊಸೆಸ್ಸಿನಿಂದ' ಗಟ್ಟಿಮುಟ್ಟ ಮಾಡಲ್ಪಟ್ಟಿರುತ್ತವೆ. ಮೇಳಿಗಳು ಕವಣೆ ಇರುತ್ತವೆ. ಇದಕ್ಕೆ ತಿರುಗುವ ಕುಳವಿರುತ್ತದೆ. ಎಳೆಯುವ ಶಕ್ತಿ:— ೬ ರಿಂದ ೮ ಎತ್ತುಗಳು ಬೇಕು. ಸಾಲಿನ ಆಳಗಲ:— ೮ ರಿಂದ ೧೦ ಇಂಚು ಆಳ; ೧೨ ರಿಂದ ೧೪ ಇಂಚು ಅಗಲ. ತೂಕ:— ಸರಾಸರಿ ೨೦೦ ಪೌಂಡು. ಸವಿಸ್ತರ ಸಂಗತಿಯ ಬಗ್ಗೆ ಇದರ ಹಸ್ತಪತ್ರಿಕೆಯನ್ನು ನೋಡಿರಿ. ಬೆಲೆ ೩೩ ರೂಪಾಯಿ

ಕಿರ್ಲೋಸ್ಕರ ಬಂಧು. ಲಿಮಿಟೆಡ್ ಕಿರ್ಲೋಸ್ಕರವಾಡಿ. ಜಿ ಸಾತಾರಾ.

ಲಿಟ್ಲರ ಓರಿಯಂಟ್ಲ ಬಾಮು.

ನೋವು ಬಾಧೆಗಳ ನಿವಾರಣಾರ್ಥ!

೪೨ ವರ್ಷಗಳಿಂದ ಜಗತ್ತಿನ ತುಂಬ ಪ್ರಖ್ಯಾತಿಯನ್ನು ಪಡೆದ ಉಪಾಯ ವೆಂದರೆ ಇದೆ.

ಹಿಂದುಸ್ಥಾನದ ಅದ್ಭುತವಾದ ವೇದನಾಶಾಮಕವಾದ ಉಪಾಯವು!

ಕೆಳಗಿನ ವ್ಯಾಧಿಗಳಿಗೆ ತತ್ಕಾಲಿಕ ಗುಣ ಬೇಕಾಗಿದ್ದರೆ, ಇದನ್ನೇ ಉಪಯೋಗಿಸಿರಿ:—

ತಲೆಶೂಲಿ, ಸಂಧಿವಾತ, ಎಲ್ಲ ತರದ ಕಸ, ನರ ಸೆಳಕು, ಹುಲಿವಾತ, ಟೊಂಕನೋವು, ಅರ್ಧಾಂಗವಾಯು ಉಳುಕು (ವಳದದ್ದು)

ಸ್ವಲ್ಪೇ ಮುಲಾಮಿನಿಂದ ಒಹಳೇ ಗುಣ. ಉರುವು ಇಲ್ಲವೇಯಿಲ್ಲ. ಗುಳ್ಳೆಗಳೂ ಏಳುವದಿಲ್ಲ ಸುಖವಾಗಿ ಗುಣ ಕೊಡುತ್ತದೆ.

ಹಿಂದುಸ್ಥಾನದಲ್ಲಿಯೇ ಹಿಂದೀಯರಿಂದ ತಯಾರಾದದ್ದು

ನೆಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲವೇಯಿಲ್ಲ!

ಈ ದಿವಸವೆ.
ಒಂದು ಬಾಟ್ಲಿ ಕೊಳ್ಳಿ !

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಖಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ ಬಿ ೧೯೪೭ ವಾ. ವರ್ಗಣಿ ೧—೧೩—೦ ಮಾತ್ರ.

ಕನ್ನಡಿಗ.

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಂಚರಿಸ್ಸಲಿ)

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಂ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ } ಬಾಗಲಕೋಟೆ ರವಿವಾರ ಮಿತಿ ಮಾರ್ಗಶಿರ ಬಹುಳ ೩ ಶಕೆ ೧೮೪೯ ತಾ|| ೧೧-೧೨-೧೯೨೭. { ಸಂಚಿಕೆ ೩೪

Date 11—12-1927

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ, ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು ಅವುಗಳೊಳಗಿನ ಕಟ್ಟು ಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯಾಗಿ ಉಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದ ಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದ ಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ

WANTED.

Wanted Candidates for Telegraph and Station Master's Classes. Full particulars and Railway Fare Certificate on 2 annas stamp.

Apply to:-
Imperial Telegraph College, Delhi.

ಮಯೂರ ಶಿಖಾ

ದುರ್ಲಭವಾದ ವನಸ್ಪತಿಯು. ೩೦ ತೊಲೆಗೆ ೧ ರು ವೈದ್ಯರೂ, ವ್ಯಾಪಾರಸ್ಥರೂ, ಅನೇಕ ರಸಪದಾರ್ಥವಾದ ವನಸ್ಪತಿಗಳು ದೊರಕುವವು

ವೈದ್ಯ:—ವಾದಿರಾಜ ಜಹಗೀರದಾರ
ಮು. ಇಲಕಲ್ಲ (ವಿಜಾಪೂರ)

ಕರ್ನಾಟಕದ ಅಭಿಮಾನವಿರಲಿ.



ಬಹುಮಾನ ಕೊಡಲು ಬೇಕಾಗುವ ಬೆಳ್ಳಿಯ ಕಾಸ್ಕೆಟ್ಟು ಪೆಟ್ಟಿಗೆಗಳೂ, ಹರಿವಾಣಗಳೂ, ಟೋರ್ನಮೆಂಟು ಕಪ್ಪುಗಳೂ, ಬೆಳ್ಳಿಯ ಮತ್ತು ಬಂಗಾರದ ಮೆಡಲುಗಳೂ (ಪದಕಗಳು) ಬಿಕರಿಗೆ ಸಿದ್ಧವಾಗಿರುವವು. ಹಾಗೂ ಬೇಕಾಬೇಕಾದ ಹೊಸ ಹೊಸ ನಮೂನೆಗಳಲ್ಲಿ ಆರ್ಡರಿಗೂ ಮಾಡಿಕೊಡುವೆವು. ಕ್ಯಾಟಲಾಗನ್ನು ತರಿಸಿಕೊಳ್ಳಿ.

ನಮ್ಮ ಕಂಪನಿಯು ಹಳೆಯದು, ಮೈಸೂರ ಮಹಾರಾಜರೂ, ತ್ರಾವಣಕೋರದ ಮಹಾರಾಜರೂ, ದೊಡ್ಡ ದೊಡ್ಡ ಸಂಸ್ಥೆಗಳೂ, ಕ್ಲಬ್ಬುಗಳೂ ನಮ್ಮನ್ನು ಪ್ರೋತ್ಸಾಹಿಸುತ್ತಿರುವರು.

ಬೆಲೆಯು ಸುಲಭ! [ಒಂದು ವೇಳೆ ಪರೀಕ್ಷಿಸಿ.] ಕೆಲಸ ಬಹು ನಾಜೂಕು!!

ದಿ ಇಂಡಿಯನ್ ಜ್ಯುವೆಲರಿ ಮಾರ್ಟ, ನಗರ್ತಪೇಟೆ, ಬೆಂಗಳೂರ ಸಿಟಿ.

ಕನ್ನಡಿಗ.

ಬಾಗಲಕೋಟೆ: ಕನ್ನಡಿಗ ಮಾರ್ಗಶಿರ ಬಹುಳ ೩ ಶಕೆ ೧೮೪೯

ಸಂಪಾದಕರ ಭೂಮಿ

(೨೦)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು।
ನಿನ್ನ ಬೇಕವಮಾಡಿದಂಥ ಮಕ್ಕಳ ದೊಪ್ಪು!
ಚಿನ್ನದಾದರು ಚಿನ್ನವು ಮೇಣಬತ್ತಿಯು ನೊಂದು ಚಿನ್ಮಯಾಕಾಶದ
ನನ್ನ ದೇಹವು ನಿನ್ನ ವೀರಶಾಸನಕಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನಪ್ರಾಣವು ನಿನ್ನ ಗಂಧವನು ಹೀರಬಹ ಗಂಧವಹವೆಂದು ತಿಳಿಯೆ

—ಅಂಬಿಕಾತನಯ ದತ್ತ

ಖರಗಪೂರದ ಬಿ. ಎನ್. ರೈಲ್ವೆ ಕಂಪನಿಯ ಕೂಲಿಕಾರರು ಕಟ್ಟು ಮಾಡಿ, ಈಗ ಬಹು ದಿನ ಕೆಲಸದಿಂದ ತಡೆದು ನಿಂತಿದ್ದ ಸಂಗತಿಯು ಎಲ್ಲರಿಗೂ ಗೊತ್ತುಂಟು. ರೈಲ್ವೆ ಕಂಪನಿಯವರು ತಮ್ಮ ವೆಚ್ಚದಲ್ಲಿ ಉಳಿತಾಯ ಮಾಡಬೇಕೆಂದೆಣಿಸಿ ಕಂಪನಿಯ ಕೆಲಸದಲ್ಲಿಯ ಎಪ್ಪತ್ತು ಜನರನ್ನು ನೌಕರಿಯಿಂದ ದೂರಮಾಡಿದ್ದು ಅನ್ಯಾಯವಾದದ್ದೆಂದು ಉಳಿದ ಸಹೃದಯ ಕೂಲಿಕಾರರು ಕಟ್ಟು ಮಾಡಲು ಪ್ರಾರಂಭಿಸಿದರು. ದಿನಗಳೆದಂತೆ ಅದು ವಿರಾಟ ಸ್ವರೂಪ ಹೊಂದಿ, ಸಹಸ್ರಾವಧಿ ಕೂಲಿಕಾರರು ಕೆಲಸವಿಲ್ಲದೆ ತೊಳಲುತ್ತಿರುವದನ್ನು 'ಅಖಿಲ ಭಾರತೀಯ ಕೂಲಿಕಾರ ಸಂಘ'ದವರು ಲಕ್ಷಿಸಿ ಆ ಬಗ್ಗೆ ಚಳವಳ ಮಾಡಿದರು. ಶ್ರೀ. ಗಿರಿ ಮೊದಲಾದ ಮುಖಂಡರು ಮಧ್ಯಸ್ಥಿಕೆಗಾಗಿ ಓಡಾಡಹತ್ತಿದರು. ಆದರೆ ಕಂಪನಿಯ ಏಜಂಟನು ಇವರ ಮಧ್ಯಸ್ಥಿಗೆ ಮಣಿಯಲಿಲ್ಲ! ಆ ವೇಳೆ ಮುಖಂಡರು ಕೂಲೀ ಜನಸಂಖ್ಯೆ ವಿಶೇಷ ಆಗಿರುವ ವ್ಯಕ್ತಿಗಳ ಪರಿಷತ್ತನ್ನು ಕರೆದು, ಈ ಕಟ್ಟನ್ನು ಸರ್ವವ್ಯಾಪಿಯಾಗಿ ಮಾಡಬೇಕೆಂದು ನಿರ್ಧರಿಸಿ, ಆ ಬಗ್ಗೆ ಒಡನೆಯೆ ಯತ್ನ ನಡೆಸಿದರು! ಸರಕಾರದ ಸಹಾಯವನ್ನೂ ಕೇಳಿ ಕೊಂಡರು. ಇಷ್ಟರಲ್ಲಿ ದೀನದಯಾಳು ಎಂಡ್ರ್ಯೂಜ ಇವರಿಗೆ ನೆರವಾದರು. ಕಟ್ಟು ಕಡೆಗೆ ಸರಕಾರದ ಮಧ್ಯಸ್ಥಿಯ ಮೂಲಕ ಕಂಪನಿಯವರು ಎಲ್ಲ ಜನರನ್ನು ಕೆಲಸದ ಮೇಲೆ ತೆಗೆದು ಕೊಳ್ಳಲಿಕ್ಕೂ ಮತ್ತು ಈ ಕಟ್ಟಿನ ಅವಧಿಯಲ್ಲಿಯ ಅವರವರ ಪಗಾರವನ್ನು ಸಹ ಕೊಡಲಿಕ್ಕೂ ಮೊನ್ನೆ ಒಪ್ಪಿದರೆಂದು ತಿಳಿಸಲು ಆನಂದವೆನಿಸುತ್ತದೆ. ನೀಟಾಗಿ ನಿಂತು ಒದಗಿದ್ದನ್ನೆಲ್ಲ ಸಹಿಸಲಿಕ್ಕೆ ಧೈರ್ಯ ಮಾಡಿದರೆ ಕಟ್ಟುಗಳ ಉದ್ದೇಶವು ಖಂಡಿತವಾಗಿ ಹಸ್ತಗತವಾಗುವದೆನ್ನಲಿಕ್ಕೆ ಇದಕ್ಕೂ ಹೆಚ್ಚಿನ ಉದಾಹರಣೆಯೇ ಬೇಡ! ಬಡ ಕೂಲಿಕಾರರ ಅಡಚಣಿಗಳ ಕಡೆಗೆ ಮುಖಂಡರು ಬೇಗ ಲಕ್ಷ್ಯಕೊಡುತ್ತಿರಬೇಕು.

ಬೊಲ್ಶೆವಿಕರ ಹತ್ತು ವರ್ಷದ ಆಳಿಕೆಯು ೧೯೧೭ ಇಸ್ವಿಯಲ್ಲಿ ರಸಿಯಾ ದೇಶದಲ್ಲಿ ಲೆನಿನ ಮಹಾಪುರುಷನಿಂದ ಪ್ರಾರಂಭಿಸಲ್ಪಟ್ಟ, ಈ ಕ್ರಾಂತಿಕಾರಕ ರಾಜ್ಯ ಪದ್ಧತಿಯು ಈ ಹೊತ್ತಿಗೂ ಉತ್ತಮ ರೀತಿಯಿಂದ ಸಾಗಿದ್ದು ಜನರ ಮನಸ್ಸಿನಲ್ಲಿ ಘನವಾಗಿ ಬೇರೂರಿಕೊಂಡಿದೆ. ಅದರ ಸೌಖ್ಯ ಸೌಲಭ್ಯಗಳು ದೇಶದಲ್ಲಿ ಇನ್ನೂ ಅಷ್ಟೊಂದು ಒಡೆದು ಕಾಣದಿದ್ದರೂ ಜನರು ತಾವು ಮೊದಲಿಗಿಂತಲೂ ಹೆಚ್ಚು ಉತ್ಸಾಹದಿಂದಲೂ ಉಲ್ಹಾಸದಿಂದಲೂ ಜೀವಿಸುತ್ತೇವೆಂದು ಮತಪಡುತ್ತಾರೆ; ಈ ರಾಜ್ಯ ಪದ್ಧತಿಯ ಮೂಲಕ ರಸಿಯಾದ ಕೂಲಿಕಾರರು ಉಳಿದ ದೇಶದೊಳಗಿನ ಕೂಲೀ ಜನರಿಗಿಂತ ಇನ್ನೂ ಹೆಚ್ಚಿಗೇನು ಸುಖಹೊಂದಿಲ್ಲ; ಇದು ನಿಜ. ಅವರ ಸುಖಸಾಧನೆಗಳು ಶ್ರೀಮಂತ ದೇಶಗಳ ಕೂಲೀ ಜನರಷ್ಟು ವಿಪುಲತೆಯನ್ನು ಹೊಂದಿಲ್ಲ. ಆದರೂ ಅವರ ಮನೋವೃತ್ತಿಯಲ್ಲಿ ವಿಚಿತ್ರವಾದ ಭೇದವುಂಟಾಗಿದ್ದು ಸರ್ವತ್ರವೂ ಕಂಡು ಬರುತ್ತಲಿದೆ. ರಶಿಯಾ ದೇಶದ ಸಮಾಜದಲ್ಲಿ ಈ ಹೊತ್ತು ಉಚ್ಚ ನೀಚ ಭಾವನೆಯು ಅಳಿದು ಹೋಗಿದೆ. ಎಲ್ಲರೂ ಪ್ರತಿಯೊಬ್ಬನಿಗೂ 'ತವರಿಸ' ಅಂದರೆ 'ಗೆಳೆಯ'ನೆಂದೇ ಸಂಬೋಧಿಸಬೇಕು. ಸ್ಟೇಶನದೊಳಗಿನ ಹಮಾಲರಿಗೂ 'ತವರಿಸ'ಯೆಂದೇ ಸಂಬೋಧಿಸಿ, ನಮ್ಮ ಗಂಟು ಹೊರಿಸಬೇಕು! ಎಲ್ಲರೂ ಸರಿಸಮಾನರೆಂಬ ಭಾವನೆಯು ಅವರಲ್ಲಿ ದೃಢವಾಗಿ ನಾಟಿಕೊಂಡಿದೆ. ಎಲ್ಲ ಗಿರಣಿಗಳು ಈ ಸರಕಾರದ ಅಧಿಕಾರಕ್ಕೆ ಸೇರಿಸಲ್ಪಟ್ಟಿವೆ. ಅವುಗಳಲ್ಲಿಯ ವ್ಯವಸ್ಥೆಯೆಲ್ಲವೂ ಅಲ್ಲಿ ದುಡಿಯುತ್ತಿರುವ ಕೂಲಿಕಾರ ಸಂಘದ ಮತಿಯಿಂದಲೇ ಸಾಗಿಸಲ್ಪಡುವಂತೆ ಏರ್ಪಾಡಾಗಿದೆ. ಒಕ್ಕಲಿಗನೇ ಭೂಮಿಗೆ ಸರ್ವದೃಷ್ಟಿಯಿಂದ ಮಾಲಕನೆಂದು ನಿರ್ಣಯಿಸಿರುವರು. ಫ್ರಾನ್ಸ ದೇಶದಲ್ಲಿ ಆಗಿಹೋದ ಕ್ರಾಂತಿಗಿಂತಲೂ ಇದು ಹೆಚ್ಚು ಜೀವವುಳ್ಳದ್ದಾಗಿದೆ. ಯಾಕಂದರೆ ಫ್ರಾನ್ಸ ದೇಶದ ಕ್ರಾಂತಿ ತತ್ವಗಳು ಹಿಂದುಗಡೆ, ಕಾಲು ಕೆಳಗೆ ತುಳಿಯಲ್ಪಟ್ಟವು. ಯಾವ ಪದ್ಧತಿಯ ಬಗ್ಗೆ ಜನರು ಅಷ್ಟೊಂದು ಬೇಸರಗೊಂಡು ಅದನ್ನು ಮುರಿದಿಡಿಯಲು ಹವಣಿಸಿದ್ದರೋ ಅದೇ ಮಾದರಿಯ ಪದ್ಧತಿಯೇ ಪುನಃ ಅದರ ಕೊರಳಿಗೆ ಬಿತ್ತು. ಆದರೆ ರಸಿಯಾದಲ್ಲಿಯ ಕ್ರಾಂತಿತತ್ವಗಳು ಈ ಹೊತ್ತಿಗೂ ಸರ್ವತೋಮಾನ್ಯವಾಗಿ ಮೆರೆಯುತ್ತವೆ. ಝಾರನ ಮತ್ತು ಉಳಿದ ಸರದಾರರ ಅರಮನೆಗಳೆಲ್ಲ ಈ ಹೊತ್ತು ಬಡ ಜನರಿಗೆ ವಿಶ್ರಾಂತಿಗೃಹಗಳಾಗಿ ಆಗಲಿ, ಔಷಧಾಲಯಗಳಾಗಿ ಆಗಲಿ, ಮಕ್ಕಳಿಗೆ ಶಾಲೆಗಳಾಗಿ ಆಗಲಿ ಮಾರ್ಪಡಿಸಲ್ಪಟ್ಟಿವೆ.

ಕರ್ನಾಟಕ ಏಕೀಕರಣ ಪರಿಷತ್ತಿನ ಬಗ್ಗೆ ಬಾಗಲಕೋಟೆಯವರು ಉತ್ಸಾಹದಿಂದ ಕೆಲಸ ಮಾಡಬೇಕಾಗಿದ್ದು ಸ್ಪಷ್ಟವಾಗಿದೆ. ಕೇವಲ ಬಾಗಲಕೋಟೆಯಲ್ಲಿ ನಾವು ಕಾರ್ಯಮಾಡಿದರೆ ಪರಿಷತ್ತು ಯಶಸ್ವಿಯಾಗಲಾರದು. ಬಾಗಲಕೋಟೆಯವರು ಪೂರ್ವಸಿದ್ಧತೆಯನ್ನೆಲ್ಲ ನೆಟ್ಟಗಾಗಿ ಮಾಡಬಹುದು. ಒಳ್ಳೆ ವಿಶಾಲವಾದ ಮಂಟಪವನ್ನು ಹಾಕಬಹುದು; ಸಜ್ಜಾಗಿ ಭೋಜನದ ವ್ಯವಸ್ಥೆ ಮಾಡಬಹುದು; ಮಹತ್ವದ ಕಾರ್ಯಕ್ರಮವನ್ನು ಸಿದ್ಧಪಡಿಸಬಹುದು. ಆದರೆ ಕರ್ನಾಟಕದ ಎಲ್ಲ ಭಾಗಗಳಿಂದಲೂ ಪ್ರತಿನಿಧಿಗಳು ಹಿಂಡು ಹಿಂಡಾಗಿ ಬಾರದಿದ್ದರೆ ನಾವು ಮಾಡಿದ ಕಾರ್ಯವೆಲ್ಲ ವ್ಯರ್ಥವೇ ಆಗುವದು. ಕಳೆದ ಸಲ ಬೆಂಗಳೂರ ಬಂಧುಗಳು ಸಾಹಿತ್ಯ ಪರಿಷತ್ತಿನ ಬಗ್ಗೆ ಒಳ್ಳೇ ಉತ್ಸಾಹದಿಂದ ಪೂರ್ವಸಿದ್ಧತೆ ಮಾಡಿದರು. ಆದರೆ "ಎಂಕಾ ನೂಣಾ ಶೀನಾ" ಎಂಬಂತೆ ೮-೧೦ ಪ್ರತಿನಿಧಿಗಳು ಮಾತ್ರ ಅಲ್ಲಿಗೆ ಹೋದರು! ನಮ್ಮ ಪರಿಷತ್ತಿಗೂ ಈ ಬಗೆಯ ಅನಾಸ್ಥೆಯು ಅಡ್ಡರಿಸಿಕೊಳ್ಳಬಾರದೆಂಬುದಾಗಿದ್ದರೆ, ಸ್ವಾಗತಕಮಿಟಿಯವರು ಕರ್ನಾ

ಟಕದ ಎಲ್ಲ ಭಾಗಗಳಲ್ಲಿಯೂ ಏಕೀಕರಣದ ಉಗ್ಗಿಯೂ, ಸಧ್ಯದಲ್ಲಿ ಪರಿಷತ್ತಿನ ಅವಶ್ಯಕತೆಯ ಬಗ್ಗೆಯೂ ಚನ್ನಾಗಿ ಚಳವಳವನ್ನು ಮಾಡಬೇಕಾಗುವದು. ಪೂರ್ವಸಿದ್ಧತೆಯಲ್ಲಿ ಈ ಪ್ರಚಾರ ಕಾರ್ಯವನ್ನು ಸ್ವಾಗತ ಮಂಡಲದವರು ಕೈಕೊಂಡು ಕರ್ನಾಟಕದ ಪ್ರತಿಯೊಂದು ಭಾಗದಲ್ಲಿಯೂ ಏಕೀಕರಣದ ಧ್ವನಿ-ಪ್ರತಿಧ್ವನಿಯು ಪ್ರಚಂಡವಾಗಿ ಏಳ್ವ, ಅದರ ಪರಿಣಾಮದಿಂದ ಕನ್ನಡ ನಾಡಿನ ಜನತೆಯಲ್ಲಿ ಬಾಗಲಕೋಟೆಗೆ ಬಂದು ಸೇರುವಂತೆ ಮಾಡಬೇಕು. ಎಲ್ಲ ಬಗೆಯ ಜನರೂ ಬರುವಂತೆ ಮೋಹಕವಾದ ಕರ್ನಾಟಕ ರಾಷ್ಟ್ರೀಯ ಸಪ್ತಾಹವನ್ನು ಹೂಡಬೇಕು. ಸಾಹಿತ್ಯ ಪರಿಷತ್ತಿನ ಜೊತೆಗೆ ಪರಿಷತ್ತು, ವ್ಯಾಪಾರೀ ಪರಿಷತ್ತು, ರಾಜಕೀಯ ಪರಿಷತ್ತು, ಸ ಸ್ಥಾನಿಕರ ಪರಿಷತ್ತುಗಳು ಅದೇ ಸಮಯಕ್ಕೆ ನೆರೆಯುವಂತೆಯೂ, ಔದ್ಯೋಗಿಕ, ಐತಿಹಾಸಿಕ, ಚಿತ್ರಕಲೆ, ದನದ ಹಾಗೂ ಖಾದೀ ಪ್ರದರ್ಶನಗಳು ತೆರೆಯಲ್ಪಡುವಂತೆಯೂ ಏರ್ಪಾಡು ಮಾಡಬೇಕು. ಬಾಗಲಕೋಟೆಯವರು ಕರ್ನಾಟಕ ರಾಷ್ಟ್ರೀಯ ಆಂದೋಲನದಲ್ಲಿ ಈ ವರೆಗೆ ಅಷ್ಟೊಂದು ಮಹತ್ವದ ಭಾಗ ತೆಗೆದುಕೊಂಡಿರುವದೇ ಇಲ್ಲ. ಒಂದಾದರೂ ಮಹತ್ವದ ಪರಿಷತ್ತು ನಮ್ಮಲ್ಲಿ ಕೂಡಿಲ್ಲ. ಆದ್ದರಿಂದ ಈ ಸಲ ಈ ಪ್ರಭವ ಸಂವತ್ಸರದಲ್ಲಿ ಪ್ರಾರಂಭಿಸಿದ ಕಾರ್ಯವು ಕರ್ನಾಟಕದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿರುವಂತೆ ಆಚರಿಸುವದು ಅತ್ಯಾವಶ್ಯಕವಾದದು. ಈ ಕಾರಣಕ್ಕಾಗಿ ಎಚ್ಚತ್ತ ಬಾಗಲಕೋಟೆಯು ಹುರುಪಿನಿಂದ ಹೊಸದಾದ ಹಾದಿಯನ್ನು ತುಳಿದ ಅಖಂಡ ಕರ್ನಾಟಕಕ್ಕೆ ಮೇಲುಪಂಕ್ತಿಯನ್ನು ಹಾಕಿಕೊಡುವದರ ಕಡೆಗೆ ವಿಲಂಬವಿಲ್ಲದೇ ಲಕ್ಷ್ಯಗೊಡಲಿ! ಕರ್ನಾಟಕದ ಸಂಸ್ಕೃತಿಯೂ ಕನ್ನಡ ನಾಡಿನ ಜೀವಾಳವೂ, ಅರ್ಥಾತ್ ಕನ್ನಡಿಗರ ಸರ್ವಸ್ವವೂ ವಿಕಾಸಹೊಂದುವಂತೆ ಜಿಗಟಿನಿಂದ ಕಾರ್ಯಭಾರವನ್ನು ನೀಗಿಸಲಿ!

ಗ್ರಹಣದ ಗಾಡಿಯೂ
ರೈಲ್ವೆಯವರ ಅವ್ಯವಸ್ಥೆಯೂ

ಎಮ್. ಎಸ್. ಎಮ್. ರೇಲ್ವೇ ಕಂಪನಿಯಂದರೆ ಅವ್ಯವಸ್ಥೆಯ ಬೀಡೆಂಬುದು ಪ್ರಸಿದ್ಧವೇ ಇದೆ! ಪ್ರವಾಸಕರ ಅನುಕೂಲತೆಗಳನ್ನು ದುರ್ಲಕ್ಷಿಸುವದರಲ್ಲಿ ಇವರು ಬಲು ಪ್ರವೀಣರು! ಇಂಥ ಪರಿಸ್ಥಿತಿಯಲ್ಲಿ ಗ್ರಹಣದ ಸಲುವಾಗಿ ಬಾಗಲಕೋಟೆಯಿಂದ ಸೀತೀಮನಿಗಾಗಿ 'ಸ್ಪೇಶಲ್' ಡಬ್ಬಿಗಳನ್ನು ಹಚ್ಚಲು ಒಪ್ಪಿದ್ದೊಂದು ಜಗತ್ತಿನಲ್ಲಿಯ ಆಶ್ಚರ್ಯಕರವಾದ ಸಂಗತಿಯೇ! ಇಂತಹ ಆಶ್ಚರ್ಯದಲ್ಲಿ ಎಲ್ಲವೂ ಸುರಳೀತವಾಗಿ ಸಾಗುವದೆಂತು? ಹಾಗೆ ಸಾಗಿದ್ದರೆ ಅದೂ ಒಂದು ಆಶ್ಚರ್ಯವೇ ಆಗುತ್ತಿತ್ತು!! ಸೀತೀಮನಿಯಿಂದ ೯ ತಾ|| ದಿನ ಬೆಳಿಗ್ಗೆ ೮ ಹೊಡೆದು ೧೦ ಮಿನಿಟಿಗೆ ಗಾಡಿಯನ್ನು ಬಿಡುವೆವೆಂದು ಬಾಗಲಕೋಟೆಯ ಸ್ಟೇಶನ್ನ ಮಾಸ್ತರರು ನಮಗೆ ಬರೆದು ತಿಳಿಸಿದ್ದಾರೆ. ಆದರೆ ಬಾಗಲಕೋಟೆಯ ಸ್ಟೇಶನ್ನ ಮಾಸ್ತರರಂಥ ಒಬ್ಬಿಬ್ಬ ಸದ್ಗುಣೀ ಅಧಿಕಾರಿಗಳು ಕಲ್ಯಾಣ ಬುದ್ಧಿಯಿಂದ ಪ್ರಯತ್ನ ಪಟ್ಟದ್ದು ಎಮ್. ಎಸ್. ಎಮ್. ಕಂಪನಿಯಲ್ಲಿ ಕೊನೆಗಾಣುವದು ಹೇಗೆ? ತಮಗೆ ಯಾವ ಬಗೆಯ ಅಪ್ಪಣೆಯು ವರಿಷ್ಟ ಅಧಿಕಾರಿಗಳಿಂದ ದೊರೆತಿಲ್ಲವೆಂದೂ, ಅದಕ್ಕಾಗಿ ತಾವು ಮುಂಜಾನೆಯ ಗೂಡ್ಸಗಾಡಿಗೆ ಡಬ್ಬಿಗಳನ್ನು ಹಚ್ಚಲಾರೆವೆಂದೂ ಸೀತೀಮನಿಯ ಸ್ಟೇಶನ್ನ ಮಾಸ್ತರರು ಹೇಳಿಬಿಟ್ಟರಂತೆ! ಈ ಪುಣ್ಯಾತ್ಮರ ಕಾರ್ಯದಕ್ಷತೆಗಾಗಿ ೩೦೦ ಜನರು ಕೂಳಿಲ್ಲದೇ, ಸೀತೀಮನಿಯಲ್ಲಿ ಅನೇಕ ಬಗೆಯ ತೊಂದರೆಗಳಿಗೀಡಾಗಿ ಸಂಜೆಯ ವರೆಗೂ ಕೊಳೆಯುತ್ತ ಬೀಳಬೇಕಾಯಿತು! ತನ್ನ ಅಧಿಕಾರದ ದರ್ಪವನ್ನು ತೋರಿಸುವದರ ಬದಲು ಸೀತೀಮನಿಯ ಸ್ಟೇಶನ್ನ ಮಾಸ್ತರನು ತಂತಿಯಿಂದ ಮೇಲಧಿಕಾರಿಗಳಿಗೆ ಕೇಳಿ, ಅಪ್ಪಣೆ ಪಡೆದು, ಜನರಿಗೆ ಸೌಕರ್ಯವನ್ನುಂಟು ಮಾಡಿದ್ದರೆ ಪುಣ್ಯವು ತನಗೆ ಲಭಿಸಿತೆಂಬ ಬಹು ಭೀಕರವಾದ ಭಯವು ಅವನಿಗೆ ತಗಲಿರಬಹುದು!! ಜನರನ್ನು ತೊಂದರೆಗಳಿಗೀಡುಮಾಡಿದ ಪಾಪವನ್ನೇ ಕಟ್ಟಿಕೊಳ್ಳಲು ಟೊಂಕ ಕಟ್ಟಿದ ಮಹನೀಯನಿಗೆ ಏನು ಹೇಳಿದರೇನು? ಬಾಗಲಕೋಟೆಯ ಮಾಮಲೇದಾರರ ಮಾತನ್ನು ಸಹ ಇವನು ಲೆಕ್ಕಿಸಲಿಲ್ಲವಂತೆ! ಮೇಲಧಿಕಾರಿಗಳಾದರೂ ಇವನಿಗೆ ಅಪ್ಪಣೆ ಕೊಡಲು ಮರೆತದ್ದು ನೋಡಿದರೆ ನಮಗೆ ತಿಳಿಯದು. ಈ ವಿಷಯದಲ್ಲಿ ತಪ್ಪುಗಾರರನ್ನು ರೇಲ್ವೇಯವರು ಸರಿಯಾದ ಶಿಕ್ಷೆಗೆ ಗುರಿಮಾಡಿ ಮುಂದೆ ಇಂಥ ಪ್ರಸಂಗಗಳಲ್ಲಿ ಪ್ರಯಾಣಿಕರಿಗೆ ಅನನುಕೂಲತೆಯಾಗದಂತೆ ಜಾಗರೂಕರಾಗಿರತಕ್ಕದ್ದೆಂಬ ಬುದ್ಧಿಯನ್ನು ತಪ್ಪುಗಾರರಿಗೆ ಕಲಿಸತಕ್ಕದ್ದು.

ರೇಲ್ವೇ ಕಂಪನಿಯಿಂದ 'ಕನ್ನಡಿಗ'ನ ಸಂಪಾದಕರಿಗೆ ಬಂದ ಪತ್ರದ ಮೇಲಿಂದ ನೋಡಿದರೆ, ಎಲ್ಲವೂ ಸುವ್ಯವಸ್ಥೆಯಾದಂತೆ ಕಂಡುಬರುತ್ತದೆ. ಆ ಪತ್ರವು ಹೀಗಿದೆ—

THE M. & S. M. RY. CO., LD. G. 23

(Incorporated in England)

No.________ Bagalkot Station

To 7-12-1927

Mr. S. P. Mangalwedkar

D Sir,

As suggested by you yesterday morning it has been arranged to run the evening goods train with coaches as far as Sitimani and return with passengers vehicles on 9th morning leaving Sitimani at 8/10. Will you please take the trouble to intimate the intended passengers accordingly?

Yours truely,

Keshavarao S. M.

ಇದರ ಆಧಾರದಿಂದ ಎಮ್. ಎಸ್. ಎಮ್. ರೇಲ್ವೇ ಕಂಪನಿಯಮೇಲೆ, ಕಂಪನಿಯ ಅಕ್ಷಮ್ಯವಾದ ದುರ್ಲಕ್ಷ ಹಾಗೂ ಅವ್ಯವಸ್ಥೆಯ ಬಗ್ಗೆ ಜನರು ದಾವೆ ಮಾಡಲಿಕ್ಕೆ ಬರುವಂತಿದೆ. ಈ ಬಗ್ಗೆ 'ಕನ್ನಡಿಗ'ನಿಗೆ ಸಹಾಯ ಮಾಡಲು ಸಿದ್ಧರಿದ್ದ ಜನರು ನಮಗೆ ಅವಶ್ಯವಾಗಿ ಭೆಟ್ಟಿಯಾಗಬೇಕಾಗಿಯೂ ಸಾಕ್ಷಿ, ಪುರಾವೆಗಳನ್ನೂ ನಮಗೆ ಒದಗಿಸಿ ಕೊಡಬೇಕಾಗಿ ಬಿನ್ನಹವಿದೆ.

ಕರ್ನಾಟಕದ ಏಕೀಕರಣ ಪರಿಷತ್ತು "ನವಕರ್ನಾಟಕ"ದ ಮತ.

ಈ ಪರಿಷತ್ತನ್ನು ನೆರಿಸುವ ಕುರಿತು ಬಾಗಲಕೋಟೆಯವರು ತಾ॥ ೮-೧೨-೨೭ನೇ ದಿನ ನಿರ್ಧರಿಸಿದ್ದು ಅತ್ಯಂತ ಸ್ತುತ್ಯವಾದದ್ದು. ಇದರ ಕಾರ್ಯನಿರ್ವಾಹಕ ಸಂಘದವರು ಈ ಸಭೆಯನ್ನು ಅತ್ಯಂತ ಯಶಸ್ವಿಯಾಗಿ ಮಾಡುವರೆಂದು ನಾವು ಆಶಿಸುತ್ತೇವೆ. ಕರ್ನಾಟಕದಲ್ಲಿ ಕರ್ನಾಟಕದ ಏಕೀಕರಣದ ವಿಷಯದಲ್ಲಿ ಅಭಿಲಾಷೆಯು ಏನೂ ಇಲ್ಲೆಂದು ಸರಕಾರದವರು ಹೋದ ಕೌನ್ಸಿಲದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರಷ್ಟೇ. ಈ ಅಭಿಪ್ರಾಯವು ಎಷ್ಟು ಸುಳ್ಳು ಮತ್ತು ತಪ್ಪು ಇರುತ್ತದೆಂಬವನ್ನು ಈ ಬಾಗಲಕೋಟೆಯ ಏಕೀಕರಣ ಪರಿಷತ್ತು ಇಡೀ ದೇಶದಲ್ಲಿ ಬಹಿರಂಗಗೊಳಿಸುವಂತೆ ಅದನ್ನು ಒಳ್ಳೇ ಉತ್ಸಾಹದಿಂದ ಅದರ ಪ್ರವರ್ತಕರು ಜರಗಿಸುವರೆಂದು ನಮ್ಮ ಪೂರ್ಣ ನಂಬಿಗೆ ಇದೆ. ಈ ಪರಿಷತ್ತಿನ ಕಾಲಕ್ಕೆ ಬೇರೆ ಬೇರೆ ಪ್ರಾಂತಗಳ ಕರ್ನಾಟಕಸ್ಥರನ್ನು ಬರಮಾಡಿಕೊಂಡು ಬಲವಾದ ರೀತಿಯಿಂದ ಇದರ ಚಳವಳಿಯನ್ನು ಮುಂದೆ ಹ್ಯಾಗೆ ನಡಿಸಬೇಕೆಂಬದನ್ನು ಇಲ್ಲಿ ನಿರ್ಧರಿಸುವದು ಅವಶ್ಯ. ಸುಧಾರಣಾ ಕಾಯದೆಯ ಹೊಸ ಯೋಜನೆಯು ಸ್ವಲ್ಪ ಕಾಲದಲ್ಲಿಯೇ ಬರತಕ್ಕದ್ದದೆ. ಅದ್ದರಿಂದ ಕರ್ನಾಟಕಸ್ಥರು ತಮ್ಮ ಬೇಡಿಕೆಯನ್ನು ಇದೇ ಕಾಲಕ್ಕೆ ಮಾಡಬೇಕಲ್ಲದೆ ಮತ್ತಾವ ಕಾಲದಲ್ಲಿ ಮಾಡಬೇಕು? ಅವರು ತಮ್ಮ ಕರ್ನಾಟಕದ ಬಗ್ಗೆ ಒಂದು ಪ್ರಾಂತಿಕ ರಾಜ್ಯಯೋಜನೆಯನ್ನು ಸಿದ್ಧಪಡಿಸತಕ್ಕದ್ದು. ಮತ್ತು ಅದನ್ನು ಅಮಲಿನಲ್ಲಿ ತರಲು ಅವರು ಒಂದು ಬಲವಾದ ಚಳವಳಿಯನ್ನು ಎಬ್ಬಿಸತಕ್ಕದ್ದು. ಇದಲ್ಲದೆ ಈ ಸಭೆಯ ದ್ವಾರಾ ಕರ್ನಾಟಕಸ್ಥರಲ್ಲಿ ಇತ್ತಿತ್ತ ಪ್ರಸಾರವಾಗುತ್ತಿರುವ ನಾನಾ ಬಗೆಯ ಅಂಶಗಳನ್ನು ನಿವಾರಿಸಿ ಮಾಡಲಿಕ್ಕೆ ಶಕ್ಯವಾಗುತ್ತದೆ. ಕರ್ನಾಟಕದ ಏಕೀಕರಣದಿಂದ ಇಲ್ಲಿ ಅಲ್ಪ ಸಂಖ್ಯಾತರಾದ ತೆಲಗರು, ಮರಾಠಿ ಜನರು ಭಯಪಡುವಂತೆ ತೋರುತ್ತದೆ. ಅದರಂತೆಯೇ ಬ್ರಾಹ್ಮಣರು, ಬ್ರಾಹ್ಮಣೇತರರು, ಲಿಂಗಾಯತರು ಮತ್ತು ಮುಸಲ್ಮಾನರು ಒಂದೊಂದು ಬಗೆಯ ಸಂಶಯ ಭಾವವನ್ನು ತಾಳಿದ್ದು ಕಂಡು ಬರುತ್ತದೆ. ಅದರ ನಿಮಿತ್ತ ಕರ್ನಾಟಕ ಏಕೀಕರಣ ಪರಿಷತ್ತನ್ನು ನೆರಿಸಿದ್ದಾದರೆ ಈ ತರದ ತಿಳುವಳಿಕೆಯನ್ನು ನಾವು ಪಡೆಯಬಹುದಾಗಿದೆ. ಒಂದು ವೇಳೆ ಈ ಪ್ರಯತ್ನದಲ್ಲಿ ಯಾರಾದರೂ ತಪ್ಪು ದಾರಿ ಹಿಡಿದಿದ್ದರೆ ಅವರನ್ನು ಸರಿಯಾದ ಮಾರ್ಗಕ್ಕೆ ಹಚ್ಚ ಬಹುದಾಗಿದೆ. ಒಟ್ಟಿಗೆ ಈ ಪರಿಷತ್ತು ಕರ್ನಾಟಕದ ಯಾವತ್ತೂ ಜಾತಿ ಮತ್ತು ಪಂಗಡಗಳಲ್ಲಿ ನಿಜವಾದ ದೇಶಾಭಿಮಾನವನ್ನು ಹುಟ್ಟಿಸಲು ಬಹಳ ಸಹಾಯಕಾರಿಯಾಗಿದೆ. ಆದ್ದರಿಂದ ಎಲ್ಲ ಕರ್ನಾಟಕಸ್ಥರೂ ಇದಕ್ಕೋಸ್ಕರ ವಿಶೇಷ ಉತ್ಸುಕತೆಯನ್ನು ತೋರಿಸಿ ಈ ಕಾರ್ಯವನ್ನು ಯಶಸ್ವಿಯಾಗಿ ಮಾಡಬೇಕೆಂದು ನಾವು ಆಗ್ರಹ ಪೂರ್ವಕ ಸೂಚಿಸುತ್ತೇವೆ. ಈ ಪರಿಷತ್ತಿನ ಕಾಲಕ್ಕೆ ಕರ್ನಾಟಕ ಸಾಹಿತ್ಯ ಪರಿಷತ್ತು ಔದ್ಯೋಗಿಕ ಪ್ರದರ್ಶನ ಇವುಗಳನ್ನು ಸಹ ಅನುಕೂಲವಾದರೆ ಸತ್ಕಾರಕ ಸಂಘದವರು ಮಾಡಬೇಕೆಂತಲೂ ನಮ್ಮ ಸೂಚನೆ ಇದೆ.

ಕ. ಪ್ರಾ. ಕಾಂ. ಕಮಿಟಿಯೂ ಏಕೀಕರಣವೂ.

ಏಕೀಕರಣದ ಬಗ್ಗೆ ಜನರಲ್ಲಿ ಜಾಗ್ರತೆಯನ್ನುಂಟು ಮಾಡಲು, ಈ ವರ್ಷದಲ್ಲಿ ಪ್ರಚಾರ ಕಾರ್ಯಕ್ಕೆಂದು ಪ್ರಾ. ಕಾಂ. ಕ. ೧೫೦೦ ರೂ ಗಳನ್ನು ವೆಚ್ಚ ಮಾಡತಕ್ಕವರಿದ್ದಾರೆ. ಚಿಕ್ಕ ಚಿಕ್ಕ ಗ್ರಂಥಗಳನ್ನು ಪ್ರಕಟಿಸುವದೂ ವ್ಯಾಖ್ಯಾನಗಳನ್ನು ಏರ್ಪಡಿಸುವದೂ ಏಕೀಕರಣದ ಬಗ್ಗೆ ಒಂದು ಕೈಪಿಡಿಯನ್ನು ಪ್ರಕಟಿಸುವದೂ, ಈ ವರ್ಷದ ಕಾರ್ಯಕ್ರಮವಾಗಿದೆ

ಕ ಏ ಸಭೆಯ ಕಾರ್ಯಕಾರೀ ಮಂಡಲವು.

ಸ ಕಷ್ಟ ಸಭಾಸದರು ಬಾರದ್ದರಿಂದ ೪-೧೨-೨೭ಕ್ಕೆ ಆಗತಕ್ಕ ಸಭೆಯು ಮುಂದೆ ಹಾಕಲ್ಪಟ್ಟು ೫ನೇ ದಿನ ಕೂಡಿತು. ಶ್ರೀ. ರಾ. ಸಾ. ಹಳಕಟ್ಟಿಯವರೂ ದಿವಾಕರರೂ ಬಂದಿದ್ದರು. ಇದುವರೆಗೆ ಆದ ಕೆಲಸದ ವರದಿಯೂ ಲೆಕ್ಕವೂ ಓದಲ್ಪಟ್ಟು ಒಪ್ಪಿಗೆ ಕೊಡಲ್ಪಟ್ಟಿತು. ಅಲ್ಲಿ ಸ್ವೀಕರಿಸಲ್ಪಟ್ಟ ಗೊತ್ತುವಳಿಗಳೇನೆಂದರೆ, (೧) ಬಾಗಲಕೋಟೆಯವರು ಕ ಏ ಪರಿಷತ್ತನ್ನು ಕರೆಯುವ ನಿಶ್ಚಯ ಮಾಡಿದ್ದನ್ನು ಕೇಳಿ ಸಭೆಯು ಅವರನ್ನು ಅಭಿನಂದಿಸುತ್ತದೆ. (೨) ೧ ಲಕ್ಷ ಅಂಕಿತಗಳನ್ನು ತೆಗೆದುಕೊಳ್ಳುವ ಕಾರ್ಯದಲ್ಲಿ ಸೇವಾದಲದವರೂ ಕ ಪ್ರಾ ಕಾಂಗ್ರೆಸ ಕಮಿಟಿಯವರೂ ಸಭೆಗೆ ಮಾಡಿದ ಸಹಾಯಕ್ಕಾಗಿ ಆ ಸಂಘಗಳಿಗೆ ಈ ಸಭೆಯು ಧನ್ಯವಾದಗಳನ್ನರ್ಪಿಸುತ್ತದೆ (೪) ಅನ್ಯ ಮಹತ್ವದ ವಿಷಯಗಳನ್ನು ಏಕೀಕರಣ ಪರಿಷತ್ತಿನವರೇ ವಿಚಾರಿಸಬೇಕೆಂದು ನಿರ್ಣಯಿಸುತ್ತದೆ.

ಧಾರವಾಡ
ತಾ॥ ೬-೧೨-೨೭ } ಕಾರ್ಯದರ್ಶಿ

ಸ್ವೀಕಾರ.

ಕ್ಯಾಲೆಂಡರುಗಳು (೧) ಎಸ್ ಯ. ನಾರಾಯಣಾಚಾರ್ಯ ಮತ್ತು ಕಂ. ಕಾಶಿ ಅಂದವಾದ ಕ್ಯಾಲೆಂಡರುಗಳನ್ನು ಈ ಕಂಪನಿಯವರು ಹೊರಡಿಸಿದ್ದಾರೆ. ಕಾಶಿಯಂಥ ದೂರ ಸ್ಥಳದಲ್ಲಿದ್ದರೂ, ಕನ್ನಡ ಅಭಿಮಾನವನ್ನು ಈ ಕಂಪನಿಯವರು ಇಟ್ಟು, ಕನ್ನಡಿಗರ ಸೇವೆಯಲ್ಲಿ ನಿರತವಾಗಿದ್ದು ಅಭಿನಂದನೀಯವಾಗಿದೆ. ಕ್ಯಾಲೆಂಡರದ ಬೆಲೆ ೨ ಆಣೆ (೨) ಯುಜವಾಕ್ ಆ್ಯಂಡ ಸನ್ಸ ರಬ್ಬರ ಸ್ಟಾಂಪ ಕಾರಖಾನೆ ಬೆಂಗಳೂರ. ಈ ಕಂಪನಿಯವರು ೧೯೨೮ನೇ ಇಸ್ವಿಯ ದೊಡ್ಡ ಆಕಾರದ ಕ್ಯಾಲೆಂಡರುಗಳನ್ನು ಪ್ರಕಟಿಸಿದ್ದಾರೆ. ಭರತಖಂಡದ ಮುಂದಾಳುಗಳ ಚಿತ್ರಗಳು ಒಂದೆಡೆಗೂ, ವೀರಶೈವ ಶರಣರ ಚಿತ್ರಗಳು ಮತ್ತೊಂದೆಡೆಗೂ, ಮೈಸೂರ ರಾಜ ಮನೆತನದ ಚಿತ್ರಗಳು ಮಧ್ಯದಲ್ಲಿಯೂ, ಮಹಾತ್ಮಾ ಗಾಂಧಿಯವರ ದೊಡ್ಡ ಭಾವಪಟದೊಂದಿಗೆ ಇದರಲ್ಲಿ ಮುದ್ರಿಸಲ್ಪಟ್ಟಿವೆ. ಅಂಕೆಗಳನ್ನು ಕನ್ನಡದಲ್ಲಿಯೂ ಪ್ರಕಟಿಸಿದ್ದರೆ ಚನ್ನಾಗಿತ್ತು.

ಗ್ರಂಥಗಳು ( ) ಪುಣ್ಯಾಂಬೆ. ನಾ ಮ। ಕುಲಕರ್ಣಿ ಗದಗ (೨) ಹಿಂದೀ-ಕನ್ನಡ 'ಸ್ವಬೋಧಿನಿ.' ಪ್ರಕಾಶಕರು-ಹಿಂದೀ ಪ್ರಚಾರಕ ಮದ್ರಾಸ. (೩) ಆಯುರ್ವೇದ ಔಷಧಿ ಪ್ರಕಾಶಿಕೆ ಲೇ॥- ಎ. ಡಿ. ಪಂಡಿತ. ಕೆಳಗಿನ ೪ ಪುಸ್ತಕಗಳು ಸತೀ ಹಿತೈಷಿಣೀ ಗ್ರಂಥಮಾಲೆ. ನಂಜನಗೂಡು ಇವರಿಂದ ಬಂದಿವೆ- (ಅ) ವ್ರತಗಳು (ಆ) ಸನ್ಮಾರ್ಗದರ್ಶಿ (ಇ) ಪುರಂದರದಾಸ ಪಂಕ್ತಿ (ಈ) ಕಾಣಿಕೆ.

ವಿಮರ್ಶೆಯು ಯಥಾವಕಾಶವಾಗಿ ಪ್ರಕಟಿಸಲ್ಪಡುವದು.

ಒಡಪುಗಳ ಬಗ್ಗೆ

ಸ್ಥಳಾಭಾವದ ಮೂಲಕ ಈ ಸಲ ಒಡಪುಗಳು ಪ್ರಕಟಿಸಲ್ಪಟ್ಟಿಲ್ಲ. "ವಿಜಯನಗರ"ಕ್ಕೆ ಬಂದ ಉತ್ತರ; ಇನಾಮು ದೊರೆತವರ ಹೆಸರು; ಹೊಸ ಒಡಪು; ಹಳೇ ಒಡಪುಗಳು ಮುಂದಿನ ವಾರದಲ್ಲಿ ಪ್ರಕಟವಾಗುವವು.

ವಿಜಾಪುರ ಜಿಲ್ಹೆಯ ಸುದ್ದಿಗಳು.

(ನಮ್ಮ ಸ್ವಂತ ಸುದ್ದಿಗಾರರಿಂದ)

ವಿಜಾಪೂರ ಕಲೆಕ್ಟರರ ಪ್ರವಾಸಕ್ರಮ:— ೧೨ ರಿಂದ ೨೦ ಬದಾಮಿ; ೨೧ ರಿಂದ ೨೩ ಗೋವನಕೊಪ್ಪ; ೨೪ ವಿಜಾಪುರ. ಡಿ. ಡಿ. ಕಲೆಕ್ಟರರ (ದ. ಭಾ.) ಪ್ರವಾಸ:—೧೦ ರಿಂದ ೧೫ ಬೀಳಗಿ; ೧೬ ರಿಂದ ೨೩ ಬಾಗಲಕೋಟೆ. ಡಿ. ಡಿ. ಕಲೆಕ್ಟರ (ಉ. ಭಾ.) ಪ್ರವಾಸ: ೧೧ ರಿಂದ ೧೪ ಬಲಪೋಲ ೧೫ ರಿಂದ ೧೮ ದೇವಣಗಾವಿ ೧೯—೨೩ ಸಿಂದಗಿ;

ರಾ|| ಬ|| ರಾಘವೇಂದ್ರರಾವ ಕೆಂಭಾವಿ ಮತ್ತು ರಾ|| ದತ್ತೋಪಂತ ಛತ್ರೆ ಇವರ ಪ್ರಯತ್ನದಿಂದ ಈ ವರ್ಷ ಗೀತಾ ಜಯಂತಿಯ ಉತ್ಸವವು ಇಲ್ಲಿ ಜರುಗಿತು. ಗೀತೆಯಲ್ಲಿ ಪರೀಕ್ಷೆ ತೆಗೆದುಕೊಳ್ಳಲ್ಪಟ್ಟಿತು. ಎಂಟೇ ದಿವಸ ಮೊದಲು ಪ್ರಸಿದ್ಧಮಾಡಿದ್ದರೂ ಕೂಡ ೧೮ ಜನ ವಿದ್ಯಾರ್ಥಿಗಳು ಬಂದಿದ್ದರು. ಮಾರ್ಗಶಿರ ಶುದ್ಧ ೧೧ ದಿವಸ ಮುಂಜಾನೆ ಅವರ ಪರೀಕ್ಷೆ ಆಯಿತು. ಮಧ್ಯಾಹ್ನ ೪ ಗಂಟೆಯಿಂದ ೭|| ಗಂಟೆಯ ವರೆಗೆ ಗೀತೆಯ ಮೇಲೆ ಪುರಾಣ, ಪ್ರವಚನಗಳೂ ವೇ|| ಅನಂತಾಚಾರ್ಯ ಆದ್ಯ, ಸ್ವಾಮಿರಾವ ತೇಲಗೂಳ, ಜಯಾಚಾರ್ಯ ಸಂಗಮ ಮುಂತಾದವರ ವ್ಯಾಖ್ಯಾನಗಳೂ ಆದವು. ಅನಂತರ ಸುಬ್ರಹ್ಮಣ್ಯ ಮಠದ ಶ್ರೀಪಾದಂಗಳವರ ಹಸ್ತದಿಂದ ವಿದ್ಯಾರ್ಥಿಗಳಿಗೆ ಪಾರಿತೋಷಕಗಳು ಕೊಡಲ್ಪಟ್ಟವು.

ಬ...

ಣದಿಂದ :

ಕಲದ ತ

ಅದರ ಸು

ಹೆಚ್ಚಾಗಿ ಒದಗುತ್ತಲಿವೆ. ನಾಯಿಹುಣ್ಣುಗಳ ಪೀಡೆಯೂ ಸಹ ವಿಶೇಷವಾಗಿ ಹಬ್ಬಿದೆ.

ಶ್ರೀ ಭಾರತೀಶನ ಕಾರ್ತೀಕದ ದಿವಸ ಪಲ್ಲಕ್ಕಿಯ ಸೇವೆಯೂ ಶ್ರೀ ದತ್ತನ ಉತ್ಸವವೂ ಇದೇ ವರ್ಷ ಪ್ರಾರಂಭಿಸಲ್ಪಟ್ಟವು.

ಇಲ್ಲಿಯ ಜನರಲ್ಲಿ ಈಗೀಗ ಧರ್ಮಬುದ್ಧಿಯೂ ಮತ್ತು ದೇವರಲ್ಲಿ ಭಕ್ತಿಯೂ ಉತ್ಪನ್ನವಾಗಿವೆ; ಇದೊಂದು ಸಂತೋಷ.

ಬಂದ್ರಬಿಸಾಳ— ಈ ತಾಲೂಕಿನಲ್ಲಿ ಸರಕಾರದಿಂದ ಮುಂಗಾರಿಯ ಆಣೆವಾರಿಯು ಮಾಡಲ್ಪಡುತ್ತಲಿದೆ. ಒಂದೆರಡು ಗ್ರಾಮಗಳಲ್ಲಿ ಈ ಆಣೆವಾರಿಯ ಅಂಕೆಗಳನ್ನು (ತುಂಬುವದಕ್ಕೆ ಸರಕಲ್ ಇನಸ್ಪೆಕ್ಟರರು ಬಂದಾಗ್ಗೆ) ರೈತರ ಸಭೆಯನ್ನು ಚಾವಡಿಯ ಮುಂದೆ ಕೂಡಿಸಿ ಅವರ ಅನುಮತಿಯ ಪ್ರಕಾರ ತುಂಬುವದುಂಟು. ಇದರಂತೆ ಎಲ್ಲ ಹಳ್ಳಿಗಳಲ್ಲಿ ಮಾಡುತ್ತಿದ್ದರೆ ಉತ್ತಮವೇ! ಹಿಂದಿನ ವರ್ಷ ಹೀಗೇಕೆ ಮಾಡಲಿಲ್ಲ??

ಇಲ್ಲಿಯ ಬೇಂಚ ಕೋರ್ಟಿಗೆ ೨ನೇ ವರ್ಗ ಮ್ಯಾಜಿಸ್ಟ್ರೇಟ ಸಮರಿ ಅಧಿಕಾರವು ಸರಕಾರದಿಂದ ಬಂದಿರುವದು. ಇದರಿಂದ ಈ ಬೆಂಚದ ಪ್ರಸಿಡೆಂಟರಾಗಿ ಬಲು ಹಿಗ್ಗಾಗಿದೆ! ಅವರು ಪರಮಾನಂದ ಭರಿತರಾಗಿ ಈ ಸಂಗತಿಯನ್ನು ಎಲ್ಲರ ಎದುರಿನಲ್ಲಿ ಬಿದೆ ಉಬ್ಬುಬ್ಬಿಸಿ ಹೇಳುತ್ತಿರುವರು!!

ಇಹವೃತ್ತ.

ಥಂಡಿ ಬಿಡುತ್ತಲಿದ್ದೆ, ಹತ್ತಿಯ ಬೆಳೆ ಚನ್ನಾಗಿದೆ. ಜೋಳ ಮಾತ್ರ ಅಲ್ಲಲ್ಲಿ ಸುಳಿ ಬಿಡುತ್ತಲಿದೆ.

ಬಸವೇಶ್ವರನು ಅತ್ಯುತ್ಕಟವಾದ ಕನ್ನಡ ಭಾಷಾಭಿಮಾನಿಯಾಗಿದ್ದನೆಂಬುದನ್ನು ಬಸವೇಶ್ವರ ಶಾಲೆಯ ಚಾಲಕರು ಕೇವಲ ಲಕ್ಷ್ಯದಲ್ಲಿ ತಂದರೆ, ಬಸವೇಶ್ವರರ ಹೆಸರಿನಿಂದ ನಡೆವ ಶಾಲೆಯಲ್ಲಾದ ಸಭೆ, ವ್ಯಾಖ್ಯಾನಗಳ ಪ್ರಸಂಗದಲ್ಲಿ ಇಂಗ್ಲೀಷ ಭಾಷಣ, ಮರಾಟಿಯ ಸ್ವಾಗತ ಪದಗಳ ಅವಶ್ಯಕತೆಯೇ ಇಲ್ಲವೆಂಬುದು ಅವರಿಗೆ ತಿಳಿಯದೇ ಇರದು. ಕನ್ನಡದವರಿದ್ದುದನ್ನು ನೋಡಿಯೂ ಸಭೆಯಲ್ಲಿರದವರಿಗೂ, ಹಾಗೂ ಕನ್ನಡ ತಿಳಿಯದ ಜನರು ಸಭೆಯಲ್ಲಿರುವದರಿಂದ ಚಾಲಕರಿಗೆ ಗೊತ್ತಿರುವಾಗ್ಗೆ ಈ ಬಗೆಯ ಪರಭಾಷೆಗಳ ಸೋಗು ಹಚ್ಚುವದೇಕೋ ತಿಳಿಯದು. ಈ ಶಾಲೆಯನ್ನು ಸಂದರ್ಶಿಸಲಿಕ್ಕಾಗಿ ಕನ್ನಡ ಕಲೆಕ್ಟರ ಸಾಹೇಬರು ಸಹ ಇಂಗ್ಲೀಷದಲ್ಲಿಯೇ ಭಾಷಣಮಾಡಿದರು!

ಮೋಟಾರುಗಳು ಬಹಳಾಗಿ ಅವನ್ನು ದಾರಿಯಲ್ಲಿ ತಡೆದು, ಪೋಲೀಸರು ಪ್ರವಾಸಿಕರ ಕುರುಗೋಳಗಳನ್ನು ವಿಚಾರಿಸುವ ಹೊಸದೊಂದು ಕಾರ್ಯಕ್ರಮವನ್ನು ಪ್ರಾರಂಭಿಸಿದ್ದಾರೆ. ಪ್ರಯಾಣಿಗರಿಗೆ ಗಂಡಾಂತರದಿಸೆಳೆದನ್ನು ಹೇಗಿದ್ದರೂ ಬಲಾತ್ಕಾರದಿಂದ ಕೇಳುತ್ತಿರುವದು ಎಷ್ಟು ಅನ್ಯಾಯವು! ಪೋಲೀಸ ಸಂಸ್ಥೆಯ ಈತನು ೯ನೇ ತಾ|| ದಿನ ಕಲಾದಗಿಯ ಬೀದಿಯಲ್ಲಿ ೨ನೇ ಸೈಲಿನಲ್ಲಿ ಹತ್ತಾರ ಮೋಟಾರನ್ನು ನಿಲ್ಲಿಸಿ, ಈ ಪ್ರಕಾರ ತೊಂದರೆ ಕೊಟ್ಟಿರುವನು. ಅಧಿಕಾರಿಗಳು ಇತ್ತ ಲಕ್ಷ್ಯ ಕೊಡಬೇಕು.

ಗುರುವಾರ ತಾ|| ೮ನೇ ದಿನಾಂಗ, ಕೆಲವರ ಆಗ್ರಹದಿಂದ ಎಲ್ಲ ಜಾರಿಗೂ ಸೀತೀಮನಿಗೆ ಕೃಷ್ಣಾ ಸ್ನಾನಕ್ಕೆ ಹೋಗಲು ಅನುಕೂಲವಾಗಬೇಕೆಂದು, ಸಾಯಂಕಾಲ ೪|| ಗಂಟೆಯ ಗುಡ್ಸ ಗಾಡಿಗೆ ಕೆಲವು ಡಬ್ಬಿಗಳನ್ನು ಹಚಬೇಕೆಂದೂ, ಶುಕ್ರವಾರ ದಿನ ೭ ಗಂಟೆಯ ಗಾಡಿಗೆ ಅವೇ ಡಬ್ಬಿಗಳನ್ನು ಹಚ್ಚಿ ಮರಳಿ ಬಾಗಲಕೋಟೆಗೆ ಅವನ್ನು ತರಬೇಕೆಂದೂ ರೇಲ್ವೆ ಅಧಿಕಾರಿಗಳಿಗೆ "ಕನ್ನಡಿಗ''ನ ಕಾರ್ಯಾಲಯದವರು ಕೇಳಿಕೊಂಡಂತೆ, ಏರ್ಪಾಡಾಯಿತು. ಅನೇಕರು ಈ ಸೌಕರ್ಯದ ಲಾಭವನ್ನು ಅವಿನ ಪಡೆದುಕೊಂಡರು.

ರಂಗಭೂಮಿಯ ಸಮಾಚಾರ

ದತ್ತಾತ್ರೇಯ ನಾಟಕ ಮಂಡಳಿಯವರು ಗದಗಿಗೆ ಬಂದಿದ್ದು ಅಲ್ಲಿ ೨ ತಿಂಗಳವರೆಗೆ ಮುಕ್ಕಾಂಮಾಡುವ ವಿಚಾರವಿದೆ.

ಅಂಬಾ ಪ್ರಾಸಾದಿಕ ನಾಟಕ ಮಂಡಲಿಯವರು ಕೊಪ್ಪಳದಲ್ಲಿಯ ತಮ್ಮ ಕಾರ್ಯಕ್ರಮವನ್ನು ಯಶಸ್ವೀರೀತಿಯಲ್ಲಿ ಕೊನೆಗಾಣಿಸಿ, ತೀರ್ಥಹಳ್ಳಿಗೆ ಜಾತ್ರೆಗಾಗಿ ಹೋಗಿದ್ದಾರೆ.

ಶಿರಹಟ್ಟಿ ನಾ. ಮಂ. ಕುಮಠೆಯ, ಶ್ರೀ ಕೃಷ್ಣ ಸಂಗದವರು ಮಂಗಳೂರಿಗೂ ಹೋಗಿದ್ದಾರೆ.

ನಮ್ಮ ಧಾರವಾಡದ ಪತ್ರ

ಇಲ್ಲಿಯ ಮಂಗಳವಾರದವರೂ ಗೀತಾ ಜಯಂತಿಯನ್ನು ಆಚರಿಸಿದರು. ಬೆಳಗಾಂವಕರರು "ಗೀತಾ"ದ ಮೇಲೆ ಉಪನ್ಯಾಸವನ್ನು ಕೊಟ್ಟರು.

ಕನ್ನಡಿಗರೂ ಶಿಲಾಲೇಖಗಳೂ.

ಈ ಬಗ್ಗೆ ನಾವು 'ಕನ್ನಡಿಗ' ದಲ್ಲಿ ಬರೆದುದನ್ನು ಓದಿ ಅನೇಕ ಜನ ಇತಿಹಾಸಾಭಿಮಾನಿಗಳು ನಮ್ಮ ಕಡೆಗೆ ಪತ್ರ ಬರೆದು, ಆ ಶಿಲಾಲೇಖಗಳು ಇಂಥಿಂಥಲ್ಲಿ ಇವೆಯೆಂದೂ, ಅವುಗಳ ಮುದ್ರಣ ತೆಗೆದುಕೊಳ್ಳುವ ಬಗೆ ಹೇಗೆಂದೂ ಕೇಳಿದ್ದಾರೆ. ಪ್ರತಿಯೊಬ್ಬರಿಗೆ ಪ್ರತ್ಯೇಕವಾಗಿ ಬರೆಯುವದು ಶಕ್ಯವಿಲ್ಲವಾದ್ದರಿಂದ ಶಿಲಾಲೇಖಗಳನ್ನು ತೆಗೆದುಕೊಳ್ಳುವ ಬಗೆಯನ್ನು ಕೆಳಗೆ ಕೊಟ್ಟಿರುವೆವು. ವಿಜಾಪುರ ಜಿಲ್ಲೆಯ ಮಟ್ಟಿಗೆ ನಾವು ಸುಸಂಘಟಿತಕಾರ್ಯವನ್ನು ಸಧ್ಯದಲ್ಲಿ ಮಾಡಬೇಕೆಂದು ನಿರ್ಧರಿಸಿದ್ದರಿಂದ, ಈ ಜಿಲ್ಲೆಯಲ್ಲಿಯ ಕೆಲಸಗಾರರಿಗೆ ಮಾತ್ರ ನಾವು ಬ್ರಶ್, ಕಾಗದ ಮೊದಲಾದ ಎಲ್ಲ ಸಾಮುಗ್ರಿಗಳನ್ನು ಕೈಗಡ ಕೊಡುವೆವು. ಆದ್ದರಿಂದ ವಿಜಾಪುರ ಹೊರಗಿನ ಜಿಲ್ಲೆಯ ಜನರು ತಾವೇ ಈ ಸಾಮುಗ್ರಿಗಳನ್ನು ಕೊಂಡು, ಕರ್ನಾಟಕ ಸೇವೆ ಮಾಡಬೇಕೆಂದು ಬಿನ್ನಹವಿದೆ. ಈ ಸಾಮುಗ್ರಿಗಳ ಒಂದು "ಸೆಟ್ಟಿಗೆ" [illegible] ರೂ. ಬೀಳುತ್ತದೆ. ಇವುಗಳನ್ನು ನಾವೇ ಮಾರಲಿಕ್ಕೆ ಕೊಡಬಲ್ಲೆವು.

ಈಗ್ಗೆ ನಮ್ಮ ಕಡೆಗೆ ಬಂದ ಪತ್ರಗಳಿಂದ ಕೆಳಗಿನ ಸಂಗತಿಗಳು ದೊರೆತಿವೆ:—

(೧) ರಾಯಚೂರ ಜಿಲ್ಲೆಯ ಲಿಂಗಸೂರ ತಾಲೂಕದಲ್ಲಿಯ ಘಡೇಸೂರ ಗ್ರಾಮದಲ್ಲಿ ೬ ಶಿಲಾಲೇಖಗಳಿವೆ— ತಿಳಿಸಿದವರು ರಾಘವೇಂದ್ರ ಶರ್ಮಾ.

(೨) ಹಾವೇರಿ ತಾಲೂಕ [illegible] ಸುತ್ತಮುತ್ತಲಿನ ಹಳ್ಳಿಗಳಲ್ಲಿ ದೊಡ್ಡ ದೊಡ್ಡ ಶಿಲಾಲೇಖಗಳು ವಿಪುಲವಾಗಿವೆ- ತಿಳಿಸಿದವರು— [illegible] ಬಳವಂತ ನವಣಿ.

(೩) ರಾಯಚೂರ ಜಿಲ್ಲೆಯ ಮಾನ್ವಿ ತಾಲೂಕಿನಲ್ಲಿ ಬಹಳ ಶಿಲಾಲೇಖಗಳಿವೆ ತಿಳಿಸಿದವರು:— [illegible]ವೇಂದ್ರರಾವ ಕಷ್ಟಂ ಕ್ಲಾರ್ಕ ಮಾನ್ವಿ.

ಈ ಮಹನೀಯರೂ ಇನ್ನು ಮುಂದೆ ಶಿಲಾಲೇಖಗಳ ಬಗ್ಗೆ ಮಾಹಿತಿಯನ್ನು [illegible] ಸಂಗತಿಗಳನ್ನು ಲಕ್ಷ್ಯದಲ್ಲಿಟ್ಟು, ಈ ಕೋಷ್ಟಕದಲ್ಲಿ ಕಾಣಿಸಿದಂತೆ ನಮಗೆ ವಿಶದವಾಗಿ ಎಲ್ಲವನ್ನೂ ತಿಳಿಸಿ ಕರ್ನಾಟಕ ಮಾತೆಯ ಪ್ರೀತಿಗೆ ಪಾತ್ರರಾಗಬೇಕೆಂದು ಬೇಡಿಕೆ — (ಈ ಕೋಷ್ಟಕದಲ್ಲಿಯ ಯಾವತ್ತೂ ಸಂಗತಿಯು ಗೊತ್ತಿಲ್ಲದಿದ್ದರೆ ಗೊತ್ತಿಲ್ಲವೆಂದು ಬರೆಯಬೇಕು.)

ಶಿಲಾಲೇಖಗಳ ಬಗ್ಗೆ ಮಾಹಿತಿ.

ಶಿಲಾಲೇಖದ ಸಂಖ್ಯೆ	ಊರು	ತಾಲೂಕ	ಜಿಲ್ಲೆ	[illegible]	ಶಿಲಾಲೇಖಗಳು ಇರುವ ಸ್ಥಳ; (೧) [illegible] (೨) [illegible]	[illegible]	[illegible]	[illegible]
೧	೨	೩	೪	೫	೬	೭	೮	೯

ಶಿಲಾಲೇಖಗಳನ್ನು ಮುದ್ರಿಸುವ ಕ್ರಮ.

ಶಿಲಾಲೇಖಗಳ [illegible] ತೆಗೆದುಕೊಳ್ಳುವ ರೀತಿಯನ್ನು ವಿವರಿಸುವುದಕ್ಕೆ ಮೊದಲು [illegible] ಬೇಕಾಗುವ ಸಲಕರಣೆಗಳು ಯಾವುವೆಂಬುದನ್ನು ಹೇಳುವದು ಅವಶ್ಯಕ. ಆದಕಾರಣ ಈ ಕೆಳಗೆ ಕಾಣಿಸುವ ಪಟ್ಟಿಯಲ್ಲಿ ಇದಕ್ಕೆ ಉಪಯೋಗಿಸಬೇಕಾದ ಸಾಮಾನುಗಳನ್ನು ತಿಳಿಸುತ್ತೇವೆ.

(೧) ಗಟ್ಟಿಯಾಗಿಯೂ ಸಾರವಾಗಿಯೂ ಇರುವ ಮುದ್ರಾಲಯಗಳಲ್ಲಿ ಉಪಯೋಗಿಸುವ ದೊಡ್ಡ ಕಾಗದ.

(೨) ಒಂಟಿಯ ಕೂದಲಿನಿಂದ ಒತ್ತಾಗಿ ನೇಯ್ದು ತಯಾರಿಸಿರುವ ಬ್ರಶ್‌ಗಳು

(೩) ಪ್ಯಾಡುಗಳು- ಇವುಗಳು ಮಸಿಯನ್ನು ಹಚ್ಚುವದಕ್ಕೆ ಉಪಯೋಗಿಸಲ್ಪಡುತ್ತವೆ.

(೪) ಹುಚ್ಚಾಗಿ ನೀರನ್ನು ಹೀರಿಕೊಳ್ಳುವ ಸ್ಪಂಜ್ (sponge)

(೫) ದೀಪದ ಕಾಡಿಗೆಯಿಂದ ಮಾಡಿದ ಮಸಿ (Lamp-Black); ಇದಕ್ಕೆ ಸ್ವಲ್ಪ ಅಂಟನ್ನು ಸೇರಿಸಬೇಕು. ಇವುಗಳನ್ನು ಒದಗಿಸಿಕೊಂಡು ಶಿಲಾಲೇಖವಿರುವ ಸ್ಥಳಕ್ಕೆ ಹೋಗಬೇಕು. ಮೊದಲು ಅಕ್ಷರಗಳನ್ನು ಕೊರೆದಿರುವ ಕಲ್ಲನ್ನು ಯಾವ ಕಲ್ಮಷವೂ ಇಲ್ಲದಂತೆ ಬ್ರಷನಿಂದ ತೊಳೆಯಬೇಕು. ತೊಳೆಯುವಾಗ ಅಕ್ಷರಗಳ ಒಳಗೆ ಸ್ವಲ್ಪವಾದರೂ ಹೊಲಸು ನಿಲ್ಲದಂತೆ ಜಾಗರೂಕತೆಯಿಂದ ನೋಡಿಕೊಳ್ಳುವದು ಅವಶ್ಯಕ. ಏಕೆಂದರೆ ಹೊಲಸು ನಿಂತಪಕ್ಷದಲ್ಲಿ ಕಾಗದವು ಆ ಪದರಲ್ಲಿ ಸರಿಯಾಗಿ ಕೂಡಲಾರದಾದ್ದರಿಂದ ಆ ಭಾಗವು ಛಾಯೆಯಲ್ಲಿ ಸ್ಪಷ್ಟವಾಗಿ ಕಾಣಲಾರದು. ತರುವಾಯ ಕಾಗದವನ್ನು ಆ ಕಲ್ಲಿನ ಪ್ರಮಾಣಕ್ಕೆ ಹರಿದು ಅದನ್ನು ನೀರಿನಲ್ಲಿ ಅದ್ದಿ ಅದರಲ್ಲಿರುವ ನೀರೆಲ್ಲವೂ ಸುರಿದು ಹೋಗುವಂತೆ ಸ್ವಲ್ಪ ಎತ್ತಿ ಹಿಡಿದುಕೊಳ್ಳಬೇಕು. ಆ ಮೇಲೆ ಕಾಗದವನ್ನು ಕಲ್ಲಿಗೆ ಹತ್ತಿ ಅದು ಅಕ್ಷರಗಳಲ್ಲಿ ಸರಿಯಾಗಿ ಕೂತುಕೊಳ್ಳುವಂತೆ ಬಲವಾಗಿ ಬ್ರಷ್ಷಿನಿಂದ ಹೊಡೆಯಬೇಕು. ಅಕ್ಷರಗಳು ಆಳವಾಗಿದ್ದಪಕ್ಷದಲ್ಲಿ ಇನ್ನೊಂದು ಕಾಗದವನ್ನು ನೆನಸಿ ಮೊದಲನೆಯ ಕಾಗದದ ಮೇಲೆ ಹತ್ತಿ ಬ್ರಷ್ಷಿನಿಂದ ಪುನಃ ಹೊಡೆಯುವದು ಉತ್ತಮ. ಕಾಗದವು ಒಣಗಿ ಗಾಳಿಗೆ ಹಾರಿಹೋಗದಂತೆ ಸ್ಪಂಜಿನಿಂದ ಸ್ವಲ್ಪ ಸ್ವಲ್ಪ ನೀರನ್ನು ಚಿಮಿಕಿಸಬಹುದು. ಕಾಗದವನ್ನು ಹೊಡೆದನಂತರ ಮಸಿಗೆ ಸ್ವಲ್ಪ ನೀರು ಹಾಕಿಕೊಂಡು ಅದನ್ನು ಪ್ಯಾಡಿನ ಮೇಲೆ ಸವರಿ ಇನ್ನೊಂದು ಪ್ಯಾಡಿನಿಂದ ತಿಕ್ಕಿ ಮಸಿಯು ಪ್ಯಾಡಿನ ಎಲ್ಲ ಭಾಗಕ್ಕೂ ಒಂದೇ ಸಮನಾಗಿ ವ್ಯಾಪಿಸುವಂತೆ ಮಾಡಿ ಕಾಗದದ ಮೇಲೆ ಈ ಪ್ಯಾಡಿನಿಂದ ಮಸಿಯನ್ನು ಸ್ವಲ್ಪ ಸ್ವಲ್ಪವಾಗಿ ಒತ್ತುತ್ತಾ ಹೋಗಬೇಕು. ಹೀಗೆ ಮಾಡುವುದರಿಂದ ಅಕ್ಷರಗಳ ಒಳಗೆ ಕೂತಿರುವ ಕಾಗದದ ಭಾಗವೆಲ್ಲ ಬಿಳಿಯಾಗಿ ಉಳಿದು ಇತರ ಭಾಗವೆಲ್ಲ ಕಪ್ಪಾಗುತ್ತದೆ. ಆಗ ಕಾಗದವನ್ನು ಸೂಕ್ಷ್ಮವಾಗಿ ಕಲ್ಲಿನಿಂದ ಎಬ್ಬಿಸಿ ಈಚೆಗೆ ತೆಗೆದುಕೊಂಡು ಒಣಗಿಸಿದರೆ ಶಿಲಾಶಾಸನದ ಪ್ರತಿಯು ತಯಾರಾಗುತ್ತದೆ. ಶ್ರೀನಿವಾಸ ರಾಜೇರಾವ ಮಂಗಳವೇಢೆ.

ನಮ್ಮ [illegible]ದಗಿನ ಪತ್ರ.

೧ [illegible] ಶಾಂತವಾಗಿದೆ [illegible] ಮುಂದಿನ ಸಿದ್ಧತೆಯ ವಿಚಾರಗಳನ್ನು ನಡೆಯಿಸಿರುವರು [illegible] ಬಗ್ಗೆ ತರ್ಕ ವಿತರ್ಕಗಳು [illegible] ಸಾಗಿವೆ. [illegible] ಯನ್ನು ಹೊಂದಿದವರಲ್ಲವೇ? ಅವರು ಪುನಃ [illegible] ಗಾಗಿ ಪ್ರಯತ್ನಪಡುತ್ತಿರುವರು! ಈ [illegible] ವೆಂದರೆ [illegible] ನಿಂತ [illegible] ಗಳ ಅವಯವು! ಇದರ ಕಾರಣವನ್ನು ಅವರೇ ಬಲ್ಲರು!

ಜಿಲ್ಹಾ ಕಲೇಕ್ಟರರಾದ [illegible] ಈಗ ಇಲ್ಲಿಯೇ ಇದೆ. ಊರಲ್ಲಿ [illegible] ಇಲ್ಲ [illegible] ನೇಮಿಸುವಿಕೆಯಲ್ಲಿ ಉತ್ತಮ ಜನರನ್ನು [illegible] ಮುನಸಿಪಾಲ್ಟಿಗೆ ಒಂದು ತರದ ಗೌರವವನ್ನು ತಂದು ಕೊಟ್ಟಂತೆಂದು ಜನರು ಆಶಿಸುತ್ತಿರುವರು.

ಕರ್ನಾಟಕ ಇತಿಹಾಸವೂ ಹಳ್ಳಿಯ ಶಿಕ್ಷಕರೂ.

ಲೇಖಕ:—ವರವಣಿ ರಾಜಾರಾವ್, ಬಿ. ಎ., ಅಸಿಸ್ಟೆಂಟ್ ಮಾಸ್ತರ್, ಹೈಸ್ಕೂಲ್, ಹಾಸನ

ಪ್ರತಿಯೊಂದು ಜನಾಂಗವೂ ತನ್ನ ಸಂಸ್ಕೃತಿಯು ಎಂಥಹದೆಂಬುದನ್ನು ತಿಳಿದುಕೊಳ್ಳುವದು ಅತ್ಯಾವಶ್ಯಕವು. ಈಗ ನಮ್ಮ ಭರತಖಂಡದಲ್ಲಿ ಎಲ್ಲ ಕಡೆಯೂ ರಾಷ್ಟ್ರೀಯಜ್ಞಾನವು ಹೆಚ್ಚುತ್ತ ಜನಗಳಲ್ಲಿ ದೇಶಾಭಿಮಾನವು ತಲೆದೋರುತ್ತಿರುವದು. ದೇಶೋದ್ಧಾರಕ್ಕಾಗಿ ಪ್ರತಿಯೊಬ್ಬ ಮಾನವನೂ ತನ್ನ ಕೈಯಲ್ಲಾದ ಮಟ್ಟಿಗೂ ಸೇವೆ ಮಾಡಬೇಕು. ಆದರೆ, ಅನೇಕರು “ದೇಶವೆಂದರೇನು? ನಾವೇನು ಸೇವೆ ಮಾಡಲಾದೀತು?” ಎಂದು ಅಲಕ್ಷ್ಯದಿಂದಲೋ ನಿರಾಶೆಯಿಂದಲೋ ಕೇಳುವವರಾಗಿರಬಹುದು. ನಮ್ಮ ಪೂರ್ವಿಕರು ಯಾರೆಂಬ ಜ್ಞಾನವೇ ನಮಗೆ ಚೆನ್ನಾಗಿಲ್ಲ. ನಮ್ಮಲ್ಲಿ ಚೈತನ್ಯ ಜಾಗೃತಿಯು ನಂದಿಹೋಗಿರುವದು. ನಮ್ಮ ಇತಿಹಾಸದ ವಿಷಯದಲ್ಲಿ ಸರಿಯಾದ ಜ್ಞಾನವಿಲ್ಲದಿರುವದೇ ಇದಕ್ಕೆ ಕಾರಣ.

ಇತಿಹಾಸವೆಂಬ ಮಂದಿರವನ್ನು ಕಟ್ಟಲು ಯಾವ ಸಾಮಗ್ರಿಗಳು ಬೇಕೆಂಬುದೇ ಕೆಲವರಿಗೆ ತಿಳಿಯದಿರಬಹುದು. ಇದಕ್ಕಾಗಿ ಸಾಧನ ಸಾಮಗ್ರಿಗಳಲ್ಲಿ ಕೆಲವನ್ನು ಇಲ್ಲಿ ತಿಳಿಸುವೆವು. ನಮ್ಮ ಈ ಕರ್ನಾಟಕ ಭೂಭಾಗವು ಕೇವಲ ಕ್ರಿಸ್ತಶಕದ ಬರುವದರಿಂದಲೂ ಪರದೇಶದ ಜನರ ಹಾವಳಿಯು ಅಧಿಕವಾಗುವದೆಂದೂ ತಿಳಿದ ನಮ್ಮ ಪೂರ್ವಿಕರು ಮುಂದೆ ಬರುವ ಇತಿಹಾಸಕ್ಕೆ ಬೇಕಾದ ಸಾಮಗ್ರಿಗಳನ್ನು ಶಾಶ್ವತವಾಗಿ ಉಳಿಸಿ ಹೋಗಿರುವರು. ಕನ್ನಡ ನಾಡಿನಲ್ಲಿ ಎಲ್ಲಿ ನೋಡಿದರೂ ಶಿಲಾಲಿಪಿಗಳು ಹೇರಳವಾಗಿ ಕಾಣಬರುವವು. ಇಷ್ಟೇಕೆ? ಕನ್ನಡ ನಾಡನ್ನು ಶಿಲಾಲಿಪಿಗಳ ತವರುಮನೆಯೆಂದರೂ ತಪ್ಪಾಗಲಾರದು. ತಾಮ್ರಶಾಸನಗಳೂ ಅನೇಕ ಐತಿಹಾಸಿಕ ಸಂಗತಿಗಳನ್ನು ತಿಳಿಸುವವು. ಪುರಾತನ ನಾಣ್ಯಗಳಿಂದಲೂ ರಾಜರುಗಳ ಮತ ಇವೇ ಮೊದಲಾದ ಹಲವು ವಿಷಯಗಳನ್ನು ತಿಳಿದುಕೊಳ್ಳಬಹುದು—ಶಿಲ್ಪಕಲಾ ಚಾತುರ್ಯದ ಕಟ್ಟಡಗಳಿಂದಲೂ ಇತಿಹಾಸಕ್ಕೆ ಎಷ್ಟೋ ಸಾಮಗ್ರಿಯು ದೊರೆಯುವದು. ಇವೇ ಅಲ್ಲದೆ, ಸ್ಥಳ ಪುರಾಣಗಳೂ, ಅಪೂರ್ವ ಪುರಾತನ ಗ್ರಂಥಗಳೂ, ಪರದೇಶದವರು ಬರೆದಿರುವ ನಮ್ಮ ದೇಶಕ್ಕೆ ಸಂಬಂಧಪಟ್ಟ ಪ್ರಾಚೀನ ಗ್ರಂಥಗಳೂ, ಇವುಗಳಿಂದಲೂ ಹಲವು ಸಂಗತಿಗಳು ಕಂಡುಬರುವವು.

ಇವೇ ಮೊದಲಾದ ಸಾಮಗ್ರಿಗಳಿಂದ ಇತಿಹಾಸವೆಂಬ ಕಟ್ಟಡವನ್ನು ಕಟ್ಟಬಹುದು. ಆದರೆ ಇವು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ದೊರೆಯುವದಿಲ್ಲ. ಇವು ಹಳ್ಳಿಗಳಲ್ಲಿ ಎಲ್ಲಿಯೋ ಜನರ ಕಣ್ಣಿಗೆ ಬೀಳದಿರುವ ಮೂಲೆಗಳಲ್ಲಿ ಹುದುಗಿ ಹೋಗಿವೆ. ಇವುಗಳಿಂದ ದೇಶಕ್ಕೆ ಆಗುವ ಪ್ರಯೋಜನವು ಹತ್ತಿರ ವಾಸಮಾಡುವ ಜನಗಳಿಗೆ ಗೊತ್ತಾಗುವದಿಲ್ಲ. ಆದುದರಿಂದ ಅವು ಅಕ್ಷಯ ಹಾಳಾಗುವವು. ಹಾಗಾಗದಂತೆ ಅವುಗಳನ್ನು ಕಾಪಾಡಬೇಕಾದುದು ದೇಶಾಭಿಮಾನಿಯಾದ ಪ್ರತಿಯೊಬ್ಬನ ಕರ್ತವ್ಯ. ಈಗ ಹಳ್ಳಿಗಾಡಿನಲ್ಲಿ ಯಾರು ಹೆಚ್ಚಾಗಿ ಇಳಿದುಕೊಂಡಿರುವರೋ ಅವರುಗಳಿಂದ ಈ ಕೆಲಸವು ಬಹಳ ಬೇಗ ನಡೆಯಬೇಕಾಗಿದೆ. ಹೀಗಿದ್ದು, ತಿಳಿವಳಿಕೆಯುಳ್ಳವರೆಂದರೆ, ಹಳ್ಳಿಯ ಪಾಠಶಾಲೆಯ ಉಪಾಧ್ಯಾಯರುಗಳು. ಇವರಿಂದ ನಮ್ಮ ನಾಡಿನ ಇತಿಹಾಸ ಶೋಧನೆಯ ಕಾರ್ಯಕ್ಕೆ ಆಗಬೇಕಾದ ಸಹಾಯವು ಅಷ್ಟಿಷ್ಟೆಂದು ಹೇಳಲಾಗದು.

ಈ ವಿಷಯದಲ್ಲಿ ನಮ್ಮ ಹಳ್ಳಿಯ ಉಪಾಧ್ಯಾಯರು ಕರ್ನಾಟಕ ಮಾತೆಗೆ ಮಾಡಬೇಕಾದ ಸೇವೆಯು ಬಹಳವಾಗಿದೆ. ಹಳ್ಳಿಯ ಕಡೆ ಎಷ್ಟೋ ಶಿಲಾಲಿಪಿಗಳು ಮಣ್ಣು ಮುಚ್ಚುತ್ತ ಬಿದ್ದಿವೆ. ಕೆರೆಯಲ್ಲಿ ಬಿದ್ದು ಕೆಲವು ಹೊರಳಾಡುತ್ತಿವೆ. ಮತ್ತೆ ಕೆಲವು ಬಾವಿಗಳಿಗೆ ಪಾವಟಿಗೆಗಳಾಗಿವೆ. ಇನ್ನೂ ಕೆಲವು ಗುಡಿಗಳಿಗೆ ಮೆಟ್ಟಿಗಳಾಗಿ ಉಪಯೋಗಿಸಲ್ಪಟ್ಟಿವೆ. ಇವುಗಳನ್ನು ಹೊರತೆಗೆದು ಗ್ರಾಮಸ್ಥರ ಸಹಾಯದಿಂದ ಉದ್ಧಾರಮಾಡಬೇಕು.

ಪುರೋಹಿತರು, ವಿದ್ವಾಂಸರು ಇವರುಗಳ ಮನೆತನದವರಲ್ಲಿ ತಾಮ್ರದ ಶಾಸನಗಳು ಇದ್ದಿರುತ್ತವೆ. ಅವುಗಳನ್ನು ಹುಡುಕಿಸಿ ತೆಗೆಯಬೇಕು.

ಹಳ್ಳಿಗಳ ಊರು ಬಾಗಿಲಿನಲ್ಲಿಯೋ ಅಲ್ಲವೇ ಎಲ್ಲಿಯಾದರೂ ಬಯಲಿನಲ್ಲಿಯೋ ವೀರಗಲ್ಲುಗಳೂ ಮಾಸತಿಕಲ್ಲುಗಳೂ ಬಿದ್ದಿರುವವು. ವೀರರೂ ಮಹಾಸತಿಯರೂ ಮಡಿದಿರುವ ಸ್ಥಳಗಳಲ್ಲಿ ಅವರ ಸ್ಮಾರಕಕ್ಕೆ ನಿಲಿಸಿದ ಈ ಕಲ್ಲುಗಳಿಂದ ಇತಿಹಾಸಕ್ಕೆ ಎಷ್ಟೋ ಸಹಾಯವಾಗುವದು. ಇವುಗಳನ್ನು ಸಂಶೋಧಕರ ದೃಷ್ಟಿಗೆ ತಂದುಕೊಡಬೇಕು.

ಹಳ್ಳಿಗಳ ಕಡೆ ಕೆಲವು ಪುರಾತನ ದೇವಾಲಯಗಳಿರುವವು. ಶಿಲ್ಪಕಲೆಯ ಚಾತುರ್ಯವು ಇವುಗಳಲ್ಲಿ ಚನ್ನಾಗಿ ವ್ಯಕ್ತಪಡುವದು. ಮುಳ್ಳಗಿಡಗಳ ಪೊದರಿನಲ್ಲಿಯೋ ದೊಡ್ಡಮರಗಳ ಗುಂಪಿನ ಮಧ್ಯದಲ್ಲಿಯೋ ಇವುಗಳು ಮರೆಯಾಗಿರುವವು. ಹುಡುಕಿ ನೋಡಿದರೆ, ಅವುಗಳ ಗೋಡೆಗಳ ಮತ್ತು ಕಂಭಗಳ ಮೇಲೆ ಕೊರೆದಿರುವ ಚಿತ್ರಗಳಿಂದ ಆಗಿನ ಕಾಲದ ಜನರ ಉಡಿಗೆ ತೊಡಿಗೆ, ವಾಹನ, ಸಮಾಜಸ್ಥಿತಿ, ಯುದ್ಧ ಇವೇ ಮೊದಲಾದ ವಿಷಯಗಳನ್ನು ತಿಳಿದುಕೊಳ್ಳಲು ಅನುಕೂಲಿಸುತ್ತದೆ. ಸಂಶೋಧಕರಿಗೆ ಇದನ್ನು ತಿಳಿಸಬೇಕು.

ಹಿಂದಿನ ಕಾಲದಲ್ಲಿ ಈಗಿನಂತೆ ಮುದ್ರಣ ಯಂತ್ರವಿರಲಿಲ್ಲ. ತಾಳೆಯಗರಿಯಲ್ಲಿಯೇ ಬರೆಯಬೇಕಾಗಿತ್ತು. ಆ ತಾಳೆಯಗರಿಗಳಲ್ಲಿ ಅನೇಕವನ್ನು ಆಗಲೇ ಗೆದ್ದಲು ಹುಳುಗಳು ತಿನ್ನುತ್ತಿವೆ. ಆದುದರಿಂದ ಅವುಗಳ ಬಾಯಿಗೆ ಸಿಕ್ಕದಂತೆ ಕಾಪಾಡಿದರೆ, ಪಂಡಿತರಾದವರು ಅದನ್ನು ನೋಡಿ ಚಾರಿತ್ರಿಕ ಸಂಗತಿಗಳನ್ನಾಗಲೀ, ಕನ್ನಡನುಡಿಯ ಇತಿಹಾಸ, ಬೆಳವಣಿಗೆ, ಇವುಗಳನ್ನಾಗಲೀ ಗೊತ್ತುಮಾಡಿಕೊಡಲು ಅನುಕೂಲವಾಗುತ್ತದೆ.

ಉಪಾಧ್ಯಾಯರುಗಳು ತಾವು ಇರುವ ಹಳ್ಳಿಯ ಹೆಸರೇ ಮೊದಲಾದ ವಿಷಯಗಳನ್ನು ಕುರಿತು ಸ್ಥಳದ ಮುದುಕರನ್ನು ಕೇಳಿ ಅಲ್ಲಿನ ಕಥೆಯನೆಲ್ಲಾ ತಿಳಿದುಕೊಂಡು ಬರೆದಿಟ್ಟರೆ, ಅಲ್ಪಸ್ವಲ್ಪವಾದರೂ ಇದರಿಂದ ಇತಿಹಾಸಕ್ಕೆ ಪ್ರಯೋಜನವಾಗುವದು.

ಪ್ರಸಿದ್ಧವಾದ ಪ್ರತಿಯೊಂದು ಸ್ಥಳಕ್ಕೂ “ಸ್ಥಳಪುರಾಣ”ವು ಇದ್ದೇ ಇರುತ್ತದೆ. ಅದನ್ನು ಸರಿಯಾಗಿ ಶೇಖರಿಸಿದರೆ, ಆಯಾ ಊರಿನ ಉತ್ಪತ್ತಿಯೇ ಮೊದಲಾದ ವಿಷಯಗಳನ್ನು ಗೊತ್ತುಮಾಡಲು ಸಾಧ್ಯವಾಗುತ್ತದೆ.

ಅಲ್ಲದೆ, ಹಳ್ಳಿಗಳಲ್ಲಿ ಮುಖಂಡರಾದವರನ್ನು ಹಿಡಿದು ಅವರ ಮನೆತನದ ಪೂರ್ವ ಕಥೆಗಳನ್ನು ಕೇಳಿ ಬರೆದಿಡಬೇಕು. ಇತಿಹಾಸಕ್ಕೆ ಸಂಬಂಧಪಟ್ಟ ಎಷ್ಟೋ ವಿಷಯಗಳು ಇವುಗಳಲ್ಲಿಯೂ ಸಿಕ್ಕಬಹುದು.

ಇಷ್ಟರ ಜತೆಗೆ ಉಪಾಧ್ಯಾಯರುಗಳು ಹಳ್ಳಿಗಳ ಕಡೆ ಇನ್ನೊಂದು ಮುಖ್ಯವಾ ಕೆಲಸವನ್ನು ಮಾಡಬೇಕು. ಆಯಾ ಹಳ್ಳಿಗಳಲ್ಲಿ ವಾಸಿಸುವರಲ್ಲಾಗಲೀ ಹಳ್ಳಿಗಳಿಗೆ ಬಂದು ಹೋಗಿ ಮಾಡುವವರಲ್ಲೇ ಆಗಲೀ ಕೆಲವರು ಲಾವಣಿಗಳನ್ನು ಹಾಡುವರು. ಈ ಲಾವಣಿಗಳಿಂದ ಬಲು ಹೆಚ್ಚಿನ ಐತಿಹಾಸಿಕ ಸಂಗತಿಗಳು ದೊರೆಯುವವು. ಆದುದರಿಂದ ಉಪಾಧ್ಯಾಯರುಗಳು ಇಂಥಹ ಲಾವಣಿ ಹೇಳುವವರನ್ನು ಹೇಗಾದರೂ ಅನುಸರಿಸಿ ಅವರುಗಳಿಂದ ಲಾವಣಿಗಳನ್ನು ಹೇಳಿಸುತ್ತಾ ಬರೆದಿಟ್ಟರೆ, ದೇಶದ ಇತಿಹಾಸದ ಕೆಲಸಕ್ಕೆ ಬಹಳ ಸಹಾಯವಾಗುವದು.

ಈ ಸಂದರ್ಭದಲ್ಲಿ ಎಷ್ಟೋ ಸ್ವಾರ್ಥತ್ಯಾಗಮಾಡಬೇಕಾಗುತ್ತದೆ. ಇದರಲ್ಲಿ ಪ್ರತಿಫಲರೂಪವಾಗಿ ‘ದ್ರವ್ಯವಾಗಲೀ, ಕೀರ್ತಿಯಾದರಾಗಲೀ ಸಿಕ್ಕದು. ಇದಕ್ಕೆ ಪ್ರತಿಫಲವೆಂದರೆ ನಾವು ನಮ್ಮ ಕೈಯಲ್ಲಾದ ಮಟ್ಟಿಗೆ ಶ್ರೀರಾಮಚಂದ್ರನಿಗೆ ಅಳಿಲುಗಳಂತೋ ಅಂತು ಕರ್ನಾಟಕ ಮಾತೆಯ ಸೇವೆಯನ್ನು ಮಾಡಿದೆವೆಂಬ ಸಮಾಧಾನ, ತೃಪ್ತಿ ಇಷ್ಟೇ.

—ವಿದ್ಯಾದಾಯಿ.

ನಮ್ಮ ಚಿಕ್ಕೋಡಿಯ ಪತ್ರ.

ಚಿಕ್ಕೋಡಿಯು ತಾಲೂಕಿನ ಮುಖ್ಯ ಊರು. ಅದರ ಸ್ಥಿತಿಯು ಹೇಳಲಾಸಲ್ಲದಷ್ಟು ಶೋಚನೀಯವಾಗಿದೆ. ಇದು ಕರ್ನಾಟಕದೊಳಗಿನ ಊರಾಗಿದ್ದರೂ ಇಲ್ಲಿ ಕನ್ನಡಕ್ಕೆ ಎಳ್ಳಷ್ಟಾದರೂ ವಾಸನೆಯಿಲ್ಲ. ವ್ಯಾಪಾರಸ್ಥರ ಲೆಕ್ಕಪತ್ರಗಳೆಲ್ಲವೂ ಮರಾಠಿಯಲ್ಲಿಯೇ! ವಿದ್ಯಾರ್ಥಿಗಳ "ಕನ್ನಡ ಭಾಷಾಭಿವರ್ಧಕ ಸಂಘ"ದ ಪರಿಚಾರಕರು ಅವರಿಗೆ ಹಲ ಪರಿಯಿಂದ ತಿಳಿಹೇಳಿದರೂ ಅವರು ತಮ್ಮ ಹಟವನ್ನು ಬಿಡುವದಿಲ್ಲ. ತಿರುಗಿ ಪರಿಚಾರಕರನ್ನೇ ನಿಂದಿಸುತ್ತಿರುವರು. ಇದೊಂದು ಕನ್ನಡದ ದುರ್ದೈವವೇ ಸರಿ.

ಕೋರ್ಟಿನಲ್ಲಿ ಮರಾಠಿಯು ಸಂಚಾರವಾಗಿದೆ. ಮೊದಲೇ ಇಲ್ಲಿಯ ವಕೀಲರಿಗೆ ಮರಾಠಿಯು ಮಬ್ಬು, ಅದರೊಳಗೆ ಸರಕಾರದವರೂ ಇಲ್ಲಿ ಮರಾಠಿಗೆ ಸ್ಥಳಕೊಟ್ಟಮೇಲೆ ಕೇಳುವದೇನು? ವಿರುದ್ಧ ವಾದಕ್ಕೆ ಹೋದವರೇ ತಿರುಗೇಟು! ಇವೆಲ್ಲದರ ಮೂಲಕಾರಣವು ಇಲ್ಲಿಯ ಕೆಲ ಮರಾಠೀ ವಕೀಲರ ವರ್ಚಸ್ವೇ ಸರಿ! ಕನ್ನಡಿಗರ ಸ್ವಭಾಷಾಭಿಮಾನ ಶೂನ್ಯತೆಯು ತೀವ್ರ ಹೋಗದಿದ್ದರೆ ಚಿಕ್ಕೋಡಿ ತಾಲೂಕು ಮರಾಠಿಗರ ಕೈಸೇರುವ ಲಕ್ಷಣಗಳು ಸ್ಪಷ್ಟವಾಗಿ ತೋರುತ್ತಲಿವೆ! ಕನ್ನಡ ಮುಂದಾಳುಗಳು ಏನ ಮಾಡುತ್ತಿರುವರು?

ಇಲ್ಲಿಯ ಮ್ಯುನಿಸಿಪಾಲಿಟಿಯು ಸ್ವಸ್ಥವಾಗಿ ನಿದ್ರೆ ಹೋಗಿದೆ. ಊರಲ್ಲಿ ಎತ್ತನೋಡಿದಲ್ಲಿ ಕಸ ಮೋರಿಯ ಗಟಾರಗಳು ದುರ್ಗಂಧಿಯಾಗುವ ಕೇರಿಗಳು, ರಸ್ತೆಗಳೂ ಸಮನಾಗಿಲ್ಲ; ಬೀದಿಯ ಕಂದೀಲಗಳು ಹೋಗಿ ದೀಪಸ್ತಂಭಗಳು ಮಾತ್ರ ಅಲ್ಲಲ್ಲಿ ನಿಂತಿದ್ದು ಕಾಣುತ್ತವೆ. ಇನ್ನು ಆ ದೀಪಸ್ತಂಭಗಳು ಪಂಚರ ಮನೆಗಳಲ್ಲಿಯ ಉರುವಲಕ್ಕಾಗಿ ಯಾವಾಗ ಕಿತ್ತುವ ಪ್ರಸಂಗ ಬರುವುದೋ ನೋಡಬೇಕು. ಇಷ್ಟಾಗಿ ಪಂಚರೇನು ಅಶಿಕ್ಷಿತರೇನು? ಇಲ್ಲ ಎಲ್ಲರೂ ಉಚ್ಚ ಶಿಕ್ಷಣ ಪಡೆದವರು ಆಂಗ್ಲ ವಿದ್ಯಾಪರಿಣತರು. ಆದರೆ ಇಂಥ ಅವ್ಯವಸ್ಥೆಯು ಯಾಕೆ ಆಗಿದೆಯೋ ತಿಳಿಯದು. ಈ ತಾಲೂಕಿನಲ್ಲಿಯ ಬೇರೆ ಸಣ್ಣ ಸಣ್ಣ ಹಳ್ಳಿಗಳು ಎಷ್ಟೋ ಉತ್ತಮವಾಗಿ ಕಾಣಿಸಲ್ಪಡುತ್ತಿವೆ. ಸದಲಗಾ, ಭೋಜ, ಕಬ್ಬೂರಗಳಲ್ಲಿ ಸುವ್ಯವಸ್ಥೆಯಿದೆ. ಆದರೆ ಈ ತಾಲೂಕಿನ ರಾಜಧಾನಿಯ ಸ್ಥಿತಿಯೇನು? ಅಧಿಕಾರ ಮದ ಸ್ಪರ್ಧೆ ಎದುರು ಬಿದ್ದು ಹಲ್ಲು ಮುರಿಕೊಳ್ಳುವದೇ!

ಗ್ರಾಮ ಪಂಚರೂ ಕನ್ನಡಿಗರೂ, ಬೇರೆ ಮುಂದಾಳುಗಳೂ ತಮ್ಮ ನಿದ್ರೆಯಿಂದ ಎಚ್ಚೆತ್ತು ಇನ್ನಾದರೂ ಎಚ್ಚರಿಕೆಯಿಂದ ನಡೆಯಬೇಕು; ಇಲ್ಲವಾದರೆ ಅನರ್ಥವೂ ಅನೇಕವಾದೀತು!

ಪುಣೆಯಲ್ಲಿ ಕರ್ನಾಟಕದ ಚಳುವಳಿ.

ಪುಣೆಯ ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವವು ಈ ದಿನ ಪುಣೆಯ ಫರ್ಗ್ಯೂಸನ್ ಕಾಲೇಜದಲ್ಲಿ ನೆರವೇರಿತು. ಧಾರವಾಡದ ಶ್ರೀ ವಿ. ಕೆ. ರಂಗರಾಯರು ಅಧ್ಯಕ್ಷರಾಗಿ ಆಮಂತ್ರಿಸಲ್ಪಟ್ಟಿದ್ದರು. ಕನ್ನಡ ವಿದ್ಯಾರ್ಥಿಗಳ ಆಟ, ಊಟ, ಗಾಯನ ಸಂವಾದ, ಭಾಷಣ ಸಂವಾದ, ಫೋಟೋ ಇತ್ಯಾದಿ ಕಾರ್ಯಕ್ರಮಗಳು ನೆರವೇರಲ್ಪಟ್ಟವು. ಕನ್ನಡ ವಿದ್ಯಾರ್ಥಿಗಳು ಪುಣೆಯಲ್ಲಿ ಕನ್ನಡತ್ವವನ್ನು ಹೀಗೆ ಕಾಯ್ದುಕೊಳ್ಳುತ್ತಿರುವದನ್ನು ಕಂಡು "ಕನ್ನಡಿಗ"ನಿಗೆ ಆನಂದವಾಗಿದೆ.

ಸಾಯುವ ಕಪ್ಪೆಗೆ ಜೀವಬಂದಿತು!

ಬೋಸರ ಹೊಸ ಶಾಸ್ತ್ರೀಯ ಶೋಧ!

ಸರ ಜಗದೀಶ ಚಂದ್ರಬೋಸರು ಗಿಡಮೂಲಿಕೆಗಳಿಗೂ ಪ್ರಾಣವಿರುತ್ತದೆ; ಅವು ಸಹ ಮನುಷ್ಯನಂತೆ ಸುಖದುಃಖಗಳನ್ನು ಅನುಭೋಗಿಸುತ್ತವೆ; ಎಂಬುದನ್ನು ಶೋಧಿಸಿ ಅನೇಕ ದಿನಗಳಾದವಷ್ಟೇ! ಈ ಗಿಡಮೂಲಿಕೆಗಳ ಉಪಯುಕ್ತತೆಗಳನ್ನು ಪರೀಕ್ಷಿಸುವಾಗ್ಗೆ ಅವರು ಮತ್ತೊಂದು ಹೊಸ ಶೋಧವನ್ನು ಮಾಡಿದ್ದಾರೆ. ಕುಮಾಸದ ಅರಣ್ಯದಿಂದ ಒಂದು ಬಳ್ಳಿಯನ್ನು ತಂದಿದ್ದಾರೆ. ಅದರ ರಸದಿಂದ ಸಾಯುವ ಕಪ್ಪೆಗೆ ಇಂಜೆಕ್ಷನ್ ಮಾಡಿದಾಕ್ಷಣವೇ ಕುಂಠಿತವಾಗಿದ್ದ ಅದರ ಎದೆಯು ಹಾರಹತ್ತಿತು! ಮತ್ತೊಂದು ಸಲ ಆ ಔಷಧಿಯನ್ನು ಕೊಡಲು ಅದಕ್ಕೆ ಸಂಪೂರ್ಣವಾಗಿ ಜೀವ ಬಂದಿತು!! ಈ ರಸದಿಂದ ಮನುಷ್ಯನ ಆಯುಷ್ಯ ಪ್ರಮಾಣವನ್ನು ಸಹ ಹೆಚ್ಚಿಸುವದು ಶಕ್ಯವಿದೆಯೆಂದು ಬೋಸರು ಹೇಳುತ್ತಾರೆ! ಈ ಮೂಲಿಕೆಯಿಂದ ಉದ್ಭವವಾದ ರಸವನ್ನು ವಿಪುಲವಾಗಿ ತೆಗೆಯುವದು ಅವಶ್ಯವಿದೆಂದು ಬೋಸರು ಹೇಳಿದರು!

ನಮ್ಮ ನಿಝಾಂ ಕರ್ನಾಟಕದ ಪತ್ರ.

ಹೈದ್ರಾಬಾದಿಗೆ ಕನ್ನಡ ನಾಟಕ ಕಂಪನಿಗಳು ಇದುವರೆಗೆ ಬಂದಿರಲಿಲ್ಲ. ಆದರೆ ಇಲ್ಲಿಯ ಕೆಲವು ಅಭಿಮಾನೀ ಕನ್ನಡಿಗರ ಪ್ರಯತ್ನದಿಂದಲೂ ನಾಟಕ ಅಲಂಕಾರರ ಧೈರ್ಯದಿಂದಲೂ ಕನ್ನಡ ದೇಶಾತ್ಯಯು ಕಂಪನಿಯವರು ಕನ್ನಡ ನಾಟಕಗಳನ್ನು ಹೈದರಾಬಾದ ಪಲ್ಲಿ ಆಡಿದರು. ನಮ್ಮ (ಹೆಸರಿಲ್ಲದೇ ಬಳಲುತ್ತಿರುವ) ಕರ್ನಾಟಕ ಸಂಘಕ್ಕಾಗಿ ಕಡೆಯ ನಾಟಕವನ್ನು ಆಡಿ ಆ ದಿವಸದ ಉತ್ಪನ್ನವನ್ನು ಅರ್ಪಿಸಿದರು. ಎಂಟು ನೂರು (೮೦೦) ರೂಪಾಯಿಗಳೂ ಬಂದವು! ಇದೇನು ಕನ್ನಡಿಗರ ದೈವ ತೆರೆಯಿತು! ನಮ್ಮ ಉನ್ನತಿಗಾಗಿ ಹಗಲಿರುಳು ಚಿಂತಿಸುವ ಕನ್ನಡ ಮುಂದಾಳುಗಳು ಹುರುಪಿನಿಂದ ಕೆಲಸ ಮಾಡಿ ನಮ್ಮ ಈ ಸಂಘ-ಸಭೆ ಮತ್ತು ಇದರ ಸಹಾಯದಿಂದ ನಡೆಯುತ್ತಿರುವ ವಾಚನಾಲಯವನ್ನೂ, ಕೊನೆವರೆಗೆ ನಡೆಸುವರೆಂದೂ ಕನ್ನಡಿಗರೆಲ್ಲ ಬಾಯಿಬಿಡುತ್ತ ಕುಳಿತಿದ್ದರು! ಆದರೆ ಈ ಸಂಘದ ಕಾರ್ಯಕಾರಿ ಮಂಡಳಿಯವರು ಸುಧಾರಿಸಲು ಹೋಗಲು 'ಗಣಪತಿಯನ್ನು ಮಾಡಹೋದರೆ ಮಂಗವು ಆಯಿತೆಂಬಂತೆ', ಅದರ ಸ್ಥಿತಿಯು ಆಯಿತು!

ಯಾಕೆಂದರೆ ಇದುವರೆಗೆ ವಾಚನಾಲಯವು ಕನ್ನಡ ಜನವಸತಿಯಲ್ಲಿ ಇದ್ದುದರಿಂದ ಇತರ ಕನ್ನಡಿಗರಿಗೆ ಕೂಡ ಸಮೀಪದ ಸ್ಥಳದಲ್ಲಿ ಇದ್ದಿತು. ಆದರೆ ಈಗ್ಗೆ ಅದನ್ನು ಬೇರೆ ಸ್ಥಳಕ್ಕೆ ಒಯ್ದಿರುವರು. ಆ ಸ್ಥಳದಲ್ಲಿ ಕನ್ನಡಿಗರ ಜನಸಂಖ್ಯೆ ಕಡಿಮೆ ಇದೆ. ಮತ್ತು ಅದು ದೂರ ಇದ್ದು ಎಲ್ಲರಿಗೂ ಅನನುಕೂಲವೇ.

ಈಗಿಯ ಕನ್ನಡಿಗರು ಇಷ್ಟು ಸಮೀಪದ ಸ್ಥಳಕ್ಕೆ ಹೋಗಿ, ತಮ್ಮ ದರ್ಶನವನ್ನು ವಾಚನಾಲಯಕ್ಕೆ ಕೊಟ್ಟರೆ, ವಾಚನಾಲಯದ ಧ್ಯೇಯ ಕೈಗೂಡುತ್ತಿತ್ತು! ಆದರೆ ಅಲ್ಲಿ ಸಹ ಕಾರ್ಯಕಾರೀ ಮಂಡಳಿಯವರಿಗೂ ಮತ್ತು ಲೈಬ್ರರಿಯನ್ನರಿಗೂ ದರ್ಶನವೇ ಇರುತ್ತಿದ್ದಿಲ್ಲ! ಈಗಂತೂ ಎಲ್ಲರಿಗೂ ಹಾಸಿಗೆಯನ್ನು ಹಾಸಿಕೊಟ್ಟಂತಾಯಿತು! ಅದಕಾರಣ ಕಾರ್ಯಕಾರೀ ಮಂಡಲದವರು ಯೋಗ್ಯ ವಿಚಾರಮಾಡಿ ಕನ್ನಡಿಗರಿಗೆ ಅನುಕೂಲವಾಗುವಂಥ ಸ್ಥಳಕ್ಕೆ ವಾಚನಾಲಯವನ್ನು ಒಯ್ಯಬೇಕು. ಅಂದರೆ ಇಲ್ಲಿಯ ಕನ್ನಡಿಗರ ವಾಚನಾಭಿರುಚಿಯನ್ನು ಅಭಿಮಾನವನ್ನು ಹೆಚ್ಚಿಸಿದ ಶ್ರೇಯಕ್ಕೆ ಪಾತ್ರರಾಗುವರು! ಇಷ್ಟೊಂದು ಚಿಕ್ಕದಾದರೂ ಮಹತ್ವದ ಕಾರ್ಯವನ್ನು ಈ ವಾಚನಾಲಯದ ದೇವರು ಮಾಡಬಲ್ಲರೋ!

ಶ್ರೀ ಶರಣ ಬಸವೇಶ್ವರ ಇವರ ಸಂಸ್ಥಾನದ ಗಾದಿಯ ಒಡೆಯರಾದ ಶ್ರೀಮಂತ ಮಹಾರಾಜ ದೊಡ್ಡಪ್ಪಾ ಉರ್ಫ ಶರಣ ಬಸಪ್ಪಾ ಅಪ್ಪಾ ಇವರಿಗೆ, ತಾ|| ೨೧-೧೧-೨೭ ನೇ ಇಸ್ವಿ ಸೋಮವಾರ ಪುತ್ರೋತ್ಸವವಾಯಿತು. ಊರಲ್ಲೆಲ್ಲ ಉತ್ಸವವೂ ಆಯಿತು.

"ನಿಝಾಮ ವಿಜಯ" ಎಂಬ ಮರಾಠೀ ಸಾಪ್ತಾಹಿಕದಲ್ಲಿ ಶ್ರೀ ಗೋಪಾಲ ಕೃಷ್ಣ ವಕೀಲರು "ನಿಝಾಮ ಕರ್ನಾಟಕದಲ್ಲಿಯ ಕನ್ನಡ ಭಾಷೆಯ ದುರ್ದಶೆ" ಎಂಬ ವಿಷಯದ ಮೇಲೆ ಲೇಖಾಂಕಗಳನ್ನು ಪ್ರಕಟಿಸುತ್ತಲಿದ್ದಾರೆ. ಸ್ತುತ್ಯ! ಇದರಿಂದಲಾದರೂ ಇಲ್ಲಿಯ ಮರಾಠಿಗರಿಗೆ ಕನ್ನಡದ ಮಹಿಮೆಯು ಕೊಂಚವಾದರೂ ತಿಳಿಯಲಿ!

ನಮ್ಮ ಬೆಳಗಾವಿಯ ಪತ್ರ.

ಪ್ಲೇಗು ಕಡಿಮೆಯಾಗುತ್ತಲಿದೆ.

ಇಲ್ಲಿಯ ಆಯುರ್ವೇದ ಔಷಧಾಲಯಕ್ಕೆ ಜಿಲ್ಲಾ ಬೋರ್ಡಿನವರು ಪ್ರತಿವರ್ಷ ೧೫೦೦ ರೂಪಾಯಿ ಸಹಾಯ ಕೊಡುತ್ತಿದ್ದರಷ್ಟೇ? ಆದರೆ ಇನ್ನು ಮುಂದೆ ಈ ಸಹಾಯವು ಸಿಗಲಾರದೆಂದು ಡಾ|| ಬಾ|| ಅಂಗಡಿಯವರು ಔಷಧಾಲಯದವರಿಗೆ ತಿಳಿಸಿರುತ್ತಾರೆ. ಔಷಧಾಲಯದ ವಿಷಯಕ್ಕೆ ತಮ್ಮ ಕೆಟ್ಟ ಅಭಿಪ್ರಾಯವನ್ನಾದರೂ ಬರೆದಿರುವರಂತೆ! ಇತ್ತ ಶಿಕ್ಷಣ ಮಂತ್ರಿಯವರು ಆಯುರ್ವೇದ ಔಷಧಾಲಯಕ್ಕೆ ಭೆಟ್ಟಿಕೊಟ್ಟು ತಮ್ಮ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಈ ರಾವ ಬಹದ್ದೂರರು ಮಾತ್ರ ಔಷಧಾಲಯದ ವಿಷಯಕ್ಕೆ ಹೀಗೆ ಬರೆಯಲಿಕ್ಕೆ ಒಳಗಿನ ಕಾರಣ ವೇನಿರಬಹುದು?

ಇಲ್ಲಿಯ ಕಾಂಗ್ರೆಸ ಕಮೀಟಿಯ ವಾರ್ಷಿಕ ಸಭೆಯು ಹೋದ ವಾರದಲ್ಲಿ ಯಾಗಿ ಇವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಶ್ರೀ ದತ್ತಾತ್ರೇಯ ವೆಂಕಟೇಶ ಬೆಳವಿ ಇವರು ಅಧ್ಯಕ್ಷರಾಗಿಯೂ ದತ್ತಾತ್ರೇಯ ರಾಮಚಂದ್ರ ಮಜಲಿಯವರೂ ಮತ್ತು ಸಾ. ಗು ಜೋಶಿಯವರೂ ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು.

ಕುಮರಿಯ ಖಾದಿ ಕೇಂದ್ರದಲ್ಲಿ ಮೂರು ತಿಂಗಳಲ್ಲಿ ೧೬೦೦ ರೂಪಾಯಿ ಖಾದಿಯು ಹುಟ್ಟಿತು. ಇದರ ಮೂಲಕವಾಗಿ ಭಾಗೋಜಿಕೊಪ್ಪ (ತಾ|| ಶೈಲಮೊಂಗಿ) ದಲ್ಲಿ ಪ್ರತಿಂಗಳಿಗೆ ೧೨ ರಿಂದ ೧೩ ನೂರು ರೂಪಾಯಿಗಳವರೆಗೆ ಖಾದಿಯು ಹುಟ್ಟುತ್ತಿರುವದು.

ಬಾಂಬೆ ಲಾಯಿಟ ರೇಲ್ವೆಯವರು ಪಂಢರಪುರದ ಯಾತ್ರೆಯ ಜನರ ದೆಸೆಯಿಂದ ಕೆಲವು 'ಸ್ಪೇಶಲ್' ಬಿಟ್ಟರೂ ವಾಗಿನದಲ್ಲಿ ಜನರನ್ನು ಕೂಡ್ರಿಸುತ್ತಿದ್ದರು! ಮೂರನೆ ವರ್ಗದವರಿಗೆ ತೊಂದರೆಯು ಇದ್ದದ್ದೇ;

ಕುರಂದವಾಡ (ಹಿರೇ ಕುರಂದವಾಡ) ಶ್ರೀಮಂತ ಮಾಯಿಸಾಹೇಬ ಇವರನ್ನು ಸಂಸ್ಥಾನದ "ರಿಜಂಟ"ರನ್ನಾಗಿ ನೇಮಿಸಿ, ರಾಜ್ಯಕಾರಭಾರವನ್ನು ಮಾಯಿಸಾಹೇಬ ಇವರ ಕಡೆಗೇ ಕೊಟ್ಟಿರುವರು. ಕೋರ್ಟ್ ಆಫ್ ವಾರ್ಡ ಕಡೆಗೆ ಮುಲಕಿ ಪೂರ್ಣ ಅಧಿಕಾರ ಸೇನ್ಸ ಜಜ್ಜ ಅಧಿಕಾರ, ಮತ್ತು ದಿವಾಣಿಯ ಹೈಕೋರ್ಟಿನ ಅಧಿಕಾರ ಕೊಟ್ಟದ್ದು, ಫೌಜದಾರಿ ಬಗ್ಗೆ ಹೈಕೋರ್ಟಿನ ಅಧಿಕಾರ ಪೋಲಿಟಿಕಲ್ ಏಜಂಟರ ಸ್ವಾಧೀನದಲ್ಲಿ ಇಟ್ಟಿರುವ ಆರಂಭಾವಿಗಳ ಮಹತ್ವದ ಕೆಲಸದಲ್ಲಿ ರಾಣೀಸಾಹೇಬ ಇವರ ಅನುಮತಿಯನ್ನು ಕೇಳಬೇಕೆಂದು ಪೋಲಿಟಿಕಲ್ ಏಜಂಟ ಪ್ರಾಂತ ಕರ್ನಾಟಕ ಇವರಿಂದ ಒಂದು ಜಾಹೀರನಾಮೆಯು ಪ್ರಕಟವಾಗಿ ಇದರಂತೆ ಶ್ರೀಮಂತ ಮಾಯಿಸಾಹೇಬ ರಿಜಂಟ (ಹಿರೇಕುರಂದವಾಡ) ಇವರು ತಾ|| ೨೦-೧೧-೩೭ನೇ ದಿವಸ ಜಾಹೀರನಾಮೆಯನ್ನು ಪ್ರಕಟ ಮಾಡಿರುತ್ತಾರೆ.

ಕೊಲ್ಹಾಪುರದ ಮಹಾರಾಜರಕಡೆಗೆ ಇದ್ದ ಶರ್ಯತ್ತಿನ ಕುದುರೆಗಳಿಗೆ ಪ್ರತಿತಿಂಗಳಿಗೆ ಸುಮಾರು ಅರ್ಧ ಲಕ್ಷ ರೂಪಾಯಿಗಳು ಖರ್ಚಾಗುತ್ತವೆ! ಕುದುರೆಗಳ ಸಂಖ್ಯೆಯು ೨೦೦. ಈ ಸಾರೆ ಶರ್ಯತ್ತಿನಲ್ಲಿ ಮಹಾರಾಜರು ೭೮ ಸಾವಿರ ರೂ. ಇನಾಮು ಪಡೆದಿರುವರು. ಆದರೆ ಕುದುರೆಗಳಿಗೆ ಎರಡು ತಿಂಗಳ ಖರ್ಚು ಸಹ ದೊರೆಯಲಿಲ್ಲ! ಇತ್ತ [illegible]ರ ಗೊಳೂ ತಪ್ಪಲಿಲ್ಲ!

ನಮ್ಮ ಸಾಗರದ ಪತ್ರ.

ಛಳಿಯು ಬಹಳ. ಅಡಕೆ ರೇಖೆಯ ಕೆಲಸ ತ್ವರಿತದಿಂದ ಸಾಗುತ್ತಲಿದೆ. ಮಲೇರಿಯಾ ಜ್ವರವು ಅಲ್ಲಲ್ಲಿ ತಲೆದೋರುತ್ತಲಿದ್ದೆ ಜೋಗ ಜಲಪಾತವು ಪ್ರೇಕ್ಷಕರನ್ನು ತಂಡತಂಡವಾಗಿ ಆಕರ್ಷಿಸುತ್ತಲಿದೆ.

ಇಲ್ಲಿನ ಪ್ರಾಥಮಿಕ ಪಾಠಶಾಲೆಯೊಂದರಲ್ಲಿ ಒಬ್ಬ ಉಪಾಧ್ಯಾಯರು ಸುಮಾರು ೭೫ ವಿದ್ಯಾರ್ಥಿಗಳಿಗೆ ಪಾಠ ಹೇಳಬೇಕಂತೆ. ಇಲ್ಲಿಗೆ ಇನ್ನೊಬ್ಬ ಉಪಾಧ್ಯಾಯರನ್ನು ನಿಯಮಿಸಲು "ಸ್ಕೇಲು" ಇಲ್ಲವಂತೆ! ಇನ್ನು ಕೆಲವು ಗ್ರಾಮಾಂತರ ಪಾಠಶಾಲೆಗಳಲ್ಲಿ ಕೇವಲ ೧೦—೧೫ ಮಕ್ಕಳುಗಳಿದ್ದರೂ ಎರಡು ಜನ ಉಪಾಧ್ಯಾಯರು ಇರುತ್ತಾರೆ! ಹೇಗಿದೆ ಸುವ್ಯವಸ್ಥೆ!

ಶ್ರೀಯುತ ಯಾಗಪ್ಪನ ಧರ್ಮಯವರು ಊರ ವೃದ್ಧಿ ಸ್ಥಾಪಿಸಬೇಕೆಂದಿದ್ದ ಅಕ್ಕಿ ಕಾರ್ಖಾನೆಯನ್ನು ವಿಶೇಷರವರು ಬಿಡ ಮಾಯಿಷಿ ಮಾಡಿ, ಇದರಿಂದ ಊರ ಆರೋಗ್ಯಕ್ಕೆ ಪ್ರತಿಬಂಧಕ ವಿಲ್ಲವಾಗಿದ್ದ ಡಸ್ತ್ರಿಕೆಯನ್ನು ಅಪ್ಪಣೆ ಕೊಡಿಸುವವರೆಗೆ ಈ ಕೆಲಸ ನಡಯಿಸಕೂಡದಾಗಿ ಮ್ಯುನಿಸಿಪಾಲಿಟಿ ಅಪ್ಪಣೆ ಮಾಗಿರುವದು.

ಇತ್ತೀಚೆಗೆ ತುಂಬಿದ ಬ್ರಾಹ್ಮಣ ಶ್ರೇಣಿಯಲ್ಲಿ ಒಂದೆರಡು ವೇಶ್ಯಾ ಸಂಸಗಳಾಗಿವೆ! ಈ ಮನೆಗಳ ಹಿಂದೆ ಪಟಪ್ರಮುಖರ ಸುಳಿದಾಟ ಸಾಗಿದೆ! ಹಾಗೆ ಸುಳಿದಾಡಬೇಕಾದಲ್ಲಿ ಇವರು ತಮ್ಮ ಅಂದಚಂದಗಳ ಕಡೆಗೆ ತುಸು ದೃಷ್ಟಿ ಕೊಡಲೇ ಬೇಕು. ಇಷ್ಟೂ ಅವಮೇಲೆ ಶೃಂಗಾರ ಚೇಷ್ಟೆ ಮಾಡುವುದರೆ ಆಗುತ್ತಿದೆಯೆ? ಸಭ್ಯ ಗೃಹಸ್ಥರ ಕೇರಿಯಲ್ಲಿ ಇದೆಂಥ ನಾಚಿಗೇಡು! ಹೌದು. ಈ ಮನೆಗಳ ಮಾಲಕರಿಗೆ ಇಷ್ಟು ಹೆಚ್ಚಿಗೆ ಬಾಡಿಗೆ ಕೊಡುವ ಸಭ್ಯಗೃಹಸ್ಥರು ಯಾರೂ ಸಿಕ್ಕಲಿಲ್ಲ! ಏನೇ ಮಾಲಿಕರು ಇಷ್ಟಪಟ್ಟಲ್ಲಿ ಈ ಕೇರಿಗಳಲ್ಲಿ ಚರ್ಮದ ಅಂಗಡಿಗಳೂ ಆಗುತ್ತವೆಯೋ ಏನೋ? ಯಾರು ಬಲ್ಲರು? ಬಾಡಿಗೆ ಹೆಚ್ಚಿಗೆ ಬಂದರೆ ಸರಿ ಕೇರಿಯ ಅವಸ್ಥೆ ಏನಾದರೇನು?

ಉ ಕರ್ನಾಟಕದಲ್ಲಿ ಬೆಳೆಗಳ ಸ್ಥಿತಿ

ಕಾರವಾರ ಅಡಿಕೆ ಯಾಲಕ್ಕಿಗಳ ಸುಗ್ಗಿ ಭರದಿಂದ ಸಾಗಿದೆ. ಭತ್ತ ಹಾಗೂ ಇತರ ಬೆಳೆಗಳನ್ನು ಒಕ್ಕುವ ಕೆಲಸವು ನಡೆದಿದೆ. ಕಬ್ಬು ಮತ್ತೂ ತೋಟದ ಬೆಳೆಗಳು ಚನ್ನಾಗಿವೆ.

ವಿಜಾಪುರ. ಹಿಂಗಾರಿಯು ಚನ್ನಾಗಿದ್ದರೂ, ಅಲ್ಲಲ್ಲಿ ಬಿಳಿ ಜೋಳಕ್ಕೆ ಸುಳಿಯೊಡೆಯ ಹತ್ತಿದೆ ಹಸಿ ಹುಲ್ಲು ಇನ್ನೂ ದೊರೆಯುತ್ತದೆ. ಬೇಳಿಗೇ ಹೆತೆಯಲ್ಲಿ ಕುಡಿಯುವ ನೀರು ಸಾಕಷ್ಟು ಇರುವದಿಲ್ಲ.

ಬೆಳಗಾವಿ ಸಜ್ಜೆ ಹಾಗೂ ಭತ್ತಗಳನ್ನು ಒಕ್ಕುವ ಕೆಲಸ ಸಾಗಿದೆ. ಮೆಣಸಿನ ಕಾಯಿಗಳು ಕೊಯ್ಯಲ್ಪಡುತ್ತಲಿವೆ.

ಧಾರವಾಡ ಬೆಳೆಗಳು ಉತ್ತಮಸ್ಥಿತಿಯಲ್ಲಿವೆ ಮೆಣಸಿನ ಕಾಯಿ ಹಾಗೂ ಮುಂಗಾರಿ ಹತ್ತಿಗಳನ್ನು ಬಿಡಿಸುತ್ತಲಿದ್ದಾರೆ. ಹಾನಗಲ್ಲ ಹಾಗೂ ಹಾವೇರಿ ತಾಲೂಕಗಳಲ್ಲಿ ಒಣಗಿಹೋಗುತ್ತಿವೆ.

ಕರ್ನಾಟಕ ಸಂಸ್ಥಾನಗಳು. ವಿ ಡವಿಗಳು ಅನೇಕ ಕಡೆಗೆ ಹತ್ತಿವೆ. ಉಳಿದ ಭಾಗದಲ್ಲಿ ಬೆಳೆಗಳು ಚನ್ನಾಗಿವೆ ಭೈಮೂಗು ಹಾಗೂ ಕಬ್ಬುಗಳ ಸುಗ್ಗಿ ನಡೆದಿದೆ.

ಸೊಲ್ಲಾಪುರ. ಹಿಂಗಾರಿ ಬೆಳೆಗಳು ಚನ್ನಾಗಿವೆ. ಸಜ್ಜೆ ಹಾಗೂ ಹತ್ತಿಗಳನ್ನು ಕೆಲವೆಡೆಯಲ್ಲಿ ಕಿತ್ತುತ್ತಲಿದ್ದಾರೆ. ಕುಡಿಯುವನೀರು ಸಾಕಷ್ಟಿದೆ.

ಹಿಂದುಸ್ಥಾನ.

'ತುಕಾರಾಮ' ಹಾಗೂ 'ಜಯಂತಿ' ಹಡಗಗಳು ಮುಳುಗಿದ ಬಗ್ಗೆ ಯೋಗ್ಯ ವಿಚಾರಣೆಯನ್ನು ಮಾಡಲು ಮುಂಬೈ ಸರಕಾರದಿಂದ ಒಂದು ಮಂಡಲವು ಸ್ಥಾಪಿಸಲ್ಪಟ್ಟಿದೆ.

ಗುಣ ಬರದಿದ್ದರೆ ಹಣ ಪರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ ಗುಟಿಕಾ

ಈ 'ಬಲವಂತ ಗುಟಿಕೆ'ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣಿ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ, ಬಿಳುವ ಮುಂಚೆ ಅಥವಾ ನಂತರ ದಾತು ಸುರಿಯುವದು ನಿಲ್ಲುತ್ತದೆ ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯು ಬಂದಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳು ದಿವಸ ಸೇವಿಸಿ ಖಾತ್ರಿ ಮಾಡಿಕೊಳ್ಳಬಹುದು) ಇದರಿಂದ ವೈಯುಕ್ತಿಕ ನಿಯಮದಿಂದ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೆ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೧, ೩ ಡಬ್ಬಿಗೆ ೨-೪-೦, ... ೭-೦-೦, ಇದಲ್ಲದೆ ೧ ಡಬ್ಬಿ ಕಮಿಶನ ಸಿಗುವದು. ಪೂರ್ಣ ಗುಣಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸಃ— ಎಸ್. ಬಿ. ಕದಮ್ ಮತ್ತು ಸನ್ಸ್.
ಮು. ಪೋಸ್ಟ ನಿಪ್ಪಾಣಿ (ಜಿ. ಬೆಳಗಾವ.)

ಕರ್ಣಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ಪಬ್ಲಿಕ್ ಸ್ಕೂಲ್ ಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರುವದಕ್ಕೆ ತಕ್ಕದಾದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಜರದ ಕೆಲಸ, ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು.

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಲೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ॥ ಲಕ್ಷ್ಮೀಬಾಯಿ ಕೋಲ್ಹಾಪುರೆ,
ವ್ಯವಸ್ಥಾಪಕರು, ಕ. ಮ. ವಿದ್ಯಾಲಯ, ಧಾರವಾಡ.

ಟೇಬಲ್ ಟೈಂಪೀಸ್ ಇನಾಮ.

ಈ ನಕ್ಷೆಯಲ್ಲಿ ಕಂಡ ಫೌಂಟನ್ ಪೇನಾವು ಇಂಗ್ಲಂಡಿನಲ್ಲಿ



ತಯಾರಾದದ್ದು ದಕ್ಷಿಣಆಫ್ರಿಕೆಯ ಭಂಗಾರದಂಥ ನಿಬ್ಬು ಹಾಕಿದೆ ಈ ಪೇನಾದಿಂದ ಬರೆಯುವದರಿಂದ ಅಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ತಿಂಗಳೊಳಗಾಗಿ ಈ ಪೇನಾವನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೇಬಲ್ ಟೈಂಪೀಸ್ ಸಹಿತ ಪೇನಾ ೧ ಕ್ಕೆ ೨-೮-೦

ವಿಳಾಸಃ- ಪೀಟರ್ ವಾಚ್ ಕಂಪನಿ.
ಪೋ॥ ಬಾಕ್ಸ ನಂ. ೨೨, ಮದರಾಸು.

ಬಾಗಲಕೋಟೆ, ವಿಜಾಪುರ ಮೋಟಾರ ಸರ್ವಿಸ ಪ್ರಾರಂಭವಾಗಿದೆ!

ಬೆಳಗಾವಿಗೆ ಬಾಗಲಕೋಟೆಯಿಂದ ೩॥ ರೂ. ಪಾಸಲು ಮುಕ್ತಾಂ ಮಾಡಲಿಕ್ಕಿದೆ.



ವಿಜಾಪೂರ ಜಿಲ್ಲೆಯಲ್ಲಿಯ ಮತ್ತು ಸುತ್ತುಮುತ್ತಲಿನ ಖಾಸಗಿ ನಮ್ಮಿಗಿರಾಕಿನ ಮೋಟಾರ ಸಾಹೇಬರ ಸೇವೆಯ ದೋರಣಾಗಿಯಿಂದ
ಆರ್. ಜಿ. ಚವ್ಹಾಣ ಎಂಡ ಸನ್ಸ್, ಬೆಳಗಾವ. ಇವರು ತಮ್ಮ
ಜನರಲ ಮೋಟಾರ ಅಕ್ಸೆಸರಿ ಸ್ಟೋಅರ್ಸದ ಶಾಖೆಯನ್ನು
ತಾ॥ ೧೦ ಸಪ್ಟೆಂಬರ ೧೯೨೨ನೇ ಇಸ್ವಿಯಿಂದ ಬಾಗಲಕೋಟೆಯಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಶೆವ್ರಲೇಟ, ಓವರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯೂಬ್ಸ, ಗ್ರೀಸ, ಮೋಬಿಲ ಆಇಲ್, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯ ದರದಿಂದ ಸಿಗುವವು. ಒಂದು ವೇಳೆ ವ್ಯಾಪಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರದಿಂದ,

ಚಾಲಕಃ— ವಾಯ್. ಜಿ. ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಹಲ್ಕನಾಯಝಿಂಗ ಮಾಡಿ ಕೊಡುವೆವು

☞ ಬಾಗಲಕೋಟೆ-ಬೆಳಗಾವಿ, ಬಾಗಲಕೋಟೆ-ಇಳಕಲ್ಲ ಸರ್ವಿಸ ಯಥಾಪ್ರಕಾರ ನಡೆದಿದೆ

GRAMAPHONE COMPLETE Rs. 10.

ಗ್ರಾಮೊಫೋನ್.

ಎಂಬ ಹಾಡುಗಾರಿಕೆಯ ಯಂತ್ರವು.

ಮೊದಲಿನ ಕ್ರಯ ರೂ. ೩೫—೦—೦. **ಈಗಿನ ಕ್ರಯ ರೂ. ೧೦—೦—೦.**

ಈ ಯಂತ್ರವು ವಿಲಾಯತಿಯಲ್ಲಿ ತಯಾರಾದದ್ದು. ಇಂಗ್ಲೀಷು, ಕನ್ನಡ, ಹಿಂದುಸ್ತಾನಿ, ಇಂಗ್ಲೀಷು ವಾದ್ಯ ಮುಂತಾದ ಪದಗಳನ್ನು ಹೇಳುವದು. ಲಗ್ನದ ಮನೆ, ನಾಟಕಶಾಲೆ ಮುಂತಾದ ಜನಕೂಡುವ ಸ್ಥಳದಲ್ಲಿ ಉಪಯೋಗಿಸಲು ಬಹು ಚನ್ನಾಗಿದೆ. ನೋಟಕ್ಕೆ ಲಕ್ಷಣವಾಗಿರುವಂತೆಯೂ, ಕ್ರಯದಲ್ಲಿ ಸುಲಭವಾಗಿಯೂ ಇರುವಂತೆ ಬಹು ಬಲಿಷ್ಟವಾದ ಸಾಮಾನುಗಳಿಂದ ಈ ಯಂತ್ರವನ್ನು ತಯಾರಿಸಿದೆ. ಸುಂದರವಾದ ಹಾರ್ನ್ ಎಂಬ ಪದ ಹೇಳುವ ಕೊಳವೆ ಇದೆ. ನಿಧಾನವಾಗಿಯೂ ಜಾಗ್ರತೆಯಾಗಿಯೂ, ಪದ ಹೇಳಿಸಲು ಕೀಲು ಇದೆ. ಈ ಯಂತ್ರವನ್ನು ಎಲ್ಲಿ ಬೇಕಾದರೂ ಕೈಯಲ್ಲಿ ಹಿಡಿದುಕೊಂಡು ಹೋಗಲು ಅನುಕೂಲವಾದಂಥ ಸುಂದರವಾದ ಕೈ ಪೆಟ್ಟಿಗೆಯಲ್ಲಿಟ್ಟಿವೆ.

ಡಬಲ್ ಸೈಡ್ ಎರಡು ಕಡೆಯೂ ಪದವಿರುವ

೧ ರೆಕಾರ್ಡ ಸಹಿತ ಗ್ರಾಮೊಫೋನ್ ಯಂತ್ರದ ಪೆಟ್ಟಿಗೆ ಕ್ರಯ ರೂ. ೧೦—೦—೦

ಹೆಚ್ಚಿಗೆ ರೆಕಾರ್ಡ ಬೇಕಾದರೆ, ಪ್ರತ್ಯೇಕ ರೆಕಾರ್ಡ ೧ಕ್ಕೆ ರೂ. ೧—೮—೦.

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಮತ್ತು ಟಪಾಲು ಖರ್ಚು ಮುಫತ್ತಾಗಿ ಕಳಿಹಿಸುವೆವು.

ವಿಳಾಸ:— **ಬ್ರಿಟಿಷ್ ಟ್ರೇಡಿಂಗ್ ಕಂಪನಿ,**

ಪೋಸ್ಟ್ ಬಾಕ್ಸ್ ನಂ. ೧೨೬೩, ಮದರಾಸು.

ಸ್ಟಾಂಡರ್ಡ್ ಕಾಫಿಪುಡಿ.

ಅಖಿಲಭಾರತ ಸಕಲ ಕಲಾವಸ್ತು ಪ್ರದರ್ಶನದಲ್ಲಿ ರಜತ ಪದಕವನ್ನೂ, ಸರ್ಟಿಫಿಕೇಟುಗಳನ್ನು ಬಹುಮಾನವಾಗಿ ಪಡೆದ ಸ್ಟ್ಯಾಂಡರ್ಡ ಕಾಫಿಪುಡಿಯು ಅತ್ಯಂತ ಮನೋಹರವೂ, ರುಚಿಕರವೂ ಆದದ್ದು ತರಿಸಿ ಪರೀಕ್ಷಿಸಿ ನೋಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ್, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೆ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

ಪೌಂಡ ೧ಕ್ಕೆ ೧-೮-೦ ಮತ್ತು ೧-೨-೦.

ದಿ ಸ್ಟಾಂಡರ್ಡ್ ಕಾಫಿ ಕಂಪನಿ

ಚಿಕ್ಕಪೇಟೆ ಬೆಂಗಳೂರು ಸಿಟಿ.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದ ವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೆ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಪ್ಪ ಕಾಲವಾದಿ.

ಸ್ಟೇಶನರ್ಸ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ.

೫೬. ಜೀನಾಬಜಾರ್, ಮದ್ರಾಸು

ಬನಾರಸ್ ರೇಶ್ಮೀ ಶೀರೆಗಳು.

S.U.N. & CO.
BENARES CITY.

ನಮ್ಮಲ್ಲಿ ಉತ್ತಮತರದ ಎಲ್ಲಾವಿಧವಾದ ರೇಶ್ಮೀ ಮಾಲುಗಳನ್ನು ಕೇಳುವವರಿಗೆ ವಿ. ಪಿ. ಮೂಲಕ ಕಳಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕು ಉದ್ದ ಮೊಳಗಳ ಅಗಲಿ ಮೊಳ ೩. ಥಾನು ೧ಕ್ಕೆ ೧೫ ರಿಂದ ೫೦ ಬನಿ ಶೀರೆಗಳು ೧೬-೧೮ ಮೊಳ ಉದ್ದ ೧ಕ್ಕೆ ರೂ. ೨೫ ರಿಂದ ೫೦ ರವರೆಗೆ. ಬ್ರೊಕೇಡ್ ಬನಾರಸ್ ಶೀರೆ ೧೬-೧೮ ಉದ ಮೊಳ ೭ ೧ಕ್ಕೆ ರೂ. ೫೦ ರಿಂದ ೩೦೦ ರ ವರೆಗೆ ಉಡುವ ಮಗಟ ಉದ್ದ ೬-೮ ಮೊಳ ೧ಕ್ಕೆ ರೂ. ೧೦ ರಿಂದ ೩೦ ರ ವರೆಗೆ ಜರೀದ್ದು ೬-೮ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೪೦ ರ ವರೆಗೆ ಬಿಳಿ ರೇಶ್ಮೆ ಜರಿದ ಪಟಕ ಮೊಳ ಉದ ೧ಕ್ಕೆ ರೂ. ೧೧ ರಿಂದ ೩೦ ರವರೆಗೆ ಸಾದಾ ಬಂಗಾಳ ರೇಶ್ಮೆ ಶಾಲು ೬ ಮೊಳ ಉದ ೩ ಮೊಳ ಅಗಲು ೧ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಪಟಿಕದ ... ರ ವರ ೧ಕ್ಕೆ ರೂ. ... ರವರೆಗೆ ... ರೂಪಾಯಿ 1½ ರವರೆಗೆ ಜಗನ್ನಾಥ ... ೧ಕ್ಕೆ ರೂ. 2½ ರಿಂದ 15 ರ ವರೆಗೆ ಮತ್ತು ಬೆರೆ ಬೆ... ನಮ್ಮಲ್ಲಿಗೆ ... ಸಿಗುತ್ತವೆ.

ವಿಳಾಸ:-ಶಿರೋ: ಎಸ್ ನಾರಾಯಣಾಚಾರ್ಯ
ಕಂಪನಿ ಚೌಕಂಬಾ ಕಾಶಿ ಬನಾರಸ್

For Ladis and Gents' Insurance
in
The Genoral and Bharat Insurance Societies, Ltd.
and for
Wholesale Supply of :—
1) Automodiles
(2) Sporting Materirls
(3) High-Class Tea and Coffee
(4) Cigars and Cigarettes
(5) Surgical Instruments, and Drugs
(6) His Master's Voice Phones, and Records
(7) Cycles, Stoves and Gas Lights
and
(8) Up-to-date Books

Apply to:—

B. S. Tantry. B. A.
BAGALKOT.

ವರರು ಬೇಕಾಗಿರುವರು!

ವೈಶ್ಯ ಸಂಗಡದಲ್ಲಿ ವಿವಾಹಕ್ಕೆ ಸಿದ್ಧರಾಗಿರುವ, ವಿದ್ಯಾಂತರೂ, ಯೋಗ್ಯ ಜೀವನ ನಡೆಸುತ್ತಿದ್ದು ಕುಟುಂಬ ನಿರ್ವಾಹಕ್ಕೆ ಶಕ್ತಿಯುಳ್ಳ ತರುಣರು.

ಮೂರು ಬಾಲಿಕೆಯರ ವಯಸ್ಸು ೧೪-೧೬ II. III. VI Form ತನಕ ಓದಿದವರು. ಗುಣವತಿಯರೂ ರೂಪವತಿಯವರು-ಹೆಚ್ಚಿನ ವಿವರಕ್ಕೆ ಪತ್ರವ್ಯವಹಾರ ಮಾಡಿರಿ.

ಕೌಶಿಕ C/o- ಕನ್ನಡಿಗ.

ಶ್ರೀ ಗುಬ್ಬಿ ಚನ್ನಬಸವೇಶ್ವರ ನಾಟಕ ಕಂಪನಿ

೧೯೨೮ನೇ ಜನವರಿ ಒಂದನೇ ವಾರ ಹಾಸನದಲ್ಲಿ ನಡೆಯುವ "ದನಗಳ ಪ್ರದರ್ಶನ" ಕಾಲದಲ್ಲಿ, ಮೇಲ್ಕಂಡ ನಾಟಕ ಕಂಪನಿಯವರು ಮತ್ತು ಇದರ ಶಾಖೆಯಾದ ಬಾಲಕರ ಕಂಪನಿಯೂ ಸಹಾ, ಹಾಸನದ ಮುಸಾಫರ್ ಖಾನೆ ಪಕ್ಕದಲ್ಲಿ ವಿದ್ಯುಚ್ಛಕ್ತಿ ದೀಪಗಳಿಂದ ಶೃಂಗಾರವಾಗಿ ಅಲಂಕರಿಸಲ್ಪಟ್ಟ ಎರಡು ನಾಟಕ ಮಂದಿರಗಳಲ್ಲಿ, ಅದ್ಭುತ ಟ್ರಾನ್ಸ್‌ಫರ್. ಮತ್ತು ಹೊಸ ಸೀನರಿಗಳಿಂದಲೂ, ಹೊಸ ಉಡುಪುಗಳಿಂದಲೂ, ಅನೇಕ ಘನವಾಗಿರುವ ನಾಟಕಗಳನ್ನಾಡುವರು. ಇಂಥಾ ಸುಸಂಧಿ ಮತ್ತು ಅಪೂರ್ವ ಸಮಯವನ್ನು ಕಳೆದುಕೊಳ್ಳದೇ, ಸರ್ವರೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಸಹಕಾರ ಸಂಘ

ಈ ಸಹಕಾರ ಸಂಘಗಳಿಗೆ ಬೇಕಾಗುವ ನಮೂನೆಗಳನ್ನು ಅಚ್ಚುಹಾಕಿಸಿ ನಮ್ಮಲ್ಲಿ ಮಾರಲಿಕ್ಕೆ ಇಟ್ಟಿರುವೆವು. ಸಾವಕಾರರಿಂದ ಸಾಲ ಬೇಡುವ ಅರ್ಜಿ, ಸಾಲ ಬೇಡ ಅರ್ಜಿ ಮುಂದ್ದೆಯ ಇಡುವ ಅರ್ಜಿ ಮೊದಲಾದ ಎಲ್ಲ ನಮೂನೆಗಳೂ ಇವೆ.

ವ್ಯವಸ್ಥಾಪಕ:— ವಿದ್ಯಾರಣ್ಯ ಮುದ್ರಾ ಮಂದಿರ
ಬಾಗಲಕೋಟೆ.

ಬೈಂಡಿಂಗದ
ಹೊಸ ಉತ್ತಮ ವ್ಯವಸ್ಥೆ!

ನಾವು ಮಂಗಳೂರಿನಿಂದ ಸುರಿತಂತಹ ಒಬ್ಬ ಬಾಯಿಂಡರನನ್ನು ಕರೆಸಿದ್ದೇವೆ ಮುಂಬೈ, ಮದ್ರಾಸ, ಮಂಗಳೂರ, ಬೆಂಗಳೂರಗಳಲ್ಲಾಗುವ ಎಲ್ಲ ನಮೂನೆಯ ಫುಲ್‌ಲೆದರ, ಹಾಫ್‌ಲೆದರ ಫುಲ್‌ಕೆಲಿಕೋ, ಹಾಫ್‌ಕೆಲಿಕೋ, ಗಿಫ್ಟ್ ಕವರ ಮುಂತಾದ ಇನ್ನೂ ಅನೇಕ ನಮೂನೆಯ ಬೈಂಡಿಂಗ ಕೆಲಸವು ನಮ್ಮಲ್ಲಿ ಒಳ್ಳೇ ಅಚ್ಚುಕಟ್ಟಾಗಿ ಮಾಡಲ್ಪಡುತ್ತದೆ. ಲೆದರ ಬೈಂಡಿನ ಮೇಲೆ ಎಲ್ಲ ಬಗೆಯ ಗೋಲ್ಡ್ ಗಿಲ್ಟ ಕೆಲಸವೂ ಮಾಡಲ್ಪಡುತ್ತದೆ.

ಪ್ರಯಾಣಿಕರಿಗೆ ಬೇಕಾಗುವ ಎಲ್ಲ ನಮೂನೆಯ ಟ್ರಾವೆಲಿಂಗ ಬ್ಯಾಗುಗಳೂ (ಕೈಪೆಟಿಗೆ) ಕಾಗದ ಪತ್ರಗಳನ್ನು ಇಡುವ ಮತ್ತು ದುಡ್ಡು ಹಾಕುವಂಥ ಪಾಕೀಟುಗಳೂ, ಲೆದರಿನಿಂದಲೂ, ಬಟ್ಟೆಯಿಂದಲೂ, ಕೃಷ್ಣಾಂಜನದಿಂದಲೂ ನಮೂನೆವಾರು ತಯಾರ ಮಾಡಲ್ಪಡುವವು.

ನಾದುರಸ್ತಿಯಾದ ಹಾರ್ಮೋನಿಯಮ್ ಪೆಟ್ಟಿಗೆಯನ್ನು ದುರಸ್ತಿಮಾಡಿ ಒಳಗಿನ ಮತ್ತು ಹೊರಗಿನ ಗಾಳಿಯ ತಿದಿಯನ್ನು ಹೊಸದಾಗಿ ಕಂಪನಿಯ ನಮೂನೆಯಲ್ಲಿ ಹೆಚ್ಚು ಸಮಯ ಬಾಳಿ ಬರುವಂತೆ ತಯಾರುಮಾಡಿ ಚಲೋ ರೀತಿಯಿಂದ ದುರಸ್ತಿ ಮಾಡಲ್ಪಡುವದು.

ಇನ್ನು, ಕೋರ್ಟು ಮತ್ತು ಕಚೇರಿಗಳಿಗೆ ಬೇಕಾಗುವ ಎಲ್ಲ ನಮೂನೆಯ ಪೋರ್ಟಫೋಲಿಯೋಗಳನ್ನೂ, ಫೈಲುಗಳನ್ನೂ ತಯಾರುಮಾಡಿ ಕೊಡಲ್ಪಡುವದು.

ಇನ್ನು ಮೇಲೆ ಇತ್ತೀಚೆಯ ಜನರು ಮುಂಬೈ, ಬೆಂಗಳೂರ, ಅಥವಾ ಮಂಗಳೂರಿಗೆ ಹೋಗುವ ಕಾರಣವಿಲ್ಲ! ಒಮ್ಮೆ ಅನುಭವ ತೆಗೆದುಕೊಂಡು ನೋಡಬೇಕು.

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ.



.ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

೧೯೨೭ನೇ ಜನವರಿ ೧೫ರಿಂದ ಪ್ರಾರಂಭ.



ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್ ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ

೧. ನೀವು ನಮಗೆ ರೂ ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ಪಡೆದುಕೊಂಡ ಕೂಪನ್‌ನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬುದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪುವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ್ ಗೋಲ್ಡ್" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ಏನೂ ಮಾಡಲಾಗದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು. ಅಥವಾ ವಿ. ಪಿ ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಳಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಆಸೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೬-೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್. ರಿಪೇರರ್ ಮತ್ತು ಡೀಲರ್ ೭೫೫, ಚಿಕ್ಕಪೇಟೆ, ಬೆಂಗಳೂರ ಸಿಟಿ.

ಅಚ್ಚಾಗಿವೆ! ತರಿಸಿರಿ!

ವಾಸುದೇವನ

ಕೌಸ್ತುಭಗಳು.

೧. ಇಂದಿರಾ. ೨-೮-೦

(ಸಚಿತ್ರ ಸಾಮಾಜಿಕ ಕಾದಂಬರಿ.)

೨. ಯದು ಮಹಾರಾಜ. ೧-೦-೦

(ಎಂಬ ವಿನೂತನ ಐತಿಹಾಸಿಕ ಕಾದಂಬರಿ.)

೩. ನೀಳ್ಗತೆಗಳು ಭಾಗ ೧ ೧-೪-೦

"ವಸಂತಯಾಮಿನಿ ಸ್ವಪ್ನಚಮತ್ಕಾರ" ನಾಟಕದ ಪ್ರತಿಗಳೆಲ್ಲವೂ ತೀರಿಹೋಗಿವೆ. ಉಳಿದವುಗಳು ಅಚ್ಚಿನಲ್ಲಿವೆ. ತ್ವರೆಮಾಡಿರಿ! ಬೇಕಾದವುಗಳನ್ನು ಬೇಗನೇ ತರಿಸಿಕೊಳ್ಳಿರಿ.

ಪುಸ್ತಕ ವ್ಯಾಪಾರಿಗಳಿಗೆ ಯೋಗ್ಯ ಕಮಿಶನ್. ಅಂಚೆವೆಚ್ಚ ಬೇರೆ.

ಸ್ವಾಮಿ, ರಾ, ಕೆರೂರ.
ಬಾಗಲಕೋಟೆ (ಜಿ|| ವಿಜಾಪೂರ)

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಿಜಿಸ್ಟರ್ಡ್ ಪೊಕೆಟ್ ವ್ರಾಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು ಮುಂದಿನ್ನೂ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವ್ರಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ ಪಿ, ಬಿ. ೭೩೩ ಮದ್ರಾಸ

Three Successive Valuation Results Unsurpassed

The General Assurance Society Ltd.

AJMER.

Assets Exceed **BONUS** Claims Paid Over

Rs 20,00,000 Rs. 10,00,000

Equal to the Highest ever Declared by any Indian Life Office

31st March 1924 Whole Life (Deferred)
Rs. 12% per year.

31st December 1925 Whole Life (Immediate)
Rs. 20% per year.

31st December 1923 Whole Life (Immediate)
Rs 22/8% per year.

OFFICES AT

Agra,	Benares,	Lucknow,
Ajmer,	Colombo,	Lahore,
Allahabad,	Calcutta,	Madras,
Beawar,	Gujranwala,	Madura,
Bangalore,	Hubli	Patna,
Baroda	Hyderabad Sind,	Rangoon,
Bellary,	Indore,	Rawalpindi.
Bombay,	Jullunder	

Place your Assurance with this sound and progressive Office To-day You will be benefitted by the low premiums and the exceptionally high bonus additions.

WANTED AGENTS ON MOST LIBERAL TERMS

Please Apply to:—P. D. BHARGOVA, F. S. S (Lon) Manager Ajmer.
OR
L. V. RAMDURG Chief Agent, Hubli

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ
ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೧೧-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ ಸಿ. ನಂ ೨೭೪೭ ಸಯ್ಯದ ಅಲಿ ಅಸಗರ ಬಿಲ್‌ಗ್ರಾಮಿ ಸುಪರಿಂಟೆಂಡಂಟ್ ಸೆಕ್ರೆಟೇರಿಯಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ ಸಿ ನಂ ೧೯೬೩ ನಾರಾಯಣ ವಿಠ್ಠಲ ಲೋಣಕರ ಕೇರ್ ಆಫ್ ಡಿ ಈ. ಪುರಾಣಿಕ ೧೧೭, ಸಿಹಾಲಪುರ ಇಂದೂರ ೧೦೦೦

(೩) ಎಲ್ ಬಿ. ಸಿ. ನಂ. ೩೪೯೧ ರಾಮಚಂದ್ರ ಅನಂತ ಶಿರೋಳೆ. ಡಿವಿಜನಲ್ ಫಾರೆಸ್ಟ ಆಫೀಸರ ಧತ್ಯೂರಾ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೬ ಕೇ. ಜೆ ಫರ್ನಾಂಡೋ ವ್ಯಾಪಾರಸ್ಥ ಬ್ರಕ್‌ಸಾಯಿಡ ಸಿಲೋನ, ಕೋಲಂಬೋ. ರೂ. ೧೦೦೦

(೫) ಬಾಂಡ ನಂಬರು ೧೯೭೩೪ ಎಸ್. ಜಿ ಚಪರಿ ಅಸಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ ಜಿಲ್ಹಾ ವಿಜಾಪುರ. ರೂ ೧೦೦೦

ಬಿ. ಸ್. ಆರಾಧ್ಯ
ಚೀಫ ಏಜಂಟ ಹುಬಳ್ಳಿ (ಮುಂಬಯಿ ಇಲಾಖಾ.)

ಅಪಾಯ ಸಂಭವಿಸಿದಾಗ ಏನು ಮಾಡಬೇಕು?



ಸಾಧಾರಣವಾಗಿ ಕುಗ್ರಾಮಗಳಲ್ಲಿ ಜನರಿಗೆ ಗಾಯವು, ಮೂರ್ಛೆ ಮೊದಲಾದ ಅಪಾಯಗಳು ಸಂಭವಿಸಿದಾಗ, ಜಲಗಂಡ, ಅಗ್ನಿಗಂಡ, ವಿಷಭಕ್ಷಣ ರಕ್ತಸ್ರಾವ, ಜ್ವರ, ಹುಚ್ಚುನಾಯಿ, ಚೇಳು ಮುಂತಾದ ವಿಷಜಂತುಗಳು ಕಚ್ಚಿದಾಗ, ಅಕಸ್ಮಾತ್ತಾಗಿ ದೇಹದಲ್ಲಿ ಅಸ್ವಸ್ಥತೆಯು ಸಂಭವಿಸಿದಾಗಲೂ ಸಮರ್ಪಕವಾದ ವೈದ್ಯರ ಸಹಾಯವು ದೊರೆಯುವುದು ಕಷ್ಟವಾಗಿದೆ ಹಾಗೆ ಒದಗದೆ ಹೋದಾಗ, ರೋಗಿಯನ್ನು ವೈದ್ಯರಿರುವಲ್ಲಿಗೆ ಕೊಂಡುಹೋಗುವವರೆಗೆ ಯಾ ವೈದ್ಯರನ್ನು ಕರೆತರುವವರೆಗೆ ಯಾವ ತರದ ಚಿಕಿತ್ಸೆ ಮಾಡಬೇಕೆಂದು ತಿಳಿಯದೆ, ಅನೇಕ ಜನರು ಅಪಾಯಗಳಿಗೆ ಗುರಿಯಾಗುವುದು ಬಹಳ ಸಾಧಾರಣ, ಕೆಲವು ಸಾರಿ ಮರಣವನ್ನು ಕೂಡ ಹೊಂದುವುದುಂಟು. ಇಂಥಾ ಕಷ್ಟಗಳಿಗೆ ಒಳಪಡದ ಹಾಗೆ ಮದ್ರಾಸು ಪಟ್ಟಣದಲ್ಲಿರುವ ರಾವ್ ಸಾಹೇಬ ಡಾಕ್ಟರ್, ಯು. ರಾಮರಾವ್ ಅವರು ಪ್ರಥಮ ಚಿಕಿತ್ಸೆಯೆಂಬ ಪುಸ್ತಕವನ್ನು ರಚಿಸಿದ್ದಾರೆ. ಈ ಪುಸ್ತಕದಲ್ಲಿ ಮೇಲೆ ಹೇಳಿದ ಅಕಸ್ಮಾತ್ತಾಗಿ ಸಂಭವಿಸುವ ಅಸ್ವಸ್ಥತೆ ಮಾಡಬೇಕಾದ ಚಿಕಿತ್ಸೆಯನ್ನು ಬಹಳ ಸುಲಭವಾದ ಕನ್ನಡದಲ್ಲಿ ೧೨೫ ಚಿತ್ರಪಟಗಳೊಡನೆ ಬರೆದಿರುವರು ಈ ಪುಸ್ತಕವನ್ನು ಓದಿ ತಿಳಕೊಂಡರೆ ಅನೇಕ ತರದ ಅಪಮೃತ್ಯುಗಳನ್ನು ಪರಿಹರಿಸಬಹುದಲ್ಲದೆ ವ್ಯರ್ಥವಾಗಿ ಮರಣಹೊಂದುವ ಜನರ ಜೀವವನ್ನು ಕೂಡ ಉಳಿಸಿ ಪುಣ್ಯಸಂಪಾದಿಸಬಹುದು.

ಪುಸ್ತಕದ ಬೆಲೆ ಆಣೆ ೧೨ ಟಪಾಲ್ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳ—ಶ್ರೀಕೃಷ್ಣನ್ ಬ್ರದರ್ಸ್ ೩೨೩ ತಂಬುಚೆಟ್ಟಿ ಬೀದಿ, ಮದ್ರಾಸು.

ಕಿರ್ಲೋಸ್ಕರ ನೇಗಿಲು ನಂ ೯



ಉಪಯೋಗ:— ನಮ್ಮ ಯಾವತ್ತೂ ನೇಗಿಲುಗಳಲ್ಲಿ ಈ ನೇಗಿಲು ಮಿಗಿಲಾದದ್ದು. ಎರಿಯ ಭೂಮಿ, ಪಡ ಭೂಮಿಗಳನ್ನು ಸಾಗುವಳಿ ಮಾಡಲಿಕ್ಕೂ ಕಾಲುವೆಗಳಿಂದ ನೀರು ಹಾಯುವ ಭೂಮಿಗೂ ಇದರ ಉಪಯೋಗ ಬಹಳ. ಇದು ನಮ್ಮ ನೇಗಿಲು ನಂ ೧೦೦ ನೆಯದರಂತೆ ಮಿಕ್ಕ ಉಪಯೋಗಕ್ಕೂ ಬರುವದು. **ರಚನೆ:**— ಇದರ ಕುಳಗಳು ಹಾಗೂ ಸವೆಯುವ ಭಾಗಗಳು ಸವೆಯದಂತೆ "ಚಿಲಿಂಗ ಪ್ರೊಸೆಸ್ಸಿನಿಂದ" ಗಟ್ಟಿಮುಟ್ಟ ಮಾಡಲ್ಪಟ್ಟಿರುತ್ತವೆ. ಮೇಳಿಗಳು ಹವಣಿ ಇರುತ್ತವೆ. ಇದಕ್ಕೆ ತಿರುಗುವ ಕುಳವಿರುತ್ತದೆ. **ಎಳೆಯುವ ಶಕ್ತಿ:**— ೬ ರಿಂದ ೮ ಎತ್ತುಗಳು ಬೇಕು. **ಸಾಲಿನ ಆಳಗಲ:**— ೮ ರಿಂದ ೧೦ ಇಂಚು ಆಳ; ೧೨ ರಿಂದ ೧೪ ಇಂಚು ಅಗಲ. **ತೂಕ:**— ಸುಮಾರು ೨೦೦ ಪೌಂಡು ಸವಿಸ್ತರ ಸಂಗತಿಯ ಬಗ್ಗೆ ಇದರ ಹಸ್ತಪತ್ರಿಕೆಯನ್ನು ನೋಡಿರಿ. ಬೆಲೆ ೩೩ ರೂಪಾಯಿ.

ಕಿರ್ಲೋಸ್ಕರ ಬಂಧು. ಲಿಮಿಟೆಡ್ ಕಿರ್ಲೋಸ್ಕರವಾಡಿ. ಜಿ. ಸಾತಾರಾ.

Little's Oriental Balm.

ನೋವು ಬಾಧೆಗಳ ನಿವಾರಣಾರ್ಥ!

ನಿಮ್ಮ ಬಾಧೆಗಳ ನಿವಾರಣಾರ್ಥವಾಗಿ ಅತ್ಯುತ್ತಮವಾದ ಹಾಗೂ ಒಳ್ಳೇ ಶುದ್ಧವಾದ ರಾಮಬಾಣ ಉಪಾಯವು ಬೇಕಾಗಿದ್ದರೆ, ಈ ಹೆಸರನ್ನು ಲಕ್ಷ್ಯದಲ್ಲಿ ಇಡಿರಿ.

ಕೆಳಗಿನ ವ್ಯಾಧಿಗಳ ನಿವಾರಣಕ್ಕಾಗಿ ಹಿಂದುಸ್ಥಾನದ ದಿವ್ಯೌಷಧಿ.

ತಲೆಶೂಲಿ, ಸಂಧಿವಾತ, ಎಲ್ಲತರದ ಕಸ. ನರ ತೊಡಕು, ಪರಿವಾತ ಟೊಂಕನೋವು, ಅರ್ಧಾಂಗವಾಯು ಉಳುಕು (ವಳದದ್ದು)

೪೨ ವರ್ಷಗಳಿಂದ ಈ ಔಷಧವು ಜಗತ್ಪ್ರಸಿದ್ಧವಾಗಿದೆ.

ಸ್ವಲ್ಪದರಿಂದಲೇ ಗುಣ ಬರುವದು--ಒಂದೇ ಕ್ಷಣದಿಂದ ಅದ್ಭುತ ಗುಣವು!

ಉರಿಯುವದಿಲ್ಲ ಅಥವಾ ಗುಳ್ಳೆ ಏಳುವದಿಲ್ಲ.

ತಾವು ಸುಖವಾಗಿ ಉಪಶಮನವಾಗುವದು.

ವ.ಸ್ತ್ರ, ನೆಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲ.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ.

Buy a bottle

TO-DAY!

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ
ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ್ಜಿ. ನಂ ಬಿ. ೧೯೪೭ | ವಾ. ಚಂದಾ ೧—೧೩—೦ ಮಾತ್ರ

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ಮಾರ್ಗಶಿರ ಬಹುಳ ೧೦ ಶಕೆ ೧೮೪೯ ತಾ|| ೧೮-೧೨-೧೯೨೭. Date 18 – 12 – 19.7 | ಸಂಚಿಕೆ ೩೫

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯ್ವಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ, ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಚ್ಚುವದು ಮತ್ತು ಜೋಡಿಸುವದು ಅವುಗಳೊಳಗಿನ ಕೆಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಈ ಎಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳ್ಳವರಲ್ಲ. ಸುರಕ್ಷಿತರೂ ಗುಣಶಾಲಿ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಮುಖವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು ಸರಕಾರದ ಪರವಾನಗಿಯನ್ನ ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವುಳ್ಳದ ಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ!

ವಿಳಾಸ:— ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ

WANTED.

Wanted Candidates for Telegraph and Station Master's Classes. Full particulars and Railway Fare Certificate on 2 annas stamp

Apply to:-

Imperial Telegraph College, Delhi.

ಮಯೂರ ಶಿಖಾ

ದುರ್ಲಭವಾದ ವನಸ್ಪತಿಯು. ೨೦ ತೋಳೆಗೆ ೧ ರೂ. ಸ್ವಪ್ನದ ರೋಗಕ್ಕೂ, ವ್ಯಾಘ್ರರಸ್ಥರೋಗಕ್ಕೂ, ಅನೇಕ ಅಪರೂಪವಾದ ವನಸ್ಪತಿಗಳು ದೊರಕುವವು

ವೈದ್ಯ:— ವಾದಿರಾಜ ಜಹಗೀರದಾರ
ಮು. ಇಳಕಲ್ಲ (ವಿಜಾಪೂರ)



ಉಚಿತ! **ಉಚಿತ!!!** **ಕೇವಲ ಪುಗಸಟ್ಟೆ!!**

೧೯೨೭ನೇ ಜನವರಿ ೧೫ರಿಂದ ಪ್ರಾರಂಭ.



ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್ ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ

೧. ನೀವು ನಮಗೆ ರೂ. ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬುದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪತಕ್ಕ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ ಗೋಲ್ಡ" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ವಿಕರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನ ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು. ಅಥವಾ ವಿ. ಪಿ ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕೆಡುಕೊಳ್ಳುವ ಭಯವಿಲ್ಲ ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಅಸೂಯೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನ ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೬-೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್. ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಚ್ಚಾಗಿವೆ! **ತರಿಸಿರಿ!!**

ವಾಸುದೇವನ

ಕೌಸ್ತುಭಗಳು.

೧. ಇಂದಿರಾ. ೨—೮—೦

(ಸಚಿತ್ರ ಸಾಮಾಜಿಕ ಕಾದಂಬರಿ.)

೨. ಯದು ಮಹಾರಾಜ. ೧—೦—೦

(ಎಂಬ ವಿನೋದಕರ ಐತಿಹಾಸಿಕ ಕಾದಂಬರಿ.)

೩. ನೀಳ್ಗತೆಗಳು ಭಾಗ ೧ ೧—೪—೦

" ವಸಂತಯಾಮಿನಿ ಸ್ವಪ್ನಚಮತ್ಕಾರ " ನಾಟಕದ ಪ್ರತಿಗಳೆಲ್ಲವೂ ತೀರಿಹೋಗಿವೆ. ಉಳಿದವುಗಳು ಅಚ್ಚಿನಲ್ಲಿವೆ. ತ್ವರೆಮಾಡಿ! ದೊರಕಾದವುಗಳನ್ನು ಬೇಗನೇ ತರಿಸಿಕೊಳ್ಳಿರಿ.

ಪುಸ್ತಕ ವ್ಯಾಪಾರಿಗಳಿಗೆ ಯೋಗ್ಯ ಕಮಿಶನ್. ಅಂಚೆವೆಚ್ಚ ಬೇರೆ.

ಸ್ವಾಮಿ, ರಾ, ಕೆರೂರ.
ಬಾಗಲಕೋಟೆ (ಜಿ॥ ವಿಜಾಪೂರ)

ಅತ್ಯಲ್ಪವಿವೆ! **ಉಚಿತ!**

ಕೇವಲ ಉಚಿತ **ಕೇವಲ ಉಚಿತ**



" ತಾರಾ " ಲೀವರ್ ರಜಿಸ್ಟರ್ಡ್ ಪೋಕೆಟ್ ವೊಚ್ ಗಿಲೆಟ್ ರೋಲ್ಡ್ ಗೋಲ್ಡಿನದು. ಮುಚ್ಚಳವಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ತಯಾರಕರು ಅಚ್ಚುಹಾಕಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ " ಸಿ " ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗೂ " ತಾರಾ " ಲೀವರ್ ರಜಿಸ್ಟರ್ಡ್ ಗಿಲೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವೊಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ. ಪಿ, ಬಿ. ೭೩೩ ಮದ್ರಾಸ

ಕನ್ನಡಿಗ.

ಬಾಗಲಕೋಟೆ:- ಕನ್ನಡಿಗ ಮಾರ್ಗಶಿರ ಬಹುಳ ೧೦ ಶಕೆ ೧೮೪೯

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೋಹವಮಾಡಿ ಕಟ್ಟುವೆನಾನು ।
ನಿನ್ನ ಬೆಸನವಮಾಡಿದಂಥ ಮಕ್ಕಳ ದೊಮ್ಮ।
ಚಿನ್ನದಾದರು ಚಿನ್ನವು ಮೋಹಬಸ್ತಿಯು ನೊಂದು ಚಿನ್ಮಯಾಕಾಶದ
ನನ್ನ ದೇಹವ ನಿನ್ನ ವೀರಶಾಸನಕಾಗಿ ।
ಕನ್ನವನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧನಿದೆ।
ಕನ್ನಡ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೆ
—ಅಂಬಿಕಾತನಯ ದತ್ತ

ಕರ್ನಾಟಕದ ಶಿಲಾಲೇಖಗಳ ದುರವಸ್ಥೆಯನ್ನು ಕುರಿತು 'ಕನ್ನಡಿಗ'ನಲ್ಲಿ ಆಗಿಂದಾಗ್ಗೆ ಲೇಖಗಳೂ ಮತ್ತು ಸಂಪಾದಕೀಯ ಸೂಚನೆಗಳೂ ಪ್ರಕಟವಾಗಿರುವ ಸಂಗತಿಯನ್ನು ವಾಚಕರೆಲ್ಲರೂ ಬಲ್ಲರು. ಕನ್ನಡ ಶಿಲಾಶಾಸನಗಳನ್ನು ಸಂಗ್ರಹಿಸಿ ಅವುಗಳನ್ನು ವಿಶೇಷ ಜಾಗರೂಕತೆಯಿಂದ ತ್ವರೆಯಾಗಿ ಅಚ್ಚುಹಾಕ ಬೇಕಾದದ್ದು ಅವಶ್ಯಕವೆಂಬಾಂಶವನ್ನು ಎಲ್ಲರೂ ಒಪ್ಪುವರು. ಈ ಕಾರ್ಯವನ್ನು ಯೋಗ್ಯರೀತಿಯಿಂದ ಸಾಧಿಸಬೇಕಾದರೆ ಕರ್ನಾಟಕದಲ್ಲಿ ಮದ್ರಾಸಿನಲ್ಲಿರುವಂತೆ ಒಂದು ಪ್ರತ್ಯೇಕ ಕಚೇರಿಯನ್ನು ಸರಕಾರದವರು ಏರ್ಪಡಿಸಿಯೇ ತೀರಬೇಕು. ಈ ವಿಷಯದಲ್ಲಿ 'ಕನ್ನಡಿಗ'ನ ಪ್ರಯತ್ನದಿಂದ ಬಲ್ಲಿದ ಕಾಯಿದೇಮಂಡಳಗಳಲ್ಲಿ ಕಳೆದ ಆಗಸ್ಟ ತಿಂಗಳಲ್ಲಿ ಕೆಲವು ಪ್ರಶ್ನೆಗಳು ಕೇಳಲ್ಪಟ್ಟವು. ಆದರೆ ಸರಕಾರದವರು ಕರ್ನಾಟಕಕ್ಕೆ ಶಿಲಾಲೇಖಗಳ ಕಚೇರಿಯೊಂದನ್ನು ಕೊಡುವ ಬಗ್ಗೆ ನಾವು ಯೋಚನೆ ಮಾಡುವೆವೆಂದು ಉತ್ತರವನ್ನಿತ್ತರು. ಎಂದಿಗೆ ಕಚೇರಿಯು ಆಗುವುದೋ ದೇವರೇ ಬಲ್ಲ. ಅದುವರೆಗೂ ಕರ್ನಾಟಕದಲ್ಲಿಯ ಕೆಲಸಕ್ಕೆ ಈಗ ನೀಲಗಿರಿಯ ಕಚೇರಿಯಲ್ಲಿರುವ ಕನ್ನಡ ಅಧಿಕಾರಿಗಳ ಜೊತೆಗೆ ಇನ್ನಿಬ್ಬರನ್ನು ಹೊಸದಾಗಿ ನೇಮಿಸಿದರೆ ಸದ್ಯಕ್ಕೆ (ಅಂದರೆ ಕರ್ನಾಟಕದಲ್ಲಿ ಬೇರೆ ಕಚೇರಿಯಾಗುವವರೆಗೆ) ಸಂಶೋಧನದ ಕೆಲಸವನ್ನು ಈಗಿಗಿಂತಲೂ ಸ್ವಲ್ಪ ವೇಗವಾಗಿ ಮಾಡಬಹುದು. ಈ ಸಂದರ್ಭದಲ್ಲಿ ಲಕ್ಷ್ಯದಲ್ಲಿಡಬೇಕಾದ ಅಂಶವೇನೆಂದರೆ ಕರ್ನಾಟಕದಲ್ಲಿಯ ಕೆಲಸವನ್ನು ಮಾಡಬೇಕಾದವರೆ ಅದಕ್ಕೆ ಕನ್ನಡವನ್ನು ಚೆನ್ನಾಗಿ ಬಲ್ಲವರನ್ನೇ ನೇಮಿಸಬೇಕು. ಬಹಳ ಕ್ಲಿಷ್ಟವಾಗಿಯೂ ಮತ್ತು ಪದರೂಪದಲ್ಲಿಯೂ ಇರುವ ಕನ್ನಡ ಶಾಸನಗಳನ್ನು ಓದುವುದು ಮತ್ತು ಪ್ರಕಟಿಸುವುದು ಕನ್ನಡ ಭಾಷೆಯ ಒಳ್ಳೇಯ ಜ್ಞಾನವುಳ್ಳ ಜನರಿಂದಲೇ ಸಾಧ್ಯ. ಈಗ ನೀಲಗಿರಿಯ ಕಚೇರಿಯಲ್ಲಿ ಪ್ರಸಿದ್ಧಿಸುತ್ತಿರುವ "ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ"ದ ಸಂಪಾದಕರು ಕನ್ನಡ ಮತ್ತು ತೆಲುಗು ಭಾಷೆಗಳ ಪರಿಚಯವಿಲ್ಲದವರಾದರೂ ಅವರಿಗೇ ಈ ಎರಡೂ ಭಾಷೆಗಳ ಕೆಲಸವನ್ನು ಒಪ್ಪಿಸಿರುವುದು ಬಹಳ ಶೋಚನೀಯವಾಗಿದೆ. ಕನ್ನಡ ಬಲ್ಲವರಿಗೆ ಕನ್ನಡ ಕೆಲಸವನ್ನೂ ತೆಲುಗಿನವರಿಗೆ ತೆಲುಗಿನ ಕೆಲಸವನ್ನೂ ಕೊಡುವುದರಿಂದ ಸಂಶೋಧನೆಯ ಕೆಲಸವು ಶಾಸ್ತ್ರೀಯವಾಗಿ ನಡೆಯುವುದೆಂಬುದರಲ್ಲಿ ಲೇಶವೂ ಸಂಶಯವಿಲ್ಲ. ಆದ್ದರಿಂದ ಆಯಾ ಭಾಷೆಯಲ್ಲಿ ನುರಿತವರಿಗೇ ಆಯಾ ಕೆಲಸವನ್ನು ಕೊಡಬೇಕಲ್ಲದೆ ಕನ್ನಡ ಕೆಲಸವನ್ನು ಸವನ್ನು ತೆಲುಗು ಮಾತ್ರ ಬಲ್ಲವನಿಗೂ, ತೆಲುಗು ಕೆಲಸವನ್ನು ತಮಿಳು ಮಾತ್ರ ಬಲ್ಲವನಿಗೂ ಕೊಟ್ಟು ಈಗಿನಂತೆ ಅವ್ಯವಸ್ಥೆಯನ್ನು ಮಾಡುವುದು ಲಿಪಿಕಾರ್ಯಕ್ಕೆ ಬಹಳೇ ಹಾನಿಕರವು! ಅದರಲ್ಲೂ ಕನ್ನಡ ಲಿಪಿಕಾರ್ಯಕ್ಕಂತೂ ಸರ್ವಥಾ ಸರಿಯಾದುದಲ್ಲ; ಏಕೆಂದರೆ ಮೇಲೆಯೇ ಹೇಳಿದಂತೆ ಕನ್ನಡಲಿಪಿಗಳು ಇತರ ಭಾಷೆಯ ಲಿಪಿಗಳಂತೆ ಸಾಧಾರಣವಾದ ಗದ್ಯರೂಪದಲ್ಲಿರದೆ ಕಠಿಣವಾದ ಪದ್ಯಗಳನ್ನು ಹೇರಳವಾಗಿ ಒಳಕೊಂಡಿರುತ್ತವೆ. ಆದ್ದರಿಂದ ಭಾಷೆಯ ಅಭಿಜ್ಞತ್ವದ ಮೇಲೆಯೇ ಲಿಪಿಕಾರ್ಯವನ್ನು ಸರಕಾರದವರು ಅವರ ಅಧಿಕಾರಿಗಳಿಗೆ ಹಂಚುವರೆಂದು ನಂಬಿದ್ದೇವೆ.

ಕನ್ನಡ ಶಿಲಾಲೇಖಗಳ ಬಗ್ಗೆಯೂ, ಐತಿಹಾಸಿಕ ಸಂಶೋಧನದ ಬಗ್ಗೆಯೂ ಕಾಲದಲ್ಲಿ ಪ್ರಕಟವಾದ ಲೇಖಗಳನ್ನು ವಾಚಕರು ಓದಿಕೊಂಡಿರಲಿಕ್ಕೆ ಸಾಕು. ಅವರಿಂದ ತಮ್ಮ ತಮ್ಮ ಗ್ರಾಮಗಳಲ್ಲಿಯೇ ಕುಳಿತು, ಕರ್ನಾಟಕಮಾತೆಯ ಸೇವೆಯನ್ನು ಮಾಡಲಿಕ್ಕೆ ಹೇಗೆ ಸಾಧ್ಯವಿದೆಂಬುದು ತಿಳಿದುಕೊಳ್ಳುವದು. ರಾಜಕಾರಣಕ್ಕೆ ಸಂಬಂಧವಿಲ್ಲದ ಸಾರ್ವಜನಿಕ ಕೆಲಸಮಾಡುವ ಉತ್ಸಾಹವಿದ್ದವರು ನಮ್ಮಲ್ಲಿ ಅನೇಕರಿದ್ದರೂ, ಅವರಿಗೆ ಏನು ಮಾಡಬೇಕೆಂಬುದು ತೋಚದು! ಹೊಟ್ಟೆ ಬಟ್ಟೆಗೆ ಸಾಕಷ್ಟಿದ್ದ ಕೆಲವರು ತಾವು ನಿರುದ್ಯೋಗಿಗಳಾಗಿರಬಾರದೆಂದು ವಿಚಾರಿಸಿದ್ದರೆ ಯಾವ ಉದ್ಯೋಗವನ್ನು ತೆಗೆದುಕೊಳ್ಳಬೇಕೆಂಬ ಕಲ್ಪನೆ ಅವರಿಗೆ ಹೊಳೆಯದು! ಇಂಥವರು ಲೋಕಲ್ ಬೋರ್ಡ, ಮುನಸಿಪಾಲ್ಟಿ, ಆನರರಿ ಮ್ಯಾಜಿಸ್ಟ್ರೇಟ ಮೊದಲಾದವುಗಳ ಹವ್ಯಾಸಕ್ಕೆ ಬಿದ್ದು, ಸರ್ವಸ್ವವನ್ನೂ ನಾಶಮಾಡಿಕೊಳ್ಳುವರು! ಹೀಗೆ ಹಾಳಾಗುವದಕ್ಕಿಂತ ಕಳೆದವಾರದ ಸಂಚಿಕೆಯಲ್ಲಿ ಸೂಚಿತವಾದಂತೆ, ಶಿಲಾಲೇಖ ತಾಮ್ರಪಟ, ನಾಣ್ಯ ಮೊದಲಾದವುಗಳನ್ನು ದೊರಕಿಸಿ, ರಾಷ್ಟ್ರಸೇವೆ ಮಾಡಲುಪಕ್ರಮಿಸಿದರೆ, ತಮ್ಮ ಅಭಿಲಾಷೆಯನ್ನು ಪೂರ್ತಿ ಮಾಡಿಕೊಳ್ಳುವದಲ್ಲದೇ, ಕರ್ನಾಟಕದ ತಪ್ಪಿಹೋದ ಭರತಖಂಡದ ಇತಿಹಾಸದ ಮಣಿಗಳನ್ನು ಪೋಣಿಸಿದ ಪುಣ್ಯಕ್ಕೆ ಪಾತ್ರರಾಗುವರು. ನೀರಡಿಸಿದವನಿಗೆ ನೀರನ್ನು ನೀಡುವದು ಹೆಚ್ಚಿನ ಪುಣ್ಯ! ಕರ್ನಾಟಕಕ್ಕೆ ಇತಿಹಾಸ ಸಂಶೋಧನವು ಸದ್ಯದಲ್ಲಿ ಅತ್ಯವಶ್ಯವಾಗಿ ಬೇಕಾಗಿದೆ. ಆದ್ದರಿಂದ ಹಳ್ಳಿಯ ಶಿಕ್ಷಕರೂ, ಸಾಧುವಾಸಿಗಳೂ, ಸಾರ್ವಜನಿಕ ಕಾರ್ಯಗಳ ಅಭಿರುಚಿಯುಳ್ಳವರೂ, ಇತ್ತಕಡೆಗೆ ಗಮನಿಸುವದು ಬಹು ಭೂಷಣವಾಗುವುದು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕದ ಚಳುವಳಿಗಳು ತೀರ ಕಡಮೆ. ದಕ್ಷಿಣ ಕನ್ನಡಕ್ಕೂ ಉತ್ತರ ಕನ್ನಡಕ್ಕೂ ಹೋಲಿಸಿದರೆ ಉತ್ತರ ಕನ್ನಡವು ಹಿಂದೆ ಬೀಳುವದು ನಿಶ್ಚಯ. ಆದ್ದರಿಂದ ಕರ್ನಾಟಕದ ಏಳ್ಗೆಯನ್ನು ಬಯಸುವ ಮುಖಂಡರೆಲ್ಲ ಈ ಜಿಲ್ಲೆಯಲ್ಲಿ ಪ್ರಚಾರಕ್ಕಾಗಿ ಮೇಲಿಂದಮೇಲೆ ಸಂಚರಿಸುವದು ಉತ್ತಮ. ಈ ದೃಷ್ಟಿಯಿಂದ ನೋಡಿದರೆ ಕರ್ನಾಟಕ ಇತಿಹಾಸ ಮಂಡಲದ ಶ್ರೀ ರಾಜಪುರೋಹಿತರೂ, ಭಾಗವತ ಶಿಖಾಮಣಿ ಬೇಲೂರ ಕೇಶವದಾಸರೂ ಈಗ್ಗೆ ಕಾರವಾರ ಜಿಲ್ಲೆಯಲ್ಲಿಸಂಚರಿಸುತ್ತಿರುವದು ಯೋಗ್ಯವಾಗಿದೆ. ಇವರ ಸಂಚಾರದಿಂದ ಅಲ್ಲಲ್ಲಿ ಕರ್ನಾಟಕ ಇತಿಹಾಸದ ಬಗ್ಗೆ ಜಾಗ್ರತೆಯೂ, ಕನ್ನಡನುಡಿಯ ಬಗ್ಗೆ ಅಭಿಮಾನವೂ

ದೃಗ್ಗೋಚರವಾಗುತ್ತಲಿವೆಯೆಂದು "ಕರ್ನಾಟಕಧುರೀಣ" ಹಾಗೂ "ಕಾನಡಾ (ಈ ಬದಲು "ಕನ್ನಡ"ವೆಂದರೆ ಸರಿಯಾಗದೆ?) ವೃತ್ತ"ಗಳಿಂದ ತಿಳಿದು ಬರುತ್ತದೆ. ಕರ್ನಾಟಕದ ಉತ್ಕರ್ಷವನ್ನು ನೆನೆಸುತ್ತಿರುವ ಪ್ರತಿಯೊಬ್ಬನಿಗೂ ಈ ಸುದ್ದಿಯು ಬಳ್ಳೇ ಆನಂದದಾಯಕವಾದದ್ದು! ಕನ್ನಡನಾಡಿನ ಮುಖಂಡರು ಇದರಿಂದ ಒಂದು ಸಂಗತಿಯನ್ನು ತಿಳಿದುಕೊಳ್ಳಬೇಕು. ಕಾರವಾರದಲ್ಲಿ ಜಾಗ್ರತೆಯಿಲ್ಲ! ಅಲ್ಲಿನ ಯಾರೂ ನಮ್ಮನ್ನು ಆಮಂತ್ರಿಸುವದಿಲ್ಲ! ನಾವು ಅಲ್ಲಿಗೆ ಹೋಗಬೇಕೆಂದರೆ ಪತ್ರಗಳಿಗೆ ಉತ್ತರವನ್ನು ಕೊಡುವದಿಲ್ಲ! ಎಂಬ ಕಾರಣ ನಮ್ಮ ಈ ಕನ್ನಡ ಬಂಧುಗಳನ್ನು ಕುಚೇಷ್ಟಿಸಿ ಮಾತನಾಡುವವರು ಈಗ್ಗೆ ಬಹು ಸಾವಧಾನದಿಂದ ನಡೆಯಬೇಕು! ಯಾರಾದರೂ ಕಾರವಾರಕ್ಕೆ ಹೋಗಿ, ಅಲ್ಲಿ ಜಾಗ್ರತಿಯಾಗಬೇಕೆಂಬ ಕಳವಳದಿಂದ ಆ ಜಿಲ್ಲೆಯಲ್ಲಿ ಪ್ರಚಾರ ಕಾರ್ಯವ ಮಾಡಿ ಅವರಿಗೆ ಉತ್ತೇಜನ ಕೊಡಬೇಕು. ಎಲ್ಲಿ ಜಾಗೃತಿಯಿರುವದಿಲ್ಲವೋ ಅಲ್ಲಿ ಜಾಗ್ರತಿಯನ್ನುಂಟುಮಾಡುವಂತೆ ಪ್ರಯತ್ನಿಸುವದೇ ಮುಖಂಡರ ಕರ್ತವ್ಯವಾಗಿದೆ.

ಸ್ವರಾಜ್ಯದ ಕಡೆಯು ಹೋಡೆದಿರುಳಿವು ರಾಯಲ್ ಕಮೀಶನವನ್ನು ಬಹಿಷ್ಕರಿಸುವ ಕುರಿತು ಮೊನ್ನೆ ಮುಂಬಯಿಯಲ್ಲಿ ಒಂದು ದೊಡ್ಡ ಸಭೆ ನೆರೆದಿತ್ತು. ಸಭೆಯ ಅಧ್ಯಕ್ಷಸ್ಥಾನವನ್ನು ಜಿನ್ನಾ ಸಾಹೇಬರು ಅಲಂಕರಿಸಿದರು. ಬಿಝುಂಟ ಅಮ್ಮನವರು ಸಭೆಯಲ್ಲಿ ಮುಖ್ಯವಾಗಿ ಮಾತಾಡತಕ್ಕವರೆಂದು ಮೊದಲೇ ಗೊತ್ತಾಗಿದ್ದರಿಂದ ಜನರ—— ವಿಶೇಷತಃ ಹೆಣ್ಣುಮಕ್ಕಳ ಸಂದಣೆಯು ಹೆಚ್ಚಾಗಿ ನೆರೆದಿತ್ತು.

ತಮಗೂ ಡಾ|| ಬಿಝುಂಟರಿಗೂ ಮೊದಲಿನಿಂದಲೂ ಅನೇಕ ವಿಷಯಗಳಲ್ಲಿ ಮತೈಕ್ಯವಿರದಿದ್ದರೂ ಅವರ ಬಗ್ಗೆ ತಾವು ಯಾವಾಗಲೂ ಅತ್ಯಂತ ಆದರವುಳ್ಳವರಾಗಿರುವೆವೆಂದು ಹೇಳಿ ಜಿನ್ನಾ ಅವರು ಕುಳಿತ ನಂತರ ಡಾ|| ಬಿಝುಂಟರು ಮಾತಾಡಲುಪಕ್ರಮಿಸಿದರು. ಅವರ ಅಸ್ಖಲಿತವಾದ ಭಾಷಾ ಪ್ರೌಢಿಮೆಯೂ, ಅವರ ಮಾತಾಡುವ ಅಮೋಘ ಶೈಲಿಯೂ ಮತ್ತು ವಿಷಯ ಪ್ರತಿಪಾದನೆ ಮಾಡುವಲ್ಲಿಯ ಅವರ ವಿಚಿತ್ರ ಚಾತುರ್ಯವೂ ಒಂದಕ್ಕೊಂದು ಕೂಡಿ ಒಂದು ವಿಧವಾಗಿ ಶ್ರೋತೃಗಳ ತಲೆ ತಿರುಗಿಸಿ ಬಿಟ್ಟವು. ಹಿಂದೀ ಜನರ ಉದಾತ್ತಸಂಸ್ಕೃತಿಯನ್ನೂ ಅವರ ನಂಬಿಗೆಯ ಗುಣವನ್ನೂ ವರ್ಣಿಸಿ, ಆಂಗ್ಲ ಜನರು ಮೊದಲಿಂದಲೂ ಇಂಥವರನ್ನು ಹೀಗೆ ವಂಚಿಸುತ್ತ ಬಂದಿರುವರೆಂಬುದನ್ನು ಹೇಳಿ, ಮೊನ್ನಿನ ಮಹಾಯುದ್ಧದಂಥ ಸಂಕ್ರಾಂತಿ ಸಮಯದಲ್ಲಿ ಹಿಂದೀಸೈನ್ಯವು ಬ್ರಿಟೀಶ ಸಾಮ್ರಾಜ್ಯದ ನೆರವಿಗೆ ಧಾವಿಸಿ ಅದನ್ನು ಜೀವದಿಂದುಳಿಸಿತೆಂಬ ಮಾತನ್ನು ನೆನಪು ಮಾಡಿಕೊಟ್ಟರು. ಆಂಗ್ಲ ಜನರ ಇಂಥ ಆಪತ್ಕಾಲದಲ್ಲಿ ತನ್ನ ಸರ್ವಸ್ವವನ್ನೂ ಅರ್ಪಿಸಿ ನೆರವಾದುದಕ್ಕೆ ಹಿಂದುಸ್ಥಾನಕ್ಕೆ ಲಭಿಸಿದ್ದೇನೂ ಇಲ್ಲೆಂದು ಸಾರಿ, ಸಧ್ಯದ ಕಾಯಿದೆಮಂಡಲದ ಸುಧಾರಣೆಯ ಪೊಳ್ಳು ಹೊರಗೆಳೆದರು. ಇಲ್ಲಿಯ ಉದಾರಮತಪಕ್ಷದವರು ಈ ಬ್ರಿಟಿಶ ದತ್ತ ಸುಧಾರಣೆಯ ರಾಜ್ಯ ತಂತ್ರವನ್ನು ಯಶಸ್ವಿಯಾಗಿ ಮಾಡಿ ತೋರಿಸಬೇಕೆಂದು ಎಷ್ಟೊಂದು ಶ್ರಮಪಟ್ಟರೂ ಈ ಹೊತ್ತಿಗೆ ಎಲ್ಲವೂ ಆ ಬಗ್ಗೆ ನಿರಾಶೆಹೊಂದಿದ ಸಂಗತಿಯನ್ನು ತಿಳಿಸಿ, ಸಾಯಮನ್ ಕಮೀಶನ್ ಬಹಿಷ್ಕರಿಸುವ ಪ್ರಶ್ನೆಗೆ ಬಂದರು. ಇದನ್ನು ಯಾಕೆ ಬಹಿಷ್ಕರಿಸಬೇಕೆಂಬ ಬಗ್ಗೆ ಅವರು ಹೇಳಿದ ಕಾರಣಗಳು ಬಳ್ಳೇ ಪ್ರಬಲವಾಗಿಯೂ ಮನ ಒಲಿಸುವಂಥವಾಗಿಯೂ ಇವೆ—

(೧) ತಮ್ಮ ರಾಜ್ಯ ಕಾರಭಾರವನ್ನು ತಾವೇ ನಡೆಸಿಕೊಳ್ಳುವ ಭಾಗ್ಯತೆಯು ಎಲ್ಲ ರಾಷ್ಟ್ರಗಳಿಗುಂಟೆಂಬುದು ಸ್ವಭಾವಸಿದ್ಧವಾದ ಮಾತು. ಈ ಮಾತಿನ ಅನುಭವವು ಬ್ರಿಟಿಶರಿಗೆ ಮೊನ್ನಿನ ಮಹಾಯುದ್ಧಕಾಲಕ್ಕೆ ಚನ್ನಾಗಿ ಬಂದಿತೆಂಬುದು ಇನ್ನೂ ನಮ್ಮ ಸ್ಮರಣೆಯಲ್ಲಿದೆ. ಜರ್ಮನರು ಬಂದು ತಮ್ಮ ಮೇಲೆ ಎಲ್ಲಿ ಅಧಿಕಾರ ಹತ್ತುವರೋ ಎಂದು ಅವರು ಎಷ್ಟೊಂದು ಬೆದರಿ ಬಾಯ್ಬಿಡುತ್ತಿದ್ದರೆಂಬುದನ್ನು ನಾವು ನೋಡಿಲ್ಲವೆ? ತಾವು ಮಾತ್ರ ಪರರಾಷ್ಟ್ರವನ್ನು ಪಾದಾಕ್ರಾಂತ ಮಾಡಿ ಬಲಾತ್ಕಾರವಾದ ರಾಜ್ಯವನ್ನು ನಡೆಸುವಾಗ ಈ ತತ್ವವೂ ಆ ಅಂಜಿಕೆಯೂ ಎಲ್ಲಿಯೋ ಅಡಗುತ್ತವೆ!

(೨) ಇನ್ನು ತಾವು ಹಿಂದುಸ್ಥಾನದ ಪಾಲನ ಪೋಷಣ ಮಾಡತಕ್ಕಂಥ ಪಾಲಕರೆಂದೂ ಹಿಂದುಸ್ಥಾನವು ವಯಸ್ಸಿಗೆ ಬಂದು ಬುದ್ಧಿಗಲಿಯುವವರೆಗೆ ಅದರ ಹಿತಾಹಿತವನ್ನು ವಿಚಾರಿಸುವದು ತಮ್ಮ ಕರ್ತವ್ಯವಾಗಿದೆಯೆಂದೂ ಬ್ರಿಟಿಶರು ಬಾಯಿ ಬಡಿಯುವದುಂಟು! ಅಂದ ಮೇಲೆ ತಮ್ಮ ಪಾಲನೆಗೊಳಗಾದ ಹಿಂದುಸ್ಥಾನವು "ನನ್ನ ರಾಜ್ಯಭಾರವನ್ನು ನಾನು ಇನ್ನು ನೋಡಿಕೊಳ್ಳುತ್ತೇನೆ. ನನಗಿಲ್ಲ ಭಾರವನ್ನು ಒಪ್ಪಿಸಿ ಸರಿದು ನಿಂತುಕೊಳ್ಳಿರಿ" ಎಂದು ಪಾಲಕರಿಗೆ ಕೇಳುತ್ತಿರುವಾಗ ಈ ಜವಾಬದಾರಿಯನ್ನು ಹೊರಲು ಭಾರತೀಯರು ಯೋಗ್ಯರೋ ಅಯೋಗ್ಯರೋ ಎಂಬ ಬಗ್ಗೆ ತೀರ್ಮಾನ ಕೊಡುವವರು ನಮ್ಮ ಹಿತವನ್ನು ಲಕ್ಷಿಸದಿರುವ ಪಾಲಕರೆ! ಇಂಥವರು ಕಮೀಶನ್ನದಲ್ಲಿ ಸರ್ವಥಾ ಇರಕೂಡದು. ನಮ್ಮ ಹಿತವನ್ನು ಬಯಸದವರು ನಮ್ಮ ಯೋಗ್ಯತೆಯ ಪರೀಕ್ಷೆಗಾಗಿ ಕಮೀಶನ್ನ ನೇಮಿಸುವದು ಶುದ್ಧ ಅಸಂಬದ್ಧವು.

(೩) ಮಾಂಟೆಗ್ಯೂ ಕಮೀಶನ್ನದ ಯೋಜನೆಯಾದಾಗ್ಯೂ ಮಾಂಟೆಗ್ಯೂ ಸಾಹೇಬರು ಸ್ವತಃ ಇಲ್ಲಿಯವರೆಗೆ ಬರುವ ಶಾಲೀನತೆಯನ್ನಾದರೂ ತೋರಿಸಿದ್ದರು. ಈಗ ಅಲ್ಲಿಂದಲೇ ಅರ್ಭಟಿಸಿ ದನಿಕ್ಕೆಂದು ತರದ ದರ್ಪದ ನುಡಿಗಳನ್ನು ಒಟ್ಟರಿಸುತ್ತಿರುವ ಬರ್ಕನ್ನಹೆಡ್ಡರ ಕೃತಿಯಿಂದ ಹಿಂದುಸ್ಥಾನಕ್ಕೆ ಸಹಿಸಲಾರದಷ್ಟು ಅಪಮಾನವಾಗಿದೆ.

(೪) ಮಂಡಲದಲ್ಲಿ ನೇಮಕಿಯಾದ ಜನರು ತೀರ ಮುಗ್ಧರೂ ಬುದ್ಧಿಹೀನರೂ ಏನನ್ನೂ ಅರಿಯದ ಕಂಭಗಳೂ ಆಗಿರುವದರಿಂದ ಹಿಂದುಸ್ಥಾನ ಸರಕಾರವು ಹೇಳಿಕೊಟ್ಟದ್ದೇ ಪ್ರಾಧಾನ್ಯವೆಂದು ಗೃಹೀತ ಮಾಡಿಕೊಂಡು ಅವರ ಮತದಂತೆ ತನ್ನ ಅಭಿಪ್ರಾಯವನ್ನು ಕೊಡುವ ನಿಜವೀರರೆಂಬುವದಕ್ಕೆ ಅನುಮಾನವೇ ಬೇಡ. ಎಂಥ ನಿಷ್ಪಕ್ಷ ಆಂಗ್ಲೇಯರನ್ನು ನೇಮಿಸಿದ್ದರೂ ಆ ಪಕ್ಷಪಾತವು ತಪ್ಪುತ್ತಿರಲಿಲ್ಲ! ಇನ್ನು, ಇವರಂತೂ ಏನೂ ನೀರಿಲ್ಲದ ಜಡಮೂರ್ತಿಗಳು! ಅಂದ ಮೇಲೆ ಇವರಿಂದ ನಮಗೆ ದೊರೆಯುವದೇನೆಂಬುದು ತಿಳಿದೇ ಹೋಗಿದೆ!

(೫) ಎಲ್ಲ ರಾಷ್ಟ್ರಗಳಂತೆ ನಮ್ಮ ರಾಜ್ಯಪದ್ಧತಿಯ ರಚನೆಯನ್ನು ಮಾಡತಕ್ಕವರು ನಾವು; ಬ್ರಿಟಿಶರಲ್ಲ! ನಮ್ಮ ರಾಜ್ಯಯಂತ್ರದ ಪಡಿಯಚ್ಚು ಇಂಗ್ಲಂಡದಲ್ಲಿ ತಯಾರಾಗಬೇಕಿಲ್ಲ. ಅಂಥದು ನಮಗೆ ಗ್ರಾಹ್ಯವೂ ಇಲ್ಲ! ಅದರ ಯೋಜನೆಯನ್ನು ನಾವೇ ಮಾಡ ಮಾಡತಕ್ಕದ್ದು.

ಅದಕ್ಕಾಗಿ ಇಲ್ಲಿಗೆ ಬರಬೇಕೆಂದಿರುವ ಬ್ರಿಟಿಶರ ಮಂಡಲವನ್ನು ಬಹಿಷ್ಕರಿಸಬೇಕು. ಹಿಂದಮಾತೆಯ ಅಪಮಾನದ ಪ್ರಶ್ನೆ ಬಂದಾಗ ಆ ವೀರಮಾತೆಯ ಮಕ್ಕಳು ತಮ್ಮ ಒಳಭೇದಗಳನ್ನು ಮರೆತುಬಿಟ್ಟು, ಭುಜಕ್ಕೆ ಭುಜ ಹಚ್ಚಿ ಕಾದಾಡುವ ಸಾಮರ್ಥ್ಯವುಳ್ಳವರಿದ್ದಾರೆಂಬುದನ್ನು ವಿರೋಧಿಗಳ ಪ್ರತೀತಿಗೆ ತಂದುಕೊಡುವಾ. ಎಲ್ಲ ಪಂಗಡದವರೂ ಒಂದಾಗಿ ಬಂದು ಸ್ವರಾಜ್ಯ ರಚನೆಯನ್ನು ಯೋಚಿಸುವಾ. ನಾವು ಒಕ್ಕಟ್ಟಿನಿಂದ ಒಮ್ಮನಸ್ಸಿನಿಂದ ಈಗ ಇದಿರು ನಿಂತರೆ, ಸ್ವರಾಜ್ಯ ಸಂಗ್ರಾಮದಲ್ಲಿ ಇದೇ ನಮ್ಮ ಕಟ್ಟಕಡೆಯ ಕದನವೆಂದು ಹೇಳಬಹುದು.

ನಮ್ಮ ಬೆಳಗಾವಿಯ ಪತ್ರ.

[ನಮ್ಮ ಸ್ವಂತ ಸುದ್ದಿಗಾರರಿಂದ]

ಮೆ॥ ಜಿ. ಮಾಂಟೆಥ ಮಾಜಿ ಕಲೆಕ್ಟರ ಇವರ ಮನೆಯಲ್ಲಿ ೨೦೦೦ ರೂಪಾಯಿಗಳ ಕಳವು ಆಗಿತ್ತೆಂಬದಾಗಿ ತಾ॥ ೨೦-೧೧-೩೭ ನೇ "ಕನ್ನಡಿಗ"ದಲ್ಲಿ ಕೊಟ್ಟಿತ್ತಷ್ಟೆ? ಆ ಕಳವು ಸಿಕ್ಕಿದ್ದು ಕಲೆಕ್ಟರ ಸಾಹೇಬರ ಬಂಗ್ಲೆಯಲ್ಲಿಯ ಒಬ್ಬ ಹಳೇ ಬಟಲರನೇ ಅದನ್ನು ಮಾಡಿದ್ದನೆಂದು ಇಲ್ಲಿಯ ಪೋಲಿಸರು ಗೊತ್ತುಹಚ್ಚಿದ್ದಾರೆ.

ಇಲ್ಲಿಯ ಭತಕಲ್ಲ ಬೀದಿಯಲ್ಲಿಯ ಒಬ್ಬ ಜೇಡನ ಮಗನು (೨೨ ವಯಸದವನು) ತನ್ನ ಹೆಂಡತಿಯ ಜನನೇಂದ್ರಿಯಲ್ಲಿ ಕ್ಯಾರ ಎಣ್ಣೆಯನ್ನು ಸುರುವಿದ ಆರೋಪದ ಮೇಲೆ ಇಲ್ಲಿಯ ಸಿಟಿ ಮ್ಯಾಜಿಸ್ಟ್ರೇಟರ ಕಡೆಗೆ ವ್ಯಾಜ್ಯವು ನಡೆದು ಅವನಿಗೆ ೧ ವರುಷದ ಸಕ್ತ್ರ ಶಿಕ್ಷೆ ಮತ್ತು ತಾಯಿ, ತಂದೆಗಳಿಗೆ ಐವತ್ತು ಐವತ್ತು ರೂಪಾಯಿ ದಂಡವಾಯಿತು. ಇದರ ಮೇಲೆ ಪುನಃ ಸೆಶನ್ಸ ಕೋರ್ಟಿನ್ನು ಅಪೀಲು ಮಾಡಲಾಗಿ ಕೆಳ ಕೋರ್ಟದ ಶಿಕ್ಷೆಯು ಖಾಯಂವಾಯಿತು.

ಚಿಕ್ಕೋಡಿ ತಾಲೂಕ ಪೈಕಿ ಅಕ್ಕೋಳ ಎಂಬ ಊರಲ್ಲಿ ಮೂರು ಶಾಲೆಗಳು ಇರುತ್ತವೆ. ಅವೆಲ್ಲ ಮರಾಠಿಯಲ್ಲಿ ಇರುವವು. (೧) ಅಸ್ಪೃಶ್ಯರದು, (೧) ಹೆಣ್ಣು ಮಕ್ಕಳದು, (೧) ಇತರ ಊರಲ್ಲಿಯ ಹುಡುಗರದು. ಶಾಲೆಯಲ್ಲಿ ಕಲಿಯುವ ಹುಡುಗ ಹುಡಿಗೆಯರ ಸಂಖ್ಯೆಯು ೨೦೦ ಮೀರಿ ಇರುವದಂತೆ. ಊರಲ್ಲಿಯ ರೈತರು ವಿಶೇಷವಾಗಿ ಕನ್ನಡ ಮಾತಾಡುವರು. ಶಿಕ್ಷಕಿಯು ಕಲಿಸುವವಳಿದ್ದರೆ ಹೆಣ್ಣು ಮಕ್ಕಳ ಶಾಲೆಗೆ ಇನ್ನೂ ಹೆಚ್ಚಿಗೆ ಹುಡಿಗೆಯರು, ಕೂಡುವ ಸಂಭವವುಂಟು, ಶಿಕ್ಷಕಿಯರಿದ್ದರೆ ಇಲ್ಲಿ ಬಹುತರ ತಡೆಯುವದಿಲ್ಲವಂತೆ! ಅಕ್ಕೋಳದಿಂದ ೨ ಹರದಾರಿ ದೂರದಲ್ಲಿರುವ ಗಳತಗಿ (ತಾ॥ ಚಿಕ್ಕೋಡಿ) ಎಂಬ ಊರಲ್ಲಿ ಕನ್ನಡ ಶಾಲೆಯಿದೆ ಕೆಲವು ದಿವಸಗಳ ಹಿಂದೆ "ಸಂಕೇಶ್ವರದಲ್ಲಿ (ತಾ॥ ಹುಕ್ಕೇರಿ) ಮರಾಠಿ ಶಾಲೆಯಿದ್ದಿತು. ಈಗ ಕನ್ನಡ ಮರಾಠಿ ಎರಡೂ ಶಾಲೆಗಳಿವೆ ಎಂದು ಕೇಳುತ್ತೇವೆ ಅಕ್ಕೋಳದಲ್ಲಿ ಕನ್ನಡ ಮಾತಾಡುವವರಿದ್ದು, ಮರಾಠಿ ಶಾಲೆಯೊಂದೇ ಇರುವದು ನಗೆಗೇಡು! ಇಲ್ಲಿಯ ರೈತರು ತಾವು ಮಾತಾಡುವ ಕನ್ನಡ ಭಾಷೆಯಲ್ಲಿ ಶಾಲೆ ಆಗಬೇಕೆಂದು ಪ್ರಯತ್ನಮಾಡುವದು ಅವಶ್ಯವಲ್ಲವೇ?

ಮ್ಹಾಯಿಸರಾಯ ಸಾಹೇಬರು ಕೊಲ್ಹಾಪುರಕ್ಕೆ ಸೋಮವಾರ ತಾ॥ ೧೯—೧೨—೩೭ ನೇ ದಿವಸ ಮುಂಜಾನೆ ೮ ಘಂಟೆಗೆ ಬರುವರು. ೧೦॥ ಗಂಟೆಗೆ ಮಹಾರಾಜರ ಭೆಟ್ಟಿ, ಮಧ್ಯಾನ್ಹಕ್ಕೆ ೨—೪೫ ಘಂಟೆಗೆ ಮ್ಹಾಯಿಸರಾಯರ ಹಸ್ತದಿಂದ ಒಕ್ಕಲತನದ ಪ್ರದರ್ಶನದ ಸಮಾರಂಭವು ನೆರೆಯುವದು.

ವಿಜಾಪುರ ಜಿಲ್ಲೆಯ ಸುದ್ದಿಗಳು.

[ನಮ್ಮ ಸುದ್ದಿಗಾರರಿಂದ]

ವಿಜಾಪುರ.— ಕಾಂಗ್ರೆಸ್ಸಿಗೂ, ವೀರಶೈವ ಮಹಾಸಭೆಗೂ ಕೆಲ ಜನರು ಹೆಚ್ಚಾಗಿ ಹೋಗುವ ಸಿದ್ಧತೆಯಲ್ಲಿದ್ದಾರೆ (೨) ಡಿಸ್ಟ್ರಿಕ್ಟ ಕೋರ್ಟಿನ ನಾಝರ ಶ್ರೀ ಜೋರಾಪುರರು ೪ ತಿಂಗಳ ರಜೆ ತೆಗೆದುಕೊಂಡಿದ್ದು, ಅವರ ಸ್ಥಳಕ್ಕೆ ಶ್ರೀ ಸರ್ವಶೆಟ್ಟರರು ನೇಮಿಸಲ್ಪಟ್ಟಿದ್ದಾರೆ. ಶ್ರೀ ಸರ್ವಶೆಟ್ಟರರ ಬಾಗಲಕೋಟೆಯ ನಾಝರ ಸ್ಥಳಕ್ಕೆ ಶ್ರೀ ದೊಳ್ಳೀಯವರು ಹೋಗುವರು.

ಮುದ್ದೇಬಿಹಾಳ. ಇಲ್ಲಿಯ ಗ್ರಾಮ ಪಂಚಾಯತಿಯ ಸೆಕ್ರೆಟರಿಯ ಸ್ಥಳದ ಮೇಲೆ ಈಗ ಬಹಳ ದಿವಸಗಳಿಂದ ಶ್ರೀ ವೀರಯ್ಯನವರೆಂಬ ಪೆನಶನ್ ಮಾಸ್ತರರು ಕಣ್ಣಿಟ್ಟಿದ್ದರು; ಆದರೆ ಜಾತಿಸ್ನೇಹದಿಂದ ದೂರಿದ್ದರು. ಈ ಊರ ಪಂಚಾಯತಿಯಲ್ಲಿ ವಿಶೇಷತಃ ಸರಪಂಚರಲ್ಲಿ ಅವರ ಹೆಂಚಿಕೆಯು ಸಾಧಿಸಿದ್ದಿಲ್ಲ! ಆದರೆ ತಾ॥ ೧-೧೨-೧೯೩೭ನೇ ದಿವಸ ಒಂಬತ್ತುವರ್ಷ ಮಿ॥ ರಾಮಾಚಾರ್ಯ ಹಿರೂರ ಇವರನ್ನು ಕಡಿಮೆ ಮಾಡಿ ವಸ್ತ್ರದ ಮಾಸ್ತರರ ನೇಮಣೂಕವಾಯಿತು!!

೯ನೇ ತಾರೀಖಿನ ದಿವಸ ಮೆ॥ ಕಲೆಕ್ಟರರು ಹುನಗುಂದದಿಂದ ಇಲ್ಲಿಗೆ ಬಂದಿದ್ದರು. ಒಕ್ಕಲತನದ ಉತ್ತೇಜನಕ್ಕೆಂದು ಸಭೆ ಕೂಡಿಸಿದರು; ಮತ್ತು ಜನರಿಗೆ ಹೊಸ ಒಕ್ಕಲತನದ ಸಾಧನಗಳನ್ನು ಉಪಯೋಗಮಾಡಲಿಕ್ಕೆ ಹೇಳಿದರು. ಹತ್ತಿ ಸೇಂಗಾಗಳನ್ನು ಹೆಚ್ಚಾಗಿ ಬೆಳೆಯಲಿಕ್ಕೆ ಉಪದೇಶಿಸಿದರು. (ಇದು ವ್ಯಾಪಾರಕ್ಕಾದ್ದಾಯಿತು) ಮನುಷ್ಯರ ಹಾಗೂ ದನಗಳ ಆಹಾರದ ಗತಿ ಏನೆಂಬದನ್ನು ಯಾರಾದರೂ ಸಭೆಯಲ್ಲಿ ಕೇಳಿದ್ದರೆ ಠೀಕ!

ಇಲ್ಲಿಯ ಸರಕಾರೀ ವಕೀಲರಾದ ಶ್ರೀ ದೇಶಪಾಂಡೆಯವರು ಅಸಹಕಾರದ ಚಳವಳಿಯಲ್ಲಿ ತಮ್ಮ ಪದವಿಗೆ ತಿಲಾಂಜಲಿಯನ್ನು ಕೊಟ್ಟವರು ಆದರೆ ಇಂಥವರು, ಈ ವರೆಗೆ ಸರಕಾರೀ ವಕೀಲರಾದದ್ದು ಜಿಲ್ಲಾ ಅಧಿಕಾರಿಗಳಿಗೆ ಗೊತ್ತಿರಲಿಲ್ಲ! ಪದವಿಯನ್ನು ಬಿಟ್ಟದ್ದರಿಂದ ಅವರನ್ನು ಸರಕಾರೀ ವಕೀಲರ ಸ್ಥಾನದಿಂದ ಕಿತ್ತಿ ಹಾಕಬೇಕಾಗಿ ಮುಂಬಯಿ ಸರಕಾರಕ್ಕೆ ಕಲೆಕ್ಟರ ಸಾ॥ರು ಬರೆದಿದ್ದರು! "ಪದವಿಯನ್ನು ಬಿಟ್ಟಿದ್ದರೂ, ಈ ವರೆಗೆ ಅವರು ತಮ್ಮ ಸರಕಾರೀ ವಕೀಲಿಗೆ ರಾಜೀನಾಮೆಯನ್ನು ಕೊಟ್ಟಿಲ್ಲದ್ದರಿಂದ ಅವರನ್ನು ಈ ಸ್ಥಳದಿಂದ ಕಿತ್ತಿಹಾಕುವ ವಿಚಾರವನ್ನು ಸರಕಾರವು ಮಾಡಲಾರದು" ಎಂಬದಾಗಿ ಕಲೆಕ್ಟರರಿಗೆ ಧಸ್ಪಡ ಬಂದಿದೆ.

ಹತ್ತಿಯ ಬೆಳೆಗಳು ಕಪ್ಪಾಗಹತ್ತಿವೆ. ಬಿಳಿ ಜೋಳಗಳು ಬೆಡ್ಡೆಗಳಲ್ಲಿ ಚಿಗಿತವೆ ಹವೆ ಚನ್ನಾಗಿದೆ. ರೋಗಾದಿಗಳೇನೂ ಇಲ್ಲ.

ತಳೀಕೋಟೆಯಲ್ಲಿ ಶ್ರೀಮಂತ ರಾಸ್ತೆಯವರ ವಾಡೆಯಲ್ಲಿ ರಾಸ್ತೆಯವರ ಕಾರಭಾರಿಗಳಾದ ಶ್ರೀ ವಾಸುದೇವರಾವ ಫಾಕೆ ಇವರ ಪ್ರಯತ್ನದಿಂದ ಗೀತಾಜಯಂತಿಯ ಉತ್ಸವವು ಬಹಳ ಉತ್ಸಾಹದಿಂದ ನೆರವೇರಿತು ಗೀತಾ ಪಠಣದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಶ್ರೀ ವಾಸುದೇವರಾಯರು ಗೀತಾ ಪುಸ್ತಕಗಳನ್ನು ಇನಾಮು ಕೊಟ್ಟರು.

ಬೀಳಗಿ ಇಲ್ಲಿಯ ನೇಟಿವ ಲಾಯಬ್ರರಿಯ ಅವ್ಯವಸ್ಥೆಯ ಬಗ್ಗೆ ಎಷ್ಟು ಸಲ ಬರೆದಿದ್ದರೂ, 'ಬೋರ್ಕಲ್ಲ ಮೇಲೆ ಮಳೆಗರೆದರ ಕಲ್ಲು ನೀರ್ಕುಡಿಯ ಬಹುದೇ!! ಎಂಬ ತಾಗಿದೆ! ಲಾಯಬ್ರರಿಯಂದರೆ ಅದೊಂದು ಅವ್ಯವಸ್ಥೆಯ ಬೀಡಾಗಿದೆ!

ಬದಾಮಿ ಗುಡ್ಡದ ಮೇಲೆಯೂ, ಹಳೇ ಗುಡಿಗಳಲ್ಲಿಯೂ ಇದ್ದ ಶಿಲಾಲೇಖಗಳನ್ನು ತೆಗೆದುಕೊಳ್ಳಲಿಕ್ಕೆ ಸರಕಾರೀ ಒಬ್ಬ ಅಧಿಕಾರಿಗಳು ಬಂದು ೮ ದಿನಗಳಾದವು ಶಿಲಾಲಿಪಿಗಳನ್ನು ತೆಗೆದುಕೊಳ್ಳುವ ಕೆಲಸವು ಭರದಿಂದ ನಡೆದಿದೆ ಶ್ರೀ ಬನಶಂಕರಿಯಲ್ಲಿ ತಲೆಪಟ್ಟಿಯ ಹಣದಿಂದ ಕಟ್ಟಿಸಿದ ೮ ಗಡಗಡೆಯ ಭಾವಿ ನೀರು ನಿಂತು ಹುಳಿತು ಹೋಗಿವೆ! ಈ ಜಾತ್ರೆಯು ಸಮೀಪಿಸಿದ್ದರಿಂದ ಅದರಲ್ಲಿಯ ನೀರನ್ನು ಬಳಿಸಿ, ಸ್ವಚ್ಛವಾಗಿ ಮಾಡಿಸಿದರೆ ಜಾತ್ರೆಗೆಬಂದ ಜನರಿಗೆ ಉಪಯೋಗವಾಗುವದು! ಈ ಕೆಲಸವು ತೀವ್ರವೇ ಜರಗಬೇಕು. ಇಲ್ಲವಾದರೆ ಯಮನೂರ ಜಾತ್ರೆಯು ಬನಶಂಕರಿಯಲ್ಲಿಯೂ ದೃಗ್ಗೋಚರವಾದೀತು! ಅಧಿಕಾರಿಗಳು ಕಣ್ತೆರೆಯಲಿ!

ಪತ್ರವ್ಯವಹಾರ

ಪ್ರಾಥಮಿಕ ಶಿಕ್ಷಕರೂ ವ್ಯಾಯಾಮಶಾಲೆಯೂ

(ಆದೇ ಕ್ರಿಕ್ಷ ಎಡಕ್ಕಿನಿಂದ ಬರೆದದ್ದು)

ನಗರವಾಸಿಗಳಿಗೆ—

ತಾ॥ ೬-೧೨-೩೭ ನೇ ದಿವಸ ಕನ್ನಡಿಗನಲ್ಲಿ ಶಿಕ್ಷಕರೂ, ವ್ಯಾಯಾಮಶಾಲೆಯೂ ಎಂಬ ಲೇಖನವನ್ನು ಕೊಟ್ಟಂಥ ನಗರವಾಸಿಗಳಿಗೆ— ನಗರವಾಸಿಗಳೇ ನೀವು ನಗರದಲ್ಲಿ ವಾಸವಾಗುತ್ತೀರೋ ಇಲ್ಲವೋ ಎಂಬುದು ಸಂಶಯಾಸ್ಪದವಾಗಿದೆ. ನೀವು ಕನ್ನಡಿಗನಲ್ಲಿ ಬರೆದ ಲೇಖನವನ್ನು ನೋಡಿದರೆ ಸಮಾಜದ ಹಿತಚಿಂತಕನಾದ ನನಗೆ ಬಹಳ ಕೆಡಕೆನಿಸುತ್ತದೆ. ಇಲ್ಲಿಯ ಪ್ರಾಥಮಿಕ ಶಿಕ್ಷಕರು ವ್ಯಾಯಾಮಶಾಲೆಯ ಕಡೆಗೆ ಅನಾಸ್ಥೆಯನ್ನು ತೋರಿಸುತ್ತಿರುವರೆಂಬುದು ನಿಮ್ಮ ಆಕ್ಷೇಪಣೆ. ಶಿಕ್ಷಕರ ಉತ್ತೇಜನದಿಂದಲೇ ಇಲ್ಲಿಯ ಶಾಲೆಯ ಹುಡುಗರು ವ್ಯಾಯಾಮ ಶಿಕ್ಷಣವನ್ನು ಹೊಂದಿದರು. ಇನ್ನು ಅವರು ಯಾವ ಕಾರಣದಿಂದೇ ಆಗಲಿ ಸ್ವತಃ ಶಿಕ್ಷಣವನ್ನು ಹೊಂದಲಿಲ್ಲ ಆ ಮಾತು ಬೇರೆ ಇರಲಿ. ಶಿಕ್ಷಕರು ವ್ಯಾಯಾಮ ಶಾಲೆಯ ಸಂಬಂಧದ ಪ್ರತಿಯೊಂದು ಸಭೆಗೆ ಒಂದು ಅಲ್ಲ ನಡೆದ ಯಾವತ್ತೂ ಶಿಕ್ಷಣಕ್ರಮವನ್ನೂ ಉಳಿದ ಕಾರ್ಯಗಳನ್ನೂ ನೋಡಿ ತಮ್ಮ ಪೂರ್ಣ ಸಹಾನುಭೂತಿಯನ್ನು ತೋರಿಸುತ್ತ ಹೋಗುತ್ತಿದ್ದರು.

ಮೊನ್ನೆ ಇಲ್ಲಿಯ ವ್ಯಾಯಾಮ ಶಾಲೆಯ ಕಟ್ಟಡದ ಅನುಕೂಲತೆಯ ಸಲುವಾಗಿ ಎಲ್ಲರಂತೆಯೂ ಶಿಕ್ಷಕರು ಸಹಾಯವನ್ನು ನೀಗಿದುಕೊಂಡದ್ದು ಎಲ್ಲರಿಗೂ ಗೊತ್ತದೆ. ಈ ಸಂಗತಿಯು ನಗರವಾಸಿಗಳಿಗೆ ಗೊತ್ತಿರಲಿಕ್ಕಿಲ್ಲ ಬೇಕಾದರೆ ವ್ಯಾಯಾಮಶಾಲೆಯ ಕಾರ್ಯದರ್ಶಿಗಳಿಗೆ ಭೆಟ್ಟಿಯಾಗಿ ಕೇಳಿಕೊಳ್ಳತಕ್ಕದ್ದು.

ಇವೆಲ್ಲ ಕಾರಣಗಳಿಂದ ವಿಚಾರಮಾಡುತ್ತಿರಲಿಕ್ಕಾಗಿ ವ್ಯಾಯಾಮಶಾಲೆಯ ದೆಸೆಯಿಂದ ಶಿಕ್ಷಕರ ಅನಾಸ್ಥೆಯು ಆದಯೋ ಹೇಗೆ ? ಎಂಬುದನ್ನು ನಮ್ಮ ನಗರವಾಸಿಗಳು ಪೂರ್ಣ ವಿಚಾರ ಮಾಡಬೇಕು. ಹಿಂದೆ ಎಷ್ಟೋ ಸಾಮಾಜಿಕ ಕೆಲಸಗಳು ನಡೆದರೂ ಅದರಲ್ಲಿ ಶಿಕ್ಷಕರ ಸಹಾಯವು ಇದ್ದೇ ಇರುತ್ತಿತ್ತು. ಅದರೂ ನಮ್ಮ ನಗರವಾಸಿಗಳಿಗೆ ಗೊತ್ತಿರಲಿಕ್ಕಿಲ್ಲ.

ಒಂದು ವೇಳೆ ಯಾವನಾದರೊಬ್ಬ ಶಿಕ್ಷಕನು ಏನಾದರೂ ಅಂದಿ ಬಹುದು ಅಂಥ ಒಂದು ವ್ಯಕ್ತಿಯ ಅಂಬೋಣದ ದೆಸೆಯಿಂದ ನೀವು ಹೀಗೆ ಇಡೀ ಶಿಕ್ಷಕ ಸಮಾಜದ ಮೇಲೆ ಹರಿದು ಬೀಳತಕ್ಕದ್ದಲ್ಲ. ಇದರಿಂದ ಶಿಕ್ಷಕ ಸಮಾಜದಲ್ಲಿ ಅಸಂತುಷ್ಟತೆಯು ನೆಲಗೊಂಡು ಒಂದು ತರದ ಉದಾಸೀನತೆಯು ಕಾಣಿಸುತ್ತಿರುತದೆ.

ಇನ್ನು ನೀವು ಇದರಲ್ಲಿ ಮ್ಯಾ ಪಾ ಯವರು ಕೈ ಹಾಕಿ ಶಾಶ್ವತಿ ವಸ್ತೈರಿ ಕೊಡಬೇಕೆಂದು ನಿಮ್ಮ ಅಂಬೋಣವದೆ. ಇಂಥ ನಿರ್ನಾಮಿಗಳ ಲೇಖಕ್ಕೆ ಲಕ್ಷ್ಯ ಕೊಡಲಾರರೆಂದು ನಾನು ವಿಶ್ವಾಸದಿಂದ ಹೇಳುತ್ತೇನೆ. ಶಿಕ್ಷಕರೂ, ನಾವೂ ನೀವೂ ಒಂದೇ ಸಮಾಜದವರಾಗುವದರಿಂದ, ನಿರರ್ಥಕವಾದ ಮತ್ತು ಅನ್ಯತವಾದ ಇಂಥ ಸಂಗತಿಗಳನ್ನು ಪ್ರಕಟಿಸಿದರೆ ನಮ್ಮ ಸಮಾಜದಲ್ಲಿ, ಒಡಕು ಹುಟ್ಟಿಸಿಕೊಳ್ಳಲಿಕ್ಕೆ ನಾವೇ ಕಾರಣರಾಗುತ್ತೇವೆ

ಇನ್ನು ಶಿಕ್ಷಕರು ಮ್ಯು. ಪಾ. ಯವರನ್ನೂ ಜನರನ್ನೂ ವಂಚಿಸಿ ಪಗಾರ ತಕ್ಕೊಳ್ಳುವರೆಂಬುವದು ನಿಮ್ಮ ಎರಡನೇ ಆಕ್ಷೇಪಣೆ ಇದಕ್ಕೆ ಒಂದೇ ಉತ್ತರ ಹೇಳುತ್ತೇನೆ ಮ್ಯು ಪಾ. ಯವರ ಶಿಕ್ಷಕರಿಗೆ ಕೇವಲ ವ್ಯಾಯಾಮ ಶಾಲೆಗೆ ಎಲ್ಲ ತರದಿಂದ ಸಹಾಯ ಮಾಡಲಿಕ್ಕೆಂದು ಪಗಾರ ಕೊಡುತ್ತಿದರೆ, ನಿಮ್ಮ ಅಂಬೋಣವ ಸರಿಯೆನಿಸುತ್ತಿತ್ತು. ಆದರೆ ವ್ಯಾಯಾಮ ಶಾಲೆಗೆ ನಾವು ಸಹಾಯಮಾಡುವದಕ್ಕೂ, ಪಗಾರ ತಕ್ಕೊಳ್ಳುವಲಿಕ್ಕೂ ಏನೇನು ಸಂಬಂಧವೆನಿಸುವದಿಲ್ಲ

ಇನ್ನು ಮೇಲಾದರೂ ನಗರವಾಸಿಗಳು ಯಾವದೇ ಆಧಾರವಿಲ್ಲದಂಥ ನಿರರ್ಥಕವಾದ ಟೀಕೆಯನ್ನು ಕೊಡಬಾರದೆಂದು ಮತ್ತು ವಿಶೇಷವಾಗಿ ಮುಂದಿನ ಅಂಕಿನಲ್ಲಿ ಶಿಕ್ಷಕರ ದೆಸೆಯಿಂದ ಬರೆದ ನಿಮ್ಮ ಲೇಖವನ್ನು ತಿರುಗಿ ತೆಗೆದುಕೊಳ್ಳುವಿರೆಂದು ನಾನು ನಂಬಿದೇನೆ.

—ಕನ್ನಡ ಚಿಕಿತ್ಸಕ

ನಮ್ಮ ಧಾರವಾಡದ ಪತ್ರ.

„ಡಿಸೆಂಬರ ೧೨ ನೇ ತಾರೀಖನ್ನು ಸ್ವಾಮೀ ಶ್ರದ್ಧಾನಂದರವರ ಪುಣ್ಯತಿಥಿಯನ್ನಾಗಿ ಆಚರಿಸಬೇಕೆಂದು ಹಿಂದೂ ಮಹಾ ಸಭೆಯವರು ನಿರ್ಣಯಿಸಿದ್ದನ್ನು, ಇಲ್ಲಿಯ ಹಿಂದೂ ಸಭೆಯವರ ಮರೆತರೇನೊ ತಿಳಿಯದು ಸ್ವಾಮೀ ಶ್ರದ್ಧಾನಂದರವರು ವೀರಸ್ವರ್ಗವನ್ನೈದಿದ ಕರ್ಣಕಥೆ, ಶ್ರದ್ಧಾನಂದ ಸ್ಮಾರಕ ನಿಧಿಯನ್ನೂ ಕೂಡಿಸಿದ್ದ ಇಲ್ಲಿಯ ಹಿಂದೂ ಸಭೆಯವರು, ಈ ವೇಳೆಯಲ್ಲಿ ಮಲಗಿದ್ದನ್ನು, ನೋಡಿ ‘ ಆರಂಭಶೂರಾಃ ಖಲು ದಾಕ್ಷಿಣಾತ್ಯಾಃ ” ಎಂಬ ವಾಕ್ಯವು ನೆನಪಿಗೆ ಬಾರದೆ ಇರದು.

“ ಇಲ್ಲಿಯ ಕರ್ನಾಟಕ ಕಾಲೇಜದ ಕೆಲವು ವಿದ್ಯಾರ್ಥಿಗಳು ಕೂಡಿ “ನವೀನ ಸ್ನೇಹಿತ” ನೆಂಬ ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ. ಸಾಹಿತ್ಯ ಸೇವೆಯೇ ಈ ಸಂಘದವರ ಮುಖ್ಯ ಧ್ಯೇಯವಾಗಿದೆ. ಪ್ರತಿ ತಿಂಗಳದಲ್ಲಿಯೂ “ ಸಾಹಿತ್ಯ ಸಂಘ ” ವೆಂಬ ಕೈಬರಹದ ತ್ರೈಮಾಸಿಕವನ್ನು ಹೊರಡಿಸಹತ್ತಿದ್ದಾರೆ. ಆಗಾಗ್ಗೆ ಸಭೆಗಳನ್ನು ಕರೆದು ವಾಙ್ಮಯಕ್ಕೆ ಸಂಬಂಧಿಸಿದ ವಿಷಯಗಳನ್ನೂ ಚರ್ಚಿಸುತ್ತಾರೆ ಉಳಿದ ಕಡೆಯ ವಿದ್ಯಾರ್ಥಿಗಳು ಇವರ ಅನುಕರಣವನ್ನು ಮಾಡುವರೋ !

“ ದಕ್ಷಿಣ ಭಾಗದ ಇನಸ್ಪೆಕ್ಟರರ ಜಾಗೆಗೆ ಕಾದ್ರಿ ಸಾಹೇಬರು ಬರುವದಾಗಿ ವಾರ್ತೆಯಿದೆ.

ಹಿಂದುಸ್ಥಾನ.

ಸಾಯಮನ್ ಕಮೀಶನಕ್ಕೆ ಬಹಿಷ್ಕಾರವನ್ನು ಸಂಪೂರ್ಣವಾಗಿ ಹಾಕಬೇಕೆಂದೂ, ಆ ಬಗ್ಗೆ ಚಳವಳ ಮಾಡಲು ಒಂದು ಕಮೀಟಿಯು ರಚಿತವಾದದ್ದು ಮುಂಬೈ ನಾಗರಿಕರ ಎಲ್ಲ ಜಾತಿಯ ಹಾಗೂ ಪಂಗಡಗಳ ಸೇರಿದ ಪ್ರಚಂಡವಾದ ಸಭೆಯಾಗಿದ್ದಿತು. ಈ ಕಮೀಟಿಯವರು ಈಗ್ಗೆ ಹೀಗೆ ಅಪ್ಪಣೆ ಕೊಡಿಸಿದ್ದಾರೆ- (೧) ಕಾಂಗ್ರೆಸ, ಹಿಂದೂಸಭಾ, ಮೋಸ್ಲೆಮ್ ಲೀಗ, ಪ್ರಾಗತಿಕರ ಫೆಡರೇಶನ್, ವ್ಯಾಪಾರೀ ಸಂಘಗಳೂ ಕೂಲಿಕಾರರ ಸಭೆಗಳೂ ಯಾವವೂ ತಮ್ಮ ಪ್ರತಿನಿಧಿಗಳನ್ನು ಈ ಕಮೀಶನಕ್ಕೆ ಸಾಕ್ಷಿ ಕೊಡಬಾರದು; ಅಥವಾ ಅದಕ್ಕೆ ಯಾವ ರೀತಿಯಿಂದಲೂ ಎಂದೂ ಸಹಾಯ ಮಾಡಕೂಡದು (೨) ಪ್ರಾಂತಿಕ ಹಾಗೂ ಅಖಿಲ ಹಿಂದೀ ಕೌನ್ಸಿಲ್ಲುಗಳ ಮತದಾರರು ತಮ್ಮ ತಮ್ಮ ಊರುಗಳಲ್ಲಿ ಸಭೆ ಕೂಡಿ, ಈ ಕಮೀಶನಕ್ಕೆ ಬಹಿಷ್ಕಾರ ಹಾಕಬೇಕೆಂದೂ, ಯಾವ ರೀತಿಯಿಂದಲೂ ಸಹಾಯಮಾಡಬಾರದೆಂತಲೂ, ತಮ್ಮ ತಮ್ಮ ಪ್ರತಿನಿಧಿಗಳಿಗೆ ಅಪ್ಪಣೆ ಕೊಡಬೇಕು.

ಕನ್ನಡ ಶಿಲಾಲೇಖಗಳ ಸೇವೆ!

ಐತಿಹಾಸಿಕಪ್ರಾಚೀನ ವಸ್ತುಗಳ ಬಗ್ಗೆ ಬಾಗಲಕೋಟೆಯ ಸುಶಿಕ್ಷಿತರ ಉತ್ಸಾಹ!

ಹಳ್ಳೂರಲ್ಲಿಯ ಹಳೇ ಪ್ರೇಕ್ಷಣೀಯವಾದ ಗುಡಿಯೂ, ಭೈರಮಟ್ಟಿಯಲ್ಲಿಯ ಮಹತ್ವದ ಶಿಲಾಲೇಖವೂ!

ಕರ್ನಾಟಕಕ್ಕೆ ಸಂಬಂಧಪಟ್ಟ ಮಹತ್ವದ ಸಾರ್ವಜನಿಕ ಕಾರ್ಯಗಳಲ್ಲಿ ಬಾಗಲಕೋಟೆಯು ಈ ಪ್ರಭವ ಸಂವತ್ಸರದಿಂದ ಒಳ್ಳೇ ಉತ್ಸಾಹದಿಂದ ತೊಡಗಿಕೊಳ್ಳುತ್ತಲಿದೆಂಬುದನ್ನು ನಾವು ಹಿಂದಕ್ಕೊಂದು ಸಲ ಬರೆದಿದ್ದೆವು. ಆ ಪ್ರಕಾರ ಈ ವರೆಗಿನ ಕರ್ನಾಟಕದ ಸೇವೆಯ ಹೆಜ್ಜೆಯು ಕಳೆದ ವಾರದಲ್ಲಿ ಒಳ್ಳೇ ಅಭಿಮಾನದಿಂದ ಮುಂದಕ್ಕೆ ಸಾಗಿತು. ಹಿಂದುಸ್ಥಾನ ಸರಕಾರದಿಂದ ಶ್ರೀ ಎನ್. ಲಕ್ಷ್ಮೀನಾರಾಯಣರಾಯರೆಂಬ ಶಿಲಾಲೇಖ ಸಂಶೋಧಕರು ಬಾಗಲಕೋಟೆಯ ತಾಲೂಕಿಗೆ ಬಂದು ಈಗ್ಗೆ ಇಲ್ಲಿ ಹಳ್ಳಿ ಹಳ್ಳಿಗಳಲ್ಲಿ ಸಂಚರಿಸುತ್ತಿರುವರು. ವಿಜಾಪುರ ಜಿಲ್ಲೆಯಲ್ಲಿ ಶಿಲಾಲೇಖಗಳ ಶೋಧನವನ್ನು ಸುಸಂಘಟಿತ ಕಾರ್ಯದಲ್ಲಿ ಮಾಡಬೇಕೆಂದು ನಿರ್ಧರಿಸಿದ ಸಮಯದಲ್ಲಿ ಇವರ ಆಗಮನವು ಬಾಗಲಕೋಟೆಯ ತಾಲೂಕಿಗೆ ಆದುದು ಒಂದು ದೊಡ್ಡ ಅನುಕೂಲವೇ ಆಗಿದೆ. (ಇದರಂತೆ ಬದಾಮಿಯ ತಾಲೂಕಿಗೂ ಸರ್ಕಾರದ ಪರಿಶೋಧಕರು ಬಂದಿರುವರು. ಆದರೆ ಅವರು ಕನ್ನಡವನ್ನರಿಯರು! ಕನ್ನಡ ಶಿಲಾಲೇಖಗಳನ್ನು ಸಂಶೋಧಿಸಲು ಕನ್ನಡವನ್ನರಿಯದ ಪಂಡಿತರನ್ನು ನಿಯೋಜಿಸಿದ್ದು ಸರಕಾರದ ಒಂದು ದೊಡ್ಡ ತಪ್ಪೇ ಆಗಿದೆ. ಈ ಬಗ್ಗೆ ಇದೇ ಸಂಚಿಕೆಯಲ್ಲಿ ಪ್ರಕಟವಾದ ಸಂಪಾದಕೀಯ ಟಿಪ್ಪಣಿಯನ್ನು ವಾಚಕರು ಓದಿಕೊಳ್ಳಬೇಕು.) ಇದರ ಲಾಭವನ್ನು ಸಂಪೂರ್ಣವಾಗಿ ಪಡೆಯಬೇಕೆಂದು ಇಲ್ಲಿಯ ಪ್ರಾಚೀನ-ಇತಿಹಾಸ-ಪ್ರೇಮಿಗಳಾದ ಕೆಲವರು ಯೋಚಿಸಿದರು. ಈ ಸರಕಾರೀ ಪರಿಶೋಧಕರ ಜೊತೆಯಲ್ಲಿ ಕೆಲವು ಹಳ್ಳಿಗಳನ್ನು ಸಂದರ್ಶಿಸಿ, ಅವರು ಪರಿಶೋಧನದ ಕಾರ್ಯವನ್ನು ಯಾವ ಬಗೆಯಿಂದ ಮಾಡುತ್ತಿರುವರೆಂಬುದನ್ನರಿತುಕೊಳ್ಳಬೇಕೆಂಬ ಲವಲವಿಕೆಯಿಂದ, ಶ್ರೀ. ಲಕ್ಷ್ಮೀನಾರಾಯಣರಾಯರ ಸಂಗಡ ಭಗವತಿ, ಹಳ್ಳೂರ, ಭೈರಮಟ್ಟಿ ಎಂಬ ಹಳ್ಳಿಗಳಿಗೆ ಕೆಳಗಿನ ಜನರು ಅಭಿಮಾನದಿಂದ ತಾ|| ೧೧ ರಲ್ಲಿ ಹೊರಟರು: (೧) ಘಾರಪಾಡ ನಂಬರು (೨) ಕಿರಸೂರ ವಕೀಲರು (೩) ಕೆರೂರ ವಕೀಲರು (೪) ಬೋರಾಪೂರ ವಕೀಲರು (೫) ದೇಸಾಯಿ ವಕೀಲರು (೬) ಸವಣೂರ ಮಾಸ್ತರರು (೭) ಗಜೇಂದ್ರಗಡ ಮಾಸ್ತರರು ಹಾಗೂ (೮) ಮಂಗಳವೇಢೆ, 'ಕನ್ನಡಿಗ'ನ ಸಂಪಾದಕರು. ಅಭಿಮಾನಪೂರಿತವಾದ ಈ ಸಂತೋಷ ಕೂಟವು ಮೋಟಾರಿನಿಂದ ಹೊರಟಿತು (ರಾಯಲ್ ಮೋಟಾರ ಸರ್ವೀಸದ ಓವರ್ ಡ್ರಾಯವರನ ಬೇಜವಾಬದಾರ ಅಧಿಕ ಪ್ರಸಂಗವನ್ನು ಪ್ರಸಂಗಪ್ರಸಂಗಗಳಲ್ಲಿ ಕಂಡದ್ದೂ ಆಯಿತು!!) ಹಳ್ಳೂರಲ್ಲಿ ಶಿಲಾಲೇಖಗಳು ಹೆಚ್ಚಾಗಿವೆಯೆಂದು ಕೇಳಿದ್ದರಿಂದ ಮೊದಲು ಅಲ್ಲಿಗೇ ಹೋದೆವು. ಊರ ಮಧ್ಯದಲ್ಲಿ ಹುಗಿದ ಗುಡಿಗಳು ನಾಲ್ಕು ಇವೆ. ಅವು ತೆಗೆಯುವಷ್ಟು ಅವು ಮಹತ್ವದ್ದಾಗಿಲ್ಲವೆಂದು ಸರಕಾರೀ ಸಂಶೋಧಕರು ಮತಕೊಟ್ಟರು. ಈ ಗುಡಿಗಳು ಸ್ಪಷ್ಟವಾಗಿಲ್ಲ. ಒಂದು ಗುಡಿಯಂತೂ ತಿಪ್ಪೆಯಿಂದ ತುಂಬಿಕೊಳ್ಳುತ್ತಲಿದೆ. ಇಂಥ ಹಳೇ ಗುಡಿಗಳನ್ನು ಸುವ್ಯವಸ್ಥೆಯಿಂದ ಕಾಯ್ದಿಡುವ ಅಧಿಕಾರಿಯೊಬ್ಬನು ('ಆರ್ಕಿಯಾಲಾಜಿಕಲ್ ಓವ್ಹರ್ಸಿಯರ") ಬಾಗಲಕೋಟೆಯ "ಪಬ್ಲಿಕ್ ವರ್ಕ್ಸ" ಖಾತೆಯಲ್ಲಿದ್ದರೂ, ಈ ತಾಲೂಕಿನಲ್ಲಿಯ ಗುಡಿಗಳನ್ನು ಸಹ ಅವನು ದುರ್ಲಕ್ಷಿಸಿದ್ದು, ಅವನ ಕರ್ತವ್ಯಪರಾಙ್ಮುಖತೆಯನ್ನು ಸಿದ್ಧಪಡಿಸುತ್ತದೆ! ಈ ಹುಗಿದ ಗುಡಿಗಳ ಗುಂಪಿನಲ್ಲಿ ಒಂದೆಡೆಗೆ ಎತ್ತರವಾದ ಒಂದೇ ಕಲ್ಲಿನ ದೀಪಸ್ತಂಭವಿದೆ. ಈ ಸ್ತಂಭದಿಂದ ೩ ಫರ್ಲಾಂಗಿನ ಅಂತರದಲ್ಲಿ ಎದುರಿಗೆ "ಮೇಲ್ಗುಡಿ" ಎಂಬ ಪ್ರಾಚೀನ ದೇವಾಲಯವೊಂದಿದೆ. ಅದು ದಿಬ್ಬದ ಮೇಲಿದ್ದುದರಿಂದ "ಮೇಲ್ಗುಡಿ" ಎಂಬ ಹೆಸರು. ಈ ಸ್ತಂಭದ ತುದಿಯಲ್ಲಿ ದೀಪ ಹಚ್ಚಿದರೆ, ಅದರ ಬೆಳಕು "ಮೇಲ್ಗುಡಿ"ಯಲ್ಲಿ ಬೀಳುವದೆಂದು ಸ್ಥಾನಿಕ ಜನರು ಹೇಳಿದರು. ನಾವು ಮುಂದೆ ಮೇಲ್ಗುಡಿಗೆ ಹೋದೆವು. ಇದು ಊರ ಹೊರಗೆ ದಿಬ್ಬದ ಮೇಲೆ ಕಟ್ಟಲ್ಪಟ್ಟಿದೆ. ದೇವಾಲಯವು ಭವ್ಯವಾಗಿಯೂ ಅಂದವಾಗಿಯೂ ಇದ್ದು, ಪಶ್ಚಿಮಾಭಿಮುಖವಾಗಿದೆ. ಎಲ್ಲ ಹಳೇ ಗುಡಿಗಳಂತೆ ಇದಾದರೂ ಕೇವಲ ಬಂಡೆ ಕಲ್ಲುಗಳಿಂದ ಕಟ್ಟಲ್ಪಟ್ಟಿದೆ. ಹೊರಗಿನ ನಾಲ್ಕು ಬದಿಗೆ ಕಲ್ಲಿನಿಂತ ತೀರ್ಥಂಕರ ಮೂರ್ತಿಗಳೂ, ಗುಡಿಯೊಳಗೆ ಕುಳಿತ ಜಿನದೇವನ ಮೂರ್ತಿಯೂ ಇರುವದರಿಂದ, ಇದು ಜೈನ ದೇವಾಲಯವೆಂಬುದು ಪ್ರಥಮದರ್ಶನದಲ್ಲಿಯೇ ಗೊತ್ತಾಗುವದು (ಈಗ ಮಾತ್ರ ಈಶ್ವರನ ಮೂರ್ತಿಯು ಗರ್ಭಗುಡಿಯಲ್ಲಿದೆ. ಶೈವರಾಜರ ಕಾಲದಲ್ಲಿ ಇದು ಅಲ್ಲಿ ಸ್ಥಾಪಿಸಲ್ಪಟ್ಟಿರಬಹುದು.) ಹೊರಗಿನ ನಾಲ್ಕು ಬದಿಗಳ ಮೇಲ್ಭಾಗದಲ್ಲಿ ಚಿತ್ರಗಳು ಕೊರೆಯಲ್ಪಟ್ಟಿವೆ. ಪಾರಿವಾಳಗಳ ಶ್ರೇಣಿಯು ಎಲ್ಲ ಭಾಗಗಳಲ್ಲಿಯೂ ಒಂದೇ ಸವನೆ ಹಬ್ಬಿದ್ದು, ಬಹು ಸೂಕ್ಷ್ಮವಾಗಿ ಅದು ಕೆತ್ತಲ್ಪಟ್ಟಿದೆ. ಮೂಕ ಪ್ರಾಣಿಗಳಲ್ಲಿ ತಮಗಿದ್ದ ಪ್ರೀತಿಯ ದ್ಯೋತಕವೆಂದು ಜೈನರು ಪಾರಿವಾಳಗಳಿಗೆ ಮನ್ನಣೆಯನ್ನು ಕೊಡುವದುಂಟು. ಇರಲಿ. ಈ ಶ್ರೇಣಿಯ ಕೆಳಭಾಗದಲ್ಲಿ ಬಗೆ ಬಗೆಯ ಚಿತ್ರಗಳು ಕೆತ್ತಲ್ಪಟ್ಟಿವೆ. ಅವುಗಳಲ್ಲಿ ಉತ್ತರ ಭಾಗದಲ್ಲಿಯ ಒಂದು ಗುಡಿಯೂ, ದಕ್ಷಿಣ

ಭಾಗದಲ್ಲಿಯ ಪಡದೆಯ ಮರೆಯಿಂದ ಹಣಿಕಿಕ್ಕಿ ನೋಡುವ ಹಾಗೂ ನರ್ತನದ ಗೊಂಬೆಗಳೂ, ಪ್ರಾಚೀನ ಕನ್ನಡಿಗರ ಲಲಿತ ಕಲಾಸೌಭಾಗ್ಯವನ್ನು ಈಗಲೂ ಪ್ರಕಟಗೊಳಿಸುತ್ತವೆ. ಮಾಳಿಗೆಯ ಮೇಲೆ ಹತ್ತಿ ಹೋಗಲಿಕ್ಕೆ ಒಂದೇ ಕಲ್ಲಿನಲ್ಲಿ ಕೊರೆದ ನಿಚ್ಚಣಿಕೆಯೊಂದಿದೆ. ಇದನ್ನು ಕಂಡು ಎಲ್ಲರೂ ಆಶ್ಚರ್ಯಪಟ್ಟರು! ಆ ನಿಚ್ಚಣಿಕೆಯನ್ನೇರಿ ಮೇಲಕ್ಕೆ ಕಾಲಿಟ್ಟ ಕೂಡಲೇ ಒಳಭಾಗದ ಗೋಡೆಯಲ್ಲಿ ಕೆಲವು ಕನ್ನಡ ಅಕ್ಷರಗಳು ಕಂಡವು. ಒಂದೇ ಅಪೂರ್ಣ ಶ್ಲೋಕದ ಪ್ರಥಮ ಚರಣವು ಮಾತ್ರ ಇದೆ. ಇದೊಂದು ಮುದ್ರೆಯನ್ನು ತೆಗೆದುಕೊಂಡ ಹಾಗೆ ಗೊತ್ತಾಯಿತು. ಮಹಾದ್ವಾರವನ್ನು ಹೊಕ್ಕ ಕೂಡಲೇ ಎಡಕ್ಕಿರುವ ಎರಡನೇ ಕಂಬದ ಮೇಲೆ "ತ್ರಿಪುಷ್ಪದೇವ" ಎಂಬ ಅಕ್ಷರಗಳಿವೆ. ಈ ಗುಡಿಯನ್ನು ಕಟ್ಟಿದ ಶಿಲ್ಪಿಗನ ಹೆಸರೇ ಕದಾಚಿತ್ ಅದು ಇರಬಹುದು. ಗುಡಿಯ ಹೊರಕ್ಕೆ ಒಂದು ಶಿಲಾಲೇಖವು ಬಿದ್ದಿದೆ. ಅದು ೧೧ನೇ ಶತಮಾನದ್ದು. ನಡುವಿನ ಭಾಗವು ಸವೆದದ್ದರಿಂದ ಸಂಪೂರ್ಣವಾಗಿ ಓದಲು ಆಗಲಿಲ್ಲ. ತ್ರಿಭುವನಮಲ್ಲ (ಅಂದರೆ ಕನ್ನಡಿಗರ ಸುಪ್ರಖ್ಯಾತ ಸಮ್ರಾಟ್ ಸಾಹಸಿ ವಿಕ್ರಮಾದಿತ್ಯ)ನ ಹೆಸರೂ ಬೆಳವಲನಾಡೂ ಅದರಲ್ಲಿ ಉಲ್ಲೇಖಿಸಲ್ಪಟ್ಟಿವೆ. ಇವನ್ನೆಲ್ಲ ನೋಡುವಷ್ಟರಲ್ಲಿ ಮಧ್ಯಾಹ್ನದ ಬಿಸಿಲು ಹೆಚ್ಚಾದ್ದರಿಂದಲೂ, ಗುಡಿಯಲ್ಲಿ ಒಳಗೆ ತಂಪು ಇದ್ದುದರಿಂದಲೂ, ನಾವು ಅಲ್ಲಿ ವಿಶ್ರಾಂತಿಗಾಗಿ ಕುಳಿತು, ಬಾಗಲಕೋಟೆಯಲ್ಲಿ ಕರ್ನಾಟಕ ಇತಿಹಾಸ ಮಂಡಲವನ್ನು ಸ್ಥಾಪಿಸುವ ನಮ್ಮ ಮುಂದಿನ ಕಲ್ಪನೆಗೆ ಮೂರ್ತಸ್ವರೂಪ ಕೊಡುವ ವಿಚಾರದಲ್ಲಿಯೂ ಮುದ್ರಣ ತೆಗೆದುಕೊಂಡ ಶಿಲಾಲೇಖಗಳ ಕಾಗದಗಳನ್ನು ಓದುವದರಲ್ಲಿಯೂ ೧ ಗಂಟೆಯನ್ನು ಕಳೆದೆವು. ಇಷ್ಟರಲ್ಲಿ ನಮ್ಮಲ್ಲಿಯ ವಿನೋದೀ ಮಿತ್ರರಾದ ಶ್ರೀ ಕಲ್ಲೂರ ವಕೀಲರಿಗೆ ಉಪಹಾರದ ನೆನಪಾದ್ದರಿಂದಲೂ, ಸಮೀಪದ ಭೈರವಟ್ಟಿ ಗ್ರಾಮದಲ್ಲಿ ದೊಡ್ಡದೊಂದು ಶಿಲಾಲೇಖವೂ ತೋಟವೂ ಇದೆ ಸಂಗತಿಯು ತಿಳಿದದ್ದರಿಂದಲೂ, ಅಲ್ಲಿಗೇ ಗುಬಗೆಯಿಂದ ಹೊರಟೆವು. ಅಲ್ಲಿ ಊರ ಹೊರಗಿದ್ದ ಅರ್ವಾಚೀನ ಹನುಮಪ್ಪನ ಗುಡಿಯಲ್ಲಿ ಒಂದು ದೊಡ್ಡ ಶಿಲಾಲೇಖವು ನೆರಳಲ್ಲಿ ಇಡಲ್ಪಟ್ಟಿದೆ. ಇದು ಒಳ್ಳೇ ಸ್ಥಿತಿಯಲ್ಲಿದ್ದು, ಅಕ್ಷರಗಳೂ ಬಹು ಸ್ಪಷ್ಟವಾಗಿವೆ. ಇದರಲ್ಲಿಯ ಕಾವ್ಯರಸವನ್ನು ಕನ್ನಡಿಗರಿಗೆ ಅರುಹಲು ಅದನ್ನು ಆದಷ್ಟು ಬೇಗ 'ಕನ್ನಡಿಗ'ದಲ್ಲಿ ಪ್ರಕಟಿಸಬೇಕೆಂದಿರುವೆವು. ಚಾಲುಕ್ಯರ ಮಾಂಡಲಿಕರಾದ ಎಲ್ಬುಗೆಯ ಸಿಂಧ ಮನೆತನದ ಶಿಲಾಲೇಖವದು. ಈ ರಾಜರ ಚಿನ್ಹವಾದ ಸರ್ಪವು ಆ ಶಿಲಾಲೇಖದ ಶಿರೋಭಾಗದಲ್ಲಿದೆ. ಇದರ ಹೊರತಾಗಿ, ಗುಡಿ, ಬಸವಣ್ಣ, ಖಡ್ಗ, ಸೂರ್ಯ ಚಂದ್ರ ಇವೆಲ್ಲ ಶಿರೋಭಾಗದಲ್ಲಿ ಕೆತ್ತಲ್ಪಟ್ಟಿವೆ. ಇದು ೧೦ನೇ ಶತಮಾನದ್ದು. ಹತ್ತಿಮತ್ತೂರದ ದಂಡಿನವನೂ, ಕಿರಿಸಿಡೂರು (ಕಿರಿ + ಸಿರಿಯ + ಊರು) ಅಂದರೆ ಈಗಿನ ಕಿರಸೂರು ಅದರಲ್ಲಿ ಉಲ್ಲೇಖವಾಗಿವೆ. ಇಲ್ಲಿಯ ಕೆಲಸ ಮುಗಿದಾಕ್ಷಣವೇ, ನಮ್ಮ ಮಿತ್ರರು ಆಗ್ರಹಪಡುತ್ತಿರುವಂತೆ ತೋಟಕ್ಕೆ ಹೋಗಿ, ಉಪಹಾರ ಮುಗಿಸಿದೆವು. ಈ ಉಪಹಾರದ ರುಚಿಯೂ, ಆಗಿನ ವಿನೋದಾತ್ಮಕ ಮಾತುಕಥೆಗಳೂ ಬಹು ಸೊಗಸಾಗಿದ್ದರೂ, ವಿಷಯಾಂತರ ಭಯದಿಂದ ಅದನ್ನಲ್ಲಿಗೇ ಬಿಡುವೆವು.

ಆ ಮೇಲೆ ಮತ್ತೆ ಹಳ್ಳೂರಿಗೆ ಬಂದು, ಅಲ್ಲಿ ಸಂಗಮೇಶ್ವರ (ಬಸವೇಶ್ವರವೆಂದೂ ಹೆಸರಿದೆ) ಗುಡಿಯನ್ನು ನೋಡಿದೆವು. ಈ ಗುಡಿಯೂ ಪ್ರಾಚೀನ ಕಾಲದ್ದು. ಜಾತ್ರೆಯು ಈಗಲೂ ಆಗುತ್ತದೆ. ದಿನಾಲು ಪೂಜೆ ಪುನಸ್ಕಾರ ನಡೆದದ್ದರಿಂದ 'ಮೇಲ್ಗುಡಿ'ಯಂತೆ ಕಣ್ಣುಕಪ್ಪಟಿಗಳು ಇಲ್ಲಿರುವದಿಲ್ಲ! ಆದರೆ ಭಕ್ತರು ಗುಡಿಯ ಹೊರಮೈ ಒಳಮೈಗಳಿಗೆಲ್ಲ ಸುಣ್ಣ ಬಡಿಯುತ್ತ ಬಂದಿರುವದರಿಂದ, ಕೆತ್ತುಗೆಯ ಕೆಲಸಗಳ ಸೌಂದರ್ಯವು ಮರೆಯಾಗಿಹೋಗಿದೆ. ಈ ಗುಡಿಯಲ್ಲಿಯ ಹೊರಗಿನ ಕಟ್ಟೆಯಲ್ಲಿ ಒಂದು ಶಿಲಾಲೇಖವು ನೆಡಲ್ಪಟ್ಟಿದೆ. ಅದರಲ್ಲಿ ಕೆಳಭಾಗದಲ್ಲಿಯ ಅಕ್ಷರಗಳು ಅಳಿಸಿವೆ. ಇದು ೧೦ನೇ ಶತಮಾನದ ಶಿಲಾಲೇಖ. ಈ ಶಿಲಾಲೇಖದಲ್ಲಿ ಒಂದು ವೈಚಿತ್ರ್ಯವಿದೆ. ಶಿರೋಭಾಗದಲ್ಲಿ ಯಾವ ಚಿತ್ರಗಳೂ ಇರದೇ, ಮಧ್ಯದ ಭಾಗದಲ್ಲಿ ಕುಳಿತ ಋಷಿಯ ಮೂರ್ತಿಯೂ, ಕೀಳ ಕೆಳಗಿನ ಭಾಗದಲ್ಲಿ ಚಂದ್ರ, ವತ್ಸಧೇನು, ಗುಡಿ, ಸೂರ್ಯ, ಹೆಡೆ ತೆಗೆದು ವೈಸುತ್ತಿಕೊಂಡಿರುವ ಭುಜಂಗ ಹಾಗೂ ಗಣಪತಿ ಇಷ್ಟಿವೆ.

ಶಿಲಾಲೇಖಗಳನ್ನು ಮುದ್ರಿಸುವ ಕಾರ್ಯವನ್ನು ನಮ್ಮ ಮಿತ್ರರು ಸ್ವತಃ ಮಾಡಿದರು. ಇದು ಬಹು ಹಗುರಾದ ಕಾರ್ಯವೆಂಬುದನ್ನು ಎಲ್ಲರೂ ಅಲ್ಲಿ ಮನಗಂಡರು. ಬರುವಾಗ್ಗೆ ಭಗವತಿಗೆ ಹೋಗಲು, ಅಲ್ಲಿ ಶಿಲಾಲೇಖಗಳೇನೂ ಇಲ್ಲವೆಂಬುದು ತಿಳಿದುಬಂದಿತು. ಇಷ್ಟರಲ್ಲಿ ಸಾಯಂಕಾಲವೂ ಆಗಲು ಮೋಟಾರದ ರಭಸದ ವೇಗದಿಂದ ಬೇಗನೇ ಬಾಗಲಕೋಟೆಗೆ ಬಂದು ಸೇರಿದೆವು.

ವಿಶ್ವ ಬ್ರಾಹ್ಮಣ ಸಮಾಜ ಪರಿಷತ್ತು.

ಈ ಪರಿಷತ್ತು ಹುಬ್ಬಳ್ಳಿಯಲ್ಲಿ ಇದೇ ತಾರೀಖು ೨೬-೨೭-೨೮ ಈ ಮೂರು ದಿವಸಗಳಲ್ಲಿ ಜರಗುವದು. ಈ ಮಹಾಸಭೆಯ ಅಧ್ಯಕ್ಷಸ್ಥಾನವನ್ನು "ಸಮಾಜೋನ್ನತಿ" ಎಂಬ ಮಾಸಪತ್ರದ ಸಂಪಾದಕರೂ ಸುಪ್ರಸಿದ್ಧ ವಕೀಲರೂ ಆದ ಶ್ರೀಯುತ ಹರಿ ಗಣೇಶ ಪಾಠಕ ಅಹಮ್ಮದನಗರ ಈ ಮಹನೀಯರು ಸ್ವೀಕರಿಸಲಿಕ್ಕೆ ಸಮ್ಮತಿಸಿದ್ದಾರೆ.

ನಮ್ಮ ಹುಬ್ಬಳ್ಳಿಯ ಪತ್ರ.

ರಾಧಾಕೃಷ್ಣ ಓಣಿಯಲ್ಲಿ ರಸ್ತೆಯನ್ನು ದೊಡ್ಡದಾಗಿ ಮಾಡಹತ್ತಿದ ಕಾರಣ ಅಲ್ಲಿ ಮಣ್ಣು ಕಲ್ಲುಗಳು ಬಿದ್ದಿವೆ. ಆದ್ದರಿಂದ ಗ್ರಹಣದ ದಿವಸ ಜನರು ಓಣಿಯಲ್ಲಿ ಮುಗ್ಗರಿಸಿಕೊಂಡು ಬೀಳುತ್ತಿದ್ದರು! ಅಲ್ಲಿ ಮುನಸಿಪಾಲ್ಟಿಯ ಕೆಂಪು ಕಂದೀಲವೂ ಅಥವಾ ಮನುಷ್ಯನೂ ಯಾರೂ ಇದ್ದಿಲ್ಲ! ಹುಬ್ಬಳ್ಳೀ ನಗರದ ಮುನಸಿಪಾಲ್ಟಿಯ ಸುವ್ಯವಸ್ಥೆಯಿದು!

೯-೧೨-೩೭ನೇ ದಿವಸ ನೀರು ಇಲ್ಲದೇ, ಭಾವಿ ಭಾವಿಗಳನ್ನು ತಿರುಗುವ ಹೊತ್ತನ್ನು ಇಲ್ಲಿಯ ಮುನಸಿಪಾಲ್ಟಿಯವರು ತಂದದ್ದು ಅಭಿನಂದನೀಯವಿದೆ! ನಳಕ್ಕೆ ಅಂದು ಒಂದು ತಾಸು ನೀರು ಬಿಟ್ಟಿದ್ದರೆ ಎಷ್ಟು ನೀರಿನ ಹಾನಿಯಾಗುತ್ತಿತ್ತೋ ದೇವರೇ ಬಲ್ಲ! ಇದಲ್ಲದೆ ಮುನಸಿಪಾಲ್ಟಿಯವರು ಜನರ ಅನುಕೂಲತೆಗಾಗಿ ಹಾಕಿದ ವಾಯರ್ಸ ಪಂಪಾದರೂ ಸುಸ್ಥಿತಿಯಲ್ಲಿದ್ದರೆ ಇದರಿಂದಾದರೂ ಸ್ವಲ್ಪ ಸಹಾಯವಾಗುತ್ತಿತ್ತು! ಆದರೆ ಮುನಸಿಪಾಲ್ಟಿಯ ಕಾರಭಾರಿ ಕೇಳುವರಾರು?

ಇಲ್ಲಿ ಮಧ್ವ ಸಮಾಜದ ವತಿಯಿಂದ ಇಟಗಿ ಮಾರುತಿ ಮಂದಿರದಲ್ಲಿ ಗೀತಾಜಯಂತಿಯ ಬಗ್ಗೆ ಪ್ರವಚನಗಳಾದವು.

ತಾಳಿಕೋಟೆಯ ಶ್ರೀ ಶರಣರು.

ಕರ್ನಾಟಕದಲ್ಲಿ ಶ್ರೀ ಶರಣರೆಂಬ ದೊಡ್ಡ ಸತ್ಪುರುಷರಾಗಿ ಹೋದರು. ವಾಸ್ತವ್ಯವು ತಾಳಿಕೋಟೆ ಪಟ್ಟಣವು ಬಂದಿಷ್ಟರವಳ್ಳಿ ಕಂದಶಾಯಿಗಳ ಸಮಾಧಿ ಮತ್ತು ರಾಯಗುಂಡ ಪದವು ನದಿದು.

ಈ ಸ್ವಾಮಿಗಳು ಬಹಳ ಭಾವಿಕರಿದ್ದರು. ಜಾತಿಯೆಂಬುದು ದ್ರವ್ಯವನ್ನು ದೇವರಿಂದು ತಿಳಿಯುತ್ತಿದ್ದರು. ನಾವು ಜಗತ್ತಿನ ದಾಸರು ಎಂಬ ಭಾವದಿಂದ ವ್ಯವಹಾರದಲ್ಲಿ ಆಚರಿಸುತ್ತಿದ್ದರು. ಇವರು ವೀರಶೈವರಲ್ಲಿ ಕುಂಬಾರರು. ಆದಕಲಿಗಿ ಶ್ರೀ ಅಡಿವಿಸ್ವಾಮಿಗಳೇ ಗುರುಗಳು.

ಇಲಕಲ್ಲಿನ ಪ್ರಸಿದ್ಧ ಸಾಧುಗಳಾದ ಮಹಾಂತಜ್ಜಾ, ಖಾದರಿಯವರಿಗೂ ಶ್ರೀ ಶರಣಸ್ವಾಮಿಗಳವರಿಗೂ ಬಹಳ ಮಿತ್ರತ್ವ. ಆ ಕಾಲದಲ್ಲಿ ಪರಸ್ಪರ ಕಾಣ್ಣಕೊಳ್ಳುವದಕ್ಕೆ ಬರಬೇಕೆಂದು ಈ ಕಾಲದಕ್ಕೆಯೋ ಉಭಯಸಂತರ ನಡುವೆ ಮಾತುಗಳಾಗಿದ್ದವು. ಶ್ರೀ ಶರಣರ ನಿರ್ವಾಣಕ್ಕಿಂತ ೩, ೪ ವರ್ಷ ಮೊದಲು ಮಹಾಂತಜ್ಜಾ ಖಾದರಿಯವರು ಪರಲೋಕವಾಸಿಗಳಾದರು.

ಶಕೆ ೧೮೧೦ ಮಾಘವದ್ಯದಲ್ಲಿ ಶ್ರೀ ಶರಣಸ್ವಾಮಿಗಳು ಶಿವಲೋಕವಾಸಿಗಳಾದರು. ಆ ಕಾಲದಲ್ಲಿ ಮಹಾಂತಜ್ಜಾ ಖಾದರಿಯವರ ಒಂಟೆಯು ರೂಪದಿಂದ ಬಂದು, ಬಹಳವಾಗಿ ಅಳೆದಾಡಿದರು. ಸ್ವಾಮಿಯ ಸಮಾಧಿಯಾದನಂತರ ಒಂಟೆಯು ಅದೃಶ್ಯವಾಯಿತು. ಶರಣಸ್ವಾಮಿಗಳವರ ನಿಕಟವರ್ತಿ ಜನರಲ್ಲಿ ಮುದುಕಿಯು ಹೆಚ್ಚು ಮಿತು ಒಂಟೆಯ ಲೋಕೋತ್ತರ ಚರಿತ್ರವನ್ನು ತಾಳಿಕೋಟೆ ಮತ್ತು ನೆರೆಗ್ರಾಮದ ನಿವಾಸಿಗಳು ನೋಡಿದವರು ಇನ್ನೂ ಎಷ್ಟೋ ಜನರು ಇದ್ದಾರೆ.

ಮಹಾಪುರುಷರ ಸಮಾಧಿಯ ಸ್ಥಳದಲ್ಲಿ ಒಂದು ದೊಡ್ಡ ದೇವಾಲಯವಿದೆ. ಪ್ರತಿ ವರುಷ ಫಾಲ್ಗುಣ ವದ್ಯ (೫)ಗೆ ಜಾತ್ರೆಯಾಗುತ್ತದೆ. ಹಿಂದು ಮುಸಲ್ಮಾನರೆನ್ನದೆ ಜಾತಿಯ ಜನರು ಸರಿಯಾಗಿ ಪೂಜನವನ್ನು ಕೊಡುತ್ತಾರೆ. ಇಲ್ಲಿಯ (ತಾಳಿಕೋಟೆ) ಲೋಕಪ್ರಿಯರಾದ ಶ್ರೀಮಂತ ಮಾಧವರಾವ ದೇಶಮುಖ ಇವರು ಬಹಳ ಸಹಾಯವನ್ನು ಮಾಡುತ್ತಾರೆ. ಸುರಪೂರ ಸಂಸ್ಥಾನದ ಧೊರೆಗಳಾದ ರಾಜಾ ಕೃಷ್ಣಪ್ಪ ನಾಯಕರವರದು ಶ್ರೀ ಶರಣರಲ್ಲಿ ಬಲುಭಕ್ತಿ.

ಮಹಾಪುರುಷರ ವಂಶಸ್ಥರಾದ ಸಾಂಬಪ್ಪ ಶರಣರು ಸಾಂಪ್ರತ ಶ್ರೀ ಶರಣೋತ್ಸವ ದಾಸೋಹಗಳನ್ನು ನಡೆಯಿಸುತ್ತಿರುವರು. ಈ ಮಹನೀಯರು ಸ್ಥಿತಪ್ರಜ್ಞರೂ ಬಹು ಶಾಂತ ಸ್ವಭಾವಗಳೂ ಇರುವರು.

ಶ್ರೀ ಸಾಂಬ ಶರಣಪಾದ.

ಹಿಂ. ಸೇ. ದಲದ

ವ್ಯಾಯಾಮ ಮಂದಿರಗಳು.

ರಾಜಕಾರಣಕ್ಕೂ ವ್ಯಾಯಾಮ ಮಂದಿರಕ್ಕೂ ಏನೂ ಸಂಬಂಧವಿಲ್ಲ.

ಬಾಗಲಕೋಟೆಯಲ್ಲಿ ಶಿಕ್ಷಣ ಶಿಬಿರವು ಪ್ರಾರಂಭವಾದಂದಿನಿಂದ ಹಿಂದುಸ್ತಾನೀ ಸೇವಾದಲದ ವ್ಯಾಯಾಮ ಮಂದಿರಗಳಿಗೆ ರಾಜಕೀಯ ಸಂಬಂಧ ಉಂಟೇ ಎಂಬ ಪ್ರಶ್ನೆಯು ಉದ್ಭವವಾಗಿದೆ. ರಾಜಕೀಯ ಸಂಬಂಧವಿರದಿದ್ದರೆ ಸೇವಾದಲವು ಕೈಕೊಂಡ ಶಾರೀರಿಕ ಶಿಕ್ಷಣ ಕಾರ್ಯವು ಯಶಸ್ವಿಯಾಗುವದೆಂದೂ, ರಾಜಕೀಯ ಸಂಬಂಧವಿಡ ಬಾರದೆಂದೂ ವಿಜಾಪುರ “ನವಕರ್ನಾಟಕವು” ಸೂಚಿಸಿದೆ. ಅದರ ಮೇಲೆ ನನ್ನ ಮತವನ್ನು ನಾವು ಸ್ಪಷ್ಟವಾಗಿ ಪ್ರಕಟಿಸಬಯಸುತ್ತೇವೆ.

ಹಿಂದುಸ್ತಾನೀ ಸೇವಾದಲದ ಕಾರ್ಯಕ್ರಮವು ಮೂರು ಬಗೆಯಾಗಿದೆ (೧) ರಾಜಕೀಯ (೨) ಸಾಮಾಜಿಕ (೩) ಶಾರೀರಿಕವೆಂದು ಮೂರು ವಿಭಾಗಗಳು ಭಿನ್ನ ಭಿನ್ನವಾಗಿವೆ. ನಿಸ್ತೇಜವಾದ ಭಾರತೀಯ ತರುಣರು ತಮ್ಮ ದೇಹವನ್ನು ದೃಢಕಾಯರನ್ನಾಗಿ ಗಟ್ಟಿಗರನ್ನಾಗಿ ಮಾಡಬೇಕೆಂಬ ಒಂದೇ ಒಂದು ಉದ್ದೇಶದಿಂದ ಸೇವಾದಲವು ಈ ವ್ಯಾಯಾಮ ಮಂದಿರಗಳ ಕಾರ್ಯಕ್ರಮವನ್ನು ಕೈಕೊಂಡಿದೆ. ಇದಕ್ಕೂ ರಾಜಕಾರಣಕ್ಕೂ ಏನೂ ಸಂಬಂಧವಿಲ್ಲ. ಬೇಕಾದರೆ ರಾಜಕೀಯ ಮಾತುಗಳನ್ನು ಬೇರೆ ಕಡೆಗಳಲ್ಲಿ ಶಿಕ್ಷಣ ಪಡೆಯಬಹುದು. ಸೇವಾದಲದ ಯಾವ ರಾಜಕೀಯ ವಿಭಾಗಗಳಲ್ಲಿ ವ್ಯಾಯಾಮವನ್ನು ಕಲಿಸುವವರಿಗೆ ಪ್ರವೇಶವಿಲ್ಲ. ವ್ಯಾಯಾಮ ಮಂದಿರಗಳ ವಿಭಾಗಗಳನ್ನು ಮಾಡುವ ಮಂದಿರಗಳಲ್ಲಿ ಶಿಕ್ಷಣ ಪಡೆಯುವ ವ್ಯಕ್ತಿಯಂತೂ ರಾಜಕೀಯ ಸಂಘಗಳ ಸದಸ್ಯನಾಗುವದು ಕಡ್ಡಾಯವಲ್ಲ. ಸೇವಾದಲದ ವ್ಯಾಯಾಮ ಮಂದಿರಗಳು ಎಲ್ಲ ಜಾತಿ ಪಂಗಡದವರಿಗೆ ತೆರೆದಿದ್ದು ರಾಜಕೀಯ ಕಾರ್ಯವನ್ನು ಮಾಡಲು ಬದ್ಧಕಂಕಣರಾದ ತರುಣರಿಗೂ ಇವುಗಳಲ್ಲಿ ಶಿಕ್ಷಣ ಕೊಡಲ್ಪಡುವದು. ಇಷ್ಟರಿಂದಲೇ ನಮ್ಮ ವ್ಯಾಯಾಮ ಸಂಘಗಳು

ರಾಜಕೀಯವೆಂದು ಯಾರು ತಪ್ಪುತಿಳುವಳಿಕೆ ಮಾಡಿಕೊಳ್ಳಬಾರದಾಗಿ ಕೋರುತ್ತೇನೆ. ವ್ಯಾಯಾಮ ಮಂದಿರಗಳಿಗೂ ರಾಜಕಾರಣಕ್ಕೂ ಏನೂ ಸಂಬಂಧವಿಲ್ಲವೆಂದು ಇನ್ನೊಮ್ಮೆ ಹೇಳಿ ಎಲ್ಲ ಜಾತಿಯವರೂ ಎಲ್ಲ ಪಂಗಡದವರು ಎಲ್ಲ ಪಂಥದವರು ಸೇವಾದಲದ ವ್ಯಾಯಾಮ ಮಂದಿರಗಳಲ್ಲಿ ಶಿಕ್ಷಣ ಪಡೆಯಲು ಬರಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ನಾ. ಸು. ಹರ್ಡೀಕರ.

ಕೂಸುಗಳ ಹಲ್ಲುಗಳು ಬೇಗ ಒಡೆಯಲಿಕ್ಕೆ

ಉಪಾಯಗಳು.

೧ ಕೂಸಿಗೆ ಹಲ್ಲು ಬರುವ ಪೂರ್ವದಲ್ಲಿ ಒಸಡೆಗಳು ತಿಂಡಿಕೊಳ್ಳುವವು ಬಾಯಿ ಬೆಚ್ಚಗಾಗುವದು ಜೊಲ್ಲು ಬಹಳ ಸುರಿಯುವದು ಆಮೇಲೆ ಕೆಲದಿವಸಗಳ ನಂತರ ಒಸಡೆಗಳು ಕೆಂಪಾಗಿ ಉಬ್ಬುತ್ತವೆ ಇದಕ್ಕೆ ಹಲ್ಲುಗಳು ಜಗಳೀ ಹಾಕಿದವು ಅನ್ನುತ್ತಾರೆ ಕೂಸು ಒದರಿ ಒದರಿ ಉಚ್ಚಿ ಕೊಳ್ಳುತ್ತಿರುವದು ಕಾಲ್ಮಡಿಯು ಸಾಫ ಆಗುವದಿಲ್ಲ ಕೆಮ್ಮು ಹತ್ತುವದು, ಕಾರಿಕೊಳ್ಳುವದು. ಬಾಯಿ ಹುಣ್ಣಿಗೆ ನಾರುವದು, ಕೂಸು ನಿಸ್ತ್ರಾಣವಾಗುವದು, ಮುಕ್ಕು, ಜ್ವರ, ಕಿವಿ ಹುಣ್ಣು, ಮೈನವೆಗೆ ಮೊದಲಾದ ಅನೇಕ ಬೇನೆಗಳು ಕಾಡಿಕೊಳ್ಳುವವು ಈ ಎಲ್ಲ ಉಪದ್ರವಗಳು ಹಲ್ಲಿನ ಮೊಳಕೆ ಒಡೆದಮೇಲೆ ತಾವೇ ಕಡಿಮೆಯಾಗುವವು. ಆದ್ದರಿಂದ ಬೇಗನೆ ಹಲ್ಲು ಬರುವ ಉಪಾಯ ಮಾಡಬೇಕು. ಪ್ಯಾರೆ ದರೆ ಧಾತಕೀಕುಸುಮ, (ಧಾಯಫೂಲ) ಹಿಪ್ಪಲಿ. ನೆಲ್ಲಿಕಾಯಿ ಇವು ರಸ ಈ ಮೂರನ್ನು ಜೇನತುಪ್ಪದಲ್ಲಿ ಕಲಿಸಿ ಒಸಡೆಗಳಿಗೆ ಹಚ್ಚಿ ತಿಕ್ಕಬೇಕು. ಅಂದರೆ (೨) ಆದಿತ್ಯವಾರದಿವಸ ಸೂರ್ಯೋದಯಕ್ಕೆ ಮೊದಲು ಮಾತನಾಡದೆ ಬಿಳೀಲಕ್ಕಿಯ ಮತ್ತು ಕಪಸಿಯ ಮೂಲದಿಕ್ಕಿನ ಬೇರು ತಂದು ಕೂಸಿನ ಕೊರಳಿಗೆ ಕರೇದಾರದಿಂದ ಕಟ್ಟಿದರೆ ಹಲ್ಲುಗಳು ಅಂದವಾಗಿ ಬೇಗ ಬರುವವು. (೩) ಹಲ್ಲಿನ ಸಂಬಂಧದಿಂದ ಕೂಸು ಬಹಳ ಉಚ್ಚಿಕೊಳ್ಳುತ್ತಿದ್ದರೆ ಬಾಳೆಯ ಮೋಳೆಯೊಳಗಿನ ಹೂವಿನ ರಸ ತೆಗೆದು ಅದರೊಳಗೆ ಜೀರಿಗೆ, ಕಲ್ಲುಸಕ್ಕರೆಯ ಪುಡಿಯನ್ನು ಹಾಕಿ ದಿನಾಲೂ ಮುಂಜಾನೆ ಒಂದೆರಡು ಸವುಟಿನಷ್ಟು ಹಾಕಬೇಕು. ಮತ್ತು ಆ ಬರೇ ರಸವನ್ನು ಒಸಡೆಗಳಿಗೆ ದಿನಕ್ಕೆ ಹತ್ತೆಂಟುಸಾರೆ ಸವರುತ್ತಿರಬೇಕು ಇದರಿಂದ ಎಲ್ಲ ವಿಕಾರಗಳು ಕಡಿಮೆಯಾಗಿ ಹಲ್ಲುಗಳು ಬೇಗ ಒಡೆಯುವವು.

—ದೇವಭೂಜ.

ಕೂಟಪ್ರಶ್ನೆ.

‘ಕನ್ನಡಿಗ’ನ ೨೯ನೇ ಸಂಚಿಕೆಯಲ್ಲಿ ಪ್ರಕಟವಾದ “ವಿ-ಜ-ಯ-ನ-ಗ-ರ”ದ ಪ್ರಶ್ನೆಗೆ ೯ ಜನರು ಉತ್ತರ ಕಳಿಸಿರುವರು. ಅವರಲ್ಲಿ

ಇಬ್ಬರು ೨ ಆಣೆ ತಿಕೀಟುಗಳನ್ನು ಕಳಿಸಿಕೊಟ್ಟಿಲ್ಲವಾದ್ದರಿಂದ ಅವನ್ನು ಬಿಟ್ಟಿರಿಸಿಲ್ಲ. ಉಳಿದ ೭ ಜನರಲ್ಲಿಯೂ ಅಷ್ಟೊಂದು ಸಮಾಧಾನಕರವಾದ ವಿನೋದಪೂರ್ಣವಾದ ವಾಕ್ಯವನ್ನು ಯಾರೂ ಬರೆದುಕಳಿಸಿಲ್ಲ. ಆದರೆ, ಜನರಿಗೆ ಉತ್ತೇಜನಕೊಡುವ ಉದ್ದೇಶದಿಂದ ನಮ್ಮ ಚಂದಾದಾರ ೨೨೮ ನಾಗೇಶ ಶಂಕರ ನರಗುಂದ ಇಂಗ್ರೇಜಿ ಶಾಳಾ ಮಾಸ್ತರ ಹೊಂಬಳ ಇವರಿಗೆ ೨ ರೂ ಬಹುಮಾನವನ್ನು ಕೊಟ್ಟದೆ ಅವರ ಉತ್ತರ:—

ವಿಧಿಯನ್ನು ಜಯಿಸಲು ಯತ್ನಿಸುವದು, ನಪುಂಸಕನು ಗಣಿಕೆಯನ್ನು ರಮಿಸಿದಂತೆಯೇ.

ಇನ್ನು ಜಯತೀರ್ಥ ಜಹಗೀರದಾರ ಸಾ॥ ಬಾಗಲಕೋಟೆ ಈತನು ಸಣ್ಣ ವಿದ್ಯಾರ್ಥಿಯಾಗಿದ್ದರೂ ಕೂಟಪ್ರಶ್ನೆಯನ್ನು ಬಿಡಿಸಲು ಪ್ರಯತ್ನಿಸಿದ್ದರಿಂದ, ಅವನ ಉತ್ತರವನ್ನು ಮಾತ್ರ ಉತ್ತೇಜನಾರ್ಥವಾಗಿ ಪ್ರಕಟಿಸುತ್ತೇವೆ—

ವಿಟ್ಠಪ್ಪನು ಚಟ್ಟಪ್ಪನೊಡನೆ ಯಥೇಷ್ಟವಾಗಿ ನಗುತ್ತಿದ್ದರೂ ಗಟಾರದೊಳಗೇ ರಮಿಸುತ್ತಲಿದ್ದನು.

ಛಿ! ಥೂ!! ಬುದ್ಧಿವಂತಗಿರಿ!!!

(೧) ಹೆಣ್ಣುಮಕ್ಕಳು ಒಗೆಯುತ್ತಿರುವಾಗ್ಗೆ ನದಿಯ ದಂಡೆಯ ಮೇಲೆ ಅಥವಾ ಇನ್ನಾವ ಜಲಾಶಯದ ಬಳಿಯಲ್ಲಿ ನೋಡುತ್ತ ಕೂಡ್ರುವ ಕಂಟಕ ಗಂಡುಮಕ್ಕಳಿಗೆ ಮೂರ್ಖರೆಂದರೆ ಸಾಕಾದೀತೇನು? ಉದ್ಯೋಗಂ ಪುರುಷಲಕ್ಷಣಂ ಎಂಬ ಬಂಗಾರದಂಥ ಮಾತಿನ ವಿಚಾರವು ಎಲ್ಲಿ ಉಳಿಯಿತು?

(೨) ಗಂಡುಮಕ್ಕಳು ಎದುರಿನಲ್ಲಿರುವಾಗ್ಗೆಯೂ ಅಳುಕಿಗೆಟ್ಟು ನ್ಯಾಯವಾದ ಅಲೆಯುವ ಮತ್ತು ಮೈಮರೆತು ಮರ್ಯಾದೆ ಬಿಟ್ಟು ನದಿಯ ಬೈಲಿನಲ್ಲಿ ಬಹಿರ್ದೆಶಕ್ಕೆ ಕುಳಿತುಕೊಳ್ಳುವ ಹೆಣ್ಣುಮಕ್ಕಳಿಗೆ ಮೂರ್ಖರೆಂದರೆ ಸಾಕಾದೀತೇನು? "ನ್ಯಾಯ ನೀತಿ ಶಂಕರ"

---

* ಒಡಪು. *

ಕೂಟ ಪ್ರಶ್ನೆ.

ಭಾ. ಷ. ॥ ಕೊರಳ ಕೊರೆದರೆ ರುಧಿರವಿಲ್ಲ ।
ಕ್ಷೀರಕರೆವುದು ಗೋವಲ್ಲ ।
ಕ್ಷೀರದಲಿ ಪುಟ್ಟುವದು ಹೇಳಲಿ ಕ್ಷೀರಚರವಲ್ಲ ॥
ಕ್ಷೀರ ಕುಡಿವುದು ಮಗುವದಲ್ಲ ।
ಕ್ಷೀರ ಸಾಗರ ಸುತೆಯವಲ್ಲ ।
ವೀರನಾರಾಯಣನ ಭಕುತನ ಗುಟ್ಟನರಿಯಲ್ಲ ॥ ೧ ॥

— ನಾರಾಯಣ ಶಂಕರ.

(ಸೂಚನೆ:— ಮೇಲಿನ ಪದ್ಯದ ೩ ನೇ ಚರಣದೊಳಗಿನ 'ಕ್ಷೀರ' ಶಬ್ದದ ಅರ್ಥವು 'ನೀರು' ಎಂದೂ, ಉಳಿದ ಕಡೆಯಲ್ಲಿ 'ಹಾಲು' ಎಂದೂ ತಿಳಿಯತಕ್ಕದ್ದು ಇದರಲ್ಲಿ ಬೇರೆ ಬೇರೆ ನಾಲ್ಕು ಭಾಗಗಳಿರುತ್ತವೆ)

ನಾನೊಬ್ಬ ದೊಡ್ಡಮನೆತನದವನಿದ್ದೇನೆ ನನ್ನ ಹೆಸರಿನ ಮೊದಲಿನ ಒಂದು ಅಕ್ಷರ ತೆಗೆದರೆ— ಕೌನ್ಸಿಲ್ ಮೆಂಬರನಾಗುವೆನು. ಮೊದಲಿನ ಎರಡು ಅಕ್ಷರ ತೆಗೆದರೆ— ಮುಸಲ್ಮಾನ ನಾಗುವೆನು. ಮೊದಲಿನ ಮೂರು ಅಕ್ಷರ ತೆಗೆದರೆ— ಚಲೋಸ್ಥಿತಿಯವನೆಂದಾಗುವೆನು. ೧ ನೇ ೩ ನೇ ಅಕ್ಷರ ತೆಗೆದರೆ— ಕೀಳುಸ್ಥಿತಿಯವನೆಂದಾಗುವೆನು- ಅದರೆ ನನ್ನ ಹೆಸರೇನು? ಬಿ ಎಸ್. ಹೊಸೂರ.

ಚಕ್ರಬಂಧ.



ಈ ಒಂಭತ್ತು ಮನೆಗಳಲ್ಲಿ ಒಂಭತ್ತು ಅಕ್ಷರಗಳಿರುವವು ಒಂದೊಂದು ಅಕ್ಷರಗಳ ಅರ್ಥ ಕ್ರಮವಾಗಿ ಹೀಗಿರುವವು. ೧ ಲಕ್ಷ್ಮೀ, ೨ ಇಲ್ಲ, ೩ ಅಕಾರ, ೪ ವೇದ, ೫ ಗರುಡ, ೬ ಕೂಡು ೭ ಸಂಕ್ಷಿಪ್ತ, ೮ ಬ್ರಹ್ಮ, ೯ ತಿಳಿದವ ಹೀಗೆ ಆಗುವವು- ಕ್ರಮವಾಗಿ ಮೂರು ಮೂರು ಅಕ್ಷರಗಳನ್ನು ಜೋಡಿಸುತ್ತಾ ಹೋದರೆ (೧) ಲಕ್ಷ್ಮೀ ಉಗುಳು. (೨) ವೇದಬಲ್ಲ - (೩) ಅದರ ತಿಳಿದವ ಹೀಗೆ ಅರ್ಥವಾಗಬೇಕು ಈ ಪ್ರಕಾರ (೯) ಮನೆಗಳಲ್ಲಿ ಒಂಭತ್ತು ಅಕ್ಷರಗಳನ್ನು ಹಾಕಬೇಕು ಬೇಕಾದವರು ಅಕ್ಷರಗಳನ್ನು ಬರೆಯಿರಿ-

ರಾಮಭಕ್ತ.

೩ ಕುದುರೆಗಳಿವೆ ೧ ಜೀನು ಇದೆ- ಈ ಜೀನನ್ನು ೧ ನೇ ಕುದುರೆಗೆ ಹಾಕಿದರೆ ಅದು ೨-೩ ನೇ ಕುದುರೆಗಳ ಎರಡುಪಟ್ಟು ಬೆಲೆಯಾಗುತ್ತದೆ. ಅದೇ ಜೀನನ್ನು ೨ ನೇ ಕುದುರೆಗೆ ಹಾಕಿದರೆ ಅದು ೧-೩ ನೇ ಕುದುರೆಗಳ ಮೂರುಪಟ್ಟು ಬೆಲೆಯಾಗುತ್ತದೆ. ಅದೇ ಜೀನನ್ನು ೩ ನೇ ಕುದುರೆಗೆ ಹಾಕಿದರೆ ಅದು ೧-೨ನೇ ಕುದುರೆಗಳ ನಾಲ್ಕುಪಟ್ಟು ಬೆಲೆಯಾಗುತ್ತದೆ ಆದರೆ ಮೂರು ಕುದುರೆಗಳ ಬೆಲೆ ಎಷ್ಟು! ಮತ್ತು ಜೀನಿನ ಬೆಲೆ ಎಷ್ಟು!

ಮಲ್ಲಪ್ಪ ಕೊಣ್ಣೂರ ದೇವಾಂಗ.

---

೩೨ ನೇ ಸಂಚಿಕೆಯ ಒಡಪುಗಳು:—

೭೨೧ ಮತ್ತು ೪೨೨

೧) ವೀ. ಸಿ. ವಿರುಪಾಕ್ಷಿ ೨ ಬೆಳಗಾವ ೨) ಪ್ಪ. ಬಿ. ಕುಲಕರ್ಣಿ ೨ ರೋಣ ೩) ಪ್ಪ. ಬಿ. ಕುಲಕರ್ಣಿ ೨ ಭಗವತಿ ೪) ಬಾಬೂರಾವ ಪಾಟೀಲ ೧ ಬಳ್ಳೊಳ್ಳಿ ೫) ಧೀ ಧೊಂ. ಕುಲಕರ್ಣಿ ೧ ಸಿಂದಗಿ ೬) ನ. ಕೃ. ಕುಲಕರ್ಣಿ ೧ ಹುಬ್ಬಳ್ಳಿ ೭) ಗು. ನಿಂ ಹಳ್ಳೂರ ೧ ಬಾಗಲಕೋಟೆ ೮) ಗು ಕೃ. ದೇಶಪಾಂಡೆ ೧ ಬಾಗಲಕೋಟೆ ೯ ಶಿ ಸಂ ಮಠ ೧ ಬಳ್ಳೊಳ್ಳಿ ೧೦) ಎ ಎಸ್ ಪರ್ವತಿ ೨ ಬಾಗಲಕೋಟೆ ೧೧) ಭು. ಭ್ರ, ಒಂದುಗುದರಿ ೨ ಬಾಗಲಕೋಟೆ ೧೨) ಮ ವೀ. ಕಲಕೇರಿ ೧ ಗುಳೇದಗುಡ್ಡ ೧೩) ಸಾ. ನಾ. ಜೋಶಿ ೨ ಮೈಸೂರ ೧೪) ಗ. ಗು ಶಾಸ್ತ್ರಿ ೨ ಮಹಾಬಲೇಶ್ವರ ೧೫) ಧೀ. ರಾ. ೨ ಬಿಜಾಪೂರ ೧೬) ಇಟಗಿ ಗೋವಿಂದರಾವ ೨ ೧೭) ವ್ಯ. ವಾ. ಕಪೂರ್ರ ೨ ಅಥಣಿ ೧೮] ಮ. ವೀ ಉಪ್ಪಿನ ೨ ದೇವೀಹೊಸೂರ ೧೯) ಮಲ್ಲಪ್ಪ ಕೊಣ್ಣೂರ ೧ ಗದಗ ಬೆಟಗೇರಿ ೨೦) ನಾ. ಕೀ. ಮನುಮಾಚಾರ್ಯ ೨ ಬೆನಕೊಪ್ಪ ೨೧) ಎಸ್. ಆರ್. ಚಿಟ್ನೂರ ೨ ಸಾಗರ ೨೨) ಗು. ಗು. ಚವಟಿ ೧ ಹಾವೇರಿ ೨೩) ರಾ ವಾ. ಶೆಟ್ಟಿ ೨ ಭೋಜ ೨೪) ಧೀ. ಕ. ಜೋಶಿ ೨ ಬದಾಮಿ ೨೫) ಜ. ಕ ಹಾವೇರಿ ೧ ೨೬] ಆರ್. ಜಿ. ಜೋಶಿ ೨ ರಾಯಚೂರ ೨೭] ರಾ. ಬಾ. ಸೊಪ್ಪಿಮಠ ೨ ೨೮] ರಾ. ಶಿ. ಹವಳಗಿ ೨ ಗುಳೇದಗುಡ್ಡ ೨೯] ಶಿ. ಭಾ ಮನುಮಾಚಾರ್ಯ ೨ ಕೊಣ್ಣೂರ ೩೦] ವಾ ಕುಲಕರ್ಣಿ ಕೊಣ್ಣೂರ ೨ ೩೧] ಜ ಜಹಗೀರದಾರ ೨ ಬಾಗಲಕೋಟೆ ೩೨] ಕೆ ಕೆ. ಕುಲಕರ್ಣಿ ೨ ಮೈಲಹೊಂಗಲ

೩೩ ನೇ ಸಂಚಿಕೆಯೊಳಗಿನ ಒಡಪಿಗೆ ಉತ್ತರ:—

೬. ಮತ್ತು ನಾಗೇಶ.

೧] ಗು ಕೃ ಹುನಗುಂದ ೧ ಬಾಗಲಕೋಟೆ ೨] ಶಿಂ ಶ. ತಾಳಿಕೋಟೆ ೧ ಬಾಗಲಕೋಟೆ ೩] ಮ ವೀ. ಕಲಕೇರಿ ೧ ಗುಳೇದಗುಡ್ಡ ೪] ಖ್ಯಾದೀ ಎಸ್. ಜಿ ಬೇಗಿ ೧ ೫] ಎಸ್ ಈಶ್ವರಯ್ಯ ಗುಲ್ಬರ್ಗಾ ೧ ೬] ಅಣ್ಣಸಾ॥ ದಾವ ಸಾ॥ ಚಚಡಿ ೧ ೭] ಗು. ಗು ಚವಟಿ ಹಾವೇರಿ ೧ ೮] ಪಿ. ವೆಂಕಟಾಚಾರ್ಯ ಮಾನವಿ ೩ ೯] ವ್ಯ. ವಾ ಕರ್ಪೂರ ಅಥಣಿ ೧೦] ಸೈದಸಾಬ ಮ॥ ಖಾ॥ ಸಾ॥ ಮಲ್ಲಾ ಅಥಣಿ ೧ ೧೧] ಗಿ. ಪಿ ಮಂಟೀ ಗುಳೇದಗುಡ್ಡ ೨ ೧೨] ವಾ. ಬಾ ಕುಲಕರ್ಣಿ ರೋಣ ೨ ೧೩] ಎ. ತು ಪಾಳವೇಕರ ಲಕ್ಷ್ಮೇಶ್ವರ ೧ ೧೪] ಇಟಗಿ ಗೋವಿಂದರಾಯ ೨ ೧೫] ವಾ. ರಾ ದೇಶಪಾಂಡೆ ಬಾಗಲಕೋಟೆ

ಗುಣ ಬರದಿದ್ದರೆ ಹಣ ಪರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ ಗುಟಿಕಾ

ಈ ಬಲವಂತ ಗುಟಿಕೆಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಶಕ್ತಿವರ್ಧಕ ಅರ್ಕಗಳನ್ನು ವೈದ್ಯಕೀಯ ಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ ಪಿತ್ತ ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣಿ, ಜೀರ್ಣಜ್ವರ, ಆಮ, ಮಂದ ಕ್ಷಯ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ ನಾಶವಾಗುವವು. ಹಾಗೂ [illegible] ಆಹಾರ [illegible] ವಿಲ್ಲ. [illegible] ಶಕ್ತಿ [illegible] ಪ್ರಾಪ್ತವಾದ ನಷ್ಟ ಸತ್ವವು ಎಂದೂ ತಿರುಗಿಲ್ಲ. (ಎಲ್ಲ ದಿವಸ ತಕ್ಕೊಂಡು ಹಾಕಿ ಮಾಡಿಕೊಳ್ಳಬಾರದು.) ಇದರಿಂದ [illegible] ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ದಾತು [illegible] ಪೌಷ್ಟಿಕತ್ವ ಪ್ರಾಪ್ತವಾಗುವದು. ಇದರ ಖರೆ ಯೋಗ್ಯತೆಯು ಸೇವಿಸಿ ನೋಡಿದರೆ ಗೊತ್ತಾಗುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗೆ ೨-೪-೦, [illegible] ೬-೦-೦, ಇದಲ್ಲದೆ ೧ ಡಬ್ಬಿ [illegible] ಪೂರ್ಣ ಗುಣಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸಃ— ಎಸ್ ಬಿ [illegible] ಮತ್ತು ಸನ್ಸ್.
ಮು. ಪೋಸ್ಟ ನಿಪ್ಪಾಣಿ (ಜಿ. ಬೆಳಗಾವ.)

ಕರ್ನಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯುಲರ ಸ್ಕೂಲಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ ಕಳಿಸುವದಕ್ಕೆ ಕಲಿಸಲಾಗುವದು ಹಾಗೂ ಉಪಜೀವನ ಸಾಧಿಸಿಕೊಳ್ಳಲು ಬಹು ಉಪಯುಕ್ತವಾದ ಹೊಲಿಗೆ, ಕಸೂತಿ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು. ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಇತ್ತು ಕೊಟ್ಟು ಶಿಕ್ಷಣವನ್ನು ಕೊಡಲಾಗುವದು.

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಲೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸ॥ ಲಕ್ಷ್ಮೀಬಾಯಿ ಕುಂಭಕೋಣ,
ವ್ಯವಸ್ಥಾಪಕರು, ಕ. ಮ. ವಿದ್ಯಾಲಯ, ಧಾರವಾಡ.

ಟೇಬಲ್ ಟೈಂಪೀಸ್ ಇನಾಮ.

ಈ ಪಕ್ಕದಲ್ಲಿ ಕಂಡ ಫೌಂಟನ್ ಪೆನ್ನಾವು ಇಂಗ್ಲಂಡಿನಲ್ಲಿ



ತಯಾರಾದ ಗುಣವುಳ್ಳದ್ದು ಇದಕ್ಕೆ ೧೪ ಕೆರೆಟಿನ ಭಂಗಾರದಂಥ ನಿಬ್ಬು ಹಾಕಿದೆ. ಈ ಪೆನ್ನಾವಿನಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ತಿಂಗಳೊಳಗಾಗಿ ಈ ಪೆನ್ನಾವನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೇಬಲ್ ಟೈಂಪೀಸ್ ಸಹಿತ ಪೆನ್ನಾ ೧ಕ್ಕೆ ೩-೮-೦

ವಿಳಾಸ- ಪೀಟರ್ ವಾಚ್ ಕಂಪನಿ.
ಪೋ॥ ಬಾಕ್ಸ ನಂ. ೨೭, ಮದರಾಸು.

ಬಾಗಲಕೋಟೆ, ವಿಜಾಪುರ ಮೋಟಾರ ಸರ್ವಿಸ ಪ್ರಾರಂಭವಾಗಿದೆ!

ಬೆಳಗಾವಿಗೆ ಬಾಗಲಕೋಟೆಯಿಂದ ೩॥ ರೂ. ಹಾಸಲು ಮುಂದ್ಹಾಂ ಮಾಡಲ್ಪಟ್ಟಿದೆ.



ವಿಜಾಪೂರ ಜಿಲ್ಲೆಯಲ್ಲಿಯ ಮತ್ತು ಸುತ್ತು ಮುತ್ತಲಿನ ಖಾಸಗಿ ವ ಸರ್ವಿಸಿನ ಮೋಟಾರ ಮಾಲೀಕರ ಸೋಯಿ ದೊರೆವಾಗಲೆಂದು ಆರ್. ಜಿ. ಚವ್ಹಾಣ ಎಂಡ ಸನ್ಸ, ಬೆಳಗಾವ. ಇವರು ತಮ್ಮ ಜನರಲ ಮೋಟಾರ ಅಕ್ಸೆಸರಿ ಸ್ಟೋಅರ್ಸದ ಶಾಖೆಯನ್ನು ತಾ॥ ೧೦ ಸಪ್ಟೆಂಬರ ೧೯೨೭ನೇ ಇಸ್ವಿಯಿಂದ ಬಾಗಲಕೋಟೆಯಲ್ಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ನಾಮಾಂಕಿತ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಶೆವ್ರಲೇಟ, ಓವ್ಹರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯೂಬ್ಸ, ಗ್ರೀಸ, ಮೋಬಿಲ ಆಯಿಲ್, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯ ದರದಿಂದ ಸಿಗುವವು. ಒಂದು ವೇಳೆ ವ್ಯಾಪಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರದಿಂದ,

ಚಾಲಕಃ— ವಾಯ್. ಜಿ. ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಹಲ್ಕನಾಯಝಿಂಗ ಮಾಡಿ ಕೊಡುವೆವು.

☞ ಬಾಗಲಕೋಟೆ-ಬೆಳಗಾವಿ, ಬಾಗಲಕೋಟೆ-ಇಳಕಲ್ಲ ಸರ್ವಿಸ ಯಥಾಪ್ರಕಾರ ನಡೆದಿದೆ

GRAMAPHONE COMPLETE Rs. 10.

ಗ್ರಾಮೊಫೋನ್.

ಎಂಬ ಹಾಡುಗಾರಿಕೆಯ ಯಂತ್ರವು.

ಮೊದಲಿನ ಕ್ರಯ ರೂ. ೩೫-೦-೦. **ಈಗಿನ ಕ್ರಯ ರೂ. ೧೦-೦-೦.**

ಈ ಯಂತ್ರವು ವಿಲಾಯತಿಯಲ್ಲಿ ತಯಾರಾದದ್ದು. ಇಂಗ್ಲೀಷು, ಕನ್ನಡ, ಹಿಂದುಸ್ಥಾನಿ, ಇಂಗ್ಲೀಷು ವಾದ್ಯ ಮುಂತಾದ ಪದಗಳನ್ನು ಹೇಳುವದು. ಲಗ್ನದ ಮನೆ, ನಾಟಕಶಾಲೆ ಮುಂತಾದ ಜನಕೂಡುವ ಸ್ಥಳದಲ್ಲಿ ಉಪಯೋಗಿಸಲು ಬಹು ಚನ್ನಾಗಿದೆ. ನೋಟಕ್ಕೆ ಲಕ್ಷಣವಾಗಿರುವಂತೆಯೂ, ಕ್ರಯದಲ್ಲಿ ಸುಲಭವಾಗಿಯೂ ಇರುವಂತೆ ಬಹು ಬಲಿಷ್ಟವಾದ ಸಾಮಾನುಗಳಿಂದ ಈ ಯಂತ್ರವನ್ನು ತಯಾರಿಸಿದೆ. ಸುಂದರವಾದ ಹಾರ್ನ್ ಎಂಬ ಪದ ಹೇಳುವ ಕೊಳವೆ ಇದೆ ನಿಧಾನವಾಗಿಯೂ ಜಾಗ್ರತೆಯಾಗಿಯೂ, ಪದ ಹೇಳಿಸಲು ಕೀಲು ಇದೆ. ಈ ಯಂತ್ರವನ್ನು ಎಲ್ಲಿ ಬೇಕಾದರೂ ಕೈಯಲ್ಲಿ ಹಿಡಿದುಕೊಂಡು ಹೋಗಲು ಅನುಕೂಲವಾದಂಥ ಸುಂದರವಾದ ಕೈ ಪೆಟ್ಟಿಗೆಯಲ್ಲಿಟ್ಟಿದೆ.

ಡಬಲ್ ಸೈಡ್ ಎರಡು ಕಡೆಯೂ ಪದವಿರುವ

೧ ರೆಕಾರ್ಡ ಸಹಿತ ಗ್ರಾಮೊಫೋನ್ ಯಂತ್ರದ ಪೆಟ್ಟಿಗೆ ಕ್ರಯ ರೂ. ೧೧-೦-೦

ಹೆಚ್ಚಿಗೆ ರೆಕಾರ್ಡ ಬೇಕಾದರೆ, ಪ್ರತ್ಯೇಕ ರೆಕಾರ್ಡ ೧ಕ್ಕೆ ರೂ. ೧-೪-೦.

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಮತ್ತು ಟಪಾಲು ಖರ್ಚು ಪುಕ್ಕಟ್ಟಾಗಿ ಕಳುಹಿಸುವೆವು.

ವಿಳಾಸ:— ಬ್ರಿಟಿಷ್ ಟ್ರೇಡಿಂಗ್ ಕಂಪನಿ,
ಪೋಸ್ಟ ಬಾಕ್ಸ ನಂ. ೧೨೩, ಮದರಾಸು.

ಸ್ಟ್ಯಾಂಡರ್ಡ್ ಕಾಫಿಪುಡಿ.

ಅಖಿಲಭಾರತ ಸಕಲ ಕಲಾವಸ್ತು ಪ್ರದರ್ಶನದಲ್ಲಿ ರಜತ ಪದಕವನ್ನೂ, ಸರ್ಟಿಫಿಕೇಟುಗಳನ್ನೂ ಬಹುಮಾನವಾಗಿ ಪಡೆದ ಸ್ಟ್ಯಾಂಡರ್ಡ ಕಾಫಿಪುಡಿಯು ಅತ್ಯಂತ ಮನೋಹರವೂ, ರುಚಿಕರವೂ ಆದದ್ದು ತರಿಸಿ ಪರೀಕ್ಷಿಸಿ ನೋಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲೆಕ್ಟ್ರಿಕ್, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

ಪೌಂಡ ೧ಕ್ಕೆ ೧-೪-೦ ಮತ್ತು ೧-೨-೦.

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಪ್ಪಾ ಜಾಲವಾದಿ.
ಸ್ಟೇಶನರ್ಸ ಬಾಗಲಕೋಟಿ.

ರಾಜವೈದ್ಯ ನಾರಾಯಣಜಿ ಕೇಶವಜಿ.
೫೭. ಚೀನಾಬಜಾರ್, ಮದ್ರಾಸು.

S.U.N.&CO.
BENARES CITY.

ಬನಾರಸ್ ರೇಶ್ಮೀ ಸೀರೆಗಳು.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೀ ವಸ್ತ್ರಗಳನ್ನು ಕೊಂಡುವದರಿಂದ ವಿ. ಪಿ. ಮೂಲಕ ಕಳುಹಿಸಲಾಗುವದು. ಬನಾರಸ್ ರೇಶ್ಮೀ [illegible] ಅಂಚಿನ ಸೀರೆಗಳು [illegible] ಬನಾರಸ್ ಸೀರೆಗಳ [illegible] ವರೆಗೆ [illegible] ವರೆಗೆ [illegible] ವರೆಗೆ [illegible] 15 ರವರೆಗೆ [illegible]

ವಿಳಾಸ:—[illegible] ನಾರಾಯಣ [illegible]
ಕಂಪನಿ [illegible] ಬನಾರಸ್

For Ladis and Gents' Insurance

in

The General and Bharat Insurance Societies, Ltd,

and for

Wholesale Supply of :—

1) Automodiles
(2) Sporting Materirls
(3) High-Class Tea and Coffee
(4 Cagrs and Cigarette
(5) Surgical Instruments, and Drugs
(6) His Master's Voice Phones, and Records
(7) Cycles, Stoves and Gas Lights
and
(8) Up-to-date Books

Apply to:—

***B. S. Tiuley* B A.**
BAGALKOT.

ವರರು ಬೇಕಾಗಿರುವರು!

ಮೆಟ್ರಿಕ್ಯುಲೇಶನ್ [illegible] ವಿದ್ಯಾರ್ಥಿ [illegible] ಕುಟುಂಬ ನಿರ್ವಾಹಕ್ಕೆ ಶಕ್ತಿಯುಳ್ಳ ತರುಣರು.

ಮೂರು ಬಾಲಿಕೆಯರ ವಯಸ್ಸು ೧೮-೧೬ II. III. VI Form [illegible] ಹೆಚ್ಚಿನ ವಿವರಕ್ಕೆ ಪತ್ರವ್ಯವಹಾರ ಮಾಡಿರಿ.

ಕಾರ್ಡಿನ C/o- ಕನ್ನಡಿಗ.

ಶ್ರೀ ಗುಬ್ಬಿ ಚನ್ನಬಸವೇಶ್ವರ ನಾಟಕ ಕಂಪನಿ

ಗದಗಿನ ಜನರು ಒಂದೇ ಮಾಸದಲ್ಲಿ ನಡೆಯುವ "ದನಗಳ ಪ್ರದರ್ಶನ" ಕಾಲದಲ್ಲಿ, ಮೇಲ್ಕಂಡ ನಾಟಕ ಕಂಪನಿಯವರು ಮತ್ತು ಇದರ ಶಾಖೆಯಾದ ಬಾಲಕರ ಸಂಘವೂ ಸಹಾ, ಹಾನಗಲ ಮಹಾಸ್ವಾಮಿಗಳ ಪಕ್ಕದಲ್ಲಿ ವಿದ್ಯುಚ್ಛಕ್ತಿ ದೀಪಗಳಿಂದ ಶೃಂಗಾರವಾಗಿ ಅಲಂಕರಿಸಲ್ಪಟ್ಟ ಎರಡು ನಾಟಕ ಮಂದಿರಗಳಲ್ಲಿ, ಅದ್ಭುತ ಟ್ರಾನ್ಸ್‌ಫರ್. ಮತ್ತು ಹೊಸ ಸೀನರಿಗಳಿಂದಲೂ, ಹೊಸ ಉಡುಪುಗಳಿಂದಲೂ, ಅನೇಕ ಘನವಾದ ನಾಟಕಗಳನ್ನಾಡುವರು. ಇಂಥಾ ಸುಸಂಧಿ ಮತ್ತು ಅಪೂರ್ವ ಸಮಯವನ್ನು ಕಳೆದುಕೊಳ್ಳದೇ, ಸರ್ವರೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಸಹಕಾರ ಸಂಘ

ಈ ಸಹಕಾರ ಸಂಘಗಳಿಗೆ ಬೇಕಾಗುವ ನಮೂನೆಗಳನ್ನು [illegible] ಚ್ಛಾಹಾಕಿಸಿ ನಮ್ಮಲ್ಲಿ ಮಾರಲಿಕ್ಕೆ ಇಟ್ಟಿರುತ್ತೇವೆ. ಸಾವಕಾರ ಮಂಡಳಿಗಳಿಗೆ ಬೇಕಾಗುವ ಅರ್ಜಿ ಸಾಲ ಬೇಡುವ ಅರ್ಜಿ ಮುದ್ದತ [illegible] ಡುವ ಅರ್ಜಿ ಮೊದಲಾದ ಎಲ್ಲ ನಮೂನೆಗಳೂ ಇವೆ.

ವ್ಯವಸ್ಥಾಪಕರು— ವಿದ್ಯಾರಣ್ಯ ಮುದ್ರಣ ಮಂದಿರ
ಬಾಗಲಕೋಟೆ.

|| ಶ್ರೀ ಮಾರುತಿ ಪ್ರಾಸಾದಿಕ ||

ಕನ್ನಡ ಸಂಗೀತ ನಾಟಕ ಮಂಡಳಿ

ಇವರು

ಬಾಗಲಕೋಟೆಗೆ ಬೇಗನೆ

ಬರುವರು.

ಮತ್ತು ತಾಜ ನಾಟಕ ಶಾಲೆಯಲ್ಲಿ ತಮ್ಮ ಲೋಕಪ್ರಿಯ, ಅಜಾ ನಗಳಾದ ಪಟ್ಟಾಭಿಷೇಕ, ಮಹಾನಂದಾ, ಪದ್ಮಾವತಿ ಕಬೀರದಾಸ, ಒವೇ ಮೊದಲಾದವುಗಳನ್ನು ಬೇಗನೇ ಪ್ರಾರಂಭಿಸುವರು. ರಸಿಕರಾದ ನಾಗರಿಕರೆಲ್ಲ ಅವಶ್ಯವಾಗಿ ಪ್ರೋತ್ಸಾಹಿಸಬೇಕಾಗಿ ಬಿನ್ನಹ.

ವ್ಯವಸ್ಥಾಪಕ.

ಲಘುಕಾವ್ಯಮಾಲಾ.

ಸಂಪಾದಕ— ಶ್ರೀ ಎಸ್. ವ್ಹಿ. ಕುಲಕರ್ಣಿ ಬಿ. ಎ. ಗದಗ. ಈ ಮಾಲೆಯ ನಾಲ್ಕನೆಯ ಪುಷ್ಪವಾದ "ಪಾಕ್ಯೊಂಬೆ" ಎಂಬುದೊಂದೇ ಹೊಸ ವರುಷದ ಮೊದಲನೆಯ ಪುಷ್ಪವು ವರ್ಷಕ್ಕೆ ಒಟ್ಟು ಆರು ಕುಸುಮಗಳು ವಾಚಕರಿಗರ್ಪಿಸಲ್ಪಡುವವು. ಚಿಕ್ಕಮಕ್ಕಳಿಗೂ ಮಹಿಳೆಯರಿಗೂ ಸುಭೆಧವಾಗಿ ತಿಳಿಯಬೇಕಾದರೆ ಇದೊಂದೇ ಕಾವ್ಯಮಾಲೆಯು. ವರ್ಷಕ ವರ್ಗಣಿ ಕೇವಲ ೦—೮—೦ ಮಾತ್ರ.

ಈ ಮಾಲೆಯ ಮೊದಲಿನ ಮೂರು ಪುಷ್ಪಗಳು ಮೂರಾಣೆ ತಿಕೀಟು ಕಳುಹಿಸಿದರೆ ದೊರಕುವವು!

ಭದ್ರವಾದ ಧನವಿನಿಯೋಗ ಮತ್ತೂ

ಮನೆತನಕ್ಕೆ ಭೂಷಣವಾದ ಆಸ್ತಿ!!

ಶ್ರೀಕೃಷ್ಣ, ಶ್ರೀರಾಮ, ಮಹಾಲಕ್ಷ್ಮಿ, ಸರಸ್ವತಿ ಇವೇ ಮೊದಲಾದ ದೇವರುಗಳ, ಬುದ್ಧದೇವ, ನಾಯಕ, ಶಂಕರ, ಮಧ್ವ, ರಾಮಾನುಜಾ, ಬಸವ ಮೊದಲಾದ ಧರ್ಮಸ್ಥಾಪಕರ ರಾಜರು ಮಹಾರಾಜರುಗಳ ಮತ್ತೂ ಟಿಳಕ, ಗೋಖಲೆ, ದಾಸ ಗಾಂಧಿ ಯವರಂತಹ ವಿಭೂತಿಗಳ ಅತ್ಯುತ್ತಮವಾಗಿ ಬಿತ್ತಿ ತೆಗೆದ ಹಾಗೂ ಬಳ್ಳಿ ಲಲಿತವಾಗಿ ಕಟ್ಟು ಹಾಕಿದ ಶುದ್ಧ ಬೆಳ್ಳಿಯ ಎದ್ದು ಕಾಣುವ ಚಿತ್ರಗಳನ್ನು (Relieg Pictures) ನಾವು ಸಿದ್ಧ ಪಡಿಸಿರುತ್ತೇವೆ. ಪ್ರತಿಯೊಂದು ಕುಟುಂಬಕ್ಕೆ ಇವು ನಿಜವಾಗಿಯೂ ಅಲಂಕಾರಗಳೇ ಸರಿ ಅದಲ್ಲದೆಯೇ ದೇವರ ಮನೆ, ಪಡಸಾಲೆಗಳನ್ನೂ, ದಿವಾಣಖಾನೆಯನ್ನೂ ಶೃಂಗರಿಸಲು ಇವು ತಕ್ಕ ವಸ್ತುಗಳಾಗವೆ. ಅಲ್ಲದೇ, ಶುದ್ಧವಾದ ಬೆಳ್ಳಿಯಿಂದ ಮಾಡಿದ, ಎಲ್ಲ ಹಿಂದೂ ದೇವರುಗಳ ಗಟ್ಟಿ ಮೂರ್ತಿಗಳು ನಮ್ಮಲ್ಲಿ ದೊರೆಯುತ್ತವೆ. ಹೆಚ್ಚಿನ ಸಂಗತಿಗಳಿಗಾಗಿಯೂ, ಬೆಲೆಪಟ್ಟಿಗಾಗಿಯೂ ಬರೆದುಕೊಳ್ಳಿ!

ದಿ ಇಂಡಿಯನ್ ಜ್ಯೂವೆಲರಿ ಮಾರ್ಟ ನಗರ್ತಪೇಟೆ, ಬೆಂಗಳೂರ ಸಿಟಿ.

ಸುಲಭ ಕ್ರಯ ! ಡಾಕ್ಟರ ಜಿ ಬೀ. ಯವರ ಸುಲಭ ಕ್ರಯ!!

ಸುಗಂಧ ನಶ್ಯದ ಪುಡಿ.

Registerd Trads Mark.

ಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ, ಯೋಗ್ಯ ತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಿಸಿ, ಒಂಟಿ ತಲೆ ನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ, ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾನಕ ಶಕ್ತಿಯನ್ನು ಹೆಚ್ಚುಮಾಡುತ್ತದೆ. ಮೂರು ಚಿಟ್ಟಿ ಸಾಧಾರಣ ನಶ್ಯದ ಸಂಗಡ ಸುಗಂಧ ಈ ನಶ್ಯದ ಪುಡಿಯಲ್ಲಿ ಒಂದು ಚಿಮುಟಿಗೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆಯಾಗಿ ಕಳುಹಿಸಬಹುದು. ಬುಡ್ಡಿ ಒಂದಕ್ಕೆ ಕ್ರಯ ೪ ಆಣೆ, ವ್ಹಿ. ಪಿ ೬ ಆಣೆ. ಡಜನ್ ೧೦ ಕ್ರಯ ರೂ ೨—೮—೦, ವ್ಹಿ. ಪಿ ಚಾರ್ಜ ೮ ಆಣೆ.

ವಿಳಾಸ:— ಗುರುಬಸವ ಆ್ಯಂಡ್ ಕಂಪೆನಿ, ಲಿಮಿಟೆಡ್,

ಪೋ. ಬಾ. ೫೧೦, ಪಾರ್ಕಟೌನು, ಮದರಾಸು.

☞ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

Three Successive Valuation Results Unsurpassed

The General Assurance Society Ltd.

AJMER.

Assets Exceed **BONUS** Claims Paid Over

Rs. 20,00,000 Rs. 10,00,000

Equal to the Highest ever Declared by any Indian Life Office.

31st March 1924 Whole Life (Deferred)
Rs. 12% per year.

31st December 1925 Whole Life (Immediate)
Rs. 20% per year.

31st December 1926 Whole Life (Immediate)
Rs. 22/8/- % per year.

OFFICES AT

Agra,	Benares,	Lucknow,
Ajmer,	Colombo,	Lahore,
Allahabad,	Calcutta,	Madras,
Beawar,	Gujranwala,	Madura,
Bangalore,	Hubli	Patna,
Baroda	Hyderabad Sind,	Rangoon,
Bellary,	Indore,	Rawalpindi.
Bombay,	Jullunder.	

Place your Assurance with this sound and progressive Office To-day You will be benefitted by the low premiums and the exceptionally high bonus additions.

WANTED AGENTS ON MOST LIBERAL TERMS

Please Apply to:—P D BHARGOVA, F. A. S., (Lon) Manager Ajmer.
OR
L. V RAMDURG Chief Agent, Hubli

ದಿ ಏಶಿಯಾಟಿಕ್ ಗೌರ್ನಮೆಂಟ ಶೆಕ್ಯೂರಿಟಿ ಲಾಯಿಫ ಅಶ್ಶೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟಣೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೧೧-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದಸ್ಯರಿಗೆ ಬಡ್ಡಿ ನೇಮ್ಮ ಸಹಿತ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು||—

(೧) ಎಲ್. ಬಿ. ಸಿ ನಂ ೨೭೯೭ ವಯಿದ ಅಲಿ ಅಸಗರ ಬೇಗ್ ಸಾ. ಮ ಸುಪರಿಂಟೆಂಡಂಟ್ ಸೆಕ್ರೆಟರಿಯೆಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ ಸಿ ನಂ ೧೯೭೨ ನಾರಾಯಣ ವಿಠ್ಠಲ ಗೋಖಲೇರ ಕೇರ್ ಆಫ್ ದಿ ಈ. ಪುರಾಣಿಕ ೧೦೭ ನಿಹಾಲಪುರ ಇಂದೂರ ೧೦೦೦

(೩) ಎಲ್ ಬಿ. ಸಿ ನಂ ೩೪೧ ರಾಮಚಂದ ಅನಂತ ಶಿರೋಳೆ. ಡಿವಿಜನಲ್ ಫಾರೆಸ್ಟ ಆಫೀಸರ ಧಮೋಹ, ಮ. ಪ್ರ. ಮಹಾನದೇಶ ರೂ. ೮೦೦

(೪) ಬಾಂಡ ನಂಬರು ೭೫೧೭ ಕೇ ಜಿ ಫರ್ನಾಂಡೋ ವ್ಯಾಪಾರಸ್ಥ ಬ್ರಿಕ್‌ಸಾಯಿಡ ಸಿಲೋನ, ಕೊಲಂಬೋ, ರೂ. ೧೦೦೦

(೫) ಬಾಂಡ ನಂಬರು ೧೩೭೩೪ ಎಸ್. ಜಿ. ಚವರಿ ಅಸಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ ಜಿಲ್ಲಾ ವಿಜಾಪುರ ರೂ ೧೦೦೦

ಜಿ. ಎಸ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಉಬ್ಬಸ ಸಂಹಾರಿ

ROWJEE'S

ASTHMA SPECIFIC

ಉಬ್ಬಸವು ಬಹಳ ಕಠಿಣವಾದ ವ್ಯಾಧಿ. ಪರಿಹಾರ ಸೌಖ್ಯಪಡಿಸುವುದು ಬಹುಕಷ್ಟ. ಇದು ಹೆಚ್ಚಾಗಿ ತಂದೆ ತಾಯಿಗಳಿಂದ ಮಕ್ಕಳಿಗೆ ಬರುವುದು. ಸಹಜ ಶುರುವಾದಾಗ ಬಹಳ ಭಯಂಕರವಾಗಿ ಕಾಣಿಸುವುದು ಶ್ವಾಸ ಸರಿಯಾಗಿ ಬಿಡಲಿಕ್ಕೆ ಆಗದೆ ಗಂಟಲು ಹಿಡಿದಂತೆ ಆಗಿ ಈಗಲೋ ಇನ್ನೊಂದು ಕ್ಷಣಕ್ಕೋ ಪ್ರಾಣ ಹೋಗುವಂತೆ ಕಾಣಿಸುವುದು. ಯೆದೆಯಲ್ಲಿ ಬೆಕ್ಕು ಕೂಗಿದಂತೆ ಗೊಯಿ ಗೊಯಿ ಯೆಂಬ ಶಬ್ದವು ಕೇಳಿಸುವುದು. ಹಾಸಿಗೆಯ ಮೇಲೆ ಮೈ ಚಾಚಿ ಮಲಗಲಾಗದು. ಸಾಧಾರಣದ ಚಿಕಿತ್ಸೆಗೆ ಕೇಳದು. ಇಂಥಾ ಹಿಂಸೆಗಳನ್ನು ಕೊಡುವ ವ್ಯಾಧಿಯು. ನಮ್ಮ 'ಉಬ್ಬಸ ಸಂಹಾರಿ' ಯೆಂಬ ಔಷಧಿಯಿಂದ ಸೂರ್ಯನು ಉದಯಿಸುವಾಗಲೇ ಮಂಜುಗಳು ಅದೃಶ್ಯವಾಗುತ್ತಾ ಬರುವ ಹಾಗೆಯೇ ಬಹು ಶೀಘ್ರದಲ್ಲಿಯೇ ಉಬ್ಬಸವ್ಯಾಧಿಯು ಪರಿಪೂರ್ಣವಾಗಿ ಗುಣವಾಗುವದು. ಸಂದೇಹವೇ ಇಲ್ಲ. ಅನುಪಾನಕ್ರಮ ಕನ್ನಡದಲ್ಲಿ ಔಷಧದ ಕೂಡೆ ಕಳುಹಿಸಲ್ಪಡುವದು.

ಬಾಟ್ಲಿ ೧ಕ್ಕೆ ರೂ ೨-೮-೦ ವಿ. ಪಿ ಖರ್ಚು ಪ್ರತ್ಯೇಕ.

ಶ್ರೀ ಕೃಷ್ಣನ್ ಬ್ರದರ್ಸ್ ಪೋಸ್ಟು ಬಾಕ್ಸ ನಂ. ೧೯೭ ಮದ್ರಾಸು.

ಕಿರ್ಲೋಸ್ಕರ ನೇಗಿಲು ನಂ ೯



ಉಪಯೋಗಃ— ನಮ್ಮ ಯಾವತ್ತೂ ನೇಗಿಲುಗಳಲ್ಲಿ ಈ ನೇಗಿಲು ಮಿಗಿಲಾದದ್ದು. ಎರೆಯ ಭೂಮಿ, ಮಡ ಭೂಮಿಗಳನ್ನು ಸಾಗುವಳಿ ಮಾಡಲಿಕ್ಕೂ ಕಾಲುವೆಗಳಿಂದ ತೊಯ್ಯುವ ಭೂಮಿಗೂ ಇದರ ಉಪಯೋಗ ಬಹಳ. ಇದು ನಮ್ಮ ನೇಗಿಲು ನಂ ೧೦೦ ರಂತೆ ಮಿಕ್ಕ ಉಪಯೋಗಕ್ಕೂ ಬರುವದು. **ರಚನೆಃ**— ಇದರ ಕುಳಗಳು ಹಾಗೂ ಸವೆಯುವ ಭಾಗಗಳು ಸವೆಯದಂತೆ 'ಚಿಲಿಂಗ ಪ್ರೋಸೆಸ್ಸಿನಿಂದ' ಗಟ್ಟಿಮುಟ್ಟು ಮಾಡಲ್ಪಟ್ಟಿರುತ್ತವೆ. ಮೇಳಿಗಳು ಹವಣಿ ಇರುತ್ತವೆ. ಇದಕ್ಕೆ ತಿರುಗುವ ಕುಳವಿರುತ್ತದೆ, **ಎಳೆಯುವ ಶಕ್ತಿಃ**— ೬ ರಿಂದ ೮ ಎತ್ತುಗಳು ಬೇಕು. **ಸಾಲಿನ ಆಳಗಲಃ**— ೮ ರಿಂದ ೧೨ ಇಂಚು ಆಳ; ೧೩ ರಿಂದ ೧೪ ಇಂಚು ಅಗಲ. **ತೂಕಃ**—ಸುಮಾರು ೨೦೦ ಪೌಂಡು ಸವಿಸ್ತರ ಸಂಗತಿಯ ಬಗ್ಗೆ ಇವರ ಹಸ್ತಪತ್ರಿಕೆಯನ್ನು ನೋಡಿರಿ. ಬೆಲೆ ೩೩ ರೂಪಾಯಿ

ಕಿರ್ಲೋಸ್ಕರ ಬಂಧು. ಲಿಮಿಟೆಡ್ ಕಿರ್ಲೋಸ್ಕರವಾಡಿ. ಜಿ. ಸಾತಾರಾ.

ಲಿಟ್ಲರ ಓರಿಯಂಟ್ಲ ಬಾಮು.

ನೋವು ಬಾಧೆಗಳ ನಿವಾರಣಾರ್ಥ!

೪೨ ವರ್ಷಗಳಿಂದ ಜಗತ್ತಿನ ತುಂಬ ಪ್ರಖ್ಯಾತಿಯನ್ನು ಪಡೆದ ಉಪಾಯ ವೆಂದರೆ ಇದೆ.

ಹಿಂದುಸ್ಥಾನದ ಅದ್ಭುತವಾದ ವೇದನಾಶಾಮಕವಾದ ಉಪಾಯವು!

ಕೆಳಗಿನ ವ್ಯಾಧಿಗಳಿಗೆ ತತ್ಕಾಲಿಕ ಗುಣ ಬೇಕಾಗಿದ್ದರೆ, ಇದನ್ನೇ ಉಪಯೋಗಿಸಿರಿ:—

ತಲೆಶೂಲಿ, ಸಂಧಿವಾತ, ಎಲ್ಲ ತರದ ಕಫ, ನರ ತೊಡಕು, ಹರಿವಾತ, ಟೊಂಕನೋವು, ಅರ್ಧಾಂಗವಾಯು ಉಳುಕು (ವಳದದ್ದು)

ಸ್ವಲ್ಪೇ ಮಾಪಿಸಿಂದ ಒಹಳೇ ಗುಣ. ಉರುವು ಇಲ್ಲವೇಯಿಲ್ಲ. ಗುಳ್ಳೆಗಳೂ ಏಳುವದಿಲ್ಲ ಸುಖವಾಗಿ ಗುಣ ಕೊಡುತ್ತದೆ.

ಹಿಂದುಸ್ಥಾನದಲ್ಲಿಯೇ ಹಿಂದೀಯರಿಂದ ತಯಾರಾದದ್ದು.

ನೆಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲವೇಯಿಲ್ಲ!

ಈ ದಿವಸವೇ
ಒಂದು ಬಾಟ್ಲಿ ಕೊಳ್ಳಿ !

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ವಾ. ಚಂದಾ ೧—೧೪—೦ ಮಾತ್ರ



(ಇದರಲ್ಲಿ ಕನ್ನಡದ ನವಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् । — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ಪುಷ್ಯ ಶುದ್ಧ ೧ ಶಕೆ ೧೮೪೯ ತಾ|| ೨೫-೧೨-೧೯೨೭. Date 25—12—1927 | ಸಂಚಿಕೆ ೩೬

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ, ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಚ್ಚುವದು ಮತ್ತು ಜೋಡಿಸುವದು ಅವುಗಳೊಳಗಿನ ಕೆಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ಸಾಕ್ಷಾತ್ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುತ್ತೇವೆ. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಕಸಿಬಿಸಿಯುಳ್ಳವರಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೊಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದ ಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲವೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ!

ವಿಳಾಸ:— ಕುಲಕರ್ಣಿ ಮೋಟಾರ ಸ್ಕೂಲ.

ಮತ್ತು ಮೆಕ್ಯಾನಿಕಲ್ ವರ್ಕಶಾಪ ಶನಿವಾರ ಪೇಠ [illegible] ಹತ್ತರ ಪುಣೆ ಶಹರ

WANTED.

Wanted Candidates for Telegraph and Station Master's Classes. Full particulars and Railway Fare Certificate on 2 annas stamp

Apply to:-

Imperial Telegraph College, Delhi.

ಮಯೂರ ಶಿಖೆ

ದುರ್ಲಭವಾದ ವನಸ್ಪತಿಯು. ೩೦ ತೊಲೆಗೆ ೧ ರೂ [illegible] ದೆ, ವ್ಯಾಪಾರಸ್ಥರಿಗೆ, ಅನೇಕ ಔಷಧೀಯ ವನಸ್ಪತಿಗಳು ದೊರಕುವವು

ಸ್ಥಳ:-ನಾರಾಯಣ ಜಹಗೀರದಾರ

ಮು॥ ಇಂಚಕಲ್ಲ (ವಿಜಾಪೂರ)

ಭದ್ರವಾದ ಧನವಿನಿಯೋಗ ಮತ್ತೂ

ಮನೆತನಕ್ಕೆ ಭೂಷಣವಾದ ಆಸ್ತಿ!!



ಶ್ರೀಕೃಷ್ಣ, ಶ್ರೀರಾಮ, ಮಹಾಲಕ್ಷ್ಮಿ, ಸರಸ್ವತಿ ಇವೇ ಮೊದಲಾದ ದೇವರುಗಳ, ಬುದ್ಧದೇವ, ನಾಯಕ, ಶಂಕರ, ಮಧ್ವ, ರಾಮಾನುಜಾ, ಬಸವರಂಥ ಧರ್ಮಸ್ಥಾಪಕರ ರಾಜರು ಮಹಾರಾಜರುಗಳ ಮತ್ತೂ ಟಿಳಕ, ಗೋಖಲೆ, ದಾಸ ಗಾಂಧೀಯವರಂಥ ವಿಭೂತಿಗಳ ಅತ್ಯುತ್ತಮವಾಗಿ ಚಿತ್ರಿಸಿದ ಹಾಗೂ ಬಳ್ಳೀ ಲಲಿತವಾಗಿ ಕಟ್ಟು ಹಾಕಿದ ಶುದ್ಧ ಬೆಳ್ಳಿಯ ಎದ್ದು ಕಾಣುವ ಚಿತ್ರಗಳನ್ನು (Relieg Pictures) ನಾವು ಸಿದ್ಧಪಡಿಸಿರುತ್ತೇವೆ. ಪ್ರತಿಯೊಂದು ಕುಟುಂಬಕ್ಕೆ ಇವು ನಿಜವಾದಿಯೂ ಅಲಂಕಾರಗಳೇ ಸರಿ. ಅದರಂತೆಯೇ ದೇವರ ಮನೆ, ಪಡಸಾಲೆಗಳನ್ನೂ, ದಿವಾಣಖಾನೆಯನ್ನೂ ಶೃಂಗರಿಸಲು ಇವು ತಕ್ಕ ವಸ್ತುಗಳಾಗವೆ. ಅಲ್ಲದೇ, ಶುದ್ಧವಾದ ಬೆಳ್ಳಿಯಿಂದ ಮಾಡಿದ, ಎಲ್ಲ ಹಿಂದೂ ದೇವರುಗಳ ಗಟ್ಟಿ ಮೂರ್ತಿಗಳು ನಮ್ಮಲ್ಲಿ ದೊರೆಯುತ್ತವೆ. ಹೆಚ್ಚಿನ ಸಂಗತಿಗಳಿಗಾಗಿಯೂ, ಬೆಲೆಪಟ್ಟಿಗಾಗಿಯೂ ಬರೆದುಕೊಳ್ಳಿ!

ಧಿ ಇಂಡಿಯನ್ ಜ್ಯುವೆಲರಿ ಮಾರ್ಟ್ ನಗರ್ತಪೇಟೆ, ಬೆಂಗಳೂರ ಸಿಟಿ.

ಸುಲಭ ಕ್ರಯ ! ಡಾಕ್ಟರ ಜಿ ಬೀ. ಯುವತ ಸುಲಭ ಕ್ರಯ !!

ಸುಗಂಧ ನಶ್ಯದ ಪುಡಿ.

Registerd Trade Mark.

ಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರಂತಗಳಾಗಿ, ಯೋಗ್ಯ ತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಿಸಿ, ಒಂಟಿ ತಲೆ ನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ, ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚುಮಾಡುತ್ತದೆ. ಮೂರು ಬೆಟ್ಟು ಸಾಧಾರಣ ನಶ್ಯದ ಸಂಗಡ ಸುಗಂಧ ಈ ನಶ್ಯದ ಪುಡಿಯಲ್ಲಿ ಒಂದು ಚಿಮಟಿಗೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆಯಾಗಿ ಕಳುಹಿಸಬಹುದು. ಬುಡ್ಡಿ ಒಂದಕ್ಕೆ ಕ್ರಯ ೪ ಆಣೆ, ವ್ಹಿ. ಪಿ. ೪ ಆಣೆ. ಡಜನ್ ೧ರ ಕ್ರಯ ರೂ ೨—೮—೦, ವ್ಹಿ. ಪಿ. ಚಾರ್ಜು ೮ ಆಣೆ.

ವಿಳಾಸ:— **ಗುರುಬಸವ ಆ್ಯಂಡ್ ಕಂಪೆನಿ, ಲಿಮಿಟೆಡ್,**

ಪೋ. ಬಾ. ೫೧೦, ಪಾರ್ಕಟೌನು, ಮದರಾಸು.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರಿಯಿರಿ.

ಕನ್ನಡಿಗ.

ಬಾಗಲಕೋಟೆ:- ಕನ್ನಡಿಗ ಪುಷ್ಯ ಶುದ್ಧ ೧ ಶಕೆ ೧೮೪೯

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೇಣವಾಡಿ ಕಟ್ಟುವೆನಾನು।
ನಿನ್ನ ಬೆಸನವಾಡಿದಂಥ ಮುಕ್ಕಳ ದೊಮ್ಮ।
ಚಿನ್ನದಾದರು ಚಿನ್ನವು ಮೇಣಬತ್ತಿಯು ನೊಂದು ಚಿನ್ನಯಾಳಾಶದ
ನನ್ನ ದೇಹವು ನಿನ್ನ ಪೀಠಶಾಸನಕಾಗಿ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿಡೆ।
ಕನ್ನಪ್ರಾಣವು ನಿನ್ನ ಗಂಧವನು ಡೀರಬಹ ಗಂಧವಹವೆಂದು ತಿಳಿಯೆ

—ಲಂಬಿಕಾ ತನಯ ದತ್ತ.

ಮದ್ರಾಸದ ಕಾಂಗ್ರೆಸ್ಸು ನಾಳಿನಿಂದ ಪ್ರಾರಂಭ ವಾಗುವದು. ಉತ್ಸಾಹಜನಕವಾದ ರಾಜಕೀಯ ಕಾರ್ಯಕ್ರಮದ ಅಭಾವದಿಂದಲೂ, ಹಿಂದೂ-ಮುಸಲ್ಮಾನರ ಕಲಹದಿಂದಲೂ ರಾಜಕೀಯ ಪಂಗಡಗಳ ಮತಭೇದದಿಂದಲೂ, ಈಗ್ಗೆ ೪-೧ ವರ್ಷ ಕಾಂಗ್ರೆಸ್ಸಿನ ಚಟುವಟಿಕೆಗಳು ಸ್ತಬ್ಧವಾಗಿದ್ದವೆನ್ನಬಹುದು. ಈ ವರ್ಷದ ಅಧಿವೇಶನವು ರಾಷ್ಟ್ರಕ್ಕೆ ಒಂದು ಮಾರ್ಗವನ್ನು ತೋರಿಸಿಕೊಡುವಂತಹದಾಗುವದಾಗಿ ಭರವಸೆಯಿದೆ. ಬಾದಶಾಹೀ ಆಲೋಚನ ಮಂಡಲದ ನಿಯೋಜನೆಯಿಂದ ರಾಷ್ಟ್ರದಲ್ಲೆಲ್ಲ ಹರಡಿದ್ದ ಕಗ್ಗತ್ತಲೆಯು ಹರಿದುಹೋಗಿದೆ! ಬಹಿಷ್ಕಾರವೊಂದು ಮಹತ್ವದ ಚಳವಳಿಯಾಗುವದೆಂಬದರಲ್ಲಿ ಸಂದೇಹವೇಯಿಲ್ಲ. ಎಲ್ಲ ರಾಜಕೀಯ ಪಂಗಡಗಳೂ ಬಹಿಷ್ಕಾರಕ್ಕೆ ಸಮ್ಮತಿಸಿರುವದರಿಂದ ೧೯೨೮ ರಲ್ಲಿ ಭರತಖಂಡದಲ್ಲಿ ರಾಜಕೀಯ ಆಂದೋಲನವು ವಿರಾಟ್ ಸ್ವರೂಪವನ್ನು ಹೊಂದುವದೆಂಬದರಲ್ಲಿಯೂ ಸಂದೇಹವಿಲ್ಲ. ಹಿಂದೂ ಮುಸಲ್ಮಾನರ ಕಲಹದ ಭೂತಚೇಷ್ಟೆಯೊಂದು ನಿಲ್ಲುವಂತೆ ಕಾಂಗ್ರೆಸ್ಸಿನವರು ಏನಾದರೂ ಮಾರ್ಗವನ್ನು ನಿಶ್ಚಯಿಸಿದರೆಂದರೆ, ೧೯೨೮ ನೇ ಇಸ್ವಿಯು ಭಾರತೀಯ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿಯಲು ಅರ್ಹವಾಗುವದು. ಇದನ್ನೆಲ್ಲ ಅರಿತೇ ಪ್ರತಿನಿಧಿಗಳು ಈಸಲ ಮದ್ರಾಸಕ್ಕೆ ತಂಡ ತಂಡದಿಂದ ಹೋಗಿದ್ದಾರೆ. ವಿಷಯನಿಯಾಮಕ ಕಮೀಟಿಯಲ್ಲಿ ಸಾಯಮನ್ ಮಂಡಳದ ಬಹಿಷ್ಕಾರ, ಬ್ರಿಟಿಶರ ವಸ್ತುಗಳ ಬಹಿಷ್ಕಾರ, ಭಾರತೀಯರ ಸ್ವಯಂನಿರ್ಣಯ-ತತ್ವದ ಪ್ರಕಟನೆ, ಹಿಂದೂ—ಮುಸಲ್ಮಾನರ ಕಲಹದ ಸಮಾಪ್ತಿ, ಭಾರತೀಯರ ಸ್ವರಾಜ್ಯ ಯೋಜನೆಯ ಘಟನೆ, ಪರರಾಷ್ಟ್ರಗಳಲ್ಲಿ ನಮ್ಮ ಆಂದೋಲನದ ಪ್ರಚಾರ ಇವೇ ಮೊದಲಾದ ಮಹತ್ವದ ವಿಷಯಗಳು ಉದ್ಭವಾಗಿವೆ. ಸಧ್ಯದ ಪರಿಸ್ಥಿತಿಯನ್ನರಿತು ರಾಷ್ಟ್ರ ಮುಖಂಡರು ಎಲ್ಲ ಪ್ರಶ್ನೆಗಳನ್ನು ಸಮಾಧಾನಕರವಾಗಿಯೇ ಬಿಡಿಸುವರೆಂಬ ವಿಶ್ವಾಸವು ನಮಗಿದೆ.

ವೀರಶೈವ ಮಹಾಸಭೆಯು ಬೆಂಗಳೂರಲ್ಲಿ ತಾ|| ೨೮ ರಲ್ಲಿ ಕೂಡುವದು. ಬಹು ದಿನಗಳಿಂದ ಅತ್ತಿಂದಿತ್ತ ಇತ್ತಿಂದತ್ತ ಹೊಯ್ದಾಡಿ ಅನೇಕ ಕಠಿಣ ಪ್ರಸಂಗಗಳನ್ನು ದಾಟಿ ಒಂದು ಸಲ ಮಹಾಸಭೆಗೆ ಜೀವಕಳೆಯುಂಟಾದುದು ಎಲ್ಲರಿಗೂ ಆನಂದವೇ. ಭರತಖಂಡದ ರಾಷ್ಟ್ರೀಯ ಚಳವಳವು ಅತಿ ಪ್ರಬಲವಾಗಿದೆಯೆಂಬುದನ್ನರಿತು, ಇದಕ್ಕನುಗುಣವಾಗುವಂತೆ ಈ ಮಹಾಸಭೆಗೆ ಬೇರೆ ಸ್ವರೂಪವನ್ನು ಕೊಡಬೇಕೆಂಬ ಆಕಾಂಕ್ಷೆಯು ತರುಣವೀರಶೈವರಲ್ಲಿ ಒಡಮೂಡಿ ನೆಲೆಸಿದೆ. ಮಹಾಸಭೆಯು ರಾಜಕಾರಣವನ್ನು ಸ್ಪರ್ಶಮಾಡತಕ್ಕದ್ದಲ್ಲೆಂದು ಹಳೇಗಡತಿಗಳ ಹೊಯ್ದಾಟ! ವೀರಶೈವ ಸಮಾಜಕ್ಕೆ ಸಂಬಂಧಪಿದ್ದ ರಾಜಕೀಯ, ಸಾಮಾಜಿಕ ಮೊದಲಾದ ಎಲ್ಲ ವಿಷಯಗಳನ್ನೂ ಮಹಾಸಭೆಯು ಚರ್ಚಿಸಲೇಬೇಕೆಂಬ ತರುಣರ ಜಗ್ಗಾಟ! ಈ ಹೊಯ್ದಾಟ ಜಗ್ಗಾಟಗಳಲ್ಲಿ ತರುಣರೇ ವಿಜಯಶಾಲಿಗಳಾಗತಕ್ಕದ್ದು; ಮತ್ತು ಅವರೇ ವಿಜಯಧ್ವಜ ಪತಾಕೆಯನ್ನು ಎತ್ತಿಕೊಂಡು ಬೆಂಗಳೂರದಿಂದ ಹೊರಬೀಳುವರೆಂಬ ಭರವಸೆ ನಮಗಿದೆ. ಬೆಂಗಳೂರ ಸ್ವಾಗತ ಮಂಡಲದವರು ಕರ್ನಾಟಕ ಏಕೀಕರಣದಂಥ ಮಹತ್ವದ ವಿಷಯವನ್ನು ಸಹ ವಿಷಯ ನಿಯಾಮಕ ಸಭೆಯಲ್ಲಿ ಇಟ್ಟಿರುವದಿಲ್ಲ. ಇದಕ್ಕೆ ಬ್ರಿಟಿಶ್ ಕರ್ನಾಟಕದ ತರುಣರು ಚನ್ನಾಗಿ 'ಖೋ' ಹಾಕುವರೆಂಬ ವಿಶ್ವಾಸ ನಮಗಿದೆ. ನಮ್ಮ ತರುಣ ಮಿತ್ರರಾದ ಹುಬ್ಬಳ್ಳಿಯ ಕೆಂಪಣ್ಣನವರು ಈಗಾಗಲೇ ಕಾವು ತರತಕ್ಕ ವಿಷಯಗಳ ಸೂಚನೆಯನ್ನು ಸ್ವಾಗತ ಸಭೆಯವರಿಗೆ ತಿಳಿಸಿದ್ದಾರೆ. ಅದರಲ್ಲಿ ವೀರಶೈವ ಸಮಾಜದ ಹೊಸ ಘಟನೆ, ಸಾಮಾಜಿಕ ಕುಂದುಗಳ ನಿವಾರಣೆ, ಸಾಯಮನ್ 'ಕಮೀಶನ್' ದ ಬಹಿಷ್ಕರ, ಕರ್ನಾಟಕ ಏಕೀಕರಣ, ವಿಶ್ವವಿದ್ಯಾಲಯ, ಇವೇ ಮೊದಲಾದ ಪ್ರಚಲಿತವಾದ ಮಹತ್ವದ ವಿಷಯಗಳು ಅಡಕವಾಗಿವೆ. ಈ ಇವರ ಸೂಚನೆಗೆ ಎಲ್ಲ ಪ್ರತಿನಿಧಿಗಳೂ— ವಿಶೇಷತಃ ತರುಣ ಪ್ರತಿನಿಧಿಗಳು— ಸಂಪೂರ್ಣ ಬೆಂಬಲ ಕೊಡಬೇಕೆಂದು ನಾವು ಆಗ್ರಹಪೂರ್ವಕವಾಗಿ ಸೂಚಿಸುತ್ತೇವೆ.

ಕರ್ನಾಟಕದಲ್ಲಿ ಪತ್ರಿಕಾ ವ್ಯವಸಾಯವು ಅತ್ಯಂತ ಶೋಚನೀಯ ಸ್ಥಿತಿಯಲ್ಲಿದೆಂಬದನ್ನೂ, ಅದಕ್ಕೆ ಎಲ್ಲ ಕನ್ನಡಿಗರೂ ಉದಾರಹಸ್ತದಿಂದ ಸಹಾಯ ಮಾಡಲೇಬೇಕೆಂಬುದನ್ನೂ ಕನ್ನಡಿಗರು ಇನ್ನೂ ತಿಳಿದುಕೊಳ್ಳದಿರುವದು ಬಹು ಚಿಂತಾಯುಕ್ತವಾಗಿದೆ. ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕೂಡ ಕರ್ನಾಟಕದ ಹಾಗೂ ಕನ್ನಡ ವಾಙ್ಮಯದ ಸೇವೆಯನ್ನು ಮಾಡುವ ಉದ್ದೇಶದಿಂದ ಪ್ರೇರಿತರಾಗಿ, ಕಷ್ಟನಷ್ಟಗಳನ್ನು ಲೆಕ್ಕಿಸದೇ, ಕನ್ನಡ ವೃತ್ತಕಾರರು ತಮ್ಮ ವ್ಯವಸಾಯದಲ್ಲಿ ಒಳ್ಳೇ ಆಸ್ಥೆಯಿಂದ ತೊಡಗಿಕೊಂಡಿರುವದು ಅವರ ಸ್ವಾರ್ಥತ್ಯಾಗದ, ಹಾಗೂ ಕರ್ನಾಟಕದ ಸೇವೆಯಲ್ಲಿ ಅವರಿಗಿದ್ದ ಪವಿತ್ರ ಹಾಗೂ ದೃಢಮನಸ್ಸುಗಳ ದ್ಯೋತಕವೇ ಸರಿ. . ಕಳೆದ ಹಾಗೂ ಈ ಮಾಸಗಳಲ್ಲಿ ಕೆಲವು ಕನ್ನಡ ಪತ್ರಿಕೆಗಳು ತಮ್ಮ ಹೊಸ ವರ್ಷವನ್ನು ಪ್ರಾರಂಭಿಸಿದವು. ಅವುಗಳಲ್ಲಿ ಕರ್ನಾಟಕದ ಎಲ್ಲಕ್ಕೂ ದೊಡ್ಡ ಮಾಸಪತ್ರಿಕೆಯಾದ "ಜಯಕರ್ನಾಟಕ;" ರಸಿಕರ ಕೈಪಿಡಿಯಾದ "ರಂಗಭೂಮಿ;" ಚಿಕ್ಕ ಮಕ್ಕಳ ಮನಸ್ಸನ್ನಾಕರ್ಷಿಸಿದ "ಮಕ್ಕಳ ಪುಸ್ತಕ;" ಕರ್ನಾಟಕದಲ್ಲಿ ರೋಗವು ಅಳಿದು ಹೋಗಬೇಕೆಂದು ಕೇವಲ ೧-೮-೦ ವಾರ್ಷಿಕ ಚಂದಾಹಣದಿಂದ ನಡೆದ ಮದ್ರಾಸದ "ಆರೋಗ್ಯ ಚಂದ್ರಿಕೆ" ಇವೇ ಮಹತ್ವದ ಮಾಸಪತ್ರಿಕೆಗಳಿವೆ. 'ಜಯಕರ್ನಾಟಕ'ವು ಅನೇಕ ಉಪಯುಕ್ತ ವಿಷಯಗಳನ್ನು ಸಂಗ್ರಹಿಸಿ, ತನ್ನ ಸದ್ವಿಚಾರಪ್ಲುತವಾದ ಸಂಪಾ

ದಕೀಯುಗಳಿಂದ ಎಲ್ಲ ಭಾಗದ ಕನ್ನಡಿಗರ ಮನಸ್ಸನ್ನು ಈಗಾಗಲೇ ಆಕರ್ಷಿಸಿ ಕೊಂಡಿದೆ. ಈ ಸಲ ಅದರ ಸಂಪಾದಕರು ವಿಶೇಷ ಸಂಚಿಕೆಯನ್ನೂ ಹೊರಡಿಸಿ, ಕರ್ನಾಟಕದ ಸೇವೆಯಲ್ಲಿ ಮತ್ತಿಷ್ಟು ಉತ್ಸಾಹದಿಂದ ಬದ್ಧರಾಗಿದ್ದಾರೆ ಹಸಿವೆಯಿಂದ ಬಳಲುತ್ತಿರುವ "ರಂಗಭೂಮಿ" ಯನ್ನು ಬೆಂಗಳೂರದ ನಾಟ್ಯಕಲೋದ್ಧಾರಕ ಅಮೇಚೂರ ನಾಟಕ ಸಭೆಯವರು ದತ್ತಕವಾಗಿ ತೆಗೆದುಕೊಂಡು ತಮ್ಮ ಪುತ್ರನಿಗೆ ಆನ್ನೋದಕಗಳನ್ನೂ ಕೊಟ್ಟು, ಅವನು ಪುಷ್ಟನಾಗುವಂತೆ ಏರ್ಪಡಿಸಿದ್ದಾರೆ; "ಮಕ್ಕಳ ಪುಸ್ತಕ"ವು ಸಚಿತ್ರವಾಗಿಯೂ ಅತ್ಯಂತ ಅಂದವಾಗಿಯೂ ಬಾಲಕರಿಗೂ ಇತರರಿಗೂ ಬೋಧಕವಾಗಿಯೂ ಇದ್ದು, ತನ್ನ ಕರ್ನಾಟಕದ ಸೇವೆಯನ್ನು ಬಲು ಹುಮ್ಮಿನಿಂದ ಸಾಗಿಸಿದೆ; "ಆರೋಗ್ಯ ಚಂದ್ರಿಕೆ" ಯು ನುರಿತಂಥ ಲೇಖಕರ ಸಹಾಯದಿಂದಲೂ, ಸ್ವಚ್ಛವಾದ ಮುದ್ರಣದಿಂದಲೂ ಬಲು ಅಗ್ಗವಾದ ಬೆಲೆಯಿಂದಲೂ ಭಾರತೀಯರ ಪ್ರಾಚೀನ ಆರೋಗ್ಯ ತತ್ವಗಳನ್ನು ಕನ್ನಡಿಗರಿಗೆ ಸುಲಭವಾಗಿ ತಿಳಿಯುವಂತೆ ಪ್ರತಿಪಾದಿಸುತ್ತಲೂ, ತನ್ನ ಸೇವೆಯ ಡಂಗುರವನ್ನು ಹೊಡೆಯುತ್ತಲಿದೆ ಆದ್ದರಿಂದ ಕನ್ನಡ ನಾಡಿನಲ್ಲಿರುವ ಪ್ರತಿಯೊಂದು ವಾಚನಾಲಯದವರು ಈ ನಾಲ್ಕು ಮಾಸಪತ್ರಿಕೆಗಳನ್ನು ಕೊಳ್ಳಲೇ ಬೇಕು; ಹಾಗೂ ಆ ಆ ವಿಷಯಗಳಲ್ಲಿ ವಿಶೇಷ ಅಭಿರುಚಿಯುಳ್ಳವರು, ವೈಯಕ್ತಿಕವಾಗಿಯೂ ಈ ಪತ್ರಿಕೆಗಳನ್ನು ಪ್ರೋತ್ಸಾಹಿಸಿ, ಕನ್ನಡಿಗರ ಸೇವೆಯಲ್ಲಿ ಇವೆಲ್ಲ ಯಾವಾಗಲೂ ನಿರತವಾಗಿರುವಂತೆ ಆಸ್ಪದಕೊಡಬೇಕು.

ಹಳ್ಳಿಗಳಲ್ಲಿ ಪ್ರಾಥಮಿಕ ಶಿಕ್ಷಣವಾದರೂ ಸಾರ್ವತ್ರಿಕವಾಗಿ ಹಬ್ಬಬೇಕೆಂಬ ಉಚ್ಚ ಉದ್ದೇಶವನ್ನಿಟ್ಟುಕೊಂಡು, ಬಾಗಲಕೋಟೆಯ ವಯೋವೃದ್ಧ ಜ್ಞಾನವೃದ್ಧರೂ, ಲೋಕಕಲ್ಯಾಣದ ಕಾರ್ಯದಲ್ಲಿ ನಿರತರೂ ಆಗಿರುವ ಶ್ರೀಯುತ ಶಂಭು ಶಂಕರ ದಾತಾರ ಇವರು ಈಗ್ಗೆ ಒಂದು ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಈ ಸಂಸ್ಥೆಯ ವತಿಯಿಂದ, ಅವರು ಹಳ್ಳಿ ಹಳ್ಳಿಗಳನ್ನು ಸಂದರ್ಶಿಸಿ ಅಲ್ಲಲ್ಲಿ ಶಿಕ್ಷಣಕ್ಕಾಗಿ ಅಯ್ಯನವರ (ಗಾವಠೀ) ಶಾಲೆಗಳನ್ನು ಪ್ರಾರಂಭಿಸಬೇಕೆಂದಿದ್ದಾರೆ. ವಿದ್ಯಾದಾನವೆಂದರೆ ಪವಿತ್ರತಮವಾದುದೆಂಬದಲ್ಲಿ ಸಂದೇಹವಿಲ್ಲ. ಮೇಲಾಗಿ ನಮ್ಮ ಹಿಂದುಸ್ಥಾನದ ಈಗಿನ ಪರಿಸ್ಥಿತಿಗೆ ಇಂಥ ಶಾಲೆಗಳೂ ಅತ್ಯವಶವಾಗಿ ಬೇಕಾಗಿವೆ. ಆದ್ದರಿಂದ ಶ್ರೀ ದಾತಾರರವರ ಉಪಕ್ರಮವು ಬಹು ಆದರಣೀಯವಾದುದು. ಆದರೆ ಯಾವದೇ ಸಾರ್ವಜನಿಕ ಚಳವಳಕ್ಕಾದರೂ ಚಿಗಟನಿಂದ ಕೆಲಸಮಾಡತಕ್ಕಂಥ ಒಬ್ಬಿಬ್ಬ ಉತ್ಸಾಹೀ ಜನರು ಬೇಕೇಬೇಕು. ಹೀಗೆ ಒಬ್ಬಿಬ್ಬರಾದರೂ ಕೇವಲ ಇದೇ ಕೆಲಸಕ್ಕೆಂದು ಟೊಂಕಕಟ್ಟಿನಿಂತರೆ, ಈ ಪ್ರಾಥಮಿಕ ಶಿಕ್ಷಣ ಪ್ರಸಾರದ ಹೆಜ್ಜೆಯು ಮುಂದಕ್ಕೆ ಸಾಗಲಿಕ್ಕೇ ಬೇಕು. ಹಣದ ಸಹಾಯವಂತೂ ಪ್ರತಿಯೊಂದು ಕಾರ್ಯಕ್ಕೆ ಮುಖ್ಯವಾಗಿ ಬೇಕೇಬೇಕು; ಆದರೆ ಕಾರ್ಯವಾಹಕರಕೆಲಸದ ಹಿಡಿತ, ಜಾಣತನ, ಕಾರ್ಯತತ್ಪರತೆ, ಮುತ್ಸದ್ದಿತನಗಳ ಮೇಲೆಯೇ ದ್ರವ್ಯ ಸಹಾಯದ ಏರಿಳಿತಗಳಿರುತ್ತವೆ. ಸತ್ಕಾರ್ಯಕ್ಕೆ ಹಣವು ದೊರೆತೇ ದೊರೆಯುತ್ತದೆಂಬದನ್ನು ನೆನೆದು ಈ ಕಾರ್ಯದ ಭಾರವನ್ನು ತಲೆಯಮೇಲೆ ಹೊತ್ತ ಉತ್ಸಾಹಿಗಳು, ತಮ್ಮ ಕಾರ್ಯದ ರಥವನ್ನು ಚೊಕ್ಕಟವಾಗಿ ಹೊಡೆಯುವದರಲ್ಲಿ ದಕ್ಷರಾಗಿರಲಿ.

ಇಹ ವೃತ್ತ.

ಚಳಿ ಸಾಧಾರಣವಾಗಿ ಬೀಳುತ್ತದೆ.

ಊರಲ್ಲಿ ಬಡವರ ಆಡುಗಳು ಇತ್ತಿತ್ತ ಹೆಚ್ಚಾಗಿ ಮಾಯವಾಗುತ್ತಲಿವೆ ಫೌಜದಾರರ ಕಡೆಗೆ ಒಂದೆರಡು ಫಿರ್ಯಾದಿಗಳೂ ಆಗಿವೆ ಕದ್ದುಕೊಂಡ ಆಡುಗಳ ತೊಗಲು ದೊರೆತದ್ದರ ಮೇಲಿಂದ ಕಳ್ಳನ ಪತ್ತೆಯೂ ಆಗಿತ್ತು. ಆದರೆ ಈಗೀಗ ಆ ಪ್ರಕರಣವು ಬೈಲಿಗೆ ಬಂದಿಲ್ಲ ಇದರ ಕಾರಣನ್ನು ಫೌಜದಾರರು ಹೇಳಬಲ್ಲರೋ? ಎಂದ ಓರ್ವರು ಕೇಳುತ್ತಾರೆ.

ಹಿರೇಮಠ ಸಾ॥ ಕಜೇರಿಯವರ ಮುಕ್ಕಾಂ ಇಲ್ಲಿಯೇ ಇದೆ.

ಹಿಂದುಸ್ಥಾನ ಸರಕಾರದಿಂದ ಶಿಲಾಲೇಖಗಳನ್ನು ಶೋಧಿಸಲು ಬಂದ ಶ್ರೀ ಎಸ್. ಲಕ್ಷ್ಮೀನಾರಾಯಣರಾಯರು ಹಳ್ಳಿಗಳನ್ನು ಸುತ್ತುತ್ತಲಿದ್ದಾರೆ

ಕಾಂಗ್ರೆಸ್ಸಿಗೆ ಈ ಸಲ ಬಾಗಲಕೋಟೆಯಿಂದ ೧೫ ಜನ ಪ್ರತಿನಿಧಿಗಳು ಹೋಗಿದ್ದಾರೆ ಇದಲ್ಲದೆ ಪ್ರೇಕ್ಷಕರು ಬೇರೆ ಬಾಗಲಕೋಟೆಯು ರಾಷ್ಟ್ರಕಾರ್ಯದಲ್ಲಿ ತೊಡಗಲು ಹವಣಿಸುತ್ತಿರುವ ಸಲಕ್ಷಣವಿದು. ಹಾಗೂ ಇಲ್ಲಿಯ ಹೊಸಜಾಗ್ರತೆಯ ಫಲವೇ ಇದು.

ವೀರಶೈವ ಮಹಾಸಭೆಗೆ ಅನೇಕರು ಹೋಗತಕ್ಕವರಿದ್ದಾರೆ.

ವ್ಯಾಯಾಮ ಮಂದಿರದ ಸಹಾಯಕ್ಕಾಗಿ ಪ್ರೊ. ಪ್ರಾಣಶೆಟ್ಟಿ ಯಡೂರ ಇವರ ಜಾದೂ ಖೇಟವು ಕಳೆದ ರವಿವಾರ ಜರುಗಿತು. ಎಲ್ಲ ವೆಚ್ಚ ಹೋಗಿ ಅಜಮಾಸ ೬೦ ರೂ. ಮಂದಿರದ ಪಾಲಿಗೆ ಬಂದಿವೆ. ಆ ದಿನ ಸಾಕಷ್ಟು ಖುರ್ಚಿಗಳನ್ನು ಸಂಪಾದಿಸುವದು ಅಶಕ್ಯವಾಗಿತ್ತೆಂಬದನ್ನು ಮರೆತು ಹಲವರು ಚಾಲಕರ ಮೇಲೆ ರೇಗಿದ್ದರು! ಸಾರ್ವಜನಿಕ ಕೆಲಸ ಮಾಡುವಾಗ ಚಾಲಕರು ಸ್ವತಃ ತಮ್ಮ ಅನುಕೂಲತೆಗಳನ್ನು ಎಳ್ಳಷ್ಟಾದರೂ ಲೆಕ್ಕಿಸಕೂಡದೆಂಬುದು ಆ ದಿನದ ಚಾಲಕರ ಲಕ್ಷ್ಯಕ್ಕೆ ಬಂದಿರಬಹುದು. ಇವರ ಮುಂದಿನ ಸಾರ್ವಜನಿಕ ಸೇವೆಯಲ್ಲಿ ಉಪಯೋಗವಾಗುವದಾಗಿ ವಿಶ್ವಾಸವಿದೆ.

ಬೆಂಗಳೂರದ "ಇಂಡಿಯನ್ ಜ್ಯುಯಲರಿ ಮಾರ್ಟ" ದವರು ತಮ್ಮ ಅಂದವಾಗಿರುವ ಬೆಳ್ಳಿಯ ಚಿತ್ರಗಳನ್ನು ಕನ್ನಡಿ ಕಟ್ಟಿನಲ್ಲಿ ಹಾಕಿ ನಮೂನೆಗಾಗಿ 'ಕನ್ನಡಿಗ'ನ ಕಾರ್ಯಾಲಯಕ್ಕೆ ಕಳಿಸಿದ್ದಾರೆ. ಈ ೨೪ ಚಿತ್ರಗಳಲ್ಲಿ ಎಲ್ಲ ದೇವರ ಚಿತ್ರಗಳಿವೆ. ಅವು ಬಹು ಅಂದವಾಗಿಯೂ ಇವೆ ಬಾಗಲಕೋಟೆಯ ರಸಿಕರು ಅವಶ್ಯವಾಗಿ ಅವನ್ನು ನೋಡಿಕೊಂಡು ಹೋಗಬೇಕು.

ಮುಂಬೈ ಸರಕಾರದ ಗ್ಯಾಝೆಟ್.

ಶ್ರೀ. ಕಾಕೂರರ ಬದಲು ಶ್ರೀ. ಮಹಮ್ಮದ ನಾಝೀರ ಶೇಖರು ಧಾರವಾಡದ ಆಸಿಸ್ಟಂಟ ಜಡ್ಜರಾಗುವರು.

ಈ ತ್ರೈಮಾಸಿಕದಲ್ಲಿ ಮುಂಬೈ ಇಲಾಖೆಯೊಳಗೆ ೫೭೫ ಗ್ರಂಥಗಳು ಪ್ರಕಟವಾಗಿವೆ. ಅದರಲ್ಲಿ ೨೪ರಲ್ಲ ಗ್ರಂಥಗಳು ಮಾತ್ರ ಕನ್ನಡನುಡಿಯವು. ಈ ೨೪, ಕರ್ನಾಟಕದ ಗತವೈಭವ, ಉಪನಿಷತ್ ಪ್ರಕಾಶಗಳು ದ್ವಿತೀಯ ಮುದ್ರಣದವು. ಉಳಿದ ೨೨ರಲ್ಲಿ "ಮನೋಹರಿ" ಎಂಬ ಕಾದಂಬರಿಯೊಂದೇ ೧—೮—೦ ಬೆಲೆಯ ದೊಡ್ಡ ಪುಸ್ತಕ. ಉಳಿದವುಗಳೆಲ್ಲ ಚಿಕ್ಕ ಚಿಕ್ಕ ಪುಸ್ತಕಗಳೇ. ಅವುಗಳಲ್ಲಿಯೂ ಕ್ರಮಿಕ ಪುಸ್ತಕಗಳ ಶಬ್ದಾರ್ಥಗಳೇ ಹೆಚ್ಚು! ಅಂತೂ ಕನ್ನಡದ ಏಳ್ಗೆ ಹೇಗೆಸಾಗಿದೆ ನೋಡಿ!

ಪತ್ರಸಂಪಾದನ ಕಲೆ

ಲೇಖಕ—ಶ್ರೀಕೃಷ್ಣಕುಮಾರ ಕರಕೀವನ

" I will only say this—that nobody can avoid-
.here is nobody who is not bound to recognise that the press is a great centre and fountain of public-hearted duty and moral force; that it is the guide to an in-tellectual grasp of the ftacts of the world and thirdly, that it is in its best form s an organ of practical common sense. "

—Lord Morley.

ಆಧುನಿಕ ಜಗತ್ತಿನಲ್ಲಿ ವರ್ತಮಾನಪತ್ರಿಕೆಗಳ ಸ್ಥಾನವು ಅತ್ಯಂತ ಮಹತ್ವವುಳ್ಳದೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆದರೆ ನಮ್ಮ ಭಾರತವರ್ಷದಲ್ಲಿ ಅದಕ್ಕೆ ದೊರೆಯಬೇಕಾದ ಪೂಜ್ಯಸ್ಥಾನವು ಇನ್ನೂ ದೊರೆತಿಲ್ಲ. ಮತ್ತು ಎಲ್ಲಿಯವರೆಗೆ ಹಿಂದುಸ್ಥಾನವು ಸ್ವತಂತ್ರವಾಗಿರುವದೋ ಅಲ್ಲಿಯವರೆಗೆ ಅದು ದೊರೆಯುವ ಸಂಭವವೂ ಇಲ್ಲ. ಆದರೆ ಪಾಶ್ಚಾತ್ಯದೇಶಗಳಲ್ಲಿ ಅದಕ್ಕೆ ಈಗ ದೊರೆತಿರುವ ಸ್ಥಾನವು ಸಿಕ್ಕುವದಕ್ಕೆ ಅಲ್ಲಿನ ಸಂಪಾದಕರು ಪತ್ರಸಂಪಾದನಕಲೆಯನ್ನು ಯಾವರೀತಿಯಿಂದ ಅಭಿವೃದ್ಧಿಗೊಳಿಸಲೆತ್ನಿಸಿದರೆಂಬುದನ್ನು ತಿಳಿದರೆ, ಅವರು ಮಾಡಿದ ಪ್ರಯತ್ನಗಳಲ್ಲಿ ಕೆಲವಂಶಗಳನ್ನಾದರೂ ನಮ್ಮ ದೇಶದ ಪತ್ರಸಂಪಾದಕರು ಅನುಸರಿಸಿದರೆ ಆಗ ಇಲ್ಲಿಯೂ ಆ ಕಲೆಯ ಅಭಿವೃದ್ಧಿಗೆ ಎಡೆ ದೊರೆಯುವದೆಂದು ನನ್ನ ಭಾವನೆಯಾಗಿದೆ. ಆದುದರಿಂದ ಪ್ರಕೃತ ಲೇಖನದಲ್ಲಿ ಪತ್ರಿಕೆಯೆಂದರೇನು, ಪತ್ರಸಂಪಾದಕರ ಕರ್ತವ್ಯವೇನು, ಎಂಬವನ್ನು ತಿಳಿಸಲೆತ್ನಿಸುವೆನು. ಈಗ ಪತ್ರಸಂಪಾದನ ಕಲೆಗೆ ಈ ದೇಶದಲ್ಲಿಯೂ ಒಂದು ಸ್ಥಾನವು ದೊರೆಯುತ್ತಿರುವದು. ಇದರ ವಿಚಾರವು ಜಯಕರ್ನಾಟಕದ ವಾಚಕರಿಗೆ ರುಚಿಸಿದರೆ, ಇನ್ನು ಮುಂದೆ ಇದರ ಸಂಬಂಧವಾಗಿ ೮—೧೦ ಲೇಖನ ಮಾಲೆಗಳನ್ನು ಕನ್ನಡಿಗರಿಗೆ ಅರ್ಪಿಸಲು ಸಿದ್ಧನಾಗಿರುವೆನು. ವಿಷಯವು ದೊಡ್ಡದಾಗಿರುವುದರಿಂದಲೂ ಜಯಕರ್ನಾಟಕದ ಈ ಸಂಚಿಕೆಯಲ್ಲಿ ಸ್ಥಳವು ಸಂಕೋಚವಾಗಿರುವುದರಿಂದಲೂ ಈ ಸಂಕ್ಷಿಪ್ತ ಲೇಖನಕ್ಕಾಗಿ ವಾಚಕರಲ್ಲಿ ನಾನು ಕ್ಷಮೆ ಬೇಡುವೆನು

ವರ್ತಮಾನಪತ್ರಿಕೆಗಳ ಮಹಿಮೆ.

ಮುದ್ರಣಾಲಯದ ಕಾನೂನು ಜಾರಿಗೆ ಬರುವ ಪೂರ್ವದಲ್ಲಿ ನಮ್ಮೀ ದೇಶದಲ್ಲಿ ವರ್ತಮಾನಪತ್ರಿಕೆಗಳ ಮಹಿಮೆಯು ವಿಶೇಷವಾಗಿತ್ತು. ಆಗಿನ ಸಂಪಾದಕರು ಮುದ್ರಣದ ಕಡೆಗೆ ವಿಶೇಷ ಗಮನ ಕೊಡಲವಕಾಶವಿಲ್ಲದಿದ್ದರೂ ವಿಷಯಗಳನ್ನು ಸಂಗ್ರಹಿಸಿ ಅವುಗಳನ್ನು ಆಡಳಿತದವರಿಗೆ ತಿಳಿಸುವ ರೀತಿಯಿಂದ ಅದರ ಮಹಿಮೆಯು ಎಷ್ಟರ ಮಟ್ಟಿಗಿತ್ತೆಂದು ಮುಂದೆ ಹೇಳುವ ಸಂಗತಿಯಿಂದ ತಿಳಿಯಬಹುದು ಮೊದಲು ನಮ್ಮ ಅರಸರು ದೇಶೀಯರ ಜ್ಞಾನಚಕ್ಷುವು ವಿಕಾಸಗೊಳ್ಳಬೇಕೆಂದು ಅಪೇಕ್ಷಿಸುತ್ತಿರಲಿಲ್ಲ. ಆದುದರಿಂದ ಆಗ ಸರಕಾರವು ಇಂತಹ ಕಾರ್ಯಗಳಿಗೆ ವಿಶೇಷ ಪ್ರೋತ್ಸಾಹನವನ್ನು ಕೊಡುತ್ತಿರಲಿಲ್ಲ

" It was our policy in those days to keep the natives of India in the profoundest possible state of barbarism and darkness and every attempt to diffuse the light of knowledge among the people was Vehemently opposed and resented......Captain sydenham wishing to giatify an opposed desire expressed by the Nizam to see some of the appliances of European Science, procured for him three specimens in the shape of an air pump, *a printing press*, a man-of-war. Having mentioned this in his demi-official corresdondance with the Chief Secretary, he was censured for having placed in the hands of a native prince so dangerous an instrument as a printing press "

—Kaye's life of Metcalfe- Vol. II pp 248

ಇದರಿಂದ ಆಳರಸರ ಮೂಲ ಧ್ಯೇಯವೇನಾಗಿದ್ದಿತೆಂಬುದು ತಿಳಿದು ಬರುವುದು. ಮುಂದೆ ಸರ ವಿಲಿಯಮ್ಸ ಬೆಂಟಿಂಕನು ೧೮೨೮ ರಿಂದ ೧೮೩೫ ರವರೆಗೆ ಹಿಂದುಸ್ಥಾನದ ಗವರ್ನರ ಜನರಲ್ಲಾಗಿದ್ದನು. ಆತನು ವರ್ತಮಾನಪತ್ರಿಕೆಗಳ ಸ್ವಾತಂತ್ರ್ಯಾಭಿಮಾನಿಯಾಗಿದ್ದನು. ಆತನು ಹಿಂದುಸ್ಥಾನದ ಹಲವು ವಿಚಾರಗಳನ್ನು ವರ್ತಮಾನಪತ್ರಿಕೆಗಳ ಮೂಲಕವೆ ಕಲಿತುದೆಂದು ಮುಕ್ತಕಂಠದಿಂದ ಒಪ್ಪಿಕೊಂಡಿದ್ದನು. Kaye's life and correspondance of Lord Metalfe. Vol II pp 130-40— " He (Lord William Bentink) did not scruple indeed, to say after he had been some years in India that he learnt more from it than from all the other sources of information which had been open to him since he assumed the government of the country " ಎಂಬ ವಾಕ್ಯಗಳಿಂದ ತಿಳಿದುಬರುವುದು. ಸನ್ ೧೮೫೭ ರಲ್ಲಿ ಶಿಪಾಯಿಗಳ ದಂಗೆಯಾದಾಗ ಲಾರ್ಡ ಕ್ಯಾನಿಂಗನು ಕೆಲವು ದಿನಗಳ ವರೆಗೆ ಮುದ್ರಣಾಲಯದ ಸ್ವಾತಂತ್ರ್ಯವನ್ನು ಹರಣಮಾಡಿದ್ದನು ಮುಂದೆ ಸನ್ ೧೮೭೮ ರಲ್ಲಿ ಲಾರ್ಡ ಲಿಟ್ಟನ್‌ನು 'ವರ್ನಾಕ್ಯುಲರ್ ಪ್ರೆಸ್ ಆಕ್ಟ'ನ್ನು ಜಾರಿಗೆ ತಂದು ಮುದ್ರಣಾಲಯದ ಸ್ವಾತಂತ್ರ್ಯವನು ಸಂಪೂರ್ಣವಾಗಿ ಹರಣ ಮಾಡಿದನಂತರ ಅದರ ಮಹಿಮೆಯು ಮಾಯವಾಯಿತು. ಆಗ ಕೆಲವು ಪ್ರಾಂತೀಯ ಅಧಿಕಾರಿಗಳು ಈ ಕಾನೂನಿನ ವಿಚಾರವಾಗಿ ತಮ್ಮ ಅಭಿಪ್ರಾಯ ವ್ಯಕ್ತಗೊಳಿಸಿದರು. ಮದರಾಸಿನ ಆಗಿನ ಗವರ್ನರರು ಈ ರೀತಿಯಾಗಿ ತಮ್ಮ ಅಭಿಪ್ರಾಯವನ್ನು ಬರೆದಿದ್ದರು" " I hold the Vernacular Press to be useful indication of the under-currents which may be running through the mass of Indi n population " ಎಂದರೆ ದೇಶೀಯ ಪತ್ರಿಕೆಗಳು ಭಾರತೀಯ ಜನಸಾಮಾನ್ಯತೆಯ ಭಾವಗಳ ಪ್ರವಾಹದ ಉಪಯುಕ್ತ ಲಕ್ಷಣಗಳಾಗಿವೆ." ಆಗ ಮದರಾಸ್ ಸರಕಾರದ ಸದಸ್ಯರಾದ ರಾಬಿಸನ್ ಸಾಹೇಬನು ಈ ರೀತಿ ಬರೆದಿದ್ದನು—" We possess in it (Vernacular Press) a useful barometer of native feeling and sentiment ಎಂದರೆ ಭಾರತವಾಸಿಗಳ ಭಾವ ಮತ್ತು ವಿಚಾರಗಳನ್ನು ತಿಳಿಯಲು ದೇಶೀಯ ಪತ್ರಿಕೆಗಳು ನಮಗೆ ಉಪಯುಕ್ತ ಯಂತ್ರಗಳಾಗಿವೆ. ಇದೇ ರೀತಿಯಾಗಿ ಲಾರ್ಡ ಲಿಟ್ಟನ್ ಸಾಹೇಬನಿಗೆ ತನ್ನ ಅಭಿಪ್ರಾಯವನ್ನು ಬರೆದು ತಿಳಿಸುವಾಗ ಆಗಿನ ಭಾರತ ಸಚಿವರು ಈ ರೀತಿಯಾಗಿ ಬರೆದಿದ್ದರು. All the mo-t experienced Administrators have felt that the great difficultly of Indian Administration is the di. .cultly of ascertaining facts of social condition and political sentiment and that the Vernacular press has always been considered as a valuable means of getting at these facts as is shown by your Excel. ency's Government by that of your predecessor's a n by this office by a reference to the translated extra- -cts o f native newspapers which a r e regularly supplied to you,

ಈ ಬಗೆಯಾದ ಅಭಿಪ್ರಾಯಗಳು ಬಂದಿದ್ದರೂ ಲಿಟ್ಟನ್ ಸಾಹೇಬನು ೧೮೭೮ ರಲ್ಲಿ " ಪ್ರೆಸ್ ಆಕ್ಟ " ನ್ನು ಜಾರಿಗೆ ತಂದುಬಿಟ್ಟನು

ಆದರೂ ಈಗ ಕೆಲವು ದೇಶೀಯ ಸಂಸ್ಥಾನಗಳನ್ನುಳಿದು ಉಳಿದ ಬ್ರಿಟಿಷ್ ಹಿಂದುಸ್ಥಾನದಲ್ಲಿ ಕೂಡ ಪತ್ರಸಂಪಾದನ ಕಲೆಯನ್ನು ಅಭಿವೃದ್ಧಿಗೊಳಿಸಲು ಎಷ್ಟೋ ಅನುಕೂಲತೆಗಳಿರುವವು. ಪತ್ರಸಂಪಾದಕರು ಮಾತ್ರ ತಮ್ಮ ಕರ್ತವ್ಯವನ್ನರಿತು ಕೆಲಸ ಮಾಡಿದರೆ ಅದರ ಉನ್ನತಿಯನ್ನು ಶೀಘ್ರವಾಗಿಯೂ ಸಾಧಿಸಬಹುದು,

ಸಂಪಾದಕರ ಕರ್ತವ್ಯ

ಪತ್ರ ಸಂಪಾದನ ಕಾರ್ಯವೆಂದರೆ ಆಟವಲ್ಲ, ಮನಸ್ಸಿಗೆ ಬಂದುದನ್ನೆಲ್ಲ ಬರೆಯುವುದಲ್ಲ, ಇದು ಬಹು ಕಠಿಣವಾದ ಜವಾಬುದಾರಿಯ ಕೆಲಸವು, ಒಬ್ಬ ಕವಿಯಂತೆ ಕೇವಲ ತನ್ನ ಪ್ರತಿಭೆಯಿಂದಲೆ ಯಾವ ಸಂಪಾದಕನೂ ಪ್ರತಿಷ್ಠೆಯನ್ನು ಸಾಧಿಸಲಾರನು. ಸಂಪಾದಕನಿಗೆ ಪ್ರತಿಭೆಯೊಂದಿಗೆ ಅಗಾಧವಾದ ಜ್ಞಾನವೂ ಇರಬೇಕು, ಅವನು ಯಾವ ವಿಷಯದಲ್ಲಿ ತನ್ನ ಸಮ್ಮತಿಯನ್ನು ಸೂಚಿಸಬೇಕಾದರೂ ಅದರ ವಿಚಾರವಾಗಿ ಚೆನ್ನಾಗಿ ಆಲೋಚನೆ ಮಾಡದೆ ಬರೆಯುವುದಿಲ್ಲ. ಪ್ರಸಿದ್ಧ ಇಂಗ್ರಜೀ ಲೇಖಕನಾದ ಕ. ಲಾರ್ಯಿಲ್ ಎಂಬಾತನು ಸಂಪಾದಕನನ್ನು 'ಸಮ್ರಾಟ ಮತ್ತು ಧರ್ಮೋಪದೇಶಕ'ರಿಗೆ ಹೋಲಿಸಿರುವನು. ಅವನು ಸ್ಪಷ್ಟವಾದಿಯೂ ನಿರ್ಭೀತನೂ ಆಗಿರಬೇಕು ದಿವಂಗತ ಲೋಕಮಾನ್ಯ ತಿಲಕರೂ ಮಹಾತ್ಮಾ ಗಾಂಧಿಯವರೂ ಭಾರತವಾಸಿಗಳ ಹೃದಯ ಸಮ್ರಾಟರಾಗಿರುವುದು ಈ ಎರಡರಿಂದಲೆ ಕವಿಯಂತೆ ಸಂಪಾದಕನು ತನ್ನ ಕಲ್ಪನಾಶಕ್ತಿ ಮತ್ತು ವಿಚಾರಗಳ ಸಹಾಯವನ್ನು ಪಡೆಯುವವನಾಗಿರಬೇಕು. ಅನೇಕ ಕವಿಗಳ ಕಲ್ಪನಾಶಕ್ತಿಯು ಒಬ್ಬ ಸ್ತ್ರೀಯ ಮುಖವು ಚಂದ್ರನಿಗಿಂತಲೂ ಸುಂದರವಾದುದೆಂದು ವರ್ಣಿಸುವುದರಲ್ಲಿ ಮುಗಿಯುವುದು ಆದರೆ ಸಂಪಾದಕನ ಕಲ್ಪನಾ ಶಕ್ತಿಯ ವಿಚಾರವು ಹಾಗಲ್ಲ. ಸಂಪಾದಕನು ತನ್ನ ಕೋಣೆಯಲ್ಲಿಯೆ ಕುಳಿತು ಅಮೇರಿಕಾದವರು ಯುದ್ಧದ ಜಹಜುಗಳನ್ನು ತಯಾರಿಸುತ್ತಿರುವರು, ವಿಲಾಯತಿಯ ಮಂತ್ರಿಮಂಡಲದವರು ಅದನ್ನು ನಿಷೇಧಿಸುತ್ತಿವರು ಬಾಲ್ಸೆವಿಕ್ ಪಂಗಡದವರು ಅಫಘಾನಿಸ್ತಾನದ ಕಡೆಗೆ ಬರುತ್ತಿರುವರು, ಜಪಾನು ತನ್ನ ಶಕ್ತಿಯನ್ನು ಬೆಳೆಸುತ್ತಿರುವುದು ಚೀನಾದವರು ಘೋರ ಸಂಗ್ರಾಮಕ್ಕೆ ಅಣಿಯಾಗುತ್ತಿರುವರು, ಮಿಶ್ರ ದೇಶದಲ್ಲಿ ನವೀನ ಜಾಗ್ರತಿಯುಂಟಾಗುತ್ತಿರುವುದು, ಅಯರ್ಲಂಡ ದೇಶವು ಸ್ವಾತಂತ್ರ್ಯ ಸಂಗ್ರಾಮವನ್ನು ಹೂಡಿದೆ, ಇತ್ತ ಭಾರತ ವರ್ಷದಲ್ಲಿ ಸ್ವರಾಜ್ಯ ಚಳವಳ ಮಧ್ಯದಲ್ಲಿ ಹಿಂದೂ ಮುಸಲೀಮ ಜಗಳಗಳು ನಡೆಯುತ್ತಲಿವೆ.— ಈ ಎಲ್ಲ ವಿಷಯಗಳಿಂದ ಪ್ರಪಂಚದ ಮೇಲೆ ಯಾವ ಪರಿಣಾಮವಾಗುವುದು ಎಂದು ತನ್ನ ಕಲ್ಪನಾಶಕ್ತಿಯಿಂದ ಊಹಿಸಿ, ಅದರಿಂದಾಗುವ ದುಷ್ಪರಿಣಾಮಗಳನ್ನೂ, ಒಳ್ಳೆಯ ಪರಿಣಾಮಗಳನ್ನೂ ಸೂಚಿಸಿ, ಈ ಸಂದರ್ಭದಲ್ಲಿ ಸರ್ವರೂ ಅನುಸರಿಸಬೇಕಾದ ಮಾರ್ಗವನ್ನು ಸೂಚಿಸುವನು. ಒಟ್ಟಿನಲ್ಲಿ ಹೇಳಬೇಕಾದರೆ ಸಂಪಾದಕನ ಜೀವನವು ಕಠಿಣತರವಾದುದು, ಅವನು ಮನುಷ್ಯನ ನೈತಿಕ ರೂಪವನ್ನು ಬಲಪಡಿಸಿ, ತನ್ನ ನಿಷ್ಪಕ್ಷಪಾತ ಮತ್ತು ಎದೆಗಾರಿಕೆಯಿಂದ ಸತ್ಯದ ರಕ್ಷಣೆಯನ್ನು ಮಾಡುವವನಾಗಿರಬೇಕು. ಮಾರ್ಗ ಪ್ರದರ್ಶನವೇ ಅವನ ಕೆಲಸ. ಅವನು ಮೌನದಿಂದ ದೇಶಸೇವೆ ಮಾಡುವವನು. ಹಲವರ ಜೀವನವು ಅವನ ಉಪದೇಶವನ್ನವಲಂಬಿಸಿರುವುದು. ಅವನು ದೇಶಸೇವಕನು, ರಾಷ್ಟ್ರ ನಿರ್ಮಾಣಕನು ಅವನು ನಿಂದೆಯಿಂದಲೂ ಸ್ತುತಿಯಿಂದಲೂ ದೂರನಾಗಿರಬೇಕು. ಅವನು ಪ್ರಾಮಾಣಿಕನಾಗಿರಬೇಕು. ಅವನ ಪ್ರಾಮಾಣಿಕತೆಯ ವಿಚಾರದಲ್ಲಿ ಒಬ್ಬ ಪ್ರಸಿದ್ಧ ಪುರುಷನು ಹೀಗೆ ಬರೆದಿರುವನು.

No honest Editor has anything to fear; to the dishonest we desire to give neither sympathy nor protection " —The Hon'ble Sir Harold Stuart

ಮತ್ತೊಬ್ಬ ಪ್ರಸಿದ್ಧ ಫ್ರೆಂಚ ಲೇಖಕನು— "Suffer yourself to be blamed, imprisoned, condemned; suffer yourself even to be hanged, but publish your opinione It is not only a right but it is a duty. ಎಂದು ಹೇಳಿರುವನು, ಇದರಿಂದ ಸಂಪಾದಕನ ಜವಾಬುದಾರಿಯು ಆದೇಶಗಳಲ್ಲಿ ಎಷ್ಟು ಮಹತ್ವವುಳ್ಳದ್ದಾಗಿದೆಯೆಂಬುದು ತಿಳಿದು ಬರುವುದು. ಇನ್ನು ಒಂದು ವಿಚಾರದಲ್ಲಿ ಕರ್ನಾಟಕದ ಸಂಪಾದಕರಿಗೆ ಒಂದು ಸಂಗತಿಯನ್ನು ಒತ್ತಿ ಹೇಳಬೇಕಾಗಿದೆ. ಅದು ಗ್ರಂಥ ಚೌರ್ಯ (Plagiarism) ವಿಚಾರ ಕೆಲವು ಪತ್ರಕರ್ತರು ತಾವು ಬೇರೆ ಯಾವುದಾದರೂ ಪತ್ರಿಕೆಯಿಂದ ಒಂದು ವಿಷಯವನ್ನಾರಿಸಿಕೊಂಡರೆ ಆ ಪತ್ರಿಕೆಯ ಹೆಸರನ್ನೇ ಹಾಕುವುದಿಲ್ಲ. ಇದಕ್ಕೆ ಗ್ರಂಥ ಚೌರ್ಯವೆಂದು ಹೆಸರು. ಇದರಿಂದ ಪತ್ರಕರ್ತನ ಗೌರವವು ಕಡಿಮೆಯಾಗುವುದು. ಬೆಂಗಳೂರತ್ತಕಡೆಯ ಒಂದು ದೈನಿಕ ಪತ್ರದಲ್ಲಿ ಕೆಲವು ಬೇರೆ ಮಾಸಪತ್ರಿಕೆಗಳಲ್ಲಿ ಬೇರೆಯವರು ಬರೆದಿದ್ದ ಲೇಖನಗಳನ್ನು ದೈನಿಕ ಪತ್ರದ ಸಂಪಾದಕರು ತಮ್ಮ ಅಗ್ರಲೇಖವಾಗಿ ಪ್ರಕಟಮಾಡುತ್ತಿದ್ದರು. ದುರ್ದೈವದಿಂದ ನಮ್ಮ ಕರ್ನಾಟಕದಲ್ಲಿ ಒಬ್ಬರೇ ಐವಾರು ಪತ್ರಿಕೆಗಳನ್ನು ತರಿಸಿಕೊಳ್ಳುವ ಚೈತನ್ಯವಿಲ್ಲವಾದರೂ ಈಗೀಗ ಕರ್ನಾಟಕದಲ್ಲಿ ಅಲ್ಲಲ್ಲಿ ವಾಚನಮಂದಿರಗಳು ಹೆಚ್ಚುತ್ತಲಿವೆ. ಅದರಿಂದ ಈಗ ವಾಚಕರು ಇಂಥಾ ಗ್ರಂಥಚೋರರನ್ನು ಕಂಡು ಹಿಡಿಯಲು ಅನುಕೂಲತೆಗಳುಂಟಾಗಿವೆ. ಆದುದರಿಂದ ಸಂಪಾದಕರು ಇದರ ವಿಚಾರದಲ್ಲಿ ಎಚ್ಚರಿಕೆಯುಳ್ಳವನಾಗಿರಬೇಕು.

ಇನ್ನೊಂದು ವಿಚಾರ. ಈಗ ನಮ್ಮಲ್ಲಿ ನಿಜವಾದ ವರ್ತಮಾನಪತ್ರ (News paper) ಕ್ಕಿಂತಲೂ ಅಭಿಪ್ರಾಯ ಪತ್ರಿಕೆಗಳು (Views-paper) ಹೆಚ್ಚುತ್ತಲಿವೆ ಈಗ ಕರ್ನಾಟಕದಲ್ಲಿ ಸಾಕಾದಷ್ಟು ವಿದ್ಯಾಪ್ರಚಾರವಿಲ್ಲದಿರುವುದರಿಂದ ಸಂಪಾದಕನ ಅಭಿಪ್ರಾಯಗಳನ್ನು ಓದಿ ಜೀರ್ಣಿಸಿಕೊಳ್ಳಲು ಈ ಜೀವನ ಸಂಗ್ರಾಮದ ಕಾಲದಲ್ಲಿ, ಸದುದ್ಯೋಗದ ಗಲಭೆಯೆದ್ದಿರುವ ಈ ಕಾಲದಲ್ಲಿ ವರ್ತಮಾನ ಪತ್ರಿಕೆಯ ವಾಚಕರಿಗೆ ಸಮಯವಿಲ್ಲವೆಂಬುದನ್ನು ತಿಳಿದುಕೊಳ್ಳಬೇಕು ಮತ್ತು ಸಾಧ್ಯವಾದ ಮಟ್ಟಿಗೆ ದೇಶದಲ್ಲಿ ನಡೆಯುತ್ತಿರುವ ಹಲವುಬಗೆಯ ಚಳವಳಗಳ ವರ್ತಮಾನಗಳನ್ನೂ ಅದ್ಭುತವೂ ಆಶ್ಚರ್ಯಕರವೂ ಆದ ಪರದೇಶೀಯ ಸುದ್ದಿಗಳನ್ನೂ ಹೆಚ್ಚಾಗಿ ಕೊಡಬೇಕು. ಈ ನಿಯಮವನ್ನು ಪರದೇಶೀಯ ಪತ್ರಿಕೆಗಳು ಚೆನ್ನಾಗಿ ಅನುಸರಿಸುತ್ತಿರುವವು. ಆದುದರಿಂದ ಅವುಗಳ ಪ್ರಚಾರ ಸಂಖ್ಯೆಯೂ ವಿಶೇಷವಾಗಿವೆ.

ಈಗ ಕರ್ನಾಟಕದಲ್ಲಿ ಹಲವು ಪತ್ರಿಕೆಗಳು ಹುಟ್ಟಿವೆ ದಿನೇ ದಿನೆ ಹುಟ್ಟುತ್ತಲಿವೆ. ಇವುಗಳಲ್ಲಿ ಕೆಲವು ಪತ್ರಿಕೆಗಳನ್ನು ಬಿಟ್ಟರೆ ಉಳಿದ ಪತ್ರಿಕೆಗಳ ಸಂಪಾದಕರು, ಪತ್ರ ಸಂಪಾದನವೆಂದರೇನೆಂಬುದನ್ನರಿಯದವರೆಂದು ಅವರ ಪತ್ರಿಕೆಗಳಿಂದಲೆ ಗೊತ್ತಾಗುತ್ತಿದೆ. ಮತ್ತೆ ಜೀವನಕ್ಕೆ ಯಾವದಾದರೂ ಮಾರ್ಗವು ಸಿಕ್ಕದಿದ್ದರೆ ಉಪಾಧ್ಯಾಯವೃತ್ತಿಯನ್ನು ಸ್ವೀಕರಿಸೋಣ ಎಂದು ಹೋಗುವ ಹಲವು ಅನಧಿಕಾರಿಗಳಂತೆ, ಈಗ ಸಂಪಾದಕ ಪ್ರಪಂಚದಲ್ಲಿಯೂ ಹಲವು ಅನಧಿಕಾರಿಗಳಿರುವರೆಂದರೆ ಅತ್ಯುಕ್ತಿಯಾಗದು. ಆದರೆ ಈಗಲಾದರೂ ಅವರು ಸಂಪಾದನ ಕಲಾವಿಚಾರವನ್ನು ಅಭ್ಯಾಸಮಾಡಲು ಯತ್ನಿಸಿ ತಮ್ಮ ಕರ್ತವ್ಯವನು ಇನ್ನು ಮುಂದಾದರೂ ಸರಿಯಾಗಿ ನೆರವೇರಿಸುವದಾದರೆ, ಇನ್ನು ಸ್ವಲ್ಪ ಕಾಲದಲ್ಲಿ ಅಮೇರಿಕಾದೇಶದ 'ನ್ಯುಯಾರ್ಕವರ್ಲ್ಡ' (New-York world) ನ ಸಂಪಾದಕರಾದ ಜೋಸೆಫ್ ಪುಲಿಟ್ಝರ್ (Joseph pulitzer) ಸಾಹೇಬರು ಹೇಳಿರುವ ಮುಂದಣ ವಾಕ್ಯವು ಕಾರ್ಯರೂಪದಲ್ಲಿ ಫಲಿಸಿದಂತಾಗುವದು.

" Before the century closes, schools of journalism will be generally accepted as a feature of specialised higher education, like schools of law or medicine " ಎಂದರೆ ಈ ಶತಮಾನವು ಮುಗಿಯುವದಕ್ಕೆ ಮುಂಚೆ ನ್ಯಾಯ ಅಥವಾ ವೈದ್ಯಕೀಯ ವಿದ್ಯಾಲಯಗಳಂತೆ ಪತ್ರಸಂಪಾದನ ಕಲಾಶಾಲೆಗಳೂ ವಿದ್ಯಾಭ್ಯಾಸದ ಒಂದು ಪ್ರಾಮುಖ್ಯಾಂಗವಾಗಿ ಪರಿಗಣಿಸಲ್ಪಡುವವು

ಈ ಪರಿಸ್ಥಿತಿಯು ನಮ್ಮ ದೇಶದಲ್ಲಿ ಶೀಘ್ರವಾಗಿ ಉಂಟಾಗಲೆಂದು ಹಾರೈಕೆ. —ಜಯಕರ್ನಾಟಕ.

೪೨ನೇ ರಾಷ್ಟ್ರೀಯ ಮಹಾಸಭೆ.

ಸಿದ್ಧತೆಯೆಲ್ಲ ಸಂಪೂರ್ಣವಾಗಿದೆ.

ನಾಳಿನಿಂದ ಪ್ರಾರಂಭ.

(ನಮ್ಮ ಸ್ವಂತ ಪ್ರತಿನಿಧಿಯಿಂದ)

ಮದ್ರಾಸ ಕಾಂಗ್ರೆಸ ನಗರ ತಾ॥ ೨೦--೧೨--೨೭

೪೨ನೇ ರಾಷ್ಟ್ರೀಯ ಮಹಾಸಭೆಯು ಇಲ್ಲಿ ತಾ॥ ೨೬ ರಲ್ಲಿ ಪ್ರಾರಂಭವಾಗುವದು. ೧೫ ಸಾವಿರ ಜನರು ಹಿಡಿಯುವಷ್ಟು ದೊಡ್ಡದಾದ ಮಂಟಪವು ಹಾಕಲ್ಪಟ್ಟಿದೆ. ಮಳೆಯಾಗುವ ಲಕ್ಷಣಗಳಿದ್ದದರಿಂದ ಅರಿವೆಯ ಬದಲು ತೆಂಗಿನ ಗರಿಗಳಿಂದ ಮಂಟಪವು ಸಿದ್ಧವಾಗಿದೆ. ಪ್ರತಿನಿಧಿಗಳಿಗಾಗಿ ಇಳಿದುಕೊಳ್ಳುವ ಕೋಣೆಗಳಿಗಾದರೂ ತೆಂಗಿನ ಗರಿಗಳೇ. ನಗರದ ಮಧ್ಯಭಾಗಕ್ಕೆ ಲೋಕಮಾನ್ಯರ ಮಂಟಪವೆಂದು ಹೆಸರಿಡಲ್ಪಟ್ಟಿದೆ. ಗಾಂಧಿ ಮೈದಾನವಿದೆ. ಸರೋಜಿನಿ ದೇವಿ ಬೀದಿ, ಬಿಝಾಂಟ ಬೀದಿ, ಅಲ್ಲೀ ಬೀದಿಗಳೆಂದು ಎಲ್ಲ ಪ್ರಮುಖ ರಾಷ್ಟ್ರಮುಖಂಡರ ಹೆಸರುಗಳು ಬೇರೆ ಬೇರೆ ಬೀದಿಗಳಿಗೆ ಕೊಡಲ್ಪಟ್ಟಿವೆ. ಎಸ್. ಆಯ್. ರೇಲ್ವೆಯವರು ಕಾಂಗ್ರೆಸ ನಗರ ಸ್ಟೇಶನನ್ನು ಪ್ರಾರಂಭಿಸಿದ್ದರಿಂದ ಪ್ರತಿನಿಧಿಗಳಿಗೆ ಬಹು ಅನುಕೂಲವಾಗಿದೆ. ವಿಷಯನಿಯಾಮಕ ಮಂಡಳಿಯ ಮಂಟಪವೂ ಭವ್ಯವಾಗಿದೆ. ೨ ಸಾವಿರ ಜನರು ಅಲ್ಲಿ ಕುಳಿತಕೊಳ್ಳಬಹುದಾಗಿದೆ. ಊರಲ್ಲೆಲ್ಲ ಕಾಂಗ್ರೆಸ್ಸದ ಗಡಿಬಿಡಿಯು ಈಗಾಗಲೇ ದೃಗ್ಗೋಚರವಾಗುತ್ತಲಿದೆ. ರಾಷ್ಟ್ರಮುಖಂಡರು ಈ ದಿನದಿಂದ ಒಬ್ಬೊಬ್ಬರೇ ಬರುತ್ತಹೋಗುವರು. ನಮ್ಮ ಕರ್ನಾಟಕ ಸಿಂಹ ದೇಶಪಾಂಡೆ ಗಂಗಾಧರರಾಯರು ನಾಡದು ಬರುವರು. ಡಾ. ಅನ ಸಾರೀಯವರಿಗೆ ಮಾನಪತ್ರವನ್ನು ಕೊಡಬೇಕೆಂದು ಮದ್ರಾಸ ಮುನಸಿಪಾಲ್ಟಿಯವರು ನಿಶ್ಚಯಿಸಿ, ೧೫೦ ರೂ. ವೆಚ್ಚಮಾಡಬೇಕೆಂದೂ ಗೊತ್ತುಮಾಡಿದ್ದಾರೆ. ಈಗಿನ ಅಧ್ಯಕ್ಷರಾದ ಶ್ರೀ. ಶ್ರೀನಿವಾಸ ಅಯ್ಯಂಗಾರರ ಭವ್ಯವಾದ ಛಾಯಾಚಿತ್ರವನ್ನು ಸಡಗರದಿಂದ ಮೆರವಣಿಗೆತೆಗೆದು, ಕಾಂಗ್ರೆಸ ನಗರದಿಂದ ಹೊರಡಿಸಿ, 'ಗೋಖಲೇ ಹಾಲ'ದಲ್ಲಿರಿಸಬೇಕೆಂದು ಗೊತ್ತಾಗಿದೆ. ಈ ಪ್ರಕಾರ ಮದ್ರಾಸವು ಈ ಊರ್ವ ಅಧ್ಯಕ್ಷರಿಗೂ ಮನ್ನಣೆಮಾಡಿದೆ.

ಈ ಸಲ ಔದ್ಯೋಗಿಕ ಪ್ರದರ್ಶನವು ಅತ್ಯಂತ ವಿಸ್ತಾರ ಹೊಂದಿದೆ. ಸರಕಾರೀ ಅಧಿಕಾರಿಗಳೂ ಸಹ ಇದಕ್ಕೆ ಸಹಾಯ ಮಾಡಿದ್ದಾರೆ. ಗವರ್ನರ ಸಾಹೇಬರು ಸ್ವತಃ ಧನದ ಸಹಾಯ ಮಾಡಿ ತಮ್ಮ ಸಹಾನುಭೂತಿಯನ್ನು ಪದೇ ಪದೇ ತೋರಿಸುತ್ತಲಿದ್ದಾರೆ. ಖಾದೀ ಪ್ರದರ್ಶನಕ್ಕೆ ಬೇರೆ ಬೇರೆ ಪ್ರಾಂತಗಳಿಂದ ಬಹು ಅಂದವಾದ ಬಟ್ಟೆಗಳು ಬಂದಿವೆ. ನಮ್ಮ ಕರ್ನಾಟಕದ ಬಟ್ಟೆಗಳೂ ಬಂದಿವೆ. ಯಾವ ಬಟ್ಟೆಗಳು ಹೆಚ್ಚು ಮನ್ನಣೆಯನ್ನು ಹೊಂದುವವೋ ನೋಡಬೇಕು. ನಮ್ಮ ಬಾಗಲಕೋಟೆಯ ಬಟ್ಟೆಯ ನಮುನೆ ಮುಂದೆ ಯಾವೂ ನಿಲ್ಲಲಾರವೆಂಬ ಭರವಸೆ ನನಗಿದೆ.

ಒಟ್ಟು ೨೭ ಬೇರೆ ಬೇರೆ ಪರಿಷತ್ತುಗಳು ಈ ಸಲ ಇಲ್ಲಿ ಕೂಡತಕ್ಕವಿವೆ. ಸ್ವಾಗತ ಮಂಡಲದವರು ಎಲ್ಲ ಪರಿಷತ್ತುಗಳಿಗೂ ಕೈಯಿಂದಾದಷ್ಟು ನೆರವಾಗಿದ್ದಾರೆ. ರಾಷ್ಟ್ರೀಯ ವಾರದಲ್ಲಿಯೇ ಈ ಎಲ್ಲ ಪರಿಷತ್ತುಗಳನ್ನು ಕೂಡಿಸುವದೆಂದರೆ ಅದೊಂದು ರಾಷ್ಟ್ರೀಯ ಮಹಾ ಸಂತೆಯೆಂದೇ ಹೇಳಬಹುದು. ಒಂದರ ಮೇಲೊಂದು ಪರಿಷತ್ತನ್ನು ಗಡಿಬಿಡಿಯಿಂದ, ಏಕಕಾಲಕ್ಕೆ ಕೂಡಿಸಿದರೆ, ಅವುಗಳಿಗೆ ಹೋಗುವದೇ ಮೊದಲು ಕಠಿಣ, ಹೇಗಾದರೂ ಮಾಡಿ ಕೆಲಜನರಾದರೂ ಹೋದರೆಂದರೆ ಶಾಂತತೆಯಿಲ್ಲದೇ ಗಡಿಬಿಡಿಯಿಂದ ಕೂಡಿಕೊಂಡದ್ದರಿಂದ ಪರಿಷತ್ತಿಗೆ ಯಾವ ಮಹತ್ವವೂ ಮನ್ನಣೆಯೂ ಬರಬೇಕೋ ಅವು ಬರುವದಿಲ್ಲ. ಕಡೆಗೆ ನಾಲ್ಕು ಜನರು ಕೂಡಿ ಏನಾದರೂ ಠರಾವುಗಳನ್ನು ಬರೆದು ಅವನ್ನು ವರ್ತಮಾನಪತ್ರದಲ್ಲಿ ಹೇಗಾದರೂ ಮಾಡಿ ಪ್ರಕಟಿಸಬಹುದು. ಆದರೆ ಅದರಿಂದ ಆ ಚಳವಳಿಗಾಗಲಿ, ರಾಷ್ಟ್ರಕಾರ್ಯಗಳಿಗಾಗಲೀ ಆಗುವ ಪ್ರಯೋಜನವೇನೋ ತಿಳಿಯದು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸ ಕಮೀಟಿಯ ಕಾರ್ಯದರ್ಶಿಗಳು ಬಂದಿದ್ದಾರೆ. ಕರ್ನಾಟಕ ಕ್ಯಾಂಪ ಪ್ರತ್ಯೇಕವಾಗಿದೆ. ಕರ್ನಾಟಕದ ಭೋಜನಶಾಲೆಯೂ ಪ್ರತ್ಯೇಕವಾಗಿ ಏರ್ಪಡಾಗಿದೆ.

ಉಳಿದ ವಿಷಯಗಳನ್ನು ಮುಂದಿನ ಪತ್ರದಲ್ಲಿ ಬರೆಯುವೆ.

ಕರ್ನಾಟಕ ಏಕೀಕರಣ ಪರಿಷತ್ತು.

"ಕರ್ನಾಟಕ ಧುರೀಣ"ನ ಮತ.

ಬಾಗಲಕೋಟೆಯ ಬಾಂಧವರು ಈ ಸಾರೆ ಕರ್ನಾಟಕ ಏಕೀಕರಣ ಪರಿಷತ್ತನ್ನು ತಮ್ಮಲ್ಲಿ ಸೇರಿಸಬೇಕೆಂದು ನಿರ್ಣಯಿಸಿದ್ದಾರೆ. ಅದು ಅಭಿನಂದನೀಯ ವಿಷಯ. ಏಕೀಕರಣ ಸಭೆಯು ಸ್ಥಾಪಿತವಾಗಿ ಮೂರು ವರ್ಷಗಳಾದರೂ ಅದು ಕರ್ತವ್ಯವನ್ನು ಯಶಸ್ವಿಯಾಗಿ ಮಾಡಲಿಲ್ಲೆಂದು ಹೇಳಬೇಕಾಗಿದೆ. ಸಾಮಾನ್ಯ ಪ್ರಚಾರಕಾರ್ಯವನ್ನೂ ಸಹ ಅದು ಸರಿಯಾಗಿ ನಡಿಸಲಿಲ್ಲ. ಬಾಗಲಕೋಟೆಯ ಪರಿಷತ್ತಿನಿಂದ ಈ ಜಾಡ್ಯವು ನಷ್ಟವಾಗುವದಾದರೆ ಈ ಪರಿಷತ್ತು ಸ್ವಾಗತಕ್ಕೆ ಪಾತ್ರವಾಗುವುದು. ಏಕೀಕರಣದ ವಿಷಯದಲ್ಲಿ ಕರ್ನಾಟಕದಲ್ಲಿ ಮತಭೇದವಿಲ್ಲೆಂಬುದ ನಿಜ. ಆದರೆ ಏಕೀಕರಣದ ಸಂದೇಶವು ಕರ್ನಾಟಕದ ತಿರುಳಿನಂತಿದ್ದ ಸಾಮಾನ್ಯ ಜನತೆಗೆ ಮಾತ್ರ ಇನ್ನೂ ಮುಟ್ಟಿಲ್ಲ. ಅವರಿಗೆ ಏಕೀಕರಣವೆಂಬುದರ ಅರ್ಥವೂ ಆಗುವುದಿಲ್ಲ. ಅವರ ಮಧ್ಯೆ ಪ್ರಚಾರಕಾರ್ಯ ಮಾಡಿ ಜಾಗ್ರತೆಯನ್ನುಂಟುಮಾಡಿದ್ದರೆ ಈ ಮೂರು ವರ್ಷದ ಅವಧಿಯಲ್ಲೇ ಏಕೀಕರಣದ ಹೆಜ್ಜೆಯು ಎಷ್ಟೋ ಮುಂದಕ್ಕೆ ಬೀಳುತ್ತಿದ್ದಿತು. ಇದಾಗದಿದ್ದುದರ ದೋಷವು ಸಭೆಯ ಚಾಲಕರ ಪಾಲಿಗೆ ಬರುತ್ತಿದೆ. ಸತ್ತಾಧಾರಿಗಳು ಸಾಮಾನ್ಯ

ಜನಗರ್ವಕ್ಕೆ ಏಕೀಕರಣದ ಗಂಧವಿಲ್ಲೆಂದು ಅನ್ನುತ್ತ ಕೈ ಹಿಡಿಯುತ್ತಿರುವಾಗ ಕರ್ನಾಟಕದ ಸುಶಿಕ್ಷಿತರು ಲಜ್ಜಿತರಾಗಿ ಈ ಕಾರ್ಯಕ್ಕೆ ಪ್ರವೃತ್ತರಾಗಬೇಕಾಗಿದ್ದಿತು. ಆದರೆ ಅವರಲ್ಲೂ ಆ ಅಭಿಮಾನವುಂಟಾಗಲಿಲ್ಲ. ಇದು ಕರ್ನಾಟಕದ ದುರ್ದೈವ ಇದನ್ನೆಲ್ಲ ಲಕ್ಷಿಸಿ, ಬಾಗಲಕೋಟೆಯಲ್ಲಿ ಸೇರುವ ಪರಿಷತ್ತು ಕ್ರಮಬದ್ಧವಾದ ಮತ್ತು ವ್ಯವಸ್ಥಿತವಾದ ಚಳವಳಿಯನ್ನು ಕೈಕೊಂಡರೆ ಮಾತ್ರ ಪರಿಷತ್ತು ಯಶಸ್ವಿಯಾದಂತಾಗುವದು. ಕರ್ನಾಟಕದ ಎಲ್ಲ ಭಾಗದ ಪ್ರತಿನಿಧಿಗಳೂ ಈ ಪರಿಷತ್ತಿಗೆ ಸೇರಿ ನಿಶ್ಚಿತವಾದ ಧೋರಣವನ್ನಿಟ್ಟುಕೊಂಡು ಎಲ್ಲ ಭಾಗದಲ್ಲಿಯೂ ಆ ಚಳವಳಿಯನ್ನು ನಡೆಸುವಂತೆ ಮಾಡುವದು ಅವಶ್ಯವಾಗಿದೆ. ಕನ್ನಡಿಗರು ಬಾಗಲಕೋಟೆಯವರ ಪ್ರಯತ್ನವನ್ನೂ ತಮ್ಮ ಉದ್ದಿಷ್ಟಕಾರ್ಯವನ್ನೂ ಸಫಲಗೊಳಿಸಲು ತಪ್ಪಲಿಕ್ಕಿಲ್ಲೆಂದು ನಂಬುತ್ತೇವೆ.

—ಕರ್ನಾಟಕ ಧುರೀಣ.

ಮುಂಬಯಿ ಇಲಾಖೆಯ ಒಕ್ಕಲತನದ ಖಾತೆಯ ವರದಿಯು.

೧೯೨೫—೨೬.

“ಈ ಸಾರೆ ಬೆಳೆಯೇನು ಚನ್ನಾಗಿ ಬರಲಿಲ್ಲ. ಸಪ್ಟಂಬರ ತಿಂಗಳಲ್ಲಿ ಸ್ವಲ್ಪ ಮಳೆಯಾಗದಿದ್ದರೆ ಬರಗಾಲವಾಗುತ್ತಿತ್ತೆಂಬ ಅಂಜಿಕೆಯು ಬಹಳವಿತ್ತು. ಆದರೂ ಒಟ್ಟಿನ ಮೇಲೆ ಸಾಧಾರಣ ಬೆಳೆಗಳು ಬಂದವೆಂದು ಹೇಳಬಹುದು. ಮಧ್ಯಭಾಗವೊಂದನ್ನು ಹೊರತು ಪಡಿಸಿ ಉಳಿದ ಕಡೆಯಲ್ಲಿ ತೀರ ಅಸಮಾಧಾನಕಾರಕ ಸ್ಥಿತಿಯು ಇತ್ತು. ಇದೂ ಅಲ್ಲದೆ ಅರಳೆಯ ಧಾರಣೆಯು ಇಳಿದದ್ದರಿಂದ ರೈತರಿಗೆ ಬಹಳ ಹಾನಿಯಾಯಿತು.” ಈ ರೀತಿ ತಮ್ಮ ವರದಿಯಲ್ಲಿ ತಾವೇ ಬರೆದು ಸರಕಾರದವರು ೧೯೨೫-೨೬ ನೇ ಸಾಲಿನ ವರದಿಯನ್ನು ಬಲದಿಂದ ತೆಗೆದುಕೊಂಡರೆಂದಬಳಿಕ ರೈತರ ಕಷ್ಟದ ಕಡೆಗೆ ಸರಕಾರದವರ ಲಕ್ಷ್ಯವು ಎಷ್ಟರ ಮಟ್ಟಿಗೆ ಇರುವದೆಂಬದು ವ್ಯಕ್ತವಾಗುತ್ತದೆ.

ಇನ್ನು ಒಕ್ಕಲತನದ ಸುಧಾರಣೆವಿಷಯವಾಗಿ ಸರಕಾರದವರು ಪ್ರಯತ್ನ ಪಡುತ್ತಲಿದ್ದಾರಂತೆ. ಭತ್ತ, ರಾಗಿ, ಗೋದಿ, ಹತ್ತಿಯ ಬೀಜಗಳ ಪರೀಕ್ಷೆಯು ನಡೆದದೆ. ಸಿಂಧ, ಗುಜರಾಥ, ಖಾನದೇಶ, ಕರ್ನಾಟಕಗಳಲ್ಲಿ ಬೇರೆ ಬೇರೆ ಹತ್ತಿಯ ಬೀಜಗಳನ್ನು ಪ್ರಸಾರಮಾಡಹತ್ತಿದ್ದಾರೆ. ಧಾರವಾಡ, ನಂಬರ ೧, ಗದಗ ೧, ಕಾಳುಗಳ ಪ್ರಸಾರವು ಒಳ್ಳೇ ರಭಸದಿಂದ ಕರ್ನಾಟಕದಲ್ಲಿ ನಡೆದದೆ. ಭತ್ತ, ತಂಬಾಕು, ಜೋಳ, ಮುಂತಾದವುಗಳ ಕಡೆಗೆ ಸಾವಕಾಶವಾಗಿ ಲಕ್ಷ ಕೊಡಹತ್ತಿದ್ದಾರೆ. ರೆಂಟೆ, ಕುಂಟೆಗಳ ಸುಧಾರಣೆಯಾದರೂ ನಡೆದಿರುವದು. ಗೊಬ್ಬರದ ಕಡೆಗೆ ಲಕ್ಷ್ಯವು ಪ್ರವೃತ್ತವಾಗಹತ್ತಿದೆ. ಸಾರಾಂಶ ಸುಧಾರಣೆಯು ಸಾವಕಾಶವಾಗಿ ನಡೆದಿದೆ. ಇಷ್ಟೆಲ್ಲ ಕೆಲಸಕ್ಕಾಗಿ ಸರಕಾರದವರು ರೂ-೧೬,೧೪,೫೫೦ ವೆಚ್ಚಮಾಡಿದ್ದಾರೆ. ಮೂರು ಲಕ್ಷ ರೂಪಾಯಿಗಳು ಮಾತ್ರ ಈ ಖಾತೆಯ ಉತ್ಪನ್ನವು. ೧೩ ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ವೆಚ್ಚಮಾಡಿ ರೈತರಿಗೆ ಕಲ್ಯಾಣಮಾಡಹತ್ತಿರುವರು ! ರೈತರಿಗೆ ಈ ಖಾತೆಯು ಇದ್ದದ್ದಾದರೂ ಗೊತ್ತುಂಟೇ ? ಹತ್ತಿಯ ಕಾಳುಗಳ ಹೊರತಾಗಿ ಬೇರೆ ಬೀಜಗಳನ್ನು ರೈತರು ಸರಕಾರದವರಿಂದ ಎಷ್ಟು ತೆಗೆದುಕೊಂಡಿರುವರೆಂದನ್ನು ಸರಕಾರದವರ ಹೇಳಬಲ್ಲರೇ ? ಲ್ಯಾಂಕಶೈರದ ಗಿರಣಿಗಳಿಗೆ ಬೇಕಾಗುವ ಹತ್ತಿಯ ಸಲುವಾಗಿ ಸರಕಾರದವರು ಹೆಚ್ಚು ದಕ್ಷತೆಯನ್ನು ತೋರಿಸುವದು ಸ್ವಾಭಾವಿಕವಾಗಿದೆ. ಹಾಗೆ ಮಾಡುವಾಗ ರೈತರಿಗೆ ಸ್ವಲ್ಪ ಸಹಾಯ ಲಾಭವಾದರೆ ಅವರಿಗೆ ಒಳ್ಳೇದೇನೂ ಇಲ್ಲ. ಇಲಾಖೆಯು ಎಷ್ಟೋ ಭಾಗಗಳಲ್ಲಿ ಒರಬೀಳುವದಕ್ಕೆ ಕಾರಣ ವ್ಯಳೆಯಿಲ್ಲದಿರುವದೇ ಕಾರಣವೊಂದು ಇವರಿಗೆ ಗೊತ್ತಿದರೂ ಕೆರೆ ಕಾಲುವೆಗಳಿಂದ ನೀರನ್ನು ಪೂರೈಸಲು ಪ್ರಯತ್ನಮಾಡ ಸರಕಾರ ಕಡೆಗೆ ಅಲಕ್ಷ್ಯವೇ ! ಆ ಕೆಲಸಕ್ಕಾಗಿ ಸಲ್ಲದೊಂದು ಖಾತೆಯನ್ನೇನೋ ಏರ್ಪಡಿಸಿರುವರು. ಆದರೆ ಅವರು ಸಿದ್ಧಮಾಡಿದ ಯೋಜನೆಗಳಿಗೆ ಸರಕಾರದ ಬೊಕ್ಕಸದಲ್ಲಿ ಹಣವೆಲ್ಲಿಂದ ಬರುವದು ? ಉದಾಹರಣಾರ್ಥವಾಗಿ ಸಮ ಜಿಲ್ಹೆಯಲ್ಲಿ ಸಣ್ಣ ಸಣ್ಣ ಕೆರೆ ಕಾಲುವೆಗಳ ಯೋಜನೆಯ ಸಲುವಾಗಿ ನಿಯಮಿಸಿದ ಖಾತೆಯವರು ಹಿರೆಕಲ್ಲು ವಿವಯೋಗಮುಂತಾದ ಯೋಜನೆಗಳನ್ನು ತಯಾರಿಸಿ ಸರಕಾರಕ್ಕೆ ಕಳಿಸಿದ್ದಾರೆ. ಆದರೆ ದ್ರವ್ಯಾಭಾವದ ಸಬೂಬ ಎಲ್ಲವೂ ಹಿಂದಕ್ಕೆ ಬಿದ್ದವೆ. ಆ ಖಾತೆಯ ಅಧಿಕಾರಿಗಳ ಹಾಗೂ ಕಾರಕೂನರ ಪಗಾರವು ಮಾತ್ರ ನಿರ್ವಿವಾದವಾಗಿ ಸಾಗಿದೆ. ರೈತರ ಕಲ್ಯಾಣಕ್ಕಾಗಿ ನಾವಿಷ್ಟು ಹಣವನ್ನು ವೆಚ್ಚಮಾಡುತ್ತೇವೆಂದು ತೋರಿಸುವದಕ್ಕೆ ಮಾತ್ರ ಆ ಖಾತೆಯು ನಿರ್ಮಾಣವಾಗಿರುವದಲ್ಲದೆ ಅದರಿಂದ ನಿಜವಾದ ರೈತರಿಗೆ ಏನೂ ಲಾಭವಿಲ್ಲ. ಆದ್ದರಿಂದ ರೈತರೇ ಬುದ್ಧಿವಂತರಾಗಿ ತಮ್ಮ ಹಿತವನ್ನು ಸರಕಾರದವರು ನೋಡುವಂತೆ ಒತ್ತಾಯಪಡಿಸಬೇಕು. ಆಗ ಮಾತ್ರ ಸರಕಾರದವರು ಎಚ್ಚರಾಗುವರು.

——ತ. ಬ. ಪುರೋಹಿತ.

“ಲೋಕಪಾವನ”ದ ತೃತೀಯ ವಿಶೇಷ ಸಂಚಿಕೆ.

ಸಂಪಾದಕರು ಬಿ ಎ ಬೆಳ್ಳಿಯಪ್ಪ ಬಿ ಎ ಕೊಡಗು ದೇಶದಲ್ಲಿ ಹೊರಡುವ ವಾರಪತ್ರಿಕೆ. ತನ್ನ ದೇಶದ ಕೀಳುತನವನ್ನು ಹೋಗಲಾಡಿಸಿ, ಜನರಲ್ಲಿ ರಾಜಕೀಯ ಜಾಗ್ರತೆಯನ್ನು ಹುಟ್ಟಿಸುವದೇ ಇದರ ಮುಖ್ಯ ಉದ್ದೇಶ. ಕೊಡಗು ಪ್ರಾಂತದ ದಾರಿದ್ರ್ಯವನ್ನು ಎರಡು ಮೂರು ರೂಪಕಗಳ ಮೂಲಕ ಚಿತ್ರಿಸಿದ್ದಾರೆ. ಅಣ್ಣನು ದಾರಿದ್ರ್ಯ ಪೀಡಿತನಿದ್ದಲಿ ಒಡಹುಟ್ಟಿದವರು ನಾಲ್ಕು ಜನರೊಳಗೆ ಅವನು ಅಣ್ಣನೆಂದು ಹೇಳಲಿಕ್ಕೆ ಕೂಡ ಹೇಗೆ ನಾಚಿಕೆ ಗೊಳ್ಳುವರೆಂಬ ಸಂಗತಿಯನ್ನು ‘ ಹಣದ ಮಹಿಮೆ ’ ಎಂಬ ರೂಪಕದಲ್ಲಿ ವಿವೇಚಿಸಿದ್ದಾರೆ. ‘ಶಿಕ್ಷಣ ಸಂಭ್ರಮ’ ನಾಟಕದಿಂದ ಈ ವಿಚಾರವು ಸಂಪಾದಕರಿಗೆ ಹೊಳೆದಂತೆ ಕಂಡು ಬರುತ್ತಿದೆ. ಶ್ರೀ ದಿವಾಕರ ರಂಗರಾಯರ ‘ ಕರ್ನಾಟಕ ಧ್ಯೇಯ ’ ವೆಂಬ ಲೇಖವು ಬೋಧಪ್ರದವಾದೆ. ಕೊಡಗಿನಲ್ಲಿ ಜೈನರ ವರ್ಚಸ್ಸು ೧೨ ನೇ ಶತಮಾನದ ವರೆಗೆ ನಿರಾತಂಕವಾಗಿದ್ದು, ಕ್ರಮೇಣ ಅವರ ಪ್ರಾಬಲ್ಯವು ಒಸದಿಗಳಿಲ್ಲದ್ದರಿಂದ ಕಡಿಮೆ ಯಾಯಿತೆಂದು ಕಷ್ಟದಿಂದ ಉಸುರಿದ್ದಾರೆ. ಹೋದ ಸಲ ಸಾಹಿತ್ಯ ಪರಿಷತ್ತಿಗೆ ಮೈಸೂರಿಂದ ಆರೇಳು ಜನರು ದಯಮಾಡಿಸಿದ್ದರೆಂದು, ರಾವಸಾಹೇಬ ಎಮ್. ಅನಂತರಾಯರು ಬರೆದಿದ್ದಾರೆ. ಹಾಸ್ಟೆಲ್, ಧೋಬಿ, ಗರೀಬ, ಗೊ... ಇವೇ ಮೊದಲಾದನೇಕ ಪರಭಾಷೆಯ ಶಬ್ದಗಳು ಹಣಿಕೆ ಹಾಕಿವೆ. ಇಂಗ್ಲೀಷ ಅಂಕಿಗಳನ್ನು ಉಪಯೋಗಿಸುವದು, ಮೈಸೂರ, ಕೊಡಗು, ದೇಶದವರಿಗೆ ಪರಿಪಾಠವೇ ಬಿದ್ದಂತಾಗಿದೆ.

——ನಾರಾಯಣ.

ಹಿಂದುಸ್ಥಾನ.

ದೇಶೀಯ ಸಂಸ್ಥಾನಗಳಿಗೂ, ಹಿಂದುಸ್ಥಾನ ಸರಕಾರಕ್ಕೂ ಇದ್ದ ಸಂಬಂಧ, ಸನದು, ರೂಢಿಗಳನ್ನು ವಿಚಾರಿಸುವದಕ್ಕಾಗಿ ಹಿಂದುಸ್ಥಾನ ಸರಕಾರದಿಂದ ಒಂದು ಕಮೀಶನ್ ನೇಮಿಸಲ್ಪಟ್ಟಿದೆ. ಬ್ರಹ್ಮದೇಶದ ಗವರ್ನರರಾದ ಸರ ಹಾರ ಕೋರ್ಟ ಬಟ್ಲರರು ಇದರ ಪ್ರಮುಖರು. ಇತರ ಮೂರು ಜನ ಯುರೋಪಿಯನ ಸಭಾಸದರೂ ಇದ್ದಾರೆ.

ಮುಂಬಯಿಯ ಶ್ರೀ. ವಾಡಿಯಾ ಸಿ ಎನ್ ಹಾಗೂ ಅವರ ಬಂಧುಗಳಾದ ಸರ ನೆಸ್ ವಾಡಿಯಾ ಇವರು, ಫರ್ಗ್ಯುಸನ್ ಕಾಲೇಜಿಯ ಲೈಬ್ರರಿ ಕಟ್ಟಿಸಲಿಕ್ಕೆ ೧ ಲಕ್ಷ ರೂ. ದಾನ ಕೊಡಲು ಒಪ್ಪಿದ್ದಾರೆ!

ಮಧ್ಯಪ್ರಾಂತದ ಮಂತ್ರಿಗಳಾದ ನಾವ ದಾರ ರಾವ ಹಾಗೂ ದೇಶಮುಖ ಇವರು ಆಲ್ ಇಂಡಿಯಾ ಕಾಂಗ್ರೆಸ ಕಮೀಟಿಯ ಸಭಾಸದರಾಗಿ ಆರಿಸಲ್ಪಟ್ಟಿದ್ದಾರೆ. ಇವರು ಇನ್ನೂ ಮಂತ್ರಿಗಳಿದ್ದರೂ, ಈ ಸಭಾಸದತ್ವವನ್ನು ಸ್ವೀಕರಿಸಿ, ಮದ್ರಾಸ ಕಾಂಗ್ರೆಸ್ಸಿಗೆ ಹೋಗಲಿದ್ದಾರೆ.

ನಮ್ಮ ಹುಬ್ಬಳ್ಳಿಯ ಪತ್ರ.

ಇಲ್ಲಿಯ ಮುನಸಿಪಾಲ್ಟಿಯವರು ಬೀದಿಗಳನ್ನು ಬೆಳಿಸಬೇಕೆಂದು ಮನೆಗಳನ್ನು ಕೆಡವುವದಕ್ಕೆ ಪ್ರಾರಂಭಿಸಿದ್ದಾರೆ. ಆದರೆ ಇದರಿಂದ ಎಲ್ಲಿ ನೋಡಿದರೂ ಅಡ್ಡಿಯಾಗುತ್ತಿದ್ದದರಿಂದ ಅರ್ಧಮರ್ಧ ಕೆಲಸವನ್ನು ಮಾಡಿ ಕುಳಿತುಕೊಂಡಿರುವರು! ಇದರ ಕಾರಣವು:- ಜಾಗೆಯ ಬಗ್ಗೆ ಕೊಡುವ ರಕಮು ಬೇಗನೇ ಕೊಡುವದಿಲ್ಲವೆಂದೂ ಹಿಂದಕ್ಕೆ ತೆಗೆದು ಕೊಂಡವರದು ಇನ್ನೂ ಪಟ್ಟಿಗೆ ಕೊಟ್ಟಿಲ್ಲವೆಂದೂ ಜನರ ತಕರಾರು ಇದೆ.

ಇಲ್ಲಿಯ "ನೇಟಿವ ಜನರಲ್ ಲಾಯಬ್ರರಿ" ಬಹಳ ಹಳೆಯ ಸಂಸ್ಥೆ. ಅದರೂ ಈಗ್ಗೆ ಹೀನಸ್ಥಿತಿಯನ್ನು ಹೊಂದಹತ್ತಿರುತ್ತದೆ! ಮಾಸಿಕ ಪುಸ್ತಕಗಳು ಸೆಕ್ರೆಟರಿ ಅಧ್ಯಕ್ಷ ಇತ್ಯಾದಿಯವರ ಮನೆಯಲ್ಲಿ ಬಿದ್ದುಕೊಳ್ಳುತ್ತವೆ! ವಾರಪತ್ರಿಕೆಗಳು ೨-೩ ದಿವಸಗಳ ವರೆಗೆ ಮೆಂಬರ ಮನೆಗಳಲ್ಲಿ ಬಿದ್ದು ಆ ಮೇಲೆ ಟೇಬಲ್ದ ಮೇಲೆ ಬರುವವು. ಈ ಬಗೆಯ ವ್ಯವಸ್ಥೆಯನ್ನಿಡುವದಕ್ಕಿಂತಲೂ ಲಾಯಬ್ರರಿ ಮುಚ್ಚುವದು ಲೇಸಲ್ಲವೇ?

ಶ್ರೀಮತಿ ಉಮಾಬಾಯಿ ಕುಂದಾಪುರ ಇವರು ಕರ್ನಾಟಕ ಪ್ರಾಂತಿಕ ಸಭೆಯ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟಬಗ್ಗೆ ಅಭಿನಂದನಪರ ಸಭೆಯಾಯಿತು.

ಶ್ರೀ ನಾರಾಯಣ ವ್ಯಾಯಾಮ ಶಾಲೆಯ ಪತಿಯಿಂದ ಡಾ. ಪಟವರ್ಧನ ಇವರ ಶಿಷ್ಯರಾದ ಶ್ರೀ ಬಾಳಶಾಸ್ತ್ರಿ ವೈದ್ಯ ಇವರ ಹರಿಕೀರ್ತನವು ಕರ್ನಾಟಕ ಪ್ರೆಸ್ಸಿನಲ್ಲಿ ನಡೆದಿರುತ್ತವೆ. ಇವರು ಕೇವಲ ರಾಷ್ಟ್ರೀಯ ದೃಷ್ಟಿಯಿಂದ ಕೀರ್ತನ ಮಾಡುತ್ತಲಿದ್ದಾರೆ.

ಭಗಿನೀಮಂಡಳದ ಪತಿಯಿಂದ ಕಿಲ್ಲೆಯೊಳಗಿನ ಈಶ್ವರ ಗುಡಿಯ ಬೆಳಗಾವಿಯ ಸೌ. ಡಾ. ನಾಯಿಕರ ಉಪನ್ಯಾಸವಾಯಿತು.

ವಿಪ್ರಬ್ರಾಹ್ಮಣರ ಪರಿಷತ್ತಿನ ಬಗೆಗೆ ಪೋಲೀಸರ ತನಿಕೆ ಜೋರಾಗಿದೆ! ಮುಂದೇನಾಗುವದೋ ನೋಡಬೇಕು!

ಇಲ್ಲಿಯ ಕಾಂಗ್ರೆಸ ಕಮೀಟಿಯವರು ಹಿಂದುಸ್ಥಾನಿ ಸೇವಾದಳದ ಕಾರ್ಯಕ್ರಮದಂತೆ ಶಾರೀರ ಶಿಕ್ಷಣವನ್ನು ಕೊಡಬೇಕೆಂದು ಗೊತ್ತುಮಾಡಿದ್ದು, ಬೇಗನೇ ಕಾರ್ಯವನ್ನು ಮಾಡುವಂತೆ ಕಾಣುತ್ತದೆ. ಆದರೆ ಇಲ್ಲಿಯ ನಾರಾಯಣ ವ್ಯಾಯಾಮ ಶಾಲೆಯವರು ತಮ್ಮ ಶಿಕ್ಷಣವನ್ನು ರಾಷ್ಟ್ರೀಯ ದೃಷ್ಟಿಯಿಂದಲೇ ನಡೆಸಿದ್ದಾರಷ್ಟೇ! ಇವರನ್ನು ಕಾಂಗ್ರೆಸ್ಸಿನವರು ಸಹಕಾರ ದೃಷ್ಟಿಯಿಂದ ನೋಡುವರೋ ಅಥವಾ ಅಸಹಕಾರ ದೃಷ್ಟಿಯಿಂದ ನೋಡುವರೋ?

ರಂಗಭೂಮಿ ಸಮಾಚಾರ

ಗುಬ್ಬೀ ವೀರಣ್ಣನವರು ಹಾಸನದಲ್ಲಿಯೂ, ಹಾಲಸಿದ್ಧೇಶ್ವರ ನಾಟಕದವರು ಚಿಕ್ಕಮಗಳೂರಲ್ಲಿಯೂ, ಗರುಡ ಕಂಪನಿಯವರು ಗದಗಿನಲ್ಲಿಯೂ ಇದ್ದಾರೆ. ವೆಂಕೋಬರಾಯರ ಶಿರಹಟ್ಟಿ ನಾಟಕದವರ ಪಟ್ಟಾಭಿಷೇಕ ನಾಟಕಕ್ಕೆ ಕುಮಟೆಯಲ್ಲಿ ಚನ್ನಾಗಿ ಪ್ರೋತ್ಸಾಹ ದೊರೆಯುತ್ತಲಿದೆ. ಸ್ಥಾನಿಕ ಅಧಿಕಾರಿಗಳು ನಾಟಕ ನೋಡಿ ಸಂತೋಷಪಟ್ಟರು. ಶ್ರೀಕೃಷ್ಣ ಕನ್ನಡ ಸಂಗೀತಪಡವರಿಗೆ ಮಂಗಳೂರ ರಸಿಕ ಮಹಾಶಯರಿಂದ ಪ್ರೋತ್ಸಾಹನವು ವಿಶೇಷವಾಗಿ ದೊರೆಯುತ್ತಲಿದೆ.

ಅಗಡಿ ಬೀಡದ "ಅಭಿನಯ ಕಲಾವರ್ಧಕ ನಾಟಕ ಸಭೆಯವರು" ಅಗಡಿ ಬೀಡದ ಅಣ್ಣಾರಾವ ಪಾಟೀಲ ಇವರಿಂದ ರಚಿಸಲ್ಪಟ್ಟ ತಮ್ಮ ಲೋಕಪ್ರಿಯ ಸಂಗೀತ ಸೀತಾಕಲ್ಯಾಣವೆಂಬ ನಾಟಕವನ್ನು ಕಳೆದ ಗುರುವಾರ ದಿನ ಅತ್ಯಂತ ಮನೋಹರವಾಗಿ ಅಭಿನಯಿಸಿದರು. ಪ್ರೇಕ್ಷಕರ ಅಗ್ರಹದ ಮೂಲಕ ಒಂದೇ ಸವನೆ ೫ ಪ್ರಯೋಗಗಳನ್ನು ಮಾಡಿ ತೋರಿಸಿದರು. ಇನ್ನೂ ಆಗುವ ರಂಗವಿದೆ. ಧನವಿಲ್ಲದೆ ಹೆಣಗಾಡುತ್ತಲಿದ್ದ ಈ ಸಂಘಕ್ಕೆ ಗೌಡಮಂಡಳಿಗಳಿಂದ ಸಹಾಯ ದೊರೆತರೆ ಬಿದಿಗೆಯ ಚಂದ್ರನಂತೆಯೂ, ಮಧ್ಯಾಹ್ನದ ನೆರಳಿನಂತೆಯೂ ವೃದ್ಧಿ ಹೊಂದದೆ ಇರದು. —ಒಬ್ಬ ಪ್ರೇಕ್ಷಕ!

"ನನ್ನ ತುಣುಕು ಮಹಿಯಿಂದ"

ಈ ಎರಡು ತಿಂಗಳಿಂದ ಬೆಂಗಳೂರು ಕಂಡಷ್ಟು ಜಗದ್ಗುರುಗಳನ್ನು ಮತ್ತಾವ ಊರು ಕಾಣಲಿಲ್ಲವೆಂದು ನಾನು ಹೆಮ್ಮೆಯಿಂದ ಹೇಳಬಲ್ಲೆ! ಈ ಜಗದ್ಗುರುಗಳನ್ನು ನೋಡುತ್ತ ನೋಡುತ್ತ ನನಗೆರಡು ಸಂದೇಹ ಹುಟ್ಟಾಗುತ್ತದೆ. ಮೊದಲನೆಯದು:- ಇಷ್ಟು ಮಂದಿ ಬೋಧಿಸಲಿಕ್ಕೆ ಜಗತ್ತು ಗಣನೆಯಿಂದ ತರತರೆಂಬುದು! ಎರಡನೆಯದು:- ನನ್ನ ಬಂಧುಗಳಾದ "ಮಾತಿನ ಮಲ್ಲಣ್ಣ" ನವರು ಅಭಿಪ್ರಾಯಪಡುವಂತೆ "ಇವರುಗಳಲ್ಲಿ ಯಾರನ್ನ ಅನುಸರಿಸಿ ಮೋಕ್ಷ ಸಂಪಾದಿಸಬೇಕೋ ಕೃಷ್ಣವೆ!" ಈ ಜಗದ್ಗುರು ವರ್ಗವನ್ನು ಮೂರು ವಿಭಾಗವನ್ನಾಗಿ ಮಾಡಬಹುದು. ೧ ಅನಾದಿಯಿಂದಲೂ ನಡೆದುಬಂದ ಪೀಠಸ್ಥರು, ಉದಾ:- ಶ್ರೀ ಶೃಂಗಗಿರಿ ಜಗದ್ಗುರುಗಳು ೨ ಸ್ವಘಟಿತ ಜಗದ್ಗುರುಗಳು, ಉದಾ:- ದೀನದಾಸ್ ಚಕ್ರವರ್ತಿ ಸಿ... ಸಾಹೇಬರವರು ೩ ಕಂಡು ಹಿಡಿಯಲ್ಪಟ್ಟ ಜಗದ್ಗುರುಗಳು. ಉದಾ:- ಶ್ರೀ ಜೆ ಕೃಷ್ಣಮೂರ್ತಿಯವರು. ಹೀಗೆ ಇನ್ನೂ ಈ ನಿರುದ್ಯೋಗದ ಯುಗದಲ್ಲಿ ನಾನಾ ಮತದ ಮತ್ತು ನಾನಾ ತರದ ಜಗದ್ಗುರುಗಳು ಬರಬಹುದೆಂದು ನಿರೀಕ್ಷಿಸಲು ಸಾಧವಿದೆ. ಈ ಮಹನೀಯರುಗಳ ಸ್ತುತಿಪದಕ್ಕೆ ಶ್ರೀಮಾನ್ ಸ್ವಾಮಿ ವಿವೇಕಾನಂದರ ಈ ವಾಣಿಗಳು ಬಂದು, ಇವರುಗಳ ಅನುಯಾಯಿಗಳ ಮತ್ತು ಶಿಷ್ಯವೃಂದದ ಸತ್ಯಕ್ಕೆ ತಕ್ಕವಾದ್ದಾಗಲೆಂದು ನಾನು ಹಾರೈಸುತ್ತೇನೆ [ಇವುಗಳನ್ನು ಸ್ವಾಮಿ ವಿವೇಕಾನಂದರು ಕ್ರೈಸ್ತ ಪಾದ್ರಿಗಳಿಗೆ ಉದ್ದೇಶಮಾಡಿ ಹೇಳಿದ್ದರೂ ಪ್ರತಿಯೊಬ್ಬ ಮತ ಪ್ರಸಾರನಿಗೂ ಅನ್ವಯಿಸುತ್ತದೆ.]:-

" ಅಯ್ಯಾ ಕ್ರೈಸ್ತ ಮಹಾಶಯರಿರಾ, ಪಾಷಂಡಿಗಳಾದ ಹಿಂದುಗಳ ಆತ್ಮೋದ್ಧಾರವನ್ನು ಮಾಡಲು ಕ್ರೈಸ್ತ ಪಾದ್ರಿಗಳನ್ನು ತಂಡತಂಡವಾಗಿ ಕಳುಹಿಸುವದರಲ್ಲಿ ಆಸಕ್ತರಾದ ನೀವು, ಕ್ಷುಧಾಬಾಧೆಯಿಂದ ಅವರ ದೇಹಗಳನ್ನು ಪಾರುಮಾಡಲು ಪ್ರಯತ್ನಿಸುವದೇಕೆ? ಹಿಂದುಸ್ಥಾನದಲ್ಲೆಲ್ಲ ನಿಮ್ಮ ದೇವಾಲಯಗಳನ್ನು ಕಟ್ಟಿಸುತ್ತೀರಿ. ಆದರೆ ಹಿಂದುಸ್ಥಾನದ ಮುಖ್ಯ ಆವಶ್ಯಕತೆಯು ಮತವಲ್ಲ. ಅವರಿಗೆ ಮತವು ಯಥೇಚ್ಛವಾಗಿದೆ! ಹಸಿವೆಂಬ ಮೃತ್ಯುವಿನಿಂದ ಪಾರುಮಾಡುವ ಹಿಟ್ಟು ಬೇಕಾಗಿದೆ. ನಿಮ್ಮನ್ನವರು ಹಿಟ್ಟು ಕೇಳುತ್ತಾರೆ. ನೀವವರಿಗೆ ಕಲ್ಲು ಕೊಡುತ್ತೀರಿ! ಹಸಿವಿನಿಂದ ನರಳುತ್ತಿರುವವನಿಗೆ ಮತವನ್ನೀಯಲು ಹೋಗುವುದೂ, ಬಡತನದಿಂದ ಕತ್ತರಿಸುವ ಜನಾಂಗಕ್ಕೆ ಅಧ್ಯಾತ್ಮಿಕ ಜ್ಞಾನವನ್ನು ಬೋಧಿಸಹೋಗುವುದೂ ಮಹತ್ತಾದ ಪರಿಭವ ಮಾಡಿದಂತೆಯೇ ಸರಿ." ನಮ್ಮ ಜಗದ್ಗುರುಗಳೇನು ಭಾರತವರ್ಷವನ್ನು ಹೊಟ್ಟೆ ತುಂಬಿದ ಶ್ರೀಮಂತರ ನಾಡೆಂದರಿತರೋ?

ಮುಂದೆಸಾಗುವದು:

ವಿಜಾಪುರ ಜಿಲ್ಹೆಯ ಸುದ್ದಿಗಳು.

[ನಮ್ಮ ಸುದ್ದಿಗಾರರಿಂದ]

ವಿಜಾಪುರ. ಇಲ್ಲಿಯ ಮುಖಂಡರು ಸಭೆ- ಮಹಾಸಭೆಗಳಿಗೆ ಹೋಗಿದ್ದಾರೆ. ಅಧಿಕಾರಿಗಳು, ನಾತಾಳೆಗಾಗಿ ಊರು ಬಿಟ್ಟಿದ್ದಾರೆ! ಅಂತೂ ಊರಲ್ಲಿ ಮುಖಂಡರಿಲ್ಲದ್ದಕ್ಕಾಗಿ ಜನತೆಗೂ, ಅಧಿಕಾರಿಗಳಿಲ್ಲದ್ದಕ್ಕಾಗಿ ಅಧಿಕಾರಿಗಳ ಭಕ್ತರಿಗೂ ಭಣಭಣವೆನಿಸುತ್ತಲಿದೆ.

ಮುದ್ದೇಬಿಹಾಳ. ಇಲ್ಲಿಯ ಪಂಚಾಯತ ಕಮೀಟಿಯು ನೇಮಿಸಲ್ಪಟ್ಟು ಎರಡು ವರ್ಷಗಳಾದವು. ಆರಿಸುವಿಕೆಯಲ್ಲಿ ಲಿಂಗಾಯತ ಮುಸಲ್ಮಾನ ಜೈನ ಮೆಂಬರರು ಆರಿಸಿಬಂದಿರುವರು. ಈ ಕಮೀಟಿಯ ಸರಪಂಚರ ನೇಮಣೂಕು ವರ್ಷಕ್ಕೊಮ್ಮೆ ಆಗತಕ್ಕದ್ದಿರುವದು. ೧೯೨೬ನೇ ಇಸವಿಯ ಮೊದಲನೇ ಸರಪಂಚರ ಇಲೆಕ್ಶನದ ಕಾಲಕ್ಕೆ ಮೊದಲು ಲಿಂಗಾಯತರು ಆ ಮೇಲೆ ಜೈನರು ಮುಂದೆ ಮುಸಲ್ಮಾನರು ಸರಪಂಚರಾಗಬೇಕೆಂದು ಅವರವರೊಳಗೆ ಖಾಸಗಿ ಕರಾರಾಗಿದ್ದವು. ಆ ಸಾರೆ ೧೯೨೭ ಇಸವಿಯ ಕಡೆಕಡೆಗೆ ಇಲ್ಲಿ ಜಾತಿದ್ವೇಷದ ಗಾಳಿಯು ಬೀಸಿದ್ದರಿಂದ ೧೯೨೭ ನೇ ಇಸವಿಯಲ್ಲಿ ಜೈನರಿಗೆ ಸಿಗತಕ್ಕ ಸರಪಂಚಕಿಯ ಮಾನವನ್ನು ಕೊಡಲಿಲ್ಲ. ಇದರಿಂದ ಒಬ್ಬರೇ ಒಬ್ಬರಾದ ಜೈನ ಮೆಂಬರರು ಇದೀ ಮೀಟಿಂಗಳಿಗೂ ಹಾಜರಾಗುವದಿಲ್ಲ. ಈಗ ಮುಸಲ್ಮಾನರು ಸರಪಂಚರಾಗುವ ಸರತಿ ಬಂದರೆ ಈಗ ಹೇಗಾಗುವದೋ ನೋಡಬೇಕು.

ಈ ಊರಲ್ಲಿ ೧೬ ಜನ ವಕೀಲರೂ ಎಷ್ಟೋ ಜನ ಸುಶಿಕ್ಷಿತ ಶ್ರೀಮಂತರೂ ಇರುವರು. ಹೀಗಿದ್ದರೂ ನಾಳಿನ ಮದ್ರಾಸ ಕಾಂಗ್ರೆಸಕ್ಕೆ ಹೋಗುವ ಕಲ್ಪನೆಯೇ ಅವರಲ್ಲಿಲ್ಲ! ಮದ್ರಾಸದಲ್ಲಿ ಈ ಸಾರೆ ಬಾಲಗಂಧರ್ವರ ನಾಟಕ ಆಗುವದಿಲ್ಲವೆಂಬಂತೆ ಕಾಣುತ್ತದೆ! ಪಾಪ ನಮ್ಮೂರವರ ದುರ್ದೈವ!!

ಮುದ್ದೇಬಿಹಾಳದ ಸುದ್ದಿಗಳು ಈ ವರೆಗೆ ಎಲ್ಲಿಯೂ ಹೊರಬೀಳುತ್ತಿದ್ದಿಲ್ಲ. ಈಗ ಎರಡು ತಿಂಗಳಿಂದ 'ಕನ್ನಡಿಗ' ದಲ್ಲಿ ಪ್ರತಿವಾರ ಬರಹತ್ತಿವೆ. ಇದು ಎಷ್ಟೋ ಜನರಿಗೆ ಅಸಹ್ಯವೆನಿಸಹತ್ತಿರುವದು. ಅದ್ದರಿಂದ ಅವರು ಸುದ್ದಿಗಾರನ ಶೋಧದಲ್ಲಿ ತೊಡಗಿರುವರು. ಮತ್ತು ಈ ಸುದ್ದಿಗಾರನಿಗೆ ಉದ್ಯೋಗವೇನೂ ಇಲ್ಲವೋ ಎಂದೂ ಕೇಳುತ್ತಿರುವರು!

ಇಂಡಿ. ಚಡಚಣದಲ್ಲಿ ತಾ॥ ೧೧-೧೨-೨೭ ನೇದಿನ "ದೋಶೀ ರಾವಜಿ ಮೀಯಾ ಚಂದ ಜೈನ ಔಷಧಾಲಯ"ವು, ಡಿ. ಡಿ. ಕಲೆಕ್ಟರ ಪರೂಳೇಕರ ಇವರ ಹಸ್ತದಿಂದ ಹೊಸದಾಗಿ ತೆರೆಯಲ್ಪಟ್ಟಿತು. ರಾವಜೀ ಮಿಯಾ ಚಂದರ ಸ್ಮರಣಾರ್ಥ ಅವರ ಮಕ್ಕಳಾದ ಶ್ರೀ ಗುಲಾಬಚಂದ ಹಾಗೂ ಜೀವರಾಜ ಇವರು ೮೫೦೦ ರೂ. ವೆಚ್ಚಮಾಡಿ ಇದನ್ನು ತೆರೆದಿರುವರು ಸ್ತುತ್ಯ!

ಬದಾಮಿ. ಬದಾಮಿ ಪಾಲಾನಾಕೆಯಲ್ಲಿ ೫ ಗೇಟಿನ ಕುದುರೆಗಳಿಗೂ, ಛಟ್ಟರ ಕಟ್ಟಿಗಳಿಗೂ, ತಲೆಗೆ ಅರು ದುಡ್ಡಿನಂತೆ ಟೋಲು ವಸೂಲ ಮಾಡಹತ್ತಿ ಎಷ್ಟೋ ದಿವಸಗಳಾದವು! ಅದರ ಬಗ್ಗೆ ಎಷ್ಟೋ ಜನರು ತಕರಾರ ಮಾಡಿದಾಗ್ಯೂ ಕೇಳದೆ ವಸೂಲ ಮಾಡಹತ್ತಿದ್ದಾರೆಂಬ ದಟ್ಟವಾರ್ತೆಯಿದೆ! ಅದರ ಬಗ್ಗೆ ಒಬ್ಬ ಅಧಿಕಾರಸ್ಥರು ಸಹ ಕಣ್ಣೆತ್ತಿ ನೋಡಲೊಲ್ಲರು! ಈ ಮೇಲಧಿಕಾರಿಗಳ ಕಡೆಗೆ ಅರ್ಜಿ ಮಾಡಿದಾಗ್ಯೂ, ಅವರು ಇವರ ಅರ್ಜಿಗಳ ಬಗ್ಗೆ ಏನೂ ಇವತ್ತಿನ ವರೆಗೆ ವಿಚಾರ ಸಹ ಮಾಡಿರುವದಿಲ್ಲ! ಈ ರೀತಿ ಅನ್ಯಾಯ ನಡೆದರೂ, ವಿಚಾರವಿಲ್ಲ! ಹೊಲವನ್ನು ಬೇಲಿ ಮೇಯ್ದಂತೆಯೇ ಸರಿ! ಅಧಿಕಾರಿಗಳು ಈಗಲಾದರೂ ಎಚ್ಚರಿಯಬೇಕು. ಜಾತ್ರೆಯು ಸಮೀಪಿಸಿದ್ದರಿಂದ ಜನರಿಗೆ ತೊಂದರೆಯಾಗದಂತೆ ಏರ್ಪಡಿಸುವದು ಅಧಿಕಾರಿಗಳ ಕರ್ತವ್ಯವಲ್ಲವೋ?

ನಮ್ಮ ಧಾರವಾಡದ ಪತ್ರ.

ಕರ್ನಾಟಕ [illegible] ಮಂಡಳದ ಪರವಾಗಿ ಕರ್ನಾಟಕ ಕಾಲೇಜದ ಪ್ರೊಫೆಸರರಾದ ಎಸ್. ಡಿ. ಬೆರಿಯವರು 'ಗ್ರಾಮಸುಧಾರಣೆ'ಯನ್ನು ಕುರಿತು ಸುಶ್ರಾವ್ಯವಾದ ಉಪನ್ಯಾಸವನ್ನು ಕೊಟ್ಟರು.

ಪ್ರೊ ದೇವಲರವರ ಸರ್ಕಸ್ಸು ಇತ್ತಗೆ ಬಂದಿರುತ್ತದೆ. ಬುಧವಾರ ದಿವಸದ ಉತ್ಪನ್ನವನ್ನು ಇಲ್ಲಿಯ ಬಾಲಮಾರುತಿಯ ಸಂಸ್ಥೆಗೆ ಕೊಟ್ಟರು.

ಮಾಳಮಡ್ಡಿಯಲ್ಲಿ ಘಟನೀಕರವರ ಮನೆಯಲ್ಲಿ ಕಳವು ಆಗಿ ಸುಮಾರು ೫೦೦೦ ರೂಪಾಯಿಗಳ ಮಾಲು ಹೋಗಿರುತ್ತದಂತೆ.

ಇಲ್ಲಿಯ ಕಲೆಕ್ಟರರಾದ ಮರ್ಡೇಕರರು ರಜೆಯಮೇಲೆ ಹೋಗಿದ್ದರಿಂದ ಅವರ ಸ್ಥಳಕ್ಕೆ ಮ್ಯಾಕ್ಸವೆಲ ಸಾಹೇಬರು ಬಂದಿದ್ದಾರೆ.

ಕಾಂಗ್ರೆಸಕ್ಕೆ ಇಲ್ಲಿಂದ ವಿಶೇಷ ಜನರು ಹೋಗಿಲ್ಲ.

ಪತ್ರವ್ಯವಹಾರ

ಮೋಟಾರಗಳ ಮೇಲಾಟವೂ ಪ್ರವಾಸಿಕರ ಪ್ರಾಣಹರಣವೂ!

೨೦ ನೇ ಶತಮಾನವೆಂದರೆ, ಮೋಟಾರಗಳ ಯುಗವೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಎತ್ತ ನೋಡಿದತ್ತ, ನಾನಾಬಗೆಯ ಮೋಟಾರ ತುತೂರಿಗಳು, ಹಗಲು ರಾತ್ರಿಗಳೆನ್ನದೆ, ಗುರುಗುಟ್ಟುತ್ತಿರುವವು. ೧೦-೨೦ ವರ್ಷಗಳ ಹಿಂದೆ, ನಮ್ಮ ಹಳ್ಳಿಹಳ್ಳಿಗಳ ಜನರಿಗೆ ಮೋಟಾರ ಅಂದರೇನು? ಎಂಥಾದ್ದು ಇರುವದು, ಹೇಗೆ ಹೋಗುವದು, ಎಂಬದು ಏನೂ ಗೊತ್ತಿದ್ದಿಲ್ಲ. ಈಗ್ಗೆ ಅತಿರೇಕವಾಗಿದೆ. ಕುದುರೆ ಮೊದಲಾದ ವಾಹನಗಳಂತೂ, ಮುಳುಗಿದವು. ದೊಡ್ಡ ದೊಡ್ಡ ಸಂಸ್ಥಾನ ದೇಸಗತಿಗಳಲ್ಲೂ ಕೂಡ, ಕುದುರೆಗಳ ಸಾಕಿದಾಟವು ಲಯ ಹೊಂದಿ, ಅದರ ಸ್ಥಳದಲ್ಲಿ, ಮೋಟಾರಗಳು ಆಳಿವಾಡಹತ್ತಿವೆ. ಸರ್ವೀಸ ಗಾಡಿಗಳಿಗಂತೂ ಲೆಕ್ಕವೇ ಇಲ್ಲ. ದೇಸಾಯರೂ ವತನದಾರರೂ ಸಾವುಕಾರರೂ ಮೋಟಾರುಗಳನ್ನು ತರಿಸಿ, ಅನುಕೂಲವಿರುವ ಎಲ್ಲ ರಹದಾರಿಗಳಮೇಲೆ ಸರ್ವೀಸ ಸುರುಮಾಡಿರುವರು. ಎಷ್ಟೋ ಕಡೆಗೆ ಟಪಾಲವು ಕೂಡ ಮೋಟಾರಿನಿಂದಲೇ ಹೋಗಿ ಬರುವದು. ಇದರಿಂದ ಎಷ್ಟೋ ವರ್ಷಗಳವರೆಗೆ ಕೆಲಸಮಾಡಿದ ರನ್ನರರೂ ಕೂಡ ಯಾವ ಕಾಲಕ್ಕೆ, ನಮ್ಮ ಹೊಟ್ಟೆಗೆ ಕೇರುಬೀಳುವದೋ ಎಂದು ಚಿಂತಿಸುತ್ತಿರುವರು.

ಫೋರ್ಡ ಮೊದಲಾದ ಕಂಪನಿಯವರು ಕಂತುಗಳ ರೂಪದಿಂದ ಮೋಟಾರಗಳನ್ನು ಮಾರಹತ್ತಿದಾಗಿನಿಂದಂತೂ, ಎಷ್ಟೋ ಬಡಜನರು ಕೂಡ ಪುಣೆ ಮೊದಲಾದ ಮೋಟಾರ ಡ್ರಾಯವ್ಹಿಂಗಸ್ಕೂಲುಗಳಿಗೆ ಹೋಗಿ, ಕಲಿತು ಬಂದು, ಇದ್ದಷ್ಟು ಹೊಲ ಮನೆಗಳನ್ನು ಮಾರಿ ಮೊದಲನೇ ಕಂತು ತುಂಬಿ ಮೋಟಾರ ತಂದು, ಸರ್ವೀಸ ಸುರುಮಾಡುವರು. ಇದರಿಂದ ಪ್ರತಿಯೊಂದು ಬೀದಿಗೆ ಅದರ ಮಾನಕ್ಕಿಂತ ಹೆಚ್ಚು ಮೋಟಾರಗಳಾಗಿ, ಅವು ಒಂದನ್ನೊಂದು ಪ್ರವಾಸಿಕರ ಆಶೆಯಿಂದ ಮೇಲಾಟವನ್ನು ತಪ್ಪದೇ ನಡಿಸೇ ನಡಿಸುವವು.

ಹೀಗಾಗಿ ಸ್ವಲ್ಪದಿವಸಗಳಲ್ಲಿಯೇ ಎಲ್ಲ ಮೋಟಾರಗಳ ಮಾಲೀಕರು, ಸಾಲದಲ್ಲಿ ಕೊಳಲಾಡಬೇಕಾಗುವದು. ಇನ್ನುವರೆಗೆ ಈ ವ್ಯವಹಾರದಲ್ಲಿ ಲಾಭಹೊಂದಿದವರು ಅತಿ ವಿರಳ. ಹೀಗಾಗಿ ನಮ್ಮ ದೇಶದ ಎಲ್ಲ ಸಂಪತ್ತು ಪರದೇಶಕ್ಕೆ ಮೋಟಾರ, ಪೆಟ್ರೋಲ, ಟ್ಯೂಬ್ ಟಾಯರ್ಸಗಳ ದ್ವಾರ ಹರಿದುಹೋಗುವದು. ಇದು ಯಾರ ಲಕ್ಷ್ಯದಲ್ಲಿಯೂ ಬರದೆ ಆನಂದದಿಂದ ಎಲ್ಲರೂ ಖರ್ಚು ಮಾಡುವರು! ಇನ್ನಾದರೂ ಎಚ್ಚರಾಗಿ ನಮ್ಮ ಪೂರ್ವದ ವಾಹನಗಳನ್ನು ಬೆಳೆಯಿಸಬೇಕು ಅಥವಾ ಮೋಟಾರುಗಳನ್ನು ನಮ್ಮ ದೇಶದಲ್ಲಿಯೇ ಸಿದ್ಧಪಡಿಸಬೇಕು.

ಈಗಂತೂ ಕೂಲಿಮಾಡಿ ದಿನಾಲು ಹೊಟ್ಟೆ ಹೊರೆಕೊಳ್ಳುವವರು ಕೂಡ ೪—೮ ಆಣೆಗಳಲ್ಲಿ ೩೦—೪೦ ಮೈಲು ಪ್ರವಾಸಮಾಡಿ ಬರುವರು. ಇಂಥವರು ತಮ್ಮ ಪರಿಸ್ಥಿತಿಯನ್ನು ಲವಲೇಶವೂ ಲೆಕ್ಕಿಸುವದಿಲ್ಲ. ಮೋಟಾರಿನಿಂದಲೇ ಹೋಗುವರು.

(ಮುಂದಾಗುವದು.)

ಗುಣ ಬರದಿದ್ದರೆ ಹಣ ಪರತ!

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ ಗುಟಿಕಾ

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ಥ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿ ಮಾಂದ್ಯ ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿಸುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿ ಮಾಡಿಕೊಳ್ಳಬಹುದು.) ಇದರಿಂದ ಮೈಯುರಿ ಮಗರವಿಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೆ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗೆ ೨-೪-೦, [illegible] ೭-೮-೦, ಇದಲ್ಲದೆ ೧ ಡಬ್ಬಿ ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸಃ— ಎಸ್ ಬಿ. ಕದಮ್ ಮತ್ತು ಸನ್ಸ್.
ಮು. ಪೊಷ್ಟ ನಿಪ್ಪಾಣಿ (ಜಿ. ಬೆಳಗಾವ.)

ಕರ್ನಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯೂಲರ ಸ್ಕೂಲಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರುವದಕ್ಕೆ ತಕ್ಕದ್ದಾದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಜರದ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು.

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಲೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ॥ ಲಕ್ಷ್ಮೀಬಾಯಿ ಕುಂಭಕೋಣ,
ವ್ಯವಸ್ಥಾಪಕರು, ಕ. ಮ. ವಿದ್ಯಾಲಯ, ಧಾರವಾಡ.

ಟೇಬಲ್ ಟೈಂಪೀಸ್ ಇನಾಂ.

ಈ ನಕ್ಷೆಯಲ್ಲಿ ಕಂಡ ಫೌಂಟನ್ ಪೇನಾವು ಇಂಗ್ಲಂಡಿನಲ್ಲಿ



ತಯಾರಾದದು! ಇದಕ್ಕೆ ೧೪ ಕೆರೆಕಿನ ಭಂಗಾರದಂಥ ನಿಬ್ಬು ಹಾಕಿದೆ. ಈ ಪೇನಾವಿನಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ತಿಂಗಳೊಳಗಾಗಿ ಈ ಪೇನಾವನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೇಬಲ್ ಟೈಂಪೀಸ್ ಸಹಿತ ಪೇನಾ ೧ ಕ್ಕೆ ೨-೮-೦

ವಿಳಾಸಃ- ಪೀಟರ್ ವಾಚ್ ಕಂಪನಿ.
ಪೋ॥ ಬಾಕ್ಸ ನಂ. ೨೭, ಮದರಾಸು.

ಬಾಗಲಕೋಟಿ, ವಿಜಾಪುರ ಮೋಟಾರ ಸರ್ವಿಸ ಪ್ರಾರಂಭವಾಗಿದೆ!

ಬೆಳಗಾವಿಗೆ ಬಾಗಲಕೋಟೆಯಿಂದ ೩॥ ರೂ. ಹಾಸಲು ಮುದ್ದಾಂ ಮಾಡಲ್ಪಟ್ಟಿದೆ.



ವಿಜಾಪೂರ ಜಿಲ್ಹೆಯಲ್ಲಿಯ ಮತ್ತು ಸುತ್ತುಮುತ್ತಲಿನ ಖಾಸಗಿ ವ ಸರ್ವೀಸಿನ ಮೋಟಾರ ಮಾಲಕರ ಗೈರಸೋಯ ದೂರವಾಗಬೇಕೆಂದು:
ಆರ್. ಜಿ. ಚವ್ಹಾಣ ಎಂಡ ಸನ್ಸ, ಬೆಳಗಾವ. ಇವರು ತಮ್ಮ
ಜನರಲ ಮೋಟಾರ ಅಕ್ಸೆಸರಿ ಸ್ಟೋಅರ್ಸದ ಶಾಖೆಯನ್ನು
ತಾ॥ ೧೦ ಸೆಪ್ಟೆಂಬರ ೧೯೩೭ನೇ ಇಸ್ವಿಯಿಂದ ಬಾಗಲಕೋಟೆಯಲ್ಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಶೆವ್ರಲೇಟ, ಓವ್ಹರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯೂಬ್ಸ, ಗ್ರೀಸ, ಮೋಬಿಲ ಆಯಿಲ್, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯ ದರದಿಂದ ಸಿಗುವವು. ಒಂದು ವೇಳೆ ವ್ಯಾಪಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರದಿಂದ,

ಚಾಲಕಃ— ವಾಯ್. ಜಿ. ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಹಲ್ಕನಾಯಝಿಂಗ ಮಾಡಿ ಕೊಡುವೆವು

ಬಾಗಲಕೋಟೆ-ಬೆಳಗಾವಿ, ಬಾಗಲಕೋಟೆ-ಇಲಕಲ್ಲ ಸರ್ವೀಸ ಯಥಾಪ್ರಕಾರ ನಡೆದಿದೆ

GRAMAPHONE COMPLETE Rs. 10.

ಗ್ರಾಮೊಫೋನ್.

ಎಂಬ ಹಾಡುಗಾರಿಕೆಯ ಯಂತ್ರವು.

ಮೊದಲಿನ ಕ್ರಯ ರೂ. ೩೫—೦—೦. ಈಗಿನ ಕ್ರಯ ರೂ. ೧೦—೦—೦.

ಈ ಯಂತ್ರವು ವಿಲಾಯತಿಯಲ್ಲಿ ತಯಾರಾದದ್ದು. ಇಂಗ್ಲೀಷು, ಕನ್ನಡ, ಹಿಂದುಸ್ಥಾನಿ, ಇಂಗ್ಲೀಷು ವಾದ್ಯ ಮುಂತಾದ ಪದಗಳನ್ನು ಹೇಳುವದು. ಲಗ್ನದ ಮನೆ, ನಾಟಕಶಾಲೆ ಮುಂತಾದ ಜನಕೂಡುವ ಸ್ಥಳದಲ್ಲಿ ಉಪಯೋಗಿಸಲು ಬಹು ಚನ್ನಾಗಿದೆ. ನೋಟಕ್ಕೆ ಲಕ್ಷಣವಾಗಿರುವಂತೆಯೂ, ಕ್ರಯದಲ್ಲಿ ಸುಲಭವಾಗಿಯೂ ಇರುವಂತೆ ಬಹು ಬಲಿಷ್ಟವಾದ ಸಾಮಾನುಗಳಿಂದ ಈ ಯಂತ್ರವನ್ನು ತಯಾರಿಸಿದೆ. ಸುಂದರವಾದ ಹಾರನ್ ಎಂಬ ಪದ ಹೇಳುವ ಕೊಳವೆ ಇದೆ. ನಿಧಾನವಾಗಿಯೂ ಜಾಗ್ರತೆಯಾಗಿಯೂ, ಪದ ಹೇಳಿಸಲು ಕೀಲು ಇದೆ. ಈ ಯಂತ್ರವನ್ನು ಎಲ್ಲಿ ಬೇಕಾದರೂ ಕೈಯಲ್ಲಿ ಹಿಡಿದುಕೊಂಡು ಹೋಗಲು ಅನುಕೂಲವಾದಂಥ ಸುಂದರವಾದ ಕೈ ಪೆಟ್ಟಿಗೆಯಲ್ಲಿಟ್ಟಿವೆ.

ಡಬಲ್ ಸೈಡ್ ಎರಡು ಕಡೆಯೂ ಪದವಿರುವ

೧ ರೆಕಾರ್ಡ ಸಹಿತ ಗ್ರಾಮೊಫೋನ್ ಯಂತ್ರದ ಪೆಟ್ಟಿಗೆ ಕ್ರಯ ರೂ ೧೨—೦—೦

ಹೆಚ್ಚಿಗೆ ರೆಕಾರ್ಡ ಬೇಕಾದರೆ, ಪ್ರತ್ಯೇಕ ರೆಕಾರ್ಡ ೧ಕ್ಕೆ ರೂ. ೧—೪—೦.

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಮತ್ತು ಟಪಾಲು ಖರ್ಚು ಮುಫತ್ತಾಗಿ ಕಳಿಸುವೆವು.

ವಿಳಾಸ:— ಬ್ರಿಟಿಷ್ ಟ್ರೇಡಿಂಗ್ ಕಂಪನಿ,
ಪೋಸ್ಟ್ ಬಾಕ್ಸ ನಂ ೧೨೨೩, ಮದರಾಸು.

ಸ್ಟಾಂಡರ್ಡ್ ಕಾಫಿಪುಡಿ.

ಅಖಿಲಭಾರತ ಸಕಲ ಕಲಾವಸ್ತು ಪ್ರದರ್ಶನದಲ್ಲಿ ರಜತ ಪದಕವನ್ನೂ, ಸರ್ಟಿಫಿಕೇಟುಗಳನ್ನು ಬಹುಮಾನವಾಗಿ ಪಡೆದ ಸ್ಟ್ಯಾಂಡರ್ಡ ಕಾಫಿಪುಡಿಯು ಅತ್ಯಂತ ಮನೋಹರವೂ, ರುಚಿಕರವೂ ಆದದ್ದು ತರಿಸಿ ಪರೀಕ್ಷಿಸಿ ನೋಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

ಪೌಂಡ ೧ಕ್ಕೆ ೧-೪-೦ ಮತ್ತು ೧-೨-೦.

ದಿ ಸ್ಟಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದ ವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಪ್ಪ ಜಾಲವಾದಿ.
ಸ್ಟೇಶನರ್ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ.
೫೭. ಚೀನಾಬಜಾರ್, ಮದ್ರಾಸು

ಬನಾರಸ್ ರೇಶ್ಮೀ ಶೀರೆಗಳು.

S.U.N.&CO.
BENARESCITY.

ನಮ್ಮಲ್ಲಿ ಉತ್ತಮತರದ ಎಲ್ಲಾವಿಧವಾದ ರೇಶ್ಮೀ ಮ್ಹಾಲುಗಳನ್ನ ಕೋರುವವರಿಗೆ ವ್ಹಿ. ಪಿ. ಮೂಲಕ ಕಳುಹಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕ ಉದ್ದಮೊಳ ೧೪ ಅಗಲಿಮೊಳ ೩, ಥಾನು ೧ಕ್ಕೆ ೧೫ ರಿಂದ ೫೦ ಜರಿ ಶೀರೆಗಳು ೧೬ ೧೮ ಮೊಳ ಉದ್ದ ೧ಕ್ಕೆ ರೂ. ೨೫ ರಿಂದ ೫೦ ರವರೆಗೆ. ಬುಟ್ಟೆದಾರ್ ಬನಾರಸ್ ಶೀರೆ ೧೬-೧೮ ಉದ್ದ ಮೊಳ ೭ ೧ಕ್ಕೆ ರೂ. ೫ ರಿಂದ ೩೦೦ ರ ವರೆಗೆ ಉಡುವ ಮಗುಟ ಉದ್ದ ೭-೮ ಮೊಳ ೧ಕ್ಕೆ ರೂ ೧೦ ರಿಂದ ೩೦ ರ ವರೆಗೆ ಜರೀದ್ದು ೭-೮ ಮೊಳ ಉದ್ದ ೧ಕ್ಕೆ ರೂ. ೧೧ ರಿದ ೪೦ ರ ವರೆಗೆ· ಬಿಳಿ ರೇಶ್ಮೆ ಜರೀದ.ಪ್ಪಟೆ ಮೊಳ ಉದ್ದ ೧ಕ್ಕೆ ರೂ ೧೨ ರಿಂದ ೩೦ ಅವರೆಗೆ ಸಾದಾ ಬಂಗಾಳ ರೇಶ್ಮೆ ಶಾಲು ೬ ಮೊಳ ಉದ್ದ ೩ ಮೊಳ ಅಗಲು ೧ ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಪಟಿಕದ ೧೦೮ ರ ಸರ ೧ಕ್ಕೆ ರೂ. ೧ ರಿಂದ ೧೨ ರ ವರೆಗೆ ಸುದರ್ಶನ ೧ ಕ್ಕೆ ಆಣೆ ೮ರಿಂದ ರೂಪಾಯಿ 1½ ರವರೆಗೆ ಜಗನ್ನಾಥಜಾಗಂಟೆ ೧ಕ್ಕೆ ರೂ. 2½ರಿಂದ 15 ರ ವರೆಗೆ ಮತ್ತು ಬೇರೆ ಬೇಕಾದವ್ಹಾ ಗಳ ಕೆಟಲಾಗಇನಾಂ

ವಿಳಾಸಃ-ಶಿರೋಮಣಿ ನಾರಾಯಣಾಚಾರ್ಯ
ಕಂಪನಿ ಚೌಕಂಬಾ ಕಾಶಿ ಬನಾರಸ್

For Ladies' and Gents' Insurance
in
The General and Bharat Insurance Societies, Ltd.
and for
Wholesale Supply of :—

(1) Automobiles
(2) Sporting Materials
(3) High-Class Tea and Coffee
(4) Cigars and Cigarettes
(5) Surgical Instruments, and Drugs
(6) His Master's Voice Phones, and Records
(7) Cycles, Stoves and Gas Lights
and
(8) Up-to-date Books

Apply to:—

B. S. Tantry. B. A

BAGALKOT.

ವರರು ಬೇಕಾಗಿರುವರು!

ವೇಸ್ಯ ಸಂಗಡದಲ್ಲಿ ವಿವಾಹಕ್ಕೆ ಸಿದ್ಧರಾಗಿರುವ, ವಿದ್ಯಾವಂತರೂ, ಯೋಗ್ಯ ಜೀವನ ನಡೆಯಿಸುತ್ತಿದ್ದು ಕುಟುಂಬ ನಿರ್ವಾಹಕ್ಕೆ ಶಕ್ತಿಯುಳ್ಳ ತರುಣರು.

ಮೂರು ಬಾಲಕಿಯರ ವಯಸ್ಸು ೧೪-೧೬ II. III. VI Form ತನಕ ಓದಿದವರು. ಗುಣವತಿಯರೂ ರೂಪವತಿಯರು-ಹೆಚ್ಚಿನ ವಿವರಕ್ಕೆ ಪತ್ರವ್ಯವಹಾರ ಮಾಡಿರಿ.

ಕೌಶಿಕ C/o- ಕನ್ನಡಿಗ.

ಶ್ರೀ ಗುಬ್ಬಿ ಚನ್ನಬಸವೇಶ್ವರ ನಾಟಕ ಕಂಪನಿ

೧೯೨೮ನೇ ಜನವರಿ ಒಂದನೇ ವಾರ ಹಾಸನದಲ್ಲಿ ನಡೆಯುವ "ದನಗಳ ಪ್ರದರ್ಶನ" ಕಾಲದಲ್ಲಿ, ಮೇಲ್ಕಂಡ ನಾಟಕ ಕಂಪನಿಯವರು ಮತ್ತು ಇದರ ಶಾಖೆಯಾದ **ಬಾಲಕರ ಸಂಘವೂ** ಸಹಾ, ಹಾಸನದ ಮುಸಾಫರ್ ಖಾನೆ ಪಕ್ಕದಲ್ಲಿ ವಿದ್ಯುಚ್ಛಕ್ತಿ ದೀಪಗಳಿಂದ ಶೃಂಗಾರವಾಗಿ ಅಲಂಕರಿಸಲ್ಪಟ್ಟ ಎರಡು **ನಾಟಕ ಮಂದಿರಗಳಲ್ಲಿ,** ಅದ್ಭುತ ಟ್ರಾನ್ಸ್‌ಫರ್. ಮತ್ತು ಹೊಸಸೀನರಿಗಳಿಂದಲೂ, ಹೊಸ ಉಡಪುಗಳಿಂದಲೂ, ಅಮೋಘವಾಗಿರುವ ನಾಟಕಗಳನ್ನಾಡುವರು. ಇಂಥಾ ಸುಸಂಧಿ ಮತ್ತು ಅಪೂರ್ವ ಸಮಯವನ್ನು ಕಳೆದುಕೊಳ್ಳದೇ, ಸರ್ವರೂ ಪ್ರೋತ್ಸಾಹಿಸುವರೆಂದು ನಂಬಿರುತ್ತೆ.

ಶ್ರೀ ದತ್ತರಾಜ ಸಮರ್ಥ

ಅಖಿಲ ಕನ್ನಡ ನಾಡಿನ ಸುಪ್ರಸಿದ್ಧವಾದ

ಗದಗ ಶ್ರೀದತ್ತಾತ್ರೇಯ ನಾಟಕ ಮಂಡಳಿಯವರು

ಬರುವ ಬನದ ಹುಣ್ಣಿವೆಗೆ ಜರುಗತಕ್ಕ ಶ್ರೀಬನಶಂಕರಿಯಜಾತ್ರೆಗೆ

ಬ ರು ವ ರು.

ಮತ್ತು ತಮ್ಮ ಚಿತ್ತಾಕರ್ಷಕವಾದ ಜವತಿಯ ಚಂದ್ರ, ಪಾದುಕಾಪಟ್ಟಾಭಿಷೇಕ, ಲಂಕಾದಹನ, ಸಂಪೂರ್ಣ ಕೃಷ್ಣಲೀಲೆ ಹೀಗೆ ನಾಲ್ಕು ನಾಟಕಗಳನ್ನಾಡುವರು. ದೇಶಬಂಧುಗಳು ಪ್ರೋತ್ಸಾಹಿಸಬೇಕೆಂದು ಕೋರಿಕೆ. ಸಂಘದೊಡೆಯ

ಸದಾಶಿವರಾವ ಗರೂಡ ಕರ್ನಾಟಕ
ನಾಟಕಾಲಂಕಾರ
ಅಭಿನಯ ಕೇಸರಿ.

ಕನ್ನಡ ಗ್ರಂಥಕಾರರಲ್ಲಿ ಬಿನ್ನಹ-

ಶ್ರೀ ಸರಸ್ವತಿ ವಿದ್ಯಾರಣ್ಯ ಧರ್ಮಾರ್ಥ ವಾಚನಾಲಯ ಹುಬ್ಬಳ್ಳಿ. ಇದರ ವತಿಯಿಂದ ಒಂದು ಗ್ರಂಥವನ್ನು (ಐತಿಹಾಸಿಕ) ಪ್ರಸಿದ್ಧಪಡಿಸಬೇಕೆಂದು ಮಾಡಿದ್ದೇವೆ.- ಸದರಿ ವಾಚನಾಲಯಕ್ಕೆ ಗ್ರಂಥಕಾರರು ತಮ್ಮ ಗ್ರಂಥವನ್ನು ಸಂಸ್ಥೆಯ ವತಿಯಿಂದ ಪ್ರಕಾಶಿಸಲು ಅಪ್ಪಣೆ ಕೊಟ್ಟು, ಸಂಸ್ಥೆಯ ವತಿಯಿಂದ ವಾಙ್ಮಯ ಸೇವೆಯನ್ನು ಮಾಡಿಕೊಳ್ಳುವರೆಂದು ಅಪೇಕ್ಷೆಯಿದೆ. ಈ ಸಂಸ್ಥೆಯು ೧೯೨೨ ರಲ್ಲಿ ಸ್ಥಾಪನೆಯಾಗಿ ಕೇವಲ ಭಿಕ್ಷೆಯಿಂದ ನಡೆದದೆ. ಸಂಸ್ಥೆಯು ಧರ್ಮಾರ್ಥವಿದ್ದು, ಇಂಥ ಸಂಸ್ಥೆಯು ಕರ್ನಾಟಕದಲ್ಲಿಯೇ ಇಲ್ಲವೆಂದು "ಕರ್ನಾಟಕ ಟೈಮ್ಸ"ದ ಸಂಪಾದಕರಾದ ಶ್ರೀ. ಶಿವಲಿಂಗಶಾಸ್ತ್ರಿಗಳು ಉದ್ಗಾರ ತೆಗೆದಿರುತ್ತಾರೆ! ಕಾರಣ ಉದಾರ ಲೇಖಕರು ತಮ್ಮ ಗ್ರಂಥವನ್ನು ಪ್ರಕಾಶಿಸಲು ಕೊಟ್ಟು ಸಹಾಯ ಮಾಡುವರೆಂದು ನಂಬಿರುವ

ಬಿ. ಜಿ. ಸರಾಫ
ಕಾರ್ಯವಾಹಕ
ಶ್ರೀ. ಸರಸ್ವತಿ ವಿದ್ಯಾರಣ್ಯ ಧರ್ಮಾರ್ಥ
ವಾಚನಾಲಯ ಹುಬ್ಬಳ್ಳಿ



ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

೧೯೨೭ನೇ ಜನವರಿ ೧೫ರಿಂದ ಪ್ರಾರಂಭ.



ನಾವು ನಿಮಗೆ ೩ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ್ಡ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬಹುಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂದರೆ

೧. ನೀವು ನಮಗೆ ರೂ. ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್ನನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂಬದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಪ್ಪವ ರಮ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ ಗೋಲ್ಡ" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಚರ್ಮದ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ.

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ಬಿಕರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು ಅಥವಾ ವಿ. ಪಿ ಮೂಲಕ ತರಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕಿದ.ಕೊಳ್ಳುವ ಭಯವಿಲ್ಲ ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಅಸೂಯೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಚರ್ಮದ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೭-೮-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್. ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರ ಸಿಟಿ.

ಒಟ್ಟಾಗಿವೆ! ತರಿಸಿರಿ!!

ವಾಸುದೇವನ

ಕೌಸ್ತುಭಗಳು.

೧. ಇಂದಿರಾ. ೨-೮-೦

(ಸಚಿತ್ರ ಸಾಮಾಜಿಕ ಕಾದಂಬರಿ.)

೨. ಯದು ಮಹಾರಾಜ. ೧-೦-೦

(ಎಂಬ ವಿನೂತನ ಐತಿಹಾಸಿಕ ಕಾದಂಬರಿ,)

೩. ನೀಳ್ಗತೆಗಳು ಭಾಗ ೧ ೧-೪-೦

" ವಸಂತಯಾಮಿನಿ ಸ್ವಪ್ನಚಮತ್ಕಾರ " ನಾಟಕದ ಪ್ರತಿಗಳೆಲ್ಲವೂ ತೀರಿಹೋಗಿವೆ. ಉಳಿದವುಗಳು ಅಚ್ಚಿನಲ್ಲಿವೆ. ತ್ವರೆಮಾಡಿ! ಬೇಕಾದವುಗಳನ್ನು ಬೇಗನೇ ತರಿಸಿಕೊಳ್ಳಿರಿ.

ಪುಸ್ತಕ ವ್ಯಾಪಾರಿಗಳಿಗೆ. ಯೋಗ್ಯ ಕಮಿಶನ್. ಅಂಚೆವೆಚ್ಚ ಬೇರೆ.

ಸ್ವಾಮಿ, ರಾ, ಕೆರೂರ.
ಬಾಗಲಕೋಟೆ (ಜಿ| ವಿಜಾಪೂರ)

ಅತ್ಯಲ್ಪವಿವೆ! ಉಚಿತ!
ಕೇವಲ ಉಚಿತ ಕೇವಲ ಉಚಿತ



" ತಾರಾ " ಲೀವರ್ ರಜಿಸ್ಟರ್ಡ್ ಪೋಕೆಟ್ ವಾಚ್ ೧೪ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ " ಸಿ " ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು " ತಾರಾ " ಲೀವರ್ ರಿಜಿಸ್ಟರ್ಡ್ ೧೪ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ. ಪಿ, ಬಿ. ೨೬೫ ಮದ್ರಾಸ

Three Successive Valuation Results Unsurpassed

The General Assurance Society Ltd.

AJMER.

Assets Exceed **BONUS** Claims Paid Over

Rs 20,00,000 Rs. 10,00,000

Equal to the Highest ever Declared by any Indian Life Office.

31st March 1924 Whole Life (Deferred)
Rs. 12% per year.

31st December 1925 Whole Life (Immediate)
Rs. 20% per year.

31st December 1926 Whole Life (Immediate)
Rs. 22/8/- % per year.

OFFICES AT

Agra,	Benares.	Lucknow,
Ajmer,	Colombo,	Lahore,
Allahabad,	Calcutta,	Madras,
Beawar,	Gujranwala,	Madura,
Bangalore,	Hubli.	Patna,
Baroda	Hyderabad Sind,	Rangoon.
Bellary,	Indore,	Rawalpindi.
Bombay,	Jullunder,	

Place your Assurance with this sound and progressive Office To-day You will be benefitted by the low premiums and the exceptionally high bonus additions.

WANTED AGENTS ON MOST LIBERAL TERMS

Please Apply to:—P. D. BHARGOVA, F. S. S. (Lon) Manager Ajmer.
OR
L. V. RAMDURG, Chief Agent, Hubli

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ತರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೭೩೬ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರಿಂಟೆಂಡಂಟ್ ಸೆಕ್ರೆಟರಿಏಟ್ ಹೈದರಾಬಾದ ಡೆಕ್ಕನ್ನ ರೂ.೧೦೦೦

(೨) ಎಲ್. ಬಿ. ಸಿ. ನಂ. ೧೯೭೨ ನಾರಾಯಣ ವಿಠ್ಠಲ ಲೋಣಕರ ಕೇರ್ ಆಫ್ ಡಿ. ಈ. ಪುರಾಣಿಕ ೧೦೭ ನಿಹಾಲಪುರ ಇಂದೂರ. ೧೦೦೦

(೩) ಎಲ್ ಬಿ. ಸಿ. ನಂ. ೩೪೧ ರಾಮಚಂದ್ರ ಅನಂತ ಶಿರೋಳೆ. ಡಿವಿಜನಲ್ ಫಾರೆಸ್ಟ ಆಫೀಸರ ಧಡೂತ್ರಾ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೭ ಕೇ. ಜೆ. ಫರ್ನಾಂಡೋ ವ್ಯಾಪಾರಸ್ಥ. ಬ್ರಿಕ್‌ಸಾಯಿಡ ಸಿಲೋನ, ಕೊಲಂಬೋ. ರೂ. ೧೦೦೦

(೫) ಬಾಂಡ ನಂಬರು ೧೩೭೩೪ ಎಸ್. ಜಿ. ಚವರೆ. ಅಶಿಸ್ಟಂಟ ಸ್ಟೇಶನ್ ಮಾಸ್ತರ ತೆಲಗಿ. ಜಿಲ್ಲಾ ವಿಜಾಪುರ. ರೂ ೧೦೦೦

ಬಿ. ಸ್. ಅರಾಧ್ಯ,
ಚೀಫ ಏಜಂಟ ಹುಬಳ್ಳಿ (ಮುಂಬಯಿ ಇಲಾಖಾ.)

ಅಪಾಯ ಸಂಭವಿಸಿದಾಗ ಏನುಮಾಡಬೇಕು?

ಸಾಧಾರಣವಾಗಿ ಕಂಗ್ರಾಮಗಳಲ್ಲಿ ಜನರಿಗೆ ಗಾಯವೂ, ಮೂರ್ಛೆ ಮೊದಲಾದ ಅಪಾಯಗಳೂ ಸಂಭವಿಸಿದಾಗ, ಜಲಗಂಡ, ಅಗ್ನಿಗಂಡ, ವಿಷಭಕ್ಷಣ ರಕ್ತಸ್ರಾವ, ಹಾವು, ಹುಚ್ಚುನಾಯಿ, ಚೇಳು ಮುಂತಾದ ವಿಷಜಂತುಗಳು ಕಚ್ಚಿದಾಗ, ಅಕಸ್ಮಾತ್ತಾಗಿ ದೇಹದಲ್ಲಿ ಅಸ್ವಸ್ಥತೆಯು ಸಂಭವಿಸಿದಾಗಲೂ, ಸಮರ್ಥರಾದ ವೈದ್ಯರ ಸಹಾಯವು ದೊರೆಯುವುದು ಕಷ್ಟವಾಗಿದೆ. ಹಾಗೆ ಒದಗದೆ ಹೋದಾಗ, ರೋಗಿಯನ್ನು ವೈದ್ಯರಿರುವಲ್ಲಿಗೆ ಕೊಂಡುಹೋಗುವವರೆಗೆ ಯಾ ವೈದ್ಯರನ್ನು ಕರೆತರುವವರೆಗೆ ಯಾವತರದ ಚಿಕಿತ್ಸೆ ಮಾಡಬೇಕೆಂದು ತಿಳಿಯದೆ, ಅನೇಕ ಜನರು ಅಪಾಯಗಳಿಗೆ ಗುರಿಯಾಗುವದು ಬಹಳ ಸಾಧಾರಣ, ಕೆಲವು ಸಾರಿ ಮರಣವನ್ನುಕೂಡ ಹೊಂದುವುದುಂಟು. ಇಂಥಾ ಕಷ್ಟಗಳಿಗೆ ಒಳಪಡದಹಾಗೆ ಮದ್ರಾಸು ಪಟ್ಟಣದಲ್ಲಿರುವ ರಾವ್ ಸಾಹೇಬ ಡಾಕ್ಟರ್, ಯು. ರಾಮರಾವ್ ಇವರು ಪ್ರಥಮ ಚಿಕಿತ್ಸೆ ಯೆಂಬ ಪುಸ್ತಕವನ್ನು ರಚಿಸಿದ್ದಾರೆ. ಈ ಪುಸ್ತಕದಲ್ಲಿ ಮೇಲೆ ಹೇಳಿದ ಅಕಸ್ಮಾತ್ತಾಗಿ ಸಂಭವಿಸುವ ಅಸ್ವಸ್ಥತೆಗೆ ಮಾಡಬೇಕಾದ ಚಿಕಿತ್ಸೆಯನ್ನು ಬಹಳ ಸುಲಭವಾದ ಕನ್ನಡದಲ್ಲಿ ೧೨೫ ಚಿತ್ರಪಟಗಳೊಡನೆ ಬರೆದಿರುವರು. ಈ ಪುಸ್ತಕವನ್ನು ಓದಿ ತಿಳಕೊಂಡರೆ ಅನೇಕ ತರದ ಅಪಮೃತ್ಯುಗಳನ್ನು ಪರಿಹರಿಸಬಹುದಲ್ಲದೆ ವ್ಯರ್ಥವಾಗಿ ಮರಣಹೊಂದುವ ಜನರ ಜೀವವನ್ನು ಕೂಡ ಉಳಿಸಿ ಪುಣ್ಯಸಂಪಾದಿಸಬಹುದು.

ಪುಸ್ತಕದ ಬೆಲೆ ಆಣೆ ೧೨ ಟಪಾಲ್ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳ—ಶ್ರೀಕೃಷ್ಣನ್ ಬ್ರದರ್ಸ ೩೨೩ ತಂಬುಶೆಟ್ಟಿ ಬೀದಿ, ಮದ್ರಾಸು.

ಕಿರ್ಲೋಸ್ಕರ ನೇಗಿಲು ನಂ ೯

ಉಪಯೋಗಃ— ನಮ್ಮ ಯಾವತ್ತೂ ನೇಗಿಲುಗಳಲ್ಲಿ ಈ ನೇಗಿಲು ಮಿಗಿಲಾದದ್ದು. ಎರಿಯ ಭೂಮಿ, ಪಡ ಭೂಮಿಗಳನ್ನು ಸಾಗುವಳಿ ಮಾಡಲಿಕ್ಕೂ ಕಾಲುವೆಗಳಿಂದ ತೋಯ್ಯುವ ಭೂಮಿಗೂ ಇದರ ಉಪಯೋಗ ಬಹಳ. ಇದು ನಮ್ಮ ನೇಗಿಲು ನಂ ೧೦೦ ರಂತೆ ಮಿಕ್ಕ ಉಪಯೋಗಕ್ಕೂ ಬರುವದು. **ರಚನೆಃ**— ಇದರ ಕುಳಗಳು ಹಾಗೂ ಸವೆಯುವ ಭಾಗಗಳು ಸವೆಯದಂತೆ 'ಚಿಲಿಂಗ ಪ್ರೊಸೆಸ್ಸಿನಿಂದ' ಗಟ್ಟಿಮುಟ್ಟ ಮಾಡಲ್ಪಟ್ಟಿರುತ್ತವೆ. ಮೇಳಿಗಳು ಹವಣಿ ಇರುತ್ತವೆ. ಇದಕ್ಕೆ ತಿರುಗುವ ಕುಳವಿರುತ್ತದೆ. **ಎಳೆಯುವ ಶಕ್ತಿಃ**— ೬ ರಿಂದ ೮ ಎತ್ತುಗಳು ಬೇಕು. **ಸಾಲಿನ ಆಳಗಳುಃ**— ೮ ರಿಂದ ೧೦ ಇಂಚ ಆಳ; ೧೨ ರಿಂದ ೧೪ ಇಂಚು ಅಗಲ. **ತೂಕಃ**—ಸುಮಾರು ೩೦೧ ಪೌಂಡು ಸಪಸ್ತ್ರರ ಸಂಗತಿಯ ಬಗ್ಗೆ ಇದರ ಹಸ್ತಪತ್ರಿಕೆಯನ್ನು ನೋಡಿರಿ. ಬೆಲೆ ೩೩ ರೂಪಾಯಿ.

ಕಿರ್ಲೋಸ್ಕರ ಬಂಧು. ಲಿಮಿಟೆಡ್ ಕಿರ್ಲೋಸ್ಕರವಾಡಿ. ಜಿ. ಸಾತಾರಾ.

Little's Oriental Balm.

ನೋವು ಬಾಧೆಗಳ ನಿವಾರಣಾರ್ಥ!

ನಿಮ್ಮ ಬಾಧೆಗಳ ನಿವಾರಣಾರ್ಥವಾಗಿ ಅತ್ಯುತ್ತಮವಾದ ಹಾಗೂ ಒಳ್ಳೇ ಶುದ್ಧವಾದ ರಾಮಬಾಣ ಉಪಾಯವು ಬೇಕಾಗಿದ್ದರೆ, ಈ ಹೆಸರನ್ನು ಲಕ್ಷದಲ್ಲಿ ಇಡಿರಿ.

ಕೆಳಗಿನ ವ್ಯಾಧಿಗಳ ನಿವಾರಣಕ್ಕಾಗಿ ಹಿಂದುಸ್ಥಾನದ ದಿವ್ಯೌಷಧಿ.

ತಲೆಶೂಲಿ, ಸಂಧಿವಾತ, ಎಲ್ಲತರದ ಕಫ, ನರ ತೊಡಕು, ಚಳಿವಾತ ಟೊಂಕನೋವು, ಅರ್ಧಾಂಗವಾಯು ಉಳುಕು (ವಳದದ್ದು)

೪೨ ವರ್ಷಗಳಿಂದ ಈ ಔಷಧವು ಜಗತ್ಪ್ರಸಿದ್ಧವಾಗಿದೆ.

ಸ್ವಲ್ಪದರಿಂದಲೇ ಗುಣ ಬರುವದು—ಒಂದೇ ಕ್ಷಣದಿಂದ ಅದ್ಭುತ ಗುಣವು!

ಉರಿಯುವದಿಲ್ಲ ಅಥವಾ ಗುಳ್ಳೆ ಏಳುವದಿಲ್ಲ.

ತಾವು ಸುಖವಾಗಿ ಉಪಶಮನವಾಗುವವು.

ಮತ್ತು, ನೆಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲ.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ.

Buy a bottle

TO-DAY!

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿ ಪಡಿಸಲ್ಪಟ್ಟಿತು.